ಪೆ—ಆ ಕಾಲವು ನಮ್ಮದ ಕಾಲ ... ಹುಸಿ ಇಲ್ಲ ... ಕಾಲಿನಿಂದ ಬೇಕಾದರೂ ಜಾರಿ ಬೀಳಬಹುದು ನಾಲಿಗೆಯಿಂದ ಜಾರಿ ಬೀಳಬಾರದೆಂಬ ಅರ್ಥ ಒಂದದ್ದರಿಂ ದಲೂ, ಕಾವೇರಮ್ಮನೇ ತಾಯಿ, ಸುಬ್ರಮಣ್ಯನೇ ತಂದೆ ಎಂದು ಯೋಚಿಸಿ ವಂಚನೆ ಇಲ್ಲದೆ ಕೆಲಸ ಕಾರ್ಯ ... ಮಾಡುತ್ತಿದ್ದೆವು. ಹಣ ಕಡ ಕೊಡುವಾಗ ಹಾಲು ಒಂದು ಪಲಗಿನ ಮರದ ಕೆಳಗೆ ಕೊಟ್ಟು, ಮರವನ್ನು ಸಾಕ್ಷಿ ಇಡುತ್ತಿ ದ್ದೆವು. ಈಗಲಾದರೋ, ಪ್ರೊನೋಟು, ಛಾಪಾಕಾಗದ ಆದ ರಲ್ಲು ಬರಕೊಡುವಾಗ್ಯೆ ಈ ಹಣ ಕೊಡಬಾರದಂತೆ ಮಾಡುವ ಕುಂಠ ಉಂಟು. ದೊಡ್ಡ ಉದ್ಯೋಗಸ್ಥರನ್ನು ಬಾಯಿ, ಕೈ, ತಲೆ ಇತ್ಯಾದಿ ವಸ್ತುಗಳ ಚಲನೆಯಿಂದ ಮೆಚ್ಚಿಸಿ ನಾನು ಮಹತ್ತಾದ ಹರಿಶ್ಚಂದ್ರ ಮಹಾರಾಯನಿಗಿಂತ ಸತ್ಯವಾದಿ ಬಾಕಿ ದೇಶೀಯರೆಲ್ಲಾ ಅವರವರ ಆದಾಯವನ್ನು ನೋಡುವ ರೆಂಬ ವಗೈರೆಯಾದ ಚಾಡಿ ಅಕ್ಷರ ಒಂದು ಹುಟ್ಟಿದೆಯಂತೆ. ಆ ಚಾಡಿ ಕೇಳಿ ನಡೆಯುವ ಧನಿಗಳಿಂದ ದೇಶ ಹಾಳೇ ಹೊ ರ್ತು ಈಗಿನ ನಮ್ಮ ದೊರೆಗಳಿಂದವರ ಮುಂದೆ ನಡೆಯುವ ದೇನು? ನಮ್ಮ ಹೀನ ಅದೃಷ್ಟಕ್ಕೆ ಇವರು ಬೇಗನೆ ಕಾಲು ಕಿತ್ತರೆ (ಖಂಡಿತ ಅಚ್ಚ ಸಡಿಸೊರ ಬರ) ದೇಶ ಹಾಳಾಗುವ ದು. ಆದರೆ ಈಗ ಈ ಪತ್ರಿಕೆ ಇರುವದರಿಂದ ಸರಕಾರಕ್ಕೂ ದೇಶೀಯರಿಗೂ ಇನ್ನು ಮುಂದೆ ತೊಂದರೆ ಬರಲಾರದು.

ಹಿಂದಿನ ಉದ್ಯೋಗದಲ್ಲಿ ಗಾಡಿ ಕುದುರೆ ರಸ್ತೆ ಇದ್ದಿರಲಿಲ್ಲ.

ಆಗ ಪಾರುಪತ್ಯಗಾರ್ ಮತ್ತು ಸುಬೇದಾರರಿಗೆ ಕುದುರೆ ಒತ್ತಾರ ಇಲ್ಲ. ಅವರು ಒಂದು ಬಾರಿ ನೋಡಲು ಹೋಗಬೇಕಾದರೆ ಹೊಳೆ, ನಾಲ, ಕಾಡು ಎಷ್ಟೋ ಮನೆಗಳನ್ನು ನೋಡಿಕೊಂಡು ರವಿನ್ಯೂ ವಸೂಲಾತಿ ಪ್ರತಿ ಬಾರಿನ ಕಷ್ಟ ಸುಖಗಳನ್ನು ಗ್ರಾಮಾಂತ್ರಗಳಲ್ಲಿ 2, 3, ದಿನಗಳ ಮೊಕ್ಕಾಂ ಹೂಡಿಕೊಂ ಡು, ಶಾಲೆಯ ಉಪಾಧ್ಯಾಯರು ಮಕ್ಕಳನ್ನು ಪ್ರಶ್ನಿಸಿ ಕೇಳಿ ತಿಳಕೊಂಡಂತೆ ಜನರನ್ನು ನೆಗೆ ಮುಖದಿಂದ ಕೇಳಿ ಗ್ರಾ ಮಸ್ಥರ ಸ್ಥಿತಿಯನ್ನು ತಿಳಕೊಳ್ಳುತ್ತಿದ್ದರು. ಈಗ ತನ್ನನ್ನು ತನ್ನ ಮಕ್ಕಳನ್ನು ತನ್ನ ಹೆಂಡತಿಯ ಕಡೆಯವರನ್ನು ಹೋಗಳಿ ಕಷ್ಟಕಾರ್ಯಗಳನ್ನು ಹೇಳಿ ಪ್ರತಿಫಲ ಹೊಂದುವದಲ್ಲದೆ ಬೇ ರೊಬ್ಬನಿಗೆ ಇರುವ ನಷ್ಟಕಷ್ಟವನ್ನು ತಿಳಿಸಿ ಅವನಿಗೆ ಸಹಾಯ ಕೇಳುವದಿಲ್ಲ. ಯಾವಾಗ ನಾಡು ಬಿಟ್ಟೆ ಬಂದಿರಿ, ತಾಲ್ಲೋಕು ಬಿಟ್ಟು ಬಂದಿರಿ, ಹಚ್ಚೂರು ಬಿಟ್ಟು ಬಂದಿರಿ ನಿಂತು ಹೋಯಿತೋ ಆಗಲೇ ಬಡಕ್ಷೇಮಕರಮತ್ತು ಗರೀಬ ವಿಧವೆಯರ ಹಾಲ್‌ಹವಾಲ್ ಹೇಳಿಕೊಳ್ಳುವದು ಹೋಯಿತು.

ಯುವಕ—ಮುಂದೆ ಇದ್ದು ಈಗ ಇಲ್ಲದ್ದರಿಂದ ನಷ್ಟ ವಿರುವ ಸಂಗತಿಗಳು ಯಾವನ್ನ?

ಪೆನ್‌ಷನ್‌ದಾರ—ಹಿಂದಣದಲ್ಲಿ ಕೊಡಗು ದೇಶದಲ್ಲು ಬತ್ತದ ಸಾರಾಯ ಕಾರ್ಖಾನೆ. ಈ ಸಂಗತ್ತು ಬಲ್ಲು ಒಂದು ಫ ಕಾಯಿಲೆಗಳಿಗೆ ಅರ್ಧ ಗ್ಲಾಸು ಸಾರಾಯ ಅರ್ಧ ಗ್ಲಾಸು ಮದಿಕ ಜೇನು, ಸ್ವಲ್ಪ ಒಳ್ಳೆ ಮೆಣಸಿನ ಹುಡಿ ಹಾಕಿ ಕಲಿಸಿ ಕೊಟ್ಟಲ್ಲಿ ಎಂಥಾ ನಡುಗಾಳಿನ ಜ್ವರವೂ ಬಿಟ್ಟು ಹೋಗುತ್ತಿ ತ್ತು. ಅದನ್ನು ನಿಲ್ಲಿಸಿದ್ದು ಪೂರಾ ಅಕ್ರಮ. ಹಾಗೆ ಅದ ನ್ನು ನಿಲ್ಲಿಸಿದಮೇಲೆ ಬೇರೆ ಸಾರಾಯವೇ ಈ ದೇಶದಲ್ಲು ಇಲ್ಲ ದಂತೆ ಮಾಡಬೇಕಿತ್ತು. ಅದು ಸರ್ಕಾರಕ್ಕೆ ನಷ್ಟವೆಂದು ಕಂಡಿದ್ದರೆ ಬತ್ತದ ಸಾರಾಯಕಾರ್ಖಾನೆಗಳು ಕೈಕರಿಗೆ ನಾಡಿಗೆ 2, 3, ಲೈಸನ್ಸ್ ಕೊಟ್ಟು ಕಾಸಿಸಿ ಅದನ್ನು ಅಂಗಡಿಗಳಲ್ಲಿ ಮಾರಿಸಬೇ ಕಾಗಿತ್ತು. ಹಾಗೆ ಮಾಡಿದ್ದರೆ ದೇಶದವರಿಗೆ ಬತ್ತಕ್ಕೆ ಒಳ್ಳೆ ದಾರಣೆ ಸಿಕ್ಕುತ್ತಿತ್ತು. ಸುಲಭ ಕ್ರಯದಲ್ಲಿ ಒಳ್ಳೆ ಮದ್ದು ದೊರೆಯುತ್ತಿತ್ತು. ಆಗಿನವರು ಅದನ್ನು ದೇಶದಿಂದಲೇ ಓಡಿ ಸಿ ಪರದೇಶದಿಂದ ತರಿಸಿ ಕುಡಿಯಲು ಒಪ್ಪಿಕೊಂಡದ್ದು ಪೂರಾ ತಪ್ಪು. ಇದಲ್ಲದೆ ಗಾಂಜ (ಬಂಗಿ) ನಮ್ಮ ದೇಶದಲ್ಲು ಬಂಗಿ ಆಗುವಹಾಗೆ ಅಕ್ಕಪಕ್ಕ ದೇಶಗಳಲ್ಲು ಆಗುವದಿಲ್ಲ ಅದರಿಂದ ಮಾದಕವಸ್ತುಗಳು ಚೆನ್ನಾಗಿ ಕೆಲಸ ಮಾಡುತ್ತಿದ್ದವು.

ಇದನ್ನು ಮನ್ನವೂಡಿ [illegible] ಕಳಿಸಿ ಬರುತ್ತಾರ ನೋಡಕ್ಕೆ ಬೇಡದ್ದು ದೇಶದಲ್ಲು [illegible] ನನ್ನ ಅಭಿಪ್ರಾಯ. ಈಗ [illegible] ಪ್ರಯೋಜನಕ್ಕೂ ಬಾರದು. [illegible] ಈ ಭಾಗಿಯನ್ನು [illegible] ... 200 ಪತ್ರಿಗ [illegible] ಕಳಿಸಿಕೊಂಡು [illegible] ಈ ದೇಶಕ್ಕೆ ಆದಾಯವಲ್ಲವ? [illegible] ಮೈಸೂರು ದೇಶದಲ್ಲು [illegible] ಕೊಡಗ ದೇಶವನ್ನು ಈ ವರ್ಷದ ಕಾಯಿತಿ [illegible] ತಗಳ್ಳು ಇರುವದಿಲ್ಲವಾಗಿ ತಿಳಿಯುತ್ತೆ. ಇದಕ್ಕೆ ಕಾರಣ— ಈ ದೇಶ ಮಲೆನಾಡು ದೇಶವಾದದ್ದರಿಂದ [illegible]

[illegible]

ಬಂದ ನನ್ನ ಆ [illegible] ಪ್ರತಿವಾರ [illegible] ಕಾಲಕ್ಕಾದರೂ [illegible] ಬಂದು ನನ್ನ [illegible] ಈ ದೇಶದಿಂದ [illegible] ಹೋಗುತ್ತದೆ.

([illegible])

ಸನಾತನವಾದಿ

[illegible] ಸ್ಥಿತಿ.

ಅಯ್ಯಾ,

ಮಲೆನಾಡಿನ [illegible] ನಾಶಕ್ಕೆ ? ಅಥವಾ [illegible] ?

ಮಲೆನಾಡು [illegible] ಪ್ರತಿಷ್ಠಿತ [illegible]

[illegible]

ಆಳು ನಡ ಬಾಚಲು [illegible] ಒಳ್ಳಿ [illegible] 3 [illegible]

[illegible]

ಹೊಂದಿಸಲಿಕ್ಕೂ ಹೋಗುತ್ತಾ [illegible] ಪೊನ್ನಂಪೇಟೆಗೆ [illegible]

ಶ್ರೀಮಂಗಲ 10ನೇ [illegible]

[illegible]

[illegible]

[illegible] 600 [illegible]

[illegible]

[illegible]

[illegible] ಕೊಡಗು [illegible]

ಕೊಡಗು [illegible] ಸಂಸ್ಥೆ.

ಮಕ್ಕಳ [illegible] ಶಾಲೆ [illegible] 1919—20ರಲ್ಲಿ ಈ ಸಂಸ್ಥೆಯನ್ನು ಸ್ಥಾಪಿಸಲ್ಪಟ್ಟಿ [illegible] ತ್ತಿದೆ.

ಅಲ್ಲಿಂದೀಚೆ ಈ ಸಂಸ್ಥೆಯ [illegible]

ಇನ್ನೂ ಬಾಲ್ಯಾವಸ್ಥೆಯಲ್ಲಿಯೇ ಇರುವ ಈ ಸಂಘದ ಮೇಲೆ ಕಲಕಲಪಟ್ಟ ಸ್ಥಳೀಯ ವ್ಯಾಪಾರಸ್ಥರು ಅಸೂಯೆಯ ಪ್ರೋಟೆಸ್ಟೆಂಟುಗಳನ್ನು ನಡಿಸದೆ ಇದ್ದರೆ ಈ ಶಿಶುವಿಗೆ ಯಾವ ತರದ ಬಾಲಗ್ರಹವು ಹಿಡಿಯಲಾರದು.

ಈ ಸಂಸ್ಥೆಯಲ್ಲಿ ಎಲ್ಲಾ ವಿಧವಾದ ಸ್ಟೇಶನರಿ ಸಾಮಾನು ಗಳು ಇತರ ವ್ಯಾಪಾರಸ್ಥರಲ್ಲಿ ದೊರೆಯುವ ಸಾಮಾನುಗಳಿ ಗಿಂತ ಉತ್ತಮ ತರದ್ದಾಗಿಯೂ, ಬೆಲೆಯಲ್ಲಿ ಕಮ್ಮಿಯಾಗಿ ಯೂ ಸಿಕ್ಕುವದರಿಂದ ಶಾಲಾಮಕ್ಕಳು ಮಾತ್ರವೇ ಅಲ್ಲದೆ ಸ್ಥಳೀಕ ಬೇರೆ ಗಿರಾಕಿಗಳು ದೇಶಾಭಿಮಾನಿಗಳು ಈ ಸಂಸ್ಥೆಯಲ್ಲಿ ವ್ಯಾಪಾರ ನಡಿಸುತ್ತಾ ಬಂದರೆ ಸಂಸ್ಥೆಯು ಅಭಿವೃದ್ಧಿ ಹೊಂದುವುದರಲ್ಲಿ ಸಂಶಯವಿಲ್ಲ. ಗಿರಾಕಿ ಹೆಚ್ಚಿದ ಹಾಗೆ, ಗಿರಾಕಿಗಳನ್ನು ಸುಧಾರಿಸುವಷ್ಟು ಸ್ಟೋರ್ ಸಂಗ್ರಹಿಸಿ ಇಟ್ಟುಕೊಂಡು ಈ ಸಂಸ್ಥೆಯು ದೀರ್ಘಾಯು ಹೊಂದಬೇಕು. ಶ್ರೀದೇವರಿಗೆ ಪ್ರಾರ್ಥನೆ.

ಕೆ. ಎಸ್.

ಜನರಿಂದ ಚುನಾಯಿತರಾದ ಸಂಘದ ಕೌನ್ಸಿಲು ಮೆಂಬರುಗಳೂ.

ಅಯ್ಯಾ ಸ್ವಾಮ್ಯವನವರೇ,

ಜುಲೈ ತಾರೀಖು 6ನೇ ಪತ್ರಿಕೆಯಲ್ಲಿ ಪ್ರಕಟಿಸಿದ ನಿಮ್ಮ ಚಾತ್ರಿಯನ್ನು ನೋಡಿದೆನು. ಅದರಲ್ಲಿ ತಾವು ನನ್ನಲ್ಲಿ ಉತ್ತರಿಸುವ ವಿಷಯವನ್ನು ಕಾರಲಿಕ್ಕಾಗಿ ಎಂದೆಂದು ಹೇಳುವ ನಿಮ್ಮ ಅಭಿಪ್ರಾಯವು ನಿನಗೂ ನಿಮ್ಮ ಸಹಕಾರಿಗಳಿಗೂ ಮಾತ್ರ ಸಮಜಾಯಿಷಿ ತೋರಬಹುದಲ್ಲದೆ, ಜನರಲ್ಲಿ ಸಲಿಸಬೇಕಿದ್ದ ಇತರೇ ಅಭಿಪ್ರಾಯದಲ್ಲಿ ದೇಶಾಭಿವೃದ್ಧಿಯನ್ನು ಕುರಿತು ಚಿಂತಿಸುವ ನ್ಯಾಯವಾಗಿ ಕಾರ್ಯಾರ್ಥ ದೇಶ ಸೇವೆಮಾಡುವವರಿಗೆ ಎಂದಿಗೂ ನಿಮ್ಮ ಚಾತ್ರಿಯು ಒಪ್ಪಲಾರದೆಂದು ಖಂಡಿತ ಹೇಳುತ್ತೇನೆ. ಸರಕಾರದವರು ತೆರೆಯುವದಾಗಿ ಹೇಳುವ ವಿದ್ಯಾಸ್ಥರ ಮನೆಯ ಹೆಸರಿನ ಪುಸ್ತಕವನ್ನು ನಾಶ ಮಾಡಬೇಕಾಗಿ ಆ ಪುಸ್ತಕಕ್ಕೆ ದಾಖಲಾಗದೆ ಇರುವ ಮನೆಯವರು ಯಾತಕ್ಕಾಗಿ ಬರೆಯಿಸಿ ಬಡಿಯುತ್ತಾರೆ? ಕೊಡವ ಸಭೆ ಬೇಡವಾ ಕೆಲವು ಕೊಡಗು ಜನಾಂಗದವರೇ ಹೋರಾಡಿ ಯಾತಕ್ಕಾ ಅದನ್ನು ತಲೆ ಎತ್ತಲು ಬಿಡಲಿಲ್ಲ? ಸಂಘದ ಅಧ್ಯಕ್ಷರು ಕುರ್ಚಿಗಳನ್ನು ಕಾಪಾಡಬೇಕಾಗಿ ಬಹಿರಂಗವಾಗಿ ಹೇಳಿದ್ದೋ ಅಥವಾ ನಿಮ್ಮ ಸಂಗಡ ಮಾತ್ರ ಅಂತರಂಗವಾಗಿ ಹೇಳಿದ್ದೋ? ಕೌನ್ಸಿಲು ಮೆಂಬರುಗಳಿಗೆ ಸತ್ಕಾರ ಮಾಡಬೇಕಾಗಿ ಸಂಘದ ಎಗ್ಸಿಕ್ಯೂಟಿವ್ ಕಮಿಟಿಯವರು ತೀರ್ಮಾನ ಮಾಡಿದಾಗಿದೆಯೇ, ಸಂಘದ ವಾರ್ಷಿಕ ಸಮ್ಮೇಳನದಲ್ಲು ಮತ್ತು ಎಲ್ಲಾ ಕೂಟಗಳಲ್ಲು ಅವರಿಗೆ ಕೂರಲಿಕ್ಕೆ ಸ್ಥಳವನ್ನು ಆಲೋಚಿಸಿದ ಕಾರಣದಲ್ಲ ದುರಂತ ತೀರ್ಮಾನ ಮಾಡಿ ಯಾತಕ್ಕಾಗಿ ಪ್ರಕಟಿಸಲಿಲ್ಲ?

ಹಿಂದುಸ್ಥಾನದ ಚಳವಳಿಕ್ಕೆ ಯಾವ ಸಂಘವು ಮುಖ್ಯವಾದದ್ದು—ಆ ಸಂಘವು ಕೌನ್ಸಿಲನ್ನು ಒಪ್ಪಿಕೊಂಡಿರುತ್ತದೋ? ಆ ಸಂಘವು ತನ್ನ ವಾರ್ಷಿಕ ಕೂಟದಲ್ಲಿ ಕೌನ್ಸಿಲು ಮೆಂಬರುಗಳಿಗೆ ಈ ರೀತಿ ಕುರ್ಚಿಗಳನ್ನು ಕಾಪಾಡುತ್ತದೋ? ಹಿಂದುಸ್ಥಾನದ ಚಳವಳಿಯಲ್ಲಿ ತನ್ನ ತನು ಮನ ಧನಗಳನ್ನೆಲ್ಲಾ ಧಾರೆ ಎರದು ಕೆಲಸ ಮಾಡುತ್ತಿರುವವರಲ್ಲಿ ಮುಖ್ಯ ನಾಯಕರು ಕೌನ್ಸಿಲು ಮೆಂಬರುಗಳಾಗಿ ಯಾತಕ್ಕಾಗಿ ಚುನಾಯಿಸಲ್ಪಟ್ಟಿರುವದಿಲ್ಲ? ಕಾಂಗ್ರೆಸ್ ಕಮಿಟಿಯವರು ಕೌನ್ಸಿಲನ್ನು ಯಾತಕ್ಕಾಗಿ ಬಹಿಷ್ಕಾರ ಹಾಕಿರುತ್ತಾರೆ? ಸಂಘವು ಮೆಂಬರುಗಳನ್ನು ಚುನಾಯಿಸಿದ್ದೋ? ಯಾ ದೇಶದವರೋ? ಯು. ಎಲ್. ಸಿ. ಪದವಿಗಿಂತ ಶ್ರೇಷ್ಠವಾದ ಪದವಿ ಬೇರಿಲ್ಲವೆಂಬದಾಗಿ ಬರೆಯುತ್ತೀರಿ. ಹಾಗಾದರೆ ಲೋಕಮಾನ್ಯ ತಿಲಕ, ಮಹಾತ್ಮಾ ಗಾಂಧಿ ಲಾಲಾ ಲಜಪತರಾಯಿ ಮೊದಲಾದ ಅನೇಕ ಮುಂದಾಳುಗಳು ಯಾತಕ್ಕಾಗಿ ಈ ಪದವಿಯನ್ನು ಪಡೆಯಲಿಲ್ಲ? ನಿಮ್ಮ ಅಭಿಪ್ರಾಯ ನೋಡಿದರೆ, ಇವರುಗಳೆಲ್ಲಾ ಆ ಪದವಿಗೆ ಅಯೋಗ್ಯರಿದ್ದಿರಬೇಕೆಂದು ಖಂಡಿತವಾಗುತ್ತೆ. ವಿದ್ಯಾವಂತನೆ ಪತ್ರಗಳನ್ನು ಕಳುಹಿಸದೆಯೂ ಕಂಡ ಕಂಡಲ್ಲಿ ಮತ್ತು ಮನೆ ಮನೆ ಹೋಗಿ ತನಗೆ ಬಿಟ್ಟುಕೊಡಬೇಕೆಂಬದಾಗಿ ಸಿಕ್ಷ ಬೇಡಿದೆಯ ಆ ಕಾಲದಲ್ಲಿಯೇ ಕೂಡು ತಾಣ ಮಾಡಿದ ದೇಶ ಸೇವೆಯ ಫಲದಿಂದಲೇ ಮೆಂಬರಾದವರು ಯಾರಿದ್ದಾರೆ? ಎಂ. ಎಲ್. ಸಿ. ಪದವಿ ಏನೆಂಬದಾಗಿ ಬರೆಯುತ್ತೀರಿ ಹಾಗಾದರೆ ಕೊಡಗು ನ್ಯಾಯಶಾಸ್ತ್ರ ಸಭೆಯ ಮೆಂಬರು ಎಂದು ಅರ್ಥವಾಗುತ್ತೆ. ಅವರವರ ಗೌರವವು ಅವರವರ ಸಂಗಡಲೇ ಇದೆ. ಎಲ್ಲೆಲ್ಲಿ ಗೌರವ ಸಿಕ್ಕುತ್ತದೋ ಅಲ್ಲಲ್ಲಿ ಹೊಂದಿಕೊಳ್ಳಬೇಕೇ ಹೊರತು ಎಲ್ಲೆಲ್ಲಿಯೂ ಗೌರವಕ್ಕೆ ಬೇಡಾಡಿದರೆ ಅಗೌರವವು ಆಗಿಯೇ ತೀರಬೇಕಾಗುತ್ತೆ. ಅವರ್ಯಾರು ಎಂಬದಾಗಿ ತಿಳಿಯಲು ಶಕ್ತಿ ಇಲ್ಲವೆಂಬದಾಗಿ ಬರೆದಿರುತ್ತೀರಿ. ನನ್ನಿಂದಲೂ ನಿಮ್ಮಿಂದಲೂ ಚುನಾಯಿಸಲ್ಪಟ್ಟವರೆಂದು ಚನ್ನಾಗಿ ತಿಳಿಕೊಂಡೇ ಇರುತ್ತೇನೆ.

ದೇಶದವರಿಂದ ಚುನಾಯಿಸಲ್ಪಟ್ಟವರಿಗೆ ಎಗ್ಸಿಕ್ಯೂಟಿವ್ ಕಮಿಟಿ ಮೆಂಬರುಗಳು ಮಾತ್ರ ಅಂದರೆ ಹಾಕಿ ಗೌರವಿಸಬೇಕಂತೆ. ಇದಾದ ಸಲ್ಲದ್ದರಿಂದಲೇ 6 ಜನ ಮೆಂಬರು ಮಾತ್ರ ಹಾಜರಿದ್ದ ಜೆನರಲ್ ಸಭೆಯು ಮುಕ್ತಾಯವಾಗಿ ಜನ ಸಮುದಾಯವು ಕಮ್ಮಿಯಾದನಂತರ ಅಂದರೆ ರಾತ್ರಿ 10 ಗಂಟೆ ಮೇಲೆ ಸನ್ಮಾನಗಳನ್ನು ಮಾಡಿದ್ದು. ನಮ್ಮಿಂದ ಚುನಾಯಿಸಲ್ಪಟ್ಟ ಮೆಂಬರುಗಳು ನಮ್ಮ ಸಂಗಡ ಕೂಡಲು ಇಷ್ಟಪಡದೆ [illegible]

ಪ್ರತ್ಯೇಕ ಕೂತು, ಅವರ ದೊಡ್ಡಸ್ತಿಕೆಯನ್ನು ಅವರ ಮನೆಯಲ್ಲೇ ತೋರಿಸಿದ್ದು ಅವರಿಗೆ ಸರಿಯಾದದ್ದೋ? ಸ್ವಾಗತ ಪ್ರೆಸಿಡೆಂಟರನ್ನು ತಿಳಿದು ನನ್ನ ಚಾತ್ರಿಯನ್ನು ಹಿಂದಕ್ಕೆ ತೆಗದುಕೊಂಡರೆ ದೊಡ್ಡಸ್ತಿಕೆ ತಿಳಿಯುತ್ತೆಯಾಗಿ ಒಲಿಯುವದರ ಒಡಲು, ತಿಳುವಳಿಕೆ ಇರುವ ನೀವು ತಟಸ್ಥರಾಗಿದ್ದರೆ ಒಳ್ಳೆಯದಿತ್ತು. ನಿಮ್ಮ ಸೂಚನೆಯಂತೆ ಇಲ್ಲಿ ತೀರುಕೊಂಡು ನನ್ನ ದೊಡ್ಡಸ್ತಿಕೆಯನ್ನು ತೂಗಿಕೊಳ್ಳಲಿದದು. ತುಂಬಾ ಅಗೌರವವೆಂದು ಖಂಡಿತ ಹೇಳುತ್ತೇನೆ. ಜನರಿಗೆ ಅವಶ್ಯವಾಗಿ ತಿಳಿಯಬೇಕೆಂಬ ಅಭಿಪ್ರಾಯದಲ್ಲಿ ಮಾಡಿರುವದಿರುತ್ತದೆ.

ಕಾಳಂಡೀರ ಚಂಗಪ್ಪ.

NOTICE.

The public are hereby informed that the Government Mail motor Service has reduced its rates of travelling from the 10th July 1924 as follows:—

	Rs.	A.	P.
Mercara to Mysore	5	0	0
Do. to Sidapur	1	6	0
Sidapur to Mysore	4	0	0
Mercara to Hunsur	4	0	0

Khan Bahadur P Pallonjee,
Govt. Mail motor Contractor,
Proprietor, Mysore.

ನೋಟೀಸು.

ಗವರ್ನಮೆಂಟ್ ಮೆಯಿಲ್ ಮೋಟಾರ್ ಸರ್ವಿಸ್‌ನವರು ಜುಲೈ 10ರಿಂದ ತಮ್ಮ ಚಾರ್ಜನ್ನು ಈ ಕೆಳಗೆ ಕಾಣಿಸಿರುವ ದರಕ್ಕೆ ಇಳಿಸಿರುವರು

	ರು.	ಅ.	ಪೈ.
ಮಡಿಕೇರಿಯಿಂದ ಮೈಸೂರಿಗೆ	5	0	0
ಡಿಟೊ. ಸಿದ್ದಾಪುರಕ್ಕೆ	1	6	0
ಸಿದ್ದಾಪುರದಿಂದ ಮೈಸೂರಿಗೆ	4	0	0
ಮಡಿಕೇರಿಯಿಂದ ಹುಣಸೂರಿಗೆ....	4	0	0

ಖಾನ್ ಬಹುದ್ದೂರ್ ಪಿ. ಪಾಲ್ಲೋಂಜಿ,
ಗ ಮೆಯಿಲ್ ಮೋಟಾರ್ ಕಂಟ್ರಾಕ್ಟರ್,
ಪ್ರೊಪ್ರೈಟರ್, ಮೈಸೂರು.

4—2

ಒಕ್ಕಲಿಗರಿಗೆ
ಇದೊಂದು ಸಂಧಿಯು.



ನಿಮ್ಮ ಕಾರ್ಖಾನೆಯಲ್ಲಿ ಎರಡು ಜೋಡಿಯ ಕಬ್ಬು ಕೊಯಿಯುವ ಯಂತ್ರಗಳು ದೊರೆಯುತ್ತವೆ. ಈ ಯಂತ್ರಗಳಲ್ಲಿ ಒಂದನ್ನು ತರಿಸಿಕೊಂಡು ನಿಮ್ಮ ಮೇವಿನಲ್ಲಿ ವಿನಿಯೋಗ ಮಾಡಿಕೊಳ್ಳಿರಿ. ಮೇವು ಸಣ್ಣಗಾಗಿ ಕತ್ತರಿಸಿ ಬೀಳುವುದರಿಂದ ದನಗಳು ಸುಲಭವಾಗಿ ತಿನ್ನುತ್ತವೆ. ಬೆಲೆ ಅಗ್ಗ

ಕೆಟಲಾಗನ್ನು ತರಿಸಿಕೊಳ್ಳಿರಿ.
ಕಿರ್ಲೋಸ್ಕರ ಬಂಧು, ಲಿಮಿಟೆಡ್,
[10—21] ಕಿರ್ಲೋಸ್ಕರವಾಡಿ, ಜಿಲ್ಲಾ ಸಾತಾರಾ.

ಮಲೆಯಾಳ ವೈದ್ಯಶಾಲಾ.

ಮಲಬಾರಿನ ಸಂಜೀವನ್ ಮತ್ತು ಕಂಪೆನಿ ಎಂಬ ಆಯುರ್ವೇದ ವೈದ್ಯ ಶಾಲೆಯಲ್ಲಿ ಒಂದು ಶಾಖೆಯು ವೀರರಾಜೇಂದ್ರಪೇಟೆಯಲ್ಲಿ ತೆರದಿರುತ್ತದೆ. ಇಲ್ಲಿ ಯಾವ ವಿಧದ ಕಾಯಿಲೆಯಾಗಿದ್ದರೂ ಪಂಡಿತರಿಂದ ಪರೀಕ್ಷಿಸಿ ಔಷಧಿಕೊಟ್ಟು ಗುಣಪಡಿಸಲ್ಪಡುತ್ತೆ. ಔಷಧದ [illegible] ಬೇಕಾದವರು ಈ ಕೆಳಗಿನ [illegible] ತಿಳಿದುಕೊಳ್ಳಬಹುದು

ನಾರಾಯಣ ನಂಬೀಶನ್,
ಆಯುರ್ವೇದ ವೈದ್ಯರು,
52—26 ವೀರರಾಜೇಂದ್ರಪೇಟೆ.

ಅತ್ಯದ್ಭುತ ಗುಣಕಾರಿಯಾದ
ಜೀವನ ಔಷದ

ಪ್ರತಿ ಮನೆಯಲ್ಲಿ ಖಂಡಿತ ಇರತಕ್ಕದ್ದು.
ಗುಣವಾಗದಿದ್ದರೆ ಖಂಡಿತ ಹಣ ವಾಪಸು
ಕಳುಹಿಸುತ್ತೇನೆ

ಬಂದುಸಾರಿ ಕಫ ಸನ್ನಿಪಾತ,

ಯಾವ ಬೇನೆ ಅದರೂ ಕಚ್ಚಿದ ಕೂಡಲೆ ಈ ಔಷಧವನ್ನು ಹಾಕಿದ ತಕ್ಷಣವೇ ವಿಷವು ಇಳಿದು ಉರಿ ಶಮನ ಗುಣವಾಗುವದು. ಅನುಪಾನ ಪತ್ರಿಕೆಯನ್ನು ಬಾಟ್ಲಿ ಸಂಗಡ ಕಳುಹಿಸುತ್ತೇವೆ. ಬಾಟ್ಲಿ 1ಕ್ಕೆ 8 ಆಣೆ. 6 ಬಾಟ್ಲಿಗಳನ್ನು ತರಿಸಿಕೊಂಡರೆ 1 ಬಾಟ್ಲಿ ಕಮಿಷನ್. 12 ಬಾಟ್ಲಿಗಳನ್ನು ತರಿಸಿಕೊಂಡರೆ 3 ಬಾಟ್ಲಿ ಕಮಿಷನ್ ಕೊಡುತ್ತೇವೆ.

ನಮ್ಮ ವಿಳಾಸ —
ಹಾಲಪ್ಪದೇವರ ಮಠದ ಸಿದ್ಧಾಂತಿಗಳು,
ಹರಪನಹಳ್ಳಿ, ಜಿಲ್ಲಾ ಬಳ್ಳಾರಿ.
[12—10]

ಜೀವವಿಮೆ.

ಸಾವಿರಾರು ಕುಟುಂಬಗಳಲ್ಲಿ ಸಂಪಾದನೆಯ ಯಜಮಾನನು ಮೃತ ಪಟ್ಟರೆ ಉಂಟಾಗಬಹುದಾದ ತೊಂದರೆಗಳನ್ನು ನಿವಾರಿಸುವದೇ ಜೀವವಿಮೆ.

ವೃದ್ಧಾಪ್ಯಕಾಲದಲ್ಲಿ ಮತ್ತು ಕುಟುಂಬದ ಜೀವನಾಧಾರಕ್ಕೆ ಸೌಕರ್ಯವನ್ನು ಒದಗಿಸುವದೇ ಜೀವವಿಮೆ.

ಅತಿ ಕಡಮೆ ದರದಲ್ಲಿ ಯಾವ ಲೋಪವೂ ಬಾರದಂತೆ ಶ್ರೀಘ್ರದಲ್ಲಿ ಹಣವನ್ನು ಒದಗಿಸುವ ಸಂಸ್ಥೆಯಾದರೂ ಮೈಸೂರಿನ ಸರಕಾರದ ಭದ್ರತೆಯುಳ್ಳ ಜೀವವಿಮೆ. ಕಂಪೆನಿ.

ಬದುಕಿರುವಾಗಲೇ ಕುಟುಂಬದ ಜೀವನಾಧಾರಕ್ಕೆ ಸಾಲವಾಗಿ ಹಣವನ್ನು ಒದಗಿಸಿ ಸ್ಥಿರಾಸ್ತಿಗಳನ್ನು ಕೊಂಡುಕೊಂಡು ಜೀವನ ಆರ್ಥಿಕ ಸಂಪತ್ತನ್ನ Economic condition ವೃದ್ಧಿಗೊಳಿಸುವ ಸಂಸ್ಥೆಯಾದರೂ ಇದೊಂದೆ!

ಲೈಫ್ ಇನ್ಶುರೆನ್ಸ್ ಆಕ್ಟಿನಮೇರೆ ಇಂಡಿಯಾ ಗವರ್ನಮೆಂಟು ಸೆಕ್ಯೂರಿಟಿಗಾಗಿ ಸಲ್ಲಬೇಕಾದ 12 ಲಕ್ಷ ರೂಪಾಯಿ ಸೆಕ್ಯೂರಿಟಿಗಾಗಿಯೂ ಮೈಸೂರು ಗವರ್ನಮೆಂಟ್ ಸೆಕ್ಯೂರಿಟಿಗೆ ಸಲ್ಲಬೇಕಾದ 1 ಲಕ್ಷ ರೂಪಾಯಿ ಸೆಕ್ಯೂರಿಟಿಗಾಗಿಯೂ ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯಾ ಬ್ಯಾಂಕಿನ ಮದ್ರಾಸಿನ ಶಾಖೆಯಲ್ಲಿ 1 ಲಕ್ಷ ಗವರ್ನಮೆಂಟ್ ಆಫ್ ಇಂಡಿಯ ಸೆಕ್ಯೂರಿಟಿಯನ್ನು ಅರ್ಧ ಲಕ್ಷ ಮೈಸೂರು ಸೆಕ್ಯೂರಿಟಿಯನ್ನು ಡಿಪಾಜಿಟ್ಟಾಗಿ ಇಟ್ಟಿರುತ್ತೆ. ಹಾಗೆ 1 ಲಕ್ಷ ಇಂಡಿಯಾ ಗವರ್ನಮೆಂಟ್ ಸೆಕ್ಯೂರಿಟಿಗೆ ಬ್ಯಾಂಕ್ ಮುಖಾಂತರ ಏರ್ಪಾಡು ಮಾಡಿರುತ್ತೆ.

ಪಿ. ಎನ್. ಕರುಂಬಯ್ಯ,
ದಿ ಲೈಫ್ ಇನ್ಶ್ಯೂರೆನ್ಸ್ ಆಫೀಸ್, ಮಡಿಕೇರಿ.

Printed & published by Kodandera Appayya, R.B., Chairman, Board of Directors, at "Kodagu" Press, Mercara for "Kodagu" Ltd.—11-7-1924.

"KODAGI OFFICE, MERCARA"

ಕೊಡಗು.

[illegible]

[illegible]

TO LET

CARTRIDGES.

Fresh stocks are expected shortly of all kinds of arms and ammunition. Watch our advertisements for prices which will be shown on arrival.

SPENCER & Co. Ltd.,

Mercara, and Pollibetta, Coorg [24—18]

The Saraswathi Publishing Company

ಶಾರದಾ ಗ್ರಂಥಮಾಲಾ

ಈ ಗ್ರಂಥಮಾಲೆಯಲ್ಲಿ ಭಾರತ ಮಹಿಳೆಯರ [illegible] ಗ್ರಂಥಗಳು [illegible] ಪ್ರಕಟಿಸಲ್ಪಡುವವು. ಇದು ವರೆಗೆ ಪ್ರಕಟವಾಗಿರುವ ಗ್ರಂಥಗಳು —

	ರೂ.	ಅ.	ಪೈ.
1. ಪ್ರಿಯಂವದೆ, [illegible]	0	6	0
2. [illegible] ಚರಿತ್ರೆ	0	10	0
3. [illegible]	0	12	0
4. [illegible] ನಾಟಕ	0	8	0
5. [illegible]	0	4	0
6 [illegible]	0	4	0
7 [illegible]	0	4	0

ಈ ಎಲ್ಲಾ [illegible] ರೂ 2—12—0 [illegible]

ಸರಸ್ವತಿ.

[illegible]

SARASWATHI PUBLISHING Co.,
Post Box No. 57, Bangalore City

When you think of going to Bombay
THINK OF
THE WELCOME HOTEL
Girgaum Back Road, BOMBAY.
Most airy accomodation—Most central situation—Excellent Meals
Every convenience

ದಿ ವೆಲ್ಕಂ ಹೋಟೇಲ್
ಗಿರ್‌ಗಾಮ್ ಬ್ಯಾಕ್ ರೋಡ್, ಬೊಂಬಾಯಿ.

[illegible]

[24—7] [illegible], ಮ್ಯಾನೇಜರ್

For your requirements of high grade Arms, Ammunition, Wine and spirits

APPLY TO—

Mc. Dowell & Co., Ltd.

MERCARA [illegible]

[illegible]

[illegible]	8,00,00,000
[illegible]	6,00,00,000
[illegible]	1,00,00,000

[illegible]

[24—7] [illegible]

Health is Wealth.

WANTED all to improve health, strength and vitality and thus save our nation from physical degeneracy. Send half anna stamp and get 33 specimen photographs with full particulars from

Director, Physical Culture,
P. O. Basavanagudi,
Bangalore City.

ಪ್ರಕಟಣೆ

[illegible] ಸಹಕಾರಿ ಬ್ಯಾಂಕ್, ಲಿಮಿಟೆಡ್.
[illegible]

	ರೂ.
[illegible]	50,000
[illegible]	7,720
[illegible]	61,200

[illegible]

[illegible] 6-4-0 [illegible] 5 [illegible]

[illegible]

[illegible] ಬಿ. ಎ., ಬಿ. ಎಲ್.

ಸೆಕ್ರೆಟರಿ

[illegible] ಬಿ. ಎ., ಎಲ್. ಟಿ.

[illegible] 1924

"ಕೊಡಗು."

ಶಕ ೧೮೪೬ನೇ ಇಸವಿ ಜುಲೈ ತಾ|| ೨೫ನೇ ಶುಕ್ರವಾರ.

ಅತಿ ವೃಷ್ಟಿ.

ಕಳೆದ ವರ್ಷ ಈ ಸಮಯ ದಲ್ಲಿ ದೇಶದ ಜನರು ಮಳೆ ಇಲ್ಲವೆಂದು ಮೊರೆ ಇಡುತ್ತಿದ್ದರು. ಒಂದೆರಡು ವಾರಗಳಲ್ಲಿಯೇ ಸಾಕೋ ಸಾಕು, ಇನ್ನು ಬೇಡವೆನ್ನುವಷ್ಟು ಮಳೆ ಬಿದ್ದು ದೇಶದಲ್ಲೆಲ್ಲಾ ವಿವರಿಸಲು ಅಸದಳವಾದಷ್ಟು ನಷ್ಟವುಂಟು ಮಾಡಿದ ಅಸಾಧಾರಣವಾದ ಮಳೆಯು ಎಲ್ಲರಿಗೂ ಚೆನ್ನಾಗಿ ನೆನಪಿನಲ್ಲಿದೆ. ಅಷ್ಟು ಪಶಾರ್ಥವಾದ ಮಳೆಯು ಒಂದು ವರ್ಷವಾಗುವ ಮೊದಲೇ ಅದಕ್ಕಿಂತ ಅಸಾಧಾರಣವಾದ ಮಳೆಯು ದೇಶದವರನ್ನು ವಿಸ್ಮಯಗೊಳಿಸಿದೆ. ಬೆಟ್ಟಕ್ಕಿಂತ ದೊಡ್ಡ ಬೆಟ್ಟವಿದೆ ಎಂಬಂತೆ ಕಳೆದ ವರ್ಷದ ಮಳೆಯನ್ನು ನೋಡಿ, ಇಂಥಾ ಮಳೆಯು ಅನೇಕ ವರ್ಷಗಳಿಂದಲೂ ಬರಲಿಲ್ಲವೆಂದು ಹೇಳುತ್ತಿದ್ದ ಹಲವರು ಈ ವರ್ಷದ ಮಳೆಯು ಕಳೆದ ವರ್ಷಕ್ಕಿಂತ ಜೋರಾದುದೆಂದು ಅನ್ನುತ್ತಿರುವರು. ಮಡಿಕೇರಿಯಲ್ಲಿ ಕಳೆದ ವರ್ಷ ಇಪ್ಪತ್ತನಾಲ್ಕು ಗಂಟೆಗಳಲ್ಲಿ 9 ಇಂಚಿಗಿಂತ ಹೆಚ್ಚು ಮಳೆ ಬೀಳಲಿಲ್ಲ. ಆದರೆ ಈ ವರ್ಷ ಒಂದು ದಿನ ಅಂದರೆ ತಾ|| 16 ರಲ್ಲು ಸುಮಾರು 14.50 ಇಂಚು ಮಳೆಯಾಗಿದೆ. ಒಂಭತ್ತು ಮತ್ತು ಹತ್ತು ಇಂಚು ಮಳೆಯು ದೇಶದ ಅನೇಕ ಕಡೆಗಳಲ್ಲಿ ಆಗಿದೆ. ಅಸಾಧಾರಣವಾದ ಮಳೆಯು ದೇಶದಲ್ಲಿ ಸಾಧಾರಣವಾಗುತ್ತಿರುವಂತೆ ಕಾಣುತ್ತೆ.

ಮಳೆಯು ಹೆಚ್ಚೇ ಆಗಲಿ, ಕಡಿಮೆಯೇ ಆಗಲಿ, ಅದರಿಂದ ದೇಶದಲ್ಲಿ ಉಂಟಾದ ಪರಿಣಾಮಗಳೇನು ಎಂಬುದನ್ನು ವಿವರಿಸುವದೇ ನಮ್ಮ ಕೆಲಸವಾಗಿದೆ. ಕಳೆದ ವರ್ಷದ ಅತಿವೃಷ್ಟಿಯಿಂದ ಸಂಭವಿಸಿದ ಕಷ್ಟ ನಷ್ಟಗಳು ಪ್ರತಿಯೊಬ್ಬ ರೈತನ ಅನುಭವದಲ್ಲಿರುವದರಿಂದ ಆ ವಿಷಯ ಪುನಹ ಇಲ್ಲಿ ಬರೆಯಬೇಕಾದ ಅವಶ್ಯಕತೆಯಿಲ್ಲ. ಈ ವರ್ಷ ಕಳೆದವರ್ಷಕ್ಕಿಂತ ಮಳೆಯು ಹೆಚ್ಚಿಂಬುದರಿಂದಲೇ ಈಸಾರಿ ದೇಶದಲ್ಲಿ ನಷ್ಟವು ಹೆಚ್ಚೆಂಬುದನ್ನು ಬೇರೆ ಹೇಳಬೇಕಾಗಿಲ್ಲ. ಮಳೆಯು ಇನ್ನೂ ನಿಂತಂತೆ ಕಾಣುವುದಿಲ್ಲ. ಆದ ಕಾರಣ ಈ ಸಾರಿಯ ಮಳೆಯ ಅನಾಹುತಗಳು ಇಷ್ಟೇ ಎಂದು ಇನ್ನೂ ನಿಶ್ಚಯವಾಗಿ ಹೇಳಲು ಸಾಧ್ಯವಿಲ್ಲ. ಅಲ್ಲದೆ ದೇಶದ ಎಲ್ಲಾ ಕಡೆಗಳಿಂದ ಈ ಸಂಬಂಧ ವರ್ತಮಾನಗಳು ಇನ್ನೂ ಪೂರ್ತಿಯಾಗಿ ನಮಗೆ ಬಂದು ತಲುಪಿರುವದಿಲ್ಲ. ಕೆಲವು ಕಡೆಗಳ ಸುದ್ದಿ ಮಾತ್ರ ತಲುಪಿದೆ. ಕೆಲವೃಗಳು ಕಳೆದ ವರ್ಷದಷ್ಟು ನಷ್ಟವಿಲ್ಲವೆಂತಲೂ, ಇನ್ನು ಕೆಲವು ಕಳೆದ ಸಾರಿಯಷ್ಟೇ ಆಗಿರಬಹುದೆಂತಲೂ, ಮತ್ತೆ ಕೆಲವು ಈ ವರ್ಷ ಬಹಳ ಹೆಚ್ಚು ಅನಾಹುತಗಳುಂಟಾಗಿವೆ ಎಂತಲೂ ಸೂಚಿಸುತ್ತವೆ. ಕಳೆದ ವರ್ಷದ ಮಳೆಯಿಂದ ಸರಕಾರಕ್ಕೆ ವಿಶೇಷ ನಷ್ಟವಾಗಿರಲಿಲ್ಲ. ಈ ವರ್ಷ ರೈತರುಗಳ ಜತೆಗೆ ಸರಕಾರಕ್ಕೂ ಬಹಳ ನಷ್ಟವಾಗಿದೆ ಎಂತ ತೋರುತ್ತದೆ. ಕಳೆದವರ್ಷ ರೈತರ ಕಷ್ಟ ನಿವಾರಣೆಗೆ ಸರ್ಕಾರದವರು ಇಪ್ಪತ್ತೈದು ಸಾವಿರ ರುಪಾಯಿ ಟಕಾವಿ ಸಾಲ ಕೊಟ್ಟರು. ಅದರಿಂದ ರೈತರುಗಳಿಗೆ ಬೇಕಾದಷ್ಟು ಸಹಾಯ ಸಿಕ್ಕಲಿಲ್ಲವೆಂತ ಕೂಗು ಕೇಳುತ್ತಲೇ ಇತ್ತು. [illegible] ಸಹಾಯ [illegible] ಸಂಘದ [illegible] ಇಲ್ಲಿಗೆ ಮಾತ್ರ ಸಹಾಯ [illegible] ನಮಗೆ ಸಮರ್ಪಕವಾಗಿ ಆಧಾರ [illegible] ಸಂಗತಿಯನ್ನು ಇಲ್ಲಿ ಬರೆದೆವು. ಆದ್ದರಿಂದ ಈ ವರ್ಷ ನಷ್ಟ ಅನುಭವಿಸುವರಾಗಿರುವ ರೈತರಿಗೆ ಸಾಧಾರಣವುಳ್ಳಗಾದರೂ ಪ್ರಯೋಜನವಾಗಬೇಕಾದರೆ ಕಡಿಮೆಪಕ್ಷ ಒಂದು ಲಕ್ಷ ರುಪಾಯಿ ವರೆಗೆ ಟಕಾವಿ ಸಾಲವನ್ನು ದೇಶದಲ್ಲಿ ಹಂಚಬೇಕು.

ಈ ಹಣವು ಎಲ್ಲಿಂದ ಬರಬೇಕು ? ಕಳೆದ ವರ್ಷವಾದರೆ ನಮ್ಮ ಈ ಸರ್ಕಾರವು ಇಂಡಿಯಾ ಸರ್ಕಾರದೊಳಗೆ ಅಡಗಿತ್ತು. ಇಂಡಿಯಾಸರ್ಕಾರದ ಬೊಕ್ಕಸವು ಬಹಳ ದೊಡ್ಡದು, ಅದಕ್ಕೆ ಮುಕ್ಕಾಲು ಲಕ್ಷ, ಒಂದು ಲಕ್ಷವೆಂದರೆ ದೊಡ್ಡದಾಗಿರಲಿಲ್ಲ. ಈ ವರ್ಷ ನಮ್ಮ ಈ ದೇಶಕ್ಕೆ ಪ್ರತ್ಯೇಕ ಆದಾಯ ವೆಚ್ಚವಾಗಬೇಕಾಗಿದೆ. ಈ ದೇಶದ 16 ಲಕ್ಷ ಉತ್ಪತ್ತಿಯಲ್ಲಿ ಒಂದು ಲಕ್ಷವನ್ನು ಪ್ರತ್ಯೇಕಿಸಿ ತೆಗೆದುಬಿಟ್ಟರೆ ಸರ್ಕಾರದ ಇತರ ಕೆಲಸಗಳಿಗೆ ಬೇಕಾದ ಮೊಬಲಗು ದೊರಕುವದೇ ಕಷ್ಟವಾಗಬಹುದು. ಇದುಅಲ್ಲದೆ ಸರ್ಕಾರದ ರಸ್ತೆಗಳಿಗೂ ಸೇತುವೆಗಳಿಗೂ ಆಗಿರುವ ನಷ್ಟವನ್ನು ಸರಿಪಡಿಸಿಕೊಳ್ಳಲಿಕ್ಕೆ ಪಿ. ಡಬ್ಲ್ಯು. ಡಿ.ಗೆ ಸಹ ಬಹಳ ಹೆಚ್ಚಿನ ಹಣ ಬೇಕಾಗಬಹುದು. ಈ ಸ್ಥಿತಿಯಲ್ಲಿ ಇಂಡಿಯಾ ಸರ್ಕಾರದವರು ಈ ದೇಶದ ಸಹಾಯಕ್ಕೆ ಬರಲೇ ಬೇಕಾಗಿದೆ. ಬಹುಕಾಲದಿಂದ ಈ ದೇಶದ ಉತ್ಪತ್ತಿಯ ಫಲವನ್ನು ಅನುಭವಿಸಿದ ಇಂಡಿಯಾ ಸರ್ಕಾರವು ಕಷ್ಟಕಾಲದಲ್ಲಿ ಆದೇಶಕ್ಕೆ ಸಹಾಯ ಮಾಡಬೇಕು. ಈಗ ಒಂದು ಲಕ್ಷ ರೂಪಾಯಿಯನ್ನು ಈ ದೇಶದ ಪ್ರಜೆಗಳ ಕಷ್ಟನಿವಾರಣೆಗೆ ಉಚಿತವಾಗಿಯೇ ಇಂಡಿಯಾ ಸರ್ಕಾರದವರು ಕೊಡಬೇಕು. ಇದು ಸಾಧ್ಯವಿಲ್ಲವಾದರೆ ಸಾಲವಾಗಿಯಾದರೂ ಈ ಮೊಬಲಗನ್ನು ಪಡೆದು ಪ್ರಜೆಗಳಿಗೆ ಹಂಚಬೇಕು. ನಮ್ಮ ಸರ್ಕಾರಕ್ಕೆ ಆದಾಯ ವೆಚ್ಚದ ಮಂತ್ರಿಯಾದ ಕಮಿಷನರು ಈ ಬಗ್ಗೆ ಕೂಡಲೇ ತಕ್ಕ ವಿಚಾರವು ಮಾಡಿಯಾರೆಂತ [illegible]

ಕಳೆದ ವರ್ಷ ಅತಿ [illegible] ಕಷ್ಟ ಪರಿಹಾರ ಮಾರ್ಗ [illegible] ಮಡಿಕೇರಿಯಲ್ಲಿ [illegible] [illegible] ಕೊಟ್ಟರು. ಈ ವರ್ಷ [illegible] ವರ್ತಮಾನವೇನೂ ಇನ್ನು ಇಲ್ಲ. ಕೊಟ್ಟಮುಡಿ, ಬಲಮುರಿ, ಫ್ರೇಜರ್‌ಪೇಟೆ ಇನ್ನೂ ಈ ಸ್ಥಳಗಳಲ್ಲಿ ಮನೆಗಳು ಕೆಲವು ಹೋದವೆಂತ ತಿಳಿಯುತ್ತೆ. ಅಲ್ಲದೆ ಹೊಳೆಯಿಂದ ಬಹು ದೂರದಲ್ಲಿದ್ದ ಒಂದೆರಡು ರೈತರ ಮನೆಗಳನ್ನು ಸಹ ಹೊಳೆ ನೀರು ಕೊಚ್ಚಿಕೊಂಡು ಹೋದ ವರ್ತಮಾನ ಬಂದಿದೆ. ಈ ಕಷ್ಟ ನಿವಾರಣೆಗೆ [illegible] ಮಾಡಬೇಕು. [illegible] ಬರದಿರುವ ಜೋರಿ ಕಳೆವ ಊರವರಿಗೆ [illegible] ಸಹಾಯ ಮಾಡಿದ ಮಹನೀಯರಂತೆ ಇತರ ಕಡೆ [illegible] ಅನುಕೂಲಸ್ಥರು ಮುಂದೆ ಬರಬೇಕಾಗಿದೆ. ಅನುಕೂಲಸ್ಥ ಜನರು ಮುಂದೆ ಬರದಿದ್ದರೂ ಸರ್ಕಾರವು ಈ ಕಾಲದಲ್ಲಿ ಸುಮ್ಮನೆ ಇರಬಾರದು. ಸರ್ಕಾರದ ಅಧಿಕಾರಿಗಳು, ಮಳೆಗೆ ಅಂಜದೆ ಹೊಳೆ ಬದಿಗಳಿಗೂ ಗದ್ದೆ ಬೈಲುಗಳಿಗೂ ಹೋಗಿ ಕಷ್ಟನಷ್ಟವನ್ನು ಖುದ್ದು ನೋಡಿ ಕಮಿಷನರ್ ಸಾಹೇಬರವರು ತಮ್ಮ ಡಿಸ್‌ಕ್ರಿಷನರಿ ಗ್ರ್ಯಾಂಟಿನಿಂದ ತಾತ್ಕಾಲಿಕ ಕಷ್ಟ ನಿವಾರಣೆಗೆ ಸಹಾಯ ಮಾಡಬೇಕು. ಈ ಸಂದರ್ಭದಲ್ಲಿ ಪಟೇಲರು, ಪಾರುಪತ್ಯಗಾರರ ರಿಪೋರ್ಟುಗಳನ್ನು ಕಾಯ ಕೂತಿರಬಾರದು. ಮೇಲಧಿಕಾರಿಗಳು ರೈತರಿಗೆ ಅವರವರ ಸ್ಥಳದಲ್ಲೇ ಭೇಟಿಕೊಟ್ಟು ಧೈರ್ಯದ ಮಾತುಗಳನ್ನಾಡಿ ಸಮಾಧಾನ ಪಡಿಸಬೇಕು. ಕಾವೇರಿ ಹೊಳೆಯ ಪ್ರವಾಹದಿಂದ ತಿರುಚಿನಾಪಳ್ಳಿ ಜಿಲ್ಲೆಯಲ್ಲಿ ತುಂಬಾ ನಷ್ಟವಾಗುತ್ತಿದೆ. ಅಲ್ಲಿನ ದೊಡ್ಡ ದೊಡ್ಡ ಉದ್ಯೋಗಸ್ಥರು ಪ್ರವಾಹಕ್ಕೆ ಹೆದರದೆ ಪ್ರವಾಹದಿಂದ ಆಗುವ ಅನಾಹುತಗಳನ್ನು ತಪ್ಪಿಸಲಿಕ್ಕೂ, ಕಷ್ಟ ಪಡುವವರಿಗೆ ಸಹಾಯ ಮಾಡಲಿಕ್ಕೂ ಕೆಲಸ ಮಾಡುತ್ತಿದ್ದಾರೆ. ನಮ್ಮ ಕ್ಯಾಪ್ಟನ್ ಬೆಂಬಟು ಸಹ ಗ್ರಾಮುಗಳಿಗೆ [illegible] ಹೋಗಬೇಕು. ಇನ್ನೂ ಐದು ತಿಂಗಳು ಕಳೆದರೆ ರೈತರು ಹೇಗಾದರೂ ಮಾಡಿ ಗದ್ದೆಗಳ ಹೆಚ್ಚಿನ ಭಾಗವನ್ನು ನೆಟ್ಟು ಬಿಡುತ್ತಾರೆ. ಗದ್ದೆಯ ಹೆಚ್ಚಿನ ಭಾಗ ಬಹುತು ಬಲ್ಲಾದಿಂದ ಮುಚ್ಚಿದಾಗ ಬೈಲೆಲ್ಲಾ ಹಸುರಾದಂತೆ ಕಂಡು ನಷ್ಟವು ಏನೂ ತೋರಿ ಬರಲಾರದು. ಆದ್ದರಿಂದ ಐದು ವಾರದೊಳಗೆ ಕಮಿಷನರ್ ಸಾಹೇಬರು, ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಸಹ ಹತ್ತಿರಬು ಗ್ರಾಮುಗಳನ್ನಾದರೂ ನೋಡಬೇಕು.

ಮನುಷ್ಯನು ಎಷ್ಟು ಬುದ್ಧಿವಂತಿಕೆ ಖರ್ಚು ಮಾಡಿದರೂ ದೇವರ ಕಾರ್ಯವನ್ನು ತಡೆಯಲು ಸಾಧ್ಯವಿಲ್ಲ.

"ಮನೆಗೊಂದು ಚರಕ"

(ಕೊಡಗಿನ ಜೊತೆಗೆ ಮಾತು ಇರುವ ಕೊಡವ ಮಹಿಳೆ ಒಬ್ಬಳಿಂದ ಬರೆದು ಬಂದದ್ದು.)

ಈಗ ಇಡೀ ಹಿಂದೂ ದೇಶದಲ್ಲಿ ಖಾದಿ ಬಟ್ಟೆಯೇ ಧರಿಸಬೇಕೆಂಬದಾಗಿ ಎಲ್ಲೆಲ್ಲಿಯೂ ಹೇಳಿಕೊಳ್ಳುವುದನ್ನು ನಾವು ಕಿವಿಯಲ್ಲಿಯೂ ಕೇಳುತ್ತೇವೆ ಅಲ್ಲದೆ ಪತ್ರಿಕೆಯ ಮೂಲಕವೂ ಓದಿ ನೋಡುತ್ತೇವೆ. ಈ ಖಾದಿಯ ನೂಲನ್ನು ನಾನು ಮಾಡಬೇಕೆಂದು ನನಗೆ ಒಂದು ಕಾಲದ ಮನಸ್ಸು ಹುಟ್ಟಿತು. ಈಗ ಐದು ತಿಂಗಳುಗಳಿಗೆ ಮುಂಚೆ ನಾನು ಒಂದು ಚರಕವನ್ನು ಒದಗಿಸಿಕೊಂಡೆನು. ಆಮೇಲೆ ಬೇಕಾದ ಸ್ವಲ್ಪ ಹತ್ತಿಯನ್ನು ತರಿಸಿ ನೂಲು ಮಾಡಲು [illegible] ಮನೆಯಲ್ಲಿ ಹತ್ತಿಯು [illegible] ತಿಳಿದ [illegible] ತಿಂಗಳು ಕೆಲಸಕ್ಕೆ [illegible] ಈ [illegible] ದಿಂದ ಬೇರೆ [illegible] [illegible] ಇದು ಯಾವ ಮಧ ಕೆಲಸವನ್ನೂ ಮಾಡಬಲ್ಲೆನು. ಇದರ ಎರಡು ಉರುಟುಗಳು ಕಬ್ಬಿನ ಗಾಣದ ಉರುಟುಗಳ ಹಾಗೆಯೇ ಇವೆ. ಆದರೆ ಬಹಳ ಸಣ್ಣವು ಆದ್ದರಿಂದ ಮರದಿಂದ ಮಾಡಿರುತ್ತವೆ. ಇಂಥಾ ಒಂದು ಯಂತ್ರವನ್ನು ಒದಗಿಸಿಕೊಂಡೆನು. ಮೊದಲು ಹತ್ತಿ ಬೀಜವನ್ನು ಬೇರೆಬೇರೆಯಾಗಿ ಬಿಡಿಸಿಟ್ಟುಕೊಳ್ಳಬೇಕು. ಆ ಮೇಲೆ ಆ ಕೈಯಂತ್ರಕ್ಕೆ ಒಂದೊಂದಾಗಿ ಕೊಡುತ್ತಾ ನಿಧಾನವಾಗಿ ತಿರುಗಿಸಿಕೊಂಡು ಅರೆಯ ಬಹುದು. ಹೀಗೆ ಅರೆದರೆ ಹತ್ತಿಯೇ ಬೇರೆ ಬೀಜವೇ ಬೇರೆ ಆಗುತ್ತೆ. ಈ ಹತ್ತಿಯನ್ನು ತೆಗೆದು ಪುನಃ ಕೂಡಲು ಸಿಕ್ಕು ಬಿಡಿಸುವ ಹಾಗೆ ಕೈಯಲ್ಲಿ ಬಿಡಿಸಬೇಕು. ಇದರಲ್ಲಿ ಏನಾದರೂ ಸಣ್ಣ ಸಿಕ್ಕು ಮುಂತಾದ್ದು ಇದ್ದರೆ ಅದನ್ನು ತೆಗೆದು ಬಿಸಾಡಿ ಹತ್ತಿಯನ್ನು ಶುದ್ಧವಾದ ಸ್ಥಳದಲ್ಲಿ ಇರಿಸಿಕೊಳ್ಳಬೇಕು. ಈ ಹತ್ತಿಯನ್ನು ಚಾಪೆಯ ಮೇಲೆ ಹಾಕಿಕೊಂಡು ಒಂದು ತರದ ಬಿಲ್ಲಿನಲ್ಲಿ ಚೆನ್ನಾಗಿ ಹೊಡೆಯಬೇಕು. ಈ ಬಿಲ್ಲು ಹಸಿ ಬಿದಿರನ್ನು ಬಗ್ಗಿಸಿ ಎತ್ತಿನ ನರ [gut] ದಿಂದ ಸಪೆದ ಹಗ್ಗ ಕಟ್ಟಿದ್ದಾಗಿದೆ. ಹೀಗೆ ಹೊಡೆದ ಹತ್ತಿಯು ನೋಡಲಿಕ್ಕೆ ಬೆಳ್ಳಗೆ ಒಂದೊಂದು ಎಳೆಯೂ ಬಿಟ್ಟು ಅಂದವಾಗಿ ಇರುತ್ತೆ. ಇದನ್ನು ಸ್ವಲ್ಪಸ್ವಲ್ಪವಾಗಿ ತೆಗೆದುಕೊಂಡು ಆರು ಅಂಗುಲ ಉದ್ದ ಎರಡಂಗುಲ ಸುತ್ತಳತೆ ಇರುವ ಬತ್ತಿಗಳಾಗಿ ಉರುಳಿಸಿಕೊಂಡು ಶುದ್ಧವಾದ ಬುಟ್ಟಿಯಲ್ಲಿ ಇಟ್ಟುಕೊಳ್ಳತಕ್ಕದ್ದು. ಈ ಬತ್ತಿಗಳು ನೂಲುಮಾಡಲಿಕ್ಕೆ ತಕ್ಕಂತವುಗಳಾಗಿರುತ್ತವೆ. ಆ ಮೇಲೆ ಕೂತುಕೊಂಡು ನೂಲುವದು ಬಹುದು. ನೂಲುಮಾಡಲಿಕ್ಕೆ ಏನೊಂದು ತರದ ಕಷ್ಟವೂ ಇಲ್ಲ. ಇದಕ್ಕೆ ಯಾವ ತರದ ಗಟ್ಟಿಗತನವೂ ಬೇಕಿಲ್ಲ. ಈಗ ನಾಲ್ಕು ತಿಂಗಳಿಂದ ನಾನು 18 ರಾತ್ಲ [illegible] ಸುಮಾರು ಸಿದ್ಧ. ಇದಕ್ಕೆ ೧೯ ರಾತ್ಲ ಹತ್ತಿ [illegible] ಹತ್ತಿ [illegible] [illegible] ನಾನು ನನ್ನ ಹಸಕ್ಕೆ ಉಪಯೋಗಿಸಿದೆನು. ನಾನು ಇಷ್ಟು ನೂಲು ಮಾಡಲಿಕ್ಕೆ ಯಾವಾಗಲೂ ಸರಾಸರಿ ಒಂದು ವಾರದ ಕೆಲಸ ಮಾಡುತ್ತಿದ್ದೆನು. ಇದರಿಂದ ನನ್ನ ಮನೆ ಕೆಲಸಕ್ಕೆ ಯಾವ ತರದ ಕುಂದಕವೂ ಬರುತ್ತಿರಲಿಲ್ಲ. ಈ 18 ರಾತ್ಲ ನೂಲಿನಿಂದ ಕಮ್ಮಿ 50 ಗಜ ಒಳ್ಳೇ ಸೀರೆ ಬಟ್ಟೆ ಆಗುತ್ತೆ.

ಈ ಮೇಲಿನಸಂಗತಿ ನನ್ನ ಸ್ವಂತ ಅನುಭವ. ನನ್ನ ಪ್ರೀಯ ಸಹೋದರಿಗಳಾದ, ಕೊಡಗು ಮಹಿಳೆಯರು ದಿನಕ್ಕೆ ಸರಾಸರಿ 6 ತಿಂಗಳು ಹಗಲು 1 ಗಂಟೆಯಿಂದ ಸಾಯಂಕಾಲ 4 ಗಂಟೆ ವರೆಗೆ ಏನೊಂದೂ ಕೆಲಸವಿಲ್ಲದೆ ತಮ್ಮ ಮನೆಗಳಲ್ಲಿ ಮಹಿಳೆಯರೆಲ್ಲಾ ಗುಂಪು ಸೇರಿ ಕೂತುಕೊಂಡು ಹರಟೆ ಹೊಡೆಯುತ್ತಿರುವುದೂ ಒಬ್ಬರು ಒಬ್ಬರನ್ನು ದೂಷಿಸುತ್ತಿರುವುದೂ ನನ್ನ ಸ್ವಂತ ಅನುಭವ. ಹೀಗೆ ಕಳೆದ ಕಾಲವೆಲ್ಲಾ ನಿಷ್ಪ್ರಯೋಜನವಾದದ್ದು ಎಂಬುದು ನನ್ನ ಸಹೋದರಿಯರು ನಿಜವಾಗಿ ಒಪ್ಪಿಕೊಳ್ಳುವಂಥಾದ್ದೇ. ಆದ್ದರಿಂದ ನನ್ನ ಸಹೋದರಿಯರು ಈ ನೂಲು ಮಾಡುವ ಕೆಲಸವನ್ನು ಕೈಕೊಂಡರೆ ತಮ್ಮ ಸಮಯವನ್ನು ಪ್ರಯೋಜನಾರ್ಥವಾಗಿ ಉಪಯೋಗಿಸಿದ ಹಾಗೂ ದೇಶದ ಬಡತನವನ್ನು ನೀಗಿದ ಹಾಗೂ ಆಗುತ್ತೆ. ಆದ್ದರಿಂದ ನನ್ನ ಪ್ರೀಯ ಸಹೋದರಿಯರು ಈ ವಿಷಯ ಯೋಚಿಸಿ ಈ ಸುಲಭವಾದ ಕೆಲಸವನ್ನು ಕೈಕೊಳ್ಳುವರೆಂದು ನಂಬುತ್ತೇನೆ.

ನನ್ನ ಸಹೋದರರಾದ ಕೊಡಗಿನ ಮಹನೀಯರುಗಳಿಗೆ ನನ್ನ ಒಂದೆರಡು ವಿಜ್ಞಾಪನೆಗಳು. ಈ ಮೇಲಿನ ವಿಷಯದಲ್ಲಿ ನಿಮ್ಮ ನಿಮ್ಮ ಮಹಿಳೆಯರಿಗೆ ಖಾದಿ ನೂಲು ಮಾಡಲು ಎಲ್ಲಾ ಸಾಮಗ್ರಿಗಳನ್ನು ಒದಗಿಸಿಕೊಡುವುದು ನಿಮ್ಮ ಕರ್ತವ್ಯವಾಗಿದೆ. ಹೀಗೆ ಮಾಡುವುದರಿಂದ ನಿಮ್ಮ ಮಹಿಳೆಯರು ಕಾಲವನ್ನು ವ್ಯರ್ಥಾ ಕಳೆಯುವುದನ್ನೂ ಬೇರೆಯವರ ಸಂಗಡ ಜಗಳ ಮಾಡುವದನ್ನೂ ನಿಲ್ಲಿಸಿದ ಹಾಗೆ ಆಗಿ ನಿಮ್ಮ ಮನಸ್ಸಿಗೆ ಶಾಂತಿಯನ್ನು ಒದಗಿಸಿಕೊಂಡ ಹಾಗೆ ಆಗುತ್ತೆ. ಇದೂ ಅಲ್ಲದೆ ಪ್ರತಿ ಗ್ರಾಮದಲ್ಲಿಯೂ ಒಂದೊಂದು ಒಳ್ಳೆ ನೇಯುವ ಮಗ್ಗವನ್ನು ಇಟ್ಟು ಬಟ್ಟೆ ತಯಾರು ಮಾಡುವ ಏರ್ಪಾಡು ಮಾಡಿದರೆ ಕೊಡಗಿನ ಬಡತನದ ದೊಡ್ಡ ಭಾಗವನ್ನು ನೀಗಿಸಿದ ಹಾಗಾಗುತ್ತೆ. ಇದು ಮಹನೀಯರುಗಳಿಗೆ ಸೇರಿದ ಕೆಲಸ.

ಈ ಮೇಲಿನ ಸಂಗ್ತಿ ಬರೆಯುವುದರಲ್ಲಿ ನಾನು ಈಗಿನ [illegible] ಕೇಳುವ ಚಳವಳಕ್ಕೆ ಸಂಬಂಧಪಟ್ಟವಳೆಂದು ತಿಳಿದುಕೊಳ್ಳಕೂಡದು. ಈ ನೂಲುವಾದಿ ಖಾದಿ ಬಟ್ಟೆಯನ್ನೇ ಧರಿಸುವುದರಿಂದ ನಮ್ಮ ಬಡತನವನ್ನು ಬಹಳ ಮಟ್ಟಿಗೆ ಹೋಗಲಾಡಿಸಬಹುದೆಂದೂ [illegible] ಕಾಲ [illegible] ನಿಲ್ಲಿಸಬಹುದೆಂದೂ ನನ್ನ ಮನಸ್ಸಿಗೆ ಕಂಡು ಬಂದದ್ದರಿಂದ ಬರೆದದ್ದಾಗಿದೆ.

ಕವೇರು,

ರಾಮಸ್ವಾಮಿ ಕಣಿವೆ

೬೬ ಸೇರಿನ ಹಾವೆ

(ಒಬ್ಬ ಜಾತ್ಯ ದಾರನಿಂದ)

ಕಳೆದ ವರ್ಷದ ಅತಿ ಪ್ರವಾಹವು [illegible] ಕೇಳುವ ಮೊದಲೇ ಅಕಸ್ಮಾತ್ತಾಗಿ ಈ ವರ್ಷವು ಮೊನ್ನೆ 15ನೇ ತಾರೀಕಿನ ದಿನ ಬೀಸಿದ ಅಗಾಧವಾದ ಮಳೆ [illegible] ಕಾವೇರಿ ಪ್ರವಾಹವು ಉಕ್ಕಿ ಬಂದು ರಾಮಸ್ವಾಮಿ ಕಣಿವೆ ಪೇಟೆಯಲ್ಲಿ ಸಹ ಬಂದಿತ್ತು. ಅದಿ ನೀರು ಬಂದು ಜನರೆಲ್ಲರೂ ಭೀತಿಯಿಂದ ಲಕ್ಷ್ಮಣೇಶ್ವರ ದೇವಸ್ಥಾನದ ಮೇಲೆ ಹೋಗಿ ಹೊಟ್ಟೆಗೆ ಹಿಟ್ಟಿಲ್ಲದೆ ಇದ್ದರು. ಇಂಥಾ ಸಂದರ್ಭದಲ್ಲಿ ನಿಸ್ವಾರ್ಥ್ಯಾಗಿ ಇವರ ಆಗದ ನೋವರೇ ಒಂದಂತೆ ಪ್ರೀತಿ ಸಾಹುಕಾರರು [illegible] ಸುಬ್ರಹ್ಮಣ್ಯನವರು [illegible] ಹೋಗಿ ದಿಕ್ಕು ತೋಚದೆ ಕಷ್ಟಪಡುತ್ತಿದ್ದ ಕಣಿವೆ ಜನ[illegible] ಉದಾರ ಬುದ್ಧಿಯಿಂದ ತಲೆ ಒಂದರ ಒಂದು ರೂಪಾಯಿ 103 ರೂಪಾಯಿಗಳನ್ನು ಸಾಹುಕಾರರು [illegible] 51-8-0 ರೂಪಾಯಿಗಳನ್ನು ಮ. ಸುಬ್ರಹ್ಮಣ್ಯನವರೂ [illegible] ಕೊಟ್ಟು ಅವರಿಗೆಲ್ಲಾ ಸಮಾಧಾನೋಕ್ತಿಗಳಿಂದ ಧೈರ್ಯ[illegible] ಹೇಳಬಂದಿರುವುದು ತುಂಬಾ ಶ್ಲಾಘನೀಯವಾದವನ್ನೇ [illegible]

ಸಾಮಾನ್ಯವಾಗಿ 40 ವರ್ಷಗಳಿಂದೀಚೆಗೆ ಬಾರದ [illegible]ಯು. ಕಳೆದ ವರ್ಷ ಬಂದೂ ಸಹ ಕಣಿವೆ ಪೇಟೆಯಲ್ಲಿ [illegible] ಇದ್ದ ನೀರು. ಈ ವರ್ಷ ಬಂದಿರುವದರ ಮಳೆಯ ನೀರು [illegible]

ದು. ಹೇಳುವುದು ? ಮುಂದೆ ಕಣಿವೆ ಜನಗಳ ಕಾರ್ಯ ವಿವ ರಿಸಬೇಕ್ಕಾಗಿದೆ. ಅತಿವೃಷ್ಟಿಯ ಹಾನಿಯಿಂದ ಕಳೆದ ವರ್ಷವೂ ಬೆಳೆ ಕಡಿಮೆಯಾಗಿ ಕಷ್ಟಕ್ಕೊಳಗಾದ ಕಣಿವೆ ಜನಗಳಿಗೆ ಈ ವರ್ಷವಂತೂ ವರ್ಣಿಸಲಸಾಧ್ಯವಾದ ಸ್ಥಿತಿಯು ಸಂಭವಿಸುವದೆಂಬುವುದರಲ್ಲಿ ಸಂಶಯವಿಲ್ಲ. ಈ ಕಷ್ಟ ನಿವಾರಣೆಗಾಗಿ ಹಾರಂಗಿ ನಾಲೆಯನ್ನು ತೆರದು ಪ್ರತ್ಯೇಕವಾದ ಬೇರೆಯಿಂದ ಜನರ ಕ್ಷಾಮ ನಿವಾರಣೆಯಾಗುವಂತೆ ಕಾರ್ಯ್ಸಲು ಮುಂಬರ ಕಾರರೂ ಶಕ್ತ ಪ್ರಯತ್ನವನ್ನು ಕೆಗದುಕೊಳ್ಳದವರಾದರೆಂದು ಸಂಪೂರ್ಣ ನಂಬಿದ್ದೇನೆ.

ಈ ವರ್ಷದ ಪ್ರವಾಹದ ಹಾನಿಯ ನಿವಾರಣೆಗಾಗಿ, ಕಳೆದ ವರ್ಷ ಕೊಂಡರೆ ತೆಗದುಕೊಂಡ ಉಪಾಯಗಳು ಈಗಲೂ ದಲೇ ತನು ಮನ ಧನ ಸಹಾಯ ಸಂಗ್ರಹಕ್ಕೆ ಹೊರಬಿದಿರಬಾರದೆಂಬ ಭರವಸೆ ಇದೆ. ಕಾರ್ಯ ಮಿಂಚಿ ಹೋದ ಮೇಲೆ ಅನುಕೂಲವಿಲ್ಲ.

ತಾರೀಕು 28-6-1924ರಲ್ಲು ವೀರರಾಜೇಂದ್ರಪೇಟೆಯಲ್ಲಿ ನಡೆದ "ಕೊಡಗು" ಕಂಪನಿಯ ಡೈರೆಕ್ಟರುಗಳ ಮೀಟಿಂಗಿನಲ್ಲಿ ತೀರ್ಮಾನವಾದ ಸಂಗತಿಗಳು :—

1 ರಾವ್ಬಹದ್ದೂರ್ ಮೆ|| ಕೋದಂಡ ಅಪ್ಪಯ್ಯನವರು ಕಂಪೆನಿಯ ಅಧ್ಯಕ್ಷರನ್ನಾಗಿ ಚುನಾಯಿಸಲ್ಪಟ್ಟರು.

2 ಪ್ರೆಸ್ಸನ್ನು ನಡಿಸಲಿಕ್ಕೆ ಈ ಕೆಳಗಿನ ಪಕ್ಕಾಗಳುಳ್ಳ ಒಂದು ಸಬ್ ಕಮಿಟಿ ಏರ್ಪಾಡಾಗಬೇಕು.

ಎ. ಎಡಿಟರ್ ಮತ್ತು ಸಬ್ ಎಡಿಟರ್ ವಿನಹ ಇತರ ಸಿಬ್ಬಂದಿಯವರನ್ನು ಕೆಲಸಕ್ಕೆ ನೇಮಿಸುವುದು ಮತ್ತು ಕೆಲಸದಿಂದ ತೆಗೆಯುವುದು.

ಬಿ. ಪ್ರೆಸ್ಸಿನ ಕೆಲಸ ನಡಿಸಲಿಕ್ಕೆ ಬೇಕಾದ ಸಾಮಾನು ಗಳನ್ನು ತರಿಸಿಕೊಳ್ಳುವುದು. ಆದರೆ ತಿಂಗಳಿಗೆ 300 ರೂಪಾಯಿಗೆ ಮೀರಕೂಡದು.

ಸಿ. ಒಂದು ಕ್ರೆಡಿಟ್ ಸಿಸ್ಟಮ್ ಕೊಂಡುಕೊಳ್ಳುವದು.

ಮೇಲ್ಕಂಡ ಎ. ಕಲಮಿನ ಮೇರೆ ಮಾಡುವ ವ್ಯವಹಾರಗಳ ಮೇಲೆ ಡೈರೆಕ್ಟರುಗಳ ಬೋರ್ಡಿಗೆ ಅಪ್ಪೀಲು ಇರತಕ್ಕದ್ದು.

3. ತಾರೀಕು 29-3-1924ರ ಮೀಟಿಂಗಿನ 2ನೇ ಠರಾವು ಮತ್ತು 25-7-1923ರ ಮೀಟಿಂಗಿನ 1ನೇ ಠರಾವು ಸಹ ರದ್ದು ಮಾಡಲ್ಪಟ್ಟಿದೆ. ತಾರೀಕು 29-1-1924ರ ಮೀಟಿಂಗಿನ ಠರಾವಿನ ಮೇರೆ ನೇಮಕವಾದ ಕಮಿಟಿಯವರು ತಮ್ಮ ಕೆಲಸದ ರಿಪೋರ್ಟನ್ನು ಡೈರೆಕ್ಟರುಗಳ ಇನ್ನೊಂದು ಮೀಟಿಂಗಿಗೆ ಕೊಡಬೇಕು.

4 ರಾ ಎರಡನೇ 1ನೇ ಠರಾವಿನ ಮೇರೆ ರಾವ್ಬಹದ್ದೂರ್ ಮೆ|| ಕೆ. ಅಪ್ಪಯ್ಯನವರು, ಪ್ರೆಸಿಡೆಂಟರು, ಮೆ|| ಸಿ. ಎಸ್. ಬೋಪಯ್ಯ, ಬಿ. ಎ., ಬಿ. ಎಲ್. ರವರು, ಮತ್ತು ಮೆ|| ಮಣಿಯಪ್ಪಂಡ ಬೆಳ್ಯಪ್ಪನವರು ಸಹ ಸಬ್ ಕಮಿಟಿಯಾಗಿ ನೇಮಿಸಲ್ಪಟ್ಟರು.

5. ಎಡಿಟರು ತನ್ನ ಸಂಬಳವನ್ನು ಏರಿಸಲಿಕ್ಕೆ ಹಚ್ಚಿಸಿ ಕೊಡಬೇಕೆಂತ ಒದಗಿಸಿದ ಕಾಗದದ ಮೇರೆ ಚರ್ಚೆನಡೆದು ಜುಲೈ ತಾ|| 1ರಿಂದ 75 ರೂಪಾಯಿ ಸಂಬಳ ಕೊಡಬೇಕೆಂತ ತೀರ್ಮಾನವಾಯಿತು.

ಕೆ. ಅಪ್ಪಯ್ಯ,
ಅಧ್ಯಕ್ಷರು.

NOTICE.

THE HUNSUR WORKS MOTOR SERVICE.

We regret that owing to the floods having breached the road on Hunsur-Yedatore, we are obliged, as a temporary measure to run our Bus Service as follows:—

Leave Hunsur	....	8 a. m.
Arrive Sidapur	....	10.30 „
Leave „	....	11 „
Arrive Hunsur	....	1.30 p. m.
Leave „	....	2 „
Arrive Yedatore	....	4 „
(Via Bilikere)		
Leave „	....	4.15 „
Reach Hunsur	....	6.15 „

Hunsur, 17-7-24. Manager, The Hunsur works, Hunsur.

ಸ್ವದೇಶ.

ಕಂಡ್ರತಂಡ ಪೊನ್ನಪ್ಪನವರು. ಬಾಳೆಲೆಯ ಪೆಟಿಯಿಂದ ರಜ ತೆಗದುಕೊಂಡದ್ದರಿಂದ ಅವರ ಬದಲಿಗೆ ನೇಮಿಸುವ ಏರ್ಪಾಟಿನಲ್ಲಿ ಬೀದಿನ ಕಾಲೇಜಿನ ಬಿ. ಎ. ಪರೀಕ್ಷೆ ಪಾಸಾದ ಬಟ್ಟಿಯಂಡ ಬೆಳ್ಯಪ್ಪನವರನ್ನು ಡಿಸ್ಟ್ರಿಕ್ಟ್ ಜಡ್ಜಿ ಕೋರ್ಟಿನ ಹೆಡ್ ಕ್ಲಾರ್ಕ ಕೆಲಸಕ್ಕೆ ತಾತ್ಕಾಲಿಕವಾಗಿ ನೇಮಿಸಲ್ಪಟ್ಟಿದ್ದಾರೆ.

ಬಟ್ಟು ಇಂಡಿಯದ ರೆಡ್ ಕ್ರಾಸ್ ಸಂಘಗಳ ಪ್ರಚಾರಕ ಕಾರ್ಯದರ್ಶಿಯಾದ ಲೆಪ್ಟಿನೆಂಟ್ ಕರ್ನಲ್ ಹೆಚ್. ರಾಸ್, ಸಿ. ಐ. ಇ., ಒ. ಬಿ. ಇ., ಐ. ಎಂ. ಎಸ್ ಎಂಬವರು ಮಡಿಕೇರಿಗೆ ತಾ|| 16-7-21ರಲ್ಲಿ ಬಂದು 17ನೇ ತಾರೀಕಿನಲ್ಲಿ ರೆಡ್ ಕ್ರಾಸ್ ಸೊಸೈಟಿ ಜನರಲ್ ಮೀಟಿಂಗಿನಲ್ಲಿ ಒಂದು ಲೆಕ್ಚರ್ ಕೊಟ್ಟು ಹೊರಟು ಹೋದರು. ಅವರ ಲೆಕ್ಚರಿನ ಸಾರಾಂಶವನ್ನು ಹಿಂದಿನಿಂದ ಪ್ರಕಟಿಸಲಾಗುತ್ತೆ.

ರಾವ್ಸಾಹೇಬ ಕೋದಂಡ ಐಯ್ಯಣ್ಣನವರಿಗೆ ಇದ್ದ ರಜವು, ಬರುವ ಆಗಸ್ಟ ಒಂದನೇ ತಾರೀಕಿಗೆ ತೀರುತ್ತಿತ್ತು. ಆವರಿಗೆ ಪುನಹ ಮೂರು ತಿಂಗಳು ರಜವನ್ನು ಸರ್ಕಾರದವರೇ ಕೊಟ್ಟಿದ್ದಾರೆ.

ಕೊಡಂದೇರ ಮೆ. ಸುಬ್ಬಯ್ಯ ಮತ್ತು ಮೆ. ಬೋಪಯ್ಯ ಎಂಬವರು ಸ್ಯಾಂಡ್ಹರ್ಸ್ಟ ಕಾಲೇಜಿನಲ್ಲಿ ಶಿಕ್ಷಣಕ್ಕಾಗಿ ಶೀಘ್ರದಲ್ಲೇ ವಿಲಾಯಿತಿಗೆ ಹೊರಡುತ್ತಾರೆ. ಇವರ ಚುನಾವಣೆ ವಿಷಯದಲ್ಲಿ ರಾಜಭಕ್ತಿಯು ಕಾರಣವೆಂದು ಚುನಾವಣೆ ಯಾದ್ದೆಂತ ನಾವು ಬರೆದದ್ದು ಸರಿಯಲ್ಲ. ಪ್ರವೇಶ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ್ದರಿಂದ ತಮ್ಮ ಸ್ವಂತ ಶಕ್ತಿಯಿಂದಲೇ ಆರಿಸಲ್ಪಟ್ಟದ್ದಾಗಿದೆ. ಇವರು ಬಟ್ಟು ಇಂಡಿಯಾದವರಲ್ಲಿ ಪ್ರವೇಶ ಪರೀಕ್ಷೆಯಲ್ಲಿ ಒಂದನೇ ಎರಡನೇಯಾಗಿ ಪಾಸಾಗಿದ್ದಾರೆಂತ ತಿಳಿಸಲು ಇನ್ನೂ ಸಂತೋಷಪಡುತ್ತೇವೆ.

ವೀರರಾಜಪೇಟೆ ಹೈಸ್ಕೂಲ್ ಈ ವರೆಗೆ ಮಡಿಕೇರಿ ಹೈಸ್ಕೂಲಿನ ಶಾಖೆಯಲ್ಲಿತ್ತು. ಇನ್ನು ಮೇಲೆ ಆ ಸ್ಕೂಲು ಸಹ ಸ್ವತಂತ್ರವಾಗಿಯೇ ಇರತಕ್ಕದ್ದೆಂದು ಇನ್ಸ್ಪೆಕ್ಟರಿಂದ ಹುಕುಂ ಬಂದಿದೆಯೆಂತ ತಿಳಿಯುತ್ತೇವೆ.

ವ್ಯವಸಾಯಗಳ ಕೋಆಪರೇಟಿವ್ ಸಂಘದ ಹಣವನ್ನು ಇಟ್ಟುಕೊಳ್ಳುತ್ತಿದ್ದ ರಾವ್ ಸಾಹೇಬ್ ಕಾಮತ್ತರವರು ಪ್ರಿಂಟಿಂಗ್ ಆಫೀಸಿನವರಿಗೆ ಇನಾಮಾಗಿ 30 ರೂಪಾಯಿ ಕೊಟ್ಟಿದ್ದದ್ದು ಕಮಿಟಿಯ ಮಂಜೂರಾತಿ ಇಲ್ಲದೆ ಕೊಟ್ಟದ್ದಾದ್ದರಿಂದ ಸದರಿ ಕೊಟಿಬಗನ್ನು ಮೆ. ಕಾಮತ್ತರವರು ಸೊಸೈಟಿಗೆ ಕೊಟ್ಟುಬಿಡಬೇಕೆಂತ ಸೊಸೈಟಿಯ ಜನರಲ್ ಮೀಟಿಂಗಿನಲ್ಲಿ ಪಾಸಾದ ಮೇರೆ ಹಣವನ್ನು ಕೊಟ್ಟಿದ್ದಾರೆಂತ ತಿಳಿಯುತ್ತೇವೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗ್ ಇದೇ ತಾರೀಕು 26ನೇ ದಿನ ಬೆಳಿಗ್ಗೆ 9 ಗಂಟೆಗೆ ಮಡಿಕೇರಿ ರೆಜಿಸ್ಟ್ರಾರ್ ಆಫೀಸಿನಲ್ಲಿ ನಡಿಯಲ್ಲಿದುತ್ತೆ.

ಹೆಗ್ಗಳ ಗ್ರಾಮದ ಅಜ್ಜಮಾಡ ಮುತ್ತಣ್ಣನೆಂಬವರು ಆ ವಶ ವನೆ ಪೊನ್ನಪ್ಪನವರಿಗ ಆಕಸ್ಮಾತ್ತಾಗಿ ಘಾಯಪಟ್ಟು ಹುಲಿಯೆಂತ ಗುಂಡು ಹೊಡೆದು ಘಾಯಪಡಿಸಿದ ಮೊಕದ್ದಮೆಯು ವೀರರಾಜಪೇಟೆ ಮುನ್ಸೀಫ್ ಕೋರ್ಟಿನಲ್ಲಿ ವಿಚಾರ ನಡೆದು ಕುರಾನ್ ಆದಷ್ಟರ ಮೇಲೆ ಪೋಲೀಸಿನವರು ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರವರಿಗೆ ರಿವಿಜನ್ ಒಗ್ಗೆ ಅರ್ಜಿ ಕೊಟ್ಟದ್ದು ಅರ್ಜಿಯು ತಿರಸ್ಕರಿಸಲ್ಪಟ್ಟಿದೆ.

ಮಡಿಕೇರಿಯಲ್ಲಿ ಈ ಜುಲೈ ತಿಂಗಳಿನ 1ನೇ ತಾರೀಕಿನಿಂದ 24ನೇ ತಾರೀಕಿನ ಬೆಳಿಗ್ಗೆ 8 ಗಂಟೆ ವರೇಗೆ 74 ಇಂಚು 35 ಸೆಂಟ್ ಮಳೆಯಾಗಿದೆ. 17ನೇ ತಾರೀಕಿನಿಂದ 23ನೇ ತಾರೀಕಿನ ವರೇಗಿನ ಒಂದು ವಾರದಲ್ಲಿ 42 88 ಇಂಚು ಮಳೆಯಾಗಿದೆ. ಜನವರಿ 1ನೇ ತಾರೀಕಿನಿಂದ ಈ ವರೇಗೆ 98 38 ಇಂಚು ಮಳೆಯಾಗಿದೆ. ಕಳೆದ ವರ್ಷ ಈ ಸಮಯಕ್ಕೆ 79 73 ಇಂಚು, ಜುಲೈ 1ರಿಂದ 24ರ ವರೇಗೆ 52·74 ಇಂಚು ಸಹ ಮಳೆಯಾಗಿತ್ತು.

ಮೆ ಮಂಡೇಪಂಡ ಚೇಟ್ ಚಿಣ್ಣಪ್ಪನವರ ಮಗನೊಬ್ಬನು ಮಡಿಕೇರಿ ಹೈಸ್ಕೂಲ್ ಸೆಕೆಂಡ್ ಫಾರಂನಲ್ಲಿ ಓದುತ್ತಿದ್ದವನು ಇದೇ ತಾರೀಕು 20ರಲ್ಲು ಸ್ವರ್ಗಸ್ಥನಾದನು. ಮೊದಲಿಂದ ಚಿಣ್ಣಪ್ಪನವರಿಗೆ ಒಬ್ಬನೇ ಮಗನಾಗಿ ಈಗ ಆತನು ಸತ್ತದ್ದರಿಂದ ಅವರ ಭಾಗಕ್ಕೇನೇ ಗಂಡು ಸಂತತಿ ಇಲ್ಲದಂತಾಯಿತು.

ನಮಗೆ ಪ್ರಿಂಟಿಂಗಿಗೆ ಬೇಕಾದಷ್ಟು ಟೈಪು ವಗೈರೆ ಇತರ ಸಾಮಾನುಗಳು ಇನ್ನೂ ನಮ್ಮ ಕೈ ಸೇರದ ಕಾರಣ ಇತರ ಚಿಲ್ರೆ ಪ್ರಿಂಟಿಂಗ್ (job) ಕೆಲಸಗಳನ್ನು ಮಾಡಲಿಕ್ಕಾಗುವದಿಲ್ಲವಾದ್ದರಿಂದ ಟೈಪ್ಸ್ ವಗೈರೆ ಬಂದನಂತರ ತಿಳಿಸಲಾಗುತ್ತೆ. ಆಗ ಮಹನೀಯರೆಲ್ಲರೂ ತಮ್ಮ ಗಳ ಪ್ರಿಂಟಿಂಗ್ ಕೆಲಸವನ್ನು ಕಳುಹಿಸಿಕೊಟ್ಟಲ್ಲಿ ಬಹು ಸುಲಭ ಚಾರ್ಜಿನಲ್ಲಿಯೂ ಅತಿ ಅಂದವಾಗಿಯೂ ಮಾಡಿಕೊಡಲಾಗುವದು.

ಕೋರ್ಟು ವಿಚಾರ ವರ್ತಮಾನ.

ಶ್ರೀಮಂಗಲನಾಡು ಕಿಟ್ಟಗೇರಿ ಗ್ರಾಮದ ಕನ್ನಿತಾಂಡ ಸುಬ್ರಾಯಿ ಕೊಡವರಿಗೆ ಚಿಕ್ಕ ನಾಡ್ಲು ತಾ. ಗ್ರಾಮದ ಹೊಳ್ಳ ಪುಟ್ಟಮ್ಮ ಎಂಬವಳ ಮಗಳನ್ನು ಮದುವೆ ಮಾಡಿಕೊಡಲು ಸದ್ರಿ ಪುಟ್ಟಮ್ಮನೂ ಮತ್ತು ಇವಳ ಮೈದುನ ರಾಮಯ್ಯನ ಸಹ ಒಪ್ಪಿದರೆಂತಲೂ ಮದುವೆ ಖರ್ಚಿಗಾಗಿ ಮುನ್ನೂರು ರೂಪಾಯಿಗಳನ್ನು ಸಾಲ ಹೊಂದಿಕೊಂಡರೆಂದೂ, ತನ್ನ ಮನೆಯಲ್ಲಿ ಗಣಪತಿ ಪೂಜೆ ಮಾಡಿಕೊಂಡು ಹೆಣ್ಣಿನ ಮನೆಗೆ ಹೋದಾಗ ಹೆಣ್ಣು ಕೊಡುವುದಿಲ್ಲವಾಗಿ ಇನ್ಕಾರ ಮಾಡಿದರೆಂದೂ ಆದ್ದರಿಂದ ತಾನು ಕೊಟ್ಟ ಹಣವನ್ನು ಮತ್ತು ನಷ್ಟದ ಬಾಬ್ತು ಒಂದುನೂರು ರೂಪಾಯಿಗಳನ್ನೂ ಕೊಡಿಸಬೇಕೆಂದು ಸದ್ರಿ ಸುಬ್ರಾಯರು ವೀರರಾಜಪೇಟೆ ಕೋರ್ಟಿನಲ್ಲಿ ದಾವಾ ಮಾಡಿದರು. ಪ್ರತಿವಾದಿಯರು ಸದ್ರಿ ಸುಬ್ರಾಯರ ಸೋದರ ಮಾವ ಸತ್ತು ನಾಲ್ಕು ದಿನ ಮಾತ್ರ ಆಗಿದ್ದದ್ದರಿಂದ ಅವರಿಗೆ ಸೂತಕ ವಿದ್ದದ್ದರಿಂದ ಮದುವೆ ಮಾಡಲಿಲ್ಲವೆಂತಲೂ ಆದರೆ ಹುಡುಗಿಗೆ ಕೆಲವು ಶಾಸ್ತ್ರ ಕ್ರಮಗಳು ನಡೆದು ಹೋಗಿದ್ದದ್ದರಿಂದ ಲಗ್ನ ನಿಲ್ಲಿಸಬಾರದಾದ್ದರಿಂದ ಅದೇ ಲಗ್ನಕ್ಕೆ ಬೇರೆಯವರಿಗೆ ಮದುವೆ ಮಾಡಿಕೊಡಲಾಗಿದೆ ಎಂತಲೂ, ಹಣವನ್ನು ಹೊಂದಿಕೊಂಡಿದ್ದಿಲ್ಲವೆಂತಲೂ ವಾದಿಸಿದರು. ಮುನ್ಸೀಫ್ ಕೋರ್ಟಿನಲ್ಲಿ ವಾದಿಯು ಪ್ರತಿವಾದಿಯರಿಗೆ ಕೊಟ್ಟದ್ದು 150 ರೂಪಾಯಿ ಮಾತ್ರವೆಂತ ನಿರ್ಣೈಸಿ ಅದನ್ನೂ ಮತ್ತು ನಷ್ಟಕ್ಕೆ 50 ರೂಪಾಯಿಗಳನ್ನೂ ಅಂತು ಜುಮ್ಲ 200 ರೂಪಾಯಿಗಳಿಗೆ ಡಿಕ್ರಿ ಕೊಟ್ಟರು. ಪ್ರತಿವಾದಿಯರು ಅಪ್ಪೀಲ್ ಮಾಡಿದರು. ಸಬ್‌ಜಡ್ಜಿಯರ ಕೋರ್ಟಿನಲ್ಲಿ ವಿಚಾರ ನಡೆದು ಕೆಳಗಿನ ಕೋರ್ಟಿನ ಫೈಸಲನ್ನೇ ಖಾಯಂ ಮಾಡಿದರು. ವಾದಿಯು ತನಗೆ ನಷ್ಟ ಕೊಡಿಸಿದ್ದು ಸಾಲದೆಂತ ಅಪ್ಪೀಲ್ ಮಾಡಿದ್ದರೆ ಹೆಚ್ಚಿಗೆ ನಷ್ಟ ಕೊಡಿಸಬಹುದಿತ್ತೆಂತ ಜಡ್ಜಿಮೆಂಟಿನಲ್ಲಿ ಬರೆದಿದೆ. ಸೋದರ ಮಾವನ ಸಾವಿನಿಂದ ಮೂರು ದಿವಸ ಮಾತ್ರ ಸೂತಕವಿದೆ ಎಂತ ಪರಾಶರಸ್ಮೃತಿಯಲ್ಲಿ ಇರುವದರಿಂದ ಪ್ರತಿವಾದಿಯರು ಹುಡುಗಿಯನ್ನು ಕೊಡದೆ ಇರಲಿಕ್ಕೆ ಕಾರಣ ಸಾಲದೆಂತ ವಾದಿಗೆ ಡಿಕ್ರಿ ಕೊಟ್ಟದ್ದಾಗಿದೆ.

ದಾವಾಗಳಿಗೆ ಕೋರ್ಟು ಫೀ ಸ್ಟಾಂಪು ಯಾವ ತರಹದ್ದು ಕೊಡಬೇಕೆಂಬ ವಿಷಯದಲ್ಲಿ ಚೀಫ್ ಕಮಿಷನರ್ ಸಾಹೇಬರು ಹೊಸ ರೂಲ್ ಮಾಡಿದ್ದಾರೆ. ಜುಲೈ 1ನೇ ತಾರೀಕಿನ ಮೇಲೆ 25 ರೂಪಾಯಿ ವರೇಗಿನ ಸ್ಟಾಂಪು ಅಂಟಿಸುವ ಸ್ಟಾಂಪೇ ಆಗಬೇಕೆಂತಲೂ, 25 ರೂಪಾಯಿ ಮತ್ತು ಹೆಚ್ಚಿನದಾದರೆ ಜಾರಿಮಾಡಿದ ಆಗಬೇಕೆಂತಲೂ ರೂಲ್ ಮಾಡಿದ್ದಾಗಿದೆ. ಸಬಾರ್ಡಿನೇಟ್ ಜಡ್ಜಿಯರ ಕೋರ್ಟಿನಲ್ಲಿ ಹತ್ತು ರೂಪಾಯಿನ ಚಾರಿಪಾಡಿದ ಜೋಡಿ ಕೆಲವು ದಾವಾಗಳು ಫೈಲ್ ಆಗಿವೆ. ಇದು ಕ್ರಮವೋ, ಅಥವಾ ಅಂಟಿಸುವ ಸ್ಟಾಂಪನ್ನೇ ಕೊಡಬೇಕೋ ಎಂಬ ವಾದಾ ನಡಿಯುತ್ತಿದೆ.

ಹಿಂದೂ ದೇಶ.

ಕಾವೇರಿ ಪ್ರವಾಹದಿಂದ ತಿರುಚಿನಾಪಳ್ಳಿ ಊರೊಳಗೆ ನೀರು ತುಂಬಿಯದೆ. ಶ್ರೀರಂಗಕ್ಕೆ ಹೋಗಿ ಬರಲು ಸಾಧ್ಯವಿಲ್ಲ. ಕಾವೇರಿಯ ಶಾಖೆಯಾದ ಕೊಳ್ಳಿಡ ನದಿಗೆ ಅಡ್ಡಲಾಗಿ ಇದ್ದ ಸೇತುವೆಯು ಪೂರ್ತಿಯಾಗಿ ಕೊಚ್ಚಿ ಹೋಗಿದೆ. ಮುರಿಯುವಾಗ ಸೇತುವೆ ಮೇಲೆ ಒಂದು ಗಾಡಿ ಹೋಗುತ್ತಿತ್ತು. ಗಾಡಿಯ ಎತ್ತುಗಳು, ಗಾಡಿಯವನು ಸಹ ಈಜಿ ಕರೆ ಸೇರಿದರು. ಗಾಡಿಯ ಒಳಗಿದ್ದ ಇಬ್ಬರು ಮಾತ್ರ ನೀರು ಪಾಲಾದರು. ಬಹಳ ಮನೆಗಳು ಕುಸಿದು ಬೀಳುತ್ತಿವೆ. ತಿರುಚಿನಾಪಳ್ಳಿಗೂ ಈರೋಡಿಗೂ ಮಧ್ಯೆ ರೈಲ್ವೆ ಸೇತುವೆ ಮುರಿದು ರೈಲ್ ನಡಿಯುವದಿಲ್ಲ. ಮೇಟ್ಟುಪಾಳ್ಯಂ, ಪೊದನೂರ್, ಭವಾನಿ ಮುಂತಾದ ಎಲ್ಲಾ ನದಿಗಳಲ್ಲೂ ಪ್ರವಾಹ ಬಂದಿದೆ. ಭವಾನಿಯಲ್ಲಿ ಕಾರ್ಖಾನೆಗಳು ಸಹ ಕೊಚ್ಚಿ ಹೋದವು. ಕೋಯಮುತ್ತೂರಿಗೂ ಏರ್ನಾಕುಳಕ್ಕೂ ಮಧ್ಯೆ ಒಂದು ರೈಲ್ವೆ ಸೇತುವೆಯು ಕೊಚ್ಚಿ ಹೋಗಿದೆ. ಕೂನೂರಿಗೆ ಹೋಗುವ ದಾರಿಯಲ್ಲು ಒಂದು ಸೇತುವೆ ಬಿದ್ದಿದೆ. ನಾಗಪಟ್ಟಣದಲ್ಲಿ 1918ನೇ ಇಸವಿಯಲ್ಲಿ ಕಟ್ಟಿ ಪೂರೈಸಿದ ಒಂದು ಸೇತುವೆಯು ಒಗ್ಗಿ ಹೋಗಿದೆ. ಜೋಲಾರಪೇಟೆಯಿಂದ ಪಶ್ಚಿಮ ಸಮುದ್ರತೀರಕ್ಕೆ ಹೋಗುವ ರೈಲ್ವೆ ಲೈನಿನಲ್ಲೂ ಸೇತುವೆಗಳು ಮುರಿದು ಹೋಗಿ ರೈಲ್ ನಡಿಯುವದಿಲ್ಲ. ತಿನ್ನವಲ್ಲಿಗೂ ತಿರುವಾಂಕೂರಿಗೂ ಮಧ್ಯೆ ಇರುವ ರೈಲ್ವೆಯಲ್ಲೂ ನಷ್ಟವಾಗಿದೆ.

ದಿಲ್ಲಿಯಲ್ಲಿ ಬಕ್ರೀದ್ ಹಬ್ಬದ ದಿನ ಹಿಂದೂ ಮುಸಲ್ಮಾನರೊಳಗೆ ಪುಂಡು ನಡಿಯಿತು. ತಿಳಿದು ಬಂದ ಮಟ್ಟಿಗೆ 14 ಜನರು ಸತ್ತಿದ್ದಾರೆ. ಎರಡು ಬಗೆಯವರಲ್ಲೂ ಘಾಯಪಟ್ಟವರು 100 ಜನಕ್ಕಿಂತ ಹೆಚ್ಚಿದ್ದಾರೆ. ಪೋಲೀಸ್ ಬಂದೋಬಸ್ತಿನಿಂದಲೂ ಮಿಲಿಟರಿ ಸಹಾಯದಿಂದಲೂ ಶಾಂತತೆಯು ಸ್ಥಾಪಿಸಲ್ಪಟ್ಟಿದೆ. ಉತ್ತರ ಇಂಡಿಯಾದ ಇತರ ಎಲ್ಲಾ ಕಡೆಗಳಲ್ಲಿ ಈ ಹಬ್ಬವು ಶಾಂತತೆಯಿಂದಲೇ ನಡದಿದೆ.

ತಿರುವಾಂಕೂರಿನ ಸಹಕಾರಿ ಕಾನ್ಫರೆನ್ಸಿನಲ್ಲಿ ಮದ್ರಾಸ್ ಕೌನ್ಸಿಲ್ ಪ್ರೆಸಿಡೆಂಟರಾದ ನಾನುದಾರ ಸ್ವಾಮಿಕಣ್ಣು ಪಿಳ್ಳೆಯವರು ಅಧ್ಯಕ್ಷರಾಗಿದ್ದರು.

ಎಂಟಿಯಾಣೆ ನಿಕ್ಕಲ್ ನಾಣ್ಯವನ್ನು ಚಲಾವಣೆಯಿಂದ ಸರ್ಕಾರದವರು ನಿಲ್ಲಿಸಿದ್ದಾರೆ. 1924ನೇ ಇಸವಿ ಅಕ್ಟೋಬರ್ 1ನೇ ತಾರೀಕಿನಿಂದ ಸದ್ರಿ ನಾಣ್ಯವನ್ನು ನ್ಯಾಯವಾಗಿ ಅಂಗೀಕರಿಸಲ್ಪಡುವದಿಲ್ಲ. ಆದರೆ ಅಂದಿನಿಂದ ಒಂದು ವರ್ಷದ ವರೆಗೆ ಅಂದರೆ 1925ನೇ ಇಸವಿ ಅಕ್ಟೋಬರ್ 1ರ ವರೆಗೆ ಸರ್ಕಾರಿ ಖಜಾನೆಗಳಲ್ಲಿ ಮಾತ್ರ ತೆಗದುಕೊಳ್ಳುತ್ತಾರೆ. ಅಲ್ಲದೆ ಕಲ್ಕತ್ತಾ, ಬೊಂಬಾಯಿ, ಮದ್ರಾಸ್, ರಂಗೂನ್, ಲಾಹೋರ್, ಕಾನ್ಪುರ ಮತ್ತು ಕರಾಚಿಯ ಟಂಕಸಾಲೆಗಳಲ್ಲಿ ನಗದು ತೆಗದುಕೊಳ್ಳುತ್ತಾರೆ. ಆದ್ದರಿಂದ ಈ ನಾಣ್ಯವುಳ್ಳ

ವರೆಲ್ಲರೂ ಒತ್ತಾಗಿ ನಮ್ಮಂಬರ್ ಅಯ್ಯರೂಗಳಿಗೆ ವಿಚಾರಕ್ಕೆ ಕೊಟ್ಟು ಬೇರೆ ನ್ಯಾಯಗಳನ್ನು ಮಾಡಿಕೊಳ್ಳಬೇಕೆಂತ ಸರ್ಕಾರದವರು ಪ್ರಕಟಿಸಿದ್ದಾರೆ.

ಕರ್ನಾಟಕ ಪ್ರಾಂತದ ಬೆಳ್ಗಾಮಿನಲ್ಲಿ ಡಿಸೆಂಬರ್ ತಿಂಗಳಿನಲ್ಲಿ ನಡೆಯುವ ಕಾಂಗ್ರೆಸ್ಸಿಗೆ ಪ್ರಾಂತಿಕ ಕಾಂಗ್ರೆಸ್ ಕಮಿಟಿಗಳು ಯಾರು ಅಧ್ಯಕ್ಷರಾಗಬೇಕೆಂಬುದನ್ನು ಸೂಚಿಸುತ್ತಿವೆ. ಕೆಲವು ಕಮಿಟಿಗಳು ಮಹಾತ್ಮಗಾಂಧಿಯವರು ಅಧ್ಯಕ್ಷರಾಗಬೇಕೆಂತ ಸೂಚಿಸಿವೆ. ಆದರೆ ಮಹಾತ್ಮರು ತಾನು ಅಧ್ಯಕ್ಷಸ್ಥಾನವನ್ನು ವಹಿಸಿಕೊಳ್ಳಲಾಗದಿಲ್ಲವೆಂತ ಬರೆದು ಕಾರಣಗಳನ್ನು ಕೊಟ್ಟಿದ್ದಾರೆ. "ನನ್ನ ಬೋಧನೆಯು ಜನರಿಗೆ ಸ್ಪಷ್ಟೀಕರವಾಗಿಲ್ಲವೆಂತ ತೋರುತ್ತೆ. ಚರಕ, ಹಿಂದೂ ಮುಸಲ್ಮಾನ ಐಕ್ಯತೆ ಮತ್ತು ಅಸ್ಪೃಶ್ಯತೆ ಈ ಮೂರು ಕೆಲಸವಲ್ಲದೆ ಬೇರೆ ಏನೂ ನಾನು ಬೋಧಿಸಲು ಸಾಧ್ಯವಿಲ್ಲ. ಬ್ರಿಟಿಷ್ ಸಾಮ್ರಾಜ್ಯದ ಎಲ್ಲಾ ಸಾಮಾನುಗಳಿಗೆ ಬಹಿಷ್ಕರಿಸುವದು ಮತ್ತು ಕೌನ್ಸಿಲು ಕೋರ್ಟು ಶಾಲೆಗಳು ಇವುಗಳ ಬಹಿಷ್ಕಾರ ಮುಂತಾದ ಕೆಲಸಗಳಲ್ಲಿ ನನಗೆ ನಂಬಿಕೆ ಇಲ್ಲ. ಆದ್ದರಿಂದ ನಾನು ಅಧ್ಯಕ್ಷನಾದರೆ ಈ ಕೆಲಸಗಳಿಗೆ ನಾನು ಅಡಚಣೆಯಾಗಲಾರೆನು. ಹಿಂದೂ ಮುಸಲ್ಮಾನರೊಳಗೆ ಐಕ್ಯ ಬಿಟ್ಟುಕೊಡಿ ಎಂತಲೂ ಅಸ್ಪೃಶ್ಯತೆಯೆಂಬುದು ಪಾಪವೆಂತಲೂ ಹಿಂದೆ ಅಧ್ಯಕ್ಷಸ್ಥಾನದಿಂದ ನಾನು ಬೋಧಿಸಬೇಕಾಗುತ್ತೆ. ಕಾಂಗ್ರೆಸ್ ಪ್ರತಿನಿಧಿಗಳು ದಿವಸಕ್ಕೆ ಅರ್ಧ ಗಂಟೆಯಾದರೂ ನೂಲು ನೂಲಲು ಒಪ್ಪದಿದ್ದರೆ ನಾನು ಅಧ್ಯಕ್ಷನಾಗಿ ಫಲವೇನು? ಮುಸಲ್ಮಾನ್ ಮತದವರು ಬೇಕಾದರೆ ದಾಕ್ಟರ್ ಅನ್ಸಾರಿಯವರನ್ನು ಮಾಡಿಕೊಳ್ಳಿ. ಇಲ್ಲವೆ ಸರೋಜಿನಿದೇವಿಯವರನ್ನು ಮಾಡಿಕೊಳ್ಳಿ. ಯಾವ ಪಕ್ಷಕ್ಕೂ ಸೇರದವರಾಗಬಾರದಾದರೆ ಸರೋಜಿನಿ ದೇವಿಯವರಾಗುವದು ಉತ್ತಮ. ಮತ್ತು ಹಿಂದೀ ಮಹಿಳೆಯರಿಗೆ ನಾವು ಗೌರವಿಸಬೇಕಲ್ಲ. ಈಗ ಸಮಯವಾಗಿದೆ" ಎಂತ ಮುಂತಾಗಿ ಬರೆದಿದ್ದಾರೆ.

ಶ್ರೀಯುತ ರಾಜಗೋಪಾಲಾಚಾರ್ಯರು ಮಹಾತ್ಮರ ಮಾತಿಗೆ ಒಪ್ಪಬಾರದು, ಕಾಂಗ್ರೆಸ್ಸಿನ ಅಧಿಕಾರಿಗಳು ನೂಲಲಿಕ್ಕೆ ಒಪ್ಪದಿದ್ದರೂ ದೇಶದ ಹಳ್ಳಿಗಳ ಜನರು ಮಹಾತ್ಮರ ಬೋಧನೆಯನ್ನು ಅಂಗೀಕರಿಸುತ್ತಾರೆಂಬುದನ್ನು ಸಿದ್ಧಪಡಿಸಲಿಕ್ಕಾಗಿ ಮಹಾತ್ಮರನ್ನೇ ಅಧ್ಯಕ್ಷರನ್ನಾಗಿ ಚುನಾಯಿಸಬೇಕು ಎಂತ ತನ್ನ ಅಭಿಪ್ರಾಯವನ್ನು ಬರೆದಿದ್ದಾರೆ.

ಉತ್ತರ ಇಂಡಿಯಾದಲ್ಲಿ ಝೂಸಿ ಪಟ್ಟಣದ ಡಾಕ್ಟರ್ ಸರಯೂ ಪ್ರಸಾದ್ ಎಂಬವರಿಗೆ ರಾಧೆ ಶ್ಯಾಮ್ ಎಂಬವನು ಫೇಟಿಯಾಗಿ ಕಾಶೀಬನಾರಸಿನಲ್ಲಿ ವ್ಯಾಪಾರ ಮಾಡುವ ಒಬ್ಬನ ಮಗನೆಂತಲೂ ತನ್ನಲ್ಲಿದ್ದ ೫,೦೦೦ ರುಪಾಯಿಗಳನ್ನು ಯಾರೋ ಕದ್ದದ್ದರಿಂದ ತನ್ನ ತಂದೆಗೆ ಟೆಲಿಗ್ರಾಮ್ ಕೊಡಲು ೧,೦೦ ರುಪಾಯಿಗಳು ಬೇಕೆಂತ ಕೇಳಿಕೊಂಡದ್ದಕ್ಕೆ ಡಾಕ್ಟರ್ ಸರಯೂ ಪ್ರಸಾದರವರು ಕೊಟ್ಟರು. ಇಳಕೊಂಡದ್ದು ಮಾತ್ರವಲ್ಲ ತಾನು ಬ್ರಾಂಡಿ ವಿಸ್ಕಿ ಮುಂತಾದ್ದನ್ನು ಕುಡಿದು ಅಭ್ಯಾಸವಿದೆಯಾದ್ದರಿಂದ ಅವೆಲ್ಲಾ ಬೇಕೆಂತ ಕೇಳಿದ್ದಕ್ಕೂ ಒಬ್ಬ ಡಾಕ್ಟರು ಕೊಟ್ಟರು. ತನ್ನ ಪರಿಚಿತಿಯ ರಬ್ಬತನ್ನ ವ್ಯಾಪಾರ ಬಯಸುವಂತೆ ತನ್ನ ತಂದೆ ಬರುತ್ತಾನೆ, ಆಗಿಯೂ ಡಾಕ್ಟರ್ ಸರಯೂ ಪ್ರಸಾದರಿಗೆ ಬನಾರಸ್ ಕೊಡಲಿಕ್ಕಾಗಿ ಒಂದು ಲಕ್ಷ ರುಪಾಯಿ ಮತ್ತು ತಾನು ಬನಾರಸಿಗೆ ಹಿಂತಿರುಗುವಾಗ ಜೋಗಲಿಕ್ಕೆ ಹತ್ತುಸಾವಿರ ರುಪಾಯಿಗಳು ಬೇಕೆಂತಲೂ ಕಾಗದ ಬರೆದುಕೊಂಡ ತೋರಿಸಿದನು. ಈ ವ್ಯಾಪಾರಿಯಿಂದ ಬಂದವಲ್ಲವೆಂದು ನೆರೆದ ಕಾಗದಗಳು ಬರುತ್ತಲೇ ಇದ್ದವು. ... ತಿಂಗಳಿಂದ ಐದಾರು ತಿಂಗಳ ವರೆಗೂ ಹೀಗೆ ಸರಾಯಿ ಕುಡಿದ ಡಾಕ್ಟರಿಗೆ ನಂಬಿಸುವದು ಕಲ್ಪಿಸಿ ಕಳ್ಳ ಬೇರೆ ಕಡೆಗೆ ಹೋಗಿ ಹುಡುಕಿದರೂ ಸಿಕ್ಕಲಿಲ್ಲ ಎಲ್ಲಾ ಸಂಗತಿ ಗಮನಕ್ಕೆ ಪೊಲೀಸಿಗೆ ತಿಳಿಸಿದರು. ವಿಚಾರಿಸುವಾಗ ಈ ಬನಾರಸ್ ವ್ಯಾಪಾರಿ ಎಂದವನು ಈ ರೀತಿ ಮೋಸ ಮಾಡುವುದರಲ್ಲಿ ಪ್ರಸಿದ್ಧನೆಂತಲೂ ಈ ಮೊದಲೇ ಎರಡು ಸಾರಿ ಶಿಕ್ಷೆ ಅನುಭವಿಸಿದವನೆಂತಲೂ ತಿಳಿದು ಬಂದಿದೆ.

ಕುಂಭಕೋಣ ನಗರದಲ್ಲಿ ಪೊಲೀಸ್ ಕಾನ್ಸ್ಟೇಬಲರ ಸಂಖ್ಯೆ ಕಡಿಮೆ ಮಾಡಿದ್ದಕ್ಕಾಗಿ ೧೭ ಕಾನ್ಸ್ಟೇಬಲರು ಸ್ಟ್ರೈಕ್ ಹೂಡಿದ್ದು ನಡೆಯುತ್ತಿದೆ.

ಕಾಂಗ್ರೆಸ್ಸಿನ ಅಧ್ಯಕ್ಷರಾದ ಮೌಲಾನಾ ಮಹಮ್ಮದ್ ಅಲಿಯವರು ಸಬರಮತಿ ಆಶ್ರಮದಲ್ಲಿ ಸಮಾಲೋಚನೆ ನಡೆಸಿ ಮಹಾತ್ಮರನ್ನು ಕಳುಹಿಸಿಕೊಳ್ಳುವ ಮಹಾತ್ಮರ ಬೋಧನೆಯನ್ನು ಜನರು ಹಿಂಬಾಲಿಸದೆ ಇರುವದರಿಂದ ಮಹಾತ್ಮರು ಆಹಾರ ಸಹ ಕಡಿಮೆ ಮಾಡಿದ್ದಾರೆ. ಅವರ ಆರೋಗ್ಯವು ಸರಿಯಾಗಿಲ್ಲ. ಕೆಮ್ಮು ರೋಗವು ಸಹ ಆಗಾಗ್ಯೆ ಬರುತ್ತೆ. ಆದ್ದರಿಂದ ಮಹಾತ್ಮರ ಬೇರೆ ಕೆಲಸವನ್ನು ಎಲ್ಲರೂ ಕೈಕೊಂಡು ಸರಿಯಾಗಿ ನಡೆಯುವಂತೆ ಇರುವ ಒಂದು ಉದ್ದನಾದ ಸೂಚನೆಯನ್ನು ಕಾಂಗ್ರೆಸ್ಸಿನವರಿಗೆ ಕೊಟ್ಟಿದ್ದಾರೆ.

ಪೂನಾ ಪಟ್ಟಣದಲ್ಲಿ ಒಂದು ಮಾರ್ಕೆಟಿಗೆ ಒಬ್ಬ ಯುರೋಪಿಯನ್ ಅಧಿಕಾರಿಯ ಹೆಸರನ್ನಿಟ್ಟು ರೇ ಮಾರ್ಕೆಟ್ ಎಂತ ಇದ್ದದ್ದನ್ನು ತಿಲಕ್ ಮಾರ್ಕೆಟ್ ಎಂತ ಬದಲಾಯಿಸಬೇಕೆಂತ ಮುನಿಸಿಪಾಲಿಟಿಯಲ್ಲಿ ಠರಾವು ಮಂಜೂರಾಗಿತ್ತು. ಆದರೆ ಪೂನಾ ಈ ವಿಷಯವನ್ನು ಯೋಚಿಸುವ ವರೆಗೆ ಈ ಠರಾವನ್ನು ಜಾರಿ ಮಾಡುವದು ಬೇಡವೆಂತ ಅಧ್ಯಕ್ಷರಾದ ಎನ್. ಸಿ. ಕೇಳ್ಕರರು ಆರ್ಡರ್ ಮಾಡಿರುತ್ತಾರೆ.

ಬೊಂಬಾಯಿ ಡಿಸ್ಟ್ರಿಕ್ಟ್ ಸ್ಟಿಪೆಂಡರಿ ಕೋರ್ಟಿನಲ್ಲಿ ಮಿಸೆಸ್ ಬ್ರೌನ್ ಎಂಬವಳು ಜಿ. ಐ. ಪಿ ರೈಲ್ವೆಯಲ್ಲಿ ಡ್ರೈವರಾಗಿದ್ದ ತನ್ನ ಗಂಡನು ಕೆಲಸದಲ್ಲಿದ್ದಾಗ ಅಪಾಯದಿಂದ ಸತ್ತದ್ದರಿಂದಲೂ ಸಾಯಲಿಕ್ಕೆ ಕಂಪೆನಿಯ ಇತರ ನೌಕರರ ಅಜಾಗ್ರತೆಯೇ ಕಾರಣವಾದ್ದರಿಂದ ಕಂಪೆನಿಯಿಂದ ೪೦,೦೦೦ ರುಪಾಯಿ ಬರಬೇಕೆಂತ ದಾವೆ ಮಾಡಿದ್ದಾಳೆ. ಕಂಪೆನಿಯವರು ತಮ್ಮ ಆಳುಗಳಿಂದ ಅಪಾಯ ಸಂಭವಿಸಿದ್ದಲ್ಲ, ಡ್ರೈವರು ತನ್ನ ಅಜಾಗ್ರತೆಯಿಂದಲೇ ಸತ್ತನೆಂತ ವಾದಿಸುತ್ತಾರೆ. ಕೋರ್ಟಿಗೆ ಹೋಗುವಮೊದಲು ರಾಜಿಯಲ್ಲಿ ಇವಳಿಗೆ ಹತ್ತು ಸಾವಿರ ರುಪಾಯಿ ಕೊಡಬಹುದೆಂತ ಕಂಪೆನಿಯವರು ಹೇಳಿದ್ದಕ್ಕೆ ಇವಳು ಒಪ್ಪಲಿಲ್ಲ.

ಪಂಡಿತ ಮದನಮೋಹನ ಮಾಳವೀಯರು ಸಿಮ್ಲಾದಲ್ಲಿ ಅಸೌಖ್ಯದಲ್ಲಿದ್ದಾರೆ. ಅಕ್ಟೋಬರ್ ಪೈರ್ ವರೆಗೆ ಸಂಪೂರ್ಣ ವಿಶ್ರಾಂತಿ ತಕ್ಕೊಳ್ಳಬೇಕೆಂದೂ ಇಲ್ಲವಾದರೆ ಶ್ವಾಸಕೋಶಕ್ಕೆ ಬಾಯಿಲೆ ಆಗಬಹುದಾಗಿಯೂ ಡಾಕ್ಟರು ಹೇಳಿದ್ದಾರೆ.

ಕಣ್ಣಾನೂರು ಮುನಿಸಿಪಾಲಿಟಿ ಚೇರ್ಮನ್ನರ ಮೇಲೆ ಮೂರು ಜನ ಮುನಿಸಿಪಾಲರು ... ... ದಾವೆ ಮಾಡಿದ್ದಾರೆ. ಸ್ಪೆಷಲ್ ಮೀಟಿಂಗ್ ... ... ಕರೆಯಬೇಕೆಂತ ಕಾಗದ ಬರಕೊಂಡರೂ ಮಾಡದೆ ಇದ್ದದ್ದು ... ... ದಕ್ಕೆ ಕಾರಣ.

ಕರಾಚಿ ಪಟ್ಟಣದ ವರದೀಶ ... ... ವನ್ನು ಕಳೆದ ವರ್ಷದಲ್ಲಿ ಬಹಳವಾಗಿ ಹಬ್ಬಿದೆಯಂತೆ. ... ... ೧,೦೦,೦೦೦ ರುಪಾಯಿನ ವ್ಯಾಪಾರ ನಡೆದಿದೆ. ಹಿಂದಿನ ವರ್ಷಕ್ಕಿಂತ ಹದಿನೆಂಟು ಕೋಟಿ ರುಪಾಯಿನ ವ್ಯಾಪಾರ ಕಡಿಮೆ ... ದೆ.

ವಿ. ಜೆ. ಪಟೇಲರು ಮೀರತ್ ... ... ರಾಜದ್ರೋಹದ ಕೇಸನ್ನು ತಿದ್ದಿ ಆ ತಕ್ಸೀರಿಗೆ ಸಿಕ್ಕಿದವರ ಮೇಲೆ ಕೊಡಿಸುವ ಶಿಕ್ಷೆಯನ್ನೇ ತೆಗೆದುಬಿಡಬೇಕೆಂತಲೂ, ... ಹೊಸ್ಕೋರ್ಟ್ ಕೋರ್ಟಿನವರೇ ಮುಂದೂ ... ... ಅವೇನಿಕಾದವರಿಗೂ ಕ್ರಿಮಿನಲ್ ಕೇಸುಗಳಲ್ಲಿ ಇರುವ ... ... ಯನ್ನು ಮಾಡಬೇಕೆಂತಲೂ, ಆ ಜನರ ದೇಶಗಳಲ್ಲಿ ಹಿಂದೀಯರಿಗೆ ಆದೇ ತರದ ರಿಯಾಯಿತಿ ತೋರಿಸಿದರೆ ಮಾತ್ರ ಇಲ್ಲಿನ ರಿಯಾಯಿತಿ ಕೊಡಬಹುದೆಂತಲೂ, ... ಬದಲಾಯಿಸಲಿಕ್ಕೆ ಲೆಜಿಸ್ಲೇಟಿವ್ ಅಸೆಂಬ್ಲಿಗೆ ನೋಟೀಸು ಕೊಟ್ಟಿದ್ದಾರೆ.

ಬೊಂಬಾಯಿ ಸರ್ಕಾರದವರು ... ಜಿ. ಪ್ರಧಾನ್ ಎಂಬವರಿಗೆ ಅಮೇರಿಕಾದಲ್ಲಿ ನಕ್ಷತ್ರ ಶಾಸ್ತ್ರವನ್ನು ಕಲಿಯಲಿಕ್ಕೆ ಹೋಗಲಿಕ್ಕಾಗಿ ಒಂದು ಸ್ಕಾಲರ್‌ಶಿಪ್ ಕೊಟ್ಟಿದ್ದಾರೆ.

ಬೊಂಬಾಯಿ ಸಮುದ್ರ ಧನ್ವಂತ್ರ ಸ್ಪರ್ಧೆ ನಡೆಯುತ್ತಿದ್ದ ಮಿಸ್ ಕೋಲಾಬಾವಾಲಾ ಎಂಬ ಪಾರ್ಸಿ ಸ್ತ್ರೀಯ ಮೇಲೆ ಸಮುದ್ರದ ಅಲೆ ಒಡೆದು ಸಮುದ್ರದ ಪಾಲಾದಳು.

ಪಂಜಾಬಿನ ಪತ್ರಿಕೆಗಳಲ್ಲಿ ... ಲಾಲಾ ಚೌದ್ರಿ ಲಾಲ್ ಚಂದ್ ಎಂಬವರ ಚುನಾವಣೆಯಲ್ಲಿ ತಪ್ಪು ನಡೆದಿದೆ ಎಂತ ಕೆಲವರು ಅರ್ಜಿ ಕೊಟ್ಟರು. ವಿಚಾರ ನಡೆದು ಅವರ ಚುನಾವಣೆ ರದ್ದಾಗಿದ್ದು ಮಾತ್ರವಲ್ಲ, ಇನ್ನು ಐದು ವರ್ಷದ ವರೆಗೆ ಅವರು ಚುನಾವಣೆಗೆ ನಿಲ್ಲಬಾರದೆಂತ ತೀರ್ಪಾಗಿದೆ.

ಡೊರೆಸ್ವಾಮಿ ಅಯ್ಯಂಗಾರ್ ಎಂಬವರು ಅಸೆಂಬ್ಲಿಯಲ್ಲಿ ಬಸವ್ ಕ್ಟನಿಗೆ ಮಾಡಿದ ಶಿಕ್ಷೆಯನ್ನು ಪುನಃ ಇನ್ನೊಂದಾವರ್ತಿ ವಿಚಾರಣೆ ಮಾಡಬೇಕೆಂತ ಠರಾವನ್ನು ತರುತ್ತೇನೆಂತ ನೋಟೀಸ್ ಕೊಟ್ಟಿದ್ದಾರೆ. ... ... ಮಹಾಜನರಿಂದ ಈ ಠರಾವಿಗೆ ಆನುಕೂಲ್ಯವುಂಟಾಗಿದೆ.

ವಿದೇಶ

ರವೀಂದ್ರನಾಥ ಠಾಕೂರರು ಜಪಾನಿನಲ್ಲಿ ಕೊಟ್ಟ ಉಪನ್ಯಾಸಗಳಿಂದ ಅಲ್ಲಿನ ಜನರಲ್ಲಿ ಭಿನ್ನಾಭಿಪ್ರಾಯವುಂಟಾಗಿದೆ. ಕೆಲವರು ದೂಷಿಸುತ್ತಾರೆ. ಕೆಲವರು ಶ್ಲಾಘಿಸುತ್ತಾರೆ. ಪಶ್ಚಿಮಾತ್ಯ ನಾಗರೀಕತೆಗೆ ಮೋಹಿಸಬೇಡಿರಿ ಎಂಬುದೇ ಅವರ ಬೋಧನೆ. ಆ ನಾಗರೀಕತೆಯನ್ನು ಅನುಸರಿಸದೆ ಇದ್ದರೆ ತಮ್ಮ ಜನಾಂಗವೇ ನಾಶವಾಗಬಹುದೇನೋ, ಆದ್ದರಿಂದ ಅವರ ಬೋಧನೆಯನ್ನು ಹಿಂಬಾಲಿಸಬಾರದೆಂತ ಕೆಲವರ ಮತ.

ಫ್ರಾನ್ಸಿನ ಒಬ್ಬ ಡಾಕ್ಟರು ಮುದುಕರ ಯೌವನದೋಷ ಒಂದು ಗ್ಲ್ಯಾಂಡ್ ಎಂದರೆ ದೇಹದೊಳಗೆ ಇರುವ ಒಂದು ಚಿಕ್ಕ ಗೆಡ್ಡೆಯನ್ನು ತೆಗೆದು ಕಪಿಯ ಅದೇ ಜಾತಿಯ ಭಾಗವನ್ನು ಹಾಕಿ ಮುದುಕರನ್ನು ಯುವಕರನ್ನಾಗಿ ಮಾಡುತ್ತಿದ್ದಾರೆ.

ಬಂಗಾಳದ ಗವರ್ನರಾಗಿದ್ದ ಲಾರ್ಡ್ ರೋನಾಲ್ಡ್ ಶೇಯವರು ಹಿಂದೂಸ್ಥಾನದ ಜಾತಿಭೇದವು ಕ್ರಮೇಣ ಹೋಗುತ್ತೆ. ಆದರೆ ಅವಸರದಲ್ಲಿ ಜಾತಿಭೇದವನ್ನು ತೆಗೆದು ಹಾಕಿ ಸಮಾಜ ಸ್ಥಿತಿಯಲ್ಲಿ ಕ್ರಾಂತಿಯನ್ನುಂಟು ಮಾಡಬಾರದೆಂತ ಒಂದು ಉಪನ್ಯಾಸದಲ್ಲಿ ಹೇಳಿದರು.

ಠಾಗೋರಿನ ದೀನನಾಥ ಎಂಬವರು ಹಾಲೆಂಡಿನಲ್ಲಿ ಜರ್ಮನಿ ಚಕ್ರವರ್ತಿಯಾಗಿದ್ದ ಕೈಸರನ್ನು ನೋಡಿ ಮಾತಾಡಿದರಂತೆ. ಮಹಾತ್ಮ ಗಾಂಧಿಯವರಿಂದ ಇಂಡಿಯಾಕ್ಕೆ ತುಂಬಾ ಪ್ರಯೋಜನವಿದೆ. ಲಾಲಾ ಲಜಪತ ರಾಯರು ಎಂತಹ ಸ್ವಾರ್ಥವಿಲ್ಲ ಮನುಷ್ಯರೆಂತ ಹೇಳಿದರಂತೆ.

ಈಜಿಪ್ಟಿನಲ್ಲಿ ಜಗ್ಲುಲ್ ಪಾಷಾರವರಿಗೆ ರಿವಾಲ್ವರಿನಿಂದ ಹೊಡೆದ ಸಂದರ್ಭದಲ್ಲಿ ಶೇಕ್ ಶಾಲೀಬ್ ಎಂಬವನನ್ನೂ ಇನ್ನೂ ಕೆಲವರನ್ನು ದಸ್ತಗಿರಿ ಮಾಡಿದ್ದಾರೆ. ಜಗ್ಲುಲ್ ಪಾಷಾರವರನ್ನು ಕೊಲ್ಲಲಿಕ್ಕೆ ಜಾಗರೂಕ ಒಟ್ಟಾಗಿ ಬರ್ಲಿನ್ ಪಟ್ಟಣದಲ್ಲಿ ಪ್ರಾರಂಭವಾಗುತ್ತೆಂಬುದಕ್ಕೆ ಏನೋ ಬಲವಾದ ಆಧಾರ ಸಿಕ್ಕಿದೆಯಂತೆ.

ರಷ್ಯಾ ದೇಶದ ಬಾಕು ಎಂಬಲ್ಲಿನ ಕೆರೋಸಿನ್ ತಯಿಲ್‌ನ ಒಂದು ಬಾವಿಯಲ್ಲಿ ೬೩ ಗಂಟೆಯಲ್ಲಿ ನಾಲ್ಕು ಸಾವಿರ ಟನ್ ಎಣ್ಣೆ ಸಿಕ್ಕಿದೆ.

ಲಂಡನ್ ಪಟ್ಟಣದಲ್ಲಿ ಮಿತ್ರಮಂಡಲಿಯವರ ಸಭೆಯೊಂದು ನಡೆಯುತ್ತಲಿದೆ. ಪತ್ರಿಕೆಗಳು ಮತ್ತು ಇಂಡಿಯಾಕ್ಕಾಗಿ ಒಂದು ಸೀಟ್ ಮಾತ್ರ ಕೊಡಲ್ಪಟ್ಟಿದೆ.

ಪ್ಯಾರಿಸ್ ಪಟ್ಟಣದಲ್ಲಿ ಡ್ಯುಪಿನ್ ಮತ್ತು ಕೂಪಿಟ್ ಎಂಬವರು ಆಕಾಶ ವಿಮಾನದಲ್ಲೇ ೩೮ ಗಂಟೆ ೫೯ ನಿಮಿಷ ಇದ್ದರಂತೆ. ಈ ಮೊದಲು ೩೬ ಗಂಟೆ ೩೪ ನಿಮಿಷಕ್ಕಿಂತ ಹೆಚ್ಚು ಕಾಲ ಆಕಾಶದಲ್ಲಿ ಯಾರೂ ಇರಲಿಲ್ಲವಂತೆ.

ಪತ್ರಿಕೆಗಳಲ್ಲಿರುವ ಹಿಂದೀಯರ ಸ್ಥಿತಿಯನ್ನು ಗುತ್ತಮ ಸ್ಥಿತಿಗೆ ತರತಕ್ಕ ಬಗೆಯೆಂತ ವಿಚಾರಿಸಲು ಸರ್ಕಾರದ ಕಮಿಟಿಯ ಕೆಲಸವು ಪೂರೈಸಿದೆಯೆಂತ ಲಂಡನಿನಿಂದ ತಿಳಿದುಬಂದಿದೆ.

ಕೊಲೊನಿಯಲ್ ಸೆಕ್ರೆಟರಿಯವರ ... ... ಕುಟುಂಬದವರೊಂದಿಗೆ ಆಲೋಚಿಸಿ ಈಗ ಜರ್ಮನ್ ಮಿಶನೆಗಳ ಮೇಲೆ ಇದ್ದ ತಡೆಯನ್ನು ಸಂಪೂರ್ಣವಾಗಿ ತೂಗಿ ತೆಗೆದಿರುತ್ತಾರೆ. ಎಲ್ಲಾ ಬ್ರಿಟಿಷ್ ಕಾಲೊನಿಗಳಿಗೆ ಹೋಗಿ ತಮ್ಮ ಮಿಶನ್ ಸೇವೆಯನ್ನು ನಡೆಸುವುದೆಂದೂ, ಇನ್ನು ಮೇಲೆ ಜರ್ಮನ್ ಮಿಶನ್ ಸಂಘಗಳಿಗೂ ಇತರ ಪರದೇಶದ ಮಿಶನ್ ಸಂಘದವರಿಗೂ ಯಾವದೊಂದು ತರದ ಭೇದವು ಇರಕೂಡದೆಂದೂ ಈ ವಿಷಯವು ಇಂಡಿಯಾ ಸರ್ಕಾರಕ್ಕೆ ಅಗತ್ಯವಾಗುವದಿಲ್ಲವಾದರೂ ಕಾಲಕ್ರಮೇಣ ವೈಸರಾಯರವರು ಇದನ್ನು ಅನುಸರಿಸುವರೆಂದೂ ಇದೇ ತಿಂಗಳು ೧೯ನೇ ತಾರೀಖಿನ ಮದ್ರಾಸ್ ಮೆಯಿಲಿನಲ್ಲಿ ಬರೆದಿದೆ.

ಸೌತ್ ಆಫ್ರಿಕಾದ ಯುನೈಟೆಡ್ ಚರ್ಚ್ ಮಿಶನಿನವ ಪ ಜನ ಪಾದರಿಗಳನ್ನು ಒಪ್ಪಿಕೊಳ್ಳುವುದಕ್ಕೆ ವೈಸರಾಯರವರು, ಕೊಡಗು ಸಿಂಗಾಪುರ ಮತ್ತು ಹಾಂಕಾಂಗ್ ಮತ್ತು ಕಾಡ್ ಸ್ಟ್ರೈಟ್ಸ್ ಸೆಟಲ್‌ಮೆಂಟ್ ಮುಂತಾದವುಗಳು ಜರ್ಮನ್ ಮಿಶನೆಗಳು ಮಲಬಾರಿಗೆ ಬಂದು ಮಿಶನ್ ಸೇವೆಯನ್ನು ನಡಿಸಲು ಅಪ್ಪಣೆಕೊಟ್ಟಿರುತ್ತಾರೆಂದೂ, ಇದರ ಜರ್ಮನ್ ಮಿಶನಿಯವರು ಬರುವ ನವಂಬರ್ ತಿಂಗಳಲ್ಲಿ ಮಲಬಾರಿಗೆ ಬಂದು ಮುಟ್ಟುವರೆಂದೂ ಅದೇ ೧೧ನೇ ತಾರೀಖಿನ ಪೇಪರಿನಲ್ಲಿ ಬರೆದಿದೆ.

ಪತ್ರವ್ಯವಹಾರಗಳು.

ಚರ್ಚಿಸಲಾಗುವ ವಿಷಯ ಪತ್ರಗಳಿಗೆ ಪತ್ರಿಕೆಯವರು ಉತ್ತರವಾದಿಗಳಲ್ಲ.

ಅಯ್ಯಾ,

ಏಟಿಟರವರೇ, ತಮ್ಮ ಪತ್ರಿಕೆಯ ತಾರೀಖು ೨೩–೨೪ನೇ ಇಸವಿಯ ೩೧ನೇ ಸಂಚಿಕೆಯಲ್ಲಿ ಪ್ರಕಟಿಸಿದ್ದ ಕೊಡಗಿನ ಮರಗಳೆಂಬ ಶಿರೋ ಲೇಖನದ ೫ ಪ್ರಶ್ನೆಗಳಿಗೆ ... ... ಗೂ ಯಾವ ಉತ್ತರವೂ ಕಂಡುಬಾರದೆ ಇರುವುದರಿಂದ, ನೋಡಿದರೆ ಆ ವಿಷಯವು ... ... ಆ ... ... ತಿಳಿದು ಬರಬೇಕಾಗುತ್ತೆ.

ಇನ್ನಾದರೂ ಮಹಾಜನರಾಗಲಿ ಅಥವಾ ಸಭಾಸದರಾಗಲಿ ದೇಶದ ಮುಂದಾಳುಗಳೇ ಆಗಲಿ, ಕೌನ್ಸಿಲರ್ ಮೆಂಬರುಗಳೇ ಆಗಲಿ, ಫಾರೆಸ್ಟ್ ಅಧಿಕಾರಿಗಳೇ ಆಗಲಿ ಮೇಲಿನ ಪ್ರಶ್ನೆಗಳಿಗೆ ಉತ್ತರವನ್ನು ಕೊಟ್ಟು ದೇಶದವರ ತಿಳುವಳಿಕೆ ತರಬೇಕಾಗಿ ಕೋರುತ್ತೇನೆ.

ಓ ಸತ್ಯನ್ನ

ಪಟ್ಟೋಲೆ ಪಳಮೆ.

ಅಯ್ಯಾ, ಸಂಪಾದಕರೆ,

"ಪಟ್ಟೋಲೆ ಪಳಮೆ" ಎಂಬ ಪುಸ್ತಕದ ವಿಷಯದಲ್ಲಿ ಈಗಾಗಲೇ ಅನೇಕ ವಾರ್ತೆಗಳು ಪ್ರಕಟವಾಗಿವೆ. ಇದ ಸರಪಡದೆ ದಯಮಾಡಿ ನನ್ನ ಈ ಲೇಖನವನ್ನು ಪ್ರಕಟಿಸಬೇಕಾಗಿ ಅಪೇಕ್ಷಿಸುತ್ತೇನೆ.

ಲಿಖಿತ ರೂಪದಲ್ಲಿ ಇಲ್ಲದೆ ಇದ್ದ ನಮ್ಮ ಆಚಾರ ನೀತಿಗಳನ್ನು ಲಿಖಿತರೂಪಕ್ಕೆ ತಂದ ಮಾ|| ರಾ|| ನಡಿಕೇರಿಯಂಡ ಚಿನ್ನಪ್ಪನವರ ಸಾಹಸವು ಸ್ತುತ್ಯವಾಗಿರಲಿ. ಆದರೆ ಮಾ ಚಿನ್ನಪ್ಪನವರು ಅವರ "ಪಟ್ಟೋಲೆ ಪಳಮೆ" ಎಂಬ ಪುಸ್ತಕದಲ್ಲಿ "ಅರ್ ನಾರ್ತ್ ಸ್ಟಾರ್ ಬಾಣೆ" ಎಂಬುದನ್ನು ... ಕಡೆ ಕೊಡಗಿನ ಅಸ್ಪೃಶ್ಯರಾದ ನಾಲ್ಕು ನೀತಿಗಳನ್ನು ಹಾಗೆ

ಬೇಕು, ಹೀಗೆ [illegible] ಬೇಕು, ಎಂದು [illegible] ದರೆ ಇವರು [illegible] ಆಚರಿಸಬೇಕೆಂದೇ [illegible] ಟ್ಟಾಯಿತು. ಆದರೆ ಇವರ [illegible] ಆಚಾರ ನಡತೆಗಳನ್ನು ಇವರು [illegible] ಅರ್ಥವನ್ನು [illegible] ಸಿದಂತೆಯೇ, [illegible] ಬಾಳೆ [illegible] ತೆಗೆದುಕೊಂಡು [illegible] ತೆಗೆ ಪ್ರೊಡಿ ಬಾಳೆ ತೆಗೆದುಕೊಂಡು [illegible] ಕಾರಣಗಳನ್ನು ಅನುಸರಿಸದ [illegible] ಕಾಲಾಂತರಗಳಿಂದ ಬರುತ್ತಿದ್ದ [illegible] ಕ್ರಮೇಣ [illegible] ಬಂದೇ ಇಂತಾ ಪದ್ಧತಿಗೆ ಬಂತು. ಹಾಗೆಯೇ ವಿಧವಾ ಸ್ತ್ರೀಯು ಪುನರ್ವಿವಾಹವಾದರೆ ಮುತ್ತೈದೆಯಾಗುವಳೆಂಬುದು ಯಾವ ಆಧಾರದ ಮೇಲೆ ಬರೆದರೆಂ ಬುದನ್ನು ವಿವರಿಸಿದರೆ ಅನೇಕ ಪುನರ್ವಿವಾಹವಾದ ಸ್ತ್ರೀಯರಿಗೆ ಬಹಳ ಉಪಕಾರ ಮಾಡಿದಂತಾಗುವುದು. ಹೇಗೂ ನಮ್ಮ ಆಚಾರ ಪದ್ಧತಿಗಳನ್ನು [illegible] 'ಕೊಡಗು' ಪತ್ರಿಕೆಯ [illegible]

[illegible]

[illegible] ನಮ್ಮ ಉಡುಪಿನ [illegible] ಆಗಾಗಲೇ ನನ್ನನ್ನು ಬಹಳ ಕೇಳು [illegible] ಮಹಾಶಯರು ನಮ್ಮ ಜಾತಿ ಉಡುಪನ್ನು ನೋಡಿ [illegible] ಅಂಗ್ಲೇಯರು 'ಚಕ್ಕೆ' ಗಳಿಂದ [illegible] ವಸ್ತ್ರಗಳಿಂದ [illegible] ತೀರ್ಮಾನಿಸಿರುವರು. ಹೇಗೂ [illegible] ವರ್ಗಕ್ಕೆ ಸೇರಿಸಿದ್ದಕ್ಕೆ [illegible] ಕ್ಷತ್ರಿಯರೆಂದೂ 'ವೀರ' ರೆಂದೂ [illegible] ಹೇಗೆ [illegible] ಹಿಡಿಯಲು ಹೇಗೆ ಶ್ರಮ ಉಂಟಾಯಿತೋ [illegible] ನಮ್ಮ ಜಾತಿ ಕುಲ ಯಾವದೆಂಬದನ್ನು ಕಂಡುಹಿಡಿಯ [illegible] ತೊಂದರೆಯುಂಟಾಗಿ [illegible] ಹೇಳಿಕೆಗೆ [illegible] ಆಗುತ್ತೆ. ಅಲ್ಲದೆ ಹೆಸರನ್ನು [illegible] ನಾವು [illegible] ನ್ಯಾಯವಾಗಿದೆ. ನಪ್ಪು, ಓಕ್ಕ, ಡಾಲಿ, ಡಾಟ್ಟಿ, [illegible] ಮುಂದ್ದಾಗಿ ನಮ್ಮ [illegible] 'ಚಕ್ಕೆ' ಎಂಬ [illegible] ಆಧಾರದಿಂದ [illegible] ಚಕ್ಕೆ [illegible] ತೀರ್ಮಾನಿಸಿದರೋ [illegible] ಆಚೆಯಿಂದ [illegible] ತೀರ್ಮಾನಿಸಲು [illegible] ಅಲ್ಲದೆ [illegible] ಚಿಟ್ಟಯ್ಯ, ಚೋಮಣ್ಣ ಎಂಬೀ ಹೆಸರುಗಳನ್ನು [illegible] ಇಂಗ್ಲೀಷಿನಲ್ಲಿ ಬರೆಯುವಾಗ ಚಿಟ್ಟಪ್ಪ, ಚುಟ್ಟ [illegible] ಸೋಮಣ್ಣನೆಂದು ಬರೆಯುವದೂ ಸರಿಯುವದೂ ನ್ಯಾಯವೇ? ನ್ಯಾಯವಾದರೆ [illegible] ಹೆಸರುಗಳ [illegible] ಬರೆಯುವದಕ್ಕೇನು ಅಕ್ಷೇಪಣೆ? [illegible]

[illegible] ಈ [illegible] ನಮ್ಮ ಭೇದದಿಂದ ಅನೇಕ [illegible] ಅಸ್ಪಷ್ಟವಾಗಿ [illegible]

ಬಾಚಕ ಮಹಾಶಯರೇ [illegible] ಪೋಡನೆ ತಿಳಿಸುತ್ತೇನೆ.

ಪಿ. ಮೊಣ್ಣಪ್ಪ.

[illegible]

ಮಣ್ಣು,

ಈ ತಾರೀಕು 16ನೇ ದಿನ [illegible] 10.70 [illegible] ಬಳಿಯ ಪ್ರವಾಹದಿಂದ [illegible] ವಿಗೆ ಹೋಗುವ [illegible] ಸ್ಪಷ್ಟ ಹಗರೆ [illegible]

ಹೋಗಿದೆ ಎಂತ ಸಹ ತಿಳಿಯುತ್ತೆ. ಅದೇರತ್ರಿ 19ನೇ [illegible] ಬಗಸರು [illegible] ಒಂದು ದೊಡ್ಡ [illegible] 6 ನಡೆ [illegible] ಗಾಯವಾಗಿದೆ [illegible] 1 ಕಾಸಿನ ಕಾಲು [illegible] 1 [illegible] ನಾವೆ ಹಾಕಿದ [illegible] ಕೆಲಸ [illegible] ತಿಳಿಯುತ್ತೆ.

ವೈದ

[illegible]

ಮಹಾಶಯರೇ,

ತಾರೀಕು 21-3-24ರಲ್ಲಿ ಸಿ. ಕೆ. ಕುಟ್ಟಪ್ಪನವರು ಈ ಪತ್ರಿಕೆಯಲ್ಲಿ ಒಂದು ಚಾತ್ರಿಯನ್ನು ಪ್ರಕಟಿಸಿದ್ದು ಸರಿಯಷ್ಟೇ. ಆದರೆ ಆ ಲೇಖನವನ್ನು ವಾಚಕರೆಲ್ಲರೂ ಓದಿರಬಹುದಾಗಿ ನಂಬುತ್ತೇನೆ. ಆ ಲೇಖಕರ ಅಭಿಪ್ರಾಯಕ್ಕನುಸಾರವಾಗಿ ಕಳೆದ ಜೂನ್ 27ನೇ ತಾರೀಕಿನಲ್ಲಿ 'ದೂರದಲ್ಲಿರುವ ಕೊಡಗ' [illegible]

[illegible] ವಾಗುತ್ತಿತ್ತು.

ತಾರೀಕು 27-6-24ರಲ್ಲಿ [illegible] ಶಾಸ್ತ್ರಿಗಳ [illegible] ವಿಚಾರಕ್ಕಾಗಿ 'ದೂರದಲ್ಲಿರುವ ಕೊಡಗ' ಎಂಬುವವರು ಈ ಮೇಲೆ ಹೇಳಿದ ವಿಷಯವನ್ನು ಕೊಡಗ [illegible] ಆನಂತರ ಈ ಹೊಸ ಪದ್ಧತಿಯನ್ನು ಜಾರಿಗೆ ತರುವದು [illegible] ಅಭಿಪ್ರಾಯಪಡುತ್ತಿರುವರು. ಸರಿಯಷ್ಟೆ. [illegible] ನಮ್ಮ ನಮ್ಮ [illegible] ಕೋಣಚ ತ್ರಿಯುದಿಂದ [illegible] ಮಹತ್ವ [illegible] ಮೊದಲಾದ [illegible] ಅನೇಕ [illegible] ಅಕ್ಷರ [illegible]

[illegible]

ಅವರ ಅಭಿಪ್ರಾಯಗಳನ್ನು ತಿಳಿದು [illegible] ನಿಗೂ ನಮಗೆ ನಡೆಸಬೇಕೆಂತ [illegible] ಕಿ ಕಾಲ್ಯಾರು [illegible] ಅವನ ಆಸ್ಪಂಕತನವೂ ಇಲ್ಲ.

[illegible]

[illegible] ನಾವು ಪತ್ರಿಕೆಗಳ [illegible] ಇಂಥಾ [illegible] ಕೊಡ್ತಾ [illegible] ಸ್ಥಾನದಲ್ಲಿ [illegible]

ಜನಗಳನ್ನು ಎಂಬತೆ—[illegible] ಪ್ರೀತಿ [illegible] ಕಿ [illegible] ಬಂದ [illegible] Free reading room [illegible] ಪ್ರಯೋಜ [illegible] ನಮ್ಮ ಕಣ್ಣು [illegible] ತಿಳಿದು [illegible] ವೀರರಾಜಪೇಟೆಯು [illegible] ರೂ ಹಿಮ್ಮೆಟ್ಟುತ್ತಿರುವದನ್ನು ನಾವು ನೋಡುತ್ತಾ ಇದ್ದೇವೆ. ಈ ಸುಸಮಯದಲ್ಲಿ ಇಲ್ಲಿ ಒಂದು ವಾಚನಾಲಯಕ್ಕೆ ನೂತ್ರ ನೆಲೆಕೊಟ್ಟು ಶ್ರೀಮಂತರಿಗೆ ಮಾತ್ರವಲ್ಲದೆ ಬಡವರನ್ನು ಪ್ರಾಕಾರವಾಗಿ ಬಿಟ್ಟುಬಿಟ್ಟಿರುವದು ಎಷ್ಟು ಅನನುಕೂಲ, [illegible] ಬಂದಂತಾಗುವದೇ? ಅಥ [illegible] ನಮ್ಮ [illegible] ಒಂದು ವಾಚನಾಲಯವನ್ನು ತನ್ನ [illegible] ಶಕ್ತಿ ಇರುವ ಸಮರ್ಥರು [illegible] ವಾಚನಾಲಯವನ್ನು ಫ್ರೀಯಾಗಿ ಮಾಡಲಿ [illegible] ಅಥವ ಇದನ್ನು ಸಾಧಿಸಲು ಪ್ರಯತ್ನ ಪಡುತ್ತಿ [illegible] 'ವೀರರಾಜಪೇಟೆಯ [illegible] ಕರೆಯಲ್ಪಡುವ [illegible] ಕೊರತೆಯನ್ನು [illegible] ದೇಶಾಭಿ [illegible] ಸಾಹುಕಾರರು ಮತ್ತು ಶ್ರೀಮಂತರು ಮಡಿಕೇರಿಯಲ್ಲಿ [illegible] ವೀರರಾಜಪೇಟೆಯಲ್ಲಿಯೂ ಇಲ್ಲವೇ? ಇಂಥ [illegible] ನಮ್ಮ ದುರಾದೃಷ್ಟವನ್ನು [illegible] ಮತ್ತು ಇದನ್ನು ದೇಶದ ಅನ್ಯಾಯವೆಂದು [illegible]

ಸಿ. ಚಟ್ಟವಾಡಿ.

[illegible]

[illegible] ಗ್ರಾಮಗಳನ್ನು [illegible] ವೈದ್ಯ [illegible] ಈ ಜೆಡಸು [illegible] ಗ್ರಾಮದ [illegible] ನಮ್ಮ ಧನ ಸರ್ಕಾರಕ್ಕೆ [illegible] ಉತ್ತರವನ್ನು ನಾನು ಈ ಕೆಳಗೆ [illegible] ಮತ್ತು [illegible] ಈ ಪತ್ರಿಕೆಯ ಮೂಲಕವೂ ಮತ್ತು [illegible] ಬರೆದು ಕೇಳಲು [illegible] ನಮ್ಮ ಪೂರ್ವಿಕರ [illegible] 'ವಾಸ' ಎಂಬದಕ್ಕೆ [illegible] ಕೆಲಸವಾದ ಕಾರಣ ನಾವು [illegible] ಪ್ರಯೋಜನಕ್ಕಾಗಿಯೂ ಮತ್ತು [illegible] ಸಮಾಯವಾಗುವಂತೆ ಈ ಕೆಳಗಿನ [illegible] ಕೇಳಬೇಕಾಗಿದೆ.

[illegible] - ಗ್ರಾಮಗಳಿಗೆ [illegible]

[illegible]

ನಾವು ಮತ್ತು ಗ್ರಾಮ [illegible] ಹೋಬಳಿಗ್ರಾಮಕ್ಕೆ [illegible] ಹೋದ ಕಾರಣ ನಾವು ನಮ್ಮ [illegible] ವೀರರಾಜಪೇಟೆ [illegible] ಕೊಡ ಎಂದು [illegible] ಸೇರುವ [illegible] ನಮ್ಮ [illegible] ಗ್ರಾಮ [illegible] ಸರ್ಕಾರದ [illegible] ಹೊಂದಿಕೊಳ್ಳಬೇಕೆಂದು [illegible]

ಈ [illegible] ನಮ್ಮ ಧನ ಸರ್ಕಾರದ [illegible] ಗುಂಡಪ್ಪ [illegible] ಚಾರಿ [illegible] ನಮ್ಮ ವಾಸೇನಾ [illegible]

[illegible]

NOTICE.

The public are hereby informed that the Government Mail motor Service has reduced its rates of travelling from the 10th July 1924 as follows —

	Rs.	A.	P.
Mercara to Mysore ...	5	0	0
Do. to Sidapur ...	1	6	0
Sidapur to Mysore ...	4	0	0
Mercara to Hunsur ...	4	0	0

Khan Bahadur, P. Pallonjee,
Govt Mail motor Contractor,
Proprietor, Mysore.

ನೋಟೀಸು.

ಗವರ್ನಮೆಂಟ್ ಮೆಯಿಲ್ ಮೋಟಾರ್ ಸರ್ವೀಸಿನವರು ಜುಲೈ 10ನೇದ ತಿಂಗಳ ಚಾರ್ಜನ್ನು ಈ ಕೆಳಗೆ ಕಾಣಿಸಿರುವ ದರಕ್ಕೆ ಇಳಿಸಿರುತ್ತಾರೆ.

	ರೂ.	ಅ.	ಪೈ.
ಮಡಿಕೇರಿಯಿಂದ ಮೈಸೂರಿಗೆ	5	0	0
ಡಿಟೊ. ಸಿದ್ದಾಪುರಕ್ಕೆ ...	1	6	0
ಸಿದ್ದಾಪುರದಿಂದ ಮೈಸೂರಿಗೆ	4	0	0
ಮಡಿಕೇರಿಯಿಂದ ಹುಣಸೂರಿಗೆ ...	4	0	0

ಖಾನ್ ಬಹದ್ದೂರ್ ಪಿ. ಪಾಲ್ಲೊಂಜಿ,
ಗ. ಮೆಯಿಲ್ ಮೋಟಾರ್ ಕಂಟ್ರಾಕ್ಟರ್,
ಪ್ರೊಪ್ರೈಟರ್, ಮೈಸೂರು.

4—3

SWADESHI GOODS.

"Destruction of beggary in our Mother—land, means the patronage of Swadeshi articles by the public. So we hope all of you would patronise these Swadeshi Goods."

1. We sell cooly Rugs at Rs. 4-0-0, 4-8-0, 5-0-0 & 6-0-0 each.
2. Pure woollen striped Rugs at Rs. 5-4-0, 5-8-0, 6-0-0, 6-8-0, 6-12-0, 7-4-0, 7-12-0, 7-15-0, 8-8-0, 9-8-0, 9-12-0, 12-0-0, 12-8-0, 15-0-0, 17-8-0, 22-8-0 & 32-8-0 each.
3. Pure red woollen Blankets at Rs. 7-0-0, 8-8-0, 13-8-0 & 17-8-0 each.
4. Pure woollen shawls size about 54 by 104 inches Rs. 7-4-0 each.
   Do. 56 by 108 inches Rs. 8-8-0 & 9-8-0 each.
5. Kashmere shawls embroidered at Rs. 10, 12, 15, 16, 18, 20, 25 & 30 each.
6. Fancy counterpans (Bedsheets) 58 by 90 inches Rs 5-12-0 each.
   Do 48 by 90 inches Rs 5-0-0 & 5-4-0 each
7. 10 lever 4 key Brass locks from Rs 3-8-0 to Rs 11-0-0 each
   (Even cheaper locks are also available)
8. Coloured wooden cooking Toys set, at Rs 1-4-0, 1-8-0, & 1-12-0 each set.
9. "How to learn Hindi" through English Re 1-0-0 each.
10. Hand-woven swadeshi khadi coatings, shirtings, towels, dhoties, shawls, saries and ravukes

Every order should accompany an advance of 10 %. Packing and postage extra.

SHA DHANJEE JAVERCHAND,
Swadeshi Khadi Bhandar,
Chickpet, Bangalore City.

ಸ್ವದೇಶಿ ಸಾಮಾನುಗಳು.

ನಮ್ಮ ದೇಶದ ಬಡತನವನ್ನು ಹೋಗಲಾಡಿಸಬೇಕಾದರೆ ಜನರೆಲ್ಲರೂ ಸ್ವದೇಶಿ ಸಾಮಾನುಗಳಿಗೆ ಆಶ್ರಯ ಕೊಡಬೇಕು. ಆದುದರಿಂದ ನೀವೆಲ್ಲರೂ ಈ ಸ್ವದೇಶಿ ಸಾಮಾನುಗಳನ್ನು ಕೊಂಡುಕೊಳ್ಳುವಿರಾಗಿ ನಂಬುತ್ತೇನೆ.

1. ಕೂಲಿ ರಗ್ಗು ಒಂದಕ್ಕೆ ರೂ. 4.0.0, 4.8.0, 5.0.0 ಮತ್ತು 6.0.0.
2. ಪಟ್ಟೆಯುಳ್ಳ ಶುದ್ಧ ಉಲ್ಲನ್ ರಗ್ಗು ಒಂದಕ್ಕೆ ರೂ. 5.4.0, 5.8.0, 6.0.0, 6.8.0, 6.12.0, 7.4.0, 7.12.0, 7.15.0, 8.8.0, 9.8.0, 9.12.0, 12.0.0, 12.8.0, 15.0.0, 17.8.0, 22.8.0 ಮತ್ತು 32.8.0.
3. ಪೂರ್ತಿ ಉಲ್ಲನಿನ ಕೆಂಪು ಬ್ಲಾಂಕೆಟ್ ಒಂದಕ್ಕೆ ರೂ. 7.0.0, 8.8.0, 13.8.0 ಮತ್ತು 17.8.0.
4. ಪೂರ್ತಿ ಉಲ್ಲನ್ ಶಾಲು, (ಉದ್ದಗಲ 54 ರಿಂದ 104 ಇಂಚು) ಒಂದಕ್ಕೆ ರೂ. 7.4.0.
   ಡಿಟೊ 56 ರಿಂದ 108 ಇಂಚು ಒಂದಕ್ಕೆ ರೂ. 8.8.0 ಮತ್ತು 9.8.0.
5. ಕಾಶ್ಮೀರದ ಕಸೂತಿ ಕೆಲಸದ ಶಾಲು ಒಂದಕ್ಕೆ ರೂ. 10, 12, 15, 16, 18, 20, 25 ಮತ್ತು 30.
6. ಫೇನ್ಸಿ ಕೌಂಟರ್ ಪೇನ್ಸ್ (ಹಾಸಿಗೆ ಹಾಸುಗಳು) 58 ರಿಂದ 90 ಇಂಚು, 1ಕ್ಕೆ 5.12.0.
   ಡಿಟೊ 48 ರಿಂದ 90 ಇಂಚು, 1ಕ್ಕೆ 5.0.0, ಮತ್ತು 5.4.0.
7. 10 ಲೀವರ್ 4 ಕೀ ಹಿತ್ತಾಳೆ ಬೀಗಗಳು ಒಂದಕ್ಕೆ ರೂ. 3.8.0 ಯಿಂದ 11ರ ವರೆಗೆ.
   ಸುಲಭ ಕ್ರಯದ ಬೀಗಗಳೂ ದೊರೆಯುತ್ತವೆ.
8. ಬಣ್ಣದ ಮರದ ಅಡಿಗೆಯ ಆಟದ ಸಾಮಾನುಗಳು ಸೆಟ್ 1ಕ್ಕೆ ರೂ. 1.4.0, 1.8.0 ಮತ್ತು 1.12.0.
9. ಇಂಗ್ಲೀಷಿನ ಮೂಲಕ "ಹಿಂದೀ ಕಲಿಯುವದು ಹೇಗೆ" ಎಂಬ ಪುಸ್ತಕ 1ಕ್ಕೆ ರೂ. 1
10. ಕೈಯಿಂದ ನೇಯಲ್ಪಟ್ಟ ಸ್ವದೇಶಿ ಖಾದಿ ಕೋಟಿನ ಮತ್ತು ಶರಟಿನ ಬಟ್ಟೆಗಳು, ಟವಲುಗಳು, ಧೋತಿಗಳು, ಶಾಲುಗಳು, ಸೀರೆಗಳು ಮತ್ತು ರವಕೆಗಳೂ ದೊರೆಯುತ್ತವೆ.

ಪ್ರತಿ ಆರ್ಡರಿನೊಂದಿಗೆ ಶೇಕಡ 10ರಷ್ಟು ಅಡ್ವಾನ್ಸು ಕಳುಹಿಸಬೇಕು. ಪ್ಯಾಕಿಂಗ್ ಮತ್ತು ಟಪಾಲು ಖರ್ಚು ಅಲಾಯಿದ.

ಶಾ ಧಾಂಜಿ ಜವೇರ್‌ಚಂದ್,
ಸ್ವದೇಶಿ ಖಾದಿ ಭಂಡಾರ,
ಚಿಕ್ಕಪೇಟೆ, ಬೆಂಗಳೂರು ಸಿಟಿ.

4—1

ಒಕ್ಕಲಿಗರಿಗೆ
ಒಂದು ಸಂಧಿಯು.



ನಮ್ಮ ಕಾರ್ಖಾನೆಯಲ್ಲಿ ಎರಡು ನಮೂನೆಯ ಕಾಫಿ ಕೊಯ್ಯುವ ಯಂತ್ರಗಳು ದೊರೆಯುತ್ತವೆ. ಆ ಯಂತ್ರಗಳಲ್ಲಿ ಒಂದನ್ನು ಕಳಿಸಿಕೊಂಡು ನಿಮ್ಮ ತೋಟದಲ್ಲಿ ನಡೆಯಿಸಿ ನೋಡಿರಿ. ಮೊದಲು ಉಪಯೋಗಿಸಿದವರು ಕೊಡುತ್ತಿರುವ ದಸ್ತಗಳು ನಿರಾಯಾಸವಾಗಿ ತಿಳಿಯುತ್ತವೆ. ವಿವರಗಳಿಗೆ,

"ಕೊ" ಕ್ಯಾಟಲಾಗನ್ನು ತರಿಸಿಕೊಳ್ಳಿರಿ.
ಕಿರ್ಲೋಸ್ಕರ ಬಂಧು, ಲಿಮಿಟೆಡ್,
ಕಿರ್ಲೋಸ್ಕರವಾಡಿ, ಜಿಲ್ಲಾ ಸಾತಾರಾ.

[16—...]

ಸಂಜೀವಿನೀ ವೈದ್ಯಶಾಲಾ

ನಮ್ಮಲ್ಲಿ ನಾನಾ ವಿಧದ ಔಷಧಗಳು ದೊರೆಯುತ್ತವೆ. ... ಪ್ರತಿಯೊಂದು ರೋಗಕ್ಕೂ ತಕ್ಕ ಚಿಕಿತ್ಸೆ ... ಔಷಧಗಳನ್ನು ಕಳುಹಿಸುತ್ತೇವೆ. ಔಷಧಗಳ ಬಗ್ಗೆ ಬಹಳ ಕಡಿಮೆ ... ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ವಿವರವನ್ನು ತಿಳಿದುಕೊಳ್ಳಬಹುದು.

ಸಂಜೀವಿನೀ ಸಂಚಾಲಕ,
ಆಯುರ್ವೇದ ವೈದ್ಯರು,
ನೀಲಕಂಠೇಶ್ವರಪೇಟೆ.

32—27

ಜೀವವಿಮೆ.

ಸಾವಿರಾರು ಕುಟುಂಬಗಳಲ್ಲಿ ಸಂಪಾದನೆಯು ಯಜಮಾನನ ಮೃತ ಪಟ್ಟರೆ ಉಂಟಾಗುವುದಾದ ತೊಂದರೆಗಳನ್ನು ನಿವಾರಿಸುವದೇ ಜೀವವಿಮೆ.

ವೃದ್ಧಾಪ್ಯಕಾಲದಲ್ಲಿ ಮತ್ತು ಕುಟುಂಬದ ಜೀವನಾಧಾರಕ್ಕೆ ಸಹಾಯವನ್ನು ಒದಗಿಸುವದೇ ಜೀವವಿಮೆ.

ಅತಿ ಕಡಮೆ ದರದಲ್ಲಿ ಯಾವ ತೊಂದರೆಯೂ ಬಾರದಂತೆ ... ಹಣವನ್ನು ನಡಗಿಸುವ ಸುಸ್ಥಿರವಾದ ಮೈಸೂರಿನ ಸರಕಾರದ ಭದ್ರತೆಯುಳ್ಳ ಜೀವವಿಮೆ ಕಂಪನಿ.

ಬದುಕಿರುವಾಗಲೇ ಕುಟುಂಬದ ಜೀವನಾಧಾರಕ್ಕೆ ಸಾಲದಷ್ಟು ಹಣವನ್ನು ನಡಗಿಸಿ ಸ್ವಾತಂತ್ರ್ಯಗಳನ್ನು ಕೊಂಡುಕೊಳ್ಳಿರಿ. ದೇಶದ ಆರ್ಥಿಕ ಸಂಪತ್ತನ್ನು Economic condition ವೃದ್ಧಿಗೊಳಿಸುವ ದಾರಿಯಾದರೂ ಇದೊಂದೆ!

... ಗವರ್ನಮೆಂಟು ... 12 ಲಕ್ಷ ರೂಪಾಯಿ ... 1 ಲಕ್ಷ ರೂಪಾಯಿ ... 1 ಲಕ್ಷ ಗವರ್ನಮೆಂಟ್ ... 1 ಲಕ್ಷ ... ಗವರ್ನಮೆಂಟ್ ಸೆಕ್ಯೂರಿಟಿಗೆ ಬ್ಯಾಂಕ್ ... ಮಾಡಿರುತ್ತಿ.

ಬಿ. ಎಸ್. ಅಪ್ಪಯ್ಯ,
ದಿ ಮೈಸೂರು ಗವರ್ನಮೆಂಟ್ ಇನ್ಷೂರೆನ್ಸ್ ಆಫೀಸ್, ಮಡಿಕೇರಿ.

ಅತ್ಯದ್ಭುತ ಗುಣಕಾರಿಯಾದ
ಹೇನಿನ ಔಷಧ.

ಪ್ರತಿ ಮನೆಯಲ್ಲಿ ಇರತಕ್ಕದ್ದು.
ಗುಣವಾಗದಿದ್ದರೆ ಕ್ರಯ ವಾಪಸು ಕೊಡುತ್ತೇವೆ.

ಒಂದು ಸಾರಿ ಉಪಯೋಗಿಸಿರಿ.

ಯಾವ ಜೇನು ಅಥವಾ ... ಔಷಧವನ್ನು ... ಗುಣವಾಗುವದು. ... ಬಾಟ್ಲಿ ... ಕಳುಹಿಸುತ್ತೇವೆ ಬಾಟ್ಲಿ 1ಕ್ಕೆ 8 ಆಣೆ. 6 ಬಾಟ್ಲಿಗಳನ್ನು ತರಿಸುವವರಿಗೆ 1 ಬಾಟ್ಲಿ ಕಮಿಷನ್. 12 ಬಾಟ್ಲಿಗಳನ್ನು ... 3 ಬಾಟ್ಲಿ ಕಮಿಷನ್ ಕೊಡುತ್ತೇವೆ.

ನಮ್ಮ ವಿಳಾಸ:—
... ಸಿದ್ಧೌಷಧಿಗಳು,
... , ಜಿಲ್ಲಾ ...

[12—11]

Printed & published by Kodi Appayya, B.R., Chairman, Board of Directors, at "Kodagu" Press, Mercara, for "Kodagu" Ltd.—25-7-1924.

If not delivered please return to
"KODAGU OFFICE, MERCARA"

ಕೊಡಗು.

[illegible]

[illegible]] [illegible] [[illegible]

TO LET.

CARTRIDGES.

Fresh stocks are expected shortly of all kinds of arms and ammunition. Watch our advertisements for prices which will be shown on arrival.

[illegible]

SPENCER & Co. Ltd.

Mercara, and Pollibetta .....

[14—16]

The Saraswathi Publishing Company.

[illegible]

[illegible]

1. [illegible]	0	6 0
2. [illegible]	0	10 0
3. [illegible]	0	12 0
4. [illegible]	0	8 0
5. [illegible]	0	4 0
6 [illegible]	0	4 0
7 [illegible]	0	4 0

[illegible]

[illegible] 3—0—0 [illegible]

SARASWATHI PUBLISHING Co.,
Post Box No. 57, Bangalore City

When you think of going to Bombay
THINK OF

THE WELCOME HOTEL

Girgaum Back Road, BOMBAY.

Most airy accomodation—Most central situation—Excellent Meals
Every convenience.

[illegible]

[illegible]

[21—8]

Health is Wealth.

WANTED all to improve health strength and vitality and thus save our nation from physical degeneracy. Send half-anna stamp and get 23 specimen photographs with full particulars from

Director, Physical Culture,
P. O. BASAVANAGUDI,
Bangalore City.

For your requirements of high grade Arms, Ammunition, Wine and spirits.

APPLY TO—

Mc. Dowell & Co., Ltd.

[21—16] MERCARA.

[illegible]

[illegible] 8,00,00,000 [illegible]

[illegible]	6,00,00,000
[illegible]	1,00,00,000

[illegible]

[21—4]

[illegible]

	ರೂ.
[illegible]	50,000
[illegible]	7,740
[illegible]	61,200

[illegible] 6-4-08 [illegible]

[illegible] 1—7—1924.

"ಕೊಡಗು."

೧೯೨೪ನೇ ಇಸವಿ ಆಗಸ್ಟು ತಾ|| ೧ನೇ

ಶುಕ್ರವಾರ.

ಇಂಡಿಯಾದಲ್ಲಿ ಬ್ರಿಟಿಷರ ಆಳುವಿಕೆಯಲ್ಲಿ ಅತೃಪ್ತಿಯಾಕೆ?

ಹಿಂದುಸ್ಥಾನದ ದೊಡ್ಡ ದೊಡ್ಡ ಪ್ರಾಂತ್ಯಗಳ ಗವರ್ನರುಗಳಾಗಿದ್ದ ಲಾರ್ಡ್ ರೊನಾಲ್ಡ್‌ಶೇ ಮತ್ತು ಲಾರ್ಡ್ ವಿಲ್ಲಿಂಗ್ಡನ್ ಎಂಬವರು ಈ ವಿಷಯಕ್ಕೆ ಒಂದೊಂದು ಉತ್ತರ ಕೊಟ್ಟಿದ್ದಾರೆ. ಮೊದಲನೆಯವರು ಹೇಳುವದೇನೆಂದರೆ —" 1919ನೇ ಇಸವಿಯಲ್ಲಿ ಮಂಜೂರಾದ ಸುಧಾರಣೆಗಳನ್ನು ಬ್ರಿಟಿಷ್ ಜನಾಂಗವು ಒಳ್ಳೇ ಅಭಿಪ್ರಾಯದಿಂದ ಕೊಟ್ಟಿತು. ಸ್ವತಂತ್ರ ಅಧಿಕಾರದ ಕಡೆ ಹತ್ತುವ ಮೊದಲನೇ ಮೆಟ್ಟಲನ್ನೇ ಕೊಟ್ಟಿತು. ಆದರೂ ಜನರಿಗೆ ತೃಪ್ತಿಯಾಗಲಿಲ್ಲ. ಹಿಂದೀ ಜನಾಂಗಕ್ಕೆ ತಮ್ಮ ಜನಾಂಗದ ಹೆಮ್ಮೆ ಜಾಸ್ತಿ ಇದೆ. ತಮ್ಮ ಸಂಸ್ಕೃತಿ (culture)ಯು ಪಾಶ್ಚಿಮಾತ್ಯರ ಸಂಸ್ಕೃತಿಗಿಂತ ಬಹಳ ಮೇಲಾದದ್ದು, ತಮ್ಮ ದೇಶದ ಐಶ್ವರ್ಯವನ್ನೆಲ್ಲಾ ಬ್ರಿಟಿಷರ ವ್ಯಾಪಾರವೇ ದೋಚಿಕೊಂಡು ಹೋಯಿತು. ಇತ್ಯಾದಿ ಅಭಿಪ್ರಾಯಗಳನ್ನು ಹಿಂದೀಯರು ಇಟ್ಟುಕೊಂಡಿರುವುದರಿಂದ ಪಾಶ್ಚಿಮಾತ್ಯರು ತಯಾರಿಸಿಕೊಟ್ಟ ಸುಧಾರಣೆಯನ್ನು ಅಂಗೀಕರಿಸುವದಿಲ್ಲ. ಆದರೆ ಬ್ರಿಟಿಷರು ಹಿಂದುಸ್ಥಾನಕ್ಕೆ ಬರುವ ಮುಂಚೆ ದೇಶದ ಸ್ಥಿತಿಯು ಹೇಗಿತ್ತೆಂಬುದನ್ನು ಹಿಂದೀಯರು ಮರೆತಿದ್ದಾರೆ. ಸತೀ ಸಹಗಮನವೆಂಬ ಹೇಯವಾದ ಪದ್ಧತಿಯಿಂದ ಸಾವಿರಾರು ಸ್ತ್ರೀಯರು ಕೊಲ್ಲಲ್ಪಡುತ್ತಿದ್ದರು. ರಕ್ತಪಿಪಾಸು ಜನರು ತಮ್ಮ ಧರ್ಮದ ಹೆಸರಿನಲ್ಲಿ ಕೊಲೆ ಮುಂತಾದ ಹಿಂಸೆಗಳಿಂದ ತುಂಬಾ ಹಿಂಸೆಕೊಡುತ್ತಿದ್ದರು. ಶಿಶುಹತ್ಯೆ ಬಹಳವಾಗಿ ರೂಢಿಯಲ್ಲಿತ್ತು. ಪಿಂಡಾರಿಗಳ ಧಾಳಿಯು ದೇಶವನ್ನು ಆಗಿಂದಾಗ್ಗೆ ಬರಿದುಮಾಡುತ್ತಿತ್ತು. ಕ್ರಿಮಿನಲ್ ತಕ್ಸೀರ್ ಮಾಡಿದವರ ಅಂಗಗಳನ್ನು ಕತ್ತರಿಸಿಬಿಡುವದೇ ಮುಂತಾದ ಶಿಕ್ಷೆಗಳು ಜಾರಿಯಲ್ಲಿದ್ದವು. ಅವನ್ನೆಲ್ಲಾ ತಪ್ಪಿಸಿ ಬ್ರಿಟಿಷರು ನ್ಯಾಯವನ್ನು ಸ್ಥಾಪಿಸಲಿಲ್ಲವೇ?

ಆದರೂ ಬ್ರಿಟಿಷರು ಪಾಶ್ಚಿಮಾತ್ಯ ಪಾರ್ಲಿಮೆಂಟ್ ಕ್ರಮವನ್ನು ಹಿಂದುಸ್ಥಾನದಲ್ಲಿ ಸ್ಥಾಪಿಸಲು ಪ್ರಯತ್ನಿಸುವದು ತಪ್ಪೇ—ಪ್ರಜೆಗಳ ಪ್ರತಿನಿಧಿಗಳಿಗೆ ಜವಾಬ್ದಾರರಾಗಿ ಕೆಲಸ ಮಾಡಬಹುದಾದ ಮಂತ್ರಿಯು ಹಿಂದೀಯರಿಗೆ ಒಪ್ಪಲಿಲ್ಲವೆಂತ ಕಾಣುತ್ತೆ" ಇತ್ಯಾದಿ ಅಭಿಪ್ರಾಯಗಳನ್ನು ಕೊಡುತ್ತಾರೆ.

ವೈಫ್ ಇನ್ಶುರೆನ್ಸ್ ಆಕ್ಟಿನಮೇರೆ ಇಂಡಿಯಾ ಗವರ್ನಮೆಂಟು ಸೆಕ್ಯುರಿಟಿಗಾಗಿ ಸಲ್ಲಬೇಕಾದ 12 ಲಕ್ಷ ರುಪಾಯಿ ಸೆಕ್ಯೂರಿಟಿಗಾಗಿಯೂ ಮೈಸೂರು ಗವರ್ನಮೆಂಟ್ ಸೆಕ್ಯೂರಿಟಿಗೆ ಸಲ್ಲಬೇಕಾದ 1 ಲಕ್ಷ ರುಪಾಯಿ ಸೆಕ್ಯೂರಿಟಿಗಾಗಿಯೂ ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯಾ ಬ್ಯಾಂಕಿನ ಮದ್ರಾಸಿನ ಶಾಖೆಯಲ್ಲಿ 1 ಲಕ್ಷ ಗವರ್ನಮೆಂಟ್ ಆಫ್ ಇಂಡಿಯಾ ಸೆಕ್ಯೂರಿಟಿಯನ್ನು ಅರ್ಧ ಲಕ್ಷ ಮೈಸೂರು ಸೆಕ್ಯೂರಿಟಿಯನ್ನು ಡಿಪಾಜಿಟ್ಟಾಗಿ ಇಟ್ಟಿರುತ್ತೆ. ಬಾಕಿ 1 ಲಕ್ಷ ಇಂಡಿಯಾ ಗವರ್ನಮೆಂಟ್ ಸೆಕ್ಯೂರಿಟಿಗೆ ಬ್ಯಾಂಕ್ ಮೂಲಕ ಏರ್ಪಾಡು ಮಾಡಿರುತ್ತೆ.

ಬಿ. ಎಸ್. ಅಪ್ಪಯ್ಯ
ದಿ ಮೈಸೂರ್ ಆರ್ಡರ್ ಏಜನ್ಸಿಯ ಆಫೀಸ್, ಮಡಿಕೇರಿ.

ಕಲ್ಪಕರು ಕಾರ್ಯಾಲಯ.

ಪರೀಕ್ಷೆ ಪಾಸಾಗಲೋ, ಶರೀರ ಸುಖವಾಗಲೋ, ಕರಿ ಸಿಗಲೋ, ಸಂಬಳ ಹೆಚ್ಚಲೋ, ವಿವಾಹವಾಗಲೋ, ಶತ್ರುನಾಶವಾಗಲೋ, ಕೈಕೊಂಡ ಉದ್ಯೋಗದಲ್ಲಿ ಯಶಸ್ಸಾಗಲೋ, ವ್ಯಾಪಾರದಲ್ಲಿ ಬಹಳೇ ಲಾಭ ಸಿಗಲೋ, ಮುಕ್ತ ಆಗಲೋ, ಭೂತ ಪಿಶಾಚ ಗ್ರಹಬಾಧೆ ಆಗದಿ ಪ್ರತಿಕೂಲವಾಗಲೋ, ಇವೇ ಮತ್ತು ಬೇರೆ ಎಷ್ಟೋ ಕುಗಳು ಇಚ್ಛೆಯಂತೆಯೇ ಆಗುವ ಅಪೇಕ್ಷೆ ಇದ್ದರೆ ಫಲ ಕೊಡುವ ಲೋಕವಶ್ಯ ಕಲ್ಪಕರು ಕಾರ್ಯಾಲಯಗಳೂ ಹತ್ತಿರ ಇಟ್ಟು ಆದರೆ ಇಚ್ಛೆ ಪೂರ್ಣವಾ ಅನುಭವದ ಹೊರತು ಮಾತ್ರ ಆಗಲಾರದು. ಶಾ. ರೂ. ೧೨ ಗುಣ ತೀವ್ರವಾಗಿ, ಶಾ. ನೆ. ಖಿ. ರೂ. ೨ ದಿವಸಗಳಲ್ಲಿ, ಶಾ. ನೆ. ಖಿ. ರೂ. ೩ ಗುಣ ಕ್ಲಿ. ಪೋ. ಪಿ. ಖರ್ಚು ಬೇರೆ. ಗುಣಬಾರದಲ್ಲಿ ಖರ್ಚು ಸಹಾ ಹೋಗಿ ವಾಪಸ್ ಸಿಗುವದು.

ವಿಳಾಸ:—ಮ್ಯಾನೇಜರ, ಕಲ್ಪಕರು ಕಾರ್ಯಾಲಯ, ಕೆ.
[52-3] ಪ್ರೋ. ಸಂಕರೇಶ್ವರ ಜಿ. ಬೆಳಗಾಂವ.

Printed & published by K[.] Appayya, R.B., Chairman, Boa[rd of] Directors at "Kodagu" Press, M[ercara] for "Kodagu" Ltd.

Reg. No. M. 1550.

If not delivered please return to
"KODAGU OFFICE, MERCARA."

ಕೊಡಗು.

ಸತ್ಯೇನ ಧಾರ್ಯತೇ ವಿದ್ಯಾ ಶಕ್ತಿ ಪ್ರಯುಕ್ತತಾ | ಐಕ್ಯಮತ್ಯೇನ ಪೌರಾಣಾಂ ಸುಸ್ಥಿರಾ ರಾಜ್ಯ ಸಂಪದಾ ,

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು .

ಎಡಿಟರ್ ಪಟ್ಟಂಡ ಐ. ಚೆಳ್ಳಪ್ಪ,

ಸಂಪುಟ ೪] ಕೊಡಗು, ಸನ್ ೧೯೨೪ನೇ ಇಸವಿ ಆಗಸ್ಟು ತಾರೀಕು ೨೯ನೆಯ ಶುಕ್ರವಾರ [ಸಂಚಿಕೆ ೧೩

ಒಳ್ಳೆ ಸಮಯ !

ಕೊಂಚ ಓದ ಬರೆಯ ತಿಳಿದಿದ್ದರೆ ಸಾಕು.

ಇನ್ಸ್ಪೆಕ್ಟರುಗಳು ಮಾಸಿಯಾನ ರೂ. 40, ಪ್ಲಸ್ 20ರಿಂದ ರೂ. 75 ಪ್ಲಸ್ 25 ವರೆಗೆ ಸಂಬಳದಿಂದಲೂ ಮತ್ತು ಸಬ್ ಏಜಂಟರುಗಳು ರೂ. 30, ಮತ್ತು ಕಮಿಷನಿಂದ ಚಟುವಟಿಕೆಯಾಗಿ ಕೆಲಸ ಮಾಡತಕ್ಕವರು ಬೇಕಾಗಿದೆ. ಬಾಕಿ ಸಂಗತಿಗಳಿಗೆ ಬರೆಯಿರಿ.

ಟಿ. ಸದಸಂ ಕಂಪನಿ.

ಚೀಫ್ ಏಜಂಟರುಗಳು,

ದಿ ನ್ಯೂ ಇಂಡಿಯ ಆಗ್ರಿಕಲ್ಚರಲ್ ಟ್ರೇಡಿಂಗ್,

ಕಂಪೆನಿ ಲಿಮಿಟೆಡ್,

ಬ್ಯಾಂಕ್ಸ್ ಪವರ್ [illegible] ಮದರಾಸ್.

4—3

ಓರಿಯಂಟಲ್ ಗವರ್ನಮೆಂಟ್ ಸೆಕ್ಯುರಿಟಿ
ಜೀವವಿಮೆಯ ಕಂಪೆನಿ, ಲಿಮಿಟೆಡ್,
ಹೆಡ್ ಆಫೀಸು, ಬೊಂಬಾಯಿ.

ಹಿಂದುಸ್ಥಾನದಲ್ಲಿ ಕಳೆದ 50 ವರ್ಷಗಳಿಂದಲೂ ಜೀವ ವಿಮೆಯ ಅನುಭವವನ್ನು ಪಡೆದಿರುವ ದೇಶೀಯ ಜೀವವಿಮೆ ಸಂಘಗಳಲ್ಲಿ ಅತ್ಯಂತ ದೊಡ್ಡದೂ ಮತ್ತು ಭದ್ರವಾದದ್ದೂ ಆದ "ಓರಿಯಂಟಲ್" ಜೀವವಿಮೆ ಪತ್ರಿಕ್ಕಿಂದಲೂ ಉತ್ತಮವಾದ ಬೇರೆ ದೊರೆಯಲಾರದು.

ಈಗಾಗಲೇ ವಿಮೆ ಸಂದಾಯವಾದ ಮೊತ್ತ 8,00,00,000
ಕೈಯಲ್ಲಿ ಮುಂದೆ ಬರತಕ್ಕ ಶಗಾವಗೆ
ಶನ್ನು ಸುಭಾಸಲಿಕ್ಕಿಟ್ಟುಕೊಂಡಿರುವ

ಹಣ	....	 6,00,00,000
ವಾರ್ಷಿಕ ಉತ್ಪತ್ತಿ	....	1,00,00,000

ಇಷ್ಟು ಭದ್ರತೆಯುಳ್ಳ ಕಂಪೆನಿಯಲ್ಲಿ ಜೀವವಿಮೆಯ ಪತ್ರ ತೆಗೆದುಕೊಳ್ಳಲಿಷ್ಟಪಡುವವರು ಯಾ, ಇದರ ವಿಷಯ ಹೆಚ್ಚಿನ ಸಂಗತಿ ತಿಳಿಯಬೇಕೆಂದಿರುವವರು, ದಯವಿಟ್ಟು ಈ ಕೆಳಗಿನವರಿಗೆ ಬರದುಕೊಳ್ಳುವದು.

ಕೆ. ಪಿ. ಚಿಣ್ಣಪ್ಪನವರು,
ಓರಿಯಂಟಲ್ ಏಜನ್ಸೀ ಆಫೀಸು,
ವೀರಾಜಪೇಟೆ, ದಕ್ಷಿಣ ಕೊಡಗು.

[24—12]

LOOK AT SPENCERS' PRICES!

Arms and Ammunition.

By appointment suppliers of Arms, Ammunition & Accessories
TO
His Excellency Lord Willingdon and the Viscount Goschen.

12 bore guns of all descriptions from Rs 55 to Rs 260.

		Rs	A	P.	
12 bore cartridges, No. 1, 2, 4, 6 & 8		14	8	0	per 100
Do	S. S. G	18	12	0	,,
Do.	Ball	20	10	0	,,
Do	Lethal	36	8	0	,,
Gunpowder	F 1 F. 1 lb tin	2	14	0	
Do.	,, half lb ,,	1	14	0	
Do.	F. F. half lb ,,	1	12	0	
Do.	F. 1 lb. tin	3	2	0	
Caps		5	4	0	per thousand.
Caps	ten for	0	1	0	
Shot of all grades		0	10	0	per lb.
Ball		1	1	0	per lb.
500 450 cartridges		62	8	0	
30 30 cartridges		42	8	0	

We can supply any other kind of shot, cartridge, gun or rifle, which means

GET IT AT SPENCERS'
Mercara.

ಸ್ಪೆನ್ಸರ್ ಕಂಪನಿಯ ಕ್ರಯಗಳನ್ನು [illegible]

[illegible]

ವೆಸಿ [illegible] ಸ್ವಾಮಿ [illegible] ರು [illegible] ಗಳನ್ನು ನೊದಗಿಸ ಸಾಮಾನುಗಳನ್ನು [illegible] ರಕವಾದ [illegible]

ಹನ್ನೆರಡನೇ ಕ್ಯಾಲಿಬರ್) ಎಲ್ಲಾ [illegible] ಕೋವಿಗಳು [illegible] ರೂ 260 ರ ವರೆಗೆ.

			ರೂ.	ಆ.	ಪೈ.	
ಹನ್ನೆ ರಡು ತೂಕದ ತೋಟೆಗಳು, ನಂ 1, 2, 4, 6 ಮತ್ತು 8		....	14	8	0	ನೂರಕ್ಕೆ,
ಡಿಟೊ	ಚರೆಕಲ್ಲು	...	18	12	0	,,
ಡಿಟೊ	ಉಂಡೆ ..	....	20	10	0	,,
ಡಿಟೊ	ಲೆತಾಲ್ .	....	36	8	0	,,
ಕೋವಿ ಮದ್ದು, ಎಫ್. ಐ. ಎಫ್. 1 ಪೌಂಡಿನ ಟಿನ್ನು		....	2	14	0	
ಡಿಟೊ	ಅರ್ಧಪೌಂಡಿನ ಟಿನ್ನು	...	1	14	0	
ಕೋವಿ ಮದ್ದು, ಎಫ್. ಎಫ್. ಅರ್ಧ ಪೌಂಡಿನ ಟಿನ್ನು		....	1	12	0	
ಡಿಟೊ	ಎಫ್. 1 ಪೌಂಡು ಟಿನ್ನು	....	3	2	0	
ಕೇಪುಗಳು ಸಾವಿರಕ್ಕೆ	... .	....	5	4	0	
ಕೇಪುಗಳು ಹತ್ತಕ್ಕೆ ..	..	..	0	1	0	
ಚಿಲ್ಲುಗಳು, ಎಲ್ಲಾ ತರದವು ಪೌಂಡಿಗೆ ...	....	....	0	10	0	
ಉಂಡೆಗಳು, ಪೌಂಡಿಗೆ	....	....	1	1	0	
500/450 ತೋಟೆಗಳು	... .	....	62	8	0	
30/30 ಡಿಟೊ	....	....	42	8	0	

ಬೇರೆ ಯಾವ ತರದ ಚಿಲ್ಲು, ತೋಟೆ, ಕೋವಿ ಅಥವಾ ರೈಫಲುಗಳನ್ನಾದರೂ ನಾವು ಒದಗಿಸಿಕೊಡಬಲ್ಲೆವು,

ಅದನ್ನು ಸ್ಪೆನ್ಸರಿಂದ ಪಡೆಯಿರಿ.

"ಕೊಡಗು."

[illegible] ಪ್ರತಿ [illegible]

ಮದ್ರಾಸ್ ವಿಶ್ವ ವಿದ್ಯಾಲಯದಲ್ಲಿ ಡಿಗ್ರಿ ಪಡೆದವರಿಗೆ ಬೋಧನೆ.

ಮದ್ರಾಸ್ ವಿಶ್ವ ವಿದ್ಯಾಲಯಕ್ಕೆ (ಯೂನಿವರ್ಸಿಟಿಗೆ) ನಮ್ಮ ದೇಶವೂ ಒಳಪಟ್ಟಿರುವದರಿಂದ, ತಾ. 21-8-24ನೇ ದಿನ ಈ ವರ್ಷ ಆ ವಿಶ್ವ ವಿದ್ಯಾಲಯದಿಂದ ಪರೀಕ್ಷೆಗಳಲ್ಲಿ ಪಾಸಾಗಿ ಹೋಗುವವರಿಗೆ ಮದ್ರಾಸ್ ಗವರ್ನ್‌ಮೆಂಟಿನಲ್ಲಿ ಐಸನೂ ಸ. ಇಲಾಖೆಯಲ್ಲಿ ಸರ್ವಾಧಿಕಾರಿಯಾಗಿರುವ ಎಗ್ಸಿಕ್ಯೂಟಿವ್ ಕೌನ್ಸಿಲ್ ಮೆಂಬರಾದ ನಾಮಧಾರಿ ಸಿ. ಪಿ. ರಾಮಸ್ವಾಮಿ ಐಯ್ಯರ್, ಸಿ. ಐ. ಇ. ಯವರು ಮಾಡಿದ ಭಾಷಣದ ಸಾರಾಂಶವನ್ನು ನಮ್ಮ ವಾಚಕರಿಗೆ ತಿಳಿಸಿ ಕೊಡುವದು ಅವಶ್ಯವಿದೆ ಎಂತ ನಮಗೆ ತೋರಿದೆ.

ಯೂನಿವರ್ಸಿಟಿ ಪರೀಕ್ಷೆಗಳಾದ ಬಿ. ಎ., ಬಿ. ಎಲ್., ಬಿ. ಇ., ಎಲ್. ಟಿ., ಯಮ್. ಬಿ., ಮುಂತಾದ ಪರೀಕ್ಷೆಗಳಲ್ಲಿ ಪಾಸಾದ ಯುವಕರಿಗೆ ಅವರವರ ಸರ್ಟಿಫಿಕೇಟುಗಳನ್ನು ಕೊಡುವಾಗ ತಮ್ಮ ಮುಂದಿನ ಜೀವನದ ಕಾಲದಲ್ಲಿ ಸತ್ಯದಿಂದಲೂ ಧರ್ಮದಿಂದಲೂ ನಡಕೊಳ್ಳುತ್ತೇವೆಂತ ಪ್ರಮಾಣಮಾಡಿಸಿ ಬುದ್ಧಿವಾದದ ಉಪನ್ಯಾಸವನ್ನು ಕೊಡುವ ಒಂದು ಪದ್ಧತಿ ಇದೆ. ಈ ವರ್ಷದ ಮ. ಸಿ. ಪಿ. ರಾಮಸ್ವಾಮಿ ಐಯ್ಯರವರ ಭಾಷಣದಲ್ಲಿ ತುಂಬಾ ದೇಶ ಭಕ್ತಿಯು ಪ್ರತ್ಯಕ್ಷವಾಗಿದೆ.

ಸರ್ಕಾರಕ್ಕೆ ಸಂಬಂಧ ಪಡದ ದೇಶ ಸೇವಕರಲ್ಲಿ ದೇಶಭಕ್ತಿ ಎಷ್ಟೇ ಇದ್ದರೂ ಕೆಲವು ಕಡೆಗಳಲ್ಲಿ ಅದನ್ನು ಗಮನಕ್ಕೆ ತೆಗದುಕೊಳ್ಳುವದೇ ಇಲ್ಲ. ಸರ್ಕಾರದ ದೊಡ್ಡ ಉದ್ಯೋಗ ಇರುವವರು ದೇಶ ಭಕ್ತಿಯನ್ನು ಜನರಿಗೆ ಬೋಧಿಸಿದರೆಂದರೆ ದೇಶಭಕ್ತಿಯನ್ನು ತೋರಿಸುವ ಕೆಲಸಗಳನ್ನು ಮಾಡುವದರಲ್ಲಿ ರಾಜದ್ರೋಹ ಇಲ್ಲವೆಂಬದು ಪ್ರತ್ಯಕ್ಷವಾಗುತ್ತೆ. ಅನೇಕರು ದೇಶಭಕ್ತಿಗೂ ರಾಜದ್ರೋಹಕ್ಕೂ ಭೇಧವಿಲ್ಲವೆಂದು ಯೋಚಿಸುತ್ತಾರೆ.

ಮದ್ರಾಸ್ ವಿಶ್ವ ವಿದ್ಯಾಲಯದ ಪಾಠ ಕ್ರಮದಲ್ಲಿ ಕಲಾಕೌಶಲ್ಯಗಳಿಗೆ ತಕ್ಕಷ್ಟು ಪ್ರಾಮುಖ್ಯತೆ ಕೊಟ್ಟಿರುವದಿಲ್ಲವೆಂದೂ ಈ ವಿಶ್ವ ವಿದ್ಯಾಲಯದಲ್ಲಿ ಉಚ್ಚ ವಿದ್ಯೆ ಹೊಂದಿದವರು ಸ್ವಂತ ಬುದ್ಧಿ ಉಪಯೋಗಿಸಿ ಶಕ್ತಿ ತೋರಿಸಿದ ಉದಾಹರಣೆಗಳು ಬಹಳ ಕಡಿಮೆ ಎಂದೂ, ಕಲ್ಕತ್ತಾ ವಿಶ್ವ ವಿದ್ಯಾಲಯದಲ್ಲಿ ವಿದ್ಯಾರ್ಥಿಗಳ ಸ್ವಶಕ್ತಿಯನ್ನು ನಿದರ್ಶಿಸಲಿಕ್ಕೆ ಬೇರೆ ಬೇರೆ ವಿದ್ಯಾ ಶಾಖೆಗಳನ್ನು [illegible] ಅನೇಕ ದೊಡ್ಡ ಮನುಷ್ಯರು ಅತ್ಯಾಂತರ [illegible] ಈ ದ[illegible] ದೇಶದಲ್ಲಿ ಯಾರೂ ಕೊಡದೆ [illegible] ವ್ಯವಸ್ಥೆ ಮಾಡಿದ್ದಾರೆಂದೂ ಹೇಳಿ ಪ್ರೌಢ ವಿದ್ಯೆಯ ಪ್ರಯೋಜನಗಳನ್ನು [illegible] ವರ್ಣಿಸಿದ್ದಾರೆ.

[illegible] ಇಂಗ್ಲೆಂಡು [illegible] ಸ್ತ್ರೀಯರ [illegible] ಶೇಕಡ [illegible] ಗಳಿಗೆ [illegible] ಸ್ತ್ರೀಯರೂ ಪ್ರಾಚೀನ ಕಾಲದಲ್ಲಿ ಈ ದೇಶದಲ್ಲಿ ಇದ್ದ ದರಿಂದ ಸ್ತ್ರೀಯರ ಪ್ರೌಢ ವಿದ್ಯೆಯು ಈ ದೇಶಕ್ಕೆ ಹೊಸದಲ್ಲ. ಈ ಮದ್ರಾಸ್ ಯೂನಿವರ್ಸಿಟಿಯು ಈಗ ಬರೇ ಪರೀಕ್ಷೆ ಮಾಡುವ ಸಂಸ್ಥೆಯಾಗಿದೆ. ಬೋಧನೆಯನ್ನು ಕೊಡುವ ಸಂಸ್ಥೆಗಳನ್ನು ಸ್ಥಾಪಿಸುವ ಪ್ರಯತ್ನವು ನಡಯುತ್ತಲಿದೆ. ಪೂರ್ವದಲ್ಲಿ ಹಿಂದುಸ್ಥಾನದಲ್ಲಿ ಜಗತ್ಪ್ರಖ್ಯಾತಿಯಾದ ಅನೇಕ ಪೀಠಗಳಿದ್ದವು. ಪ್ರತಿ ಒಬ್ಬ ಗುರುವಿನ ಮನೆಯೂ ಒಂದು ವಿದ್ಯಾಲಯವೇ ಆಗಿತ್ತು. ಬಹಳ ಕಾಲದಲ್ಲಿಯೇ ಇದ್ದುಕೊಂಡು ಸರ್ವಜ್ಞತ್ವವನ್ನು ಪಡೆಯುತ್ತಿದ್ದರು" ಎಂತ ಹೇಳಿದರು. ಈಗಿನ ವಿದ್ಯಾಭ್ಯಾಸವನ್ನು ಪಡೆದನಂತರ ಮತ್ತು ಪಡೆಯುವಾಗಲೂ ಸಹ ಕೆಲವು ಹೊಸ ಧೋರಣೆಗಳನ್ನು ಅವಲಂಬಿಸಬೇಕಾಗಿದೆ. ಪ್ರೌಢ ವಿದ್ಯೆಯನ್ನು ಪಡೆಯಬೇಕಾದರೆ ತುಂಬಾ ಹಣಬೇಕು. ಪ್ರೌಢ ವಿದ್ಯೆಯು ಬಡವರಿಗೆ ದೊರೆಯುವಂತಿಲ್ಲ. ಬೊಂಬಾಯಿ ಗವರ್ನರು ಮೊನ್ನೆ ತಾನೇ ಹೇಳಿದ ಮೇರೆ ಬಡತನದ ಕಾರಣದಿಂದ ಮಾತ್ರ ಉಚ್ಚ ವಿದ್ಯೆ ದೊರಕದೆ ಇರುವವರು ಯಾರೂ ಇರಬಾರದು ಎಂಬ ಸ್ಥಿತಿಯು ಹಿಂದುಸ್ಥಾನದಲ್ಲಿ ಎಂದು ಪ್ರಾಪ್ತವಾದೀತೋ ನಮಗೆ ಗೊತ್ತಿಲ್ಲ. ಸ್ತ್ರೀಯರ ಪ್ರೌಢ ವಿದ್ಯಾಭ್ಯಾಸದಲ್ಲಿ ನಮ್ಮ ದೇಶವು ಹಿಂದೆ ಬಿದ್ದಿಲ್ಲ. ಈ ವರ್ಷ ಈ ಸಮ್ಮೇಲನದ ವಿಷಯವಾದ ಉಪನ್ಯಾಸವನ್ನು ಕೇಳಲಿಕ್ಕೆ ನಮ್ಮ ದೇಶದ ಮಹಿಳೆಯೊಬ್ಬಳು ಅರ್ಹಳಾದದ್ದು ನಮಗೆ ಸಂತೋಷವು. ಈ ರೀತಿ ವರ್ಷ [illegible] ಗಾಗಿ ಹೊಂದುವ ಬಾಲಕಿಯರ ಸಂಖ್ಯೆಯು ಹೆ[illegible] ಬೇಕಂತ ನಮ್ಮ ಅಪೇಕ್ಷೆಯಾಗಿದೆ. ಇಷ್ಟು ಮಾತ್ರವ[illegible] ಯುರೋಪದವರು ತಮ್ಮ ದೇಶದ ಉಳಿದ ಸ್ತ್ರೀ[illegible] ಮಸ್ತು ಜ್ಞಾನವನ್ನು ಬದಗಿಸಿ ಕೊಡಲು ಇ[illegible]ವೆಂತ ನಮ್ಮ ಅಭಿಲಾಷೆಯಾಗಿದೆ. [illegible] ರ ಸಂಖ್ಯೆ ಹೆಚ್ಚಲು ವಿದ್ಯೆಗೆ [illegible] ಆಶ್ಚರ್ಯವಾಗಿದೆ. ಬಾಲಕಿಗ ವಿದ್ಯೆ ಕ[illegible]ರೆ ಅವರು ಏನಾದರೂ ಸಂಪಾದನೆ ಮಾಡ್ಯಾರು ಎಂಬ ಆಶೆಯಾದರೂ ತಂದೆತಾಯಿಗಳಿಗೆ ಇರುತ್ತೆ. ಬಾಲಕಿಯರು ಸಂಪಾದನೆ ಮಾಡಿ ತಂದೆತಾಯಿಗಳ ಜೀವನಕ್ಕೆ ಸಹಾಯ ಮಾಡ್ಯಾರೆಂಬ ಆಸೆಯು ಇಲ್ಲದ್ದರಿಂದ ಸ್ತ್ರೀಯರ ಪ್ರೌಢ ವಿದ್ಯೆಗೆ ತಂದೆತಾಯಿಗಳು ಮನಸ್ಸು ಕೊಡದೆ ಇರುವದು ಒಂದು ಕಾರಣವಾಗಿದೆ. ಪೂರ್ವಕಾಲದಲ್ಲಿ ಇದ್ದಂತೆ ವಿದ್ಯೆಗೆ ಬರೇ ಇಲ್ಲವೆಂತಾದರೆ ಈಗಿನ ಕಾಲದಲ್ಲಿ ಸ್ತ್ರೀ ವಿದ್ಯಾಭ್ಯಾಸಕ್ಕೆ ಎಷ್ಟೋ ಹೆಚ್ಚು ಮನಸ್ಸು ಕೊಡುತ್ತಿದ್ದರು.

"ಬಿ. ಎ. ಮತ್ತು ಬಿ. ಎಲ್. ಆದ ಜನರು ಹೆಚ್ಚುವದರಿಂದ ದೇಶಕ್ಕೆ ಒಳ್ಳೇದಲ್ಲವೆಂತ ಹೇಳುವವರು ಇದ್ದಾರೆ. ಆದರೆ ನನ್ನ ಅಭಿಪ್ರಾಯದಲ್ಲಿ ಇದರಿಂದ ಏನೂ ಕೆಡಕಿಲ್ಲ. ವಿದ್ಯಾವಂತರ ಸಂಖ್ಯೆಯು ಇನ್ನೂ ಸಾಕಷ್ಟು ಆಗಿರುವದಿಲ್ಲ. ದೇಶದಲ್ಲೆಲ್ಲಾ ಅಲ್ಪ ಸ್ವಲ್ಪ ಸಂಖ್ಯೆ ನಿಪುಣರು ಇದ್ದರೆ ಸಾಲದು. ಸರ್ವರೂ ವಿದ್ಯಾವಂತರಾಗಬೇಕಾದದ್ದೇ ನಮ್ಮ ಧ್ಯೇಯವಾಗಿರಬೇಕು. ಈಗ ನಡಿಯುವ ರಾಜಕೀಯ, ಸಾಮಾಜಿಕ ಮಾರ್ಪಾಡುಗಳ ಸಂಬಂಧ ಹೋರಾಟದಲ್ಲಿ ವಿದ್ಯಾವಂತರ ಸಂಖ್ಯೆಯು ಹೆಚ್ಚಾಯಿತೆಂದು ಎಂದೂ ಅರಬಾರದು. ಮನಸ್ಸು ವಿಶಾಲವಾಗಿ ಮಹತ್ವವಾದ ಉದ್ದೇಶಗಳಿಗೆ ಒಗ್ಗಿಸಿದ ಕೆಲಸ ಮಾಡಲು, ಮುಂದಾಳಾಗಲು ಮತ್ತು ಹಿಂಬಾಲಿಸಲು ಸಹ ಯೋಗ್ಯತೆ ಬರಬೇಕಾದರೆ ಪ್ರೌಢ ವಿದ್ಯೆ ಬೇಕು ಎಂತ ಹೇಳಿದ್ದಾರೆ. ಈ ಅಭಿಪ್ರಾಯದಿಂದ ಗ್ರಾಜ್ಯುಯೇಟುಗಳಲ್ಲದವರು ಸಮುದಾಯದ ಕೆಲಸಕ್ಕೆ ಯೋಗ್ಯರಲ್ಲವೆಂತಾಗುವದಿಲ್ಲ. ಉಪನ್ಯಾಸಕರ ಅಭಿಪ್ರಾಯದಲ್ಲಿ ಪ್ರೌಢ ವಿದ್ಯೆ ಇದ್ದರೆ ಮನುಷ್ಯನು ಸಾರ್ವಜನಿಕ ಕೆಲಸಗಳಿಗೆ ಅರ್ಹನಾಗುತ್ತಾನೆ. ಈಗಿನ ಹಿಂದೂಸ್ಥಾನದ ವಿಶ್ವ ವಿದ್ಯಾಲಯಗಳಲ್ಲಿ ದೊರೆಯುವ ಪ್ರೌಢ ವಿದ್ಯೆಯಿಂದ ಸಮುದಾಯದ ಕೆಲಸಕ್ಕೆ ಮನಸ್ಸು ಹುಟ್ಟುವದು ಅಪರೂಪ. ವಿದ್ಯಾಪ್ರಾರಂಭದಿಂದಲೇ ಹಿಂದುಸ್ಥಾನದ ಪೂರ್ವೇತಿಹಾಸ ಸಂಸ್ಕೃತಿ ಮುಂತಾದ್ದರಲ್ಲಿ ಗೌರವ ಹುಟ್ಟುವ ವಿಷಯಗಳನ್ನು ವಿದ್ಯಾರ್ಥಿಗಳಿಗೆ ಬೋಧಿಸುವದಿಲ್ಲ. ಹಿಂದುಸ್ಥಾನದಲ್ಲಿ ಪೂರ್ವದಲ್ಲಿ ಅನ್ಯೋನ್ಯ ಜಗಳವಾಡುತ್ತಿದ್ದರೇ ಹೊರತು ಶಾಂತತೆ ಇರಲೇ ಇಲ್ಲ, ಚೆನ್ನಾಗಿ ರಾಜ್ಯವಾಳುತ್ತಿದ್ದ ರಾಜರುಗಳೇ ಇರಲಿಲ್ಲ ಎಂಬ ಅಭಿಪ್ರಾಯಗಳು ಹುಟ್ಟುವಂಥ ವಿಷಯಗಳು ವಿದ್ಯಾರ್ಥಿಗಳ ಮನಸ್ಸಿಗೆ ಹೋಗುವಂತೆ ಮಾಡುವದೇ ಈಗಿನ ವಿದ್ಯಾ ಕ್ರಮವಾಗಿದೆ. ದೇಶಭಕ್ತಿಯು ಪ್ರತಿಯೊಬ್ಬ ಯುವಕನಲ್ಲಿಯೂ ಹೊರಡುವಂತೆ ಮಾಡುವ ವಿಷಯಗಳನ್ನು ಕಲಿಸಿಕೊಡುವಂಥ ಪ್ರೌಢ ವಿದ್ಯೆ ದೊರೆತರೆ ಉಪನ್ಯಾಸಕರ ಅಭಿಪ್ರಾಯವು ಸಫಲವಾದೀತು. ಜೀವಿತ ಹೋರಾಟದಲ್ಲಿ ಮೇಲ್ಮೆಯನ್ನು ಪಡೆಯುವದೇ ಈಗಿನ ವಿದ್ಯಾರ್ಜನೆಯ ಧ್ಯೇಯವಾಗಿರುವದರಿಂದ ವಿದ್ಯಾವಂತರಿಗೆ ಸ್ವಾರ್ಥತ್ಯಾಗಬುದ್ಧಿಯು ಹುಟ್ಟುವದು ಅಪರೂಪವಾಗಿದೆ. ವಿದ್ಯಾವಂತರು ಒಕ್ಕ[illegible] ಸ್ವಾರ್ಥ [illegible] ಬೆಳಸುವ ವಿಜ್ಞಾನ ಶಾಸ್ತ್ರವೂ ಸಹ [illegible] ಮನಸ್ಸನ್ನು ಹುಟ್ಟಿಸುವದಕ್ಕಾದಾಗ್ಯೂ [illegible] [illegible] ರಾಷ್ಟ್ರಸಾಧ [illegible] [illegible] [illegible] [illegible] ಉಪಾಧ್ಯಾಯರು [illegible] ಸ್ವಾತಂತ್ರ್ಯ [illegible]

[illegible] ರಾಜ್ಯದಲ್ಲಿಯೂ ಈಗಿನ ಯುರೋಪಿನ ರಾಜ್ಯಗಳಲ್ಲಿಯೂ ಇರುವ ಲಾಯರುಗಳ ಸಂಖ್ಯೆಯನ್ನು ಹೋಲಿಸಿದರೆ ಹಿಂದುಸ್ಥಾನದಲ್ಲಿ ಲಾಯರುಗಳು ಹೆಚ್ಚಾಗಿಲ್ಲ. ಈಗಿನ ವಿದ್ಯಾಭ್ಯಾಸ ಕ್ರಮದಲ್ಲಿ ಲಾಯರು ಕಸುಬು ಬರೇ ಯುವಕರಿಗೆ ದೊರಕುವದು ಎಂಬ ವಿಷಯದಲ್ಲಿ ಮಾತ್ರ ವ್ಯಸನಪಡಬೇಕಾದರೂ ಲಾಯರು ಕೆಲಸದಲ್ಲಿ ಜನರ ಗುಣಗಳನ್ನು ಕಲಿತುಕೊಂಡು ಸಮುದಾಯದ ಕೆಲಸ ಮಾಡಲಿಕ್ಕೆ ಅನುಕೂಲ ಈ ಕಸಬಿನಲ್ಲಿ ಇದ್ದಂತೆ ಬೇರೆ ಯಾವದರಲ್ಲೂ ಇಲ್ಲವೆಂತ ಉಪನ್ಯಾಸಕರು ತಮ್ಮ ಕಸಬನ್ನು ಶ್ಲಾಘಿಸಿಕೊಂಡರು. ಡಾಕ್ಟರ್ ಪರೀಕ್ಷೆ ಪಾಸಾದವರು ಖಾಯಿಲಸ್ಥರಿಗೆ ಚಿಕಿತ್ಸೆ ಮಾಡುವದು ಮಾತ್ರವಲ್ಲದೆ ಜನರಿಗೆ ಆರೋಗ್ಯಶಾಸ್ತ್ರವನ್ನು ಬೋಧಿಸಬೇಕೆಂತಲೂ, ಕೃಷಿ ಮತ್ತು ವ್ಯಾಪಾರ ಪರೀಕ್ಷೆಗಳಲ್ಲಿ ಪಾಸಾದವರು ದೇಶದ ಸಂಪತ್ತನ್ನು ಬೆಳೆಸಲು ಸಹಾಯ ಮಾಡಬಹುದೆಂತಲೂ, ಇಂಜನೀಯರಿಂಗ್ ಪರೀಕ್ಷೆಯಾದವರು ಹಿಂದುಸ್ಥಾನದಲ್ಲಿರುವ ಹೊಳೆಗಳು ಮುಂತಾದ ಸ್ವಾಭಾವಿಕ ಶಕ್ತಿಗಳನ್ನು ಉಪಯೋಗಿಸಲು ಸಹಾಯವಾಗಬೇಕೆಂತಲೂ, ಹಿಂದುಸ್ಥಾನದ ಶಿಲ್ಪ ಶಾಸ್ತ್ರಕ್ಕೆ ಪ್ರಾಮುಖ್ಯತೆ ಕೊಡಬೇಕೆಂತಲೂ, ಮಾಸ್ಟರ್ ಕೆಲಸದಲ್ಲಿ ಪಾಸಾದವರು ಜ್ಞಾನಾಭಿವೃದ್ಧಿಗೆ ಸಹಾಯಕರಾಗಬೇಕೆಂತಲೂ ಹೇಳಿ ಉಪನ್ಯಾಸವನ್ನು ಪೂರೈಸಿದರು. ಇವರು ಹೇಳಿದರೀತಿ ಪ್ರತಿಯೊಂದು ಇಲಾಖೆಯವರು ರಾಷ್ಟ್ರದ ಏಳಿಗೆಗೆ ಕೆಲಸಮಾಡಿದರೆ ಹಿಂದುಸ್ಥಾನದಲ್ಲಿ ಬಡತನವೂ ಅತೃಪ್ತಿಯೂ ಬಹಳ ಕಡಿಮೆಯಾಗುವದು.

ಬಲಾತ್ಕಾರದಿಂದ ಪ್ರೈಮರಿ ವಿದ್ಯಾಭ್ಯಾಸ ಕೊಡಬೇಕೋ?

ಈ ಪ್ರಶ್ನೆಗೆ ಮಹಾತ್ಮ ಗಾಂಧಿಯವರು "ಯಂಗ್ ಇಂಡಿಯ" ದಲ್ಲಿ ಈ ಕೆಳಗಿನ ಜವಾಬನ್ನು ಕೊಟ್ಟಿದ್ದಾರೆ. ಬಲಾತ್ಕಾರದಿಂದ ಪ್ರೈಮರಿ ವಿದ್ಯಾಭ್ಯಾಸ ಕೊಡಲು ನಾನು ಒಪ್ಪುವದಿಲ್ಲ. ಯಾವ [illegible] ಸಮಯದಲ್ಲಾದರೂ ನನಗೆ ವಿರೋಧವಿದೆ. ಬಲಾತ್ಕಾರ [illegible] ತಮ್ಮ [illegible] ಪಕ್ಷಕ್ಕೆ ನಾನು ಹೇಗೆ ವಿರೋಧವಿದ್ದೇನೆ ಎನ್ನುವದೇ ಬಲಾತ್ಕಾರದಿಂದ ಜನಾಂಗವನ್ನು ವಿದ್ಯಾವಂತರನ್ನಾಗಿ ಮಾಡುವದು ಬೇಡವೆಂತಲೇ ಹೇಳುತ್ತೇನೆ. ನಿಶಾಪದಾರ್ಥಗಳ ಅಂಗಡಿಗಳನ್ನು ಇಡದೆಯೂ ಇರುವವುಗಳನ್ನು ಮುಚ್ಚಿಯೂ ಕುಡುಕತನವನ್ನು ನಿಲ್ಲಿಸಲು ಪ್ರಯತ್ನಿಸಬೇಕಾದಂತೆಯೇ ವಿದ್ಯೆಯನ್ನು ಪಡೆಯಲು ಇರುವ ಅಡಚಣೆಗಳನ್ನು ಹೋಗಲಾಡಿಸಿಕೊಡುವ ವಿದ್ಯೆಯು ಜನರ ಅಭಿಪ್ರಾಯಕ್ಕೆ ಒಪ್ಪುವಂತದ್ದನ್ನಾಗಿ ಮಾಡಿ ಜನಾಂಗವನ್ನೆಲ್ಲಾ ವಿದ್ಯಾವಂತರನ್ನಾಗಿ ಮಾಡಬೇಕು. ಈವರೆಗೆ ಮಾಫಿಯಾಗಿ ವಿದ್ಯೆಯನ್ನು ಕೊಡಲು ಸಹ ಧಾರಾಳವಾಗಿ ಪ್ರಯತ್ನಿಸಿರುವದಿಲ್ಲ. ತಂದೆ ತಾಯಿಗಳು ಮಕ್ಕಳನ್ನು ಶಾಲೆಗೆ ಕಳುಹಿಸುವಂತೆ ಬೇಕಾದ ಉತ್ತೇಜನವನ್ನು ನಾವು ಕೊಟ್ಟಿರುವದಿಲ್ಲ. ಓದು ಬರಹ ತಿಳಿದಿರುವದರ ಪ್ರಯೋಜನವನ್ನು ಜನರಿಗೆ ತಿಳಿಸಿಕೊಡುವ ಪ್ರಯತ್ನವನ್ನೇ ಮಾಡಿರುವದಿಲ್ಲ. ಯುವಕರನ್ನು ತಯಾರಿಸಲು ಅರ್ಹರಾದ ಉಪಾಧ್ಯಾಯರುಗಳೇ ಇಲ್ಲ. ಆದ್ದರಿಂದ ಬಲಾತ್ಕಾರದಿಂದ ವಿದ್ಯೆ ಕೊಡಲು ಇನ್ನೂ ಕಾಲಬಂದಿಲ್ಲವೆಂತ ನನ್ನ ಅಭಿಪ್ರಾಯ. ಬಲಾತ್ಕಾರದಿಂದ ವಿದ್ಯೆ ಕೊಡುವ ಪದ್ಧತಿಯನ್ನು ಅನುಸರಿಸಿದರೆಲ್ಲಾ ಪೂರ್ತಿ ಪ್ರಯೋಜನವಾಗಿದೆಯೋ ಎಂಬ ಸಂಶಯವಿದೆ. ಜನಾಂಗದ ಹೆಚ್ಚಿನ ಭಾಗದವರಿಗೆ ವಿದ್ಯೆಬೇಕೆಂತ ಅಭಿಪ್ರಾಯವಿದ್ದರೆ ಬಲಾತ್ಕಾರದ ಆವಶ್ಯಕತೆಯೇ ಇಲ್ಲ. ಜನಾಂಗದ ಹೆಚ್ಚಿನ ಭಾಗದವರಿಗೆ ವಿದ್ಯೆ ಬೇಕೆಂತ ಅಪೇಕ್ಷೆಯೇ ಇಲ್ಲದಿದ್ದರೆ ಬಲಾತ್ಕಾರದಿಂದ ಬಹಳ ಕೆಡಕು ಇದೆ. ಜನಮತಕ್ಕೆ ವಿರೋಧವಾದ ಕಾನೂನನ್ನು ನಿರಂಕುಶ ಅಧಿಕಾರಿಗಳೇ ಜಾರಿಮಾಡುವದು. ಬಹುಜನರ ಮಕ್ಕಳಿಗೆ ವಿದ್ಯೆ ದೊರಕುವದಕ್ಕೆ ತಕ್ಕ ಅನುಕೂಲಗಳನ್ನು ಸರ್ಕಾರವು ಏರ್ಪಡಿಸಿರುವದೇ? ಸುಮಾರು 100 ವರ್ಷಗಳಿಂದಲೂ ನಾವು ಬಲಾತ್ಕಾರದಲ್ಲಿ ಮುಳುಗಿಕೊಂಡಿದ್ದೇವೆ. ನಮ್ಮ ಒಪ್ಪಿಗೆ ಇಲ್ಲದೆ ನಮ್ಮ ಜೀವನವನ್ನೆಲ್ಲಾ ಸರ್ಕಾರವು ಹಿಡಿದಿಟ್ಟುಕೊಂಡಿದೆ. ಜನಾಂಗಕ್ಕೆ ಒದಗುವ ಪ್ರಾರ್ಥನೆಗಳಿಂದಲೂ, ಅರ್ಜಿಗಳಿಂದಲೂ, ಬುದ್ಧಿವಾದದಿಂದಲೂ ಕೂಡ್ಲೆ ಪ್ರಯೋಜನ ದೊರೆಯದೆ ಇದ್ದರೂ ಜನರನ್ನು ಬಲಾತ್ಕಾರದಿಂದ ಬಿಡಿಸಿ ಮನಸ್ಸಂತೋಷದ ದಾರಿಯಲ್ಲಿ ತಿದ್ದುವದು ಅವಶ್ಯವಿದೆ. ಸ್ವಪ್ರಯತ್ನದಿಂದ ಯಾವ ಬದಲಾವಣೆಯನ್ನು ತಂದುಕೊಳ್ಳಲು ಸಾಧ್ಯವಿಲ್ಲವೆಂಬ ಅಭಿಪ್ರಾಯವು ಜನರಲ್ಲಿ ಸ್ವಭಾವಿಕವಾದರೆ ಸಮುದಾಯದ ಬೆಳವಣಿಗೆಗೆ ಅದಕ್ಕಿಂತ ಹೆಚ್ಚಿನ ಕೇಡು ಬೇರೆ ಇಲ್ಲ. ಇಂಥಾ ಬಲಾತ್ಕಾರದಲ್ಲಿ ತಯಾರಾದ ಜನರು ಸ್ವರಾಜ್ಯಕ್ಕೆ ಸಂಪೂರ್ಣವಾಗಿ ಅರ್ಹರಲ್ಲದೆ ಹೋಗುತ್ತಾರೆ.

ಸ್ವರಾಜ್ಯ ಈಗ ದೊರೆತರೂ ಸರ್ವ ಜನರಿಗೂ ವಿದ್ಯೆ ದೊರಕುವಂತೆ ಎಲ್ಲಾ ಅನುಕೂಲಗಳನ್ನು ಒದಗಿಸಿಕೊಟ್ಟು ನೋಡುವ ವರೆಗೂ ಬಲಾತ್ಕಾರದ ಪ್ರೈಮರಿ ವಿದ್ಯೆಗೆ ನಾನು ವಿರೋಧಿಸಿಯೇನು. 50 ವರ್ಷಗಳ ಕೆಳಗೆ ಇದ್ದಷ್ಟು ಓದು ಬರಹ ತಿಳಿದವರು ಈಗ [illegible] ಓದು ಬರಹವನ್ನು ಮಕ್ಕಳಿಗೆ ಕಲಿಸಲು ತಂದೆ [illegible] ಆದರೆ ಈ ಸರ್ಕಾರದ ಕ್ರಮದಲ್ಲಿ [illegible] ದೊರಕಿಸಲು ಅನುಕೂಲವಿಲ್ಲದಿರುವದೇ ಕಾರಣವೆಂಬದನ್ನು [illegible] ಕರು [illegible]

ಜನರಲ್ ಕಮಿಟಿ [illegible]

ತಾರೀಖು 18-8-[illegible] [illegible] ನಡೆದ [illegible]

ಹಾಜರಿದ್ದ ಮೆಂಬರುಗಳು.— [illegible] ಪಾರವಂಗಡ ಕುಶಾಲಪ್ಪನವರು, ಯಂ. ಎಲ್. ಸಿ. ಮ. ಚೆಪ್ಪುಡೀರ ಪೊನ್ನಪ್ಪನವರು, ಮ. ಪಿ. ಗಣಪಯ್ಯಯ್ಯನವರು, ಯಂ. ಎಲ್. ಸಿ., ಮ. ನೇಯಂಡ್ರ ಅಣ್ಣೆಯ್ಯನವರು, ಮ. ಅಜ್ಜಿಯಂಡ್ರ ಸುಬ್ಬಯ್ಯನವರು, ಮ. ಕೊಳ್ಳಿಮಾಡ ಕರುಂಬಯ್ಯನವರು, ಮ. ಚೋನಿರ ಕರುಂಬಯ್ಯನವರು.

ಗೈರಹಾಜರಾದ ಮೆಂಬರುಗಳು.—ಮ. ಚೆಪ್ಪುಡೀರ ಚಂಗಪ್ಪನವರು, ಮ. ಐಮ್ಮಡ ಮಾದಪ್ಪನವರು, ಮ. ಮನೆಯಪಂಡ ಚಿಣ್ಣಪ್ಪನವರು, ಯಂ.ಎಲ್.ಸಿ. ಮ. ಕೊಡಂದೇರ ಮೇದಪ್ಪನವರು, (ಲಕ್ಕುಂದ) ಮ. ಇಟ್ಟೀರ ಪೊನ್ನಪ್ಪನವರು, ಮ. ಅಜ್ಜಮಾಡ ಕಾಳ್ಯಪ್ಪನವರು.

1 ಹತ್ತೂರು ಸಂವತ್ಸರದ ವಾರ್ಷಿಕ ಮೀಟಿಂಗಿನ ಪ್ರೊಸೀಡಿಂಗ್ಸ್ ಪ್ರಿಂಟ್ ಮಾಡಿಸುವ ಖರ್ಚು ಬಾಬ್ತು ರುಪಾಯಿಗೆ ಆಜ್ಞೆಯಂತೆ ಸಹಾಯ ಕೊಡುವ ಸಂಗತಿ ತಾರೀಖು 7-6-24 ರಲ್ಲು ವೀರಾಜಪೇಟೆಯಲ್ಲಿ ನಡೆದ ಎಕ್ಸಿಕ್ಯೂಟಿವ್ ಕಮಿಟಿ ಮೀಟಿಂಗಿನಲ್ಲು ಅದರ ಮೆಂಬರುಗಳು ಕೇಳಿಕೊಂಡಮೇರೆ, ರುಪಾಯಿಗೆ ಆರ್ಕಾಣೆಮೇರೆ ಕೊಡುವಂತೆಯೂ, ಸಂಘದವರು ಪ್ರಿಂಟ್‌ಮಾಡಿಸುವ ಹಸ್ತಪತ್ರಗಳ ೭ನೇ ಒಂದು ಭಾಗವನ್ನು ನಮ್ಮ ತಾಲೋಕಿಗೆ ಕೊಡುವ ಒಪ್ಪಂದವನ್ನು ಕೊಟ್ಟರೆ ಮೇಲ್ಕಂಡ ಮೊಬಲಗನ್ನು ಕೊಡಬಹುದೆಂದೂ ತೀರ್ಮಾನವಾಯಿತು. ಇದರ ಮೊಬಲಗು ಎಷ್ಟೆಂಬ ಸಂಗತಿ ಸ್ವಾಗತಮಂಡಲಿ ಪ್ರೆಸಿಡೆಂಟರವರಿಗೆ ಕಾಗದಮೂಲಕ ತಿಳಿಸುವದು.

ಸ್ವರಾಜ್ಯ ಪಂಗಡದವರಿಗೂ ಮಹಾತ್ಮ ಗಾಂಧಿಯವರಿಗೂ ತಮ್ಮ ಕೆಲಸಗಳಲ್ಲಿ ಶಾಮೀಲಾಗುವ ಹಾಗಿಲ್ಲವೆಂದು ಮಹಾತ್ಮರು ಉತ್ತರಕೊಟ್ಟಿರುವರು

ದಕ್ಷಿಣ ಮತ್ತು ಪಶ್ಚಿಮ ಹಿಂದೂ ದೇಶದಲ್ಲಿ ಕಳೆದ ಘೋರ ಮಳೆಯಿಂದ ಉಂಟಾದ ಅನಾಹುತಗಳ ಪರಿಹಾರಾರ್ಥವಾಗಿ ಒಂದು ಕೋಟಿ ರೂಪಾಯಿಯನ್ನು ಉಚಿತವಾಗಿ ಮಧ್ಯ ಸರ್ಕಾರದವರು ಮದ್ರಾಸು ಸರ್ಕಾರದವರಿಗೆ ಕೊಡಬೇಕೆಂದು ಒಂದು ಠರಾವನ್ನು ಕೌನ್ಸಿಲ್ ಆಫ್ ಸ್ಟೇಟಿನಲ್ಲಿ ಚರ್ಚಿಸಲು ಮಿ ಜಿ ಎ ನಟೇಶನ್‌ರವರು ಸೂಚಿಸಿರುವರು

ಮದ್ರಾಸು ಮುನ್ಸಿಪಾಲಿಟಿಯ ಚುನಾವಣೆಯಲ್ಲಿ ಕಾಂಗ್ರೆಸು ಪಂಗಡದ ಮೆಂಬರುಗಳೇ ಹೆಚ್ಚಾಗಿ ಚುನಾಯಿಸಲ್ಪಟ್ಟಿರುವರು.

ವಿದೇಶ.

ಅಫ್ಘಾನಿಸ್ಥಾನದ ಖೋಸ್ಟ ಎಂಬಲ್ಲಿ ದಂಗೆ ಪ್ರಾರಂಭವಾಗಿದೆ. ಅಬ್ದುಲ್ ಕರೀಮ್ ಎಂಬವನು ದಂಗೆಕೋರರ ಮುಂದಾಳಾಗಿ ನಿಂತು ತಾನು ಅಫ್ಘಾನಿಸ್ಥಾನದ ಅರಸನಾಗಬೇಕೆಂದು ಈಗಿನ ಅಮೀರರ ಮೇಲೆ ಯುದ್ಧ ಪ್ರಾರಂಭಿಸಿರುವನು. ಇವರಿಗೆ ರಷ್ಯಾದ ಸೋವ್ಯೆಟ್ ಸರ್ಕಾರದ ಸಹಾಯವಿದೆ ಎಂದು ವರ್ತಮಾನ. ಬ್ರಿಟಿಷರವರೂ ಇವರಿಗೆ ಯಾರಿಗೂ ತಿಳಿಯದಂತೆ ಸಹಾಯ ಮಾಡುತ್ತಿದ್ದಾರೆಂದು ಹುಟ್ಟಿಸಿದ ವರ್ತಮಾನವು ಸುಳ್ಳೆಂದು ಪ್ರತಿಭಟಿಸಲ್ಪಡುತ್ತಿದೆ. ಎರಡು ಬ್ರಿಟಿಷ್ ವಿಮಾನಗಳು ಅಫ್ಘಾನಿಸ್ಥಾನಕ್ಕೆ ಹೋಗಿವೆ. ಅವುಗಳನ್ನು ಅಮೀರರು ಕೊಂಡುಕೊಳ್ಳುವರಂತೆ.

ಇಂಗ್ಲೆಂಡಿನ ವೆಂಬ್ಲಿಯಲ್ಲಿ ಈಗ ನಡೆಯುತ್ತಿರುವ ಬ್ರಿಟಿಷ್ ಚಕ್ರಾಧಿಪತ್ಯದ ಪ್ರದರ್ಶನವನ್ನು ಬರುವ ವರ್ಷವೂ ಮುಂದರಿಸಬೇಕೋ ಎಂದು ಕೇಳಿದಕ್ಕೆ ಮಹಾಜನ ಸರ್ಕಾರದವರೆಲ್ಲರೂ ಅದರ ಖರ್ಚು ಬಹಳವಾಗುವುದರಿಂದ ಹಾಗೆ ಮಾಡಕೂಡದೆಂದು ಉತ್ತರ ಕೊಟ್ಟಿರುವರು.

ತಾರೀಕು 21ರಲ್ಲು ಚಕ್ರವರ್ತಿಯವರ ಮಗಳಾದ ರಾಜಕುಮಾರಿ ಮೇರಿಯವರು ಒಂದು ಗಂಡು ಮಗುವನ್ನು ಹೆತ್ತಿರುವರು. ತಾಯಿಯೂ ಮಗುವೂ ಕ್ಷೇಮದಲ್ಲಿರುವರು.

ಅಕ್ಟೋಬರ್ 7ರಲ್ಲಿ ಲಂಡನಿನಲ್ಲಿ ಪ್ರಾರಂಭವಾಗುವ ಲೇಬರ್‌ಪಾರ್ಟಿಯ ಕಾನ್‌ಫರೆನ್ಸಿನಲ್ಲಿ ಚರ್ಚಿಸಲು 317 ಪ್ರರಗುತುಂಬ ಠರಾವುಗಳಿವೆಯಂತೆ. ವಿಂಬ್ಲ್ಡನ್ ಮತ್ತು ಫಿನ್ಸ್‌ಬರಿಯವರು ಇಂಡಿಯಾಕ್ಕೆ ಒಡನೆ "ಹೋಮ್ ರೂಲ್" ಕೊಡಬೇಕೆಂತಲೂ, ರಾಜಕೀಯ ಖೈದಿಗಳನ್ನು ಬೇಗನೆ ಬಿಡುಗಡೆ ಮಾಡಬೇಕೆಂತಲೂ ಠರಾವುಗಳನ್ನು ಕಳಿಸಿಕೊಟ್ಟಿರುವರು.

ಲಂಡನಿನಲ್ಲಿ ನಡದ ಮಿತ್ರ ಮಂಡಲಿಯವರ ಮತ್ತು ಜರ್ಮನಿಯವರ ಕಾನ್‌ಫರನ್ಸಿನಲ್ಲಿ ಇವರೊಳಗಿದ್ದ ವ್ಯತ್ಯಾಸಗಳನ್ನು ಹೋಗಲಾಡಿಸಿ ಒಂದು ರಾಜಿಗೆ ಬಂದಿರುವರು. ಫ್ರೆಂಚರು ರೂರ್ ಪ್ರಾಂತ್ಯವನ್ನು ಬಿಡಲು ಪ್ರಾರಂಭಿಸಿರುವರು.

ಅಮೇರಿಕದಲ್ಲಿ ಒಬ್ಬ ಅರ್ಚಕರು ಪಿಯರ್‌ಸ್ ಬರು ಈ ವರ್ಷ ಅಂತ್ಯವಾಗುವದರೊಳಗೆ ಭೂಲೋಕವು ಅಂತ್ಯವಾಗುವದೆಂದು ಹೇಳಿದರೆಂದು, ಈ ವಿಷಯ ಅವರ ಶಿಷ್ಯರು ಸಾವಿರಾರು ಕರಪತ್ರಗಳನ್ನು ಪ್ರಕಟಿಸಿದವರೆಂದೂ ತುರ್ಕಿಸ್ಥಾನದ ಪತ್ರಿಕೆಗಳಲ್ಲಿ ಪ್ರಕಟಿಸಲ್ಪಟ್ಟಿದೆ

ಅಸಾಧಾರಣವಾದ ಮಳೆಯ ಬಿಸಿಯಿಂದ ತುರ್ಕಿಯ ಮುಖ್ಯ ಪಟ್ಟಣವಾದ ಕಾನ್‌ಸ್ಟಾಂಟಿನೋಪಲ್ ಪಟ್ಟಣವು ನೆರೆಯಿಂದ ಮುಚ್ಚಲ್ಪಟ್ಟು ತುಂಬಾ ನಷ್ಟವುಂಟಾಗಿದೆಯಂತೆ.

೩೯ನೇ ಹಿಂದೀ ರಾಷ್ಟ್ರೀಯ ಮಹಾಸಭೆ ೧೯೨೪.

ಬೆಳಗಾಂವಿ

1 ಬರುವ ಡಿಸೆಂಬರ ತಿಂಗಳಿನಲ್ಲಿ ಬೆಳಗಾಂವಿಯಲ್ಲಿ ಸೇರುವ ರಾಷ್ಟ್ರೀಯ ಮಹಾ ಸಭೆಯಲ್ಲಿ ಹಾಡುವದಕ್ಕೆ ಎರಡು ಸ್ವಾಗತ ಗೀತಗಳು ಬೇಕಾಗಿವೆ. ಇವುಗಳಲ್ಲಿ ಒಂದು ಕನ್ನಡ ಭಾಷೆಯಲ್ಲಿಯೂ ಒಂದುಸಂಸ್ಕೃತ ಭಾಷೆಯಲ್ಲಿಯೂ ಇರಬೇಕು.

2. ಹಾಗೆಯೇ ಎರಡು ರಾಷ್ಟ್ರಗೀತಗಳೂ ಬೇಕಾಗಿವೆ ಇವೆರಡೂ ಕನ್ನಡ ಭಾಷೆಯಲ್ಲಿರಬೇಕು. ಇವುಗಳಲ್ಲಿ ಒಂದು ಭಾರತಮಾತೆಯ ಸ್ತೋತ್ರರೂಪವಾಗಿಯೂ, ಇನ್ನೊಂದು ಕರ್ನಾಟಕಮಾತೆಯ ಸ್ತೋತ್ರರೂಪವಾಗಿಯೂ ಇರಬೇಕು.

3 ಮೇಲ್ಕಂಡ ನಾಲ್ಕು ಗೀತಗಳೂ ಶುದ್ಧವಾದ ಕರ್ನಾಟಕ ಗಾಯನಶಾಸ್ತ್ರವನ್ನನುಸರಿಸಿರಬೇಕು. ಗೀತೆಗಳು ಸ್ವದೇಶಾಭಿಮಾನ ಪ್ರೋದ್ದೀಪಕವಾಗಿಯೂ, ಭಾವೋತ್ತೇಜಕವಾಗಿಯೂ, ಗಾಂಭೀರವಾಗಿಯೂ ಲಲಿತವಾಗಿಯೂ ಇರಬೇಕು. ಅಲ್ಲದೆ ಬಹುಜನರು ಕೂಡಿಕೊಂಡು ಏಕತಾನ ಸ್ವರದಿಂದ ಹಾಡುವದಕ್ಕೆ ಅನುಕೂಲವಾಗಿರಬೇಕು. ಇಂಥ ಗೀತೆಗಳನ್ನು ಕರ್ನಾಟಕದೊಳಗಿನ ಕವಿಗಳು ರಚಿಸಿ ಕಳುಹಿಸಬೇಕೆಂದು ಬಿನ್ನಹವಿದೆ.

4. ಹೀಗೆ ಬಂದ ಗೀತಗಳಲ್ಲಿ ಯೋಗ್ಯವಾದವುಗಳನ್ನು ಆರಿಸಿ ಉಪಯೋಗಿಸುವ ಸಂಪೂರ್ಣ ಸ್ವಾತಂತ್ರ್ಯವನ್ನು ಈ ಉಪಸಮಿತಿಯವರು ಇಟ್ಟುಕೊಂಡಿರುತ್ತಾರೆ. ಆರಿಸಲ್ಪಟ್ಟ ಗೀತಗಳು ಮುಂದೆ ಅಖಿಲ ಕರ್ನಾಟಕ ದೇಶಕ್ಕೆ ರಾಷ್ಟ್ರಗೀತಗಳಾಗಿ ಉಪಯೋಗಿಸಲ್ಪಡುವವು.

5 ಕರ್ನಾಟಕದ ಬೇರೆಬೇರೆ ಭಾಗಗಳಲ್ಲಿರುವ ಪ್ರತಿಭಾಸಂಪನ್ನ ಕವಿಗಳೆಲ್ಲರೂ ರಾಷ್ಟ್ರದೇವತೆಯ ಸೇವೆಗೋಸುಗ ಈ ಸಂದಿಯನ್ನು ಮನದುಂಬಿ ಸ್ವೀಕರಿಸಿ ಗೀತಗಳನ್ನು ರಚಿಸಿ, ಬರುವ ಸೆಪ್ಟಂಬರ್ 15ನೇ ತಾರೀಖಿನೊಳಗಾಗಿ ಧಾರವಾಡದಲ್ಲಿರತಕ್ಕ ಕಾರ್ಯದರ್ಶಿಗಳ ವಿಳಾಸಕ್ಕೆ ಮುಟ್ಟುವಂತೆ ಕಳುಹಿಸಬೇಕಾಗಿ ಪ್ರಾರ್ಥನೆ

ಮುದ್ವೀಡಕರ ಕೃಷ್ಣರಾಯ್, ಕಾರ್ಯದರ್ಶಿ
ಸಂಗೀತ ಶಾಖಾ, 39ನೇ ರಾಷ್ಟ್ರೀಯ ಮಹಾಸಭೆ.

ಗೋರಕ್ಷಣೆ

ಪ|| ಇಟ್ಟರೆ ಸಗಣಿಯಾದೆ ತಟ್ಟಿದರೆ ಬೆರಣಿಯಾದೆ||
ಸುಟ್ಟರೇ ನೊಸಲಿಗೆ ವಿಭೂತಿಯಾದೆ||
ತಟ್ಟದೇ ಹಾಕಿದರೆ ಮೇಲು ಗೊಬ್ಬರವಾದೆ||
ನೀನಾರಿಗಾದೆಯೋ ಎಲೆ ಮಾನವಾ||೧||

ಹಾಲಾದೆ ಕರೆದರೆ|ಮೊಸರಾದೆ ಹೆತ್ತರೆ
ಮೇಲೆ ಕೆನೆಗಡೆದರೆ ಬೆಣ್ಣೆಯಾದೆ|
ಮೇಲಾದ ತುಪ್ಪವೇ ತಾನಾದೆ ಕಾಸಿದರೆ
ನೀನಾರಿಗಾದೆಯೋ ಎಲೆ ಮಾನವಾ||೨||

ಉಳುವೆನಾ ಭೂಮಿಯನು ಹೂಡುವೆನಾ ಹೇರನ್ನು
ತುಳಿದು ಕಡ್ಡಿಯ ಕಾಳನಿಂಗಡಿಸುವೆ||
ನೀನಾರಿಗಾದೆಯೋ ಎಲೆ ಮಾನವಾ||೩||

ಹಾಯ ಹರಿಗೋಲಾದೆ|ರಾಯ ಭೇರಿಗೆಯಾದೆ
ರಾಯರ ಕಾಲಿಗೆ ಮುಳ್ಳೊತ್ತು ಆದೆ||
ಆಯಮಹಿಕ ಹೊಡೆಯ ಮಧುರ ಗಾನಕಾದೆ
ನೀನಾರಿಗಾದೆಯೋ ಎಲೆ ಮಾನವಾ||೪||

ಹಾದಿ ಬೀದಿಯಲ್ಲಿರುವ,ಕಸದ ಹುಲ್ಲನು ಮೇಯುತ|
ಮೇದು ಮನೆಗೈದು ಸಾನಮೃತವೀವೆ||
ಆದನೆಂದು ನನಗೀಗ ಒಗೆದ ಮಾನವ ಕೇಳು
ನೀನಾರಿಗಾದೆಯೋ ಎಲೆ ಮಾನವಾ||೫||

ಸ್ವಧರ್ಮದಿಂದ'

ವಂದನೆ

ಕೆಲವು ದಿವಸಗಳ ಹಿಂದೆ ಅವಾಧಿ ನರಾದ ನನ್ನ ಸಂಬಂಧಿ ಮಡ ಮರಣದಿಂದ ನನಗುಂಟಾದ ವ್ಯಸನದಲ್ಲಿ ಸಮಾಧಾನಗಳಿಸಲು ನನಗೆ ಪತ್ರ ಬರೆದಂಥ ಅನೇಕ ಬಂಧುಗಳು ಮತ್ತು ಸ್ನೇಹಿತರಿಗೆ ಪ್ರತ್ಯೇಕ ಪ್ರತ್ಯೇಕವಾಗಿ ಕಾಗದದ ಮೂಲಕ ವಂದಿಸಲು ಸಾಧ್ಯವಿಲ್ಲದ್ದರಿಂದ ಈ ಪತ್ರಿಕೆಯ ಮೂಲಕ ಅವರೆಲ್ಲರಿಗೂ ನನ್ನ ಕೃತಜ್ಞತೆಯನ್ನು ಅರ್ಪಿಸುತ್ತೇನೆ

ಕೋದಂಡ ಕೆ ಮಂದಪ್ಪ,
ಕಾರುಗುಂದ

ಪತ್ರವ್ಯವಹಾರಗಳು.

ಬಾತ್ಮಿದಾರರು ಬರುವ ಅಭಿಪ್ರಾಯಗಳಿಗೆ ಪತ್ರಾಧಿಪರು ಉತ್ತರವಾದಿಗಳಲ್ಲ ಸಂ

ಮಡಿಕೇರಿ ಕೈಲ್ ಪೋಳ್ದು

ಮಹಾಶಯರೆ

ಕಳೆದ ವಾರದ ಪತ್ರಿಕೆಯ ಬಾತ್ಮಿ ವಿಭಾಗದ ಕಾಲಂನಲ್ಲಿ ಮಡಿಕೇರಿ ಕೈಲ್ ಪೋಳ್ದು ಮೀಟಿಂಗಿನ ಸಾರಾಂಶವನ್ನು ಓದಿ ನನಗೆ ಆಶ್ಚರ್ಯವಾಯಿತು. ನಾನು ಮಡಿಕೇರಿಯಲ್ಲಿರುವ ಒಬ್ಬ ಕೊಡವನಾದರೂ ಕಳೆದ ಈ ಮೀಟಿಂಗಿನ ವಿಷಯ ನನಗೇನೂ ಇಷ್ಟರ ವರೆಗ ತಿಳಿದಿರಲಿಲ್ಲ. ಪತ್ರಿಕೆಯಲ್ಲಿ ಇದರ ವಿಷಯ ಓದಿದನಂತರ ನನ್ನ ಕೆಲವು ಸ್ನೇಹಿತರನ್ನು ಈ ವಿಷಯ ವಿಚಾರಿಸಿದೆನು. ಅವರೂ ನನ್ನ ಹಾಗೆಯೇ ಕತ್ತಲೆಯಲ್ಲೇ ಇದ್ದರು. ಅದುದರಿಂದಲೇ ಮೀಟಿಂಗಿನಲ್ಲಿ ಸುಮಾರು 5 ಜನರು ಮಾತ್ರ ಹಾಜರಿದ್ದರೆಂದು ತಿಳಿಯಬರುತ್ತದೆ. ಈ ಮೀಟಿಂಗನ್ನು ಯಾರು ಯಾರಿಗೋಸ್ಕರ ಮಾಡಿದರೆಂಬದು ತಿಳಿಯದು. ಮಡಿಕೇರಿಯಲ್ಲಿರುವ ಕೊಡವರೆಲ್ಲರಿಗೂ ಆಗಿದ್ದರೆ ಹೆಚ್ಚು ಕಮ್ಮಿ ಎಲ್ಲರಿಗೂ ತಿಳಿಸಬೇಕಾಗಿತ್ತು. ಇಷ್ಟು ಚಿಕ್ಕ ಪಟ್ಟಣದಲ್ಲಿರುವ ಕೊಡವರೆಲ್ಲರಿಗೂ ತಿಳಿಸಲು ಸಾಧ್ಯವಿಲ್ಲದಿದ್ದರೆ ಅಂಥಾ ಕೆಲಸಕ್ಕೆ ಕೈಹಾಕದೇ ಇರಬಹುದಿತ್ತು. ಅದಂತಿರಲಿ.

ಕೈಲ್ ಮುಹೂರ್ತ ದಿನ ಸಾಯಂಕಾಲ ಮೀಟಿಂಗಿನಲ್ಲಿ ಒಂದು ವಿಕಟದ ಏರ್ಪಾಡಂತೆ. ಕೊಡವರ ಹಳೇ ಪದ್ಧತಿಗಳನ್ನೆಲ್ಲಾ ಮೂಲೆಗೊತ್ತಿ ಹೊಸವುಗಳನ್ನು ಆರ್ಜಿಸುವದು ಮಡಿಕೇರಿಯವರಿಂದಲೇ ಎಂಬುದಕ್ಕೆ ಇದೊಂದು ದೃಷ್ಟಾಂತವಾಗಿದೆ. ಕೈಲ್ ಪೋಳ್ದು ದಿನ ಊರವರು ಸೇರಿ ರಾತ್ರಿ ಊಟದ ಪದ್ಧತಿಯೇ ಇಲ್ಲ. ಇದೀಗ ಮಡಿಕೇರಿಯಲ್ಲಿ ಹೊಸದಾಗಿ ಹೊರಟದ್ದಾಗಿದೆ. ಮನೆಗಳಲ್ಲಿ ಆಯುಧ ಪೂಜೆ ಮಾಡಿ ಮಧ್ಯಾಹ್ನದ ಊಟ ಉಪಹಾರ ತೀರಿಸಿಕೊಂಡು ಗಂಡಸರೆಲ್ಲರೂ ಊರು ಮಂದಿನಲ್ಲಿ ಸೇರಿ ತೆಂಗಿನಕಾಯಿಗೆ ಗುರಿ ಹೊಡೆಯುವುದೇ ಹಿರಿಯರ ಪದ್ಧತಿ. ಇಷ್ಟರ ವರೆಗೆ ಮಡಿಕೇರಿಯಲ್ಲಿಯೂ ನಡೆಯುತ್ತಿದ್ದಂತ ಈ ಪದ್ಧತಿಯನ್ನು ಬಿಟ್ಟು ಈ ವರ್ಷ ವಿಕಟದ ಒಂದು ಹೊಸ ಏರ್ಪಾಡು! ವರ್ಷಕ್ಕೊಂದು ಹಬ್ಬದ ದಿನ ಗಂಡಸರು ತಮ್ಮ ಸಂಸಾರವನ್ನು ಮನೆಯಲ್ಲಿ ಬಿಟ್ಟು ರಾತ್ರಿ ಮೀಟಿಂಗಿನಲ್ಲಿ ವಿಕಟ [illegible] ದು ನ್ಯಾಯವೇ? ಒಂದುವೇಳೆ ಒಂದರೂ ಇದು ಪೂರ್ವಮನಸ್ಸಿಂದಲೇ ಆಗಿರ ಬಹುದೇ? ಹೀಗನ್ನಲು ಕಾರಣವೇನೆಂದರೆ —ಮಡಿಕೇರಿಯಲ್ಲಿರುವ ಮುಕ್ಕಾಲು ಕೊಡವರು ಸರ್ಕಾರಿ ಉದ್ಯೋಗಸ್ಥರು. ಕೊಡವ ದೊಡ್ಡ ಉದ್ಯೋಗಸ್ಥರು ಸೇರಿ ಮಾಡಿದ ಏರ್ಪಾಡಿಗೆ ಕೆಳ ಉದ್ಯೋಗಸ್ಥರು ಮನಸ್ಸಿಲ್ಲದಿದ್ದರೂ ಒಂದು ತರದ ಭಯದಿಂದ ಅದಕ್ಕೆ ಸಮ್ಮತಿಸಬಹುದು. ಆದುದರಿಂದ ಇಂಥಾ ಏರ್ಪಾಡುಗಳನ್ನು ಮಾಡುವಾಗ ಸಾಧ್ಯವಾದಷ್ಟು ಎಲ್ಲರನ್ನೂ ಸೇರಿಸಿ ಹೆಚ್ಚಿನ ಜನರ ಅಭಿಪ್ರಾಯದ ಮೇರೆ ನಡಿಸುವದ ಹೇ ನ್ಯಾಯ?

ಈ [illegible] ಅತಿಥಿ [illegible] ಪತ್ರಿಕೆಯ [illegible] ಪ್ರಕಟಿಸಿದ [illegible] ಮೀಟಿಂಗಿನಲ್ಲಿ ಹಾಜರಿದ್ದ [illegible] ತಿಳಿದನು [illegible] ನಾಲ್ಕು ಗಂಟೆಯ ಟೀಪಾರ್ಟಿಯನ್ನು [illegible] ಈ ವರ್ಷ ವಿಕಟಕ್ಕೆ ಏರ್ಪಾಡು ಮಾಡಿದ್ದೆಂದು [illegible] ಗ ದೇಶದ [illegible] ಉದಾಹರಣೆ! ಇದರ ವಿಷಯ [illegible] ಮಡಿಕೇರಿಯವರು [illegible] ವ್ಯಾಪಾರಿಗಳು ಬುದ್ಧಿವಂತರ [illegible] ಅದು ಅವರಿಗೆ [illegible] ಬೇಕೆಂಬಿಲ್ಲ

ದೇಶದಲ್ಲೆಲ್ಲಾ ಕಳೆದ ವರ್ಷಕ್ಕಿಂತ ಹೆಚ್ಚಾಗಿ ಈ ವರ್ಷ ಮಳೆಯ ಹಾವಳಿಯಿಂದ ಜನರು ನಷ್ಟಕ್ಕೊಳಗಾಗಿ ಕಷ್ಟಪಡುತ್ತಿರುವದನ್ನು ಕಂಡು ಕಂಡು ನಮ್ಮ ಮಡಿಕೇರಿ ಜನರೇ ಯರು ಬೇರೆ ಸ್ಥಳಗಳ ಜನರಂತೆ ರಿಲೀಫ್ ಫಂಡ್ ಮುಂತಾದ ಧರ್ಮ ಸಹಾಯದ ಕೆಲಸಗಳಿಗೆ ಗಮನ ಕೊಡುವದರ ಬದಲು 200 ರೂಪಾಯಿ ಖರ್ಚಿನ ದೊಡ್ಡ ದಿಬ್ಬಣದ [illegible] [illegible]

[illegible]

[illegible]

[illegible]

ಪಂಡಿತರಾದ [illegible] ಕೊಡವ [illegible] 90 ವರ್ಷದ [illegible] ಮುಂದೆ [illegible] ದೇಶೀಯ [illegible] ಉದ್ಯೋಗ [illegible] ಮುಂದ [illegible]

[illegible] ಕಷ್ಟ [illegible] ಮಾಡಿಕೊಳ್ಳುವದಾಗಿ [illegible] ಯಾ [illegible] ಹಿಂದು [illegible] ನಮಗೆ [illegible] ಬೇಕಾದ [illegible] ಗೆ ಆದದ ಅನ್ನವನ್ನು ತಿನ್ನಿಸುವ ಹಾಗೆ ನಮಗೆ ರಾಜ್ಯದ [illegible] ಡಳಿತೆಯನ್ನು ಸ್ವಲ್ಪ ಸ್ವಲ್ಪವಾಗಿ ಕಲಿಯುವಂತೆ [illegible] ಯಿಂದ ಕೊಡುತ್ತಿರುವರು.

ಇನ್ನು ನಿಮ್ಮ ಹಿಂದುಗಳಲ್ಲಿ ಒಂದು ಸಭೆ [illegible] ಈ ಸಭೆ ಸರಕಾರದ ಮಾಡುವ ಮೊದಲು ಎಲ್ಲಾ ಹಿಂದುಗಳ ಪಂಗಡದವರ ಸಂಪನ್ನು ಸರಿ ಮಾಡಬೇಡವೆ? ಇಲ್ಲವಾದರೆಲ್ಲ ಮುಂದುವರಿದವರ ಇಲ್ಲವೆ ಬಹು ಸಂಖ್ಯೆಯ [illegible] ಎಲ್ಲಾ ಕಾರುಭಾರ, ಸಹಾ ಸೇರಿಗಂಡಿಕ್ಕಿಲ್ಲವೇ? ಜ||

2 ಈ ಉಳುವರಿಯಿಂದ ಹಾಲಿ ಸಂವತ್ಸರದ ವಾರ್ಷಿಕ ಮೀಟಿಂಗಿನಲ್ಲು ತೀರ್ಮಾನವಾದಮೇರೆ ನೂರು ರುಪಾಯಿಯನ್ನು ಸಂಘದ ಜನರಲ್ ಸೆಕ್ರೆಟರಿಯವರಿಗೆ ನಮ್ಮ ತಾಲೋಕಿನ ಪರವಾಗಿ ಡಿಪಾಜಿಟ್ಟು ಇಡುವಂತೆ ಅವರ ಒಡನೆ ಕಳುಹಿಸಿಕೊಡಬೇಕಾಗಿ ತೀರ್ಮಾನವಾಯಿತು.

3 ಪೊನ್ನಂಪೇಟೆ ಮತ್ತು ಹುದಿಕೇರಿ ಶಾಲೆಗಳಿಗೆ ಹತ್ತು ಹತ್ತು ಚರ್ಕಗಳನ್ನು ಇನಾಮಾಗಿ ಕೊಡುವಂತೆಯೂ ಈ ವಿಷಯವಾಗಿ ಸದರಿ ಶಾಲಾ ಹೆಡ್ಮಾಸ್ಟರುಗಳಿಗೆ ಒಡನೆ ಬರೆಯುವಂತೆಯೂ ತೀರ್ಮಾನವಾಯಿತು

4 ಮೆ ಚೆಪ್ಪುಡೀರ ಚಂಗಪ್ಪನವರಲ್ಲು ಬಾಕಿ ಇರುವ ಹಣವನ್ನು ವಸೂಲಾತಿಬಗ್ಗೆ ಸ್ವಾಗತ ಸಮಿತಿ ಪ್ರೆಸಿಡೆಂಟರಿಗೆ ಅಧಿಕಾರಕೊಟ್ಟಿದೆ

5 ಲೆಕ್ಕದಲ್ಲಿ ಹೆಚ್ಚು ಕಡಿಮೆಕಂಡದ್ದನ್ನು ಕೊಡಲಿಕ್ಕಾಗಿ ಕಂಡುಬಂದ ರೀತಿ ಕೊಟ್ಟದ್ದು ರೂ 13-8-0

6. ಎಂಟರ್‌ಟೇಯಿನ್‌ಮೆಂಟ್ ಬಗ್ಗೆ ಎಗ್ಸಿಕ್ಯೂಟಿವ್ ಕಮಿಟಿಯಿಂದ ಜಮೆಗೆ ಒಂದದ್ದು ರೂ 18-0-0

ಈಗ ಸ್ವಾಗತ ಸಮಿತಿ ಅಧ್ಯಕ್ಷರಲ್ಲು ಉಳುವರಿ ಇರುವ ಮೊಬಲಗು ರೂ 284-8-0.

ಜೆ. ಪೊನ್ನಪ್ಪ,
ಸ್ವಾಗತಮಂಡಲಿ ಅಧ್ಯಕ್ಷರು.

ಪ್ರಸಿದ್ಧ ಪತ್ರಿಕೆ

ಗೌಡುಗಳ ವಿದ್ಯಾಭಿವರ್ಧನಿ ಸಂಘದ ಲೋಡ್ತಿಯು ತಾರೀಕು 22 6 1924ರಲ್ಲು ತೆಗಿಯಲ್ಪಟ್ಟು ಈ ಕೆಳಗೆ ನಮೂದಿಸಿದ ಮಹನೀಯರುಗಳು ನಂಬರುವಾರು ಇನಾಮತಿಗಳನ್ನು ಹೊಂದಿರುತ್ತಾರೆ.—

1ನೇ ಇನಾಮು ರೂ. 100, ನಂ 9240 2ನೇ ರೂ. 75, ನಂ 8984 3ನೇ ರೂ. 50, ನಂ 21 4ನೇ ರೂ. 25, ನಂ. 3001, 4613, 4150. 5ನೇ ರೂ 10, ನಂ 4189, 9790, 9247, 4372, 4588, 4594, 9085, 9803, 9811, 9818, 9821, 9344, 9348, 3351, 9527, 2526, 2999, 3759, 4092, 2891 6ನೇ ರೂ 5, ನಂ 4187, 4192, 8780, 4133, 4135, 4148 9847, 1528 9411, 9413, 9238, 9239, 4632, 9659, 3677, 8962, 4358, 4070, 4480, 9079 9028, 9820, 4108, 9067, 8756, 8758, 2574, 3359, 3370, 2556, 40, 2527, 2991, 3962, 3968, 3973, 3006, 3769, 3789, 4155, 4163, 9134, 9140, 2501, 2902, 2519, 4088, 8790, 2878, 2885

ಇನಾಮತಿಗಳನ್ನು ಕೆಲವು ನಂಬರುಗಳಿಗೆ ಹಂಚಿದ್ದೇವೆ ಮತ್ತು ಬಾಕಿಯಾದವುಗಳಿಗೆ ಈಗಲೂ ಹಂಚುತ್ತಾ ಇದ್ದೇವೆ ಹಣ ಸಿಕ್ಕದೆ ಇರುವವರು ಬರುವ ತಾರೀಕು 15ರನಂತರ ಲೋಡ್ತಿ ಕಮಿಟಿ ಕಾರ್ಯದರ್ಶಿಗೆ ಕಾಗದ ಬರೆದುಕೊಳ್ಳುವದು ಹಣ ಪಡೆಯುವ ವಾಯಿದೆಯು ದಾಟಿಹೋಗಲಿಲ್ಲ

ಮುತ್ತಾವ್ರಂಡ, ಟಿ ಎಸ್ ಪೊನ್ನಯ್ಯ,
ಮೊರ್ನಾಡು ಪೋಸ್ಟು ಲೋಡ್ತಿ ಕಮಿಟಿ ಕಾರ್ಯದರ್ಶಿ,

ವರ್ತಮಾನ ಸಂಗ್ರಹ

ಒಳದೇಶ

ಕೊಡಗು ಕೌನ್ಸಿಲಿನ ಪ್ರೊಸೀಡಿಂಗ್ಸನ್ನು ಬರೆದುಕೊಳ್ಳಲಿಕ್ಕೂ ಮತ್ತು ಕೌನ್ಸಿಲ್ ಆಫೀಸಿನ ಕೆಲಸವನ್ನು ಮಾಡಲಿಕ್ಕೂ ಮಾಹೆಯಾನ 250—10—300 ರುಪಾಯಿ ಸಂಬಳದಲ್ಲಿ ಒಬ್ಬ ಶಾರ್ಟ್‌ಹ್ಯಾಂಡ್ ರಿಪೋರ್ಟರು ಬೇಕೆಂದೂ, ಇದಾದೆಯುಳ್ಳವರು ಸೆಪ್ಟಂಬರ್ 10ರೊಳಗೆ ಅರ್ಜಿಗಳನ್ನು ಕಳುಹಿಸಬೇಕೆಂತಲೂ, ಕಮಿಷನರವರು ಮದ್ರಾಸ್ ಪತ್ರಿಕೆಗಳಲ್ಲಿ ಪ್ರಕಟಿಸಿರುವರು

ಮೆ ಬಿದ್ದಂಡ ಕುಶಾಲಪ್ಪ, ಬಿ. ಎ ಯವರು ಉಪಾಧ್ಯಾಯರ ತರಬೇತಿಗಾಗಿ ತಾ 27ರಲ್ಲು ಮಡಿಕೇರಿಯಿಂದ ಇಂಗ್ಲೆಂಡಿಗೆ ಹೊರಟು ಹೋದರು ತಾ. 25ರಲ್ಲು ಮಡಿಕೇರಿ ಪಬ್ಲಿಕಿನವರು ಹೈಸ್ಕೂಲ್‌ಹಾಲಿನಲ್ಲಿ ಅವರಿಗೆ ಒಂದು ಟೀ ಪಾರ್ಟಿಯನ್ನು ಕೊಟ್ಟರು. ಆದರಲ್ಲಿ ಮೆ ಪಿ ಬಿ ಮೇದಪ್ಪಯ್ಯಂ ಎಲ್ ಸಿ ಯವರೂ, ಹೆಡ್ ಮಾಸ್ಟರು ಮೆ ಪಿ ಮಂಗೇಶರಾಯರೂ ಅವರ ಗುಣಗಳನ್ನೂ ಕೆಲಸಗಳನ್ನೂ ಶ್ಲಾಘಿಸಿ ಮಾತಾಡಿದ್ದಲ್ಲದೆ ಮೆ. ಸಿ ಎಸ್. ವೆಂಕಟೈಯ್ಯ, ಎಂ. ಎಲ್ ಸಿ ಯವರೂ ಮೆ ಮಂಗೇಶರಾಯರೂ ಅವರಿಗೆ ಹೂವಿನ ಹಾರಗಳನ್ನು ಹಾಕಿದರು ಇದಕ್ಕೆ ಉತ್ತರವಾಗಿ ತಾ. ಸ. ಇಂಗ್ಲೆಂಡಿಗೆ ಉಪಾಧ್ಯಾಯರ ತರಬೇತಿಗೆ ಹೋಗುವದಾದರೂ, ಅದಕ್ಕೆ ಮಾತ್ರವಲ್ಲದೆಂತಲೂ, ಯೂರೋಪಿನವರ ವಿದ್ಯಾಕ್ರಮಗಳನ್ನು ಶೋಧ್ಯವಾದಷ್ಟು ಮಟ್ಟಿಗೆ ತಿಳಿಯಬೇಕೆಂದಿದ್ದೇನೆಂತಲೂ ಮುಂತಾಗಿ ಕುಶಾಲಪ್ಪನವರು. ಒಂದು ಭಾಷಣವನ್ನು ಮಾಡಿದರು. ಒಂದೆರಡು ದಿವಸಗಳ ಮುಂಚೆ ಹೈಸ್ಕೂಲು ಬೋರ್ಡಿಂಗಿನ ವಿದ್ಯಾರ್ಥಿಗಳು ಇವರಿಗೊಂದು ಔತಣವನ್ನು ಕೊಟ್ಟರು.

ಕೊಡಗು ಲೆಜಿಸ್ಲೇಟಿವ್ ಕೌನ್ಸಿಲ್ ಮೀಟಿಂಗು ಸೆಪ್ಟಂಬರು ತಾರೀಕು 23ರಲ್ಲು ಪ್ರಾರಂಭವಾಗುವಂತೆ ಈಗ ನಿರ್ಣಯಿಸಲ್ಪಟ್ಟಿದೆ. ಕೆಲವು ದಿವಸಗಳಲ್ಲಿಯೇ ಇಂಗ್ಲೆಂಡಿನಿಂದ ಇಂಡಿಯಾಕ್ಕೆ ಬರಲಿಕ್ಕಿರುವ ಚೀಫ್ ಕಮಿಷನರವರು ಈ ತಾರೀಕನ್ನು ಒಂದು ವೇಳೆ ಬದಲಾಯಿಸಲೂ ಬಹುದು.

ಜೂಲೈ ತಾರೀಕು 26ರಲ್ಲು ಸೆಂಟ್ರಲ್ ಹೈಸ್ಕೂಲಿನ ಕೆಲವು ವಿದ್ಯಾರ್ಥಿಗಳು ಶ್ರೀ ಕಾವೇರಿ ಮೋಟಾರು ಸರ್ವೀಸಿನ ಬಸ್ಸಿನಲ್ಲಿ ಹೋಗುವಾಗ್ಯೆ ದಾರಿಯಲ್ಲಿ ಚಕ್ರವು 3, 4 ಸಾರಿ ಒಡೆದು ಹೋಗಿ ಹಿಚ್ಚಿನ ಚಕ್ರವು ಇಲ್ಲದ ಕಾರಣ ದಾರಿಯಲ್ಲಿಯೇ ನಿಂತು ಹೋದದ್ದರ ಮೇಲೆ ಸದ್ರಿ ವಿದ್ಯಾರ್ಥಿಗಳು. ಡಿ ಮೇಜಿಸ್ಟ್ರೇಟರವರಿಗೆ ಅರ್ಜಿ ಬರಕೊಂಡದ್ದರ ಫಲಿತಾಂಶವಾಗಿ ಆ ವಿದ್ಯಾರ್ಥಿಗಳೆಲ್ಲರ ಬಸ್ಸು ಚಾರ್ಜು ಆ ಕಂಪೆನಿಯವರಿಂದ ವಾಪಸು. ಅವರಿಗೆ ತಾ. 23ರಲ್ಲು ಕೊಡಲ್ಪಟ್ಟಿತ್ತೆಂದು ಅವರಲ್ಲೊಬ್ಬರು ತಿಳಿಸುತ್ತಾರೆ

ಗೋಣಿಕೊಪ್ಪಲು, ಹುದೂರು, ಹಾತೂರು ಇವೇ ಮೊದಲಾದ ಗ್ರಾಮಗಳಲ್ಲಿ ಸಿಡುಬು ತಲೆದೋರಿದೆ ಎಂದೂ, ಸದ್ರಿ ಗ್ರಾಮಗಳಲ್ಲಿರುವ ಜನರಿಗೆ ವೇಕ್ಸಿನೇಟರು ಡಾಕು ಹಾಕುತ್ತಲೇ ಇದ್ದಾರೆಂತಲೂ ವರ್ತಮಾನ

ದೇಶದ ಕೆಲವು ಭಾಗಗಳಿಗೆ ಕೆಲವು ದಿವಸಗಳಿಂದ ಮಳೆ ಇಲ್ಲದೆ ಆರಂಭವು ಬೇಸರದಲ್ಲಿ ಒದಗುತ್ತಿತ್ತು. ಆದರೆ ಈ ವಾರದಲ್ಲಿ ಮಳೆಯು ಪುನಹ ಸ್ವಲ್ಪಮಟ್ಟಿಗೆ ಪ್ರಾರಂಭಿಸಿರುವದರಿಂದ ಹಿಂದೆ ಬಿದ್ದಿರುವ ಆರಂಭಸ್ಥರಿಗೆ ಸ್ವಲ್ಪ ಮಟ್ಟಿಗೆ ಅನುಕೂಲವಾಗಿದೆ ಸಾಧಾರಣವಾಗಿ ಕೈಲ್ ಪೊಳುದು ಹಬ್ಬಕ್ಕೆ ನಾಟಿ ಕೆಲಸವು ಪೂರ್ತಿಸತಕ್ಕದ್ದು. ಆದರೆ ಈ ವರ್ಷದ ಮಳೆಯ ಅನಾನುಕೂಲದಿಂದ ಅನೇಕರ ಆರಂಭದ ಕೆಲಸವು ಕೈಲ್ ಪೊಳುದು ಹಬ್ಬವು ಕಳೆದನಂತರ ನಡೆಯಲಿಕ್ಕಿದೆ

ಕೊಡವರ ಹೆಚ್ಚಿನ ಜನರ ಕೈಲ್‌ಮುಹೂರ್ತ ಹಬ್ಬವು ಸೆಪ್ಟಂಬರ್ ತಾ|| 3ನೇ ಬುಧವಾರ ವಾಗುವದರಿಂದ ಆ ದಿನ ಕೋರ್ಟು ಕಚೇರಿಗಳಿಗೂ ಶಾಲೆಗಳಿಗೂ ರಜೆ ಇರುವುದು

ಮಳೆಯಾಳಕ್ಕೆ ಗಾಡಿಯು ಹೋಗದೆ ನಿಂತು ಹೋಗಿರುವುದರಿಂದ ದಕ್ಷಿಣ ಕೊಡಗಿನ ಸಂತೆಗಳಲ್ಲಿ ಅಕ್ಕಿಯ ಬೆಲೆಯು ಕಮ್ಮಿಯಾಗುತ್ತಾ ಇತರ ದಿನಸುಗಳ ಕ್ರಯವು ಏರುತ್ತಾ ಇದೆ ಮೈಸೂರಿನಲ್ಲಿ ಒತ್ತ ಖಂಡುಗಕ್ಕೆ 18ರಿಂದ 20 ರುಪಾಯಿ ವರೆಗೆ ಕ್ರಯವಿರುವುದರಿಂದ ಬಾಡಿಗೆ ಕಳೆದು ಗೋಣಿಕೊಪ್ಪಲು ಪ್ರಾಂತ್ಯಗಳ ಜನರಿಗೆ ಒತ್ತಗಾಡಿ ಒಂದಕ್ಕೆ 100 ರುಪಾಯಿ ಸಿಕ್ಕುವದು ಎಂದು ಅಲ್ಲಿಯವರೊಬ್ಬರುಬಾತ್ಮಿ

TO LET

Commodious unfurnished Bungalow at Somwarpet near the P W D. Inspection Bungalow. Sitting, dining, 2 bed, 2 dressing and 2 bath rooms Good situation Rs 44 per mensem

Apply,
Executive Engineer, P W.D
[3—1] Mercara.

ಹಿಂದೂ ದೇಶ

ಸ್ವರಾಜ್ಯ ಪಾರ್ಟಿಯವರ ಜನರಲ್ ಕೌನ್ಸಿಲಿನ ಮೀಟಿಂಗು ನಡೆದು ಮೆ ಸಿ ಆರ್ ದಾಸ್‌ರವರನ್ನು ಅಧ್ಯಕ್ಷರಾಗಿಯೂ ಮೆ. ಮೋತಿಲಾಲ್ ನೆಹರುರವರನ್ನು ಜನರಲ್ ಸೆಕ್ರೆಟರಿಯಾಗಿಯೂ ಮೆ ತುಲಸೀಚಾರನ್ ಗೋಸ್ವಾಮಿಯವರನ್ನು ಖಜಾನ್ಜಿಯಾಗಿಯೂ, ಮೆ ಎನ್. ಸಿ ಕೇಲ್ಕರ್, ಮೆ ಹಕೀಮ್ ಅಜ್ಮಲ್‌ಖಾನ್, ಮೆ ಜಲ್‌ಕಾ ಮೋಹನ್ಲಿ, ಮೆ ಎಸ್ ಶ್ರೀನಿವಾಸ ಅಯ್ಯಂಗಾರ್ ಮತ್ತು ಮೆ ಎಂ ಆರ್ ಜಯಕರ್, ಇವರು ಐದು ಜನರು ಎಗ್ಸಿಕ್ಯೂಟಿವ್ ಕಮಿಟಿಮೆಂಬರುಗಳಾಗಿಯೂ ಚುನಾಯಿಸಲ್ಪಟ್ಟಿರುವರು ಅಧ್ಯಕ್ಷರಿಗೆ ಇನ್ನು ನಾಲ್ಕು ಮೆಂಬರುಗಳನ್ನು ಎಗ್ಸಿಕ್ಯೂಟಿವ್ ಕಮಿಟಿಗೆ ನೇಮಿಸುವ ಹಕ್ಕಿದೆ

ತಾ|| 22ರಲ್ಲು ಮದ್ರಾಸು ಲೆಜಿಸ್ಲೇಟಿವ್ ಕೌನ್ಸಿಲಿನ ನೇಶನಲಿಸ್ಟ್ ಸಂಘದ ಮುಂದಾಳಾದ ಮೆ. ಸಿ ವಿ ಎಸ್ ನರಸಿಂಹರಾಜುರವರು, ಗತಿಸಿದ ಮೆ ಎಸ್ ಕಸ್ತೂರಿರಂಗ ಅಯ್ಯಂಗಾರ್‌ರವರ ಜೀವಗಾತ್ರದ ಪ್ರತಿಮೆಯನ್ನು ಮಹಜನಾ ಸಭಾದ ಹಾಲಿನಲ್ಲಿ ತೆರೆದರು ಅನೇಕ ಮುಂದಾಳುಗಳು ಹಾಜರಿದ್ದರು

ತಾ|| 21ರಲ್ಲು ಮದ್ರಾಸು ಯೂನಿವರ್ಸಿಟಿಯ ಕಾನ್ವೊಕೇಶನ್ ಅಂದರೆ ಗ್ರಾಜ್ಯುಯೇಟುಗಳಿಗೆ ಸರ್ಟಿಫಿಕೇಟ್ ಕೊಡುವ ಸಮಾರಂಭವು ನಡೆಯಿತು ಮದ್ರಾಸು ಸರ್ಕಾರದ ಎಗ್ಸಿಕ್ಯೂಟಿವ್ ಕೌನ್ಸಿಲಿನ ಕಾನೂನು ಮೆಂಬರಾದ ಮೆ ಸಿ. ಪಿ ರಾಮಸ್ವಾಮಿ ಅಯ್ಯರ್‌ರವರು ಡಿಗ್ರಿ ಪಡೆದವರಿಗೆ ಬೋಧನೆಯ ಉಪನ್ಯಾಸವನ್ನು ಕೊಟ್ಟರು

ಸುಧಾರಣೆಗಳನ್ನು ವಿಚಾರಿಸಲು ಹೊರಟಿರುವ ಕಮಿಟಿಯ ಮುಂದೆ ಮಾಜಿ ಮಂತ್ರಿಗಳಾದ ಮೆ ಚಿಂತಾಮಣಿ, ಮೆ. ಹರಿಕಿಶನ್ ಲಾಲ್, ಮೆ. ಎನ್. ಕೆ ಕೆಲ್ಕರ್‌ರವರೂ, ಬೊಂಬಾಯಿ ಕೌನ್ಸಿಲ್ ಮೆಂಬರಾದ ಮೆ ಪ್ರಧಾನ್ ಮೊದಲಾದವರೂ, ಈಗಿರುವ ದ್ವಿಮುಖ (ದಯಾರ್ಕಿ) ಸರ್ಕಾರವು ಮನುಷ್ಯ ಸ್ವಭಾವಕ್ಕೆ ವಿರೋಧವಾದದ್ದೆಂದೂ, ಅದು ಈಗಿನ ಕಲ್ಪನಟ್ಟಿ ಕ್ಕೆಲ್ಲಾ ಪೂರ್ತಿ ಅಪಜಯವಾಗಿದೆ ಎಂದೂ, ಇನ್ನು ತೆಗೆದು ಹಾಕಿ ಒಡನೆ ಪ್ರಾಂತಿಕ ಸರ್ಕಾರದವರಿಗೆ ಸ್ವರಾಜ್ಯ ಕೊಡಬೇಕೆಂದೂ ಮೊದಲಾಗಿ ನಿರ್ಭೀತಿಯಿಂದ ಹೇಳಿರುವರು ಇದನ್ನೆಲ್ಲಾ ನೋಡಿ ಈ ಕಮಿಟಿಯನ್ನು ಏರ್ಪಡಿಸಿದ್ದೇ ತಪ್ಪೆಂತಲೂ, ಇದೆಲ್ಲವೂ ಬರೀ ಆಟವೆಂತಲೂ, ಇದನ್ನು ಬೇಗನೆ ನಿಲ್ಲಿಸಿಬಿಡುವದು ಒಳ್ಳೆಯದೆಂತಲೂ ಆಂಗ್ಲೋ ಇಂಡಿಯನ್ ಪತ್ರಿಕೆಗಳು ಕೂಗಲಾರಂಭಿಸಿರುವವು

ಲಾರ್ಡ್ ಲಿಟ್ಟನ್‌ರವರು ಹಿಂದೀಸ್ತ್ರೀಯರಿಗೆ ಅವಮಾನಕರವಾದ ಮಾತುಗಳನ್ನಾಡಿದರ ವಿಷಯ ಪ್ರಶ್ನೆಗಳನ್ನೂ, ಠರಾವನ್ನೂ ಬಂಗಾಳ ಲೆಜಿಸ್ಲೇಟಿವ್ ಕೌನ್ಸಿಲಿನಲ್ಲಿ ಚರ್ಚೆಗೆ ತರಲು ಬಿಡಲಿಲ್ಲ ಈ ವಿಷಯದಲ್ಲಿ ಮಿಸಸ್ ಜೆ. ಡಬ್ಲ್ಯು ವರ್ಡ್ಸ್‌ವರ್ತ್‌ರವರು, ಲಾರ್ಡ್ ಲಿಟ್ಟನ್‌ರವರು ಹಿಂದೀ ಸ್ತ್ರೀಯರಿಗೆ ಕ್ಷಮಾಪಣೆಯ ಒಂದು ಪತ್ರವನ್ನು ಬರೆದು ಕೊಟ್ಟು ಇಂಗ್ಲೆಂಡಿಗೆ ಹಡಗು ಹತ್ತುವುದು ಉತ್ತಮವೆಂದು ಸೂಚಿಸಿರುವರು. ಬಂಗಾಳ ಕ್ರಿಶ್ಚಿಯನ್ ಸಂಘದವರೂ ಸಹ ಲಿಟ್ಟನ್ ಪ್ರಭುಗಳು ಕ್ಷಮಾಪಣೆ ಕೇಳಿಕೊಳ್ಳಬೇಕೆಂದು ಠರಾವು ಪಾಸು ಮಾಡಿರುವರು

ಅಸಹಕಾರ ಚಳವಳದ ವಿರೋಧಿಗಳ ಕಮಿಟಿಯ ಸೆಕ್ರೆಟರಿಯಾದ ಮೆ ಎಂ ಮುಕರ್ಜಿಯವರ ಅಧ್ಯಕ್ಷತೆಯಲ್ಲಿ ಕಲ್ಕತ್ತೆಯಲ್ಲಿ ಒಂದು ಪಬ್ಲಿಕ್ ಮೀಟಿಂಗು ನಡೆಯಿತೆಂದೂ, ಅದರಲ್ಲಿ "ಗವರ್ನರ್ ಲಿಟ್ಟನ್ ಪ್ರಭುಗಳು ಬಂಗಾಳ ಸ್ತ್ರೀಯರ ಮೇಲೆ ಎಂದೂ ಅಪಮಾನ ಹೊರಿಸಲಿಲ್ಲ ಅವರಿಗೂ ಬೇರೆಯವರಿಗೂ ಪಿಯವರಿಗೂ ಬಂಗಾಳದ ಸ್ತ್ರೀಯರಮೇಲೆ ಬಹಳಅಭಿಮಾನವಿದೆ ಹಿಂದೂ ದೇಶದಲ್ಲಿ ಭೂಂದೇಳಿಸುವ ಉದ್ದೇಶದಿಂದ ಸ್ವರಾಜ್ಯ ಸಂಘದವರು ಅವರಮಾತಿಗೆ ಕೊಟ್ಟ ಅರ್ಥವನ್ನು ವಿದ್ಯಾವಂತರಾದ ಬೇರೆಯಾರೂ ಒಪ್ಪಲಿಕ್ಕಿಲ್ಲ" ಎಂದು ಮಿಸ್ ಲೀಲಾ ಮುಕರ್ಜಿಯವರು ಹೇಳಿದರೆಂದೂ "ಇಂಗ್ಲಿಷ್‌ಮ್ಯಾನ್" ಪತ್ರಿಕೆಯು ಪ್ರಕಟಿಸಿದೆ.

ತಾ|| 22ರಲ್ಲು ಮಹಾತ್ಮ ಗಾಂಧಿಯವರು ಡೆಲ್ಲಿಯಿಂದ ಅಹ್ಮದಾಬಾದಿಗೆ ಹೊರಟುಬಂದರು ಡೆಲ್ಲಿಯಲ್ಲಿ ಹಿಂದೂ ಮುಸಲ್ಮಾನರ ಒಗ್ಗಟ್ಟಿಗಾಗಿ ನಡೆಯುತ್ತಿರುವ ಪ್ರಯತ್ನಗಳು ಇನ್ನೂ ಪೂರ್ತಿಯಾಗಿರುವದಿಲ್ಲ ಆದರೆ ಬೊದಲಿನಂತೆಯೇ, ಸದರಿ ಪ್ರಯತ್ನಗಳು ಕೈಗೂಡುವವೆಂಬ ಭರವಸೆಯು ತಮಗೂ ಇದೆಯೆಂದು ಹೇಳಿದರು

ಒಳ್ಳೇ ನಡತೆಗೆ ಜಾಮೀನುಕೊಡಲು ತಿರಸ್ಕರಿಸಿದ್ದರಿಂದ ಮೈಸೂರು ಸಿಟಿ ಮೇಜಿಸ್ಟ್ರೇಟರಿಂದ ಒಂದುವರ್ಷ ಸಾದಾ ಸಜೆ ವಿಧಿಸಲ್ಪಟ್ಟ ಮೌಲಾನ ಮಸ್ಲೀಹ್ ವಿಲೋಯಿಯವರನ್ನು ಮೈಸೂರಿನಿಂದ ತಾ|| 21ರಲ್ಲು ಎಲ್ಲಿಗೋ ಒಯ್ದರು. ಅವರ ಸಂಗಡ ಯಾರನ್ನೂ ಬಿಡಲಿಲ್ಲ

ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯ ತೀರ್ಮಾನದ ಮೇರೆ ತಾ|| 21ರ ವರೆಗೆ ಆಲ್ ಇಂಡಿಯಾ ಖಾದಿ ಬೋರ್ಡಿಗೆ 1501 ಕಾಂಗ್ರೆಸ್ ಕಮಿಟಿ ಮೆಂಬರುಗಳೂ, 757 ಮೆಂಬರುಗಳಲ್ಲದವರೂ ತಿಂಗಳು ಒಂದರ ತಮ್ಮ ತಮ್ಮ ಹಸೆಯಾದ 3000 ಗಜ ಚರ್ಕದ ನೂಲನ್ನು ಕಳುಹಿಸಿರುವರಂತೆ ಒಬ್ಬ ಯುವಕನು ಒಂದು ತಿಂಗಳಲ್ಲಿ 46,000 ಗಜ ನೂಲನ್ನು ಮಾಡಿರುವನಂತೆ

ಅಸ್ಸಾಮಿನ ಗವರ್ನರ್ ಪದವಿಗೆ ಸರ್ ಜಾನ್ ಕೆರ್‌ರವರನಂತರ, ಅಸ್ಸಾಮಿನ ಎಗ್ಸಿಕ್ಯೂಟಿವ್ ಕೌನ್ಸಿಲಿನ ಫೈನಾನ್ಸ್ ಮೆಂಬರಾದ ಸರ್ ವಿಲಿಯಮ್ ರೀಡ್‌ರವರನ್ನು ನೇಮಿಸಿರುವರೆಂದು "ಇಂಗ್ಲಿಷ್‌ಮ್ಯಾನ್" ಪತ್ರಿಕೆಯು ಹೇಳುತ್ತದೆ

ಬಂಗಾಳದ ಬರುವ ಕೌನ್ಸಿಲ್ ಮೀಟಿಂಗಿನಲ್ಲಿ ಮಂತ್ರಿಗಳ ಸಂಬಳಕ್ಕಾಗಿ 16,00,000 ರುಪಾಯಿ ಬಜೆಟ್ಟಿಗೆ ಮಂಜೂರಾತ್ಯದಬೇಕೆಂದು ಚರ್ಚಿಸಲ್ಪಡಲಿಕ್ಕಿರುವುದು

ಲಾರ್ಡ್ ಲಿಟ್ಟನ್‌ರವರು ಹಿಂದೀ ಸ್ತ್ರೀಯರಮೇಲೆ ಅಪಮಾನಕರವಾದ ಮಾತುಗಳನ್ನಾಡಿದ್ದಕ್ಕೆ ಕಲ್ಕತ್ತಾ ಪಟ್ಟಣದಲ್ಲಿ ಶ್ರೀಮತಿ ಸರೋಜಿನಿದೇವಿಯವರ ಅಧ್ಯಕ್ಷತೆಯಲ್ಲಿ ದೊಡ್ಡದೊಂದು ಪಬ್ಲಿಕ್‌ಮೀಟಿಂಗ್ ನಡೆದದ್ದರಲ್ಲಿಅಧ್ಯಕ್ಷರು, ಲಿಟ್ಟನ್‌ರವರಿಗೆ—'ಮುಲ್ಕುಗಾರನು ತನ್ನ ಸುಳ್ಳನ್ನು ವಾಪಾಸು ತೆಗೆದುಕೊಳ್ಳಲಿ, ಇಲ್ಲವಾದರೆ ಇಂಡಿಯಾದಿಂದ ಹೊರಟು ಹೋಗಲಿ ಎಂದು ಬಂಗಾಳದವರೆಲ್ಲರು ಒಗ್ಗಟ್ಟಾಗಿ ಹೇಳಬೇಕೆಂದೂ, ಮೋತಿಲಾಲ್‌ನೆಹರುರವರು, ' ಲಿಟ್ಟನ್‌ರವರು ಹಿಂದೀಯ ಸ್ತ್ರೀಯರಿಗೆ ಅವಮಾನದ ಮಾತುಗಳನ್ನಾಡಿದ್ದರೆ ಅವರು ಗ್ರಹಸ್ಥರಲ್ಲ, ಹೇಡಿಗಳು, ಅವರ ಯಜಮಾನರಾದ ನಮ್ಮಿಂದ ಪೂರ್ತಿ ಮಾಫಿ ಕೇಳಿಕೊಳ್ಳಬೇಕು, ಇಲ್ಲವಾದರೆ ಒಡನೆಇಂಡಿಯಾದಿಂದ ಹೊರಟು ಹೋಗಬೇಕೆಂದೂ' ಸಿ ಆರ್ ದಾಸ್‌ರವರು, ನಾವು (ಇಂಡಿಯಾ ದೇಶದವರು) ಬಲವಾಗಿದ್ದರೆ ಲಿಟ್ಟನ್‌ರವರು ಇಂಥಾ ಮಾತುಗಳನ್ನಾಡುತ್ತಲಿರಲಿಲ್ಲವೆಂತಲೂ, ಗವರ್ನರರಿಂದ ಇಂಥಾ ಅಪಮಾನವನ್ನು ನಾವು ಸುಮ್ಮನೆ ಸಹಿಸಿಕೊಳ್ಳಲಿಕ್ಕಿಲ್ಲವೆಂಬುದನ್ನು ಒಬ್ಬರಿಕ್ಕರಿಸಿಗೂ ಅವರ ಅನುಯಾಯಿಗಳಿಗೂ ಖಂಡಿತವಾಗಿ ತಿಳಿಸಬೇಕೆಂತಲೂ, ಈ ಮನುಷ್ಯನಿಂದಾಗಲಿ, ಯಾ ಅವನಿಗಾಗಿಯಾಗಲೀ ಏರ್ಪಡಿಸುವ ಸಮೂಹಿಕ ಸಮಾರಂಭಗಳಿಗೆ ಎಲ್ಲರೂ ಬಹಿಷ್ಕಾರ ಹಾಕಬೇಕೆಂತಲೂ, ತಮ್ಮ ತಮ್ಮ ಭಾಷಣಗಳಲ್ಲಿ ಹೇಳಿದರು ಈ ಸಮ್ಮಂಧ ರಂಗೂನಿನಲ್ಲಿ ಒಂದು ಪಬ್ಲಿಕ್ ಮೀಟಿಂಗು ನಡೆದು ಹಿಂದೀ ಸ್ತ್ರೀಯರಿಗೆ ಮಾಡಿದ ಅವಮಾನಕ್ಕೆ ಘೋರ ವಿರೋಧಿಸಿ, ಲಾರ್ಡ್ ಲಿಟ್ಟನ್‌ರವರು ದೊಡ್ಡ ಉದ್ಯೋಗಕ್ಕೆ ನಾಲಾಯಕ್, ಅಯೋಗ್ಯರೆಂದು ತೀರ್ಮಾನಿಸಿದರು,

[illegible]
ಕ್ಕೆಯೂ ಸರ್ಕಾರದವರನ್ನು ಕಾಳಿಕೊಳ್ಳಬೇಕಷ್ಟೇ?

ಕೌನ್ಸಿಲು ಮೆಂಬರುಗಳು ದೇಶದ ಲೋಕದಿಂದ ಆಳಿದವರಲ್ಲ ನಮಗೆ ಬೇಕಾದ ಸಂಗತಿಗಳನ್ನು ಆತರ ... ಸರ್ಕಾರಕ್ಕೆ ಅರುಹಿ ನಮ್ಮ ತೊಂದರೆಗಳನ್ನು ನಿವಾರಿಸಬೇಕಲ್ಲದೆ, ಹಿಂದು ಮುಂದಿನವರ ನಷ್ಟಿ ಬೇರೆ ಬೇರೆ ವಿಷ... ದೇಶದಲ್ಲಿ ಒಡಕು ತರಬಾರದು ಈ ಕಾರಣದಿಂದಲೇ ... ಸಭೆಯನ್ನು ಮುರಿದು ಹಾಕಲು ಕಾರಣವೆಂಬುದು ... ಎಲ್ಲರೂ ತಿಳಿದ ಸಂಗತಿಯಾಗಿದೆ

ಬಿ. ಪಿ. ಪೂಪಪ್ಪ.

ಸೋಮವಾರಪೇಟೆ ವಿಕ್ಟೋರಿಯ ಬಸ್ಸ್ ಸರ್ವಿಸ್ಸು.

ಸ್ವಾಮಿ,

ವಿಕ್ಟೋರಿಯ ಮೋಟಾರು ಸರ್ವಿಸ್ಸು ಸುಮಾರು ಕಾಲದಿಂದ ನಡೆಯುತ್ತಾ ಇದೆ ಈ ಕಂಪೆನಿಯವರು ಈ ಸರ್ವಿಸ್ಸನ್ನು ಶ್ರೀಪತಿ ನಾಕಪ್ಪನವರಿಂದ ಪಡೆಕೊಂಡರು ನಾಕಪ್ಪನವರ ಸ್ವಾಧೀನದಲ್ಲಿದ್ದಷ್ಟರ ವರೆಗೆ, ಈ ಸರ್ವಿಸ್ಸು ಬಹಳ ಚೆನ್ನಾಗಿತ್ತು ಬಸ್ಸುಗಳು ಸಹ ಗಟ್ಟಿಮುಟ್ಟಾಗಿದ್ದವು.

ಈಗ ವಿಕ್ಟೋರಿಯಾ ಸರ್ವಿಸ್ಸಿನವರು ಬಸ್ಸುಗಳನ್ನು ನಡೆಸಿ ನಡೆಸಿ ನಡೆಸಿರುತ್ತಾ, ದುಷ್ಟಿನ ಮೇಲೆ ನಿಗ ಇಟ್ಟಿದ್ದು, ಆವುಗಳನ್ನು ಉತ್ತಮ ಸ್ಥಿತಿಯಲ್ಲಿಟ್ಟಿರುವುದಿಲ್ಲ ಪ್ರಯಾಣಿಕರಿಗೆ ಇವುಗಳಲ್ಲಿ ಕೂರುವುದಕ್ಕೆ ಹೆಚ್ಚು ಭಯ ಅಷ್ಟು ಪಕಿವಾಗಿವೆ. ಇವುಗಳನ್ನೇ ಉಪಯೋಗಿಸುತ್ತಾ ಇದ್ದರು ಒಂದು ದಿನವಲ್ಲ, ಒಂದು ದಿನ, ಬೊಗಳೆಬಿಡ ಬಸ್ಸಿನ ಬಸ್ಸುಗಳಲ್ಲಿ ಪ್ರಯಾಣಿಕರು ಸಹ ಬಡಬಡನೆ ಉರುಳುವರು.

ವಿಕ್ಟೋರಿಯ ಮೋಟಾರುಗಳು ಇಂಥಾ ಅಪಾಯಕರ ಸ್ಥಿತಿಯಲ್ಲಿದ್ದಾಗ್ಯೂ, ಸಂಗಿಕೊಪ್ಪಲು ಸಂತೆಗೆ ಅನೇಕಾವತಿ- 20.23 ಮಂದಿ ಪ್ರಯಾಣಿಕರನ್ನು ಕೂರಿಸಿಕೊಂಡು ಹೋಗುತ್ತಿದ್ದರು ಕಳೆದ ವಾರ ಆಕಾಸ್ಮಾತ್ತಾಗಿ ಪೋಲೀಸಿನವರು 20.23 ಮಂದಿ ಕೂರಿಸುವುದು ರೂಲ್ಸಿಗೆ ವಿರೋಧವೆಂದು ಬಸ್ಸಿ ಮೇಲೆ ಮಹಜರ್ ಮಾಡಿದರು ಈ ಮಹಜರಿಗೆ ಮಡಿಕೇರಿಯ ಅನೇಕ ಜನರು ಅಂಗಡಿಯವರು ಸೈನು ಮಾಡಿದ್ದಾರೆ ಪೋಲಿಸ ಸರ್ವಿಸ್ಸಿನವರಿಗೆ, ಸೈನು ಮಾಡಿದ ವಿಷಾರ ತಿಳಿದು, ಆ ಜನ ಪ್ರಾಮಾಣಿಕರಿಗೆ ಟಿಕೇಟು ಕೊಡದ ಹಾಗೆ ಏರ್ಪಾಡು ಮಾಡಿದರು.

ಇದೇ ತಾರೀಕು 17ನೇ ಆದಿತ್ಯವಾರ ಮಹಜರಿಗೆ ಸೈನು ಮಾಡಿದವರ ಪೈಕಿ ... ತಿಳಿದು ಸಂತೆಗೆ ಹೋಗ ... ಮಡಿಕೇರಿ ... ವ್ಯಾಪಾರಿಗಳು, ಮಹಜರ್ ಸೈನ್ ... ಗಂಟ್ಟೆ ... ಟಿಕೇಟು ಕೊಡಲು ... ಒಂದು ಬಸ್ಸು ... [illegible]

[illegible]

... ಪ್ರಯಾಣಿಕರಿಗೆ ಕೊಂದರೆಯಾಗದಂತೆ ... ಹೋಗುವುದು ... ಪ್ರತಿಗಳ ... ಕೋರುವ ... ಪ್ರಯೋಜನವೇನು? ಇನ್ನು ಮುಂದೆ ಈ ಸರ್ವಿಸ್ಸಿನವರು ... ಸರ್ವಿಸ್ಸು ನಡೆಸ ... ಬಾರದೆಂದು ಭಾವಿಸುತ್ತೇನೆ

ವ್ಯಾಪಾರಸ್ಥ.

"ಭವಿಷ್ಯತ್ಪಿಶಾಚ"

ಮಹಾಶಯರೇ!

ಈ ವಿಷಯವಾಗಿ ತಾರೀಖು 15-8-21ನೇ ಪತ್ರಿಕೆಯಲ್ಲಿ ಕೊಡಲ್ಪಟ್ಟ ಒಂದು ವರ್ತಮಾನವು ಒಬ್ಬ ಆಶ್ಚರ್ಯವನ್ನುಂಟುಮಾಡುತ್ತದೆ ಇದು ಹೊರಟಂದಿನಿಂದ ಹಳ್ಳಿ ನಾಡುಗಳಲ್ಲಿ "ಇನ್ನು ಒಂದು ವರ್ಷದೊಳಗ ಏನೋ ಒಂದು ಅಪಾಯಕರ ಸಂಭವಿಸುತ್ತದೆಂದೂ ಆ ಸಮಯದಲ್ಲಿ ನಾವು ಎಲ್ಲಿಯೋ? ಎಲ್ಲಿರುತ್ತೇವೆಯೋ? ಸಾಯುತ್ತೇವೆಯೋ? ಉಳಿಯುತ್ತೇವೆಯೋ? ಈಗ ಏಕೆ ಕಷ್ಟ ಪಟ್ಟು ಕಳಸ ಮಾಡಬೇಕು? ಮುಂದೆ ಏನೋ ಏನಪ್ಪೋ?" ಎಂದು ಮುಂತಾಗಿ ಜನರು ಅಂದುಕೊಳ್ಳಲು ಸುರುಮಾಡಿದ್ದಾರೆ ಎಂತೂ ಈ ವಿಷಯದ ಪತ್ರಿಕೆ ಹಳ್ಳಿಗಳೇ ತುಂಬಿಕೊಳ್ಳಿಗವೆ ಆ ಕುರಿತು ವಿಚಾರಿಸಿ, ಇದರ ನಮ್ಮ ತಿಳುವಳಿಕೆಗೆ ಬಂದಷ್ಟು, ಶಾಸ್ತ್ರ ಪುರಾಣಾದಿಗಳ

... ಜ್ಯೋತಿ ಶಾಸ್ತ್ರ ... ಬೃಹಸ್ಪತಿ ... ಸಂಭವಿಸುವುದು. ... ಈ ಭವಿಷ್ಯತ್ಪಿಶಾಚಾರವಾಗಿ ಯುಗನಾಶನ ದಿನವು ನ ಕಾಲವೂನ ಮತ್ತು ಆಯಾ ಸಮಯದಲ್ಲಿ ನಡೆಯುವ ... ದಾದ ವಿಚಾರ ಮುಂತಾದ್ದು ವಿಸ್ತರವಾಗಿ ಲೇಖಿಸುವುದಾದರೆ ಪತ್ರಿಕಾ ವಿಸ್ತರ ಭಯದಿಂದ ಸ್ವಲ್ಪವಾಗಿ ಲೇಖಿಸಿಗೆ ವಿಶ್ವಾಸ ಕೊಡಬೇಕಾಗಿದೆ ಆ ತಮಿಳು ಗ್ರಂಥದ ಪ್ರಕಾರ ಮನ್ವಂತರ ದಿನ ಪಂಚಾಂಗದೇ ಬದಲಬೇಕಾದರೆ ಎಷ್ಟೋ ಇತರ ಜ್ಯೋತಿಷ್ಯ ಗ್ರಂಥಗಳು, ಅಷ್ಟಾ ದಶ ಪುರಾಣ, ಉಪ ಪುರಾಣ, ಧರ್ಮ ಶಾಸ್ತ್ರ ಸ್ಮೃತಿ, ಇತಿಹಾಸಾದಿಗಳೂ ಇವು ಸುಳ್ಳಾಗಬೇಕಾಗಿ ಬರುತ್ತದೆ ಇಲ್ಲವೆ ಅವು ಅವರೊಡನೆ ಹಿಂಬಾಲವು ತಯಾರಿಸುತ್ತವೆ ಭೂಕಂಪವು ಸುಮಾರು ವರ್ಷದಲ್ಲೇ ಆಗುತ್ತಾ ಬರುತ್ತದೆ ಹಾಗೆಯೇ ಬರಗಾಲ, ಅತಿವೃಷ್ಟಿ, ಅನಾವೃಷ್ಟಿಗಳು ಕಲವು ಕಡೆಗಳಲ್ಲಿ ಬದಗಿಕೊಂಡು ಬರುತ್ತವೆ ಹಾಗೆಯೇ—ಅನ್ಯ ಮಂದಿಗೆ ಆದರೆ ಒಂದು ವಿಶೇಷವಲ್ಲ. 1884ರಲ್ಲಿ ಪ್ರಿಟನರು ಬರ್ಮ ರಾಜನನ್ನು ಹಿಡಿಯುವ ಸಮಯ ಒಂದೇ ಉಸಳಿಗೆ ನಕ್ಷತ್ರಗಳು ಬೀಳುತ್ತಿದ್ದವು ಅದೇ ಸುಮಾರು, 1882 1883ರಲ್ಲಿ ಧೂಮಕೇತುವು ಎದ್ದಿತ್ತು ಇನ್ನು ಬರುವ 1925ನೇ ಇಸವಿಯಲ್ಲಿ ಶನಿಯು ವೃಶ್ಚಿಕರಾಶಿಯಲ್ಲಿ ಸಂಚಾರಮಾಡುವವನಾದ್ದರಿಂದ ಉತ್ಪಾತ ಲಕ್ಷಣಗಳನ್ನು ಹೇಳಬೇಕಾದದ್ದು ವಾಸ್ತವ ಬಾಲಚುಕ್ಕೆಯು ದೃಶ್ಯ ಸಂಭವನಿದ್ದರೂ ಎಲ್ಲಾ ಭಾಗಕ್ಕೂ ದೃಶ್ಯವೆಂದು ಹೇಳಲು ಸಾಧ್ಯವಿಲ್ಲ ಕಲಿಯುಗವು 432000 ಇದರ ದ್ವಿಗುಣ ದ್ವಾಪರ, ಇದರ ದ್ವಿಗುಣ ತ್ರೇತ, ಇದರ ದ್ವಿಗುಣ ಕೃತ, ಇಂಥಾ ಯುಗಗಳು 71ಕ್ಕೆ ಒಂದು ಮನ್ವಂತರ, ಇಂಥಾ ಮನ್ವಂತರ 14ಕ್ಕೆ ಒಂದು ಕಲ್ಪ, ಈ ಕಲ್ಪವೇ ಪ್ರಳಯಕಲ್ಪ ಈ ಕಲ್ಪಕ್ಕೆ ಸಂಧ್ಯಾಂಶಕೂಡಿ ಸಾವಿರ ಯುಗಗಳಾಗುತ್ತವೆ ನಾಲ್ಕುಯುಗಗಳಿಗೆ ವರ್ಷ 1877917500 ಹಾಗೆಯೇ ಕಲ್ಪ ಭೂದಿನಗಳು 1877917500000 ಆಗುತ್ತವೆ ಈ ದಿನಗಳು ಸಿದ್ಧಾಂತಾನುಸಾರ ಸ್ವಲ್ಪ ಹೆಚ್ಚು ಕಡಮೆ ಇರುವದಾದರೂ, ವರ್ಷಗಳೂ, ಯುಗ, ಮನ್ವಂತರ, ಕಲ್ಪಗಳ ಸಂಖ್ಯೆಗಳು ಎಲ್ಲಾ ಮತಾನುಸಾರವೂ ಒಂದೆ ಆ ಪ್ರಕಾರ ಈಗ ಆರು ಮನ್ವಂತರಗಳು ದಾಟಿ ಏಳನೆಯವನಾದ ವೈವಸ್ವತ ಮನುವಿನ ಕಾಲದಲ್ಲಿ ಇಪ್ಪತ್ತೇಳು ಯುಗಗಳು ಕಳೆದು ಈಗ ಇಪ್ಪತ್ತೆಂಟನೆಯ ಕಲಿಯುಗ ನಡೆಯುತ್ತಿದೆ ಈಗ ಶ್ವೇತವರಾಹ ಕಲ್ಪದಲ್ಲಿ ಕಲ್ಪಾದಿ ಬ್ರಹ್ಮನ ಆಯುಷ್ಯ ನೂರು ವರ್ಷದ ಪೂರ್ವಾರ್ಧ 50 ದಾಟಿ ಅಪರಾರ್ಧದ ಸಮಯವಾಗಿದೆ ಇನ್ನು ಈ ಮನ್ವಂತರದ ಅರ್ಧವಾಗಲಿಲ್ಲ ಅಂದ ಮೇಲೆ ಬರಲೀ ಮನ್ವಂತರದ ಸಂಧಿ ಕಲ್ಪಾಂತ್ಯ ... ಈ ಗ್ರಂಥದಲ್ಲಿ ಹೇಳುವದೆಲ್ಲವೂ ಮನ್ವಂತರ ಒದಗಾಗುವ ಕಾಲದಲ್ಲಿ ಉಂಟಾಗತಕ್ಕದ್ದು ಸಹಜ ... ಪ್ರಕೃತಿ ಮೂರೇ ದಿನವಷ್ಟೆ! ... [illegible]

... ಒಂದು ... ಬ್ರಹ್ಮ ... ಅನಂತರ ... ಈ ತಮಿಳು ಗ್ರಂಥವನ್ನು ಹೇಳುವದಲ್ಲದೆ ವಿಶೇಷ ಹೇಳ ... ಬಲ್ಲವು ಇಂದ್ರಜಾಲವೆ

ಕಲಿಯುಗದ ಪ್ರತಿ 5000 ಸಾವಿರ ವರ್ಷಕ್ಕೂ ಹೀಗೆ ಆಗುವದುಂಟು ... ಈ 5000 ಸಾವಿರ ವರ್ಷದಲ್ಲಿ ಬ್ರಹ್ಮನ ಒಂದು ಭಾಗವಾದ ಸಾವಿರದ ಇಪ್ಪತ್ತೈದನೆಯ ವರ್ಷದ ವರೆಗೆ ಕೃತ ಧರ್ಮವೂ, ಆ ಮೇಲೆ ತ್ರೇತಾ ಧರ್ಮವೂ, ಅಗಂತರ ದ್ವಾಪರ ಧರ್ಮವೂ ಮತ್ತೆ ಕಲಿಧರ್ಮವೂ ನಡೆಯುತ್ತದೆ ಈ ಕಲಿಧರ್ಮದಲ್ಲಿ ಹೀಗೆ ಹೀಗೆಯೇ ನಡೆಯುತ್ತೆಂಬುದನ್ನು ವೇದಲೇ ಪೂರ್ವಾಚಾರ್ಯರು ಬರೆದಿರುತ್ತಾರೆ ಅದನ್ನು ಈಗ ನೋಡಿದರೆ ಈ ಯುಗ ಕಳೆದದ್ದು, ನಡೆಕೊಂಡ ಒಂದದ್ದು ಸರಿಯಾಗಿಯೇ ಕಾಣುತ್ತದೆ ಈಗ ಕಲಿಯ 5025 ಎಂದು ಕಲಿಧರ್ಮವು ಕಲಿ 4750ರಲ್ಲಿ ಸುರುವಾಗಿದೆಂದು ಕಾಣುತ್ತದೆ ಇನ್ನು ಆ ಧನ ... ಪರ್ಯಂತ ವರೆಗೆ ಇದೆ ಹೆಚ್ಚಿನ ವಿಷಯ ಸ್ಕಂದ ಪುರಾಣ, ಆದಿತ್ಯ ಪುರಾಣ, ಕಲಿಮಹಾತ್ಮೆ ಮುಂತಾದ್ದನ್ನು ನೋಡಿಕೊಂಡರೆ ಸ್ಪಷ್ಟವಾಗುತ್ತದೆ ಆದರಿಂದ ... ಎಲ್ಲಿ ... ಪತ್ರಿಕೆಯ ಭವಿಷ್ಯತ್ತು ... ಸಜ್ಜನಗಳೆಲ್ಲವೂ ... ನಾದಂಥವರಿಗೆ ... ಮಹಾಶಯರುಗಳು ಮರೆತಿರಬಾರದು.

ಪಿ. ವಿಷ್ಣು ಮೂರ್ತಿ,
ಬಿಳಿಗೇರಿ.

ಸರಸ್ವತಿ

ಉತ್ತಮವರ್ಗದ ಶ್ರೇಷ್ಠವಾದ ಕನ್ನಡ ಮಾಸಪತ್ರಿಕೆ.

ಇದರಲ್ಲಿ ಬಾಲಕ ಬಾಲಿಕೆಯರಿಗೂ ಸ್ತ್ರೀಯರಿಗೂ ತಿಳಿಯು ವಂಥ ಸುಲಭವಾದ ಶೈಲಿಯಲ್ಲಿ ಸ್ವಾರಸ್ಯವಾದ ನಾಟಕ ಕಾದಂಬರಿಗಳೂ ಮತ್ತು ಅನೇಕ ಉತ್ತಮ ಲೇಖನಗಳೂ ಪ್ರಕಟಿಸಲ್ಪಡುವವು. ಹೊಸದಾಗಿ ಚಂದಾದಾರರಾಗತಕ್ಕವರು ಚಂದಾ ಹಣವನ್ನು ಮುಂಗಡವಾಗಿ ಕಳುಹಿಸಿ ಕೊಟ್ಟರೆ ಶಾರದಾ ಗ್ರಂಥ ಮಾಲೆಯ ಪ್ರಕಟಣೆಯಲ್ಲಿ 1 ಪುಸ್ತಕವು ಬಹುಮಾನವಾಗಿ ಕೊಡಲ್ಪಡುವದು ಇಷ್ಟ ಪಟ್ಟವರಿಗೆ ಮಾದರಿ ಸಂಚಿಕೆಯು ಉಚಿತವಾಗಿ ಕಳುಹಿಸಲ್ಪಡುವದು.

ವಾರ್ಷಿಕ ಚಂದ ರೂ 3—0—0 ಮಾತ್ರ.

SARASWATHI PUBLISHING Co,
Post Box No 57, Bangalore City.

For your requirements of high grade Arms, Ammunition, Wine and spirits.

APPLY TO —

Mc. Dowell & Co., Ltd.

[24—19] MERCARA.

Health is Wealth.

WANTED all to improve health strength and vitality and thus save our nation from physical degeneracy. Send half anna stamp and get 23 specimen photographs with full particulars from

Director, Physical Culture,
P O BASAVANAGUDI,
Bangalore City.

ಆರೋಗ್ಯ ಚಂದ್ರಿಕೆ,

ಮದ್ರಾಸ್.

ಸಂಪಾದಕರು ಡಾಕ್ಟರ್ ಯು ರಾಮರಾವ್,
ಎಮ್ ಎಲ್ ಸಿ. ಯವರು

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಚಿಕಿತ್ಸೆಯ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ ಈ ಮಾಸಪತ್ರಿಕೆಯು ಪಸ್ತ ... ಇಂಗ್ಲಿಷ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ ಪ್ರಕಟವಾಗುವವು.

ಆರೋಗ್ಯ ಚಂದ್ರಿಕೆಯಲ್ಲಿ ನ ಲೇಖನಗಳು ಹಲವು ಗಹನ ... ಉಪಯುಕ್ತವಾದವುಗಳಾಗಿರುವವು. ಆರೋಗ್ಯ ಚಂದ್ರಿಕೆಯನ್ನು ... ಒಟ್ಟು ಕೂಡಿಸಿ ... ಅಮೂಲ್ಯವಾದ ಗ್ರಂಥವಾಗುವದು ವಾರ್ಷಿಕ ವರ್ಗಣಿ ಈ ಪತ್ರಿಕೆಯ ಚಂದಾ ಪೋಸ್ಟು ವಸ್ತ್ರ 1-8-0 ಬಿಡಿ ಪತ್ರಿಕೆ 1ಕ್ಕೆ 0-2-0 ಪಂಚಿನ ನಾಣ್ಯಗಳು ಕೊಡದಾ ದೊರೆಯುವವು.

ಪತ್ರವ್ಯವಹಾರ 'ಆರೋಗ್ಯ ಚಂದ್ರಿಕೆ 323,
ತಂಬುಚೆಟ್ಟಿ ಬೀದಿ, ಮದ್ರಾಸ್.

ARMS & AMMUNITION MART.

Mahomedally-Noorbhoy.



337, Abdul Rehman, Street, near Crawford Market, BOMBAY.

Telegraphic Address:-"SHOOTER" Bombay.

Please write for latest Catalogues.

ಮಲೆಯಾಳ ವೈದ್ಯಶಾಲಾ

ವೈಶಿಷ್ಟ್ಯ ನಂ ... ವೈದ್ಯ ... ಆಯುರ್ವೇದ ವೈದ್ಯ ... ಒಂದು ... ಪರಿಹಾರ ... ದ್ರವ್ಯಗಳಲ್ಲಿ ... ಇಲ್ಲಿ ಯಾವ ವಿಧದ ಕಾಯಿಲೆಯಾಗಿದ್ದರೂ ... ದಿಂದ ... ಔಷಧಿಕೊಟ್ಟು ಗುಣಪಡಿಸಲ್ಪಡುತ್ತೆ. ... ಬೇಕಾದವರು ಈ ... ವನ್ನು ... ತಿಳಿದುಕೊಳ್ಳಬಹುದು.

ನಾರಾಯಣ ... ,
... ವೈದ್ಯರು
5—12 ...

ಕಲ್ಪತರು ಕಾರ್ಯಾಲ

... ಸಂ ... ಯಾಗಿ ... ದಲ್ಲಿ ... ಪ್ರತಿ ... ಮತ್ತು ... ಕಲ್ಪತ ... ಇದ್ದ ... ಪೂರ್ಣ ... ಗುಣ ... ಗುಣಪಡಿಸುವದರಲ್ಲಿ ...

... ಕಲ್ಪತರು ...

[24—5] ಪೋ ಸೋಮವಾರಪೇಟೆ ...

ಜೀವವಿಮೆ

... ಸಂಸಾರದಲ್ಲಿ ... ಮುಖ್ಯ ... ತಿನ ವ್ಯಕ್ತಿ ... ನಿವಾರಿಸುವುದೇ ಜೀವವಿಮೆ

ವೃದ್ಧಾಪ್ಯಕಾಲದಲ್ಲಿ ಸುಸ್ಥಿತಿ ಕುಟುಂಬದ ಜೀವನಾಧಾರಕ್ಕೆ ಸಾಧನವನ್ನು ಒದಗಿಸುವದೇ ಜೀವವಿಮೆ

ಅತಿ ಕಡಮೆ ದರದಲ್ಲಿ ಯಾವ ಲೋಪವೂ ಬಾರದಂತೆ ಕ್ಷಿಪ್ರದಲ್ಲಿ ಹಣವನ್ನು ಒದಗಿಸುವ ಸಂಸ್ಥೆಯಾದರೂ ... ಸರಕಾರದ ...

ಒದುಕಿರುವಾಗಲೇ ಕುಟುಂಬದ ಜೀವನಾಧಾರಕ್ಕೆ ಸಾಲ ... ಹಣವನ್ನು ... ದೇಶದ ಆರ್ಥಿಕ ಸಂಪತ್ತನ್ನ Economic condition ವೃದ್ಧಿಗೊಳಿಸುವ ಸಂಸ್ಥೆಯಾದರೂ ಇದೊಂದೇ!

... ಇಂಡಿಯಾ ಗವರ್ನಮೆಂಟು ಸೆಕ್ಯೂರಿಟಿಗಾಗಿ ... 12 ಲಕ್ಷ ... ಸೆಕ್ಯೂರಿಟಿ ... 1 ಲಕ್ಷ ... ಸೆಕ್ಯೂರಿಟಿಗಾಗಿಯೂ ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯಾ ಬ್ಯಾಂಕಿನ ಮದ್ರಾಸಿನ ... 1 ಲಕ್ಷ ... ಸೆಕ್ಯೂರಿಟಿಯನ್ನು ... 1 ಲಕ್ಷ ... ಗವರ್ನಮೆಂಟ್ ಸೆಕ್ಯೂರಿಟಿಗೆ ... ಮಾಡಿರುತ್ತೆ

...
...

ಪ್ರಕಟಣೆ

ಕೊಡಗು ಸೆಂಟ್ರಲ್ ಕೊಆಪರೇಟಿವ್ ಬ್ಯಾಂಕು ಲಿಮಿಟೆಡ್
... ಪ್ರಕಾಶ ಪಡಿಸಲ್ಪಡುತ್ತಾಗಿದೆ.

	ರೂ
ಶೇರ್ ಬಂಡವಾಳ	50,000
...	7 720
...	61 200

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೆ ... ಸಾಲ ಕೊಡಲ್ಪಡುತ್ತೆ

... 6—4 ರ ... ದರದಲ್ಲಿ ...

...

ಪ್ರೆಸಿಡೆಂಟರು, ಟ್ರೆಜರರ್
...
ಸೆಕ್ರೆಟರಿ
... ಬಿ.ಎ, ಬಿ.ಎಲ್
ತಾರೀಖು 1—7—1924.

SEE OUR

Arms And Ammunition Advertisement.

SPENCER & Co , Ltd , [24—
Mount and Pollibetta Co g

When you think of going to Bombay
THINK OF

THE WELCOME HOTEL

Girgaum Back Road, BOMBAY.

Most airy accomodation—Most central situation—Excellent Meals
Every convenience

ದಿ ವೆಲ್ಕಮ್ ಹೋಟೇಲ್.

ಗಿರ್ಗಾವ್ ಬ್ಯಾಕ್ ರೋಡ್, ಬೊಂಬಾಯಿ.

... ಸ್ವಚ್ಛವಾದ ತಿಂಡಿ ... ಯೋಗ್ಯ ... ಯೋಗ್ಯವಾದ ... ಕೇವಲ 15 ಮಿನಿಟಿನೊಳಗೆ ... ಪ್ರಯಾಣಿಕರಿಗೆ ...

... ಶ್ರೀನಿವಾಸರಾವು
ಮೇನೇಜರ್

[24—12]

ಸಂಪತ್ತಿಯ ಸಾಧನಗಳು

... ಕತ್ತಿ ... ಪತ್ತಿಯ ... ಸಾಧನಗಳು ...

... ಕಿಲೋಸ್ಕರ ವ್ಯವಸಾಯದ ಉಪಕರಣಗಳು ಯೋಗ್ಯವಾದ ಸಾಧನಗಳು



... ಕೊಂಡಿರುವರು ... ಒಂದು ಗಂಟೆಗೆ ...

... ಕಿರ್ಲೋಸ್ಕರ ...

[10 11] ಕಿರ್ಲೋಸ್ಕರ ...

...

ಅಯ್ಯಾ,

... ಒಂದು ... ಆಗಿದ್ದು, ನಂತರ ... ಔಷಧಾಲಯದಿಂದ ... ನಾರಾಯಣ ರಾಯರನ್ನು ಕರೆಸಿ ಪರೀಕ್ಷಿಸಿ ... ನಾನು ಗುಣ ...

... 8 ದಿನಗಳೊಳಗ ... ಚಿಕಿತ್ಸೆಯನ್ನು ... ನನ್ನ ... ಪತ್ರಿಕೆಯಲ್ಲಿ ಪ್ರಕಟಿಸಿರುತ್ತೇನೆ ... ಔಷಧಿಯನ್ನು ... (?) ಶ್ರೀ ... ನಾರಾಯಣರಾಯರಿಗೆ ಆಯುರಾರೋಗ್ಯ ಐಶ್ವರ್ಯಾಭಿವೃದ್ಧಿಯನ್ನು ಕೊಟ್ಟು ರಕ್ಷಿಸಲಿ ಎಂದು ... ಪ್ರಾರ್ಥಿಸುತ್ತೇನೆ ತಾರೀಖು 16-8-24

ಮಡಿಕೇರಿ ... ಎನ್ ಎಸ್ ಸುಬ್ಬಯ್ಯ,
"ಪ್ರಕಟಣೆ", ...
[12 1]

Printed & published by Kodand Appayya, R.B , Chairman, Board o Directors, at " Kodigu " Press, Mercara for " Kodagu" Ltd,

Reg. No. M. 1550.
If not delivered please return to
"KODAGU" OFFICE, MERCARA

ಕೊಡಗು.

ಸತ್ಯೇನ ಧೂತದಯಯಾ ವಿದ್ಯಾ [illegible] ||

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ವಾರ್ಷಿಕ ಚಂದಾ ರೂ. ೩—೦—೦

ಎಡಿಟರ್ ಪಂದ್ಯಂಡ ಐ. ಬೆಳ್ಯಪ್ಪ.

ಸಂಪುಟ ೪] ಕೊಡಗು, ಸನ್ ೧೯೩೪ನೇ ಇಸವಿ ಸೆಪ್ಟಂಬರ್ ತಾರೀಕು ೧೪ನೆಯ ಶುಕ್ರವಾರ [ಸಂಚಿಕೆ ೧೪

ಒಳ್ಳೆ ಸಮಯ!

ಕೊಂಡುಕೊ[illegible] ಒಂದು ತಿಳಿದಿದ್ದರೆ ಸಾಕು.

ಇನ್ಸ್‌ಪೆಕ್ಟರುಗಳು ಮಾಡುವಾಗ ರೂ. 40, ಪ್ಲಸ್ 20ರಿಂದ ರೂ. 75 ಪ್ಲಸ್ 25 ವರೆಗೆ ಸಂಬಳದಿಂದಲೂ ಮತ್ತು ಸಬ್ ಇನ್ಸ್‌ಪೆಕ್ಟರುಗಳು ರೂ. 30, ಮತ್ತು ಕಮಿಷನಿಂದ ಖಾಯಂ ಪಟ್ಟಿಕೆಯಾಗಿ ಕೆಲಸ ಮಾಡತಕ್ಕವರು ಬೇಕಾಗಿದೆ. ಬಾಕಿ ಸಂಗತಿಗಳಿಗೆ ಬರೆಯಿರಿ.

ಟಿ. ಸರವನ ಕಂಪನಿ
ಚೀಫ್ ಏಜಂಟರುಗಳು,
ದಿ [illegible]
[illegible]
[illegible]

4—4

ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ
ಜೀವವಿಮೆಯ ಕಂಪನಿ, ಲಿಮಿಟೆಡ್,
ಹೆಡ್ ಆಫೀಸ್, ಬೊಂಬಾಯಿ.

ಹಿಂದುಸ್ಥಾನದಲ್ಲಿ ಈಗ 50 ವರ್ಷಗಳಿಂದಲೂ ಜೀವ ವಿಮೆಯ ಅನುಭವವನ್ನು ಹೊಂದಿರುವ ದೇಶೀಯ ಜೀವವಿಮೆ ಸಂಸ್ಥೆಗಳಲ್ಲಿ ಅತ್ಯಂತ ದೊಡ್ಡದೂ ಮತ್ತು ಭದ್ರವಾದದ್ದೂ ಆದ "ಓರಿಯಂಟಲ್" ಜೀವವಿಮೆ ಪತ್ರಕ್ಕಿಂತಲೂ ಉತ್ತಮವಾದ ಅನ್ಯ ಜೀವ ದೊರೆಯಲಾರದು.

ಈಗಾಗಲೇ ವಿಮೆ ಸಂದಾಯವಾದ ಮೊತ್ತ 8,00,00,000
ಕೈಯಲ್ಲಿ ಹೊಂದಿರುವ [illegible]
[illegible]
ಹಣ 6,00,00,000
ವಾರ್ಷಿಕ ಉತ್ಪತ್ತಿ 1,00,00,000

ಇಷ್ಟು ಭದ್ರತೆಯುಳ್ಳ ಕಂಪನಿಯಲ್ಲಿ ಜೀವವಿಮೆಯ ಪತ್ರ ತೆಗೆದುಕೊಳ್ಳಬೇಕೆನ್ನುವವರು ಯಾ ಇದರ ವಿಷಯ ಹೆಚ್ಚಿನ ಸಂಗತಿ ತಿಳಿಯಬೇಕೆಂದಿರುವವರು ದಯವಿಟ್ಟು ಈ ಕೆಳಗಿನವರಿಗೆ ಬರೆದುಕೊಳ್ಳುವದು.

ಕೆ. ಪಿ. ಚಿನ್ನಪ್ಪನವರು,
ಓರಿಯಂಟಲ್ ಏಜನ್ಸೀ ಆಫೀಸು,
[24—13] ವೀರಾಜಪೇಟೆ, ದಕ್ಷಿಣ ಕೊಡಗು.

LOOK AT SPENCERS' PRICES!

Arms and Ammunition.

By appointment suppliers of Arms, Ammunition & Accessories
TO
His Excellency Lord Willingdon and the Viscount Goschen.

12 bore guns of all descriptions from Rs. 55 to Rs 260.

		Rs	A.	P.	
12 bore cartridges, No. 1, 2, 4, 6 & 8		14	8	0	per 100
Do.	S. S. G.	18	12	0	,,
Do.	Ball	20	10	0	,,
Do.	Lethal	36	8	0	,,
Gunpowder	F. F. F. 1 lb. tin	2	14	0	
Do	,, half lb. ,,	1	14	0	
Do	F. F half lb. ,,	1	12	0	
Do.	F. 1 lb. tin	3	2	0	
Caps		5	4	0	per thousand.
Caps	ten for	0	1	0	
Shot of all grades		0	10	0	per lb.
Ball		1	1	0	per lb.
500/450 cartridges		62	8	0	
30/30 cartridges		42	8	0	

We can supply any other kind of shot, cartridge, gun or rifle, which means

GET IT AT SPENCERS'
Mercara.

ಸ್ಪೆನ್ಸರ್ ಕಂಪನಿಯ ಕ್ರಯಗಳನ್ನು ನೋಡಿರಿ

ಕೋವಿಗಳು [illegible] ಮದ್ದು

[illegible] ಪ್ರಭು[illegible] [illegible] ಗವರ್ನರ್ [illegible] ಒದಗಿಸುವ [illegible] ಸಾಮಾನುಗಳನ್ನು [illegible] ಮಾತ್ರವಾದವರು

ಹನ್ನೆರಡು ತೂತಿನ (ಬೋರ್) ಎಲ್ಲಾ ತರದ ಕೋವಿಗಳು [illegible] 55 ರಿಂದ 260 ರ ವರೆಗೆ.

		ರೂ.	ಆ.	ಪೈ.	
ಹನ್ನೆರಡು ತೂತಿನ ತೋಟೆಗಳು, ನಂ. 1, 2, 4, 6 ಮತ್ತು 8		14	8	0	ನೂರಕ್ಕೆ,
ಡಿಟೊ	ಚರೆಕಲ್ಲು	18	12	0	,,
ಡಿಟೊ	ಗುಂಡು	20	10	0	,,
ಡಿಟೊ	ಲೆತಾಲ್	36	8	0	,,
ಕೋವಿ ಮದ್ದು, ಎಫ್ ಎಫ್ ಎಫ್ 1 ಪೌಂಡಿನ ಟಿನ್ನು		2	14	0	
ಡಿಟೊ	ಅರ್ಧ ಪೌಂಡಿನ ಟಿನ್ನು	1	14	0	
ಕೋವಿ ಮದ್ದು, ಎಫ್. ಎಫ್. ಅರ್ಧ ಪೌಂಡಿನ ಟಿನ್ನು		1	12	0	
ಡಿಟೊ	ಎಫ್. 1 ಪೌಂಡು ಟಿನ್ನು	3	2	0	
ಕೇಪುಗಳು ಸಾವಿರಕ್ಕೆ		5	4	0	
ಕೇಪುಗಳು ಹತ್ತಕ್ಕೆ		0	1	0	
ಚರೆಗಳು, ಎಲ್ಲಾ ತರದವು ಪೌಂಡಿಗೆ		0	10	0	
ಗುಂಡುಗಳು, ಪೌಂಡಿಗೆ		1	1	0	
500/450 ತೋಟೆಗಳು		62	8	0	
30/30 ಡಿಟೊ		42	8	0	

ಬೇರೆ ಯಾವ ತರದ ಚರೆ, ತೋಟೆ, ಕೋವಿ ಅಥವಾ ರೈಫಲ್‌ಗಳನ್ನಾದರೂ ನಾವು ಒದಗಿಸಿಕೊಡಬಲ್ಲೆವು.

[4—3] ಅದನ್ನು ಸ್ಪೆನ್ಸರ್‌ರಿಂದ ಪಡೆಯಿರಿ.

" ಕೊಡಗು. "

ಸನ್ ೧೯೨೪ನೇ ಇಸವಿ ಸೆಪ್ಟೆಂಬರ್ ತಾ|| ೫ನೇ

ಶುಕ್ರವಾರ.

ರಾಜಕೀಯ ಸುಧಾರಣೆ.

ಹಿಂದೂ ದೇಶದ ಉಗ್ರವಾದ ರಾಜಕೀಯ ಚಳವಳದ ಫಲಾಂಶವಾಗಿ ದೊಡ್ಡ ಪ್ರಾಂತ್ಯಗಳಿಗೆಲ್ಲಾ 1919ರಲ್ಲು ಮಾಂಟೇಗ್ಯು ಮತ್ತು ಚೆಲ್ಮ್ಸಫರ್ಡರವರ ವರದಿಯಮೇಲೆ ಸ್ವಲ್ಪ ಹೆಚ್ಚಿನ ಜವಾಬ್ದಾರಿಕೆಯುಳ್ಳ ಸುಧಾರಣೆಯ ಕೌನ್ಸಿಲು ಕೊಡಲ್ಪಟ್ಟದ್ದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಈ ಮಾರ್ಪಾಡುಗಳು ಹಿಂದೀಯರ ಯೋಗ್ಯತೆಗೆ ಸರಿಯಾದವುಗಳಲ್ಲವೆಂತಲೂ, ಅತೃಪ್ತಿಕರವಾದವೆಂತಲೂ ಅನೇಕ ಮುಂದಾಳು ತಮ್ಮ ಅಭಿಪ್ರಾಯಗಳನ್ನು ಸೂಚಿಸಿದರು ಆದರೆ ಇನ್ನು ಕೆಲವರು ಈ ಸುಧಾರಿಸಿದ ಕೌನ್ಸಿಲುಗಳಲ್ಲಿ ಕಾರ್ಯಭಾರವನ್ನು ನಡಿಸಿ ಅವುಗಳ ಯೋಗ್ಯತೆಯನ್ನು ಕಂಡು ಹಿಡಿಯುವುದು ಉತ್ತಮವೆಂದು ಅವುಗಳನ್ನು ಕಾರ್ಯತಃ ನಡಿಸಲು ಒಪ್ಪಿಕೊಂಡರು. ಈ ಪಂಗಡದವರೇ ಹಿಂದೂ ದೇಶ ಮಧ್ಯಗಾಮಿಗಳು. ಈ ಕೌನ್ಸಿಲುಗಳ ಪ್ರಥಮ ಚುನಾವಣೆಯಲ್ಲಿ, ಮಾಂಟ್‌ಫರ್ಡ್ ಸುಧಾರಣೆಯು ಅತೃಪ್ತಿಕರವೆಂದು ಹೇಳಿದ ಕಾಂಗ್ರೆಸ್ ಪಂಗಡದವರು ಕೌನ್ಸಿಲಿನಿಂದ ಹೊರಗೆ ನಿಂತು ಚಳವಳ ನಡಿಸಿದರಿಂದ ಮಧ್ಯಗಾಮಿಗಳು ಸುಲಭವಾಗಿ ಕೌನ್ಸಿಲಿಗೆ ಸೇರಿ ಸರ್ಕಾರದವರೊಂದಿಗೆ ಸಹಕರಿಸಿ ದ್ವಿಮುಖ ಸರ್ಕಾರ (ಡಯಾರ್ಕಿ) ವನ್ನು ಪರೀಕ್ಷಿಸನೋಡಿದರು. ಈ ದ್ವಿಮುಖ ಸರ್ಕಾರದಲ್ಲಿ ಕೆಲವು ವಿಷಯಗಳು ಜನರ ಪ್ರತಿನಿಧಿಗಳಿಗೆ ಜವಾಬ್ದಾರರಾದ ಮಂತ್ರಿಗಳಿಂದಲೂ, ಬಾಕಿಯವುಗಳು ಪೂರ್ತಿ ಅಧಿಕಾರವುಳ್ಳ ಎಗ್ಸಿಕ್ಯೂಟಿವ್ ಕಮಿಟಿ ಮೆಂಬರುಗಳಿಂದಲೂ ನಡಿಸಲ್ಪಡುತ್ತಿವೆ

ಕೌನ್ಸಿಲುಗಳ ಮೂರು ವರ್ಷಗಳ ಒಂದನೇ ತರಂಗವು ಮುಗಿದನಂತರ ಕಳೆದ ವರ್ಷ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ಸಿನ ಒಂದು ಭಾಗವಾದ ಸ್ವರಾಜ್ಯ ಪಂಗಡದವರು ಈಗಿನ ಸರ್ಕಾರದ ಕೆಲಸಕ್ಕೆ ಪೂರ್ತಿ ಅಡಚಣೆ ತರುವ ಅಭಿಪ್ರಾಯದಿಂದ ಕೌನ್ಸಿಲುಗಳಿಗೆ ಸೇರಿದರು. ಆದರೆ ಅವರಿಗೆ ತಮ್ಮ ಉದ್ದೇಶವನ್ನು ನೆರವೇರಿಸುವಷ್ಟು ಬಹುಮತವು ಸೆಂಟ್ರಲ್ ಪ್ರಾವಿನ್ಸಿನ ಕೌನ್ಸಿಲಿನಲ್ಲಿ ಹೊರತು ಬೇರೆ ಎಲ್ಲಿಯೂ ದೊರೆಯಲಿಲ್ಲ. ಆದರೂ ಅವರು ಬಂಗಾಳ, ಯುನೈಟೆಡ್ ಪ್ರಾವಿನ್ಸ್ ಮೊದಲಾದ ಪ್ರಾಂತಿಕ ಕೌನ್ಸಿಲುಗಳಲ್ಲಿಯೂ, ಲೆಜಿಸ್ಲೇಟಿವ್ ಎಸೆಂಬ್ಲಿಯಲ್ಲಿಯೂ ಆದಾಯ ವಚ್ಚದ ಪಟ್ಟಿಗಳೇ ಮುಂತಾದ ಮುಖ್ಯ ಸಂಗತಿಗಳಿಗೆ ಅಡ್ಡಿಮಾಡಿ ಅವುಗಳನ್ನು ಮಂಜೂರು ಮಾಡದೆ ಸರ್ಕಾರದವರಿಗೆ ತೊಂದರೆ ಕೊಡುತ್ತಿರುವರು. ಇದನ್ನು ನೋಡಿದ ಸರ್ಕಾರದವರು ಈಗ ಜಾರಿಯಲ್ಲಿರುವ ಸುಧಾರಣೆಗಳು ಎಷ್ಟರಮಟ್ಟಿಗೆ ದೇಶದವರಿಗೆ ತೃಪ್ತಿಯನ್ನುಂಟುಮಾಡಿದೆ, ದೇಶದವರಿಗೆ ಒಪ್ಪುವಂತೆ ಅವುಗಳಲ್ಲಿ ಯಾವ ಬದಲಾವಣೆಗಳನ್ನು ಮಾಡಬೇಕು ಎಂದು ಮುಂತಾಗಿ ವಿಚಾರಿಸಲು ಯುರೋಪಿಯನರನ್ನೂ ದೇಶೀಯರನ್ನೂ ಒಳಕೊಂಡ ಒಂದು ಕಮಿಟಿಯನ್ನು ಏರ್ಪಡಿಸಿದರು. ಈ ಕಮಿಟಿಯು ಈಗ ಸಿಮ್ಲಾದಲ್ಲಿ ಮೀಟಿಂಗು ನಡಿಸುತ್ತಾ ದೇಶದ ಬೇರೆಬೇರೆ ಭಾಗಗಳಿಂದ ಮುಂದಾಳುಗಳನ್ನು ಅಲ್ಲಿಗೆ ತರೆಯಿಸಿ ಈಗಿನ ಮಾರ್ಪಾಡುಗಳ ವಿಷಯ ಅವರಭಿಪ್ರಾಯಗಳನ್ನು ಕೇಳಿಕೊಳ್ಳುತ್ತಾ ಇರುವರು.

ಹೀಗೆ ಈ ರಿಫಾರ್ಮ್ಸ್ ಇನ್‌ಕ್ವಯರಿ ಕಮಿಟಿಯ ಮುಂದೆ ಅಭಿಪ್ರಾಯಕೊಟ್ಟವರ ಪೈಕಿ ಮಾಜಿ ಮಂತ್ರಿಗಳಾದ ಮಿ|| ಎಸ್. ಕೆ. ಕೆಲ್ಕರ್ (ಸೆಂಟ್ರಲ್ ಪ್ರಾವಿನ್ಸ್) ಮಿ|| ಲಾಲಾ ಹರಿಕಿಶನ್‌ಲಾಲ್ (ಪಂಜಾಬು) ಮಿ|| ಸಿ. ವೈ. ಚಿಂತಾಮಣಿ (ಯುನೈಟೆಡ್ ಪ್ರಾವಿನ್ಸ್), ಬೊಂಬಾಯಿ ಲೆಜಿಸ್ಲೇಟಿವ್ ಕೌನ್ಸಿಲು ಮೆಂಬರಾದ ಮಿ|| ಆರ್. ಜಿ. ಪ್ರಧಾನ್ ಮತ್ತು ಪಂಜಾಬು ಪ್ರಾಂತಿಕ ಮುಸ್ಲಿಮ್ ಲೀಗಿನ ಅಧ್ಯಕ್ಷರಾದ ಮಿ|| ಬರ್ಕತ್ ಅಲಿ ಇವರವಾಂಗ್ಮೂಲಗಳು ದೇಶದವರ ಹೆಚ್ಚಿನ ಗಮನಕ್ಕೆ ಬಂದಿವೆ. ದ್ವಿಮುಖ ಸರ್ಕಾರವು ಸಾಕಷ್ಟು ಪರೀಕ್ಷಿಸಲ್ಪಟ್ಟಿದೆ ಎಂದೂ, ಅದು ಎಂದಿಗೂ ಸರಿಯಾಗಿ ನಡಿಯಲಿಕ್ಕಿಲ್ಲವೆಂದೂ, ಆದುದರಿಂದ ಅದನ್ನು ತೆಗೆದು ಹಾಕಿ ಪ್ರಾಂತಿಕ ಸರ್ಕಾರದವರಿಗೆ ಪೂರ್ತಿ ಅಧಿಕಾರವನ್ನೂ (ಪ್ರೊವಿನ್ಸಿಯಲ್ ಆಟೋನಮಿ) ಮಧ್ಯ ಸರ್ಕಾರದವರಿಗೆ ತಕ್ಕಮಟ್ಟಿಗೆ ಜವಾಬ್ದಾರಿಕೆಯನ್ನೂ ಕೊಡಬೇಕೆಂದೂ ಇವರೆಲ್ಲರೂ ಏಕಕಂಠರಾಗಿ ಸೇಳಿದುವರು. ಈಗಿನ ಸರ್ಕಾರದಲ್ಲಿ ಮಂತ್ರಿಗಳ ಸ್ಥಿತಿಯು ಬಹಳ ಕಷ್ಟತರವಾದದ್ದೆಂದೂ, ಅವರು ಜನರ ಪ್ರತಿನಿಧಿಗಳಿಗೆ ಜವಾಬ್ದಾರರಾದುದರಿಂದ ಚುನಾಯಿತ ಕೌನ್ಸಿಲು ಮೆಂಬರುಗಳ ಅಭಿಪ್ರಾಯದಂತೆ ನಡೆದರೆ, ಗವರ್ನರವರೂ, ಎಗ್ಸಿಕ್ಯುಟಿವ್ ಮೆಂಬರುಗಳು ಅವರ ಅಧಿಕಾರಕ್ಕೆ ಅಗಾಗ್ಗೆ ಅಡ್ಡಿ ಬರುವದಲ್ಲದೆ ಅವರ ಕೈ ಕೆಳಗಿನ ಐ. ಸಿ. ಎಸ್. ಆಫೀಸರುಗಳು ಅವರ ಹೇಳಿಕೆಯಂತೆ ನಡೆಯುವದಿಲ್ಲವೆಂತಲೂ, ಫಂಡವಾಳದ ಮೇಲೆ ಪೂರ್ತಿ ಅಧಿಕಾರವುಳ್ಳ ಎಗ್ಸಿಕ್ಯುಟಿವ್ ಕೌನ್ಸಿಲಿನ ಫೀನಾನ್ಸ್ ಮೆಂಬರು ಕೆಲವು ರಿಸರ್ವ್‌ಡ್ ಇಲಾಖೆಗಳ ಖಾತೆಗೆಲ್ಲಿರುವ ಪೂರ್ವದಂತೆ ಅವರು ತಮ್ಮ ಇಲಾಖೆಗಳಿಗೆ ಮಾತ್ರ ಹೆಚ್ಚು ಹಣ ಉಪಯೋಗಿಸಿಕೊಂಡು ಮಂತ್ರಿಗಳ ಇಲಾಖೆಗಳಿಗೆ ಹಣ ಬಹಳ ಕಡಿಮೆಮಾಡುವುದರಿಂದ ಮಂತ್ರಿಗಳಿಗೆ ಯಾವುದೊಂದು ಪ್ರಯೋಜನಕರವಾದ ಕೆಲಸಗಳನ್ನು ಮಾಡಲು ಅನುಕೂಲವಿಲ್ಲವೆಂತಲೂ, ತಮ್ಮ ಅಧಿಕಾರ ಚಲಾವಣೆಯಲ್ಲಿ ಗವರ್ನರವರು ಮತ್ತು ಅವರ ಕೌನ್ಸಿಲಿನವರು ಅಡ್ಡಿಬರುತ್ತಿದ್ದುದರಿಂದ ಮಂತ್ರಿಗಳು ಎಷ್ಟೋಸಾರಿ ತಮ್ಮ ರಾಜಿನಾಮೆ ಪತ್ರಗಳನ್ನು ಸರ್ಕಾರದ ಮುಂದಿಡಬೇಕಾಗುತ್ತಿತ್ತೆಂದೂ ತಾವು ರುಜುಮಾತ್ರ ಮಾಡುವ ಉದ್ಯೋಗಸ್ಥರಾಗಿದ್ದೇವೆಂದೂ ಮೇಲಿನ ಮೂವರು ಮಾಜಿ ಮಂತ್ರಿಗಳು ನಿರ್ಭಯವಾಗಿ ಸೂಚಿಸಿದರು.

ಕೌನ್ಸಿಲುಗಳಲ್ಲಿ ಕೋಮುವಾರು ಪ್ರತಿನಿಧಿಗಳು ಇರಬಾರದೆಂದು ಮಿ. ಚಿಂತಾಮಣಿ ಮತ್ತು ಬೊಂಬಾಯಿಯ ಮೆ-ಸರ್ನಯವರು ವಿನಹ ಬಾಕಿಯವರೆಲ್ಲರೂ ಒಂದೇ ಅಭಿಪ್ರಾಯ ಕೊಟ್ಟಿರುವರು ಕೋಮುವಾರು ಪ್ರತಿನಿಧಿತ್ವವು ಬೇರೆ ಬೇರೆ ಕೋಮುಗಳಲ್ಲಿ ಸಂಶಯವನ್ನು ಸೂಚಿಸುವುದಲ್ಲದೆ, ಅದಕ್ಕೆ ಉತ್ತೇಜನ ಕೊಡುವುದರಿಂದ ಇಂಥಾ ಸರ್ಕಾರಕ್ಕಿಂತ ಮಾರ್ಪಾಡುಗಳಿಲ್ಲದೆ ಇರುವುದೇ ಉತ್ತಮವೆಂದು ಮಿ. ಎಸ್. ಕೆ. ಕೇಲ್ಕರವರು ದೃಢವಾಗಿ ಸೂಚಿಸಿದರು. ಮಿ. ಚಿಂತಾಮಣಿಯವರೂ ಕೂಡ ಹಿಂದೂ ದೇಶದಲ್ಲಿ ಹಿಂದೂ ಮಹಮ್ಮದೀಯರಿಗೆ ಸ್ನೇಹಭಾವವು ಸಂಪೂರ್ಣವಾಗಿ ಸ್ಥಾಪಿತವಾಗದೆ ಇರುವುದರಿಂದ ಮಾತ್ರ ತತ್ಕಾಲ ಮಹಮ್ಮದೀಯರಿಗೆ ಪ್ರತ್ಯೇಕ ಪ್ರತಿನಿಧಿತ್ವ ಕೊಡಬೇಕೆಂದು ಮಾತ್ರ ಹೇಳಿದರು. ಇದುದರಿಂದ ಕೋಮುವಾರು ಪ್ರತಿನಿಧಿತ್ವವು ಹೋಗಬೇಕೆಂಬುದೇ ಹೆಚ್ಚಿನ ಜನರ ಅಭಿಪ್ರಾಯವೆಂಬುದು ವಿಶದವಾಗುತ್ತದೆ

ಮೊದಲಿನ ಲೆಜಿಸ್ಲೇಟಿವ್ ಎಸೆಂಬ್ಲಿಯ ಮೆಂಬರುಗಳಾಗಿದ್ದ ಮತ್ತು ಈಗ ಬೊಂಬಾಯಿ ಹೋಮ್ ರೂಲ್ ಲೀಗಿನ ಪರವಾಗಿ ಅಭಿಪ್ರಾಯ ಕೊಟ್ಟ ಮಿ. ಜಮ್ನಾದಾಸ್ ದ್ವಾರಕದಾಸ್ ಮತ್ತು ಮಿ ಕಾಮತರವರೂ ಕೂಡ ಹೆಚ್ಚುಕಮ್ಮಿ ಮೇಲಿನ ಅಭಿಪ್ರಾಯಗಳನ್ನೇ ಸೂಚಿಸಿದಲ್ಲದೆ ಈ ಕಮಿಟಿಯ ವರದಿಯು ರಾಂತಪಕ್ಷದವರಿಗೆ ತೃಪ್ತಿಕರವಲ್ಲವಾದರೆ ದೇಶದಲ್ಲಿ ಭಯಂಕರವಾದ ಅತೃಪ್ತಿಯುಂಟಾಗುವದೆಂದು ಹೇಳಿದರು. ಒಂದು ಜನಾಂಗವು ಸ್ವರಾಜ್ಯಕ್ಕೆ ಯೋಗ್ಯವಾಗಿದೆಯೋ ಎಂದು ನಿರ್ಧರಿಸುವ ಹಕ್ಕು ಇನ್ನೊಂದು ಜನಾಂಗಕ್ಕೆ ಇಲ್ಲವೆಂದು ಮಿ. ದ್ವಾರಕದಾಸರು ಹೇಳಿದರು. ಈ ಕಾರಣದಿಂದಲೇ ಈಗಿನ ದ್ವಿಮುಖ ಸರ್ಕಾರವು ಮನುಷ್ಯ ಸ್ವಭಾವಕ್ಕೆ ವಿರೋಧವಾದುದೆಂದು ಮಿ. ಪ್ರಧಾನ್‌ರವರು ನಿರ್ಭೀತಿಯಿಂದ ಉದ್ಘೋಷಿಸಿದರು.

ಈ ರಿಫಾರ್ಮ್ಸ್ ಕಮಿಟಿಯ ಮುಂದೆ ಅಭಿಪ್ರಾಯಕೊಟ್ಟ ಮುಖ್ಯ ಮಧ್ಯಗಾಮಿಗಳೂ ಕೂಡ ದ್ವಿಮುಖ ಸರ್ಕಾರವು ಹೋಗಬೇಕೆಂದೂ ಹೆಚ್ಚಿನ ಜವಾಬ್ದಾರಿಯ ಸುಧಾರಣೆಯು ಒಡನೆ ಸಿಕ್ಕಬೇಕೆಂದೂ ಹೇಳಿರುವುದನ್ನು ನೋಡಿ ಇಂಡಿಯಾದ ಆಂಗ್ಲೋ ಇಂಡಿಯನ್ ಪತ್ರಿಕೆಗಳು ಈ ಕಮಿಟಿಯು ಒಳ್ಳೇ ಆಟವೆಂದೂ, ಇದನ್ನು ಏರ್ಪಡಿಸಿದ್ದೇ ತಪ್ಪೆಂತಲೂ ಇದನ್ನು ಆದಷ್ಟು ಬೇಗನೆ ನಿಲ್ಲಿಸಿಬಿಡುವದು ಉತ್ತಮವೆಂತಲೂ ಕೂಗಲಾರಂಭಿಸಿರುವವು. ಕಮಿಟಿಯಲ್ಲಿರುವ ಹೆಚ್ಚಿನ ಇಂಡಿಯನ್ ಮೆಂಬರುಗಳು ದೇಶದ ಅಭಿಪ್ರಾಯದಲ್ಲಿ ಡಯಾರ್ಕಿ ಹೋಗಬೇಕೆಂದೇ ಇದೆಯೆಂದು ಬರೆಯುವರೆಂದು ಊಹಿಸಲಾಗಿದೆ. ಎಲ್ಲದಕ್ಕೂ ಅವರ ವರದಿಯನ್ನು ದೇಶದವರು ಎದುರು ನೋಡುತ್ತಿದ್ದಾರೆ.

ಈ ಕಮಿಟಿಯ ಮುಂದೆ ಅಭಿಪ್ರಾಯ ಕೊಡಲು ನಮ್ಮ ದೇಶದಿಂದ ಪ್ರತಿನಿಧಿಗಳನ್ನು ನೇಮಿಸಿರುವಂತೆ ತಿಳಿದು ಬಂದಿರುವದಿಲ್ಲ. ಎಲ್ಲಾ ವಿಷಯಗಳಲ್ಲಿ ಸರ್ಕಾರದವರು ನಮ್ಮ ದೇಶವನ್ನು ಹಿಂದೆ ಬಿಡುವಂತೆಯೇ ಕಾಣುತ್ತದೆ ನಮಗೆ ಕೊಟ್ಟಿರುವ ಕೌನ್ಸಿಲಿನಲ್ಲೇ ನಾವು ಬಹಳ ಹಿಂದೆ ಹಾಕಲ್ಪಟ್ಟಿದ್ದೇವೆ. ಡಯಾರ್ಕಿಯ ದುಷ್ಪರಿಣಾಮಗಳನ್ನು ದೊಡ್ಡ ಪ್ರಾಂತ್ಯಗಳ ಅನುಭವದಿಂದ ನಾವು ದೂರೀಕರಿಸಬೇಕಾಗಿದೆ. ಜನರ ಪ್ರತಿನಿಧಿಗಳಿಗೆ ಜವಾಬ್ದಾರರಾದ ಮಂತ್ರಿಗಳಿಂದಲೇ ಎಲ್ಲಾ ಇಲಾಖೆಗಳೂ ನಡಿಸಲ್ಪಡಬೇಕು ಮತ್ತು ಅವರಿಗೆ ಪೂರ್ತಿ ಅಧಿಕಾರ ಕೊಡಬೇಕೆಂದೇ ದೊಡ್ಡ ಪ್ರಾಂತ್ಯಗಳ ಹೋರಾಟವಾಗಿದೆ. ನಮ್ಮ ದೇಶವು ಹೆಚ್ಚಿನ ಜವಾಬ್ದಾರಿಯ ಸರ್ಕಾರವನ್ನು ನಡಿಸಲು ಬೇರೆ ಪ್ರಾಂತ್ಯಗಳಿಗಿಂತ ಕಡಿಮೆ ಯೋಗ್ಯತೆಯುಳ್ಳದ್ದಲ್ಲವೆಂಬುದು, ಇಲ್ಲಿಯ ವಿದ್ಯಾಭ್ಯಾಸದ ಮುಂದುವರಿಕೆಯಿಂದಲೂ, ಕಳೆದ ಚುನಾವಣೆಯಲ್ಲಿ ಓಟು ಕೊಡುವ ತಮ್ಮ ಹಕ್ಕನ್ನು ಉಪಯೋಗಿಸಿದ ಓಟರುಗಳ ಹೆಚ್ಚಿನ ಸಂಖ್ಯೆಯಿಂದಲೂ, ಕೌನ್ಸಿಲಿನ ಪ್ರಥಮ ಮೀಟಿಂಗಿನಲ್ಲು, ಚರ್ಚೆಗಳಲ್ಲು ಈ ಕೌನ್ಸಿಲು ಬೇರೆಯವುಗಳಿಗಿಂತ ಕಡಿಮೆ ತರದಲ್ಲವೆಂದು ಅಧ್ಯಕ್ಷರಾದ ಚೀಫ್ ಕಮಿಷನರವರು ಮಾಡಿದ ಸೂಚನೆಯಿಂದಲೂ ವಿಶದವಾಗುತ್ತದೆ. ಆದುದರಿಂದ ಬೇರೆ ಪ್ರಾಂತ್ಯಗಳಿಗೆ ಸಿಕ್ಕುವಾಗಲೇ ಕೊಡಗಿಗೂ ಪೂರ್ತಿ ಸ್ವತಂತ್ರದ ಪ್ರಾಂತಿಕ ಸರ್ಕಾರವು ಸಿಕ್ಕಬೇಕೆಂದು ಹೋರಾಡಬೇಕಾದದ್ದು ಪ್ರತಿಯೊಬ್ಬ ದೇಶೀಯನ ಕರ್ತವ್ಯವಾಗಿದೆ. ಇದಕ್ಕಾಗಿ ಜನರ ಪ್ರತಿನಿಧಿಗಳು ಕೌನ್ಸಿಲಿನೊಳಗೂ, ಇವರಿಗೆ ಉತ್ತೇಜನವಾಗಿ ದೇಶೀಯರು ಹೊರಗೂ ಸಾಕಷ್ಟು ಚಳವಳವನ್ನು ಎಬ್ಬಿಸಬೇಕಾಗಿದೆ. ಈ ವಿಷಯಕ್ಕೆ ಸರ್ಕಾರದವರು ತಕ್ಕಷ್ಟು ಗಮನ ಕೊಡದೆ ಮುಂದಿನಂತೆಯೇ ಈ ದೇಶವನ್ನು ಹಿಂದು ಹಾಕುತ್ತಾ ಬಂದರೆ ಮಿ. ಜಮ್ನಾದಾಸ್‌ರವರು ಹೇಳಿದಂತೆ ದೇಶದಲ್ಲಿ 'ಭಯಂಕರವಾದ ಅತೃಪ್ತಿ' ಯುಂಟಾಗುವದು ಎಂಬುದರಲ್ಲಿ ಸಂಶಯವಿಲ್ಲ.

ಶಕ್ತಿಯ ದುರುಪಯೋಗವೋ?

ಡಾಕ್ಟರ್ ರೇ ಯವರು ಮಾಡುವ ಚರಕಾ ಬೋಧನೆಯನ್ನು ಮಿ. ಎಂ ಎನ್ ರಾಯ್ ಎಂಬವರು ಆಕ್ಷೇಪಿಸುತ್ತಾರೆ. ಚರಕಾದಲ್ಲಿ ಮಾಡುವ ಪ್ರಯತ್ನವೆಲ್ಲಾ ನಿಷ್ಪ್ರಯೋಜನವೆಂತ ಮಿ. ರಾಯ್‌ಯವರು ಹೇಳುತ್ತಾರೆ. ಡಾಕ್ಟರ್ ರೇಯವರ ವಾದದ ಮುಖ್ಯ ಸಾರವೇನಂದರೆ—ರೈತನಿಗೆ ತನ್ನ ನಿರುದ್ಯೋಗದ ಕಾಲವನ್ನು ಉಪಯೋಗಿಸಿಕೊಳ್ಳಲು ಚರಕವು ಅನುಕೂಲ ಕೊಡುತ್ತೆಂಬದೇ. ಟೀಕಾಕಾರರು ರೈತನಿಗೆ ನಿರುದ್ಯೋಗದ ಸಮಯವೇ ಇಲ್ಲವೆಂತ ವಾದಿಸುತ್ತಾರೆ. "ಅವನಿಗೆ ದೊರೆಯುವ ವಿರಾಮಕಾಲವು ಅವನಿಗೆ ಅವಶ್ಯವಿದೆ. ಅವನು ನಾಲ್ಕು ತಿಂಗಳು ಸೋಮಾರಿಯಾಗಿದ್ದರೆ ಎಂಟು ತಿಂಗಳು ಶಕ್ತಿಮೀರಿ ಕೆಲಸಮಾಡಿರುತ್ತಾನೆ ಈ ನಾಲ್ಕು ತಿಂಗಳು ಚರಕಾದ ಒಳಿ ಕೆಲಸ ಮಾಡುತ್ತಿದ್ದರೆ ಉಳಿದ ಎಂಟು ತಿಂಗಳಲ್ಲಿ ಅವನು ಮಾಡುವ ಕೆಲಸವು ಬರಬರುತ್ತಾ ಹಾಳಾಗುತ್ತೆ. ಚರಕಾದಲ್ಲಿ ಕೆಲಸಮಾಡಲಿಕ್ಕೆ ಜನಾಂಗಕ್ಕೆ ಸಮಯವೇ ಇಲ್ಲ" ಎಂತಲೂ ಟೀಕಾಕಾರರು ವಾದಿಸುತ್ತಾರೆ

ಟೀಕಾಕಾರರಿಗೆ ಹಿಂದುಸ್ಥಾನದ ಕೃಷಿಕರ ಅನುಭವವೇ ಇಲ್ಲವೆಂತ ತೋರುತ್ತೆ. ಚರಕಾ ಹೇಗೆ ಕೆಲಸಮಾಡೀತು, ಈಗ ಹೇಗೆ ಮಾಡುತ್ತಿದೆ ಎಂಬದನ್ನೂ ಸಹ ಟೀಕಾಕಾರರಿಗೆ ಭಾವಿಸಬಹುದು ಸಾಧ್ಯವಿಲ್ಲವೆಂತ ತೋರುತ್ತೆ. ರೈತನು ಚರಕದಲ್ಲಿ ಗುಲಾಮನಂತೆ ಕೆಲಸಮಾಡಬೇಕಾಗಿಲ್ಲ. ಕಷ್ಟ ಕೆಲಸ ಮಾಡಿ ಬಂದಾಗ ಚರಕವು ಮನಸ್ಸಿಗೆ ವ್ಯಾಯಾಮವನ್ನು ಕೊಡುತ್ತದೆ. ಹಿಂದುಸ್ಥಾನದ ಹೆಂಗಸರಾದರೂ ಚರಕವನ್ನು ಖಾಯಂ ಸಂಸ್ಥೆಯಾಗಿ ಇಟ್ಟುಕೊಳ್ಳಲೇ ಬೇಕು. ಅವರು ಸಮಯ ದೊರೆತಾಗಲೆಲ್ಲಾ ನೂಲುತ್ತಾರೆ. ಕೆಲಸಗಾರರಲ್ಲಿ ಹೆಚ್ಚಿನವರು ಸರಾಸರಿಯಾಗಿ ದಿವಸಕ್ಕೆ ಅರ್ಧಗಂಟೆ ಸಮಯ ನೂಲುಮಾಡಿದರೆ ತಮಗೆ ಬೇಕಾದಷ್ಟು ಮಾತ್ರವಲ್ಲ, ಬೇರೆಯವರಿಗೆ ಕೊಡುವಷ್ಟು ಸಹ ನೂಲು ತಯಾರಾಗುತ್ತೆ. ಹೀಗೆ ಕೆಲಸಮಾಡುವವನು ವರ್ಷಕ್ಕೆ ರೂ. 1-11-0 ಆದರೂ ತನ್ನ ಉತ್ಪತ್ತಿಗೆ ಸೇರಿಸುತ್ತಾನೆ. ಅನ್ನಕ್ಕಿಲ್ಲದೆ ಸಾಯುವವನಿಗೆ ಇದು ಕಡಿಮೆಯಲ್ಲ ನಮಗೆ ಬೇಕಾದಷ್ಟು ಬಟ್ಟೆಯನ್ನು ನೇಯಲಿಕ್ಕೆ ಅವಶ್ಯವಿರುವಷ್ಟು ಮಗ್ಗಗಳು ಇವೆ. ಇಂತಲೂ ನೇಯಿಗೆ ಕಸಬಿನವರು ಇದ್ದಾರೆಂತಲೂ ಎಲ್ಲರೂ ಒಪ್ಪುವ ವಿಷಯವಾಗಿದೆ. ಆದ್ದರಿಂದ ಕೈನೂಲಿನ ತಯಾರಿಯೇ ಉಳಿಯಿತಷ್ಟೆ. ರೈತರು ನೂಲಲು ಪ್ರಾರಂಭಿಸಿದರೆ ದೊಡ್ಡ ಬಂಡವಾಳವೇನೂ ಇಲ್ಲದೆ ಇಂಡಿಯಾಕೆ ಬೇಕಾದಷ್ಟು ಬಟ್ಟೆ ತಯಾರಿಸಿಕೊಳ್ಳಬಹುದು. ಹಾಗೆಂದರೆ ಕಡಿಮೆಪಕ್ಷ 60 ಕೋಟಿ ರೂಪಾಯಿಗಳು ನೂಲುವವರೊಳಗೂ, ಹತ್ತಿ ಬಿಡಿಸುವವರೊಳಗೂ ನೇಯುವವರೊಳಗೂ ತಮ್ಮ ಮನೆಗಳಲ್ಲೇ ಕೂತು ಕೆಲಸ ಮಾಡುವದರಿಂದ ಚಲಾವಣೆಗೆ ಬರುತ್ತೆ. ಅಷ್ಟರಮಟ್ಟಿಗೆ ಗ್ರಾಮವಾಸಿಗಳ ಉತ್ಪತ್ತಿಯೂ ಹೆಚ್ಚುತ್ತೆ.

ರೈತರಿಗೆ ತಮ್ಮ ಸಂಪಾದನೆಯನ್ನು ಹೆಚ್ಚಿಸಲಿಕ್ಕೂ, ವ್ಯಾಯಾಮ ಕಾಲವನ್ನು ಉಪಯೋಗಿಸಲಿಕ್ಕೂ ಎರಡನೇ ಕಸಬು ಒಂದು ಬೇಕೆಂತ ಪ್ರಪಂಚದ ಎಲ್ಲಾ ಭಾಗದಲ್ಲೂ ಒಪ್ಪಿರುವ ಮಾತಾಗಿದೆ ಸ್ವಲ್ಪ ಕಾಲದ ಕೆಳಗೆ ಇಂಡಿಯಾಕ್ಕೆ ಬೇಕಾದ ಬಟ್ಟೆಗೆ ಸಾಕಷ್ಟು ನೂಲನ್ನು ಇಂಡಿಯಾದ ಹೆಂಗಸರೇ ತಮ್ಮ ಆರಾಮ ಕಾಲದಲ್ಲಿ ತಯಾರಿಸುತ್ತಿದ್ದರೆಂಬದನ್ನು ಮರೆಯಬಾರದು. ಈಗ ಪುನಃ ನೂಲಲಿಕ್ಕೆ ಪ್ರಾರಂಭಿಸಿದ ಮೇಲೂ ಇದು ಸಾಧ್ಯವೆಂತ ಪ್ರತ್ಯಕ್ಷವಾಗಿದೆ. ಖಾದಿ ಚಳವಳವು ನಿಷ್ಫಲವಾಯಿತೆಂತ ಯೋಚಿಸುವದು ತಪ್ಪು. ಕೆಲಸಗಾರರು ಸ್ವಲ್ಪ ಮಟ್ಟಿಗೆ ನೋತಿದ್ದಾರೆ ಚೆನ್ನಾಗಿ ಕೆಲಸಮಾಡಿದಲ್ಲಿ ಚರಕಗಳು ನಡೆಯುತ್ತಲೇ ಇವೆ. ಖಾಯಂ ಆಗಿ ಸ್ಥಾಪಿತವಾಗಲಿಲ್ಲವೆಂಬದೇನೋ ನಿಜವೇ. ಹೀಗಾಗಲು ಪ್ರಚಾರಕ ಕೆಲಸವು ಚೆನ್ನಾಗಿ ಆಗದೇ ಇರುವದೂ ಮತ್ತು ನೂಲುವವರಿಗೆ ಖಾಯಂ ಕೆಲಸ ಸಿಕ್ಕುತ್ತೋ ಇಲ್ಲವೋ ಎಂಬ ಸಂಶಯವೂ ಕಾರಣವಾಗಿದೆ. ಪಂಜಾಬ್, ಕರ್ನಾಟಕ, ಆಂಧ್ರ, ತಮಿಳುನಾಡಿನ ಕೆಲವು ಭಾಗ ಸಹ ಅವಲೋಕಿಸಿದರೆ ಮಿ. ರಾಯರಿಗೆ ಕೈನೂಲಿನ ಮಹತ್ವವು ಗೊತ್ತಾಗಬಹುದು.

ಇಂಡಿಯಾವು ಕ್ಷಾಮದ ಪ್ರದೇಶವಾಗಿದೆ. ಗಂಡಸರೂ ಹೆಂಗಸರೂ ಕಲ್ಲು ಒಡೆಯುವದು ಒಳ್ಳೇದೋ, ಹತ್ತಿ ಬಿಡಿಸಿ ನೂಲುವದು ಒಳ್ಳೇದೋ? ಖಾಯಮಾದ ಕ್ಷಾಮಬಾಧೆಯಿಂದ ಒರಿಸಾ ಪ್ರಾಂತ್ಯದವರು ಭಿಕ್ಷಾವರ್ತಿಗೆ ಗುರಿಯಾಗಿದ್ದಾರೆ ಈಗ ಅವರನ್ನು ಕೆಲಸ ಮಾಡುವಂತೆ ಮಾಡುವದು ಸಹ ಕಷ್ಟವಾಗಿದೆ. ಕ್ರಮೇಣ ಸಂಪೂರ್ಣವಾಗಿ ನಾಶವಾಗುತ್ತಾರೆ. ನೂಲಲು ಪ್ರಾರಂಭಿಸಿದರೆ ಮಾತ್ರ ಅವರು ಉಳಿಯುವ ಸಂಭವವಿದೆಯಷ್ಟೆ.

ಕೃಷಿಯನ್ನು ಅಭಿವೃದ್ಧಿ ಪಡಿಸಬೇಕೆಂತ ಮಿ. ರಾಯರು ಹೇಳುತ್ತಾರೆ. ಇದು ಅವಶ್ಯವೇ. ಕೃಷಿಯನ್ನು ಅಭಿವೃದ್ಧಿಗೊಳಿಸುವದು ಬಿಟ್ಟು ಚರಕ ತಿರುಗಿಸಬೇಕೆಂತ ಹೇಳುವದಿಲ್ಲ. ಚರಕ ತಿರುಗಿಸಲು ಪ್ರಾರಂಭಿಸಿದರೆ ಕೃಷಿಯನ್ನು ಶೀಘ್ರದಲ್ಲಿ ಅಭಿವೃದ್ಧಿ ಪಡಿಸಿಕೊಳ್ಳಬಹುದು. ಕೃಷಿಯನ್ನು ಅಭಿವೃದ್ಧಿಗೊಳಿಸಲು ತುಂಬಾ ಕಷ್ಟಗಳಿವೆ. ಮನಸ್ಸಿಲ್ಲದ ಸರ್ಕಾರವನ್ನು ಒಪ್ಪಿಸಬೇಕು, ಫಂಡವಾಳವನ್ನು ಒದಗಿಸಬೇಕು, ರೈತರು ಹೊಸ ಪದ್ಧತಿಗಳನ್ನು ಅನುಸರಿಸಲಿಕ್ಕೆ ಒಪ್ಪಬೇಕು, ನೂಲುವ ಕೆಲಸವಾದರೋ

1. ಸಮಯವಿರುವ ರೈತರಿಗೆ ಮತ್ತು ಚಿಲ್ಲರೆ ದುಡ್ಡು ಕಾಡವರಿಗೆ ಸುಲಭವಾದ ಎರಡನೇ ಕಸಬು ಆಗುತ್ತೆ.

2. ಸಾವಿರಾರು ಜನರಿಗೆ ಗೊತ್ತಿದೆ.

3. ಸುಲಭವಾಗಿ ಕಲಿಯ ಬಹುದು.

4. ಮೂಲ ಧನವೇ ಬೇಡ.

5. ಸುಲಭವಾಗಿಯೂ ಚಾರಿಯಾಗಿಯೂ ಚಕ್ರವನ್ನು ಹಿಡಿಕೊಳ್ಳಬಹುದು. ಒಂದು ಜೊತೆ ಹಂಚಿನ ತುಂಡು ಒಂದು ಮರದ ಕಡ್ಡಿಯಿಂದ ನೂಲುವದು ಸಾಧ್ಯವಿಲ್ಲವೆಂತ ಕೇಳಕರಿಗೆ ಗೊತ್ತಿಲ್ಲ

6. ನೂಲುವದಕ್ಕೆ ರೈತರ ಆಕ್ಷೇಪಣೆ ಇಲ್ಲ.

7. ಕ್ಷಾಮ ಕಾಲದಲ್ಲಿ ಸುಲಭವಾದ ಕಷ್ಟ ಪರಿಹಾರ ಕೊಡುತ್ತೆ.

8. ಪರದೇಶಿ ಬಟ್ಟೆ ಕೊಂಡುಕೊಳ್ಳಲು ಹೊರಗೆಹೋಗುವ ದ್ರವ್ಯದ ಪ್ರವಾಹವನ್ನು ನಿಲ್ಲಿಸುತ್ತೆ.

9. ಈ ರೀತಿ ಉಳಿಯುವ ಕೋಟ್ಯಾಂತರ ರುಪಾಯಿ ಅರ್ಹರಾದ ಬಡವರೊಳಗೆ ಹಂಚಲ್ಪಡುತ್ತೆ.

10. ಸ್ವಲ್ಪವೇ ಜಯವಾದರೂ ಅಷ್ಟೇ ಪ್ರಯೋಜನ.

11. ಜನರೊಳಗೆ ಸಹಕಾರ ಬೆಳೆಸಲು ತುಂಬಾ ಶಕ್ತಿ ಇರುವ ಕೆಲಸವಾಗಿದೆ

ಜನರಿಗೆ ನಂಬಿಗೆ ಹುಟ್ಟಲು ಅಡಚಣೆ ಏನಂದರೆ—ಮಧ್ಯ ತರಗತಿಯ ಜನರಲ್ಲಿ ಬೇಕಾದಷ್ಟು ಕೆಲಸಗಾರರು ಮುಂದೆ ಬರದೆ ಇರುವದೇ. ಇದಕ್ಕಿಂತಲೂ ಕಷ್ಟವು ಯಾದೆಂದರೆ, ಜನರು ಸೊಗಸಾಗಿ ಕಾಣುವ ಮಿಲ್ ಬಟ್ಟೆಯನು ಬಿಟ್ಟು ಖದ್ದರ್ ಬಟ್ಟೆಯನ್ನು ಹಾಕದೆ ಇರುವದು. ತತಾಲ ಖದ್ದರಿಗೆ ಇರುವ ಬೆಚ್ಚನ ಕ್ರಯವು ಇನ್ನೊಂದು ಅಡ್ಡವಾಗಿದೆ. ನೂಲುವ ಕಲಾವನ್ನು ಜನರು ಸರಿಯಾಗಿ ನಡಿಸಿದರೆ ಮಿಲ್‌ಬಟ್ಟೆಯೊಂದಿಗೆ ಖದ್ದರ್ ಬಟ್ಟೆಯ ಪೋಟಾಪೋಟಿ ನಡೆಯಹುದು. ಈ ಚಳವಳದ ಜಯಕ್ಕೆ ಜನರು ಕೆಲವು ಹುಟ್ಟಿಗೆ ತ್ಯಾಗಮಾಡಬೇಕು. ನಮ್ಮ ರೈತರ ಕಷ್ಟ ಸುಖವನ್ನು ನೋಡಿಕೊಳ್ಳುವ, ಪರದೇಶದ ಬಟ್ಟೆಯನ್ನು ಈ ದೇಶಕ್ಕೆ ಬರಗೊಡದೆ ಮಾಡುವ ಸರಕಾರವಿದ್ದಿದ್ದರೆ ಜನರು ಸ್ವಲ್ಪವೂ ತ್ಯಾಗಮಾಡಬೇಕಾಗಿರಲಿಲ್ಲ. ರಾಷ್ಟ್ರೀಯ ಸರ್ಕಾರವು ಮಾಡಬೇಕಾದದ್ದನ್ನು ಮಧ್ಯ ತರಗತಿಯ ಜನರು ಸ್ವಲ್ಪ ತ್ಯಾಗ ಬುದ್ಧಿಯನ್ನು ತೋರಿಸಿದರೆ ಮಾಡಬಹುದು.

ಶಕ್ತಿಯ ದುರುಪಯೋಗವಾಗುವ ಸಂಭವೇ ಇಲ್ಲ. ಡಾಕ್ಟರ್ ರೇ ಯವರಿಂದ ಸಹಾಯ ಹೊಂದಿದಷ್ಟು ಅನೇಕ ಸಹೋದರಿಯರು ಸ್ವಂತ ನೂಲು ಮಾಡುತ್ತಾ ಪ್ರಯೋಜನ ಹೊಂದುತ್ತಿಲ್ಲವೇನು? ಅವರಿಗೆ ಭಿಕ್ಷಾವೃತ್ತಿ ಯಾ ಉಪವಾಸವೇ ಗತಿ ಹೊರತು ಬೇರೆ ಇರಲಿಲ್ಲ. ಯುವಕರು ಗ್ರಾಮಗಳಿಗೆ ಹೋಗಿ ಗ್ರಾಮವಾಸಿಗಳ ಅವಶ್ಯಕಗಳನ್ನು ತಿಳಿದುಕೊಂಡು ಅವರ ಕಷ್ಟವೇ ತಮ್ಮ ಕಷ್ಟವೆಂತ ಭಾವಿಸಿ ಅವರನ್ನು ಮೇಲಕ್ಕೆತ್ತಲಿಕ್ಕೆ ಪ್ರಯತ್ನಿಸುವದು ಶಕ್ತಿ ದುರುಪಯೋಗವೆ? ಅನುಕೂಲವಿರುವ ಯುವಕರು ಸ್ತ್ರೀಯರೂ ಅರ್ಧ ಹೊಟ್ಟೆಯಲ್ಲು ಜೀವಿಸುವ ಲಕ್ಷ ಜನರನ್ನು ಯೋಚಿಸಿಕೊಂಡು ಅವರಿಗಾಗಿ ದಿವಸದಲ್ಲಿ ಅರೆಗಂಟೆ ಸಮಯ ನೂಲುವ ವ್ರತವನ್ನು ಅವಲಂಭಿಸಿದರೆ ಶಕ್ತಿ ದುರುಪಯೋಗವಾಯಿತೆ? ಒಬ್ಬ ಗಂಡಸೇ ಆಗಲೀ ಹೆಂಗಸೇ ಆಗಲಿ ಕೆಲಸವಿಲ್ಲದೆ ಇರುವಾಗ ಚಿಲ್ಲರೆ ದುಡ್ಡು ಗಳಿಸಿದರೂ ಪ್ರಯೋಜನವೇ. ಯಾವುದಾದರೂ ಚಳವಳದವನೂ ನಷ್ಟವಿಲ್ಲದೆ ಎಲ್ಲಾ ಲಾಭವಿರುವದಾದರೆ ಅದೇ ಕೈಯಿಂದ ನೂಲು ಏಕೆ.

'ಯಂಗ್ ಇಂಡಿಯಾ'ದಲ್ಲಿ ಮಹಾತ್ಮ ಗಾಂಧಿಯವರ್ಲೇಖನ'.

ಸಹಕಾರಿ ಸೆಂಟ್ರಲ್ ಬ್ಯಾಂಕ್

ತಾರೀಕು 30ರಲ್ಲು ಮಡಿಕೇರಿ ಮುನ್ಸಿಪಲ್ ಹಾಲಿನಲ್ಲು ನಡೆದ ಕೋಆಪರೇಟಿವ್ ಸೆಂಟ್ರಲ್ ಬ್ಯಾಂಕ್ ಡೈರೆಕ್ಟರುಗಳ ಮೀಟಿಂಗಿನ ವಿವರ:—

ಹಾಜರಿದ್ದ ಡೈರೆಕ್ಟರುಗಳು:—1. ಕೆ. ಕುಟ್ಟಯ್ಯ, ಆರ್. ಬಿ. ಅಧ್ಯಕ್ಷರು, 2. ಪಿ ಬೆಳ್ಯಪ್ಪ, ಆರ್. ಎಸ್., 3. ಮೆ. ಪಿ. ಬಿ. ಬೆಳ್ಯಪ್ಪ, ಯಂ. ಎಲ್. 4. ಮೆ. ಕೀತಿಯಂಡ ಕಾಳಪ್ಪ, 5. ಮೆ. ಪಟ್ಟಮಾಡ ಸ್ವಪ್ಪ, 6. ಮೆ ಯಂ. ಯಂ. ಚಿಣ್ಣಪ್ಪ, ಯಂ. ಎಲ್. ಸುಬ್ಬಾನ್ನಾಯರ್, ಮೆ. ಯಂ. ಭುಜಂಗರಾವ್, ಬಿ.ಎ., ಬಿ.ಎಲ್ ಮತ್ತು ಗೌರವ ಕಾರ್ಯದರ್ಶಿಯಾದ ಮ. ಸಿ. ಎಸ್ ವೆಂಕಟಯ್ಯ, ಯಂ. ಎಸ್. ಸಿ. ಯವರೂ ಹಾಜರಿದ್ದರು

1. ಕಳೆದ ಮೀಟಿಂಗಿನ ಪ್ರೊಸೀಡಿಂಗ್ಸ್ ಓದಿ, ಒಪ್ಪಲಾಯಿತು

2. ಜುಲೈ ತಿಂಗಳ ಲೆಕ್ಕವು ಓದಿ, ಪಾಸಾಯಿತು.

3. ಗೋ. ಬಿ. ಯಂ. ಕಾಳಪ್ಪನವರ ಡಿಪಾಜಿಟ್ಟಿನ ಜವಾಬ್ದಾರಿಯ ಮೇಲೆ, ಅಪ್ಪಿಕೇಶನನ್ನು ಡೈರೆಕ್ಟರುಗಳಿಗೆ ತಿರುಗಾಡಿಸಿ ಮಂಜೂರು ಮಾಡಿದ್ದ ರುಪಾಯಿ ಸಾಲವು ಮೀಟಿಂಗಿನಲ್ಲಿ ಒಪ್ಪಲಾಯಿತು.

4. ಕಾರ್ಮಾಡು ಸೊಸೈಟಿಗೆ ಮಂಜೂರು ಮಾಡಿರುವ ಸಾಲಕ್ಕೆ ಮೂರು ಕಂತುಗಳಿಗಿಂತ ಹೆಚ್ಚು ಕೊಡಲಾಗುವದಿಲ್ಲವೆಂದೂ, ಅದಕ್ಕೆ ಅವರು ಒಪ್ಪುವದಾದರೆ ಪುನಹ ಅವರು ಬರೆಯಬೇಕೆಂದೂ ತೀರ್ಮಾನವಾಯಿತು.

5. ಬಿ. ಬಿ ಆರ್. ದುಂಡಪ್ಪಯ್ಯನವರಿಗೆ 150 ರುಪಾಯಿ ಸಾಲವನ್ನು ಏಳು ತಿಂಗಳಲ್ಲಿ ವಾಪಾಸು ಕೊಡುವಂತೆ ಮಂಜೂರು ಮಾಡಿದರು.

6. ಹಾಕತ್ತೂರು ಸೊಸೈಟಿಗೆ 500 ರುಪಾಯಿ ಸಾಲವು ಮೂರು ಕಂತುಗಳಲ್ಲಿ ಅಂದರೆ 31-3-1925ರಲ್ಲಿ 100 ರುಪಾಯಿ 31-3-26ರಲ್ಲಿ 200 ರುಪಾಯಿ, 31-3-27ರಲ್ಲಿ 200 ರುಪಾಯಿ ವಾಪಾಸು ಕೊಡುವಂತೆ ಮಂಜೂರಾಯಿತು.

7. ಗತಿಸಿದ ಕುಕ್ಕೆರ ಮೈನರಾ ಕಾವೇರಪ್ಪನ ಹೆಸರಿನಲ್ಲಿ ಬ್ಯಾಂಕಿನಲ್ಲಿ ಡಿಪಾಜಿಟ್ಟಿರುವ ಹಣವನ್ನು ತನಗೂ, ತನ್ನ ಅಣ್ಣ ಉತ್ತಯ್ಯನವರಿಗೂ ತಿಳಿಯದೆ ಯಾರಿಗೂ ಕೊಡಕೂಡದೆಂದು ಬರೆದ ಕುಕ್ಕೆರ ಕಾರ್ಯಪ್ಪನವರ ಪತ್ರವು ಓದಲಾಯಿತು. ಈ ವಿಷಯ ಮೈನರಿನ ಸಮ್ಮಂಧಿಕರು ತಮ್ಮೊಳಗೆ ನ್ಯಾಯವಾಗಿ ತೀರ್ಮಾನಿಸಿಕೊಳ್ಳದಿದ್ದರೆ, ಕಾನೂನು ಮೇರೆ ಹಕ್ಕುದಾರಿಕೆಯ ಸರ್ಟಿಫಿಕೇಟ್ ಪಡೆಯುವವರಿಗೆ ಹಣವು ಕೊಡಲಾಗುವದೆಂದು ತೀರ್ಮಾನವಾಯಿತು.

8. ವಾಯಿದೆ ಮೀರಿಯೂ ಸಾಲ ಪಾವತಿ ಮಾಡದವರ ಪಟ್ಟಿಯು ಓದಲಾಯಿತು. ಈ ಸೊಸೈಟಿಗಳಿಗೆಲ್ಲಾ ತಾವು ಕೊಡತಕ್ಕ ಬಾಕಿಯನ್ನು ಜಲದಿ ಪಾವತಿಮಾಡದೆ ಹೋದರೆ ಕಾನೂನು ಮೇರೆ ವಸೂಲಾತಿಯ ತರಹಾ ಮಾಡಲಾಗುವದೆಂದು ಎಚ್ಚರಿಸುವಂತೆಯೂ, ಇನ್ಸ್‌ಪೆಕ್ಟರ್ ಮತ್ತು ಸೂಪರ್‌ವೈಜರುಗಳು ಈ ಸೊಸೈಟಿಗಳನ್ನು ಆಡಿಟು ಮಾಡಿ ನೋಡಲಿಕ್ಕಾಗಿ ಈ ಠರಾವಿನ ಪ್ರತಿಯನ್ನು ರಿಜಿಸ್ಟ್ರಾರವರಿಗೆ ಕಳುಹಿಸುವಂತೆಯೂ ತೀರ್ಮಾನವಾಯಿತು

9. ಈ ವರ್ಷದ ಮಳೆಯ ಅನಾಹುತದಿಂದ ಸಾಲವನ್ನು ಈ ವರ್ಷ ವಾಪಾಸು ಕೊಡಲಿಕ್ಕಾಗುವದಿಲ್ಲವಾದುದರಿಂದ ಹೆಚ್ಚಿಗೆ ವಾಯಿದೆ ಕೊಡಬೇಕೆಂದು ಬರಕೊಂಡ ಬೆಟ್ಟಗೇರಿ ಸೊಸೈಟಿಯವರ ಅರ್ಜಿಯು ಓದಲಾಯಿತು. ಈ ಅರ್ಜಿಯನ್ನು ರಿಜಿಸ್ಟ್ರಾರವರ ಅಭಿಪ್ರಾಯಕ್ಕಾಗಿ ಅವರಿಗೆ ಕಳುಹಿಸುವಂತೆ ತೀರ್ಮಾನವಾಯಿತು.

10. ನಾಂಗಾಲ ಸೊಸೈಟಿಯವರು ನ್ಯಾಯವಾದ ಕಾರಣಗಳಿಲ್ಲದೆ ಬ್ಯಾಂಕಿನಿಂದ ಪಡಕೊಂಡ ಹಣವನ್ನು ಮೆಂಬರುಗಳಿಗೆ ಸಾಲಕೊಟ್ಟಿರುವರಾಗಿ ದಕ್ಷಿಣ ಕೊಡಗಿನ ಗೌ. ಆರ್ಗನೈಜರವರು ಬರೆದ ಪತ್ರವು ಓದಲಾಯಿತು. ಆ ಸೊಸೈಟಿಯ ಪ್ರೆಸಿಡೆಂಟರನ್ನು, ಹಾಗೆ ಮಾಡಲು ಕಾರಣವೇನೆಂಬದನ್ನು ವಿವರಿಸಲು, ಕೇಳುವಂತೆ ತೀರ್ಮಾನವಾಯಿತು

ಕೆ. ಕುಟ್ಟಯ್ಯ,
ಅಧ್ಯಕ್ಷರು

ವರ್ತಮಾನ ಸಂಗ್ರಹ.

ಒಳದೇಶ.

ವೀರಾಜಪೇಟೆ ಹೈಸ್ಕೂಲು ಕ್ಲಾರ್ಕರಾದ ಚೆಟ್ರಂಡ ಬೇಲಯ್ಯ ಮತ್ತು ತಿತಿಮತಿ ಫಾರೆಸ್ಟರಾದ ಪಟ್ಟಚೆರವಂಡ ಬೆಳ್ಯಪ್ಪನವರ (ಹಣಗಳ್ಳಿಯ) ಕೇಸುಗಳನ್ನು ವಿಚಾರಿಸಲಿಕ್ಕಾಗಿ ಸಬ್ ಜಡ್ಜಿಯವರು ಈ ತಾರೀಕು 15, 16, ಮತ್ತು 17ರಲ್ಲಿ ವೀರಾಜಪೇಟೆಯಲ್ಲಿ ಕೋರ್ಟು ಮಾಡುವರು.

ಕಾಫಿಗೆ ಈಗ ಒಳ್ಳೇ ಕ್ರಯವಿದೆ. ಕಳೆದವಾರ ಮಡಿಕೇರಿಯಲ್ಲಿ ಪಾರ್ಚ್‌ಮೆಂಟ್ ಕಾಫಿ ಖಂಡಿ ಒಂದಕ್ಕೆ 380 ರುಪಾಯಿ ವರೆಗೆ ಇತ್ತು. ಕ್ರಯವು ಇನ್ನೂ ಹೆಚ್ಚಬಹುದೆಂದು ಊಹಿಸಲಾಗಿದೆ.

ಅಕ್ಟೋಬರು ತಾ|| 1ರಿಂದ ಪೋಲೀಸ್ ಸಬ್ ಇನ್ಸ್‌ಪೆಕ್ಟರುಗಳು ಈ ಕೆಳಗೆ ತೋರಿಸಿದಮೇರೆ ವರ್ಗಾಯಿಸಲ್ಪಡುವರೆಂದು ಜರ್ಚ್ ಆಗಿದೆ:—ಮೆ ಮಾಚಿರ ಉತ್ತಯ್ಯನವರನ್ನು ಮಡಿಕೇರಿ ಪಟ್ಟದಿಂದ ತಾಲೋಕಿಗೂ, ಮೆ. ಕಂಬಂಡ ಮುತ್ತಣ್ಣನವರನ್ನು ಮಡಿಕೇರಿ ತಾಲೋಕಿನಿಂದ ಪಟ್ಟಕ್ಕೂ, ಮೆ. ಚೆಂಬಾಂಡ ಕಾರ್ಯಪ್ಪನವರನ್ನು ಸುಂಟಿಕೊಪ್ಪಲಿನಿಂದ ಮಡಿಕೇರಿ ತಾಲೋಕಿಗೂ, ಮೆ. ಕೋದಂಡ ಮುದ್ದಪ್ಪನವರನ್ನು ನಾಪೋಕ್ಲಿನಿಂದ ಸೋಮವಾರಪೇಟೆಗೂ, ಮೆ. ಮಂಡೇಪಂಡ ಗಣಪತಿಯವರನ್ನು ಸೋಮವಾರಪೇಟೆಯಿಂದ ಸುಂಟಿಕೊಪ್ಪಲಿಗೂ, ಮೆ|| ಕೋಡಿಮಣಿಯಂಡ ಬೆಳ್ಯಪ್ಪನವರನ್ನು ಪೊನ್ನಂಪೇಟೆಯಿಂದ ವೀರಾಜಪೇಟೆಗೂ, ಮೆ ಕೋದಂಡ ಸುಬ್ಬಯ್ಯನವರನ್ನು ಸಿದ್ದಾಪುರದಿಂದ ಪೊನ್ನಂಪೇಟೆಗೂ, ಮೆ ಒಲ್ಲಚಂಡ ನಂಜಪ್ಪನವರನ್ನು ಮಡಿಕೇರಿ ತಾಲೋಕಿನಿಂದ ನಾಪೋಕ್ಲಿಗೂ, ಮೆ. ಕಂಡ್ರತಂಡ ಕಾರ್ಯಪ್ಪನವರನ್ನು ವೀರಾಜಪೇಟೆಯಿಂದ ಸಿದ್ದಾಪುರಕ್ಕೂ ವರ್ಗ.

ಕಳೆದ ಯುದ್ಧದ ಸಮಯದಲ್ಲಿ 'ಫೀಲ್ಡ್ ಸರ್ವಿಸ್' ಗೆ ಹೋಗಿದ್ದಾಗ ಮೆ ಚೆಪ್ಪುಡಿರ ಪಿ. ಮಂದಣ್ಣನವರು ಮಾಡಿದ ಒಳ್ಳೇ ಕೆಲಸಕ್ಕಾಗಿ ಅವರಿಗೆ ಬಹುಮಾನಕೊಟ್ಟ ಎರಡು ಮೆಡಲುಗಳು ಅವರಿಗೆ ಈಗತಾನೇ ಸಿಕ್ಕಿತೆಂದೂ, ಈ ಸಂತೋಷಕ್ಕಾಗಿ ಗೋಣಿಕೊಪ್ಪಲು ಯೂನಿಯನ್‌ರವರು ಅವರಿಗೆ ಒಂದು ಔತಣವನ್ನು ಕೊಟ್ಟರೆಂತಲೂ ತಿಳಿಯಬರುತ್ತದೆ.

ತಾ|| 30 ರಲ್ಲು ಕೋಆಪರೇಟಿವ್ ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ಮಡಿಕೇರಿ ಮುನ್ಸಿಪಲ್ ಹಾಲಿನಲ್ಲಿ ನಡಿಯಿತು. ಇದರ ವಿವರವು ಇನ್ನೊಂದುಕಡೆ ಪ್ರಕಟಿಸಲ್ಪಟ್ಟಿದೆ.

ಕೈಲ್‌ಮುಹೂರ್ತ ಮತ್ತು ಗೌರಿ ಗಣೇಶ ಹಬ್ಬಗಳಿಗಾಗಿ ಮಡಿಕೇರಿ ಹೈಸ್ಕೂಲು ತಾ|| 1ರಿಂದ 7ರ ವರೆಗೆ ಮುಚ್ಚಲ್ಪಟ್ಟಿದೆ. ಆದರೆ ಈ ಹಬ್ಬಗಳಿಗೆ ಮಡಿಕೇರಿ ಹುಡುಗಿಯರ ಸೆಕಂಡರಿ ಶಾಲೆಗೆ ತಾರೀಕು 3, 4ರಲ್ಲು ರಜವಿದೆ.

ಖಾಯಂ ಚೀಫ್ ಕಮೀಷನರಾದ ಮೆ ಡಬ್ಲ್ಯು ಪಿ ಬಾರ್ಟನ್‌ರವರು ಕಳೆದ ತಾ|| 29ರಲ್ಲಿ ಇಂಗ್ಲೆಂಡಿನಿಂದ ಬೊಂಬಾಯಿಗೆ ಬಂದು ಸೇರಿ ತಾ|| 1ರಲ್ಲಿ ಹಂಗಾಮಿ ಚೀಫ್ ಕಮೀಷನರಾಗಿದ್ದ ಮೆ. ಸಿ. ಸಿ. ವಾಟ್ಸನ್‌ರವರಿಂದ ಛಾರ್ಜು ತೆಗೆದುಕೊಂಡರೆಂದೂ, ಮೆ. ವಾಟ್ಸನ್‌ರವರು ಕೆಲವುದಿವಸಗಳ ವರೆಗೆ ಸ್ಪೆಶ್ಯಲ್ ಕೆಲಸಕ್ಕಾಗಿ ಸಿಮ್ಲಾದಲ್ಲಿರುವರೆಂದೂ ತಿಳಿಯಬರುತ್ತದೆ.

ಮದ್ರಾಸಿನ ಕೊಡಗು ಸಭೆಯವರು ಈ ವರ್ಷ ಮದ್ರಾಸು ಯೂನಿವರ್ಸಿಟಿಯಿಂದ ಡಿಗ್ರಿ ಪಡೆದ ಕೊಡಗಿನ ಯುವಕ ಯುವತಿಯರಿಗೆ ಕಳೆದ ತಾರೀಕು 24ರಲ್ಲು ಒಂದು ಎಂಟರ್‌ಟೈನ್‌ಮೆಂಟ್ ಕೊಟ್ಟರು. ಈ ವಿಷಯ ವಿವರವಾಗಿ ಇನ್ನೊಂದು ಕಡೆ ಒಂದು ಜಾಕ್ಕಿ ಪ್ರಕಟಿಸಲ್ಪಟ್ಟಿದೆ.

ಕೋರ್ಟು ಬಿಚಾರಿ ವರ್ತಮಾನ.

ರುದ್ರಬೀಡು ಗ್ರಾಮದಲ್ಲಿ 14-3-1924ರಲ್ಲಿ ನಡೆದ ಖೂನಿ ಕೇಸಿನ ಸಂಬಂಧವಾಗಿ ಆ ಗ್ರಾಮದ ಕುಳುವಾಡಿ ದೊಡ್ಡ ಪುಟ್ಟನೆಂಬವನು ಮರಣದ ಕಾರಣವನ್ನು ಸುಳ್ಳಾಗಿ ಪಟೇಲರಿಗೆ ತಿಳಿಸಿದನೆಂಬ ತಕ್ಸೀರ್ ಸಬ್ ಜಡ್ಜಿಯವರ ಕೋರ್ಟಿನಲ್ಲಿ ವಿಚಾರ ನಡೆಯಿತು. ಸಣ್ಣ ಪುಟ್ಟನ ಪೌತಿ ಹೆಂಡತಿಯು ವಾಂತಿಭೇದಿಯಾಗಿ ಮೃತಳಾದ್ದೆಂತ ಪಟೇಲರಿಗೆ ಈತನು ತಿಳಿಸಿದ್ದೆಂತಲೂ ಅನಂತರ ಸಬ್ ಇನ್ಸ್‌ಪೆಕ್ಟರು ಕೇಳುವಾಗಲೂ ಹಾಗೆಯೇ ಹೇಳಿದನೆಂತಲೂ, ಮತ್ತು ಸತ್ತ ರಾತ್ರಿಯಲ್ಲೇ ಪ್ರೇತವನ್ನು ಜಾತಿ ಪದ್ಧತಿ ಮೇರೆ ಮಾಡಬೇಕಾದ ಕ್ರಿಯೆಗಳನ್ನು ಮಾಡದೆ ಈ ಕುಳುವಾಡಿಯೇ ದಫನ್ ಮಾಡಿಸಿದನೆಂತಲೂ, ಕುಳುವಾಡಿಯು ಕೊಲೆಪಾತಕ ಮಾಡಿದವನಿಗೆ ಸಮೀಪ ಸಂಬಂಧಿ ಎಂತಲೂ ರುಜುವಾತಾದ್ದರಿಂದ ಸಣ್ಣ ಪುಟ್ಟನನ್ನು ಕೊಲೆಪಾತಕ ತಕ್ಸೀರಿನಿಂದ ತಪ್ಪಿಸಲು ಸುಳ್ಳು ವರ್ತಮಾನ ಕೊಟ್ಟನೆಂಬ ಸಕ್ಷನ್ ಮೇರೆ ಆ ಕುಳುವಾಡಿಗೆ ಆರು ತಿಂಗಳು ಕಠಿಣ ಸಜಾ ಶಿಕ್ಷೆ ವಿಧಿಸಲ್ಪಟ್ಟಿದೆ.

ಬೆಟ್ಟದಳ್ಳಿ ಗ್ರಾಮದ ಮಹಲಿಂಗ ದೇವರ ಜೋಡಿ ಭೂಮಿಯನ್ನು ಭೀಕರಿಗೌಡನ ಸುಬ್ಬಯ್ಯ ಎಂಬವನ ಚಿಕ್ಕತಂದೆಗೆ ಊರವರು ಗುತ್ತಿಗೆಗೆ ಕೊಟ್ಟಿದ್ದರಾಗಿಯೂ ಸದ್ರಿ ಪ್ರತಿವಾದಿ ಸುಬ್ಬಯ್ಯನು ಈತನ ಚಿಕ್ಕತಂದೆಯೂ ಸದ ಗುತ್ತಿಗೆಗಾಗಿ 8 ಬಂಡಿಗ ಒತ್ತ 300 ಕಂತೆ ಹುಲ್ಲನ್ನು ದೇವರಿಗೆ ಕೊಡುತ್ತಾ ಬಂದು 4 ವರ್ಷಗಳಿಂದ 1ನೇ ಪ್ರತಿವಾದಿಯು ದೇವರಿಗಾಗಲೀ ಗ್ರಾಮಸ್ಥರಿಗಾಗಲೀ ಜೋಡಿ ಭೂಮಿಗೆ ಹಕ್ಕಿಲ್ಲವೆಂತ ವಾದಿಸಲು ಪ್ರಾರಂಭಿಸಿ 2ನೇ ಪ್ರತಿವಾದಿ ಉದಿಯಾಂಡ ಮಾಚಯ್ಯನವರಿಗೆ ಮಾರಿದ್ದರಿಂದ ದೇವರಿಗಾಗಿ ಊರವರು, ಸೊತ್ತು ಸ್ವಾಧೀನಕ್ಕೆ ಸಬ್ ಜಡ್ಜಿಯವರ ಕೋರ್ಟಿನಲ್ಲಿ ದಾವಾ ತಂದರು. ಪ್ರತಿವಾದಿಯರು ಜೋಡಿ ಭೂಮಿಗೆ ದೇವರಿಗಾಗಲೀ ಗ್ರಾಮಸ್ಥರಿಗಾಗಲೀ ಸ್ವಾಧೀನಕ್ಕೆ ಹಕ್ಕಿಲ್ಲವೆಂತಲೂ 1ನೇ ಪ್ರತಿವಾದಿಯು ಮತ್ತು ಅವರ ಪೂರ್ವಿಕರೂ ಸೊತ್ತನ್ನು ಹಕ್ಕಿನ ಮೇರೆ ಅನುಭವಿಸುತ್ತಾ ಬಂದರೆಂತಲೂ, ಜೋಡಿ ಒತ್ತ ಹುಲ್ಲನ್ನು ಸಕ್ಕೆಮಾಡುತ್ತಾ ಬಂದಿದ್ದಾರೆಂತಲೂ, ದೇವರ ಪೂಜೆ ನಡೆಯದೆ ಇದ್ದದ್ದರಿಂದ ಕಮಿಷನರಿಗೆ ಅರ್ಜಿಕೊಟ್ಟು ಒಂದು ವರ್ಷ ಮಾತ್ರ ಕೊಡಲಿಲ್ಲವೆಂತಲೂ ವಾದಿಸಿದರು. ಒಟ್ಟಿನಮೇಲೆನಲ್ಲಿ ಹಳೇ ಬಹುದಿವಸದಲ್ಲಿ ಜೀರ್ಣವಾದ ಮರಗಳು ದಾಖಲಾಗುತ್ತಾ ಬಂದು 1891-92ರಲ್ಲಿ ಮಾತ್ರ ಟ್ರಸ್ಟಿಗಳ ಹೆಸರಿಗೆ ದಾಖಲಾಗಿ ಅನಂತರ 1ನೇ ಪ್ರತಿವಾದಿಯ ಹೆಸರಿನಲ್ಲೇ ದಾಖಲಾಗುತ್ತಾ ಬಂದಂತೆ ಕಾಣುತ್ತೆ, ಟ್ರಸ್ಟಿಗಳ ಹೆಸರಿಗೆ ದಾಖಲ್‌ಮಾಡಿದ್ದು ತಪ್ಪಿರಬೇಕು, ಪ್ರತಿವಾದಿಯರು ವಾರ ಚೀಟಿ ಏನೂ ಬರಕೊಟ್ಟದ್ದು ಇಲ್ಲ. ಆದ್ದರಿಂದ ನೇರವಾಗಿ ಭೂಮಿ ಸ್ವಾಧೀನಕ್ಕೆ ಹಕ್ಕಿಲ್ಲವೆಂತಲೂ, 8 ಬಂಡಿಗ ಒತ್ತ 300 ಕಂತೆ ಹುಲ್ಲಿಗೆ ಮಾತ್ರ ದೇವರಿಗೆ ಹಕ್ಕೆಂತಲೂ ಫೈಸಲ್ ಆಗಿದೆ.

ಹಿಂದೂ ದೇಶ.

ಪರರಾಜ್ಯಗಳ ಸಮ್ಮಂಧದ ಇಲಾಖೆ ಮತ್ತು ದೇಶ ಕಾವಲಿನ ಇಲಾಖೆ, ಇವೆರಡು ವಿನಹ ಬಾಕಿ ಎಲ್ಲಾ ಇಲಾಖೆಗಳು ಜನರ ಪ್ರತಿನಿಧಿಗಳಿಗೆ ಜವಾಬ್ದಾರರಾದ ಮಂತ್ರಿಗಳಿಗೆ ಬಿಟ್ಟುಕೊಡಬೇಕೆಂದು ಬರ್ಮಾ ಕೌನ್ಸಿಲಿನ ನೇಶನಲಿಸ್ಟ್ ಪಂಗಡದ ಮುಂದಾಳಾದ ಮೆ. ಮಾಂಗ್ ಪು ರವರು ತಂದ ಠರಾವು ಆ ಕೌನ್ಸಿಲಿನಲ್ಲಿ ಬಹುಮತದಿಂದ ಮಂಜೂರಾಗಿದೆ.

ಡಾಕ್ಟರ್ ಅನಿಬೆಸೆಂಟ್ ಅಮ್ಮನವರು ತಾ. 29-8-24ರಲ್ಲಿ ಇಂಗ್ಲೆಂಡಿನಿಂದ ಬೊಂಬಾಯಿಗೆ ಬಂದು ತಲುಪಿದರು. ಅವರ ಸ್ನೇಹಿತರನೇಕರು ಅವರಿಗೆ ಸುಸ್ವಾಗತವನ್ನಿತ್ತರು.

ಮಂತ್ರಿಗಳ ಸಂಬಳಕ್ಕಾಗಿ 16,00,000 ರೂಪಾಯಿ ಮಂಜೂರು ಮಾಡಬೇಕೆಂದು ತರಲ್ಪಟ್ಟ ಠರಾವು ತಾ 26-8-24ರಲ್ಲಿ ಬಂಗಾಳ ಕೌನ್ಸಿಲಿನಲ್ಲಿ ಸೋಲಿಸಲ್ಪಟ್ಟಿತು. 66 ಮೆಂಬರುಗಳು ಪರವಾಗಿಯೂ, 68 ಮೆಂಬರುಗಳು ವಿರೋಧವಾಗಿಯೂ ಓಟು ಮಾಡಿದರು. ಈ ಠರಾವು ಮಾರ್ಚ ತಿಂಗಳಲ್ಲಿ ನಡೆದ ಬಜೆಟ್ ಮೀಟಿಂಗಿನಲ್ಲಿ ಮೊದಲು ಒಂದು ಸಲ ಸೋಲಿಸಲ್ಪಟ್ಟಿತ್ತು. ಇದಕ್ಕೆ ವಿರೋಧವಾಗಿ ಸ್ವರಾಜ್ಯ ಸಂಗಡದವರು ಮಾತ್ರವಲ್ಲ, ನೇಶನಲಿಸ್ಟ ಸಂಗಡದವರೂ, ಮೋಡರೇಟುಗಳು ಸಹ ಓಟು ಕೊಟ್ಟರು. ಇದು ಪಾಸಾಗದೆ ಇರುವದರಿಂದ ಗವರ್ನರರವರು ಕೌನ್ಸಿಲನ್ನು ಕಳೆದ ತಾ. 27ರಿಂದ 'ಮೊಬೂನ್' ಮಾಡಿರುವರು. ಮಂತ್ರಿಗಳನ್ನು ತೆಗೆದು ಹಾಕಿ ಅವರ ಚಾರ್ಜಿನಲ್ಲಿದ್ದ ಇಲಾಖೆಗಳನ್ನು ತಾವೇ ನಡಿಸುತ್ತಿರುವರು 'ದ್ವಯಾರ್ಕಿಯು ನಿನ್ನೆ ಕೊಲ್ಲಲ್ಪಟ್ಟಿತು. ಈ ದಿನ ಕೌನ್ಸಿಲು ನಾಶ ಮಾಡಲ್ಪಟ್ಟಿದೆ' ಎಂದು ಮಿ. ಸಿ. ಆರ್ ದಾಸ್‌ರವರು ತಾರೀಕು 27-8-24ರಲ್ಲು ಆ ಕೌನ್ಸಿಲಿನಲ್ಲಿ ಹೇಳಿದರು.

ಐ. ಸಿ. ಎಸ್. ಆಫೀಸರುಗಳಿಗೆ ಹೆಚ್ಚಿಗೆ ಸಂಬಳ ಕೊಡಬೇಕು ಎಂತಾಗಿ ಮಾಡಿದ ಲೀ ಕಮೀಷನಿನ ಸಿಫಾರಸ್ಸುಗಳನ್ನು ಜಾರಿಗೆ ತರಕೂಡದೆಂದು ಬಿಹಾರ್ ಕೌನ್ಸಿಲಿನವರು ಅದಕ್ಕೆ ಬೇಕಾದ ಹೆಚ್ಚಿನ ಹಣ ಮಂಜೂರು ಮಾಡಿರುವದಿಲ್ಲ.

ಸಿಲೋನಿಯದ ಗವರ್ನರಾಗಿದ್ದ ಸರ್ ಮ್ಯಾಕ್ಲಿಫರ್ಡರವರನ್ನು ನಿಲೋನಿನ ಗವರ್ನರಾಗಿ ನೇಮಿಸಿರುವರು.

ಲಾರ್ಡ ಲಿಟ್ಟನ್‌ರವರು ಹಿಂದೀ ಸ್ತ್ರೀಯರ ಗುಣಕ್ಕೆ ಆಕ್ಷೇಪಕರವಾದ ಮಾತುಗಳನ್ನು ಹೇಳಿದರ ವಿಷಯ ಡಾ. ರವೀಂದ್ರನಾಥ್ ಟಾಗೋರ್‌ರವರು ಲಿಟ್ಟನ್‌ರವರಿಗೆ ಬರೆದ ಪತ್ರಕ್ಕೆ ಜವಾಬಾಗಿ, ತಾನು ಹಿಂದೂ ದೇಶದ ಎಲ್ಲಾ ಸ್ತ್ರೀಯರಿಗೆ ಆಕ್ಷೇಪಕರವಾದ ಮಾತು ಹೇಳಲಿಲ್ಲವೆಂದೂ, ಅಂಥಾ ಗುಣವಿದ್ದ ಕೆಲವರಿಗೆ ಮಾತ್ರ ಹೇಳಿದನೆಂತಲೂ, ಬಹಳ ಉನ್ನತ ಸ್ಥಿತಿಯಲ್ಲಿರುವ ಹಿಂದೀ ಸ್ತ್ರೀ ವರ್ಗದ ಗುಣಕ್ಕೆ ತನ್ನ ಭಾಷಣದಿಂದ ಎಂದಿಗೂ ಕುಂದಕ ಬರಲಿಕ್ಕಿಲ್ಲವೆಂತಲೂ, ತನ್ನ ಮಾತನ್ನು ಕೆಲವರು ತಪ್ಪಾಗಿ ಅರ್ಥ ಮಾಡಿಕೊಂಡಿರುವರೆಂತಲೂ ಅವರು ಜವಾಬು ಕೊಟ್ಟಿರುವರು. ಈ ಜವಾಬು ನ್ಯಾಯವಾದದ್ದಲ್ಲವೆಂತಲೂ, ಲಿಟ್ಟನ್‌ರವರು ಹಿಂದೀ ಸ್ತ್ರೀಯರ ಇಂಥಾ ಗುಣಕ್ಕೆ ರುಜುವಾತು ಕೊಡಬೇಕು, ಇಲ್ಲವೇ ಶರತ್ತಿಲ್ಲದ ಕ್ಷಮಾಪಣೆ ಕೇಳಬೇಕೆಂತಲೂ, ಮಹಾತ್ಮ ಗಾಂಧಿಯವರು ಸೂಚಿಸಿರುವರು.

ವಿದೇಶ.

ಮಿತ್ರಮಂಡಲಿಯವರಿಗೂ ಜರ್ಮನಿಯವರಿಗೂ ಲಂಡನ್ನಲ್ಲಿ ಆದ ಒಪ್ಪಂದದ ಮಸೂದೆಯು ಜರ್ಮನಿಯ ರೀಚ್‌ಸ್ಟಾಗಿನಲ್ಲಿ ಎರಡನೇ ಸಾರಿ ಪಾಸಾಗಿದೆ. ಮೂರನೇ ಸಾರಿ ಪಾಸಾಗಲಿಕ್ಕೆ ಮೂರರಲ್ಲಿ ಎರಡಷ್ಟು ಬಹುಮತ ಸಿಕ್ಕಬೇಕಾಗಿದೆ. ನೇಶನಲಿಸ್ಟ ಸಂಗಡದವರು ಇದಕ್ಕೆ ವಿರೋಧಿಸುತ್ತಿದ್ದಾರೆ. ರೀಚ್‌ಸ್ಟಾಗಿನಲ್ಲಿ ಸಾಕಷ್ಟು ಬಹುಮತದಿಂದ ಈ ಮಸೂದೆಯು ಮಂಜೂರಾಗದಿದ್ದರೂ ಕೂಡ ಜರ್ಮನಿ ಸರ್ಕಾರವು ಲಂಡನ್ ಒಪ್ಪಂದಕ್ಕೆ ರುಜುಮಾಡುವರೆಂದು ತಿಳಿಸಿರುವರು.

ಬಿರುಗಾಳಿಗೆ ಸಿಕ್ಕಿ 'ಆರೇಬಿಕ್' ಹಡಗಿನಲ್ಲಿ 52 ಜನರಿಗೂ, 'ಹೋಮರಿಕ್' ಹಡಗಿನಲ್ಲಿ ಎಂಟು ಜನರಿಗೂ ಘಾಯಗಳುಂಟಾಗಿವೆ.

ಛೈನಾದ ಪ್ರೆಸಿಡೆಂಟರಾದ ಡಾಕ್ಟರ್ ಸನ್‌ಯಾಟ್‌ಸೆನ್‌ರವರ ಅಧಿಕಾರವು ದೇಶದಲ್ಲಿ ಕಡಿಮೆಯಾಗುತ್ತಾ ಬರುತ್ತಿದೆ. ಅವರ ಅಧಿಕಾರದಲ್ಲಿ ಎಲ್ಲಾತರದ ತೆರಿಗೆಗಳು ಹೆಚ್ಚಾದದ್ದೇ ಇದಕ್ಕೆ ಕಾರಣವಂತೆ. ವ್ಯಾಪಾರಸ್ಥರನೇಕರೂ, ಬ್ಯಾಂಕುಗಳೂ ಬಹಿಷ್ಕಾರ ಹಿಡಿದಿರುವವು. ವ್ಯಾಪಾರ ವ್ಯವಹಾರಗಳು ಹೆಚ್ಚು ಕಮ್ಮಿ ನಿಂತು ಹೋಗಿದೆ ಎಂದೇ ಹೇಳಬೇಕಾಗಿದೆ.

ಆಸ್ಟ್ರೇಲಿಯದ ಗವರ್ನರ್ ಜನರಲಾಗಿ ಲಾರ್ಡ ರೋನಾಲ್ಡ್‌ಷೆ ಯವರು ಲಾರ್ಡ ಫಾಸ್ಟರನಂತರ ಬರುವರೆಂಬ ವರ್ತಮಾನವು ಪೂರಾ ಸುಳ್ಳೆಂತಲೂ, ಅವರನ್ನು ನೇಮಿಸುವ ಮೊದಲು ಅಲ್ಲಿಯ ಸರ್ಕಾರದ ಆಲೋಚನೆಯನ್ನು ತೆಗೆದುಕೊಳ್ಳತಕ್ಕದೆಂತಲೂ ಆಸ್ಟ್ರೇಲಿಯದ ಮಂತ್ರಿ ಮಿ ಬ್ರೂಸ್‌ರವರು ಸೂಚಿಸಿರುವರು.

ಪಾಟ್ನಾ ಹೈಕೋರ್ಟಿನ ಜಸ್ಟಿಸ್‌ರಾದ ಮಿ. ಪಿ. ಆರ್. ದಾಸ್‌ರ್‌ರು ಇಂಗ್ಲೆಂಡಿಗೆ ತಲಪಿರುವರು. ಇವರು ಮಿ. ಸಿ ಆರ್. ದಾಸ್‌ರವರ ಸಹೋದರರು. ಇವರು ರಾಜಕೀಯ ವಿಷಯ ಮುಖ್ಯ ಮಂತ್ರಿಯವರೊಂದಿಗೆ ಮಾತಾಡಲೂ ಹೋದದ್ದು ಎಂದು ಅಲ್ಲಿಯ ಕೆಲವರ ಅಭಿಪ್ರಾಯ. ಇದು ನಿಜವಲ್ಲವೆಂದು ಅವರು ಸೂಚಿಸಿರುವರಾದರೂ ಕೂಡ, ಅವರಿಗೆ ಲೇಬರ್ ಸರ್ಕಾರದಲ್ಲಿ ಮಂತ್ರಿಯವರನ್ನು ಕಾಣುವ ಸಂಭವವಿದೆಯಂತೆ.

ಬರ್ಮ್ಮಯುರ್ ನಾಯಿಡ್ ಮೆಂಬರ್ಸ್ ಯಲ್ಲಿ, ಜನರಲ್ ಡಯರ್‌ರವರ ಮಾಡಿದ್ದು ಸರಿಯೆಂತಲೂ ಅವರನ್ನು ಶಿಕ್ಷಿಸಿದ್ದು ಸೆಕ್ರೆಟರಿ ಆಫ್ ಸ್ಟೇಟ್‌ರವರ ತಪ್ಪೆಂತಲೂ, ಜಸ್ಟಿಸ್ ಮೆಕಾರ್ಡಿಯವರು ಹೇಳಿದ್ದರಿಂದ ಸಿವಿಲ್ ಆಡಳಿತೆಯಲ್ಲಿ ಮಿಲಿಟರಿ ಸಹಾಯವನ್ನು ಧಾರಾಳವಾಗಿ ಉಪಯೋಗಿಸಿಕೊಳ್ಳಬಹುದೆಂಬ ಅಭಿಪ್ರಾಯವು ಇಂಡಿಯಾ ಸರ್ಕಾರಕ್ಕೂ, ಪಬ್ಲಿಕಿನವರಿಗೂ ಹುಟ್ಟಬಹುದಾದುದರಿಂದ ಬ್ರಿಟಿಷ್ ಸರ್ಕಾರದವರು ಈ ಸೂಚನೆಗೆ ಒಪ್ಪುವದಿಲ್ಲವೆಂತಲೂ, ಸಿವಿಲ್ ಆಡಳಿತದಲ್ಲಿ ಆಗತ್ಯವಿರುವಷ್ಟು ಅದಷ್ಟು ಕಮ್ಮಿ ಮಿಲಿಟರಿ ಸಹಾಯ ಉಪಯೋಗಿಸಬೇಕೆಂಬ ಮೊದಲಿನ ತತ್ವವನ್ನೇ ಅವರು ಅನುಸರಿಸುವರೆಂದು ಸ್ಟೇಟ್ ಸೆಕ್ರೆಟರಿ ಲಾರ್ಡ ಒಲಿವಿಯರವರು ಇಂಡಿಯಾ ಸರ್ಕಾರಕ್ಕೆ ತಿಳಿಸಿರುವರು.

McDOWELL & Co., Ltd.,
MERCARA.

THE OLDEST ESTABLISHED FIRM IN COORG.

Great reduction in prices of the best Arms and Ammunitions.

FRESH STOCK! **FINEST QUALITY!!** **LOWEST PRICES!!!**

Buy your requirements from the Firm you know.

		RS.	A.	P.	
D.B.B L. guns by Smiths of Birmingham	each	165	0	0	
D.B.M.L. guns	,, ,, ...	85	0	0	
S.B M.L guns	,, ,, ...	65	0	0	
12 Bore cartridges No 3, 4, 6 & 8	per 100 ...	14	8	0	
Do. A & B	,, ...	16	0	0	
Do S.G & S.S.G.	,, ...	18	12	0	
Do. Destructor	,, ...	36	8	0	
Gun powder F.F. ½ lb flask	...	1	0	0	
Caps	per 1000 ...	5	4	0	
Caps	ten for ...	0	1	0	
Shot of all grades	per lb ...	0	10	0	
S.G shot	per lb. ...	0	12	0	
Loading implements set 12, 16, & 20 bore	...	18	0	0	per set

ಪತ್ರವ್ಯವಹಾರಗಳು.

ಬಾತ್ಮಿದಾರರು ತರುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ. ಸಂ.

ಅಯ್ಯಾ, ಸುಬ್ಬಯ್ಯನವರೇ,

ದೇಶದ ಹಿತೈಷಿಗಳಾದ ತಾವು ಮುದ್ದಪ್ಪನವರ ಬಾತ್ಮಿಗೆ ಬರೆದ ಜವಾಬನ್ನು ಈ ದಿನ ಪೇಪರಿನ್ನಲ್ಲು ಓದಿ ನನ್ನ, ತಿಳುವಳಿಕೆಗೆ ತಂದುಕೊಂಡೆನು. ತಮ್ಮ ಬಾತ್ಮಿಗೆ ಹೆಚ್ಚು ಬರೆಯುವೆನೆಂದರೆ ಈಗ ಪ್ರಪಂಚದಲ್ಲು ಹೋರಾಡುತ್ತಿರುವ ಸಹೋದರತ್ವವನ್ನು ಗ್ರಹಿಸಗೆ ತಂದುಕೊಂಡದ್ದರಿಂದ ನನ್ನ ಕೈ ಬರುವದಿಲ್ಲ. ಹೆಚ್ಚಿನ ಅಂಶಗಳ ಪೈಕಿ, ಒಂದು ಚಿಟಿಕೆಯಷ್ಟು ದೇಶದ ಮಹನೀಯರ ತಿಳುವಳಿಕೆಗೆ ತರಲು ಇಚ್ಛೈಸುತ್ತೇನೆ. ಎಲ್ಲಾ ರತ್ನಗಳಿಗಿಂತ ವಿದ್ಯಾರತ್ನವೇ ಮುಖ್ಯವಾದದ್ದೆಂಬುದು ಸರ್ವರಿಗೂ ತಿಳಿದ ಸಂಗತಿಯಾಗಿದೆ. ಈಗಿರುವ ನಿಮ್ಮ ಜನಾಂಗದ ಬೋರ್ಡಿಂಗ್ ಮನೆಗೆ, ಅದಿಯಲ್ಲು ಬೋರ್ಡಿಂಗ್‌ಮನೆ ಬೇಕು ಎಂಬದಾಗಿ ಏರ್ಪಾಡುಮಾಡುವಾಗ್ಯೆ ನಮ್ಮ ಜನಾಂಗದವರಿಂದ ಚಂದಾ ಹಣವನ್ನು ಆಗ್ಯೆ ಉದ್ಯೋಗವಾಡುತ್ತಿದ್ದ ತಮ್ಮ ದೊಡ್ಡ ದೊಡ್ಡ ಹುದ್ದೆಗಾರರು ವಸೂಲ್ಮಾಡಿಕೊಂಡು ಬೋರ್ಡಿಂಗ್ ಆದನಂತರ, ತಮ್ಮ ಒಂದೇ ಸಂಗಡದವರಿಗೆ ಪಕ್ಕಾ ಎಂಬದಾಗಿ, ನಮ್ಮ ಸಂಗಡದ ಬಾಲಕರು ಬಂದಾಗ್ಯೆ ಅನೇಕ ತರದ ಅಡ್ಡಿಗಳನ್ನು ಮಾಡಿ ಹೆರಸಿದರಿಂದಲೇ, ನಮ್ಮ ಪಂಡದವರು ಇಷ್ಟು ವಿದ್ಯೆ ಇಲ್ಲದೆ ಹಿಂದೆ ಇರಲು ಕಾರಣವೆಂದು ಮನಸ್ಸಾಕ್ಷಿಯಾಗಿ ತಮ್ಮ ಮನಸ್ಸಿನಲ್ಲಿ ಇಲ್ಲವೋ? 1910ರಲ್ಲಿ ಕಮಿಷನರಾಗಿದ್ದ ಮಿ ಎಲ್ ಟಿ ಹ್ಯಾರಿಸ್ ಸಾಹೇಬರವರು ನಮ್ಮ ಮುಂದಾಳುಗಳಾಗಿದ್ದವರಿಂದ ಜನಾಂಗದ ಕ್ಷೇಮ ಚಿಂತನೆಯನ್ನು ತಿಳಿದು ಬೋರ್ಡಿಂಗ್ ಮನೆಯನ್ನು ದಯಪಾಲಿಸಿದರಿಂದ, ಸದರಿ ಬೋರ್ಡಿಂಗ್ ಆದನಂತರ ಸದರಿ ಮುದ್ದಪ್ಪನವರು ಕಷ್ಟಪಟ್ಟು ಆದಿಯಿಂದ ಅಂತ್ಯದವರೆಗೆ ನಮ್ಮ ಜನಾಂಗವು ಹಿಂದೆ ಬಿದ್ದಿರುವ ಕಾರಣಗಳನ್ನು ಯೋಚನೆಗೆ ತಂದು ಬರೆದ ಬಾತ್ಮಿಯಾಗಿದೆ. ತಾವು ತಮ್ಮ ತಪ್ಪುಗಳನ್ನು ಬೂದಿಮುಚ್ಚಿದ ಕೆಂಡದಂತೆ ಬೆನ್ನ ಹಿಂದೆ ಇಟ್ಟುಕೊಂಡು ಸಹೋದರತ್ವವನ್ನು ಮನಸ್ಸಿನಲ್ಲಿ ಗ್ರಹಿಕೆಗೆ ತಾರದೆ ಬರೆದ ಬಾತ್ಮಿಯ ವಿಷಯದಲ್ಲು ನಾನು ಬಹಳ ವ್ಯಸನಪಡುತ್ತೇನೆ. ಇನ್ನು ಮುಂದಕ್ಕಾದರೂ ಸಹೋದರತ್ವವು ಮನಸ್ಸಿಗೆ ಬರುವಂತೆ ಮಾಡಲಿ ಎಂದು ದೇವರನ್ನು ಪ್ರಾರ್ಥಿಸುತ್ತೇನೆ. ವಿದ್ಯೆಯಲ್ಲು ಹಿಂದೆಬಿದ್ದು ಕಣ್ಣಿಲ್ಲದೆ ಕುರುಡರಾಗಿದ್ದ ಜನಾಂಗಕ್ಕೆ ಹಾದಿತೋರಿಸಿ ಕೊಟ್ಟ ಮಿ, ಎಲ್. ಟಿ. ಹ್ಯಾರಿಸ್ ಸಾಹೇಬರವರಿಗೆ ದೇವರು ದೀರ್ಘಾಯುಷ್ಯ ಕೊಡಲಿ ಎಂದು ನಮ್ಮ ಜನಾಂಗದ ಪರವಾಗಿ ನಾನು ಬೇಡುತ್ತೇನೆ.

ಕೆ. ಎಸ್. ಸುಬ್ರಾಯ.

ಅಯ್ಯಾ, ಮುದ್ದಪ್ಪನವರೇ,

ಕನ್ನಡ ಜಿಲ್ಲೆಯಲ್ಲಿರುವ ಗೌಡುಗಳ ಸ್ಥಿತಿ ಹ್ಯಾಗಿದೆ? ಅವರಲ್ಲಿ ಎಷ್ಟು ಜನರು ವಿದ್ಯಾವಂತರಾಗಿದ್ದಾರೆ? ಮತ್ತು ಅಲ್ಲಿಯ ಬೇರೆ ಜನರು ಅವರನ್ನು ಯಾವ ರೀತಿಯಲ್ಲಿ ಕಾಣುತ್ತಿದ್ದಾರೆ? ಕನ್ನಡ ಜಿಲ್ಲೆಯ ಗೌಡುಗಳವರು ಈಗಲೂ ಕೊಡಗಿಗೆ ಬರುತ್ತಿರಲು ಕಾರಣವೇನು? ಅಲ್ಲಿಂದ ಕೊಡಗಿಗೆ ಬರುವ ನಿಮ್ಮ ಸಹೋದರರಿಗಾಗಿ ನೀವು ಏನು ಮಾಡುತ್ತೀರಿ? ಮಡಿಕೇರಿ ತಾಲೋಕಿನಲ್ಲು ನೂರಾರು ಮುಕ್ತಾಲು ಪಾಲು ಓಟರುಗಳು ನಿಮ್ಮ ಗೌಡುಗಳು ಆಗಿರುವಾಗ್ಯೆ, ನಿಮ್ಮವರೊಬ್ಬರು ಕೌನ್ಸಿಲಿಗೆ ಚುನಾವಣೆಯಾಗದಿರಲು ಕಾರಣವು ಯಾರು? ನಿಮ್ಮಲ್ಲಿಯೇ ಕಸ್ಬಸ ಹಾಕುವವರೆಂದೂ ಕಳ್ಳ ಹಾಕುವವರೆಂದೂ ಸಂಗಡ ಭೇದಗಳಿಲ್ಲವೋ? ಇದನ್ನು ಸರಿಪಡಿಸಿ ಒಗ್ಗಟ್ಟನ್ನು ತರಲು ನೀವು ಎಷ್ಟರಮಟ್ಟಿಗೆ ಪ್ರಯತ್ನಿಸಿರುತ್ತೀರಿ? ದಕ್ಷಿಣಕನ್ನಡದಲ್ಲು ನಿಮ್ಮ ಜಾತಿಯವರು, ಬ್ರಾಹ್ಮಣರು, ಬಂಟರು ಮೊದಲಾದವರಿಗಿಂತ ಹಿಂದುಳಿದವರಾಗಿಲ್ಲವೇ? ಅದೂ ಕೂಡ ಮದ್ರಾಸ್ ಪ್ರಾಂತ್ಯಕ್ಕೆ ಹೆಚ್ಚಿನ ಪೂರ್ವಾರ್ಡು ಬರಕೂಡದೆಂದು ಅವರು ಅಡ್ಡಿ ಮಾಡಿರುವರೇ? ಗ್ರಾಮಾಂತರಗಳಲ್ಲಿ ಕೊಡಗರು ಮತ್ತು ಬ್ರಾಹ್ಮಣರು ನಿಮ್ಮವರನ್ನು ಯಾವ ಬಾಬಿನಲ್ಲು ಹಿಂದುಳಿದವರಂತೆ ಕಾಣುತ್ತಿರುವರೆಂದು ದಯವಿಟ್ಟು ತಿಳಿಸುವಿರಾ? ಟಿರಿಟೋರಿಯಲ್ ಪಟಾಲಾಮಿನಲ್ಲಿ ಗೌಡುಗಳೇ ಒಂದು ಬೇರೆ ಕಂಪೆನಿಯಾಗಿಯೂ, ಕೊಡಗರೂ ಬೇರೆ ಜನರೂ ಮಿಶ್ರವಾಗಿಯೂ ಇರಲು ಕಾರಣರು ಯಾರು?

'ಕುತೂಹಲಿ.'

ಮದ್ರಾಸಿನಲ್ಲಿ ಕೊಡಗರು.

ಕಳೆದ ತಿಂಗಳು 21ನೇ ತಾರೀಕಿನಲ್ಲಿ ಮದ್ರಾಸಿನಲ್ಲಿ ನಡೆದ 'ಕಾನ್ವೊಕೇಶನ್‌ನಲ್ಲಿ ಡಿಗ್ರಿ' ಹೊಂದಿದ ಕೊಡಗಿನ 'ಗ್ರೇಜುವೇಟ್ಸ್'ಗಳಿಗೆ, ಮದ್ರಾಸಿನ ಕೊಡಗು ಸಂಘವು (The Coorg Association, Madras) ಕಳೆದ 24ನೇ ತಾರೀಕು ಆದಿತ್ಯವಾರ 'ಹೇರಿಸನ್ ಹೋಟೇಲ್,' ಬ್ರಾಡ್‌ವೇ, ಯಲ್ಲಿ ಒಂದು 'ಟೀ ಪಾರ್ಟಿ' ಯನ್ನು ಕೊಟ್ಟರು. 'ಗ್ರೇಜುವೇಟ್ಸ್'ಗಳ ಪೈಕಿ ಶ್ರೀಮತಿ ಸಿ. ಎ. ಸೀತಮ್ಮ, ಬಿ.ಎ., ಮಹಾರಾಜಶ್ರೀಗಳಾದ ಎನ್. ಮುದ್ದಪ್ಪ, ಬಿ.ಎ., ಬಿ.ಎಲ್., ಕೆ. ಪಿ ಮುತ್ತಣ್ಣ, ಬಿ.ಎ., ಮತ್ತು ಪಿ. ಯಂ. ಉತ್ತಪ್ಪ, ಬಿ.ಎ., ಯವರು ಹಾಜರಿದ್ದರು. ಮತ್ತು ಈ ವರ್ಷದ 'ಕಾನ್ವೊಕೇಶನ್' ಸಂಭ್ರಮವನ್ನು ನೋಡಲುದ್ದೇಶದಿಂದ ಮದ್ರಾಸಿಗೆ ತೆರಳಿದ್ದ ರಾವು ಬಹದೂರ್ ಕೆ. ಅಪ್ಪಯ್ಯನವರು ಸಹ ಹಾಜರಿದ್ದರು. ಸಂಘದ ಪ್ರೆಸಿಡೆಂಟರಾದ ಬ್ಯಾರಿಸ್ಟರ್ ಕೆ. ಎಂ. ಗಣಪತಿಯವರು ಈ ವರ್ಷದ 'ಗ್ರೇಜುವೇಟ್ಸ್'ಗಳಿಗೆ ಉತ್ಸಾಹವನ್ನೂ ಮತ್ತು ಉತ್ತೇಜನವನ್ನೂ ಉಂಟುಮಾಡುವ ಕೆಲವು ಮಾತುಗಳನ್ನಾಡಿ, ಅವರು ಸಭೆಯ ಆಮಂತ್ರಣವನ್ನು ಸ್ವೀಕರಿಸಿ ಬಂದದ್ದಕ್ಕಾಗಿ, ಸಂಘದ ಮೆಂಬರುಗಳಿಗುಂಟಾದ ಸಂತೋಷವನ್ನು ಸೂಚಿಸಿದರು. 'ಗ್ರೇಜುವೇಟ್ಸ್' ಗಳ ಪರವಾಗಿ ಶ್ರೀಮತಿ ಸಿ. ಎ. ಸೀತಮ್ಮನವರು ಮತ್ತು ಮಿ. ಕೆ. ಪಿ. ಮುತ್ತಣ್ಣನವರು ಸಹ ಅವರಿಗೆ ಆಮಂತ್ರಣವಿತ್ತದ್ದಕ್ಕಾಗಿ ಸಂಘದ ಮೆಂಬರುಗಳಿಗೆ ಮನಃಪೂರ್ವಕವಾಗಿ ವಂದಿಸಿದರು. ಅಲ್ಲದೆ ಶ್ರೀಮತಿ ಸೀತಮ್ಮನವರು ನಮ್ಮ ಚಿಕ್ಕ ಪ್ರಾಂತ್ಯವಾದ ('Baby Province') ಕೊಡಗು ವರ್ಷ ವರ್ಷಕ್ಕೆ ಇನ್ನು ಅನೇಕ ಮಂದಿ 'ಗ್ರೇಜುವೇಟ್ಸ್' ಗಳನ್ನು ಕಳುಹಿಸಲೆಂದು ತಮ್ಮ ಅಪೇಕ್ಷೆಯನ್ನು ಸೂಚಿಸಿದರು. ಇದರನಂತರ ಸಭೆಯ ಮೆಂಬರುಗಳ್ಲನೇಕರು ತಮಗೆ ಸಂಗೀತದಲ್ಲಿರುವ ಚಮತ್ಕಾರವನ್ನು ತೋರಿಸಿದನಂತರ, ಎಲ್ಲರೂ ಅವರವರ ಮನೆಗಳಿಗೆ ತೆರಳಿದರು.

ಪ್ರತ್ಯಕ್ಷದರ್ಶಿ.

ಅಯ್ಯಾ,

ಕಳೆದ ಆಗಸ್ಟ 1ನೇ ತಾರೀಕಿನ ಸಂಚಿಕೆಯಲ್ಲು ಮಿ. ಶ್ರೀ ಪಲ್ಲಚಂಡ ಬೆಳ್ಳಪ್ಪನವರು ಕೊಡಗಿನ ಜಮೀನ್ದಾರರ ಜಮೀನುಗಳೆಲ್ಲಾ ಸರ್ಕಾರಿ ಜಮೀನು, ನಾವೆಲ್ಲಾ ವಾರಗಾರರಾಗಿದ್ದೇವೆ, ನಮ್ಮ ಜನ್ಮಭೂಮಿ ಎಂಬುದು ಹೆಸ್ರಿನ ಮಾತಾಗಿದೆ, ಇದುದರಿಂದ ಸರ್ಕಾರದವರು ನಮಗೆ ಅನಾತುವರ ಬೆಳೆಯ ಭದ ಕಳೆದ ವರ್ಷ ಕೊಡಗಿಗೆ ಗದ್ದೆ ರಿಪೇರಿಗೆ ಕೊಟ್ಟ, ಹಾಗೂ ಹ

ಓ ಬಿಡಬೇಕೆಂಬ ವಸ್ತ್ಯೆರೆಯಾಗಿ ಬರೆದ ಲೇಖನಕ್ಕೆ ಒಪ್ಪು ಬಿ ಡಾದಿಸಿದರೂ ಸಾಲದು. ಅದರ ಈ ಬಾಬಿಗೆ ನಮ್ಮ ಹಕ್ಕ ನ್ನು ವಿವರಿಸಿದರೆ ಒಂದು ಮಹಾಭಾರತದಂಥಾ ಪುಸ್ತಕವನ್ನೇ ಬರೆಯಬೇಕಾಗುತ್ತೆ. ಆದುದರಿಂದ ಸದ್ಯ ಬೆಳ್ಯಪ್ಪನವರ ಲೇ ಖನಕ್ಕೆ ಅವಶ್ಯ ವಿಶಿಕೊಡಲು, ಮೂಲ ನಿವಾಸಿಗಳಾದ ಕೊಡ ಗರ ಒಳ್ಳೆ ಭೂಮಿ, ಸರ್ಕಾರಿ ಭೂಮಿ ಅಲ್ಲ, ಮತ್ತು ನಾವು ಸರ್ಕಾರಿ ವಾರಗಾರರಲ್ಲವೆಂಬ ಬಾಬಿಗೆ ಆಜ್ಞೆ ಕಥೆಯಿಂದಲ್ಲ, ಸರ್ಕಾರಿ ಲಿಖಾವಟ್ಟು ಆಧಾರದ ಮೇಲೆ ರುಜುವಾತು ಕೊಡು ತ್ತೇನೆ, ಅದೇನೆಂದರೆ—

1 ಸರ್ಕಾರಿ ಭೂಮಿಯ ನಾವು ವಾರಗಾರರಾಗಿದ್ದರೆ, ವ್ಯವಸಾಯದ ಒಗೆ ಕೊಡುವ ಟಕಾವಿ ಸಾಲಕ್ಕೆ ನಮ್ಮಿಂದ ಭೂಮಿ ಗಿರ್ವಿ ತೆಗೆದುಕೊಳ್ಳುವದಕ್ಕೆ ಹಕ್ಕಿರಲಿಲ್ಲ

2 ಸರ್ಕಾರಿ ಭೂಮಿ ಆಗಿದ್ದರೆ 1809ರಲ್ಲಿ ಸ್ವಕ್ಕೆ ಒಂದ ಕೊಡಗಿನ 1ನೇ ಅರಸನು, ಕುಟುಂಬದ ಮೇಸ್ತರ ಹ ವರಿಗೆ ಭೂಮಿ ತಿಸ್ತಿನಲ್ಲು ಒರಿಯುವ ಕಾರಣ ಇರುತ್ತಿರಲಿಲ್ಲ

3 ಸರ್ಕಾರಿ ಭೂಮಿ ಆಗಿದ್ದರೆ ತಿಸ್ತಿನಲ್ಲಿ ಒರೆದ ದರ 100 ಒಟ್ಟಿಗೆ ವಿದಿಸಿದ ಹತ್ತು ರೂಪಾಯಿ ಕಂದಾಯದಲ್ಲಿ ಆರಿ ವಾಸಿ ದರ 100ಕ್ಕೆ 5 ರೂಪಾಯಿ ಕಂದಾಯಕ್ಕೆ ನಮ್ಮ ಹಕ್ಕ ನ್ನು ಕಾಪಾಡಲಿಕ್ಕೆ ಖಾಯಂ ಕಂದಾಯಕ್ಕೆ ಬಿಟ್ಟು ಸ್ವದೇಶ ಬರಕೂಡಲಿಕ್ಕು ಅಂಥಾ ಸನ್ನದಿನ ಶರತ್ತು ಮೇರ ನಡೆಯು ಡುವ ಒಪ್ಪಂದದಿಂದ ಸಾವಾಗಿ ರಾಜ್ಯವನ್ನು ಕಂಪೆನಿ ಸರ್ಕಾ ರಕ್ಕೆ ಬಿಟ್ಟುಕೊಟ್ಟ 1834ರಲ್ಲಿ ಕಂಪೆನಿ ಸರ್ಕಾರದ ಮುಖ್ಯ ಅಧಿಕಾರಿಯು ಒಪ್ಪಿಗೆ ಸೈನ್ ಮಾಡಿಕೊಟ್ಟು ತಾಹುತ್ ಪೂರ್ವ ದ ಪದ್ಧತಿ ನಡಿಸಿಕೊಡುವದಕ್ಕೆ ಕಾರಣವೂ ಇರಲಿಲ್ಲ

4 ಒಳ್ಳೆ ವರುಷ್ಯನ ಸ್ವಂತ ಅನುಭವದ ಸ್ಥಿರಭೂಮಿ ಯನ್ನು ಒಳ್ಳೆ ಗೇಣಿ ಕುಳಕ್ಕೆ ವಾಸಕ್ಕೆ ವ ಭೋಗ ಗ್ಯಕ್ಕೆ ಕೊಡಬೇಕಾದರೆ 99 ವರ್ಷಕ್ಕೆ ಮೇಲ್ಪಟ್ಟು ಕೊ ಡುವ ಹಕ್ಕಿಲ್ಲ. ಹಾಗೆ ಕೊಟ್ಟಲ್ಲಿ ಅಂಥಾವನ ಹಕ್ಕೇ ಕಳಕೊ ಳ್ಳುತ್ತಾನೆ. ಇದನ್ನು ಯಾಕೆ ಬೆಳ್ಯಪ್ಪನವರು ನೆನಸಲಿಲ್ಲ.

5 ನಾವಾದರೆ ನಮ್ಮ ಒಳ್ಳೆ ಭೂಮಿ, ಬಾಯಿ ಕಂ ದಾಯ, ಪುತ್ರ ಪೌತ್ರ ಪಾರಂಪರ್ಯವಾಗಿ ಅನುಭವಿಸುವ ಹಕ್ಕಿ ನ ಶರತ್ತಿನಿಂದ ಒಮ್ಮೆ ಸನ್ನದ್ ಪಡದ ಜನಾಂಗದವರಾಗಿದ್ದೇವೆ ಇದನ್ನಾದರೂ ಬೆಳ್ಯಪ್ಪನವರು ಯಾಕೆ ಗಮನಕ್ಕೆ ತರಲಿಲ್ಲ. ಆದುದರಿಂದ ದಯಮಾಡಿ ತಮ್ಮ ಈ ಅಭಿಪ್ರಾಯದ ಬಾತ್ಮಿ ಯನ್ನು ವಾಪಾಸು ತೆಗೆದುಕೊಳ್ಳಬೇಕಾಗಿಯೂ ದೇಶ ದ್ರೋಹಕ್ಕೆ ಬೀಳಬೇಡವೆಂದೂ ವಿನಯದಿಂದ ಪ್ರಾರ್ಥಿಸುತ್ತೇನೆ

"ಸ್ವದೇಶಾಭಿಮಾನಿ"

ಮಡಿಕೇರಿಯ ಅರಮನೆ.

ಮಿತ್ರರೆ,

ಕೊಡಗು ದೇಶದಲ್ಲಿ ಹುಟ್ಟಿ ಬೆಳೆದವರೆಲ್ಲರೂ ಈ ಅರಮನೆಯ ವಿಷಯ ಕೇಳಲು ಕುತೂಹಲವುಳ್ಳವರಾ ಗಿರುವರೆಂಬುದಕ್ಕೆ ಯಾವ ಸಂಶಯವೂ ಇಲ್ಲ. ಅದೇನಾದ ರೆ—ಪ್ರತಿಯೊಬ್ಬನ ಮುತ್ತಜ್ಜನಾಗಲೀ ಅಜ್ಜನಾಗಲೀ ಅದ ರಲ್ಲಿ ಕೆಲಸಮಾಡಿದ್ದಾರೆಂಬುದು ಎಲ್ಲರೂ ತಿಳಿದ ಸಂಗತಿಯಾಗಿ ದೆ. ಹಿಂದೂ ದೇಶದ ಬೇರೆಕಡೆಗಳಲ್ಲಿರುವ ಹಿಂದೂ ರಾಜರ ಕ ಟ್ಟಡಗಳಂತೆಯೇ ಇದೂ ಸಹ ಒಳ್ಳೆ ತರದ ಶಿಲ್ಪಿಯಿಂದ ಕೂಡಿ ದ್ದಾಗಿ ಮಡಿಕೇರಿಯಲ್ಲಿರುವುದು. ನಮ್ಮ ಪೂರ್ವಿಕರದೇ ಹೇಳ ಬೇಕಾಗಿದೆ. ಇದು ಪ್ರತ್ಯಕ್ಷವಾಗಿ ನಮ್ಮ ಕಣ್ಣಿಗೆ ಕಾಣು ವುದರಿಂದ ನಮ್ಮ ಪೂರ್ವದ ರಾಜರು ಆಗಿಂದಾಗ್ಯೇ ನೆನಪಿಗೆ ಬ ರುವದಲ್ಲದೆ ರಾಜರಕಾಲದಲ್ಲಿಯೂ ಕೂಡ ಬಹಳ ಹಣವನ್ನು ಖರ್ಚುಮಾಡಿ ತಮ್ಮ ರಾಜ್ಯದ ಜನರುಪಾಸಿಗಾಗಿ ಎಂದಾ ಉತ್ತಮವಾದ ಕೆಲಸಗಳನ್ನು ಮಾಡಿಸಿದ್ದಾರೆಂಬುದು ತಿಳಿಯ ಬರುವದಷ್ಟೇ.

ಈ ಕಟ್ಟಡದ ಕೆಲಸವನ್ನು 1812ರಲ್ಲಿ ಪ್ರಾರಂಭಿಸಿ 1814 ರಲ್ಲಿ ಮುಗಿಸಿದರು. ಅಂದರೆ ಈಗ ಈ ಅರಮನೆಗೆ 110ವರ್ಷ ಪ್ರಾಯವಾಗಿದೆ. ನಮ್ಮ ಈಗಿನ ಸರ್ಕಾರದವರ 90 ವರ್ಷದ ಆಳಿಕೆಯಲ್ಲಿ ಇದನ್ನು ಕಾಪಾಡಿಕೊಳ್ಳಬೇಕೆಂದು ಉಪಯೋಗಿಸು ತ್ತಾ ಒಂದರೂ ಕಣ್ಣಿಗೆ ಕಾಣುವಂಥ ಹೆಚ್ಚಿನ ಹಣವೇನೂ ಇದಕ್ಕೆ ಖರ್ಚುಮಾಡಿರುವದು ತೋರುವದಿಲ್ಲ. ಇದರಲ್ಲಿ ಕೆ ಲವು ಕಡೆಗಳಲ್ಲಿ ಹಾಕಿದ್ದ ತಾಂಬ್ರದ ತಗಡುಗಳನ್ನು ಕಿತ್ತು ತೆಗೆದು ಮಾರಿರುವರು. ಇಂಜೀನೀಯರುಗಳು ತಮ್ಮ ಇಷ್ಟ ಬಂದಂತೆ ಕೆಲಸಮಾಡಿಸಿ ಅರಮನೆಯ ಮುಂಭಾಗವನ್ನು ಹಾಳು ಸಿರುವರು. ಹೀಗೆ ಮಾಡಿ ಎರಡು ವರ್ಷಗಳಾದರೂ ಕೂಡ ಅದನ್ನು ರಿಪೇರಿಮಾಡಿ ಮುಂದಿನ ಸ್ಥಿತಿಗೆ ಇಡುವ ತಂದಿರುವ ದಿಲ್ಲ. ಅರಮನೆಯ ಪೂರ್ವಭಾಗದಲ್ಲಿ ಯಾವ ಆಫೀಸನ್ನೂ ಇಡಬಾರದೆಂದು ಅದನ್ನು ಖಾಲಿಮಾಡಿದ್ದಾರೆ. ಅದು ಬೀಳುವದೆಂಬ ಭಯದಿಂದ ಎಸಿ ಅದರ ಸಮೀಪ 20 ಗಜ ಬರಕೂಡದೆಂದು ಬೋರ್ಡು ಹಾಕಿರುವುದಾಯಿತು. ಅದರೂ ಬೋರ್ಡು ಹಾಕಿಸಿದ ಆಫೀಸರುಗಳೂ ಬೇರೆಯವರೂ ಮುಂ ಭಾಗದ ಅರಮನೆಯ ಒಡಿಕ್ಕಾಗಿಯೇ, ಮುಂಭಾಗದ ಬಾಗಿ ಲಿಗಾಗಿ ಹತ್ತಿಯೂ ತಮ್ಮ ತಮ್ಮ ಆಫೀಸುಗಳಿಗೆ ಹೋಗುತ್ತಿ ರುವರು. 20 ಗಜದ ಒಳಗೇನೇ ಬೋರ್ಡು ಹಾಕಿಸಿದ ಆ ಫೀಸರುಗಳೂ ಇತರ ಅಂಗ್ಲೇಯರೂ ಟೆನ್ನಿಸ್ ಆಡುತ್ತಿರುವ ರು. ಮಿಲಿಟರಿ ಆಫೀಸರಿಗೆ ಇಳಿದುಕೊಳ್ಳಲು ಅದೇ ಮುಂ ಭಾಗವನ್ನು ಬಿಟ್ಟು ಆಯಿತು. ಕಟ್ಟಡದ ಮುಂಭಾಗದ

ಗೋಡೆಗಳಲ್ಲಿ ಒಡಕುಗಳು ಉಂಟಾಗಿ ಎರಡು ವರ್ಷಗಳಾದ ರೂ ಅವು ಹೆಚ್ಚಾಗದೆ ಹಾಗೆಯೇ ಇವೆ. ಇದರಿಂದ ಪೂರ್ವ ಕಾಲದ ಕಟ್ಟಡದ ಭದ್ರತೆಯು ಎಷ್ಟರದೆಂಬುದನ್ನು ವಾಚಕ ಮಹಾ ಶಯರೇ ಊಹಿಸಿಕೊಳ್ಳಬಹುದು.

ಅರಮನೆಯ ಈ ಭಾಗವು ತನ್ನಷ್ಟಕ್ಕೇನೇ ಬೀಳುವ ವರೆಗೆ ಬಿಟ್ಟರೆ ಅದನ್ನು ಚಾರ್ಜುಕೊಟ್ಟು ಕೇಳುವ ಹಣ ಉಳಿಕೆ ಯಾಗುವದೆಂದು ಸರ್ಕಾರದವರು ಇಷ್ಟರವರೆಗೆ ಬಾಕಿ ಮಾಡಿ ದ್ದೆಂದು ಕಾಣುತ್ತದೆ. ಯಾಕೆಂದರೆ—ಅದನ್ನು ಕೇಳಿಸಲು ಸುಮಾರು ಎಪ್ಪತ್ತು ಸಾವಿರ ರೂಪಾಯಿ ಬೇಕಾಗುವದೆಂದು ಕೊಡಗಿನಲ್ಲಿದ್ದ ಒಬ್ಬ ಎಗ್ಸಿಕ್ಯುಟಿವ್ ಇಂಜಿನಿಯರವರು ಹೇ ಳಿದರೆಂಬ ವರ್ತಮಾನ ಕೇಳಿದ ಜ್ಞಾಪಕ ನನಗಿದೆ.

ಈ ಅರಮನೆಯ ಸ್ಥಿತಿಯು ಹೀಗಿರುವದನ್ನು ನೋಡಿ ದ್ದೂ ನಮ ದೇಶದವರು ಈ ವಿಷಯಕ್ಕೆ ಹಟ್ಟಿನ ಗಮನ ಕೊ ಡದೆ ಇರ ಇದು ಶ್ವಾಸನಕರ. ಈ ದೇಶವು 90 ವರ್ಷಗಳಿಂದ ಇಂಡಿಯಾ ಸರ್ಕಾರದವರಿಂದ ಆಳಲ್ಪಟ್ಟು ಈ ದೇಶದ ಆದಾ ಯದಿಂದ ಖರ್ಚುಕಳೆದು ಉಂಟಾದ ಉಳಿತಾಯವನ್ನು ಇಷ್ಟು ವರ್ಷಗಳ ವರೆಗೆ ಇಂಡಿಯಾ ಸರ್ಕಾರದವರು ಉಪಯೋಗಿಸಿ ಕೊಂಡ ಒಂದು ಎಲ್ಲರಿಕ್ಕೂ ಇರುವ ಅರಮನೆಯು ಬಾಗವನ್ನು ಕಟ್ಟಿಸಲು ಕೌನ್ಸಿಲು ಎಕ್ಕರನಂತರ ಅದರ ಆದಾಯದಂತೆ ಮಾಡಲಿ ಎಂದು ಇಂಡಿಯಾ ಸರ್ಕಾರದವರು ಹೇಳುವದು ಯಾ ರಿಗೆ ತಾನೇ ಆಶ್ಚರ್ಯವನ್ನುಂಟುಮಾಡದಿರುವದು? ಇದರಿಂದ ಮಧ್ಯ ಸರ್ಕಾರದವರು ಮಾಡಬೇಕಾಗಿದ್ದ ಹಾಳದ ಖರ್ಚನ್ನು ಈಗಿನ ಸ್ಥಳೀಯ ಸರ್ಕಾರದ ಮೇಲೆ ಹಾಕಿದಂತಾಯಿತು. ಇದು ಯಾವನ್ಯಾಯ? ನಮ್ಮ ಪ್ರಾಂತ್ಯವು ಇಂಡಿಯಾ ಸ ರ್ಕಾರದ ಆಳಿಕೆಯಲ್ಲಿದ್ದಾಗ ಬೀಳಲಿಕ್ಕಾದ ಅರಮನೆಯ ಭಾಗ ವನ್ನು ಬದಲಾವರ್ಷಗಳಿಂದ ಕಟ್ಟದೆಯೂ, ಈ ಪ್ರಾಂತ್ಯದ ಭಂಡಾರಗಳನ್ನು ಪ್ರತ್ಯೇಕಿಸಿಕೊಟ್ಟಾಗ ಕಳೆದ 90 ವರ್ಷಗಳ ಉತ್ಪತ್ತಿಯ ಯಾವುದೊಂದು ಉಳಿತಾಯವನ್ನೂ ಈ ಪ್ರಾಂತ್ಯ ದ ಸರ್ಕಾರಕ್ಕೆ ಕೊಡದೆಯೂ ಹೋದದ್ದು ಇಂಡಿಯಾ ಸರ್ಕಾ ರದವರು ನಮ್ಮ ದೇಶಕ್ಕೆ ದೊಡ್ಡ ಅನ್ಯಾಯಮಾಡಿದಂತಾಗಿದೆ. ಆದುದರಿಂದ ಇದಕ್ಕೆ ಬೇಕಾಗುವಷ್ಟು ಹಣವನ್ನು ಇಂಡಿಯಾ ಸರ್ಕಾರದಿಂದ ಪಡೆಯುವಂತೆ ಹೋರಾಡಬೇಕಾದದ್ದು ದೇಶ ದವರ ಕರ್ತವ್ಯವಾಗಿದೆ.

ಈ ಸಂದರ್ಭದಲ್ಲಿ ಈ ಅರಮನೆಯನ್ನು ಪೂರ್ವದ ಸ್ಥಿತಿಗೆ ತರಬೇಕೆಂದು ಕುತೂಹಲವನ್ನು ಕೋರಿಸುತ್ತಿರುವ ನಮ್ಮ ಈ ಗಿನ ಕಮಿಷನರವರ ವಿಷಯ ಒಂದೆರಡು ಮಾತುಗಳನ್ನು ಹೇ ಳಿದರೆ ಹೆಚ್ಚಾಗದು. ದೇಶದವರ ಅಭಿಪ್ರಾಯಗಳನ್ನು ತಿ ಳಿಕೊಳ್ಳಲು ಆತುರವುಳ್ಳ, ಪ್ರಜೆಗಳ ಅಭಿಲಾಷೆಗಳಿಗೆ ಸಹಾನುಭೂ ತಿಯನ್ನು ತೋರಿಸುವ ಮತ್ತು ನಮ್ಮ ಪೂರ್ವದ ವಿಶೇಷ ವ ಸ್ತುಗಳನ್ನು ಕಾಪಾಡಲು ಪ್ರಯತ್ನಿಸುವಂಥ ಈಗಿನ ಕಮಿ ಷನರವರು ಕೌನ್ಸಿಲು ಸರ್ಕಾರವು ದೊರತಿರುವ ಈ ಸಮಯದ ಲ್ಲೇ ನಮಗೆ ಲಭಿಸಿದ್ದು ನಮ್ಮ ಅದೃಷ್ಟವೆಂದೇ ಹೇಳಬೇಕಾ ಗಿದೆ. ಇಂಥಾ ಮುತುವರ್ಜಿಯಿಂದ ಕೆಲಸಮಾಡುವ ಅಧಿ ಕಾರಿಗಳೇ ಬೇರೆ ಎಲ್ಲಾ ಇಲಾಖೆಗಳ ಮುಖ್ಯ ಅಧಿಕಾರಿಗಳಾಗಿ ಒಂದರೆ ನಮ್ಮ ಕೌನ್ಸಿಲು ಸರ್ಕಾರದಿಂದ ದೇಶಕ್ಕೆ ಪ್ರಯೋ ಜನ ಉಂಟಾಗುವದಲ್ಲದೆ ಅನ್ಯಥಾ ಅಲ್ಲ. ಮಿ|| ಟಿ. ಜಿ ಟ್ಯಾಸ್ಟರರವರು ಕಮಿಷನರರಾಗಿ ಒಂದಕೂಡಲೇ ಈ ಅರಮನೆಯ ದುರವಸ್ಥೆಯನ್ನು ನೋಡಿ ಪಶ್ಚಾತ್ತಾಪ ಪಟ್ಟರೆಂದೂ, ಎರಡು ವರ್ಷಗಳಿಂದ ಯಾವದೊಂದು ರಿಪೇರಿಯೂ ಮಾಡದೆ ಇದ್ದಂಥ ಮುಂಭಾಗಕ್ಕೆ ಪಯಿಂಟ್ ಹಾಕುವ ಮುಂತಾದ ರಿ ಪೇರಿ ಕೆಲಸಕ್ಕೆ ಒಡನೆ ಆರ್ಡರ್ ಕೊಟ್ಟರೆಂತಲೂ ತಿಳಿ ಯುತ್ತೇನೆ. ಅಲ್ಲದೆ ಈ ಕಟ್ಟಡವನ್ನು ಆಗಿನ ಸ್ಥಿತಿಯಲ್ಲಿಯೇ ಇಟ್ಟಿರುವುದು ಅವರಿಗೆ ಎಷ್ಟು ಅಸಮಾಧಾನವೆಂದು ಪಸ ಆರ್ಕ ಯಾಲಜಿ ನಮ್ಮ ಎಗ್ಸಿಕ್ಯುಟಿವ್ ಇಂಜಿನಿಯರಿಗಿಂತಲೂ ಇ ವರು ಈ ಕಟ್ಟಡದ ರಿಪೇರಿಯ ವಿಷಯ ಕುತೂಹಲವುಳ್ಳವರಾಗಿ ದ್ದಾರಾಗಿ ಕಂಡುಬರುತ್ತದೆ. ಮಾತ್ರವಲ್ಲ ಇದರ ರಿಪೇರಿಗೆ ಬೇಕಾದ ಹಣವನ್ನು ಕೊಡುವಂತೆ ಇವರು ಇಂಡಿಯಾ ಸರ್ಕಾರ ಕ್ಕೆ ಒಡಿದುವರೆಂಬ ಸುದ್ದಿಯೂ ಸಿಕ್ಕಿರುವದರಿಂದ ದೇಶದವರು ಅವರಿಗೆ ವಂದಿಸಬೇಕಾಗಿದೆ. ಈ ಕಮಿಷನರವರು ಇವರ ಆಳಿಕೆ ಯನ್ನು ಪ್ರಾರಂಭಿಸಿ ಕೆಲವು ತಿಂಗಳುಗಳು ಮಾತ್ರವಾಯಿತಷ್ಟೇ ಅವರ ಆಡಳಿತೆಯು ಹಚ್ಚಿನವಾಗುವದು ಹಾಗೆಯೇ ಇದೆ. ದೇಶ ದ ಕಡೆಗೆ ಅವರಿಗೆ ಈಗಿರುವ ಸಹಾನುಭೂತಿಯನ್ನು ಅವರು ಕಡೇ ವರೆಗೂ ತೋರಿಸುತ್ತಿರುವರೋ ಎಂದು ಎದುರು ನೋ ಡುತ್ತಿರುವ ದೇಶದವರನ್ನು ಅವರು ನಿರಾಶೆಗೊಳಿಸಲಾರರು ಎಂದು ನಂಬುತ್ತೇನೆ ಲ್ಲವೆಂದು ನಂಬುವೆ.

ದೂರದೃಷ್ಟಿ.

ಅಯ್ಯಾ ಮಿತ್ರರೇ,

ಕೊಡಗು ಪತ್ರಿಕೆಯ ತಾರೀಕು 8.8.24ರ ಸಂಚಿಕೆಯ 5ನೇ ಪೇಜಿನಲ್ಲಿ ಗಮನಿಸಿರುವ ವೀರರಾಜಪೇಟೆಯಲ್ಲಿರುವ ವ್ಯ ವಸಾಯದ ಪರೀಕ್ಷಾ ಕ್ಷೇತ್ರದ ಸಂಬಂಧವಾಗಿ ವ್ಯವಸಾಯ ಗಾರರು ಬರೆದ ಅಭಿಪ್ರಾಯಕ್ಕೆ ನಾನೂ ಸಹ ಒತ್ತಾಸೆಯಾಗಿ ಈ ಕೆಳಗಿನ ಸಂಗತಿಯನ್ನು ವಿವರಿಸಬೇಕಾಗಿದೆ

ಸದರಿಯನು ಆ ವ್ಯವಸಾಯ ಇಲಾಖೆಯ ವಿಷಯ ಸ ರ್ಕಾರದವರ, ಮತ್ತು ಕೌನ್ಸಿಲ್ ಮೆಂಬರುಗಳು ಸಹ ಈ ವಿಷ ಯ ಗಮನಕ್ಕೆ ತರಬೇಕಾಗಿ ಪ್ರಾರ್ಥಿಸುತ್ತೇನೆ. ಇದೇ ಸಂಬಂಧ ವಾಗಿ ದೇಶದ ರೈತರ ಕ್ಷೇಮಕ್ಕಾಗಿ ಇಟ್ಟ ವ್ಯವಸಾಯದ

ಕ್ಷೇತ್ರವನ್ನು ನಾನು ಮತ್ತು ನನ್ನ ಇನ್ನು ಕೆಲವು ಸ್ನೇಹಿತ ಕೌನ್ಸಿ ಲು ಮೆಂಬರುಗಳು ಸಹ ಈಗ್ಗೆ ಕೆಲವು ದಿವಸಗಳ ಹಿಂದೆ ಆತುರ ದಿಂದ ಹೋಗಿ ಸರ್ವಾಂಗದಿಂದ ನೋಡಿದೆವು. ಸದರಿ ಕ್ಷೇತ್ರವ ನ್ನು ಬುದ್ಧಿ ನೋಡಿದ ಕೂಡಲೆ ಆ ವ್ಯವಸಾಯದಿಂದ ರೈತರಿ ಗೆ ಪ್ರಯೋಜನ ಹೊಂದಬೇಕಾದರೆ ಕಡಿಮೆ ಪಕ್ಷ 20 ವರ್ಷ ಗಳಾದರೂ ಬೇಕಾಗಬಹುದಾಗಿ ನಮಗೆ ತೋರಿ ಬಂತು. ಅಷ್ಟರವರೆಗೆ ಇದಕ್ಕೆ ಎಷ್ಟರ ಮಟ್ಟಿಗೆ ಖರ್ಚಾಗಬಹುದೆಂದು ತಿಳಿಯಿರಿ? ಖರ್ಚು ಆದರೂ ರೈತರಿಗೆ ಇದರಿಂದ ಪ್ರಯೋಜ ನವಾದೀತೋ ಇಲ್ಲವೋ ಎಂಬುದೇ ಅನುಮಾನಾಸ್ಪದವಾಗಿ ದೆ. ಆ ಇಲಾಖೆಗಾಗಿ ನೇಮಿಸಲ್ಪಟ್ಟಿರುವ ಎಗ್ರಿಕಲ್ಚರ್ ಇ ನ್ಸ್‌ಪೆಕ್ಟರರು ಕೆಲವು ಮಟ್ಟಿಗೆ ವ್ಯವಸಾಯದ ಸಂಗತಿ ಪುಸ್ತಕ ದಲ್ಲಿ ಓದಿದವರ ಹೊರತು ಅನುಭವದಲ್ಲಿ ಅರಿತವರಲ್ಲ. ಅನುಭ ವವುಳ್ಳ ರೈತರಲ್ಲಿ ಸಹ ಕಂಡುಕೇಳಿ ಮಾಡುವನೆಂದರೆ ತಾನು ವ್ಯವಸಾಯದಲ್ಲಿ ಓದಿ ಪಾಸಾಗಿ ಬೇರೊಬ್ಬರನ್ನು ಕೇಳುವ ದು ನ್ಯಾಯವೋ ಎಂಬ ಅಭಿಮಾನವೇನಾದರೂ ಇರಬಹುದೊ ತಿಳಿಯದು

ಸದರಿಯವರು ಸರಿಯಾದ ಸಿಬ್ಬಂದಿಯಿಂದ ತಯಾರಿಸಿದ ವ್ಯವಸಾಯದ ಕ್ರಮವನ್ನು ನೋಡಿದರೆ ಇದಕ್ಕಿಂತಲೂ ಕಮ್ಮಿ ಸಿಬ್ಬಂದಿಯಿಂದ ಒಳ್ಳೆ ರೈತರು ಅನುಭವದ ವ್ಯವಸಾಯವೇ ಮೇ ಲಾಗಿ ತೋರಿತು. ಅಯ್ಯೋ ಏಕೆ ಎನ್ನುವಿರಿ ಮಿತ್ರರೆ ? ಅವರಿಗೆ ಪುಸ್ತಕದಲ್ಲಿ ಓದಿದ ಅನುಭವವೇ ಕಂಡಿತು, 3 ಚಿಲ್ಲರೆ ಏಕ ರೆ ಪರೀಕ್ಷಾ ಕ್ಷೇತ್ರಕ್ಕೆ ಒಬ್ಬ ರೈತರು, ಬೇಕಾದ ಕೂಲಿ, ಒಂದು ಗಾಡಿ, ಒಂದು ಜೋತೆ ಎತ್ತು, ಈ ಬೇಕಾದ ಸೌಲ ಭ್ಯಕ್ಕೆ ಕಡಿಮೆ ಕಾಣಲಿಲ್ಲ. ಸೌಕರ್ಯದಿಂದ ಯಾರಿಗಾದರೂ ಪ್ರಯೋಜನವಲ್ಲದೆ ಅಪ್ರಯೋಜನವಾಗಲಿಕ್ಕಿಲ್ಲ. ಅಯ್ಯಾ ಹೊಟ್ಟೆಗೂ ಬಟ್ಟೆಗೂ ಇಲ್ಲದೆ ದುಡಿದು ಕಷ್ಟಪಟ್ಟು ಕೊಡುವ ರೈತನ ಹಣವು ಈ ತರದಲ್ಲಿ ವಿನಿಯೋಗವಾಗುವದನ್ನು ಕಂಡು ಕೆಲವು ಮಟ್ಟಿಗೆ ಚಿಂತಿಸಬೇಕಾಯಿತು. ಬಂದು ವರ್ಷದಿಂದ ಇವರು ಮೇಹನತ್ ಮಾಡಿದ ವ್ಯವಸಾಯದ ಫಲಿತಾಂಶವನ್ನು ಯಾವ ಯಾವ ರೈತರಿಗೆ ಬೋಧಿಸಿ ಯಾರ್ಯಾರಿಂದ ಯಾವ ರೀತಿಯಿಂದ ನಡಿಸಿದರೂ ತಿಳಿಯದು.

ಈ ವರ್ಷ ಈ ಇಲಾಖೆಯ ಖರ್ಚಿಗಾಗಿ ಮಂಜೂರಾದ 1,000 ಚಿಲ್ಲರೆ ರೂಪಾಯಿಯಲ್ಲಿ ಗ್ರಾಮ ಗ್ರಾಮಗಳಲ್ಲಿ ಮುಖ್ಯ ಮುಖ್ಯವಳ್ಳ ರೈತರಿಗೆ 10 ರೂಪಾಯಿ ಮೇರೆ ಕೊಟ್ಟು ಅದಕ್ಕೆ ಸರಿಯಾದ ಗೊಬ್ಬರ ಪಸನಾದ ಬೀಜವನ್ನು ಸಹ ಕಳುಹಿ ಸಂಗಿ ತೆಗ್ಗೋತ್ಸಮರಿಂದ ಕೆಲವು ರೈತರಿಗೂ ಮೇಲ್ಬಂದ ಇನ್ಸ್‌ಪೆಕ್ಟ ರಿಗೂ ಸಹ ಯೋಚನೆ ಹೇಳಿ ಗ್ರಾಮಗಳಾಂತರಗಳಲ್ಲಿ ಒಬ್ಬಿಬ್ಬ ರಿಂದ ಒಂದೊಂದು ತರದ ವ್ಯವಸಾಯ ನಡಿಸುವಂತೆ ಅವರಿಗೆ ತೋರಿ ಅವರಿಂದಲೇ ಮಾಡಿಸಿದ್ದಲ್ಲಿ ಆಯಾಯ ಗ್ರಾಮದ ಎಲ್ಲಾ ರೈತರ ಅನುಭವಕ್ಕೆ ಬರುತ್ತಿತ್ತು, ಮತ್ತು ಪ್ರಯೋಜ ನವೂ ಆಗುತಿತ್ತು. ಇದಕ್ಕ ಮಾಡಬಲು ಮಿ ಬಿ ಹಾಲರ್ ನಾಪೇಟಿರು ಪ್ರತಿಗ್ರಾಮಗಳಲ್ಲಿಯೂ ರೈತರಿಂದಲೇ ಸಿಂಗಲ್ ನಾಟಿ ಹಾಕಿಸಿ ಬೀಜವನ್ನು ಒದಸ್ಸು ಕಮ್ಮಿ ಮಾಡಿ ತೋರಿಸಿ ದ ಮೇರೆ ಮೊದಲು ಎಕರೆಗೆ ಎರಡು ಎರಡೂವರೆ ಒಟ್ಟಿ ಬೀಜ ಹಾಕುತಿದ್ದದ್ದು ಈಗ ಅದೇ ಮೇರೆ ಎಕರೆಗೆ 60, 70 ಸೇರು ಬೀಜ ಹಾಕಿದರೆ ಸಾಕಾಗುವ ಹಾಗೆ ಮಾಡಿದರು. ಅದ್ದರಿಂ ದ ರೈತರಿಗೆ ಎಷ್ಟು ಬೀಜದ ಒತ್ತು ಉಳಿದ ಹಾಗಾಯಿತು. ಇದೇ ರೀತಿ ದೇಶದ ಏಳಿಗೆಗೆ ಬೇಕಾದ ವ್ಯವಸಾಯದ ಕ್ರಮ ವನ್ನು ರೈತರಿಂದಲೇ ಮಾಡಿಸಿ ಅದರ ಮೇಲ್ವಿಚಾರಣೆಯನ್ನು ಮೇಲ್ಕಂಡ ಇನ್ಸ್‌ಪೆಕ್ಟರು ನೋಡಿಕೊಂಡು ಹೋಗಿದ್ದರೆ ಎ ಷ್ಟೋ ಪ್ರಯೋಜನವಾಗುತ್ತಿತ್ತು. ಮತ್ತು ಖರ್ಚು ಬಾಬು ಸಹ ಕಡಿಮೆ ಆಗುತ್ತಿತ್ತು. ಇದಕ್ಕೆ ಸರ್ಕಾರದವರು ಸರಿ ಯಾದ ರೀತಿ ಗಮನಕೊಟ್ಟು ನಡೆಸಿಯಾರೆಂದು ನಂಬುತ್ತೇನೆ.

ಪಿ ಗಣಪಯ್ಯ, ಎಂ ಎಲ್ ಸಿ.

ಆರೋಗ್ಯ ಚಂದ್ರಿಕೆ.

ಮದ್ರಾಸ್.

ಸಂಪಾದಕರು ಡಾಕ್ಟರ್ ಪಿ. ರಾಮರಾವ್,

ಯಲ್. ಎಂ. ಎಸ್. ಯವರು.

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಚಿಕಿತ್ಸೆಯ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವ ದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ. ಈ ವೇನಪತ್ರಿಕೆಯು 'ಹೆಲ್ತ್' ಎಂಬ ಇಂಗ್ಲಿಷ್ ಮಾಸಪತ್ರಿಕೆ ಯ ಕನ್ನಡ ಪ್ರತಿಯಾಗಿದೆ. ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು, ತಗಿಂದಾಗ್ಗ ಪ್ರಕಟವಾಗುವವು.

ಆರೋಗ್ಯ ಚಂದ್ರಿಕೆಯಲ್ಲಿರುವ ಲೇಖನಗಳು ಹಳೆಯದಾ ಗದೆ ಪುನಃ ಪುನಃ ಓದಲು ಅರ್ಹವಾದವುಗಳಾಗಿರುವವು. ಆರೋಗ್ಯ ಚಂದ್ರಿಕೆಯನ್ನು ತರಿಸಿ ಬೈಂಡ್ ಮಾಡಿಸಿ ಇಟ್ಟು ಕೊಂಡರೆ ಸ್ವಲ್ಪ ಕಾಲದಲ್ಲಿ ಅದು ಅಮೂಲ್ಯವಾದ ಗ್ರಂಥವಾಗುವುದು. ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮುಂಗಡ ವರ್ಷಕ್ಕೆ 1-8-0. ಬಿಡಿ ಪತ್ರಿಕೆ 1ಕ್ಕೆ 0-2-0. ಹಿಂದಿನ ಸಂಚಿಕೆಗಳು ಕೂಡಾ ದೊರೆಯುವವು.

ಪತ್ರವ್ಯವಹಾರಕ್ಕೆ 'ಆರೋಗ್ಯ ಚಂದ್ರಿಕೆ' 321, ತಂಬುಶೆಟ್ಟಿ ಬೀದಿ, ಮದ್ರಾಸ್.

ಮಲೆಯಾಳ ವೈದ್ಯಶಾಲಾ.

ಮಲಬಾರಿನ ಸಂಜೀವನ್ ಮತ್ತು ಕಂಪನಿ ಬಂಬ ಆಯುರ್ವೇದ ವೈದ್ಯಶಾಲೆಯು ಒಂದು ಶಾಖೆಯು ವೀರರಾಜೇಂದ್ರಪೇಟೆಯಲ್ಲಿ ತೆರೆದಿರುತ್ತದೆ. ಇಲ್ಲಿ ಯಾವ ವಿಧದ ಕಾಯಿಲೆಯಾದ್ದರೂ ಪಂಡಿತರಿಂದ ಪರೀಕ್ಷಿಸಿ ಔಷಧಿಕೊಟ್ಟು ಗುಣಪಡಿಸಲಾಗುತ್ತೆ. ಔಷಧದ ಚಾರ್ಜು ಬಹಳ ಕಡಮೆ. ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ವಿವರವನ್ನು ತಿಳಿದುಕೊಳ್ಳಬಹುದು.

ನಾರಾಯಣ ನಂಬೀಶನ್,
ಆಯುರ್ವೇದ ವೈದ್ಯರು,
52—33 ವೀರರಾಜೇಂದ್ರಪೇಟೆ.

ಕಲ್ಪತರು ತಾಯಿತ.

ಸರ್ಪಕ್ಕೆ ಪಾಶಾಣರೋಗ, ಶರೀರ ಮುಖವಾಣರೋಗ, ಕುಷ್ಠರೋಗ, ಸಂಬಳ ಇಲ್ಲದೇ ನಿರುದ್ಯೋಗ ಸಂಕಟವಿಯಾಗರೋಗ, ಕೈಕೊಂಡ ಉದ್ಯೋಗದಲ್ಲಿ ಯಶಸ್ಸು ಸಿಗದ, ವ್ಯಾಪಾರದಲ್ಲಿ ಒಳ್ಳೇ ಲಾಭ ಸಿಗದ, ಸಾಲ ಮುಕ್ತ ಆಗದ, ಭೂತ ಪಿಶಾಚ ಗೃಹಬಾಧೆ ಅಗದಿರಲು, ಪ್ರತಿಕೂಲ ಜನರು ಅನುಕೂಲವಾಗಲು ಇವೇ ಮತ್ತು ಬೇರೆ ಎಲ್ಲಾ ಮನೋಗತಗಳು ಇಚ್ಛೆಯಂತೆಯೇ ಆಗುವ ಅಪೇಕ್ಷೆ ಇದ್ದರೆ ಇಚ್ಛೆ ತಕ್ಕ ಕೊಡುವ ಲೋಕಮಾನ್ಯ ಕಲ್ಪತರು ತಾಯಿತ ಉಪಯೋಗಿಸಿ ಶಕ್ತಿ ಇದ್ದರೆ ಅಂತರ ಇಚ್ಛೆ ಪೂರ್ಣವಾಗುವವು. ಅನುಭವದ ಮೇರೆಗೆ ಖಾತ್ರಿ ಆಗಲಾರದು. ತಾ. ಸ. ೧೬ ರಿಂದ ೧೬ ಗಣ ತೀವ್ರವಾಗಿ, ತಾ. ನ. ೩೬. ರಿಂದ ೬ ಗಣ ೧೬ ದಿವಸಗಳಲ್ಲಿ, ತಾ. ಸ. ೩೬. ರೂ. ೩ ಗಣ ೧ ತಿಂಗಳಲ್ಲಿ. ವ್ಹಿ. ಪಿ. ಖರ್ಚು ಬೇರೆ. ಗುಣವಾದದ್ದಲ್ಲ ತಾಯಿತದ ಖರ್ಚು ವಜಾಹೋಗಿ ಬಾಕೀ ಸಿಗುವದು.

ವಿಳಾಸ:—ಮ್ಯಾನೇಜರ್, ಕಲ್ಪತರು ತಾಯಿತ ಕೆ. ಎಮ್.
[52-6] ಪೋ. ಸಂಕೇಶ್ವರ ಜಿ. ಬೆಳಗಾಂವ.

ಅಪೂರ್ವ! ಹೊಸ ಪುಸ್ತಕ!! ಅಪೂರ್ವ!!!

ಶಿಶು ವೈದ್ಯ ಸಂಜೀವನೀ.

ಶಿಶುಗಳಿಗೆ ಯಾವ ವೈದ್ಯ ಸಹಿತವೂ ಇದುವರೆಗೆ ಸಿಗುವದಿಲ್ಲ! ಅದಕ್ಕಾಗಿ ಇದನ್ನು ಎಲ್ಲಾ ಆಯುರ್ವೇದ ಆಧಾರದಿಂದ ಪ್ರಕಟಿಸಿದ್ದೇವೆ. ಇದರಲ್ಲಿ ಸ್ತ್ರೀ ಪುರುಷರ ದೇಹತತ್ವ, ವಿವಾಹ, ದಾಂಪತ್ಯ ಸುಖ, ಪಾತಿವ್ರತ್ಯ ಧರ್ಮ, ಗರ್ಭಿಣಿಯರ ರೋಗನಿದಾನ, ಚಿಕಿತ್ಸೆ, ಉಪಚಾರ, ಸುಪ್ರಸವೋಪಾಯಗಳು, ಪ್ರಸವವಿಧಿ, ದಾಯಿಯ ಕರ್ತವ್ಯ, ಶಿಶುಪರಿಚರ್ಯಾ, ಶಿಶುಗಳ ಸಕಲ ರೋಗ ಚಿಕಿತ್ಸೆ, ಹಾಗೂ ಎಲ್ಲಾ ರೋಗಾದಿಗಳ ಶುದ್ಧಿ ಕ್ರಮ ಮತ್ತು ಪ್ರಸ್ತಗಳು ಮಾಡುವ ವಿಧಾನ, ಧಾತು ಪುಷ್ಟಿ ಔಷಧಿಗಳು ಇವೆಲ್ಲ ಶಾಸ್ತ್ರೀಯ ಮತ್ತು ಸಮರ್ಪಕವಾಗಿ ವಿವರಿಸಲ್ಪಟ್ಟಿದೆ. ಈ ಪುಸ್ತಕ ಕೇವಲ ದೊಡ್ಡದು. ಇದರಲ್ಲಿ ಹೆಂಗಸರು ಹುಡುಗರು ಸಹ ಸುಲಭವಾಗಿ ತಯಾರು ಮಾಡುವಂಥಾ ೪೦೦ ಔಷಧಿಗಳಿಗಿಂತ ಹೆಚ್ಚಾಗಿರುವವು. ಈ ಪುಸ್ತಕದ ಕ್ರಯವು ಅದರಲ್ಲಿರುವ ಒಂದೊಂದು ಔಷಧದ ಬೆಲೆಯಾಗಬಾರದೆಂಬುದನ್ನು ನೀವೇ ತಿಳಿದುಕೊಳ್ಳುವಿರಿ!! ಈ ಪುಸ್ತಕವನ್ನು ಕೊಂಡುಕೊಳ್ಳುವ ಪ್ರತಿ ಮನುಷ್ಯನೂ ಖಂಡಿತವಾಗಿ ಒಬ್ಬ ವೈದ್ಯನೇ ಆಗುತ್ತಾನೆ. ಕ್ರಯ ಪುಸ್ತಕ ೧ಕ್ಕೆ ರೂ ೨.

ನಮ್ಮ ವಿಳಾಸ —ಭಾರತಿ ಬುಕ್‌ಡಿಪ್ಪೋ,
12—1 ೧೯೯, ನಗರ್ತರಪೇಟೆ, ಬೆಂಗಳೂರು ಸಿಟಿ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್ ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

	ರೂ.
ಶೇರ್ ಒಡವಾಳ	50,000
ವಸೂಲಾದ ಶೇರ್ ಬಂಡವಲಗು	7,720
ಒಟ್ಟೂ ಒಂದ ಠೇವಣಾತಿ	51,200

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡಲ್ಪಡುತ್ತದೆ.

ಒಂದು ವರ್ಷ ಬಾಯಿದೆ ಅಧವ ಹೆಚ್ಚಿನ ಬಾಯಿದೆಯ ಠೇವಣಾತಿಗಳಿಗೆ ನೂರಕ್ಕೆ ಸಾಲಿಯಾನ ರೂ. 6-4-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಆರಿನ ಬಾಯಿದೆಯ ಠೇವಣಾತಿಗಳಿಗೆ ನೂರಕ್ಕೆ ಸಾಲಿಯಾನ 5ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋ ಆಪರೇಟಿವ್ ಆಡಿಟ್ಟಾಗುವದು ಲೆಕ್ಕ ಪರಿಶೋಧನೆ ಮಾಡುತ್ತಾರೆ.

ಪ್ರೆಸಿಡೆಂಟರು, ಟ್ರೆಜರರ್,
ಕೊಡಂದೇರ ಕುಟ್ಟಯ್ಯನವರು, ಟಿ. ಭುಜಂಗರಾಯರು
ರಾಯ್ ಬಹದ್ದೂರ್, ಬಿ.ಎ. ಬಿ.ಎಲ್.

ಸೆಕ್ರೆಟರಿ,
ಸಿ. ಯಮ್. ಪೊಣ್ಣಪ್ಪಯ್ಯನವರು, ಬಿ.ಎ. ಬಿ.ಎಲ್.
ಮಡಿಕೇರಿ, 1—7—1924.

SEE OUR

Arms And Ammunition Advertisement.

SPENCER & Co., Ltd., [24—21]
Mercara, and Pollibetta, Coorg.

When you think of going to Bombay
THINK OF

THE WELCOME HOTEL

Girgaum Back Road, BOMBAY.

Most airy accomodation—Most central situation—Excellent Meals
Every convenience.

ದಿ ವೆಲ್ಕಮ್ ಹೊಟೇಲ್.

ಗಿರಾಗಾವ್ ಬ್ಯಾಕ್ ರೋಡ್, ಬೊಂಬಾಯಿ.

ರೈಲ್ವೆಯಿಂದಿಳಿದೊಡನೆಯೇ ಅಲ್ಲಿ ಇಲ್ಲಿ ಒಂದು ಸುತ್ತದೆ, ಉತ್ಕೃಷ್ಟವಾದ ತಿಂಡಿ ಮತ್ತು ವಾಸಕ್ಕೆ ಯೋಗ್ಯವಾದ ಕೋಣೆಗಳು ಬೇಕೆಂದಿದ್ದರೆ ಬೊಂಬಾಯಿ ಪಟ್ಟಣದ ಮಧ್ಯಸ್ಥಲದಲ್ಲಿರುವ ಮೇಲ್ಕಂಡ ಹೊಟೇಲಿಗೆ ದಯಮಾಡಿ ಬರುವದು. ಯೋಗ್ಯವಾದ ಊಟ ಗಾಳಿಗನುಕೂಲವಾದ ಕೊಠಡಿ 15 ನಿಮಿಷಗಳಿಗೊಮ್ಮೆ ತಿರುಗುವ ಟ್ರ್ಯಾಮಿನ ಸೌಕರ್ಯ ಇಂತಹ ಪ್ರಯಾಣಿಕರಿಗೆ ಅನುಕೂಲವಾದ ಉಡುಪಿ ಬ್ರಾಹ್ಮಣರ ಭೋಜನಾಲಯ.

ಹೆಚ್. ಶ್ರೀನಿವಾಸರಾವ್,
[24—13] ಪ್ರೊಪ್ರೈಟರ್.

ಜಿ. ಹೆಚ್. ಹಾರ್. ಔಷಧಾಲಯ.

ಅಯ್ಯಾ,

ನಾನು ಸುಮಾರು ಪದಿನೈದು ವರುಷಗಳಿಂದ ಬಾಯಿಲಿನಿಂದ ಸ್ವಸ್ಥನಾಗಿ ದಿನೇ ದಿನೇ ಕೃಶವಾಗುತ್ತಾ ಬಂದು ಒರ್ವ ಮೂಳೆ ಸಾಂಬರವಾಗಿದ್ದು, ಮೂರು ವರ್ಷಗಳಿಂದ ಮಲಗಿದಲ್ಲೇ ಆಗಿದ್ದು, ನಂತರ ಕೈ ಕಾಲು ಮೊಬಿ ಊದಿ, ಹೊಟ್ಟೆಯಲ್ಲು ನೀರು ಬಂದು, ಎದೇ ವರೆಗೆ ಹತ್ತಿ ಉಸುರಾಡುವದಕ್ಕೂ ಬಹಳ ಕಷ್ಟಕ್ಕೆ ಬಂದು ಎದದ ಮಗ್ಗ ಲಿನಲ್ಲಾಗಲೀ ಬಲದ ಮಗ್ಗಲಿನಲ್ಲಾಗಲೀ ಮಲಗಲಿಕ್ಕಾಗದೆ ಕಷ್ಟಪಡುತ್ತಿದ್ದು, ಇಲ್ಲ ಬದುಕಲಾರೆನೆಂಬುವಾಗಿ ಪುಕಾರುಹುಟ್ಟಿ ನನ್ನ ಸಂಬಂಧಿಗಳು ಒಂದುನೋಡಿ ಬಹಳ್ವನರಿಂದ ವೀರರಾಜಪೇಟೆ ಜಿ. ಹೆಚ್. ಹಾರ್. ಆಯುರ್ವೇದೀಯ ಔಷಧಾಲಯದಿಂದ ಔಷಧಿ ತೆಗೆದುಕೊಂಡರೆ ಖಂಡಿತವಾಗಿ ವಾಸಿಯಾಗುವದೆಂದು ಹೇಳಿದರು. ಕಡಿಯತ್ತನಾಡು ನರಿಯಂಡದಗ್ರಾಮ ಕಾಂಟ್ರಾಕ್ಟರ್ ನನ್ನ ಚಾವ ಮ. ರಾ. ಶಂಕರನಾರಾಯಣೈಯ್ಯನವರು ನನಗೆ ಇದೇ ಮಾತನ್ನು ಒತ್ತಿ ಒತ್ತಿ ಹೇಳಿದರು. ಆಗ್ಗೆ ಆದನ್ನು ಅನುಮೋದಿಸಿ ಸ್ಪೀಕರ್, ಮ. ರಾ. ಹೆಚ್. ಸುಬ್ರಾಯರವರು ಪತ್ರಾಯದಿಂದ ನನ್ನ ಈ ಪ್ರಾಣಾಂತ್ಯ ಕಷ್ಟಕ್ಲೇಶದ ಬಳಿಯ ಜಹೋತಿಗೆ ಹೋಗಿ ಸದರಿ ಔಷಧಾಲಯದಿಂದ ಚಿಕಿತ್ಸೆಹೊಂದುವದಾಗಿ ವಿಚಾರಿಸಿ ನೋಡಿ ಅವರ ಊರು ಕುಂಬಾಪ್ಪೆನ್ಸ್ ಹೊರಟುಹೋದರು. ನಂತರ ಆಯುರ್ವೇದೀಯ ಪಂಡಿತರು ಮ. ಕೆ. ನಾರಾಯಣ ರಾಯರನ್ನು ಕರೆಸಿ ಪರೀಕ್ಷಿಸಿ ಅವರು ನನ್ನ ಈ ಬಾಯಿಲೆ ಖಂಡಿತವಾಗಿ ನಾನು ಗುಣಪಡಿಸ್ತೇನೆಂತ ಪೂರ್ಣ ಭರವಸೆಕೊಟ್ಟು ತಕ್ಕ ಔಷಧಿಯನ್ನು ಕೊಟ್ಟು 6 ದಿನಗಳೊಳಗೆ ಉಸುರಾಡುವುದು ಸಮವಾಯಿತು. ನಂತರ ನನಗೆ ಪೂರ್ಣ ಧೈರ್ಯ ಬಂದು ರವಲೆ ಬಡಲೇ ಅರು ತಿಂಗಳು ಚಿಕಿತ್ಸೆಯನ್ನು ಹೊಂದಿ ಆರೋಗ್ಯಪೂರ್ಣ ಗುಣಹೊಂದಿ ದೃಢಕಾಯನಾಗಿದ್ದೇನೆ. ತನ್ನಷ್ಟೇ ನನ್ನ ಹೊಸ ತರೂ ನನ್ನಿಬಂದು ಪದೇ ಪದೇ ಮೂರ್ಛೆಯಾಗುತ್ತಿದ್ದರು ಅವ ಕಷ್ಟ ನನು ಅವರಿಂದಲೇ ಪರಿಹಾರವಾಗಿ ಸುಖವಾಗಿರುತ್ತಾಳೆ. ನನ್ನ ಸ್ನೇಹಿತರಿಂದ ನನ್ನ ಪ್ರಾಣವು ಉಳಿಯಿತು. ಈ ವಾಗ ನನ್ನಿಂದ ಜನೋಪಕಾರವಾಗಲೀ ಎಂದು ನಿಮ್ಮ ಅಮೂಲ್ಯವಾದ ಪತ್ರಿಕೆಯಲ್ಲಿ ಪ್ರಕಟಿಸುತ್ತೇನೆ. ಅವ್ವರ ಇದರಿಂದ ಬಿಡದೇ ಸಾಧಿಸಿ ಔಷಧಿಯನ್ನು ಹೊಂದಿದರೆ ಎಂಥಾ ಹಳೇ ಕಾಯಿಲೆಯಾದರೂ ಖಂಡಿತವಾಗಿ ಗುಣವಾಗುತ್ತದೆ ಎಂದು ದೃಢವಾಗಿ ಹೇಳಬಲ್ಲೆನು. (?) ಶ್ರೀದೇವರು ಪಂಡಿತ ನಾರಾಯಣರಾಯರವರಿಗೆ ಆಯುರಾರೋಗ್ಯ ಐಶ್ವರ್ಯಾಭಿವೃದ್ಧಿಯನ್ನು ಕೊಟ್ಟು ರಕ್ಷಿಸಲಿ ಎಂದು ಸದಾ ಪ್ರಾರ್ಥಿಸುತ್ತೇನೆ. ತಾರೀಕು. 18-8-24.

ವಳಮುಡಿ, ಎನ್. ಎಸ್. ಸುಬ್ರಾಯ,
"ಪ್ರಕಟಣೆ". ಆಫೀ ಕ್ಲ್ಯಾಂಟರ್.
[12-2]

TO LET

Commodious unfurnished Bungalow at Somwarpet near the P.W.D. inspection Bungalow. Sitting, dining, 2 bed, 2 dressing and 2 bath rooms. Good situation Rs. 44 per mensem.

Apply,
Executive Engineer, P.W.D.
[3—2] Mercara.

ARMS & AMMUNITION MART.

Mahomedally-Noorbhoy.

337, Abdul Rehman, Street, near Crawford Market, BOMBAY.
Telegraphic Address :- "SHOOTER" Bombay.
[24-2] Please write for latest Catalogues.

ಸಂಪತ್ತಿಯ ಸಾಧನಗಳು.

ಅಯ್ಯಾ ಬಂಧುಗಳೇ ಸಂಪತ್ತಿಯು ಅಸ್ಸರ ಬಾಗಿಲಿನಲ್ಲಿರದೆ ನಿಮ್ಮ ಭೂಮಿಯಲ್ಲಿಯೇ ಅಡಗಿರುವದು. ಅವನ್ನು ಹೊರಕ್ಕೆ ತೆಗೆಯಲು ಕಿರ್ಲೋಸ್ಕರ ವ್ಯವಸಾಯ ಮುಟ್ಟುಗಳೇ ಯೋಗ್ಯವಾದ ಸಾಧನಗಳು.

ಅಕ್ಕಾಪಕ್ಕದ ರೈತರು ಹೂಟಿ ಆರಂಭ ಕೆರೆದುಕೊಂಡಿರುವರು. ಈ ಮನೆಯ ಚಕ್ರ ಕರಡದ ನೇಗಿಲುಗಳೂ ಗಾಣಗಳೂ ದೊರೆಯುತ್ತವೆ. ಕಿರಿದಾದ ಗಾಣವು ಒಂದು ಗಂಟೆಗೆ ೪೦೦ ಪೌಂಡು ಕಬ್ಬನ್ನು ತಿಂದಿ ಹಿಳಿಯುತ್ತದೆ.

"ಕೊ" ಎಂಬ ಕ್ಯಾಟಲಾಗನ್ನು ತರಿಸಿಕೊಳ್ಳಿರಿ.
ಕಿರ್ಲೋಸ್ಕರ ಬಂಧು ಲಿಮಿಟೆಡ್,
[10-12] ಕಿರ್ಲೋಸ್ಕರವಾಡಿ, ಜಿಲ್ಲಾ ಸಾತಾರಾ.

Health is Wealth.

WANTED all to improve health strength and vitality and thus save our nation from physical degeneracy. Send half-anna stamp and get 23 specimen photographs with full particulars from

Director, Physical Culture,
P. O. BASAVANAGUDI,
Bangalore City.

For your requirements of high grade Arms, Ammunition, Wine and spirits.

APPLY TO—

Mc. Dowell & Co., Ltd.

[24—21] **MERCARA.**

Printed & published by Kodanda Appayya, R.B., Chairman, Board of Directors, at "Kodagu" Press, Mercara for "Kodagu" Ltd.

Reg. No. M. 1551

If not delivered please return to

"KODAGU" OFFICE, MERCARA.

ಕೊಡಗು.

ಶಕ್ಯೇನ ಧರ್ಮದಯೂ ಏಷ್ಯಾ ನೀತಿ ಪ್ರಯತ್ನತಾ. ಶಿಷ್ಯಮತ್ತೇ ... ದಾನಾಂ ... !

ಎಡಿಟರ್ ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು

ಸಂಪುಟ ೪] ಕೊಡಗು, ಸನ ೧೯೩೪ನೇ ಇಸವಿ ಸಪ್ಟಂಬರ ತಾರೀಕು ... ಶುಕ್ರವಾರ [ಸಂಚಿಕೆ

ಒಳ್ಳೆ ಸಮಯ !

ಕೊಂಚ ಓದು ಬರಹ ತಿಳಿದಿದ್ದರೆ ಸಾಕು.

ಇನ್ಸ್ಪೆಕ್ಟರುಗಳು ಮಾಹೆಯಾನ ರೂ 40, ಪ್ಲಸ್ 20ರಿಂದ ರೂ. 75 ಪ್ಲಸ್ 25 ವರಿವೆ ಸಂಬಳದಿಂದಲೂ ಮತ್ತು ಸಬ್ ಏಜಂಟರುಗಳು ರೂ. 30, ಮತ್ತು ಕಮಿಷನ್‌ನಿಂದ ಚಟುವಟಿಕೆಯಾಗಿ ಕೆಲಸ ಮಾಡತಕ್ಕವರು ಬೇಕಾಗಿದೆ. ಬಾಕಿ ಸಂಗತಿಗಳಿಗೆ ಬರಿಯಿರಿ.

ಟಿ. ಸರವಣ ಕಂಪನಿ.
ಚೀಫ್ ಏಜಂಟರುಗಳು,
ದಿ ಮೈಸೂರು ಅಗ್ರಿಕಲ್ಚರಲ್ ಬ್ಯಾಂಕ್ ಫಾರಂ,
ಕಂಪೆನಿ ಲಿಮಿಟೆಡ್,
ಲ್ಯಾಕ್ಸ್‌ನಾಡನ್ ಬಿಲ್ಡಿಂಗ್. ಮೈಸೂರು.

8—5

ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ
ಜೀವವಿಮೆಯ ಕಂಪೆನಿ, ಲಿಮಿಟೆಡ್,
ಹೆಡ್ ಆಫೀಸು ಬೊಂಬಾಯಿ.

ಹಿಂದುಸ್ಥಾನದಲ್ಲಿ ಕಳೆದ 50 ವರ್ಷಗಳಿಂದಲೂ ಜೀವವಿಮೆಯ ಅನುಭವವನ್ನು ಪಡೆದಿರುವ ದೇಶೀಯ ಜೀವವಿಮೆ ಸಂಘಗಳಲ್ಲಿ ಅತ್ಯಂತ ದೊಡ್ಡದೂ ಮತ್ತು ಭದ್ರವಾದದ್ದೂ ಆದ "ಓರಿಯಂಟಲಿನ" ಜೀವವಿಮೆ ಪತ್ರಕ್ಕಿಂತಲೂ ಉತ್ತಮವಾದ ಅನ್ಯ ಬೇರೆ ದೊರೆಯಲಾರದು.

ಈಗಾಗಲೇ ವಿಮೆಸಂದಾಯಕವಾದಮೊತ್ತ 8,00,00,000
ಕೈಯಲ್ಲಿ ಮುಂದೆ ಬರಬಹುದಾದ ತಗಾದೆಗಳನ್ನು ಸುದಾರಿಸಲಿಕ್ಕಿಟ್ಟುಕೊಂಡಿರುವ
ಹಣ 6,00,00,000
ವಾರ್ಷಿಕ ಉತ್ಪತ್ತಿ 1,00,00,000

ಇಷ್ಟು ಭದ್ರತೆಯುಳ್ಳ ಕಂಪೆನಿಯಲ್ಲಿ ಜೀವವಿಮೆಯ ಪತ್ರ ತೆಗೆದುಕೊಳ್ಳಲಿಚ್ಛಿಸುವವರು ಯಾ, ಇದರ ವಿಷಯ ಹೆಚ್ಚಿನ ಸಂಗತಿ ತಿಳಿಯಬೇಕೆಂದಿರುವವರು, ದಯವಿಟ್ಟು ಈ ಕೆಳಗಿನವರ ಬಳಿ ವಿಚಾರಿಸಿಕೊಳ್ಳುವದು.

ಕೆ. ಪಿ. ಚೆನ್ನಪ್ಪನವರು,
ಓರಿಯಂಟಲ್ ಏಜನ್ಸೀ ಆಫೀಸು,
ವೀರಾಜಪೇಟೆ, ದಕ್ಷಿಣ ಕೊಡಗು.

LOOK AT SPE[NC]ERS' PRICES!

Arms and Ammunition.

By app[oin]tment suppliers of Arms, Ammunition & Accessories [to] His Excellency Lord Willingdon and the Viscount Goschen.

12 bore guns of all descriptions from Rs 55 to Rs 260.

			Rs	A.	P.	
12 bore cartridges	No. 2 ...	...	14	8	0	per 100
Do	S ...	...	18	12	0	"
Do.	Ball	...	20	10	0	"
Do	Letha	...	36	8	0	"
Gunpowder	F F F	tin ...	2	14	0	
Do	"	half lb " ...	1	14	0	
Do	F. F.	half lb " ...	1	12	0	
Do.	F	tin ...	3	2	0	
Caps		...	5	4	0	per thousand.
Caps		for ...	0	1	0	
Shot of all grades		...	0	10	0	per lb.
[illegible]		...	1	1	0	per lb.
500/450 cartridges		...	62	8	0	
300 cartridges		...	42	8	0	

We can supply any other kind of sport, cartridge, gun or rifle, which means

GET IT AT SPENCERS'
Mercara.

ಸ್ಪೆನ್ಸರ್ ಕಂಪೆನಿಯ ಕ್ರಯಗಳನ್ನು ನೋಡಿರಿ

... ... ಮದ್ದು.

... ತೋಟಿ, ಗುಂಡುಮದ್ದು ಮೊದಲಾದ ಸಾಮಾನುಗಳನ್ನು ... ಮಾಡುವ.

... ರೂ. 55 ರಿಂದ 260 ರ ವರೆಗೆ.

			ರೂ.	ಅ.	ಪೈ.	
ಹನ್ನೆರಡು ತೂತಿನ ಕಾರ್ಟ್ರಿಜ್ಜು, ನಂ. 1 2, 4, ... 8		....	14	8	0	ನೂರಕ್ಕೆ
ಡಿಟೊ	ಎಸ್. ಜಿ.	....	18	12	0	"
ಡಿಟೊ	ಬಾಲ್	....	20	10	0	"
ಡಿಟೊ	ಲೆತಾ	....	36	8	0	"
ಕೋವಿ ಮದ್ದು ... ಡಬ್ಬಿ		....	2	14	0	
ಡಿಟೊ	ಅರ್ಧಪೌಂಡು ...	....	1	1	0	
ಕೋವಿ ಮದ್ದು ... ಅರ್ಧ ಪೌಂಡು		....	1	[illegible]	0	
... ಪೌಂಡು ಡಬ್ಬಿ		....	[illegible]	2	0	
ಕೇಪು ... ಸಾವಿರಕ್ಕೆ ...		....	5	4	0	
ಕೇಪುಗಳು ... ಪೆಟ್ಟಿಗೆ ...		....	0	1	0	
ಚರೆಗುಂಡುಗಳು ... ಪೌಂಡಿಗೆ		....	0	10	0	
ಉಂಡೆಗಳು, ಪೌಂಡಿಗೆ	....	....	1	1	0	
500/450 ತೋಟಗಳು	....	....	62	8	0	
300 ಡಿಟೊ	....	....	42	8	0	

ಬೇರೆ ಯಾವ ತರದ ... ತೋಟಿ, ಕೋವಿ ಯಾ ... ಬೇಕಾದರೂ ನಾವು ಒದಗಿಸಿಕೊಡುತ್ತೇವೆ.

[4—4]

ಆದನ್ನು ಸ್ಪೆನ್ಸರಿನ ಬಳಿ ... ತಿರಿ. ಮಡಿಕೇರಿ.

ಕೊಡಗು

[illegible] ೧೯೨೪ನೇ ಇಸವಿ ನವೆಂಬರ್ ತಾ॥ [illegible]

ಉಕ್ಕುಂದ

ಮಹಾತ್ಮ ಗಾಂಧಿಯವರು ಬೇಡುವ ಭಿಕ್ಷೆ

ಇಂಡಿಯನ್ ನ್ಯಾಶನಲ್ ಕಾಂಗ್ರೆಸ್ ಅಂದರೆ ಅಖಿಲ ಭಾರತ [illegible] ಮಹಾತ್ಮ ಗಾಂಧಿಯವರ [illegible] ಕಾಂಗ್ರೆಸ್ಸಿನ [illegible]

[illegible]

ಅಸ್ಪೃಶ್ಯತೆಯನ್ನು [illegible] ತಯಾರಾಗಬೇಕಲ್ಲ

ಬೆಳಗಾವಿಯಲ್ಲಿ ಡಿಸೆಂಬರಿನಲ್ಲಿ ನಡೆಯುವ ಕಾಂಗ್ರೆಸ್ಸಿನಲ್ಲಿ ಅಧ್ಯಕ್ಷರಾಗಿಯೂ [illegible] ಮಹಾತ್ಮ ಗಾಂಧಿಯವರು [illegible] ಕಾಂಗ್ರೆಸ್ಸಿನ ವಿಷಯ ತಿಳಿಯದೆ ಇರುವದರಿಂದ ಮಳ್ಳಿಯಂತೆ ಬರಬೇಕಾಯಿತು. [illegible] ಮುಖ್ಯವಾಗಿ [illegible] ಮಹಾತ್ಮರ ಹೇಳಿದಂತೆ ಕಾಂಗ್ರೆಸ್ಸಿನವರು [illegible] ಜಾತಿಗಳೊಳಗೆ ಹುಟ್ಟಿದ ಅಸ್ಪೃಶ್ಯತೆಯು ಹೋಗಲಾಡಿಸಬೇಕೆ ಮತ್ತು [illegible] ಈ ವರ್ಷ ನಡೆಯುವ ಕಾಂಗ್ರೆಸ್ಸಿಗೆ [illegible]

[illegible] ಸರಕಾರದವರಿಂದ ಸಹಕಾರ ಬೇಕಾದವರು ಸಹಕರಿಸಬಹುದು [illegible]

[illegible] ಕೊಳ್ಳಬಹುದು. ಸಮುದಾಯದ ರಾಜಕೀಯ ಕಾರ್ಯಗಳ [illegible] ಜಾತಿ ವ್ಯತ್ಯಾಸ [illegible] ಹೇಳಿಕೆ

[illegible]

ಅಸ್ಪೃಶ್ಯತೆ

(ಮಹಾತ್ಮ ಗಾಂಧಿಯವರ 'ಯಂಗ್ ಇಂಡಿಯಾ'ದ ಲೇಖನದಿಂದ)

ದಕ್ಷಿಣ [illegible] ದೇಶದ [illegible] ಬರೆದಿದ್ದಾರೆ

"[illegible] ಈ ಗ್ರಾಮವು [illegible] ಅಸ್ಪೃಶ್ಯತೆ ವಿಷಯದಲ್ಲಿ ಗ್ರಾಮದವರು ಕಾಂಗ್ರೆಸ್ಸಿನ ಮತಕ್ಕೆ [illegible] ಈ ಪ್ರಾಂತ್ಯದಲ್ಲಿ ಅಸ್ಪೃಶ್ಯತೆ [illegible] ಬಹಳ ಕಷ್ಟ

ಅಸ್ಪೃಶ್ಯತೆಯು [illegible] ಅಸ್ಪೃಶ್ಯರಿಗೆ [illegible]

[illegible]

[illegible] ಕಾಂಗ್ರೆಸ್ಸಿನ [illegible] ಈ ಸುಧಾರಣೆಗೆ [illegible] ಈ ಕಾರ್ಯವು ಬಹಳ ಮುಂದೆಸಾಗಿದೆ. [illegible]

[illegible]

[illegible] ಅಸ್ಪೃಶ್ಯರ [illegible] ಅಸ್ಪೃಶ್ಯರು [illegible]

ಸಾಧಾರಣ ತರದ ಸುಧಾರಕನಿಗೆ ತನ್ನ ಕೆಲಸದಲ್ಲಿ ಬಹುಗುಸ್ಸೆ ಹುಟ್ಟುವದು ಮಾತ್ರವಲ್ಲ ಅಸ್ಪೃಶ್ಯರಿಗೆ ಅವರ ಸ್ಥಿತಿಯೇ ಅವರಿಗೆ ನ್ಯಾಯವಾದದ್ದೆಂತ ಭಾವನೆ ಹುಟ್ಟುವ ಸಂಭವ ಸಹ ಇದೆ. ಹಿಂದೂ ಮತವನ್ನು ಶುದ್ಧಗೊಳಿಸಬೇಕಾದರೆ ನಮ್ಮ ರಕ್ತವನ್ನು ನೀರಿನಂತೆ ಚೆಲ್ಲಬೇಕಾಗುವದೆಂತ ನಾನು ಹೇಳಿದ್ದು ಯಾಕೆ ಎಂಬದು ಈಗ ಸ್ಪಷ್ಟವಾಗ ಬಹುದು.

ಕೊಡಗು ಚೀಫ್ ಕಮಿಷನರ್ ಸಂತೋಒಡವರು.

ನೋಟೀಸು.

ಬೆಂಗಳೂರು, ತಾರೀಕು 7ನೇ ಆಗಸ್ಟ್ 1924ನೇ ಇಸವಿ

Arsenic sulphide (ಆರ್ಸೆನಿಕ್ ಸಲ್ಫೈಡ್) ಅಂದರೆ ಮ್ಹಣಿಶಿಲೆ ಮತ್ತು Potassium chlorate (ಪೊಟೇಸಿಯಂ ಕ್ಲೋರೇಟ್) ಅಂದರೆ ಪಟಾಸ್ ಉಪ್ಪು ಇವೆರಡನ್ನೂ ಬೆರಸಿ ಪಟಾಸುಗಳನ್ನೂ, ಸಿಡಿಮದ್ದುಗಳನ್ನೂ ಮತ್ತು ನೆಲಗುಂಡುಗಳನ್ನೂ ತಯಾರುಮಾಡುವದು ಬಹಳ ಅಪಾಯಕರವಾದ ಕೆಲಸ; ಇದರಿಂದ ಇಂಡಿಯಾ ದೇಶದ ಕೆಲವು ಭಾಗಗಳಲ್ಲಿ ಪ್ರಾಣಹಾನಿ ಉಂಟಾಗಿದೆ.

ಕಾನೂನು ಮೇರೆ, ಆಲೋಚನಾ ಸಭೆಯೊಳಗಣ ಗವರ್ನರ್ ಜನರಲ್‌ರವರಿಂದ ಆ ಬಗ್ಗೆ ಲೈಸೆನ್ಸ್ ಹೊಂದಿಕೊಂಡ ವಿನಹ ಮೇಲ್ಕಂಡ ಪದಾರ್ಥಗಳ ಬೆರಕೆಯನ್ನು ತಯಾರಿಸುವದಾಗಲಿ ಅಥವ ಸ್ವಾಧೀನದಲ್ಲಿಟ್ಟುಕೊಳ್ಳುವದಾಗಲಿ ಆಟಂಕಿಸಲ್ಪಟ್ಟಿರುತ್ತದೆ. 1914ನೇ ಇಸವಿಯ ಇಂಡಿಯನ್ ಎಕ್ಸ್‌ಪ್ಲೋಜಿವ್ಸ್ ರೂಲ್ಸು ಮೇರೆ ಲೈಸೆನ್ಸ್ ಹೊಂದಿಕೊಂಡವಿನಹ ಮಣಿಶಿಲೆ ಮತ್ತು ಪಟಾಸು ಉಪ್ಪು ಬೆರಸಿಟ್ಟುಕೊಳ್ಳುವದು ಅಥವಾ ಮದ್ದು ತಯಾರಿಸುವುದು ಕಾನೂನಿಗೆ ವಿರೋಧವೆಂಬ ಸಂಗತಿಯನ್ನು ಈ ಮೂಲಕ ಬಹಿರಂಗವಾಗಿ ಎಚ್ಚರಕೊಡೋಣಾಗಿದೆ. ಅಲ್ಲದೆ ಈ ಬಾಬಿನಲ್ಲಿ ನ್ಯಾಯಕ್ಕೆ ವಿರೋಧವಾಗಿ ನಡೆಯುವ ಮನುಷ್ಯನು ಕ್ರಿಮಿನಲ್ ಪ್ರಾಸಿಕ್ಯೂಷನಿಗೆ ಗುರಿ ಮಾಡಲ್ಪಡುತ್ತಾನೆಂಬ ಸಂಗತಿ ಸಮಸ್ತರೂ ಎಚ್ಚರಿಕೆಯಲ್ಲಿಟ್ಟುಕೊಳ್ಳತಕ್ಕದ್ದು.

ಎ. ಹೆಚ್. ಯಲ್ ಕೇಟರ್,
ಚೀಫ್ ಕಮಿಷನರವರ ಸೆಕ್ರೆಟರಿ.

ಪೆಟ್ರೋಲ್ ಮಾಸ್ಟರ್.
(ಬರೆದು ಬಂದದ್ದು.)

ಪೃಥ್ವಿಯಲ್ಲಿ ಜನಿಸಿರುವ ಮಾನವರು ಮದ್ಯಪಾನವೆಂಬ ಪೈಶಾಚದ ಬಲೆಗೆ ಸಿಲ್ಕಿ ಧನಹಾನಿ, ಶರೀರಹಾನಿ, ಮಾನಹಾನಿ ಮೊದಲಾದ ಕಷ್ಟ ಪರಂಪರೆಗಳಿಗೊಳಗಾಗಿ ಬಳಲುತ್ತಿರುವದನ್ನು ಕಂಡೂ ಕಂಡೂ ತಾವು ಅದರಿಂದ ದೂರವಾಗಲೆತ್ನಿಸದಿರುವುದು ಶೋಚನೀಯವಾದದ್ದೇ ಸರಿ. ಆ ಪೈಶಾಚದ ಬಲೆಗೆ ಬೀಳುವ ಮೊದಲು ಅದರಿಂದುಂಟಾಗ ಬಹುದಾದ ಕಷ್ಟ ನಷ್ಟಗಳನ್ನಾದರೂ ಲೆಕ್ಕಿಸುವುದೇ ಇಲ್ಲ. ಒಂದು ಸಾರಿ ಅದರ ಮೋಹಪಾಶದಲ್ಲಿ ಸಿಕ್ಕಿದರೇ ಸರಿ! ಪುನಃ ಪುನಃ ಅದು ಹೆಚ್ಚಾಗಿ ತನ್ನ ಮೋಹಪಾಶವನ್ನು ಬೀಸಿ ಸೆಳೆದು ಅನೇಕ ತೊಂದರೆಗಳಿಗೀಡು ಮಾಡುತ್ತದೆಂಬದನ್ನು ತಿಳಿದೂ ತಿಳಿದೂ ಎಷ್ಟೋ ಮಂದಿ ಅದರಲ್ಲೇ ಮುಳುಗಿ ತೇಲುವರಲ್ಲಾ! ಇದೇನು! ಆ ಪೈಶಾಚದ ಮಹಿಮೆಯೊ? ಅಥವ ಮನುಷ್ಯನ ಅಸ್ಥಿರತ್ವವೋ? ವಾಚಕ ಮಹಾಶಯರೇ ನೀವೇ ಊಹಿಸಿ ನೋಡಿ, ಮಾನವನ ಅಸ್ಥಿರತ್ವವೇ ಇದಕ್ಕೆ ಮೂಲ ಕಾರಣವಲ್ಲವೇ? ಸ್ಥಿರಪ್ರಯತ್ನವೆಂಬ ಅಮೋಘವಾದ ಆಯುಧವು ಮಾನವ ಹೃತ್ಕಮಲದಲ್ಲಿರುತ್ತೆಂದರೆ ಅದರಿಂದಲೇ ಈ ಪೈಶಾಚದ ಬಲೆಯನ್ನು ಚೂರು ಚೂರುಗಳನ್ನಾಗಿ ಮಾಡಬಹುದಲ್ಲವೋ? ಆದರೂ ಮಾನವನಾದವನು ಸ್ಥಿರ ಪ್ರಯತ್ನವೆಂಬ ಆಯುಧವನ್ನು ಗಳಿಸಲೆತ್ನಿಸುವುದಿಲ್ಲವೇಕೆ? ಅತನಲ್ಲಿ ಮೂಡಿರುವ ಮಾಂದ್ಯವೇ ಇದಕ್ಕೆ ಕಾರಣವೋ ಏನೋ ಯಾರು ಬಲ್ಲ!

ಯಾವಾತನಾದರೂ ಒಮ್ಮೆ ಮದ್ಯಪಾನವೆಂಬ ಪೈಶಾಚದ ಪಾಶದಿಂದ ಕಟ್ಟಲ್ಪಡುವುದೇ ತಡ, ಅವನನ್ನು ಮತ್ತೊಮ್ಮೆ ತನ್ನ ಪಾಶದಿಂದ ತನ್ನ ಮೋಹಜಾಲಕ್ಕೆ ಸೆಳೆಯುವುದಕ್ಕೆ ಅದಕ್ಕೆ ಸುಲಭವೇ ಹೊರತು ಕಷ್ಟವಲ್ಲ. ಆದರೆ ದೃಢಸಂಕಲ್ಪವುಳ್ಳಾತನು ಈ ಪಾಶದಿಂದ ತಪ್ಪಿಸಿಕೊಳ್ಳಬಲ್ಲನೇ ಹೊರತು ಮತ್ತಾರಿಂದ ಸಾಧ್ಯವಾದುದು? ಆದ್ದರಿಂದ ಮನುಷ್ಯನು ಸ್ಥಿರ ಪ್ರಯತ್ನವೆಂಬ ಆಯುಧವನ್ನು ಸಂಪಾದಿಸಬೇಕಾದರೆ, ಮೊದಲು ತಾನು ಮಾಡುವ ಕರ್ತವ್ಯದ ಮೇಲೆ ಗಮನವಿಡಬೇಕು, ಮತ್ತೆ ಅದರಿಂದುಂಟಾಗ ಬಹುದಾದ ಕಷ್ಟ ನಷ್ಟಗಳನ್ನು ಮೊದಲೇ ಯೋಚಿಸಬೇಕು. ಹೀಗೆ ಮಾಡಿದರೆ ಆತನು ಕೊಂಚ ಮಟ್ಟಿಗೆ ಸ್ಥಿರಪ್ರಯತ್ನವೆಂಬ ಆಯುಧವನ್ನು ಸಂಪಾದಿಸಿದ ಹಾಗಾಯಿತು. ಯಾವಾತನಾದರೂ ತಾನು ಮಾಡುವ ಕಾರ್ಯದಲ್ಲಿ ಕೇಡುಂಟೆಂದು ತಿಳಿದೊಡನೆ ಆ ಕಾರ್ಯವನ್ನು ಒಡನೇ ತ್ಯಜಿಸುತ್ತಾನಲ್ಲವೋ? ಹಾಗೆಯೇ ದೃಢಸಂಕಲ್ಪದಿಂದ ಒಂದು ಕರ್ತವ್ಯದ ಮುಂದಿನ ಕಷ್ಟ ಸುಖಗಳನ್ನು ಎಣಿಸಿದೊಡನೆ ಅದರಿಂದ ಕೇಡಾಗ ಬಹುದಾದರೆ ಅದನ್ನು ಏಕ ಸಂಪೂರ್ಣ ತ್ಯಜಿಸಬಹುದು. ಹೀಗೆ ಸ್ಥಿರ ಮನಸ್ಸಿನಿಂದ ತ್ಯಜಿಸಿದೊಡನೆಯೇ ಸ್ಥಿರ ಪ್ರಯತ್ನವೆಂಬ ಅಮೋಘವಾದ ಆಯುಧವು ಮನುಷ್ಯನ ಹೃತ್ಕಮಲದಲ್ಲಿ ನೆಲೆಗೊಳ್ಳುವುದು. ಈ ಸ್ವಾಭಾವಿಕವಾಗಿ ಗಳಿಸಿದಾತ ಆಯುದವನು ಪಾಕಮಾಡಿಕೊಳ್ಳದಂತೆ ಎಚ್ಚತ್ತು ಇದ್ದರೆ, ಮದ್ಯಪಾನವೆಂಬ ಪೈಶಾಚದ ಬಲೆಯಿಂದಲ್ಲ! ಎಂಥಾ ಪೈಶಾಚದ ಬಲೆಯಿಂದಾದರೂ ಪಾರಾಗಬಹುದು. ಆದುದರಿಂದಲೇ ಇಂಥಾ ಆಯುಧವನ್ನು ಹೃದಯದಲ್ಲಿ ನೆಲೆಸಿಕೊಳ್ಳಬೇಕಾದರೆ ತನ್ನನ್ನು ಚಂಚಲಚಿತ್ತನನ್ನಾಗಿ ಮಾಡದಂತೆ ಭಗವಂತನನ್ನು ಆರಾಧಿಸಬೇಕು.

ವಾಚಕ ಮಹಾಶಯರೆ, ನಿಮ್ಮ ಕೊಂಚ ಸಂಶಯಾಸ್ಪದವಿದ್ದಿರಬಹುದಲ್ಲವೇ? ಮದ್ಯಪಾನವೆಂಬ ಪೈಶಾಚದ ಬಲೆಗೆ ಬೀಳಲಿಕ್ಕಿರುವವನು ಅದರಿಂದ ಬರಬಹುದಾದ ಮುಂದಿನ ಕಷ್ಟಗಳನ್ನು ಯೋಚಿಸಲಾರನೆಂದೋ? ಸರಿ ಅಂತಿರಬಹುದು. ಆದರೆ ಅಲ್ಪಜ್ಞನಾದ ನಾನು ಅನುಭವದಿಂದ ಪಡೆದ ಕೊಂಚ ವಿಷಯವನ್ನು ವಿವರಿಸಿ ಹೇಳುವೆನು. ನಿಮ್ಮ ಮನಸ್ಸಿಗೆ ಒಪ್ಪುವುದೆಂದರೆ ಗ್ರಹಿಸಿ, ಇಲ್ಲವೆಂದರೆ ತ್ಯಜಿಸಿ. ಆದರೂ ಈ ಲೇಖನಿಯು ಮಾತ್ರ ತನ್ನ ಕರ್ತವ್ಯವನ್ನು ಮಾಡದೆ ಬಿಡಲು. ಎಮುವು ಹೃದಯಂಗಮವಾಗಿರ ಬೇಕೆಂದು ಕಥಾರೂಪದಲ್ಲಿಯೇ ಬಿನ್ನೈಸುವೆನು.

ಗ್ರೀಷ್ಮ ಋತು, ಆಕಾಶವು ಮೇಘ ಸಮೂಹಗಳಿಂದ ಆಚ್ಛಾದಿಸಲ್ಪಟ್ಟು ಕುಲಜ ಮಿತ್ರನ ಮುಖಮಂಡಲವೇ ಅದೃಶ್ಯವಾಗಿ ಹೋಗಿದೆ. ಹೀಗೆ ಮಲಿಯಾದ ದಿನವನ್ನು ಪ್ರಥ್ವಿಗೆ ಗೋಚರಿಸುವಂತೆ ಮಾಡಲು ಚಂಡ ಮಾರುತನಾದ ಪಕ್ಷಿರಾಜನು ಮೇಘ ಸಮೂಹಗಳನ್ನು ಹೊಡೆದಟ್ಟುತ್ತಿರುವನು. ಪೃಥ್ವಿಯ ಸಮಸ್ತ ಚರಾಚರ ವಸ್ತುಗಳೆಲ್ಲಾ ಮಾರುತನ ಶಕ್ತಿ ಪ್ರಯೋಗದಿಂದ ಅಲ್ಲೋಲ ಕಲ್ಲೋಲವಾಗುತ್ತಿರುವವು. ಮೇಘ ಸಮೂಹಗಳು ಮಾರುತನ ಹೊಡೆತದಿಂದ ಚೂರುಚೂರಾಗಿ ಒಡೆದು ವರ್ಷಧಾರೆಯು ಅತಿ ರಭಸದಿಂದ ಸುರಿಯ ತೊಡಗಿತು. ಪಕ್ಷಿ ಸಮೂಹವೆಲ್ಲಾ ತಮ್ಮ ತಮ್ಮ ಗೂಡುಗಳನ್ನು ಸೇರಿದವು. ಎಲ್ಲೆಲ್ಲಿ ನೋಡಿದರೂ ಮಳೆಗಾಳಿಯ ಆರ್ಭಟವೇ ಹೊರತು ಬೇರೇನೂ ಕೇಳುವಂತಿಲ್ಲ. ಹಿಮವು ತಾನೇ ತಾನಾಗಿ ಭೂಮಿಯನ್ನೆಲ್ಲಾ ಮುಚ್ಚಿಕೊಂಡು ಗಗನವು ಪೃಥ್ವಿಯನ್ನಾಲಂಗಿಸುವುದೋ ಎಂಬಂತೆ ತೋರುತ್ತಿತ್ತು.

ಸಮೀಪದಲ್ಲಿಯೇ ಒಂದು ಹಂಚುಹಾಕಿದ ಮನೆಯು ಭಾಸವಾಗುತ್ತಿತ್ತು. ಮನೆಯ ಹೊರಗೆ ಅರ ಸುಳಿವು ಇಲ್ಲ. ಜಗಲಿಯಲ್ಲಿ ಸಲ ಹಂಚುಗಳು ಹಾಸಲ್ಪಟ್ಟಿದ್ದವು. ಮನೆಯಲ್ಲಿ ನಾಲ್ಕೇ ಕೋಣೆಗಳು, ಒಂದು ಪಾಕಶಾಲೆ, ಇನ್ನೊಂದು ಭೋಜನ ಶಾಲೆ, ಮತ್ತೊಂದು ಶಯನಾಗರ, ಬೇರೊಂದು ವಾಚಕಶಾಲೆ.

ವಾಚಕಶಾಲೆಯಲ್ಲಿ ಅನೇಕ ಚಿತ್ರ ಪಟಗಳು ತೂಗಹಾಕಲ್ಪಟ್ಟಿದ್ದವು. ಒಂದು ಮೇಜು, ನಾಲ್ಕಾರು ಕುರ್ಚಿಗಳು, ಒಂದು ಬೆಂಚು ಇದ್ದವು. ಮೇಜಿನ ಮೇಲೆ ಮೇಜು ಗಾಜು ಹಾಸಲ್ಪಟ್ಟಿದ್ದಿತು. ಅದರ ಮೇಲೆ ಕೆಲವು ಆಂಗ್ಲೇಯ ಮತ್ತು ಕನ್ನಡ ಕಾದಂಬರಿಗಳು ಕಣ್ಗೆಸೆಯುತ್ತಿದ್ದವು. ಮೇಜಿನ ಎಡಬಗಿ ಒಂದು ಕಿಟಿಕಿ. ಕಿಟಿಕಿಯ ಪಕ್ಕದಲ್ಲಿಯೇ ಮನೆಯ ಯಜಮಾನನು ಒಂದು ಈಸಿ ಕುರ್ಚಿಯ ಮೇಲೆ ಆಸೀನನಾಗಿದ್ದನು. ಕೈಯಲ್ಲಿ 'ಪರಿಮಳಾ' ಎಂಬ ಕಾದಂಬರಿಯನ್ನು ಹಿಡಿದುಕೊಂಡು ಓದುತ್ತಿದ್ದನು. ಆದರೆ ಅವನ ಮನಸ್ಸಲ್ಲಿವೂ ಬೇರೆಯೆಂದು ಕಡೆಯಲ್ಲಿತ್ತು. ಇದು ಅವನ ನೇತ್ರ ಚಂಚಲಿಕೆಯಿಂದಲೇ ತಿಳಿಯಬಹುದಿತು. ಗೋಡೆಯ ಕಡೆ ತಿರುಗಿದನು. ಅಲ್ಲಿ ಒಂದು ದೊಡ್ಡ ಗಡಿಯಾರವು ತಗಲಹಾಕಲ್ಪಟ್ಟಿದ್ದಿತು. ಸಮಯ ಸತ್ತರ ನಮೂಸಿತ್ತು.

ವಾಚಕರೇ, ಅತನ ನೇತ್ರಾ ಚಂಚಲತೆಗೆ ಕಾರಣವೇನೆಂದು ಕೇಳುವಿರಲ್ಲವೋ? ಆತನು ಮೊದಲೆ ಮದ್ಯಪಾನವೆಂಬ ಪೈಶಾಚದ ಬಲೆಯಲ್ಲಿ ಸಿಕ್ಕಿ ಬಿದ್ದಿದ್ದನು. ಪ್ರತಿದಿನವೂ 10 ಗಂಟೆಯ ಮೊದಲೇ ಆ ಪೈಶಾಚದ ಆಲಯವನ್ನು ಸೇರುತ್ತಿದ್ದನು. ನಿಜವಾಗಿ ತನ್ನ ಕೈಯಲ್ಲಿನ ಕಾದಂಬರಿಗೆ ಸ್ಥಿರವಾಗಿ ಅವನು ಇಂದು ಇನ್ನೂ ಮನೆಯಲ್ಲಿಯೇ ಇದ್ದನು. ಅವನ ಮನಸ್ಸೇನೋ ಪೈಶಾಚದ ಪಾಶದಿಂದ ಎಳೆಯಲ್ಪಟ್ಟಿದ್ದಿತು. ಇದರಿಂದ ಅವನ ನೇತ್ರಗಳು ಕ್ಷಣ ಕ್ಷಣಕ್ಕೂ ಸಮಯದ ಕಡೆಗಿದ್ದವೆಂದು ಇನ್ನೊಮ್ಮೆ ಹೇಳಬೇಕೆ?

ಗಡಿಯಾರದ 'ಟಂಗ್, ಟಂಗ್' ಎಂಬ ಶಬ್ದವು ನಮ್ಮ 'ಪೆಟ್ರೋಲ್ ಮಾಸ್ಟರ' ನ್ನು ಎಚ್ಚರಿಸಿತು. ಆತನು ಎದ್ದನು. ಕೈಯಲ್ಲಿದ್ದ ಕಾದಂಬರಿಗೆ ತಾನು ಕುಳಿತಿದ್ದ ಆಸನವನ್ನು ಕೊಟ್ಟನು. ಬೇಗಬೇಗನೆ ಬಂದು 'ಫೈನ್' ಕೋಟನ್ನು ಒಂದು ಟೊಪ್ಪಿಯನ್ನೂ ಧರಿಸಿದನು. ಒಂದು ಕೊಡೆಯನ್ನು ಕಂಕಳಲ್ಲಿ ಇರಿಸಿಕೊಂಡು ಹೊರಗೆ ಹೊರಟೇ ಹೋದನು! ವಾಚಕರೆ, ಆತನು ಎಲ್ಲಿಗೆ ಹೊರಟನೆಂದೂ ಏತಕ್ಕೆ ಹೊರಟನೆಂದೂ ಇನ್ನೊಮ್ಮೆ ಹೇಳಬೇಕಾದ್ದಿದೆಯೋ? ಓಹೊ! ವಾಚಕರೇ, ಇದೇನು!! ಸ್ವಲ್ಪ ಸಂಶಯ ಸಾಗರದಲ್ಲಿ ಮುಳುಗಿದಂತೆ ತೋರುತ್ತದೆ. 'ಪೆಟ್ರೋಲ್ ಮಾಸ್ಟರ' ನೆಂಬುದು ಇನ್ನು ಗೊತ್ತಾಗಲಿಲ್ಲವೇನು? 'ಈಸಿ ಕುರ್ಚಿಯ' ಮೇಲೆ ಆಸೀನನಾಗಿದ್ದ ನಮ್ಮ ಕಥಾನಾಯಕನು ಮದ್ಯಪಾನವೆಂಬ ಪೈಶಾಚದ ಬಲೆಯಲ್ಲಿ ಸಿಕ್ಕಿರುವನೆಂದು ಮೊದಲೇ ಹೇಳಿಲ್ಲವೆ, ಸರಿ! ಅವನನ್ನೇ ವಾಡಿಕೆಯಾಗಿ ಜನರು 'ಪೆಟ್ರೋಲ್ ಮಾಸ್ಟರೆಂದೇ' ಕರೆಯುತ್ತಿದ್ದರು. ಅದಂತಿರಲಿ ವಾಚಕರೇ, ನಮ್ಮ ಕಥಾನಾಯಕನ ಮುಂದಿನ ಗತಿಯನ್ನು ಕೇಳಲು ತವಕಪಡುವಿರಲ್ಲವೋ? ಸರಿ, ಅತ್ತಕಡೆ ನಡೆಯಿರಿ. ನಮ್ಮ ಕಥಾನಾಯಕನೇನಾದನೆಂದು ನೋಡುವಾ!

ಓಹೋ! ಇದೇನು! ವಾಚಕ ಶಾಲೆಯಿಂದ ಹೊರಟ ನಮ್ಮ ಕಥಾನಾಯಕನು ಅದೃಶ್ಯನಾದಂತೆ ತೋರುತ್ತಿದೆ. ಎಲ್ಲಿ ಹೋದನು! ವಾಚಕ ಶಾಲೆಗೆ ಬೀಗ ಹಾಕಿಯಲ್ಲಾ! ಒಳಗೆ ಹೋಗಿರಬಹುದೋ? ಸರಿ. ಆರೋ ಮಾತಾಡುವ ಸ್ವರವು ಕೇಳ ಬರುತ್ತಿದೆ. ಅತ್ತ ನಡೆಯಿರಿ. ನಮ್ಮ ಕಥಾನಾಯಕನೊಡನೆ ಏನೋ ನೋಡೋಣ! ಸರಿ! ಆತನೇ! ಆವಾರು, ಇನ್ನಾರೋ ಆತನಬಳಿಯಲ್ಲಿ ಸಂಭಾಷಿಸುವಂತೆ ತೋರುತ್ತಿದೆ. ಏನಾ ಸ್ತ್ರೀ ವ್ಯಕ್ತಿ. ಓಹೋ ಸರಿ! ಆತನ ಪತ್ನಿಯಾಗಿರಬೇಕು. ಅಹಾ! ಎಂಥಾ ಸೌಂದರ್ಯರಾಶಿ! ಚಂದ್ರ ಮಂಡಲದಂತೆ ಮುಖ, ಕಮಲದಂತೆ ಕಣ್ಣುಗಳು, ಕೆಂಪಾದ ಕಪೋಲಗಳು, ಚಂಪಕದಂತೆ ನಾಸಿಕ, ನೀಳ ಹುಬ್ಬುಗಳು, ತೊಂಡೆ ಹಣ್ಣಿನಂತೆ ತುಟಿಗಳು, ಮುತ್ತಿನ ಮಣಿಗಳಂತೆ ದಂತಪಂಕ್ತಿ, ಮಲ್ಲಿಕಾಲತೆಯಂಥ ಶರೀರ. ಹೆಚ್ಚು ಹೇಳುವುದೇನ, ವಿಧಾತನು ತನ್ನ ಕಲಾ ನೈಪುಣ್ಯವನ್ನೆಲ್ಲಾ ಇವಳಲ್ಲೇ ಪೂರೈಸಿರುವಂತೆ ತೋರುತ್ತಿದೆ. ಅಹಾ!! ಏನು ಆಶ್ಚರ್ಯ! ವಾಚಕರೆ, ಇಂಥಾ ಸೌಂದರ್ಯಾತಿಶಯವುಳ್ಳ ಈ ವ್ಯಕ್ತಿಯು ನಮ್ಮ ಕಥಾನಾಯಕನಿಗೆಂತು ಲಭಿಸಿತೋ, ವಿಧಾತನೇ ಬಲ್ಲ.

ವಾಚಕರೇ, ಅತ್ತ ನೋಡಿ, ಆಕೆಯ ಹೃತ್ಕಮಲದಿಂದ ಹೊರಡುವ ಮಧುರವಾದ ಸ್ವರವನ್ನಾದರೂ ಕೇಳಿ. ಅಹಾ! ಎಂಥಾ ವಿನಯ! ಎಂಥಾ ನಮ್ರತೆ!

ವ್ಯಕ್ತಿ—'ಪ್ರಿಯತಮ, ಎಷ್ಟು ವಿಧವಾಗಿ ಪ್ರಾರ್ಥಿಸಿದರೂ ಈ ನಿಮ್ಮ ದುರಾಚಾರವನ್ನು ಬಿಡಲೆತ್ನಿಸುವುದೇ ಇಲ್ಲವಲ್ಲಾ, ಇದರಿಂದುಂಟಾಗುವ ಕಷ್ಟಗಳನ್ನು ಸದಾ ಅನುಭವಿಸುತ್ತಿದ್ದರೂ ನಿಮಗೆ ಇನ್ನು ವಿವೇಚನೆಯು ಸಿಕ್ಕದಿರುವದು ನನ್ನ ಅಂತರಂಗವನ್ನು ಭೇದಿಸುತ್ತಿದೆಯಲ್ಲ. ವ್ಯರ್ಥವಾಗಿ ದ್ರವ್ಯಹಾನಿಯನ್ನು ಮಾಡಿ ಮಹತ್ತರವಾದ ಅಪವಾದವನ್ನು ಹೊತ್ತುಕೊಳ್ಳುತ್ತಿರುವಿರಲ್ಲ. ನಿಮ್ಮ ಅರ್ಧಾಂಗಿಯಾದ ನನಗೂ ಆ ಅಪವಾದವು ಲಭಿಸುವುದಿಲ್ಲವೇ? ಈ ನಿಮ್ಮ ಆಚಾರದಿಂದ ಯಾರಿಗೆ ಏನು ಸುಖ? ಯಾರಿಗೇನು ಪ್ರಯೋಜನ? ದೇಹ ದಂಡನೆ ಒಂದು, ಧನ ಹಾನಿ ಒಂದು, ಲೋಕೋಪವಾದ ಮತ್ತೊಂದಲ್ಲದೆ ಬೇರೆ ಯಾವದಾದರೂ ಸುಖವಿರುವದೇ? ಮಿಂಚಿದಕಾರ್ಯಕ್ಕೆ ಚಿಂತಿಸಿ ಫಲವಿಲ್ಲವೆಂಬ ನಾಣ್ಣುಡಿಯಂತೆ ಶಾಂತಳಾಗಬೇಕಾಗಿದೆ. ಇನ್ನಾದರೂ ಎಚ್ಚತ್ತಿದ್ದು ದೀನಳೆಯಿಂದ ಪ್ರಾರ್ಥಿಸಿಕೊಳ್ಳುವ ತಮ್ಮ ಪ್ರಿಯತಮೆಯ ಕೋರಿಕೆಯನ್ನು ನೆರವೇರಿಸಬಾರದೇ?

ಕಥಾನಾಯಕ—ಪ್ರಿಯೆ, ನೀನು ಹೇಳುವದೆಲ್ಲವೂ ನಿಜ. ಅದರಂತೆ ವರ್ತಿಸುವೆನು. ಆದರೆ ಇಂದು ನಾನು ಕಚೇರಿಗೆ ಹೋಗಿಬರುತ್ತೇನೆ, ಮಧ್ಯಾಹ್ನದೊಳಗೆ ಬರುತ್ತೇನೆ, ಇನ್ನು ನನ್ನ ದುರಾಚಾರವನ್ನು ಕೂಂಚಾಸಿಟ್ಟಿಗಾದರೂ ಬಿಡುತ್ತೇನೆ. ಸಂಶಯಪಡಬೇಡ ಎಂದು ಹೇಳುತ್ತಾ ಹೊರಗೆ ಬಂದನು. ಸಮಯವು 11ರ ಸಮೀಪಿಸಿತ್ತು. ಮಳೆಯು ಇನ್ನು ಜೋರಾಗಿ ಸುರಿಯುತ್ತಲೇ ಇತ್ತು. ಆದರೆ ನಮ್ಮ ಕಥಾನಾಯಕನೇನು ಹೆದರಿದನೇ? ಮದ್ಯಪಾನವೆಂಬ ಪಿಶಾಚದ ಆಲಯದ ಕಡೆಗೆ ನಡೆದನು. ನಮ್ಮ ಪೆಟ್ರೋಲ್‌ಮಾಸ್ಟರ ಮನೆಗೂ ಆ ಆಲಯಕ್ಕೂ ಸುಮಾರು 2 ಮೈಲುಗಳ ದೂರ. ಪೆಟ್ರೋಲ್‌ಮಾಸ್ಟರು ಅತುರದಿಂದ ನಡೆದು ತನಗೆ ಬೇಕಾದ ಸ್ಥಳವನ್ನು ಸೇರಿದನು, ಧನಲಕ್ಷ್ಮಿಯು ಕೈಯ್ಯಿಂದ ಜೋಲಿಗದಳು, ಒಂದು ಬೋಸಾಯಿತು! ಇನ್ನೊಂದಾಯಿತು!! ಮತ್ತೊಂದಾಯಿತು!!! ಆದರೂ ತೃಪ್ತಿಪಟ್ಟನೇ? ಇಲ್ಲ! ಒಂದು ಬಾಟ್ಲಿಯನ್ನೇ ಒತ್ತಿದನು! ಈ ವಿಧವಾಗಿ ಮದ್ಯಪಾನವೆಂಬ ಪೈಶಾಚದ ಬಲೆಗೆ ಬಿದ್ದು ಆತುರನಾಗಿ ಬೇಗನೆ ಮನೆಯನ್ನು ಸೇರಬೇಕೆಂದು ಮದ್ಯಪಾನವೆಂಬ ಪೈಶಾಚದ ಆಲಯದ ಪಕ್ಕದಲ್ಲಿದ್ದ ಇಷ್ಟ ಒಂದು ಅಂಗಡಿಯ ಕಡೆಗೆ ತಿರುಗಿದನು. ಸಮಯವು ಸಂಜೆ ಕಾಲ 7 ಗಂಟೆಯಾಗಿತ್ತು, ಅಷ್ಟು ಸಮಯವನ್ನು ಆ ಆಲಯದಲ್ಲಿಯೇ ಕಳೆದಿದ್ದನು, ಹೊರವಲಯದ್ಭ್ರಷ್ಟನಾದನು, ಅಷ್ಟರಲ್ಲೇ ಆತನು ಅಂತರಿಕ್ಷದಲ್ಲಿದ್ದನು, ಅಂತು ಇಂತು ಮನೆಯ ಕಡೆ ಹೊರಟನು.

ಸುಮಾರು ಒಂದುವರೆ ಮೈಲುಗಳವರೆಗೂ ಹಾದಿಯನ್ನು ಸವೆಸಿಯಾಯಿತ್ತಾ ನಡೆದನು. ಕೊನೆಗ ಅವನಲ್ಲಿ ಶಕ್ತಿ ಕುಸ್ಸಿವಾಗಿ ಕಾಲುಗಳು ತಪ್ಪಬ್ಬಾಗಿ ಮಾರ್ಗದಬದಿಯೊಂದನ್ನಾಲಂಗಿಸಿದನು. ಕಾಲುವೆಗೆ ಅಡ್ಡಲಾಗಿ ಬಿದ್ದನು, ಕಾಲುವೆಯಲ್ಲಿ ಸುಮಾರು ಒಂದೂವರೆ ಅಡಿ ನೀರು ಹೋಗುತ್ತಿತ್ತು. ತಲೆಯಲ್ಲಿ ಧರಿಸಿದ್ದ ಕಿರೀಟವು ಕಾಲುವೆಯ ಪ್ರವಾಹದಲ್ಲಿ ಸಮರ್ಪಣೆಯಾಯಿ! ಕೊಡೆಯು ಗಾಳಿಯ ಹೊಡೆತದಲ್ಲಿ, ಮೈಯಲ್ಲಿ ಧರಿಸಿದ್ದ ಒಟ್ಟಿ ಒರೆಗಲ್ಲವೂ ಹೋಯಿತು ಹೋದವು, ಇಷ್ಟಾದರೂ ಆತನಿಗೆ ಸ್ಮೃತಿ ಇರಲಿಲ್ಲ, ಕೈಕಾಲುಗಳು ಕೋಟ ಹಿಡಿದವು.

ಅಯ್ಯೋ ನಮ್ಮ ಪೆಟ್ರೋಲ್‌ಮಾಸ್ಟರ ಗತಿಯು ಹೀಗಾಯಿತೇ! ಶರೀರದ ನಾಡಿಗಳೆಲ್ಲಾ ತಮ್ಮ ತಮ್ಮ ಶಕ್ತಿಯನ್ನು ಕಳಕೊಳ್ಳುತ್ತೇವೆಯಲ್ಲಾ! ಇನ್ನೇನು ಯಮಪಾಶವು ಕ್ಷಿಪ್ರದಲ್ಲಿಯೇ ಒದಗಬಹುದೇನೋ. ವಾಚಕರೇ, ಈಗ ಆರು ಕಾಪಾಡಬಲ್ಲರು ನಮ್ಮ ಪೆಟ್ರೋಲ್‌ಮಾಸ್ಟರನ್ನು ಕಾಪಾಡುವರು, ದೈವವಾದರೂ ಹೀಗೇಕೆ? ಛೆ! ಎಂದಿಗೂ ಹೀಗಿರಲಾರದು.

ಓಹೋ ಒಬ್ಬನು! ಆರು? ಒಬ್ಬ ಪಥಿಕ! ಅವನ ಕೈಯಲ್ಲಿ ಒಂದು ಲಾಂದ್ರ, ಆತನು ನಮ್ಮ ಕಥಾನಾಯಕನನ್ನು ದೂರದಿಂದಲೇ ಕಂಡನು, ಆದರೆ ಆವಾರೆಂಬುದನ್ನು ತಿಳಿಯಲಾರದೆ ಕೊಂಚ ಭೀತನಾದನು, ಆದರೂ ಧೈರ್ಯವನ್ನು ತಂದುಕೊಂಡು ಸಮೀಪಿಸಿದನು. ಮುಖ ನೋಡಿ [illegible]

...ರಂ ಸರ್ವತ್ರಸಾಧನಂ' ಎಂಬಂತೆ ಆತನು ...ತನನ್ನು ಹಿಡಿದೆತ್ತಿ ಕಾಲುವೆಯ ನೀರಿನಿಂದ ... ಬಳಿಕ ಸಹಾಯಕ್ಕಾಗಿ ಕೂಂತ ದೂರ ... ಮನೆಗೆ ಓಡಿಹೋಗಿ ಒಬ್ಬನನ್ನು ಕರೆತಂದು ...ನಿಂದ ಆತನ ಮನೆಗೆ ನಮ್ಮ ಕಥಾ ನಾಯಕ ...ಗಿಸಿದನು. ಆ ಮನೆಯ ಯಜಮಾನನು ನಮ್ಮ ಪ ...ದಾಸ್ಥರ ಬಟ್ಟೆಬರೆಗಳನ್ನು ಬಿಚ್ಚಿ ಸ್ವಲ್ಪ ಬೆಂಕಿಯನ್ನು ...ಟ್ಟು ಆತನ ಶರೀರದಲ್ಲಿ ಶಾಕ ಹುಟ್ಟುವಂತೆ ಮಾಡಿದನು.

ಅಹಾ! ದೈವನುಹಿಮೆಯನ್ನು ವರ್ಣಿಸಲಸಾಧ್ಯವಲ್ಲವೇ? ...ತನ ಲೀಲೆಯು ಶ್ಲಾಘನೀಯವಾದುದಲ್ಲವೇ? ಯಾವನು ...ಕ್ಷಣದಲ್ಲಿ ಯಮಪುರಿಯನ್ನು ಸೇರುತ್ತಿದ್ದನೋ ಅಂಥಾವನು ತಕ್ಷಣದಲ್ಲಿಯೇ ಯಮಪಾಶದಿಂದ ಪಾರಾದನಲ್ಲವೇ? ಇಂಥಾ ಮಹತ್ಕಾರ್ಯವು ಆರಿಂದತಾನೇ ಆಗುವದು? ಆ ಭಗವಂತನಿಂದಲ್ಲವೇ? ವಾಚಕರೇ ಇದೇನು? ಮೌನಾವಸ್ಥೆಯನ್ನು ಧರಿಸಿದಂತೆ ಕಾಣುತ್ತೀರಿ. ನಮ್ಮ ಪೆಟ್ರೋಲ್ ವರ್ಸ್ಟರನ್ನು ಕಾಪಾಡಿದ ಜಗದಂತರಿಗೆ ಎಷ್ಟು ಧನ್ಯವಾದಗಳನ್ನು ಕೊಟ್ಟರೂ ಎಷ್ಟು ಕೊಟ್ಟರೂ ಸಾಲದೆನ್ನುವದಿಲ್ಲವೇ? ಸರಿ! ಸರಿ! ಭಗವಂತನ ಲೀಲೆಯೇ ಹೀಗೆ. ತಾನು ಸೃಷ್ಟಿಸಿದ ಜೀವರಾಶಿಗಳಿಗೆಲ್ಲ ... ಆದ ... ಗಳನ್ನಾಗಿ ತಗದು ... ಕಣಿಸಿ ... ಆತನ ಕರುಣೆಯೊಂದಿಲ್ಲದೆ ಹೋದರೆ ಅಣುವುತಾನೇ ಈ ಪೃಥ್ವಿಯಲ್ಲಿ ಇರಬಲ್ಲದು.

ಆಹಾ! ಆ ಭಗವಂತನ ಮಹಿಮೆಯನ್ನು ತಿಳಿದಂತ ನಾವು ಕೊಂಡವುಟ್ಟಿಗಾದರೂ ದುಷ್ಕಾರ್ಯಗಳನ್ನು ವರ್ಜಿತ ಮಾಡುವಂತೆ ಮಾಡಲು ನಮ್ಮ ಮನಸ್ಸನ್ನು ಸ್ಥಿರಮಾಡಿಕೊಳ್ಳುವದಕ್ಕೆ ಆ ಪರಮಾತ್ಮನ ಸಹಾಯವನ್ನು ಕೋರುವುದೇ ಇಲ್ಲವಲ್ಲಾ! ಈ ವ್ಯಾಧಿಕ್ಕೆ ಔಷಧಿಯನ್ನು ಕೊಡಬಲ್ಲರಾರು? ಮೂಲಾಸ್ಥ ವೃದಸದಳ!

ವಾಚಕರೇ, ನಮ್ಮ ಕಥಾನಾಯಕನ ಅವಸ್ಥೆಯನ್ನು ತಿಳಿಯಲು ಆತುರಪಡುತ್ತಿರಲ್ಲವೇ? ಭಯಪಡದಿರಿ. ಆತನಿನ್ನೂ ಚೋಚನೀಯಾವಸ್ಥೆಯಲ್ಲಿರಲಾರನು. ಅತ್ತನೋಡಿ, ಇದೇನು! ಆತನು ಬಡಾಮುಗ್ಧನಾದಂತೆ ತೋರುತ್ತದೆ. ಇದಕ್ಕೆ ಕಾರಣವನ್ನು ಬಲ್ಲಿರಾ? ತನ್ನ ಬಾಂಧವರ ಮಧ್ಯದಲ್ಲಿ ಅಪಹಾಸ್ಯಕ್ಕೊಳಗಾದನೆಂದಿರಬಹುದು. ಇಷ್ಟಾದರೂ ಆತನು ... ಸ್ವರ್ಗಾನದಂ ಶ್ರೈರಾಜದ ಮಹಿಮೆಯನ್ನಾದರೂ ಯೋಚಿಸುತ್ತಾನೇ?

ಆಹಾ! ಸ್ವರ್ಗವೇ, ನಿನ್ನ ಮಹಿಮೆಯನ್ನೆಷ್ಟು ಬಣ್ಣಿಸಿದರೂ ಸ್ವಲ್ಪವೇ ಸರಿ! 4, 6 ಗಂಟೆಗಳ ಮೊದಲೇ ಸರ್ವಶಕ್ತಿಯಿಂದಲೂ ಕೂಡಿದ ಮಾನವನು ನಿನ್ನ ಮೋಹಪಾಶದಿಂದ ಕಟ್ಟಲ್ಪಟ್ಟು ಕೊಂಚ ಸಮಯದಲ್ಲೇ ಶೋಚನೀಯಾವಸ್ಥೆಗೊಳಗಾಗಿ ಈಗ ಜಡಚೇತನನಾಗಿರುವನಲ್ಲವೇ? ಎಂಥಾ ಅಘಟನಾಘಟನೆ ಕಾರ್ಯವೂ ಕೂಡ ನಿನ್ನಿಂದ ಸಾಧಿಸುವುದಲ್ಲವೇ. ದೈವಕೃಪೆಯೊಂದು ಮನುಷ್ಯನಿಗಿಲ್ಲದಿದ್ದರೆ ಆತನನ್ನು ಕ್ಷಣಮಾತ್ರದಲ್ಲಿ ನಾಶಪಡಿಸುವೆಯಲ್ಲವೇ? ಎಷ್ಟು ವರ್ಣಿಸಿದರೇನು? ನಿನ್ನ ಸಾಮರ್ಥ್ಯವೇ ಸಾಮರ್ಥ್ಯ!

ಒಳೆ! ಒಳೆ!! ನಿನ್ನ ಇಂಥಾದುತ್ಕೃಷ್ಟವನ್ನು ತಿಳಿದು ಮನುಷ್ಯನು ಎಷ್ಟೇ ಎಚ್ಚತ್ತಿದ್ದರೂ ಕೂಡ ಆತನನ್ನು ನಿನ್ನ ಮೋಹಪಾಶಕ್ಕೆ ಬೀಳಿಸಿ ಸಂಕಟ ಪಡಿಸುವೆಯಲ್ಲವೇ? ಆಹಾ! ಯಾವ ಮಾನವನು ತಾನೇ ನಿನ್ನಿಂದ ತಪ್ಪಿಸಿಕೊಳ್ಳಬಲ್ಲನೊ ಅಂಥವನೇ ಧನ್ಯ ಪುರುಷನಲ್ಲವೇ? ಅಂಥವನಲ್ಲಿ ಸದಾ ಸ್ಥಿರ ಸ್ವರೂಪನಾದ ಅಮೃತವು ನೆಲೆಗೊಂಡಿರಬೇಕಲ್ಲವೇ!

ಸ್ವಾಗತ ಮಹಾಶಯರೇ, ನಿಮ್ಮ ಸ್ವತ್ವದ ಬದಲ್ಲಿ ನಿಮಾ ... ರೀತಿ ಅತ್ಯಂತ ಕ್ರೋಧ ಹುಟ್ಟಿರುವುದಲ್ಲವೇ? ...ಗೆ ಹುಟ್ಟಿದರೇನು ನನ್ನ ಈ ಲೇಖನಿಯ ಕಾರ್ಯವು ...ಯಾಗುವುದು. ನಿಮ್ಮ ಹೃತ್ಕಮಲದಲ್ಲಿಯೂ ...ರ ... ಪ್ರಯುಕ್ತವಂಬ ಅಮೃತವು ನೆಲೆಗೊಳ್ಳುವುದು. ... ... ನೋಡಿ, ಇದ ... ನಮ್ಮ ಕಥಾನಾಯಕನು ತನ್ನ ಗೃಹಾಭಿಮುಖಿಯಾಗಿ ಹೊರಡುವುದಕ್ಕೆ ತನ್ನ ಮನಸ್ಸಿನಲ್ಲಿ ಸ್ಥಿರತೆಯು ಹುಟ್ಟಿದೊಡನೆ ತನ್ನನ್ನು ಆಪತ್ತಿನಲ್ಲಿ ಕಾಪಾಡಿದವರಿಗೆ ಧನ್ಯವಾದಗಳನ್ನು ಹೇಳಿ ಹೊರಟಿದ್ದಾನೆ.

ವಾಚಕರೆ, ನಮ್ಮ ಕಥಾನಾಯಕನು ತನ್ನ ಗೃಹವನ್ನು ಸೇರಿ ಹಲವು ದಿನಗಳಾದವು. ಆತನ ಹೃದಯದಲ್ಲಿ ಸ್ಥಿರ ಪ್ರಯತ್ನವು ಬೇರೂರುತ್ತಾ ಇದೆ. ಆದ್ದರಿಂದ ನಾವು ನಮ್ಮ ಕಥಾನಾಯಕನು ಪಟ್ಟ ಕಷ್ಟ ಪರಂಪರೆಗಳಲ್ಲಿ ಬೀಳುವ ಮೊದಲೇ ಎಚ್ಚತ್ತಿದ್ದು ನಮ್ಮ ಮನಸ್ಸನ್ನು ಸ್ಥಿರಪಡಿಸಿ ಕೊಳ್ಳೋಣ. ಅಂಥಾ ಸ್ಥಿರತೆಯನ್ನು ನಡೆಯುವುದಕ್ಕೆ ಭಗವಂತನನ್ನು ಬೇಡುವ. ಸರ್ವಾಂತರ್ಯಾಮಿಯಾಗಿಯೂ ಸಕಲಗುಣ ಸಂಪನ್ನನಾಗಿಯೂ ಪರಂಜ್ಯೋತಿಯಾಗಿಯೂ ನಿರಾಕಾರನಾಗಿಯೂ ಸಕಲ ಜಗನ್ನಿಯಾಮಕನಾಗಿಯೂ ಜಗನ್ಮೋಹಿಯನಾಗಿಯೂ ಸರ್ವ ಶ್ರೇಷ್ಠನಾಗಿಯೂ ಲಕ್ಷ್ಮೀಲೋಲನಾಗಿಯೂ ಇರುವ ಶ್ರೀಪತಿಯು ನಮ್ಮನ್ನು ಅನುಗ್ರಹಿಸಲಿ!

ಮಡಿಕೇರಿ ಕೈಲ್‌ಪೊಳುದು.

ತಾ|| 3-9-1924ರಲ್ಲು ಮಡಿಕೇರಿಯಲ್ಲು ಕೈಲ್‌ಪೊಳುದು ಹಬ್ಬಕ್ಕೆ ಸೇರಿದ ಕೊಡವರ ಒಂದು ಮೀಟಿಂಗು ನಡೆಯಿತು.

ರಾ. ಬಾ. ಕೊಡಂದೇರ ಕುಟ್ಟಯ್ಯನವರು ಅಧ್ಯಕ್ಷರಾಗಿದ್ದರು. ಹಾಜರಿದ್ದವರೆಲ್ಲರ ಹೆಸರುಗಳ ಪಟ್ಟಿಯು ಬಹಳ ಉದ್ದವಾಗುವದರಿಂದ ಅವರಲ್ಲಿ ಕೆಲವರ ಹೆಸರುಗಳನ್ನು ಮಾತ್ರ ಇಲ್ಲಿ ಕಾಣಿಸಲ್ಪಟ್ಟಿದೆ. ರಾ. ಸಾ. ಪಟ್ಟಮಾಡ ದೇವಯ್ಯನವರು, ರಾ. ಬಾ. ಕೋದಂಡ ಅಪ್ಪಯ್ಯನವರು, ಮಿ. ಕಡೇಮಾಡ ಬೆಳ್ಯಪ್ಪನವರು, ಮಿ. ಚೋನಿರ ಬೆಳ್ಯಪ್ಪನವರು, ಮಿ. ಪಾಲೆಕಂಡ ಮೇದಪ್ಪನವರು, ಮಿ. ಕೊರವಂಡ ಮುತ್ತಣ್ಣನವರು, ಮಿ. ಕಡೇಮಾಡ ಕರುಂಬಯ್ಯನವರು, ಮಿ. ಕೋದಂಡ ಸೋಮಣ್ಣನವರು, ಮಿ. ಪಟ್ಟಿಯಂಡ ಕುಟ್ಟಪ್ಪನವರು, ಮಿ. ಕೀತಿಯಂಡ ಕಾಳಪ್ಪನವರು, ಮಿ. ನೆರವಂಡ ನಂಜಪ್ಪನವರು, ಮಿ. ಕೋದಂಡ ನಾಣಯ್ಯನವರು, ಮಿ. ಕೋಟೆರ ಚಿಣ್ಣಪ್ಪನವರು, ಮಿ. ಕೊಂಗೆಟ್ಟಿರ ಮಂದಣ್ಣನವರು, ಮಿ. ಮೂಡೆರ ಉತ್ತಯ್ಯನವರು, ಮಿ. ಪಾಲೆಕಂಡ ಮುತ್ತಣ್ಣನವರು, ಮಿ. ಪಂದ್ಯಂಡ ಬೆಳ್ಯಪ್ಪನವರು, ಮಿ. ಮುಕ್ಕಾಟಿರ ... ಚಿಣ್ಣಪ್ಪನವರು, ತಿಮ್ಮಯ್ಯನವರು ಮತ್ತು ಬೆಳ್ಯಪ್ಪನವರು, ಮಿ. ಕಂಬೇರಂಡ ಮುತ್ತಣ್ಣನವರು, ಮಿ. ಬಡುವಮಂಡ ಕುಶಾಲಪ್ಪನವರು, ಮಿ. ಬಲ್ಲಚಂಡ ಜಂಗಪ್ಪನವರು ಮತ್ತು ಇನ್ನು ಕೆಲವರು ಹಾಜರಿದ್ದರು.

'ಇನ್ನು ಮುಂದೆ ಮಡಿಕೇರಿಯಲ್ಲಿ ಕೊಡವರೆಲ್ಲರು ಸೇರಿ ನಡಿಸುವ ಕೈಲ್‌ಪೊಳುದು ಹಬ್ಬದಲ್ಲಿ ಅಮಲು ಪದಾರ್ಥವನ್ನು ಸೇರಿಸಕೂಡದು' ಎಂಬ ಠರಾವು ಮಂಜೂರಾಯಿತು.

ಈ ಮೀಟಿಂಗಿನ ವಿವರವನ್ನು ಅಧ್ಯಕ್ಷರ ರುಜುವಿನೊಡನೆ 'ಕೊಡಗು' ಪತ್ರಿಕೆಯಲ್ಲಿ ಪ್ರಕಟಿಸುವಂತೆಯೂ ತೀರ್ಮಾನವಾಯಿತು.

ಕೆ. ಕುಟ್ಟಯ್ಯ,
ಅಧ್ಯಕ್ಷರು.

ಬರಹಗಾರರಿಗೆ 50 ರು. ಗಳ ಬಹುಮಾನ!

'ನಮಗೆ ಸ್ವರಾಜ್ಯವು ಯಾಕೆ ಬೇಕು?

ಈ ಹೆಸರಿನ, ಸುಮಾರು 4000 ಶಬ್ದಗಳನ್ನು ಮೀರದಷ್ಟು, ತಿಳಿಗನ್ನಡ ಭಾಷೆಯಲ್ಲಿ (ಅಂದರೆ ರೈತರಿಗೂ ತಿಳಿಯುವ ಹಾಗೆ) ಒಂದು ನಿಬಂಧವು ಬೇಕು. ನಿಬಂಧವು ಹಿಂದುಸ್ಥಾನದ ಬ್ರಿಟಿಷ ರಾಜ್ಯಕಾರಭಾರದೊಳಗಿನ ರಾಜಕೀಯ, ಆರ್ಥಿಕ, ಸಾಮಾಜಿಕ, (ಬ್ಯುರೋಕ್ರಸಿ, ದಂಡು, ಜಲಪ ಪದ್ಧತಿ, ಮುಂತಾದ ವಿಷಯಗಳನ್ನೊಡಗೊಂಡ) ಕೊಂಕು ಕೊರತೆಗಳ ಸಾಧಾರಣವಾದ ವಿವೇಚನೆಯಿಂದ ತುಂಬಿ ತುಳುಕುತ್ತಿರಬೇಕು. ಹಾಗೂ ಅದರಿಂದ ನಮ್ಮ ಹಳ್ಳಿ ಹಳ್ಳಿಗಳಲ್ಲಿಯ ಜನರಿಗೂ 'ನಮಗೆ ಸ್ವರಾಜ್ಯವು ಯಾಕೆ ಬೇಕು?' ಎಂಬುದರ ನಿಚ್ಚಳವಾದ ಬೋಧವಾಗಬೇಕು. ಕರ್ನಾಟಕದ ಯಾವ ಭಾಗದಲ್ಲಿಯ ಬರಹಗಾರರೂ ತಮ್ಮ ನಿಬಂಧಗಳನ್ನು ಅಕ್ಟೋಬರ 15ನೇ ತಾರೀಕಿನೊಳಗಾಗಿ ಕೆಳಗಿನ ವಿಳಾಸಕ್ಕೆ ತಲುಪುವಂತೆ ಕಳುಹಿಸಬೇಕು. ಬಂದ ನಿಬಂಧಗಳನ್ನು ನಾನ್ಯ ರಾದ ಪರೀಕ್ಷಕರು ಪರೀಕ್ಷಿಸಿದ ಮೇಲೆ ಶ್ರೇಷ್ಠವೆಂದು ನಿರ್ಣಯವಾಗುವ ನಿಬಂಧದ ಬರಹಗಾರರಿಗೆ ಮೇಲ್ಕಾಣಿಸಿದ 50 ರೂಪಾಯಿಗಳ ಬಹುಮಾನವು ಕೊಡಲ್ಪಡುವದು. ಮಂಜೂರಾದ ನಿಬಂಧದ ಮೇಲಿನ ಯಾವ ಹಕ್ಕುಗಳೂ ಬರಹಗಾರರನ್ನು ಆಶ್ರಯಿಸಲಾರವು. ಅಖಿಲ ಕರ್ನಾಟಕದ ವಿದ್ವಾಂಸ ಹಾಗೂ ದೇಶಸೇವಕ ಬರಹಗಾರರೆಲ್ಲರೂ ಈ ಸುಸಂಧಿಯ ಲಾಭವನ್ನು ತೆಗೆದುಕೊಳ್ಳಬೇಕೆಂದು ಪ್ರಾರ್ಥನೆ.

ನಿಬಂಧ ಪರೀಕ್ಷಕರ ಮಂಡಲವು.

1. ವಿನಾಯಕ ಬಾಬಾಜಿ ಜೋಶಿ ರಿಟೈರ್ಡ್ ಎಜ್ಯುಕೇಶನಲ್ ಇನ್‌ಸ್ಪೆಕ್ಟರ್, ಧಾರವಾಡ.

2. ವೆಂಕಟೇಶ ಭೀಮರಾವು ಆಲೂರ, ಸಂಪಾದಕ 'ಜಯಕರ್ನಾಟಕ,' ಧಾರವಾಡ.

3. ರಾಮಚಂದ್ರ ಶ್ರೀನಿವಾಸ ಹುಕ್ಕೇರಿಕರ, ಸಂಪಾದಕ, 'ಕರ್ಮವೀರ,' ಧಾರವಾಡ.

ರಾ ಶ್ರೀ. ಹುಕ್ಕೇರಿಕರ ಕಾರ್ಯದರ್ಶಿ,

ತಾ. 20-8-24, ಸಂಪಾದಕ, 'ಕರ್ಮವೀರ'
ಧಾರವಾಡ.

ನೋಟೀಸು.

ಬೇರೆ ಪ್ರಾಂತ್ಯಗಳಿಂದ ಪ್ರಯಾಣಿಕರು ಪಾಸ್‌ಪೋರ್ಟುಗಳಿಲ್ಲದೆ ಬೊಂಬಾಯಿಗೆ ಬಂದು, ಅಲ್ಲಿಂದ ಬೊಂಬಾಯಿ ಸರ್ಕಾರಕ್ಕೆ ಅಪ್ಲಿಕೇಶನ್ ಬರೆಯುತ್ತಾರೆಂದು ತಿಳಿದು ಬಂದಿದೆ. ಇದು ಆ ಸರ್ಕಾರಕ್ಕೆ ದೊಡ್ಡ ತೊಂದರೆಯನ್ನು ಉಂಟುಮಾಡುತ್ತಿದೆ.

ಕೊಡಗಿನಿಂದ ಪರದೇಶಗಳಿಗೆ ಹೋಗುವ ಪ್ರಯಾಣಿಕರು ಕೊಡಗು ಅಥವ ಬೆಂಗಳೂರು ಬಿಡುವ ಮುಂಚೆಯೇ ಚೀಫ್ ಕಮಿಷನರವರಿಂದ ತಪ್ಪದೆ ಪಾಸ್‌ಪೋರ್ಟ ಹೊಂದಿಕೊಳ್ಳಬೇಕೆಂದು ಈ ಮೂಲಕ ಸಮಸ್ತರಿಗೂ ತಿಳಿಸೋಣಾಗಿದೆ.

ಬಿ ಜಿ. ಟಾಸ್ಕರ್,
(ಛೀ. ಕಮೀಷನರವರ ಸೆಕ್ರೆಟರಿಗಾಗಿ)

ವರ್ತಮಾನ ಸಂಗ್ರಹ.

ಒಳದೇಶ.

ಕಾಯಂ ಚೀಫ್ ಕಮಿಷನರಾದ ಮಿ. ಡಬ್ಲ್ಯು. ಪಿ. ಬಾರ್ಟನ್‌ರವರು ಇಂಗ್ಲಂಡಿನಿಂದ ಹಿಂತಿರುಗಿ ಬೆಂಗಳೂರಿಗೆ ಬಂದು ಕೊಡಗು ಕೌನ್ಸಿಲಿನ ಮೀಟಿಂಗ ಇದೇ ತಾರೀಕು 23ರಲ್ಲು ಪ್ರಾರಂಭವಾಗುವದೆಂದು ಗಜಟಿನಲ್ಲಿ ಪ್ರಕಟಿಸಿರುವರು.

ಪೊಲೀಸು ರಿಸರ್ವ ಸಬ್ ಇನ್‌ಸ್ಪೆಕ್ಟರಾದ ಮಿ. ಚೇಂದ್ರಿಮಾಡ ಮುತ್ತಣ್ಣನವರನ್ನು ಸೋಮವಾರಪೇಟೆಗೆ ವರ್ಗಾಯಿಸಿರುವರು. ಅವರು ಅಲ್ಲಿ ಆಗಲೇ ಕೆಲಸಕ್ಕೆ ಸೇರಿರುವರು.

ಈ ವರ್ಷ ಬಿ. ಎ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ರಾ ಬಾ ಕೋದಂಡ ಅಪ್ಪಯ್ಯನವರಪುತ್ರಿ ಶ್ರೀಮತಿ ಸೀತವ್ವನವರಿಗೆ ತಾ 21-8-24ರಲ್ಲು ನಡೆದ ಮದ್ರಾಸು ಯುನಿವರ್ಸಿಟಿಯ ಕಾನ್ವೊಕೇಶನಿನಲ್ಲಿ ರಾ ಕೊರವಂಡ ಅಪ್ಪಯ್ಯ ದೇವಯ್ಯನವರ ಇನಾಮು ದೊರೆತದಲ್ಲದೆ, ಇಂಗ್ಲೀಷಿನಲ್ಲಿ ಪ್ರವೀಣತೆಗಾಗಿ ಅವರಿಗೆ ಡಾ. ನಾಯರ್ ಮೆಮೋರಿಯಲ್ ಚಿನ್ನದ ಮೆಡಲು, ... ಮೆಮೋರಿಯಲ್ ಚಿನ್ನದ ಪದಲು ಮತ್ತು ಅಕ್ಕ ... ಚಿನ್ನದ ಪದಲು, ಈ ಮೂರು ಪದಕಗಳೂ ಸಹ ಕೊಡಲ್ಪಟ್ಟವೆ ಎಂಬುದನ್ನು ತಿಳಿಸಲು ಸಂತೋಷಪಡುತ್ತೇವೆ.

ಈ ವಾರ ಮಡಿಕೇರಿಯಲ್ಲಿ ಖಂಡಿ ಒಂದಕ್ಕೆ ನೇಟಿವ್ ಕಾಫಿ 350 ರುಪಾಯಿ, ಪಾರ್ಚ್‌ಮೆಂಟು ಕಾಫಿ 380 ರುಪಾಯಿಯ ವರೆಗೆ ಕ್ರಯವಿತ್ತು.

ಸೋಮವಾರಪೇಟೆ ನಾಡು ಕ್ಲಾರ್ಕರಾದ ಮಿ. ವರಗದ ಮುತ್ತಣ್ಣನವರು ನೇಂದಿ ಸಾರಾಯಿ ಗುತ್ತಿಗೆದಾರರು ಕಟ್ಟಿದ ಹಣವನ್ನು ಸರ್ಕಾರಿ ಲೆಕ್ಕಕ್ಕೆ ಜಮೆ ತೆಗೆದುಕೊಳ್ಳದೆ ಹೋದದ್ದು ಕಂಡು ಬಂದು ಅವರನ್ನು ಸಸ್‌ಪೆಂಡ್ ಮಾಡಿದ್ದಾರೆ. ಈ ವರೆಗಿನ ಅಜಮಾಯಿಷಿಗೆಯಲ್ಲಿ 798 ರುಪಾಯಿ ಲೆಕ್ಕದಲ್ಲಿ ಕಡಿಮೆ ಕಂಡು ಬಂದದ್ದನ್ನು ಅವರು ಭರ್ತಿ ಮಾಡಿದಾಗ್ಯೂ, ಅವರ ಮೇಲಿನ ... ಲಕ್ಷ್ಯದ ಅಜಮಾಯಿಷಿಯು ಇನ್ನೂ ನಡೆಯುತ್ತಿದೆ ಎಂದೂ ತಿಳಿದು ಬರುತ್ತದೆ.

ಮೂರ್ನಾಡು ಕಾಂತೂರು ಗ್ರಾಮದಲ್ಲಿ ಮುಸಿಸ್ಯ ತಲಂದರೆಂಬವರು ಮನೆಗೆ ಬೀಗ ಹಾಕಿಕೊಂಡು ಕೂಂದಂಗೇರಿ ಕಡೆ ಹೋಗಿದ್ದಾಗ ಮನೆಯ ಬೀಗ ಮುರಿದು ಸುಮಾರು 700 ರುಪಾಯಿ ಕಳವು ಮಾಡಲ್ಪಟ್ಟಿದೆ ಎಂದು ವರ್ತಮಾನ.

ಕೊಡಗು ಜಮೀನ್‌ದಾರರ ಸಂಘದ ಎಗ್ಜಿಕ್ಯುಟಿವ್ ಕಮಿಟಿ ಮೀಟಿಂಗು ಇದೇ ತಾರೀಕು 23ನೆ ಮಂಗಳವಾರ ಸಾಯಂಕಾಲ 6 ಗಂಟೆಗೆ 'ಕೊಡಗು' ಆಫೀಸಿನಲ್ಲಿ ನಡೆಯುವುದು.

ವೀರಾಜಪೇಟೆ ಮುನ್ಸೀಫರಾದ ಮಿ. ಟಿ ಎಲ್. ಲಕ್ಷ್ಮೀನಾರಾಯಣಾಚಾರ್ಯರು ಅನಾರೋಗ್ಯದ ಕಾರಣದಿಂದ ಸಾಲ್ಕು ತಿಂಗಳು ರಜೆಗೆ ಬರೆದಿದ್ದಾರೆಂದು ತಿಳಿಯುತ್ತೇವೆ.

ಬೆಂಗಳೂರಿನಲ್ಲಿರುವ ಕೊಡಗು ಸಂಘದವರು ಕೈಲ್ ಮುಹೂರ್ತ ಹಬ್ಬವನ್ನು ಇದೇ ತಾರೀಕು 14ರಲ್ಲು 'ಲಾಲ್‌ಬಾಗಿ'ನಲ್ಲಿ ನಡಸಿರುವರು.

ಕೊಡಗು ಕಂಪನಿಯ ಡೈರೆಕ್ಟರುಗಳ ಮೀಟಿಂಗು ಈ ತಾರೀಕು 24ನೆ ಬುಧವಾರ ಸಾಯಂಕಾಲ 6 ಗಂಟೆಗೆ 'ಕೊಡಗು' ಆಫೀಸಿನಲ್ಲು ನಡೆಯುವುದು.

ದೇವಣಗೇರಿ ಗ್ರಾಮದ ಮುಕ್ಕಾಟಿರ ಲೇಟ್ ಐಯ್ಯಪ್ಪನವರ ಮನೆಮುಂದೆ ಗದ್ದೆ ಕಳೆಯಲ್ಲಿರುವ ಕಾಗೆ ಅವರ ಒಬ್ಬ ಕ್ರಿಶ್ಚಿಯನ್ ಗಾಡಿಯವನ ಹೆಂಡತಿಯು ತಾನಾಗಿಬಿದ್ದು ಸತ್ತಿರುತ್ತಾಳೆ.

ಶ್ರೀಮಂಗಲನಾಡು ಕೈಲಗ್ರಾಮದ ಮಿ. ತೀತಿರ ಗಣಪತಿಯವರು ತಾ| 5ರಲ್ಲು ಪರಲೋಕವನ್ನೈದಿದರು.

ಈ ವರ್ಷದ ಕೈಲ್‌ಮುಹೂರ್ತ ಹಬ್ಬದದಿವಸ ರಾತ್ರಿ ಮಡಿಕೇರಿಯ ಕೊಡವರು ಒಂದು ಔತಣ ಏರ್ಪಾಡು ಮಾಡಿದ್ದರಲ್ಲಿ ಅಮಲು ಪದಾರ್ಥವನ್ನು ಸೇರಿಸಲು ಏರ್ಪಡಿಸಿದರಿಂದ ಕೆಲವು ಕೊಡವರು ಈ ಔತಣಕ್ಕೂ, ಔತಣದ ಭಾಗವಾದ ಪಟ್ಟಣ ಕಂಪೌಂಡಿನಲ್ಲಿ ತೆಂಗಿನಕಾಯಿಗೆ ಗುರಿಹೊಡೆಯುವುದಕ್ಕೂ, ಸೇರದೆ ಬೇರೆಕಡೆ ತೆಂಗಿನಕಾಯಿಗೆ ಗುರಿಹೊಡೆಯುವ ಏರ್ಪಾಡುಮಾಡುತ್ತಿದ್ದದರ ಮೇಲೆ ಎರಡು ಕಡೆಯವರೂ ಒಗ್ಗಟ್ಟಿರಬೇಕೆಂಬ ಉದ್ದೇಶದಿಂದ ಅದಿನ ಸಾಯಂಕಾಲ ರಾ. ಬಾ. ಕೆ. ಕುಟ್ಟಯ್ಯನವರ ಅಧ್ಯಕ್ಷತೆಯಲ್ಲಿ ಒಂದು ಮೀಟಿಂಗು ನಡೆದು ಅಮಲುಪದಾರ್ಥಕ್ಕೆ ವಿರೋಧಿಸುವವರು ಆ ವಿಷಯ ಚರ್ಚೆಗೆ ತರಲು ಬಹಳ ತಡವಾದದ್ದರಿಂದಲೂ, ಈ ವರ್ಷದ ಔತಣಕ್ಕೆ ಎಲ್ಲಾ ಏರ್ಪಾಡುಗಳಾಗಿ ಬಿಟ್ಟಿರುವದರಿಂದಲೂ, ಇನ್ನುಮುಂದೆ ಮಡಿಕೇರಿಯಲ್ಲಿ ಕೊಡವರೆಲ್ಲರೂ ಸೇರಿ ನಡಸುವ ಕೈಲ್ ಮುಹೂರ್ತ ಹಬ್ಬಕ್ಕೆ ಅಮಲು ಪದಾರ್ಥವನ್ನು ಸೇರಿಸಕೂಡದೆಂಬ ಠರಾವು ಸರ್ವಸಮ್ಮತದಿಂದ ಮಂಜೂರಾದುದರಿಂದ ಎಲ್ಲರೂ ಒಗ್ಗಟ್ಟಾಗಿ ಕಾಸ್ಮೊಪಾಲಿಟನ್ ಕ್ಲಬ್ಬಿನಲ್ಲಿ ನಡೆದ ಔತಣದಲ್ಲಿ ಭಾಗಿಗಳಾದರೆಂದು ತಿಳಿಸಲು ಸಂತೋಷಪಡುತ್ತೇವೆ.

ಚೀಫ್ ಕಮೀಷನರವರು ತಾರೀಕು 1೯ರಂದು ಕೌನ್ಸಿಲ್ ಮೀಟಿಂಗಿಗಾಗಿ ಬೆಂಗಳೂರಿನ ಸಮಿತಿಕೇರಿಗೆ ಬರುತ್ತಿರುವರು.

ಕೋರ್ಟಿನ ಹುಕುಂ ವರ್ತಮಾನ

ಕೋದಂಡ, ಗ್ರಾಮದ [illegible] ಹೆಸರಿನ ಪ್ಪಯ್ಯ ಎಂಬವನ ಮೇಲೆ ಹಾಕಿದ ಚಿತ್ರಿಸನಾಧಾರಕ್ಕಾಗಿ ಈತನು ಮೃತನಾದ ಬಳಿಕ ಆತನ ಅಣ್ಣ ತಮ್ಮಂದಿಯರು ಮತ್ತು ವಿಧವೆಯ ಮೇಲೆ ಗಂಗಾಧರಯ್ಯಶೆಟ್ಟಿ ಎಂಬವರು ಅಮಲ್ದಾರಿಯನ್ನು ಮಡಿಕೇರಿ ಮುನಸೀಫ್‌ಕೋರ್ಟಿನಲ್ಲಿ ನಡಿಸಿದರು. ಪ್ರತಿವಾದಿಯರು ತನಗೂ ಪೌತನಿಗೂ ಪಾಲಾಗಿರಲಿಲ್ಲವೆಂತ ವಾದಮಾಡಿದರು. ವಿಚಾರ ನಡದದ್ದರಲ್ಲಿ ಪೌತನು ಕೋಅಪರೇಟಿವ್ ಸೊಸೈಟಿಗೆ ತನ್ನ ಪಾಲಿನ ಭೂಮಿಯನ್ನು ಗಿರ್ವಿ ಕೊಟ್ಟಿದ್ದನೆಂತ ರುಜುವಾತಾಯಿತು. ಕ್ರಾಪ್ ಇನ್ಸ್‌ಪೆಕ್ಷನಲ್ಲು ಜೀವನಕ್ಕೆ ಪಾಲು ಬೇರೆ ಎಂತ ಬರೆದಿತ್ತು. ಮುನಸೀಫರು ಪಾಲಾಗಲಿಲ್ಲವೆಂತಲೂ, ಪಾಲಾಗಿದ್ದಿದ್ದರೆ ಪಾರೀಕತ್ತು ಇರುತ್ತಿತ್ತು, ಅದವಾ ಪಾಲಿಯಾದರೂ ಬರೆದುಕೊಳ್ಳುತ್ತಿದ್ದರು. [illegible] ಅಣ್ಣತಮ್ಮಂದಿಯರ ಅನುಮತಿ ಕೇಳಬೇಕಾದ ಅವಶ್ಯವಿಲ್ಲ, ಕೊಡತಿಯೂ ಮತ್ತು ಸ್ವಾಧೀನದಲ್ಲಿ ಇಲ್ಲದ ಇರಲು ತಕ್ಕ ಕಾರಣ ಕೊಟ್ಟಿರುವದಿಲ್ಲ [illegible] ಪಾಲಾಗಿರಲಿಲ್ಲವೆಂತ ಫೈಸಲ್‌ಮಾಡಿ ಅಮಲ್ದಾರಿಯನ್ನು ಡಿಸ್ಮಿಸ್ ಮಾಡಿದರು. ವಾದಿಯು ಸಬ್‌ಜಡ್ಜ್ ಕೋರ್ಟಿಗೆ ಅಪ್ಪೀಲ್‌ಮಾಡಿದ್ದರ ಮೇಲೆ ಕೊಡಗೇತರರಲ್ಲಿ ಜೀವನಪಾಲು ಎಂಬುದು ಇಲ್ಲ, ಕ್ರಾಪ್ ಇನ್ಸ್‌ಪೆಕ್ಷನಲ್ಲಿ ಬರೆದದ್ದು ತಪ್ಪು, ಪೌತನು ಗಿರ್ವಿ ಕೊಟ್ಟದ್ದು ರುಜುವಾತಾಗಿರುವದರಿಂದ ಪಾಲಾದದ್ದು ನಿಜವೆಂತ ಫೈಸಲ್‌ಮಾಡಿ ಮುನಸೀಫರ ಫೈಸಲನ್ನು ಸಿರಾವು ಮಾಡಿದರು. ಆನಂತರ ಬೆಂಗಳೂರಿಗೆ ಜುಡಿಶಿಯಲ್ ಕಮೀಷನರ ಕೋರ್ಟಿಗೆ ಪ್ರತಿವಾದಿಯರು ನಂ. 9ನೇ 1922, ಅಪ್ಪೀಲ್ ಮಾಡಿದರು. ಪಾಲಾಗಿದ್ದಿದ್ದರೆ ಗಿರ್ವಿಕೊಡುವಾಗ ಅಣ್ಣತಮ್ಮಂದಿಯರ ಅನುಮತಿ ಕೇಳಬೇಕಾದ ಅವಶ್ಯವಿಲ್ಲವೆಂತಲೂ ಕೊಡಗರ ಮಧ್ಯೆ ಇರುವ ಪ್ರತಿವಾದಿಯರು ಕೊಡಗರ ಪದ್ಧತಿಯನ್ನು ಅನುಸರಿಸಿ ಜೀವನದಪಾಲು ಮಾಡಿಕೊಂಡದ್ದಾಗಿರಬೇಕಂತಲೂ, ಪಾಲಾಗಿತ್ತೆಂತ ವಾದಿಯು ತಂದ ರುಜುವಾತು ಸಾಲದೆಂತಲೂ, ಬರೆದು ಮುನಸೀಫರ ಫೈಸಲನ್ನು ಕಾಯಂ ಮಾಡಿದ್ದಾರೆ. ಹಿಂದೂಶಾಸ್ತ್ರಕ್ಕೆ ಒಳಗಾದ ಪ್ರತಿವಾದಿಯರು ಕೊಡಗು ಪದ್ಧತಿಯನ್ನು ಅನುಸರಿಸುವುದೆಂತ ವಾದಿಗೆ ತಿಳಿಯಲಿಕ್ಕೆ ಕಾರಣವಿರಲಿಲ್ಲವಾದ್ದರಿಂದ ಕಕ್ಷಿಗಾರರು ತಮ್ಮ ತಮ್ಮ ಕೋರ್ಟುಕರ್ಚನ್ನು ತಾವೇ ವಹಿಸಿಕೊಳ್ಳಬೇಕೆಂತ ಫೈಸಲ್‌ಮಾಡಿದ್ದಾರೆ.

ಕಿರಗೂರು ಗ್ರಾಮದ [illegible] ಎಂಬವನು [illegible] ಎಂಬವನನ್ನು ರಾತ್ರಿಹೊತ್ತು ಆಕಸ್ಮಾತ್ತಾಗಿ ಗುಂಡು ಹೊಡದದ್ದಕ್ಕೆ ಮೊಕದ್ದಮ್ಮೆ ನಡೆದು ಸಬ್ ಡಿವಿಜನ ಕೋರ್ಟಿನಲ್ಲಿ ಖುಲಾಸೆಯಾಯಿತು. ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರಿಗೆ ಪೋಲೀಸಿನವರು ರಿವಿಜನ್ ಅರ್ಜಿ ಕೊಟ್ಟಿದ್ದರ ಮೇಲೆ ಪುನರ್ವಿಚಾರ ಆಗಬೇಕೆಂತ ಆರ್ಡರ್‌ಮಾಡಿ ಅವರೇ ವಿಚಾರಮಾಡಿ ಆಪಾದಿತನಿಗೆ ನೂರುಪತ್ತು ರೂಪಾಯಿ ಜುಲ್ಮಾನೆ ಮಾಡಿದರು.

ಹಿಂದೂ ದೇಶ

ಗುಲ್ಬರ್ಗದಲ್ಲಿ ಹಿಂದೂ ಮುಸಲ್ಮಾನರ ಪುಂಡಾಟದಲ್ಲಿ ಪೋಲೀಸಿನವರು ಜನಾಗ್ರೆಸ್ಸಿವ್ ತೀರ ಹೊಡೆಯಲಿಲ್ಲವೆಂತಲೂ ಆದನ್ನು ವಿಚಾರಿಸುವದಕ್ಕೂ ಮತ್ತು ಆ ಪುಂಡಾಟ ವಿಷಯ ತನಿಕೆ ಮಾಡುವದಕ್ಕೂ ನೈಜಾಮರವರ ಸರಕಾರದವರು ಒಂದು ಕಮಿಟಿಯನ್ನು ಏರ್ಪಡಿಸುವರು.

ಮಹಾತ್ಮಾ ಗಾಂಧಿಯವರು 'ಕಾಮ್ರೇಡ್' ಎಂಬ ಇಂಗ್ಲೀಷ ಪತ್ರಿಕೆಯನ್ನೂ ಮತ್ತು 'ಹಮ್‌ದರ್ದ್' ಎಂಬ ಉರ್ದು ಪತ್ರಿಕೆಯನ್ನೂ ಪುನಃ ಸ್ಥಾಪಿಸಲಿಕ್ಕಾಗಿ ಆ ಪತ್ರಿಕೆಗಳಿಗೆ ಚಂದಾದಾರರಾಗಿಯೂ ಉದಾರವಾಗಿ ಹಣಕೊಟ್ಟೂ ಮತ್ತು ಪ್ರಕಟಣೆಗಳನ್ನು ಕೊಟ್ಟೂ ಸಹ ಸಹಾಯ ಮಾಡಬೇಕೆಂದು ಕೇಳಿಕೊಂಡಿದ್ದಾರೆ.

ಲಾಹೋರಿನ ಸಮೀಪದಲ್ಲಿ ಪಂಜಾಬ್ ಮೇಲ್ ಎಂಬಲ್ಲಿ 2 ರೈಲ್ವೆಗಳು ತಾ. 2೬ರ ರಾತ್ರಿ ಒಂದು ಗಂಟೆ ಸಮಯದಲ್ಲಿ ಎದುರು ಬದುರು ಬಂದು ಒಂದಕ್ಕೊಂದು ತಗಲಿ 107 ಜನರು ಸತ್ತು ಹೋದರು. ಸುಮಾರು 200 ಜನರಿಗೆ ಗಾಯವುಂಟಾಗಿದೆ.

ಮದ್ರಾಸು ಗವರ್ನರವರು ತಿರುಚಿನಾಪಳ್ಳಿ ಜಿಲ್ಲೆಯಲ್ಲಿ ಪ್ರವಾಹದ ನಷ್ಟವನ್ನು ನೋಡಲಿಕ್ಕೆ ಹೋದಲ್ಲಿ ರೈತರ ಮೊರೆಯನ್ನು ಬಹಳ ಕನಿಕರದಿಂದ ಕೇಳುತ್ತಿದ್ದಾರೆ.

[illegible] ನಾಯುತ ಬಿತ್ತಿಯರ ಕೇಸಿನಲ್ಲಿ ಜಡ್ಜ್‌ರವರು ಪಂಚಾಯಿತಿನಲ್ಲಿ ಮಾಡಿದ್ದು ಸರಿ ಎಂದು ಜಸ್ಟಿಸ್ ಮೆಕಾರ್ಡಿಯವರು ಸೂಚಿಸಿದ ಅಭಿಪ್ರಾಯವನ್ನು ಆಕ್ಷೇಪಿಸಿ ಸೆಕ್ರೆಟರಿ ಆಫ್ ಸ್ಟೇಟಿನವರು ಬರೆದ ಅಭಿಪ್ರಾಯಕ್ಕೆ ತಮ್ಮ ಒಪ್ಪಿಗೆಯನ್ನು ಇಂಡಿಯಾ ಸರ್ಕಾರದವರು ಪ್ರಕಟಿಸಿರುವರು.

ಮೋಪಾಲರ ಜೇಗಮೂರವರ ಹಿರೇ ಮಗನು ಮೃತನಾಗಿ ಟ್ಟನೆಂದು ತಿಳಿಯುಬರುತ್ತದೆ.

ದಕ್ಷಿಣ ಹಿಂದೂಸ್ತಾನದಲ್ಲಿ [illegible] ಯುಂಟಾದ [illegible] ಗಳನ್ನು [illegible] ನೋಡಿದ [illegible] ಗದವರ [illegible] ಒಂದು [illegible] ಸರ್ಕಾರದ [illegible] 'ಹಿಂದೂ' ಪತ್ರಿಕೆ [illegible].

ಹೈದರಾಬಾದು ಸಂಸ್ಥಾನದ [illegible] ಗೆ 'ಹೈದರಾಬಾದ್ ಬುಲೆಟಿನ್ ಆಫ್ ಇಂಡಿಯಾ', 'ಅಮೃತ ಬಜಾರ ಪತ್ರಿಕ' ಎಂಬ ವೃತ್ತಾಂತ ಪತ್ರಿಕೆಗಳು ಹೋಗಕೂಡದೆಂತ ಮಾಡಿದ ನೈಜಾಮರ ಸರ್ಕಾರದ ಹುಕುಮಿಗೆ ವೃತ್ತಾಂತ ಪತ್ರಿಕೆಗಳ ಸಂಘದ ಕಮಿಟಿಯವರು ಆಕ್ಷೇಪಿಸಿ ಇಂಥಾ ಹುಕುಮನ್ನು ಕೂಡಲೇ ರದ್ದು ಮಾಡಬೇಕೆಂದು ನೈಜಾಮರ ಸರ್ಕಾರವನ್ನು ಬರಕೊಂಡಿದ್ದಾರೆ.

ಲಾಲಾಲಜಪತರಾಯರು ಇಂಗ್ಲೆಂಡಿನಿಂದ ಹೊರಟು ಬೊಂಬಾಯಿಗೆ 17ನೇ ತಾರೀಕಿನಲ್ಲಿ ತಲಪುವರು.

ಬೊಂಬಾಯಿಯಲ್ಲಿ ಒಂದು ಲಕ್ಷ ಪ್ರೋಟೆಸ್ಟೆಂಟ್ ದೇಶೀಯ ಕ್ರಿಸ್ತ ಮತದ [illegible] ಗಳ ಪ್ರತಿನಿಧಿಗಳಿಂದ [illegible] ಮೀಟಿಂಗ್‌ನಲ್ಲಿ [illegible] ಗಳನ್ನು [illegible] ಮತ್ತು ಪರದೇಶೀ ಸಿಪಾಯಿಗಳನ್ನು ಹಿಂದೂ ದೇಶಕ್ಕೆ ತರುವುದನ್ನು [illegible] ಬೇಕೆಂತಲೂ [illegible] ದ ಜನರ ಆಕ್ಷೇಪ ಮೀರಿ ಸಿಪಾಯಿ ಪದಾರ್ಥಗಳ ಅಂಗಡಿಗಳನ್ನು ಆ ಸ್ಥಳದಲ್ಲಿ ಇಡಕೂಡದೆಂತಲೂ, ಹಿಂದೂ ದೇಶದಲ್ಲಿ ವಾಸಿಸುವ ಪರದೇಶಸ್ಥರು ಸಾಧ್ಯವಾದಷ್ಟು ಪಟ್ಟಿಗೆ ಕುಡಿಯುವುದನ್ನು ಬಿಟ್ಟು ಹಿಂದೂಸ್ತಾನದ ಜನರಿಗೆ ಮೇಲ್ಪಂಕ್ತಿ ಹಾಕಿ ಕೊಡಬೇಕೆಂದೂ ಸರ್ಕಾರದವರನ್ನೂ, ಜನರನ್ನೂ ಪ್ರಾರ್ಥಿಸಿಕೊಂಡಿರುತ್ತಾರೆ.

ಲೆಜಿಸ್ಲೇಟಿವ್ ಎಸೆಂಬ್ಲಿಯಲ್ಲಿ ಲೀ ಕಮಿಷನ್ ರಿಪೋರ್ಟನ್ನು ಜಾರಿಗೆ ತರಬೇಕಂತ ಸರ್ಕಾರದವರು ಈ ವಾರದಲ್ಲಿ ಠರಾವು ತರುವರು. ಇದಕ್ಕೆ ಪ್ರಜಾ ಪ್ರತಿನಿಧಿಗಳಾದ ಮೆಂಬರುಗಳೆಲ್ಲರೂ ಒಗ್ಗಟ್ಟಾಗಿ ವಿರೋಧಿಸುವಂತೆ ಏರ್ಪಾಡು ಮಾಡಿಕೊಂಡಿರುವರು.

ಹಿಂದೂಸ್ತಾನದ [illegible] ಗೂಣದ ಸಮಯದಲ್ಲಿ ಬಂಗಾಳದ ಗವರ್ನರಾದ ಲಿಟ್ಟನ್ ಪ್ರಭುಗಳು ಆಕ್ಷೇಪಕರವಾಗಿ ಮಾತಾಡಿದ್ದರ ವಿಷಯವಲ್ಲ [illegible] ನಾಥ್ ಟಾಗೋರರು [illegible] ಅವರು ಇನ್ನೊಂದು ಪತ್ರ ಬರೆದದ್ದನ್ನು [illegible] ದಾರೆ. ಗವರ್ನರವರು ತಾವಾಡಿದ ಮಾತುಗಳಿಗೆ [illegible] ಸುತ್ತೇನೆಂತ ಬರೆಯಬೇಕೆಂತ ಟಾಗೋರರವರು ಕೇಳಿಕೊಂಡಿದ್ದರು. ಹಿಂದೂಸ್ತಾನದ [illegible] ಯವರನ್ನು ಅವಮಾನಪಡಿಸುವದು ತನ್ನಿಂದ ಸಾಧ್ಯವೇ ಇಲ್ಲವೆಂತಲೂ, ತಾನು ಆಡಿದ ಮಾತುಗಳಿಗೆ ಜನರು ಕಲ್ಪಿಸಿದ ಅರ್ಥ [illegible] ಲೂ, ಆದುದರಿಂದ ತಾನಾಡಿದ್ದಕ್ಕೆ ವ್ಯಸನಪಡುತ್ತೇನೆಂತಲೂ ಗವರ್ನರವರು ಬರಕೊಂಡಿರುವರು.

ವಿದೇಶ

ನ್ಯೂಯೋರ್ಕಿನಿಂದ ಹೊರಡುವ [illegible] ಪತ್ರಿಕೆ ಅಭಿಪ್ರಾಯ, ಪಂಜಾಬ್ ಸ್ವಾತಂತ್ರ್ಯ ಹೋರಾಟದಲ್ಲಿ ಬಿಡುವನ್ನು ಹಾರ್ಡಿಗೆ ಮಹಾತ್ಮ ಜೀಯವರು [illegible] ನೀತಿಯನ್ನು ಕೊಡುತ್ತಿರುವರು.

[illegible]

ಸ್ಪೈನಾ ದೇಶದಲ್ಲಿ [illegible] ಮುಂದುವರಿಯುತ್ತಿದೆ. ಅವರು ಒಂದು ಪಂಗಡದ ಜನರು ತನ್ನ ವಿರೋಧಪಂಗಡದ ಕಮಾಂಡರನ್ನು ಕೊಂದು ಯಾವಾಗ ಸಮೀಪಿಸಿ ಹಿಡಿದುಕೊಂಡರೆ ನಮಗೆ ಸಾವಿರ ಡಾಲರುಗಳನ್ನು ಇನಾಮು ಕೊಡುವದಾಗಿ ಪ್ರಕಟಿಸಿರುವರು.

ಸ್ಪೈನ್ ರಾಜ್ಯಕ್ಕೆ ಸೇರಿದ ಮೊರಾಕೊ ಎಂಬಲ್ಲಿ ನೇಟಿವ್ ಜನರಿಗೂ ಸರ್ಕಾರದ ಸೈನ್ಯಕ್ಕೂ ಯುದ್ಧ ನಡೆಯುತ್ತಿದೆ.

ಪ್ರಿನ್ಸ್ ಆಫ್ ವೇಲ್ಸ್‌ರವರು ಅಮೇರಿಕಕ್ಕೆ ಹೋಗಿ ಯುನೈಟೆಡ್ ಸ್ಟೇಟ್ಸ್‌ನಲ್ಲಿ ಸನ್ಮಾನಪಡೆದು ಸಂಚರಿಸುತ್ತಿರುವರು.

ಕ್ಲೀವ್‌ಲಾಂಡ್ ಬಾರ್ಗನ್ಸ್ [illegible] ಎಂಬ ಮಂಗನು ಎರಡು ವರ್ಷಗಳ ವರೆಗೆ ಮಲಗಿ ಈಗ ಎದ್ದಿರುವನು.

[illegible] ಇಂಗ್ಲೆಂಡಿನ ಪ್ರೈವೇಟ್ [illegible] ಸ್ವತಂತ್ರ [illegible] ಈ ವಾರದಲ್ಲಿ ಇಂಡಿಯಾಕ್ಕೆ [illegible] ಮಾಡಿದರು. [illegible] ರವರು [illegible] ಆದರೆ [illegible] ಕೊಡುವ ಕಾನೂನಿನ ಲಕ್ಷ್ಯ ಕೊಡಬೇಕಾದ ಕಾರ್ಯವನ್ನು ನಿರಾಕರಿಸಿದ ನಿತ್ತರೆಂದು ದಾಕ್ಷೆಗಳು ಹೇಳಿರುವರು.

ಜಗತ್ತಿನಲ್ಲೆಲ್ಲಾ ದೊಡ್ಡದಾದ ನಕ್ಷೆಯು ಅಮೇರಿಕದ ನ್ಯೂಯಾರ್ಕ್ ಪ್ರಿನ್ಸ್ ಎಂಬಲ್ಲಿದೆ. ಇದು 600 ಅಡಿ ಉದ್ದವಾಗಿಯೂ, 18 ಅಡಿ ಅಗಲವಾಗಿಯೂ ಇದೆ.

ಪ್ರಿನ್ಸ್ ಆರ್ಥರ್ ಆಫ್ ಕಾನ್ನಾಟ್‌ರವರು ಸತ್ತಿ ಸಹ ಇಂಡಿಯಾಕ್ಕೆ ಬರುವ ಜನವರಿಯಲ್ಲಿ ಬರುವರು. [illegible] ಪ್ರಭುಗಳು ನೈಜಾಮರ ಜನರನ್ನು ಬಿಟ್ಟ ನಂತರ ಇವರಿಗೆ ಇಂಡಿಯಾದ ವೈಸರಾಯರಾಗಿ ನೇಮಿಸುವರೆಂದು ಲಂಡನಿನ ಡೈಲಿ ಮೆಯಿಲ್ ಪತ್ರಿಕೆ [illegible] ಸಲಹೆಸಿದೆ.

[illegible] ಪ್ರದರ್ಶನದಲ್ಲಿ 'ಎಂದೂ ನಿಲ್ಲದ' [illegible] ಈ ಗಾಡಿಗೆ ಡ್ರೈವರ್, ಗಾರ್ಡ್, ಸಿಗ್ನಲ್ [illegible] ಯಾವದೂ ಬೇಕಾಗಿರುದಿಲ್ಲ. ಈ ಗಾಡಿಯ ಗಾಲಿಗಳು ಇಲೆಕ್ಟ್ರಿಕ್ ಯಂತ್ರದ ಸಹಾಯದಿಂದ ತಾವೇ ಉರುಳುತ್ತವೆ. ಗಾಡಿಯು ತಾಸಿಗೆ 24 ಮೈಲು ವೇಗವುಳ್ಳದ್ದಾಗಿದೆ. ಸ್ಟೇಶನ್‌ಗೆ ಬಂದ ಕೂಡ್ಲೆ ವೇಗವು ಕಡಿಮೆಯಾಗುತ್ತಾ ಗಾಡಿಗಳ ಬಾಗಿಲುಗಳು ತೆರೆಯಲ್ಪಟ್ಟು ಹತ್ತುವವರು ಹತ್ತಬಹುದು. ಇಳಿಯುವವರು ಇಳಿಯಬಹುದು. ಸ್ಟೇಶನ್ ದಾಟುವವರೆಗೆ 2, 3 ಮೈಲು ವೇಗವು ಮಾತ್ರ ಇರುತ್ತದೆ. ದಾಟಿದ ಕೂಡಲೇ ಪುನಃ ವೇಗವು ಮೊದಲಿನಂತೆ ಹೆಚ್ಚುವುದು.

ಪತ್ರ ವ್ಯವಹಾರಗಳು.

ಬಾತ್ಮಿ ಬರುವ [illegible] ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ. ಸಂ

[illegible] ಹೈಸ್ಕೂಲ್ ರಜಾ

ಕಿಗ್ಗಟ್ಟುನಾಡಿನ ವಿದ್ಯಾರ್ಥಿಗಳು ಮಡಿಕೇರಿಯಲ್ಲು 30ರಿಂದ 40ರ ವರೆಗೆ ಇರುವರು. ಮಡಿಕೇರಿ ಹೈಸ್ಕೂಲಿನಲ್ಲು ಒಂದು ವರ್ಷಕ್ಕೆ ಕನಿಷ್ಠ ಪಕ್ಷ ವಿದ್ಯಾರ್ಥಿಗಳಿಗೆ ಹತ್ತು ದಿನದ ರಜೆಯು 3, 4 ಸಲ ದೊರೆಯುತ್ತೆ. ಈ ಹತ್ತು ದಿನದಲ್ಲಿ ಒಂದು ದಿನ ಅಲ್ಲೇ ಗಾಡಿಯಾಗಲಿ ಮೋಟಾರಾಗಲಿ ಹುಡುಕುವಾಗಲೇ ಕಳೆಯುತ್ತ. ಮನೆ ಸೇರುವಾಗ 3 ದಿನ ಕಳೆಯುತ್ತ. ಹಿಂತಿರುಗಿ ಹೋಗಲಿಕ್ಕೆ ಮೋಟರಿನಲ್ಲಿ 2 ದಿನ, ಗಾಡಿಯಲ್ಲಿ ಅಗಲಿ ಕಾಲಿನಲ್ಲಿ ನಡೆದು ಹೋಗುವದಾಗಲಿ 3 ದಿನ ಬೇಕಾಗುತ್ತೆ, ಅಂತು ಇಂತು ಬರಲಿಕ್ಕೂ ಹೋಗಲಿಕ್ಕೂ 6, 7 ದಿನ ಕಳೆಯುತ್ತ. ಮೋಟಾರು ಚಾರ್ಜು ಮಡಿಕೇರಿಯಿಂದ ವೀರಾಜಪೇಟೆಗೆ 1-12-0, ಅಲ್ಲಿಂದ [illegible] ಗೆ 1 ರೂಪಾಯಿ, ಅಲ್ಲಿಂದ [illegible] 1 ರೂಪಾಯಿ, ಅಂತು [illegible] 3-12-0 ಆಕ್ ಖರ್ಚು ಆಯಿತು. ಹಿಂತಿರುಗಿ ಹೋಗಲಿಕ್ಕೆ [illegible] ಬೇಕಾಗುತ್ತೆ. [illegible] ಒಂದು ವಿದ್ಯಾರ್ಥಿಯು ತನ್ನ [illegible] ಮನೆಗೆ ಮುಟ್ಟಿ ಹಿಂತಿರುಗಿ ಸ್ಕೂಲ್ ಸೇರುವಾಗ 7, 8 ರೂಪಾಯಿ ಖರ್ಚು [illegible] ದು. ಹಿಂದಿನ [illegible] 6 [illegible] (5-8-0) [illegible] 2 ರೂಪಾಯಿ [illegible] ಗಾರರ ಹಟ್ಟಿಗಗ [illegible]. ಈ ವಿದ್ಯಾರ್ಥಿಗಳು ಅಲ್ಲೇ ಇದ್ದರೆ 2 ವಾರದ ಬೋರ್ಡಿಂಗ್ ಚಾರ್ಜು ಕೊಟ್ಟು ನಿಂತರೆ ಶರೀರ ಆಲಕ್ಷ್ಯವಿಲ್ಲದೆ ಇರುವುದು ಬಿಟ್ಟು ಈ ಬಳಲಿಕೆಯನ್ನು ನಮ್ಮ ವಿದ್ಯಾರ್ಥಿಗಳಿಗೆ ಕೊಟ್ಟು [illegible] ಕ್ಕಾದ ಖರ್ಚು ಮುಟ್ಟಿಸುವುದು ಹೈಸ್ಕೂಲು ಮಾಸ್ತರುಗಳಿಗೂ ಬೋರ್ಡಿಂಗ್ ಪಾಲಕರಿಗೂ ಕಾಣಿರಲಿಲ್ಲವೆ? ನಮ್ಮ ಸರ್ಕಾರದವರು ಈ ವಿದ್ಯಾರ್ಥಿಗಳ ಎಚ್ಚರಿಕೆ ತೆಗೆಯುತ್ತಿದ್ದಿಲ್ಲವೆ? [illegible] ಗಳಿಗೆ ಮುಂಗಾರು ಹೀಗೆ ಬರುವದು ಹೋಗುವದು ಮಾತ್ರ ಇಲ್ಲವೆ? [illegible] ವಿದ್ಯಾರ್ಥಿಗಳ [illegible] [illegible] ನ್ಯಾಯವನ್ನು [illegible] [illegible] ವಿದ್ಯಾರ್ಥಿಗಳು [illegible] ಮೇಲೆ [illegible] ಬೋರ್ಡಿಂಗಿನಲ್ಲಿ [illegible] [illegible] ಮಾಡಿ [illegible] ಕ್ಕಾದ ಖರ್ಚು [illegible] ಮಾಸ್ತರುಗ [illegible] ಯೂ ಮುಂದೆ [illegible] ನನ್ನ ಸಂಪೂರ್ಣ ವಂದನೆ.

ಮುಕ್ಕೋಡ್ಲು ಕೊಡಗ.

ಕೊಡಗಿನ ಹಿಂದುಳಿದ ಪಂಗಡಗಳು.

ಅಯ್ಯಾ ಸಂಪಾದಕರೇ,

ನಿಮ್ಮ ತಾರೀಕು [illegible] ಕೊಡಗು ಬಾತ್ಮಿಯನ್ನು ನೋಡಿ ಸಂತೋಷಪಟ್ಟವನು. ಮನಸ್ಸಿನಲ್ಲಿದ್ದುದನ್ನು ಹೊರಗೆ [illegible] ದಿಂದ [illegible] ಕಡಿಮೆಯಾಗುವವು. ತಮ್ಮ ಅಭಿಪ್ರಾಯಗಳಂಥ ಅಭಿಪ್ರಾಯಗಳನ್ನು [illegible] ದೇಶದ [illegible] ಕೊಳ್ಳುವವರು ಕೊಡಗಿನ [illegible] ನಿಮ್ಮ ಅಂಥಾ ಅಭಿಪ್ರಾಯಗಳನ್ನು [illegible] ನನ್ನ ಹೊಸ ಬಾತ್ಮಿಯನ್ನು ಬರೆದೆನು. ಅದು ಎಷ್ಟು ಬೇಗನೇ ಸಾಧ್ಯವಾಗುತ್ತದೆ. ತಾವೇ ಹೇಳಬಲ್ಲಿರಿ.

ನೀವು ನನ್ನ ಬಾತ್ಮಿಯ ವಿಷಯ ಅನೇಕವಿಧವಾಗಿ ಬರೆದಿರುತ್ತೀರಿ. ಅವಶ್ಯವಾದ ವಿಷಯಗಳಿಗೆ ಗಮನಕೊಡದೆ ಕಾಡುಕುರುಬರುಗಳಿಂದ ಚೆನ್ನಪಟ್ಟಣ, ಹಾಡಿಯು ಸುಟ್ಟುಹೋಗ

...ತುಗಿ ಬಾಯಿ ಬಿಟ್ಟು ಕೂಗುವಂತೆ ...ವೆ ಬರೆದ ಉಪನ್ಯಾಸಕ್ಕೆ ನನ್ನ ಉತ್ತರವು ಆದರೆ ಜನರಿಗೆ ನಿಮ್ಮ ಅಭಿಪ್ರಾಯಗಳು ...ನ್ವೊಂಬದನ್ನು ವ್ಯಕ್ತಪಡಿಸಲು ಇದನ್ನು ಬರೆ ... ನಿಮ್ಮ ಬಾತ್ಮಿಯಲ್ಲಿ ನನ್ನ 'ತಳಿಗೇಡಿ' ತನದ ...ನ್ನ ಅತ್ಯಂತ ವ್ಯಸನ' ಪಡುತ್ತೀರಿ ಆದರೆ ತ ...ತ್ತವು ನಗೆ ಚಟ್ಟಾಗಿ ಗೋತ್ರಿಯುವದರಿಂದ ಅದಕ್ಕೆ ...ಶ್ಚರ್ಯವಾಗಲೀ, ವ್ಯಸನವಾಗಲೀ ಪಡುವ್ವದಿಲ್ಲ

ನನ್ನ ಬಾತ್ಮಿಯಲ್ಲಿ ಇಂಡಿಯಾದೇಶದವರು ಕೇಳದೇನೇ ...ಟಿಷ ಸರ್ಕಾರವು ಮಾಪಾಡು ಕೊಟ್ಟಿತೆಂದು ಹೇಳಿಲ್ಲ ಆ ...ರೆ ಮಾರ್ಪಾಡು ಕೊಡುವಾಗ ಸದ್ಯಕ್ಕೆ ದೇಶವನ್ನು ತರ್ಬೇ ...ತು ಪಡಿಸಲು ಕೊಟ್ಟಿರುವದಾಗಿ ಜಾಯಿಂಟ್ ಕಮಿಟಿ ರಿಪೋರ್ಟಿನಲ್ಲಿ (Joint Committee Report) ಪದೇಪದೇ ಹೇಳಿರುವರು ಅದು ಬಹುಶಃ ತಮಗೆ ಅರ್ಥವಾಗದೆ ಇರ ...ಕಹುದು.

ತಮ್ಮ ಎರಡನೇಯ ಪೇರಾದಲ್ಲಿ ಬರೆದದ್ದನ್ನು ನೋಡಿದರೆ ತಮಗೆ ನಾನು ಬರೆದದ್ದು ಪೂರಾ ಅರಿಕೆಯಾಗಲಿಲ್ಲವೆಂಬಂತೆ ಕಂಡುಬರುತ್ತದೆ ನಾನು ಈಗಿರುವ ಕೌನ್ಸಿಲ್ ಮೆಂಬರುಗಳು ಒಬ್ಬೇ ... [illegible] ... ಗಳನ್ನು [illegible] ವೆಂದು ಹೇಳಿಲ್ಲ ಆದರ ಕೌನ್ಸಿಲ್ ಮೆಂಬರುಗಳು ಇಷ್ಟರವರೇಗೆ ಹಿಂದುಳಿದ ಸಂಗಡಗ [illegible] ಇದರಿಂದ ಅವರಿಗೆ ಹಿಂದುಳಿದ [illegible] ಇಲ್ಲವೆಂಬ [illegible] ವಾಗಿ ಬರೆದಿರೆ ... ಇಂಡಿಯಾ ದೇಶದ [illegible] ಕೌನ್ಸಿಲ್ [illegible] ... [illegible] 'ದೇಶಾಭಿಮಾನಿ'ಗಳಾದ ನೀವು ಹೇಗೆ ತಾನೆ ವಿವರಿಸುವಿರಿ?

ನಿಮ್ಮ ಮೂರನೆಯ ಪೇರಾದಲ್ಲಿ ರಾಜಕೀಯ ಶಾಸ್ತ್ರದಲ್ಲಿ (Politics) ತಮಗಿರುವ ಹೆಚ್ಚಿನ ಪಾಂಡಿತ್ಯವು ತೋರಿಬರುತ್ತದೆ. ಆದರೆ ಏನು ಮಾಡಲಾದೀತು? ತಮಗೆ ರಾಜಕೀಯ ಶಾಸ್ತ್ರದ ನಿಜವಾದ ಜ್ಞಾನವಿದ್ದಲ್ಲಿ ತಾವೆಂದಿಗೂ ಅಂತಹ ...ಯನ್ನು ಬರೆಯುತ್ತಿರಲಿಲ್ಲ ಅಯ್ಯಾ ಸುಬ್ಬಯ್ಯನವರೇ, ...ಂಡಿನಲ್ಲಿಯೂ ಪಂಗಡಗಳುಂಟು ಮತ್ತು ಇತರ ಎಲ್ಲಾ ...ಗಳಲ್ಲಿಯೂ ಪಂಗಡಗಳುಂಟು ಆದರೆ ಆ ಪಂಗಡಗಳು ...ಇಂಡಿಯಾ ದೇಶದಲ್ಲಿರುವಂತಹ ನಿಕೃಷ್ಟವಾದ ಜಾತಿಭೇದದ (degenerated caste system) ಪಂಗಡಗಳಲ್ಲ ... [illegible] ಕೂಲಿ ಕೆಲಸ [illegible] ಒಂದು ಪಂಗಡವಾಗುತ್ತಾರೆ [illegible] ಪಂಗಡದವರಾಗುತ್ತಾರೆ [illegible] ಪಂಗಡದವರಾಗುವರು ಆ [illegible] ನ ಮಗನು [illegible] ಆದರೆ ಅವನು [illegible] ಸಂಗಡಕ್ಕೆ ಸೇರುತ್ತಾನೆ [illegible] ದೇಶದಲ್ಲಿ ಹಾಗಲ್ಲ ಒಂದು ಜಾತಿಯವರಲ್ಲಿ ಎಷ್ಟು ಕಸವಿಸ [illegible] ಅವರೆಲ್ಲಾ ಒಂದು ಪಂಗಡವಾಗಿ ನಾವಿರಾರು [illegible] ಜಾತಿಯವರನ್ನು ದ್ವೇಷಿಸುವರು ದ್ವಾಪರ ಯುಗದಲ್ಲಿ ಪುರೋಹಿತನಾದ ಬ್ರಾಹ್ಮಣ ಸಂತಾನದವನಿಗೆ ಈಗ ಗಾಯತ್ರಿಯು ಗೊತ್ತಿಲ್ಲದಿದ್ದರೂ ಅವನು ಪುರೋಹಿತ [illegible] ಪೂರ್ವದಲ್ಲಿ ಗದ್ದೆ ಉಳುತ್ತಿದ್ದವನ ಸಂತತಿಯವನು ಈ... ಎಷ್ಟು ಶುದ್ಧ ಮನಸ್ಕನಾದರೂ ಅವನು ಈಗ ಗದ್ದೆ ಉಳ... [illegible] ದೇವಸ್ಥಾನದ ಒಳಗೆ ನುಗ್ಗಕೂಡದು ... ...ತಿಯಲ್ಲಿಯೇ ಹಿಂದೂ ದೇಶದ ಪಂಗಡಗಳು ಬಂದಾ... [illegible] ಜಾತಿ ವ್ಯತ್ಯಾಸವಿರುವವರಾಗೂ ನಡೆಯಬೇಕಾಗುವದು. ಆದುದರಿಂದ ನಿಜವಾದ ದೇಶಾಭಿಗಳು ಜಾತಿಭೇದಗಳನ್ನು ಕಿತ್ತು ಹಾಕಬೇಕು. ಜಾತಿ ಪದ್ಧತಿಯನ್ನು ಇಟ್ಟುಕೊಂಡು ದೇಶದ ಒಕ್ಕಟ್ಟು, ಒಕ್ಕಟ್ಟೆಂದು ಕೂಗಿಕೊಳ್ಳುವವರಿಗಿಂತ ಹೆಚ್ಚಿನ ಮೋಸಗಾರರು ಬೇರಿಲ್ಲಾರರು

ಯೋಗ್ಯರನ್ನು ಸಿಕೊಂಡಿರುವವರಿಗೆ ಒತ್ತಾಯಿಸಿದರೆ ಕೊಟ್ಟು ಇದರಿಂದ ಹಿಂದುಳಿದ ಪಂಗಡದವರನ್ನು ಮುಂದಕ್ಕೆ ತರಲು ಪ್ರಯತ್ನ ಪಡಬೇಕೆಂದು ಏಂಟರ್ಪಾರ್ಟನವರು ಹೇಳಿರುವದು ತಮಗೊಬ್ಬರಿಗೆ ಮಾತ್ರ ಗೊತ್ತಿಲ್ಲ ಆದರೆ ಅದರಂತೆ ಯೇ ಕೌನ್ಸಿಲ್ ಕೊಟ್ಟಾಗ, ಇಂಡಿಯಾದೇಶದ ಇತರ ಭಾಗಗಳಲ್ಲಿ ಹಿಂದುಳಿದವರಿಗೆ ತೋರಿಸಿದ ಉತ್ತೇಜನ ತಿಳಿದೂ ನಮ್ಮ ಕೊಡಗು ಕೌನ್ಸಿಲ್ ಮೆಂಬರುಗಳು ಸುಮ್ಮನೆ ಕುಳಿತದ್ದರಿಂದ ಲೇ ನನ್ನ ಬಾತ್ಮಿಗೆ ಕಾರಣವಾಯಿತೆಂದು ತಮಗೆ ತಿಳಿಯಲು ಶಕ್ತಿ ಸಾಲದೆಹೋಯಿತೇ?

ಪಂಗಡಭೇದಗಳಿಂದ ರಾಜ್ಯಭಾರವು ನಡೆಯುವಷ್ಟು ಕಾಲ ರಾಜ್ಯಭಾರವು ಐಕ್ಯಮತ್ಯದಿಂದ ನಡೆಯಲಿಕ್ಕಿಲ್ಲವೆಂಬ ತನ್ನ ಮಾತನ್ನು ಆಧಾರಪಡಿಸಲಿಕ್ಕೆ ನೀವು ಮೊಂಟೇಗು ರಿಪೋರ್ಟಿಗೆ ಹೋಗಬೇಕಿಲ್ಲ ಅದು ಜ್ಞಾನ ಉಳ್ಳವನಿಗೆ ತಿಳಿಯುತ್ತದೆ ಆದರೆ ಹೋಗಲಾಡಿಸಲಿಕ್ಕೆ ಏನು ಮಾಡಬೇಕೆಂದ ತಿಳಿಯುವಿರಾ? ಅಂಥಾ ಜಾತಿಪಂಗಡಗಳನ್ನು ಹೋಗಲಾಡಿಸಬೇಕೇ ಹೊರತು, ನಿಮ್ಮ ಉಪಮೇಯಗಳಲ್ಲಿ ನಾಚಿಕೆ ರವಾದ ಬೂತ್ಸ್ವರ್ಯವನ್ನೂ ಭೇದವನ್ನೂ ಇಟ್ಟುಕೊಂಡು ಕೌನ್ಸಿಲುಕೋಣೆಯಲ್ಲಿ ಮಾತ್ರ ನಾವೆಲ್ಲರೂ "ಒಕ್ಕಟ್ಟು"

ಮುಂದುವರಿದವರ ಪಕ್ಷವಾಗಿ ಮಾತಾಡಿ ಅವರಿಗೆ ಅಧಿಕಾರ ಕೊಟ್ಟು ಅವರಕತ್ತು ಅವರೇ ಕತ್ತರಿಸಿದಂತಾಗುವದಲ್ಲದೆ ಸರಿಯಾದ ಐಕ್ಯಮತ್ಯ ಬಂದ ಹಾಗಾಗುವದಿಲ್ಲ

ನೀವು ನಾಲ್ಕು ಐದನೇ ಪೇರಾಗಳಲ್ಲಿ ಬರೆದದರ ವಿಷಯವಾಗಿ ನಾನು ಏನೂ ಹೇಳುವ ಅವಶ್ಯವಿಲ್ಲ. ಅವೆಲ್ಲಾ ಸುಳ್ಳು ಮತ್ತು ಪಕ್ಷಪಾತದ ರಾಶಿಗಳು ಮಾತ್ರವೇ ಅಲ್ಲ, ಅವುಗಳು ದೇಶದ ಹಿತದಲ್ಲಿ ನಿರತರಾದವರ ಬಾಯಿಂದ ಎಂದೂ ಹೊರಡವು ಗ [illegible] ಗಳ ಹೀನಸ್ಥಿತಿಗೆ ಏನು ಕಾರಣ ಎಂಬದಾಗಿ ನಾನು ಇಲ್ಲಿ ಹೇಳುವ ಕಾರಣವಿಲ್ಲ ಆದರೆ ಅವರ 'ಕುರುಡು ಸ್ವಾತಂತ್ರ್ಯವಿಲ್ಲದೆ ತಮ್ಮನ್ನು ಗಂಜಿದ್ದರೆ ಇಷ್ಟರಲ್ಲಿ ಅವರ ಹೆಸರು ಕಾಡು ಒಕ್ಕರೊಂದಿಗೆ ಸೇರುತ್ತಿತ್ತು ಅಯ್ಯಾ ಸುಬ್ಬಯ್ಯನವರೇ, ಬೇರೆಯವರ ಹಿತವನ್ನು ಎಂದೂ ಬಯಸದ ನೀವು ಚಿಕ್ಕ ಸನ್ಯಾಸಿಯಂತೆ ಬೇರೆಯವರಿಗೆ ಬುದ್ಧಿಹೇಳಲು ಬಂದಿದ್ದಾದರೂ ನಾಚಿಕೆಪಡುವದಿಲ್ಲವಲ್ಲಾ ಈ ಎರಡು ಪೇರಾಗಳಲ್ಲಿ ನೀವು ಹೇಳಿದ ವಿಷಯಗಳು ಅತಿ ಹೀನಕರವಾದ ಸಂಗತಿಗಳಾದ್ದರಿಂದ ಅದರ ವಿಷಯ ನಾನು ಏನನ್ನೂ ಹೇಳುವದಿಲ್ಲ (they are beneath contempt)

ನಿಮ್ಮ ಆರನೆಯ ಪೇರಾದಿಂದ ನಿಮ್ಮ ಅಹಂಕಾರವು ತಿಳಿಯುತ್ತೆ ಬ್ರಿಟಿಷರ ಕೃಪೆಯಿಂದ ಸಿಕ್ಕುತ್ತಿದ್ದ ನ್ಯಾಯವು ಕೊಡಗ ಮತ್ತು ಬ್ರಾಹ್ಮಣರ ದೊಡ್ಡ ದೊಡ್ಡ ಉದ್ಯೋಗ ಸಿಕ್ಕಿದರ (ಹಿಂದುಳಿದ ಪಂಗಡದವರಿಗೆ) ಸಿಕ್ಕಲಾರದೆಂದು ಇನ್ನೂ ನಮ ನವೇ ಪದೇ ಹೇಳುವೆನು ಇದು ಅನುಭವದಿಂದ ಹೇಳುವ ಮಾತು ಈ ಸ್ಥಿತಿಯು ಕೊಡಗಿನಲ್ಲಿ ಮಾತ್ರವಲ್ಲ ಇಂಡಿಯಾ ದೇಶದ ಬೇರೆ ಕಡೆಗಳಲ್ಲಿ ಸಹ ಮುಂದುವರಿದವರು ಹಿಂದುಳಿದವರನ್ನು ಸರಿಯಾದ ಉತ್ತೇಜನದಿಂದ ಕಾಪಾಡುವದಿಲ್ಲ ಮ. ರಾ. ರಾ. ಸಿ. ಆರ್. ರಡ್ಡಿಯವರು ಕಳೆದವರ್ಷ ಮದ್ರಾಸು ಕೌನ್ಸಿಲಿನಲ್ಲಿ ಹಿಂದುಳಿದವರನ್ನು ಮುಂದುವರಿದವರು ಸರಿಯಾಗಿ ಲೆಕ್ಕಿಸದ್ದರಿಂದ, ಪಕ್ಷಪಾತವಿಲ್ಲದ ಬ್ರಿಟಿಷರೇ ಅವರಿಗೆ ತಕ್ಕ ನ್ಯಾಯವನ್ನು ಕೊಡುವವರೆಂದು ಕಂಠೋಕ್ತವಾಗಿ ಹೇಳಿರುವರು ('In this country where the lower classes are not properly looked after, it is only the third man, the disinterested foreigner who has to be trusted to do justice between class and class individual and individual '—C R Reddy) ಆದರೆ ರೆಡ್ಡಿಯವರು ತಮ್ಮಷ್ಟು ದೇಶಾಭಿಮಾನಿಗಳಲ್ಲವಾದುದರಿಂದ ತಮಗೆ ಅವರ ಮಾತು ರುಚಿಸದು ಈ ಮೊದಲು ಕೊಡಗರೂ ಬ್ರಾಹ್ಮಣರೂ ಅಲ್ಲದೆ ಇತರ ಅವರಿಗೆ ಉದ್ಯೋಗ ಸಿಕ್ಕಿತೆಂದು ತಾವು ಕೊಂಡಾಡುವಿರಿ ಅಯ್ಯಾ ಸುಬ್ಬಯ್ಯನವರೇ ತಾಳ್ಮೆ, ತಾಳ್ಮೆ ಕೊಡಗುದೇಶವು ನಿಮ್ಮ ಮತ್ತು ಬ್ರಾಹ್ಮಣರ ಸ್ವಂತ ಕಾಪಿಕೋಟವಲ್ಲ ಅದರಲ್ಲಿ ಕೊಡಗು ನಿವಾಸಿಗಳೆಲ್ಲರಿಗೂ ಹಕ್ಕಿರುವದು. ಮೊದಲು ಕೊಟ್ಟ ಉದ್ಯೋಗಗಳು ತಮ್ಮನ್ನು ಕೇಳಿಕೊಟ್ಟ ಉದ್ಯೋಗಗಳಲ್ಲ ಅವುಗಳನ್ನು ತಾವು ಕೊಡಿಸಿದ್ದೂ ಅಲ್ಲ ಅವುಗಳನ್ನು ಪುಣ್ಯಾತ್ಮರಾದ ಬ್ರಿಟಿಷರು ತಮ್ಮನ್ನು ಹೊರಟಿಟ್ಟು ಕೊಟ್ಟದ್ದು ಆದುದರಿಂದಲೇ ನಮಗೆ ಬ್ರಿಟಿಷರೇ ಕೆಲವುಕಾಲ ಬೇಕೆನ್ನುವೆವು ಬ್ರಿಟಿಷರ ಆಳಿಕೆಯಲ್ಲಿಯೂ ನಮಗೆ ಇಷ್ಟು ಡಂಬವಾದಮೇಲೆ ನಿಮ್ಮ ಕೈಗೆ ಪೂರಾ ಅಧಿಕಾರ ಬಿದ್ದರೆ ನಮ್ಮ ಗತಿಯೇನು?

ಸುಬ್ಬಯ್ಯನವರೇ, ನನ್ನಿಂದ ಎಂದಿಗೂ ದೇಶದ ಒಗ್ಗಟ್ಟಿಗೆ ಕುಂದಕಬಾರದು ತಮ್ಮಂಥಾವರು ಉದಾರ ಮನಸ್ಕರಾಗಿದ್ದರೆ ದೇಶದ ಒಗ್ಗಟ್ಟಿಗೆ ಅನುಕೂಲವಾಗುತ್ತಿತ್ತು ಅದನ್ನು ಬಿಟ್ಟು ತಾವು ಪಂಗಡಭೇದಗಳನ್ನು ಕಲ್ಪಿಸಿದಿರಿ. ಆದ್ದರಿಂದ ಇನ್ನಾದರೂ ಉದಾರಪ್ರಯತ್ನದಿಂದ ತಮ್ಮ ಹಳೆಯ ಮಾರ್ಗವನ್ನು ಬಿಡಬಾರದೇ? ಹಿಂದುಳಿದ ಪಂಗಡಗಳಿಗೆ ನೀವು ಗುರುಗಳನ್ನು ಹುಡುಕಬೇಕಿಲ್ಲ ಆ ಕೆಲಸವನ್ನು ಅವರೇ ನಿರ್ವಹಿಸಿಕೊಂಡಾರು ತಾವು ಆ ಮೊದಲು ಮಾಡಿದ ಪ್ರಯತ್ನಕ್ಕೆ ನಿಮಗೆ ನಾವು ಕೃತಜ್ಞರಾಗಿರುವೆವು

ಸರಕಾರಿಕೆಲಸಕ್ಕೆ ಆಶಿಸಬಾರದೆಂದು ಹೇಳುವ ಮಾತು ಮುಂದುವರಿದು ಜ್ಞಾನಶಾಲಿಗಳಾದ ನಿಮಗೂ ಬ್ರಾಹ್ಮಣರಿಗೂ ಅನ್ವಯವಾಗವಾದ್ದೇ ಹೊರತು ನಮಗೆ ಆ ಬುದ್ಧಿವಾದವು ಬೇಡ ಪ್ರತಿ ಒಂದು ಹಿಂದುಳಿದ ಪಂಗಡಕ್ಕೂ ಸರಕಾರಿ ಉದ್ಯೋಗದಲ್ಲಿ ಅನುಭೋಗ ಸಿಕ್ಕಬೇಕು ಆಡಳಿತವು ಶಾಲೆಯಲ್ಲಿ ಕಲಿಯುವ ವಿದ್ಯಕ್ಕಿಂತ ಉತ್ತಮತರವೆಂದು ಲಾರ್ಡ್ ಹಾಲ್ಡೇನ್ ದೊರೆಗಳು ಹೇಳಿರುವರು. ('There is a higher education than University education, and that is administration" —Lord Haldane) ಆದರೆ ಅಂಥ ಮಾತುಗಳು ತಮಗೆ ನಷ್ಟ ಉಂಟುಮಾಡುವವಾದ್ದರಿಂದ ಅವು ತಮಗೆ ರುಚಿಸಲಿಕ್ಕಿಲ್ಲ. ನಾನು ಹೇಳುವದೆಲ್ಲಾ ತಮಗೆ ಅಬದ್ಧವೆಂದು ಕಾಣುತ್ತದೆ ಅದು ಯಾತಕ್ಕೆಂದರೆ, ತಾವು ಈ ಮೊದಲು ಇಂಥ ಮಾತುಗಳನ್ನು ಕೇಳಿಲ್ಲ ಆದರೆ ಇನ್ನು ಮುಂದೆ ತಾವು ಈ ವಿಷಯವನ್ನು ಅನೇಕವಾಗಿ ಕೇಳುವಿರಿ

ನಾನು ಸರ್ಕಾರಿ ಉದ್ಯೋಗಕ್ಕೆ ಆಶೆ ಪಡುತ್ತೇನೆಂದು ತಾವು ತಿಳಿದುಕೊಂಡದ್ದು ನನಗೆ ಬಹಳ ಸಂತೋಷವೆ ಸರ್ಕಾರಿ ಉದ್ಯೋಗಕ್ಕೆ ನನಗೇನೂ ದ್ವೇಷವಿಲ್ಲ. ಜಬ್ಬು ಜ್ಞಾನವುಳ್ಳ ನಿಮ್ಮ ಪಂಗಡದವರೇ ಅನುದಿನವೂ ಉದ್ಯೋಗಕ್ಕೆ ...

ಆಶ್ಚರ್ಯವೇನು? ಪ್ರಿಯ ಸುಬ್ಬಯ್ಯನವರೇ, ನಾನೂ ನನ್ನ ಪಂಗಡದವರೂ ಸರ್ಕಾರಿ ಉದ್ಯೋಗಕ್ಕೆ ಆದಷ್ಟು ಪ್ರಯತ್ನ ಪಟ್ಟೇವು ಎಂಬುದರಲ್ಲಿ ಏನೂ ಸಂದೇಹ ಪಡಬೇಡಿ ತಾವು ಹೇಳುವಹಾಗೆ ಈಗ ಉದ್ಯೋಗಮಾಡಿ ಯಾರಾದರೂ ಸಾಕಾದವರಿದ್ದರೆ ನನಗೆ ತಿಳಿಸಿ, ನಾನು ಅವರ ಕಷ್ಟವನ್ನು ಪರಿಹರಿಸಲು ಸಿದ್ಧನಾಗಿರುವೆನು ಅಯ್ಯಾ ಸುಬ್ಬಯ್ಯನವರೇ ಹಿಂದುಳಿದ ಪಂಗಡದವರನ್ನು ಇಷ್ಟು ದಿನ ಮೋಸಗೊಳಿಸಿದಂತೆ ಇನ್ನು ಸಹ ಪ್ರಯತ್ನಪಡಬೇಡಿ ತಮಗೆ ಬಹುಶಃ ಅವರು ಕಾಲಕ್ರಮೇಣ ಮುಂದಕ್ಕೆ ಬರುವ ಭಯವು ಅತಿಯಾಗಿರುವಂತೆ ಕಾಣುತ್ತದೆ

ಆದರೆ ತಮಗೆ ದೇಶದ ಏಳಿಗೆಯಲ್ಲಿ ಏನಾದರೂ ಇಷ್ಟವಿದ್ದರೆ ದೇಶಾಭಿಮಾನವು ತಮ್ಮ ಹೃದಯದ ಮೂಲೆಯಲ್ಲಿ ಎಲ್ಲಿಯಾದರೂ ಅಡಗಿದ್ದರೆ, ಹಿಂದುಳಿದವರ ಅಭಿವೃದ್ಧಿಯನ್ನು ಕೆಡಿಸಬೇಡಿ ಕಳೆದದ್ದು ಕಳೆದು ಹೋಯಿತು. ಇನ್ನು ಮುಂದೆಯಾದರೂ ತಮ್ಮ ಕಿಂಚಿತ ಮನಸ್ಸನ್ನು ಬಿಟ್ಟು ಉದಾರ ಮನಸ್ಕರಾಗಿ ಹಿಂದುಳಿದ ಪಂಗಡದವರಿಗೂ ಸಹ ನಿಮ್ಮಂತೆಯೇ ದೇಶದಲ್ಲಿ ಪ್ರೀತಿ ಇರುವದು. ಅವರಿಗೂ ನಿಮ್ಮಂತೆಯೇ ಸಂತೋಷ, ದುಃಖ, ಬಂಧುಬಳಗ ಆಸ್ತಿ ಪಾಸ್ತಿಗಳೆಲ್ಲವೂ ಇರುವದು ಆದುದರಿಂದ ಅವರ ಸ್ವಾತಂತ್ರ್ಯವನ್ನು ಹಕ್ಕು ಬಾಧ್ಯತೆಗಳನ್ನೂ ಅಪಹರಿಸಬೇಡಿ ಹಾಗೆಮಾಡಿದರೆ, ಸುಗ್ರೀವನು ತನ್ನ ಧರ್ಮಪತ್ನಿಯನ್ನು ವಾಲಿಯಿಂದ ಅಪಹರಿಸಲ್ಪಟ್ಟದ್ದರಿಂದ ರಾಮದೇವರಸಹಾಯವನ್ನು ಬೇಡಿದಂತೆ, ನಾವು ಸಹ ಮೂರನೆಯವರ ಸಹಾಯವನ್ನು ಬೇಡಲೇಬೇಕಾಗುವದು.

ಎನ್ ಮುದ್ದಪ್ಪ.

ಮಳೆಯ ನಷ್ಟ

ನಾನು ಈ ನಾಡ ಘೋರ ಮಳೆಯಿಂದ ಉಂಟಾದ ನಷ್ಟವನ್ನು ಗ್ರಾಮಗಳಲ್ಲಿ ತಿರುಗಿ ನೋಡಿದಲ್ಲು (ತಾರೀಖು 1-8-24ರಿಂದ 26-8-24 ರ ವರೇಗೆ) ಒಬ್ಬ ರೆವಿನ್ಯೂ ಆಫೀಸರನ್ನು ಬಿಡುಗೊಳ್ಳಲಿಲ್ಲ ಕೆಲವು ಕಡೆ ಅಸಿಸ್ಟೆಂಟ್ ಕಮಿಷನರ್ ಸಾಹೇಬರವರೂ ಮತ್ತು ಸುಬೇದಾರರೂ ಸಹ ದೊಡ್ಡ ದೊಡ್ಡ ನಷ್ಟಗಳನ್ನು ನೋಡಿದ್ದಾರೆಯಾಗಿ ತಿಳಿದೆನು ಆದರೆ ಕಣ್ಣಂಗಾಲ ಗ್ರಾಮದ ಮಚ್ಚರಂಡ ಗದ್ದೆ ಕೋವಿಗುಂಟಾದ ನಷ್ಟವನ್ನು ನೋಡಿರುವದಿಲ್ಲವಾಗಿ ತಿಳಿದೆ ಪಟ್ಟಿನಾಡು ಗ್ರಾಮದಲ್ಲು ಉಂಟಾದ ನಷ್ಟವನ್ನು ನೋಡಿ [illegible] ಒತ್ತಡಕ್ಕಾಗಿ ಕೆಲವು ರುಪಾಯಿ ನೋಡಿದ ಕೂಡ್ಲೆ ಆ ಸ್ಥಳದಲ್ಲೇ ಕೊಟ್ಟ ಮೇರೆ ರೈತರು ಬೀಜದ ಬತ್ತ ಕೊಂಡು ಕೊಂಡು ಪುನಹ ಬೀಜ ಹಾಕಿರುತ್ತಾರೆ ಆದರ ನ್ಯಾಯವಾದ ಬೀಜದ ಬತ್ತ ದೊರೆಯುವದರಿಂದ ಸ್ವಲ್ಪ ಹುಟ್ಟಿರುವದಿಲ್ಲ ಹುಟ್ಟಿದ್ದು ಜವ್ವಾಗಿ ಬರುತ್ತಿದೆ ಇವು ಇನ್ನೂ ನಹಿ ರೈತರ ಗದ್ದೆಗಳಿಗೆ ಕಳೆದ ವರ್ಷ ಉಂಟಾದ ನಷ್ಟ ರಿಪೇರಿ ಒಗ್ಗೆ ಸರ್ಕಾರದಿಂದ ಕೊಟ್ಟ ಟಕಾವಿ ಹಣಕ್ಕೆ ಸರಿಯಾಗಿ ಕೆಲಸ ಮಾಡಿಸಿದ ಕೆಲಸವೆಲ್ಲಾ ಈ ವರ್ಷ ಸಹ ಅದಕ್ಕಿಂತ ಹೆಚ್ಚು ನಷ್ಟ ಬಂದ ಕಡೆಗಳಲ್ಲಿ ಕಳೆದ ವರ್ಷ ಕೊಟ್ಟ ಹಣ ಮಾಫಿ ಎಂತಲೂ ಅವರಿಗೇನೇ ಈ ವರ್ಷ ಕೊಟ್ಟ ಹಣವಿಗೆ 20 ಕಂತುಗಳೆಂತಲೂ ಹೇಳಿದರುತೆ ಆ ಮಾತು ನಿಜವಾಗಿದ್ದ ಪಕ್ಷ ಸರ್ಕಾರದವರ ನ್ಯಾಯವು ಸ್ತೋತ್ರಾರ್ಹವೇ ಸರಿ ಅನೇಕ ಸಾಧಾರಣದ ನಷ್ಟವನ್ನು ಇನ್ನೂ ಯಾರು ನೋಡಿದಂತೆ ಕಂಡುಬರಲಿಲ್ಲ ಇದಕ್ಕೆ ಸಾಮಾನ್ಯವಾಗಿ ಕೇವಲ ಗರೀಬಿಯಾದ ಬೇಪಣಗೇರಿ ಗ್ರಾಮದ ಚೇಂದಂಡ ಪ್ಯೆಸರ್ ಅಪ್ಪಣ್ಣನ ಗಾರ್ಡಿಯನ್ ಶಾಯಿ ನೀಲಮ್ಮನ ತೋಟವು ಪೆರು ಮುಳುಗು ಹೋಗಿ ಪೈರುಗಳುಂಟಾದ ನಷ್ಟ ಮತ್ತು ಗದ್ದೆಗಳಿಗುಂಟಾದ ನಷ್ಟ ಸಹ ನೋಡಿರುವದಿಲ್ಲ ಮತ್ತು ಏನೊಂದು ಸಹಾಯ ಸಹ ಕೊಟ್ಟಿರುವದಿಲ್ಲ ಇದರಂತೆ ಚೆಂಬೆಬೆಳಿಯೂರು ಗ್ರಾಮದ ಚೇಂದಂಡ ಪೌತಿ ಬೆಳ್ಳಿಯಪ್ಪನವರ ವಿಧವೆ ನೀಲಮ್ಮ ಗುಹ್ಯಗ್ರಾಮದ ಚಂದ್ರಶಾಸ್ತ್ರಿಯ್ಯ ಈ ಮೇರೆ ಅನೇಕರಿದ್ದಾರೆ. ಈ ವರ್ಷ ಕೊಡಲು ಮಂಜೂರ್ಮಾಡಿದ ಹಣ ಪೂರ ಕೊಡದೆ ಕೆಲವು ಹಣ ಮುಂದಾಗಿ ಕೊಟ್ಟು ಅದಕ್ಕೆ ತಕ್ಕ ಕೆಲಸ ಮಾಡಿ ಅದನಂತರ ಪುನಹ ಸ್ವಲ್ಪ ಈ ಮೇರೆ 3 ಯಾ 4 ಸಾರಿ ಕೊಡುವಂತೆ ಮಾಡಿದ್ದಾರಾಗಿ ತಿಳಿದೆನು, ಇದೇನೋ ಬಹಳ ಒಳ್ಳೇದಾದ ಕೆಲಸವೇ ಸರಿ. ಆದರೆ ನಾಡು ಶಾನಭೋಗರಿಗೆ ಅವರ ಕೆಲಸದ ಜೊತೆಗೆ ಮೇಜಿಸ್ಟ್ರೇಟ್ ಕೆಲಸ ಕೊಟ್ಟದ್ದರಿಂದ ಇವರು ಆಗಾಗ್ಯೆ ರೈತರು ಮಾಡಿದ ಕೆಲಸ ನೋಡಿ ಹಣ ಕೊಡಲು ಸಮಯ ಎಲ್ಲಿಯದು? ಇವರಿಗೆ ಮೇಜಿಸ್ಟ್ರೇಟ್ ಪವರ್ ಸಹ ಕೊಟ್ಟಿರುವದರಿಂದ ರೈತರಿಗೆ ಪೂರ ತೊಂದರೆ. ಇದರ ಬದಲು ಸ್ಟೇಶನರಿ ಮೇಜಿಸ್ಟ್ರೇಟರ ಮಾಡಿದ್ದರೆ ರೈತರ ಕೆಲಸ ನೋಡಲು ಶಾನಭೋಗರು, ಸುಬೇದಾರರುಗಳಿಗೆ ಅನುಕೂಲವಿರುತ್ತಿತ್ತು ಇನ್ನಾದರೂ ಈ ಮೇರೆ ಮಾಡದೆ ಅಧಿಕಾರರಾಗಿ ನಂಬುತ್ತೇನೆ ದೇಶದಲ್ಲು ನಷ್ಟ ಇಲ್ಲದವರೇ ಇರಲಾರರು ಆದ್ದರಿಂದ ಸರ್ಕಾರದವರಿಗೂ ಈ ನಷ್ಟ ಸಕ್ಕನೆ ನೋಡಿ ಪೂರೈಸುವದು ಕಷ್ಟವೇ ಸರಿ. ಹ್ಯಾಗೂ ಈ ಬರುವ ಪಸಲ್ ಆಜಮಾಯಿಸಿಗೆಯ ಕಾಲದಲ್ಲು ಶ್ಯಾನುಭೋಗರು ನ್ಯಾಯವಾಗಿ ಪ್ರತೀ ಸರ್ವೆ ನಂಬರಿನಲ್ಲು ಉಂಟಾದ ನಷ್ಟವನ್ನು ಬರಾಯಿಸಿ 4 ಆಣೆ ಕಂದಾಯದ ವರಿಯದ ಮೇಲ್ಪಟ್ಟ ನಷ್ಟಗಳಿಗೆ ಕಂದಾಯ ಮಾಫಿ ಮಾಡಿ ಮತ್ತು ಅಂತಾ ...

ಕಂದಾಯದಿಂದಲೇ ವಜಮಾಡುವಂತೆ ಮಾಡಬೇಕು [illegible] ಕಂದಾಯ ಕಟ್ಟದೆ ಪೂರಾ [illegible] ಮರಾಮ್ಮ [illegible] ಜಿ ಬಿಡ ಗೈಸರು ಕಾಫಿಗಿಡ [illegible] ಯಾವ [illegible] ಇಲ್ಲ. ಕಿದ್ದರಿಂದ ಇಸ್ಸಮಾಡವೆ [illegible] ಈ ಹರಾಜು ಮಾಡುವ ೨೦ ರೂ. ಬಾಕಿ [illegible] ಕೆತ್ತ ಭೂಮಿಯನ್ನು ಗೇಣಿಗೆ ಬಿಡಬೇಕು. ಮಾಡಿ ಆ [illegible] ಸರಕಾರ ಸಂಪಾದನೆಯು [illegible] ನಷ್ಟ [illegible] ಹಾಗೆ, ಕಂದಾಯ [illegible] ಅಲ್ಲದೆ [illegible] ಗೆ ಹಣದ ಒಮ್ಮೆ ಭೂಮಿ [illegible] ಒಬ್ಬರಿಗೆ ಒಮ್ಮೆ [illegible] ಮಾಡಿದರೆ ಸ [illegible] ಅನ್ಯೋನ್ಯ [illegible]

ಉ ಮಾಚಯ್ಯ,

ಐಮಂಗಲ ವಾರ್ ಸಂಘದ ಕಮಿಟಿ ಮೆಂಬರ್

ಪೊನ್ನಂಪೇಟೆಗೆ ಲೋವರ್ ಸೆಕೆಂಡರಿ ಸ್ಕೂಲ್.

[illegible] ದಯೆಯಿಂದ ನಮ್ಮ ದೇಶದ [illegible] ಸ್ಥಾಪಿಸಿರುವುದು ನಮಗೆಲ್ಲಾ [illegible] ಆದರ ಒಂದನೇದು [illegible] ೧೯೨೩ನೇ ಇಸವಿಯಿಂದ [illegible] ನಮ್ಮ [illegible] ಈ ಐದು [illegible] ದೊಡ್ಡವರಿಗ [illegible] ಈ ನಾಡಿಗ [illegible] ಲೋವರ್ ಸೆಕೆಂಡರಿ [illegible] ಮತ್ತೂ ಗಮನಕ್ಕೆ [illegible] ನಮ್ಮ ದುರ್ಭಾಗ್ಯವೇ ಸರಿ [illegible] ಪ್ರಯತ್ನ [illegible] ಒಬ್ಬ [illegible] ಮನಿಸಿಪಾಲಿಟಿ [illegible] ಶ್ರೀಮಂಗಲ [illegible] ಜನರಿಗ ವಿದ್ಯೆಯ [illegible] ಪ್ರಯತ್ನ [illegible] ಕೂಡಿ [illegible] ಹೋಗಿ [illegible] ಈ ಗ [illegible] ನಮ್ಮ [illegible] ದುರ್ಭಾಗ್ಯವೇ [illegible] ಲೋವರ್ ಸೆಕೆಂಡರಿ [illegible] ಸ್ಥಾಪಿಸಲಿಕ್ಕೆ [illegible] ಕೋರಿಕೆ.

ನಾಡಿನವನ [illegible]

[illegible]

NITRATE OF SODA (15-16 per cent Nitrogen).

"The best and cheapest form of nitrogen highly concentrated and in nitrate available, directing like it to the plants grow"

[illegible] ನೈಟ್ರೋಜನ್ (Nitrogen) [illegible] ೧೫ – ೧೬ [illegible] ಬೆಳೆಗಳಿಗೆ ಭಕ್ಷಣೆ ಒದಗುವಂತೆ [illegible] ಉಪಯೋಗದಿಂದ [illegible] ಬೆಳವಣಿಗೆ [illegible] ರಸಾಯನಿಕ ಗೊಬ್ಬರವು ಮಂದಿ (ಕೆಮಿಕ್ಸ್) [illegible] ಗೊಬ್ಬರಕ್ಕ ಸಮವಾಗಿರುತ್ತದೆ. ಈ ರಸಾಯನಿಕ ಗೊ [illegible] ಅಮೇರಿಕ ದೇಶದ 'ಚಿಲ್ಲಿ' ಎಂಬಲ್ಲಿ ತಯಾರಿಸಿ [illegible] ದು ದಲೇಕರಿಂದ ಒಪ್ಪಿಕೊಂಡಿರ [illegible] ತೋಟಗಳಿಗೂ ನಗ್ಗಿನ ಕೃಷಿಗಳಿಗೆ ಉಪಯೋಗಿಸ [illegible] ಗೊಬ್ಬರಕ್ಕಿಂತಲೂ [illegible] ಎಕ್ರೆ ಭೂಮಿಗೆ 120—160 ರಾತಲು ಬೇಕಾಗುವದು [illegible] ಧರ್ಮಾರ್ಥವಾಗಿ [illegible]

ಬಳಿಯನ್ನು ಸ್ವೀಕರಿಸಿ

1—1 ಕಮಿಟಿಯವರ ಕಡೆ

ಗಳಿಸ್ಸ—

P Ayapa, Hon presentative [illegible]libetta, Coorg.	The Chilean Nitrate Committee, 6 Mission Row, Post Box 469, CALCUTTA

McDOWELL & Co., Ltd.,

MERCARA.

THE OLDEST ESTABLISHED FIRM IN COORG.

Great reduction in prices of the best Arms and Ammunitions

FRESH STOCK! FINEST QUALITY!! LOWEST PRICES!!!

Buy your requirements from the Firm you know

		RS	A	P	
D.B.B.L guns by Smiths of Birmingham	each	165	0	0	
D.B.M.L guns	" "	85	0	0	
S.B.M.L guns	" "	65	0	0	
12 Bore cartridges No 3, 4, 6 & 8	per 100	14	8	0	
Do A & B	"	16	0	0	
Do S G & S.S.G	"	18	12	0	
Do Destructor	"	36	8	0	
Gun powder 1 F ½ lb flask		1	0	0	
Caps	per 1000	5	4	[illegible]	
Caps	ten for	0	1	0	
Shot of all grades	per lb	0	10	0	
S G shot	per lb	0	12	0	
Loading implements set 12 16, & 20 bore		18	0	0	per set.

ಒಡವೆ ಅಗ್ಗ ! ಒಡವೆ ಅಗ್ಗ !

ಹೊಸ ಸಾಮಾನುಗಳು ! ಒಳ್ಳೆ ! ಕೊಂಡುಕೊಳ್ಳಿರಿ !!!

ಮರ್ಕರದಲ್ಲಿ ನೆಲೆಸಿರುವ ಮೆಕ್ ಡೊವೆಲ್ ಕಂಪೆನಿ ಲಿಮಿಟೆಡ್ ಮಡಿಕೇರಿ

ಉತ್ತಮ ತರದ ಕೋವಿಗಳು ಮತ್ತು ಮದ್ದು ಗುಂಡು ಒದಗಿಸಲ್ಪಡುವವು.

ಈ ಕೆಳಗಿನ ದರಗಳನ್ನು ಕಡಿಮೆ ಮಾಡಲಾಗಿದೆ

ಡಿ. ಬಿ. ಬಿ. ಎಲ್ ಕೋವಿ	[illegible]		165	0	0	ಒಂದಕ್ಕೆ
ಡಿ. ಬಿ. ಎಮ್. ಎಲ್	ಡಿಟೊ		85	0	0	"
ಎಸ್. ಬಿ.	ಡಿಟೊ		65	0	0	"
12ನೇ ಬೋರ್ ಕಾರ್ಟ್ರಿಜುಗಳು ನಂ 3, 4, 6 ಮತ್ತು 8			14	8	0	ನೂರಕ್ಕೆ
ಡಿಟೊ	ಡಿಟೊ	ಎ ಮತ್ತು ಬಿ	16	0	0	"
ಡಿಟೊ	ಡಿಟೊ	[illegible]	18	12	0	"
ಡಿಟೊ	ಡಿಟೊ	ಡಿಸ್ಟ್ರಕ್ಟರ್	36	8	0	
ಕೋವಿ ಮದ್ದು ಎಫ್ ಎಫ್ [illegible] ಪೌಂಡು ಡಬ್ಬಿ 1ಕ್ಕೆ			1	0	0	
ಕ್ಯಾಪ್ಗಳು	ಸಾವಿರಕ್ಕೆ		5	4	0	
ಕ್ಯಾಪ್ಗಳು	ಹತ್ತಕ್ಕೆ		0	1	0	
[illegible]	[illegible]		0	10	0	
ಚರೆಕ್ಕಲ್ಗಳು			0	12	0	
ಕೋವಿ [illegible] ಸಾಮಾನುಗಳು [illegible]			[illegible]			
20ನೇ ಬೋರ್ [illegible]	[illegible] ಸೆಟ್ಟಿಗೆ		18	0	0	

1—1

ನೋಟೀಸು

"ಕೊಡಗು" ಪ್ರೆಸ್ಸಿನಲ್ಲಿ ಕೆಲಸ ಮಾಡಲು ಕಂಪೋಸಿಟರುಗಳು ಬೇಕಾಗಿದೆ. [illegible] ಗಳ, ಛಾಪ, ಚನ್ನಾಗಿ [illegible] ಪರ್ಟಿನಿಂದ ತರಬೇತಾಗಬೇಕಾಗಿದೆ. ಉಮೇದ್ವಾರರಾಗಿ ನಿಲ್ಲಬೇಕೆಂದು ಇಷ್ಟಪಡುವವರು ಈ ಕೆಳಗಿನವರಿಗೆ ಈ ತಾರೀಕು 20ರ ಒಳಗೆ ಬರಕೊಳ್ಳಬೇಕು.

ಮಡಿಕೇರಿ,

ತಾ|| 8 9 24.

ಮ್ಯಾನೇಜರ, "ಕೊಡಗು"

WANTED—ಬೇಕಾಗಿದೆ

ಈ ವರುಷದಲ್ಲಿ 50 ಮಂದಿ ಟ್ರೈನಿಂಗ (ಪ್ರಯೋಗ [illegible] ಇರುವ) [illegible] ಬೇಕಾಗಿದೆ [illegible] ಕಲಿಯ [illegible] ತಿಂಗಳು ಒಂದರ 50 ರ ರೂಪಾಯಿಯಿಂದ 100 ರೂಪಾಯಿವರೆಗೆ ಸಂಪಾದಿಸಬಹುದು. ಅಪೇಕ್ಷೆ ಉಳ್ಳವರು ಈ ಕೆಳಗಿನ ವಿಳಾಸಕ್ಕೆ ಒಂದು ಅಣೆ ಸ್ಟಾಂಪು ಇಟ್ಟು ಬರೆದ ಪಕ್ಷದಲ್ಲಿ 30 ರವರೆಗೆ ಇಂಗ್ಲೀಷಿನಲ್ಲಿ ಬರೆಯಲ್ಪಟ್ಟ [illegible] ಕಳುಹಿಸಲಾಗುತ್ತದೆ.

ವಿಳಾಸ—ಮ್ಯಾನೇಜರ್, ಎಮ್. ವಿ. ಮಡಿಕಲ್ [illegible] ಪೋ. ಅ ಪಟ್ಟಾಂಬಿ, ಮಲಬಾರ್, ದಕ್ಷಿಣ ಹಿಂದೂಸ್ಥಾನ

[illegible]

ಆರೋಗ್ಯ ಚಂದ್ರಿಕೆ.

ಮದ್ರಾಸ್.

ಸಂಪಾದಕರು ಡಾಕ್ಟರ್ ಯು. ರಾಮರಾವ್,

ಎಮ್. ಎಲ್. ಸಿ. ಯವರು.

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಚಿಕಿತ್ಸೆಯ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವ ದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ. ಈ ಮಾಸಪತ್ರಿಕೆಯು 'ಹೆಲ್ತ್' ಎಂಬ ಇಂಗ್ಲೀಷ್ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ. ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಗೆ ಪ್ರಕಟವಾಗುವವು.

ಆರೋಗ್ಯ ಚಂದ್ರಿಕೆಯಲ್ಲಿರುವ ಲೇಖನಗಳು ಹಳೆಯದಾಗದೆ ಪುನಃ ಪುನಃ ಓದಲು ಅರ್ಹವಾದವುಗಳಾಗಿರುವವು. ಆರೋಗ್ಯ ಚಂದ್ರಿಕೆಯನ್ನು ತರಿಸಿ ಬೈಂಡ್ ಮಾಡಿಸಿ ಇಟ್ಟು ಕೊಂಡರೆ ಎಲ್ಲರಿಗೂ ಉಪಯುಕ್ತವಾಗುವ ಅನುಪಮವಾದ ಗ್ರಂಥವಾಗುವುದು. ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಪ್ರತಿ ವರ್ಷಕ್ಕೆ 1-8-0. ಬಿಡಿ ಪತ್ರಿಕೆ 1ಕ್ಕೆ 0-2-0. ಹಿಂದಿನ ಸಂಚಿಕೆಗಳು ಈಗಲೂ ದೊರೆಯುವವು.

ಪತ್ರವ್ಯವಹಾರಕ್ಕೆ: ಆರೋಗ್ಯ ಚಂದ್ರಿಕೆ 323, ತಂಬುಚೆಟ್ಟಿ ಬೀದಿ, ಮದ್ರಾಸ್.

ಮಲೆಯಾಳ ವೈದ್ಯಶಾಲಾ

ಮಲಯಾಳದ ಸಂಜೀವನ್ ಮತ್ತು ಕಂಪನಿ ಎಂಬ ಆಯುರ್ವೇದ ವೈದ್ಯಶಾಲೆಯ ಒಂದು ಶಾಖೆಯು ವೀರರಾಜೇಂದ್ರಪೇಟೆಯಲ್ಲಿ ತೆರೆದಿರುತ್ತದೆ. ಇಲ್ಲಿ ಯಾವ ವಿಧದ ಕಾಯಿಲೆಯಾಗಿದ್ದರೂ ಪಂಡಿತರಿಂದ ಪರೀಕ್ಷಿಸಿ ಔಷಧಿಕೊಟ್ಟು ಗುಣಪಡಿಸಲ್ಪಡುತ್ತೆ. ಔಷಧದ ಚಾರ್ಜು ಬಹಳ ಕಡಮೆ. ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ವಿವರವನ್ನು ತಿಳಿದುಕೊಳ್ಳಬಹುದು.

ನಾರಾಯಣ ಸಂಜೀವನ್
ಆಯುರ್ವೇದ ವೈದ್ಯರು,
52—34 ವೀರರಾಜೇಂದ್ರಪೇಟೆ

ಕಲ್ಪತರು ತಾಯಿತ.

ಪರೀಕ್ಷೆ ಪಾಸಾಗೋಣ, ಶರೀರ ಸುಖವಾಗೋಣ, ನೌಕರಿ ಸಿಗೋಣ, ಸಂಬಳ ಹೆಚ್ಚೋಣ, ವಿವಾಹವಾಗೋಣ ಸಂತತಿಯಾಗೋಣ, ಕೈಕೊಂಡ ಉದ್ಯೋಗದಲ್ಲಿ ಯಶಸ್ಸು ಸಿಗೋಣ, ವ್ಯಾಪಾರದಲ್ಲಿ ಬಹಳ ಲಾಭ ಸಿಗೋಣ, ಸಾಲ ಮುಕ್ತ ಆಗೋಣ ಭೂತ ಪಿಶಾಚ ಗ್ರಹಬಾಧೆ ಆಗದಿರೋಣ, ಪ್ರತಿಕೂಲ ಜನರು ಅನುಕೂಲವಾಗೋಣ, ಇವೇ ಮತ್ತು ಬೇರೆ ಎಷ್ಟೋ ಮೂತುಗಳ ಇಚ್ಛೆಯಂತೆ ... ಅಪೇಕ್ಷೆ ಇದ್ದರೆ ಇಚ್ಛಿತಫಲ ಕೊಡುವ ಲೋಕಮಾನ್ಯ ಕಲ್ಪತರು ತಾಯಿತ ಯಾವಾಗಲೂ ಹತ್ತಿರ ಇಡಿರಿ, ಅಂದರೆ ಇಚ್ಛೆ ಪೂರ್ಣವಾಗುವದು ಅನುಭವದ ಖಾತ್ರಿ ಆಗಲಾರದು ತಾ ನ ... ಗುಣ ತೀವ್ರವಾಗಿ ತಾ ನ ... ದಿವಸಗಳಲ್ಲಿ, ತಾ ನ ... ಗುಣ ... ತಿಂಗಳಲ್ಲಿ. ವ್ಹಿ. ಪಿ. ಖರ್ಚು ಬೇರೆ ... ಗ ... ತಾಯಿತದ ಚರ್ಚು ವಜಾಹೋಗಿ ಬಾಕೀ ಸಿಗುವದು

ವಿಳಾಸ —ಮ್ಯಾನೇಜರ, ಕಲ್ಪತರು ತಾಯಿತ, ಕೆ. ಎಮ್

[52-7] ಪೋ. ಸಂಕೇಶ್ವರ ಜಿ ಬೆಳಗಾಂವ.

ಅಪೂರ್ವ! ಹೊಸ ಪುಸ್ತಕ!! ಅಪೂರ್ವ!!!

ಶಿಶು ವೈದ್ಯ ಸಂಜೀವನೀ.

ಕನ್ನಡಿಗರಿಗೆ ಯಾವ ವೈದ್ಯ ಸಂಹಿತೆಯೂ ಇದುವರೆಗೆ ಸಿಗುವಂತಿಲ್ಲ! ಅದಕ್ಕಾಗಿ ಇನ್ನು ಎಲ್ಲಾ ಆಯುರ್ವೇದದ ಆಧಾರದಿಂದ ಪ್ರಕಟಿಸಿದ್ದೇವೆ. ಇದರಲ್ಲಿ ಸ್ತ್ರೀಪುರುಷರ ದೇಹಲಕ್ಷಣ, ವಿವಾಹ ದಾಂಪತ್ಯ ಸುಖ, ಪಾತಿವ್ರತ್ಯ ಧರ್ಮ, ಗರ್ಭಿಣಿಯರ ರೋಗನಿದಾನ, ಚಿಕಿತ್ಸೆ ಉಪಚಾರ ಸುಪ್ರಸವ ... ಧಗಳು, ಪ್ರಸವವಿಧಿ, ದಾಯಿಯ ಕರ್ತವ್ಯ, ಶಿಶುಪರಿಚರ್ಯಾ, ಶಿಶುಗಳ ಸಕಲ ರೋಗ ಚಿಕಿತ್ಸೆ, ಹಾಗೂ ಎಲ್ಲಾ ಲೋಹಾದಿಗಳ ಶುದ್ಧಿ ಕ್ರಮ ಮತ್ತು ಬಸ್ತಿಗಳು ಮಾಡುವ ವಿಧಾನ, ಧಾತುಪುಷ್ಟಿ ಔಷಧಿಗಳು ಇವೆಲ್ಲ ಶಾಸ್ತ್ರೀಯ ಮತ್ತು ಸಮರ್ಪಕವಾಗಿ ವಿವರಿಸಲ್ಪಟ್ಟಿದೆ. ಈ ಪುಸ್ತಕ ಕೇವಲ ದೊಡ್ಡದು ಇದರಲ್ಲಿ ಹೆಂಗಸರು ಹುಡುಗರು ಸಹ ಸುಲಭವಾಗಿ ತಯಾರು ಮಾಡುವಂಥಾ ೫೦೦ ಔಷದಗಳಿಗಿಂತ ಹೆಚ್ಚಾಗಿರುವವು ಈ ಪುಸ್ತಕದ ಕ್ರಯವು ಅದರಲ್ಲಿರುವ ಒಂದೊಂದು ಔಷದದ ಬೆಲೆಯಾಗಲಾರದೆಂಬುದನ್ನು ನೀವೇ ತಿಳಿದುಕೊಳ್ಳಿರಿ!! ಈ ಪುಸ್ತಕವನ್ನು ಕೊಂಡುಕೊಳ್ಳುವ ಪ್ರತಿ ಮನುಷ್ಯನೂ ಖಂಡಿತವಾಗಿ ಒಬ್ಬ ವೈದ್ಯನೇ ಆಗುತ್ತಾನೆ. ಕ್ರಯ ಪುಸ್ತಕಕ್ಕೆ ೨ ರೂ

ನಮ್ಮ ವಿಳಾಸ —ಭಾರತಿ ಬುಕ್ ಡಿಪೋ,

12—2 ೪೯೧, ನಗರ್ತರಪೇಟೆ, ಬೆಂಗಳೂರು ಸಿಟಿ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್ ಲಿಮಿಟೆಡ್ ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

		ರೂ.
ಷೇರ್ ಬಂಡವಾಳ	....	50,000
ವಸೂಲಾದ ಷೇರ್ ಮೊಬಲಗು	....	7,720
ಜಮೂಖಂಡ ಠೇವಣಾತಿ	...	61,200

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ಮಾಯಿದೆ ಅಥವ ಹೆಚ್ಚಿನ ಮಾಯಿದೆಯ ಠೇವಣಾತಿಗಳಿಗೆ ನೂರಕ್ಕೆ ಸಾಲಿಯಾನ ರೂ 6-4-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ಮಾಯಿದೆಯ ಠೇವಣಾತಿಗಳಿಗೆ ನೂರಕ್ಕೆ ಸಾಲಿಯಾನ 5ರ ಬಡ್ಡಿ ದೊರೆಯುತ್ತೆ.

ವರ್ಷ ಕ್ಕೊಂದಾವರ್ತಿ ಕೋ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಪರಿಶೋಧನೆ ಮಾಡುತ್ತಾರೆ.

ಪ್ರೆಸಿಡೆಂಟರು, ಟ್ರೆಜರರ್

ಕೊಡಂದೇರ ಕುಟ್ಟಯ್ಯನವರು, ಯಂ ಭುಜಂಗರಾಯರು

ರಾವ್ ಬಹದ್ದೂರ್. ಬಿ ಎ, ಬಿ ಎಲ್.

ಸೆಕ್ರಟರಿ

ಸಿ ಯಮ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್.

ಮಡಿಕೇರಿ, 1—7—1924.

SEE OUR

Arms And Ammunition Advertisement

SPENCER & Co., Ltd.,

Mercara, and Pollibetta, Coorg.

When you think of going to bombay
THINK OF

THE WELCOME HOTEL

Girgaum Back Road, BOMBAY.

Most airy accomodation—Most central situation—Excellent Meals Every convenience.

ದಿ ವೆಲ್ಕಮ್ ಹೋಟೇಲ್

ಗಿರ್ ಗಾಮ್ ಬ್ಯಾಕ್ ರೋಡ್, ಬೊಂಬಾಯಿ.

ರೈಲಿನಿಂದಿಳಿದೊಡನೆಯೇ ಅಲ್ಲಿ ಇಲ್ಲಿ ಎಂದು ಸುತ್ತದೆ ಉತ್ಕೃಷ್ಟವಾದ ತಿಂಡಿ ಮತ್ತು ವಾಸಕ್ಕೆ ಅ... ಕೋಣೆಗಳು ಬೇಕೆಂದಿದ್ದರೆ ಬೊಂಬಾಯಿ ಪಟ್ಟದ ಮಧ್ಯಸ್ಥಳದಲ್ಲಿರುವ ಮೇಲ್ಕಂಡ ಹೋಟೇಲಿನಲ್ಲಿಳಿಯಲು ... ಯೋಗ್ಯವಾದ ಊಟ ಗಾಳಿಗನುಕೂಲವಾದ ಕೋಣೆ 15 ಮಿನಿಟಿಗೊಮ್ಮೆ ತಿರುಗುವ ಟ್ರಾಮಿನ ಸಹಾಯ... ಪ್ರಯಾಣಿಕರಿಗೆ ಇಳಿದುಕೊಳ್ಳಲು ಅನುಕೂಲವಾದ ಉಡುಪಿ ಬ್ರಾಹ್ಮಣರ ಭೋಜನಾಲಯ

ಎಚ್ ಶ್ರೀನಿವಾಸರಾವ್,

[24—14] ಮೇನೇಜರ್

ಪಿ. ಹಚ್ ಹೌಸ್ ಔಷಧಾಲಯ

ಅಯ್ಯಾ,

ನಾನು ಸುಮಾರು ಹದಿನೈದು ವರುಷಗಳಿಂದ ಖಾಯಿಲಸ್ಥನಾಗಿ ದಿನೇ ದಿನೇ ಕೃಶನಾಗುತ್ತಾ ಒಂದು ಬರೀ ಮೂಳೆ ಪಂಜರವಾಗಿದ್ದು ಮೂರು ವರ್ಷಗಳಿಂದ ಮಂಚದಲ್ಲೇ ಆಗಿದ್ದು, ನಂತರ ಕೈ ಕಾಲು ಮೊಖ ಊದಿ, ಹೊಟ್ಟೆಯಲ್ಲಿ ನೀರು ಒಂದು, ಎದೇ ವರೆಗೆ ಹತ್ತಿ ಉಸುರಾಡುವದಕ್ಕೂ ಬಹಳ ಕಷ್ಟಕ್ಕೆ ಒಂದು ಎಡದ ಮಗ್ಗಲಿನಲ್ಲಾಗಲೀ ಬಲದ ಮಗ್ಗಲಿನಲ್ಲಾಗಲೀ ಮಲಗಲಿಕ್ಕಾಗದೆ ಕಷ್ಟಪಡುತ್ತಿದ್ದು, ಇನ್ನು ಬದುಕಲಾರೆನೆಂಬದಾಗಿ ಪೂರಾ ಹುಟ್ಟಿ ನನ್ನ ನಂಟರಿಷ್ಟರು ಒಂದುನೋಡಿ ಬಹುವ್ಯಸನದಿಂದ ವೀರಾಜಪೇಟೆ ಪಿ ಹೆಚ್. ಹೌಸ್ ಆಯುರ್ವೇದೀಯ ಔಷದಾಲಯದಿಂದ ಔಷದ ತೆಗೆದುಕೊಂಡರೆ ಖಂಡಿತವಾಗಿ ವಾಸಿಯಾಗುವದೆಂದು ಹೇಳಿದರು ಕಡಿಯತ್ತುನಾಡು ನರಿಯಂದಡಗ್ರಾಮ ಕಾಫಿಪ್ಲಾಂಟರ್ ನನ್ನ ಬಾವ ಮ ರಾ ಶಂಕರನಾರಾಯಣಯ್ಯನವರು ನನಗೆ ಇದೇ ಮಾತನ್ನು ಒತ್ತಿ ಒತ್ತಿ ಹೇಳಿದರು ಅಗ್ಗಿ ಅರ್ದನ್ನ ಆನುಮೋದಿಸಿ ಪ್ಲೀಡರ್, ಮ ರಾ ಹೆಚ್ ಸುಬ್ರಾಯ ರವರು ವತ್ತಾಯದಿಂದ ನನ್ನ ಈ ಪ್ರಾಣಾಂತ ಕಷ್ಟಕ್ಕೋಸ್ಕರ ವೀರಾಜಪೇಟೆಗೆ ಹೋಗಿ ಸದರಿ ಔಷಧಾಲಯದಿಂದ ಚಿಕಿತ್ಸೆ ಹೊಂದ ... ವಹಾಗ ಏರ್ಪಾಡು ಮಾಡಿ ಅವರ ಕಾರು ಕುಂದಾಪುರಕ್ಕೆ ಹೊರಟುಹೋದರು ನಂತರ ಆಯುರ್ವೇದೀಯ ಪಂಡಿತ ರಾ ಮ ಕೆ ನಾರಾಯಣ ರಾಯರನ್ನು ಕರೆಸಿ ಪರೀಕ್ಷಿಸಿ ಅವರು ನನ್ನ ಈ ಖಾಯಿಲೆ ಕಂಡಿತವಾಗಿ ವಾಸಿ ಗುಣಪಡಿಸ್ತೇನೆಂತ ಪೂರ್ಣ ಭರವಸೆಕೊಟ್ಟು ತಕ್ಕ ಔಷದಿಯನ್ನು ಕೊಟ್ಟು 8 ದಿನಗಳೊಳಗೆ ಉಸುರಾಡುವಂತೆ ಮಾಡಿದರು. ನಂತರ ನನಗೆ ಪೂರ್ಣ ಭರವಸೆ ಆದದರಮೇಲ ಎಡದೇ ಆರು ತಿಂಗಳು ಚಿಕಿತ್ಸೆಯನ್ನು ಹೊಂದಿ ಈವಾಗಪೂರ್ಣ ಗುಣಹೊಂದಿ ದೃಢಕಾಯನಾಗಿದ್ದೇನೆ ತನ್ಮೂಲಕ ನನ್ನ ಹೆಂಡತಿಗೂ ನನ್ನಿಬಂದು ನವೇ ನವೇ ಮನಸ್ತಾಪಗುತ್ತಿದ್ದಳು ಆ ಕಷ್ಟ ಸಹ ಅವರಿಂದಲೇ ಪರಿಹಾರವಾಗಿ ಸುಖವಾಗಿರುತ್ತಾಳೆ ನನ್ನ ಸ್ನೇಹಿತರಿಂದ ನನ್ನ ಪ್ರಾಣವು ಉಳಿಯಿತು. ಈ ವಾಗ ನನ್ನಿಂದ ಜನೋಪಕಾರವಾಗಲಿ ಎಂದು ನಿಮ್ಮ ಅಮೂಲ್ಯವಾದ ಪತ್ರಿಕೆಯಲ್ಲಿ ಪ್ರಕಟಿಸಿದ್ದೇನೆ ಅಲ್ಲದೆ ಇವರಿಂದ ಸಿಡದೇ ಸಾಧಿಸಿ ಔಷಧಿಯನ್ನು ಹೊಂದಿದರೆ ಎಂಥಾ ಕಠಿಣ ಖಾಯಿಲೆಯಾದರೂ ಖಂಡಿತವಾಗಿ ಗುಣವಾಗುತ್ತದೆ ಎಂದು ದೃಢವಾಗಿ ಹೇಳುತ್ತೇನೆ (?) ಶ್ರೀದೇವರು ಪಂಡಿತ ನಾರಾಯಣರಾಯರವರಿಗೆ ಆಯುರಾರೋಗ್ಯ ಐಶ್ವರ್ಯಾಭಿವೃದ್ಧಿಯನ್ನು ಕೊಟ್ಟು ರಕ್ಷಿಸಲಿ ಎಂದು ಸದಾ ಪ್ರಾರ್ಥಿಸುತ್ತೇನೆ ತಾರೀಕು 18.8.24.

ಮಳವುಡಿ, ಎನ್ ಎಸ್ ಸುಬ್ರಾಯ,

"ಪ್ರಕಟಣೆ", ಕಾಫಿ ಪ್ಲಾಂಟರ್

[12 3]

TO LET

Commodious unfurnished Bungalow at Somwarpet near the P W D. Inspection Bungalow Sitting, dining, 2 bed, 2 dressing and 2 bath rooms Good situation Rs 44 per mensem

Apply,

Executive Engineer, P W.D

[3—3]- Mercara.

ARMS & AMMUNITION

Mahomedally-Noorb



337, Abdul Rehman, Street,
Crawford Market, BOMBA
Telegraphic Address:- "SHOO
Bomba

[24-3] Please write for latest Catal

ಸಂಪತ್ತಿಯ ಸಾಧನಗಳು

ಅಯ್ಯಾ ಎಂದಿಗೇ ಸಂಪತ್ತಿಯ ಅಸ್ತಿ... ಲ್ಲಿರ... ... ಕಿರ್ಲೋಸ್ಕರ ವ್ಯವಸಾಯ ... ಯೋಗ್ಯವಾದ ಸಾಧನಗಳು

ಲಕ್ಷಾವಧಿ ರೈತರು ಕೂಡಿ ಅನುಭವ ತಿಳಿ... ವರು. ... ಯ ಹಕ್ಕ ಕರಕರದ ನೇಗಿಲುಗಳ... ಈ ದೊರೆಯುತ್ತಿವೆ ... ೪೦೦ ಪೌಂಡು ... ಹಿಡಿ ಬಿಲ್ಲುತ್ತದೆ

"ಕೊ" ಎಂಬ ಕ್ಯಾಟಲಾಗನ್ನು ... ಕಿರ್ಲೋಸ್ಕರ ...

[16.13] ಕಿರ್ಲೋಸ್ಕರವಾಡಿ, ಜಿಲ್ಲಾ ಸಾ...

Health is Wealth

WANTED all to improve h... strength and vitality and thus sav... nation from physical degeneracy. S... half-anna stamp and get 23 spe... photographs with full particulars fro...

Director, Physical Culture,
P O BASAVANAGUDI
Bangalore Ci...

For your requirements of hig... grade Arms, Ammunition, Wine and spirits.

APPLY TO —

Mc. Dowell & Co., Lt...

[2—22] MERCA...

Printed & published by Ko... Appayya, R B., Chairman Board... Directors, at "Kodagu" Press, Mer... for "Kodagu" Ltd.

Reg. No. M. 1550.

If not delivered please return to
"KODAGU" OFFICE, MERCARA.

ಕೊಡಗು.

[illegible] ‖ [illegible] ‖

ಎಡಿಟರ್ ಪಂದ್ಯಂಡ ಐ. ಬೆಳ್ಯಪ್ಪ

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೪] ಕೊಡಗು, ಸನ ೧೯೨೪ನೇ ಇಸವಿ ಸಪ್ಟಂಬರ್ ತಾರೀಕು ೧೯ನೆಯ ಶುಕ್ರವಾರ [ಸಂಚಿಕೆ ೧೬

ಒಳ್ಳೆ ಸಮಯ!

ಕೊಂಚ ಓದು ಬರಹ ತಿಳಿದಿದ್ದರೆ ಸಾಕು.

ಇನ್ಸ್‌ಪೆಕ್ಟರುಗಳು ಮಾಹೆಯಾನ ರೂ. 40, ಪ್ಲಸ್ 20ರಿಂದ ರೂ. 75 ಪ್ಲಸ್ 25 ವರೆಗೆ ಸಂಬಳದಿಂದಲೂ ಮತ್ತು ಸಬ್ ಏಜಂಟರುಗಳು ರೂ. 30, ಮತ್ತು ಕಮಿಷನಿಂದ ಚಟುವಟಿಕೆಯಾಗಿ ಕೆಲಸ ಮಾಡತಕ್ಕವರು ಬೇಕಾಗಿದೆ. ಬಾಕಿ ಸಂಗತಿಗಳಿಗೆ ಬರೆಯಿರಿ.

ಟಿ. ಸರವಣಂ ಕಂಪನಿ.
ಚೀಫ್ ಏಜಂಟರುಗಳು,
ದಿ ಮೈಸೂರು ಅಗ್ರಿಕಲ್ಚರಲ್ ಡೈರಿ ಫಾರ್ಮ್,
ಕಂಪನಿ ಲಿಮಿಟೆಡ್,
ಬ್ಯಾಂಕ್‌ಸ್ಟ್ರೀಟ್ [illegible]

8—6

ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ
ಜೀವವಿಮೆಯ ಕಂಪೆನಿ, ಲಿಮಿಟೆಡ್,
ಹೆಡ್ ಆಫೀಸು ಬೊಂಬಾಯಿ.

ಹಿಂದುಸ್ಥಾನದಲ್ಲಿ ಕಳೆದ 50 ವರ್ಷಗಳಿಂದಲೂ ಜೀವವಿಮೆಯ ಅನುಭವವನ್ನು ಪಡೆದಿರುವ ದೇಶೀಯ ಜೀವವಿಮೆ ಸಂಘಗಳಲ್ಲಿ ಅತ್ಯಂತ ದೊಡ್ಡದೂ ಮತ್ತು ಭದ್ರವಾದದ್ದೂ ಆದ "ಓರಿಯಂಟಲಿನ" ಜೀವವಿಮೆ ಪತ್ರಕ್ಕಿಂತಲೂ ಉತ್ತಮವಾದ ಅನ್ಯ ಬೇರೆ ದೊರೆಯಲಾರದು.

ಈಗಾಗಲೇ ವಿಮೆ ಸಂದಾಯವಾದ ಮೊತ್ತ	8,00,00,000
ಕೈಯಲ್ಲಿ ಮುಂದೆ ಬರಬೇಕಾದ ತಗಾದೆಗಳನ್ನು ಸಂದಾಯಿಸಲಿಕ್ಕೆ ಇಟ್ಟುಕೊಂಡಿರುವ ಹಣ	6,00,00,000
ವಾರ್ಷಿಕ ಉತ್ಪತ್ತಿ	1,00,00,000

ಇಷ್ಟು ಭದ್ರತೆಯುಳ್ಳ ಕಂಪೆನಿಯಲ್ಲಿ ಜೀವವಿಮೆಯ ಪತ್ರ ತೆಗೆದುಕೊಳ್ಳಲಿಷ್ಟಪಡುವವರು ಯಾ, ಇದರ ವಿಷಯ ಹೆಚ್ಚಿನ ಸಂಗತಿ ತಿಳಿಯಬೇಕೆಂದಿರುವವರು, ದಯವಿಟ್ಟು ಈ ಕೆಳಗಿನವರಿಗೆ ಬರೆದುಕೊಳ್ಳುವದು.

ಕೆ. ಪಿ. ಚಿಣ್ಣಪ್ಪನವರು,
ಡಿಸ್ಟ್ರಿಕ್ಟ್ ಏಜನ್ಸಿ ಆಫೀಸು,
ವೀರಾಜಪೇಟೆ, ದಕ್ಷಿಣ ಕೊಡಗು.

McDOWELL & Co., Ltd.,

MERCARA.

THE OLDEST ESTABLISHED FIRM IN COORG.

Great reduction in prices of the best Arms and Ammunitions.

FRESH STOCK! **FINEST QUALITY!!** **LOWEST PRICES!!!**

Buy your requirements from the Firm you know.

			RS.	A.	P.	
D.B.B.L. guns by Smiths of Birmingham each			165	0	0	
D.B.M.L. guns	,,	,, ...	85	0	0	
S.B.M.L. guns	,,	,, ...	65	0	0	
12 Bore cartridges No 3, 4, 6 & 8	per 100	..	14	8	0	
Do. A & B	,,	....	16	0	0	
Do. S G & S.S.G.	,,	....	18	12	0	
Do. Destructor	,,	....	36	8	0	
Gun powder F.F. ¼ lb flask		....	1	0	0	
Caps	per 1000	....	5	4	0	
Caps	ten for	....	0	1	0	
Shot of all grades	per lb	....	0	10	0	
S.G. shot	per lb.	....	0	12	0	
Loading implements set. 12, 16, & 20 bore		....	18	0	0	per set.

ಬಹಳ ಅಗ್ಗ! ಬಹಳ ಅಗ್ಗ!!

ಹೊಸ ಸಾಮಾನುಗಳು! [illegible] ಕೊಂಡುಕೊಳ್ಳಿರಿ!!!

[illegible] ಮಡಿಕೇರಿ

[illegible]

[illegible]

ಡಿ. ಬಿ. ಬಿ. ಎಲ್. ಕೋವಿ ಸ್ಮಿತ್‌ಕಂಪೆನಿ, ಬರ್ಮಿಂಗ್ಹೇಮ್		165	0	0	ಒಂದಕ್ಕೆ
ಡಿ. ಬಿ. ಎಮ್. ಎಲ್.	ಡಿಟೊ	85	0	0	,,
ಎಸ್. ಬಿ. ,,	ಡಿಟೊ	65	0	0	,,
12ನೇ ತೂತಿನ (ಬೋರ್) ತೋಟಗಳು, ನಂ 3, 4, 6 ಮತ್ತು 8		14	8	0	ನೂರಕ್ಕೆ.
ಡಿಟೊ ಡಿಟೊ	ಎ ಮತ್ತು ಬಿ	16	0	0	,,
ಡಿಟೊ ಡಿಟೊ	ಚರಿಕಲ್ಲು	18	12	0	,,
ಡಿಟೊ ಡಿಟೊ	ಡಿಸ್ಟ್ರಕ್ಟರ್	36	8	0	,,
ಕೋವಿ ಮದ್ದು ಎಫ್. ಎಫ್. ಕಾಲು ಪೌಂಡು ಡಬ್ಬಿ 1ಕ್ಕೆ		1	0	0	
ಕೇಪುಗಳು	.... ಸಾವಿರಕ್ಕೆ	5	4	0	
ಕೇಪುಗಳು	.... ಹತ್ತಕ್ಕೆ	0	1	0	
ಚಿಲ್ಲುಗಳು ಎಲ್ಲಾ ತರದವು	... ಪೌಂಡಿಗೆ	0	10	0	
ಚರಿಕಲ್ಲುಗಳು ,,	...	6	12	0	
ಕೋವಿ ತುಂಬುವ ಸಾಮಾನುಗಳ ಜೊತೆ. 12, 16 ಮತ್ತು 20ನೇ ತೂತಿನವು	ಜೊತೆಗೆ.	18	0	0	

—2

"ಕೊಡಗು"

೧೯೦೪ ೨೪ನೇ ಇಸವಿ ಸೆಪ್ಟಂಬರ್ ತಾ|| ೧೯ ನೇ ಬುಧವಾರ.

ಮೂವ್ರುಕೊಟೆ ಟ್ರಾಮ್ವೆ.

ಕಳೆದ ಘೋರ ಮಳೆಯ ದೆಸೆಯಿಂದ ದೇಶದಲ್ಲೆಲ್ಲಾ ಉಂಟಾದ ನಷ್ಟಗಳ ಪೈಕಿ ಮೂವ್ರುಕೊಟೆ ಟ್ರಾಮ್ವೆ ಲೈನಿಗೆ ಸಂಭವಿಸಿದ ನಷ್ಟವೇ ಬಹಳ ಹೆಚ್ಚಾದದ್ದೆಂದು ತಿಳಿದ ಕೂಡಲೇ ಆಗೋಸ್ತು ತಾರೀಕು ೮ರ 10ನೇ ಸಂಚಿಕೆಯಲ್ಲು 'ಗಂಧ ಶೀಳುವಿಕೆ' ಯ ವಿಷಯ ಬರೆದಾಗ್ಯ ಈ ಟ್ರಾಮ್ವೆಯನ್ನು ವಿನು ಮಾಡಬೇಕೆಂದು ನಮ್ಮ ಅಭಿಪ್ರಾಯವನ್ನು ಸೂಕ್ಷ್ಮವಾಗಿ ಸೂಚಿಸಿದ್ದೆವು. ಆ ಸೂಚನೆಯನ್ನು ಕೌನ್ಸಿಲು ಮೆಂಬರುಗಳು ಮತ್ತು ಸ್ಥಳೀಯ ಸರ್ಕಾರದವರು ಗಮನಕ್ಕೆ ತಂದುಕೊಳ್ಳುವರೆಂದು ನಂಬಿದ್ದೆವು. ಆದರೆ ನಮ್ಮ ಕೋರಿಕೆಯು ಫಲಿತವಾಗಲಿಲ್ಲವೆಂದೇ ತೋರುತ್ತದೆ. ಈ ತಾರೀಕು 23ರಲ್ಲು ಪ್ರಾರಂಭಿಸುವ ಲೆಜಿಸ್ಲೇಟಿವ್ ಕೌನ್ಸಿಲ್ ಮೀಟಿಂಗಿನ ಕಾರ್ಯಕ್ರಮ ಪಟ್ಟಿಯನ್ನು ನೋಡಿದರೆ ಈ ಟ್ರಾಮ್ವೆಯ ವಿಷಯ ಯಾರೊಂದು ರೀತಿಯ ಚರ್ಚೆಗೆ ತರಲ್ಪಡುವಂತಿಲ್ಲ.

ಕೌನ್ಸಿಲು ಮೆಂಬರುಗಳು ಈ ವಿಷಯ ರಿಸೊಲ್ಯೂಶನುಗಳನ್ನು ಕಳುಹಿಸದೆ ವಾಕಿ ಮಾಡಿದ್ದರಿಂದ ಬರುವ ಮೀಟಿಂಗಿನಲ್ಲಿ ಚರ್ಚೆಗೆ ಇಡಲ್ಪಡಲಿಲ್ಲವೋ ಎಂಬುದು ತಿಳಿಯದು. ಹಾಗೆ ಮೆಂಬರುಗಳು ರೆಸೊಲ್ಯೂಶನು ಕಳುಹಿಸದೆ ಹೋಗಿದ್ದರೆ ಅವರು ದೇಶದ ಹಿತದ ಕೆಲಸಗಳಲ್ಲಿ ಎಚ್ಚರಿಕೆಯಿಲ್ಲವೆಂದೇ ಹೇಳಬೇಕಾಗಿದೆ. ಆದರೆ ಅವರು ಸುಮ್ಮನೆ ಇರುವಾಗಲೆಂದೇ ನಮ್ಮ ಭಾವನೆ. ಯಾಕೆಂದರೆ, ಕೆಲವು ಮೆಂಬರುಗಳು ಮೂವ್ರುಕೊಟೆಕ್ಕೆ ಹೋಗಿ ಟ್ರಾಮ್ವೆ ಲೈನಿಗೆ ಉಂಟಾಗಿರುವ ನಷ್ಟವನ್ನು ಖುದ್ದು ನೋಡಬೇಕೆಂದು ಅಪೇಕ್ಷೆಯುಳ್ಳವರೆಂಬುದು ತಿಳಿಯಬಂದಿತು. ಬಹುಶಃ ಈ ಲೇಖನವು ಪ್ರಕಟವಾಗುವ ಮೊದಲೇ ಅವರು ಟ್ರಾಮ್ ಲೈನನ್ನು ನೋಡಿಯೂ ಇರಬಹುದು. ಹೀಗಿರುವಲ್ಲಿ ಇಷ್ಟು ಕರ್ತವ್ಯವುಳ್ಳ ಮೆಂಬರುಗಳು ಆ ವಿಷಯವನ್ನು ಕುರಿತು ರೆಸೊಲ್ಯೂಶನು ಕಳುಹಿಸದೆ ಬಾಕಿ ಮಾಡಿದ ಕಾರಣವೇನು ಹೇಳಬೇಕಲ್ಲವೇ.

ಮೆಂಬರುಗಳು ರೆಸೊಲ್ಯೂಶನು ಕಳುಹಿಸಿದ್ದರೆ ಅದನ್ನು ಸರ್ಕಾರದವರು ಮೀಟಿಂಗಿನಲ್ಲಿ ಚರ್ಚೆಗೆ ಇಡದೆ ಬಾಕಿ ಮಾಡಲು ಕಾರಣವೇನು ಇದ್ದಿರಬಹುದು? ಕೌನ್ಸಿಲು ಮೀಟಿಂಗಿನ ಮುಂಚಿತವಾಗಿ ಕಳುಹಿಸಲ್ಪಟ್ಟಿದ್ದ ರೆಸೊಲ್ಯೂಶನುಗಳನ್ನೆಲ್ಲಾ ಕಳುಹಿಸಿದ ನಂತರ ಈಗ ಕಳುಹಿಸಿದವುಗಳನ್ನು ಚರ್ಚೆಗೆ ತೆಗೆದುಕೊಳ್ಳಬಹುದೆಂದು ಹೇಳಬಹುದು. ಆದರೆ ವಿಷಯಗಳ ಪ್ರಾಮುಖ್ಯತೆಯನ್ನೂ, ತುರ್ತನ್ನೂ ಗಮನಿಸದೆ ತೆಗೆದುಕೊಳ್ಳದೆ ಒಂದೇ ರೀತಿಯಾಗಿ ಕಳುಹಿಸಲ್ಪಟ್ಟ ತಾರೀಖುಗಳ ಮೇರೆ ಚರ್ಚೆಗೆ ಇಡುವುದು ಉಚಿತವಲ್ಲವೆಂದು ಹೇಳಬೇಕಾಗಿಲ್ಲ. ಟ್ರಾಮ್ವೆಯ ವಿಷಯವು ಬಹು ಮುಖ್ಯವಾದದ್ದೂ ತುರ್ತಾದದ್ದೂ ಆಗಿದೆ. ಲಕ್ಷಗಟ್ಟಲೆ ರೂಪಾಯಿ ವೆಚ್ಚಮಾಡಿರುವ ಟ್ರಾಮ್ವೆಯನ್ನು ಅದರ ಈಗಿನ ದುರವಸ್ಥೆಯಲ್ಲಿ ಬಿಟ್ಟುಬಿಡಬೇಕೋ ಅಥವಾ ಪುನಃ ಸಾವಿರಗಟ್ಟಲೆ ರೂಪಾಯಿ ಖರ್ಚುಮಾಡಿ ಉಳಿಸಿಕೊಳ್ಳಬೇಕೋ ಎಂಬುದು ಬಹು ಮುಖ್ಯವಾದದ್ದೆಂದು ಯಾರೂ ತಾನೇ ಹೇಳದಿರರು. ಅದರ ರಿಪೇರಿಯನ್ನು ಪಡನೆ ಕೈಕೊಳ್ಳದಿದ್ದರೆ ಅಲ್ಲಿಯ ಸಿಬ್ಬಂದಿಯವರಿಗೆ ಕೆಲಸವೇನೂ ಇಲ್ಲದೆ ಸುಮ್ಮನೆ ಇರಬೇಕಾದುದರಿಂದ ಈ ವಿಷಯ ತುರ್ತದಲ್ಲಿಯೇ ಕೌನ್ಸಿಲಿನಲ್ಲಿ ತೀರ್ಮಾನವಾಗಬೇಕಾದದ್ದು ಅಗತ್ಯವಾಗಿದೆ.

ಒಂದುವೇಳೆ ಉದ್ಯೋಗಸ್ಥರಲ್ಲದ ಮೆಂಬರುಗಳು ಈ ವಿಷಯ ರೆಸೊಲ್ಯೂಶನು ಕಳುಹಿಸದೆ ಹೋಗಿದ್ದರೂ ಕೂಡ ಮೇಲೆ ಹೇಳಿದ ಕಾರಣಗಳಿಗಾಗಿ ಸರ್ಕಾರದವರೇ ಈ ವಿಷಯ ಚರ್ಚೆಗೆ ತರಬೇಕಾದದ್ದು ಅವಶ್ಯವಾಗಿತ್ತು. ಮೆಂಬರುಗಳನೇಕರು ಕಳೆದ ಮೀಟಿಂಗಿನಲ್ಲಿಯೇ ಟ್ರಾಮ್ವೆಯಿಂದ ಲಾಭ ಸಿಕ್ಕುವದರ ವಿಷಯ ಅನುಮಾನವನ್ನು ಸೂಚಿಸಿರುವುದರಿಂದ, ವಿಶೇಷವಾದ ನಷ್ಟ ಸಂಭವಿಸಿರುವ ಈ ವೇಳೆಯಲ್ಲು ಅದನ್ನು ಚರ್ಚೆಗೆ ತಂದರೆ ಬಾಧಿತವಾಗಿಯೂ ಬಹುಮತದವರು ಅದಕ್ಕೆ ವಿರೋಧವಾಗಿಯೇ ಇರುವರೆಂಬ ಭಾವನೆಯಿಂದಲೂ, ಈಗ ಕೌನ್ಸಿಲಿಗೆ ಈ ವಿಷಯ ಅಭಿಪ್ರಾಯ ಕೊಡಲು ಎಡೆ ಕೊಡದೆ ಹೋದರೆ ಇನ್ನೊಂದು ಮೀಟಿಂಗಿನ ವರೆಗೆ ಸಿಬ್ಬಂದಿಯವರಿಗೆ ಕೆಲಸ ಕೊಡಬೇಕೆಂಬ ಕಾರಣದಿಂದ ಸಾಧ್ಯವಾದಷ್ಟು ರಿಪೇರಿಯನ್ನು ಮಾಡಿಸಿಬಿಡುವುದಕ್ಕೂ ಸರ್ಕಾರದವರು ಟ್ರಾಮ್ವೆಯ ವಿಷಯ ಮುಂದಕ್ಕೆ ಹಾಕಲ್ಪಟ್ಟಿತೋ ಏನೋ ತಿಳಿಯದು.

ಕಳೆದ ವಾರ ಸೂಚಿಸಿದಂತೆ ಟ್ರಾಮ್ವೆಗೆ ಉಂಟಾಗಿರುವ ವಿಪರೀತ ನಷ್ಟವನ್ನು ರಿಪೇರಿ ಮಾಡಲು ಎಷ್ಟೋ ಸಾವಿರ ರೂಪಾಯಿ ಬೇಕಾಗದೆ ಇರದು. ಈಗಿನ ಖಾತೆಸ್ಸು 'ಇಂಜಿನೀಯರು ತನ್ನ ಇರುವಿಕೆಯನ್ನು ಸ್ಥಿರಪಡಿಸಲಿಕ್ಕಾಗಿ ಸುಲಭ ಖರ್ಚಿನಿಂದ ರಿಪೇರಿಯನ್ನು ಮಾಡಿಸಬಹುದೆಂದು ಈಗ ಹೇಳಬಹುದು. ಮುಂಬರುವ ಅಂದಾಜು ಪತ್ರವು ಕೆಲಸವಾದನಂತರ ಇನ್ನೂ ಸ್ವಲ್ಪ ಹಣವು ಬೇಕಾಗುವುದು ಎಂದು ಕೇಳುವಾಗ್ಯ, ಆ ಹೆಚ್ಚಿನ ಹಣವನ್ನು ಕೊಟ್ಟೇ ಕೂಡಬೇಕಾಗುವುದು. ಇಲ್ಲವಾದರೆ ಈಗಾಗಲೇ ಅದರಲ್ಲಿ ಹೂಡಿರುವ ಸುಮಾರು ಹತ್ತು ಲಕ್ಷ ರೂಪಾಯಿಯಿಂದಿಗೆ ಈಗ ಬರೇಡಿಗೆ ಹಾಕುವ ಹಣವೂ ವ್ಯರ್ಥವಾಗುವುದು. ಹೀಗಿರುವುದರಿಂದ ಕೈ ಕಳೆದುಹೋದ ಹಾವು ಹಿಡಿಯೊಂದಿಗೆ ಕೈಯ್ಯಲ್ಲಿರುವ ಒಳ್ಳೇ ಹಣವನ್ನು ಖರ್ಚುಮಾಡುವುದರ ವಿಷಯದಲ್ಲಿ ಕೌನ್ಸಿಲಿನವರು ಬಹಳ ಎಚ್ಚರಿಕೆಯುಳ್ಳವರಾಗಬೇಕಾಗಿದೆ. ಈ ವಿಷಯವನ್ನು ಪಡನೆ ತೀರ್ಮಾನಿಸದಿದ್ದರೆ ಇನ್ನೊಂದು ಮೀಟಿಂಗಿನ ವರೆಗೆ ಸರ್ಕಾರದವರು ತುರ್ತ ಕೆಲಸಕ್ಕೆಂದು ರಿಪೇರಿಗೆ ಹಣ ಖರ್ಚುಮಾಡುವ ಸಂಭವವಿರುವುದರಿಂದಲೂ, ಇಲ್ಲವಾದರೆ ಅಲ್ಲಿಯ ಸಿಬ್ಬಂದಿಗೆ ಕೆಲಸವಿಲ್ಲದೆ ಇರಬೇಕಾಗಿರುವುದರಿಂದಲೂ ಬಹು ತುರ್ತ ವಿಷಯವೆಂಬ ಕಾರಣದಿಂದ ಈ ಮೀಟಿಂಗಿನಲ್ಲೇ ಇದನ್ನು ಚರ್ಚಿಸುವಂತೆ ಮೆಂಬರುಗಳು ಒತ್ತಿ ಹೇಳಬೇಕಾಗಿದೆ.

ಯುದ್ಧದ ಸುಸ್ಥಿಯಾಗಿ ಪ್ರಾರಂಭಿಸಲ್ಪಟ್ಟ ಮುಂದಿನ ಒನಾಂಗದ ಹಕ್ಕಾಡ ಗಂಧದ ಉತ್ಪತ್ತಿಯಲ್ಲಿ ಸುಮಾರು ಹತ್ತು ಲಕ್ಷ ರೂಪಾಯಿಯನ್ನು ಬೇಕಿದ ಎನದ ಅಭಿಪ್ರಾಯಕ್ಕೆ ತಂದು ಹಾಕಿರುವ ಟ್ರಾಮ್ವೆಯ ವಿಷಯಗಾಗಿ ಬೇಕಾಗುವ ಸಾವಿರಗಟ್ಟಲೆ ರೂಪಾಯಿಯಲ್ಲಿ ಒಂದು ಕಾಸನ್ನಾದರೂ ನಾವು ಬೊಕ್ಕಸಕ್ಕೆ ತಾವು ಒಪ್ಪುವದಿಲ್ಲವೆಂದು ಬಗ್ಗೆ ಬರಾವು ಸರ್ಕಾರದವರು ಕೌನ್ಸಿಲು ಮೆಂಬರುಗಳು ಹೇಳುವ ವರೆಗೆ? ತಿಂಗಳಿಗೆ ಸಾವಿರ ರೂಪಾಯಿ ಸಂಬಳ ಕೊಟ್ಟು ಇಟ್ಟುಕೊಂಡಿರುವ ಖಾತೆಸ್ಸು ಇಂಜಿನೀಯರಿಗೆ ನಮ್ಮ ದೇಶದಲ್ಲು ಕೆಲಸವಿಲ್ಲದೆ ಇರುವುದರಿಂದ ಅವರನ್ನು ಬೇರೆಕಡೆಗೆ ವರ್ಗಾಯಿಸುವಂತೆ ಇಂಪೀರಿಯಲ್ ಸರ್ಕಾರದವರಿಗೆ ಪಡನೆ ಬರೆಯುವಂತೆ ರೆಸೊಲ್ಯೂಶನನ್ನು ಪ್ರಜಾ ಪ್ರತಿನಿಧಿಗಳು ಯಾಕೆ ತಾವು ಮಾಡಬಾರದು? ಟ್ರಾಮ್ವೆಗಾಗಿ ವೆಚ್ಚಮಾಡಿರುವ ಹಣಕ್ಕೆ ಸಾಧಾರಣ ಕಮ್ಮಿಕರದ ಬಡ್ಡಿಯೂ ಸಿಕ್ಕುವದು ಸಂಶಯವಾಗಿರುವದರಿಂದ ಅದನ್ನು ಇನ್ನೂ ಪರೀಕ್ಷಿಸಿ ನೋಡಬೇಕೆಂದಿರುವಾಗ್ಗ, ಸ್ಥಳೀಯ ಸರ್ಕಾರದ ಭಂಡಾರವು ಪ್ರತ್ಯೇಕಿಸಲ್ಪಟ್ಟ ಕೈಯಲ್ಲಿ ಉಳಿಯುವುದೇ ಇಲ್ಲದ ಈ ಇಕ್ಕಟ್ಟಿನ ಸಮಯದಲ್ಲಿ ಮೂವ್ರುಕೊಟೆಯ ಟ್ರಾಮ್ವೆಯನ್ನು ನಿಲ್ಲಿಸಿಬಿಡುವುದಕ್ಕಿಂತ ಉತ್ತಮವಾದ ದಾರಿಯು ಮತ್ತೊಂದು ತೋರುವದಿಲ್ಲ. ಆದುದರಿಂದ ಈ ತಿಂಗಳ ಕೌನ್ಸಿಲು ಮೀಟಿಂಗಿನಲ್ಲಿ ಪ್ರತಿನಿಧಿ ಮೆಂಬರುಗಳು ಈ ವಿಷಯದಲ್ಲಿ ದೇಶದವರ ಅಭಿಪ್ರಾಯವನ್ನು ಸರ್ಕಾರದವರು ಬಾರಿಗೆ ತರುವಂತೆ ಮಾಡಲು ಪ್ರಯತ್ನಿಸುವರೆಂದು ನಂಬಿರುತ್ತೇವೆ.

—

ಗತಿಸಿದ ಶ್ರೀಮತಿ ರಮಾಬಾಯಿ ರಾನಡೆ.

ಇವರ ಮರಣದಿಂದ ಸಮಾಜ ಸುಧಾರಕ ಮತ್ತು ಸಮಾಜ ಸೇವಕರಲ್ಲಿ ಮುಖ್ಯಸ್ಥರ ಪೈಕಿ ಒಬ್ಬರು ಕಡಿಮೆಯಾದರು.

ಇವರಿಗೆ 13 ವರ್ಷ ಪ್ರಾಯ ತುಂಬುವಷ್ಟರಲ್ಲಿಯೇ ಬೊಂಬಾಯಿ ಹೈಕೋರ್ಟ್ ಜಡ್ಜಿಯಾಗಿ ಗತಿಸಿದ ಶ್ರೀಯುತ ರಾನಡೆಯವರಿಗೆ ಮದುವೆಯಾಯಿತು. ಅವಳ ವಿದ್ಯಾಭ್ಯಾಸವು ಆಗ ಸರಿಯಾಗಿ ಪ್ರಾರಂಭವಾಯಿತು. ಪ್ರಥಮದಿಂದ ಅವಳ ಗಂಡನು ಅವಳನ್ನು ಮುಂದಿನ ತನ್ನ ಕೆಲಸಗಳಿಗೆ ನಿಜವಾದ ಸಹಾಯಕಳನ್ನಾಗಿ ಮಾಡಿಕೊಳ್ಳಬೇಕೆಂಬ ಉದ್ದೇಶದಿಂದ ಅವಳಿಗೆ ವಿದ್ಯಾಭ್ಯಾಸವನ್ನು ಹೇಳಿಕೊಡಲು ತೊಡಗಿದರು. ಸಾಮಾಜಿಕ ಮತ್ತು ರಾಜಕೀಯದಲ್ಲಿ ತನ್ನ ಉತ್ಕೃಷ್ಟ ಧ್ಯೇಯಗಳಿಗೆ ಸರಿಯಾಗಿ ಅವಳ ಮನಸ್ಸನ್ನೂ ಸಿದ್ಧಪಡಿಸುವದಕ್ಕೆ ಪ್ರಯತ್ನಮಾಡಿದರು. ಅವಳ ಗಂಡನ ಮನೆಯವರಿಗೆ ಸಮಾಜದಾಯದ ಕಾರ್ಯಗಳಲ್ಲಿ ಅಷ್ಟು ಅನುಕೂಲತೆ ಇರಲಿಲ್ಲ. ಆದರೆ ಗಂಡನ ಸಂಗಡ ಎಲ್ಲಾ ಸಮುದಾಯದ ಯೋಗಗಳ ವಿಷಯದಲ್ಲಿ ಚರ್ಚೆಗಳನ್ನು ನಡೆಸುತ್ತಿದ್ದಳು. ಅವಳು ತನ್ನ ಗಂಡನ ಜೀವನದ ವಿಷಯ ಬರೆದದ್ದನ್ನು ನೋಡಿದರೆ ಅವಳ ವಿದ್ಯಾಭ್ಯಾಸದ ವಿಷಯದಲ್ಲಿ ಗಂಡನು ಎಷ್ಟರಮಟ್ಟಿಗೆ ಕಷ್ಟಪಟ್ಟನೆ ಬೇಕೆಂಬುದು ಗೊತ್ತಾಗುತ್ತದೆ. ಆ ಕಾಲದಲ್ಲಿ ಜಾತಿಕಟ್ಟುಗಳು ಬಹಳ ಬಿಗಿಯಾಗಿದ್ದವು. ಚಿಕ್ಕ ಹುಡುಗಿಯರು ಶಾಲೆಗೆ ಹೋಗುವುದು ಆಕ್ಷೇಪವಾಗಿತ್ತು. ರಮಾಬಾಯಿಯವರು ಓದುವದನ್ನು ಕಂಡರೆ ಮನೆಗೆ ಸಹ ಅವಮರ್ಯಾದೆಯಾಗುತ್ತಿತ್ತೆಂದು ಹೇಳಿ ಆ ಮನೆಯ ಹೆಂಗಸರು ಪುಸ್ತಕವನ್ನು ಅವಳ ಕೈಯ್ಯಿಂದ ಕಿತ್ತು ಇಡುತ್ತಿದ್ದರು. ತನ್ನ ಗಂಡನಕೋಣೆಯಲ್ಲಿ ಮಾತ್ರ ಅವಳಿಗೆ ಸ್ವತಂತ್ರವಿತ್ತು. ಓದಬೇಕೆಂಬ ತನ್ನ ಆಶೆಯನ್ನು ಅಲ್ಲಿ ಮಾತ್ರ ತೀರಿಸಿಕೊಳ್ಳಲು ಸಾಧ್ಯವಿತ್ತು.

ಅವಳ ಮದುವೆಯಾದ ಅನೇಕ ವರ್ಷಗಳನಂತರ ಅವರು ಪ್ರಸಿದ್ಧ ಪಂಡಿತ ರಮಾಬಾಯಿಯವರ ಕ್ಲಾಸಿಗೆ ಹೋಗಲು ಪ್ರಾರಂಭಿಸಿದಳು. ಇವಳು ಹೀಗೆ ಮಾಡಿದ್ದರಿಂದ ಮನೆಯ ಇತರ ಹೆಂಗಸರನ್ನು ಅತಿಗೆ ಪಾತ್ರಗಳನ್ನು ಸಹ ಇವಳು ಮುಟ್ಟಿಕೊಳ್ಳದಂತಾಯಿತು. ಈ ಸ್ಥಿತಿಯು ಈಗಲೂ ಕೆಲವು ಮನೆಗಳಲ್ಲಿದೆ. ಅವಳು ತುಂಬಾ ಧೈರ್ಯದಿಂದ ಗಂಡನ ಉತ್ತೇಜನದಿಂದ ಎಷ್ಟೋ ಆಪತ್ತುಗಳು ಬಂದರೂ ತನ್ನ ಕರ್ತವ್ಯವನ್ನು ಬಿಟ್ಟುಕೊಡದೆ ಹೋದಳು. ತನ್ನ ಗಂಡನ ಸಂಗಡ ತುಂಬಾ ಪ್ರಯಾಣಮಾಡಿದ್ದಳು. ಗಂಡನ ದೊಡ್ಡ ಪದವಿಯ ದೆಸೆಯಿಂದ ಬೇರೆ ವಿದ್ಯಾವಂತ ಸ್ತ್ರೀಯರ ಸಂಪರ್ಕವಾಗುತ್ತಿತ್ತು. ಅವರ ಸಂಗಡ ಮಹತ್ವದ ವಿಷಯಗಳನ್ನು ಚರ್ಚಿಸುತ್ತಿದ್ದಳು. ಈ ರೀತಿಯಲ್ಲಿ ಅವಳೇ ಒಳ್ಳೇ ಉಪನ್ಯಾಸಕಳೂ ಮತ್ತು ಬರವಣಿಗೆದಾರಳೂ ಆದಳು. 'ಪ್ರಾರ್ಥನೆ ಸಮಾಜ'ದಲ್ಲಿ ಬೋಧನೆಯನ್ನು ಕೊಡುತ್ತಿದ್ದಳು. ತನ್ನ ಗಂಡನ ಉಪನ್ಯಾಸಗಳನ್ನು ಪ್ರಕಟಿಸಿದಳು.

1901ರಲ್ಲಿ ಹಿಂದೂ ಸ್ತ್ರೀಗೆ ಆಗಬಹುದಾದ ಅತ್ಯಂತ ಕಷ್ಟವಾದ ಪತಿವಿಯೋಗವು ಇವಳಿಗೆ ಸಂಭವಿಸಿತು. ಒಂದು ವರ್ಷದ ವರೆಗೆ ಹಿಂದೂಪದ್ಧತಿ ಪ್ರಕಾರ ಇವಳು ಗೋಪ್ಯದಲ್ಲೇ ಇದ್ದಳು. ಅನಂತರ ತನ್ನ ಗಂಡನು ಕರ್ತವ್ಯ ಮಾಡಿದ್ದ ಕೆಲಸಗಳನ್ನು ಕೈಕೊಳ್ಳಲು ನಿಶ್ಚಯಿಸಿದಳು. ಇವಳಿಗೆ ಮಕ್ಕಳಿರಲಿಲ್ಲ. ತನ್ನ ಸಾಕುಮಗನೊಂದಿಗೆ ಪೂನಾಕ್ಕೆ ಹೋಗಿ ತನ್ನ ಗಂಡನಿಗೆ ಬಹಳ ಆಪ್ತವಾಗಿದ್ದ ಕೆಲಸವನ್ನು ಪ್ರಾರಂಭಿಸಿದಳು. ಸಂಪೂರ್ಣ ಮನಃಪೂರ್ವಕದಿಂದ ಕೆಲಸವು ಪ್ರಾರಂಭವಾಯಿತು. ಅವಳ ಪ್ರಯತ್ನಕ್ಕೆ ಸಹಕಾರಿಯಾಗುವವರು ಬಹಳ ಜನ ಇರಲಿಲ್ಲ. ಪೂನಾವು ಆ ಸಮಯದಲ್ಲಿ ಬ್ರಾಹ್ಮಣರ ಪಿಗಿ ಹಿಡಿತದಲ್ಲಿತ್ತು.

ಅವಳ ಜೀವಿತದಲ್ಲಿಯಾಗಲೀ, ದೇಹದಲ್ಲಿಯಾಗಲೀ ವಿಶೇಷವೇನೂ ಇರಲಿಲ್ಲ. ಸಾಧಾರಣ ಮಹಾರಾಷ್ಟ್ರ ಹೆಂಗಸಾಗಿಯೇ ಇದ್ದಳು. ಊಟ ಉಡಿಗೆ ತೊಡಿಗೆ ನಡೆ ನುಡಿಯಲ್ಲಿ ಬಹು ಸಾಧಾರಣವಾಗಿಯೇ ಇದ್ದಳು. ಅವಳ ಜೀವನದಲ್ಲೆಲ್ಲಾ "ಸಾಧಾರಣ ಜೀವನ ಉಚ್ಚ ಯೋಚನೆ" ಎಂಬದೇ ಧ್ಯೇಯವಾಗಿದ್ದಂತೆ ತೋರುತ್ತದೆ. ಅವಳು ಮರ್ಯಾದೆವಂತೆ ಆಗಿಯೂ, ಶಾಂತಳಾಗಿಯೂ ಇದ್ದರೂ ಗೂಢವಾದ ಶಕ್ತಿಯುಳ್ಳವಳೂ ಪಂಡಿತಳಾಗಿಯೂ ಸಹಿತ ಪರಳಾಗಿದ್ದಳು.

ಪ್ರಾರಂಭದಲ್ಲಿ ಪೂನಾದಲ್ಲಿ ಒಂದು ಸ್ತ್ರೀ ಸಮಾಜವನ್ನು ಏರ್ಪಡಿಸಿ ಶೀಘ್ರದಲ್ಲೇ ಸಿರಸ್ಥರ ಸ್ತ್ರೀಯರಿಗೂ ಅನ್ಯರಿಗೂ ಪಾಠ ಹೇಳಲು ಪ್ರಾರಂಭಿಸಿದಳು. ಗತಿಸಿದ ಮಿ. ಬಿ. ಎಂ. ಮಲಬಾರಿ ಎಂಬವರು ಬೊಂಬಾಯಿಯಲ್ಲಿ ಸೇವಾಸದನವನ್ನು ಸ್ಥಾಪಿಸಿದಾಗ ಅವರಿಗೆ ಸ್ನೇಹಿತಳು. ಸಹಾಯವಾಗಿದ್ದಳು. ಈ ಸಂಸ್ಥೆಯನ್ನು ಒಳ್ಳೇ ಸ್ಥಿತಿಗೆ ತರುವದನ್ನು ಪೂನಾದಲ್ಲೂ ಇದರ ಶಾಖೆಯನ್ನು ಸ್ಥಾಪಿಸಿ ವಿಧವೆಯರಿಗೂ ಇತರ ಹೆಂಗಸರಿಗೂ ವಿದ್ಯಾಭ್ಯಾಸಕ್ಕೆ ಅನುಕೂಲಮಾಡಿದಳು. ಈ ಕೆಲಸಕ್ಕೇನೇ ತನ್ನ ಜೀವನವನ್ನೆಲ್ಲಾ ಅರ್ಪಿಸಿದಳು. ಪೂನಾ ಮತ್ತು ಬೊಂಬಾಯಿಯ ಎಲ್ಲಾ ಸ್ತ್ರೀಯರ ಚಳವಳಿಯಲ್ಲಿಯೂ ಇವಳು ಇದ್ದಳು. ಮುಂದಾಳುವಾಗಲು ಬೇಕಾದ ಗುಣಗಳೆಲ್ಲಾ ಇವಳಲ್ಲಿದ್ದವು. ಪೂನಾದಲ್ಲಿ ಹುಡುಗಿಯರಿಗೆ ಬಾಲ್ಯದಿಂದ ಸ್ವತಂತ್ರವಾಗಿ ಜೀವನವನ್ನು ನಡೆಸುವದರ ಬಗ್ಗೆ ಅತಿಗೆ ಹುಡುಗಿಯರಿಗೆ ಟೀಚರ್ ಆಗಲು ತರಬೇತಿ ವರ್ಗಗಳನ್ನು ನಡೆಸಿದಳು. ಅವಳ ಸಂಪರ್ಕಕ್ಕೆ ಬಂದವರೆಲ್ಲರೂ ಅವಳನ್ನು ಗೌರವಿಸುವಂತೆ ನಡೆದುಕೊಳ್ಳುತ್ತಿದ್ದಳು. ಹೆಂಗಸರು ಪ್ರತ್ಯೇಕವಾಗಿ ಮದರಾಸು ಪ್ರಾಂತದಲ್ಲಿ ಹೀಗೆ ಪರೋಪಕಾರ ಕೆಲಸವನ್ನು ಮಾಡಬಹುದೆಂಬುದನ್ನು ಉದಾಹರಣೆಯಿಂದ ಬೋಧಿಸಿದಳು. ತನ್ನ ಪ್ರೀತಿಯನ್ನು ಸೇವೆಯಲ್ಲಿ ವ್ಯಕ್ತೀಕರಿಸಿದಳು.

"ಸ್ತ್ರೀ ಧರ್ಮ".

—

ಹಿಂದೂ ಮತದ ಸಂಸ್ಕಾರಗಳು.

ಮದ್ರಾಸು ಹೈ ಕೋರ್ಟಿನ ಜಡ್ಜಿಯವರಾಗಿದ್ದ ಸರ್ ಟಿ. ಸದಾಶಿವ್ಯಯ್ಯರು ಎಂಬವರು ಹೀಗೆ ಬರೆದಿದ್ದಾರೆ.

ಈಗಿನ ಕಾಲದಲ್ಲಿ ಹಿಂದೂಗಳ ಉಪನಯನ, ವಿವಾಹ ಈ ಎರಡು ಕರ್ಮಗಳನ್ನು ಮಾತ್ರ ಉಚ್ಚರಿಸೋಣವೆಂದರೆ ಸಾಕಾಗಿದೆ. ಎಲ್ಲಾ ಹಿಂದೂಗಳಿಗೂ ಜಾತಿ ಕುಲ ಭೇದವಿಲ್ಲದೆ ಉಪನಯನ ಮಾಡಬೇಕು. ಈಗ ಅರ್ಥವಿಲ್ಲದ ಕೆಟ್ಟ ಪದ್ಧತಿಗಳಾದ ವಿವಾಹ ಮತ್ತು ಬಂದಕ್ಕಿಂತ ಹೆಚ್ಚಿಗೆ ಹೆಂಡತಿಯರನ್ನು ಮದುವೆ ಮಾಡಿಕೊಳ್ಳುವ ಪದ್ಧತಿಗಳನ್ನು ನಿಲ್ಲಿಸಿ ಸ್ಮೃತಿಗಳ ಆಧಾರದಿಂದ ಪುನಃ ರೂಢಿಗೆ ತರಲು ಪ್ರಯತ್ನಿಸಬೇಕು. ಕರ್ಮಗಳನ್ನು ಸುಲಭ ತರಹಕ್ಕೆ ಇಳಿಸಿಕೊಳ್ಳಬೇಕು. ಅರ್ಥಗಳನ್ನು ತಿಳಿಕೊಂಡು ಮಂತ್ರಗಳನ್ನು ಉಚ್ಚರಿಸುವುದನ್ನು ಬಿಟ್ಟುಬಿಡಬೇಕು. ಸರ್ವರೂ ಕ್ರಮಗಳನ್ನು ದಹನಮಾಡುವ ಪದ್ಧತಿಯನ್ನೇ ಅನುಸರಿಸಬೇಕು. ಹುಟ್ಟು ಸಾವುಗಳ ಸೂತಕವನ್ನು ಆರೋಗ್ಯಕ್ಕೆ ಬೇಕಾದಷ್ಟೇ ಇಟ್ಟುಕೊಳ್ಳಬೇಕು. ಸೂತಕದ ಕಾಲವನ್ನು ಕಡಿಮೆ ಮಾಡಬೇಕು. ಅಶುಚಿ ಅನಾರೋಗ್ಯದ ಕಾರಣಗಳಿಂದ ಮಾತ್ರ ಅಸ್ಪೃಶ್ಯತೆ ಇರಬೇಕೇ ಹೊರತು ಬೇರೆ ವಿಧದ ಅಸ್ಪೃಶ್ಯತೆ ಇರಕೂಡದು. ಹ ಸ್ತ್ರೀರಕ್ಷೆಗಾಗಿ ಹಿಂಸೆ ಶಾಸ್ತ್ರದ ಆಧಾರವಿಲ್ಲದ ಘೋರ ಪದ್ಧತಿಯನ್ನು ನಾಶಮಾಡಿಸಬೇಕು. ಸಾಮೂಹಿಕ ಧ್ಯಾನವನ್ನು ತಪ್ಪಾಗಿ ಉಪಯೋಗಿಸಬೇಕು. ವೇದದ ಕಾಲದಲ್ಲಿ ಇದ್ದಂತೆ ಇದ್ದ ಗಂಡಸರಿಗೂ ಹೆಂಗಸರಿಗೂ ಇರುವ ಹಕ್ಕುಗಳ ಸ್ವತಂತ್ರ್ಯವನ್ನು ಕೋರಬೇಕು. ನಿಜವಾದ ಹಿಂದೂ ಧರ್ಮದಲ್ಲಿ ಅಹಿಂಸೆಯು ಬಹಳ ಮುಖ್ಯವಾದ ಗುಣವಾದ್ದರಿಂದ ಮಾಂಸಾಹಾರವನ್ನು ಬಿಡಬೇಕು. ನಿಸ್ವಾರ್ಥ ಸಾರ್ವಜನಿಕ ಸೇವೆಯನ್ನು ಎಲ್ಲರೂ ಜೀವಿತವಾಗಿಯೂ ವಿಧಿಸಬೇಕು. ಯಾತ್ರೆಗಳಿಂದ ಹಿಂದೂಧರ್ಮ ಒಳ್ಳೆಯದೆಂಬುದರಿಂದ ಹಿಂದೂಸ್ತಾನದ ಒಳಗೂ ಹೊರಗೂ-ಯಾತ್ರೆಗೆ ಹೋಗುವ ಪದ್ಧತಿಗೆ ಉತ್ತೇಜನ ಕೊಡ

ಬೇಕು. ಉತ್ತಮವಿರುವ ಬಾಲಕ ಮಾತ್ರ ದಾನ ಕೊಡಬೇಕು. ಆರ್ಷವಲ್ಲದ ಪ್ರಾಪ್ತವಾದ ನಾನಾ ಪ್ರಸಂಗಗಳಿಗೆ ಸುಳ್ಳುಶಾಸ್ತ್ರಾಧಾರಗಳ ಮೇಲೆ ದಾನ ಈ ಪದ್ಧತಿಯನ್ನು ನಿರಾಕರಿಸಬೇಕು. ಪಿತೃ ಶ್ರಾದ್ಧಗಳನ್ನು ಬಿಟ್ಟಿಬಾರದು. ಗತಿಸಿದ ಪೂರ್ವಜರನ್ನು ಪ್ರೀತಿಯಿಂದ ನೆನಸಿ ವರ್ಷದಲ್ಲಿ ಒಂದು ಪರ್ವದಲ್ಲಿ ಮಾತ್ರ ತಿಥಿಯನ್ನು ಮಾಡಿದರೆ ಸಾಕು (ವರ್ಷ ವರ್ಷ ತಿಥಿ ಮಾಡುವ ಪದ್ಧತಿಯು ಈತಗ ಬಂದದ್ದು) ಹುಡುಗನಿಗೆ 20 ವರ್ಷ ಹುಡುಗಿಗೆ 15 ಅಥವಾ 16 ವರ್ಷ ಪ್ರಾಯ ಆಗದ ಮುಂಚೆ ಮದುವೆ ಮಾಡಬಾರದು. ... ದೂರಗಳ ಗೋತ್ರದ ಸಿದ್ಧತ್ವವು ಗೊತ್ತಿಲ್ಲದ್ದರಿಂದ ಗೋತ್ರದೊಳಗೇ ಮದುವೆಯಾಗ ಕೂಡದೆಂಬ ಅಡ್ಡಿಯನ್ನು ತೆಗೆದು ಹಾಕಬೇಕು. ಗಂಡು ಹೆಣ್ಣಿಗೆ ಪ್ರಾಯದಲ್ಲಿ ಹೆಚ್ಚು ವ್ಯತ್ಯಾಸ ಇರುವ ಅಥವಾ ಸಮೀಪ ರಕ್ತ ಸಂಬಂಧ ಇರುವ ಕಾರಣದಿಂದ ಮದುವೆಗೆ ಅಡ್ಡಿ ಇರಬೇಕು. ಹುಟ್ಟು ಜಾತಿಭೇದಗಳನ್ನು ಹೋಗಲಾಡಿಸಬೇಕು.

ಅಶೋಕಾ ಚಕ್ರವರ್ತಿ.

ಈ ಹಿಂದೂಸ್ಥಾನದ ಚಕ್ರವರ್ತಿಯವರ ವಿಷಯದಲ್ಲಿ ಜೆ ಎನ್ ಸಿ ಗಂಗುಲಿ ಎಂಬವರು ಬರೆದದ್ದನ್ನು ಮೋಡರ್ನ್ ರಿವ್ಯೂವಿನಲ್ಲಿ ಪ್ರಕಟಿಸಿದೆ. ಇದರ ತರ್ಜುಮೆಯನ್ನು ಈ ಕೆಳಗೆ ಕೊಟ್ಟಿದೆ —

ಸಂಕ್ಷೇಪವಾಗಿ ... ಸಹಸ್ರ ವರ್ಷಗಳಿಂದಲೂ ಹೆಸರು ಪಡೆದ ಚಕ್ರವರ್ತಿಗಳ ಪೈಕಿ ಅಶೋಕಾ ಚಕ್ರವರ್ತಿಯವರ ಹೆಸರು ಬಹಳ ಪ್ರಸಿದ್ಧವಾಗಿದೆ. ಇತಿಹಾಸ ಪುರುಷರುಗಳ ಪೈಕಿ ಅನೇಕ ವಿಷಯಗಳಲ್ಲಿ ಇವರಿಗೆ ಸರಿ ಹೋಲುವವರು ಇಲ್ಲವೆಂದರೆ ಅತಿಶಯೋಕ್ತಿಯಾಗಲಾರದು. ಇವರು ಕನಿಕರ ಮತ್ತು ದಯಾಳುತನದ ಅವತಾರವೆಂತಲೇ ಹೇಳಬಹುದು. ... ಒಳ್ಳೇ ಜೀವನ ನಡಿಸುವುದೆಂಬುದನ್ನು ಇವರು ನಿದರ್ಶಿಸಿದರು. ಯುದ್ಧ ವಿಶಾರದರಾದ ಅಲೆಕ್ಸಾಂಡರ್, ನೆಪೋಲಿಯನ್ ಮುಂತಾದವರೊಂದಿಗೆ ಇವರನ್ನು ಹೋಲಿಸಬಾರದು. ಅಶೋಕ ಚಕ್ರವರ್ತಿಯವರು, ಅವರ ಕಾಲದ ನಾಗರೀಕತೆಯು ಮೊದಲಿನದಾಗಿದ್ದರೂ, ಅಲೆಕ್ಸಾಂಡರ್ ಮುಂತಾದವರು ಸ್ವತಃ ಶಕ್ತಿಯಲ್ಲಿ ಪ್ರಖ್ಯಾತಿ ಪಡೆದವರು. ಈ ಬೌದ್ಧ ಚಕ್ರವರ್ತಿಗೆ ಬೇರೆ ಯಾರು ... ಹೋಲಿಸಬಹುದು. ಪಶ್ಚಿಮದಲ್ಲಿ ... ಮತ್ತು ಕಾನ್‌ಸ್ಟಂಟೈನ್, ಪೂರ್ವದಲ್ಲಿ ... ಮತ್ತು ..., ಮತ್ತು ದಕ್ಷಿಣದಲ್ಲಿ ... ಇವರ ಪೈಕಿ ಅಶೋಕರಲ್ಲಿ ಇವರೆಗಿಂತ ಅನೇಕ ... ಗುಣಗಳಿದ್ದವು. ... ಕಾನ್‌ಸ್ಟಂಟೈನ್ ... ಆಗದು. ... ಚೀನಾ ಚಕ್ರವರ್ತಿಗಿಂತ ಅನೇಕ ... ಪಡೆದಿದ್ದರು. ... ಪ್ರಾಚೀನ ಇತಿಹಾಸದಲ್ಲಿ ಸಮಸ್ತ ಜೀವ ಜಂತುಗಳಲ್ಲೂ ದಯೆಯನ್ನು ತೋರಿಸಿ ... ಅಶೋಕನಿಗೆ ಸರಿ ಹೋಲುವವರಿಲ್ಲ.

ಈಗ ... ಅವರು ... ಚಕ್ರವರ್ತಿಯಾದ ಅಶೋಕನ ವಿಶೇಷ ಗೌರವವನ್ನು ಕೊಟ್ಟಿದ್ದಾರೆ. ... ಧರ್ಮ ಬುದ್ಧಿಯು ... ಇವರಲ್ಲಿದ್ದಷ್ಟು ಪ್ರಾಚೀನ ಅಥವಾ ಆಧುನಿಕ ರಾಜರುಗಳಲ್ಲಿ ಯಾರಲ್ಲೂ ಇರಲಿಲ್ಲವೆಂತ ವೇಲ್ಸ್ ಹೇಳುತ್ತಾರೆ.

ಈ ಬೌದ್ಧ ರಾಜರ ... ಚಿತ್ರ ... ಒಂದುಗೂಡಿಸಿದ್ದರು. ... ಧರ್ಮಗಳನ್ನು ... ಜಾತಿಗೆ ... ಹೇಳಿದ್ದಾರೇನೆಂದರೆ —

ಜೀವನದ ಉದ್ದೇಶಗಳನ್ನೂ ಮತ್ತು ಕ್ರಮವನ್ನೂ ಒಟ್ಟು ಜನಾಂಗಕ್ಕೆ ಬೋಧಿಸಲು ಪ್ರಯತ್ನಿಸಿದ ರಾಜರಲ್ಲಿ ಇವರೇ ಮೊದಲನೆಯವರಾಗಿದ್ದಾರೆ. ಯುದ್ಧ ನಡಿಸಿದ ರಾಜರುಗಳಲ್ಲಿ ಜಯಪ್ರದನಾದ ನಂತರ ಯುದ್ಧವನ್ನು ನಿಲ್ಲಿಸಿದವನು ಇವನೊಬ್ಬನೇ. ಜನರ ಹಿತಕ್ಕಾಗಿ ಇಪ್ಪತ್ತೆಂಟು ವರ್ಷ ... ಕೆಲಸ ಮಾಡಿದರು. ಚರಿತ್ರೆಯ ... ಮಹಾರಾಜರು ಮತ್ತು ಚಕ್ರವರ್ತಿಗಳ ... ನಕ್ಷತ್ರದಂತೆ ಪ್ರಕಾಶಿಸುವುದು ಅಶೋಕನ ಹೆಸರು ಒಂದೇ.

ನಿಜಸ್ಥಿತಿ.

(ಯಂಗ್ ಇಂಡಿಯಾ ದಲ್ಲಿ ಮಹಾತ್ಮಾ ಗಾಂಧಿಯವರ ಲೇಖನ)

'ಯಂಗ್ ಇಂಡಿಯಾ' ದ ಒಡನೆಗೆ ... ಆಗುತ್ತಿರುವ ಬದಲಾವಣೆಯಿಂದ ವಾಚಕರಿಗೆ ದಿಕ್ಕು ತೋರದೆ ಇರಬಹುದು. ಅವರ ಗಾಬರಿಗೆ ಏನೂ ಕಾರಣವಿಲ್ಲ. ... [illegible]

... ಅವರ ... ಮುಂದುವರಿಯುತ್ತಿ ... ಒಡಬಾಡಕೆಯಂತೆ ತೋರುವದ ... ನನ್ನ ... ಕವಲುಗಳೇ ಆಗಿವೆ.

ಅಸಹಕಾರಕ್ಕಿಂತ ಅಹಿಂಸೆಯೇ ಮುಖ್ಯವೆಂತಲೂ ... ಅಸಹಕಾರವು ... 'ಯಂಗ್ ಇಂಡಿಯಾ' ದಲ್ಲಿ ... ಸಾಧ್ಯವಿಲ್ಲ. ... ಉದ್ದೇಶದ ಕಡೆಗೇ ... ವಾಚಕರಿಗೆ ... ಸ್ಪಷ್ಟವಾಗಿ ತೋರಬಹುದೆಂತ ನಂಬುತ್ತೇನೆ.

ಸಹಜವಾಗಿ ವಿದ್ಯಮಾನಗಳು ಬದಲಾದಂತೆಯೇ ... ಒದಗಬೇಕಷ್ಟೆ. ಒಂದೇ ಮೂಲದಿಂದ ಹೊರಡುತ್ತಾದರೆ ಒಂದಕ್ಕೊಂದು ವಿರೋಧವಾಗುವದಿಲ್ಲ.

ಹೀಗೂ ನಮ್ಮೊಳಗೆ ... ಪ್ರತ್ಯಕ್ಷವಾಗಿಯೇ ಇದೆ. ... ಕಾರ್ಯ ... ಸರ್ಕಾರ ... ಒಂದು ಭಾಗದವರು ... ಸರ್ಕಾರದ ... ಆಗುತ್ತಾರವೇ ಹುಟ್ಟಾಗಿದೆ. ... ರಾಜ್ಯಾಡಳಿತ ಪದ್ಧತಿಯನ್ನು ಹೋಗಲಾಡಿಸಬೇಕೆಂತ ನಾವು ಅಪೇಕ್ಷಿಸುತ್ತೇವೆಯೋ ಅದನ್ನು ಬಲಪಡಿಸುತ್ತಿದ್ದೇವೆ. ಈ ಪದ್ಧತಿಯ ... ಗುಣವನ್ನು ತಿಳಿದುಕೊಳ್ಳೋಣ. ... ಈ ಬದಲಿಕೆಗೆ ಆಧಾರ ದೊರೆಯುವದಾಗಿದೆ.

ಅಹಿಂಸೆಯ ಪದ್ಧತಿಯಲ್ಲಿ ... ಅಸಹಕಾರವು ... ಅಹಿಂಸೆಯ ... ದುರಾದೃಷ್ಟದಿಂದ ಅಸಹಕಾರವು ... ರಾಜ್ಯಾಡಳಿತ ... [illegible]

[illegible]

ಕಾದರೆ ಕಾಂಗ್ರೆಸ್ಸು ಸಭೆಯು ಒಡೇ ನೂಲುವವರ ಸಂಘವಾಗಬೇಕಾಗಿದೆ. ದೇಶಕ್ಕೆ ಪ್ರಯೋಜನವಾಗುವ ಒಂದು ಕಾರ್ಯವನ್ನು ಚೆನ್ನಾಗಿ ಮಾಡಿದರೆ ಅದರಿಂದ ಬಹಳ ಪ್ರಯೋಜನವಿದೆ. ಕೈ ನೂಲಿನ ಕೈ ಬಟ್ಟೆಯೊಂದೇ ಇಂಥಾ ಕೆಲಸವೆಂತ ನಾನು ನಂಬಿದ್ದೇನೆ. ಬಿಡ್ಡರ್ ರಾಷ್ಟ್ರೀಯ ಕಾರ್ಯದಲ್ಲಿ ಬಯಸ್ಪ್ರಥನಾಗಬೇಕಾದರೆ ಕೈನೂಲಿನ ರಾಟೆಯೊಂದೇ ಸಾಧನ. ದೇಶದಿಂದ ದಾರಿದ್ರ್ಯವನ್ನು ಹೋಗಲಾಡಿಸಬೇಕಾದರೂ ಕೈನೂಲುವ ರಾಟೆ ಬಿಟ್ಟು ಬೇರೆ ಉಪಾಯವಿಲ್ಲ.

ನನ್ನ ಕಾರ್ಯಕ್ರಮದ ಮುಖ್ಯಾಂಶದ ಅರ್ಥವೇನಂದರೆ—

(1) ಸ್ವರಾಜ್ಯ ಪಕ್ಷದವರ ಕಾರ್ಯಕ್ಕೆ ಕಾಂಗ್ರೆಸ್ಸಿನ ಅಡಚಣೆ ಇರಲೇ ಬಾರದು.

(2) ಇತರ ರಾಜಕೀಯ ಸಮಾಜಗಳು ಕಾಂಗ್ರೆಸ್ಸಿಗೆ ಸೇರಿಕೊಳ್ಳುವಂತೆ ಮಾಡಬೇಕು.

(3) ಕಾರ್ಯಕ್ರಮದ ಬದಲಾವಣೆಯಾಗುವಾಗದವರು ಕೌನ್ಸಿಲ್ ಪ್ರವೇಶಕ್ಕೆ ಯಾವ ವಿಧದ ಅಡ್ಡಿಯನ್ನೂ ಮಾಡಬಾರದು.

(4) ಎಲ್ಲಾ ಪಂಗಡಗಳಿಗೆ ತಮ್ಮ ಮನಸ್ಸಿಗೆ ಬಂದಂತೆ ಯಾವ ತರದ ನಿರ್ಬಂಧಗಳೂ ಇಲ್ಲದೆ ಕೆಲಸಮಾಡಲು ಸ್ವತಂತ್ರ್ಯವಿರಬೇಕು.

ಈ ಕಾರ್ಯಕ್ರಮದಿಂದ ಈಗಿನ ಮಟ್ಟಕ್ಕೆ ಎಲ್ಲಾ ಪಂಗಡಗಳೂ ಒಗ್ಗಟ್ಟಿಗೆ ಸಾಧ್ಯವಿದೆ. ಎಲ್ಲಾ ಪಕ್ಷದವರೂ ಕಾಂಗ್ರೆಸ್ಸಿನಲ್ಲಿ ಬೆರೆತು ಚರ್ಚಿಸಬಹುದು. ಕಾಂಗ್ರೆಸ್ಸಿನ ಹೊರಗೆ ಸ್ವರಾಜ್ಯ ಅಡಳಿತ ಕ್ರಮದ ಮುಸೂದೆಯನ್ನು ಎಲ್ಲರೂ ಸೇರಿ ತಯಾರಿಸಿ ಸರ್ಕಾರಕ್ಕೆ ಕೊಡಬಹುದು. ನನ್ನ ಅಭಿಪ್ರಾಯದಲ್ಲಿ ಈ ಕೆಲಸಕ್ಕೆ ಸಮಯ ಬಂದಿಲ್ಲವೆಂತಲೇ ಇದೆ. ಮೇಲಿನ ಸೂಚನೆಗೆಯೂ ಕಾರ್ಯಕ್ರಮವನ್ನು ಜಯಪ್ರದವಾಗಿ ಮಾಡಲು ಎಲ್ಲರೂ ಮನಸ್ಸು ಕೊಟ್ಟರೆ ತುಂಬಾ ಬಲಪಡುತ್ತೆ. ಆದರೆ ಈ ವರೆಗೆ ದೇಶದ ಕಾರ್ಯ ನಡೆಸಿದವರು ಬೇರೆ ವಿಧವಾಗಿ ಯೋಚಿಸುತ್ತಾರೆ. ಹೇಗೂ ಸಮಗಾಗಿಯಾದರೂ ಒಂದು ಸ್ವರಾಜ್ಯದ ಸರ್ವಾಂಗೀಣ ಶರತ್ತುಗಳು ತಯಾರಾಗಬೇಕು. ಇದನ್ನು ತಯಾರಿಸಲು ನನ್ನ ಸಹಾನುಭೂತಿಯು ಅವಶ್ಯವಿದ್ದರೆ ನಾನು ಆ ಉದ್ದೇಶದ ಯಾವ ಸಭೆಗಾದರೂ ಹುಡುಕಾಗಿ ಸಹಾಯಮಾಡಲು ತಯಾರಿದ್ದೇನೆ. ಇದುವರೆಗೆ ಕಾಂಗ್ರೆಸ್ಸಿನ ಹೊರಗೆ ಇರಬೇಕೆಂತ ಹೇಳುವುದು ಯಾಕೆಂದರೆ—ಒಂದು ವರ್ಷ ಕಾಂಗ್ರೆಸ್ ಸಭೆಯು ಈಗಿನ ಸೂಚನೆಗೆಗೇ ಕೆಲಸ ಮಾಡಬೇಕಾಗಿದೆ ಎಂಬುದೇ. ಇದರಲ್ಲಿ ಜಯವಾದರೆ ಇತರ ರಾಜಕೀಯ ಚಳವಳಿಯಲ್ಲಿ ಕಾಂಗ್ರೆಸ್ ಸಭೆಯು ಅನಂತರ ಕೆಲಸಮಾಡಬಹುದು.

ಎಲ್ಲಾ ಪಂಗಡಗಳನ್ನು ಕಾಂಗ್ರೆಸ್ಸಿಗೆ ಸೇರಿಸಿ ಮತ್ತು ನಾವುಗಳೂ ಸ್ವರಾಜ್ಯಸಂಗಡದವರುಗಳೂ ರಾಜಿಯಾಗಬೇಕಾದರೆ ಏನು ಮಾಡಬೇಕು? ನನ್ನ ಉತ್ತರವು ಸುಲಭವಾಗಿದೆ. ಕಾಂಗ್ರೆಸ್ಸನ್ನು ಸ್ವಾಧೀನ ಪಡಿಸಿಕೊಳ್ಳಲಿಕ್ಕಾಗಿಯೇ ಹೋರಾಡುವದಾದರೆ ಅಂಥಾ ಹೋರಾಟಕ್ಕೆ ನಾನೂ ಸೇರುವದಿಲ್ಲ. ನನ್ನಂತೆಯೇ ಯೋಚಿಸುವವರೆಲ್ಲರೂ ಹಾಗೆಯೇ ಮಾಡಬೇಕೆನ್ನುತ್ತೇನೆ. ಸ್ವರಾಜ್ಯಸಂಗಡದವರ ಶರತ್ತುಗಳಿಗೆ ಒಳಪಟ್ಟು ಕಾಂಗ್ರೆಸ್ಸನ್ನು ಅವರಿಗೇನೇ ಬಿಟ್ಟುಬಿಡಬೇಕು. ಕೌನ್ಸಿಲ್ ಪ್ರವೇಶದ ಕೆಲಸವನ್ನು ಅವರು ಚೆನ್ನಾಗಿ ನಡಿಸಲಿ. ಕೌನ್ಸಿಲ್ ಪ್ರವೇಶಕ್ಕೆ ವಿರೋಧವಾದವರು ಒಡೇ ಚಳವಳಿಗೆಯ ಕೆಲಸದಲ್ಲಿ ನಿರತರಾಗಿರಬೇಕು. ಬೇರೆ ಪಂಗಡದವರಿಂದ ಸಾಧ್ಯವಿರುವ ಸಹಾಯವನ್ನು ಹೊಂದಿಕೊಳ್ಳಬೇಕು.

ಚಳವಳಿಗೆಯ ಕೆಲಸದಲ್ಲಿ ನಂಬಿಗೆ ಇರುವವರು ತ್ಯಾಗಕ್ಕೆ ತಯಾರಿರಬೇಕು. ಸ್ವರಾಜ್ಯ ಸಂಗಡದವರಿಗೆ ವಿರೋಧವಾಗಿ ನಿಂತು ಕಾಂಗ್ರೆಸ್ಸಿನ ಮೂಲಕ ನಮ್ಮ ಮೂರು ಉದ್ದೇಶಗಳನ್ನು ಸಾಧಿಸಲು ಸಾಧ್ಯವಿಲ್ಲ. ಅವರು ಒಪ್ಪಿದರೆ ಮಾತ್ರ ಕಾಂಗ್ರೆಸ್ಸಿನ ಸ್ವಾಧೀನದಲ್ಲಿರಬೇಕು. ಕಾಂಗ್ರೆಸ್ಸಿನ ಹೆಸರನ್ನು ಪೂಜಿಸುವ ಜಾಣತನವಿಲ್ಲದ ಜನರನ್ನು ನಮ್ಮ ಹೋರಾಟದಲ್ಲಿ ಸೇರಿಸಿಕೊಂಡರೆ ಅವರನ್ನು ಕೆಡಿಸಿದಂತೆಯೇ ಆಗುತ್ತೆ. ಮನಃಪೂರ್ತಿಯಾಗಿ ಕೆಲಸ ಮಾಡಿದ್ದರಿಂದ ಬರುವ ಶಕ್ತಿಯಿಂದ ಘನತೆಯು ಬರುತ್ತೆ. ಸೇವೆಯ ಹೆಸರು ಹಿಡಿದು ಬಹುಬಲದಿಂದ ಸಂಪಾದಿಸುವ ಶಕ್ತಿಯು ಅನರ್ಥ. ಈಗಿನ ಬಿಕ್ಕಟ್ಟಿನಲ್ಲಿ ಬಿಸಿಲು ಕುದುರೆಯಂತೆಯೇ ಮೋಸನೇ [illegible] ರ ಬಲಿಗೆ ಸಿಕ್ಕಿಕೊಳ್ಳಬಾರದು.

ನನ್ನ ವಾದದ ನ್ಯಾಯವನ್ನು ವಾಚಕರ ಮನಸ್ಸಿಗೆ ಹತ್ತಿಸಿದೆನೋ ಇಲ್ಲವೋ ಗೊತ್ತಿಲ್ಲ. ನನ್ನ ಮನಸ್ಸಂತೂ ದೃಢವಾಗಿ ಹೋಗಿದೆ. ನನ್ನ ಜೊತೆಯಲ್ಲಿ ಈ ವರೆಗ ಕೆಲಸ ಮಾಡಿದವರು ತೋರಿಕೆಗಾದರೂ ಬೇರೆ ದಾರಿಯಲ್ಲಿ ಹೋಗುವದೆಂದರೆ ನನಗೆ ನೋವಾಗುತ್ತೆ.

ಮೇಲೆ ಬರೆದಿರುವವು ನನ್ನ ಸೋಲಿನ ಶರತ್ತುಗಳಲ್ಲ. ಇ[illegible] ರಕ್ಕಿಲ್ಲದೆ ಬಿಟ್ಟುಕೊಡುತ್ತೇನೆ. ಎಲ್ಲಾ ಪಾರ್ಟಿಗಳು ಬೇಕೆಂತ ಹೇಳಿದರೆ ಮಾತ್ರ ನಾನು ಮುಂದಿನ ವರ್ಷ ಕಾಂಗ್ರೆಸ್ಸನ್ನು ನಡಿಸಲು ಒಪ್ಪುತ್ತೇನೆ. ಕಗ್ಗತ್ತಲೆಯಲ್ಲಿ ಬೆಳಕನ್ನು ಕಾಣದ ಸ್ಥಿತಿಯಲ್ಲಿ ಪ್ರಯತ್ನಿಸುತ್ತಿದ್ದೇನೆ, ಮುಚ್ಚಾಗಿ ಬೆಳಕು ಕಾಣುವಂತೆ ತೋರುತ್ತೆ. ಆದರೂ ನಾನು ತಪ್ಪಿಕೊಂಡಿರಬಹುದು. ನನ್ನಲ್ಲಿ ಹೋರಾಟವೇನೂ ಉಳಿದಿಲ್ಲವೆಂಬುದಂತೂ ಖಂಡಿತ. ಹುಟ್ಟಿದಂದಿನಿಂದಲೂ ಹೋರಾಡುತ್ತಿರುವವನು ಈ ಮಾತು ಹೇಳುವದು ಮಹತ್ವದ ವಿಷಯವಾಗಿದೆ. ಆದರೆ ಪ್ರೀತಿಯಿಂದಲೇ ನಾನು ಹೋರಾಡುವದಾಗಿದೆ. ಆದರೆ ನನ್ನ ಪ್ರೀತಿಯನ್ನು ಪೋದಲು ಪ್ರತ್ಯಕ್ಷಗೊಳಿಸಬೇಕಾಗಿದೆ. ನಾನು ಪ್ರತ್ಯಕ್ಷಗೊಳಿಸಿದ್ದೇನೆಂತ ಯೋಚಿಸಿದ್ದೆ, ತಪ್ಪಿಕೊಂಡಿದ್ದೇನೆಂತ ಗೊತ್ತಾಯಿತು. ಅದ್ದರಿಂದ ಹಿಂತಿರುಗಿದ್ದೇನೆ. ಈ ಕೆಲಸದಲ್ಲಿ ಎಲ್ಲರೂ ನನಗೆ ಸಹಾಯಕರಾಗಬೇಕೆಂತ ಕೇಳಿಕೊಳ್ಳುತ್ತೇನೆ. ಎರಡು ಪಂಗಡಗಳನ್ನು ಒಟ್ಟುಗೂಡಿಸುವ ಕಾಂಗ್ರೆಸ್ ಸಭೆಯು ಕೆಲವು ಕಾಲದ ವರೇಗಾದರೂ ಸರ್ವ ಮತಗಳನ್ನೊಳಕೊಂಡದ್ದಾಗಿರಬೇಕು.

ಪ್ರಕಟಣೆ.

ಒಂದು ಕಡೆ ಇಂಗ್ಲೀಷಿನಲ್ಲಿಯೂ, ಇನ್ನೊಂದು ಕಡೆ ಕನ್ನಡದಲ್ಲಿಯೂ ಪ್ರಿಂಟಾಗಿರುವ ಕಾಫಿ ತೋಟದ ಆಳುಗಳ ಪ್ರಿಚಾಪು ಕಂಟ್ರಾಕ್ಟು ಎಗ್ರಿಮೆಂಟು ಫಾರಮುಗಳು ಮಾರಾಟಕ್ಕೆ ತಯಾರಿವೆ. ಬೇಕಾದವರು 'ಕೊಡಗು' ಆಫೀಸಿನಿಂದ ಪಡಕೊಳ್ಳಬಹುದು.

ಮಡಿಕೇರಿ,

17.9.24 ಮೇನೇಜರ್.

ವರ್ತಮಾನ ಸಂಗ್ರಹ.

ಒಳದೇಶ.

ಮಡಿಕೇರಿಯಲ್ಲಿರುವ ಸ್ಪೆನ್ಸರ್ ಕಂಪೆನಿಯ ಮೇನೇಜರಾದ ಮಿ. ತಾಮಸ್‌ರವರು ಅಕ್ಟೋಬರ್ ಒಂದರಲ್ಲಿ ಬೇರೆ ಕಡೆಗೆ ವರ್ಗಾಯಿಸಲ್ಪಟ್ಟು ಮಿ. ಪಟ್ಟಮಾಡ ಚೆಣ್ಣಪ್ಪನವರು ಮಡಿಕೇರಿಗೆ ಮೇನೇಜರಾಗಿ ಬರಲಿಕ್ಕಿರುವರು.

ಸೋಮವಾರಪೇಟೆಯಲ್ಲೂ ಶಡಮುಕಳಲೆಯಲ್ಲೂ ಕಾಡಾನೆಗಳ ಕಾಟವು ಹೆಚ್ಚುತ್ತಲಿದೆಯೆಂದು ತಿಳಿಯಬರುತ್ತದೆ

ಹೊನ್ನಕೋಟೆ ಬ್ರಾಂಚಿಗೆ ಪ್ರವಾಹದಿಂದುಂಟಾದ ನಷ್ಟವನ್ನು ನೋಡಲಿಕ್ಕಾಗಿ ಕೌನ್ಸಿಲು ಮೆಂಬರುಗಳಾದ ಮಿ. ಕಂಬಡತಂಡ ಮಂದಣ್ಣನವರು ಮತ್ತು ಮಿ. ಕೋಟೇರ ಚೆಣ್ಣಪ್ಪನವರು ತಾ|| 15.9.1924ರಲ್ಲಿ ಪೊನ್ನಂಪೇಟೆಕ್ಕೆ ಹೋಗಿದ್ದರು.

ನಾಪೋಕ್ಲು ನಾಡು ಸಹಕಾರ ಸಂಘಗಳ ಒಂದು ಕಾನ್ಫರನ್ಸು ಈ ತಾರೀಕು 21ನೇ ಆದಿತ್ಯವಾರ ಮಧ್ಯಾಹ್ನ ಒಂದು ಗಂಟೆಗೆ ನಾಪೋಕ್ಲು ಶಾಲೆಯಲ್ಲಿ ಮಿ. ಪಾಡುವಂಗಡ ಕುಶಾಲಪ್ಪ, ಎಂ ಎಲ್. ಸಿ. ಯವರ ಅಧ್ಯಕ್ಷತೆಯಲ್ಲಿ ನಡೆಯಲಿಕ್ಕಿರುವುದು. ಸಹಕಾರ ತತ್ವಗಳ ವಿಷಯವೂ ಬಾಕಿದಾರರಿಂದ ಸಾಲವನ್ನು ವೇಗ ವಸೂಲು ಮಾಡುವದೆಂದೂ ಭಾಷಣಗಳು ನಡೆಯಲ್ಪಡುವವು.

ದಕ್ಷಿಣಕೊಡಗಿನ 'ಅಥಲೆಟಿಕ್ ಯೂನಿಯನ' ನ ವಾರ್ಷಿಕ ಕ್ರೀಡಾಮಹೋತ್ಸವ (ಸ್ಪೋರ್ಟ್ಸ್) ಆಟಗಳು ಈ ತಾ. 28ನೇ ಆದಿತ್ಯವಾರ ಮಧ್ಯಾಹ್ನದ ಮೇಲೆ 1 ಗಂಟೆಯಿಂದ 5 ಗಂಟೆ ವರೆಗೆ ಪೊನ್ನಂಪೇಟೆಯಲ್ಲಿ ನಡೆಯುವುದೆಂದೂ, ಇದನ್ನು ಪೊನ್ನಂಪೇಟೆ ಯೂನಿಯನ್ ನಡಿಸುವರು. ಕಳೆದ 14 ವರ್ಷಗಳಿಂದ ಈ ಕ್ರೀಡೆ ನಡೆಯುತ್ತಲಿದ್ದಾಗಿಯೂ, ಈ ವರ್ಷ ಹೊರಗಿನ ಜನರೂ ಸಹ ಬೆಟ್ಟಿನ ಪಂತದಾಟವನ್ನು ಇಟ್ಟಿರುವುದರಿಂದ ದೇಶದ ಎಲ್ಲಾ ಕಡೆಯಿಂದಲೂ ಘಟ್ಟಿಗರಾದ ಜವಾನಿಯರು ಒಂದು ಆಟಗಳಲ್ಲಿ ಭಾಗಿಗಳಾಗಬೇಕೆಂದು ತನ್ನ ಕೋರಿಕೆಯೆಂದೂ ಸದರಿ ಯೂನಿಯನಿನ ಗೌ ಕಾರ್ಯದರ್ಶಿಯವರು ಬರೆದಿರುತ್ತಾರೆ.

ಕೊಡಗು ಚೀಫ್ ಫಾರೆಸ್ಟ್ ಆಫೀಸರ ಹುಕುಂ ಮೇರೆ ಡಿಸ್‌ಮಿಸ್ ಆಗಿದ್ದ ಫಾರೆಸ್ಟರ್, ಕೆ. ಎಸ್. ನಂಜಪ್ಪನವರು ಚೀಫ್ ಕಮೀಷನರವರಿಗೆ ಅಪೀಲ್ ಮಾಡಿದ್ದರ ಮೇಲೆ ಸದರಿ ಫಾರೆಸ್ಟರನ್ನು ಡಿಸ್‌ಮಿಸ್‌ಮಾಡಿದ ಕಾರಣಗಳನ್ನು ಪುನಃ ವಿಚಾರದಿಂದ ತನ್ನ ಹುಕುಮಿಗೆ ಕಳುಹಿಸಬೇಕಾಗಿ ಚೀಫ್ ಕಮೀಷನರವರು ಬರೆದುದರಿಂದ ಚೀಫ್ ಫಾರೆಸ್ಟ್ ಆಫೀಸರವರು ಡಿಸ್‌ಮಿಸ್ ಆರ್ಡರನ್ನು ರದ್ದುಮಾಡಿ ಸಸ್ಪೆನ್ಶನ್‌ನಲ್ಲಿಟ್ಟು ಪುನಃ ವಿಚಾರ ಮಾಡುತ್ತಿರುವದಾಗಿ ವರ್ತಮಾನ.

ಮೊದಲು ವೀರರಾಜಪೇಟೆ ಇಂಗ್ಲೀಷು ಸ್ಕೂಲಿನ ಹೆಡ್ ಮಾಸ್ಟರಾಗಿದ್ದು ರಿಟಯರಾಗಿರುವ ಮಿ ಯಂ. ಶ್ರೀನಿವಾಸ ರಾಯರನ್ನು ಮಡಿಕೇರಿ ಮಡಗಿಯಂ ಹೈ ಸ್ಕೂಲಿನಲ್ಲಿ ಕನ್ನಡ ಪಂಡಿತರಾಗಿ ನೇಮಿಸಿರುವರು.

ಸೋಮವಾರಪೇಟೆಯಲ್ಲಿ ಸೆಕ್ಷನ್ ಆಫೀಸರಾದ ಮಿ. ಪಾಂಡಿರ ಮಾಣ್ಣಪ್ಪನವರು ಎರಡು ತಿಂಗಳು ರಜೆ ತೆಗೆದುಕೊಂಡಿರುವದರಿಂದ ಮಿ. ಪಟ್ಟಮಾಡ ಮುತ್ತಣ್ಣನವರು ಅಲ್ಲಿಯ ಸೆಕ್ಷನ್ ಚಾರ್ಜಿಗೆ ಕಳುಹಿಸಲ್ಪಟ್ಟಿರುವರು.

ಕಾಫಿ ತೋಟದ ಆಳುಗಳಿಗೆ ಬೇಕಾಗುವ ಪ್ರಿಚಾಪು ಕಂಟ್ರಾಕ್ಟು ಎಗ್ರಿಮೆಂಟು ಫಾರಮುಗಳು ಪ್ರಿಂಟಾಗಿ ಮಾರಾಟಕ್ಕೆ ತಯಾರಿಸಲ್ಪಟ್ಟಿವೆ. ಅವಶ್ಯವಿರುವವರು ನಮ್ಮ ಆಫೀಸಿನಿಂದ ಪಡಕೊಳ್ಳಬಹುದು.

ಮಡಿಕೇರಿಯಲ್ಲಿ ಸ್ಥಾಪಿತವಾಗಿರುವ ಗೋಖಲೆ ಮೆಮೋರಿಯಲ್ ಸ್ಕಾಲರ್‌ಶಿಪ್ಪು (62-8-0), ಈ ವರ್ಷ ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವ ಶ್ರೀಮತಿ ನೆರವಂಡ ಯನ್. ಪೊನ್ನಮ್ಮನವರಿಗೆ ಕೊಡಲ್ಪಟ್ಟಿದೆ.

ಕಳೆದವಾರ ಪಾರ್ಚ್‌ಮೆಂಟ್ ಕಾಫಿ ಖಂಡಿಗ 380 ರೂಪಾಯಿ ಎಂದು ಪ್ರಕಟವಾದದ್ದು ಸರಿಯಲ್ಲ. 400 ರುಪಾಯಿ ವರೆಗೆ ಇತ್ತು.

ಈಗ ಕೆಲವು ದಿವಸಗಳಿಂದ ಮಳೆಯೇ ಇಲ್ಲ. ನಿರ್ಮಲವಾದ ಆಕಾಶವು, ಸೂರ್ಯನು ಚೆನ್ನಾಗಿ ಪ್ರಕಾಶಿಸುತ್ತಿರುವನು.

[illegible] ನಾರಾಯಣರಾಯರು ಆರು ತಿಂಗಳು (ಕಳೆದ ವಾರ ಪ್ರಕಟಿಸಿದಂತೆ ನಾಲ್ಕು ತಿಂಗಳಲ್ಲ) ರಜೆಯಲ್ಲಿರುವುದರಿಂದ ರಜೆಯಲ್ಲಿದ್ದ ಮಿ. ಕೊರವಂಡ ಮುತ್ತಣ್ಣನವರನ್ನು ಪುನಃ ಆ ಕೆಲಸಕ್ಕೆ ನೇಮಿಸಿರುವರು. ಅವರು ತಾರೀಕು 18ರಲ್ಲಿ ಚಾರ್ಜು ತೆಗದುಕೊಂಡಿರುವರು.

ಕೆಲವು ದಿವಸಗಳ ಹಿಂದೆ ಅಮ್ಮತ್ತಿನಾಡು ಕಳತ್ಮಾಡು ಗ್ರಾಮದಲ್ಲಿ ಕತ್ತಿಕೊಲ್ಲಿ ಸುಬ್ಬಾಯ ಮತ್ತು ಅಣ್ಣಯ್ಯ ಇವರಿಬ್ಬರ ಜಗಳದಲ್ಲಿ ಅಣ್ಣಯ್ಯನೆಂಬವನು ಮೃತಪಟ್ಟದ್ದರ ಮೇಲೆ ಇವರಿಬ್ಬರ ಮೇಲ ಅಪಾಯಕರವಾದ ಘಾಯ ಮಾಡಿದರೆಂದು ಮೊಕದ್ದಮ್ಮೆ ಹೂಡಿದ್ದರಲ್ಲಿ ಅವರಿಬ್ಬರಿಗೂ ಸಬ್ ಜಡ್ಜಿ ಕೋರ್ಟಿನಲ್ಲಿ ಖುಲಾಸ್ ಆಗಿದೆ.

ವೀರರಾಜಪೇಟೆಯಲ್ಲಿ ಹುಚ್ಚು ನಾಯಿಗಳು ತುಂಬಿ ಹೋಗಿ ಜನರಿಗೆ ಕಚ್ಚಿ ಅಪಾಯವನ್ನುಂಟು ಮಾಡುತ್ತಿದ್ದರೂ ಕೂಡ ಮುನ್ಸಿಪಾಲ್ಟಿಯವರು ಈ ವಿಷಯ ಕೊಂದರೆ ತೆಗೆದು ಕೊಳ್ಳದೆ ಇರುವರು. [illegible] ಮೇಲಿನ ಅಧಿಕಾರಿಗಳು ಇದರನ್ನು ಎಚ್ಚರಿಸಬೇಕೆಂದೂ [illegible]

ಹಿಂದೂ ದೇಶ.

ಹಿಂದೂದೇಶದ ಎಲ್ಲಾ ರಾಜಕೀಯ ಸಂಗಡಗಳು ಒಗ್ಗಟ್ಟಾಗಬೇಕೆಂಬ ಉದ್ದೇಶದಿಂದ ಅಸಹಕಾರ ತತ್ವದ ಸದದೇಶದ ಒಟ್ಟಿಗಳಿಗಲ್ಲದೆ ಬಾಕಿ ಎಲ್ಲಾ ಬಹಿಷ್ಕಾರಗಳನ್ನು ನಿಲ್ಲಿಸಬಹುದೆಂತಲೂ ಖದ್ದರ್ ಬಟ್ಟೆಯ ಪ್ರಚಾರ, ಹಿಂದೂ ಮುಸಲ್ಮಾನರ ಐಕ್ಯಮತ್ಯ, ಹಿಂದೂಗಳಲ್ಲಿ ಅಸ್ಪೃಶ್ಯತೆ ಇವು ಮೂರನ್ನು ಮಾತ್ರ ಮುಖ್ಯ ಕಾರ್ಯಕ್ರಮವಾಗಿ ಇಟ್ಟುಕೊಳ್ಳಬಹುದೆಂದೂ ಮಹಾತ್ಮ ಗಾಂಧಿಯವರು ಸೂಚಿಸಿ ಒಗ್ಗಟ್ಟಿಗೆ ಪ್ರಯತ್ನಿಸುತ್ತಿರುವರು. ಡಾಕ್ಟರ್ ಬೆಸಂಟಮ್ಮನವರು ಎಲ್ಲಾ ಪಂಗಡಗಳೂ ಒಂದಾಗಿ ಸೇರಿ ಹಿಂದೂ ದೇಶಕ್ಕೆ ಬೇಕಾಗಿರುವ ಸ್ವರಾಜ್ಯದ ರಚನೆಯನ್ನು ತಯಾರಿಸಬೇಕೆಂದೂ ಪ್ರಯತ್ನಿಸುತ್ತಿರುವರು. ಅವರು ಈಗ ಸಿಮ್ಲಾದಲ್ಲಿ ಎಸೆಂಬ್ಲಿಯ ಮೆಂಬರುಗಳಾದ ಮುಂದಾಳುಗಳ ಸಂಗಡ ಈ ವಿಷಯ ಆಲೋಚಿಸುತ್ತಿರುವರು. ಅವರೆಲ್ಲರೂ ಈ ವಿಚಾರವು ಸಾಧ್ಯವೆಂದು ಒಪ್ಪಿದರೆ ನವಂಬರ್ ತಿಂಗಳಲ್ಲಿ ಸ್ವರಾಜ್ಯ ರಚನೆಯನ್ನು ತಯಾರಿಸಲಿಕ್ಕೆ ಎಲ್ಲಾ ಪಂಗಡಗಳ ಮುಂದಾಳುಗಳ ರೌಂಡ್ ಟೇಬಲ್ ಕಾನ್‌ಫರೆನ್ಸ್ ನಡಿಸಲಾಗುವದೆಂದು ಸೂಚಿಸಿರುವರು.

ತಾ. 11, 12ರಲ್ಲಿ ಲೆಜಿಸ್ಲೇಟಿವ್ ಎಸೆಂಬ್ಲಿಯಲ್ಲಿ ಇಂಡಿಯನ್ ಸಿವಿಲ್ ಸರ್ವಿಸ್ ಮೊದಲಾದ ಉದ್ಯೋಗಗಳ ಸರ್ವಿಸಿನವರಿಗ ಸಂಬಳ ಹೆಚ್ಚಿಸಬೇಕೆಂದು ಮುಂಚಿತವಾಗಿ ನಿರ್ಧರಿಸಿರುವ ಲೀ ಕಮೀಷನ್ನಿನ ರಿಪೋರ್ಟನ್ನು ಚರ್ಚಿಸಿದರು. ಈ ರಿಪೋರ್ಟನ್ನು ಜಾರಿಗೆ ತರಬೇಕೆಂದು ಸರ್ಕಾರದವರು ಬಹಳವಾಗಿ ವಾದಿಸಿದರು. ಜಾರಿಗೆ ತರಕೂಡದೆಂದು ಉದ್ಯೋಗಸ್ಥರಲ್ಲದ ಮೆಂಬರುಗಳ ಪರವಾಗಿ ಪಂಡಿತ ಮೋತಿಲಾಲ್ ನೆಹರೂರವರು ಠರಾವನ್ನು ತಂದು ಅದಕ್ಕೆ ನ್ಯಾಯವಾದ ಕಾರಣಗಳನ್ನು ಸೂಚಿಸಿದರು. ಚರ್ಚೆಯಾದನಂತರ ಓಟಿಗೆ ಹಾಕಿದಲ್ಲಿ ಜಾರಿಗೆ ತರಕೂಡದೆಂಬ ಠರಾವಿಗೆ ಪರವಾಗಿ 68 ಜನರೂ, ವಿರೋಧವಾಗಿ 46 ಜನರೂ ಓಟು ಕೊಟ್ಟದ್ದರಿಂದ ಸರ್ಕಾರದವರ ಠರಾವು ಸೋಲಿಸಲ್ಪಟ್ಟಿತು.

ತಾ. 14ರಲ್ಲಿ ಬೊಂಬಾಯಿನಲ್ಲಿ ನಡೆದ ಕಾಂಗ್ರೆಸ್ಸಿನ ವರ್ಕಿಂಗ್ ಕಮಿಟಿಯವರು ಮಹಾತ್ಮ ಗಾಂಧಿಯವರನ್ನು ಬರುವ ಕಾಂಗ್ರೆಸ್ಸಿನ ಅಧ್ಯಕ್ಷರಾಗಿ ಸರ್ವ ಸಮ್ಮತದಿಂದ ಒಪ್ಪಿಕೊಂಡರು. 20 ಪ್ರಾಂತ್ಯಗಳ ಪೈಕಿ ಬೇರಾರು ಒಂದಲ್ಲದೆ ಬಾಕಿ ಎಲ್ಲವೂ ಮಹಾತ್ಮ ಗಾಂಧಿಯವರ ಹೆಸರನ್ನೇ ಈ ಪದವಿಗೆ ಮೊದಲಾಗಿ ಸೂಚಿಸಿದರು.

ಕೆಲವು ದಿವಸಗಳ ಹಿಂದೆ ಕೆಥೋಲಿಕ್ ಕ್ರೈಸ್ತರ ಜಗದ್ಗುರುವಾದ ಪೋಪ್‌ರವರು, ಹೆಂಗಸರು ಚರ್ಚಿಗೆ ಹೋಗುವಾಗ್ಯೆ ತೋಳುಗಳು ಮತ್ತು ಕುತ್ತಿಗೆಯನ್ನು ಮುಚ್ಚದ ಬಟ್ಟೆಯನ್ನು ಹಾಕ ಕೂಡದೆಂದು ಮುಂತಾಗಿ ಮಾಡಿದ ಹುಕುಮಿಗೆ ಗಮನ ಕೊಡುವಂತೆ ಅಲಹಾಬಾದಿನಲ್ಲಿ ಅಲ್ಲಲ್ಲಿ ಪತ್ರ ಇತ್ತಿಹಾರಗಳನ್ನು ಅಂಟಿಸಿರುವರು.

ಅಮೇರಿಕದ [illegible] ಸರಕಾರದ [illegible] ಡಾಕ್ಟರ ರವೀಂದ್ರನಾಥ [illegible] ಕಲ್ಕತ್ತೆಯಿಂದ ತಾರೀಖು 1[illegible]ರಲ್ಲಿ ಹೊರಟು [illegible] ಯೂರೋಪಿಗಾಗಿ ಹಾಗುವರು.

[illegible] ಮತ್ತು [illegible] ಪ್ರವಾಹದ ನಿಮಿತ್ತ ಭರತಪುರದ [illegible] ಇನ್ನೂರು ಗ್ರಾಮಗಳು ನೀರಿನಲ್ಲಿ ಮುಳುಗಿಹೋಗಿವೆಯಂತೆ. [illegible] ನಷ್ಟದ ಸಂಖ್ಯೆ [illegible]

ಮಹಾತ್ಮ ಗಾಂಧಿಯವರ [illegible]

ರಾಜಪುತಾನದಲ್ಲಿ ನೆರೆಯು ಜೋರಾಗುತ್ತಿದೆ. ಆ ಪ್ರಾಂತ್ಯದ ಸಮೀಪದಲ್ಲಿರುವ ಅನೇಕ ದೊಡ್ಡ ಕೆರೆಗಳು ಒಡೆದು ಹೋಗಿವೆಯಂತೆ. [illegible] ಬಂದು [illegible] ನೋಡುತ್ತಿರುವಾಗ ಭರತಪುರದ ನಾಲ್ಕು ಉದ್ಯೋಗಸ್ಥರು ಪ್ರವಾಹದಲ್ಲಿ ಮುಳುಗಿ ಹೋದರು.

ಡಾಕ್ಟರ್ ಪಿ. ಸಿ. ರಾಯರವರು ಚರಕವನ್ನು [illegible] ಬಂಗಾಳದಲ್ಲಿ 30,000 ಮೈಲು [illegible] 500 [illegible]ಗಳಲ್ಲಿ ಭಾಷಣ ಮಾಡಿರುವರು.

ಪಂಜಾಬಿನಲ್ಲಿ [illegible] ಲಾಲಾ [illegible] ಚಂದರವರು [illegible] ರಾಯ ಸಾಹೇಬ [illegible]ರನ್ನು [illegible] ಕ್ರಿಯೆಗೆ [illegible]

ಹಿಂದೂ ದೇಶದ ಎಲ್ಲಾ ರಾಜಕೀಯ ಪಂಗಡಗಳು ಒಗ್ಗಟ್ಟಾಗಿ [illegible] ಕಾಂಗ್ರೆಸ್ಸಿಗೆ ಸೇರಲು [illegible] ಮಹಾತ್ಮ ಗಾಂಧಿಯವರ [illegible] ಒಪ್ಪಿರುವರು.

ವಿದೇಶ.

ಮೊರಾಕೊದಲ್ಲಿ [illegible] ಅಧಿಕಾರಿಗಳು [illegible] ಮೊರಾಕೊದಲ್ಲಿರುವ ಹಕ್ಕುಗಳನ್ನು [illegible] ತಮ್ಮ [illegible] ಪ್ರದೇಶಗಳ ಸಂಖ್ಯೆಯನ್ನು ಕಡಿಮೆ ಮಾಡಬೇಕಾಗುವದೆಂತಲೂ ಸೂಚಿಸಿರುವರು.

ಅರೇಬಿಯಾದಲ್ಲಿ [illegible] ನಡೆಯುತ್ತಿದೆ. [illegible] ವಶಪಡಿಸಿಕೊಂಡಿರುವರು. [illegible] ಮಕ್ಕಾ [illegible] ಮುತ್ತಿಗೆ ಹಾಕಬಹುದೆಂದು [illegible] ಯಾತ್ರಿಕರು [illegible] ತಿಳಿಯದು.

[illegible] ಮಂಗೋಲಿಯ [illegible] ಚಳ್ಳಿಗೆ ಬಂದ ಅಷ್ಟು ಸೈನಿಕರು [illegible] 1000 ಸೈನಿಕರು [illegible] ಗವರ್ನರಾದ [illegible] ಮಂತ್ರಿ [illegible]

ವಿದ್ಯಾಶಿಕ್ಷಣದ [illegible] ಆಸ್ಟ್ರೇಲಿಯದ [illegible] ಕಾಣಬರುವದು.

[illegible] ಲೀಗ್ ಆಫ್ ನೇಶನ್ಸ್ ಸಭೆಯ [illegible] ಸರಕಾರದವರು [illegible]

ಇಂಗ್ಲೆಂಡಿನ ಮುಖ್ಯ ಮಂತ್ರಿಯಾದ ಮೆಕ್ಡೊನಾಲ್ಡರವರು [illegible] ಈ ತಾರೀಖು 21ರಲ್ಲಿ ಇಂಗ್ಲೆಂಡಿಗೆ ಹೊರಡುವರು.

ಫ್ರೆಂಚ್ [illegible] ಮುಖ್ಯ ಮಂತ್ರಿಯಾಗಿ [illegible]

ಕಾನಸ್ಟಾಂಟಿನೋಪಲಿನ ಗವರ್ನರಾದ [illegible] ಆಯುಧ [illegible] ಮಧ್ಯರಾತ್ರಿಯಲ್ಲಿ [illegible] ಮಂತ್ರಿ [illegible] ಗವರ್ನರನ್ನು ಡಿಸ್‌ಮಿಸ್ ಮಾಡಿದರು.

ಕರ್ನಾಟಕದ ಏಕೀಕರಣವೂ, ವೀರಶೈವರೂ.

(ಒಬ್ಬ ಕರ್ನಾಟಕನಿಂದ)

ಈ ಜಗತ್ತಿನಲ್ಲಿ [illegible] ಅನೇಕ ದೇಶಗಳು [illegible] ಪ್ರಾಂತಗಳು ಆಯಾ ಭಾಷೆಗಳ ಭೇದದಿಂದ [illegible] ಇಂಗ್ಲೆಂಡ [illegible] ಹಿಂದುಸ್ಥಾನ [illegible] ದೇಶಗಳ [illegible] ಆದರಂತೆಯೇ ಹಿಂದುಸ್ಥಾನದಲ್ಲಿಯೂ ಬಂಗಾಳ, ಗುಜರಾಥ, ಮಹಾರಾಷ್ಟ್ರ, ಕರ್ನಾಟಕ ಮೊದಲಾದ ಪ್ರಾಂತಗಳ ಹೆಸರು [illegible] ಆಯಾ ಪ್ರಾಂತಗಳಲ್ಲಿ ನಡೆಯುವ ಭಾಷೆಗಳನ್ನೇ ಸೂಚಿಸುತ್ತವೆ.

ಆಯಾ ಪ್ರಾಂತಗಳು [illegible] ಜಾತಿ [illegible] ಇಂಗ್ಲೆಂಡ [illegible] ಮುಸಲ್ಮಾನ [illegible] ದೇಶಗಳಿಂದ [illegible] ಜಾತಿಯ ಜನರು [illegible] ಒಂದೇ ಉತ್ಪನ್ನವಾಗುವುದು [illegible] ಜಾತಿಯ [illegible] ಆಯಾ ಪ್ರಾಂತಗಳಿಗೆ ಆಯಾ [illegible] ಆ ಪ್ರಾಂತದಲ್ಲಿ [illegible] ಮುಸಲ್ಮಾನರು [illegible] ಕನ್ನಡಿಗರಿಂದ [illegible]

[illegible] ಕರ್ನಾಟಕ [illegible] ಕನ್ನಡ [illegible] ಕನ್ನಡಿಗರು [illegible] ಕರ್ನಾಟಕದ [illegible] ಕರ್ನಾಟಕದ ಏಕೀಕರಣ [illegible] ಕನ್ನಡಿಗರ ಆದ್ಯ ಕರ್ತವ್ಯವಾಗಿದೆ. ಇ[illegible]

[illegible] ಕರ್ನಾಟಕದ [illegible] ಕನ್ನಡ [illegible] ಸ್ಪಷ್ಟವಾಗಿ [illegible]

[illegible] ಕನ್ನಡ ನಾಡಿನ [illegible] ಕನ್ನಡಿಗರ ವಿದ್ಯೆ, ಕಲಾಕೌಶಲ್ಯ, ಸಂಗೀತ ಸಂಪತ್ತು, ಉದ್ಯೋಗ [illegible] ಜಗತ್ತಿನ [illegible] ತಂದು ಕೊಡುವ [illegible] ಉಪಾಯವಾಗಿರುವದು. ಆದುದರಿಂದ ಕರ್ನಾಟಕದ [illegible] ಕನ್ನಡ ನಾಡಿನ [illegible]

ಕರ್ನಾಟಕದಲ್ಲಿ [illegible] ಕನ್ನಡಿಗರಲ್ಲಿ ಹಿಂದಿನಿಂದ [illegible] ವೀರಶೈವರ [illegible] ಮದ್ರಾಸ [illegible] ಕರ್ನಾಟಕದ [illegible] ವೀರಶೈವರು [illegible] ರಾಜ್ಯದಲ್ಲಿ [illegible] ಕನ್ನಡ [illegible] ಆದರಿಂದ [illegible] ಕನ್ನಡಿಗರು ಈ ರೀತಿ [illegible] ಸಾಮಾಜಿಕ [illegible]

[illegible] ವೀರಶೈವ [illegible] ಕರ್ನಾಟಕದ [illegible] ವೀರಶೈವರು [illegible] ಕರ್ನಾಟಕದ ಏಕೀಕರಣ [illegible] ಹಿತಾಹಿತಗಳ [illegible] ಪ್ರಾಂತದ [illegible] ಕರ್ನಾಟಕದ [illegible] 'ಕರ್ನಾಟಕದ ಏಕೀಕರಣ' [illegible]

COORG FOREST DEPARTMENT

NOTICE.

Mercara, the 5th September, 1924.

Tenders are invited for the transport of about 30,000 c. ft. of timber from various localities in the Coorg Eastern Forests, to Hunsur, during the season 1924-25.

Tenders will be received up to midday on 1st October 1924.

For further particulars apply to the undersigned

P. W. F. WALPOLE,
Divisional Forest Officer,
South Coorg, Mercara.

ನೋಟೀಸು.

"ಕೊಡಗು" ಪತ್ರಿಕೆಯ ಹಳೆ ಚಂದಾಹಣ ಕೊಡಲಿಕ್ಕಿರುವವರೂ, ಹೊಸ ಚಂದಾದಾರರಾಗ ಬೇಕೆಂದಿರುವವರೂ, ಮತ್ತು ಠೇವಣಿ ಹಣ ಸಲ್ಲಿಸಲಿಕ್ಕಿರುವವರೂ ದಯವಿಟ್ಟು ವೀರರಾಜಪೇಟೆಯಲ್ಲಿರುವ ನಮ್ಮ ಕಂಪನಿಯ ಏಜಂಟರವರ ಆಫೀಸಿನಲ್ಲಿ ಪಾವತಿಮಾಡಬೇಕಾಗಿ ಕೋರಿಕೆ.

ಮಡಿಕೇರಿ, ಮೇನೇಜರ್,
15-9-24. 'ಕೊಡಗು' ಲಿಮಿಟೆಡ್

ಪತ್ರವ್ಯವಹಾರಗಳು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ.

ಸಂಪಾದಕ.

ಮಡಿಕೇರಿ ಮುನಿಸಿಪಾಲಿಟಿ.

ಮಹನೀಯರೇ,

ಮಡಿಕೇರಿಯಲ್ಲಿ ಮುನಿಸಿಪಾಲಿಟಿಯವರು ಹೆಚ್ಚು ಹೆಚ್ಚಿನ ಅಭಿವೃದ್ಧಿ ಸ್ಥಿತಿಯನ್ನುಂಟುಮಾಡುತ್ತಾ ಬರುತ್ತಿರುವ ವಿಷಯದಲ್ಲಿ ಅಗ್ರಗಣ್ಯರೆಂದು ಬೇರೆ ವಿವರಿಸುವ ಅಗತ್ಯವಿಲ್ಲವಷ್ಟೆ. ಆದರೆ ಮಡಿಕೇರಿಪಟ್ಣ ಮಧ್ಯದಲ್ಲಿ ಉಂಟಾಗುತ್ತಿರುವ ಭಯಂಕರ ಸಂಕಟವನ್ನು ಮುನಿಸಿಪಲ್ ಮೆಂಬರುಗಳೆಲ್ಲರೂ ಕಣ್ಣಾರೆ ಕಂಡರೂ ಕಾಣದವರಂತೆ ಇರುವುದನ್ನು ನೋಡುತ್ತಿರುವ ನನಗಾದರೂ ಬಹು ವಿಚಾರವನ್ನುಂಟುಮಾಡುತ್ತದೆ. ಹಿಂದುಳಿದ ಸಂಗಡದವರನ್ನು ಮುಂದಕ್ಕೆ ತರಬೇಕೆಂದು ಈ ಪಟ್ಣದವರು ಮಾತ್ರವಲ್ಲ, ಇಡೀ ಹಿಂದೂ ದೇಶದ ಜನಾಂಗಗಳೆಲ್ಲವೂ ಎಲ್ಲಾ ಇಲಾಖೆಯವರೂ ಪ್ರಯತ್ನಪಡುತ್ತಾ ಇರುವುದು ಲೋಕಸಮ್ಮತವಾಗಿದೆ. ಆದರೆ ಹಿಂದುಳಿದವರನ್ನು ಸರ್ವ ವಿಷಯದಲ್ಲೂ ಉಚಿತ್ವವಲ್ಲಿರುವಂತೆ ಮೊದಲು ತರಬೇಕುಮಾಡಿ ಆ ಮೇಲೆ ಮುಂದುವರಿದವರೊಂದಿಗೆ ಸಹಕರಿಸುವಂತೆ ಮಾಡುವುದೇ ವಿಹಿತವು. ಹಾಗಿಲ್ಲದೆ ಈಗಿನ ನಮ್ಮ ಪಟ್ಣಣದ ಸ್ಥಿತಿಯಂತೆ ನಡಿಸಿದರೆ ಮುಂದುವರಿದವರೂ ಹಿಂದುಳಿಯಬೇಕಾಗುವಲ್ಲಿ ಯಾವಸಂಶಯವೂ ಇರಲಿಕ್ಕಿಲ್ಲ. ಕಾರಣವೇನೆಂದರೆ—ಮಡಿಕೇರಿ ಪಟ್ಣಣದ ಮಧ್ಯದಲ್ಲಿ ಪಂಚಮರ ಗುಂಪುಗಳು ವೈನೊಂದಿರುವದು. ಇಲ್ಲಿ ನಡೆಯುತ್ತಿರುವ ಸಮಾಚಾರವನ್ನೂ, ಹೇಳಿಕೆಯನ್ನೂ, ಕಣ್ಣು ಮೂಗುಗಳಿರುವ ಯಾವ ಮುಂದುವರಿದವನೂ ಸಹಿಸನು, ಮಾತ್ರವಲ್ಲ, ಇದರಿಂದ ಅಂಟುರೋಗಗಳನ್ನೂ ಬಾರದಂತೆ ತಡೆದುಕೊಳ್ಳಲು ವಿಪರೀತ ತೊಂದರೆ ತೆಕ್ಕೊಳ್ಳಬೇಕಾಗಿರುವದು. ಈ ಪಂಚಮರ ಗುಂಪಿನ ಹಲಿಕೆಯನ್ನು ತಪ್ಪಿಸಲು ಎರಡು ಮೂರು ವರ್ಷಗಳ ಹಿಂದೆಯೇ ಮುನಿಸಿಪಲ್ ಅಧಿಕಾರಿಗಳಿಗೆ ಪಟ್ಣಣವಾಸಿಗಳ ಪುಕಾರು ಹೋಗಿರುವದಾಗಿಯೂ ಅಧಿಕಾರಿಗಳು ವಿಚಾರಿಸಿ ತಕ್ಕ ನಿವೃತ್ತಿಯ ಏರ್ಪಾಡುಗಳನ್ನು ಕೈಕೊಳ್ಳುವರೆಂದು ಸಮಾಧಾನ ಹೇಳಿದಂತೆಯೂ ತಿಳಿಯುತ್ತೇನೆ. ಈ ವರೇಗೂ ಈ ಅಧಿಕಾರಿಗಳಿಂದ ಯಾವ ನಿವೃತ್ತಿಯ ಏರ್ಪಾಡೂ ಆಗದಿರುವುದನ್ನು ನೋಡಿದರೆ ನಿಜವಾಗಿಯೂ ಮುಂದುವರಿದವರು ಹಿಂದುಳಿದವರೇ ಆಗುವಲ್ಲಿ ಅಡ್ಡಿ ಇಲ್ಲ. ಕೊಡಗಿನ ಎಲ್ಲಾ ಭಾಗಗಳಲ್ಲೂ ಯಾವ ಕುಂದುಕೊರತೆಗಳಿದ್ದರೂ ವಿಚಾರಿಸಿ ನಿಜವಾದ ಮತ್ತು ನ್ಯಾಯವಾದ ದಾರಿಗೆ ತರುವ ಕಮಿಶನರ್ ಧೊರೆಗಳಾದರೂ ನಿಗಕೊಡದಿದ್ದರೆ ಮಡಿಕೇರಿ ಪಟ್ಣಣವಾಸಿಗಳು ಅತ್ಯಂತ ಅಸಹ್ಯವಾದ ತೊಂದರೆಗೆ ತುತ್ತಾಗುತ್ತಲೇ ಇರಬೇಕಾಗುವುದು.

ಪಟ್ಣಣವಾಸಿ.

ಕೊಡವರ ಪಟ್ಟೋಲೆ ಪಳಮೆ.

ಅಯ್ಯಾ,

ಮೇಲಿನ ಗ್ರಂಥದಲ್ಲಿ ನನಗಿದ್ದ ಸಂಶಯಗಳನ್ನು ನೀಗಿಸಲು ತಿಳುವಳಿಕೆಗಾಗಿ ಗ್ರಂಥಕರ್ತರು ತಾ|| 4-7-24ರ ಕೊಡಗು ಪತ್ರಿಕೆಯಲ್ಲಿ ಪುತ್ರಿ ಹಬ್ಬದ ವಿಷಯ ಎಂದುದನ್ನು ಒಪ್ಪಬಹುದು. ಕೊಡಗಿನ ಯಾವ ಹಬ್ಬವೂ ಒಂದೇ ರೀತಿ ಒಂದೇದಿನ ನಡೆಯುವುದಿಲ್ಲ. ಅವರಾ ನಾಡಿನವರು ಆ ಸಮಯದಲ್ಲಿ ತಮತಮಗೆ ಅನುಕೂಲವರಿತು ನಿಶ್ಚೈಸಿಕೊಳ್ಳುವುದರಿಂದ ಪುತ್ರಿ ಹಬ್ಬವೂ ಗ್ರಂಥದಲ್ಲಿ ಬರೆದಂತೆ ನಡೆಬಹುದು. ಪುತ್ರಿಹಬ್ಬದ ವಿಷಯವನ್ನು ಆ ಪತ್ರಿಕೆಯಲ್ಲಿ ತಪಶೀಲಾಗಿಯೂ ಬರೆದಿರುವರಲ್ಲದೆ ಬೇರೆ ವಿಷಯವೆಲ್ಲವೂ ಸಂಕ್ಷೇಪವಾಗಿಯೇ ಇದೆ. ಆದುದರಿಂದ ಚನ್ನಾಗಿ ತಿಳಿದುಕೊಳ್ಳಲು ಅನುಕೂಲವಾಗಲಿಲ್ಲ.

ಎರಡನೆಯ ಪ್ರಶ್ನೆಯು ಸಿಟ್ಟಿನಿಂದ ಬರೆದಂತೆ ತೋರುತ್ತಿದೆ ಎನ್ನುವುದನ್ನು ನೋಡಿ ನನಗೆ ಅತ್ಯಂತ ವೇದನೆಯಾಗುತ್ತಿದೆ. ತಿಳಿಯಲಪೇಕ್ಷಿಸುವೆನಲ್ಲದೆ ಯಾವುದನ್ನೂ ಸಿಟ್ಟಿನಿಂದ ಕೇಳಲಿಲ್ಲ. ಆದರೂ ಗ್ರಂಥಕರ್ತರು ಸಿಟ್ಟಿನಿಂದ ಕೇಳಿದನೆಂದು ಬರೆದುದರ ಕಾರಣವಾದರೂ ಏನೆಂದು ತಿಳಿಯಬೇಕಾಗಿದೆ ಮತ್ತೂ—ನಮ್ಮಂಥವೇ ಉಳಿಸಿಕೊಳ್ಳದ ಹೆಂಗಸಿಗೆ ಪಾಪೆಯು ಉಳಿಯುವದೆಂತು ?

3. 317ನೇ ಪುಟವನ್ನು ಇನ್ನೂ ಚನ್ನಾಗಿ ಓದಿದೆನು. ನನ್ನ ಸಂಶಯವನ್ನು ನೀಗಿಸುವ ಯಾವ ಸದುತ್ತರವೂ ಅದರಲ್ಲಿ ದೊರೆಯಲಿಲ್ಲ.

4. ವಿಧವೆಯು ಪುನರ್ವಿವಾಹವಾದರೆ, ಮುತ್ತೈದೆಯರಂತೆ ಎಲ್ಲಾ ಆಚಾರಗಳಿಗೂ ಅರ್ಹಳು ಎನ್ನುವರು. ಇದು ಒಪ್ಪತಕ್ಕದ್ದಲ್ಲ. ಇದಕ್ಕೆ ನನ್ನ ಚರ್ಚೆ ಏನೂ ಇಲ್ಲವಾದರೂ, ತಾ|| 25ನೇ ಜೂಲೈ 1924ರ ಪತ್ರಿಕೆಯಲ್ಲಿ ಶ್ರೀಯುತ ಐ. ಮಾದಪ್ಪನವರು ಬರೆದಿರುವಂತೆ ಆಧಾರವು ಸಿಕ್ಕಿದ್ದರೆ ಉತ್ತಮವಿತ್ತು. ಇಲ್ಲವಾದರೆ ಇನ್ನೂ ಸಂಶಯವೇ.

5. ಶಾಸ್ತಾವು ಹರಿಹರ ಪುತ್ರನೇ ಅಹುದು. ಆತನು ಬ್ರಹ್ಮಚರ್ಯದಲ್ಲಿದ್ದವನು, ಪಾಪೆ ಕಂಡು ಹಿಡಿಯಲು ತನನ್ನು ಮಾಡುತ್ತಲೂ ಇರುವನು. ಅನುಯಾಯಿಗಳೂ ನಾಯಿಗಳೂ ಆತನು ಇರುವಲ್ಲಿ ಇರಲು ಕಾರಣವಿಲ್ಲ. ಮಲೆ ತಂಬ್ರಾನು ಕಿರಾತ ಅವತಾರಿಯಾದ ಸಾಕ್ಷಾತ್ ಶಿವನೇ. ಬಯತೂರ್ ಕಾಯರ್ಾತು ಕಿರಾತಾವತಾರಿ ಎನ್ನುವ ಮಲೆಯಾಳದವರ ಅಭಿಪ್ರಾಯವು ಒಪ್ಪಲೇ ಬೇಕಾಗಿದೆ. ಕಿರಾತ ಅವತಾರವೆತ್ತಿದ್ದು ಕಾಮ್ಯಕಾವನದಿಂದಲೇ. ಆದುದರಿಂದಲೇ ಕಾಯರ್ಾತ್ ಬನವನ್ನು ಕಾಮ್ಯಕಾವನವೆಂದು ನಂಬುವದಾಗಿದೆ.

ಅಪೇಕ್ಷಿ.

ಅಯ್ಯಾ,

ಬೇರಂಗನಾಡಿಗೆ ತೇಲಪಂಡ್ರ ಮನೆಯವರು ಒಂದನೇ ತಕ್ಕರೆಂದೂ, ಪಟ್ಟಮಾಡ ಮನೆಯವರು ಎರಡನೇ ತಕ್ಕರೆಂದೂ, ಕಲ್ಲುಮಾಡನ ಮನೆಯವರು ಮೂರನೇ ತಕ್ಕರೆಂದೂ, ದೇಶಬಾಂಧವರಿಗೆ "ಕೇ. ಮೊಣಯ್ಯ" ಎಂಬ ಹೆಸರಿನಿಂದ ಬರೆದ ಬಾತ್ಮಿಯು ತಮ್ಮ ಎಂಟನೇ ತಾರೀಕಿನ ಪತ್ರಿಕೆಯಲ್ಲು ತಿಳಿಯಪಡಿಸುತ್ತದೆ. ನಾನು ಪಟ್ಟೋಲೆ ಪಳಮೆಯನ್ನು ಓದಿದೆನು. ಅದರಲ್ಲಿ "ಕೇ. ಮೊಣಯ್ಯ" ಎಂಬ ಹೆಸರಿನಿಂದ ಬರೆದ ಬಾತ್ಮಿಗೆ ಜವಾಬು ಇರುವಹಾಗೆ ಕಂಡೆನು.

ಕೊಡಗುದೇಶದಲ್ಲಿ 35ನಾಡುಗಳೇ ಇದ್ದವೆಂತ ಎಲ್ಲರಿಗೂ ತಿಳಿದ ಮಾತಾಗಿದೆ. ತಾವಳಗೇರಿ ಮೂರ್ನಾಡಿನಲ್ಲಿ ಮೂರು ನಾಡುಗಳೆಂದೂ, ಎಡೆನಾಲ್ಕನಾಡಿನಲ್ಲಿ ನಾಲ್ಕು ನಾಡುಗಳೆಂದೂ, ಪಾಡಿನಾಲ್ಕುನಾಡಿನಲ್ಲಿ ನಾಲ್ಕು ನಾಡುಗಳೆಂದೂ ವಗ್ಯೆರೆಯಾಗಿ ಇರುವದು ಪಟ್ಟೋಲೆ ಪಳಮೆಯಲ್ಲಿದೆ. ಮತ್ತು ನನಗೂ ಗೊತ್ತಿರುವ ಮಾತಾಗಿದೆ. ಆದರೆ ಬೇರಂಗುನಾಡು ಎರಡುಮೂರುನಾಡುಗಳು ಸೇರಿದ ನಾಡಲ್ಲ. ಪೂರ್ವದಿಂದಲೇ ಒಂದು ನಾಡು, ಈಗಲೂ ಒಂದೇ ನಾಡು ಹಾಗಾದರೆ ಬೇರಂಗುನಾಡಿಗೆ ಒಂದೇ ತಕ್ಕನಾಗಬೇಕು.

'ಮೊಲಟ್ಟಿ ಕೊಟ್ಟಂಡ ತಕ್ಕಾಮೆಗೊಂಡ್ ಬೇರಂಗ್ ನಾಡ್ ತೇಲ ಪುಲಿಮಾಡಿ ಪೋಚಿ' ಪಟ್ಟೋಲೆಪಳಮೆ ಪೇಜು 490 ನೋಡಿ. ಈ ವಿಷಯ ಎಲ್ಲರಿಗೂ ತಿಳಿದ ಮಾತಾಗಿದೆ. ಹಾಗಾದರೆ ಮೊಲಟ್ಟಿಕೊಟ್ಟನ ತಕ್ಕಾಮೆಯಲ್ಲು ತೇಲಪ್ಪನು ತಕ್ಕನಲ್ಲ. ಮೊಲಟ್ಟಿಯವನ್ನು ಪಟ್ಟಮಾಡ ಮನೆಯವರಿಗ ಸಿಕ್ಕಿದೆಂದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಹಾಗಾದರೆ ಬೇರಂಗುನಾಡಿಗೆ ಪಟ್ಟಮಾಡ ಮನೆಯವರು ತಕ್ಕನಲ್ಲದೆ ತೇಲಪಂಡ್ರಮನೆಯವರಿಗೆ ಹ್ಯಾಗೆ ತಕ್ಕಾಮೆ ಬಂತೆಂದು ವಾದಿಸುತ್ತಾರೆಂದು ತಿಳಿಯಲಾಗುವದಿಲ್ಲ.

ಪಿ. ಕುಟ್ಟಪ್ಪ.

ಬಡ ಪಟೇಲರುಗಳ ಸಂಕಾಪ.

ಅಯ್ಯಾ,

ಪಟೇಲರುಗಳ ಸಂಬಳ ಎಷ್ಟೋ ವರ್ಷದಿಂದ ಒಂದೇ ನಿಗದಿನಲ್ಲು ಇರುವದು ಎಲ್ಲವರಿಗೂ ತಿಳಿದ ವಿಷಯವಾಗಿದೆ. ಈ ಮಧ್ಯೆ ರಿಟ್ರೆಂಚ್‌ಮಂಟಿನ ಹೆಚ್ಚು ಕಮ್ಮಿಯಲ್ಲು ಸಂಬಳ ಹೆಚ್ಚಾಗುತ್ತೆ ಎಂಬ ವರ್ತಮಾನವಿತ್ತು. ಅದರ ವಿಷಯ ಆಗ್ಯೆ ಕಲವು ತಿಂಗಳ ಮೊದಲಿನ ಕೊಡಗು ಪತ್ರಿಕೆಯಲ್ಲು ನೋಡಿದ್ದಾಯಿತು. ಹಾಗೆ ಪತ್ರಿಕೆಯಲ್ಲು ನೋಡಿದ್ದಲ್ಲದೆ ಯಾವದೊಂದು ಹುಕುಂ ಇನ್ನೂ ಸಿಕ್ಕಲಿಲ್ಲ. ಕೆಲಸದಿಂದ ಬಿಡುಗಡೆಯಾದ ಪಟೇಲರುಗಳಂತೆಯೇ ಕೆಲಸ ನೋಡಿಕೊಂಡಿರುವ ಪಟೇಲರುಗಳಿಗೂ ಮೊದಲಿನಂತೆಯೇ ಸಂಬಳ ಸಿಕ್ಕಿದೆ. ಆದರೆ ನಮ್ಮ ಹವಾಲುಗಳನ್ನು ಯಾರಿಗೆ ಹೇಳಿಕೊಳ್ಳಲು ಸಾಧ್ಯವಿದೆಯೆಂದರೆ ನಾಡು ಪಂಚಾಯತ್ಗಾರರಿಗೆ ಮಾತ್ರ. ಆದರೆ ನಮ್ಮ ಕಷ್ಟಗಳು ಪೂರ್ತಿ ಗೊತ್ತಿರುವ ದಯಾಳು ಡಿ. ವೈ. ಸಾಹೇಬರವರು ಘನ ಸರ್ಕಾರಕ್ಕೆ ತಿಳಿಸಿ ನಮ್ಮನ್ನು ಕಾಪಾಡುವರಾಗಿ ಪ್ರಾರ್ಥಿಸುತ್ತೇವೆ, ಮತ್ತು ನಮ್ಮ ದೇಶದ ಕ್ಷೇಮಕ್ಕಾಗಿ ಕೆಲಸ ಕೈಕೊಂಡಿರುವ ಕೌನ್ಸಿಲ್ ಮೆಂಬರುಗಳು ಸಹ ಈ ವಿಷಯದಲ್ಲಿ ಹೋರಾಡ ಬೇಕಾಗಿ ಪ್ರಾರ್ಥನೆ. ಮೆಂಬರುಗಳಾದ ತಾವುಗಳು ಇದು ಅಲ್ಪ ವಿಷಯವೆಂದು ಭಾವಿಸಿದರೆ ಬಡ ಪಟೇಲರಾದ ನಮಗೆ ಇದು ದೊಡ್ಡ ಕಾರ್ಯವಾಗಿದೆ. ಮಹನೀಯರಾದ ತಾವುಗಳು ದೊಡ್ಡ ದೊಡ್ಡ ಆದಾಯ ವೆಚ್ಚದ ವಿಷಯವನ್ನು ಘನ ಸರ್ಕಾರಕ್ಕೆ ತಿಳಿಸುವಾಗ್ಯೆ ಈ ವಿಷಯವನ್ನು ಸ್ವಲ್ಪ ಮಟ್ಟಿಗೆ ಅಧಿಕಾರಿಗಳಿಗೆ ತಿಳುವಳಿಕೆಗೆ ಕೊಟ್ಟರೆ ಒಳ್ಳೆಯದಲ್ಲವೆ. ನಮ್ಮ ಕಷ್ಟ ಸುಖಗಳು ತಮಗೆ ತಿಳಿಯದೇ ? ಸಂಬಳವು ಎಷ್ಟು ಸಿಕ್ಕಿದರೂ ಇನ್ನೂ ಹೆಚ್ಚಾಗಬೇಕೆಂಬ ಆಶೆ ಎಲ್ಲವರಿಗೂ ಇದ್ದೇ ಇದೆ. ಆದಂತಿರಲಿ, ಒಬ್ಬ ಪಟೇಲನಿಗೆ ತಿಂಗಳಿಗೆ 6 ರುಪಾಯಿಯಂತೆ ವರ್ಷಕ್ಕೆ 72 ರುಪಾಯಿಯಾದರೂ ದೊರೆಯ ಬೇಡವೇ ? ನಾವು ಎಷ್ಟು ಕೇಳಿಕೊಂಡರೂ ಪ್ರಯೋಜನವಾಗಲಿಲ್ಲ, ಘನ ಸರ್ಕಾರದವರು ಕರುಣೆ ಇಟ್ಟರೆ ನಮ್ಮ ಇಷ್ಟ ಕೈಗೂಡುವದು. ಆದುದರಿಂದಲೇ ನಾವು ಪುನಹ ಪುನಹ ಮೊರೆ ಇಡುವುದಾಗಿದೆ.

ಒಬ್ಬ ಬಡ ಪಟೇಲು.

ಅಯ್ಯಾ,

ಹಾಲಿ ಸಂವತ್ಸರದ ಮಳೆಯಿಂದ ತನಿಭೂಮಿಗಳಿಗೂ ಆ ಗಾಡಿಗಳಿಗೆ ಹಾಕಿದ ಬೇಲಿದ ಸ್ಯೆರುಗಳಿಗೂ, ಅನೇಕ ನಷ್ಟ ಸಂಭವಿಸಿದ್ದು ಎಲ್ಲರಿಗೂ ಗೊತ್ತೇ ಇದೆಯಷ್ಟೆ. ನಮ್ಮ ಉತ್ತರಕೊಡಗು ಸುಭೇದಾರರು ಆ ಮಳೆಯಲ್ಲು ಗ್ರಾಮಗ್ರಾಮ ತಿರುಗಿ ನ್ಯಾಯವಾಗಿ ನಷ್ಟ ಸಂಭವಿಸಿದವರಲ್ಲಿ ಗರೀಬರನ್ನು ನೋಡಿ ಮುಪತ್ತಿನ ಹಣಕೊಟ್ಟು ಮತ್ತು ಹೆಚ್ಚಿನ ಗದ್ದೆ ನಷ್ಟ, ಬರೆ ವಗ್ಯೆರೆ ಬಿದ್ದುಹೋದ್ದು ಹೆಚ್ಚಿನ ನಷ್ಟವಾದವರಿಗೆ ಟಕಾವಿ ಹಣವಿಹ ಉದಾರತ್ವದಿಂದ ಕೊಡಿಸಿದಕ್ಕೆ ನಾಡು ಊರಿನವರು ಬಹಳ ಕೃತಜ್ಞರಾಗಿ ವಂದಿಸುತ್ತೇವೆ.

ಇದೇ ರೀತಿ ಇವರು ಗ್ರಾಮಕ್ಕಾಗಿ ಹೋಗುವ ಗಾಡಿರಸ್ತೆ, ಕಾಲು ರಸ್ತೆಗಳನ್ನು ಸಹ ಅಜಮಾಯಿಸಿ ನ್ಯಾಯವಾದ ರಸ್ತೆಗಳ ರಿಪೇರಿಗೆ ಹಣ ಒದಗುವಂತೆ ಮಾಡಿಸಬೇಕಾಗಿ ಕೇಳಿಕೊಳ್ಳುತ್ತೇವೆ. ಅನೇಕ ವರುಷಗಳಿಂದ ರಿಪೇರಿ ಇಲ್ಲದೆ ಹಾಳುಬಿದ್ದ ರಸ್ತೆಗಳು 1 ಚಿಟ್ಟಕೇರಿಯಿಂದ ಹೆರವನಾಡಿಗಾಗಿ ಆನಂದೂರು ಬೆಟ್ಟತ್ತೂರು, ಕಲ್ಲಕಟ್ಟಾಗಿ ಸಂತಾಜೆಗೆ ಹೋಗುವ ಕಾಲುರಸ್ತೆ, 2 ಯಾವಟಕ್ಕೆ ಕಾರುಗುಂದ ಇನ್ಸ್‌ಪೆಕ್ಷನ್ ಬಂಗ್ಲೆಗೂ ಮಧ್ಯೆ ಕಡಿದು ಹಾಕಿದ ಸಂಕಿಗೆಮರದಿಂದ ಕಾರಗುಂದ ಗ್ರಾಮಕ್ಕಾಗಿ ಹೋಗುವ ಗಾಡಿರಸ್ತೆ. 3 ಚಾಗಪ್ಪೊರೆ ಬಳ್ಳದಿಂದ ಕೊಟ್ಟೂರು ಚಿಕ್ಕ ಸೇತುವೆಗೆ ಹೋಗುವ ಕಾಲುರಸ್ತೆ.

ಈ ಮೇಲ್ಕಂಡ 3 ರಸ್ತೆಗಳನ್ನು ನ್ಯಾಯವಾಗಿ ಅಜಮ
ಯಿಸಿ ರಿಪೇರಿ ಮಾಡಿಸದೆ ಹೋದರೆ ಪ್ರಯಾಣಸ್ಥರಿಗೆ ಬಹು
ತೊಂದರೆ ಆಗುವದು.

ನಂತರ ಹೊಳೆಗಳಿಗೆ ಪಾಲಕಟ್ಟುವದಕ್ಕೆ ಕೊಟ್ಟ ಹಣ
ನ್ನು ನ್ಯಾಯವಾಗಿ ಖರ್ಚುಮಾಡಿ ಪಾಲಕಟ್ಟಿಸಿದೆಯೋ ಎಂಬ
ವಿಷಯ ಸಹ ವಿಚಾರಿಸಬೇಕಾಗಿ ಕೋರಿಕೆ.

ಪಿ. ಸಿ. ಕೆ.

ಕೊಡಗಿನ ಜನಸಂಖ್ಯೆ ಮತ್ತು ಕಂದಾಯ.

ಮಹನೀಯರೆ,

ಈ ನಮ್ಮ ಕೊಡಗುಪ್ರಾಂತ್ಯದ ಜನಸಂಖ್ಯೆಯು ವರ್ಷ
ವರ್ಷ ಕಮ್ಮಿಯಾಗುತ್ತಾ ಬರುತ್ತದೆಂದು ಎಲ್ಲರಿಗೂ ತಿಳಿ
ಸಂಗತಿಯಾಗಿದೆ, ಇದಕ್ಕೆ ಈ ಪತ್ರಿಕೆಯಲ್ಲಿ ಕೆಲವು ಕಾರಣ
ಗಳನ್ನು ಬರೆದದ್ದು ನಿಜವಾಗಿದೆ. ಆದರೆ ಅದರ ಜೊತೆಗೆ ಇನ್ನೊಂ
ದು ಕಾರಣವನ್ನು ನಾನು ಇಲ್ಲಿ ಎಲ್ಲರ ತಿಳುವಳಿಕೆ ಬಗ್ಗೆ ಬ
ದು ಅದಕ್ಕೆ ಸರಿಯಾದ ಏರ್ಪಾಡುಗಳನ್ನು ಮಾಡಬೇಕೆಂದ
ನನ್ನ ಅರಿಕೆ.

ಅದೇನೆಂದರೆ, (ನಾನು ಕೊಡಗನಾಡಿನಿಂದ ಹೆಚ್ಚಾಗಿ
ವರ ವಿಷಯದಲ್ಲಿಯೇ ಬರೆದದ್ದೇನೆ, ಇದೇರೀತಿ ಇತರ ಜಾ
ಗಳಲ್ಲೂ ಇರಬಹುದೆಂದು ನನ್ನ ಊಹಿಕೆ). ಪೂರ್ವಕಾಲದ
ಒಂದು ಕುಟುಂಬದಲ್ಲಿ ಒಬ್ಬನೇ ಯಜಮಾನನಾಗಿ ಪ್ರತಿಯೊ
ಡೂ ಅವನ ಹೇಳಿಕೆಯಂತೆ ನಡೆಯುತ್ತಾ ಬಂದು ಕುಟುಂಬ
ಲ್ಲಿ ಬಾಲಕ ಬಾಲಕಿಯರು ವಿವಾಹ ವಯಸ್ಸಿಗೆ ಬಂದೊಡನೆ
ಈಗಿನಹಾಗೆ ವಯಸ್ಸು ಮೀರಲಿಕ್ಕೆ ಬಿಡದೆ, ಸರಿಯಾದ ವಯ
ಸ್ಸಿನಲ್ಲಿ ಹ್ಯಾಗಾದರೂಮಾಡಿ ಲಗ್ನಮಾಡುತ್ತಿದ್ದರು, ಮತ್ತು
ಆ ಬಾಲಕ ಬಾಲಕಿಯರ ಸಂಗಡದವರಿಗೆ ಮುಂದಿನ ಬಾಳಿನಲ್ಲು
ಯಾವ ತೊಂದರೆಯೂ ಇರಲಿಲ್ಲ. ಆದರೆ ಇತ್ತೀಚೆ
ಕುಟುಂಬವೆಲ್ಲಾ ಪಾಲು ಸಂಸ್ಥೆಯಾಗಿ ಪ್ರತಿಯೊಬ್ಬನೂ ಅ
ವನವನಿಗೆ ಯಜಮಾನನಾಗಿ ಅವನ ಇಷ್ಟಾನುಸಾರ ನಡಿಯುತ್ತಾ
ಒಂದು ದೇಶದ ಉತ್ಪತ್ತಿಯು ಬಹಳಮಟ್ಟಿಗೆ ಕಡಮೆಯಾ
ತಮ್ಮ ಪೂರ್ವದ ಆಚಾರ ಪದ್ಧತಿಗಳನ್ನು ಬಿಟ್ಟು ಉಡಿಗೆತೊಡಿ
ಮೊದಲಾದವುಗಳಲ್ಲಿ ಪಶ್ಚಿಮದೇಶದವರನ್ನು ಹಿಂಬಾಲಿಸುತ್ತಾ
ಮದುವೆಮಾಡುವೆನೆಂದರೆ ಬ್ಯಾಂಕಿನಲ್ಲಿ ಹಣವಿಲ್ಲ, ಕಲಿತದ
ಇಂಗ್ಲೀಷ್ ವಿದ್ಯೆ ಊಟವುದಕ್ಕೆ ಆಗುವುದಿಲ್ಲ, ಬೂಟೀಸ್ ಹ
ಕಲೇ ಬೇಕು, ಹ್ಯಾಟ್ ಹಿಡಕೊಂಡದು, ದೊಡ್ಡ ನೌಕರಿ ಆ

[illegible]

ರಷ್ಯಾ ದೇಶದಲ್ಲಿ ಈ ಕಳೆದ ಘೋರ ಯುದ್ಧದಲ್ಲಿ [illegible]

[illegible]

ಲಗ್ನ ಅಪೇಕ್ಷಿ

ಪೊನ್ನಂಪೇಟೆ ಚಾಕ್ಕಿ.

[illegible]

ಪೊನ್ನಂಪೇಟೆಯಲ್ಲಿ [illegible]

ಪೊನ್ನಂಪೇಟೆಯ ಬೊಪ್ಪ [illegible]

ತಾ 7 1ನೆ [illegible]

1 [illegible]

2 [illegible] (ties t) le [illegible]

3 ಇದಾದೆ [illegible] 4 [illegible]

4 [illegible]

5 [illegible]

[illegible]

ಸರಕಾರದ ಕಂದಾಯಕ್ಕಾಗಿ ಹರಾಜು.

ಆಯ

ಸರ್ಕಾರದ ಕಂದಾಯದ ಬಾಕಿಗಾಗಿ [illegible] 20, 30 [illegible]

[illegible] 150 [illegible]

[illegible] ಸಂಗತಿಯನ್ನು [illegible] ಪ್ರಾರ್ಥನೆ

ನೊಸ್ಸು ಹಡಕಲಂಡವ

ಆರೋಗ್ಯ ಚಂದ್ರಿಕೆ.

ಮದ್ರಾಸ್

ಸಂಪಾದಕರು ಡಾಕ್ಟರ್ ಎಂ. ರಾಮರಾವ್,

[illegible]

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಚಿಕಿತ್ಸೆಯ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ತಿಳುವಳಿಕೆ ದೊರೆಯುವ ದಕ್ಕಾಗಿ [illegible] ಒಂದು ಸಚಿತ್ರ ಮಾಸಪತ್ರಿಕೆ [illegible] ಇಂಗ್ಲಿಷ್ ಮಾಸಪತ್ರಿಕೆ [illegible] ಪ್ರಕಟವಾಗುವುದು

[illegible] ಆರೋಗ್ಯ ಚಂದ್ರಿಕೆಯನ್ನು [illegible] ವರ್ಷಕ್ಕೆ 180 [illegible] ಪತ್ರಿಕೆ 1ಕ್ಕೆ 0 2 0 [illegible]

ಪತ್ರವ್ಯವಹಾರಕ್ಕೆ ಆರೋಗ್ಯ ಚಂದ್ರಿಕೆ 327,

ತಂಬುಚೆಟ್ಟಿ ಬೀದಿ, ಮದ್ರಾಸ್.

ಕೃಷಿತೋನಾಸ್ತಿ ದುರ್ಭಿಕ್ಷ:

NITRATE OF SODA (15—16 per cent) Nitrogen,

'The best and cheapest form of Nitrogen highly concentrated and immediately available Nothing like it to make plants grow '

[illegible] (Nitrogen) [illegible] (15—16%) [illegible] 120—180 [illegible]

21—2 [illegible]

[illegible] — The Chilean Nitrate
B P Ayapa, Hon Committee, 6 Mission
Representative Row Post Box 469,
Ponnpetta Coorg. CALCUTTA

'ಕೊಡಗು'

ರಾಜಕೀಯ, ವಿದ್ಯಾ, ಕೃಷಿ, ವೃತ್ತಿ, ವಿಜ್ಞಾನ, ಮತ್ತು ನೀತಿ ಮುಂತಾದ ವಿಷಯಗಳಿಂದೊಡಗೊಂಡ

ಕೊಡಗಿನ ವಾರಪತ್ರಿಕೆ

1 ಪ್ರಕಟಣೆಗಳನ್ನು ಮೇನೇಜರ್ "ಕೊಡಗು" ಮಡಿಕೇರಿ ಈ ವಿಳಾಸಕ್ಕೆ ಕಳುಹಿಸಬೇಕು. 2 [illegible] 'ಕೊಡಗು' [illegible] 3 [illegible] 4 [illegible]

ಪ್ರಕಟಣೆಗಳು.

ಅತ್ಯಂತ ಸುಲಭವಾಗಿ [illegible]

ಮೆನೇಜರ್,

"ಕೊಡಗು" [illegible] ಮಡಿಕೇರಿ.

ಮಲೆಯಾಳ ವೈದ್ಯಶಾಲಾ

ಮಲಬಾರಿನ ಸಂಬೀಸನ್ ಮತ್ತು ಕಂಪನಿ ಎಂಬ ಆಯುರ್ವೇದ ವೈದ್ಯ ಶಾಲೆಯ ಒಂದು ಶಾಖೆಯು ವೀರರಾಜೇಂದ್ರಪೇಟೆಯಲ್ಲಿ ತೆರೆದಿರುತ್ತದೆ. ಇಲ್ಲಿ ಯಾವ ವಿಧದ ಕಾಯಿಲೆಯಾಗಿದ್ದರೂ ನಾಡಿಯಿಂದ ಪರೀಕ್ಷಿಸಿ ಔಷಧಿಕೊಟ್ಟು ಗುಣಪಡಿಸಲಾಗುತ್ತೆ. [illegible] ಈ ಕೆಳಗಿನ ವಿಳಾಸಕ್ಕೆ ಬರೆದು ವಿವರವನ್ನು ತಿಳಿದುಕೊಳ್ಳಬಹುದು.

ನಾರಾಯಣ ಸಂಬೀಶನ್,
ಆಯುರ್ವೇದ ವೈದ್ಯರು,
52—35 ವೀರರಾಜೇಂದ್ರಪೇಟೆ

ಕಲ್ಪತರು ಕಾಯಿಕ.

[illegible] ಶರೀರ ಸುಖವಾಗೋಣ, [illegible] ವಿವಾಹವಾಗೋಣ ಸಂತತಿಯಾಗೋಣ, ಕೈಕೊಂಡ ಉದ್ಯೋಗದಲ್ಲಿ ಯಶಸ್ಸು ಸಿಗೋಣ, ವ್ಯಾಪಾರದಲ್ಲಿ ಒಳ್ಳೇ ಲಾಭ ಸಿಗೋಣ, [illegible] ಆಗೋಣ, ಬರೆ [illegible] ಗೃಹಬಾಧೆ ಆಗದಿರೋಣ, [illegible] ಇದೇ ಮತ್ತು ಬೇರೆ [illegible] ಇಚ್ಛಿತ ಫಲ ಕೊಡುವ ಲೋಕಮಾನ್ಯ ಕಲ್ಪತರು ಕಾಯಿಕ [illegible] ಇಷ್ಟ ಪೂರ್ಣವಾಗುವದು. [illegible] ಶ್ರೀ. ವಿ. ಪಿ. ಖರ್ಚು ಬೇರೆ. ಗುಣಬಾರದಲ್ಲಿ ಕಾಯಿಕದ ಖರ್ಚು ವಜಾಹೋಗಿ ಬಾಕೀ ಸಿಗುವದು.
ವಿಳಾಸ — ಮ್ಯಾನೇಜರ, ಕಲ್ಪತರು ಕಾಯಿಕ, ಕೆ. ಎಮ್.
[52-8] ಪೋ. ಸಂಕೇಶ್ವರ ಜಿ. ಬೆಳಗಾಂವ.

ಅಪೂರ್ವ! ಹೊಸ ಪುಸ್ತಕ!! ಅಪೂರ್ವ!!!
ಶಿಶು ವೈದ್ಯ ಸಂಜೀವನೀ.

ಕನ್ನಡಿಗರಿಗೆ ಯಾವ ವೈದ್ಯ ಸಂಹಿತೆಯೂ ಇದುವರೆಗೆ ಸಿಗುವಂತಿಲ್ಲ! ಅದಕ್ಕಾಗಿ ಇದನ್ನು ಎಲ್ಲಾ ಆಯುರ್ವೇದದ ಆಧಾರದಿಂದ ಪ್ರಕಟಿಸಿದ್ದೇವೆ. ಇದರಲ್ಲಿ ಸ್ತ್ರೀ ಪುರುಷರ ದೇಹತತ್ತ್ವ, ವಿವಾಹ, ದಾಂಪತ್ಯ ಸುಖ, ಪಾತಿವ್ರತ್ಯ ಧರ್ಮ, ಗರ್ಭಿಣಿಯರ ರೋಗನಿದಾನ, ಚಿಕಿತ್ಸೆ, ಉಪಚಾರ, ಸುಖಪ್ರಸವೋಪಾಯಗಳು, ಪ್ರಸವಸುದ್ದಿ, ದಾಯಿಯ ಕರ್ತವ್ಯ, ಶಿಶುಪೋಷಣೆ, ಶಿಶುಗಳ ಸಕಲ ರೋಗ ಚಿಕಿತ್ಸೆ, ಹಾಗೂ ಎಲ್ಲಾ ಲೋಹಾದಿಗಳ ಶುದ್ಧಿ ಕ್ರಮ ಮತ್ತು ಭಸ್ಮಗಳು ಮಾಡುವ ವಿಧಾನ, ಧಾತುಪುಷ್ಟಿ ಔಷಧಿಗಳು ಇವೆಲ್ಲ ಶಾಸ್ತ್ರೀಯ ಮತ್ತು ಸಮರ್ಪಕವಾಗಿ ವಿವರಿಸಲ್ಪಟ್ಟಿದೆ. ಈ ಪುಸ್ತಕ ಕೇವಲ ದೊಡ್ಡದು. ಇದರಲ್ಲಿ ಹೆಂಗಸರು, ಹುಡುಗರು ಸಹ ಸುಲಭವಾಗಿ ತಯಾರು ಮಾಡತಕ್ಕಂಥಾ ೫೦೦ ಔಷಧಗಳಿಗಿಂತ ಹೆಚ್ಚಾಗಿ ಇವೆ. ಈ ಪುಸ್ತಕದ ಕ್ರಯವು ಅದರಲ್ಲಿರುವ ಒಂದೊಂದು ಔಷಧದ ಬೆಲೆಯಾಗಲಾರದೆಂಬುದನ್ನು ನೀವೇ ತಿಳಿದುಕೊಳ್ಳಬಹುದು! ಈ ಪುಸ್ತಕವನ್ನು ಕೊಂಡುಕೊಳ್ಳುವ ಪ್ರತಿ ಮನುಷ್ಯನೂ ಒಂದು ದಿವಸ ಒಳ್ಳೆ ವೈದ್ಯನೇ ಆಗುತ್ತಾನೆ. ಕ್ರಯ ಪುಸ್ತಕ [illegible]
ಒಪ್ಪೆ ವಿಳಾಸ — ಭಾರತಿ ಬುಕ್‌ಡಿಪೋ,
17—3 [illegible] ನಗರ್ತಪೇಟೆ, ಬೆಂಗಳೂರು ಸಿಟಿ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರ ಬ್ಯಾಂಕ್, ಲಿಮಿಟೆಡ್
ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

		ರೂ.
ಶೇರ್ ಒಡವಾಳ	....	50,000
ವಸೂಲಾದ ಶೇರ್ ಮೊಬಲಗು	....	7,720
ಒಪ್ಪೊಂದ ಠೇವಣಾತಿ	....	61,260

[illegible] ಇದ ಕೊಡಗು ದೇಶದ ಸಹಕಾರ ಸಂಘಗಳಿಗೇನೇ ಹುಣ [illegible] ಸಾಲಕೊಡತಕ್ಕದ್ದು.
ಒಂದು ವ [illegible] ಠೇವಣಿದಾರರಿಗೆ [illegible] ಸಾಲಿಯಾನ ರೂ. 6-4-೦ ದರದಲ್ಲಿ ಬಡ್ಡಿ ದೊರೆ [illegible] ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಕೆಳಗಿನ ಸಾಲಿಯಾನ ೫% ಬಡ್ಡಿ ದೊರೆಯುತ್ತೆ.
ವರ್ಷಕ್ಕೊಂದಾವರ್ತಿ ಕೊ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟುಮಾಡಿ ಮಾಡುತ್ತಾರೆ.
ಪ್ರೆಸಿಡೆಂಟರು. ಟ್ರೆಜರರ್.
ಕೊಡಂದೇರ ಕುಟ್ಟಯ್ಯನವರು, ಯಂ. ಭುಜಂಗರಾಯರು,
ರಾಯ್ ಬಹದ್ದೂರ್, ಎಂ. ಏ. ಎಲ್.
ಸೆಕ್ರೆಟರಿ.
ಸಿ. ಯಂ. ಪೊಣ್ಣಪ್ಪಯ್ಯನವರು, ಬಿ.ಎ. ಬಿ.ಎಲ್.
ತಾರೀಖು 1—7—1924.

SEE OUR

Arms And Ammunition Advertisement.

SPENCER & Co., Ltd.,
Mercara, and Pollibetta, Coorg [24—

ಜಿ. ಹೆಚ್. ಹೌಸ್. ಔಷಧಾಲಯ.

ಅಯ್ಯಾ,

ನಾನು ಸುಮಾರು ಹದಿನೈದು ವರುಷಗಳಿಂದ ಬಾಯಿಬಿಷ್ಟನಾಗಿ ದಿನೇ ದಿನೇ ಕೃಶವಾಗುತ್ತಾ ಒಂದು ಬರೇ ಮೂಳೆ ಪಂಜರವಾಗಿದ್ದು ಮೂರು ವರ್ಷಗಳಿಂದ ಮಲಗಿದಲ್ಲೇ ಆಗಿದ್ದು, ನಂತರ ಕೈ ಕಾಲು ಮೋರೆ ಊದಿ ಹೊಟ್ಟೆಯಲ್ಲು ನೀರು ಒಂದು [illegible] ವರೆಗೆ ಹತ್ತಿ ಉಸುರಾಡುವದಕ್ಕೂ ಒಹಳ ಕಷ್ಟಕ್ಕೆ ಒಂದು ಎಡದ ಮಗ್ಗುಲಿಸಲ್ಲಾಗಲೀ ಬಲದ ಮಗ್ಗುಲಿಸಲ್ಲಾಗಲೀ ಮಲಗಲಿಕ್ಕಾಗದೆ ಕಷ್ಟಪಡುತ್ತಿದ್ದು, ಇನ್ನು ಬದುಕಲಾರೆನೆಂಬದಾಗಿ ಪುಕಾರು ಹುಟ್ಟಿ ನನ್ನ ನೆಂಟರಿಷ್ಟರು ಒಂದುಸಾರಿ [illegible] ವೀರರಾಜಪೇಟೆ ಜಿ. ಹೆಚ್. ಹೌಸ್ ಆಯುರ್ವೇದೀಯ ಔಷಧಾಲಯದಿಂದ ಔಷದಿ ತೆಗೆದುಕೊಂಡರೆ ಖಂಡಿತವಾಗಿ ವಾಸಿಯಾಗುವದೆಂದು ಹೇಳಿದರು. ಕಡಿಯತ್ತುನಾಡು ನರಿಯಂದಡ ಗ್ರಾಮ ಕಾಫಿಪ್ಲಾಂಟರ್ ನನ್ನ ಬಾವ ಮ. ರಾ. ಶಂಕರನಾರಾಯಣಯ್ಯನವರು ನನಗೆ ಇದೇ ಮಾತನ್ನು ಒತ್ತಿ ಒತ್ತಿ ಹೇಳಿದರು. ಆಗ್ಯೆ ಅದನ್ನು ಅನುಮೋದಿಸಿ ಪ್ಲೀಡರ್ ಮ. ರಾ. ಹೆಚ್. ಸುಬ್ರಾಯರವರು ವತ್ತಾಯದಿಂದ ನನ್ನ ಈ ಪ್ರಾಣಾಂತ್ಯ ಕಷ್ಟಕ್ಕೋಸ್ಕರ ವೀರಾಜಪೇಟೆಗೆ ಹೋಗಿ ಸದರಿ ಔಷಧಾಲಯದಿಂದ ಚಿಕಿತ್ಸೆಹೊಂದುವದಾಗಿ ಏರ್ಪಾಡುಮಾಡಿ ಅವರ ಊರು ಕುಂದಾಪುರಕ್ಕೆ ಹೊರಟುಹೋದರು. ನಂತರ ಆಯುರ್ವೇದೀಯ ಪಂಡಿತರು ಮ. ಕೆ. ನಾರಾಯಣ ರಾಯರನ್ನು ಕರೆಸಿ ಪರೀಕ್ಷಿಸಿ ಅವರು ನನ್ನ ಈ ಬಾಯಿಲೆ ಖಂಡಿತವಾಗಿ ನಾನು ಗುಣಪಡಿಸ್ಯೇನೆಂತ ಪೂರ್ಣ ಭರವಸೆಕೊಟ್ಟು ತಕ್ಕ ಔಷಧಿಯನ್ನು ಕೊಟ್ಟು 8 ದಿನಗಳೊಳಗೆ ಉಸುರಾಡುವಂತೆ ಮಾಡಿದರು. ನಂತರ ನನಗೆ ಪೂರ್ಣ ಭರವಸೆ ಆದದ್ದರಮೇಲೆ ಎರಡೇ ಆರು ತಿಂಗಳು ಚಿಕಿತ್ಸೆಯನ್ನು ಹೊಂದಿ ಈವಾಗಪೂರ್ಣ ಗುಣಹೊಂದಿ ದೃಢಕಾಯನಾಗಿದ್ದೇನೆ. ತನ್ಮಧ್ಯೆ ನನ್ನ ಹಂಡತಿಗೂ ಸಣ್ಣ ಒಂದು [illegible] ಸಹ ಮೂರ್ಛೆಯಾಗುತ್ತಿದ್ದಳು. ಆ ಕಷ್ಟ ಸಹ ಅವರಿಂದಲೇ ಪರಿಹಾರವಾಗಿ ಸುಖವಾಗಿರುತ್ತಾಳೆ. ನನ್ನ ಸ್ನೇಹಿತರಿಂದ ನನ್ನ ಪ್ರಾಣವು ಉಳಿದಿತು. ಈವಾಗ ನನ್ನಿಂದ ಜನೋಪಕಾರವಾಗಲೀ ಎಂದು ನಿಮ್ಮ ಅಮೂಲ್ಯವಾದ ಪತ್ರಿಕೆಯಲ್ಲಿ ಪ್ರಕಟಿಸಿರುತ್ತೇನೆ. ಅಲ್ಲದೆ ಇವರಿಂದ ಬಡವರೇ ಸಾಧಿಸಿ ಔಷಧಿಯನ್ನು ಹೊಂದಿದರೆ ಎಂಥಾ ಹಳೇ ಕಾಯಿಲೆಯಾದರೂ ಖಂಡಿತವಾಗಿ ಗುಣವಾಗುತ್ತದೆ ಎಂದು ದೃಢವಾಗಿ ಹೇಳಬಲ್ಲೆನು. (ಓ) ಶ್ರೀದೇವರು ಪಂಡಿತ ನಾರಾಯಣರಾಯರವರಿಗೆ ಆಯುರಾರೋಗ್ಯ ಐಶ್ವರ್ಯ ಅಭಿವೃದ್ಧಿಯನ್ನು ಕೊಟ್ಟು ರಕ್ಷಿಸಲಿ ಎಂದು ಸದಾ ಪ್ರಾರ್ಥಿಸುತ್ತೇನೆ. ತಾರೀಕು. 18-8-24.

ಪಳಮುಡಿ, ಎನ್. ಎಸ್. ಸುಬ್ರಾಯ,
"ಪ್ರಕಟಣೆ". ಕಾಫಿ ಪ್ಲಾಂಟರ್.
[12-4]

ನೋಟೀಸ್.

"ಕೊಡಗು" ಪತ್ರಿಕೆಗೆ ಕಳುಹಿಸಬೇಕಾದ [illegible] ಬೇಕಾಗಿವೆ. ಚುನಾಯಿತರಾದವರು ಮೂರು ತಿಂಗಳು ಯಾ ಚನ್ನಾಗಿ ತರಬೇತಾಗುವವರೆಗೆ ತಮ್ಮ ಸ್ವಂತ ಖರ್ಚಿನಿಂದ ತರಬೇತಾಗಬೇಕಾಗಿದೆ. ಉಮೇದ್ವಾರರಾಗಿ ನಿಲ್ಲಬೇಕೆಂದು ಇಷ್ಟಪಡುವವರು ಈ ಕೆಳಗಿನವರಿಗೆ ಈ ತಾರೀಕು 20ರ ಒಳಗೆ ಬರೆಕೊಳ್ಳಬೇಕು.

ಮಡಿಕೇರಿ,
ತಾ|| 8-9-24. ಮ್ಯಾನೇಜರ, 'ಕೊಡಗು'.

"LAY BY FOR A RAINY DAY".

"ಕಷ್ಟ ಕಾಲಕ್ಕೆ ಕೂಡಿಡು" ಎಂಬ ತತ್ವವನ್ನು ಈ ಭಾರತಭೂಮಿಯಲ್ಲಿರುವ ಭಾರತೀಯರೆಲ್ಲರೂ ಅನುಸರಿಸಿ ನಡೆಯುತ್ತಾರೆ. ಹೀಗೆ ಕೂಡಿಟ್ಟ ದ್ರವ್ಯವನ್ನು ಭಾರತಭೂಮಿಯಲ್ಲಿ ಭಾರತೀಯರ ಅಧಿಕಾರಕ್ಕೊಳಪಟ್ಟು ಭಾರತೀಯರಿಂದಲೇ ನಡೆಸಲ್ಪಡತಕ್ಕ ಜಾಂಯಿಂಟ್ ಸ್ಟಾಕ್ ಸಂಘದಲ್ಲಿ ಯಾತಕ್ಕಾಗಿ ಸ್ಥಾಪಿಸ ಬಾರದು? ಇದರಿಂದ ಸಂಪಾದನೆಯೂ ಆಗುವದು, ಮತ್ತು ಹಣವೆಲ್ಲವೂ ಪರದೇಶಕ್ಕೆ ಹೋಗದೆ ನಮ್ಮ ದೇಶದಲ್ಲಿಯೇ ನಿಲ್ಲುವದು. ಇದನ್ನು ಹೆಚ್ಚು ತಿಳಿದವರು ಕೊಂಚ ಯೋಚಿಸಬೇಕು.

ಕ್ಯಾಂಪ್,— ಪಿ. ಪಿ. ಮಣ್ಣಯ್ಯ,
ಕಲ್ಲೂರು [illegible], ಭಾರತ ಇನ್ಶೂರೆನ್ಸ್ ಏಜಂಟ್,
ಪೊನ್ನಂಪೇಟೆ. ಕೊಡಗು ಮತ್ತು ಮೈಸೂರು ಡಿಸ್ಟ್ರಿಕ್ಟ್ ಸೂಪರಿಂಟೆಂಡೆಂಟ್,
[2—11] ಬೆಂಗಳೂರು.

ARMS & AMMUNITION MART

Mahomedally-Noorbhoy

337, Abdul Rehman, Street, near
Crawford Market, BOMBAY.
Telegraphic Address:- "SHOOTER
Bombay.
[24 -4] Please write for latest Catalogue

ಸಂಪತ್ತಿಯ ಸಾಧನಗಳು.

ಅಯ್ಯಾ ಬಂಧುಗಳೇ ಸಂಪತ್ತಿಯು ಅನ್ಯರ ಚಾಕರಿಯಲ್ಲಿರದೆ ನಿಮ್ಮ ಭೂಮಿಯಲ್ಲಿಯೇ ಅಡಗಿರುವದು ಅದನ್ನು ಶೋಧಿಸಿ ತೆಗೆಯಲು ಕಿರ್ಲೋಸ್ಕರ ವ್ಯವಸಾಯ ಮುಟ್ಟುಗಳು ಯೋಗ್ಯವಾದ ಸಾಧನಗಳು.
ಬಹಳ ಕಾಲದ ರೈತರು ಹೂಡಿ ಅನುಭವ ತೆಗೆದುಕೊಂಡಿರುವರು. ಭೂಮಿಯ ತಕ್ಕ ತರತರದ ನೇಗಿಲುಗಳೂ ನಾನಾ ಕೂ ದೊರೆಯುತ್ತವೆ. ಕಿಸಾನ ನಾಣವು ಒಂದು ಗಂಟೆ ೪೦೦ ಪೌಂಡು ಕಬ್ಬನ್ನು ಹಿಂಡಿ ಹಲ್ಲುತ್ತದೆ.
"ಕೊ" ಎಂಬ ಕ್ಯಾಟಲಾಗನ್ನು ತರಿಸಿಕೊಳ್ಳಿರಿ,
ಕಿರ್ಲೋಸ್ಕರ ಬಂಧು ಲಿಮಿಟೆಡ್,
[16 14] ಕಿರ್ಲೋಸ್ಕರವಾಡಿ, ಜಿಲ್ಲಾ ಸಾತಾರಾ.

Health is Wealth.

WANTED all to improve healt strength and vitality and thus save ou nation from physical degeneracy. Sen half-anna stamp and get 25 specime photographs with full particulars from
Director, Physical Culture,
P. O. BASAVANAGUDI,
Bangalore City.

For your requirements of high grade Arms, Ammunition, Wine and spirits.
APPLY TO—
Mc. Dowell & Co., Ltd.
[24—23] MERCAR

WANTED—ಬೇಕಾಗಿದೆ

ಈ ಸಂಸ್ಥೆಯಲ್ಲಿ 50 ಮಂದಿ ಟ್ರಾವೆಲಿಂಗ್ ಪ್ರತಿನಿಧಿಗಳು [illegible] ಬೇಕಾಗಿದೆ. [illegible] ತಿಳಿದವರಿಗೆ ತಿಂಗಳು ಒಂದರ 50 ರೂಪಾಯಿ ನಿಂದ 100 ರೂಪಾಯಿವರೆಗೆ ಸಂಪಾದಿಸಬಹುದು. ಅಪೇಕ್ಷೆ ಉಳ್ಳವರು ಈ ಕೆಳಗಿನ ವಿಳಾಸಕ್ಕೆ ಒಂದು ಆಣೆ ಸ್ಟಾಂಪು ಇಟ್ಟು ಬರೆದ ಅರ್ಜಿಯರು 30ದಿನಗಳ ಇಂಗ್ಲೀಷಿನಲ್ಲಿ ಬರೆಕೊಂಡು ಹೆಚ್ಚಿನ ಸಂಗತಿ ತಿಳಿಸಲಾಗುತ್ತೆ.
ವಿಳಾಸ — ಮ್ಯಾನೇಜರ್, ಎಸ್. ವಿ. ಮಡಿಕೆ ಹಾಲ್, ಬಿಲಕಾತ್ರಿ, ಪೋ. ಆ. ಪಟ್ಟಾ ದಾಭೋಳ, ದಕ್ಷಿಣ ಮುಂಬಯಿ, ದಕ್ಷಿ
6—2 ಹಿಂದುಸ್ಥಾನ.

Printed & published by Kodan Appayya, R.B., Chairman, Board Directors, at "Kodagu" Press, Merca for "Kodagu" Ltd.

Reg. No. M. 1550.
If not delivered please return to
"KODAGU" OFFICE, MERCARA.

ಕೊಡಗು.

ಮುಂಗಡ ಚಂದಾ ರೂ. 4—8—0

ಶ್ರೀನ ಪೊರೆಯುವ ವಿದ್ಯಾಸ್ತಿ ಪ್ರಿಯ || ಐಕ್ಯಮತ್ಯೇನ ದೇವಾನಾಂ ಸುಸ್ಥಿರಾ ರಾಜ್ಯ ಸಂಪದಾ ||

ಎಡಿಟರ್ ಹಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೪] ಕೊಡಗು, ಸ. ೧೯೨೪ನೇ ಇಸವಿ ಸೆಪ್ಟೆಂಬರ್ ತಾರೀಕು ೨೬ನೆಯ ಶುಕ್ರವಾರ [ಸಂಖ್ಯೆ ೧೭

ಆರೋಗ್ಯ ಚಂದ್ರಿಕೆ.

ಮದ್ರಾಸ್.

ಸಂಪಾದಕರು ಡಾಕ್ಟರ್ ಯು ರಾಮರಾವ್,
ಎಂ. ಎಲ್ ಸಿ. ಯವರು

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಚಿಕಿತ್ಸೆಯ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ. ಈ ಮಾಸಪತ್ರಿಕೆಯು 'ಹೆಲ್ತ್' ಎಂಬ ಇಂಗ್ಲಿಷ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ. ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಗೆ ಪ್ರಕಟವಾಗುವವು.

ಆರೋಗ್ಯ ಚಂದ್ರಿಕೆಯಲ್ಲಿರುವ ಲೇಖನಗಳು ಹಳೆಯದಾಗದೆ ಪುನಃ ಪುನಃ ಓದಲು ಅರ್ಹವಾದವುಗಳಾಗಿರುವವು. ಆರೋಗ್ಯ ಚಂದ್ರಿಕೆಯನ್ನು ಶೇಖರಿಸಿ ಬೈಂಡ್ ಮಾಡಿಸಿ ಇಟ್ಟುಕೊಂಡರೆ ಎಲ್ಲರಿಗೂ ಉಪಯುಕ್ತವಾಗುವ ಅಮೂಲ್ಯವಾದ ಗ್ರಂಥವಾಗುವದು. ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮುಂಗಡ ವರ್ಷಕ್ಕೆ 1-8-0. ಬಿಡಿ ಪತ್ರಿಕೆ 1ಕ್ಕೆ 0-2-0 ಹಿಂದಿನ ಸಂಚಿಕೆಗಳು ಕೂಡಾ ದೊರೆಯುವವು.

ಪತ್ರವ್ಯವಹಾರಕ್ಕೆ 'ಆರೋಗ್ಯ ಚಂದ್ರಿಕೆ' 323,
ತಂಬುಚೆಟ್ಟಿ ಬೀದಿ, ಮದ್ರಾಸ್.

ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿಯ ಜೀವವಿಮೆಯ ಕಂಪೆನಿ, ಲಿಮಿಟೆಡ್.

ಹೆಡ್ ಆಫೀಸು, ಬೊಂಬಾಯಿ.

ಹಿಂದುಸ್ಥಾನದಲ್ಲಿ ಕಳೆದ 50 ವರ್ಷಗಳಿಂದಲೂ ಜೀವವಿಮೆಯ ಅನುಭವವನ್ನು ಪಡೆದಿರುವ ದೇಶೀಯ ಜೀವವಿಮೆ ಸಂಘಗಳಲ್ಲಿ ಅತ್ಯಂತ ದೊಡ್ಡದೂ ಮತ್ತು ಭದ್ರವಾದದ್ದೂ ಆದ "ಓರಿಯಂಟಲಿನ" ಜೀವವಿಮೆ ಪತ್ರಕ್ಕಿಂತಲೂ ಉತ್ತಮವಾದ ಪತ್ರ ಬೇರೆ ದೊರೆಯಲಾರದು.

ಈಗಾಗಲೇ ವಿಮೆ ಸಂದಾಯವಾಗಿರುವುದು	9,00,00,000
ಕೈಯಲ್ಲಿ ಮೊದಲೇ ಒದಗಿಸಲ್ಪಟ್ಟ ತಗಾದೆ [illegible]	
ಕಟ್ಟು ಸಂದಾಯಿಸಲಿಕ್ಕೆ [illegible]	
ಹಣ	5,00,00,000
ವಾರ್ಷಿಕ ಉತ್ಪತ್ತಿ	1,00,00,000

ಇಷ್ಟು ಭದ್ರತೆಯುಳ್ಳ [illegible] ತೆಗೆದುಕೊಳ್ಳಲಿಕ್ಕೆ ಪಡೆಯಲು [illegible] ಸಂಗತಿ ತಿಳಿಯಬೇಕೆಂದಿರು [illegible] ಗೆ ಬರೆದುಕೊಳ್ಳುವದು.

ಕೆ. ಶಿ. [illegible] ಪವರು,
ಓರಿಯಂಟಲ್ ಏಜನ್ಸೀ ಆಫೀಸು,
24—16 ವೀರಾಜಪೇಟೆ, ದಕ್ಷಿಣ ಕೊಡಗು.

"ಕೊಡಗು"

ರಾಜಕೀಯ, ವಿದ್ಯಾ, ಕೃಷಿ, ವೃತ್ತಿ ವಿಜ್ಞಾನ, ಮತ್ತು ನೀತಿ ಮುಂತಾದ ವಿಷಯಗಳಿಂದೊಡಗೂಡಿದ ಕೊಡಗಿನ ವಾರ ಪತ್ರಿಕೆ.

1. ಪ್ರಕಟಣೆಗಳನ್ನು ಮೇನೇಜರ್ "ಕೊಡಗು" ಮಡಿಕೇರಿ, ಈ ವಿಳಾಸಕ್ಕೆ ಕಳುಹಿಸಬೇಕು. 2 ಲೇಖನಗಳನ್ನು ಸಂಪಾದಕರು "ಕೊಡಗು" ಮಡಿಕೇರಿ, ಈ ವಿಳಾಸಕ್ಕೆ ಕಳುಹಿಸಬೇಕು. 3. ವಾರ್ತೆದಾರರ ಅಭಿಪ್ರಾಯಕ್ಕೆ ಕೊಡಗು ಪತ್ರಿಕಾಕರ್ತರು ಬಾಧ್ಯರಲ್ಲ. 4. ನಮ್ಮಲ್ಲಿಗೆ ಕಳುಹಿಸುವ ವಾರ್ತೆಗಳು ಕಾಗದದ ಒಂದೇ ಕಡೆಯೂ, ಸ್ಪಷ್ಟವಾಗಿಯೂ, ಹೆಸರು ವಿಳಾಸಗಳಿಂದ ಕೂಡಿಯೂ, ಬರೆಯಲ್ಪಟ್ಟಿರಬೇಕು. ಸ್ವೀಕೃತ ದೊರೆತಂತೆಲ್ಲಾ ಆ ಪತ್ರಗಳು ಪ್ರಕಟಿಸಲ್ಪಡುವವು. 5. ಪ್ರಕಟವಾಗದ ವಾರ್ತೆಗಳನ್ನು ಮರಳಿ ಕಳುಹಿಸುವ ಬಾಧ್ಯತೆಯನ್ನು ಸಂಪಾದಕರು ವಹಿಸಿಕೊಳ್ಳುವದಿಲ್ಲ.

ಪ್ರಕಟಣೆಗಳು.

ಅತ್ಯಂತ ಸುಲಭವಾಗಿ ಹಾಕಲ್ಪಡುತ್ತವೆ. ಹೆಚ್ಚಿನ ಸಂಗತಿಗೆ ಮೇನೇಜರಿಗೆ ಬರೆದು ತಿಳಿದುಕೊಳ್ಳಬಹುದು.

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ.

McDOWELL & Co., Ltd.,

MERCARA.

THE OLDEST ESTABLISHED FIRM IN COORG.

Great reduction in prices of the best Arms and Ammunitions

FRESH STOCK! FINEST QUALITY!! LOWEST PRICES!!!

Buy your requirements from the Firm you know.

				RS.	A.	P.
D. B. L. guns by Smiths of Birmingham each				165	0	0
D. M. L. guns	"	"	...	85	0	0
S. M. L. guns	"	"	...	65	0	0
12 bore cartridges No 3, 4, 6 & 8	per 100		...	14	8	0
Do.	A & B	"	...	16	0	0
Do.	S.G & S.S.G.	"	...	18	12	0
Do.	Destructor	"	...	36	8	0
Gunpowder F F ¼ lb. flask			..	1	0	0
Ca[illegible]	per 1000		..	5	4	0
Ca[illegible]	ten for		...	0	1	0
Shot of all grades	per lb.		..	0	10	0
S. G. shot	per lb.		..	0	12	0
Cleaning implements set. 12, 16, & 20 bore			...	18	0	0 per set.

ಬಹಳ ಅಗ್ಗ! ಬಹಳ ಅಗ್ಗ!!

[illegible] ನುಗಳು! [illegible]! ಕೊಂಡುಕೊಳ್ಳಿರಿ!!!

[illegible] ಮತ್ತು [illegible] ಲಿಮಿಟೆಡ್, ಮಡಿಕೇರಿ.

[illegible]

ಈ ಸಮಯ [illegible] ಕಳಕಬ [illegible]

ಡಿ. ಬಿ. ಎಲ್ ಕೋವಿ ಸ್ಮಿತ್ ಕಂಪೆನಿ, ಬರ್ಮಿಂಗ್ಹೇಮ್			165	0	0	ಒಂದಕ್ಕೆ
ಡಿ. ಎಮ್ ಎಲ್	ಡಿಟೋ		85	0	0	"
ಎಸ್.	ಡಿಟೋ		65	0	0	"
12ನೇ ಬೋರ್ (ಬಾರ್) ಕೋಟೆಗಳು, ನಂ. 3, 4, 6 ಮತ್ತು 8			14	8	0	ನೂರಕ್ಕೆ.
ಡಿಟೋ.	ಡಿಟೋ	ಎ ಮತ್ತು ಬಿ	16	0	0	"
ಡಿಟೋ	ಡಿಟೋ	ಶಕ್ತಿಯ	18	12	0	"
ಡಿಟೋ	ಡಿಟೋ	ಡಿಸ್ಟ್ರಕ್ಟರ್	36	8	0	"
ಕೋವಿ ಮದ್ದು, ಎಫ್. ಎಫ್. ಕಾಲು ಪೌಂಡು ಡಬ್ಬಿ 1ಕ್ಕೆ			1	0	0	
ಕೇಪುಗಳು		.... ಸಾವಿರಕ್ಕೆ	5	4	0	
ಕೇಪುಗಳು		.... ಹತ್ತಕ್ಕೆ	0	1	0	
ಚಿಲ್ಲುಗಳು ಎಲ್ಲಾ ತರವನ್ನು		.... ಪೌಂಡಿಗೆ	0	10	0	
ಶಕ್ತಿಕಲ್ಲುಗಳು	"	....	0	12	0	
ಕೋವಿ ಶುಚಿ ಸಾಮಾನುಗಳ ಜೊತೆ. 12, 16 ಮತ್ತು 20ನೇ ಬೋರು		ಜೊತೆಗೆ	18	0	0	

—3

"ಕೊಡಗು"

ಸ೦ ೧೯೨೪ನೇ ಇಸವಿ ಸೆಪ್ಟೆಂಬರ್ ತಾ|| ೨೬ನೇ ಶುಕ್ರವಾರ.

ಕೌನ್ಸಿಲಿನ ಕಳೆದ ಬಜೆಟ್ ಚರ್ಚೆ.

ನಮ್ಮ ದೇಶದ 1924—25ನೇ ವರ್ಷದ ಆದಾಯ ವೆಚ್ಚದ ಮೇಲೆ ಕಳೆದ ಮಾರ್ಚ ತಿಂಗಳಲ್ಲಿ ನಡೆದ ಚರ್ಚೆಯ ಮೇಲೆ ಚೀಫ್ ಕಮೀಷನರ ಅಭಿಪ್ರಾಯಗಳು ಈಗ ತಾನೇ ಕೌನ್ಸಿಲ್ ಮೆಂಬರುಗಳ ಕೈಗೆ ಸಿಕ್ಕಿದೆ. ಬಜೆಟಿನ ಮೇಲೆ 19 ಠರಾವುಗಳು ಪಾಸಾಗಿದ್ದವು. ಅವುಗಳ ಪೈಕಿ ಕೆಲವು ಠರಾವುಗಳ ವಿಷಯವನ್ನು ಫೈನಾನ್ಸ್ ಮೆಂಬರಾದ ಕಮೀಷನರು [illegible] ಸನ್ನಿವೇಶಾಂತ ವ್ಯಾಖ್ಯಾನ ಕೊಟ್ಟದ್ದರಿಂದ ಆ ಠರಾವು [illegible] ಮೆಂಬರುಗಳು ವಾಪಸು ತೆಗೆದುಕೊಂಡರು. ಕೌನ್ಸಿಲಿನ್ನ [illegible] ಠರಾವುಗಳಿಂದಲೇ [illegible] ಪ್ರಯೋಜನ ಆಗುವುದಿಲ್ಲ. ಅನೇಕ ವಿಷಯಗಳ ಮೇಲೆ ತಪ್ಪು ತಿಳುವಳಿಕೆಯಿಂದ ಸರಕಾರದ ಗಮನವು ಅಂಥಾ ಠರಾವುಗಳ ಕಡೆಗೆ [illegible] ಪ್ರಯೋಜನವಾಗುತ್ತದೆ. ನಮ್ಮ ಕೌನ್ಸಿಲಿನಲ್ಲಿ ವಾಪಸು ತೆಗೆದುಕೊಳ್ಳಲ್ಪಟ್ಟ ಠರಾವುಗಳಿಂದ ಕೆಲವು ಹಿಟ್ಟಿಗಾದರೂ ಇಂಥಾ ಪ್ರಯೋಜನವುಂಟೆ? ಫೈನಾನ್ಸ್ ಮೆಂಬರು ಕೊಟ್ಟ ವ್ಯಾಖ್ಯಾನದಂತೆ ತಿಳಿದು ನಡೆಯುದರೋ ನಡಿಸಿದ್ದರೆ ಫಲಿತಾಂಶವೇನಾಗದೆ [illegible], ಅವ್ವ [illegible] ಬಜೆಟ್ಟಿಗೆ [illegible] ಕೌನ್ಸಿಲಿಗೆ ಆ ಮೂಲಕ ದೇಶಕ್ಕೆ ತಿಳಿಸಬೇಕಾದದ್ದು ಸರಕಾರದ ಕರ್ತವ್ಯವಾಗಿತ್ತು. ಮೆಂಬರುಗಳಿಗೆ ಈಗ ದೊರತ ಬಜೆಟ್ಟಿನಿಂದ ಈ ಸಂಗತಿಗಳೇನೂ ತಿಳಿಯುವದಿಲ್ಲ. ಈಗಿನ ಕೌನ್ಸಿಲ್ ಕೂಟದ ಕಾರ್ಯಪ್ರವೃತ್ತಿಯನ್ನು ನೋಡಿದರೂ ಫೈನಾನ್ಸ್ ಮೆಂಬರು ಕೌನ್ಸಿಲಿಗೆ ತನ್ನ ತನಿಖೆಯ ಫಲಿತಾಂಶವನ್ನು ತಿಳಿಸುವಂತೆ ಕಾಣುವದಿಲ್ಲ. ಇದು ವಿಷಾದಕರವೇ.

ಮಂಜೂರಾದ ಮೂರು ಠರಾವುಗಳಲ್ಲಿ ಒಂದರ ಅರ್ಥ ಮಾತ್ರ ಮಂಜೂರ್ ಮಾಡಲ್ಪಟ್ಟಿದೆ. ಎಕ್ಸೈಸ್ ಇಲಾಖೆಯ ಉತ್ಪತ್ತಿಯಲ್ಲಿ ಒಂದುನೂರು ರೂಪಾಯಿ ಕಡಿಮೆ ಮಾಡಬೇಕೆಂಬ ಠರಾವು ಮಂಜೂರಾಯಿತು. ಈ ಠರಾವನ್ನು ಜಾರಿಗೆ ತರಬೇಕಾದರೆ ಬಜೆಟ್ಟಿನ ಬಾಬುವಾರು ಸಂಖ್ಯೆಗಳನ್ನೆಲ್ಲಾ [illegible] ಮಾಡಬೇಕಾಗುವದರಿಂದ ಆ ಠರಾವನ್ನು ಜಾರಿಗೆ [illegible] ಚೀಫ್ ಕಮೀಷನರು ಬರೆಯುತ್ತಾರೆ. ಆ ಠರಾವಿನ [illegible] ಚೀಫ್ ಕಮೀಷನರಿಗೆ ಅದೇ ಮೇಲಿನ [illegible] ಠರಾವನ್ನು ಕೌನ್ಸಿಲ್ ಮೆಂಬರು [illegible] ಉತ್ಪತ್ತಿಯನ್ನು ಒಂದುನೂರು ರೂಪಾಯಿ [illegible] ಉದ್ದೇಶವಲ್ಲ. ಸಿಹಾ ಸೇವನೆಯನ್ನು ದೇಶದಿಂದ ಹೋಗಲಾಡಿಸಬೇಕೆಂಬ ಉದ್ದೇಶವನ್ನು ಸರಕಾರಕ್ಕೆ ತಿಳಿಸುವ ಉದ್ದೇಶದಿಂದ ಒಂದು ನೂರು ರೂಪಾಯಿಗಳನ್ನು ಉತ್ಪತ್ತಿಯಿಂದ ಕಡಿಮೆ ಮಾಡಬೇಕೆಂತ ಠರಾವು ಮಂಜೂರ ಆದದ್ದಾಗಿದೆ. ಆ ವರ್ಷದ ಬಜೆಟ್ಟಿನಲ್ಲಿ ಒಂದುನೂರು ರೂಪಾಯಿ ಕಡಿಮೆ ಮಾಡಿದ್ದರಿಂದ ಚೀಫ್ ಕಮೀಷನರ ವಿವರಣೆ ಏನೂ ಬೇಕಾಗಲಿಲ್ಲ. ಪ್ರಜಾ ಪ್ರತಿನಿಧಿಗಳು ದೇಶದ ಕುಡುಕತನವನ್ನು ಕಡಿಮೆ ಮಾಡಬೇಕೆಂತ ಮಾಡಿರುವ ನಿಶ್ಚಯಕ್ಕೆ ಸರಕಾರವು ಒಪ್ಪುವಂತೆಯೂ ಮುಂದಿನ ವರ್ಷದ ಬಜೆಟ್ಟಿನಲ್ಲಿ ಸಾವಿರಾರು ರೂಪಾಯಿ ಉತ್ಪತ್ತಿ ಕಡಿಮೆಯಾದರೂ ಕುಡುಕತನವನ್ನು ಕಡಿಮೆ ಮಾಡುವ ಬಗ್ಗೆ ಅಂಗಡಿಗಳ ಸಂಖ್ಯೆಯನ್ನು ಕಡಿಮೆ ಮಾಡುತ್ತೇವೆಂತಾಗಲೀ ಸೇಂದಿ ನಾಡಾಯಿ ಅಂಗಡಿಗಳನ್ನು ತೆರೆದಿರುವ ಸಮಯವನ್ನು ಕಡಿಮೆ ಮಾಡುತ್ತೇವೆಂತಾಗಲೀ ಚೀಫ್ ಕಮೀಷನರು ಹೇಳಬಹುದಿತ್ತು. ಹೀಗೆ ಹೇಳಿದೆ ಇರುವದರಿಂದ ದೇಶದ ಕುಡುಕತನವನ್ನು ಕಡಿಮೆ ಮಾಡುವ ಉದ್ದೇಶವು ಸರಕಾರಕ್ಕೆ ಇಲ್ಲವೆಂತಲೇ ಆಯಿತು. ಕೌನ್ಸಿಲಿನಲ್ಲಿ ಪಾಸಾದ ಮೂರನೇ ಠರಾವಿಗೆ ಸರಕಾರದ ನಿರಾಕರಣೆಯೇ ಸಿಕ್ಕಿತು.

[illegible] ಇಲಾಖೆಯ ಖರ್ಚಿನಲ್ಲಿ ಕಡಿಮೆ [illegible] ಹತ್ತು ಸಾವಿರ ರೂಪಾಯಿ ಆದರೂ ಕಡಿಮೆ ಮಾಡಬೇಕೆಂತ ಕೌನ್ಸಿಲಿನಲ್ಲಿ ಠರಾವು ಮಂಜೂರಾಯಿತು. ಇಷ್ಟು ಖರ್ಚು ಕಡಿಮೆ ಮಾಡುವದಕ್ಕೆ [illegible] ಉಪಯೋಗಿಸಿದ್ದ ಅಡ್ಡಿಯೂ [illegible] 5,700 ರೂಪಾಯಿ ಮಾತ್ರ ಕಡಿಮೆ ಮಾಡಲಾಗಿದೆ ಎಂತ ಚೀಫ್ ಕಮೀಷನರು ಬರೆದಿದ್ದಾರೆ. 4,50,000 ರೂಪಾಯಿ ಖರ್ಚು ಮಾಡುವ ಇಲಾಖೆಯಲ್ಲಿ ಹತ್ತು ಸಾವಿರ ರೂಪಾಯಿ ಕಡಿತ ಮಾಡಲಿಕ್ಕಾಗಲಿಲ್ಲವೆಂತ ಹೇಳುವದರಲ್ಲಿ ಅರ್ಥವೇನಿದೆ? ಈ ಮುಳುಗಿರುವ ನಷ್ಟಗಳು ತೀರಿದ ಮೇಲೆ ನಷ ಟ್ರಾಕ್ಟರನ್ನು ಉಪಯೋಗಿಸುವ ಸಂಭವನೀಯವಾದರೂ [illegible] ಇಂಜನೀಯರು [illegible] ಪ್ರಯೋಜನದ ಮನ್ನ [illegible] ಪ್ರಯೋಜನದ ಖರ್ಚುಗಳನ್ನು [illegible] ಟ್ರಾಕ್ಟರ ಕೆಲಸಕ್ಕೆ ಬೇಕಾದ ಹಣ ಮೂರಿ [illegible] ಕೌನ್ಸಿಲಿನ ಕೆಲಸವನ್ನು [illegible]

ದಿಂದಲೂ, ಬುದ್ಧಿವಂತಿಕೆಯಿಂದಲೂ ನಡಿಸಿದರೆಂತ ಹೊಗಳಿದ ಚೀಫ್ ಕಮೀಷನರೇ ಕೌನ್ಸಿಲಿನ ಮತವನ್ನು ಏನೂ ತೃಪ್ತಿಯಿಲ್ಲದೆ ಅಂಗೀಕರಿಸ ಬಹುದಾಗಿದ್ದ ಈ ಸಂದರ್ಭದಲ್ಲಿ ನಿರಾಕರಿಸಿದ್ದು ನೋಡಿದರೆ ಕೌನ್ಸಿಲಿನ ಅಭಿಪ್ರಾಯಕ್ಕೆ ಎಳ್ಳಷ್ಟು ಬೆಲೆ ಕೊಡುವದಿಲ್ಲವೆಂಬದು ಸಿದ್ಧವಾಯಿತು. ಚೀಫ್ ಕಮೀಷನರ ಸ್ವಂತ ಅಭಿಪ್ರಾಯಕ್ಕೆ ಯುಕ್ತ ತೋರಿದರೆ ಕೌನ್ಸಿಲಿನ ಅಭಿಪ್ರಾಯವನ್ನು ಕೂಡ್ಲು. ಹೀಗಿಂತ ಕಡೆಯಾಗಿ ಎಣಿಸುತ್ತಾರೆಂಬದ ಪ್ರತ್ಯಕ್ಷವಾಯಿತು.

ವಿದ್ಯಾ ಇಲಾಖೆಯಲ್ಲಿ ಮಡಿಕೇರಿ ಕಾನ್ವೆಂಟ್ ಸ್ಕೂಲಿನ ಹೈಸ್ಕೂಲ್ ಕ್ಲಾಸುಗಳಿಗೆ ಕೊಡುವ 3,500 ರೂಪಾಯಿ ಗ್ರಾಂಟನ್ನು ನಿಲ್ಲಿಸಬೇಕೆಂಬ ಠರಾವು ಮಂಜೂರಾದದ್ದಕ್ಕೆ ಅರ್ಧ ಚಂದ್ರ ಪ್ರಯೋಗವೇ ಆಗಿದೆ. ಗವರ್ನ್‌ಮೆಂಟ್ ಆಫ್ ಇಂಡಿಯಾದಿಂದ ಮಂಜೂರಾಗಿ ಹೋದ ಖರ್ಚನ್ನು ನಿಲ್ಲಿಸಲಿಕ್ಕಾಗುವದಿಲ್ಲವೆಂತಲೂ ಆ ವಿದ್ಯಾ ಇಲಾಖೆಗೆ ವಿಶ್ವಾಸಘಾತಕ ಮಾಡಿದಂತಾಗುತ್ತದೆ ಎಂತಲೂ ಆದ್ದರಿಂದ ಆ ಖರ್ಚನ್ನು ವಜಾಮಾಡಲಿಲ್ಲವೆಂತ ಬರೆದಿದ್ದಾರೆ. ಈ ವರೆಗೆ ನಮ್ಮ ಸರಕಾರದ ಆದಾಯ ವೆಚ್ಚವು ಪೂರ್ತಿ ಇಂಡಿಯಾ ಸರಕಾರಕ್ಕೆ ಒಳಪಟ್ಟಿದ್ದದ್ದರಿಂದ ಇಂಡಿಯಾ ಸರಕಾರದ ಅನುಮತಿ ಇಲ್ಲದ ಖರ್ಚು ಯಾವದೂ ಇರಲಾರದೆಂತ ನಮಗೆ ತೋರುತ್ತದೆ. ಅಲ್ಲದ [illegible] ಕಡಿಮೆ ಮಾಡಿದರೂ ಆ ಇಲಾಖೆಗೆ ವಿಶ್ವಾಸಘಾತಕ ಮಾಡಿದಂತಾಗುವದಿಲ್ಲವೇ? ಆದ್ದರಿಂದ ಕೌನ್ಸಿಲಿನ ಅಭಿಪ್ರಾಯವನ್ನು ನಿರಾಕರಿಸಲಿಕ್ಕೆ ಚೀಫ್ ಕಮೀಷನರಿಗೆ ಕಾರಣಗಳು [illegible] ವೇನೂ ಇಲ್ಲ. ಈ ರೀತಿ ಕೌನ್ಸಿಲಿನಲ್ಲಿ ಮಂಜೂರಾದ ಠರಾವುಗಳನ್ನು ತಕ್ಕ ಕಾರಣಗಳಿಲ್ಲದೆ ನಿರಾಕರಿಸುತ್ತಾ ಬಂದರೆ ಕೌನ್ಸಿಲಿನಿಂದ ಪ್ರಯೋಜನ ಹೊಂದ ಬಯಸುವ [illegible] ಆಶೆಯು ನಿರಾಶೆಯಾಗಿ ಬಿಟ್ಟು ಅಸಮಾಧಾನ ಬಳೆಯುತ್ತಾ ಬಂದು ಶಾಂತಿಯೇ ಹಾಳಾಗಿ ಅರಾಜಕತ್ವ ನಡೆಯುತ್ತಿದೆ ಎಂಬದು ಪ್ರಜೆಗಳಿಗೆ ಪ್ರತ್ಯಕ್ಷವಾಗುತ್ತ.

ಲೀ ಕಮಿಶನ್.

ಈ ವಿಷಯ ನಾವು ಹೋದಲೇ ಬಾರಿ ಬರೆದಿರುವೆವು. ರಿಪೋರ್ಟಿನ ಅಭಿಪ್ರಾಯಗಳನ್ನು ತಕ್ಷಣವೇ ಜಾರಿಗೆ ತಂದು ಬಿಡಬೇಕೆಂತಲೂ, 1924ನೇ ಇಸವಿ ಏಪ್ರಿಲ್ ತಿಂಗಳಿನಿಂದಲೇ ರಿಪೋರ್ಟಿನಲ್ಲಿ ಹೇಳುವ ಹೆಚ್ಚಿನ ಸಂಬಳ ಮುಂತಾದ ರಿಯಾಯಿತಿಗಳನ್ನು ಕೊಟ್ಟು ಬಿಡಬೇಕೆಂತಲೂ ರಿಪೋರ್ಟಿನಲ್ಲಿ ಬರೆದಿತ್ತು. ಅದರಂತೆ ಇಂಗ್ಲೆಂಡಿನಲ್ಲಿ ಈಗ ಕೂಲಿಕಾರರ ಪಕ್ಷದ ಸರಕಾರವಿರ ವದರಿಂದ ಹಿಂದುಸ್ಥಾನದ ನ್ಯಾಯ ವಿಧಾಯಕ ಸಭೆಗಳ ಅಭಿಪ್ರಾಯ ತಿಳಿದುಕೊಂಡು ತಮ್ಮ ಅಭಿಪ್ರಾಯವನ್ನು ಕೊಡುವದಂತ ಹೇಳಿದರು. ಲೆಜಿಸ್ಲೇಟಿವ್ ಎಸೆಂಬ್ಲಿಯಲ್ಲಿ ಈ ವಿಷಯದ ಚರ್ಚೆಯು ಇದೇ ತಿಂಗಳು 11, 12ರಲ್ಲಿ ನಡೆದ ತಿರ್ಮಾನವು ಪೂರ್ತಿ ಆಶ್ಚರ್ಯಕರವಾಯಿತು. ಕೌನ್ಸಿಲ್ ಆಫ್ ಸ್ಟೇಟ್ [illegible] ಸಭೆಯಲ್ಲಿ ಮಂಜೂರಾಯಿತು. ಸರಕಾರದವರು [illegible] ಆದರೆ ಪ್ರಜೆಗಳ ಮತದ ಪ್ರತಿನಿಧಿಗಳಾದ ಎಸೆಂಬ್ಲಿಯ ತೀರ್ಮಾನವೇ ದೇಶಕ್ಕೆ ಸಮ್ಮತವಾಗಿದೆ. ಈ ಸಭೆಯ ತೀರ್ಮಾನಕ್ಕೆ ವಿರೋಧವಾಗಿ ರಿಪೋರ್ಟನ್ನು ಜಾರಿಗೆ ತಂದರೆ ಸರಕಾರ ಸದ್ಯದಲ್ಲಿ ದೇಶಕ್ಕೆ ಇರುವ ಅತೃಪ್ತಿಯು ಇನ್ನಷ್ಟು ಹೆಚ್ಚುವದರಲ್ಲಿ ಸಂಶಯವಿಲ್ಲ.

ಈ ರಿಪೋರ್ಟಿನಿಂದ ನಮ್ಮ ದೇಶಕ್ಕೆ ಕಡಿಮೆ ಪಕ್ಷ ಸಾಲಿಯಾನ 25,000 ರೂಪಾಯಿ ಹೆಚ್ಚಿನ ಖರ್ಚು ಬೀಳಬಹುದೆಂತ ನಾವು ಈ ಮೊದಲು ಬರೆದಿದ್ದೆವು. ಈಗ ಕೌನ್ಸಿಲ್ ಮೆಂಬರುಗಳಿಗೆ ಸಿಕ್ಕಿದ ಬಜೆಟ್ಟನ್ನು ನೋಡಿದರೆ ಲೀ ರಿಪೋರ್ಟಿನ ಭಾರವು ಇನ್ನೂ ಹೆಚ್ಚಿನ ರೂಪಾಯಿಯಾದರೂ ಬೀಳಬಹುದೆಂತ ತೋರುತ್ತದೆ. ಮಿ. ಕರ್ಗನ್‌ವೆಸ್ [illegible] ಈಗ [illegible] ಹೋಗಿದ್ದಾರೆ. ಅವರು, [illegible] ಕೆಲಸ ಮಾಡಿದ್ದಕ್ಕಾಗಿ ಅವರ ರಜಾ ಸಂಬಳದ ದಾಮುಶಾಯಿ ಪದವಿಯನ್ನು [illegible] ಸರಕಾರವು ಕೊಡಬೇಕಾಗಿ ಬಂದಿರುವದರಿಂದ ಬಜೆಟ್ಟಿನಲ್ಲಿ 23,60[illegible] ರೂಪಾಯಿ ಹೆಚ್ಚಿನ ಖರ್ಚನ್ನು ಸೇರಿಸಿದ್ದಾರೆ. ಇದೇ ರೀತಿ ಇಲ್ಲಿ ಕೆಲಸ ಮಾಡಿ ಹೋದ ಆಫೀಸರುಗಳ ರಜಾ ಸಂಬಳವನ್ನೆಲ್ಲಾ ಹೆಚ್ಚಿನ ದರದಲ್ಲಿ ನಮ್ಮ ದೇಶದಿಂದ ಕೊಡಬೇಕಾಗುವಾಗ ಲೀ ರಿಪೋರ್ಟು ಜಾರಿಗೆ ಬಂದರೆ ತಡೆಯಲಾರದ ಭಾರವು ನಮ್ಮ ದೇಶದ ಮೇಲೆ ಬೀಳುತ್ತೆ.

ಎಸೆಂಬ್ಲಿಯಲ್ಲಿ ನಡೆದ ವಾದದಲ್ಲಿ ಸರಕಾರದ ಪಕ್ಷದ ಅಭಿಪ್ರಾಯಗಳನ್ನೂ, ಪ್ರಜಾ ಪಕ್ಷದ ಅಭಿಪ್ರಾಯಗಳನ್ನು ಕುಲವೃ ಪಟ್ಟಿಗಾಗಿರಿ [illegible] ಯಾವದರಲ್ಲಿ ನ್ಯಾಯವಿದೆ ಎಂಬದನ್ನು ವಾಚಕರೇ ತೀರ್ಮಾನಿಸಿಕೊಳ್ಳಲು ಬಿಡುತ್ತೇವೆ. ಸರಕಾರದ ಮತವೇನೆಂದರೆ—ಚಕ್ರವರ್ತಿಯವರೇ ನೇಮಿಸಿದ ಕಮಿಶನ್ ಆಗಿದೆ. ಬಹು ಪ್ರಖ್ಯಾತರಾದ ಗೃಹಸ್ಥರು ಈ ಕಮಿಶನಿನ ಮೆಂಬರುಗಳಾಗಿದ್ದಾರೆ. ಅವರ ಮತವನ್ನು ತಿರಸ್ಕರಿಸುವದು ಸರಿಯಲ್ಲ. [illegible] ನೇಮಿಸುವಾಗ ಎಸೆಂಬ್ಲಿಯು ಆಕ್ಷೇಪಿಸಲಿಲ್ಲ. ಆದರೆ ಮಾಂಟ್‌ಫರ್ಡ್ ರಿಪೋರ್ಟಿನಲ್ಲಿ ದೇಶೀಯರಿಗೆ ಕೆಲಸ ಹೆಚ್ಚಾಗಿ ಕೊಡಬೇಕೆಂಬ ಮತಕ್ಕೆ ವಿರೋಧವಾಗಿ ಕಮಿಶನ್ ಸೈಸರ್ ಮಾಡಬಹುದೇ? ಇದು ಸ್ವಯಂ ಆಕ್ಷೇಪಕ್ಕೆ ಮುಖ್ಯಕಾರಣವಾಗಿ ಕಂಡುಬರುತ್ತಿದೆ. ಆದರೆ ಲೀ ರಿಪೋರ್ಟಿನಲ್ಲಿ ಮಾಂಟ್‌ಫರ್ಡ್ ರಿಪೋರ್ಟಿನಲ್ಲಿ ಬರೆ

ದದ್ದಕ್ಕಿಂತ ಹೆಚ್ಚಾಗಿ ದೇಶೀಯರಿಗೆ ಕೆಲಸ ದೊರೆಯುವ ಸಲಹೆಗಳು ಇರುವದರಿಂದ ರಿಪೋರ್ಟನ್ನು ಒಪ್ಪಿಕೊಳ್ಳಬಹುದು. ಎಂಥಾ ಸ್ವತಂತ್ರ ಸರಕಾರವಾದರೂ ಸರಕಾರದ ಆಡಳಿತ ನಡಿಸುವ ಉದ್ಯೋಗಸ್ಥರನ್ನು ಕಾಪಾಡಿಕೊಂಡು, ಅವರಿಗೆ ತೃಪ್ತಿ ಇರುವಂತೆ ಇಟ್ಟುಕೊಳ್ಳಬೇಕಾದದ್ದು ಸರಕಾರದ ಕೆಲಸವಾಗಿದೆ. ಸರಕಾರದ ಕೆಲಸಗಳಲ್ಲಿ ತೃಪ್ತಿಯಾಗದಿದ್ದರೆ ಸರಕಾರ ನಡ್ತಿಯನ್ನು ಆಕ್ಷೇಪಿಸಿಯೇ ತೀರತು. ಆಡಳಿತ ನಡಿಸುವ ಉದ್ಯೋಗಸ್ಥರನ್ನು [illegible] ರಿಜರ್ವ್ ಸಬ್ಜೆಕ್ಟ್ (ಅಧಿಕೃತ ಇಲಾಖೆಗಳು) ಗಳಿಗೆ ಪಾರ್ಲಿಮೆಂಟೇ ಜವಾಬ್ದಾರರಾದ್ದರಿಂದ, ಆ ಇಲಾಖೆಗಳ ಉದ್ಯೋಗಸ್ಥರನ್ನು ನೇಮಿಸುವ, ಕಾಪಾಡುವ ಭಾರವು ಸ್ಟೇಟ್ ಸೆಕ್ರೆಟರಿಯವರಲ್ಲಿ ಇರುವದು ನ್ಯಾಯವಾದ [illegible] ಒಪ್ಪಿಕೊಟ್ಟ ಇಲಾಖೆಗಳಿಗೆ ಆಯಾ ಪ್ರಾಂತೀಕ ಸರಕಾರದವರೇ ಉದ್ಯೋಗಸ್ಥರನ್ನು ನೇಮಿಸಿಕೊಳ್ಳಬಹುದು. [illegible] ಆದರೆ ಅವರ ಹಕ್ಕುಗಳನ್ನು ಸ್ಟೇಟ್ ಸೆಕ್ರೆಟರಿಯವರೇ ಕಾಪಾಡಿಕೊಳ್ಳಬೇಕಾದದ್ದು ಅವಶ್ಯ. 30 ಕೋಟಿ ಜನ ಸಂಖ್ಯೆಯನ್ನು ಆ ಲಕ್ಷ [illegible] 400 ಮಂದಿ ಸಿವಿಲಿಯನ್ ಜನರಾದರೂ ಬೇಡವೇ? ವಿಲಾಯಿತಿಯಿಂದ ಆಫೀಸರುಗಳನ್ನು ನೇಮಿಸಲೇ ಬಾರದೆಂತಲೂ, ಈಗ ಇರುವ ಆಫೀಸರುಗಳ ಕಷ್ಟವನ್ನು ಬಿಡಿಸಲು [illegible] ಅವರಿಗೆ ಸಹಾಯ ಕೊಟ್ಟರೆ ಸಾಕೆನ್ನುತ್ತಾರೆ. ವಿಲಾಯಿತಿಯಿಂದ ಆಫೀಸರುಗಳನ್ನು ನೇಮಿಸುವದು ನಿಲ್ಲಿಸಿಬಿಟ್ಟರೆ ಈಗ ಉದ್ಯೋಗದಲ್ಲಿರುವ ಬಿಳೀ ಜನರೂ ಸಹ ಬಿಟ್ಟು ಹೋಗಬಹುದು. ಬ್ರಿಟಿಶ್ ಜನರು ಈ ದೇಶಕ್ಕೆ ಉದ್ಯೋಗಕ್ಕೆ ಬರುವದು ಸ್ವಾರ್ಥತಯಿಂದಲ್ಲ. ವರುಷಕ್ಕೆ 45 ಬ್ರಿಟಿಶ್ ಜನರು ಮಾತ್ರ ನೇಮಿಸಲ್ಪಡ ಬೇಕಾಗುತ್ತೆ. ಬ್ರಿಟಿಶ್ ಸಾಮ್ರಾಜ್ಯದಂಥ ದೊಡ್ಡ ಸಾಮ್ರಾಜ್ಯದಲ್ಲಿ ಈ 45 ಜನರಿಗೆ ಬೇರೆ ಉಪಾಯವಿಲ್ಲವೆಂತಲ್ಲ. ಯುದ್ಧದ ಕಾಲದಿಂದ ಧಾರಣೆವಾಸಿಗಳೆಲ್ಲಾ ಹೆಚ್ಚಾಗಿರುವದರಿಂದ ಬ್ರಿಟಿಶ್ ಉದ್ಯೋಗಸ್ಥರಿಗೆ ತಕ್ಕ ಪರಿಹಾರ ದೊರಕಿರುವದಿಲ್ಲ. ಕಮಿಶನ್ ಮೆಂಬರುಗಳೆಲ್ಲರೂ ಒಗ್ಗಟ್ಟಾಗಿ ಬರೆದ ರಿಪೋರ್ಟನ್ನು ಅಂಗೀಕರಿಸಿ ಕೊಳ್ಳಬೇಕು.

ಪ್ರಜಾ ಪಕ್ಷದವರ ವಾದವೇನೆಂದರೆ—ಕಮಿಶನನ್ನು ನೇಮಿಸಿದ ವಿಷಯಕ್ಕೆ ಎಸೆಂಬ್ಲಿಯು [illegible] ಆಕ್ಷೇಪಿಸಿದರೂ [illegible] ಸರ್ಕಾರವು ಸ್ವೀಕರಿಸಲಿಲ್ಲ. ರಿಪೋರ್ಟಿನ ಅಭಿಪ್ರಾಯಗಳ ಪ್ರಕಾರ, ಮಾತ್ರ ಜಾರಿಗೆ ತರಬೇಕೆಂತ ಸರಕಾರದವರು ಹೇಳಿದರೂ [illegible] ರಿಪೋರ್ಟು ಪೂರ್ತಿ ತೃಪ್ತಿಕರವಾಗಲಿಲ್ಲವಂತಾಯಿತು. ಇಂಡಿಯಾ ಸರಕಾರದವರೇ ಈ ಕಮಿಶನಿನ ನೇಮಕಕ್ಕೆ ವಿರೋಧವಿದ್ದರು. ವಿಲಾಯಿತಿಯಲ್ಲಿ ಆಗ ಮಂತ್ರಿತ್ವ ನಡಿಸುತ್ತಿದ್ದವರ ಮನ್ನಣೆಯಕ್ಕಾಗಿ ಇಂಡಿಯಾ ಸರಕಾರವು ಒಪ್ಪಿದ್ದಾಗಿದೆ. ಇಂಡಿಯಾ ದೇಶದ ಎಲ್ಲಾ ಸಂಘಗಳೂ ಈ ಕಮಿಶನನ್ನು ಬಹಿಷ್ಕರಿಸಿದೆ. ಕೆಲವರು ಕಮಿಶನ್ ಮುಂದೆ ಹಾಜರಾಗಿ ತಮ್ಮ ಅಭಿಪ್ರಾಯಗಳನ್ನು ಕೊಟ್ಟಿರುವದು ಹೌದು. ಆದರೆ ಅವರೆಲ್ಲರೂ ತಮ್ಮ ತಮ್ಮ ಸ್ವಂತ ಅಭಿಪ್ರಾಯವನ್ನು ತಿಳಿಸಿದರೆ ದೇಶದ ಯಾವ ಸಂಘದ ಪ್ರತಿನಿಧಿಗಳಾಗಿಯೂ ತಿಳಿಸಿದ್ದಲ್ಲ. ಈ ಸರಕಾರ ನೌಕರರ ಕ್ಷೇಮಲಾಭಗಳನ್ನು ನಿರ್ಣಯಿಸಬೇಕಾದರೆ ಇವರ ಮುಖ್ಯಸ್ಥರು ಯಾರು ಎಂಬದು ಮೊದಲು ನಿರ್ಣಯವಾಗಬೇಡವೇ? ಅಂತರ ಇಂಡಿಯಾ ದೇಶಕ್ಕೆ ಸ್ವರಾಜ್ಯ ಕೊಡಬೇಕೆಂತ ದೇಶದವರು ಕೇಳುತ್ತಿರುವಾಗ, ಮತ್ತು ಇಂಡಿಯಾ ದೇಶಕ್ಕೆ ಜವಾಬ್ದಾರಿ ಸರಕಾರವನ್ನು ಕೊಡುವದು ಬಿಡಿತವೆಂತ ಸರಕಾರದವರು ಒಪ್ಪಿರುವಾಗ ಆ ಸ್ವತಂತ್ರ ಸಿಕ್ಕಿದ ಮೇಲಲ್ಲವೇ ಉದ್ಯೋಗಸ್ಥರ ಕ್ಷೇಮಲಾಭ [illegible] ಉದ್ಯೋಗಸ್ಥರ ಹಕ್ಕು ಬಾಧ್ಯತೆಗಳನ್ನು ಕಾಪಾಡುವದು ಸರಕಾರದ ಕೆಲಸವಾದರೂ, ಅವರ ಮೇಲ್ವಿಚಾರವು ಪ್ರಜಾ ಪ್ರತಿನಿಧಿಗಳಿಗೆ ಇರಲೇ ಬೇಕು. ಅವರ ವರ್ತನೆಯ ಕೆಲಸಗಳಲ್ಲಿ ಪ್ರಜಾ ಪ್ರತಿನಿಧಿಗಳು ಕೈ ಹಾಕುವ ಸ್ವತಂತ್ರ ಬೇಕೆಂತ [illegible] ವದಿಲ್ಲ. ಆದರೆ ಅವರು ಪ್ರತಿನಿಧಿಗಳ ಮಾತು ಕೇಳದಿದ್ದರೆ ಅವರನ್ನು ಶಿಕ್ಷಿಸುವ ಹಕ್ಕು ಪ್ರಜಾ ಪ್ರತಿನಿಧಿಗಳಿಗೆ [illegible]. ಈಗ ಇರುವ ಉದ್ಯೋಗಸ್ಥರ ಹಕ್ಕು ಬಾಧ್ಯತೆಗಳು 1613ನೇ ಇಸವಿಯಲ್ಲಿ ನಿರ್ಣಯಿಸಲ್ಪಟ್ಟವು. ಇಂಥಾ ಪುರಾತನ ಸಂಸ್ಥೆಯು ಈಗಿನ ಕಾಲಕ್ಕೆ ಸರಿ ಹೋಗುವದು ಹೇಗೆ? "ಟೈಮ್ಸ್ ಆಫ್ ಇಂಡಿಯ" ಮುಂತಾದ ಇಂಗ್ಲೀಷರ ಪತ್ರಿಕೆಗಳು ಸಹ ಈ ವಿಷಯವನ್ನು ಒಪ್ಪುತ್ತವೆ. ಆ ಕಮಿಶನನ್ನು ನೇಮಿಸುವಾಗಲೇ ಇಂಡಿಯಾ ದೇಶಕ್ಕೆ ಇನ್ನೂ ಬಹು ಕಾಲ ಸ್ವರಾಜ್ಯ ದೊರೆಯುವದಿಲ್ಲವೆಂತ ನಿಶ್ಚಯಿಸಿದಂತೆ ಕಾಣುತ್ತೆ. ರಿಪೋರ್ಟನ್ನು ಜಾರಿಗೆ ತಂದರೆ ಇನ್ನೂ 40 ವರುಷಗಳ ವರೆಗೆ ಇಂಡಿಯಾ ದೇಶಕ್ಕೆ ಸ್ವರಾಜ್ಯದ ಆಶೆ ಇಲ್ಲ. ಶೇಕಡ 50ರಷ್ಟು ಸಂಖ್ಯೆ ಬಿಳಿ ಜನರೇ ಇರಬೇಕೆಂತ ಮತ್ತು ಹೇಳುವದಾದರೆ ಇಂಡಿಯಾಕ್ಕೆ ಸ್ವತಂತ್ರದ ಆಶೆಯೇ ಇಲ್ಲ. ದಾರಣೆವಾಸಿಗಳು ಹೆಚ್ಚಾದದ್ದರಿಂದ ಉದ್ಯೋಗಸ್ಥರಿಗೆ ಪರಿಹಾರ ಕೊಡಬೇಕಾದರೆ ಅವರ ಸಂಬಳವನ್ನು ಹೆಚ್ಚಿಸುವದರಿಂದಲ್ಲ, ಅವರಿಗೆ ತಾತ್ಕಾಲಿಕ ಎಲೋವೆನ್ಸ್ ಕೊಟ್ಟು ಕಷ್ಟ ಪರಿಹರಿಸಬೇಕಾದದ್ದು ಪ್ರಪಂಚದ ಎಲ್ಲಾ ಸರಕಾರಗಳಲ್ಲೂ ವಾಡಿಕೆಯಲ್ಲಿರುವದಾಗಿದೆ. ಇವರಿಗೆ ಸಂಬಳವನ್ನು ಹೆಚ್ಚಿಸುವದಲ್ಲದೆ ವಿಲಾಯಿತಿಗೆ ಹೋಗುವ ಖರ್ಚಿಗಾಗಿ ತಿಂಗಳುಗಟ್ಟಲೆ ಕೊಡಬೇಕಾದ ಎಲೋವೆನ್ಸನ್ನು ನಿಜ ಸಂಬಳಕ್ಕೇನೇ ಸೇರಿಸಿಬಿಟ್ಟು ಎಕೆಂಬ್ಲಿಯ ಓಟಿಗೆ ಒಳಪಡದಂತೆ ಮಾಡಿದ್ದಾರೆ. ರಿಪೋರ್ಟಿನ ಅನೇಕ ಭಾಗಗಳಲ್ಲಿ ಬಾತಿಭೇದ ತಂದಿರುತ್ತಾರೆ. ಇಂಗ್ಲೆಂಡಿಗೆ ಪ್ರಯಾಣ ಭೋಜನ ಖರ್ಚು ಕೊಡುವದಲ್ಲದೂ, ವೈದ್ಯ ಇಲಾಖೆಯ

ಸ್ತೂ ಜಾತಿಭೇದಗಳು ಬಂದಿವೆ. ಯಾವಾಗ ಮಿ. ವಿನೇಸ್ ಅಭಿಪ್ರಾಯ ಕೊಟ್ಟಿದ್ದಾರೆಂಬುದನ್ನು ಪ್ರಕಟಿಸಲಿಲ್ಲ. ಅಭಿಪ್ರಾಯ ಕೊಡುವ ಯುರೋಪಿಯನರು ಗುಟ್ಟಿನಲ್ಲಿ ಕೊಡಬೇಕೆಂತ ಕಮಿಷನಿನವರೇ ಹೇಳಿದ್ದಾರೆ. ಯುರೋಪಿಯನರ ದಾಖಲೆ ಪುರಾವೆ ಇಂತಿಷ್ಟಿರಬೇಕೆಂತ ಇರಬಾರದು. ಇಂಥಾ ಕೆಲಸ ತಿಳಿದವರು ಬೇಕೆಂತ ಬರಬೇಕು. ಇಲ್ಲಿಗೆ ಬರುವ ಅಧಿಕಾರಿಗಳಿಗೆ ಸ್ವಾರ್ಥವೇ ಇಲ್ಲವೆಂತಲ್ಲ. ಆದರೂ ಉದ್ಯೋಗಕ್ಕೆ ಬರುವ ವ್ಯಕ್ತಿಗಳ ಸ್ವಾರ್ಥಕ್ಕಾಗಿ ಬ್ರಿಟಿಷ್ ಸರ್ಕಾರವು ಹೋರಾಡುವುದಿಲ್ಲ. ಇವರುಗಳನ್ನು ತನ್ನ ಕೈಯಿಂದ ಬಿಡಬಾರದೆಂಬ ಬ್ರಿಟಿಷ್ ಸರ್ಕಾರದ ಸ್ವಾರ್ಥತೆಯೇ ರಿಪ್ಪೋರ್ಟಿಗೆ ಕಾರಣ. ಹಿಂದೀಯರ ದಿನಚರಿಯ ಕೆಲಸಗಳನ್ನು ನಡೆಸುವ ಬ್ರಿಟಿಷ್ ಆಫೀಸರು ನಿರ್ಣಯಿಸುವ ಕಾಲಬಂದಿದೆ. ಈ ತರದ ಉದ್ಯೋಗಗಳನ್ನು ಇನ್ನೂ ಇರಗೊಳಿಸಿದರೆ ಬ್ರಿಟಿಷರ ಹಿಡಿತವನ್ನು ತಪ್ಪಿಸಲು ಇನ್ನೂ ನೂರಾರು ವರ್ಷ ಬೇಕಾಗಬಹುದು. ಹಿಂದುಸ್ಥಾನದಲ್ಲಿ ಹಿಂದೀಯರು ಬಗ್ಗದೆ ನೆಟ್ಟಗೆ ನಡೆಯಲು ಬಿಡಿ, ನೀವು ಸ್ನೇಹಿತರಾಗಿಯೂ ನೆರವಾಗಿಯೂ ಬೇಕಾದರೆ ಬನ್ನಿ. ಅನವಶ್ಯವಾಗಿ ಹಿಂದೀಯರಿಗೆ ಬೇಕಾಗಿಲ್ಲ. ಇನ್ನುಮುಂದೆ ಬರುವ ಉದ್ಯೋಗಸ್ಥರಿಗೆ ಹಿಂದುಸ್ಥಾನದ ಆಡಳಿತವು ಹೇಗೆಯೇ ನಡೆಯುತ್ತಿತ್ತೆಂತ ಗೊತ್ತಿರುವದರಿಂದ ಅವರಿಗೆ ವಿಶೇಷ ರಿಯಾಯ್ತಿಗಳೇನೂ ಬೇಕಾಗಿಲ್ಲ. ಹಿಂದುಸ್ಥಾನಕ್ಕೆ ಸ್ವರಾಜ್ಯ ದೊರೆತಾಗಲೂ ಅಂಥಾ ಸರ್ಕಾರದ ಸೇವಕರಾಗಿರಲಿಕ್ಕೆ ತಯಾರಿರುವವರು ಮಾತ್ರ ಬರಲಿ. ರಿಯಾಯ್ತಿಗಳನ್ನು ಕೊಟ್ಟು ಅವರನ್ನು ಕರಿಸಿಕೊಳ್ಳಬೇಕಾಗಿಲ್ಲ. ಮೊಬಾಪ್ ಅಂದರೆ ನೀವೇ ತಂದೆ ತಾಯಿಯೆಂತ ಕರೆಸಿಕೊಳ್ಳುವ ಕಾಲ ಕಳೆದು ಹೋಯಿತು. ಹಾಗೆ ಕರೆಸಿಕೊಳ್ಳಬೇಕೆಂತ ಇರುವವರು ನಮಗೆ ಬೇಡ. ಭಾಯಿ ಬಹಿನ್ ಅಂದರೆ ಅಣ್ಣ ತಮ್ಮ ಅಕ್ಕತಂಗಿಯರಂತೆ ಇರುವವರು ನಮಗೆ ಇದ್ದರೆ ಸಾಕು. ಸುಧಾರಣೆಗಳೆಂಬ ಕುದುರೆಯೊಂದನ್ನು ಕೊಟ್ಟಿದ್ದೇವೆ, ಅದು ವಿಶೇಷವಾಗಿದೆಯೆಂತ ಸರ್ಕಾರದವರು ಹೇಳಿದರು. ಅದನ್ನು ದೇಶೀಯರು ಪರೀಕ್ಷಿಸಿ ನೋಡುವಾಗ ಅದು ಒಣ ರೂಪದ ಮರದ ಕುದುರೆಯಾಗಿದೆ ಎಂತ ತಿಳಿಯಿತು. ಅದನ್ನು ಏರುವದೇ ಇಲ್ಲವೆಂತ ಕೆಲವರು ನಿರಾಕರಿಸಿದರು. ಕೆಲವರು ಸವಾರಿಮಾಡಲು ಪ್ರಯತ್ನಿಸಿದರು. ಆದರೆ ಅಡಿಯಲ್ಲಿ ಉಕ್ಕಿನ ಸ್ಪ್ರಿಂಗಿಗೆ ಅದು ಬಿಗಿದದ್ದರಿಂದ ಮರದ ಕುದುರೆಯು ಸ್ವಲ್ಪವೂ ಜರುಗುತ್ತಿರಲಿಲ್ಲ. ಸ್ವಲ್ಪವಾದರೂ ಅದರಲ್ಲಿಕ್ಕೆ ಎಡೆಕೊಡಿ ಎಂತ ಕೇಳಿಕೊಂಡದ್ದಕ್ಕೆ ಎದುರಿನಲ್ಲಿದ್ದ ಮೊಳೆಗಳನ್ನು ತೆಗೆದು ಹಿಂದೆ ಬಿಗಿದಂತಾಗಿದೆ. ಕುದುರೆಯಂತೂ ಜರುವದಿಲ್ಲ, ಸ್ವರಾಜ್ಯಕ್ಕೆ ಅಡ್ಡಿಬರುವ ಈ ಲೀ ರಿಪ್ಪೋರ್ಟು ದೇಶಕ್ಕೆ ಬೇಕಾಗಿಲ್ಲ. ಪ್ರಜಾಪಕ್ಷವಾಗಿ ನಡೆದ ಮೋತೀಲಾಲ್ ನೆಹರು ರವರ ಭಾಷಣವನ್ನೇ ಪ್ರಜಾಪ್ರತಿನಿಧಿಗಳ ಅಭಿಪ್ರಾಯವೆಂತ ತೆಗೆದುಕೊಂಡಿದ್ದೇವೆ.

ರಾಮಾಯಣ.

(ರವೀಂದ್ರನಾಥಠಾಕೂರರವರ ಪ್ರಬಂಧದ ಭಾಷಾಂತರ)

ಕಾವ್ಯಗಳನ್ನು ಸ್ಥೂಲವಾಗಿ ಎರಡು ಪಂಗಡ ಮಾಡಬಹುದು. ಕೆಲವು ಒಬ್ಬ ಕವಿಯ ಮಾತುಗಳು, ಮತ್ತೆ ಕೆಲವು ಒಂದು ದೊಡ್ಡ ಸಂಪ್ರದಾಯದ ಮಾತುಗಳು.

ಒಬ್ಬ ಕವಿಯ ಮಾತುಗಳೆಂದರೆ ಮತ್ತಾರಿಗೂ ತಿಳಿಯತಕ್ಕವಲ್ಲವೆಂದು ಅರ್ಥವಲ್ಲ. ಹಾಗಾಗುವ ಪಕ್ಷಕ್ಕೆ ಆ ಕವಿಯನ್ನು ಹುಚ್ಚನೆನ್ನಬೇಕಾಗುತ್ತದೆ. ಆ ಮಾತಿನ ಅರ್ಥವಿಷ್ಟೇ:—ಕವಿಗೆ ತನ್ನ ಸ್ವಂತ ಸಾಮರ್ಥ್ಯ, ಕಲ್ಪನೆ, ಜೀವನದ ಅಭಿಜ್ಞತೆಗಳ ಮೂಲಕ ಮಾನವ ಜಾತಿಗೆ ಸಾಮಾನ್ಯವಾದ ಚಿರಂತನ ಹೃದಯಾವೇಗವನ್ನೂ ಜೀವನದ ಮಾರ್ಮಿಕ ವಿಷಯಗಳನ್ನೂ ವ್ಯಕ್ತಪಡಿಸುವ ಶಕ್ತಿಯು ಇರುತ್ತದೆ.

ಈ ಪಂಗಡದ ಕವಿಗಳಿರುವಂತೆಯೇ ಮತ್ತೊಂದು ವರ್ಗದ ಕವಿಗಳು ಇರುತ್ತಾರೆ. ಅವರ ಕಾವ್ಯಗಳ ಮುಖಾಂತರವಾಗಿ ಒಂದು ಸಮಗ್ರದೇಶವು ಅಥವಾ ಕಾಲವು ತನ್ನ ಹೃದಯವನ್ನೂ ಅಭಿಜ್ಞತೆಯನ್ನೂ ವ್ಯಕ್ತಗೊಳಿಸಿ ಅದನ್ನು ಮಾನವನ ಶಾಶ್ವತ ಸಾಮಗ್ರಿಯನ್ನಾಗಿ ಮಾಡುತ್ತದೆ.

ಈ ಎರಡನೆಯ ಪಂಗಡದ ಕವಿಗೆ ಮಹಾಕವಿಯೆಂದು ಹೆಸರು. ಸಮಗ್ರದೇಶದ ಅಥವಾ ಜನಾಂಗದ ವಾಣಿಯು ಇವರನ್ನು ಆಶ್ರಯಿಸಬಲ್ಲುದು. ಇವರು ರಚಿಸುವ ಕಾವ್ಯವು ಒಬ್ಬ ಮನುಷ್ಯನು ರಚಿಸಿದ್ದೆಂದು ಮನಸ್ಸಿಗೆ ತೋರುವುದಿಲ್ಲ. ಅದು ಒಂದು ಮಹಾವೃಕ್ಷದಂತೆ ದೇಶದ ಭೂಗರ್ಭದಿಂದ ಆವಿರ್ಭವಿಸಿ ಆ ದೇಶಕ್ಕೆ ಆಶ್ರಯಚ್ಛಾಯೆಯನ್ನು ದಾನಮಾಡುವಂತೆ ತೋರುತ್ತದೆ. ಶಾಕುಂತಲ ಕುಮಾರಸಂಭವಗಳಲ್ಲಿ ಕಾಳಿದಾಸನ ಲೇಖನನೈಪುಣ್ಯದ ಗುಣವನ್ನು ಹೊಂದಬಹುದು. ಆದರೆ ರಾಮಾಯಣ ಮಹಾಭಾರತಗಳು ಗಂಗಾಹಿಮಾಲಯಗಳಂತೆ ಸಮಗ್ರ ಭರತಖಂಡದವುಗಳು; ವ್ಯಾಸ ವಾಲ್ಮೀಕಿಗಳು ಉಪಲಕ್ಷ್ಯ ಮಾತ್ರ.

ನಿಜವಾಗಿಯೂ ವ್ಯಾಸ ಅಥವಾ ವಾಲ್ಮೀಕಿ ಎಂಬುದು ಯಾರ ಹೆಸರೂ ಆಗಿರಲಿಲ್ಲ. ಅದು ಒಂದು ಉದ್ದೇಶದಿಂದ ಆದ ನಾಮಕರಣ ಮಾತ್ರ. ಈ ಎರಡು ಗ್ರಂಥಗಳೂ ಎಷ್ಟು ದೊಡ್ಡವು ಮಹತ್ತ್ವವುಳ್ಳವುಗಳು ಎಂದರೆ, ಅವು ಸಮಗ್ರ ಭರತಖಂಡದೊಡನೆ ಒಂದಾಗಿ ತಮ್ಮನ್ನು ರಚಿಸಿದ ಕವಿಗಳ ಹೆಸರನ್ನು ಮರೆಸಿ ಕುಳಿತುಬಿಟ್ಟಿವೆ. ಕವಿಯು ಅನ್ನುವುದಕ್ಕೆ ತನ್ನ ಕಾವ್ಯದ ಅಂತರಾಳದಲ್ಲಿ ಅಡಗಿ ಬಿಟ್ಟಿರುತ್ತಾನೆ.

ನಮ್ಮ ದೇಶದಲ್ಲಿ ರಾಮಾಯಣ ಮಹಾಭಾರತಗಳು ಹೇಗೋ ಪ್ರಾಚೀನ ಗ್ರೀಸಿಗೆ 'ಇಲಿಯಡ್' ಹಾಗೆ ಎಂದು ಹೇಳಬಹುದು. ಅದು ಸಮಗ್ರ ದೇಶದ ಹೃದಯಕಮಲದಲ್ಲಿ ನಿರ್ಭವಿಸಿ ಆ ಹೃದಯಕಮಲದಲ್ಲಿಯೇ ವಾಸಮಾಡಿತು. ಹೋಮರ್ ಕವಿಯು ದೇಶ ಕಾಲಗಳ ಕಂಠಕ್ಕೆ ಭಾಷೆಯನ್ನು ಒದಗಿಸಿಕೊಟ್ಟ. ಆ ವಾಕ್ಯವು ಊಟೆಯಂತೆ ತನ್ನ ದೇಶದ ಅಂತಸ್ತಲದಿಂದ ಹೊರಟು ಪ್ರವಹಿಸಿ ಬಹುಕಾಲದಿಂದಲೂ ಅದನ್ನು ಆರ್ದ್ರಗೊಳಿಸುತ್ತಿದೆ.

ಆಧುನಿಕ ಕಾಲದ ಯಾವ ದೇಶದಲ್ಲಿಯೇ ಆಗಲಿ ಇಷ್ಟು ವಿಸ್ತಾರದ ವ್ಯಾಪಕತೆಯು ದೊರೆವುದಿಲ್ಲ. ಮಿಲ್ಟನ್ ಕವಿಯ 'ಪ್ಯಾರಡೈಸ್ ಲಾಸ್ಟ್‌'ನಲ್ಲಿ ಭಾಷೆಯ ಗಾಂಭೀರ್ಯವೂ ಛಂದಸ್ಸಿನ ಮಾಧುರ್ಯವೂ ರಸದ ಗಂಭೀರತೆಯೂ ಬೇಕಾದಷ್ಟು ಇವೆ; ಆದರೆ ದೇಶದ ಧನವಲ್ಲ; ಅದೇನಿದ್ದರೂ ಗ್ರಂಥಾಲಯದ ಆದರವಸ್ತು.

ಆದಕಾರಣ ಬೆರಳೆಣಿಸುವಷ್ಟೇ ಇರುವ ಪ್ರಾಚೀನ ಕಾವ್ಯಗಳನ್ನು ಒಟ್ಟುಗೂಡಿಸಿದರೂ ಒಂದೇ ಹೆಸರನ್ನು ಕೊಡಬೇಕಾದರೆ ಮಹಾಕಾವ್ಯವೆನ್ನದೆ ಬೇರೆ ಯಾವ ಹೆಸರನ್ನು ಕೊಡುವುದು? ಪ್ರಾಚೀನಕಾಲದ ದೇವದಾನವರಂತೆ ದೊಡ್ಡ ಪ್ರಮಾಣದವು—ಅವುಗಳ ಜಾತಿ ಈಗ ಲುಪ್ತವಾಗಿಹೋಗಿದೆ.

ಪ್ರಾಚೀನ ಆರ್ಯರ ಸಭ್ಯತೆಯ ಒಂದು ಧಾರೆಯು ಯೂರೋಪಿನಲ್ಲಿಯೂ ಮತ್ತೊಂದು ಧಾರೆಯು ಭರತಖಂಡದಲ್ಲಿಯೂ ಪ್ರವಹಿಸಿತು. ಯೂರೋಪಿನ ಧಾರೆಯು ಎರಡು ಮಹಾಕಾವ್ಯಗಳಲ್ಲಿಯೂ ಭರತಖಂಡದ ಧಾರೆಯು ಎರಡು ಮಹಾಕಾವ್ಯಗಳಲ್ಲಿಯೂ ತನ್ನ ಕಥೆಯನ್ನೂ ಗಾನವನ್ನೂ ಸಂರಕ್ಷಿಸಿಕೊಂಡಿರುತ್ತದೆ.

ನಾವು ವಿದೇಶೀಯರಾದಕಾರಣ ಗ್ರೀಸ್ ದೇಶವು ತನ್ನ ಸ್ವರೂಪವನ್ನು ತನ್ನ ಕಾವ್ಯಗಳಲ್ಲಿ ಸಂಪೂರ್ಣವಾಗಿ ಪ್ರಕಟಪಡಿಸಿರುವುದೋ ಇಲ್ಲವೋ ನಾವು ನಿಶ್ಚಿತವಾಗಿ ಹೇಳಲಾರೆವು. ಆದರೆ ಭರತವರ್ಷವು ತನ್ನ ಸ್ವರೂಪವನ್ನು ರಾಮಾಯಣ ಮಹಾಭಾರತಗಳಲ್ಲಿ ಸ್ವಲ್ಪವೂ ಬಿಡದಂತೆ ಪ್ರಕಟಪಡಿಸಿಕೊಂಡಿರುತ್ತದೆ ಎಂಬುದರಲ್ಲಿ ಯಾವ ಸಂಶಯವೂ ಇಲ್ಲ.

ಅದುದರಿಂದಲೇ ಶತಮಾನಗಳ ಮೇಲೆ ಶತಮಾನಗಳು ಕಳೆದು ಹೋಗಿದ್ದರೂ ರಾಮಾಯಣ ಮಹಾಭಾರತಗಳ ಪ್ರವಾಹವು ನಮ್ಮ ದೇಶದಲ್ಲಿ ಇನಿತಾದರೂ ಶುಷ್ಕವಾಗಿಲ್ಲ. ಜನರು ಈಗಲೂ ನಿತ್ಯವೂ ಪ್ರತಿಯೊಂದು ಗ್ರಾಮದಲ್ಲಿಯೂ ಮನೆಮನೆಯಲ್ಲಿಯೂ ಅವನ್ನು ಓದುತ್ತಿದ್ದಾರೆ. ಅಂಗಡಿಯ ಮಳಿಗೆಯಿಂದ ಹಿಡಿದು ಅರಸಿನ ಅರಮನೆಯ ವರೆಗೂ ಎಲ್ಲ ಕಡೆಗಳಲ್ಲಿಯೂ ಅವು ಆದರಣೀಯವಾದವುಗಳಾಗಿ ದೊರೆಯುತ್ತಿವೆ. ಆ ಮಹಾಕವಿಗಳಿಬ್ಬರೂ ಧನ್ಯರು, ಅವರ ಹೆಸರು ಕಾಲದ ವಿಸ್ತಾರವಾದ ಪ್ರಾಂತದಲ್ಲಿ ಲೀನವಾಗಿ ಹೋಗಿದೆ. ಆದರೆ ಅವರ ಆ ವಾಣಿಯು ಅಸಂಖ್ಯಾತ ಸ್ತ್ರೀಪುರುಷರ ಮನೆಗಳ ಬಾಗಿಲುಗಳಲ್ಲಿ ಅಮೋಘವಾಗಿ ಶಕ್ತಿ ಶಾಂತಿಗಳನ್ನು ಪ್ರವಹಿಸುತ್ತಿದೆ. ಮತ್ತು ಕಳೆದುಹೋಗಿರುವ ಶತಮಾನಗಳ ಗೋಪುರಗಳನ್ನೂ ಬಂದೇ ಸಮನೆ ಇಟ್ಟುಕೊಂಡು ಭರತಖಂಡದ ನಡುವೆ ಹೋಗುತ್ತಿರುವುದು.

ಈ ಸ್ಥಿತಿಯಲ್ಲಿ ರಾಮಾಯಣ ಮಹಾಭಾರತಗಳು ಕೇವಲ ಮಹಾಕಾವ್ಯಗಳು ಮಾತ್ರವಲ್ಲ, ಅವು ಇತಿಹಾಸಗಳೂ ಆಗಿವೆ. ಆದರೆ ಅವು ಘಟನೆಗಳ ಇತಿಹಾಸವಲ್ಲ; ಬೇರೆ ರೀತಿ ಹೇಳಬೇಕೆಂದರೆ ಅಂತಃಪ್ರಕೃತಿಯ ಇತಿಹಾಸವೆಂದು ಅವನ್ನು ಕರೆಯಬಹುದು. ರಾಮಾಯಣ ಮಹಾಭಾರತಗಳು ಭರತಖಂಡದ ಶಾಶ್ವತವಾದ ಇತಿಹಾಸಗಳು. ಬೇರೆ ಇತಿಹಾಸಗಳು ಕಾಲಕಾಲಕ್ಕೆ ಬದಲಾವಣೆಯಾಗುತ್ತವೆ; ಆದರೆ ಈ ಇತಿಹಾಸಕ್ಕೆ ಬದಲಾವಣೆಯೇ ಇಲ್ಲ. ಏಕೆಂದರೆ ಯಾವುದು ಭರತಖಂಡದ ಸಾಧನೆಯೋ, ಯಾವುದು ಆರಾಧನೆಯೋ, ಯಾವುದು ಆದರ್ಶವೋ, ಅದರ ಇತಿಹಾಸವು ಈ ಎರಡು ಮಹಾಕಾವ್ಯಗಳಲ್ಲಿ ಚಿರಕಾಲದ ಸಿಂಹಾಸನದ ಮೇಲೆ ಕುಳಿತಿದೆ.

ಆದಕಾರಣದಿಂದಲೇ ರಾಮಾಯಣ ಮಹಾಭಾರತಗಳ ಸಮಾಲೋಚನೆಯು ಇತರ ಕಾವ್ಯ ಸಮಾಲೋಚನೆಯ ಆದರ್ಶದಿಂದ ಭಿನ್ನವಾದದ್ದು. ರಾಮನ ಚರಿತ್ರೆಯು ಉತ್ಕೃಷ್ಟವಾದದ್ದೇ, ನೀಚವಾದದ್ದೇ, ಲಕ್ಷ್ಮಣನ ಚರಿತ್ರೆಯನ್ನು ನಾವು ಪ್ರತ್ಯೇಕವಾಗಿ ಹೀಗೆ ಸಮಾಲೋಚನೆಯನ್ನು ಮಾತ್ರವೇ ಮಾಡಿದರೆ ಸಾಲದು, ಸಮಗ್ರ ಭರತಖಂಡವು ಸಾವಿರಾರು ವರುಷಗಳಿಂದ ಈ ಕಾವ್ಯಗಳನ್ನು ಹೇಗೆ ಗ್ರಹಿಸುತ್ತಿದೆ ಎಂಬುದನ್ನಾವು ಜಾಗರೂಕರಾಗಿಯೂ ಶ್ರದ್ಧಾಳುಗಳಾಗಿಯೂ ವಿಚಾರಿಸಬೇಕಾಗುತ್ತದೆ.

ರಾಮಾಯಣದ ಭರತಖಂಡವು ಏನು ಹೇಳುತ್ತದೆ, ಯಾವ ಆದರ್ಶವನ್ನು ಸ್ವೀಕಾರ ಮಾಡಿರುತ್ತದೆ ಎಂಬುದೇ ನಾವು ನಮ್ರತೆಯಿಂದ ವಿಚಾರಮಾಡತಕ್ಕ ವಿಷಯ.

'ಎಪಿಕ್' (ವೀರಕಾವ್ಯ) ಎಂಬ ಹೆಸರು ಸ್ಥೂಲವಾಗಿ ವೀರರಸಪ್ರಧಾನವಾದವು ಮಾತ್ರವೇ, ಎಂಬುದಾಗಿ ಸಾಧಾರಣವಾದ ಒಂದು ಅಭಿಪ್ರಾಯವಿದೆ. ಅದಕ್ಕೆ ಕಾರಣ ಇದಿಷ್ಟೇ—ಯಾವ ದೇಶದಲ್ಲಿ ಯಾವ ಕಾಲದಲ್ಲಿ ವೀರರಸವು ಗೌರವವು ಪ್ರಾಧಾನ್ಯವನ್ನು ಹೊಂದುತ್ತದೆಯೋ ಆ ದೇಶದಲ್ಲಿ ಆ ಕಾಲದಲ್ಲಿ ಸ್ವಾಭಾವಿಕವಾಗಿ 'ಎಪಿಕ್' ಕಾವ್ಯವು ವೀರರಸ ಪ್ರಧಾನವಾದುದಾಗಿ ಪರಿಣಮಿಸುತ್ತದೆ. ರಾಮಾಯಣದಲ್ಲಿ ಯುದ್ಧ ವ್ಯಾಪಾರವು ಯಥೇಷ್ಟವಾಗಿದೆ; ರಾಮನ ಬಾಹುಬಲವಾದರೂ ಸಾಮಾನ್ಯವಾದದ್ದಲ್ಲ. ಆದರೂ ರಾಮಾಯಣವು ಪ್ರಾಧಾನ್ಯವನ್ನು ಕೊಟ್ಟಿರುವುದು ವೀರರಸಕ್ಕಲ್ಲ; ಅದು ತೋರಿಸುವುದು ಬಾಹುಬಲದ ಮಹತ್ತ್ವವನ್ನಲ್ಲ; ಅದರ ಮುಖ್ಯ ವರ್ಣನೆಯ ವಿಷಯವು ಯುದ್ಧದ ಸಂಗತಿಯಲ್ಲ.

ದೇವರ ಅವತಾರಲೀಲೆಯನ್ನು ವರ್ಣಿಸುವುದಕ್ಕಾಗಿಯೇ ರಾಮಾಯಣವು ರಚಿತವಾದದ್ದು ಎಂಬ ಮತವು ಒಪ್ಪತಕ್ಕದ್ದಲ್ಲ. ವಾಲ್ಮೀಕಿಯು ದೃಷ್ಟಿಯಿಂದ ರಾಮನು ಅವತಾರ ಪುರುಷನಲ್ಲ, ಮನುಷ್ಯನೇ ಆಗಿದ್ದನು ಎಂಬುದನ್ನು ಪಂಡಿತರು ಪರೀಕ್ಷೆಮಾಡಿ ತಿಳಿದುಕೊಳ್ಳಬಹುದು. ಈ ಲೇಖನದಲ್ಲಿ ವಾಂದಿತ್ವಕ್ಕೆ ಅವಕಾಶವಿಲ್ಲ; ಆದರೂ ಇಲ್ಲಿ ಇಷ್ಟನ್ನು ಮಾತ್ರ ಸಂಕ್ಷೇಪವಾಗಿ ಹೇಳುತ್ತೇವೆ:—ಕವಿಯು ರಾಮಾಯಣದಲ್ಲಿ ಮಾನವ ಚರಿತ್ರೆಯನ್ನು ವರ್ಣಿಸದೆ ದೇವ ಚರಿತ್ರೆಯನ್ನು ವರ್ಣಿಸುವ ಪಕ್ಷಕ್ಕೆ ಅದರಿಂದ ರಾಮಾಯಣದ ಗೌರವಕ್ಕೆ ಕುಂದಕ ಉಂಟಾಗುತ್ತದೆ, ಕಾವ್ಯ ದೃಷ್ಟಿಯಿಂದ ಅದಕ್ಕೆ ಬಾಧಕವುಂಟಾಗುತ್ತದೆ. ಏಕೆಂದರೆ, ಮಾನವಚರಿತ್ರೆಯಾದ ಕಾರಣವೇ ರಾಮಚರಿತ್ರೆಯು ಮಹಿಮಾನ್ವಿತವಾದದ್ದಾಗಿರುವುದು.

ಆದಿಕಾಂಡದ ಪ್ರಥಮ ಸರ್ಗದಲ್ಲಿ ವಾಲ್ಮೀಕಿಯು ತನ್ನ ಕಾವ್ಯಕ್ಕೆ ಉಪಯುಕ್ತನಾದ ನಾಯಕನನ್ನು ಹುಡುಕಿ ಅನೇಕ ಗುಣಗಳನ್ನು ಉಲ್ಲೇಖಿಸಿ ನಾರದನನ್ನು ಕುರಿತು,

"ಸಮಗ್ರಾ ರೂಪಿಣೀ ಲಕ್ಷ್ಮೀಃ ಕಮೇಕಂ ಸಂಶ್ರಿತಾ ನರಂ" ಯಾವ ಏಕಮಾತ್ರ ಪುರುಷನನ್ನು ಆಶ್ರಯಿಸಿ ಸಮಗ್ರ ಲಕ್ಷ್ಮಿಯು ರೂಪವನ್ನು ತಾಳಿರುವಳು? ಎಂದು ಕೇಳಿದಾಗ ನಾರದನು,

> ದೇವೇಷ್ವಪಿ ನ ಪಶ್ಯಾಮಿ ಕಶ್ಚಿದೇಭಿರ್ಗುಣೈರ್ಯುತಂ
> ಶ್ರೂಯತಾಂ ತು ಗುಣೈರೇಭಿರ್ಯೋ ಯುಕ್ತೋ ನರ
> ಚಂದ್ರಮಾಃ ॥

ಇಷ್ಟು ಗುಣಯುಕ್ತನಾದ ಪುರುಷನನ್ನು ದೇವತೆಗಳಲ್ಲಿ ಕೂಡ ನಾನು ನೋಡಲಿಲ್ಲ. ಯಾವ ನರಚಂದ್ರನಲ್ಲಿ ಈ ಸಕಲ ಗುಣಗಳೂ ಇರುವವೋ ಆತನ ಕಥೆಯನ್ನು ಕೇಳು ಎಂಬುದಾಗಿ ಉತ್ತರಕೊಟ್ಟನು.

ರಾಮಾಯಣವು ಆ ನರಚಂದ್ರಮನ ಕಥೆಯೇ ಹೊರತು ದೇವತೆಯ ಕಥೆಯಲ್ಲ. ರಾಮಾಯಣದಲ್ಲಿ ದೇವನು ತನ್ನ ದೇವತ್ವವನ್ನು ಕುಗ್ಗಿಸಿಕೊಂಡು ಮನುಷ್ಯತ್ವಕ್ಕೆ ಇಳಿದಿಲ್ಲ, ಮನುಷ್ಯನು ತನ್ನ ಗುಣಗಳಿಂದ ದೇವತ್ವಕ್ಕೆ ಏರಿಹೋಗಿದ್ದಾನೆ.

ಭಾರತೀಯ ಕವಿಯು ಮಹಾಕಾವ್ಯವನ್ನು ರಚನೆಮಾಡಿದ್ದು ಮನುಷ್ಯನ ಉತ್ಕೃಷ್ಟ ಆದರ್ಶವನ್ನು ಸ್ಥಾಪಿಸುವುದಕ್ಕಾಗಿಯೇ. ಮನುಷ್ಯನ ಆ ಆದರ್ಶಚರಿತ್ರೆ ವರ್ಣನೆಯನ್ನೇ ಭಾರತೀಯರು ಅಂದಿನಿಂದ ಇಂದಿನವರೆಗೂ ಅತ್ಯಂತ ಉತ್ಸಾಹದಿಂದ ಓದುತ್ತಾ ಬಂದಿದ್ದಾರೆ.

ಸಂಸಾರದ ಕಡೆಗೆ ಅತ್ಯಂತ ಮಹತ್ವವನ್ನು ಕೊಟ್ಟಿರುವುದೇ ರಾಮಾಯಣದಲ್ಲಿರುವ ಮುಖ್ಯ ವಿಶೇಷತ್ವ. ತಂದೆ ಮಕ್ಕಳು, ಅಣ್ಣ ತಮ್ಮಂದಿರು, ಗಂಡ ಹೆಂಡಿರು ಇವರಲ್ಲಿರುವ ಧರ್ಮದ ಬಂಧನವನ್ನೂ ಪ್ರೇಮ ಮೂಲವಾದ ಸಂಬಂಧವನ್ನೂ ರಾಮಾಯಣವು ಎಷ್ಟು ಮಹತ್ತ್ವವನ್ನು ಕೊಟ್ಟಿರುವುದೆಂದರೆ— ಸಂಸಾರದ ಚರಿತ್ರೆಯು ಅತಿ ಸಹಜವಾಗಿ ಮಹಾಕಾವ್ಯಕ್ಕೆ ಉಪಯುಕ್ತವಾಗಿದೆ. ದೇಶಜಯ, ಶತ್ರುವಿನಾಶ ಪ್ರಬಲವಾದ ಎರಡು ಶತ್ರುಪಕ್ಷಗಳ ಪ್ರಚಂಡವಾದ ಹೋರಾಟ—ಇವೆಲ್ಲ ವ್ಯಾಪಾರವೂ ಸಾಧಾರಣವಾಗಿ ಮಹಾಕಾವ್ಯಗಳಲ್ಲಿ ಆಂದೋಲನವನ್ನೂ ಉದ್ದೀಪನದ ಸಂಚಾರವನ್ನೂ ಉಂಟುಮಾಡುತ್ತವೆ. ಆದರೆ ರಾಮಾಯಣದ ಮಹಿಮೆಯು ರಾಮರಾವಣರ ಯುದ್ಧವನ್ನು ಆಶ್ರಯಿಸಿಲ್ಲ; ಆ ಯುದ್ಧದ ಸಂಗತಿಯು ರಾಮ ಸೀತೆಯರ ದಾಂಪತ್ಯ ಪ್ರೀತಿಯನ್ನು ಉಜ್ವಲಮಾಡಿ ತೋರಿಸತಕ್ಕ ಉಪಲಕ್ಷ್ಯ ಮಾತ್ರವಾಗಿದೆ. ತಂದೆಯಲ್ಲಿ ಮಗನಿಗಿರುವ ವಿಧೇಯತೆ, ಅಣ್ಣನಿಗಾಗಿ ತಮ್ಮನ ಸ್ವಾರ್ಥತ್ಯಾಗ, ಗಂಡಹೆಂಡಿರಿಗೆ ಒಬ್ಬರಿಗೊಬ್ಬರಲ್ಲಿರುವ ನಿಷ್ಠೆ, ಪ್ರಜೆಗಳ ವಿಷಯದಲ್ಲಿ ರಾಜನ ಕರ್ತವ್ಯ ಇವುಗಳು ಎಷ್ಟು ದೂರ ಹೋಗಬಲ್ಲವೆಂಬುದನ್ನು ರಾಮಾಯಣವು ತೋರಿಸುತ್ತದೆ. ವ್ಯಕ್ತಿ ವಿಶೇಷದ ಮುಖ್ಯವಾಗಿ ಸಂಸಾರದ ಸಂಬಂಧಗಳು ಈ ರೀತಿಯಾಗಿ ವರ್ಣನೆಯ ವಿಷಯಗಳೆಂದು ಮತ್ತಾವ ದೇಶದ ಮಹಾಕಾವ್ಯದಲ್ಲಿಯೂ ಪರಿಗಣಿತವಾಗಿಲ್ಲ.

ಈ ಕಾವ್ಯದಿಂದ ನಮಗೆ ಆಗುವುದು ಕವಿಯ ಪರಿಚಯವು ಮಾತ್ರವಲ್ಲ, ಸಮಗ್ರ ಭರತಖಂಡದ ಪರಿಚಯವೂ ಆಗುತ್ತದೆ. ಗೃಹಸ್ಥ ಗೃಹಧರ್ಮಕ್ಕೂ ಭರತಖಂಡವು ಎಷ್ಟರಮಟ್ಟಿನ ಪ್ರಾಶಸ್ತ್ಯವನ್ನು ಕೊಟ್ಟಿದೆ ಎಂಬುದನ್ನು ಈ ಕಾವ್ಯದಿಂದ ತಿಳಿಯಬಹುದು. ನಮ್ಮ ದೇಶದಲ್ಲಿ ಗೃಹಸ್ಥಾಶ್ರಮಕ್ಕೆ ಅತ್ಯಂತ ಉನ್ನತಸ್ಥಾನವು ದೊರೆತಿದೆ ಎಂಬುದಕ್ಕೆ ಈ ಕಾವ್ಯವೇ ಪ್ರಮಾಣವಾಗಿದೆ. ಗೃಹಸ್ಥಾಶ್ರಮವಿರುವುದು ನಮ್ಮ ಸ್ವಂತ ಸುಖಕ್ಕೋಸ್ಕರ ಅಥವಾ ಅನುಕೂಲಕ್ಕೋಸ್ಕರವಲ್ಲ. ಅದು ನಮ್ಮನ್ನು ಸಮಾಜವನ್ನೂ ನಿಲ್ಲಿಸಿರುವುದು. ಅಷ್ಟೇ ಅಲ್ಲ,

ಮನುಷ್ಯನನ್ನು ಯಥಾರ್ಥವಾಗಿ ಮನುಷ್ಯನನ್ನಾಗಿ ಮಾಡಿವೆ ಗೃಹಸ್ಥಾಶ್ರಮವೇ ಪರತಖಂಡದ ಆರ್ಯ ಸಮಾಜದ ತಳಹದಿ ರಾಮಾಯಣವು ಆ ಗೃಹಸ್ಥಾಶ್ರಮದ ಕಾವ್ಯ ಆ ಗೃಹಸ್ಥಾಶ್ರಮವನ್ನೇ ರಾಮಾಯಣವು ಎಷ್ಟೋ ವಿಸ್ತಾರಕ್ಕೆ ಗುರಿಪಡಿಸಿ ಪವಿತ್ರವಾದ ಧರ್ಮದ ಮೂಲಕ ಅದಕ್ಕೆ ವಿಶೇಷ ಗೌರವವನ್ನು ಕೊಟ್ಟು ಮಾಡಿರುತ್ತದೆ ಕೈಕೆ ಮಂಥರೆಯರ ಪಿತೂರಿಯ ಕಠಿಣವಾದ ಆಘಾತದಿಂದ ಅಯೋಧ್ಯೆಯ ರಾಜಗೃಹವನ್ನು ಅಗ್ನಿಪರೀಕ್ಷೆ ಅದರ ಆಘಾತದಿಂದಲೇ ಗೃಹಸ್ಥ ಧರ್ಮದ ದುರ್ಘೋತ್ತರವಾದ ದೃಢತೆಯನ್ನು ರಾಮಾಯಣವು ಸ್ಥಾಪಿಸಿರುತ್ತದೆ ಬಾಹುಬಲ ಐಶ್ವರ್ಯ ರಾಜ್ಯ ಗೌರವಗಳಿಗೆ ರಾಮಾಯಣವು ಮಹತ್ವವನ್ನು ಕೊಟ್ಟಿಲ್ಲ. ಶಾಂತರಸಾಸ್ಪದವಾದ ಗೃಹಸ್ಥಧರ್ಮಕ್ಕೆ ಕರುಣೆಯ ಕಣ್ಣೀರಿನಿಂದ ಅಭಿಷೇಕಮಾಡಿ ಅದನ್ನು ಮಹತ್ತಾದ ವೀರದ ಮೇಲೆ ಪ್ರತಿಷ್ಠಿಸಿರುವುದು

ಇಂತಹ ಸಂದರ್ಭದಲ್ಲಿ ಚರಿತ್ರವರ್ಣನೆಯು ಅತಿಶಯೋಕ್ತಿಯಿಂದ ತುಂಬಿಹೋಗುತ್ತದೆ ಎಂದು ಶ್ರದ್ಧಾಹೀನರಾದ ಪಾಠಕರು ಹೇಳಬಹುದು. ಆದರೆ ಯಥಾರ್ಥದ ಮೇರೆಯೂ ವ್ಯ... ಕಲ್ಪನೆಯ ಮೂಲದ ಸರಹದ್ದನ್ನು ಮೀರಿದರೆ ಕಾವ್ಯ ಕಲೆ... ಅತಿಶಯೋಕ್ತಿಗೆ ಹೋಗುತ್ತದೆ, ಎಂಬುದರ ವಿ... ... ಎಂದು ಮಾಪನದಲ್ಲಿ ಮುಗಿಯತಕ್ಕದ್ದಲ್ಲ ರಾಮಾಯಣದಲ್ಲಿ ಚರಿತ್ರವರ್ಣನೆಯು ಅಸ್ವಾಭಾವಿಕವಾಗಿದೆ ಎಂದು ... ಸಮಾಲೋಚಕರಿಗೆ ನಾವು ಹೀಗೆ ಉತ್ತರ ಕೊಡುತ್ತೇವೆ— ಪ್ರಕೃತಿಭೇದದಿಂದ ಒಬ್ಬರಿಗೆ ಅಸ್ವಾಭಾವಿಕವಾದದ್ದು ಮತ್ತೊಬ್ಬರಿಗೆ ಸ್ವಾಭಾವಿಕವಾಗಿರುತ್ತದೆ ಭರತಖಂಡದ ಜನರು ರಾಮಾಯಣದಲ್ಲಿ ಅಸ್ವಾಭಾವಿಕತೆಯನ್ನು ಕಂಡಿಲ್ಲ

ಯಾವ ಸ್ಥಳದಲ್ಲಿ ಶೃಂಗಾರದಲ್ಲಿರುವ ಆದರ್ಶವನ್ನು ... ಕೃತಿ ... ಅಸ್ಪಷ್ಟದ ಜನರಿಗೆ ಅದು ಗ್ರಾಹ್ಯವಾಗ ... ನಮ್ಮ ಪ್ರತಿ ಯಂತ್ರದಲ್ಲಿ ನಾವು ಎಷ್ಟು ಶಬ್ದತರಂಗಗಳ ಆಘಾತವನ್ನು ಹೊಂದಬಲ್ಲೆವೆಂಬುದಕ್ಕೆ ಎಂತಹದೆ, ಆ ಮೇರೆಯಿಂದ ಮೇಲಿನ ಪಳಿಣಿಯ ಸ್ವರವನ್ನು ಬಾಜಿಸಿದರೆ ನಮ್ಮ ಕಿವಿಯು ಅದನ್ನು ಗ್ರಹಿಸುವುದಿಲ್ಲ ಕಾವ್ಯದಲ್ಲಿ ಚರಿತ್ರೆಯ ಮತ್ತು ಜಾನ್ವೇಕ್ಷೆಕದ ಸಂಬಂಧಕ್ಕೂ ಈ ಮಾತು ಅನ್ವಯಿಸುತ್ತದೆ

ಈ ಮಾತನ್ನು ಒಪ್ಪುವುದಾದರೆ ಭಾರತೀಯರ ದೃಷ್ಟಿಯಿಂದ ರಾಮಾಯಣವು ಯಾವ ಅಂಶದಲ್ಲಿಯೂ ಮಿತಿಮೀರಿಲ್ಲವೆಂಬುದಕ್ಕೆ ಸಾವಿರಾರು ವರುಷಗಳು ಪ್ರಮಾಣವಾಗಿವೆ. ಈ ರಾಮಾಯಣ ಕಥೆಯಿಂದ ಭರತಖಂಡದ ಆಬಾಲವೃದ್ಧವನಿತೆಯರೂ ಆಪಾಮರ ಸಾಧಾರಣರೂ ಶಿಕ್ಷಣಲಾಭವನ್ನು ಪಡೆಯುತ್ತಿರುವುದು ಮಾತ್ರವೇ ಅಲ್ಲ, ಆನಂದಾನುಭವವನ್ನೂ ಪಡೆಯುತ್ತಿದ್ದಾರೆ ಅದನ್ನು ಶಿರಸಾಧರಿಸಿರುವುದು ಮಾತ್ರವೇ ಅಲ್ಲ, ತಮ್ಮ ಹೃದಯದಲ್ಲಿಯೂ ಅದಕ್ಕೆ ಸ್ಥಾನವನ್ನು ಕೊಟ್ಟಿದ್ದಾರೆ ಅದು ಅವರ ಧರ್ಮಶಾಸ್ತ್ರವಾಗಿರುವುದು ಮಾತ್ರವೇ ಅಲ್ಲ ಅವರ ಕಾವ್ಯವೂ ಆಗಿದೆ.

ಈ ಮಹಾ ಗ್ರಂಥದ ಕವಿತ್ವವು ಭರತಖಂಡದವರಿಗೆ ದೂರದಲ್ಲಿರುವ ಒಂದು ಕಲ್ಪನಾ ಪ್ರಪಂಚದ ಸಾಮಗ್ರಿಯಾಗಿದ್ದು ಎಷ್ಟು ನಮ್ಮ ಈ ಜಗತ್ತಿನ ಎಲ್ಲೆಗೆ ಸೇರದೆಯೇ ಹೋಗಿದ್ದ ಪಕ್ಷದಲ್ಲಿ ರಾಮನು ಏಕಕಾಲದಲ್ಲಿ ನಮ್ಮ ಪಕ್ಷಕ್ಕೆ ದೇವತೆಯೂ ಮನುಷ್ಯನೂ ಆಗುವುದೂ, ರಾಮಾಯಣವು ಏಕಕಾಲದಲ್ಲಿ ನಮ್ಮ ಭಕ್ತಿಯನ್ನೂ ಪ್ರೀತಿಯನ್ನೂ ಹೊಂದುವುದೂ ಎಂದಿಗೂ ಸಾಧ್ಯವಾಗುತ್ತಿರಲಿಲ್ಲ

ಪರದೇಶದ ಸಮಾಲೋಚಕರು ನಮ್ಮ ಕಾವ್ಯ ... ದ ... ... ಇಂತಹ ಗ್ರಂಥವನ್ನು ... ... ತರಿಯುವ ಪಕ್ಷದಲ್ಲಿ ಅವರ ದೇಶಕ್ಕೂ ಭರತಖಂಡಕ್ಕೂ ... ರುವ ವ್ಯತ್ಯಾಸವು ಸ್ಪಷ್ಟವಾಗಿ ಕಾಣುತ್ತದೆ ಭರತಖಂಡವು ಹೇಗೆ ಆಲೋಚನೆಮಾಡುವದನ್ನು ರಾಮಾಯಣದಲ್ಲಿ ಪರಿಚಿತ್ರದೆ

ರಾಮಾಯಣ ಮಹಾಭಾರತಗಳನ್ನು ನಾನು ವಿಶೇಷವಾಗಿ ಈ ಭಾವದಿಂದ ನೋಡುತ್ತೇನೆ. ಇವುಗಳ ಸರಳವಾದ ಅನುಷ್ಟುಪ್ ಛಂದಸ್ಸಿನಿಂದ ಭರತಖಂಡದ ಹೃದಯವು ಸಾವಿರಾರು ವರುಷಗಳಿಂದಲೂ ಸ್ಪಂದಿತವಾಗುತ್ತಾ ಬಂದಿರುತ್ತದೆ

ಶ್ರೀಯುತ ದಿನೇಶಚಂದ್ರ ಮಹಾಶಯರು ತಮ್ಮ "ರಾಮಾಯಣ ಚರಿತ್ರ ಸಮಾಲೋಚನ" ಗ್ರಂಥದ ಟೀಕೆಯನ್ನು ಬರೆದುಕೊಡಬೇಕೆಂದು ಅನುರೋಧ ಮಾಡಿದಾಗ ನನಗೆ ಅಸ್ವಸ್ಥವಾಗಿದ್ದರೂ ಅವಕಾಶವಿಲ್ಲದೇ ಇದ್ದರೂ ಆತನ ಮಾತನ್ನು ತೆಗೆದು ಹಾಕುವುದಕ್ಕೆ ನನ್ನಿಂದ ಆಗಲಿಲ್ಲ

ಈ ವರ್ಷ ಬೆಳಗಾಮಿಯಲ್ಲಿ ನಿಖಿಲಭಾರತ ವರ್ಷೀಯ ದೇಶೀಯ ಮಹಾಸಭೆಯು ನಡೆಯುವುದು, ನಮ್ಮ ಕನ್ನಡ ದೇಶಕ್ಕೆಲ್ಲಾ ಆನಂದಾಸ್ಪದವಾದ ವಿಷಯವು. ಈ ಮಹಾಸಭೆಯ ... ಕಮಿಟಿಯವರು ಈ ಕಾಂಗ್ರೆಸ್ ಮಹಾಸಭಾಕಾಲದಲ್ಲಿ ದೇಶೀಯ ವಸ್ತುಪ್ರದರ್ಶನವನ್ನು ನಡೆಸಲು ನಿರ್ಧರಿಸಿರುತ್ತಾರೆ. ಈ ಪ್ರದರ್ಶನದಲ್ಲಿ ಆಯುರ್ವೇದ ವಸ್ತು ಪ್ರದರ್ಶನ ... ಏರ್ಪಡಿಸಲ್ಪಟ್ಟಿರುವುದು. ಈ ಆಯುರ್ವೇದ ಪ್ರದರ್ಶನ ಶಾಖೆಯಲ್ಲಿ ನಿಖಿಲ ಭಾರತವರ್ಷದಲ್ಲಿರುವ ವೈದ್ಯರು ... ತಮ್ಮ ತಮ್ಮ ವಸ್ತುಗಳನ್ನು ಪ್ರದರ್ಶಿಸಬಹುದು. ... ಕುಂಡಗಳಲ್ಲಿ ಬೆಳೆದು ... ಆಯುರ್ವೇದೀಯ ... ಉಪಕರಣಗಳು ಯಂತ್ರ ... ಪ್ರದರ್ಶಿಸಬಹುದು. ಆಯುರ್ವೇದ ಶಸ್ತ್ರಗಳನ್ನು ... ಸಿದ್ಧೌಷಧಗಳನ್ನು, ರಸ, ... ಭಸ್ಮಗಳನ್ನು ಇಡಬಹುದು. ಅಲ್ಲದೆ ಆಯುರ್ವೇದ ಗ್ರಂಥಗಳನ್ನು, ಶಾಸನ, ಚಿತ್ರಲೇಖನಗಳನ್ನು ಸಹ ಪ್ರದರ್ಶಿಸಬಹುದು.

ಇಂಥ ಅಮೂಲ್ಯವಾದ ಪ್ರದರ್ಶನ ಸಂಧಿಯಲ್ಲಿ ಕರ್ನಾಟಕ ಆಯುರ್ವೇದ ಸಮ್ಮೇಳನವನ್ನು ನಡೆಸುವುದಂತ ಬೆಳಗಾಮಿಯಲ್ಲಿ ... ತಾ 16.8.24ರಲ್ಲಿ ಸಭೆ ಸೇರಿ ಠರಾಯಿಸಿ, ರಿಸೆಪ್ಷನ್ ಕಮಿಟಿಗೆ, ಡಾ ಎ ಜಿ ವಿ. ನವಣೂರ, ಎಲ್. ಯಂ. ಯಸ್ ರವರು ಪ್ರೆಸಿಡೆಂಟರಾಗಿರುವರು. ಇವರೇ ಆಯುರ್ವೇದ ಸಮ್ಮೇಳನವು ಜಯಪ್ರದವಾಗಿ ನಡೆಯಲು ವಿಶೇಷ ಅವಕಾಶವಾಗಿದೆ.

ಈ ಆಯುರ್ವೇದ ಪ್ರದರ್ಶನದ ಲಾಭವು ವಿಶೇಷವಾಗಿ ಆಯುರ್ವೇದ ವೈದ್ಯರಿಗೇ ಸಂಬಂಧಿಸಿರುವುದರಿಂದ ಕನ್ನಡ ದೇಶದಲ್ಲಿರುವ ಎಲ್ಲಾ ಆಯುರ್ವೇದ ವೈದ್ಯರೂ ಈ ಸುಸಮಯದಲ್ಲಿ ತಮ್ಮ ತಮ್ಮ ವಸ್ತುಗಳನ್ನು ಪ್ರದರ್ಶನಕ್ಕೆ ಕಳುಹಿಸುವುದಲ್ಲದೆ ಭರತಖಂಡದ ಎಲ್ಲಾ ಭಾಗಗಳಿಂದಲೂ ಬರುವ ವಸ್ತುಗಳನ್ನು, ಸಾಕ್ಷಾತ್ತಾಗಿ ಪರೀಕ್ಷಿಸಿ ಕರ್ನಾಟಕ ದೇಶದಲ್ಲಿ ಆಯುರ್ವೇದವನ್ನು ಸರ್ವತೋಮುಖವಾಗಿ ಪ್ರಸರಿಸಲು ನಡೆಸಬೇಕಾದ ವಿಧಾನ ಕಾರ್ಯಗಳನ್ನು ಗೊತ್ತು ಮಾಡುವುದು ಅತ್ಯಾವಶ್ಯಕವಾಗಿದೆ.

ಸಂ ಪ

ಬೆಳಗಾಮಿಯಲ್ಲಿ ನಡೆಯುವ ಕಾಂಗ್ರೆಸ್ ಮಹಾಸಭೆಯ ಕಾಲದಲ್ಲಿ ಕರ್ನಾಟಕ ಪ್ರಾಂತಿಕ ಆಯುರ್ವೇದ ವೈದ್ಯ ಸಮ್ಮೇಳನವು ನಡೆಯುವುದು. ಇದಕ್ಕೆ ಕರ್ನಾಟಕ ದೇಶದಲ್ಲಿರುವ ಎಲ್ಲಾ ಆಯುರ್ವೇದ ವೈದ್ಯರನ್ನು, ಹಕೀಮರೂ, ದೇಶಾಭಿಮಾನಿಗಳಾದ ಡಾಕ್ಟರರೂ, ಈ ಸಮ್ಮೇಳನ ಕಾರ್ಯಕ್ಕೆ ಬಾಧ್ಯರಿರುವರು. ನಮ್ಮ ಕರ್ನಾಟಕ ದೇಶದಲ್ಲಿ ಆಯುರ್ವೇದ ವೈದ್ಯರು ಎಷ್ಟು ಜನರಿರುವರು? ಎಲ್ಲೆಲ್ಲಿ ಯಾರು ಯಾರು ಎಷ್ಟರಮಟ್ಟಿಗೆ ಕೆಲಸವನ್ನು ನಡೆಸುತ್ತಿರುವರು? ಎಂಬ ಸಂಗತಿಯನ್ನು ತಿಳಿಯುವುದು ಆಯುರ್ವೇದ ಸಮ್ಮೇಳನದ ರಿಸೆಪ್ಷನ್ ಕಮಿಟಿಯವರಿಗೆ ಅವಶ್ಯಕವಾಗಿದೆ. ಇಂಥಾ ವೈದ್ಯರಿಗೆಲ್ಲಾ ಆಹ್ವಾನವನ್ನೇ ಕಳುಹಿಸಬೇಕಾಗಿರುವುದರಿಂದ ದೇಶಾಭಿಮಾನಿಗಳಾದ ವೈದ್ಯರೆಲ್ಲರೂ ತಮ್ಮ ತಮ್ಮ ಹೆಸರು ವಿಳಾಸಗಳನ್ನು ಒಡನೆ ಜನರಲ್ ಸೆಕ್ರೆಟರಿ ಕರ್ನಾಟಕಾಯುರ್ವೇದ ಸಮ್ಮೇಳನ C/o ಕಾಂಗ್ರೆಸ್, ಬೆಳಗಾಮಿ, ಇವರಿಗೆ ಕಳುಹಿಸಬೇಕು.

ಕರ್ನಾಟಕ ರಾಷ್ಟ್ರದಲ್ಲಿ ಬೆಳಗಾಮಿ ಧಾರವಾಡ, ಬಿಜಾಪುರಜಿಲ್ಲೆಗಳಲ್ಲಿ ಈಗಾಗಲೇ ಉತ್ಸಾಹದಿಂದ ಕಾರ್ಯ ಮಾಡುವ ವೈದ್ಯರುಲಭಿಸಿರುವರು. ಇತರ ಜಿಲ್ಲೆಗಳಲ್ಲಿಯೂ ಇಂಥಾ ವೈದ್ಯರೂ ದೊರೆತಾಗಿ ಮುಂದೆ ಒಂದು, ಇದೇ ಮೊದಲಾಗಿ ಕರ್ನಾಟಕದಲ್ಲಿ ನಡೆಯುವ ಕರ್ನಾಟಕಾಯುರ್ವೇದ ಸಮ್ಮೇಳನವನ್ನು ಜಯಪ್ರದವಾಗಿ ನಡೆಸಲು ಪ್ರಯತ್ನಿಸಬೇಕಾಗಿದೆ.

ತಾ. 5.9.24 ವಿದ್ವಾನ್ ಕೆ. ಶೇಷಶಾಸ್ತ್ರಿ,
ಜನರಲ್ ಸೆಕ್ರೆಟರಿ,
ಕರ್ನಾಟಕ ಆಯುರ್ವೇದ ಸಮ್ಮೇಳನ
C/o ಕಾಂಗ್ರೆಸ್, ಬೆಳಗಾಮಿ.

ಪತ್ರವ್ಯವಹಾರಗಳು.

ಬಾತ್ಮಿದಾರರು ನಡುವೆ ಅಭಿಪ್ರಾಯಗಳಿಗೆ ಪತ್ರಿಕೆಯವರು ಉತ್ತರವಾದಿಗಳಲ್ಲ.

[ಸಂಪಾದಕ]

ಸಂಪಾದಕರವರಲ್ಲಿ ಬಿನ್ನಹ,

ಅಯ್ಯಾ,

... ಕೊಡಗಿನ ... ಯಾತ್ರಿಕರಿಗೆ ವಾಸಿಸಲಿಕ್ಕೆ ಸ್ಥಳ ಇಲ್ಲದೆ ಅನೇಕ ತರದ ತೊಂದರೆಗಳುಂಟಾಗುತ್ತವೆ. ಆದ್ದರಿಂದ ಅದನ್ನು ಸ್ವಲ್ಪಮಟ್ಟಿಗಾದರೂ ನಿವಾರಿಸಲು ಘನ ಸರ್ಕಾರದವರು ಅವರ ಇಲಾಖೆ ಉಪಯೋಗಕ್ಕಾಗಿ ಇಟ್ಟುಕೊಂಡಿರುವ ಎಲ್ಲಾ ... (Tents) ಗಳನ್ನು ವೈದ್ಯದಾನಗಳಲ್ಲಿ ಹಾಕಿಸಿದರೆ ಯಾತ್ರಿಗಳಿಗೆ ಸ್ಥಳಕೊಟ್ಟಂತಾಗಿ ಅವರಿಗೆ ಪುಣ್ಯ ಸಿಕ್ಕುವದರಲ್ಲಿ ಸಂದೇಹವಿಲ್ಲ. ಈ ಡೇರೆಗಳನ್ನು ಒಂದು ವಾರದ ಉಪಯೋಗಕ್ಕೆ ಕೊಟ್ಟರೆ ಸಾಕಾಗುವದು. ಸರಕಾರದವರು ಈ ಸನ್ನಿವೇಶಗಳಿಗೆ ಗಮನ ಕೊಡುವರಾಗಿ ನಂಬುತ್ತೇನೆ.

ತಾ. 30.9.24. ...

ಅಯ್ಯಾ,

ನಮ್ಮ ಕೊಡಗು ದೇಶದ ಜಾತ್ರೆ ನಡೆಯುವ ಸಮಯದಲ್ಲಿ ನನ್ನದೊಂದು ವಿನಂತಿ. ಈಗ್ಗೆ ... ಅಂದು ನಮ್ಮ ಚಿಕ್ಕ ರಾಜ್ಯದ ಅವಸ್ಥೆಯನ್ನು ಜನರಿಗೆ ತಿಳಿಸುವ ಉದ್ಯುಕ್ತ ಭಾವಗ ತಂದರುವ ಪತ್ರಿಕೆಯಲ್ಲು ಯಾರೋ ಮಹಾಶಯರು ತಾ 5.9.1924ನೇ ಪತ್ರಿಕೆ ... ಪ್ರಕಟಿಸಿರುವ ಮತವಿಚಾರದ ಜಾತ್ರೆಗಳ ... ಒಂದು ಮತದವರು ಇನ್ನೊಂದು ಮತದವರ ದೂಷಿಸುವುದನ್ನೂ ಮತ್ತೊಬ್ಬರು ಇತರಮತಸ್ಥರನ್ನು ... ತಕ್ಕ ನರು ಹೋಲಿಸಿಕೊಳ್ಳುವದನ್ನೂ ಪರಿಶೀಲಿಸಿದರೆ ... ಅಯೋಗ್ಯತೆಯನ್ನೂ ನವರಿಯುವರು. ಹಿಂದುಗಳ ... ಜಾತಿಯವರಲ್ಲಿ ಹಿಂದುಳಿದಿರುವುದನ್ನೂ ಪತ್ರಿಕೆಯಲ್ಲಿ ... ನಡಿಸಿದಂತಾಗಿದೆಯಲ್ಲವೇ? ಧರ್ಮಾಂತರಕ್ಷಕರುಗಳು ... ಒಂದು ಮತದವರು ಇನ್ನೊಂದು ಮತದ್ವೇಷ ಇಷ್ಟು ಪತ್ರಿಕೆಯಲ್ಲು ಒಂದು ಮತದವರ ... ನ್ನು ತಿಳಿಯದೆ ಮನೋಇಷ್ಟಾನುಸಾರ ಪ್ರಕಟಿಸುವುದು ಕೃಷ್ಣಸರ್ಪನ ಮುತ್ತವನ್ನು ಕಲಕಿದಂತಾಗುತ್ತೆ. ... ಲೋಕದಲ್ಲಿ ಯಾವ ಮತದವರೇ ಆಗಲಿ ಕೋಪ ... ಉಂಟಾಗುವಂತ ಪ್ರಕಟಿಸುವುದು ಅವರವರ ಗುಣ ... ವನ್ನು ಇತರರಿಗೆ ತೋರ್ಪಡಿಸುವುದು. ಮತ ಚರಿತ್ರೆ ಶೋಧಿಸಿದರೆ ಹಿಂದುಗಳಲ್ಲಿ ಮೇಲು ಜಾತಿಯವರು, ಹಿಂದುಳಿದವರು ಯಾರು, ಎಂಬುದೂ ಹಿಂದುಗಳ ಸದ್ಗತಿಮಂತಾದ್ದು ಎಂಬುದೂ ಪಾತ್ರ ... ತಿಳಿಸಿಗೆ ಬರುವುದು. ದಕ್ಷಿಣ ಇಂಡಿಯದಲ್ಲಿ ನಮ್ಮ ಕೊಡಗು ದೇಶವು ಅತ್ಯಂತ ಪುಣ್ಯ ಭೂಮಿಯೆಂದು ... ಅದರ ಇಲ್ಲಿಯ ನಿವಾಸಿಗಳಲ್ಲಿ ಕೆಲ ಪಂಗಡದವರು ... ನ ಆಚಾರವನ್ನು ನೋಡಿದರೆ ಪರು ಜಾತಿಗೆ ... ಹೇಳಬಹುದು. ಮನುಷ್ಯ ಮಾತ್ರದವರಿಗೆ ... ಉಂಟಷ್ಟು. ಅಂಥ ದೇವರನ್ನು ಬಿಟ್ಟು ಅನ್ಯ ದೇವರ ಪೂಜಿಸುವವರು ಹಿಂದುಳಿದವರೆಂದು ನಾನು ಸಹ ... ಹಿಂದುಗಳಲ್ಲಿ ಮೇಲು ಜಾತಿಯವರು ವಿನಹ ಉಳಿದ ... ಪಂಗಡಗಳನ್ನು ಪುನರ್ ... ಮಾಡಿಕೊಳ್ಳುವ ...

೧೯೨೪ನೇ ಪತ್ರಿಕೆಯ ೪ನೇ ಸಂಚಿಕೆಯ ಮತ ವಿಚಾರದಾ ದೃಷ್ಟಿಯಿಂದ ... ಕಾಲದ ... ಸಂಗತಿಗಳ ... ಗದ್ದಲ್ಲಿ ಮತವಿಚಾರ ... ಆಫ್ರಿಕದಲ್ಲಿ ... ವಿದ್ಯಾ ಬುದ್ಧಿ ... ಹೊಂದಿದವರೆಂದು ... ಸವಿಯುವ ... ಆಲೋಚನೆ ... ಮತ ... ಕೊಡಗಿನ ಗೌಡರ ... ಹಿಡಿದವರೆಂದೇ ಎಸುದು. ಇವರ ... ಜಗಳ ... ಬಿಟ್ಟು ... ಸಾಕ್ಷಿ ... ಅನುಸರಿಸಿದ್ದ ... ಮತಾಚಾರಕ್ಕೆ ಎಷ್ಟೋ ... ಸುವುದು.

ಪಿ. ... ಸುಬ್ರಾಯ್ಯ ಗೌಡ

ಮದುವೆ ರತ್ತು ಕಂದಾಯ

... ಅಮ್ಮ ... ಪತ್ರಿಕೆಯ ... 16ನೇ ಸಂಚಿಕೆ ... ಬರೆದ ... ಒಂದು ವಿಷಯವನ್ನು ... ನೋಡುವಲ್ಲಿ ... ಸರಕಾರ ... ಉತ್ಪತ್ತಿಯಿಂದ ... ಕೊಡಗಿನಾದ ... ಮದುವೆ ರತ್ತನ್ನು ... ಗಳಲ್ಲಿ ಕೊಡುವುದ ... ಕಂದಾಯ ... ಗಿದ್ದಿಕೊಟ್ಟು ಸರಕಾರದಿಂದ ಹೊಂದಿಕೊಂಡ ... ಎಷ್ಟೋ ಜನರ ... ದೊಡ್ಡದಾದ ... ಮಾಡಬೇಕೆಂದು ... ಚೆನ್ನಾಗಿ ... ಜಡತನವು ತಕ್ಕ ಕಾಲದಲ್ಲಿ ... ಮಕ್ಕಳು ದೊಡ್ಡವರಾದರೂ ... (ಕೊಟ್ಟಾಕತ್ತಿಕಾರ ... ಕೊಯಿಕತ್ತಿಕಾರರಾಗಿ) ... ಹೊರತ್ತು ... ಕೊಡಗಿನ ... ಪಡುವದಕ್ಕೆ ... ಕಂಡೆಗ ... ದೆ ... ಯುವತಿಯರ ... ಆವನ ... ಸೋಮಯ್ಯ

ಗ್ರಾಮಸಂಪಂಚ ... ಪಕ್ಕಗ

... ಹೇಳೀಯರ ... ಕೈಗಾರ ... ಕೊಡುವ ... ಒಂದು ... ಪೂಜೆ ... ಗೋಡಂತೆ ... ಕಂಡ ... ಕಾಲ ... ಹೋಗಿ ... ನೆಲೆ ... ಗೌರವ ... ಕೊಡಗು ... ಗೌರ ... ಜನ ... ಗುರುತು ... ಪಡೆದು ... ವೃದ್ಧಿ ... ಯಾತ್ರಿಕರ ... ಜನರ ... ಕೊಡಗಿನ ... 'ಜನ ಸೊಂದವ'

ಸಾಮು ದೇವಯ್ಯ

... ರೋಗಿಗಳಲ್ಲಿ ... ಅನ್ನ ... ದಿನಕ್ಕೆ ... ನಾಸ್ಟರುಗಳನ್ನು ... ವಿದ್ಯೆಯಾಗಿ ...

ದಿನದಾದ್ದು. ... ತಗಿನ ... ತೆಯ ಮಹಿಮೆಯಿಂದಲೂ ... ಕ್ಷೇತ್ರದ ಕೊಡವ ... ಪ್ರಸಂಗ (ಬಾಲ್ರ್ಯ) ... ಸೃಷ್ಟಿಯ ... ಕ್ರಿಮಿಗಳು ... ಉಂಟಾಗುತ್ತವೆಂದು ... ಡಾಕ್ಟರುಗಳ ... ಮಹತ್ವ ... ಹೀಗಿರುವಾಗ ... ಮಂತ್ರಂಗಳ ... ಒಂದು ... ಗಂಟು ... ಮಕ್ಕಳಿಗೆ ... ಜನ್ಮ ... ಅವರ ಬಾಡೆ ... ಸಾಧಾರಣವಾಗಿ ತಿಳಿದ ಸಂಗತಿಯಾಗಿದೆ ... ಮಂತ್ರಂಗಳು ... ಕ್ರಿಯೆಗಳ ... ಬಗೆ?

ಒಂದು ತರದ ... ಕೈಯಲ್ಲಿ ಹಿಡಿದು ಕೊಂಡು ... ಪ್ರಸವ ವೇದನೆಯಿಂದ ... ಸ್ತ್ರೀಯರ ... ಪ್ರಸವಿಸ ... ತಲೆ ... ಕಾಲಿನ ... ಕಟ್ಟಿ ... ಸಾಧಾರಣದ ... ಒಂದು ತರದ ... ಗಾಯ ... ಪ್ರಾಣ ... ಇಲ್ಲ.

ಹಾಗೆಯೇ ... ಗಾಯ ... ತರದ ... ಸಾಯ ... ಬಂದ ... ಕಂಡು ... ಪ್ರಸವ ... ಕಾಲ ... ಗುಣ ... ವರ್ಗದ ... ಹೇಳಬಹುದು.

ಆದ್ದರಿಂದ ಈಗ ಸರಕಾರದ ... ಕೊಡಗಿನ ... ಆಸ್ಪತ್ರೆಗಳಲ್ಲಿ ... ಪ್ರತ್ಯೇಕ ... ಅನೇಕ ... ಸಂದೇಹವಿಲ್ಲ.

ಪಿ. ಕೆ. ಎಂ.

ಗೌರಿಗಳ ...

ಆಯ್ತ್ತಾ,

ಕೆಲವು ತಿಂಗಳುಗಳಿಗೆ ಹಿಂದೆ ... ಪಡೆದ ... ಜಾತಿ ... ಈ ಜಾತ್ರೆಯು ... ಗುಣ ... ಈ ... ಸಂದರ್ಭ ... ಮೈಸೂರು ... ಈ ಪತ್ರಿಕೆಯಲ್ಲಿ ... ಗೌಡ ... ಹಾಗೂ ... ನಾಡ ... ಕಾಡಿ ... ಮಕ್ಕಳ ... ಗೌರಿಗಳ ... ಆಕ್ಷೇಪ ... ದೇವಸ್ಥಾನ ... ಗೌರಿಗಳ ... ಗೌರಿಗೆ ಹಾಕುವ ... ಈ ಕಾಲದಲ್ಲಿ ... ಗೌರಿಗಳು ... ಬಾಡಿಗೆ ... ಗೌರಿಗಳು ... ಮಾಡುವುದು ...

ಯಾಂಗಿ ಕಟ್ಟಿಸಿದ ... ಅಭಿಪ್ರಾಯದ ... ಅತಿಶಯೋಕ್ತಿಯಾಗದು. ಅಷ್ಟೇ ಅಲ್ಲ, ಜಾತ ಎಷ್ಟು ... ಹುಟ್ಟಿ ಹೋಗುವ ಈ ... ಎಷ್ಟಿದೆ? ... ಕ್ರಿಯೆಕ್ಕೆ ... ಕಾರಣದಿಂದ ... ಅವುಗಳ ... ಬಹಳ ದುರಾಶೆಯೋ!! ಆ ಹಾಡಿಗೆ ... ಪ್ರತಿ ... ಹಾಲು ... ಉಪಾಯ, ಹಾಲನ್ನು ... 'ಹಣ ಕಂಡರೆ ಹೆಣ ಬಾಯಿ ಬಿಡುವುದು' ಎಂಬ ನಾಣ್ಣುಡಿಯಂತಿರಲಿ ... ಹಾಲು ಕೊಡ ಬೇಕೆಂದ ... ಹಾಲನ್ನು ... ದಾರಿ ಯಾವದು? ಹಾಲನ್ನು ನೀರು ಮಾಡುವ ... ಈ ಯಂತ್ರದಿಂದ ... ಹಾಲಿಗೂ ... ಹೀಗಾದರೆ ಹಾಲಿನ ಬೆಲೆ ... ನೀರು ... ಇದಕ್ಕೇನು ದಾರಿ?

ಈ ದೋಷವು ... ಕೆಲವು ... ಸ್ತ್ರೀಯರಿಂದ ... ಗೌಳಿಗಳ ... ಈ ದೇಶದಲ್ಲಿಯೂ ಕೆಲವು ... ಹಾಲನ್ನು ... ಈ ಪ್ರಯತ್ನ ...

ಇನ್ನು ಕೆಲವು ಸಂಗತಿಗಳನ್ನು ಕೊಡಗು ... ಈ ಹಾಡಿ ... ಈ ದೋಷವು ... ಕಾರಣ ... ಈ ಸಂಕಷ್ಟ ... ಹಾಲು ... ಭೂಮಿಯಲ್ಲಿ ... ನಾನಿನ್ನು ...

ಸಮಸ್ತ

ಮಲೆಯೂಳ ವೈದ್ಯಶಾಲಾ.

ಮಲಬಾರಿನ ನಂಬೀಶನ್ ಮತ್ತು ಕಂಪೆನಿ ಎಂಬ ಆಯುರ್ವೇದ ವೈದ್ಯ ಶಾಲೆಯ ಒಂದು ಶಾಖೆಯು ವೀರರಾಜೇಂದ್ರಪೇಟೆಯಲ್ಲಿ ನಡೆಯುತ್ತದೆ. ಇಲ್ಲಿ ಯಾವ ವಿಧದ ಕಾಯಿಲೆಯಾಗಿದ್ದರೂ ಒಂದಿತರಿಂದ ಪರೀಕ್ಷಿಸಿ ಔಷಧಕೊಟ್ಟು ಗುಣಪಡಿಸಲ್ಪಡುತ್ತೆ. ಔಷಧದ ಧಾರಣೆ ಬಹಳ ಕಡಿಮೆ ಹೆಚ್ಚಿನ ಈ ಕೆಳಗಿನ ವಿಳಾಸಕ್ಕೆ ಬರೆದು ವಿವರಗಳನ್ನು ತಿಳಿಯಬಹುದು

ನಾರಾಯಣ ನಂಬೀಶನ್,
ಆಯುರ್ವೇದ ವೈದ್ಯರು,
52—17 ವೀರರಾಜೇಂದ್ರಪೇಟೆ.

ಕಲ್ಪತರು ತಾಯಿತ.

ಸ್ತ್ರೀ ರೋಗ, ಶೀತ ಸುಖ ರೋಗ, ನರ ಸಿಗೋಣ, ಸಂಬಳ ಹೆಚ್ಚಿಗೆ, ಶತ್ರುಗಳಿಂದ ಸಂತತಿಯಾಗದ್ದು, ಕೋರ್ಟಿನ ವ್ಯವಹಾರದಲ್ಲಿ ಯಶಸ್ಸು ಸಿಗೋಣ, ವ್ಯಾಪಾರದಲ್ಲಿ ಬಹಳ ಲಾಭ ಸಿಗೋಣ, ಸಾಲ ಮುಕ್ತ ಆಗೋಣ, ಭೂತ ಪಿಶಾಚ ಗ್ರಹಬಾಧೆ ಆಗದಿರೋಣ, ಪ್ರತಿಕೂಲ ಇದ್ದವರು ಅನುಕೂಲವಾಗೋಣ ಇವೇ ಮತ್ತು ... ಬೇಕಾದ ... ಈ ತಾಯಿತವನ್ನು ಕಟ್ಟಿದರೆ ... ಕಾಯಿತ ಯವಾಗಲು ... ಪೂರ್ಣವಾಗುವದು. ಅನುಭವದ ಮೇಲೆ ... ತಾಯಿತ ... ದಿವಸಗಳಲ್ಲಿ, ... ಗುಣ ... ತಿಂಗಳಲ್ಲಿ ... ಪೆಟ್ಟಿಗೆಗೆ ... ಗುಜರಾತಿನಲ್ಲಿ ತಾಯಿತವು ... ಬೇಕಾದವರು ಬರೆಯಬೇಕು ಸಿಗುವದು ವಿಳಾಸ —ಮ್ಯಾನೇಜರ್, ಕಲ್ಪತರು ತಾಯಿತ, ಕೆ. ಎಮ್.
[52 10] ಪೋ. ಸಂಕೇಶ್ವರ ಜಿ. ಬೆಳಗಾಂವ.

ಕೃಷಿತೋ ನಾಸ್ತಿ ದುರ್ಭಿಕ್ಷಃ

NITRATE OF SODA (15—16 per cent) Nitrogen,
"The best and cheapest form of Nitrogen highly concentrated and immediately available Nothing like it to make plants grow."

ವ್ಯವಸಾಯದಲ್ಲಿ ಗೊಬ್ಬರದಿಂದ ಬೆಳೆ ಹೆಚ್ಚಿನ ಉದ್ದೇಶದ ... ನೈಟ್ರೋಜನ (Nitrogen) ಒದಗಿಸಿಕೊಡುವದಾಗಿರುತ್ತದೆ "ನೈಟ್ರೇಟ್ ಆಫ್ ಸೋಡಾ" ಎಂಬ ರಸಾಯನಿಕ ಗೊಬ್ಬರವು (15—16%) ಅಂದರೆ ಬೇರೆ ಗೊಬ್ಬರದಲ್ಲಿಯದ್ದಕ್ಕಿಂತ ... ಹೆಚ್ಚು ... ಇದರ ಉಪಯೋಗದಿಂದ ... ಹಿಂಡಿ ... ರಸಾಯನಿಕ ಗೊಬ್ಬರದ ... ಹೆಚ್ಚಿಗೆ ... ಈ ರಸಾಯನಿಕ ಗೊಬ್ಬರವು ... ಬಹಳ ದೂರದೇಶದಿಂದ ... ಹಳ್ಳಿ ... ತೋಟಗಳಲ್ಲಿ ವಗೈರೆ ಕೃಷಿಗಳಿಗೆ ಉಪಯೋಗಿಸಬಹುದು ... ಹೆಚ್ಚಿನ ಆದಾಯವನ್ನು ಕೊಡುವದಾಗಿಯೂ ಇರುತ್ತದೆ. ಒಂದು ಎಕ್ರೆ ಭೂಮಿಗೆ 120—180 ರಾತಲು ಬೇಕಾಗುವದು ಇದರ ವಿಷಯ ಹೆಚ್ಚಿನ ಮಾಹಿತಿಯನ್ನು ಮತ್ತು ತಿಳುವಳಿಕೆಯನ್ನು ಧರ್ಮಾರ್ಥವಾಗಿ ನಮ್ಮಿಂದ ಪಡೆಯಬಹುದು.

ಬಿ. ಚಿಲಿಯನ್ನ ನೈಟ್ರೇಟ್
24—4 ಕಮಿಟಿಯವರ ಕಡೆ

ಕೊಡಗಿನಲ್ಲಿ—
B P Ayapa, Hon Representative Pollibetta, Coorg.

The Chilean Nitrate Committee, 6 Mission Ro., Post Box 465, CALCUTTA

Health is Wealth.

WANTED all to improve health strength and vitality and thus save our nation from physical degeneracy Send half-anna stamp and get 23 specimen photographs with full particulars from

Director, Physical Culture,
P. O. BASAVANAGUDI,
Bangalore City

ಜಿ. ಹೆಚ್. ಹೌಸ್. ಔಷಧಾಲಯ.

ಅಯ್ಯಾ

ನಾನು ಸುಮಾರು ಇಪ್ಪತ್ತು ವರುಷಗಳಿಂದ ಕಾಯಿಲಸ್ಥನಾಗಿ ದಿನೇ ದಿನೇ ಕೃಶನಾಗುತ್ತಾ ಒಂದು ಬರೇ ಮೂಳೆ ಪಂಜರವಾಗಿದ್ದು ಮೂರು ವರ್ಷಗಳಿಂದ ಮಲಗಿದಲ್ಲೇ ಆಗಿದ್ದು ನಂತರ ... ಹೊಟ್ಟೆಯುಬ್ಬು ... ಬಹಳ ಕಷ್ಟ ... ಮಲಗಿದಲ್ಲೇ ... ಕಷ್ಟಪಡುತ್ತಿದ್ದು ಇನ್ನು ಬದುಕಲಾರೆನೆಂಬದಾಗಿ ... ನನ್ನ ನೆಂಟರಿಷ್ಟರು ಒಂದುಸೋಡಿ ... ಜಿ. ಹೆಚ್. ಹೌಸ್ ಆಯುರ್ವೇದೀಯ ಔಷಧಾಲಯದಿಂದ ಔಷಧಿ ತೆಗೆದುಕೊಂಡರೆ ಖಂಡಿತವಾಗಿ ವಾಸಿಯಾಗುವದೆಂದು ಹೇಳಿದರು. ಕಡಿಯತ್ತುನಾಡು ... ಕಾಫಿಪ್ಲಾಂಟರ್ ... ನನಗೆ ಇದೇ ಮಾತನ್ನು ಒತ್ತಿ ಒತ್ತಿ ಹೇಳಿದರು ... ಅದನ್ನು ... ಪ್ಲೀಡರ್, ... ಸುಬ್ರಾಯರವರ ... ದಿಂದ ನನ್ನ ... ಕಸ್ಬೆ ... ಒಸಲೆಗೆ ಹೋಗಿ ... ಔಷಧಾಲಯದಿಂದ ಚಿಕಿತ್ಸೆ ಕೊಂಡು ... ಅವರ ... ಹೊರಬಿದ್ದರು ನಂತರ ಆಯುರ್ವೇದೀಯ ಪಂಡಿತರು ... ನಾರಾಯಣ ... ರನ್ನು ಕರಸಿ ಪರೀಕ್ಷಿಸಿ ... ನಾನು ಗುಣಪಡಿಸ್ಪಲಂತ ... ಔಷಧಿಯನ್ನು ಕೊಟ್ಟು 8 ದಿನಗಳೊಳಗ ... ನಂತರ ... ತಿಂಗಳು ಚಿಕಿತ್ಸೆಯನ್ನು ... ಗುಣ ಹೊಂದಿ ದೃಢಕಾಯನಾಗಿರುತ್ತೇನೆ ... ಕಷ್ಟ ... ಪುಣ್ಯವಾಗಿ ... ನನ್ನ ... ಹೀಗಾಗ ನನ್ನಿಂದ ... ಪತ್ರಿಕೆಯಲ್ಲು ಪ್ರಕಟಿಸುತ್ತೇನೆ ... ಔಷಧಿಗಳನ್ನು ಹೊಂದಿದರು ಎಂಥಾ ಹಳೇ ಕಾಯಿಲೆಯಾದರೂ ಖಂಡಿತವಾಗಿ ಗುಣವಾಗುತ್ತದೆ ಎಂದು ದೃಢವಾಗಿ ಹೇಳಬಲ್ಲೆನು. (?) ಶ್ರೀದೇವರು ಪಂಡಿತ ನಾರಾಯಣರಾಯರವರಿಗೆ ಆಯುರಾರೋಗ್ಯ ಐಶ್ವರ್ಯಾಭಿವೃದ್ಧಿಯನ್ನು ಕೊಟ್ಟು ರಕ್ಷಿಸಲಿ ಎಂದು ಸದಾ ಪ್ರಾರ್ಥಿಸುತ್ತೇನೆ ತಾರೀಕು 18-8 24

ವೀರಾಜಪೇಟೆ, ಎಸ್. ಎಸ್. ಸುಬ್ರಾಯ,
"ಪ್ರಕಟಿತ". ಕಾಫಿ ಪ್ಲಾಂಟರ್

[12 6]

TO LET.

ನೋಟೀಸ್.

"ಕೊಡಗು" ಪತ್ರಿಕೆಯ ಹಳೆ ಬಂದಾವಣೆ ಕೊಡಲಿಕ್ಕಿರುವವರೂ, ಹೊಸ ಬಂದಾವಣೆದಾರಾಗ ಬೇಕೆಂದಿರುವವರೂ, ಮತ್ತು ಜಾಹೀರಾತು ಹಚ್ಚಿಕೊಡಲಿಕ್ಕಿರುವವರೂ ದಯವಿಟ್ಟು ವೀರರಾಜಪೇಟೆಯಲ್ಲಿರುವ ನಮ್ಮ ಕಂಪೆನಿಯ ಏಜಂಟರವರ ಆಫೀಸಿನಲ್ಲಿ ಪಾವತಿಮಾಡಬೇಕಾಗಿ ಕೋರಿಕೆ

ಮಡಿಕೇರಿ, ಮ್ಯಾನೇಜರ್,
15.9.24. 'ಕೊಡಗು' ಲಿಮಿಟೆಡ್.

ಪ್ರಕಟಣೆ.

ಒಂದು ಕಡೆ ಇಂಗ್ಲೀಷಿನಲ್ಲಿಯೂ ಇನ್ನೊಂದು ಕಡೆ ಕನ್ನಡದಲ್ಲಿಯೂ ಪ್ರಿಂಟಾಗಿರುವ ಕಾಫಿ ತೋಟದ ಆಳುಗಳ ಪ್ರಿಂಟಾದ ಕಂಟ್ರಾಕ್ಟು ಎಗ್ರಿಮೆಂಟ್ ಫಾರಮುಗಳು ಮಾರಾಟಕ್ಕೆ ತಯಾರಿವೆ. ಬೇಕಾದವರು 'ಕೊಡಗು' ಆಫೀಸಿನಿಂದ ಪಡೆಯಬಹುದು.

ಮಡಿಕೇರಿ,
17-9-24. ಮ್ಯಾನೇಜರ್.

ARMS & AMMUNITION MAR

Mahomedally-Noorbhoy

337, Abdul Rehman, Street, near Crawford Market BOMBAY.
Telegraphic ... "SHOOT" Bombay.

[24 6] Please write for latest Catalogue

ಸಂಪತ್ತಿಯ ಸಾಧನಗಳು

ಅಯ್ಯಾ ಒಂದು ... ಸಂಪತ್ತಿಯ ... ನಿಮ್ಮ ... ಆದರೆ ... ಅದನ್ನು ಹೊಂದಿಸಿ ಕೊಡಲು ಕಿರ್ಲೋಸ್ಕರರ ವ್ಯವಸಾಯ ಮುಟ್ಟುಗಳೇ ಯೋಗ್ಯವಾದ ಸಾಧನಗಳು.

... ಒಂದು ಗಂಟೆಗೆ ೬೦೦ ... ಜಲ್ಲುತ್ತದೆ.

" ... " ಎಂಬ ಕ್ಯಾಟಲಾಗನ್ನು ತರಿಸಿಕೊಳ್ಳಿ

ಕಿರ್ಲೋಸ್ಕರ ಬಂಧು ಲಿಮಿಟೆಡ್,
16 16 ಕಿರ್ಲೋಸ್ಕರವಾಡಿ, ಜಿಲ್ಲಾ, ಸಾತಾರ

ನೋಟೀಸ್.

ಕೊಡಗು ಜಿಲ್ಲೆಗೆ ... ಕೃಷಿ ... ಏಜಂಟರುಗಳಾಗಿ ... ಪಡೆಯಬಹುದು

T Saravanam & Co
Chief Agents,
Mysore Agricultural Dai[ry]
farm Co., ..
4—1 MYSO[RE]

WANTED—ಬೇಕಾಗಿದೆ.

ಈ ವರುಷದಲ್ಲಿ 50 ಮಂದಿ ಟ್ರಾವಲಿಂಗ್ ವಂಟುತ್ಯಾ ಇರುವ ಏಜಂಟರುಗಳು ಬೇಕಾಗಿದೆ ಮಾಹಿತಿ ತಿಳಿದವರಿಗೆ ತಿಂಗಳು ಒಂದರ 50 ರ ಸ 100 ರುಪಾಯಿವರೆಗೆ ಸಂಪಾದಿಸಬಹುದು ... ಈ ಕಳಗಿನ ವಿಳಾಸಕ್ಕೆ ಬರೆದು ... ಅಕ್ಟೋಬರು 30ರವರೆಗೆ ಇಂಗ್ಲೀಷಿನಲ್ಲಿ ... ಹೆಚ್ಚಿನ ಸಂಗತಿ ತಿಳಿಸಲಾಗುತ್ತೆ.

ವಿಳಾಸ.—ಮ್ಯಾನೇಜರ್, ಎಂ. ವಿ. ...
ಹಾಲ್, ಪಿಲಿಕಾಟ್ರಿ ಪೋ. ಅ. ...
ಮಾರ್ಗ, ದಕ್ಷಿಣ ...
4—4 ದಕ್ಷಿಣ ಹಿಂದುಸ್ಥಾನ

Printed & published by K Appayya, R B., Chairman, Bo[ard of] Directors, at "Kodagu" Press, for "Kodagu" Ltd.

Reg. No. M. 1550.
If not delivered please return to
"KODAGU" OFFICE, MERCARA.

ಕೊಡಗು.

ವರ್ಷಕ್ಕೆ ಚಂದಾ ರೂ. ೩—೮—೦

ಸತ್ಯೇನ ಧೂತರಯಾಜೂ ವಿದ್ಯಾ [illegible] ಪ್ರಯುಕ್ತಾ! | ಐಕ್ಯಮತ್ಯೇನ [illegible] ಸುಸ್ಥಿರಾ ರಾಜ್ಯ ಸಂಪದಃ

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು. ಎಡಿಟರ್ ಪಂದ್ಯಂಡ ಐ. ಬೆಳ್ಯಪ್ಪ.

ಸಂಪುಟ ೪] ಕೊಡಗು, ಸರ್ ೧೯೨೪ನೇ ಇಸವಿ ಅಕ್ಟೋಬರ್ ತಾರೀಕು ೧೦ನೆಯ ಶುಕ್ರವಾರ [ಸಂಚಿಕೆ ೧೯

ಆರೋಗ್ಯ ಚಂದ್ರಿಕೆ.

ಮದ್ರಾಸ.

ಸಂಪಾದಕರು: ಡಾಕ್ಟರ್ ಯು ರಾಮರಾವ್, ಯಮ್. ಎಲ್ ಸಿ. ಇವರ

ಆರೋಗ್ಯ ಚಂದ್ರಿಕೆಯು ಆರೋಗ್ಯ ವ ವೈದ್ಯ ಚಿಕಿತ್ಸೆದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವ ದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ. ಈ ಮಾಸಪತ್ರಿಕೆಯು 'ಹೆಲ್ತ್' ಎಂಬ ಇಂಗ್ಲಿಷ್ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ. ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಯೆ ಪ್ರಕಟವಾಗುವವು.

ಆರೋಗ್ಯ ಚಂದ್ರಿಕೆಯಲ್ಲಿರುವ ಲೇಖನಗಳು ಹಳೆಯದಾಗದೆ ಪುನಃ ಪುನಃ ಓದಲು ಅರ್ಹವಾದವುಗಳಾಗಿರುವವು. ಆರೋಗ್ಯ ಚಂದ್ರಿಕೆಯನ್ನು ತರಿಸಿ ಬೈಂಡ್ ಮಾಡಿಸಿ ಇಟ್ಟುಕೊಂಡರೆ ಎಲ್ಲರಿಗೂ ಉಪಯುಕ್ತವಾಗುವ ಅಮೂಲ್ಯವಾದ ಗ್ರಂಥವಾಗುವುದು. ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ 1-8-0. ಬಿಡಿ ಪತ್ರಿಕೆ 1ಕ್ಕೆ 0-2-0. ಹಿಂದಿನ ಸಂಚಿಕೆಗಳು ಕೂಡಾ ದೊರೆಯುವವು.

ಪತ್ರವ್ಯವಹಾರಕ: 'ಆರೋಗ್ಯ ಚಂದ್ರಿಕೆ' 323, ತಂಬುಶೆಟ್ಟಿ ಬೀದಿ, ಮದ್ರಾಸ್.

ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿಯ ಜೀವವಿಮೆಯ ಕಂಪೆನಿ, ಲಿಮಿಟೆಡ್.

ಹೆಡ್ ಆಫೀಸು, ಬೊಂಬಾಯಿ.

ಹಿಂದುಸ್ಥಾನದಲ್ಲಿ ಕಳೆದ 50 ವರ್ಷಗಳಿಂದಲೂ ಜೀವವಿಮೆಯ ಅನುಭವವನ್ನು ಪಡೆದಿರುವ ದೇಶೀಯ ಜೀವವಿಮೋ ಸಂಘಗಳಲ್ಲಿ ಅತ್ಯಂತ ದೊಡ್ಡದೂ ಮತ್ತು ಭದ್ರವಾದದ್ದೂ ಆದ "ಓರಿಯಂಟಲಿನ" ಜೀವವಿಮೋ ಪತ್ರಕ್ಕಿಂತಲೂ ಉತ್ತಮವಾದ ಆಸ್ತಿ ಬೇರೆ ದೊರೆಯಲಾರದು.

ಈಗಾಗಲೇ ವಿಮೋಸಂಚಾಯಿತವಾದವೆತ್ತ		8,00,00,000
ಕೈಯಲ್ಲಿ ಮುಂದೆ ಬರತಕ್ಕವಾದ ತಗಾದೆಗಳನ್ನು ಮುದ್ದಾಂಸಲಿಕ್ಕಿಟ್ಟುಕೊಂಡಿರುವ		
ಹಣ	....	6,00,00,000
ವಾರ್ಷಿಕ ಉತ್ಪತ್ತಿ ..	....	1,00,00,000

ಇಷ್ಟು ಭದ್ರತೆಯುಳ್ಳ ಕಂಪನಿಯಲ್ಲಿ ಜೀವವಿಮೆಯ ಪತ್ರ ತೆಗದುಕೊಳ್ಳಲಿಚ್ಛಿಸುವವರು ಮತ್ತು ಇದರ ವಿಷಯ ಹೆಚ್ಚಿನ ಸಂಗತಿ ತಿಳಿಯಬೇಕೆಂದಿರುವವರು ದಯವಿಟ್ಟು ಈ ಕೆಳಗಿನವರಿಗೆ ಬರೆದುಕೊಳ್ಳುವದು.

ಕೆ. ಪಿ. ಚಿಣ್ಣಪ್ಪನವರು,
ಓರಿಯಂಟಲ್ ಏಜನ್ಸಿ ಆಫೀಸು,
24—18 ವೀರಾಜಪೇಟೆ, ದಕ್ಷಿಣ ಕೊಡಗು.

"ಕೊಡಗು"

ರಾಜಕೀಯ, ವಿದ್ಯಾ, ಕೃಷಿ, ವೃತ್ತಿ ವಿಜ್ಞಾನ, ಮತ್ತು ನೀತಿ ಮುಂತಾದ ವಿಷಯಗಳಿಂದೊಡಗೂಡಿದ ಕೊಡಗಿನ ವಾರ ಪತ್ರಿಕೆ.

1. ಪ್ರಕಟನೆಗಳನ್ನು ಮೇನೇಜರ್ "ಕೊಡಗು" ಮಡಿಕೇರಿ, ಈ ವಿಳಾಸಕ್ಕೆ ಕಳುಹಿಸಬೇಕು. 2. ಲೇಖನಗಳನ್ನು ಸಂಪಾದಕರು "ಕೊಡಗು" ಮಡಿಕೇರಿ, ಈ ವಿಳಾಸಕ್ಕೆ ಕಳುಹಿಸಬೇಕು. 3. ವಾರ್ತೆದಾರರ ಅಭಿಪ್ರಾಯಕ್ಕೆ ಕೊಡಗು ಪತ್ರಿಕಾಕರ್ತರು ಜವಾಬ್ದಾರರಲ್ಲ. 4. ನಮ್ಮಲ್ಲಿಗೆ ಕಳುಹಿಸುವ ವಾರ್ತೆಗಳು ಕಾಗದದ ಒಂದೇ ಕಡೆಯೂ, ಸ್ಪಷ್ಟವಾಗಿಯೂ, ಬರೆದು ವಿಳಾಸಗಳಿಂದ ಕೂಡಿಯೂ, ಬರೆಯಲ್ಪಟ್ಟಿರಬೇಕು. [illegible] ದೊರೆತಂತೆಲ್ಲಾ ಈ ಪತ್ರಗಳು ಪ್ರಕಟಿಸಲ್ಪಡುವವು. [illegible] ಪ್ರಕಟಿಸಲಾಗದ ವಾರ್ತೆಗಳನ್ನು ಮರಳಿ ಕಳುಹಿಸುವ ಜವಾಬ್ದಾರಿಯನ್ನು ಸಂಪಾದಕರು ವಹಿಸಿಕೊಳ್ಳುವದಿಲ್ಲ.

ಪ್ರಕಟಣೆಗಳು.

ಅತ್ಯಂತ ಸುಲಭವಾಗಿ ಹಾಕಲ್ಪಡುತ್ತವೆ. ಹೆಚ್ಚಿನ [illegible] ಮೇನೇಜರಿಗೆ ಬರೆದು ತಿಳಿದುಕೊಳ್ಳಬಹುದು.

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ.

ಅಪೂರ್ವ! ಹೊಸ ಪುಸ್ತಕ!! ಅಪೂರ್ವ!!!

ಶಿಶು ವೈದ್ಯ ಸಂಜೀವಿನೀ.

ಇಷ್ಟರವರೆಗೆ ಯಾವ ವೈದ್ಯ ಪುಸ್ತಕವೂ ಇದರಂತೆ ಸಿಗುವದಿಲ್ಲ! ಅದಕ್ಕಾಗಿ ಇದನ್ನು ಎಲ್ಲಾ ಆಯುರ್ವೇದದ ಆಧಾರದಿಂದ ಪ್ರಕಟಿಸಿದ್ದೇವೆ. ಇದರಲ್ಲಿ ಸ್ತ್ರೀ ಪುರುಷರ ದೇಹತತ್ವ, ವಿವಾಹ, ದಾಂಪತ್ಯ ಸುಖ, ಪಾತಿವ್ರತ್ಯ ಧರ್ಮ, ಗರ್ಭಿಣಿಯರ ರೋಗಗಳಿಗೂ ಚಿಕಿತ್ಸೆ, ಉಪಚಾರ, ಸುಖಪ್ರಸವೋಪಾಯಗಳು, ಪ್ರಸವವಿಧಿ, ದಾಯಿಯ ಕರ್ತವ್ಯ, ಶಿಶುಪರಿಚರ್ಯಾ, ಶಿಶುಗಳ ಸಕಲ ರೋಗ ಚಿಕಿತ್ಸೆ, ಹಾಗೂ ಎಲ್ಲಾ ಲೋಹಾದಿಗಳ ಶುದ್ಧಿ ಕ್ರಮ ಮತ್ತು ಭಸ್ಮಗಳು ಮಾಡುವ ವಿಧಾನ, ಧಾತು ಪುಷ್ಟಿ ಔಷಧಿಗಳು ಇವೆಲ್ಲ ಶಾಸ್ತ್ರೀಯ ಮತ್ತು ಸಮರ್ಪಕವಾಗಿ ವಿವರಿಸಲ್ಪಟ್ಟಿದೆ. ಈ ಪುಸ್ತಕ ಕೇವಲ ದೊಡ್ಡದು. ಇದರಲ್ಲಿ ಹೆಂಗಸರು ಹುಡುಗರು ಸಹ ಸುಲಭವಾಗಿ ತಯಾರು ಮಾಡುವಂಥಾ ೫೦೦ ಔಷಧಿಗಳಿಗಿಂತ ಹೆಚ್ಚಾಗಿರುವವು. ಈ ಪುಸ್ತಕದ ಕ್ರಯವು ಅದರಲ್ಲಿರುವ ಒಂದೊಂದು ಔಷಧದ ಬೆಲೆಯಾಗಲಾರದೆಂಬುದನ್ನು ನೀವೇ ತಿಳಿದುಕೊಳ್ಳುವಿರಿ!! ಈ ಪುಸ್ತಕವನ್ನು ಕೊಂಡುಕೊಳ್ಳುವ ಪ್ರತಿ ಮನುಷ್ಯನೂ ಖಂಡಿತವಾಗಿ ಒಬ್ಬ ವೈದ್ಯನೇ ಆಗುತ್ತಾನೆ. ಕ್ರಯ ಪುಸ್ತಕಕ್ಕೆ ೩-೮-೦

ನಮ್ಮ ವಿಳಾಸ:— ಭಾರತಿ ಬುಕ್ ಡಿಪೋ,
17-6 ೪೯೧, ನಗರ್ತರಪೇಟೆ, ಬೆಂಗಳೂರು ಸಿಟಿ.

ಕೃಷಿಕರೋ! ನಾಸ್ತಿ ದುರ್ಭಿಕ್ಷಃ

NITRATE OF SODA (15—16 per cent.) Nitrogen, "The best and cheapest form of Nitrogen highly concentrated and immediately available. Nothing like it to make plants grow."

[illegible] ಗೊಬ್ಬರವಿರುವದರ ಹೆಚ್ಚಿನ ಅಂಶ [illegible] ನೈಟ್ರೋಜನ (Nitrogen) ಒದಗಿಸಿಕೊಡುವ [illegible] "ನೈಟ್ರೇಟ್ ಆಫ್ ಸೋಡಾ" ಎಂಬ [illegible] ಗೊಬ್ಬರವು (15—16%) ಆದರೆ [illegible] ಮುಖ್ಯ ರಾಸಾಯನಿಕ ಧಾತುವಾಗಿದ್ದು [illegible] ಪಕ್ವತೆಗೆ ವರ್ಧಿಸುತ್ತದೆ. ಇದರ ಉಪಯೋಗದಿಂದ ಫಸಲು ಒಮ್ಮೆ ಅಭಿವೃದ್ಧಿಯಾಗುವದು. ಹಿತಕರವಾದ ರಾಸಾಯನಿಕ ಗೊಬ್ಬರವು ಪುಡಿ (ಹುಡಿ) ತುಂಬ ಹಚ್ಚಿಗೊಬ್ಬರಕ್ಕೆ ಸಮವಾಗಿರುತ್ತದೆ. ಈ ರಸಾಯನಿಕ ಗೊಬ್ಬರವು ಅಮೇರಿಕ ದೇಶದ "ಚಿಲ್ಲಿ" ಎಂಬಲ್ಲಿ ತಯಾರಿಸಿ ಬಹಳ ದೂರದೇಶದಿಂದ ಬರಬೇಕಾದರೂ ಸಹ ಅದು ಹಳ್ಳಿ ಮೂಲೆಗಳ ತೋಟಗದ್ದೆ ವಗೈರೆ ಕೃಷಿಗಳಿಗೆ ಉಪಯೋಗಿಸಲು ಬಹು ಸುಲಭವಾಗಿಯೂ ಹಟ್ಟಿ ಗೊಬ್ಬರಕ್ಕಿಂತಲೂ ಬಹಳ ಹೆಚ್ಚಿನ ಆದಾಯವನ್ನು ಕೊಡುವದಾಗಿಯೂ ಇರುತ್ತದೆ. ಒಂದು ಎಕ್ರೆ ಭೂಮಿಗೆ 120—180 ರಾತಲು ಬೇಕಾಗುವದು. ಇದರ ವಿಷಯ ಹೆಚ್ಚಿನ ವರ್ತಮಾನವನ್ನು ಮತ್ತು ಕಿರುಹೊತ್ತಿಗೆಯನ್ನು ಧರ್ಮಾರ್ಥವಾಗಿ ನಮ್ಮಿಂದ ಪಡೆಯಬಹುದು.

ದಯವಿಟ್ಟು ನೈಟ್ರೇಟ್
24—5 [illegible]

ಕೊಡಗಿನ [illegible]
B. P. Ayapa, Hon Representative
Pollibetta, Coorg.

The Chilean Nitrate Committee, 6 Mission Row, Post Box 469, CALCUTTA

ಮಲೆಯಾಳ ವೈದ್ಯಶಾಲಾ.

[illegible] ನಾರಾಯಣನ್ ಮತ್ತು ಕಂಪನಿ ಎಂಬ ಆಯುರ್ವೇದ ವೈದ್ಯಶಾಲೆಯು ಇದೆ. ರಾಜರು ವೀರರಾಜೇಂದ್ರಪೇಟೆಯಲ್ಲಿ ಇರುತ್ತಾರೆ. ಇಲ್ಲಿ ಯಾವ ವಿಧದ ರೋಗಿಯಾಗಿದ್ದರೂ ಪಂಡಿತರಿಂದ ಪರೀಕ್ಷಿಸಿ ಔಷಧಿಕೊಟ್ಟು ಗುಣಪಡಿಸಲ್ಪಡುವುದು. [illegible] ಚಾರ್ಜು ಬಹಳ ಕಡಮೆ. ಬೇಕಾದವರು [illegible] ವಿಳಾಸಕ್ಕೆ ಬರೆದು ವಿವರವನ್ನು ತಿಳಿದುಕೊಳ್ಳಬಹುದು.

ನಾರಾಯಣ ನಂಬೀಶನ್,
ಆಯುರ್ವೇದ ವೈದ್ಯರು,
52—38 ವೀರರಾಜೇಂದ್ರಪೇಟೆ.

ಕಲ್ಪತರು ತಾಯಿತ.

ಪರೀಕ್ಷೆ ಪಾಸಾಗೋಣ, ಕಚೇರಿ ಕೆಲಸವಾಗೋಣ, ನೌಕರಿ ಸಿಗೋಣ, ಸಂಬಳ ಹೆಚ್ಚೋಣ, ವಿವಾಹವಾಗೋಣ ಸಂತತಿಯಾಗೋಣ, ಕೈಕೊಂಡ ಉದ್ಯೋಗದಲ್ಲಿ ಯಶಸ್ಸು ಸಿಗೋಣ, ವ್ಯಾಪಾರದಲ್ಲಿ ಬಹಳೇ ಲಾಭ ಸಿಗೋಣ, ಸಾಲ ಮುಕ್ತ ಆಗೋಣ, ಭೂತ ಪಿಶಾಚ ಗ್ರಹಬಾಧೆ ಅಗದಿರೋಣ, ಪ್ರತಿಕೂಲ ಜನರು ಅನುಕೂಲವಾಗೋಣ, ಇವೇ ಮತ್ತು ಬೇರೆ ಎಷ್ಟೋ ಮನೋರಥಗಳು ಇಚ್ಛೆಯಂತೆಯೇ ಆಗುವ ಅಪೇಕ್ಷೆ ಇದ್ದರೆ ಇಚ್ಛಿತಫಲ ಕೊಡುವ ಲೋಕಮಾನ್ಯ ಕಲ್ಪತರು ತಾಯಿತ ಯಾವಾಗಲೂ ಹತ್ತಿರ ಇಡಿರಿ, ಅಂದರೆ ಇಷ್ಟ ಪೂರ್ಣವಾಗುವದು. ಅನುಭವದ ಹೊರತು ಖಾತ್ರಿ ಆಗಲಾರದು. ತಾ. ನ. ೧೬, ರೂ ೧೨ ಗುಣ ತೀವ್ರವಾಗಿ, ತಾ. ನ. ೩೬. ರೂ. ೭ ಗುಣ ೧೫ ದಿವಸಗಳಲ್ಲಿ, ತಾ. ನ. ೩೬. ರೂ. ೩ ಗುಣ ೧ ತಿಂಗಳಲ್ಲಿ ವ್ಹಿ. ಪಿ. ಖರ್ಚು ಬೇರೆ. ಗುಣವಾದಲ್ಲಿ ತಾಯಿತದ ಖರ್ಚು ವಜಾಹೋಗಿ ಬಾಕೀ ಸಿಗುವದು.

ವಿಳಾಸ:— ಮ್ಯಾನೇಜರ, ಕಲ್ಪತರು ತಾಯಿತ, ಕೆ. ಎಮ್,
[52-11] ಪೋ. ಸಂಕೇಶ್ವರ ಜಿ. ಬೆಳಗಾಂವ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೋ ಆಪರೇಟಿವ್ ಸೊಸೈಟೀಸ್ ಆಕ್ಟಿನ ಪ್ರಕಾರ ರಿಜಿಷ್ಟರಾಗಿದೆ.

		ರೂ.
ಶೇರ್ ಬಂಡವಾಳ	....	50,000
ವಸೂಲಾದ ಶೇರ್ ಮೊಬಲಗು	....	7,720
ಜಮಾಯಿಸಿದ ಠೇವಣಾತಿ	...	61,200

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹಣ [illegible] ಸಾಲಕೊಡತಕ್ಕದ್ದು.

ಒಂದು ವರ್ಷ ಮಾಯಿದೆ ಆಥವ ಹೆಚ್ಚಿನ ಮಾಯಿದೆಯ ಠೇವಣಾತಿಗಳಿಗೆ ಶೇಕಡ ನಾಲಿಯಾನ ರೂ. 6-4-0ರ ದರದಲ್ಲಿ ಬಡ್ಡಿ ಕೊಡಲಾಗುತ್ತೆ. ಕಡಿಮೆ ಮಾಯಿದೆಯ ಠೇವಣಾತಿಗಳಿಗೆ ಶೇಕಡ ನಾಲಿಯಾನ ೫ರ ಬಡ್ಡಿ ದೊರೆಯುತ್ತೆ.

ಹೆಚ್ಚಿನ ವಿವರವನ್ನು ಕೋ ಆಪರೇಟಿವ್ ರಿಜಿಸ್ಟ್ರಾರರವರು ಲೆಕ್ಕ ಉಪದೇಶಿಸಿ ಹೋಗುತ್ತಾರೆ.

ಪ್ರೆಸಿಡೆಂಟು, ಕೊಡಂದೇರ ಮಾಚಯ್ಯನವರು, ರಾಯ್ ಬಹದ್ದೂರ್.

ಟ್ರೆಜರರ್. ಯಂ. ಭುಜಂಗರಾಯರು, ಬಿ.ಎ., ಬಿ.ಎಲ್.

ಸೆಕ್ರೆಟರಿ. ಸಿ. ಯಮ್. ಪೊನ್ನಪ್ಪಯ್ಯನವರು ಬಿ.ಎ., ಬಿ.ಎಲ್.

ತಾರೀಕು, 1—7—1924.

"ಕೊಡಗು"

ಸನ್ ೧೯೨೪ನೇ ಇಸವಿ ಅಕ್ಟೋಬರ್ ತಾ. ೧೦ನೇ ಶುಕ್ರವಾರ.

ಕೊಡಗು ಕೌನ್ಸಿಲು.

ನಂ. ೨.

ಪೈಸಾರಿ ಮತ್ತು ರಿಸರ್ವ್ ಫಾರೆಸ್ಟುಗಳ ಬಳಿ ಇರುವ ಗ್ರಾಮಸ್ಥರಿಗೆ ಪಂಗಾಮಿ ಕೋವಿ ಲೈಸನ್ಸಿನ ಬದಲು ಖಾಯಂ ಲೈಸನ್ಸು ಆಗುವಷ್ಟು ಮಟ್ಟಿಗೆ ಧಾರಾಳವಾಗಿ ಕೊಡಬೇಕೆಂದು ಪಾಸಾದದ್ದನ್ನು ಸರಕಾರದವರು. ಬಾರಿಗೆ ತೊಂದರೆ ಕಾಡು ಮೃಗಗಳ ಹಾವಳಿಯಿಂದ ಕಷ್ಟಪಡುತ್ತಿರುವ ರೈತರಿಗೆ ತಮ್ಮ ಬೆಳೆ ಪೈರನ್ನು ಕಾಯಲು ತಕ್ಕಮಟ್ಟಿಗೆ ಅನುಕೂಲವಾಗುವುದಲ್ಲದೆ ತಮ್ಮ ಕೋವಿಗಳನ್ನು ಕೆಲವು ತಿಂಗಳುಗಳವರೆಗೆ ಪೋಲೀಸು ಸ್ಟೇಶನುಗಳಲ್ಲಿಟ್ಟು ಮಣ್ಣು ಹಿಡಿಸಿ ಹಾಳುಮಾಡಿಕೊಳ್ಳುವದು ತಪ್ಪುವದು. ಇದರೊಂದಿಗೆ ರಿಸರ್ವ್ ಫಾರೆಸ್ಟುಗಳಲ್ಲಿ ಫ್ರೀಯಾಗಿ ಬೇಟೆಯಾಡಲು ಬಿಡಬೇಕೆಂಬ ರಾವು ಮಂಜೂರಾದದ್ದು ಫಾರೆಸ್ಟುಗಳ ಆಜುಬಾಜಿನಲ್ಲಿರುವ ವ್ಯವಸಾಯಗಾರರಿಗೆ ನುತ್ತಷ್ಟು ಸಹಾಯ ಮಾಡಿದಂತಾಯಿತು. ಆದರೆ ಈ ಠರಾವು ಸಂಬಂಧಪಟ್ಟ ತಾಲೋಕಿಗೆ ಮಾತ್ರವೆಂದು ಪಾಸಾದದ್ದು ಸಾಲದು. ಈ ತಾಲೋಕಿನವರಿಗೆ ಅತ್ಯಗತ್ಯವೆಂಬುದು ಯಾರೂ ವಿರೋಧಿಸುವುದಿಲ್ಲ. ದೇಶದ ಬೇರೆ ಕಡೆಗಳಲ್ಲಿಯ ಜನರಿಗೂ ಈ ರಿಯಾಯಿತಿಯು ವ್ಯಾಪಿಸಬೇಕಾದದ್ದು ಅವಶ್ಯ. ಒಡನೆ ಆಗದಿದ್ದರೆ ನಿಧಾನವಾಗಿಯಾದರೂ ಬೇರೆ ರಿಸರ್ವ್ ಫಾರೆಸ್ಟುಗಳಲ್ಲಿಯೂ ಫ್ರೀಯಾಗಿ ಬೇಟೆಯಾಡಲು ಬಿಡುವರೆಂದು ನಂಬುತ್ತೇವೆ.

ಕಂದಾಯದ ಈಗ ಇರುವ ಎರಡು ಕಿಸ್ತುಗಳಿಗೆ ಏಪ್ರಿಲ್ ಕಿಸ್ತು ಒಂದನ್ನು ಸೇರಿಸಬೇಕೆಂಬ ಠರಾವು ನಾಪಾಸಾದದ್ದು ಅನೇಕ ರೈತರಿಗೆ ವ್ಯಸನವನ್ನುಂಟು ಮಾಡದಿರದು. ಈ ಠರಾವಿಗೆ ದೇಶದವರ ಸಮ್ಮತಿ ಇದೆ ಎಂಬುದಕ್ಕೆ ಆದು ಕಳೆದ ಮೂರು ನಾಲ್ಕು ವರುಷಗಳಿಂದ ಜಮೀನ್ದಾರರ ಸಂಘದ ವಾರ್ಷಿಕ ಸಮ್ಮೇಳನಗಳಲ್ಲಿ ಮಂಜೂರಾಗುತ್ತಾ ಬರುತ್ತಿರುವುದೇ ದೃಷ್ಟಾಂತವಾಗಿದೆ. ಉಗ್ರಾಣಗಳಿಲ್ಲದ ಮುಂಬರುಗಳಲ್ಲಿ ಬಗ್ಗಬೆಳೆದೆ ಏನು ಮಾಡಿದರೂ ಹೋದದ್ದಕ್ಕೆ ಕಾರಣವಾದೆ. ಬೆಳೆಗಾರರು ತಮ್ಮ ತಮ್ಮ ಪ್ರತಿನಿಧಿಗಳನ್ನು ಚುನಾಯಿಸುವ ಸಮಯವು ಒದಗದೆ ಎಂದು ನಮಗೆ ತೋರುತ್ತದೆ.

ಕಮೀಷನರವರ ಸ್ವೇಚ್ಛಾ ಇಚ್ಛೆಯಂತೆ ಕೊಡಲ್ಪಡುವ ಹಣದ ಮೊತ್ತವನ್ನು ಇಪ್ಪತ್ತು ಸಾವಿರ ರೂಪಾಯಿಗೆ ಏರಿಸುವ ಠರಾವು ಪಾಸಾದದ್ದು ನಷ್ಟಕ್ಕೊಳಗಾಗಿರುವ ರೈತರ ಸಹಾಯಕ್ಕಾಗಿಯೇ. ಆದರೆ ಕಮೀಷನರವರು ಈ ಹಣವನ್ನು ಅರ್ಹರಾದವರಿಗೆ ಸಹಾಯ ಮಾಡುವುದಕ್ಕಾಗಿ ಉಪಯೋಗಿಸುವರೆಂದು ಭಾವಿಸಲಾಗಿದೆ. ಆದರೆ ಇಲ್ಲಿಯವರೆಗೆ ಎಷ್ಟು ಹಣ ಎಷ್ಟು ನ್ಯಾಯವಾಗಿ ಹಂಚಿರುವದನ್ನು ನೋಡಿಯೇ ಈ ಹೆಚ್ಚಿನ ಮೊಬಲಗನ್ನು ಕೌನ್ಸಿಲಿನವರು ಪಾಸು ಮಾಡಿರಬಹುದು. ಬ್ರಿಟಿಷ್ ಇಂಡಿಯಾದ ಚಿಕ್ಕದಾದರೂ ಒಂದು ಭಾಗವಾಗಿರುವ ಕೊಡಗಿಗೆ ಇಂಡಿಯಾ ಲೆಜಿಸ್ಲೇಟಿವ್ ಎಸೆಂಬ್ಲಿಯಲ್ಲಿಯೂ ಕೌನ್ಸಿಲ್ ಆಫ್ ಸ್ಟೇಟಿನಲ್ಲಿಯೂ ಪ್ರತಿನಿಧಿಗಳಿಲ್ಲದಿರುವುದು ಯಾವ ನ್ಯಾಯವೋ ತಿಳಿಯದು. ಕೊಡಗು ದೇಶವು ಸಣ್ಣದಾದರೂ, ಕೌನ್ಸಿಲು ಸರಕಾರ ಕೊಟ್ಟು ಅದನ್ನು ಬೇರೆಯಾಗಿ ಇಡಲು ಒಪ್ಪಿದ ಇಂಡಿಯಾ ಸರಕಾರದವರು ಇದೊಂದು ಚಿಕ್ಕ ಸುಧಾರಣೆಯನ್ನು ಕೊಡಲು ಹಿಂಜರಿಯಲಿಕ್ಕಿಲ್ಲವಾಗಿ ನಂಬುತ್ತೇವೆ. ಇದಲ್ಲದೆ ಇಂಡಿಯಾ ಸರಕಾರವನ್ನು ಕೇಳಿಕೊಳ್ಳುವಂಥ ಇನ್ನೊಂದು ವಿಷಯವು ಕೌನ್ಸಿಲಿನಲ್ಲಿ ಪಾಸಾಗಿದೆ. ಕೊಡಗಿನ ಸರಕಾರಕ್ಕೆ ಎರಡೂವರೆ ಲಕ್ಷ ರೂಪಾಯಿ ಓಪನಿಂಗ್ ಬೇಲೆನ್ಸು ಇಂಡಿಯಾ ಸರಕಾರದವರು ಕೊಡಬೇಕೆಂಬುದಕ್ಕೆ ಅನೇಕ ಸಬಬುಗಳಿವೆ. ಕೊಡಗಿನ ಆಡಳಿತ ವರದಿಗಳ ಪ್ರಕಾರ ಕಳೆದ 20 ವರುಷಗಳಿಂದ ಇಂಡಿಯಾ ಸರಕಾರದವರು ತೆಗೆದುಕೊಂಡಿರುವ ಸುಮಾರು 31 ಲಕ್ಷ ರೂಪಾಯಿ ಉಳಿತಾಯ, ಇಂಡಿಯಾ ಸರಕಾರದವರ ಆಡಳಿತದಲ್ಲಿರುವಾಗ ಬಿದ್ದು ಹೋದ ಅರಮನೆಯ ರಿಪೇರಿ ಕೆಲಸ ನಮ್ಮ ಸರಕಾರವು ಪ್ರತ್ಯೇಕಿಸಲ್ಪಟ್ಟಾಗ ಏನೊಂದೂ ಸಿಲ್ಕನ್ನು ಕೊಡದೆ ಇರುವುದು, ಇವುಗಳಿಗಿಂತ ಹೆಚ್ಚಿನ ನ್ಯಾಯವುಳ್ಳ ಕಾರಣಗಳು ಬೇಕಾಗಿವೆಯೇ? ಮೇಲಿನ ಇವೆರಡು ವಿಷಯಗಳನ್ನು ಕುರಿತು ಸ್ಥಳೀಯ ಸರಕಾರದವರು ಇಂಡಿಯಾ ಸರಕಾರಕ್ಕೆ ಒತ್ತಿ ಬರೆಯುವರೆಂದು ಹೇಳಬಲ್ಲೆವು.

ಮೊಟ್ಟುಕೊಟ ಟ್ರಾನ್ಸ್‌ಫರಿನ ವಿಷಯ ನಾವು ಆಗಾಗ್ಗೆ ಬರೆಯುತ್ತಾ ಬಂದದ್ದರ ಮಟ್ಟಿಗೆ ಕೌನ್ಸಿಲಿನವರು ಮುಂದಿಟ್ಟಿದ್ದರೂ ಕೂಡ, ಅದರ ಬಗ್ಗೆಯ ಕರ್ತವ್ಯವನ್ನು ಕೊಡಗಿನ ಎಕ್ಸಿಕ್ಯೂಟಿವ್ ಬಿಲ್ಲನು ಬಂದು ಶಿಂಬಾಬು ಮಾಡಿ ಅದನ್ನು ಕೌನ್ಸಿಲಿನ ಮುಂದೆ ಚರ್ಚೆಗೆ ಇಡುವಂತೆಯೂ, ಅಲ್ಲಿಯವರೆಗೆ ಅಲ್ಲಿಯ ರಿಪೇರಿ ಕೆಲಸಗಳನ್ನು ನಿಲ್ಲಿಸಬೇಕೆಂದೂ ತೀರ್ಮಾನವಾದದ್ದು ತಕ್ಕಮಟ್ಟಿಗೆ ತೃಪ್ತಿಕರವೆ. ಮೀಟಿಂಗಿನನಂತರ ಚೀಫ್ ಕಮೀಷನರವರೇ ಖುದ್ದು ಹೋಗಿ ಟ್ರಾನ್ಸ್‌ಫರನ್ನು ನೋಡಿ ಈ ಸಂಬಂಧ ಕೌನ್ಸಿಲು ಮೆಂಬರುಗಳು ವರ್ಣಿಸಿದ ಮಾವುಕೂಟದ ಅನಾನುಕೂಲತೆಗಳ ನಿಜಸ್ಥಿತಿಯನ್ನು ಅರಿತವರಾಗಿರುವದರಿಂದ ಇಂಥಾ ಮುಖ್ಯ ತೀರ್ಮಾನಗಳನ್ನು ಅವರು ಮೊದಲೆ ಗೊತ್ತುಪಡಿಸಿಲ್ಲವೆಂದೇ ಹೇಳಬೇಕು. ಈ ವಿಷಯ ಮೀಟಿಂಗಿನ ಮೊದಲಿನ ಎರಡು ದಿವಸಗಳ ಕಾರ್ಯಕ್ರಮಪಟ್ಟಿಯಲ್ಲಿ ಏನೊಂದೂ ಸೂಚಿಸದಿದ್ದರೂ, ನಂತರ ಮೂರನೆದಿವಸದ ಚರ್ಚೆಯಲ್ಲಿ ಸೇರಿಸಿ ದೇಶದ ಪ್ರತಿನಿಧಿಗಳಿಗೆ ಈ ಕುರಿತ ಸಂಗತಿಯ ಮೇಲೆ ತಮ್ಮ ಅಭಿಪ್ರಾಯಗಳನ್ನು ಸೂಚಿಸಲು ಎಡೆಕೊಟ್ಟದ್ದು ಸಂತೋಷಕರವೆ. ಕೌನ್ಸಿಲಿನ ಅಭಿಪ್ರಾಯಕ್ಕೆ ಮರ್ಯಾದೆ ಕೊಡಲಿಕ್ಕಾಗಿಯೋ ಅಥವ ಅದನ್ನು ಅಲ್ಲಗಳೆಯಲಿಕ್ಕಾಗಿಯೋ ಈ ಎಡೆಕೊಟ್ಟದ್ದು ಎಂದು ಇನ್ನು ನೋಡಲಿಕ್ಕಿದೆಯಷ್ಟೆ.

ಎದೆ ಮಟ್ಟ ಎತ್ತರದಲ್ಲಿ 15 ಇಂಚು ಸುತ್ತಳತೆ ಇರುವ ಗಂಧದ ಮರಗಳನ್ನು ಅವು ಎಲ್ಲಿದ್ದಾದರೂ ಕೂಡ ಖಾಸಗಿ ಜಾಗದಲ್ಲೇ ಕೀಳುತ್ತಿರುವುದರ ವಿಷಯ ವಿವರವಾಗಿ ನಾವು ಕೆಲವು ವಾರಗಳ ಮುಂಚೆ ಬರೆದಿದ್ದೆವು. ಬೆನ್ನಾಗಿ ಬೆಳೆಯದ ಮರವನ್ನು ಕೀಳುವುದು ಬಹಳ ನಷ್ಟಕರವೆಂದೂ, 15 ಇಂಚು ಸುತ್ತಳತೆಯ ಮರವು ಕೀಳಲಿಕ್ಕೆ ಸಣ್ಣದೆಂದೂ ಸರಕಾರದವರು ಕೂಡ ಒಪ್ಪದೆ ಇರರು. ಜನರಿಗೆ ತಮ್ಮ ಖಾಸಗಿ ಜಾಗದಲ್ಲಿರುವ ಗಂಧದ ಉತ್ಪತ್ತಿಯ ಒಂದು ಪಾಲು ಬೇಗನೆ ಸಿಕ್ಕುವ ಸಂಭವವಿರುವಾಗ ಖಾಸಗಿ ಜಾಗದಲ್ಲೇ ಈ ಮರ ಕೀಳುತ್ತಿರುವದು ಜನರಿಗೆ ಬಹಳ ಅನ್ಯಾಯಕರವೆಂದು ಹೇಳಬೇಕಾಗಿಲ್ಲ. ಅದುದರಿಂದ ಹೀಗೆ ಮರ ಕೀಳುವುದನ್ನು ಒಡನೆ ನಿಲ್ಲಿಸಬೇಕೆಂದು ಠರಾವು ಮಂಜೂರಾದದ್ದು ದೇಶ ಸಮ್ಮತವಾದದ್ದಾಗಿದೆ.

ಪ್ರೆಸಿಡೆಂಟರು ತಮಗಿರುವ ಸ್ವೇಚ್ಛಾ ಅಧಿಕಾರದ ಬಲದಿಂದ ಮೂರು ಠರಾವುಗಳನ್ನು ತತ್ಕಾಲ ಚರ್ಚೆ ಮಾಡಕೂಡದೆಂದು ನಿಲ್ಲಿಸಲ್ಪಟ್ಟವೆಂದು ಕಳೆದ ವಾರ ಹೇಳಿದ್ದೆವು. ಅವರು ಈ ಅಧಿಕಾರವನ್ನು ಈ ಸಂದರ್ಭದಲ್ಲಿ ಉಪಯೋಗಿಸಲು ತಕ್ಕ ಕಾರಣಗಳೇ ಇಲ್ಲವೆಂದು ನಮಗೆ ತೋರುತ್ತದೆ. ಅವರು ತಮ್ಮ ಹುಕುಮಿಗೆ ಕಾರಣಗಳನ್ನು ಸೂಚಿಸದಿದ್ದರೂ ಇತ್ತೀಚೆಗೆ ನಮಗೆ ತಿಳಿಯಬಂದದ್ದೇನೆಂದರೆ—ರೆವಿನ್ಯೂ ಮ್ಯಾನ್ಯುವೆಲನ್ನು ತಿದ್ದುಪಡಿಮಾಡಲು ಒಂದು ಕಮಿಟಿ ಏರ್ಪಡಿಸಬೇಕೆಂಬ ಠರಾವು ಪಾಸಾಗಿರುವುದರಿಂದಲೂ, ಈ ಮ್ಯಾನ್ಯುವೆಲಿನಲ್ಲಿ ಜಮ್ಮ ಮತ್ತು ಹಿಟ್ಟಿಬಿಟ್ಟಿಯ ವಿಷಯವು ಅಡಗಿದೆಯಾದುದರಿಂದಲೂ, ಕಳೆದ ಸೆಟ್ಲ್‌ಮೆಂಟಿನಲ್ಲಿ ಒದಗಿದಂಥ ಜಮ್ಮ ಜಮೀನಿನ ಕಂದಾಯವನ್ನು ಏರಿಸುವದರಿಂದ ಮತ್ತು ಹಿಟ್ಟಿ ಬಿಟ್ಟಿಯನ್ನು ಹೋಗಲಾಡಿಸುವಂತೆಯೂ ತಂದ ಠರಾವುಗಳನ್ನು ತತ್ಕಾಲ ಚರ್ಚಿಸುವ ಅವಶ್ಯವಿಲ್ಲವೆಂದು ಬಾಕಿಮಾಡಿದ್ದಾಗಿದೆಯಂತೆ. ಇವು ಯಾರಿಗೂ ಸಮಂಜಸವಾದ ಕಾರಣಗಳಲ್ಲ. ಇವೆರಡು ಬಹುಮುಖ್ಯವಾದ ಠರಾವುಗಳು. ಜಮ್ಮ ಹಿಡುವಳಿದಾರರ ಅಮೂಲ್ಯವಾದ ಹುಟ್ಟುಹಕ್ಕಿನ ಮತ್ತು ಈ ಮುಂದುವರಿದ ಕಾಲದಲ್ಲೂ ಕೂಡ ಜಾರಿಯಲ್ಲಿಟ್ಟಿರುವ ಗುಲಾಮತನದ ಅಂದರೆ ಹಿಟ್ಟಿಬಿಟ್ಟಿಯ ಸಂಬಂಧ ತಂದ ಠರಾವುಗಳು ಸಾಧಾರಣದವುಗಳೇ? ಇಂಥಾ ವಿಷಯಗಳನ್ನು ಕಮಿಟಿಯವರ ತೀರ್ಮಾನಕ್ಕೆ ಬಿಡುವದೆಂದರೇನು? ಅದರಲ್ಲು ಸರ್ಕಾರದವರಿಂದ ನೇಮಿಸಲ್ಪಟ್ಟ ಕಮಿಟಿಯವರು ಮಾಡುವ ತೀರ್ಮಾನವು ಈ ಸಂಕಟದ ನೋವನ್ನು ಅನುಭವಿಸುತ್ತಿರುವ ದೇಶದ ಜನರಿಗೆ ತೃಪ್ತಿಕರವಾಗುವುದೇ? ಕಮಿಟಿಯವರು ತೀರ್ಮಾನಿಸಲಿಕ್ಕಿದ್ದರೂ ಕೂಡ ಕೌನ್ಸಿಲಿನವರು ಚರ್ಚಿಸಿ ತಮ್ಮ ಅಭಿಪ್ರಾಯವನ್ನು ಸೂಚಿಸುವುದರಲ್ಲಿ ಕೆಡುಕೇನಿತ್ತು? ಬದಲು, ಕೌನ್ಸಿಲಿನ ತೀರ್ಮಾನವು ಕಮಿಟಿಯವರಿಗೆ ಸಹಾಯಕರವಾಗುತ್ತಿತ್ತು. ದೇಶದ ಅಭಿಪ್ರಾಯದಂತೆ ಕಮಿಟಿಯವರಿಗೆ ತೀರ್ಮಾನಿಸಲು ಅನುಕೂಲವಾಗುತ್ತಿದ್ದುದಲ್ಲದೆ, ರೆವಿನ್ಯೂ ಮ್ಯಾನ್ಯುವೆಲನ್ನು ಸರಿಪಡಿಸಲು ಕಮಿಟಿಯನ್ನು ಏರ್ಪಡಿಸುವ ಉದ್ದೇಶವು ನೆರವೇರುತ್ತಿತ್ತು. ಈ ಸಂಗತಿಗಳ ಪ್ರಾಮುಖ್ಯತೆಯನ್ನು ಯೋಚಿಸದೆ ತತ್ಕಾಲ ಚರ್ಚಿಸಕೂಡದೆಂದು ಹುಕುಂ ಮಾಡಿದ ಅಧ್ಯಕ್ಷರು ಈ ಠರಾವುಗಳನ್ನು ಬರುವ ಮೀಟಿಂಗಿನಲ್ಲಿಯಾದರೂ ಚರ್ಚೆಗೆ ಬಿಡುವರಾಗಿ ಹಾರೈಸುತ್ತೇವೆ.

ಒಟ್ಟಾರೆ ನೋಡುವಲ್ಲು ಈ ಸಾರಿಯ ಮೂರು ದಿವಸಗಳ ಮೀಟಿಂಗಿನಲ್ಲು ಕೌನ್ಸಿಲು ಅದರ ಕರ್ತವ್ಯವನ್ನು ತಕ್ಕಮಟ್ಟಿಗೆ ತೃಪ್ತಿಕರವಾಗಿ ಮಾಡಿದೆಯೆಂದು ಹೇಳಬಹುದು. ಮೂರುದಿನದ ಪೂರ್ತಿ ಮೀಟಿಂಗಿನನಂತರ ಅಧ್ಯಕ್ಷರು ಕೌನ್ಸಿಲು ಸಭೆಯನ್ನು ಬರಖಾಸ್ತು ಮಾಡುವಾಗ್ಗೆ ಉದ್ದವಾದ ಮತ್ತು ಸ್ವಾರಸ್ಯವಾದ ಭಾಷಣವನ್ನು ಮಾಡುವರೆಂದೇ ಕೌನ್ಸಿಲು ಮೆಂಬರುಗಳೂ ದೇಶವೂ ನಿರೀಕ್ಷಿಸಿಯಲ್ಲಿದ್ದರು. ಆದರೆ ಅವರು ಏನೊಂದೂ ಮಾತಾಡದೆ ಥಟ್ಟನೆ ಕೌನ್ಸಿಲಿನ ಈ ಮೀಟಿಂಗನ್ನು ಅಂತ್ಯಗೊಳಿಸಿದ್ದು ಎಲ್ಲರಿಗೂ ಆಶಾಭಂಗವನ್ನುಂಟುಮಾಡಿತು.

ಮೇಲೆ ಸೂಚಿಸಿದ ಠರಾವುಗಳನೇಕವು ಬಹಳ ವರ್ಷಗಳಿಂದ ಜಮೀನ್ದಾರರ ಸಂಘದ ಕಾನ್‌ಫರೆನ್ಸುಗಳಲ್ಲಿ ವರ್ಷೇ ವರ್ಷೇ ಮಂಜೂರಾಗುತ್ತಾ ಬಂದವಾಗಿವೆ. ಆದರೆ ಈಗ ಅವುಗಳು ಸರ್ಕಾರದವರಿಂದಲೇ ಏರ್ಪಾಡಾಗಿರುವ ಕೌನ್ಸಿಲಿನಲ್ಲಿ ಪಾಸು ಮಾಡಲ್ಪಟ್ಟಿವೆ. ಆದುದರಿಂದ ಸರ್ಕಾರದವರು ಇಷ್ಟರವರೆಗೆ ಜಮೀನ್‌ದಾರರ ಸಂಘದವರು ತಳುಹಿಸುತ್ತಿದ್ದ ವಿನಂತಿಗಳಿಗೆ ತೋರಿಸುತ್ತಾ ಬಂದ ಅಲಕ್ಷ್ಯಭಾವವನ್ನೇ ಕೌನ್ಸಿಲಿನ ತೀರ್ಮಾನಗಳಿಗೂ ತೋರಿಸಲಿಕ್ಕಿಲ್ಲವಾಗಿ ಭಾವಿಸಲಾಗಿದೆ. ಜಮೀನ್ದಾರರ ಸಂಘದ ತೀರ್ಮಾನಗಳ ಗತಿಯೇ ಕೌನ್ಸಿಲಿನ ಠರಾವುಗಳಿಗೂ ಉಂಟಾದರೆ ಸರ್ಕಾರದವರು ಜನರನ್ನು ಸಮಾಧಾನಗೊಳಿಸಲು ನೆಪಮಾತ್ರ ಈ ಕೌನ್ಸಿಲನ್ನು ಕೊಟ್ಟದೆಂದು ಎಂಥಾ ಸಾಮಾನ್ಯದವನಿಗೂ ತಿಳಿಯದೇ ಇರದು. ದೇಶದ ಜನರನ್ನು ಇನ್ನೂ ಹೆಚ್ಚುದಿವಸ ಮಂಕಿನಲ್ಲಿ ಇಡಲಿಕ್ಕಾಗುವದಿಲ್ಲವೆಂಬ ಸಂಗತಿಯನ್ನು ಸ್ಥಳೀಯ ಸರ್ಕಾರದವರು ಮರೆಯದಿರಲಿ.

ಮಹಾತ್ಮ ಗಾಂಧಿಯವರು 'ನವ ಜೀವನ' ದ ವಾಚಕರಿಗೆ ಬರೆದ ಲೇಖನದ ಅನುವಾದ.

'ನವ ಜೀವನ' ದ ಸಂಪಾದಕತ್ವವನ್ನು ನಾನು ಆರ್ಥಿಕ ಪ್ರಯೋಜನಕ್ಕಾಗಿಯಾಗಲೀ ಯಶಸ್ಸಿಗಾಗಿಯಾಗಲೀ ವಹಿಸಿಕೊಂಡದ್ದಲ್ಲ. ನನ್ನ [illegible] ಗಳಿಂದ ನಿಮ್ಮ ಹೃದಯವನ್ನು ಮುಟ್ಟಲಿಕ್ಕಾಗಿ [illegible] ಇಟ್ಟುಕೊಂಡಿರುತ್ತೇನೆ. ಸಂಪಾದಕತ್ವವನ್ನು [illegible] ಪ್ರತಿವಾರವೂ 'ನವ ಜೀವನ' ದ ಪುಟಗಳಲ್ಲಿ ನನ್ನ ಆತ್ಮವನ್ನೇ ತುಂಬಲು ಪ್ರಯತ್ನಿಸಿರುತ್ತೇನೆ. [illegible] ರನ್ನು ಸಾಕ್ಷಿಯಾಗಿಟ್ಟುಕೊಳ್ಳದೆ ಒಂದು ಶಬ್ದವನ್ನಾದರೂ ಅದರಲ್ಲಿ ಬರೆದಿಲ್ಲ. ಅಭಿರುಚಿಗಳಿಗೆ ಒಪ್ಪುವಂತೆ ಬರೆಯುವದು ನನ್ನ ಕರ್ತವ್ಯವೆಂತ ನಾನು ಭಾವಿಸಿಲ್ಲ. ಅನೇಕ ವೇಳೆ ನಿಮಗೆ ರುಚಿಯಾಗದಂಥ ಲೇಖನಗಳನ್ನು ಬರೆದಿದ್ದೇನೆ. ರುಚಿಯಾಗಿಯಾಗಲಿ ಅರುಚಿಯಾಗಲೀ ಬರೆಯುವಾಗಲೆಲ್ಲಾ ನಿಜವಾದ ಮತವು ಯಾವದೆಂಬುದನ್ನು ತೋರಿಸಲು ಪ್ರಯತ್ನಿಸಿದ್ದೇನೆ.

ಈ ನನ್ನ ಕೆಲಸಕ್ಕೆ ಹೆಚ್ಚಿಗೆ ಅರ್ಹನಾಗಬೇಕೆಂತ ಈಗ ಉಪವಾಸವಿದ್ದೇನೆ. 'ನವ ಜೀವನ' ದ ಅನೇಕ ವಾಚಕರು ನನ್ನ ಲೇಖನಗಳನ್ನು ಹಿಂಬಾಲಿಸುತ್ತಾರೆಂತ ನನಗೆ ಗೊತ್ತಿದೆ. ಅವರನ್ನು ತಪ್ಪು ದಾರಿಗೆ ಇಳಿಸಿ ಕೆಡಕು ಮಾಡಿದೆನೋ ಎಂಬ ಯೋಚನೆಯೂ ನನಗೆ ಬಹಳವಾಗಿಯೂ ನೋವನ್ನು ಉಂಟುಮಾಡುತ್ತಿತ್ತು.

ಅಸ್ಪೃಶ್ಯತೆ ಎಂಬುದರಲ್ಲಿ ಸ್ವಲ್ಪವೂ ಸಂಶಯವಿಲ್ಲ. [illegible] ನೂಲಿನ ರಾಟೆಯು ಎಂಬುದರಲ್ಲೂ ಏನೂ ಸಂಶಯವಿಲ್ಲ. [illegible] ದ ಅಸಾಧರ ಆಧಾರವಾಗಿದೆ. [illegible] ನ್ನು ಓಡಿಸಲು ಅವರ ಕೈಯ ಆಯುಧವಾಗಿದೆ. [illegible] ಸಿಗೆ ತನ್ನ ಮರ್ಯಾದೆಯನ್ನು ಕಾಪಾಡಿಕೊಳ್ಳುವ ಗುರಾಣಿಯಾಗಿದೆ. ನೂಲಿನ ರಾಟೆಯನ್ನು ಸರ್ವರೂ ಅವಲಂಬಿಸಿದ ವಿನಹ ಹಿಂದೂಸ್ಥಾನದ ಬಡತನವನ್ನು ಹೋಗಲಾಡಿಸುವದು ಸಾಧ್ಯವಿಲ್ಲ.

ಹಿಂದೂ ಮುಸಲ್ಮಾನರು ಒಗ್ಗಟ್ಟಾದ ವಿನಹ ಸ್ವರಾಜ್ಯವು ಕನಸಿನ ಗಂಟೇ ಸರಿ. ಇದರ ವಿಷಯದಲ್ಲಿ ಏನೂ ಸಂಶಯವಿಲ್ಲ.

ಸರ್ವ ರೀತಿಯಿಂದಲೂ ಅಹಿಂಸೆಯನ್ನು ನೀವು ಸ್ವೀಕರಿಸುವಿರೋ ಎಂಬ ಸಂಶಯವು ಯಾವಾಗಲೂ ನನ್ನ ಮನಸ್ಸಿನಲ್ಲಿ ಇತ್ತು. ಅಹಿಂಸೆಯು, ಮನ್ನಣೆಯು, ಧೈರ್ಯಸ್ಥರ ಗುಣವೆಂತ ಏಣಿಕೆ ಇಲ್ಲದಷ್ಟು ಸಾರಿ ನಾನು ಹೇಳಿದ್ದೇನೆ. ಹೊಡೆಯಲು ಶಕ್ತಿ ಇರುವವನಿಂದಲೇ ಹೊಡೆಯದೆ ಇರಲು ಸಾಧ್ಯವಷ್ಟೆ. ನನ್ನ ಬರವಣಿಗೆಯಿಂದ ಹೇಡಿತನವನ್ನೇ ಅಹಿಂಸೆಯೆಂದು ನೀವು ನಂಬಿದರೆ ಮಾಡತಕ್ಕದ್ದೇನು? ನಿಮ್ಮ ಬಂಧುಜನಗಳನ್ನು ನೀವು ಕಾಪಾಡುವದನ್ನು ಬಿಟ್ಟರೆ ಮಾಡತಕ್ಕದ್ದೇನು? ಅದರಿಂದ ನನಗೆ ಬಹಳ ಅವಮರ್ಯಾದೆಯಾಗುತ್ತದೆ. ಹೇಡಿತನವು ಎಂದೂ ಮನುಷ್ಯನ ಕರ್ತವ್ಯವಾಗಲಾರದೆಂದು ನಾನು ಅನೇಕ ಸಾರಿ ಬರೆದು ಇದ್ದೇನೆ. ಪ್ರಪಂಚದಲ್ಲಿ [illegible] ದ್ದಕ್ಕೆ ಸ್ಥಳವಿದೆ. ಹೇಡಿತನಕ್ಕೆ ಸ್ಥಳವೇ ಇಲ್ಲ. ಹೇಡಿಗೆ ನಾಶವೇ ಗತಿ. ಅದಕ್ಕೆ ಅವನು ಅರ್ಹನೇ. ಆದರೆ [illegible] ಧಾರಿಗೂ ಅದೇ ಗತಿ ಎಂಬುದನ್ನು ನಾನು ತೋರಿಸಲು ಪ್ರಯತ್ನಿಸಿದ್ದೇನೆ. ಮನುಷ್ಯನು ಯಾರನ್ನು ಕಾಪಾಡಬೇಕು, ಯಾರನ್ನು ನಾಶಪಡಿಸಬೇಕು? ಆತ್ಮಶಕ್ತಿಯ ಮುಂದೆ ಖಡ್ಗಶಕ್ತಿಯು ನಿಲ್ಲಲಾರದು. ಅಹಿಂಸೆಯು ಆತ್ಮದ ಶಕ್ತಿಯಾಗಿದೆ. ಖಡ್ಗವು ದೇಹದ ಬಲವಾಗಿದೆ. ಖಡ್ಗವನ್ನು ಉಪಯೋಗಿಸುವವರಿಂದ ಆತ್ಮವು ದೇಹದಂತೆ ಆಗುತ್ತೆ. ಅಹಿಂಸೆಯನ್ನು ಅವಲಂಬಿಸುವವರಿಂದ ಆತ್ಮವು ಆತ್ಮದಂತೇ ಆಗುತ್ತೆ. ಸತ್ಯವನ್ನು ತಿಳಿಯದವರು ತಮ್ಮ ಅಧೀನರನ್ನು ಕತ್ತಿಯಿಂದಾದರೂ ಕಾಪಾಡಬೇಕು.

ಅಮೂಲ್ಯವಾದ ಅಹಿಂಸಾಮತವನ್ನು ಬೇರೆಯವರಿಗೆ ತಿಳಿಯುವಂತೆ ಮಾತಿನಿಂದ ವಿವರಿಸುವುದು ಕಷ್ಟವಾಗಿ [illegible] ಆಚರಿಸಿಯೇ ತೋರಿಸಬೇಕಾಗಿದೆ. ಆದರಿಂದಲೇ ನಾನು [illegible] ಮತವನ್ನು ಆಚರಿಸುತ್ತಿರುವದು. ನಷ್ಟ ದೇವಸ್ಥಾನಗಳ [illegible] ಮುರಿದ ಮುಸಲ್ಮಾನರನ್ನೂ ನಾನು ಕತ್ತಿಯಿಂದ ಕೊಲ್ಲ [illegible] ನು. ಅವರಲ್ಲಿ ಸಿಟ್ಟುಗೊಳ್ಳುವದೂ ಸಹ ಇಲ್ಲ. ಆಗ [illegible] ಪ್ರೀತಿಯ ಶಕ್ತಿಯಿಂದಲೇ ಜಯಪ್ರದನಾಗುವೆನು. ಹಿಂ [illegible] ಸ್ಥಾನದಲ್ಲಿ ಅಹಿಂಸೆಯನ್ನು ನಿಜವಾಗಿ ಪ್ರೀತಿಸುವ ಒಬ್ಬನಾದರೂ ಹುಟ್ಟಿದರೆ ತನ್ನ ಮತವನ್ನು ಕಾಪಾಡಿಕೊಂಡಾನೆಂತ ನಾನು ಬರೆದಿದ್ದೇನೆ. ಅಂಥವನು ನಾನು ಆಗಬೇಕೆಂತ ಪ್ರಯತ್ನಿಸುತ್ತಿದ್ದೇನೆ. ನೀವೂ ಅವನಂತೆ ಆಗಬೇಕೆಂತ ಕೇಳಿಕೊಳ್ಳುತ್ತಿದ್ದೇನೆ. ನನ್ನ ಹೃದಯದಲ್ಲಿ ಪ್ರೀತಿಯು ಉಕ್ಕಿ ಹರಿಯುತ್ತಿದೆ ಎಂತ ನನಗೆ ಗೊತ್ತಿದೆ. ಆದರೆ ಪ್ರೀತಿಗೆ ಪಾತ್ರರು ನನ್ನ ಪ್ರೀತಿಗೆ ಪಾತ್ರವಿಲ್ಲದೆ ಇಲ್ಲವೆಂತ ನನಗೆ ಗೊತ್ತಿದೆ.

ಗೆ ಇನ್ನೂ ಸರ್ಪದ ಸಂಗಡ ಆದಲು ಸಾಧ್ಯವಿಲ್ಲ ಆಸಿಂಗಾ ಮೂರ್ತಿಯ ಮುಂದೆ ಸರ್ಪದ ... ಗಿಂತ ನನಗೆ ಗೊತ್ತಿದೆ.

ಉಪವಾಸದಿಂದ ಆತ್ಮವನ್ನು ಶುದ್ಧೀಕರಿಸುತ್ತೇನೆ. ನನ್ನ ಕರ್ತವ್ಯವನ್ನು ಮಾಡಿ ಪ್ರೀತಿಯನ್ನು ಬಿತ್ತುಸುತ್ತೇನೆ ನಿಮ್ಮ ಕರ್ತವ್ಯವನ್ನು ತೋರಿಸಿಕೊಡಬೇಕೆಂದಿದ್ದೇನೆ ನನ್ನ ಸಂಗಡ ನೀವು ಉಪವಾಸವಿದ್ದು ಪ್ರಯೋಜನವಿಲ್ಲ ಉಪವಾಸಕ್ಕೆ ಕಾಲವೂ ಅರ್ಹತೆಯೂ ಅವಶ್ಯವಿದೆ. ನಾನು ಹೇಳುವ ಮೂರು ಸಂಗತಿಗಳನ್ನು ಸಂಪಾದಿಸಲು ನೀವು ಪ್ರಯತ್ನಿಸಬೇಕಾಗಿದೆ. ಅವು ಮೂರನ್ನು ಸಂಪಾದಿಸಿದರೆ ಬಾಕಿ ಎಲ್ಲಾ ತಾವಾಗಿಯೇ ಬರತ್ತವೆ.

ನನ್ನ ಉಪವಾಸವು ನ್ಯಾಯವೋ, ಅನ್ಯಾಯವೋ, ಎಂತ ಯೋಚಿಸುತ್ತಾ ಅಥವಾ ಅದಕ್ಕಾಗಿ ವ್ಯಸನಪಡುತ್ತಾ ಇರುವದರ ಬದಲು ಉಪವಾಸವನ್ನು ಪೂರೈಸುವ ವರೆಗೂ ನಾನು ಜೀವದಲ್ಲಿರಬೇಕೆಂದೂ ಅನಂತರ "ನವಜೀವನ" ದ ಮೂಲಕ ನಿಮ್ಮ ಸೇವೆಯನ್ನು ಹೆಚ್ಚು ಶಕ್ತಿಯಿಂದ ಮಾಡಲು ಉಳಕೊಳ್ಳಬೇಕೆಂತಲೂ ದೇವರನ್ನು ಪ್ರಾರ್ಥಿಸಿಕೊಳ್ಳಿ.

ಇಸ್ತಿಹಾರ್‌ನಾಮೆ

ಬೆಂಗಳೂರು, ತಾರೀಕು 25ನೇ ಸೆಪ್ಟಂಬರ್ 1924

ನಂಬರು 107 ಕೊಡಗು ದೇಶದ ಉತ್ತರ ಕೊಡಗು ತಾಲೋಕು ಬಾಗಮಂಡಲನಾಡು ಒಳಗಿನ ಬಿಳ್ಳ ಗ್ರಾಮದಲ್ಲಿ ಬರುವ ತುಲಾ ಸಂಕ್ರಮಣದ ಸಮಯದಲ್ಲಿ ನಡೆಯುವ ತಲಕಾವೇರಿ ಜಾತ್ರೆಗೆ ಪ್ಲೇಗು ರೋಗ ತಗಲಿದ ಮೈಸೂರು ಯೂ ಇತರ ಪ್ರದೇಶಗಳಿಂದಲೂ ಜನ ಬರುವದು ಸದರಿ ಸ್ಥಳದಲ್ಲಿ ಸೇರಲು ಬಿಟ್ಟರೆ ಪ್ಲೇಗು ರೋಗವು ಹಬ್ಬುವ ಅಪಾಯ ಉಂಟೆಂದು ಕೂರ್ಗ್ ಚೀಫ್ ಕಮಿಷನರ್ ಸಾಹೇಬರವರು ತಿಳಿಯುವದರಿಂದ ಸನ್ 1897ನೇ ಇಸವಿ ಸಾಂಕ್ರಾಮಿಕ ರೋಗಗಳ ಆಕ್ಟು ಅನುಸರಿಸಿ ತನಗೆ ಕೊಟ್ಟಿರುವ ಅಧಿಕಾರಗಳ ಚಲಾವಣೆಯಲ್ಲಿ ಸನ್ 1924ನೇ ಇಸವಿ ಅಕ್ಟೋಬರ್ ತಾರೀಕು 3ರಿಂದ ನವಂಬರು 23ರ ವರೆಗೆ ಸದರೀ ಜಾತ್ರೆಗೆ ಪ್ಲೇಗ್ ತಗಲಿದ ಪ್ರದೇಶಗಳಿಂದ ಜನರು ಬರುವದನ್ನು ಈ ಮೂಲಕ ನಿರೋಧಪಡಿಸಿ ಇದೆ

ಈ ಇಸ್ತಿಹಾರ್‌ನಾಮೆಗೆ ವಿರೋಧವಾಗಿ ಸದರೀ ಜಾತ್ರೆಗೆ ಮೇಲೆ ನಮೂದಿಸಿದ ಪ್ರದೇಶಗಳಿಂದ ಜನರು ಬಂದಲ್ಲಿ ಅಂಥವರೆಲ್ಲರನ್ನು ಹಿಂದಕ್ಕೆ ಕಳುಹಿಸಬಹುದೀತು.

ಕೊ. ಗು. ಎ. ಎನ್. ಎಲ್. ಕೇಟರ್,

ಚೀಫ್ ಕಮಿಷನರವರ ಸೆಕ್ರೆಟರಿಯವರು.

ಅಖಿಲ ಭಾರತ ವಿದ್ಯಾರ್ಥಿಗಳ ೫ನೇ ಕಾನ್‌ಫರೆನ್ಸು.

ಬೆಳಗಾಂ.

ಮೊದಲಿನಂತೆ ಕಾಂಗ್ರೆಸಿನ ವಾರದಲ್ಲಿ ಬೆಳಗಾಮಿನಲ್ಲಿ ಇಡೀ ಹಿಂದೂ ದೇಶದ ವಿದ್ಯಾರ್ಥಿಗಳ ಕಾನ್‌ಫರೆನ್ಸು ಒಂದನ್ನು ನಡಿಸಬೇಕೆಂದು ತೀರ್ಮಾನಿಸಿ, ಅದಕ್ಕೆ ಸರಿಯಾದ ಏರ್ಪಾಡುಗಳು ನಡೆಯುತ್ತಿವೆ

ಸ್ವಾಗತಕಮಿಟಿ ಒಂದನ್ನು ಏರ್ಪಡಿಸಬೇಕಾಗಿರುವದರಿಂದ ಕರ್ನಾಟಕದ ಎಲ್ಲಾ ಕಾಲೇಜುಗಳ ಮತ್ತು ಹೈಸ್ಕೂಲುಗಳ ವಿದ್ಯಾರ್ಥಿಗಳ ಮೀಟಿಂಗು ಅಕ್ಟೋಬರ್ 1ರಲ್ಲಿ ಸಾಯಂಕಾಲ 4 ಗಂಟೆಗೆ ಬೆಳಗಾಂ ಕಾಂಗ್ರೆಸ್ ಆಫೀಸಿನಲ್ಲಿ ನಡೆಯುವದು. ಎಲ್ಲಾ ವಿದ್ಯಾರ್ಥಿಗಳು ದಯಮಾಡಿ ಬರಬೇಕೆಂದು ಕೋರಿಕೆ.

ಮೀಟಿಂಗಿಗೆ ಹೋಗಲಿಕ್ಕಾಗದ ನಾಡಿನ ವಿದ್ಯಾರ್ಥಿಗಳು ಮೊದಲೇ ತಿಳಿಸಬೇಕು ಪತ್ರಗಳನ್ನೆಲ್ಲಾ ಕೆಳಗಿನ ವಿಳಾಸಕ್ಕೆ ಬರೆಯತಕ್ಕದ್ದು

ಟಾಉನ್ ಛಡಾ ಆಫೀಸು, ಡಿ. ಆರ್. ತಾಕಡೆ,

21 9 1924. (ಕನ್‌ವೀನರ್).

ಕೌನ್ಸಿಲ್ ಮೀಟಿಂಗು.

(ಪ್ರಶ್ನೋತ್ತರಗಳು ಮುಂದರಿದ್ದು)

ಮಿ ಬಿ ಶ್ರೀಪತಿರಾಯರು

83. ಪ (ಎ) ಸಂಪಾಜೆ, ಕರಿಕೆ, ದೊಡ್ಡಬೆಟ್ಟ ಕೋಪಟ್ಟಿ ಗ್ರಾಮಗಳ ರೈತರಿಂದ ತಮ್ಮ ಗದ್ದೆ, ಅಡಿಕತೋಟ, ಯಾಲಕ್ಕಿ ಮಲೆಗಳಿಗೆ ಕಾಡುಮೃಗಗಳು ಮುಖ್ಯವಾಗಿ ಆನೆಗಳ ಕಾಟವಿದೆಯೆಂದು ಫಿರ್ಯಾದು ಬಂದಿದೆಯೋ ?

(ಬಿ) ತೊಂದರೆಗೆ ಗುರಿಪಡುವ ರೈತರ ಸಹಾಯಕ್ಕೆ ಏನು ಏರ್ಪಾಡು ಮಾಡಲಾಗಿದೆ ಅಥವಾ ಮಾಡುವದಕ್ಕಿದೆ ?

(ಸಿ) ಕನ್ನಡ ಜಿಲ್ಲೆಯಲ್ಲಿರುವ ಖೆಡ್ಡಗಳ ಮೇರೆಯೇ ರೈತರ ಬಾಗದಲ್ಲಿ ಆನೆ ಹಿಡಿಯಲಿಕ್ಕೆ ಬಿಡಲಾಗುತ್ತೋ ?

ಉ. (ಎ) ಕಾಡಾನೆಗಳ ಕಾಟದ ವಿಷಯ ಸಂಪಾಜೆ ಗ್ರಾಮದಿಂದ ಕಳೆದ ವರ್ಷ ಫಿರ್ಯಾದು ಬಂದಿದೆ

(ಬಿ) ಕಂದಾಯ ನೋಟೀಸಿಗೆ ಕೇಳಿದಾಗ ಫಾರೆಸ್ಟ್ ನೇರಿ ... ಮಾಫಿ ಕೊಡಲಾಗಿದೆ.

(ಸಿ) ಖೆಡ್ಡ ಪರವಾನಗಿಗಳು ಬಂದು ಗೊತ್ತಾಗುವದಿಲ್ಲ ಕನ್ನಡ ಜಿಲ್ಲೆ ಕಲೆಕ್ಟರು ಆನೆ ಹಿಡಿಯುವ ವಿಷಯದಲ್ಲಿ ಬೇರೆ ಗಳನ್ನೂ ಇಲ್ಲವೆಂತ ಬರೆದಿದ್ದಾರೆ

ಮಿ ಕೆ ಪಿ ಚೆಣ್ಣಪ್ಪನವರು

84. ಪ (ಎ) ಸುಪೆರಿಂಟೆಂಡೆಂಟರು ಆ ರೇಂಜ ಸರಹದ್ದಿನಲ್ಲಿ ತಿಂಗಳಿಗೆ ಸರಾಸರಿ ಎಷ್ಟು ದಿನ ಸಂಚರಿಸುತ್ತಾರೆ ?

(ಬಿ) ಈ ವರ್ಷ ಸರ್ಕಾರಿ ಸರ್ವೆ ಎಷ್ಟು ಗ್ರಾಮಗಳನ್ನು ಸಂದರ್ಶಿಸಿದ್ದಾರೆ ಎಷ್ಟು ತಕರಾರು ಬಾಬುಗಳನ್ನು ವಿಚಾರಿಸಿದ್ದಾರೆ, ಎಷ್ಟು ಕಾಲದ ಅರ್ಜಿಗಳ ಸಂಬಂಧ ಬಾಗಗಳನ್ನು ನೋಡಿದ್ದಾರೆ ?

(ಸಿ) ಒಕ್ಕಲು ಕಾಲಗಳ ಸಂಬಂಧವಾಗಿ ಪಾರುಪತ್ತೆಗಾರರ ಕೆಲಸವನ್ನು ಎಷ್ಟು ಪರೀಕ್ಷೆ ಮಾಡಿದ್ದಾರೆ ?

ಉ (ಎ) 18 ದಿನಗಳು

(ಬಿ) ಮತ್ತು (ಸಿ) 327 ಗ್ರಾಮಗಳು ... ವಿವರಗಳನ್ನು ಕೊಡಲಿಕ್ಕಾಗುವದಿಲ್ಲ

ಮಿ. ಬಿ ಶ್ರೀಪತಿರಾಯರು

85 ಪ (ಎ) ರೈತರಿಂದ ... ಗದ್ದೆ ... ವ್ಯವಸಾಯಕ್ಕೆ ಕೊಡಬೇಕೆಂದು ಬಂದ ದರಖಾಸ್ತುಗಳು ಎಷ್ಟು ?

(ಬಿ) ... ದಲ್ಲಿ ಎಷ್ಟು ... ಬಾಗ ಕೊಡಲಾಗಿದೆ ?

ಉ (ಎ) 1919ನೇ ಇಸವಿ ನಂ 26 ... ಕೇರಳ ... ಬಾಗವು ... ಎಷ್ಟು ದರಖಾಸ್ತುಗಳು ಬಂದಿತ್ತೆಂತ ... ಇಲ್ಲ

(ಬಿ) 82 52 ಎಕರೆ ಬಾಗ ಬಿಟ್ಟು ಕೊಡಲ್ಪಟ್ಟಿದೆ

ಮಿ ಎ ಪಿ ... ನವರು

86 ಪ ಗೋಣಿಕೊಪ್ಪಲು ... ದನಗಳನ್ನು ಪಶುವೈದ್ಯರು ಪರೀಕ್ಷಿಸುತ್ತಾರೆಯೋ ?

ಉ ಗೋಣಿಕೊಪ್ಪಲಿಗೆ ಬರುವ ದನಗಳನ್ನು ಪಶುವೈದ್ಯರು ನೋಡುತ್ತಾರೆ ಜೀರ ... ಕೆಲಸಗಳಿದ್ದಾಗ ಮಾತ್ರ ನೋಡುವದಿಲ್ಲ ಸಿದ್ದಾಪುರದಲ್ಲಿ ನೋಡುವದಿಲ್ಲ ಆದರೆ ಆಸ್ಪತ್ರೆಯಲ್ಲಿ ಪೂರ್ತಿ ಸಮಯದ ವೆಟರಿನರಿ ಡಾಕ್ಟರ್ ಏರ್ಪಾಡಾದಾಗ ಮಾರ್ಕೆಟ್ಟಿಗೆ ಬರುವ ದನಗಳನ್ನು ಪರೀಕ್ಷಿಸುವ ಏರ್ಪಾಡು ಮಾಡಲಾಗುತ್ತೆ

ಮಿ ಕೆ ಪಿ ಚೆಣ್ಣಪ್ಪನವರು

87 ಪ (ಎ) ವೀರಾಜಪೇಟೆ ಕೃಷಿ ಅಸೋಸಿಯೇಷನ್ ನಲ್ಲಿ ಕೆಲಸ ಪ್ರಾರಂಭಿಸುವ ವಿಷಯ ... ತಿಳಿದವರನ್ನು ಕರ್ಜುಕೊಟ್ಟು ಕರೆಸಲು ಅಪೇಕ್ಷೆ ಇದೆಯೋ ?

(ಬಿ) ಹಣಕಡ್ಜುಪಡುವ ಮುಂಚೆ ಹೀಗೆ ತಿಳಿದವರನ್ನು ಕರೆಸುವ ಏರ್ಪಾಡು ಮಾಡಬಹುದೋ ?

ಉ ಸಮಾಶನದಲ್ಲಿ ಹೇಳುವ ವಿಷಯ ಯೋಚನೆಯಲ್ಲಿದೆ. ಇತ್ಯರ್ಥವಾಗುವ ವರೆಗೆ ಹೆಚ್ಚಿಗೆ ಹೇಳ ... ದುವದಿಲ್ಲ

88 ಪ ಮಡಿಕೇರಿ ... ಗುತ್ತಿಗೆ ಇದ್ದರೂ ನಡೆಯುತ್ತಿರುವ ಇಸ್ಪಿರ ... ಸರ್ಜನರನ್ನು ಅದಷ್ಟು ಬೇಗನೆ ನೇಮಿಸುವ ಯೋಚನೆ ಸರಕಾರಕ್ಕಿದೆಯೇ ?

ಉ. ಇಲ್ಲ. ಡಿಸ್ಟ್ರಿಕ್ಟ್ ಬೋರ್ಡ್ ಆಸ್ಪತ್ರೆಗಳಲ್ಲಿ ಕಲವು ವಾರದ ಕಲವು ದಿನಗಳು ಮಾತ್ರ ಆ ದಿನಗಳಲ್ಲಿ ಅಲ್ಲಿನ ಡಾಕ್ಟರುಗಳು ಅವರ ಸಹಾಯದಲ್ಲಿ ... ವಿಸ್ಟ್ರಿಕ್ಟ್ ಬೋರ್ಡಿಗೆ ಸೂಚನೆ ಕೊಡಲಾಗಿದೆ

89 ಪ (1) 1923 24ನೇ ವರ್ಷಗಳಲ್ಲಿ ಸಿವಿಲ್ ಸರ್ಜನರು ದೊಡ್ಡ ಆಪರೇಷನುಗಳೆಷ್ಟು ಚಿಕ್ಕ ಆಪರೇಷನುಗಳೆಷ್ಟು ಮಾಡಿದ್ದಾರೆ, ವೀರಾಜಪೇಟೆಯಲ್ಲಿ ಎಷ್ಟು, ಮಡಿಕೇರಿಯಲ್ಲಿ ಎಷ್ಟು ?

(2) ಮಡಿಕೇರಿ ಆಸ್ಪತ್ರೆಯಲ್ಲಿ ಒಳಗಿನ ರೋಗಿಗಳನ್ನು ಸಿವಿಲ್ ಸರ್ಜನರು ಪ್ರತಿನಿತ್ಯವೂ ನೋಡುತ್ತಾರೋ ? ನೋಡುತ್ತಾರಾದರೆ ಎಷ್ಟು ಗಂಟೆಯಿಂದ ಎಷ್ಟು ಗಂಟೆವರೆಗೆ

(3) ತಿಂಗಳಲ್ಲಿ ಎಲ್ಲಾ ಕೇಸುಗಳಿಗೂ ವೀರಾಜಪೇಟೆಗೆ ಹೋಗುತ್ತಾರೋ ?

(4) ತಿಂಗಳಿಗೆ ಎಷ್ಟುಸಾರಿ ವೀರಾಜಪೇಟೆಗೆ ಹೋಗುತ್ತಾರೆ ?

ಉ (1) ಹಳೆಯ ಎಲ್ಲಾ ಕೇಸುಗಳನ್ನು ಕೊಡಲು ಸಾಧ್ಯವಿಲ್ಲ ಮಡಿಕೇರಿಯಲ್ಲಿ 495, ವೀರಾಜಪೇಟೆಯಲ್ಲಿ 529

(4) 1922ರಲ್ಲಿ ಚೀಫ್ ಕಮಿಷನರ್ ಮಾಡಿದ ಹುಕುಂ ಮೇರೆ ಸಿವಿಲ್ ಸರ್ಜನರು ವೀರಾಜಪೇಟೆಗೆ ತಿಂಗಳಿಗೆ ಎರಡು ಸಾರಿ ಹೋಗುತ್ತಾರೆ ಈಗಿನ ಸಿವಿಲ್ ಸರ್ಜನರು ತಾವಿದಾರರೇ ಅವಶ್ಯಕತೆಗಳನ್ನು ಅನುಭವ ಪಡೆದು ದೂರಪ್ರಾಂತ್ಯದಲ್ಲಿ ಜನರಿಗೆ ಸಿಕ್ಕುವಂತೆ ಮಾಡಿದ್ದಾರೆ

(2) ಮತ್ತು (3) ಇವು ಸಿವಿಲ್ ಸರ್ಜನರ ... ಪ್ರತ್ಯೇಕವಾಗಿ ಮಾಡಬೇಕಾದ ವಿಷಯವಾಗಿದೆ.

ಮಿ ... ಟಿ ಕುಶಾಲಪ್ಪನವರು

90 ಪ ... ಒಳಗೆ ಯಾವ ಪ್ರೊಫೆಸರ್ ... ಕಮಿಷನರು ... ಶಿಕ್ಷಣವಿದ್ದಂತ ಸರಕಾರಕ್ಕೆ ತಿಳಿದಿದೆಯೋ ?

ಉ ಒಂದೇ ಫಿರ್ಯಾದು ಬಂದಿದೆ ... ಯಿಂದ ತಿಳಿಸಬಹುದು

ಮಿ ಕೆ ಪಿ ಚೆಣ್ಣಪ್ಪನವರು

91 ಪ (ಎ) ... ಪೇಟೆ ಮುನಿಸಿಪಾಲಿಟಿಯು ಬಂದು ... ಸಂಗಡದ ಸಹಾಯಕ್ಕೆ ಏನಾದರೂ ಕೆಲಸ ಮಾಡಿದೆಯೋ ?

(ಬಿ) ವೀರಾಜಪೇಟೆ ಮುಸ್ಲಿಂ ಸ್ಕೂಲಿನಲ್ಲಿದ್ದ ಸಂಬಳ ... ವನ್ನು ಮುಚ್ಚಲು ಕಾರಣವೇನು ?

ಉ (ಎ) ವಿಶೇಷ ಕೆಲಸವೇನೂ ಮಾಡಿಲ್ಲ

(ಬಿ) ಸ್ಕೂಲಿನಲ್ಲಿ ಹಾಜರಿರುವ ಹುಡುಗರ ಸಂಖ್ಯೆಯು 5 ಯಾ 6 ಮಾತ್ರ ಆದದ್ದರಿಂದ.

92 ಪ (1) ಬೆಂಚ್ ಕೋರ್ಟಿನವರು ವಿಚಾರಮಾಡುವ ಕೇಸ್‌ಗಳಲ್ಲಿ ಸಾಕ್ಷಿ ಸ್ವಾಫ್ ಬರೆದುಕೊಳ್ಳುತ್ತಾರೋ ?

(2) ಬೆಂಚ್ ಕೋರ್ಟು ಫೈಸಲ್ ಮೇಲೆ ಎಷ್ಟು ಅಪ್ಪೀಲಾಗಿದೆ ?

(3) ಅಪ್ಪೀಲ್ ಕೋರ್ಟಿನವರು ತೀರ್ಮಾನಿಸಲಿಕ್ಕೆ ಬೇಕಾದ ಸಾಕ್ಷಿ ಸೈಜೀತು ಇರತ್ತದೋ ?

(4) ಇಲ್ಲವಾದರ ಇದನ್ನು ತಿದ್ದಲಿಕ್ಕೆ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ಏರ್ಪಾಡು ಮಾಡಿದ್ದಾರೋ ?

(5) ಹೀಗಿರುವಾಗ ಬೆಂಚ್ ಕೋರ್ಟಿಗೆ 2ನೇ ಕ್ಲಾಸ್ ಪವರು ಕೊಡುವದು ಯುಕ್ತವೋ ?

ಉ (1) ಕ್ರಿಮಿನಲ್ ಪ್ರೊಸೀಜರ್ ಕೋಡಿನ 264ನೇ ಸೆಕ್ಷನ್ ಮೇರೆ ಸಮ್ಮರಿ ವಿಚಾರಮಾಡುವದಾದ್ದರಿಂದ ಬರೀ ... ಸಾಕ್ಷಿ ... ಫೋರ್ ... ಮತ್ತು ಇತರ ... ಸಂಗತಿಗಳನ್ನು ಬರೆದರೆ ಸಾಕಾಗಿದೆ

(2) 1920ರಿಂದ 24ರ ವರೆಗೆ ಬಂದರೂ ಇಲ್ಲ 1923ರಲ್ಲಿ ಮಡಿಕೇರಿ ಬೆಂಚ್ ಕೋರ್ಟಿನ ಒಂದು. 1924ರಲ್ಲಿ ವೀರಾಜಪೇಟೆ ಬೆಂಚ್ ಕೋರ್ಟಿನಿಂದ ಒಂದು ಅಪ್ಪೀಲಾಗಿರುತ್ತೆ

(3) ಕ್ರಿ. ಪ್ರೊ. ಕೋಡ್ 428ನೇ ಸೆಕ್ಷನ್ ನೋಡಿಕೊಳ್ಳಬಹುದು

(4) ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ಕಾನೂನು ಬದಲಾಯಿಸಕೂಡದು

(5) ಇದು ಅಭಿಪ್ರಾಯದ ವಿಷಯ ಮಡಿಕೇರಿ ಬೆಂಚ್ ಕೋರ್ಟಿಗೆ ಈಗಾಗಲೇ 2ನೇ ಕ್ಲಾಸ್ ಪವರ್ ಕೊಡಲಾಗಿದೆ.

93 (1) ವೀರಾಜಪೇಟೆ ಮುನ್ಸೀಫ್ ಕೋರ್ಟಿಗೆ ಬರುವ ಕಕ್ಷಿಗಾರರು ಸಾಕ್ಷಿಗಳು ... ತಿರುಗುವ ಕಷ್ಟಗಳು ಸರಕಾರಕ್ಕೆ ಗೊತ್ತಾಗಿದೆಯೇ ?

(2) ಒಂದು ಕಟ್ಟಡವನ್ನು ಮಾಡಿಕೊಡುವ ಯೋಚನೆ ಇದೆಯೇ ?

ಉ (1) ಹೌದು, ಕೇಳುವವರ ಗಮನಕ್ಕೆ ಬಂದಿದೆ.

(2) ಹಾಗನ್ನು ಪಡಗಿಸ ಮತ್ತು ... ಕಟ್ಟಡದ ಮೇಲರಿಯನ್ನು ತಯಾರಿಸುವ ಯೋಚನೆ ನಡೆಯುತ್ತಿದೆ

ಮಿ ಎ ಪಿ ಪಂಗಣ್ಣನವರು

94 ಪ (1) ವೀರಾಜಪೇಟೆ ಬೋರ್ಡಿಂಗ್ ಈಗ ಬಹಳ ಹೀನಸ್ಥಿತಿಯಲ್ಲಿರುವದನ್ನು ಸರಿಪಡಿಸಲಿಕ್ಕೆ ಏನು ಏರ್ಪಾಡು ಮಾಡಲಾಗಿದೆ ?

(2) ಬೋರ್ಡಿಂಗಿನ ಕೆಲಸಕ್ಕೋಸ್ಕರ ಒಬ್ಬ ಮೇಸ್ತ್ರಿಯನ್ನು ನೇಮಿಸಲಾಗುತ್ತೋ ?

(3) ಬೋರ್ಡಿಂಗಿಗೆ ಹೆಚ್ಚಿಗೆ ವಿದ್ಯಾರ್ಥಿಗಳು ಸೇರಲು ಅಪೇಕ್ಷಿಸುತ್ತಿರುವದಕ್ಕೆ ಏನು ಏರ್ಪಾಡಾಗಿದೆ ?

(4) ಬೋರ್ಡಿಂಗನ್ನು ಸರಿಯಾಗಿ ಸಂದರ್ಶಿಸಿ ಶೋಧಿಸಿ ಬರೆದ ನಡಿಸಲು ಒಂದು ಬೋರ್ಡನ್ನು ನೇಮಿಸುವುದೇ ?

ಉ. (1) ಮತ್ತು (2) V, VI ನೇ ವಾರಗಳನ್ನು ಪ್ರಾರಂಭಿಸಿದ್ದರಿಂದ ಬೋರ್ಡಿಂಗಿಗೆ ಹೆಚ್ಚಿನ ಹುಡುಗರು ಸೇರಲು ಅಪೇಕ್ಷಿಸುತ್ತಿರುವದರಿಂದ ಬೇರೊಂದು ಕಟ್ಟಡ ಅನುಕೂಲಪಡಿಸುವ ಯೋಚನೆಮಾಡಲಾಗುತ್ತೆ

(3) ಬೋರ್ಡಿಂಗಿನ ಹುಡುಗರ ಸಂಖ್ಯೆ ಕಡಿಮೆ ಇರುವದರಿಂದ ಪೂರ್ತಿ ಸಮಯದ ಮೇಸ್ತ್ರಿಯನ್ನು ನೇಮಿಸುವದು ಅವಶ್ಯವಿಲ್ಲ.

(4) 1917ರಲ್ಲಿ ಒಂದು ಕಮಿಟಿಯು ನೇಮಕವಾಗಿತ್ತು ಈಗ ಅದು ಕೆಲಸ ಮಾಡದೆ ಇರುವದರಿಂದ ಹೊಸ ಕಮಿಟಿಯನ್ನು ನೇಮಿಸುವ ಯೋಚನೆ ಇದೆ.

95. ಪ ವೀರಾಜಪೇಟೆಯಿಂದಲೂ ಮಡಿಕೇರಿಯಿಂದಲೂ, ಎಷ್ಟು ಗ್ರಾಮಪಟೇಲರುಗಳನ್ನು ಟ್ರೈನಿಂಗಿಗೆ ಕಳುಹಿಸಲಾಗುತ್ತೆ ?

ಉ. ವೀರಾಜಪೇಟೆಯಿಂದ ಇಬ್ಬರನ್ನು ಕಳುಹಿಸಲಾಗಿದೆ.

ಒಗ್ಗಟ್ಟಿನ ದಿನ.

(ಬರದು ಒಂದನ್ನು.)

ತಾರೀಕು 8 10-24ನೇ ಬುಧವಾರ ದಿವಸವನ್ನು ಒಗ್ಗಟ್ಟಿನ ದಿನವಾಗಿ ಆಚರಿಸಬೇಕೆಂತ ಡಿಲ್ಲಿಯಲ್ಲಿ ನಡೆದ ಮುಂದಾಳುಗಳ ಒಗ್ಗಟ್ಟಿನ ಕಾನ್ಫರೆನ್ಸಿನ ಅಧ್ಯಕ್ಷರು. ಒಟ್ಟು ಹಿಂದೂಸ್ಥಾನಕ್ಕೆ ತಿಳಿಸಿರುತ್ತಾಗ ಈ ದಿವಸವು ಒಗ್ಗಟ್ಟಿನ ದಿನವು ಹೇಗೆ ಆದೀತು, ಯಾರ ಒಗ್ಗಟ್ಟು ಎಂಬ ಇತ್ಯಾದಿ ಪ್ರಶ್ನೆಗಳು ವಾಚಕರಿಗೆ ಹೊಳೆಯದೆ ಇರಲಾರದು.

ಹಿಂದುಸ್ಥಾನದ ಮೇರೆಗಳೊಳಗೆ ವಾಸಿಸುವ ಸಮಸ್ತ ಜಾತಿ ಜನರೊಳಗೆ ಒಗ್ಗಟ್ಟಿರ ಬೇಕಾದದ್ದು ಹಿಂದುಸ್ಥಾನದ ಸ್ವರಾಜ್ಯ ಕಟ್ಟಡದ ಪಾಯವಾಗಿದೆಯೆಂತ ಯಾವಾಗಲೂ ಸರ್ವರ ಒಪ್ಪಿಗೆ ಪಡೆದ ಮಾತಾಗಿದೆ ಆದರೆ ಹಿಂದುಸ್ಥಾನದ ರಾಜಕೀಯ ಚಳವಳದ ಮುಂದಾಳುತನವನ್ನು ಮಹಾತ್ಮ ಗಾಂಧಿಯವರು ತೆಗೆದುಕೊಂಡಂದಿನಿಂದಲಂತೂ ಜಾತಿಗಳೊಳಗೆ ಒಗ್ಗಟ್ಟಿಗೆ ಬಹಳ ಪ್ರಾಮುಖ್ಯತೆಯನ್ನು ನ್ಯಾಯವಾಗಿಯೇ ಕೊಟ್ಟರು ಹಿಂದುಸ್ಥಾನದೊಳಗಿರುವ ಜನರಲ್ಲಿ ಹಿಂದೂ ಮತ್ತು ಮುಸಲ್ಮಾನ್ ಬಹಳ ಮುಖ್ಯವಾದ ಹೆಚ್ಚಿನ ಸಂಖ್ಯೆ ಜನರುಳ್ಳ ಜಾತಿಗಳಾಗಿವ ಸಾಧಾರಣ ಮಾತಾಡುವಾಗ ಕಾಂಗ್ರೆಸ್ಸಿನ ಮುಖ್ಯ ಕೆಲಸಗಳಲ್ಲಿ ಹಿಂದೂ ಮುಸಲ್ಮಾನರೊಳಗಿನ ಒಗ್ಗಟ್ಟನ್ನು ಬೆಳೆಸುವದು ಒಂದು ಎಂತ ಹೇಳುವದುಂಟು ಆದರೆ ಮಹಾತ್ಮ ಗಾಂಧಿಯವರು ಹಿಂದೂ ಮುಸಲ್ಮಾನ್ ಒಗ್ಗಟ್ಟು ಎಂಬ ಮಾತಿನಲ್ಲಿ ಹಿಂದು, ಮುಸಲ್ಮಾನ, ಸಿಕ್ ಪಾರ್ಶಿ, ಕ್ರಿಶ್ಚಿಯನ್, ಬೌದ್ಧ, ಯೆಹೂದಿ, ಮುಂತಾದ ಸಮಸ್ತ ಜಾತಿಗಳೊಳಗಿನ ಒಗ್ಗಟ್ಟನ್ನು ಸೂಚಿಸುವಂತ ಹೇಳಿದ್ದಾರೆ ಈ ಜಾತಿಗಳೊಳಗೆ ಸರಿಸಮಾನ ಹಕ್ಕುಗಳು ಅನ್ಯೋನ್ಯತೆಯೂ ಇಲ್ಲದಿದರೆ ಸ್ವರಾಜ್ಯದಿಂದ ಕೆಡಕೇ ಹೊರತು [illegible] ನರುತ್ತಾರೆ. [illegible] ಒಗ್ಗಟ್ಟಾಗಿ [illegible] ಜನ ಸಂಖ್ಯೆಯಲ್ಲಿ [illegible] ಹಿಂದುಸ್ಥಾನದ ವಿಧ ವಿಧದ ಜಾತಿಗಳೊಳಗೆ ಜಗಳವಿಲ್ಲದೆ ಕಾದುಕೊಳ್ಳಬೇಕಾದರೆ ಸಾಜ ದವಿಲ್ಲದ ಸಾವ್ರ ಆಳುತ್ತಿರಬೇಕೆಂತ ಬ್ರಿಟಿಷ್ ಜನರೂ ಹೇಳುತ್ತಾರೆ ಆದ್ದರಿಂದ ಒಂದು ಜಾತಿಯಿಂದ ಇನ್ನೊಂದು ಜಾತಿಗೆ ಭಯವಿಲ್ಲದೆ ಜೀವಿಸಬೇಕಾದದ್ದು ಅತಿ ಅವಶ್ಯ ಈ ಒಗ್ಗಟ್ಟಿಗಾಗಿ ಮಹಾತ್ಮ ಗಾಂಧಿಯವರು ಅಹೋರಾತ್ರಿ ಕೆಲಸ ಮಾಡಿದರು ಖಿಲಾಫತ್ತಿನ ಹೋರಾಟ ಬಹಳ ಬಲವಾಗಿ ನಡಿಯುತ್ತಿರುವದನ್ನು ಕಾಲ ಹಿಂದೂ ಮುಸಲ್ಮಾನರ ಒಗ್ಗಟ್ಟು ಚನ್ನಾಗಿಯೇ ಸಾಗಿ ಬಂತು ಖಿಲಾಫತ್ತಿನ [illegible] ದಂತೆಯೇ ಮತ್ತು ಸ್ವಾಮಿ ಶ್ರದ್ಧಾನಂದರ ಮಿಶನರಿ ಕೆಲಸ ಇದರ ಮುಸಲ್ಮಾನರನ್ನು ಹಿಂದೂ ಜಾತಿಗೆ ತೆಗೆದುಕೊಳ್ಳುವ ಕೆಲಸವು ಪ್ರಾರಂಭವಾದಂದಿನಿಂದ ಉತ್ತರ ಹಿಂದುಸ್ಥಾನದಲ್ಲಿ ಹಿಂದೂ ಮುಸಲ್ಮಾನರೊಳಗೆ ಜಗಳಗಳು ಹೆಚ್ಚಾಗುತ್ತಾ ಬಂದವು. ಮೊನ್ನೆ ತಾನೆ ಹೈದರಾಬಾದು ಸಂಸ್ಥಾನದಲ್ಲೂ ಪ್ರಾಣನಾಶನಾಡಿ ದಂಗೆಗಳು ನಡೆದವು ತನ್ನ ಕೆಲಸದಿಂದ ಪ್ರಯೋಜನವಾಗದೆ ಹೋದದ್ದರಿಂದ ತಾನು ಮಾಡಿದ ಕೆಲಸದಲ್ಲಿ ತಪ್ಪುಗಳೇನಾದರೂ ಸೇರಿ ಹೋಗಿವೆಯೋ ಎಂಬ ಸಂಶಯದಿಂದ ದೇವರಲ್ಲಿ ಮನ್ನಣೆ ಕೇಳಿಕೊಳ್ಳಲಿಕ್ಕೂ, ಒಗ್ಗೂಡಬೇಡಿ ಎಂತ ಹಿಂದೂ ಮುಸಲ್ಮಾನರಲ್ಲಿ ಪ್ರಾರ್ಥಿಸಿಕೊಳ್ಳಲಿಕ್ಕೂ ಈ ದಿನಕ್ಕೆ ಅಂದರೆ 8 10 24ನೆ ಬುಧವಾರಕ್ಕೆ ಆಖೈರ್ ಆಗುವ 21 ದಿವಸಗಳ ಉಪವಾಸವನ್ನು ಮಹಾತ್ಮ ಗಾಂಧಿಯವರು ಕೈಕೊಂಡರು ಆರೋಗ್ಯವಾಗಿದ್ದು, ಆಹಾರವನ್ನು ಈ ದಿನ ತೆಗದುಕೊಂಡ ವರ್ತಮಾನ ಈ ಲೇಖನವನ್ನು ಬರೆಯುವವರೆಗೂ ಬರಲಿಲ್ಲ ಆದರೂ ನಾಲ್ಕು ದಿನಗಳ ಕೆಳಗೆ ಅವರನ್ನು ನೋಡಿದವರು ಆರೋಗ್ಯವಾಗಿಯೇ ಉಪವಾಸವನ್ನು ಪೂರೈಸುವದರಲ್ಲಿ ಸಂಶಯವಿಲ್ಲವೆಂತ ಬರೆದಿದ್ದಾರೆ ಆರೋಗ್ಯಕ್ಕೆ ಭಂಗ ಬಂದಿದ್ದರೆ ಗಾಳಿ ಮೂಲಕವಾಗಿಯಾದರೂ ವರ್ತಮಾನ ಬರುತ್ತಿತ್ತು ಪ್ರಪಂಚದಲ್ಲೆಲ್ಲಾ ಬಹದನೇ ಮನುಷ್ಯನಾದ ಮಹಾತ್ಮರ ಪ್ರಾಣವನ್ನು ಉಳಿಸಿಕೊಟ್ಟದ್ದಕ್ಕೆ ದೇವರನ್ನು ಪ್ರಾರ್ಥಿಸಬೇಕಾದ ದಿವಸವಾಗಿದೆ ಇಂಥಾ ಸುದಿನದಲ್ಲಿ ಪ್ರತಿಯೊಬ್ಬ ಹಿಂದೀಯನ ಮನಸ್ಸೂ ದೇವರ ಕಡೆಗೆ ತಿರುಗಬೇಕು. ಅಥವಾ ಈ ಸಂಗತಿ ತಿಳಿಯದೆ ಗ್ರಾಮವಾಸಿಗಳು ಈ ಪ್ರಾರ್ಥನೆಯನ್ನು ಮಾಡಿರಲಾರರು. ಈ ವರ್ತಮಾನವು ಈ ಮೂಲಕವಾಗಿಯಾಗಲೀ, ಬೇರೆಯವರ ಮೂಲಕವಾಗಿಯಾಗಲೀ ತಿಳಿದಕೂಡಲೇಯಾದರೂ ದೇವರಲ್ಲಿ ಮನಸ್ಸಿನ ಕೃತಜ್ಞತೆಯನ್ನು ಸೂಚಿಸಬೇಕಾದದ್ದು ಪ್ರತಿಯೊಬ್ಬನ ಕರ್ತವ್ಯವಾಗಿದೆ ಗ್ರಾಮ ಗ್ರಾಮಗಳ ದೇವಸ್ಥಾನಗಳಲ್ಲೂ ಮಸೀದಿಗಳಲ್ಲೂ, ಚರ್ಚುಗಳಲ್ಲೂ ಇತರ ಪ್ರಾರ್ಥನಾ ಸ್ಥಳಗಳಲ್ಲೂ ಜನರು ಗುಂಪುಕೂಡಿ ಪ್ರಾರ್ಥಿಸುವದು ಅವಶ್ಯ ಅಲ್ಪ ದಿವಸಗಳಿಗಾಗಿ ಒಗ್ಗಟ್ಟಿನ ಪ್ರಾರ್ಥನೆಗಳನ್ನು ನಡಿಸಿದ ಈ ನಮ್ಮ ಕೊಡಗು ದೇಶದಲ್ಲಿ ಈ ಮಹತ್ವಾದ ದೇವರ ಪರಕ್ಕಾಗಿ ಪ್ರಾರ್ಥನೆಯನ್ನು ನಡಿಸದೆ ಇರಲಾರರೆಂದು ಹಾರೈಸುತ್ತೇನೆ.

ಮಹಾತ್ಮರು ಉಪವಾಸವನ್ನು ಪ್ರಾರಂಭಿಸಿದ ವಡನೆ [illegible] ಜಾತಿಗಳ ಮುಂದಾಳುಗಳು ಡಿಲ್ಲಿಯಲ್ಲಿ ಕಲೆತು, ಹಿಂದೂ ಮುಸಲ್ಮಾನರ ಒಗ್ಗಟ್ಟನ್ನು ಬೆಳೆಸಲಿಕ್ಕೆ ಏನು ಮಾಡಬೇಕೆಂತ ಯೋಚಿಸಲು ಸಭೆ ಸೇರಿ ತೀರ್ಮಾನಿಸಬೇಕೆಂತ ಡಿಲ್ಲಿಯಲ್ಲಿದ್ದ ಮುಂದಾಳುಗಳು ಯೋಚಿಸಿದರು ಸಭೆಯೂ ಸೇರಿತು, ಬಹಳ ವಿಶೇಷವಾದಂಥ ಠರಾವುಗಳು ಪಾಸಾದವು, ಸಭೆಯ ಕೆಲಸವು ನಿರಾತಂಕವಾಗಿ ನಡೆದದ್ದನ್ನೂ, ಪಾಸಾದ ಠರಾವುಗಳನ್ನೂ ದೇಶದ ಎಲ್ಲಾ ಸ್ಥಳಗಳಲ್ಲೂ ಈ ದಿನ ಬೋಧಿಸಬೇಕಾಗಿ ನಿಶ್ಚೈಸಲಾಗಿದೆ ಠರಾವುಗಳು ಪತ್ರಿಕೆಯಲ್ಲಿ ಪ್ರಕಟವಾದೀತೆಂಬ ಭರವಸದಿಂದ ಇಲ್ಲಿ ಕೊಡುವದಿಲ್ಲ.

ಹಿಂದೂ ಮುಸಲ್ಮಾನರೊಳಗೆ ಜಗಳವಿಲ್ಲದ ಈ ನಮ್ಮ ದೇಶದಲ್ಲಿ ಒಗ್ಗಟ್ಟಿನ ದಿನದ ಅವಶ್ಯವೇ ಇಲ್ಲವೆಂತ ಕಲವರಿಗೆ ತೋರಬಹುದು ಹಿಂದೂ ಮುಸಲ್ಮಾನರೊಳಗೆ ಪೂರ್ತಿ ಮನಮುಟ್ಟಿದ ಸ್ನೇಹವಿದೆಯೆಂತ ನಾನು ಹೇಳಲಾರೆನು. ಲೌಕೀಕ ವಿಷಯ ತಿಳಿದವರೊಳಗೆ ಸ್ನೇಹವಿರಬಹುದು ಆದರೆ ಮಸೀದಿ ಮುಂದೆ ವಾದ್ಯವಿಲ್ಲದಾಗ ಜಗಳವಾದ ಉದಾಹರಣೆಯೂ ಇದೆ ಹಿಂದೂ ದೇವಾಲಯಗಳಲ್ಲಿ ಪೂಜೆ ಮಾಡಲು ಬಿಡುವದಿಲ್ಲ ಎಂಬ ಕಾರಣದಿಂದ ಹಿಂದೂಗಳಿಗೆ ಸಿಟ್ಟೇಳುವ ಕಾಲವೂ ಬಂದದ್ದು ಲೇಖಕನಿಗೆ ನೆನಪಿನಲ್ಲಿದೆ ಆದ್ದರಿಂದ ಹಿಂದೂಗಳು ಮುಸಲ್ಮಾನರ ಮತದ ಮೇಲೂ ಮುಸಲ್ಮಾನರು ಹಿಂದೂಗಳ ಮತದ ಮೇಲೂ ಸಹನೆಯನ್ನು ತಾಳಿಲ್ಲವೆಂತ ಗೊತ್ತಾಗುತ್ತೆ ಆದ್ದರಿಂದ ಮಹಾತ್ಮರ ಉಪವಾಸ ಪೂರ್ವಕವಾದ ಬೇಡುವಿಕೆಯನ್ನು ಕೇಳಬೇಕಾದ ಅವಶ್ಯವು ಈ ಕೊಡಗಿನಲ್ಲೂ ಇದೆ ಹಿಂದೂ ಧರ್ಮವು ವಾಲಗ ವಾದ್ಯದಲ್ಲಿ ಇಲ್ಲವೆಂತಲೂ, ಮುಸಲ್ಮಾನರ ದೃಢ ಪ್ರಾರ್ಥನೆಯು ವಾಲಗದಿಂದ ಭ್ರಷ್ಟವಾಗಲಾರದೆಂತಲೂ ಆಯಾ ಧರ್ಮದವರು ನಂಬಬೇಕು. ಸರ್ವರಲ್ಲೂ ಪರಮಾತ್ಮನಿದ್ದಾನೆಂಬ ವೇದಾಂತ ಧರ್ಮವನ್ನು ಒಪ್ಪಿಕೊಂಡ ಯಾವ ದೇವರಿಗೇನೇ ಕೈಮುಗಿದರೂ ಒಬ್ಬನೇ ಪರಮಾತ್ಮನಿಗೆ ತಲಪುತ್ತೆಂಬದನ್ನೂ ಒಪ್ಪುವ ಹಿಂದೂಗಳು ತಮ್ಮ ಧಾರಾಳ ಬುದ್ಧಿಯನ್ನು ತೋರಿಸಬೇಕು. [illegible] ಅದರೂ ಪರರಿಗೆ ಹಿಂಸ [illegible] ಇಷ್ಟು ಮಾತ್ರವಲ್ಲ [illegible] ಹಿಂದೂ ಮುಸಲ್ಮಾನರು [illegible] ಅನ್ಯ ಜಾತಿಗಳೊಳಗೆ ಇರುವ [illegible] ಗಳೆಲ್ಲವೂ ಹೊರಟು ಹೋಗಬೇಕು ನಿನ್ನೆ ಪತ್ರಿಕೆಯಲ್ಲಿ ಓದುತ್ತಿರುವ ಪತ್ರವ್ಯವಹಾರ ನೋಡಿದರೆ ನಮ್ಮ ದೇಶದಲ್ಲಿ ಅಲ್ಪ ಸ್ವಲ್ಪ ಅನ್ಯೋನ್ಯ ಅಪನಂಬಿಕೆ ಇದೆಯೆಂತ ನನಗೆ ತೋರುತ್ತೆ ಮದ್ರಾಸಿನಲ್ಲಿ ಬರೇ ಬ್ರಾಹ್ಮಣರ ಮೇಲೆ ಇತರ ಹಿಂದುಗಳು ವಿರೋಧದಲ್ಲಿದ್ದಾರೆ ಇಲ್ಲಿ ಕೊಡಗರ ಮತ್ತು ಬ್ರಾಹ್ಮಣರ ಮೇಲೆ ಇತರರು ಅಪನಂಬಿಕೆಯನ್ನು ತೋರಿಸುತ್ತಿದ್ದಾರೆ ಬಲಾಢ್ಯರು ಬಲಹೀನರ ಅಪನಂಬಿಕೆಯನ್ನು ಹೋಗಲಾಡಿಸುವಂತೆ ವರ್ತಿಸಬೇಕು ಬಲಹೀನರು ಬಲವಂತರಲ್ಲಿ ನಂಬಿಕೆ ಇಡಬೇಕು. ಅಂತೂ ಒಗ್ಗಟ್ಟಿಗಾಗಿ ಈ ದಿನ ಮತ್ತು ಇನ್ನು ಮುಂದೆ ಪ್ರತಿ ದಿನವೂ ಸರ್ವರೂ ಕೆಲಸ ಮಾಡಬೇಕು.

ನಾಪೋಕ್ಲು ಸಹಕಾರಿ ಕಾನ್‌ಫರೆನ್ಸು.

(ಒಬ್ಬ ಬಾತ್ಮಿದಾರರಿಂದ).

ತಾರೀಕು 28 9 1924ರಲ್ಲು ನಾಪೋಕ್ಲುನಾಡಿನ ಸಹಕಾರಿ ಸಂಘಗಳ ಒಂದು ಕಾನ್ಫರೆನ್ಸು ನಾಪೋಕ್ಲು ಸ್ಕೂಲ್ ಹಾಲಿನಲ್ಲು ನಡೆಯಿತು. ಮೆ ಪಾರುವಂಗಡ ಕುಶಾಲಪ್ಪ ಎಂ ಎಲ್ ಸಿ ಯವರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಈ ಸಭೆಯು ದಕ್ಷಿಣಕೊಡಗಿನ ಗೌರವ ಆರ್ಗನೈಜರಾದ ಮು, ಕೆ ಪಿ ಚಿಣ್ಣಪ್ಪನವರಿಂದ ಕೂಡಿಸಲ್ಪಟ್ಟದಾಗಿದೆ ಆ ದಿನ ನದರಿ ನಾಡಿನ 24 ಸಂಘಗಳಿಂದ ಸುಮಾರು 240 ಮೆಂಬರುಗಳು ಮೀಟಿಂಗಿನಲ್ಲಿ ಹಾಜರಿದ್ದರು. ಮಡಿಕೇರಿಯಿಂದ ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರುಗಳಾದ ರಾವ್‌ಬಹದ್ದೂರ್ ಕೋದಂಡ ಅಪ್ಪಯ್ಯನವರೂ ಮೆ. ಪಟ್ಟಡ ಉತ್ತಯ್ಯನವರೂ, ಮೆ ಸುದ್ದಂಡ ಬೆಳ್ಯಪ್ಪನವರೂ, ಮು. ಮುನಿಯಪಂಡ ಚಿಣ್ಣಪ್ಪನವರೂ, ಸಂಟ್ರಲ್‌ಬ್ಯಾಂಕಿನ ಗೌರವ ಸೆಕ್ರಿಟರಿಯಾದ ಮು ಸಿ ಎನ್ ವೆಂಕಪ್ಪಯ್ಯನವರೂ, ಸಹಕಾರಿ ಸಂಘಗಳ ರಿಜಿಸ್ಟ್ರಾರವರಾದ ಮೆ. ಕೆ ಎನ್ ಸುಬ್ರಾಯರೂ, ಉತ್ತರಕೊಡಗಿನ ಗೌರವ ಆರ್ಗನೈಜರಾದ ಮೆ. ಮುನಿಯಪಂಡ ಬೆಳ್ಯಪ್ಪನವರೂ ಬಂದಿದ್ದರು

ಸಹಕಾರಿ ಸಂಘದ ಮೂಲತತ್ವಗಳನ್ನು ಕುರಿತು ಮೆ ಕೆ. ಪಿ ಚಿಣ್ಣಪ್ಪನವರೂ, ಮೆ ಉ ಮೊಣ್ಣಯ್ಯನವರೂ, ಮೆ ವೆಂಕಪ್ಪಯ್ಯನವರೂ, ರಾ ಬಾ. ಅಪ್ಪಯ್ಯನವರೂ, ಮೆ ಪಿ ಬಿ ಬೆಳ್ಯಪ್ಪನವರು, ಮತ್ತು ಮಿ. ಯಂ ಯಂ ಬೆಳ್ಯಪ್ಪನವರೂ ಭಾಷಣಮಾಡಿದರು. ಜಾತಿದಾರರಿಂದ ಸಾಲವನ್ನು ಹೇಗೆ ವಸೂಲಿ ಮಾಡಬೇಕೆಂಬದರ ವಿಷಯ ಮೆ ಮಾದಂಡ ಮಂದಣ್ಣನವರೂ, ಮೆ. ನಾಪನೆರವಂಡ ಮೊಣ್ಣಪ್ಪನವರೂ, ಮೆ. ಕೆ ಪಿ ಚಿಣ್ಣಪ್ಪನವರೂ, ಮು ಬೈಲಚೆಟ್ಟಿರ ಅಚ್ಚಯ್ಯನವರೂ ಮತ್ತು ಮೆ ಚಂಗಂಡ ಕುಟ್ಟಪ್ಪನವರೂ ಮಾತಾಡಿದರು ಸಹಕಾರಿ ಸಂಘಗಳ ಯೂನಿಯನ್‌ಗಳ ಸ್ಥಾಪನೆ, ಅವುಗಳು ಮಾಡಬೇಕಾದ ಕೆಲಸಗಳು ಮತ್ತು ಅವುಗಳಿಗಿರುವ ಅಧಿಕಾರಗಳನ್ನು ಕುರಿತು ರಿಜಿಸ್ಟ್ರಾರವರು ಬಹಳ ಪರಿಷ್ಕಾರವಾಗಿ ಬೋಧಿಸಿದರು ಬರುವ ನವಂಬರು ತಾ. 16ನೇ ಆದಿತ್ಯವಾರ ದಿ. ವೀರರಾಜಪೇಟೆಯಲ್ಲಿ ದಕ್ಷಿಣಕೊಡಗಿನ ಸಹಕಾರಿ ಸಂಘಗಳ ಕಾನ್ಫರೆನ್ಸೊಂದು ನಡಿಯಲಿಕ್ಕಿರುವುದರಿಂದ ಅಲ್ಲಿ ಚರ್ಚಿಸಲು ಇಚ್ಛೈಸುವ ಸಂಗತಿಗಳನ್ನು ಈ ತಾರೀಕು 31ರೊಳಗೆ ಮೆ, ಕೆ ಪಿ ಚಿಣ್ಣಪ್ಪನವರಿಗೆ (ವೀರರಾಜಪೇಟೆಗೆ) ಬರಕೊಳ್ಳಬೇಕೆಂದು ಮೆ. ಉ ಮೊಣ್ಣಯ್ಯನವರು ಸೂಚಿಸಿದರು

ಅಧ್ಯಕ್ಷರು ತಮ್ಮ ಆಖೈರು ಭಾಷಣದಲ್ಲು ಸಹಕಾರ ಸಂಘಗಳ ಪ್ರಾಮುಖ್ಯತೆಯನ್ನು ಸೂಕ್ಷ್ಮವಾಗಿಯಾದರೂ ಎಲ್ಲರ ಮನಸ್ಸಿಗೆ ನಾಟುವಂತೆ ಒತ್ತಿ ಹೇಳಿ ಅವುಗಳಿಗೆ ಪ್ರತಿಯೊಬ್ಬನೂ ಮೆಂಬರಾಗಿ ಸೇರುವಂತೆ ಅಪ್ಪೀಲುಮಾಡಿದರು. ಸೂತರ ಅಧ್ಯಕ್ಷರಿಗೂ, ಮಡಿಕೇರಿಯಿಂದ ಈ ಸಭೆಯ ಉದ್ದಿಶ್ಯ ಬಂದ ಅತಿಥಿಗಳಿಗೂ, ಸಭೆಯವರಿಗೂ, ಸ್ಕೂಲಿನ ಹೆಡ್‌ಮಾಸ್ಟರವರಿಗೂ ವಂದನೆಗಳನ್ನು ಅರ್ಪಿಸಿ ಸಭೆಯು ಬರಕಾಸ್ತು ಮಾಡಲ್ಪಟ್ಟಿತು

ನೋಟೀಸ್.

ಸತ್ಯನಾರಾಯಣಮೋಟಾರು ಸರ್ವೀಸಿನವರು ಕಾವೇರಿಜಾತ್ರೆಯ ಉದ್ದಿಶ್ಯ ಈ ತಾರೀಕು 10 ರಿಂದ 31 ರವರೆಗೆ ಮಡಿಕೇರಿಯಿಂದ ವಿರಾಜಪೇಟೆಗೆ ಬೆಳಿಗ್ಗೆ 9 ಗಂಟೆಗೂ, ಮಧ್ಯಾಹ್ನ 2 ಗಂಟೆಗೂ, ವೀರಾಜಪೇಟೆಯಿಂದ ಮಡಿಕೇರಿಗೆ ಬೆಳಿಗ್ಗೆ ಗಂಟೆ 10 30ಕ್ಕೂ ಮಧ್ಯಾಹ್ನ ಗಂಟೆ 2 30ಕ್ಕೂ ಬಸ್ಸುಗಳನ್ನು ನಡಿಸುತ್ತಾರೆ. ಚಾರ್ಜು ಮಡಿಕೇರಿಯಿಂದ ವಿರಾಜಪೇಟೆಗೆ ರೂ. 1—4—0 ಮಾತ್ರ! ಪ್ರಯಾಣಿಕರೆ—ಈ ಅನುಕೂಲವನ್ನು ಕಳಕೊಳ್ಳಬೇಡಿರಿ!! ಮಡಿಕೇರಿಯಲ್ಲಿ ಟಿಕೇಟುಗಳು ಚೌಕಿಯಲ್ಲಿರುವ ಗಿಡ್ಡಾಶೆಟ್ಟರವರಲ್ಲಿ ದೊರೆಯುತ್ತೆ.

ಪ್ರಕಟಣೆ.

ಕಾವೇರಿಜಾತ್ರೆಗೆ ಹೋಗುವ ಯಾತ್ರಿಕರ ಅನುಕೂಲಕ್ಕಾಗಿ ವಿಕ್ಟೋರಿಯ ಮೋಟಾರು ಸರ್ವೀಸಿನವರು ಈ ತಾರೀಕು 10ರಿಂದ 31ರವರೆಗೆ ಮಡಿಕೇರಿಯಿಂದ ಭಾಗಮಂಡಲಕ್ಕೆ ಮೋಟಾರುಬಸ್ಸನ್ನು ನಡಿಸುವರು. ಚಾರ್ಜು ಟಿಕೇಟು ಒಂದರ ರೂ. 3 ಮಾತ್ರ

ಮಾರಾಟಕ್ಕೆ.

[illegible] ಇಂಗ್ಲೆಂಡ್) [illegible] ಇದೆ [illegible] ಭಾಗಗಳುಳ್ಳದಾಗಿ [illegible] ಯಲ್ಲದೆ ಇಷ್ಟವಿರುವವರು "ಕೊಡಗು" ಆಫೀಸಿಗೆ ಬಂದು ನೋಡಬಹುದು. ಕ್ರಯ ರೂ. 200, ಯಾ ಅದರ ಸಮೀಪ. ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮೇನೇಜರ್

"ಕೊಡಗು" ಆಫೀಸ್,

ಮಡಿಕೇರಿ.

ಸೂಚನೆ.

ಬರುವ ವಾರ ತುಲಾ ಕಾವೇರಿ ಸಂಕ್ರಮಣವಾದುದರಿಂದ ತಾ. ೧೭-೧೦-೨೪ರ 'ಕೊಡಗು' ಪತ್ರಿಕೆಯು ಪ್ರಕಟಿಸಲ್ಪಡುವುದಿಲ್ಲವೆಂದು ಈ ಮೂಲಕ ನಮ್ಮ ವಾಚಕರಿಗೆ ತಿಳಿಸಲಾಗಿದೆ.

ಸಂ.

ವರ್ತಮಾನ ಸಂಗ್ರಹ.

ಒಳದೇಶ.

ಕೆಲವು ತಿಂಗಳುಗಳ ಹಿಂದೆ ತಾವುನಾಡಿನ ನಾಡುಕಚ್ಚೇರಿಯಿಂದ ಮಡಿಕೇರಿ ಟ್ರೆಜರಿಗೆ ಕಳುಹಿಸಿದ ಹಣವನ್ನು ಉಪಯೋಗಿಸಿ ಬಿಟ್ಟದ್ದಕ್ಕಾಗಿ ಕಾನಿಸ್ಟೇಬಲ್ ಸಂಗಾರು ಮುತ್ತಣ್ಣನು ಪೂರ್ತಿ ಹಣವನ್ನು ಸರ್ಕಾರಕ್ಕೆ ಕಟ್ಟಿದನಂತರ ಅವನಿಗೆ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ಮೂರು ತಿಂಗಳು ಸಜೆಯನ್ನು ವಿಧಿಸಿದರು ಈ ಕೇಸಿನ ಸಮ್ಮಂಧ ಮೆ ಕಲಿಯಂಡ ಮುತ್ತಣ್ಣನವರು ಮತ್ತು ಮೆ ಕುಲ್ಲೆಟ್ಟಿರ ಅಪ್ಪಣ್ಣನವರು ಸರ್ಕಾರಕ್ಕೆ ಕಟ್ಟಿದ್ದ ಹಣವು (ಸದರಿ ಮುತ್ತಣ್ಣನು ಇವರಿಬ್ಬರಿಗೆ ಸಾಲ ವಾಪಾಸು ಕೊಟ್ಟಿದ್ದರಿಂದ) ಅವರಿಗೆ ವಾಪಾಸು ಕೊಡಲ್ಪಟ್ಟಿದೆ.

ಅಮ್ಮತ್ತಿನಾಡಿನ ಸಹಕಾರ ಸಂಘಗಳ ಒಂದು ಕಾನ್ಫರೆನ್ಸು ಈ ತಾರೀಕು 27ನೇ ಸೋಮವಾರ ಮಧ್ಯಾಹ್ನ 1 ಗಂಟೆಗೆ ಅಮ್ಮತ್ತಿ ನೇಶನಲ್ ಶಾಲೆಯಲ್ಲಿ ಮೆ. ಬಿದ್ದಂಡ ಐಯ್ಯಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಲಿಕ್ಕಿರುವುದು.

ಸಬ್‌ಜಡ್ಜಿಯವರು ಈ ತಾ 25ರಲ್ಲಿ ವೀರಾಜಪೇಟೆಯಲ್ಲಿ ಕೋರ್ಟು ಮಾಡಲಿಕ್ಕಿರುವರು.

ತಾ 15ರಲ್ಲು ಮಧ್ಯಾಹ್ನ 1 ಗಂಟೆಗೆ ವೀರಾಜಪೇಟೆ ಓರಿಯಂಟಲ್ ಆಫೀಸಿನಲ್ಲು ಜಮೀನುದಾರರ ಸಂಘದ ಎಗ್ಸಿಕ್ಯೂಟಿವ್ ಕಮಿಟಿಯ ಮೀಟಿಂಗು ನಡೆಯುವುದು. ನಂತರ ಅಲ್ಲಿಯೇ "ಕೊಡಗು" ಕಂಪೆನಿಯ ಡೈರೆಕ್ಟರುಗಳ ಮೀಟಿಂಗು ನಡೆಯಲಿಕ್ಕಿದೆ.

ಶ್ರೀಬರ್‌ಪೇಟೆಯಲ್ಲಿ ದನಗಳ ಪ್ರದರ್ಶನವು ನಡೆಯುವ ತಾರೀಕು ಕಳೆದವಾರ ಪ್ರಕಟವಾದದ್ದು ಸರಿಯಲ್ಲ ಅಕ್ಟೋಬರು ತಾ. 31ರಿಂದ ನವಂಬರು ತಾ. 2ರ ವರೆಗೆ ಗಣಪತಿ ದೇವರ ಉತ್ಸವದೊಂದಿಗೆ ದನಗಳ ಪ್ರದರ್ಶನವು ನಡೆಯುವುದು.

ಪೊನ್ನಂಪೇಟೆಯ ಹಾಕಿ ಟೂರ್ನಮೆಂಟು ಈ ತಾರೀಕು 25ನೇ ಶನಿವಾರ ಪ್ರಾರಂಭವಾಗಲಿಕ್ಕಿದೆ.

ಆಗ್ನಿಲರಿ ಪೋರ್ಟಿನ ಆಫೀಸಿನಲ್ಲು ಕಾಣದೆ ಹೋದ ಹಣದ ವಿಷಯ ಪೋಲೀಸಿನವರ ವಿಚಾರಣೆ ಮುಗಿದುದರಿಂದ ತಾ. 7ರಲ್ಲು ಬೆಂಗಳೂರಿಂದ ಒಂದು ಮಿಲಿಟರಿ ಆಫೀಸರುಗಳ 'ಕೋರ್ಟ್ ಆಫ್ ಇನಾಕ್ವಯರಿ' ಯು ವಿಚಾರ ನಡಿಸಿ ಆಯಿತು. ಫೈಸಲು ಇನ್ನೂ ತಿಳಿಯಬಂದಿರುವದಿಲ್ಲ

ಎರಡು ವರ್ಷಗಳ ಹಿಂದೆ ನಮ್ಮ ವಾಚಕರಿಗೆ ಹಂಚಿದಂತ ಮೈಸೂರು ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್‌ರವರ 1925 ನೇ ಇಸವಿಯ ಕ್ಯಾಲಂಡರಿನ ಒಂದು ಪ್ರತಿಯು ನಮ್ಮ ಕೈ ಸೇರಿದೆ. ಉಪಯುಕ್ತವಾದ ವಿಷಯಗಳುಳ್ಳ ಈ ಕಾಲೆಂಡರು ಎಲ್ಲರಿಗೂ ಬೇಕಾದದ್ದಾಗಿದೆ.

ಈ ವರ್ಷ ಕಾಫಿಗೆ ಬಹಳ ಒಳ್ಳೇ ಕ್ರಯ ಆಗಿದೆ. ಈ ವಾರ ಮಡಿಕೇರಿಯಲ್ಲಿ ಪಾರ್ಚ್‌ಮೆಂಟ್ ಕಾಫಿಯು ಹಂಡ್ರೆಡ್‌ವೈಟಿಗೆ 87 ರುಪಾಯಿ ವರೆಗೆ ಇತ್ತು. ನೇಟಿವ್ ಕಾಫಿ ಖಂಡಿಗೆ 365 ರುಪಾಯಿ ವರೆಗೆ ಇತ್ತು. ಕ್ರಯವು ಇನ್ನೂ ಏರುವದೆಂದೇ ಕೆಲವರ ಭಾವನೆ. ಈಗಾಗಲೂ ಅನೇಕರು ತಮ್ಮ ಕಾಫಿಯನ್ನು ಮಾರಿ ನಷ್ಟಪಟ್ಟಿರುವರು.

ಕಳೆದ ತಾ. 4ರಲ್ಲು ಕೌನ್ಸಿಲು ಮೆಂಬರುಗಳಾದ ಮೆ. ಪಾರುವಂಗಡ ಕುಶಾಲಪ್ಪನವರು ಮತ್ತು ಕೆ. ಪಿ. ಚಿಣ್ಣಪ್ಪನವರು ಕಲ್ಲಳ್ಳ ಘಾಟಿಗೆ ಟ್ಯು ಎಂಬವರು ಮಾಡುತ್ತಿರುವ ಕೆಲಸವನ್ನು ನೋಡಲಿಕ್ಕೆ ಹೋಗಿದ್ದರು

ಎಡೆನಾಲ್ಕುನಾಡು ಬೆಪ್ಪುನಾಡು ಸಹಕಾರ ಸಂಘಗಳ ಒಂದು ಕಾನ್‌ಫರೆನ್ಸು ಈ ತಾರೀಕು 25ನೇ ಶನಿವಾರ ವೀರಾಜಪೇಟೆ ಬೋರ್ಡು ಸ್ಕೂಲಿನಲ್ಲಿ ಮ. ಶ್ರೀ. ಕೇಳಪಂಡ ಅಚ್ಚಯ್ಯನವರ ಅಧ್ಯಕ್ಷತೆಯಲ್ಲಿ ಮಧ್ಯಾಹ್ನ 1 ಗಂಟೆಗೆ ನಡಿಯಲಿಕ್ಕಿರುವುದು.

ಕಿಗ್ಗಟ್ಟುನಾಡಿನಲ್ಲಿ ಈ ವರ್ಷದ ಮಳೆಯು ಬಹಳ ಕನಿಷ್ಟತರವೆಂದೂ, ಹೊಮ್ಮತಿ ಚನ್ನಾಗಿ ಬೆಳೆ ಆಗುವ ಹತ್ತುಗಟ್ಟನಾಡು, ಕೋತೂರು, ಕುಟ್ಟ ಗೇಟು, ನಲ್ಕೇರಿ ಗ್ರಾಮಗಳಲ್ಲಿ ಬೆಳೆ ಬಹಳ ಕಡಮೆಯೆಂದೂ ನಾಡುಸುತ್ತಿದವರೊಬ್ಬರು ತಿಳಿಸುತ್ತಾರೆ

ಮಡಿಕೇರಿ ಪೋಲೀಸು ಕೋರ್ಟಿನಲ್ಲಿ ಕ್ಲಾರ್ಕರಾಗಿದ್ದು ರಜೆಯಲ್ಲಿದ್ದ ಮೆ. ಕೊಂಗೆಟ್ಟಿರ ಕುಶಾಲಪ್ಪನವರು ಎರಡು ದಿವಸ ಜ್ವರದಲ್ಲಿದ್ದು ತಾ 6ರಲ್ಲು ಸಾಯಂಕಾಲ 7 ಗಂಟೆಗೆ ಮಡಿಕೇರಿಯಲ್ಲಿರುವ ಅವರ ಮನೆಯಲ್ಲಿ ಮೃತರಾದರು. ಅದೇ ರಾತ್ರಿ ಅವರ ಶವವನ್ನು ಚೇರಳಗ್ರಾಮದಲ್ಲಿರುವ ಅವರ ಐನ್ ಮನೆಗೆ ತೆಗೆದುಕೊಂಡು ಹೋಗಿ ಅಲ್ಲಿ ದಫನ್ ಮಾಡಿದರು.

ಸ್ಕೂಲ್ ಇನ್‌ಸ್ಪೆಕ್ಟರಾದ ಮೆ. ತಾಮ್ಸನ್‌ರವರು ದಕ್ಷಿಣ ಕೊಡಗಿಗೆ ಹೋಗಿ ಮಡಿಕೇರಿಗೆ ವಾಪಾಸು ಬಂದಿರುವರು. ಅವರು ತಾ. 11ರಲ್ಲಿ ಸೋಮವಾರಪೇಟೆಗೂ, ಅಲ್ಲಿಂದ ತಾ 13ರಲ್ಲು ಕೊಡ್ಲಿಪೇಟೆಗೂ ಸ್ಕೂಲು ಇನ್‌ಸ್ಪೆಕ್ಷನಿಗಾಗಿ ಹೋಗುವರು. ಕೊಡ್ಲಿಪೇಟೆಯಿಂದ ಅರಸೀಕೆರೆಗಾಗಿ ಬೆಂಗಳೂರಿಗೆ ವಾಪಾಸು ಹೋಗಲಿಕ್ಕಿರುವರು.

ಪೊನ್ನಂಪೇಟೆ ಹಾಕಿ ಟೂರ್ನಮೆಂಟು ಇದೇ ತಾ 4ರಲ್ಲಿ ಪ್ರಾರಂಭವಾಗಿದೆ. ಇಷ್ಟರ ವರೆಗೆ ನಡದ ಪಂತದಾಟಗಳಲ್ಲಿ ವೀರಾಜಪೇಟೆ ಸ್ಕೂಲಿನ ಎ ಟೀಮಿನವರು ಪೊನ್ನಂಪೇಟೆ ಪೀಸ್ ಕ್ಲಬ್ಬಿನ ಟೀಮನ್ನೂ, ಗೋಣಿಕೊಪ್ಪಲು ಯೂನಿಯನ್ನವರು ವೀರಾಜಪೇಟೆ ಪಬ್ಲಿಕ್‌ನವರನ್ನೂ ಸೋಲಿಸಿರುವರು. ಆಖೈರು ಪಂತದಾಟವು ತಾ. 12ರಲ್ಲಿ ನಡಯುವುದು.

ಹಿಂದುಳಿದ ಪಂಗಡಗಳ ಪ್ರತಿನಿಧಿಯಾಗಿ ಕೊಡಗು ಕೌನ್ಸಿಲಿನಲ್ಲಿ ಮೆಂಬರಾಗಿದ್ದ ಮೆ. ಕೆದಂಬಾಡಿ ಸುಬ್ರಾಯನವರು ಈ ತಾ. ೯ರಲ್ಲು ಕುಸುಬೂರಿನ ಕೊನರ್‌ಕೊಲ್ಲಿ ತೋಟದಲ್ಲು ಕೋಟೆಕಾಯಿಲದ ವಿಷೆಯಿಂದ ಶಿವಾಧೀನರಾದರೆಂದು ತಿಳಿಸಲು ಬಹಳ ವ್ಯಸನಪಡುತ್ತೇವೆ. ಆ ದಿನವೇ ಅವರ ಶವವನ್ನು ಕುಂದಚೇರಿ ಗ್ರಾಮದಲ್ಲಿರುವ ಅವರ ಐನ್ ಮನೆಗೆ ತೆಗೆದುಕೊಂಡು ಹೋದರು.

ಹಿಂದೂ ದೇಶ.

ಈ ತಾ. 8ನೇ ಬುಧವಾರ ಮಹಾತ್ಮ ಗಾಂಧಿಯವರ ಉಪವಾಸದ ಆಖೈರು ದಿನವಾದುದರಿಂದ ಯೂನಿಟಿ ಕಾನ್‌ಫರೆನ್ಸಿನವರ ಆಖೈರು ಠರಾವಿನ ಮೇರೆ ಅದರ ಪ್ರೆಸಿಡೆಂಟರಾಗಿದ್ದ ಪಂಡಿತ ಮೋತಿಲಾಲ್ ನೆಹರೂರವರು, ಮಹಾತ್ಮರನ್ನು, ಹಿಂದೂದೇಶದ ಜನರನ್ನು ನ್ಯಾಯವಾದ ರೀತಿಯಲ್ಲಿ ನಡಿಸಿ ದೇಶಸೇವೆ ಮಾಡಲಿಕ್ಕಾಗಿ ದೇವರು ಉಳಿಸುವದಕ್ಕಾಗಿ ದೇಶದವರೆಲ್ಲರೂ ಭಗವಂತನನ್ನು ಪ್ರಾರ್ಥಿಸಬೇಕೆಂತಲೂ, ಯೂನಿಟಿ ಕಾನ್‌ಫರೆನ್ಸಿನ ಠರಾವುಗಳನ್ನೆಲ್ಲಾ ಮೀಟಿಂಗುಮಾಡಿ ಜನರಿಗೆ ವಿವರಿಸಿ ಹೇಳಬೇಕೆಂತಲೂ ಅಪೀಲು ಮಾಡಿದ ಮೇಲೆ ಹಿಂದೂ ದೇಶದ ಅನೇಕ ಭಾಗಗಳಲ್ಲಿ ಪ್ರಾರ್ಥನೆಗಳೂ ಮೀಟಿಂಗುಗಳೂ ನಡಿಸಲ್ಪಟ್ಟವು.

ಈ ತಿಂಗಳ ಪ್ರಾರಂಭದಲ್ಲಿ ಜಮ್ನ ನದಿಯಲ್ಲಿ ನೆರೆಯು ಬಹಳ ಜೋರಾಗಿತ್ತು. ಇಷ್ಟುದೊಡ್ಡ ನೆರೆಯು ಇದಕ್ಕಿಂತ ಮುಂಚೆ ಬಂದ ದಾಖ್ಲೆಯೇ ಇಲ್ಲವಂತೆ. ಡೆಲ್ಲಿಪಟ್ಟಣದ ಕೆಲವು ಭಾಗಗಳು ನೀರಿನಲ್ಲಿ ಮುಳುಗಿಸಲ್ಪಟ್ಟಿದ್ದವು ಸುಮಾರು 40 ಗ್ರಾಮಗಳು ನೀರಿನ ಅಡಿಯಲ್ಲಿದ್ದವು. ಕೆಲವು ಕಡೆಗಳಲ್ಲಿ ನದಿಯು ಅಗಲವು 10ರಿಂದ 12ಮೈಲುಗಳ ವರೆಗೆ ಇತ್ತಂತೆ. ನದಿಯಿಂದ 6 ಮೈಲುದೂರದಲ್ಲಿದ್ದ ಗ್ರಾಮಗಳಿಗೂ ಕೂಡ ನೆರೆಯ ಹಾವಳಿ ತಗಲಿದೆ. ನಷ್ಟವು ವಿಪರೀತವಾಗಿದೆ. ನಷ್ಟದ ಅಂದಾಜು ಇನ್ನೂ ತಿಳಿಯಬಂದಿರುವುದಿಲ್ಲ.

ಡೆಲ್ಲಿಯಲ್ಲಿ ನೆರೆದಿದ್ದ ಯೂನಿಟಿ ಕಾನ್‌ಫರೆನ್ಸಿನಲ್ಲಿ ಅನೇಕ ಠರಾವುಗಳು ಮಂಜೂರಾದವು. ಅವುಗಳಲ್ಲಿ ಮುಖ್ಯವಾದ ಕೆಲವುಗಳ ಸಾರಾಂಶವೇನೆಂದರೆ—1· ಹಿಂದುದೇಶದ ಅನೇಕ ಕಡೆಗಳಲ್ಲಿ ಹಿಂದೂ ಮುಸಲ್ಮಾನರಿಗುಂಟಾದ ಜಗಳಗಳಿಗೆ ಈ ಕಾನ್‌ಫರೆನ್ಸು ಬಹಳ ದುಃಖಪಡುತ್ತದೆ. ದೇವಸ್ಥಾನಗಳನ್ನು ಕೆಡಿಸಿ ಪ್ರಾಣಹಾನಿ ಮಾಡಿದ್ದು ಕ್ರೂರತನವೇ ಸರಿ. ಭಿನ್ನಾಭಿಪ್ರಾಯಗಳಿದ್ದಲ್ಲಿ ಪಂಚಾಯತಿಯಿಂದಾಗಲೀ, ಸಾಧ್ಯವಿದ್ದರೆ ಲಾ ಕೋರ್ಟ್ ಮೂಲಕವಾಗಲೀ ತೀರ್ಮಾನಿಸಿಕೊಳ್ಳತಕ್ಕದ್ದು. 2· ಹದಿನೈದು ಮೆಂಬರುಗಳುಳ್ಳ ಮಧ್ಯರಾಷ್ಟ್ರೀಯ ಪಂಚಾಯಿತಿಯನ್ನು ಏರ್ಪಡಿಸಬೇಕು. ಇನ್ನೂ ಬೇರೆ ಬೇರೆ ಸ್ಥಳೀಯ ಪಂಚಾಯಿತಿಗಳನ್ನು ನೇಮಿಸುವರು. ಕಲಹಗಳೆಲ್ಲವನ್ನೂ ಇವರಿಂದ ತೀರ್ಮಾನಿಸಿಕೊಳ್ಳತಕ್ಕದ್ದು. 3· ಪ್ರತಿಯೊಬ್ಬನೂ ಅವನಿಗೆ ಇಷ್ಟಬಂದ ಮತವನ್ನು ಹಿಂಬಾಲಿಸಬಹುದು. ಆದರೆ ಬೇರೆಯವರ ಮತವನ್ನಾಗಲೀ, ಮತದ ಮಹಾಪುರುಷರನ್ನಾಗಲೀ ಹೀಯಾಳಿಸ ಬಾರದು. ಪ್ರಾರ್ಥನಾ ಸ್ಥಳಗಳೆಲ್ಲವೂ ಪವಿತ್ರವಾದವೆಂದೇ ಎಲ್ಲರೂ ಭಾವಿಸತಕ್ಕದ್ದು. ಅಂಥ ಸ್ಥಳಗಳನ್ನು ಯಾರೂ ಕೆಡಿಸಬಾರದು. ಕೆಡಿಸುವವರನ್ನು ಅಡ್ಡಿ ಮಾಡುವುದೂ ತುಚ್ಛೀಕರಿಸುವದೂ ಪ್ರತಿಯೊಬ್ಬನ ಕರ್ತವ್ಯ

4. ಮುಸಲ್ಮಾನರು ಮಾಡುತ್ತಿರುವ ಪಶುವಧೆಯನ್ನು ಬಲತ್ಕಾರದಿಂದಾಗಲೀ, ಠರಾವುಗಳಿಂದಾಗಲೀ, ಕೋರ್ಟಿನ ಹುಕುಮುಗಳಿಂದಾಗಲೀ ನಿಲ್ಲಿಸ ಬಹುದೆಂದು ಹಿಂದುಗಳು ನಂಬಬಾರದು. ಎರಡು ಮತದವರ ಒಳ್ಳೇ ನಡತೆಯಿಂದಲೂ ಸ್ನೇಹದಿಂದಲೂ ಅದು ನಿಲ್ಲಬೇಕಾಗಿದೆ. ಹಿಂದುಗಳು ಪವಿತ್ರವೆಂದು ನೋಡುವಂಥಾ ಗೋವಧೆಯನ್ನು ಮಾಡಬಾರದು. ಗೋವಧೆಯನ್ನು ಆಗುವಷ್ಟು ಕಡಿಮೆ ಮಾಡಬೇಕೆಂದು ಈ ಕಾನ್‌ಫರೆನ್ಸಿನ ಮುಸಲ್ಮಾನ್ ಮೆಂಬರುಗಳು ಎಲ್ಲಾ ಮುಸಲ್ಮಾನರಿಗೆ ಅಪೀಲು ಮಾಡುತ್ತಾರೆ.

5. ಮಹಮ್ಮದೀಯರ ಮಸೀದಿಗಳ ಮುಂದೆ ಹಿಂದುಗಳ ವಾದ್ಯವನ್ನು ಬಲತ್ಕಾರದಿಂದಾಗಲೀ, ಠರಾವುಗಳಿಂದಾಗಲೀ, ಕೋರ್ಟಿನ ಹುಕುಮಿನಿಂದಾಗಲೀ ನಿಲ್ಲಿಸುವುದು ಸಾಧ್ಯವೆಂದು ಮುಸಲ್ಮಾನರು ನಂಬಬಾರದು. ಇದು ಎರಡು ಮತದವರ ವಿಶ್ವಾಸದಿಂದಲೂ ಒಪ್ಪಿಗೆಯಿಂದಲೂ ನಿಲ್ಲಬೇಕಾಗಿದೆ. ಇದರಿಂದುಂಟಾಗುವ ಭಿನ್ನಾಭಿಪ್ರಾಯಗಳನ್ನು ಮೇಲಿನ ಠರಾವಿನಂತೆ ರಾಷ್ಟ್ರೀಯ ಪಂಚಾಯತಿಯು ತೀರಿಸತಕ್ಕದ್ದು. ಮಸೀದಿಯೊಳಗೆ ನಡೆಯುತ್ತಿರುವ ಪ್ರಾರ್ಥನೆಗೆ ತೊಂದರೆಯುಂಟಾಗುವಂತೆ ಮಸೀದಿಗಳ ಮುಂದೆ ವಾದ್ಯ ಮಾಡುವುದನ್ನು ಆಗುವಷ್ಟು ಮಟ್ಟಿಗೆ ನಿಲ್ಲಿಸಬೇಕೆಂದು ಈ ಕಾನ್‌ಫರೆನ್ಸಿನ ಹಿಂದೂ ಮೆಂಬರುಗಳು ಹಿಂದುಗಳಿಗೆಲ್ಲಾ ಅಪೀಲು ಮಾಡುತ್ತಾರೆ.

6. ಯಾವ ಮತದವರಾದರೂ ಬೇರೆ ಮತದವರನ್ನು ತಮ್ಮ ಮತಕ್ಕೆ ನ್ಯಾಯವಾದ ದಾರಿಯಿಂದ ಸೇರಿಸಬಹುದು. ಆದರೆ ಮೋಸದಿಂದಾಗಲೀ ಬಲತ್ಕಾರದಿಂದಾಗಲೀ ಹಾಗೆ ಮಾಡಕೂಡದು. 16 ವಯಸ್ಸಿಗಿಂತ ಚಿಕ್ಕವರನ್ನು ಅವರ ತಂದೆತಾಯಿಗಳ ಅನುಮತಿ ಇಲ್ಲದೆ ಬೇರೆ ಮತಕ್ಕೆ ಸೇರಿಸಿಕೊಳ್ಳಕೂಡದು. ಮತವನ್ನು ಬದಲಾಯಿಸುವದರ ವಿಷಯದಲ್ಲಿ ಗುಟ್ಟೇನೂ ಇರಬಾರದು. ಒಪ್ಪಿಗೆಯಿಂದ ಮತ ಬದಲಾಯಿಸಿದವನನ್ನು ಅವನ ಮತದವರು ಶಿಕ್ಷಿಸಬಾರದು. ಅವನವನ ಸ್ವಂತ ಜಾಗದಲ್ಲಿ ಪ್ರಾರ್ಥನಾ ಸ್ಥಳಗಳನ್ನು ಕಟ್ಟಿಸುವುದಕ್ಕೆ ಸಮೀಪದ ಬೇರೆ ಮತದವರು ಅಡ್ಡಿಮಾಡಬಾರದು. ಆದರೆ ಅಂಥಾ ಕಟ್ಟಡವು ಬೇರೆ ಮತದವರ ಪ್ರಾರ್ಥನೆಯ ಸ್ಥಳಕ್ಕೆ ತಕ್ಕಷ್ಟು ದೂರದಲ್ಲಿರಬೇಕು. ಯಾವ ವಿಷಯದಲ್ಲಾದರೂ ಭಿನ್ನಾಭಿಪ್ರಾಯಗಳಿದ್ದರೆ ರಾಷ್ಟ್ರೀಯ ಪಂಚಾಯಿತಿಯಿಂದ ತೀರಿಸಿಕೊಳ್ಳತಕ್ಕದ್ದು.

ಮಹಾತ್ಮ ಗಾಂಧಿಯವರು ತಮ್ಮ ೨೧ ದಿವಸದ ಉಪವಾಸವನ್ನು ಏನೊಂದೂ ತೊಂದರೆ ಇಲ್ಲದೆ ತಾ. ೮ರಲ್ಲು ಮುಗಿಸಿದರೆಂದು ತಿಳಿಸಲು ಸಂತೋಷಪಡುತ್ತೇವೆ.

ವಿದೇಶ.

ವಾಹಾಬಿ ಜನರ ಮುಂದಾಳಾದ ಇಬ್ನಸೌದರವರು ಮಕ್ಕಾ ಪಟ್ಟಣವನ್ನು ಹುಸೇನ್‌ರಾಜರ ಅಧಿಕಾರದಿಂದ ತಪ್ಪಿಸಿ, ಮೆಕ್ಕಾದಲ್ಲಿ ಭೂಲೋಕದ ಮಹಮ್ಮದೀಯರ ಪ್ರತಿನಿಧಿಗಳ ಒಂದು ಕಾನ್‌ಫರೆನ್ಸು ನಡಿಸಿ ಅವರ ತೀರ್ಮಾನದಂತೆ ಬಾಳಿಗೆ ತರುವುದೇ ತನ್ನ ಉದ್ದೇಶವೆಂದು ಸೂಚಿಸಿರುವರು. ಮೆಕ್ಕಾದ ಮತ್ತು ಜೆಡ್ಡಾದ ಮುಂದಾಳುಗಳು ಕೇಳಿಕೊಂಡನಂತರ ಹುಸ್ಸೇನ್ ರಾಜರು ತನ್ನ ಸಿಂಹಾಸನವನ್ನು ಬಿಟ್ಟುಬಿಟ್ಟಿರುವರೆಂದು ವರ್ತಮಾನ. ವಾಹಾಬಿಗಳು ಮೆಕ್ಕಾವನ್ನು ಹಿಡಿಯುವರೆಂದು ಸುಮಾರು ಹದಿನೈದುಸಾವಿರ ಜನರು ಮೆಕ್ಕಾದಿಂದ ಜೆಡ್ಡಾಕ್ಕೆ ಹೋಗಿರುವರು. ಜೆಡ್ಡಾದಲ್ಲಿ ನೀರಿನ ಕ್ಷಾಮದಿಂದ ಬಹಳ ತೊಂದರೆಯಾಗಿದೆ.

ಲೀಗ್ ಆಫ್ ನೇಷನ್ಸಿನ ಕೌನ್ಸಿಲಿನಲ್ಲಿ ಏಷ್ಯಾ ಖಂಡದವರ ಪ್ರತಿನಿಧಿಗಳಿಗೆ ಸ್ಥಳ ಕೊಡದೆ ಇರುವುದರಿಂದ ಲೀಗಿನ ಕೆಲಸ ಕುಂಠಿತವಾಗಬಹುದೆಂದು ಚೈನಾದ ಡೆಲಿಗೇಟನು ಲೀಗಿಗೆ ತಿಳಿಸಿದ.

ಬ್ರಿಟನ್ನಿನ ಪಾರ್ಲಿಮೆಂಟಿನಲ್ಲಿ ಲೀ ರಿಪೋರ್ಟಿನ ವಿಷಯ ವಿಚಾರಿಸಿಕೆಂದು ಕೇಳಿದಕ್ಕೆ ಅದರ ವಿಷಯ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು ಇಂಡಿಯಾ ಸರಕಾರದವರೊಡನೆ ಪತ್ರವ್ಯವಹಾರ ನಡಿಸುತ್ತಿರುವರೆಂದೂ, ಲಾರ್ಡ್ ಒಲಿವಿಯರ್‌ರವರೂ ಮತ್ತು ಸರಕಾರದವರೂ ಲೀ ರಿಪೋರ್ಟಿನ ವಿಷಯ ಒಡನೆ ತುರ್ತಾಗಿ ನಡಿಸಬೇಕೆಂದಿರುವರೆಂದೂ ಜವಾಬು ಕೊಟ್ಟಿರುವರು.

ಈಜಿಪ್ಟಿನ ಮುಖ್ಯಮಂತ್ರಿಯಾದ ಜಗ್ಲುಲ್ ಪಾಷಾರವರು ಇಂಗ್ಲೆಂಡಿನ ಮುಖ್ಯ ಮಂತ್ರಿಯವರೊಡನೆ ಸುಡಾನಿನ ವಿಷಯ ಸಂಭಾಷಣೆಯನ್ನು ಮುಗಿಸಿರುವರು. ಅವರು ಮೊದಲು ನಿಶ್ಚಯಿಸಿದ್ದಕ್ಕಿಂತ ಒಂದು ವಾರದ್ದು ಮೊದಲಾಗಿಯೇ ಈಜಿಪ್ಟಿಗೆ ವಾಪಾಸು ಹೊರಡುವರಂತೆ. ಅವರ ಸಂಭಾಷಣೆಯ ಫಲಿತಾಂಶ ಏನಾಗಿದೆ ಎಂದು ಇನ್ನೂ ತಿಳಿಸಿರುವದಿಲ್ಲ. ಅದರಿಂದ ಅಷ್ಟೇನೂ ಒಳ್ಳೇದಾಗಿರಲಿಕ್ಕಿಲ್ಲವೆಂದೇ ಊಹಿಸಲಾಗಿದೆ.

ಮಾಂಸಾಹಾರಿಯಾದ ಮರ.

ಮಾರನೇ ದಿನ 4 ಘಂಟೆಗೆ ಮುಂಚೆ ಬೆಳಗಿನ ಪ್ರಾರ್ಥನೆಗೆ ನಮ್ಮೆಲ್ಲರನ್ನೂ ಕರೆದರು. ಚಂದ್ರೋದಯವಿರಲಿಲ್ಲ. ಕತ್ತಲೆಯಾಗಿತ್ತು. ಪೂರ್ವದಿಂದ ಛಳಿಗಾಳಿಯು ಬೀಸುತ್ತಿತ್ತು. ದಿಜ್ಞೆಯಮೇಲೆ ಬೆಳ್ಳಿ ನಕ್ಷತ್ರವು ಶುಭ್ರವಾದ ಆಕಾಶದಲ್ಲಿ ಪ್ರಕಾಶಿಸುತ್ತಿತ್ತು. ನಾವು ಕೂತಲ್ಲಿಂದ ಗಾಳಿಗೆ ಅಲ್ಲಾಡುತ್ತಿದ್ದ ಸುರ್ಗಿ ಹೂ ದೃಷ್ಟಿಗೆ ಗೋಚರವಾಗುತ್ತಿದ್ದವು. ಬಾಪು ಒಂದು ಕಪ್ಪಾದ ಬೆಚ್ಚಗಿರುವ ಶಾಲಿನಿಂದ ಮುಚ್ಚಿಕೊಂಡಿದ್ದರು. ನಿದ್ರೆ ಚೆನ್ನಾಗಿ ಮಾಡಿದಿರೋ ಎಂತ ಕೇಳಿದೆ, ಹೌದು, ಬಹಳ ಚೆನ್ನಾಗಿ ನಿದ್ರೆ ಬಂತೆಂತ ಹೇಳಿದರು. ಹಿಂದಿನ ದಿವಸ ಬೆಳಗ್ಗಿಂದ ಈ ದಿನ ಅವರ ಧ್ವನಿಯೂ ಬಲವಾಗಿತ್ತೆಂತ ನೋಡಲು ಸಂತೋಷವಾಯಿತು. ಈ ದೀರ್ಘ ಉಪವಾಸದ ಆಖೈರ್ ದಿನದಲ್ಲಿ ಮನೆಯವರೆಲ್ಲರೂ ಸೇರಲಿಕ್ಕಾಗಿ ಕಾಯುತ್ತಿರುವಾಗ ಇದ್ದ ಮೌನದಿಂದ ಹುಟ್ಟಿದ ಮನೋಭಾವವನ್ನು ವರ್ಣಿಸಲು ಸಾಧ್ಯವಿಲ್ಲ. ಆಖೈರ್ ದಿನವೆಂತ ನಮ್ಮೆಲ್ಲರಿಗೂ ಜ್ಞಾಪಕದಲ್ಲಿತ್ತು. ಅವರು ಮಲಗಿದ್ದ ಕೊಠಡಿಯ ಕಿಟಿಕಿಗಳೆಲ್ಲಾ ತೆರೆದಿತ್ತು. ಹಾಸಿಗೆಯಮೇಲೆ ಮಲಗಿದ್ದ ರೂಪಿನ ಮೇಲು ಹೊರಗೆ ಪ್ರಕಾಶಿಸುತ್ತಿದ್ದ ನಕ್ಷತ್ರಗಳನ್ನು ಆಗಾಗ ನೋಡುತ್ತಾ ಕೂತುಕೊಂಡೆ.

ಈ ವಿಶೇಷ ಸಮಯದಲ್ಲಿ ಹಾಡಿದ ಗೀತೆಯು ಮಹಾತ್ಮರ ಖಾಸಾ ಗೀತೆಯಾಗಿತ್ತು. ಇದು ಗುಜರಾತಿಯಲ್ಲಿತ್ತು. ಅನಂತರ ಬಾಲಕೃಷ್ಣನಿಂದ ಅದರ ಅರ್ಥ ತಿಳಿದುಕೊಂಡೆ. ಅದರಲ್ಲಿ ಏನು ಹೇಳುತ್ತಿದೆಯೆಂದರೆ "ದೇವರಲ್ಲಿ ಹೋಗುವ ದಾರಿಯು ಮಹಾಪುರುಷರಿಗೇ ಮೊದಲು ಹೇಡಿಗಳಿಗೆ ಅಲ್ಲ. ಸಂಪೂರ್ಣ ಆತ್ಮ ತ್ಯಾಗವಿರಬೇಕು. ಸದಮತ್ತನಿಗಾಗಿ ಸರ್ವಸ್ವವನ್ನೂ ಬಿಡಲು ತಯಾರಿರುವವರಿಗೆ ಮಾತ್ರ ಮೋಕ್ಷವು ಸಾಧ್ಯವಿದೆಯಷ್ಟೆ. ಮುತ್ತು ತರಲಿಕ್ಕೆ ಮುಳುಗುವವರು ಹೇಗೆ ಸಮುದ್ರದಲ್ಲಿ ತುಂಬಾ ಆಳವಾಗಿ ಮುಳುಗಬೇಕೋ ಹಾಗೆಯೇ ದೇವರನ್ನು ಹುಡುಕುವವರ ಆತ್ಮವು ಬಹಳ ಆಳವಾಗಿ ಮುಳುಗಬೇಕು"

ಪ್ರಾರ್ಥನೆಯಾದನಂತರ ಬೆಳಗಿನ ಹೊತ್ತೆಲ್ಲಾ ಬಹಳ ಶಾಂತತೆಯಿಂದ ಕಳೆಯಿತು. ಎಂಟು ಘಂಟೆಗೆ ಮುಂಚೆ ತುಂಬಾ ಪ್ರೇಕ್ಷಕರು ಬಂದು ಸೇರಿದರು. ಕೆಲವರು ದರ್ಶನ ದೊರೆತ ಕೂಡಲೇ ಹೊರಟು ಹೋದರು. ಉಳಿದವರು ಉಪವಾಸ ಬಿಡುವ ವರೆಗೂ ಇದ್ದರು. ಹತ್ತು ಘಂಟೆಗೆ ಮಹಾತ್ಮರು ನನ್ನನ್ನು ಕರೆದು "ನನ್ನ ಪ್ರಿಯ ಕ್ರಿಸ್ತ ಪ್ರಾರ್ಥನೆಯು ಯಾವದೆಂತ ಜ್ಞಾಪಕವಿದೆಯೋ" ಎಂತ ಕೇಳಿದರು. "ಜ್ಞಾಪಕವಿದೆ, ಹಾಡಲೋ" ಎಂತ ಕೇಳಿದೆ.

"ಈಗ ಅಲ್ಲ. ನಾನು ಉಪವಾಸ ಬಿಡುವಾಗ ಮತಗಳ ಒಗ್ಗಟ್ಟನ್ನು ತೋರಿಸುವ ಒಂದು ಕ್ರಿಯೆಯನ್ನು ಮಾಡಬೇಕೆಂತ ಇದ್ದೇನೆ. ಇಮಾಮ್ ಸಾಹೇಬರು ಕೊರಾನಿನ ಮೊದಲಿನ ವಾಕ್ಯಗಳನ್ನು ಹಾಡಬೇಕೆಂತ ಅಪೇಕ್ಷಿಸುತ್ತೇನೆ. ಅನಂತರ ನೀವು ಕ್ರೈಸ್ತ ಪ್ರಾರ್ಥನೆಯನ್ನು ಹಾಡಬೇಕು. ಯಾವದೆಂತ ಗೊತ್ತಾಯಿತೇ, "ಅದ್ಭುತವಾದ ಕ್ರಾಸನ್ನು ಸಂದರ್ಶಿಸುವಾಗ" ಎಂತ ಪ್ರಾರಂಭವಾಗಿ "ಅಂಥ ಅದ್ಭುತ, ದೈವೀಕ ಭಕ್ತಿಯು ನನ್ನ ಆತ್ಮವನ್ನೂ, ಜೀವವನ್ನೂ, ಸರ್ವಸ್ವವನ್ನೂ ಆಕರ್ಷಿಸುತ್ತದೆ" ಎಂತ ಆಖೈರ್ ಆಗುತ್ತದೆ. ಅನಂತರ ವಿನೋಬರು ಉಪನಿಷತ್ತಿನಿಂದ ಮಂತ್ರವನ್ನು ಹೇಳಬೇಕು. ಆಖೈರಿನಲ್ಲಿ ಬಾಲಕೃಷ್ಣರು ನಿಜವಾದ ವೈಷ್ಣವನನ್ನು ವರ್ಣಿಸುವ ವೈಷ್ಣವ ಪ್ರಾರ್ಥನೆಯನ್ನು ಹಾಡಬೇಕು.

ಮಹಡಿಯಿಂದ ಕೆಳಗೆ ಹೋದಾಗ ಆದ ವಿಚಾರದಿನ ಸಂಗತಿಯನ್ನು ಕೃಷ್ಣದಾಸನಿಗೆ ತಿಳಿಸಿದೆ. ಆ ದಿನ ಅವನಿಗೆ ಬಹಳ ಅಸ್ವಸ್ಥವಾಗಿತ್ತು. ಹುಡ್ಡಾಗಿ ಮಹಡಿ ಮೇಲೆ ಬಂದು ಪ್ರಾರ್ಥನೆಯಲ್ಲಿ ಸೇರಲಿಕ್ಕೆ ಆಗದಿದ್ದರೂ ಮನಸ್ಸಿನಲ್ಲಾದರೂ ಈ ಕ್ರಿಯೆಯಲ್ಲಿ ಸೇರಿಕೊಳ್ಳಲು ಅವನಿಗೆ ತುಂಬಾ ಸಂತೋಷವಿತ್ತು. ಮಧ್ಯಾಹ್ನಕ್ಕೆ ಮುಂಚೆ ಎಲ್ಲಾ ಮುಸ್ಸಲ್ಮಾನ ಸ್ನೇಹಿತರೂ ಸೇರಿದರು. ಅವರ ಸೇವೆ ಮಾಡಲು ಪ್ರೀತಿಸಿದ್ದ ಮಹಿಳೆಯರೂ ಸಹ ಸೇರಿದರು. ಸಮಯ ಸಮೀಪಿಸಿದಾಗ ನಾನು ಮಹಡಿ ಕೆಳಗೆ ಹೊರಡುವಾಗ ಮನೆಯ ಆಳುಗಳು ಸಮೇತ ಎಲ್ಲರನ್ನೂ ಹಾಜರಾಗಲು ಬಿಡಬೇಕೆಂತ ನನಗೆ ತಿಳಿಸಿದರು. ಇದಕ್ಕೆ ಮುಂಚೆ ಬೆಳಿಗ್ಗೆ ನಂಬಿಕೆ ಇಲ್ಲದ ನಮ್ಮ ಕೆಲಸಮಾಡಿದ ತೋಟಿಯನ್ನು ಅವರನ್ನು ನೋಡಲಿಕ್ಕೆ ಕರೆದುಕೊಂಡು ಬಂದಿದ್ದೆ. ಅವರು ಅವನಲ್ಲಿ ಕೆಲವು ಒಳ್ಳೇ ಮಾತುಗಳನ್ನಾಡಿ ಅವನು ಮಾಡಿದ ಸೇವೆಗೆ ಅವನಿಗೆ ಕೃತಜ್ಞತೆಯನ್ನು ತೋರಿಸಲು ಮುಗುಳುನಗೆಯನ್ನು ನಕ್ಕರು.

ಅಂತು ಮಧ್ಯಾಹ್ನ ಬಂತು. ಉಪವಾಸ ಬಿಡಬೇಕು, ಮೊದಲು ಡಾಕ್ಟರುಗಳನ್ನೇ ಪ್ರತ್ಯೇಕವಾಗಿ ಕರೆದು ಅವರ ಪ್ರೀತಿಗೂ ಶ್ರದ್ಧೆಗೂ ಮನಸ್ಸು ಕರಗುವಂಥಾ ಮಾತುಗಳನ್ನಾಡಿ ಅವರಿಗೆ ವಂದಿಸಿದರು. ಅನಂತರ ಉಪವಾಸ ಕಾಲದಲ್ಲಿ ಡಾಕ್ಟರಾಗಿಯೂ ಸ್ನೇಹಿತನಾಗಿಯೂ ಸಹಾಯ ಮಾಡಿದ್ದ ಹಕೀಮ್ ಅಜ್ಮಲ್‌ಖಾನರನ್ನು ಕರೆದು ಮಾತಾಡಿದರು. ಆನಂತರ ಬಹು ಮೃದುವಾದ ಪ್ರೀತಿಯನ್ನು ತೋರಿಸಿ ಅವರಿಗೆ ಉಪಚರಿಸಿದ ಮೌಲಾನ ಮಹಮ್ಮದ್‌ಅಲ್ಲಿಯವರಲ್ಲಿ ಮಾತಾಡಿದನಂತರ ಎಲ್ಲರೂ ಸಮಾಧಾನದಿಂದ ಅವರ ರೋಣೆಗೆಹೋಗಿ ಅವರಿಗೆ ಪ್ರೀತಿಯಿಂದ ನಮಿಸಿ ಕೂತುಕೊಂಡರು. ಸ್ವಾಮಿ ಶ್ರದ್ಧಾನಂದರು ಕಾಲು ಕೆಳಗೆ ಕಣ್ಣುಮುಚ್ಚಿ ಧ್ಯಾನಮಾಡುತ್ತಾ ಕೂತಿದ್ದರು. ಪಂಡಿತ ಮೋತಿಲಾಲ್ ನೇಹರೂ, ದೇಶಬಂಧು ಚಿತ್ತರಂಜನದಾಸ ಮೌಲಾನ ಅಬ್ದುಲ್ ಕಲಂ ಅಸಾದ್ ಮತ್ತು ಅಲ್ಲಿ ಬಂಧುಗಳು ಮತ್ತು ಇತರರನೇಕರು ಸಹ ಹಾಸಿಗೆಯ ಸಮೀಪ ಕೂತುಕೊಂಡರು.

ದಕ್ಷಿಣ ಆಫ್ರಿಕಾದಲ್ಲೂ, ಸಬರ್‌ಮತಿ ಆಶ್ರಮದಲ್ಲೂ ಅವರ ಸಮೀಪದ ಜೊತೆಗಾರರಾಗಿದ್ದ ಇಮಾಮ್ ಸಾಹೇಬರು ಕೊರಾನಿನ ಮೊದಲನೇ ವಾಕ್ಯಗಳನ್ನು ಅರಬಿಯಲ್ಲಿ ಹಾಡಿದರು. ಅದರಲ್ಲಿ ದೇವರು ದಯಾಸಾಗರನೆಂತಲೂ, ಕೃಪಾಳುವೆಂತಲೂ, ಪ್ರಪಂಚದ ಸೃಷ್ಟಿ ಸ್ಥಿತಿ ಕಾರಣನೆಂತಲೂ, ಮಾನವಜಾತಿಯ ಸಹಾಯಕನೆಂತಲೂ ವರ್ಣಿಸಿದೆ. ಪಾಪನಾಗಿ ಬಿಟ್ಟು ಧರ್ಮದಾರಿಯಲ್ಲಿ ನಡೆಯಲಿಕ್ಕೆ ಸಹಾಯಕನಾಗುವಂತೆ ಪ್ರಾರ್ಥನೆ ಇದೆ. ಇದರಮೇಲೆ ಕ್ರಿಶ್ಚಿಯನ್ ಪ್ರಾರ್ಥನೆಯನ್ನು ಹಾಡಿಯಾಯಿತು. ಇನ್ನೊಬ್ಬರು ಉಪನಿಷತ್ತಿನಿಂದ ಸೊಗಸಾದ ಮಂತ್ರಗಳನ್ನು ಹಾಡಿದರು. ಮೂರು ಶ್ಲೋಕಗಳ ಅರ್ಥ ಹೀಗಾಗುತ್ತೆ. "ಸತ್ಯ, ಇಂದ್ರಿಯ ನಿಗ್ರಹ, ತಪಸ್ಸು ಮತ್ತು ಬ್ರಹ್ಮಚರ್ಯವನ್ನು ಅಭ್ಯಾಸ ಮಾಡುವವರಿಗೆ ಮಾತ್ರ ಒಳಗಿನ ಆತ್ಮ ಜ್ಯೋತಿಯು ಗೋಚರವಾಗುತ್ತೆ. ಪ್ರಾಚೀನ ಕಾಲದ ಋಷಿಗಳು ಸತ್ಯವನ್ನು ಸಾಧಿಸುತ್ತಾ ಪರಮಾತ್ಮನನ್ನು ಹೊಂದಿದರು. ನನ್ನ ಮನಸ್ಸಿಗೆ ಮಾತು ಸುಳ್ಳಾಗಬಾರದು. ಮಾತಿಗೆ ಮನಸ್ಸು ಸುಳ್ಳಾಗಬಾರದು. ನಿರಂತರ ಪರಮಾತ್ಮನ ಪ್ರಭೆಯು ನನಗೆ ಹೊಳೆಯುತ್ತಿರಲಿ. ನನ್ನ ಬುದ್ಧಿ ತಪ್ಪದಿರಲಿ. ನಾನು ಯಾವಾಗಲೂ ನಿಜವಾದದ್ದನ್ನೇ, ಸತ್ಯವಾದದ್ದನ್ನೇ ಆಡುತ್ತೇನೆ"

ಓಂ ಶಾಂತಿಃ ಶಾಂತಿಃ ಶಾಂತಿಃ ಎಂತ ಗಾಂಭೀರ್ಯವಾಗಿ ಹೇಳಿದಮೇಲೆ ಬಾಲಕೃಷ್ಣರು ಹಾಡಲಿಕ್ಕೆ ಪ್ರಾರಂಭಿಸಿದರು. ಅವರು ನಿಜವಾದ ವೈಷ್ಣವನ ಪದವನ್ನು ಹಾಡಿದರು. "ಬೇರೆಯವರ ತಪ್ಪನ್ನು ತನ್ನದಾಗಿಯೇ ಭಾವಿಸುವವನೇ ನಿಜವಾದ ವೈಷ್ಣವನು. ಯಾವಾಗಲೂ ಸೇವೆಮಾಡಲು ತಯಾರಾಗಿದ್ದು, ತನ್ನನ್ನು ತಾನೇ ಹೊಗಳಿಕೊಳ್ಳುವದಿಲ್ಲ. ಎಲ್ಲರಿಗೂ ಬಾಗಿ ನಡೆಯುತ್ತಾನೆ. ಯಾರನ್ನೂ ದೂಷಿಸುವದಿಲ್ಲ. ತನ್ನ ಮನೋವಾಕ್ಕಾಯಗಳನ್ನು ಶುದ್ಧವಾಗಿ ಇಟ್ಟುಕೊಳ್ಳುತ್ತಾನೆ. ಅಂಥವನ ತಾಯಿಯು ಪುಣ್ಯವಂತೆ. ಮನಸ್ಸನ್ನು ಸಮಾಧಾನವಾಗಿಟ್ಟುಕೊಂಡು ತನ್ನ ತುಟಿಗಳನ್ನು ಸುಳ್ಳಿನಿಂದ ಬಣ್ಣಕೆಡಿಸುವದಿಲ್ಲ, ಪರ ಸ್ವತ್ತನ್ನು ಮುಟ್ಟುವದಿಲ್ಲ. ಆಶಾ ಬಂಧನಗಳೇನೂ ಆತನಿಗೆ ಇಲ್ಲ. ರಾಮನಾಮದಂತೆ ಅವನ ದೇಹದಲ್ಲೇ ಸಮಸ್ತ ಪುಣ್ಯ ಕ್ಷೇತ್ರಗಳೂ ಇವೆ. ಲೋಭ, ಮೋಹ, ಕ್ರೋಧ, ಮತ್ಸರಗಳಿಂದ ವಿರಹಿತನಾಗಿರುತ್ತಾನೆ. ಅಂಥವನೇ ನಿಜವಾದ ವೈಷ್ಣವ.

ಈ ಗೀತೆಗಳನ್ನೆಲ್ಲಾ ಹಾಡುವಾಗ ಅವು ಎಷ್ಟು ಕಾಲೋಚಿತವಾಗಿವೆ ಎಂತ ಎಲ್ಲರಿಗೂ ಹೊಳೆಯಿತು. ಇವುಗಳಲ್ಲೆಲ್ಲಾ ಹೇಳಿದ ಮಾರ್ಗಕ್ಕೆ ಸಮೀಪವಾಗಿದ್ದವರು ಕಷ್ಟಪಟ್ಟು ಉಪವಾಸಮಾಡುವದರಲ್ಲಿದ್ದರು. ಎಲ್ಲರ ಮನಸ್ಸು ಒಂದಾಯಿತು.

ಉಪವಾಸ ಬಿಡುವ ಮುಂಚೆ ಮೌಲಾನ ಮಹಮ್ಮದಾಲಿ, ಹಕೀಮ್ ಅಜ್ಮಲ್‌ಖಾನ್, ಮೌಲಾನ ಅಬ್ದುಲ್ ಕಲಂ ಆಸಾದರಕಡೆಗೆ ಮಹಾತ್ಮ ಗಾಂಧಿಯವರು ತಿರುಗಿದರು. ಅವರಲ್ಲಿ ಮಾತಾಡಿದರು. ಮಾತಾಡುವಾಗ ಅವರ ಮನಸ್ಸು ಎಷ್ಟರಮಟ್ಟಿಗೆ ಕರಗುತ್ತೆಂದರೆ ಅವರ ಅಶಕ್ತತೆಯಲ್ಲಿ ಅವರು ಆಡಿದ ಮಾತು ಹತ್ತಿರ ಇದ್ದವರಿಗೆ ಮಾತ್ರ ಕೇಳಿತಷ್ಟೆ. ಮೂವತ್ತು ವರ್ಷದಿಂದಲೂ ಹಿಂದೂ ಮುಸಲ್ಮಾನ್ ಒಗ್ಗಟ್ಟೇ ತನ್ನ ಮುಖ್ಯ ಯೋಚನೆಯಾಗಿತ್ತೆಂತಲೂ, ಆದರೆ ಇನ್ನೂ ಅದು ಸಫಲವಾಗಲಿಲ್ಲವೆಂತಲೂ ಹೇಳಿದರು. ದೇವರ ಇಚ್ಛೆ ಹ್ಯಾಗೆ ಇದೆಯೆಂತ ಗೊತ್ತಿಲ್ಲ. ಆದರೆ ಈ ಧ್ಯೇಯಕ್ಕಾಗಿ ತಮ್ಮ ಪ್ರಾಣವನ್ನಾದರೂ ಅರ್ಪಿಸುತ್ತೇನೆಂತ ಮಾತು ಕೊಡಬೇಕೆಂತಲೂ ಕೇಳಿದರು. ಹಿಂದುಗಳು ತಮ್ಮ ದೇವಸ್ಥಾನಗಳಲ್ಲಿ ಶಾಂತಿಯಿಂದ ಪ್ರಾರ್ಥನೆಗಳನ್ನು ನಡಿಸಲಿಕ್ಕೂ ಮುಸಲ್ಮಾನರು ತಮ್ಮ ಮಸೀದಿಗಳಲ್ಲಿ ಪ್ರಾರ್ಥನೆ ನಡಿಸಲು ಸಂಪೂರ್ಣ ಸ್ವತಂತ್ರವಿರಬೇಕು. ಇಲ್ಲದಿದ್ದರೆ ಈ ಮೂಲಹಕ್ಕು ಸಿಕ್ಕದಿದ್ದರೆ ಹಿಂದೂ ಮತ್ತು ಮುಸಲ್ಮಾನ ಧರ್ಮಗಳಿಗೆ ಅರ್ಥವೇ ಇಲ್ಲ.

ಹಕೀಮ್ ಅಜ್ಮಲ್‌ಖಾನರೂ ಮೌಲಾನ ಅಬ್ದುಲ್‌ಕಲಂ ಆಸಾದರೂ ಸಹ ತಮ್ಮ ವಾಗ್ದಾನವನ್ನು ಕೊಟ್ಟರು.

ಆಗ ಡಾಕ್ಟರ್ ಅನ್ಸಾರಿಯವರು ಸ್ವಲ್ಪ ಕಿತ್ತಳೆ ರಸವನ್ನು ತಂದರು. ಅದನ್ನು ಮಹಾತ್ಮ ಗಾಂಧಿಯವರು ಕುಡಿದರು, ಉಪವಾಸಬಿಟ್ಟಾಯಿತು. ಅಲ್ಲಿದ್ದವರ ಸಂತೋಷವನ್ನೂ ಉತ್ಸಾಹವನ್ನೂ ವರ್ಣಿಸಲು ಸಾಧ್ಯವಿಲ್ಲ. ಅವರಿಗೆ ಸಂತೋಷವೂ ಚಕಿತವೂ ಆಗಿ ಸಮ್ಮ ಹೇಳುತ್ತಿರುವಾಗಲೆಲ್ಲಾ ಅವರು ಶಾಂತರಾಗಿದ್ದರು. ನಿಮಿಷದಲ್ಲೇ ಕೊಠಡಿಯು ಬರಿದಾಯಿತು. ಮಹಾತ್ಮ ಗಾಂಧಿಯವರು ಮೌನವಾಗಿದ್ದರು. ಉಪವಾಸ ಬಿಡುವ ಕ್ರಮದ ಕೆಲಸ ತೀರಿತು.

ಶೌಕತಾಲಿಯವರು ಕರ್ನಾಟಕದ ಯುವಕರಿಗೆ ಬರೆಕೊಂಡ ವಿಜ್ಞಾಪನೆ.

ಕರ್ನಾಟಕದ ಎಲ್ಲಾ ಮುಸಲ್ಮಾನ್ ಯುವಕರು ಕಾಂಗ್ರೆಸ್ ಮತ್ತು ಖಿಲಾಫತ್ ಸಭೆಗಳ ಸ್ವಯಂ ಸೇವದ ದಳಕ್ಕೆ ಸೇರಿ ನನ್ನ ಯುವಕ ಸ್ನೇಹಿತರಾದ ಡಾಕ್ಟರ್ ಹರ್ಡೀಕರರ ತಾಬೆಯಲ್ಲಿ ತಯಾರು ಹೊಂದಿರಿ. ಇವರು ಬೆಳಗಾವ್ ಮುಂತಾದ ಸ್ಥಳಗಳಲ್ಲಿ ತರಬೇತಿನ ಏರ್ಪಾಡುಮಾಡುತ್ತಾರೆ. ರಾಷ್ಟ್ರೀಯ ಕೆಲಸದಲ್ಲಿ ಮುಸಲ್ಮಾನ್ ಸ್ವಯಂ ಸೇವಕರು ಬೇರೆ ಯುವಕರಂತೆಯೇ ಮನಃಪೂರ್ತಿಯಾಗಿಯೂ ತೃಪ್ತಿಯಾಗಿಯೂ ಕೆಲಸ ಮಾಡಿಯಾರೆಂತ ನಂಬುತ್ತೇನೆ. ಮುಸಲ್ಮಾನ ಯುವಕರು ನಾದು ನಲ್ಲಿ ಸೇರುವರೆಂತ ಆಶಿಸುತ್ತೇನೆ ಮತ್ತು ಪ್ರಾರ್ಥಿಸುತ್ತೇನೆ.

ಶೌಕತ್ ಅಲಿ ಖಿಂತಿದೆ.

ಪ್ರಕಟನಾ ನಂ. 6.

ಹಿಂದುಸ್ಥಾನೀ ಸೇವಾದಲ, ಕರ್ನಾಟಕ ಶಾಖಾ, ಹುಬ್ಬಳ್ಳಿ.

ಈ ಕೆಳಗಿನ ನಿಯಮಗಳು ಪ್ರತಿಯೊಬ್ಬ ಸಹಾಯಕನಿಗೂ ಲಗಾವಿರುತ್ತವೆ. ಮತ್ತು ಜಿಲ್ಲಾ ಕಾಂಗ್ರೆಸ್ ಕಮಿಟಿಗಳೂ, ಜಿಲ್ಲಾ ಸ್ವಯಂಸೇವಕ ಪಥಕದ ನಿರ್ಮಾಣಕರೂ ತಾಲೂಕು ಕಾಂಗ್ರೆಸ್ ಕಮಿಟಿಗಳೂ ಮತ್ತು ಇತರ ಸ್ವಯಂ ಸೇವಕ ಸಂಸ್ಥೆಗಳೂ ತಮ್ಮ ಅಧೀನಕೊಳಪಟ್ಟ ಸಹಾಯಕರು ಈ ನಿಯಮಗಳಿಗೆ ಬದ್ಧರಾಗುವಂತೆ ಏರ್ಪಡಿಸ ತಕ್ಕದ್ದು.

ಸಹಾಯಕರನ್ನು ಸೇರಿಸಿಕೊಳ್ಳುವಮುಂದೆ ಕೆಳಗಿನ ಕರಾರುಗಳು ಅವಶ್ಯವಾಗಿ ಪಾಲಿಸಲ್ಪಡತಕ್ಕದ್ದು.

1. ಸಹಾಯಕನ ವಯಸ್ಸು 40 ವರ್ಷಕ್ಕಿಂತ ಹೆಚ್ಚಿಗೆ ಇರಕೂಡದು ಮತ್ತು ಅವನು ಕಾಂಗ್ರೆಸ್ ಕಮಿಟಿಯ ಮೆಂಬರನಿರತಕ್ಕದ್ದು.

2. ಸೇರಿಸಿಕೊಳ್ಳುವ ಮೊದಲು, ಸ್ವಯಂ ಸೇವಕ ಬೋರ್ಡಿನ ಡೈರೆಕ್ಟರರು ಸಹಾಯಕನ ವಿದ್ಯೆಯನ್ನೂ ಶಾರೀರಕ ಆರೋಗ್ಯವನ್ನೂ ಪರೀಕ್ಷಿಸುವರು. ಶಾರೀರಕ ಮತ್ತು ಮಾನಸೀಕ ಆರೋಗ್ಯತೆಯುಳ್ಳವನೇ ಸಹಾಯಕನಾಗಿ ಸೇರಿಸಿಕೊಳ್ಳಲ್ಪಡುವನು.

3. ಸೇರಿಸಿಕೊಂಡ ದಿವಸದಿಂದ 1925ನೇ ಇಸವಿ ಜನವರಿ 5ರ ವರೆಗೆ ಸಹಾಯಕನು ವಾಲಂಟಿಯರ ಬೋರ್ಡಿನವರ ಅಧಿಕಾರಕ್ಕೆ ಒಳಪಡುವನು. ಡಿಸೆಂಬರ್ 15ನೇ ತಾರೀಕಿಗೆ ಬೆಳಗಾವಿಯಲ್ಲಿ ಸ್ವಯಂ ಸೇವಕರ ಕಚೇರಿಗೆ ಹಾಜರಾಗಿ ಆ ಮೇಲೆ 1925ನೇ ಜನವರಿ 5ರ ವರೆಗೆ ಆ ಕಚೇರಿಯವರು ಹೇಳಿದ ಕೆಲಸವನ್ನು ಮಾಡಬೇಕಾಗುವದು.

4. ನಿಸ್ಸಂಶಯವಾಗಲಿಕ್ಕೆ ವಾಲಂಟಿಯರ ಬೋರ್ಡಿನವರು ಆಗಾಗ್ಗೆ ಮಾಡುವ ನಿಯಮಗಳನ್ನು ಸಹಾಯಕನಿಗೆ ಅಗತ್ಯವಾಗಿ ಪಾಲಿಸಬೇಕಾಗುವದು.

5. ಸಹಾಯಕನು ಒಳ್ಳೇ ನಡತೆಯುಳ್ಳವನೂ ಶುದ್ಧ ಸ್ವಭಾವದವನೂ ಇರತಕ್ಕದ್ದು.

6. ಸ್ವಯಂ ಸೇವಕ ಬೋರ್ಡಿನವರು ಠರಾಯಿಸಿದ ಪೋಷಾಕನ್ನೇ ಪ್ರತಿಯೊಬ್ಬ ಸಹಾಯಕನು ಧರಿಸತಕ್ಕದ್ದು.

7. ನವಂಬರ್ 1ನೇ ತಾರೀಕಿನೊಳಗಾಗಿ ಸಹಾಯಕನು ತನ್ನ ಹೆಸರನ್ನು ರಿಜಿಸ್ಟರುಮಾಡಿಸಿ ಠರಾಯಿಸಿದ ಪ್ರತಿಜ್ಞಾ ಪತ್ರಿಕೆಯ ಮೇಲೆ ತನ್ನ ಸಹೀ ಮಾಡತಕ್ಕದ್ದು.

ಸೂಚನೆ:—1. ಮೇಲಿನ ನಿಯಮಗಳ ಸ್ವಯಂಸೇವಿಕೆಯರಿಗೆ ಸಂಬಂಧಿಸಿರುವದಿಲ್ಲ.

2. ಸಹಾಯಕರಿಗೆ ದುಸ್ತಿನ ಮತ್ತು ಪ್ರವಾಸದ ಖರ್ಚನ್ನು ಸ್ವಯಂ ಸೇವಕ ಬೋರ್ಡಿನವರು ಕೊಡುವ ಪ್ರಶ್ನೆಯು ಇನ್ನೂ ವಿಚಾರದಲ್ಲಿದೆ.

3. ರಾಷ್ಟ್ರೀಯ ಮಹಾ ಸಭೆಯ ಕಾಲಕ್ಕೆ 1924ನೇ ಡಿಶೆಂಬರ್ 15ರಿಂದ 1925ನೇ ಜನವರಿ 5ರ ವರೆಗಿನ ಸಹಾಯಕರ ಊಟದ ಖರ್ಚನ್ನು ಸ್ವಯಂ ಸೇವಕ ಬೋರ್ಡಿನವರೇ ಕೊಡುವರು.

ಹುಬ್ಬಳ್ಳಿ, ನಾ. ಸು. ಹರ್ಡೀಕರ,
ತಾ. 18-9-1924. ಡೈರೆಕ್ಟರ್.

COORG FOREST DEPARTMENT

TIMBER SALE NOTICE

Mercara, the 1st October, 1924.

It is notified that about 10,000 c. ft. of first class Teak and 5,000 c. ft. of other species (Honne, Nandi and Matti) lying at the Coorg timber depot at Hunsur will be sold by public auction in convenient lots (about 500 c. ft.) at Hunsur on 20th November 1924 at 2 p.m.

All the timber is open to inspection.

For further particulars apply to the Divisional Forest Officer, South Coorg, Mercara.

For Sale.

Estate for sale —3 miles from Mercara on the Sunticoppa-Mercara road.

Details :—

15 acres of young coffee.

500 batties of wetland (fully under cultivation)

3 acres of Manjarabad cardamum

2 acres of orangery

100 acres of jungle.

Price. —Rs. 11,000, or nearest offer. For further particulars please apply to :— X

C/o Manager,
'Kodagu'
Mercara.

ವಿನಂತಿ.

ಅಕ್ಟೋಬರು ತಾ 29ರಿಂದ ನವಂಬರು ತಾ. 2ರ ವರೆಗೆ ನಡೆಯುವ ಫ್ರೇಜರ್‌ಪೇಟೆಯ ಸಿದ್ಧಿಗಣೇಶ ದೇವರ ರಥೋತ್ಸವದೊಂದಿಗೆ ದನಗಳ ಪ್ರದರ್ಶನ, ಮೊಕಾಟ ವೊದಲಾದವುಗಳು ತಾ. 31-10-1924ರಿಂದ 2-11-24ರ ವರೆಗೆ ನಡೆಯುವುದರಿಂದ ಮಹನೀಯರೆಲ್ಲರೂ ಫ್ರೇಜರ್‌ಪೇಟೆಗೆ ದಯಮಾಡಿಸಬೇಕಾಗಿ ಕೋರಿಕೆ.

ಕೆ. ಅಪ್ಪಯ್ಯ, ಆರ್. ಬಿ.,
ಪ್ರೆಸಿಡೆಂಟ್

ವರ್ತಮಾನ ಸಂಗ್ರಹ.

ಒಳದೇಶ.

ಕಳೆದ ತಾರೀಕು 16ನೇ ಗುರುವಾರ ದಿನ ಮೈಸೂರಿನಿಂದ ತಲಕಾವೇರಿ ಜಾತ್ರೆಗೆ ಹೋಗುವ ಜನರನ್ನು ಕೂರಿಸಿಕೊಂಡು ಬಂದ 5 ಮೋಟಾರು ಕಾರುಗಳನ್ನು ಮಡಿಕೇರಿ ಟವುನ್ ಪೋಲೀಸ್ ಸಬ್ ಇನ್‌ಸ್ಪೆಕ್ಟರು ಮೆ. ಕಲಿಯಂಡ ಮುತ್ತಣ್ಣನವರು ಚೆಕ್ಕುಮಾಡಿದಲ್ಲಿ ಸದರಿ ಕಾರುಗಳ ಡ್ರೈವರುಗಳ ಲೈಸೆನ್ಸುಗಳಿಗೆ ವಾಯಿದೆ ಮೀರಿದ್ದದ್ದನ್ನು ಕಂಡು ಕೇಸ್ ಮುಂದರಿಸಿದಲ್ಲಿ ಟ್ರೆಜರಿ ಅಸಿಸ್ಟೆಂಟ್ ಕಮೀಷನರವರು ಪ್ರತಿಯೊಬ್ಬನಿಗೂ 25 ರುಪಾಯಿ ಜುಲ್ಮಾನೆ ವಿಧಿಸಿದರು.

ಮಡಿಕೇರಿಯಲ್ಲಿ ಅದಿಮೂಲಂ ನಾಯಡುರವರ ಅಂಗಡಿಯಲ್ಲಿರುವ ಪಾಂಡಿರ ಕಾಳಪ್ಪನವರ ಬಳಿ ದರ್ಜಿ ಕೆಲಸ ಕಲಿಯಲು ಬಂದಿದ್ದ ಸಪ್ರಿ ಮನೆ ಸುಬ್ಬಪ್ಪನೆಂಬ ಹುಡುಗನು ಇದೇ ತಾರೀಕು 19ರಲ್ಲು ಮಧ್ಯಾಹ್ನ ಸದ್ರಿ ಕಾಳಪ್ಪನವರ ಬಿಡಾರದಲ್ಲಿ ತನ್ನ ಕುತ್ತಿಗೆಗೆ ಹಗ್ಗ ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವನು.

ಶ್ರೀಕಾವೇರಿ ಬಸ್ ಸರ್ವಿಸ್ಸಿನವರಿಗೆ ಮಡಿಕೇರಿಯಿಂದ ಮೂರ್ನಾಡಿಗೆ ಪ್ರತಿ ಗುರುವಾರ ಮತ್ತು ಶುಕ್ರವಾರ ಬಸ್ಸ ಓಡ್ಯಾಡಿಸಲು ಬರುವ ನವಂಬರ್ ತಾರೀಕು 1ರಿಂದ ಲೈಸೆನ್ಸ್ ಕೊಡಲ್ಪಟ್ಟಿದೆ.

ಕೊಡಗು ಕಂಪೆನಿಯ ಡೈರೆಕ್ಟರುಗಳ ಮೀಟಿಂಗ್ ಕಳೆದ 15ನೇ ತಾರೀಕಿನಲ್ಲಿ ವೀರಾಜಪೇಟೆಯಲ್ಲಿ ನಮ್ಮ ಕಂಪೆನಿಯ ಏಜಂಟರು ಮೆ. ಕೋಟೆರ ಚಿಣ್ಣಪ್ಪನವರ ಆಫೀಸಿನಲ್ಲಿ ನಡೆಯಿತು.

ಕೊಡಗು ಜಮೀನ್ದಾರರ ಸಂಘದ ಕಮಿಟಿ ಮೀಟಿಂಗ್ ಇದೇ ತಾರೀಕು 15ರಲ್ಲು ವೀರಾಜಪೇಟೆಯಲ್ಲು ನಡೆಯಿತು.

ಮೆ. ಪುಚ್ಚಿಮಾಡ ಸುಬ್ಬಯ್ಯನವರ ಪತ್ನಿಯು ವೀರಾಜಪೇಟೆಯಲ್ಲಿ ಕಳೆದ ತಾರೀಕು 14ರಲ್ಲಿ ಮೃತಪಟ್ಟವಳನ್ನು ಮಡಿಕೇರಿಗೆ ಮಾರನೆ ದಿನ ತಂದು ದಫನಾ ಮಾಡಿದರು.

ಈಗ ಹೊಸದಾಗಿ ಬಂದಿರುವ ಕೆನರಾ ಪಬ್ಲಿಕ್ ಸರ್ವಿಸ್ಸ ಕಂಪೆನಿಯವರು ಮಡಿಕೇರಿಯಿಂದ ಮಂಗಳೂರಿಗೆ ಬಸ್ ಸರ್ವಿಸ್ಸ ಇಡಲು ಲೈಸೆನ್ಸಿಗೆ ಬರಕೊಂಡ ಮೇರೆ ಲೈಸೆನ್ಸ ಕೊಡಲಾಗಿದೆ. ಈ ಒಂದು ಲೈನಿನಲ್ಲಿ ಶಂಕರ ವಿಠಲ್ ಬಸ್ ಸರ್ವಿಸ್ಸ ಮತ್ತು ಮೇಲ್ಕಂಡ ಕಂಪೆನಿಯವರ ಸರ್ವಿಸ್ಸ ಸಹ ಓಡಿಸಲಾಗುವದು.

ಕಾವೇರಿ ಜಾತ್ರೆಗೆ ಪರಪ್ರಾಂತ್ಯಗಳ ಯಾತ್ರಿಕರು ಮೋಟಾರಿನಲ್ಲಿ ಮೈಸೂರಿನಿಂದಬರುತ್ತಿದ್ದಾಗ 7 ನಾಟುಕೊಲ್ಲಿಯ ಪ್ರಯಾಣಿಕರು ಕೂತಿದ್ದ ಒಂದು ಬಾಡಿಗೆ ಕಾರು ಸಿದ್ದೇಶ್ವರನ ಗದ್ದಿಗೆ ಬಳಿ ನಿಲ್ಲಿಸಲಾಗದೆ ಮಗುಚಿಬಿದ್ದು ಮುರಿದುಹೋಗಿ ಅದರಲ್ಲಿದ್ದ ಪ್ರಯಾಣಿಕರಿಗೆಲ್ಲಾ ಘಾಯವಾದದ್ದನ್ನು ಕಂಡು ಅಲ್ಲಿಗಾಗಿ ದಾಟಿದ ಪೊಲೀಸ ಒಬ್ಬನವರು ಅವರೆಲ್ಲರನ್ನು ಮೈಸೂರಿಗೆ ತೆಗೆದುಕೊಂಡು ಹೋಗಿ ಬಿಟ್ಟರು. ಒಬ್ಬ ಮುದುಕಿಯು ಕಾರು ಮುರಿದಲ್ಲೇ ಸತ್ತುಹೋದಳು. ಒಬ್ಬನ ಕೈಯೂ, ಇನ್ನೊಬ್ಬನ ಸೊಂಟವೂ ಮುರಿದು ಹೋಯಿತಂತೆ, 5 ಜನರು ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿರುವರು ಪೋಲೀಸಿನವರು ವಿಚಾರಿಸಿ ಇದು ಆಕಸ್ಮಿಕದಿಂದುಂಟಾದುದೆಂದು ತಿಳಿಯಬಂದಿದೆಯಂತೆ.

ದಕ್ಷಿಣ ಕೊಡಗಿನ ಹಾಕಿ ಟೋರ್ನಾಮೆಂಟ್ ತಾರೀಕು 25ರಿಂದ 29ರ ವರೆಗೆ ಪೊಳ್ಳಿಬೆಟ್ಟದಲ್ಲಿ ನಡೆದು ಗೆಲ್ಲುವ ಟೀಮಿಗೆ ಮೆ. ಕೆ. ಪಿ. ಟಿಪ್ಪಿಂಗ್‌ರವರು ಕಪ್ ಕೊಡಲಿಕ್ಕಿರುವರು.

ಸುಂಟಿಕೊಪ್ಪದ ಬಳಿ ಹೊರೂರು ಗ್ರಾಮದಲ್ಲಿ ಗದ್ದೆ ಪೈರನ್ನು ತಿನ್ನಲಿಕ್ಕೆ ಬಂದ ಒಂಟಿಗ ಕಾಡಾನೆಯನ್ನು ಆ ಭೂಮಿ ವ್ಯವಸಾಯಗಾರ ಗೌಡನೊಬ್ಬನು ಗುಂಡಿನಿಂದ ಹೊಡೆದು ಕೊಂದಿದ್ದಾನೆ. ದಂತಗಳನ್ನು ಫಾರೆಸ್ಟು ಇಲಾಖೆಗೆ ಕೊಟ್ಟಿದ್ದಾನೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕಿನ ಮಹಾಸಭೆಯು (ಜನರಲ್ ಮೀಟಿಂಗ್) ತಾರೀಕು 16-11-1824ರಲ್ಲಿ ವೀರಾಜಪೇಟೆ ಮೋಡೆಲ್ ಸ್ಕೂಲಿನಲ್ಲಿ ಮಧ್ಯಾಹ್ನ 1 ಗಂಟೆಗೆ ನಡಿಯುತ್ತೆ. ಬ್ಯಾಂಕಿನ ಆಡಳಿತ ಮಂಡಲಿಯ ವರದಿಯು ಮೆಂಬರುಗಳಿಗೆ ಕಳುಹಿಸಲಾಗುತ್ತೆ.

ಮಡಿಕೇರಿಯಿಂದ ವೀರಾಜಪೇಟೆಗೆ ಓಡಾಡುತ್ತಿರುವ ಸತ್ಯನಾರಾಯಣ ಬಸ್ ಸರ್ವಿಸ್ಸಿನವರಿಗೆ ಈ ತಾರೀಕು 31ರ ವರೆಗೆ ಲೈಸೆನ್ಸು ಕೊಟ್ಟಾಗ್ಯೂ ಕೂಡ ಅವರ ಸರ್ವಿಸ್ಸನ್ನು ಕಳೆದ ತಾರೀಕು 21ಕ್ಕೆ ಏನೋ ಕಾರಣಾಂತರಗಳಿಂದ ನಿಲ್ಲಿಸಲಾಗಿದೆ.

ಮೆ. ಸಿ. ಪಿ. ಟಿಪ್ಪಿಂಗ್‌ರವರ ಬಸ್ ಸರ್ವಿಸ್ಸ ಈ ತಾರೀಕು 1ರಿಂದ ಎಡತೊರೆಯಿಂದ ಹೊರಟು ಸಿದ್ದಾಪುರಕ್ಕೆ ಬಂದು ಅಲ್ಲಿಂದ ವೀರಾಜಪೇಟೆಗೆ ತಾರೀಕು 15ರ ವರೆಗೆ ಓಡಾಡುತ್ತಿದ್ದು ತದನಂತರ ನಿಲ್ಲಿಸಲಾಗಿದೆ. ಪುನಹ ಬರುವ ನವಂಬರ್ ತಾರೀಕು 1ರಿಂದ ಅದೇ ಸರ್ವಿಸ್ಸ ಸದರಿ ಲೈನಿಗಾಗಿ ಓಡುತ್ತೆಂಬದಾಗಿ ವರ್ತಮಾನ.

ಕಳೆದ ತಾರೀಕು 22ನೇ ದಿನ ಮಧ್ಯರಾತ್ರಿಯಲ್ಲಿ ಜ್ಯೋತಿ ಲಿಂಗಪ್ಪನವರ ಮಡಿಕೇರಿಯಲ್ಲಿರುವ ಶಾಪಿಗ ಮಗ್ಗಲು ಮನೆಯಲ್ಲು ವಾಸ ಇದ್ದ ಮಲೆಯಾಳಿ ಹಾಜಿಸಿಂಬ ಕುಂಸಿಂದ ಲಿಗಿಯಲ್ಪಟ್ಟವನಾನು ಮನೆಯ ಮೇಲ್ಛಾವಣಿ ತೆಗೆಯುತ್ತಾ ಹಂಚು ತೆಗೆದು ಒಳಗೆ ನುಗ್ಗಿ ಕೆಲವು ಸಾಮಾನುಗಳನ್ನು ಕಳವುಮಾಡಿಕೊಂಡು ಬಾಚುವ ವೇಳೆಯಲ್ಲಿ ಅಲ್ಲಿ ಬೀಟಿನಲ್ಲಿದ್ದ ಪೋಲೀಸಿನವರು ಅವನನ್ನು ಹಿಡಿದು ಮಹಜರು ಮಾಡಿ ವಸ್ತುಗಳಿಗೆ ವಹಿಸಿರುತ್ತಾರೆ.

ಪೊನ್ನಂಪೇಟೆಯಲ್ಲಿ ನಡೆದ ಹಾಕಿ ಟೂರ್ನಮೆಂಟಿನಲ್ಲಿ ಪೊಳ್ಳಿಬೆಟ್ಟದ ಟೀಮಿನವರು ಜಯಶೀಲರಾದರು. ತಾ. 11ರಲ್ಲು ಗದ್ದುಟೀಮಿನವರಿಗೆ ಮೆ. ಪಿ. ಟಿ. ಕುಶಾಲಪ್ಪ ಎಂ. ಎಲ್. ಸಿ ಯವರು ಇನಾಮು ಬಟ್ಟಲನ್ನು ಕೊಟ್ಟರು. ಸದರಿದಿನವೇ ಪೊನ್ನಂಪೇಟೆ ಸ್ಕೂಲಿನ ವಾರ್ಷಿಕೋತ್ಸವವೂ ಮೆ. ಕುಶಾಲಪ್ಪನವರ ಅಧ್ಯಕ್ಷತೆಯಲ್ಲಿಯೇ ನಡಿಸಲಾಯಿತು.

ಕಳೆದ ವಾರದಲ್ಲಿ ನಾಪೋಕ್ಲಿನಲ್ಲಿ ಒಬ್ಬ ಮಾಪಿಳ್ಳೆ ವ್ಯಾಪಾರಿಯು ಮಸೀದಿಯಲ್ಲಿ ಪ್ರಾರ್ಥನೆಯನ್ನು ತೀರಿಸಿಕೊಂಡು ಬರುವಷ್ಟರಲ್ಲಿ ಅವನ ಮನೆಗೆ ಕಳ್ಳರು ನುಗ್ಗಿ ಸುಮಾರು 1,500 ರುಪಾಯಿಗಳನ್ನು ಕಳವು ಮಾಡಿರುವರೆಂದು ವರ್ತಮಾನ.

ಹಿಂದೂ ದೇಶ.

ಮುಂದಿನ ಕಾಂಗ್ರೆಸ್ ಸಭೆಯಲ್ಲಿ ಅಸಹಕಾರವನ್ನು ಬಿಟ್ಟುಬಿಡಲಾಗುತ್ತೆಂತಲೂ, ಆದರೆ ಅಸಹಕಾರಿಗಳು ಇರಬೇಕೆಂತಲೂ, ಅಹಿಂಸಾಯುಕ್ತ ಅಸಹಕಾರವನ್ನು ಜನರು ತಿಳಿಯಕೊಳ್ಳದೆ ಇರುವದರಿಂದ ಅಸಹಕಾರವನ್ನು ಬಿಡಬೇಕಾಗಿ ಬಂದಿದೆಯೆಂತ ಮುಂತಾಗಿ ಮಹಾತ್ಮ ಗಾಂಧಿಯವರು "ನವಜೀವನ"ದಲ್ಲಿ ಬರದಿದ್ದಾರೆ.

ಕಳೆದ ಘೋರ ಪ್ರವಾಹದಲ್ಲಿ ರೈಲ್ವೆ ಸೇತುವೆಯು ಮಲಬಾರಿನ ಪರಪನಂಗಡಿಯ ಸಮೀಪದಲ್ಲಿ ಮುರಿದು ಹೋಗಿದ್ದದರಿಂದ ಈ ವರೆಗೆ ರೈಲ್ವೆಪ್ರಯಾಣಿಕರು ಅಲ್ಲಿ ಇಳಿದು ಹೊಳೆ ದಾಟಿ ಪುನಃ ಆಚೆಯಲ್ಲಿದ್ದ ರೈಲನ್ನು ಹತ್ತಬೇಕಾಗಿತ್ತು. ಈಗ ತಾತ್ಕಾಲಿಕ ಸೇತುವೆಯೊಂದನ್ನು ಕಟ್ಟಿರುವದರಿಂದ ಮದ್ರಾಸಿನಿಂದ ಬರುವ ರೈಲುಗಳು ಸೀದಾ ಮಂಗಳೂರಿಗೆ ಹೋಗುತ್ತೆ.

ಉತ್ತರ ಹಿಂದುಸ್ಥಾನದಲ್ಲಿ ಮೋಂಟ್‌ಗೋಮರಿ ಎಂಬಲ್ಲಿ ಈಚೆಗೆ ಸಂಭವಿಸಿದ ರೈಲ್ವೇ ಅಪಾಯದ ವಿಚಾರಣೆಯ ಸಂಬಂಧವಾಗಿ ಆಸ್ಟೇಶನ ಸ್ಟೇಶನ್‌ಮಾಸ್ಟರು ಅಜಾಗರೂಕರಾಗಿ ಅಪಾಯಕ್ಕೆ ಕಾರಣವಾದರೆಂಬ ತಕ್ಸೀರಿಗೆ ಗುರಪಡಿಸಲ್ಪಟ್ಟಿದ್ದಾರೆ.

ಮದ್ರಾಸ್ ಆಧಿಪತ್ಯದ ಅನೇಕಜಿಲ್ಲೆಗಳಲ್ಲಿ ಪ್ರವಾಹದಿಂದ ಭೂಮಿಗಳಿಗೆ ನಷ್ಟ ಒಂದದ್ದರಿಂದ ಸಾವಿರಾರು ಜನರು ಜೀವನೋಪಾಯಕ್ಕಾಗಿ ಮಲಯ ದ್ವೀಪಗಳಿಗೆ ಹೋಗುತ್ತಿದ್ದಾರೆ.

ಆಂಧ್ರರ ರಾಜಕೀಯ ಪರಿಷತ್ತು ಮದ್ರಾಸಿನಲ್ಲಿ ನಡೆಯಿತು. ನೂಲುಮಾಡಿಕೊಡುವದೇ ಮೆಂಬರುತನದ ಫೀಸ್ ಆಗಿರಬೇಕೆಂಬ ಠರಾವು ಮಂಜೂರಾಗಿದೆ.

ಆಂಧ್ರಪ್ರಾಂತಿಕ ಕಾನ್‌ಫರೆನ್ಸಿನಲ್ಲಿ ತಾ. 20ರಲ್ಲು ಬ್ರಿಟಿಷ ಸರಕಾರದಿಂದ ಸಂಪೂರ್ಣ ಪ್ರತ್ಯೇಕವಾಗಿ ಇಂಡಿಯಾದೇಶವು ತನ್ನ ಸರಕಾರವನ್ನು ಸ್ಥಾಪಿಸಬೇಕೆಂದು ರಾಷ್ಟ್ರೀಯ ಕಾಂಗ್ರೆಸು ತೀರ್ಮಾನಿಸಬೇಕೆಂಬ ಮುಖ್ಯವಾದ ಠರಾವು ಅಧ್ಯಕ್ಷರ ಕಾಸ್ಟಿಂಗ್ ಓಟಿನಿಂದ ಮಾತ್ರ ಪಾಸಾಯಿತು. ಪರವಾಗಿ 34, ವಿರೋಧವಾಗಿ 34 ಓಟುಗಳಿದ್ದವು. ಅಧ್ಯಕ್ಷರು ವಿರೋಧವಾಗಿ ಓಟುಮಾಡಿದರು.

ಗಂಗಾನದಿಯಲ್ಲಿ ಒಂದುವಾರದ ವರೆಗೆ ನೆರೆಯು ಕಮ್ಮಿಯಾಗುತ್ತಾ ಬಂದು ತಾ. 18ರಲ್ಲು ಪುನಹ 4 ಅಡಿ ನೀರು ಏರಿತು. ಕ್ಯಾನ್‌ಪುರಕ್ಕೂ ಲಕ್ನೋಕ್ಕೂ ನಗರವಾದದ ಬಳಿ ತೇಲುವ ಸೇತುವೆಗಳ ಮೂಲಕ ಜನರನ್ನು ಟ್ರೈನಿನಿಂದ ಇಳಿಸಿ ದಾಟಿಸುವ ಏರ್ಪಾಡುಮಾಡಲಾಗುವುದಂತೆ.

ಮದ್ರಾಸು ಪ್ರಾಂತ್ಯದ ಗವರ್ನರಾದ ಲಾರ್ಡ್ ಗೋಷೆನ್‌ರವರು ತಮ್ಮ ಪತ್ನಿಯವರೊಡನೆ ಈಗ ಮಲಬಾರಿನಲ್ಲಿ ಸಂಚಾರ ಮಾಡುತ್ತಿರುವರು.

ಅಖಿಲ ಭಾರತ ಮುಸ್ಲೀಮ್ ವಿದ್ಯಾ ಕಾನ್‌ಫರೆನ್ಸನ್ನು ಕ್ರಿಸ್‌ಮಸ್‌ವಾರದಲ್ಲಿ ಡೆಲ್ಲಿಯಲ್ಲಿ ನಡಿಸಬೇಕೆಂದು ಅಲ್ಲಿಯ ಪ್ರಾಂತಿಕ ಸ್ವಾಗತಮಂಡಲಿಯವರು ಕೇಳಿಕೊಂಡಿರುವರು.

ಮೂರುವಾರಗಳನಂತರ ಮಹಾತ್ಮ ಗಾಂಧಿಯವರು ಕೋಹಟಿಗೆ ಹೋಗುವರು.

ವೈಸರಾಯರವರ ಎಗ್ಸಿಕ್ಯೂಟಿವ್ ಕೌನ್ಸಿಲಿನಲ್ಲಿ ಬೇಗನೆ ಖಾಲಿ ಬೀಳಬಹುದಾದ ಸ್ಥಳಗಳಿಗೆ ಮೆ. ಭಗವಾನ್ ದಿನ್‌ದಾನ್‌ರವರನ್ನು ಸರ್ ಮಹಮ್ಮದ್ ಷಾಫಿಯವರ ಬದಲಿಗೆ ಲಾ ಮೆಂಬರಾಗಿಯೂ, ಸರ್ ಮಹಮ್ಮದ ಹಬಿಬುಲ್ಲಾರವರನ್ನು ಸರ್ ಬಿ. ಎನ್. ಶರ್ಮರವರ ಬದಲಿಗೂ ನೇಮಿಸುವ ಸಂಭವವಿದೆಯೆಂದು ಅಲ್ಲಹಾಬಾದಿನ "ಲೀಡರ್" ಪತ್ರಿಕೆಯು ಸೂಚಿಸಿದೆ.

ವಿದೇಶ.

ವೆಂಬ್ಲಿ ಪ್ರದರ್ಶನದಲ್ಲಿ ಹಿಂದುಸ್ಥಾನದ ಸಾಮಾನುಗಳನ್ನು ಇಟ್ಟಲ್ಲಿನಿಂದ 500 ಪೌಂಡು ಕ್ರಯದ ಜವಾಹಿರಿಗಳೂ, 30 ಪೌಂಡು ಕ್ರಯದ ಒಂದುಪ್ರಿಯ ದೇವರ ಮೂರ್ತಿಯನ್ನೂ ರಾತ್ರಿವೇಳೆ ಯಾರೋ ಕದ್ದಿದ್ದಾರೆ.

ಬಹಳಪ್ರಸಿದ್ಧ ವಿದ್ವಾಂಸರಾದ ಮತ್ತು ಹಿಂದುಸ್ಥಾನದ ಸಂಸ್ಕೃತಿಯಲ್ಲಿ ಅಭಿಮಾನವಿದ್ದ ಅನಟೋಲ್ ಫ್ರಾನ್ಸ್ ಎಂಬ ಫ್ರೆಂಚ್ ದೇಶದವರು ನಿಧನರಾದರು.

ಚೀನಾದೇಶದಲ್ಲಿ ನಡಿಯುತ್ತಿರುವ ದೇಶದೊಳಗಿನ ಯುದ್ಧವು ನಡಿಯುತ್ತಲೇ ಇದೆ.

ರವೀಂದ್ರನಾಥ ಟಾಗೂರರು ಫ್ರಾನ್ಸಿನಿಂದ ಅಮೇರಿಕಾಕ್ಕೆ ಹೋಗುತ್ತಾರೆ.

ಇಂಗ್ಲೆಂಡಿನ ಪಾರ್ಲಿಮೆಂಟಿನಲ್ಲಿ ಮಂತ್ರಿಗಳ ಪಂಗಡದವರು ಎರಡು ಠರಾವುಗಳಲ್ಲಿ ಸೋತುಹೋದದ್ದರಿಂದ ಪಾರ್ಲಿಮೆಂಟಿಗೆ ಹೊಸಚುನಾವಣೆಯಾಗಬೇಕೆಂತ ತೀರ್ಮಾನವಾಯಿತು. ತಾ. 23-10-24ರಲ್ಲಿ ಚುನಾವಣೆಯಾಗುತ್ತೆ. ಎಲ್ಲಾ ಪಂಗಡಗಳ ಮುಂದಾಳುಗಳು ಎಡೆಬಿಡದೆ ಕೆಲಸಮಾಡುತ್ತಿದ್ದಾರೆ.

ಹೆಜ್ಜಾಜದ ಅರಸನಾದ ಎಮೀರ್ ಅಲಿಯವರಿಗೆ ಅವರ ಮುಖ್ಯಪಟ್ಟಣವಾದ ಮಕ್ಕಾವನ್ನು ಹಿಡಿದಿರುವ ಅವರ ಶತ್ರುಗಳಾದ ವಹಾಬಿಯವರನ್ನು ಓಡಿಸಲಿಕ್ಕಾಗುವ ಅನುಕೂಲವಿದ್ದರೂ ಕೂಡ ಅಲಿಯವರು ಅವರ ಸಿಟ್ಟಿಗೆ ಹೆದರಿ ಅವರ ಆಹಾರ ಸಾಮಗ್ರಿಗಳನ್ನು ಮೆಕ್ಕಾಕ್ಕೆ ಕಳುಹಿಸುವಂತೆ ಒಪ್ಪಿಕೊಂಡಿರುವರಂತೆ.

ಇಬ್ನಸಾಡ್‌ರವರ ಮತ್ತು ಹೆಡ್ಜಾಜಿನ ಅರಬಿಯವರ ಒಪ್ಪಿಗೆಯಿಂದ ಮೂಜಿಬಲೀಘರಾದ ಅಬ್ದುಲ್ ಮಾಜಿದ್ ಎಫೆಂದಿಯವರನ್ನು ಹೆಡ್ಜಾಜಿನ ಅರಸರಾಗಿ ಮಾಡುವುದು ಉತ್ತಮವೆಂದು ಲಾಹೋರಿನ "ಮುಸ್ಲಿಮ್ ಔಟ್‌ಲುಕ್" ಪತ್ರಿಕೆಯು ಸೂಚಿಸುತ್ತದೆ.

ಪತ್ರವ್ಯವಹಾರಗಳು.

ವಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ

ಪರೆ

ಅಯ್ಯಾ, ದೇಶದಲ್ಲಿರುವ ಪರೆಗಳನ್ನು ಒದ್ದನೆಮಾಡಿ ಅವುಗಳಿಗೆ ಸರಕಾರದ ಮುದ್ರೆಹಾಕಿಸಬೇಕೆಂಬ ಸಲಹೆಯು ನ್ಯಾಯವಾದದ್ದೇ ಸರಿ ಆದರೆ ಪರೆಗೆ ಬಾಯಿಮುದ್ರೆ ಹಾಕಿದ ಮಾತ್ರಕ್ಕೆ ಪರೆಯಿಂದ ಒಡಕ್ಕೈತನಿಗುಂಟಾಗುವ ಹಾವಳಿಯು ತಪ್ಪಿ ಹೋಗುವ ಹಾಗೆ ಅಗಲೀ ಇಲ್ಲ ದೊಡ್ಡ ಪರೆಯಿಂದ ಆಗುವ ಅನರ್ಥಕಿಂತಲೂ ದಪ್ಪವಾಗಿಯೂ ಭಾರವಾಗಿಯೂ ಇರುವ ಆ ಉರುಟಾದ ದೊಣ್ಣೆಯಿಂದ ಪರೆತಲೆ ಬಡಿಯುವದರಿಂದ ವಿಪರೀತವಾದ ನಷ್ಟ ಉಂಟಾಗುತ್ತೆಂಬದು ಪರೆಯಲ್ಲಿ ಅಳತೆ ಮಾಡಿ ಭತ್ತ ಮಾರಿದ ಪ್ರತಿ ಒಬ್ಬನಿಗೂ ತಿಳಿದ ಸಂಗತಿಯಾಗಿದೆ ಪರೆಕೋಲನ್ನು ಪರೆಮೇಲೆ ಎಳೆಯುವಾಗ ಬಹು ಚಮತ್ಕಾರವಾಗಿ ಕೈಬೆರಳುಗಳ ಮೇಲೆ ಪರೆಗೆ ತಗಲಿಸದೆ ಕಿರುಗಿಸಿಬಿಟ್ಟು ಸಾಧಾರಣ ನೋಟಗಾರರಿಗೆ ಸರಿಯಾಗಿ ತಟ್ಟಿದಂತೆ ಕಾಣುವಂತೆ ತಟ್ಟುವರು ಆದರೆ ಚೆನ್ನಾಗಿ ಪರೀಕ್ಷೆಮಾಡಿನೋಡಿದರೆ ಎಷ್ಟು ಕಮ್ಮಿ ಎಂದರೂ ಪರೆಯೊಂದರ ಅರ್ಧವಾವು ಭತ್ತವನ್ನು ಪರೆಯಮೇಲೆ ಹೆಚ್ಚಾಗಿ ನಿಲ್ಲಿಸದೆ ಇರರು ಈ ಅನರ್ಥವನ್ನು ಹೋಗಲಾಡಿಸಬೇಕಾದರೆ ಪರೆಯನ್ನು ತಲೆಬಡಿಯದೆ ಸೇರಿನಂತೆ ಒತ್ತಿತುಂಬಿ ಅಳೆದುಕೊಡುವಂತೆಯಾಗಲೀ ಇಲ್ಲವ ಭತ್ತವನ್ನು ಕಾಪಿಯ ಹಾಗೆ ತೂಗಿಕೊಡುವಂತೆಯಾಗಲೀ ಇಲ್ಲವೆ ಪರೆತಲೆ ತಟ್ಟುವ ಕೋಲು ಉರುಟಾಗಿರದೆ ತಟ್ಟೆಯಾಗಿ ಚಗುರವಾಗಿರುವಂತೆ ಮಾಡಿ ಪರೆಗೆ ಮುದ್ರೆಯು ಹಾಕಿದರೆ ಪರೆಯಿಂದ ಒಡಕ್ಕೈತನಿಗೆ ಉಂಟಾಗುವ ಅನರ್ಥಗಳೆಲ್ಲಾ ತಪ್ಪಿಸಿದಂತಾಗುವುದರಲ್ಲಿ ಯಾವ ಸಂದೇಹವೂ ಇಲ್ಲ

ಐ ಪಿ ಯಂ

ಅಯ್ಯಾ,

ವೀರಾಜಪೇಟೆ ಮುನಿಸಿಪಾಲಿಟಿ ಸರಹದ್ದಿನಿಂದ ಕೆದಮುಳ್ಳೂರು ಗ್ರಾಮದ ತೋಮರಕ್ಕೆ ಹೋಗುವ ಮತ್ತು ಕಡಂಗ ಮೂರೂರು ಗ್ರಾಮದ ಕಡಂಗದಿಂದ ಮೂರೂರು ರಸ್ತೆ ಕೂಡಿದಲ್ಲಿಂದ ತೋಮರಕ್ಕೆ ಹೋಗುವ ರಸ್ತೆ ಬಹು ಹೀನಸ್ಥಿತಿಯಲ್ಲಿರುವುದರಿಂದಲೂ ಈ ವರುಷ ಸದರಿ ರಸ್ತೆಗಳನ್ನು ಗಾಡಿ ವಗೈರೆಗಳು ಸರಿಯಾಗಿ ತಿರುಗಾಡಲಿಕ್ಕೆ ಅನುಕೂಲವಾಗುವ ಹಾಗೆ ರಿಪೇರಿಮಾಡಿ ಒಡಕ್ಕೈತರ ಪ್ರೀತಿಗೆ ಪಾತ್ರರಾಗುವಂತೆ ಕಂಟ್ರಾಕ್ಟುದಾರರಿಗೆ ಕೊಟ್ಟು ಸದರಿ ಕೆಲಸವನ್ನು ಘನ ಸರಕಾರದವರು ಗವನಕ್ಕೆ ತಂದು ಮಾಡಿಸಿಕೊಡಬೇಕಾಗಿ ಈ ಮೂಲಕ ಕೇಳಿಕೊಳ್ಳುತ್ತೇನೆ

ಗ್ರಾಮಸ್ತ.

ದಿವಂಗತರಾದ ಮೆ. ಕೊಳುವಂಡ ತಿಮ್ಮಯ್ಯನವರಿಗಾಗಿ

ಕೋತೂರು ಯೂನಿಯನ್ನಿನವರ ಸಂತಾಪ

ಅಯ್ಯಾ ವಾಚಕಮಹಾಶಯರೇ, ನಮ್ಮ ದೇಶದಲ್ಲಿ ಅಗ್ರ ಛತ್ರಾಧಿಪರೆಂದು ಹೆಸರುಪಡೆದಿರುವ ಮನೆತನದಲ್ಲಿ ಮೆ ತಿಮ್ಮಯ್ಯನವರು ತಮ್ಮ ಜನಕರು ಸ್ಥಾಪಿಸಿದ ಧರ್ಮ ಕಾರ್ಯವನ್ನು ನಡಸಿಯವರು ಗತಿಸಿದನಂತರವು ತಮ್ಮ ಜನಕರ ದಾರಿಯನ್ನೇ ತಾವೂ ಹಿಂಬಾಲಿಸಿ ಎಂಥಾ ಆಸತ್ತು ಸಂಭವಿಸಿದರೂ ಧೈರ್ಯಗುಂದದೆ ಧರ್ಮ ಕೆಲಸಕ್ಕೆ ಅಗ್ರಗಣ್ಯರೆಂಬ ಬಿರುದನ್ನು ಪಡೆದು ನಮ್ಮ ದೇಶಮಾತೆಯಾದ ಶ್ರೀಕಾವೇರಮ್ಮನವರ ಪ್ರೀತಿಗೆ ಪಾತ್ರರಾದ ಮಹನೀಯರು ಅಕಾಲ ಪರಲೋಕಯಾತ್ರೆಯನ್ನು ಮಾಡಿದರೆಂಬ ವಾರ್ತೆಯನ್ನು ಕೇಳಿದರೆ ಯಾರ ಮನಸ್ಸು ಕರಗದೆ ಇರುವದು, ಹೇ, ದೈವವೇ, ಇಂಥಾ ದೇಶಭಕ್ತರನ್ನು ಕೆಲವು ಕಾಲ ಇಟ್ಟು ಇವರಿಂದ ಧರ್ಮಕಾರ್ಯವನ್ನು ನಡಿಸಿಕೊಳ್ಳಲು ಆಗಲಿಲ್ಲವೇ, ಈ ಸಮುದಾಯದಲ್ಲಿ ಮಹನೀಯರ ಸ್ಮರಣೆಯು ಯಾವ ಮನುಷ್ಯನ ಹೃದಯದಲ್ಲಿ ನೆಲಸಿರುವದಿಲ್ಲವೆಂಬದನ್ನು ವಾಚಕಮಹಾಶಯರಿಗೆ ನಾನು ಹೆಚ್ಚಾಗಿ ವಿವರಿಸಬೇಕಾಗಿಲ್ಲವಷ್ಟೆ ಇಂಥಾ ರತ್ನವನ್ನು ಕಳೆದಂತ ದುಃಖವನ್ನು ಸಹಿಸಿಕೊಳ್ಳುವ ಸಾಮರ್ಥ್ಯ ಮಹನೀಯರ ಕುಟುಂಬಕ್ಕೂ ಪರಲೋಕಕ್ಕೆ ತೆರಳಿದ ಮಹನೀಯರಿಗೆ ಶಾಂತಿಯನ್ನು ಶ್ರೀ ಭಗವಂತನು ಕೊಟ್ಟು ಕಾಪಾಡಲೆಂದು ಪ್ರಾರ್ಥಿಸುವ

ಸಂಘದ ಪರವಾಗಿ ಒಬ್ಬ ಮೆಂಬರು

ಅಯ್ಯಾ,

ಶ್ರೀಮಂಗಲನಾಡು ಕುಟ್ಟಗೇರಿಯಿಂದ ನಾಲ್ಕೇರಿಗ್ರಾಮಕ್ಕಾಗಿ ನಾಗರು ಹೊಳೆಗೆ ಹೋಗುವ ಲೋಕಲ್ ಫಂಡ್ ರಸ್ತೆಯನ್ನು ರಿಪೇರಿ ಬಗ್ಗೆ ಘನ ಸರಕಾರದವರು ಕಳೆದ ವರುಷ ಮಂಜೂರುಮಾಡಿದ ಹಣದಿಂದ ರಿಪೇರಿಮಾಡಿದ ರಸ್ತೆ ಕೆಲಸಕ್ಕೆ ಏನೊಂದೂ ತೃಪ್ತಿದೊರೆಯದ ಸಂಗತಿ ನಾನು ಕಳೆದ ವರುಷವೇ ಪ್ರಚುರಪಡಿಸಿದಕ್ಕೆ ನಾನೇ ತುಂಬಾ ವ್ಯಸನಿಸುತ್ತೇನೆ. ಅಲ್ಲದೆ ಕಳೆದ ವರುಷ ಮಾಡಿದ ಕೆಲಸ ನೋಡಿ ಬಲ್ಲವನೊಬ್ಬನಾಗಿದ್ದರೂ ವ್ಯಸನಕ್ಕೆ ಒಳಗಾಗುತ್ತಿದ್ದನು ಕೆಲಸಕ್ಕೆ ಸರಕಾರದವರು ಸ್ವಲ್ಪ ಹಣ ಮಾತ್ರ ಮಂಜೂರು ಮಾಡಿರಬಹುದೆಂದು ಭಾವಿಸಬಹುದು ಆದರೆ ಈ ವರುಷ ನಮ್ಮ ಧರ್ಮ ಸರಕಾರದವರು 200 ರುಪಾಯಿ ಮಂಜೂರು ಮಾಡಿದ್ದಾರೆಂದು ನಾನು ನಮ್ಮ ನಾಡು ಕಛೇರಿಯಲ್ಲು ತಿಳಿದೆನು. ಎ ಎ ರಡುನೂರು ರುಪಾಯಿಗಳಿಂದ ಹೋದ ಕೆಲಸವನ್ನು ಹೇಗೆ ಮಾಡಿ ಎಷ್ಟು ಲಾಭ ಹೊಂದುವೆನೆಂದು ಯಾರು ಅಪೇಕ್ಷಿಸುತ್ತಾರೋ ಅಂಥಾ ಮಹಾನುಭಾವರು ದಯವಿಟ್ಟು ಈ ವರುಷ ಹಣಕ್ಕೆ ತಕ್ಕ ಲಾಯಕ್ಕಾದ ಕೆಲಸಮಾಡಿಸುವರಾಗಿ ನನ್ನ ಕೋರಿಕೆ

ಈ ವರುಷ ಚೆನ್ನಾಗಿ ಮಾಡದಿದ್ದರೆ ಮಳೆಗಾಲದ ದೆಸೆಯಿಂದ ರೋಡು ಹೇಗೆ ಗುಂಡಿ ಬಿದ್ದಿದೆಂದು ಕಣ್ಣಾರೆ ಕಂಡವರಿಗೆ ಅದರ ಕಷ್ಟ ಗೊತ್ತಾಗುತ್ತೆ ಆದ್ದರಿಂದ ರೋಡು ಕೆಲಸ ಕಂಟ್ರಾಕ್ಟ್ ತೆಗೆದುಕೊಂಡ ಪುಣ್ಯಾತ್ಮರು ರೋಡನ್ನು ಇಷ್ಟು ದೊಡ್ಡ ಹಣ ದೊರೆತಿರುವಾಗ ಚೆನ್ನಾಗಿಮಾಡಿ ಪ್ರಯಾಣಕ್ಕೆ ಅಡಚಣೆ ಇಲ್ಲದೆ ಮಾಡುವರಾಗಿ ನಂಬುತ್ತೇನೆ

ರಸ್ತೆ ನೋಡಿದವ

ಅಯ್ಯಾ,

ತಾರೀಕು 21-3 24ರ ಕೊಡಗು ಪತ್ರಿಕೆಯಲ್ಲಿ ಮೆ ಸಿ ಕೆ ಕುಟ್ಟಪ್ಪನವರು ಕೇಳಿಕೊಂಡ ಮೇರೆ ಮತ್ತು ತಾರೀಕು 27-6 21ರ ಪತ್ರಿಕೆಯಲ್ಲಿ ಮೆ ಕೆ ಯಂ ಮಂದಣ್ಣನವರು ಯಂ ಯಲ್ ಸಿ ಯವರು ಸಹ ಕೇಳಿಕೊಂಡ ರೀತಿಯಲ್ಲಿ ಈಗ್ಯೆ ನಮ್ಮ ಉಪಗ್ರಾಮಸ್ತರೊಬ್ಬರು ನಮ್ಮ ಹಿಂದುಮತವನ್ನು ಬಿಟ್ಟು ಕಳೆದ ಹನ್ನೊಂದು ವರುಷದ ಲಾಗಾಯಿತಿನಿಂದ ಕ್ರೈಸ್ತಮತಕ್ಕೆ ಸೇರಿಕೊಂಡಿದ್ದವರೊಬ್ಬರು ಅಲ್ಲಿಯ ಕಷ್ಟಸುಖವನ್ನನುಭವಿಸಿ ಸ್ವಧರ್ಮವನ್ನು ಬಿಟ್ಟು ಅನ್ಯಧರ್ಮಕ್ಕೆ ಸೇರಿದ್ದು ತನ್ನ ತಪ್ಪೆಂದು ತಿಳುವಳಿಕೆಗೆ ಬಂದು ತನ್ನನ್ನು ಹಿಂದು ಮತಕ್ಕೆ ಸೇರಿಸಿಕೊಳ್ಳಬೇಕಾಗಿ ಕೇಳುತ್ತಾರೆ ಆದ್ದರಿಂದ ಅವರನ್ನು ಕೆ ಯಂ ಮಂದಣ್ಣನವರ ಬಾತ್ಮಿಯಂತೆ ಪುನಹ ನಮ್ಮ ಪುರಾತನ ಪದ್ಧತಿಗನುಸಾರವಾಗಿ ಪುನೀತನನ್ನಾಗಿ ಮಾಡಿ ತೆಗೆದುಕೊಳ್ಳುವದಕ್ಕೆ ಆಕ್ಷೇಪಣೆ ಇದ್ದಪಕ್ಷದಲ್ಲಿ ತಿಳಿದ ಮಹನೀಯರು ಇದಕ್ಕೆ ತಕ್ಕದಾದ ಜವಾಬನ್ನು ಕೊಡಬೇಕಾಗಿ ಪ್ರಾರ್ಥನೆ

ಬಿ ಎ ಮಂದಣ್ಣ,
ಅರಮೇರಿ ಗ್ರಾಮ

ಅಕಾಲ ಮರಣ.

ಕಾಲ ಮಹಾತ್ಮೆಯು ವಿಚಿತ್ರವಾದುದು, ಒಂದಲ್ಲದಿದ್ದರೆ ಮತ್ತೊಂದು ದಿವಸ ಕಾಲನ ಬಾಯೊಳಗೆ ಬಿದ್ದೇ ಬೀಳುವರು, ಇದು ಪ್ರಕೃತಿಯ ನಾಟಕವಾಗಿದೆ ದಿವಂಗತ ಕೆದಂಬಾಡಿ ಸುಬ್ರಾಯ ಯಂ ಯಲ್ ಸಿ ಯವರು ಅಕ್ಟೋಬರ್ ತಾರೀಕು 9ನೇ ಗುರುವಾರ ದಿವಸ ಕುಶಾಲನಗರ ಡಿಸ್‌ಪೆನ್ಸರಿಯಲ್ಲಿ ಶಿವಾಧೀನವಾದರು, ಶುಕ್ರವಾರ ದಿವಸ ಶವವನ್ನು ಅವರ ಐನ್ ಮನೆಗೆ ಸಾಗಿಸಲ್ಪಟ್ಟು ಯಥಾವಿಧಿ ಪ್ರಕಾರ ಅಗ್ನಿದಗ್ಧ ಕಾರ್ಯವು ನೆರವೇರಿಸಲ್ಪಟ್ಟಿತು ಸುಬ್ರಾಯರು ಮೊದಲು ಕೊಡಗು ರೆಜಿಮೆಂಟಿಗೂ ಈಗಿನ ಟೆರಿಟೋರಿಯಲ್ ಫೋರ್ಸಿಗೂ ತುಂಬಾ ಸಹಾಯ ಮಾಡಿದವರಾಗಿಯೂ ಗೌಡುಗಳ ವಿದ್ಯಾ ಫಂಡಿನ ಕೆಲಸದಲ್ಲಿ ಹೆಚ್ಚು ಶ್ರಮವನ್ನು ತೆಗೆದುಕೊಂಡವರಾಗಿಯೂ ಸಹ ಇದ್ದರಲ್ಲದೆ ಕಳೆದ ಜನವರಿಯಲ್ಲಿ ಏರ್ಪಾಡಾದ ಕೊಡಗು ಲೆಜಿಸ್ಲೇಟಿವ್ ಕೌನ್ಸಿಲಿನಲ್ಲಿ ಕೌನ್ಸಿಲ್ ಮೆಂಬರಾಗಿಯೂ ಚುನಾಯಿಸಲ್ಪಟ್ಟರು ಈ ಚಿಕ್ಕ ವಯಸ್ಸಿನಲ್ಲಿ ಅಕಾಲಮೃತ್ಯು ಹೊಂದಿದ್ದರಿಂದ ಗೌಡುಗಳ ಸಮಾಜಕ್ಕೆ ಒಂದು ದೊಡ್ಡ ನಷ್ಟವೇ ಸರಿ, ಸ್ವರ್ಗವಾಸಿ ಸುಬ್ರಾಯರ ಆತ್ಮಕ್ಕೆ ಶಾಂತಿಯನ್ನೂ ಅವರ ವೃದ್ಧ ಪಿತೃವಿಗೂ ಸತಿಸುತರಿಗೂ ತಾಳ್ಮೆಯನುಂಟುಮಾಡಿ ಸದಾ ಕಾಪಾಡಲೆಂದು ಜಗದೀಶನನ್ನು ಪ್ರಾರ್ಥಿಸುತ್ತೇನೆ

S P Ramappa

ನಿತ್ಯ ಮೋಟಾರ್ ಬಸ್ ಸರ್ವಿಸ್.

ಅಯ್ಯಾ ಸಂಪಾದಕರೇ,

ದಯವಿಟ್ಟು ತಮ್ಮ ಅಮೂಲ್ಯ ಪತ್ರದಲ್ಲಿ ಈ ನಮ್ಮ ಮಡಿಕೇರಿ ವೀರಾಜಪೇಟೆ ಪ್ರಯಾಣಸ್ತರ ಪರವಾಗಿ ತಮ್ಮ ಕಂಠಧ್ವನಿಯನ್ನು ಸ್ವಲ್ಪ ಎತ್ತುವಿರಾ, ವೀರಾಜಪೇಟೆಯಿಂದ ಮಡಿಕೇರಿಗೆ ಮೋಟಾರ್ ಬಸ್ ಸರ್ವಿಸ್ ಕಾವೇರಿ ಜಾತ್ರೆಗೋಸ್ಕರ ಪ್ರಯಾಣಸ್ತರ ಅನುಕೂಲಕ್ಕೆ 'ಸತ್ಯನಾರಾಯಣ' ಬಸ್ ಸರ್ವಿಸ್ಸಿನವರು ದಿನಕ್ಕೆ ಎರಡಾವರ್ತಿ ನಡಿಸುವುದರಿಂದ ಅನೇಕಾನೇಕ ಪ್ರಯಾಣಸ್ತರು ತಮ್ಮ ಪ್ರಯಾಣಗಳನ್ನು ಅತಿ ಶೀಘ್ರದಿಂದಲೂ ಉಲ್ಲಾಸದಿಂದಲೂ ನಡಸುತ್ತಾ ಇರುತ್ತಾರೆ ಆದರೆ ಈ ಸರ್ವಿಸ್ಸನ್ನು ನಿತ್ಯ ನಡಿಸಿದ್ದಾದರೆ ಪ್ರಯಾಣಸ್ತರಿಗೆ ಬಹಳ ಅನುಕೂಲವಾಗುವಲ್ಲಿ ಸಂದೇಹವಿಲ್ಲವು, ಮತ್ತು ಇದೇ 'ಸತ್ಯನಾರಾಯಣ' ಬಸ್ ಸರ್ವಿಸ್ಸಿನವರು ಸದರಿ ಕೆಲಸ ಕೈಕೊಳ್ಳಲು ಅತಿ ಕುತೂಹಲಿಗಳಾಗಿರುವದು ಸಹ ನಾವು ಕೇಳಿ ಸಂತೋಷಿಸುತ್ತೇವೆ. ಆದರೆ ಒಂದು ವ್ಯಸನಕರವಾದ ಗಾಳಿವಾರ್ತೆಯು. ಈ ಕುತೂಹಲಿಗಳ ಮತ್ತು ಪ್ರಯಾಣಸ್ತರ ಮನಸ್ಸನ್ನು ಸ್ವಲ್ಪ ಕಳವಳಗೊಳಿಸುವದಾಗಿರುತ್ತೆ, ಇನ್ನ ಮತ್ತೇನೂ ಇಲ್ಲ! ಕಾವೇರಿ ಬಸ್ ಸರ್ವಿಸ್ಸಿನವರಿಗೋಸ್ಕರ ಬೇರೆಯವರಿಗೆ ಲೈಸೆನ್ಸ್ ದೊರೆಯಲಾರದೆಂಬದೇ ಮುಖ್ಯ ಕಾವೇರಿ ಸರ್ವಿಸ್ಸಿನವರೇ ಇದನ್ನ ನಡಿಸಿದ್ದು ಮತ್ತಷ್ಟು ಸಂತೋಷವೇ, ಆದರೆ ಇಂಥಾ ವಾರ್ತೆಯನ್ನ ಯಾರೂ ನಂಬಲಾರರು ನಮ್ಮ ಘನ ಸರಕಾರದವರು ಯಾವಾಗಲೂ ಪ್ರಜೆಗಳ ಉದ್ಯೋಗ ಶ್ರೇಯಸ್ಕರವಾಗುವಾಗ ಪಕ್ಷಪಾತವನ್ನು ಅವಲಂಬಿಸಿ ಮಾಡ್ಯಾರು, ಸದ್ಯ ಉದ್ಯೋಗಸ್ತರ ಪ್ರಯಾಣ ಬತ್ತ್ಯವಾದರೂ ಸ್ವಲ್ಪಮಟ್ಟಿಗೆ ಉಳಿಯಲಿಕ್ಕಿಲ್ಲವೇ, ಹ್ಯಾಗೂ ಸರ್ವಿಸ್ ಕುತೂಹಲಿಗಳು ಮುಖ್ಯಾಧಿಕಾರಿಗಳನ್ನು ಕೇಳಿಕೊಂಡಲ್ಲಿ ಪಾಸ್ ದೊರಕಲು ಸಂದೇಹವಿರಲಾರದಾಗಿ ನಾನು ಪೂರ್ತಿ ನಂಬಿದ್ದೇನೆ ಆದರೆ ಇದರ ವಿಷಯ ತಮಗಳ ಅಭಿಪ್ರಾಯವನ್ನು ತಾವು ಹಿಡಿದ ಲೇಖನಿಯಿಂದಾದರೂ ಸ್ವಲ್ಪ ವಿವರಿಸುವಿರಾ

ಸಿ ಯಂ ಯಂ

ಪೊನ್ನಂಪೇಟೆ ಸ್ಕೂಲಿನ ವಾರ್ಷಿಕೋತ್ಸವ

ಪೊನ್ನಂಪೇಟೆ ಸ್ಕೂಲಿನ ವಾರ್ಷಿಕೋತ್ಸವ ಇದೇ ತಾರೀಕು 11ನೇ ಶನಿವಾರ ದಿನ ಬಹಳ ವಿಜೃಂಭಣೆಯಿಂದ ನಡೆಯಿತು ಅನೇಕ ಮಹನೀಯರು ನೆರೆದಿದ್ದರು. ಮ.ರಾ.ರಾ, ಪಾರುವಂಗಡ ಕುಶಾಲಪ್ಪನವರನ್ನು ಅಧ್ಯಕ್ಷರನ್ನಾಗಿ ಮಾಡಿದರು ಮೊದಲು ಹಾಕಿ ಮೈದಾನದಲ್ಲಿ ಹುಡುಗರ ಮತ್ತು ಹುಡುಗಿಯರ ಪಂದ್ಯಾಟಗಳು ನಡೆದವು ನಂತರ ಅಧ್ಯಕ್ಷರನ್ನು ಓಲಗಸಮೇತ ಸ್ಕೂಲಿಗೆ ಕರಕೊಂಡು ಹೋದರು ಪ್ರವೀಣರಾದ ಹುಡುಗರಿಗೂ, ಹುಡುಗಿಯರಿಗೂ ಪಂದ್ಯಾಟದಲ್ಲಿ ಜಯಶೀಲರಾದವರಿಗೆಲ್ಲಾ ಇನಾಮುಗಳನ್ನು ಹಂಚಿದರು ಕುರುಬ ಹುಡುಗರಿಗೂ ಯರವ ಹುಡುಗರಿಗೂ ಸಹ ಇನಾಮುಗಳು ಕೊಡಲ್ಪಟ್ಟವು ಹೆ. ಮಾ ರವರು ಅವರ ವರದಿಯನ್ನು ಓದಿದ್ದಲ್ಲದೆ ಕಳೆದ 20 ವರ್ಷಗಳಿಂದ ನಡೆದ ಸ್ಕೂಲಿನ ಅಭಿಪ್ರಾಯಗಳನ್ನೂ ವ ದಿನ ಅಭಿವೃದ್ಧಿಯ ಮಾರ್ಗವನ್ನೂ ವಿವರಿಸಿ ನೆರೆದ ಜನರ ಸಂತೋಷಗೊಳಿಸಿದರು, ನಂತರ ಅಧ್ಯಕ್ಷರು ನಾನಾತರದ ಮುಂದಿನ ಸ್ಕೂಲಿನ ಅಭಿವೃದ್ಧಿಯ ಮಾರ್ಗವನ್ನು ವಿವರಿಸಿ ಉಪಾಧ್ಯಾಯರುಗಳು ಮಾಡಿದ ಒಳ್ಳೆ ಕೆಲಸಗಳನ್ನು ಶ್ಲಾಘಿಸಿ ನೆರೆದ 300 ಜನರಿಗೂ ಮಕ್ಕಳ ತಂದೆಗಳನ್ನೂ ಬಹಳ ಆನಂದ ಪಡಿಸಿದರು ನಂತರ ಮಕ್ಕಳು ನಾನಾತರದ ನಾಟಕಗಳನ್ನು ಆಡಿ ನೆರೆದ ಜನರ ಮನಸ್ಸನ್ನು ವಿಸ್ಮಯಗೊಳಿಸಿದರು ಮೊದಲಿನ ಕಾಲದ ಹೈಸ್ಕೂಲಿನ ವಿದ್ಯಾರ್ಥಿಗಳು ಸಹ ಇಷ್ಟು ಚೆನ್ನಾಗಿ ನಟಿಸುತ್ತಿರಲಿಲ್ಲ ಜನರೆಲ್ಲರೂ ಹುರ್ರೇ ಎಂದು ಕೂಗಿಕೊಳ್ಳುತ್ತಿದ್ದರು ಕಡೆಗೆ ಚಿಕ್ಕವರು ದೊಡ್ಡವರು ಎಲ್ಲರೂ ಓಲಗಮಾಡಿಕೊಂಡು ಕುಣಿದರು. ಈ ತರದ ವಾರ್ಷಿಕೋತ್ಸವವು ಇಲ್ಲಿ ನಡೆದದ್ದು ಇದೇ ಮೊದಲು. ಹೆ ಮಾಸ್ತರವರು ಓದಿದ ರಿಪೋರ್ಟನ್ನು ಕೇಳಿ ಪ್ರತ್ಯೇಕವಾಗಿ ಮಕ್ಕಳ ತಂದೆಗಳಿಗೆಲ್ಲ ಬಹಳ ಸಂತೋಷವಾಯಿತು ಈ ಸ್ಕೂಲಿನ ಅಭಿಪ್ರಾಯಗಳನ್ನು ಈ ಮಾಸ್ತರುಗಳು ತೆಗೆದುಕೊಳ್ಳುವ ತೊಂದ್ರೆಗಳನ್ನು ನೋಡಿದರೆ ಈ ಸ್ಕೂಲು ಪಡನೆ ಹೈಸ್ಕೂಲಿಗೆ ಯೋಗ್ಯತೆ ಉಳ್ಳದ್ದೆಂದು ಹೇಳುವುದರಲ್ಲಿ ಸಂದೇಹವೇ ಇಲ್ಲ. ಮಾಡತಕ್ಕದ್ದೇನು? ಸ್ಕೂಲಿನಲ್ಲೂ ಬೋರ್ಡಿಂಗಿನಲ್ಲೂ ಮಕ್ಕಳಿಗೆ ಸ್ಥಳವೇಯಿಲ್ಲ, ಬಹಳ ಇಕ್ಕಟ್ಟಿನಲ್ಲಿ ಇರುತ್ತಾರೆ ಈ ಕಿಗ್ಗಟ್ಟುನಾಡಿನಲ್ಲಿ ಒಂದಾದರೂ ಇಲ್ಲವಲ್ಲ ಇದು ಈ ನಾಡಿನವರಿಗೆ ಬಹಳ ಮನಸ್ತಾಪ. ಇಲಾಖ ಹೆಡ್ ಆಫೀಸರುಗಳು ತಕ್ಕ ಏರ್ಪಾಡುಮಾಡಿ ಈ ನಾಡಿನವರನ್ನು ಸಮಾಧಾನಗೊಳಿಸಬೇಕಾಗಿ ಬೇಡುತ್ತೇವೆ ಪೊನ್ನಂಪೇಟೆ ಸ್ಕೂಲು ಹುಟ್ಟುವಾಗ ನಾನು ಇದ್ದೆನು 20 ಹುಡುಗರು ಮಾತ್ರ ಇದ್ದರು ಈಗ 190 ಹುಡುಗರು ಇರುತ್ತಾರೆ ಸ್ಕೂಲನ್ನೂ ಬೋರ್ಡಿಂಗನ್ನೂ ಅಗಲಮಾಡಿ ನಮಗಳಿಗೆ 8ನೇ ಸ್ಟೇಂಡಾರ್ಡನ್ನಾದರೂ ಕೊಟ್ಟರೆ ಹುಡುಗರ ಸಂಖ್ಯೆಯು 250ರ ವರೆಗೆ ಹೆಚ್ಚುವುದರಲ್ಲಿ ಸಂದೇಹವೇನಿದೆ? ನೆರೆದ ಸಭೆಯವರು ಈ ಸ್ಕೂಲನ್ನು ಮುಂದಕ್ಕೆ ತರಲು ಎಲ್ಲರೂ ಪ್ರಯತ್ನಿಸಬೇಕೆಂದು ಒಬ್ಬರಿಗೊಬ್ಬರು ಹೇಳಿಕೊಳ್ಳುತ್ತಾ ಅವರವರ ಮನೆಗಳಿಗೆ ತೆರಳಿದರು

ಶ್ರೀಕಾವೇರಿಯಮ್ಮನವರು ಇಲ್ಲಿನ ಉಪಾಧ್ಯಾಯರುಗಳಿಗೆ ದೀರ್ಘಾಯುಷ್ಯವನ್ನೂ ಆಯುರಾರೋಗ್ಯವನ್ನೂ ಕೊಟ್ಟು ಅವರ ಮುಂದಿನ ಅಭಿವೃದ್ಧಿಗಳಿಗೆ ವರವನ್ನು ನೀಡಲೆಂದು ಪ್ರಾರ್ಥಿಸುವೆ,

ಮಕ್ಕಳ ತಂದೆ

ಅಯ್ಯಾ ಕುತೂಹಲಿಯೇ?

ಭೂಲೋಕದಲ್ಲಿ ಪ್ರತಿ ಒಬ್ಬ ಮನುಷ್ಯನಲ್ಲಿಯೂ ತಾನು ಇನ್ನೊಬ್ಬನಷ್ಟು ಅಥವಾ ಅವನಿಗಿಂತಲೂ ಮಿಕ್ಕಿದ ಜ್ಞಾನವುಳ್ಳವನೆಂಬ ಭಾವನೆಯು ಸ್ವಭಾವಿಕವಾದ ಗುಣವಾಗಿದೆ. ಕೇವಲ ಅಲ್ಪಜ್ಞಾನಿಯೂ ಕೂಡ ತಾನು ಮಹಾಜ್ಞಾನಿಯೆಂದು ಭಾವಿಸಿ ತನ್ನ ನಿಜವಾದ ಗುಣಗಳನ್ನು ಮರೆಯಲ್ಲಿರಿಸಿ ಬುದ್ಧಿವಂತನಂತೆ ನಟಿಸಲು ಪ್ರಯತ್ನಿಸುವುದೇ ಅವನಿಗುಂಟಾಗುವ ಅನಾಹುತಗಳಿಗೆ ಕಾರಣಾಭೂತವಾಗಿರುವುದು ಎಂತಾ ಬುದ್ಧಿವಂತರಾದವರು ಮನುಷ್ಯನ ಹುಟ್ಟುಗುಣಗಳನ್ನು ಅವನ ಮಾತಿನಿಂದಲೂ ನಡತೆಯಿಂದಲೂ ಲೇಖನಗಳಿಂದಲೂ ಬಹುಮುಖ ಅಭಿಪ್ರಾಯಗಳಿಂದಲೂ ತಿಳಿದುಕೊಳ್ಳುವರು. ಹಾಗಿಂದಮೇಲೆ ನಿಮ್ಮ ಜಾಣ್ಮೆತನವನ್ನು ಅವಿಸಿಕೊಳ್ಳಲು ನೀವು ಮಾಡುವ ಪ್ರಯತ್ನವು ಸಂಪೂರ್ಣ ನಿಷ್ಪ್ರಯೋಜನಕರವಾದದ್ದಲ್ಲವೇ? ನೀವು ತಾನು ಮಹಾಜ್ಞಾನಿಯೆಂದು ಭಾವಿಸಿ ಸಕಲ ವಿಷಯಗಳಲ್ಲಿ ನಿಮಗಿರುವ ತಿಳುವಳಿಕೆಯನ್ನು ಹೊರಹಾಕಿಸತೋರುಗ ಸೆಪ್ಟಂಬರ್ 5ನೆ ತಾರೀಕಿನ ಈ ಪತ್ರದಲ್ಲಿ ಮುದ್ರಿಸ್ಸನವರ ಬಾತ್ಮಿಯ ಮೇಲೆ ಕೆಲವು ಪ್ರಶ್ನೆಗಳನ್ನು ಕೇ

ಕಿರುವುದನ್ನು ನೋಡಿದರೆ ನಿಮ್ಮ ತಿಳುವಳಿ [illegible] ಬ್ಬರಿಗೆ ಟ್ಟಿನ ಕ್ಷೇತ್ರದಲ್ಲಿ [illegible] ಕೆಯ ಪ್ರತಿಗಳನ್ನೂ [illegible] ದೆಂಬುದನ್ನು ತಿಳಿಸಲು ವಿಷಾದಿಸುತ್ತೇನೆ.

ಮನುಷ್ಯನ ಜೀವನದ ಪೂರ್ಣ ಜ್ಞಾನದ ವಿಸ್ತಾರವು ಪ್ರತಿ ಒಬ್ಬನಲ್ಲಿಯೂ ಒಂದೊಂದು ವಿಧವಾಗಿರುವುದು ಕೇವಲ ಅಲ್ಪಜ್ಞಾನಿಗಳ ಜ್ಞಾನದ ವಿಸ್ತಾರವು ಅವರ ಪಟಿಯ ಹೊರಬದಿಯ ಜನರ [illegible] ಜ್ಞಾನವು ಅವರ ಶರೀರದ ವಿಸ್ತಾರದ [illegible] ಅವರ ಒಳಾಂಗವು [illegible] ಅಷ್ಟು ವಿಸ್ತಾರವಾ [illegible] ದಕ್ಷಿಣ [illegible] ದೇಶವನ್ನೇ [illegible] ಜ್ಞಾನದಿಂದ [illegible] ಅದರ ಮಹಾಜ್ಞಾನಿಗಳ [illegible] ಇಂಥಾ ಜ್ಞಾನದಿಂದ ಕೂಡಿದ [illegible] ಮಾತ್ರ.

[illegible]

ನನ್ನು ತಲೆದೂಗಿದರು. ಗೌಡರುಗಳ [illegible] ನೋಡಿದರೆ [illegible] ಒಂದುವೇಳೆ ಇಂಥದ ಅಭಿಪ್ರಾಯ [illegible]

ನೀವು ಕನ್ನಡಜಿಲ್ಲೆಯಲ್ಲಿರುವ ಗೌಡರುಗಳ ಸ್ಥಿತಿ ಹ್ಯಾಗೆ ಎಂದು ಕೇಳುವಿರಿ. [illegible] ಗೌಡರುಗಳ ಸ್ಥಿತಿ ಇಲ್ಲಿಗಿಂತಲೂ ಹೀನತರವಾಗಿದ್ದರೆ [illegible] ಈ ಪ್ರಶ್ನೆಯನ್ನು ಕೇಳಲಾಯಿತೆಂದು ನಾನು ಭಾವಿಸಿ, ಇಂಥಾ ಅಭಿಪ್ರಾಯವು ನಿಮ್ಮಲ್ಲಿದ್ದರೆ ಅದನ್ನು ಬಿಟ್ಟು ದೂರೀಕರಿಸಿರಿ. ಕನ್ನಡಜಿಲ್ಲೆಯ ಗೌಡರುಗಳು [illegible] ಐಶ್ವರ್ಯದಲ್ಲಿಯೂ ಇಲ್ಲಿಗಿಂತ [illegible] ನಾನು [illegible] ಹೇಳುವೆನು. [illegible] ಕನ್ನಡದ 'ಗೌಡ ವಿದ್ಯಾ ಸಂಘದ' ಮಂಜೂರ [illegible] ಒಂದುವಾಕ್ಯವು ಅಲ್ಲಿಯ ಐಶ್ವರ್ಯಕ್ಕೆ ಉದಾಹರಣೆ [illegible]

[illegible]

ಬಂದರು. ನೀವು [illegible] ಅಲ್ಲಿ [illegible] ಕಾರಣ [illegible] ಅಲ್ಲಿ ಹಿಂದುಳಿದ [illegible] ಗೌಡರುಗಳ ಸ್ಥಿತಿ [illegible] ಕಂಡು [illegible] ಜಾತಿಯನ್ನು [illegible] ಬಾಕಿಯಿಲ್ಲ [illegible] ಪಕ್ಷಕ್ಕೆ [illegible] ಸ್ವತಂತ್ರ [illegible] ಡಾ. [illegible] ಕೆ. [illegible] ಬಿ. ಎ., ಎಲ್. ಟಿ. [illegible]

[illegible] ಇದ್ದಾರೆ. ಅಲ್ಲದೆ [illegible] ತಾವೇ [illegible] ರುವಾಗಲೇ [illegible] ಕೊಟ್ಟಿದ್ದರು. [illegible] ಸಮಾಜಗಳಲ್ಲಿ ಗೌಡರುಗಳ [illegible] ಸ್ಥಿತಿಯನ್ನೇ [illegible] ಪ್ರಯೋಜನವೇನು, [illegible] ಪ್ರತಿ [illegible] ಗೌಡರು [illegible] ಹಿಂದುಳಿದ ಸಂಘಕ್ಕೆ ಸೇರಿದ ಗೌಡರುಗಳಿಗೆ [illegible] ಕ್ಷೇಮದ [illegible]

ತಿರುಗಿ ಕನ್ನಡಜಿಲ್ಲೆಯ ಗೌಡ [illegible] ಕಾರಣವೇನಂದರೆ [illegible] ದಕ್ಷಿಣ ಆಫ್ರಿಕಾ [illegible]

ನಿಮ್ಮ ಇನ್ನೊಂದು ಪ್ರಶ್ನೆಯು [illegible] ನ್ನು ಸೂಚಿಸುತ್ತದೆ. ಏಕೆಂದರೆ ಗೌಡರುಗಳು ಎದ್ದರಲ್ಲಿ ಹಿಂದುಳಿದ ಸಂಘದವರಾದುದರಿಂದ ಅವರಿಗೆ [illegible] ಚುನಾವಣೆ [illegible] ವಾಸ್ತವಿಕ [illegible] ಗೌಡರುಗಳ [illegible] ವಿದ್ಯಾ [illegible] ನಿಮ್ಮ [illegible]

[illegible]

[illegible] ಅದನ್ನು ನಾನು [illegible]

ನಿಮ್ಮ ಸಿರಂತರ ಕ್ಷೇಮಚಿಂತಕ,
'ಪಾವನ ತಡಿಯಾರಾದ ದಕ್ಷಿಣ ಕನ್ನಡದವ.'

[illegible] ಬ್ಯರ.

ಮಹಾಶಯರೆ,

[illegible] ಯಲ್ಲಿ "ಹಿಂಗಾರು ಮಳೆಯು [illegible] ಕೊರಗಿನ ಹೊಲಗಳಲ್ಲಿ ನೀರು ಬತ್ತಿಹೋಗಿ [illegible] ಬಂದದ್ದರ [illegible] ಹೋಗುತ್ತಿವೆ. [illegible] ಹಿಂಗಾರು [illegible] ನಮ್ಮ ದೇಶೀಯರೂ [illegible] ಹೇಳಿದಂತೆ ಈ [illegible] ಕಷ್ಟದ [illegible] ಹಿಂಗಾರ [illegible] ದೇಶವು [illegible] ಈ ಹೊರೆಯನ್ನು ಹೊರುವುದು ದೇಶೀಯರು ಒಗ್ಗಟ್ಟಾದರೆ ಬಹಳ ಸುಲಭವಾದು ಪರಿಸ್ಥಿತಿಯು ವಿಶದವಾಗಿಸುತ್ತದೆ.

ಈ ವಿಷಯದಲ್ಲಿ ನನ್ನದೊಂದು ಅಭಿಪ್ರಾಯವನ್ನು ತಮ್ಮ ಮುಂದಿಡಲು ಆತುರನಾಗಿದ್ದೇನೆ. [illegible] ಅದನ್ನು ಪರಿಶೀಲಿಸಿರೆಂದು ನಂಬಿರುವೆನು. [illegible] ಮಡಿಕೇರಿ ಮತ್ತು [illegible] ಮಡಿಕೇರಿಯಲ್ಲಿ [illegible] ಬ್ರಿಟಿಷ್ [illegible] "marshes" [illegible]

[illegible]

ಕಸ್ನು ಸಾಟುಗೆಳಿಸುವುದು ಎಲ್ಲಿಯೂ ನೀರು ನಿಂತರೆ ಕೊಳಚಾಗದು ನೀರೆಲ್ಲಾ ಸರಸರನೆ ತೋಡಿನಲ್ಲಿ ಹರಿದು ಹೋಗುವುದರಿಂದ ಬೇಸಿಗೆಯಲ್ಲಿ ಅತ್ಯವಾಗಿ ನೆಲವು ಒಣಗಿ ಹೋಗುವುದು, ಸದ್ಯಕ್ಕೆ ಹೊಳ್ಳಗಳಿಗೆ ತೌರೂರಾಗಿರುವ ಮಡಿಕೇರಿಯು ಮುಕ್ತಾಲುಮೂರುಸ್ಯನವನ್ನು ಆಕ್ರಮಿಸಿಕೊಂಡರ ವ ಆ ಹುಳ್ಳಗಳು ಸಂದಿದಕ್ಕೆ ಅವುಗಳಿಗೆ ಮರಳು ಭೂಮಿಯಾಗುವುವು ಈ ಗಗ್ಗೆಗಿಂತ ಮುನಿಸಿಪಾಲಿಟಿಯುವರಿಗೂ ಸರಕಾರಕ್ಕೂ ಸಿಕ್ಕುವ ಲಾಭವದಂತಿರಲಿ, ಈ ಪೂತುಗಳು ಕೊಡಗಿನ ಸರ್ವ ಜನರಿಗೂ ಇರುವ ವಾತು ಯಾಕೆಂದರೆ ಎಲ್ಲಿ ಕೊಳಕು ನೀರು ನಿಂತಿರುತ್ತೋ ಅಲ್ಲಿ ಸೊಳ್ಳೆಯು ಹಾಳಕ ಸವೆ ಸುತ್ತುಮುತ್ತ ಮೇಟೀಯ ಒ ರದ ರಣಾರಂಗ ಆ ನ [illegible] ಯು [illegible] ಜೆಗಗೆ [illegible] ದ ಮೊಹ [illegible] ನಡಲಿ [illegible] ಹೂಗಿ [illegible] ನಮ್ಮ ಹೂಡಿ [illegible] ಕ್ವೈಟ್ [illegible] ಮುನ್ನಿ ಸಿಪ್ [illegible] ಮತ್ತು [illegible] ಯು [illegible] ಹೊರಟಿ [illegible] ನಾನು [illegible] ದನ್ನ [illegible]

[illegible] ಯುವರ ಈ ಪಡ್ಡುಗಳನ್ನು ಬಿಡಿ ಸಾರವ ಹಿಡಲು ಆಸಕ್ತಿ ಇರುವವರಿಗೆ ಕೆಲವು ದರುಷಗಳಿಗ ಮುಫತ್ತಾಗಿ ಕೊಟ್ಟು ದಾರಿಯನ್ನು ತೋರಿದರೆ ಪಾರ ಹಿಡಿಯುವವರು ಈ ಪಟ್ಟಣದ ಮತ್ತು ದೇಶದಲ್ಲಿ ಅನೇಕರು ದೊರೆಯುವರು ಪಾರಗಾರರು ಹಲಕೆಲವರು ಪ್ರಾರಂಭದಲ್ಲಿ ಒಡವಡಾಗಿರಬಹುದು ಆದರೆ ಪೇಯ ಹಾವಳಿಯಿಂದ ಒದಗಿದ ಕಷ್ಟಗಳನ್ನು ನೀಗಿಸುವುದಕ್ಕೆ ಹಣವನ್ನು ಚೆಲ್ಲಿದ ಆ ಘನ ಸರಕಾರವು ದೇಶದ ಆರೋಗ್ಯವನ್ನೂ ಐಶ್ವರ್ಯವನ್ನೂ ಉನ್ನತಿಗೆ ತರುವ ಈ ಒದಗವನ್ನ ಎಂದೂ ಮರೆಯದು ಮುಖ್ಯವಾಗಿ ಈ ಅಭಿಪ್ರಾಯವನ್ನು ಎದ್ದಾಬಿದ್ದ ಸಪ್ರಸಿದ್ಧರಾದ ಮುನಿಸಿಪಲ್ ಮೆಂಬರರ ಪರಾಂಬರಿಕೆ ಬಗ್ಗೆ ಇಲ್ಲಿ ಬರದೆನು. ಒಂದು ಮೀಟಿಂಗ ಮಾಡಿ ಅದರಲ್ಲಿ ಈ ವಿಷಯವನ್ನು ಚರ್ಚಿಸಿದರೆ ಇದರಲ್ಲಿರುವ ಗುಣದೋಷಗಳು ತಾವೇ ತಲೆದೋರುವುವು

ಹೆಚ್ಚು ವಿವರಿಸುವದು ಈ ಸುಹಸನೀಯರ ಮಟ್ಟಿಗೆ ಕೊರತೆಯಾದರೂ ನನ್ನ ಮಿತ್ರರೊಡನೆ ಈ ಅಭಿಪ್ರಾಯವನ್ನು ಸಂಭಾಷಿಸಿದಾಗ ಸಂಶಯ ತೋರಿದಂತೆ ಕೆಲವು ಸಂದರ್ಭಗಳಿಗೆ ಉತ್ತರವನ್ನು ನನ್ನ ಜ್ಞಾಯಪ್ರಾಪ ಮಟ್ಟಿಗೆ ಬರೆಯುವೆನ. ಈ ಪಡ್ಡುಗಳು ವ್ಯವಸಾಯಕ್ಕೆ ಯೋಗ್ಯವಲ್ಲವೆಂದು ವ್ಯವಸಾಯಕ್ಕ ಪ್ರವೀಣರ ಅಭಿಪ್ರಾಯ ವದನರಾದರೂ ಹಾಗೆ ಹೇಳುವ ಜನರಿಗ ಪ್ಯಸ್ಕೂಲಿನ ಸಮೀಪದಲ್ಲಿರ ರ ಗದ್ದೆಗಳನ್ನೂ, ರೇಸ್‌ಕೋರ್ಸಿನ ಹತ್ತಿರಲ್ಲಿರುವ ಬಯಲನ್ನೂ ಮತ್ತು ಈಗ ಪೈರು ಪಟ್ಟೆಗಳಿಂದ ಕಿಕ್ಕಿರಿದು ವ ನನಗೆ ಆನಂದವನ್ನುಂಟುಮಾಡುವವುಗಳನ್ನೇ ಒಳಸಿಂದ ತೋರಿಸದರೆಸಾಲದೇ? ರೇಸ್‌ಕೋರ್ಸಿನ ಹತ್ತಿರ ವ್ಯವಸಾಯವಾಗಿದ ಭೂಮಿಯು ತ್ರೀಟಿಗೆ ಬೂಟಸಿದ್ದಾಗಿದ ಈ ರೀತಿಯಾಗಿಯೇ ಇನ್ನುಳಿದ ಪಡ್ಡು ಭಾಗವನ್ನ ವ್ಯವಸಾಯ ಮಾಡಿದರೆ ಅದರ ಜಂಗವೇ, ಅದರ ಆನಂದವೇ, ಅದರ ಸುಖವೇ, ಅದರ ಸೌಖ್ಯವೇ, ಅದರ ಲಾಭವೇ ಅದರ ವೈಭವವೇ—ಅದನ್ನು ವರ್ಣಿಸಲು ಆದಿಶೇಷನ ಸಾವಿರ ನಾಲಿಗೆಯೂ ಸಾಲದಾಗಬಹುದು. ವರ್ಣನೆಗೆ ಮಾತ್ರವಲ್ಲದೆ ಊಹೆಗೆ ಸಹ ಅತೀತವಾದ ಈ ಶುಭಕಾರ್ಯವನ್ನು ಕೈಗೊಂಡು ಸಫಲಗೊಳಿಸಿದ ಕೆ ಆ ಮುನಿಸಿಪಲ್ ಮೆಂಬರುಗಳ ಆ ಮಹಾತ್ಮರ ಪುಣ್ಯಕ್ಕೆ ಪಾರವಿದೆಯೇ? ಕೀರ್ತಿಗೆಣಿಕೆ ಎಲ್ಲಿ?

ಈ ಬ್ರಾತ್ಮಿಯ ವಿಷಯ ಹುಟ್ಟುವದರಿಂದ ವ್ಯವಸಾಯ [illegible] ವೈದ್ಯ [illegible], ತೃಪ್ತಿಕರವಾದ ಉತ್ತರವನ್ನು ಕೊಡದ ಪಕ್ಷದಲ್ಲಿ, ಬೇಸಾಯ [illegible] ಪತ್ರಿಕೆಯಿಂದ [illegible] ನಾನು

ಸಿದ್ಧ [illegible]

ಪಟು ಠಾ ವಿ ಕೆ.

[illegible]

ಮ್ಯಾನೇಜರ್,
"ಕೊಡಗು" ಲಿಮಿಟೆಡ್,
ಮಡಿಕೇರಿ.

ಜೆ. ಹೆಚ್. ಹೌಸ್. ಔಷಧಾಲಯ.

ಅಯ್ಯಾ

ನಾನು ಸುಮಾರು ಹದಿನೈದು ವರುಷಗಳಿಂದ ಖಾಯಿಲಸ್ಥನಾಗಿ ದಿನೇ ದಿನೇ ಕೃಶವಾಗುತ್ತಾ ಬಂದು ಬರೇ ಮೂಳೆ ಪಂಜರವಾಗಿದ್ದ ಮೂರು ವರ್ಷಗಳಿಂದ ಮಲಗಿದಲ್ಲೇ ಆಗಿದ್ದು, ನಂತರ ಕೈ ಕಾಲು ಮೊಖ ಊದಿ, ಹೊಟ್ಟೆಯಲ್ಲು ನೀರು ಒಂದು, ಎದೇ ವರೆಗೆ ಹತ್ತಿ ಉಸುರಾಡುವದಕ್ಕೂ ಬಹಳ ಕಷ್ಟಕ್ಕೆ ಒಂದು ಎಡದ ಮಗ್ಗುಲಿನಲ್ಲಾಗಲೀ ಬಲದ ಮಗ್ಗುಲಿನಲ್ಲಾಗಲೀ ಮಲಗಲಿಕ್ಕಾಗದೆ ಕಷ್ಟಪಡುತ್ತಿದ್ದು, ಇನ್ನು ಬದುಕಲಾರೆನೆಂಬದಾಗಿ ಪ್ರಕಾರುಯುಟ್ಟ ನನ್ನ ನೆಂಟರಿಷ್ಟರು ಓದುನೋಡಿ ಬಹುಶ್ರಮನದಿಂದ ಪೇಠಾಬಸ್ತಿ ಜೆ ಹೆಚ್ ಹೌಸ್ [illegible] ಔಷಧಿ [illegible] ಗೆದುಕೊಂಡ [illegible] ಕಂಡು ಯೇಳಿದರು [illegible] ನನ್ನ ಬಾಪ [illegible] ಸನಗ ಇದೇ ಪಾಕನ್ನು ಒತ್ತಿ ಬಿಟ್ಟ [illegible] ಅಸ ಮೂರಿಸಿ ಸ್ಪೀಡರ್, ವ. ರಾ ಹೆಚ್ ನ ಸ್ವಾಯದರು ನ ತ್ಸಾಯದಿಂದ ನನ್ನ ಈ ದ್ರಾಂತ್ಯ ಕಷ್ಟದಿಂದ ರ [illegible] ಒಡೆಟಗೆ [illegible] ಚಿಕಿತ್ಸೆಯಿಂದ ಪಹಾಗೆ [illegible] ಕೊ [illegible] ರು [illegible] ಅವರು [illegible] [illegible] ನಂತರ ನನಗ ಪೂರ್ಣ [illegible] ಆದದ್ದ ರಮೇಲ ಜಿ ಹದೇ ಆರು ತಿಂಗಳು ಚಿಕಿತ್ಸೆಯನ್ನು ಹೊಂದಿ ಆರೋಗ್ಯಪೂರ್ಣ ಗುಣ ಹೊಂದಿ ದೃಢಕಾಯನಾಗಿರುತ್ತೇನೆ ಅಸ್ತದ್ಯೆ ನನ್ನ ಹೆಂಡತಿಗೂ ಸನ್ನಿ ಒಂದು ಸಪೇ ಪಡೇ ಮೂರ್ಛೆ ಆಗುತ್ತಿದ್ದಳು. ಆ ಕಷ್ಟ ಸಹ ಅವರಿಂದಲೇ ಪರಿಹಾರವಾಗಿ ಸುಖಾಗಿರುತ್ತಾಳೆ ನನ್ನ ಸ್ನೇಹಿತರಿಂದ ನನ್ನ ಪ್ರಾಣವು ಉಳಿಯಿತು. ಈ ಪಾಗ ನನ್ನಿಂದ ಉಪಕಾರವಾಗಲೀ ಎಂದು ನಿಮ್ಮ ಅಮೂಲ್ಯವಾದ ಪತ್ರಿಕೆಯಲ್ಲು ಪ್ರಕಟಿಸಿರುತ್ತೇನೆ ಅಲ್ಲದೆ ಇವರಿಂದ ಬಡವ ನಾಧಿಸಿ ಔಷಧಿಯನ್ನು ಹೊಂದಿದರೆ ಎಂಥಾ ಹಳೇ ಕಾಯಿಲವಾದರೂ ಖಂಡಿತವಾಗಿ ಗುಣವಾಗುತ್ತದೆ ಎಂದು ದೃಢವಾಗಿ ಹೇಳಬಲ್ಲೆನು (?) ಶ್ರೀದೇವರು ಪಂಡಿತ ನಾರಾಯಣರಾಯರವರಿಗೆ ಆಯುರಾರೋಗ್ಯ ಐಶ್ವರ್ಯಾಭಿವೃದ್ಧಿಯನ್ನು ಕೊಟ್ಟು ರಕ್ಷಿಸಲಿ ಎಂದು ಸದಾ ಪ್ರಾರ್ಥಿಸುತ್ತೇನೆ ತಾರೀಕು 18.8.24

ಪಾಸುವು, ಎಸ್ ಎಸ್ ಸುಬ್ರಾಯ,
"ಪ್ರಕಟಣೆ" ಕಾಫಿ ಪ್ಲಾಂಟರ್

[ಽ ಽ]

ಹಳೆ ವಿದ್ಯಾರ್ಥಿಯರ ತ್ರೈಮಾಸಿಕ.

ಸಂಪುಟ 2] ವರ್ಷದಚಂದಾ ಒದೇ ರೂ 140 [ಸಂಚಿಕೆ 1
ಸಂಪಾದಕ [illegible] ಬೆ ಎ, ಬಿ ಎಲ್ ಎ ಎಲ್ ಎ

ಈ ಸಂಚಿಕೆಯಲ್ಲಿ ಮನೋಹರವಾದ
ಕೊಡಗಿನ ಪವಿತ್ರ ಸ್ಥಳವಾದ ಶ್ರೀ ಮೂಲ
ಕಾವೇರಿಯ ಚಿತ್ರಗಳಿವೆ.

1 ಶ್ರೀ ಕಾವೇರಿಯ ಜನ್ಮ ಅವತಾರ
2 ಸರಕಾರಕ್ಕ ಸಾಲದೆಂದರೇನು ?
3 ಪೋಲಿಟಿಕ್ಸ್ ಅಂದರೇನು ?
4 ಎಂಬಾಬಾಯಿ

ಇವೇ ಮುಂತಾದ ಓದು ಸ್ವಾರಸ್ಯದ ವಿಷಯಗಳಿವೆ
ಮೆನೇಜರ್,
ಓ ಎಸ್. ಎಸೋಸಿಯೇಷನ್,
ಮಡಿಕೇರಿ

ನೋಟೀಸ್.

ಕೊಡಗು ಡಿಸ್ಟ್ರಿಕ್ಟಿಗೆ [illegible] ಏಜಂಟರ [illegible] ತಿಳಿಸಲ್ಪಡುತ್ತದೆ [illegible]

I. Sriramana & Co
Chief Agents
Mysore Agricultural Dairy
farm Co., Ltd,
MYSORE.

ARMS & AMMUNITION MART.

Mahomedally-Noorbhoy.

337, Abdul Rehman, Street, near
Crawford Market, BOMBAY.

Telegraphic [illegible]

[124 illegible] Catalogue

[illegible]

ಕಿರ್ಲೋಸ್ಕರ ಬ್ರಾಂ [illegible]

[illegible] ಅದನ್ನು ತೋಡಲು ತೆಗೆಯಲು ಕಿರ್ಲೋಸ್ಕರ ವ್ಯವಸಾಯ ಮತ್ತು ಗೋ ಯೋಗ್ಯವಾದ ನಾಡಗಳು

ಲಕ್ಷಾವಧಿ ರೈತರು ಹೂಡಿ ಅನುಭವ ಪಡೆದುಕೊಂಡಿರುವರು ಭೂಮಿಯ [illegible] ತರತರದ ನೇಗಿಲುಗಳೂ ಗಾಣಗಳೂ [illegible] ಒಂದ ಗುಟಿಗೆ ೧೦೦ ಪೌಂಡು ಬ್ಬನ್ನು ಒಂದಿ ಸುತ್ತದೆ

"ಕೊ" ಎಂಬ ಕ್ಯಾಟಲಾಗನ್ನು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್,
16-18 ಕಿರ್ಲೋಸ್ಕರವಾಡಿ, ಜಿಲ್ಲಾ, ಸಾತಾರಾ.

ನೋಟೀಸ್.

"ಕೊಡಗು" ಪತ್ರಿಕೆಯ ಹಳೆ ಚಂದಾಹಣ ಕೊಡಲಿಕ್ಕಿರುವವರೂ ಹೊಸ ಚಂದಾದಾರರಾಗ ಬೇಕೆಂದಿರುವವರೂ, ಮತ್ತು ಕೇರುಹಣ ಸತ್ತಿರುವದಲಿಕ್ಕಿರುವವರೂ ದಯವಿಟ್ಟು ವೀರಾಜಪೇಟೆಯಲ್ಲಿರುವ ನಮ್ಮ ಕಂಪೆನಿಯ ಏಜಂಟರವ ಆಫೀಸಿನಲ್ಲಿ ಪಾವತಿಮಾಡಬೇಕಾಗಿ ಕೋರಿಕೆ

ಮಡಿಕೇರಿ, ಮೇನೇಜರ್
1-9-24 ಕೊಡಗು ಲಿಮಿಟೆಡ್.

ಪ್ರಕಟಣೆ.

ಒಂದು ಕಡೆ ಇಂಗ್ಲೀಷಿನಲ್ಲಿಯೂ ಇನ್ನೊಂದು ಕಡೆ ಕನ್ನಡದಲ್ಲಿಯೂ ಪ್ರಿಂಟಾಗಿರುವ ಕಾಫಿ ತೋಟದ ಕೂಲಿಗಳ ಟ್ರಿಚಾಪು ಕಂಟ್ರಾಕ್ಟು ಎಗ್ರಿಮೆಂಟ್ ಫಾರಮುಗಳು ಮಾರಾಟಕ್ಕೆ ತಯಾರಿವೆ ಬೇಕಾದವರು 'ಕೊಡಗು' ಆಫೀಸಿನಿಂದ ಪಡಕೊಳ್ಳಬಹುದು.

ಮಡಿಕೇರಿ,
17-9-24, ಮೇನೇಜರ್.

Health is Wealth.

WANTED all to improve health strength and vitality and thus save our nation from physical degeneracy Send half anna stamp and get 23 specimen photograph with full particulars from

Director of Physical Culture,
P. O. B. [illegible]
[illegible] City

Printed & published by Kodanda Appayya, R.B, Chairman, Board of Directors, at "Kodagu" Press Mercara for "Kodagu" Ltd.

Reg. No. M. 1550.
If not delivered please return to
"KODAGU" OFFICE, MERCARA.

ಕೊಡಗು.

ವಾರ್ಷಿಕ ಚಂದಾ ರೂ. ೪—೮—೦

ಐಕ್ಯಮತ್ಯೇನ ಭೂಪತಯೋಽಪಿ ವಿಶ್ವಾಸ ನೀತಿ ಪ್ರಯುಕ್ತಾಃ || ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ ||

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಎಡಿಟರ್ ಪಂದ್ಯಂಡ ಐ. ಬೆಳ್ಯಪ್ಪ.

ಸಂಪುಟ ೪] ಕೊಡಗು, ಸನ್ ೧೯೨೪ನೇ ಇಸವಿ ಅಕ್ಟೋಬರ್ ತಾರೀಕು ೩೧ನೆಯ ಶುಕ್ರವಾರ [ಸಂಚಿಕೆ ೨೧

ಆರೋಗ್ಯ ಚಂದ್ರಿಕೆ.

ಮದ್ರಾಸ್

ಸಂಪಾದಕರು ಡಾಕ್ಟರ್ ಯು ರಾಮರಾವ್

ಯಮ್ ಎಲ್ ಸಿ ಯವರು

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಶುಚಿತ್ವದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ಕೊಡುವ ದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ ಈ ಮಾಸಪತ್ರಿಕೆಯು ಹೆಲ್ತ್ ಎಂಬ ಇಂಗ್ಲಿಷ್ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಯೆ ಪ್ರಕಟವಾಗುವುದು

ಆರೋಗ್ಯ ಚಂದ್ರಿಕೆಯಲ್ಲಿರುವ ಲೇಖನಗಳು ಹಳೆಯದಾಗದೆ ಪುನಃ ಪುನಃ ಓದಲು ಅರ್ಹವಾದವುಗಳಾಗಿರುವುದ ರಿಂದ ಆರೋಗ್ಯ ಚಂದ್ರಿಕೆಯನ್ನು ತರಿಸಿ ಬೈಂಡ್ ಮಾಡಿಸಿ ಇಟ್ಟುಕೊಂಡರೆ ಎಲ್ಲರಿಗೂ ಉಪಯುಕ್ತವಾಗುವ ಅಮೂಲ್ಯವಾದ ಗ್ರಂಥವಾಗುವುದು ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ 1-8-0 ಬಿಡಿ ಪತ್ರಿಕೆ 1ಕ್ಕೆ 0 2-0 ಹಿಂದಿನ ಸಂಚಿಕೆಗಳು ಕೂಡಾ ದೊರೆಯುವವು.

ಪತ್ರವ್ಯವಹಾರಕ್ಕೆ ಆರೋಗ್ಯ ಚಂದ್ರಿಕೆ 323 ತಂಬುಚೆಟ್ಟಿ ಬೀದಿ ಮದ್ರಾಸ್

ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿಯ ಜೀವವಿಮೆಯ ಕಂಪೆನಿ, ಲಿಮಿಟೆಡ್.

ಹೆಡ್ ಆಫೀಸು, ಬೊಂಬಾಯಿ.

ಹಿಂದುಸ್ಥಾನದಲ್ಲಿ ಕಳೆದ 50 ವರ್ಷಗಳಿಂದಲೂ ಜೀವವಿಮೆಯ ಅನುಭವವನ್ನು ಪಡೆದಿರುವ ದೇಶೀಯ ಜೀವವಿಮಾ ಸಂಘಗಳಲ್ಲಿ ಅತ್ಯಂತ ದೊಡ್ಡದೂ ಮತ್ತು ಭದ್ರವಾದದ್ದೂ ಆದ "ಓರಿಯಂಟಲಿನ ಜೀವವಿಮೆ ಪತ್ರಕ್ಕಿಂತಲೂ ಉತ್ತಮವಾದ ವಸ್ತು ಬೇರೆ ದೊರೆಯಲಾರದು

ಈಗಾಗಲೇ ವಿಮೆಸಂದಾಯವಾದ ಮೊತ್ತ	8,00,00 000
ಕೈಯಲ್ಲಿ ಮುಂದೆ ಒದಗುವುದಾದ ತಗಾದೆಗಳನ್ನು ಸಂದಾಯಿಸಲಿಕ್ಕೆ ಇಟ್ಟುಕೊಂಡಿರುವ ಹಣ	6 00,00 000
ವಾರ್ಷಿಕ ಉತ್ಪತ್ತಿ	1 00 00,000

ಇಷ್ಟು ಭದ್ರತೆಯುಳ್ಳ ಕಂಪೆನಿಯಲ್ಲಿ ವಿಮೆ ಮಾಡಿಸಿಕೊಳ್ಳಲಿಚ್ಛಿಸುವವರು ಹಾಗೂ ಇದರ ವಿಷಯ ಹೆಚ್ಚಿನ ಸಂಗತಿ ತಿಳಿಯಬೇಕೆಂದಿರುವವರು ದಯವಿಟ್ಟು ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳುವದು.

ಕೆ. ಪಿ. ಬೆಳ್ಯಪ್ಪನವರು,
ಓರಿಯಂಟಲ್ ಏಜನ್ಸೀ ಆಫೀಸು,
24—20 ವೀರರಾಜಪೇಟೆ, ದಕ್ಷಿಣ ಕೊಡಗು.

"ಕೊಡಗು"

ರಾಜಕೀಯ, ವಿದ್ಯಾ, ಕೃಷಿ, ವೃತ್ತಿ, ವಿಜ್ಞಾನ, ಮತ್ತು ನೀತಿ ಮುಂತಾದ ವಿಷಯಗಳಿಂದೊಡಗೂಡಿದ ಕೊಡಗಿನ ವಾರ ಪತ್ರಿಕೆ

1. ಪ್ರಕಟಣೆಗಳನ್ನು ಮೇನೇಜರ್ ಕೊಡಗು ಮಡಿಕೇರಿ ಈ ವಿಳಾಸಕ್ಕೆ ಕಳುಹಿಸಬೇಕು. 2 ಲೇಖನಗಳನ್ನು ಸಂಪಾದಕರು "ಕೊಡಗು ಮಡಿಕೇರಿ ಈ ವಿಳಾಸಕ್ಕೆ ಕಳುಹಿಸಬೇಕು. 3 ಬಾತ್ಮಿದಾರರ ಅಭಿಪ್ರಾಯಕ್ಕೆ ಕೊಡಗು ಪತ್ರಿಕಾಕರ್ತರು ಜವಾಬ್ದಾರರಲ್ಲ 4 ನಮ್ಮಲ್ಲಿಗೆ ಕಳುಹಿಸುವ ಬಾತ್ಮಿಗಳು ಕಾಗದದ ಒಂದೇ ಕಡೆಯೂ, ಸ್ಪಷ್ಟವಾಗಿಯೂ, ಹೆಸರು ವಿಳಾಸಗಳಿಂದ ಕೂಡಿಯೂ ಬರೆಯಲ್ಪಟ್ಟಿರಬೇಕು ಸ್ಥಳವು ದೊರೆತಂತೆಲ್ಲಾ ಈ ಪತ್ರಗಳು ಪ್ರಕಟಿಸಲ್ಪಡುವವು 5. ಪ್ರಕಟಿಸಲಾಗದ ಬಾತ್ಮಿಗಳನ್ನು ಮರಳಿ ಕಳುಹಿಸುವ ಜವಾಬ್ದಾರಿಕೆಯನ್ನು ಸಂಪಾದಕರು ವಹಿಸಿಕೊಳ್ಳುವದಿಲ್ಲ

ಪ್ರಕಟಣೆಗಳು.

ಅತ್ಯಂತ ಸುಲಭವಾಗಿ ಹಾಕಲ್ಪಡುತ್ತವೆ. ಹೆಚ್ಚು ಸಂಗತಿಗನ್ನು ಮೇನೇಜರಿಗೆ ಬರೆದು ತಿಳಿದುಕೊಳ್ಳಬಹುದು.

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ.

ಅಪೂರ್ವ! ಹೊಸ ಪುಸ್ತಕ!! ಅಪೂರ್ವ!!!

ಶಿಶು ವೈದ್ಯ ಸಂಜೀವಿನೀ.

ಕನ್ನಡಿಗರಿಗೆ ಯಾವ ವೈದ್ಯ ಸಂಹಿತೆಯೂ ಇದವರೆಗೆ ಇರಲಿಲ್ಲ! ಆದಕಾರಣ ಇದನ್ನು ಎಲ್ಲಾ ಆಯುರ್ವೇದದ ಆಧಾರದಿಂದ ಪ್ರಕಟಿಸಿದ್ದೇವೆ ಇದರಲ್ಲಿ ಸ್ತ್ರೀಪುರುಷರ ದೇಹಲಕ್ಷಣ, ವಿವಾಹ, ದಾಂಪತ್ಯ ನೀತಿ, ಪಾತಿವ್ರತ್ಯ ಧರ್ಮ, ಗರ್ಭಿಣಿಯರ ರೋಗಗಳಿಗೆ ಚಿಕಿತ್ಸೆ ಉಪಚಾರ ಸುಖಪ್ರಸವಾನಂತರಗಳು ಪ್ರಸವವಿಧಿ ದಾಯಿಯ ಕರ್ತವ್ಯ ಶಿಶುಪರಿಚರ್ಯೆ ಶಿಶುಗಳ ಸಕಲ ರೋಗ ಚಿಕಿತ್ಸೆ ಹಾಗೂ ಎಲ್ಲಾ ಲೋಹಾದಿಗಳ ಶುದ್ಧಿ ಕ್ರಮ ಮತ್ತು ಭಸ್ಮಗಳು ಮಾಡುವ ವಿಧಾನ, ಧಾತು ಪುಷ್ಟಿ ಔಷಧಿಗಳು ಇನ್ನೂ ಶಾಸ್ತ್ರೀಯ ಪತ್ಥ್ಯ ಸಹ ಪೂರ್ಣವಾಗಿ ವಿವರಿಸಲ್ಪಟ್ಟಿದೆ ಈ ಪುಸ್ತಕ ಕೇವಲ ದೊಡ್ಡದು ಇದರಲ್ಲಿ ಹಂಗಸರು ಹುಡುಗರು ಸಹ ಸುಲಭವಾಗಿ ತಯಾರು ಮಾಡುವಂತಾ ಔಷಧಗಳಿಗಿಂತ ಹೆಚ್ಚಾಗಿರುವವು ಈ ಪುಸ್ತಕದ ಕ್ರಯವು ಇದರಲ್ಲಿರುವ ಒಂದೊಂದು ಔಷಧದ ಬೆಲೆಯಾಗಲಾರದೆಂಬುದನ್ನು ನೀವೇ ತಿಳಿದುಕೊಳ್ಳಿರಿ!! ಈ ಪುಸ್ತಕವನ್ನು ಕೊಂಡುಕೊಳ್ಳುವ ಪ್ರತಿ ಮನುಷ್ಯನೂ ಖಂಡಿತವಾಗಿ ಒಬ್ಬ ವೈದ್ಯನೇ ಆಗುತ್ತಾನೆ ಕ್ರಯ ಪುಸ್ತಕಕ್ಕೆ ೨-೮-೦

ನಮ್ಮ ವಿಳಾಸ.—ಭಾರತಿ ಬುಕ್‌ಡಿಪ್ಪೋ,
12 S ೪೯೧, ನಗರ್ತರಪೇಟೆ, ಬೆಂಗಳೂರು ಸಿಟಿ.

ಕೃಷಿತೋ ನಾಸ್ತಿ ದುರ್ಭಿಕ್ಷಃ

NITRATE OF SODA (15—16 per cent) Nitrogen "The best and cheapest form of Nitrogen highly concentrated and immediately available. Nothing like it to make plants grow."

ಈ ರಸಾಯನವು ಗೊಬ್ಬರದ ಸತ್ವದ ಹಚ್ಚಿನ ಅಂಶವೂ ಬೆಳೆಗಳಿಗೆ ಸಾರಜನಕ (Nitrogen) ಒದಗಿಸುವುದಾಗಿರುತ್ತದೆ 'ನೈಟ್ರೇಟ್ ಆಫ್ ಸೋಡಾ' ಎಂಬ ರಸಾಯನಿಕ ಗೊಬ್ಬರವು (15—16% ಅಂದರೆ ನೂರಕ್ಕೆ ೧೫–೧೬ರ ವರೆಗೆ) ಇತರ ಗೊಬ್ಬರಗಳಲ್ಲಿಯಕ್ಕಿಂತ ಮೂರು ಪಾಲು ಜಾಸ್ತಿ ಕ್ಷಾರಜನಕ ಭರಿತವಾಗಿದ್ದು ಬೆಳೆಗಳಿಗೆ ಥಕ್ಕನೆ ಒದಗುವಂತೆಯೂ ಇರುತ್ತದೆ ಇದರ ಉಪಯೋಗದಿಂದ ಫಸಲು ಬಹಳ ಸಮೃದ್ಧಿಯಾಗುವುದು ಹಿಡಿತುಂಬ ರಸಾಯನಿಕ ಗೊಬ್ಬರವು ಬಂಡಿ (ಕುಕ್ಕೆ) ತುಂಬ ದನಗೊಬ್ಬರಕ್ಕೆ ಸಮವಾಗಿರುತ್ತದೆ ಈ ರಸಾಯನಿಕ ಗೊಬ್ಬರವು ಅಮೇರಿಕ ದೇಶದ ಚಿಲ್ಲಿ ಎಂಬಲ್ಲಿ ತಯಾರಾಗಿ ಬಹಳ ದೂರದೇಶದಿಂದ ಬರುವ ಕಾರಣ ಸ್ವಲ್ಪ ಹೆಚ್ಚು ಕ್ರಯವಾದರೂ ವ್ಯವಸಾಯಕ್ಕೆ ಉಪಯೋಗಿಸಲು ಬಹಳ ಲಾಭದಾಯಕವಾಗಿಯೂ ಹಟ್ಟಿಗೊಬ್ಬರಕ್ಕಿಂತಲೂ ಹೆಚ್ಚಿನ ಆದಾಯವನ್ನು ಕೊಡತಕ್ಕದಾಗಿಯೂ ಇರುತ್ತದೆ ಒಂದು ಎಕ್ರೆ ಭೂಮಿಗೆ 120—180 ರಾತಲು ಬೇಕಾಗುವದು ಇದರ ವಿಷಯ ಹೆಚ್ಚಿನ ಮಾಹಿತಿಯನ್ನು ಮತ್ತು ತಿಳುವಳಿಕೆಯನ್ನು ಧರ್ಮಾರ್ಥವಾಗಿ ನಮ್ಮಿಂದ ಪಡೆಯಬಹುದು

ದಿ ಚಿಲಿಯನ್ಸ್ ನೈಟ್ರೇಟ್
24—7 ಕಮಿಟಿಯವರ ಕಡೆ

ಕೊಡಗಿನಲ್ಲಿ—
B P Ayapa Hon Representative Pollibetta, Coorg.

The Chilean Nitrate Committee, 6 Mission Row, Post Box 469, CALCUTTA

ಮಲೆಯೂಳ ವೈದ್ಯಶಾಲಾ.

ಮುಂಬಾಯಿ ಗವರ್ನಮೆಂಟ್ ಪ್ರಾವಿಷನ್ ಮತ್ತು ಕಂಪೆನಿ ಎಂಬ ಆಯುರ್ವೇದ ವೈದ್ಯ ಶಾಲೆಯ ಒಂದು ಶಾಖೆಯು ವೀರರಾಜೇಂದ್ರಪೇಟೆಯಲ್ಲಿ ತೆರೆದಿರುತ್ತದೆ ಇಲ್ಲಿ ಯಾವ ವಿಧದ ಕಾಯಿಲೆಯಾಗಿದ್ದರೂ ಪಂಡಿತರಿಂದ ಪರೀಕ್ಷಿಸಿ ಔಷಧಿಕೊಟ್ಟು ಗುಣಪಡಿಸಲ್ಪಡುತ್ತೆ ಔಷಧದ ಚಾರ್ಜು ಬಹಳ ಕಡಮೆ. ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ವಿವರವನ್ನು ತಿಳಿದುಕೊಳ್ಳಬಹುದು

ನಾರಾಯಣ ನಂಬೀಶ,
ಆಯುರ್ವೇದ ವೈದ್ಯರು,
52—40 ವೀರರಾಜೇಂದ್ರಪೇಟೆ.

ಕಲ್ಪತರು ತಾಯಿತ.

ಪರೀಕ್ಷೆ ಪಾಸಾಗೋಣ, ಶರೀರ ಸುಖವಾಗೋಣ, ನೌಕರಿ ಸಿಗೋಣ, ಸಂಬಳ ಹೆಚ್ಚೋಣ, ವಿವಾಹವಾಗೋಣ ಸಂತತಿಯಾಗೋಣ ವೈರಿಯಿಂದ ಜಯ, ಉದ್ಯೋಗದಲ್ಲಿ ಯಶಸ್ಸು ಸಿಗೋಣ ವ್ಯಾಪಾರದಲ್ಲಿ ಒಳ್ಳೇ ಲಾಭ ಸಿಗೋಣ, ಸಾಲ ಮುಕ್ತ ಆಗೋಣ ಭೂತ ಪಿಶಾಚ ಗ್ರಹಬಾಧೆ ಆಗದಿರೋಣ, ಪ್ರತಿಕೂಲ ಜನರ ಅನುಕೂಲವಾಗೋಣ ಇವೇ ಮತ್ತು ಬೇರೆ ಎಷ್ಟೋ ಮನೋರಥಗಳು ಇಷ್ಟವಿದ್ದಂತೆಯೇ ಆಗುವ ಅಪೇಕ್ಷೆ ಇದ್ದರೆ ಇಚ್ಛಿತಫಲ ಕೊಡುವ ಲೋಕಪ್ರಸಿದ್ಧ ಕಲ್ಪತರು ತಾಯಿತ ಧಾರಣೆಮಾಡಿರಿ, ಅಂದರೆ ಇಚ್ಛೆ ಪೂರ್ಣವಾಗುವದು ಅನುಭವದ ಹೊರತು ಖಾತ್ರಿ ಆಗಲಾರದು ತಾಯಿತ ಬೆಲೆ ರೂ ೧ ರ ಗುಣ ತೀವ್ರವಾಗಿ, ತಾಯಿತ ಬೆಲೆ ರೂ ೨ ರ ಗುಣ ಕೆಲ ದಿನಗಳಲ್ಲಿ, ತಾಯಿತ ಬೆಲೆ ರೂ ೩ ರ ಗುಣ ಸ್ವಲ್ಪ ದಿನದಲ್ಲಿ ಬೇರೆ ಗುಣಕಾರದಲ್ಲಿ ತಾಯಿತದ ಜತೆ ಪಥ್ಯಾದಿಗಳ ಚೀಟೀ ಸಿಗುವದು ವಿಳಾಸ —ವ್ಯವಸ್ಥಾಪಕರು, ಕಲ್ಪತರು ತಾಯಿತ, ಕೆ. ಎಮ್.
[52 13] ಶ್ರೀ ಸಂಕೇಶ್ವರ ಮಿ ಬೆಳಗಾಂವ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ, ಕೋ ಆಪರೇಟಿವ್ ಸೊಸೈಟೀಸ್ ಆಕ್ಟಿನ ಪ್ರಕಾರ ರಿಜಿಸ್ಟರಾಗಿದೆ.

	ರೂ
ಶೇರ್ ಬಂಡವಾಳ	50,000
ವಸೂಲಾದ ಶೇರ್ ಮೊಬಲಗು	7,720
ಒಪ್ಪೊಬಂದ ಠೇವಣಾತಿ	61,200

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು

ಒಂದು ವರ್ಷ ಮಾಯಿದೆ ಅಥವ ಹೆಚ್ಚಿನ ಮಾಯಿದೆಯ ಠೇವಣಾತಿಗಳಿಗೆ ಶೇಕಡ ನೂರಿಯಾನ ರೂ ೬-೪-೦ರ ದರದಲ್ಲಿ ಬಡ್ಡಿ ದೊರೆಯುತ್ತೆ ಕಡಿಮೆ ಮಾಯಿದೆಯ ಠೇವಣಾತಿಗಳಿಗೆ ಶೇಕಡ ನೂರಿಯಾನ ರೂ ೫ರ ಬಡ್ಡಿ ದೊರೆಯುತ್ತೆ

ಗವರ್ನ್ಮೆಂಟಾರ್ ಕೊ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟ್ಟು ಮಾಡುತ್ತಾರೆ.

ಪ್ರೆಸಿಡೆಂಟರು
ಕೊಡಂದೇರ ಕುಟ್ಟಯ್ಯನವರು, ರಾಯ್ ಬಹದ್ದೂರ್.

ಟ್ರೆಜರರ್.
ಯಂ ಭುಜಂಗರಾಯರು ಬಿ.ಎ. ಬಿ.ಎಲ್.

ಸೆಕ್ರೆಟರಿ.
ಸಿ ಎಮ್ ವೆಂಕಪ್ಪಯ್ಯನವರು,

ತಾರೀಕು, 1—7—1924.

"ಕೊಡಗು"

೧೯೨೪ನೇ ಇಸವಿ ಅಕ್ಟೋಬರ್ ತಾ. ೩೧ನೇ ಶುಕ್ರವಾರ.

ಗ್ರಾಮಾಂತರ ರಸ್ತೆಗಳು.

ರೈತರು ಸೆಸ್ಸ್ ರೂಪದಲ್ಲಿ ಡಿಸ್ಟ್ರಿಕ್ಟ್ ಬೋರ್ಡಿಗೆ ಕೊಡುವ ಕಂದಾಯದಿಂದ ಆಸ್ಪತ್ರೆಗಳು, ಶಾಲೆಗಳು ಮೊದಲಾದ ಪ್ರಯೋಜನಗಳನ್ನು ಹೊಂದುತ್ತಿರುವರು. ಆದರೆ ಸಂಸ್ಥೆಗಳೆಲ್ಲಾ ಸರಕಾರಿ ನೌಕರರಿಂದಲೇ ನಡೆಸಲ್ಪಡುವದರಿಂದ ಗ್ರಾಮಸ್ಥರು ಅವುಗಳ ಪ್ರಯೋಜನವನ್ನು ಹೆಚ್ಚು ಗಣನೆಗೆ ತಂದುಕೊಳ್ಳುವುದಿಲ್ಲ. ಆದರೆ ಗ್ರಾಮಾಂತರಗಳ ರಸ್ತೆಗಳನ್ನು ದುರುಸ್ತು ಮಾಡಿಸುವ ಕೆಲಸವು ಹೆಚ್ಚು ಗ್ರಾಮಸ್ಥರಿಂದಲೇ ನಡೆಸಲ್ಪಡುವುದರಿಂದಲೂ, ರಸ್ತೆಗಳು ಒಳ್ಳೇ ಸ್ಥಿತಿಯಲ್ಲಿದ್ದು ಅವುಗಳಿಗಾಗಿ ಗಾಡಿಗಳು ನಮ್ಮೊಂದಿಗೆ ಅಡಚಣೆ ಇಲ್ಲದೆ ಹೋಗುವುದಾದರೆ ರೈತರ ಸ್ವ ಉತ್ಪತ್ತಿಯಾದ ಭತ್ತಕ್ಕೆ ಹೆಚ್ಚಿಗೆ ಬರುವ ಕ್ರಯವು ಬರುವುದರಿಂದಲೂ ಇವುಗಳ ರಿಪೇರಿಗಾಗಿ ಖರ್ಚುಮಾಡಲ್ಪಡುತ್ತಿರುವ ಹಣವೇ ಗ್ರಾಮದವರಿಗೆ ಡಿಸ್ಟ್ರಿಕ್ಟ್ ಬೋರ್ಡಿನಿಂದ ಉಂಟಾಗುವ ಮುಖ್ಯವಾದ ಪ್ರಯೋಜನವೆಂದು ಅನೇಕ ರೈತರು ತಿಳಿದುಕೊಂಡಿರುವರು. ಆದುದರಿಂದ ಈ ದೇಶದಲ್ಲಿ ಅನೇಕರು ಡಿಸ್ಟ್ರಿಕ್ಟ್ ಬೋರ್ಡಿನ ಆಡಳಿತದಲ್ಲಿರುವ ರಸ್ತೆಗಳ ಸ್ಥಿತಿಯನ್ನು ನೋಡಿ ಡಿಸ್ಟ್ರಿಕ್ಟ್ ಬೋರ್ಡಿನ ಕಾರ್ಯಸಾಧಕತ್ವವನ್ನು ಕಂಡು ಹಿಡಿಯುವರು. ಇದು ಕೇವಲ ತಪ್ಪೆಂದು ಹೇಳಬಾಗುವುದಿಲ್ಲ. ಯಾಕೆಂದರೆ— [illegible]ತು ಕೇರಿಗಳ ಮಧ್ಯಕ್ಕಾಗಿ ಬಾಳುವ ರಸ್ತೆಗಳ ರಿಪೇರಿ ಕೆಲಸವನ್ನು ಗ್ರಾಮದವರಲ್ಲಿ ಕೆಲವರು ಕಂಟ್ರಾಕ್ಟು ಮೂಲಕ ನಡೆಸುವದಾದರೂ ಕೆಲಸಕ್ಕೆ ಸಾಕಷ್ಟು ಹಣವನ್ನು ಬೋರ್ಡಿನವರು ಕೊಡದಿದ್ದರೆ ರಸ್ತೆಗಳ ಸ್ಥಿತಿಯು ಎಂದಿಗೂ ಉತ್ತಮಗೊಳಿಸಲಿಕ್ಕಿಲ್ಲ. ಆದುದರಿಂದ ಬೋರ್ಡಿನವರೇ ರಸ್ತೆಗಳ ಸ್ಥಿತಿಗೆ ಹೆಚ್ಚು ಜವಾಬ್ದಾರರೆಂದು ಹೇಳಬೇಕಾಗಿದೆ.

ಡಿಸ್ಟ್ರಿಕ್ಟ್ ಬೋರ್ಡಿನ ಆದಾಯ ವೆಚ್ಚಗಳ ಪಟ್ಟಿಯನ್ನು ನೋಡಿದರೆ ಮೂರು ನಾಲ್ಕು ವರಷಗಳಿಗೆ ಮುಂಚೆ ಗ್ರಾಮಾಂತರ ರಸ್ತೆಗಳ ರಿಪೇರಿಗೆ ಎಂದೂ ಒಂದು ಸಾವಿರ ರೂಪಾಯಿಗಿಂತ ಹೆಚ್ಚು ಮಂಜೂರು ಮಾಡಿದಂತೆ ಕಾಣುವದಿಲ್ಲ. ಮೂರು ವರುಷಗಳಿಂದೀಚೆಗೆ ಮೂರು, ನಾಲ್ಕು ಸಾವಿರದ ವರೆಗೆ ಏರುತ್ತಾ ಬಂತು. ಕಳೆದ ಬಜೆಟ್ ಮೀಟಿಂಗಿನಲ್ಲಿ ಈ ವರುಷ ರಸ್ತೆಗಳ ರಿಪೇರಿ ಖರ್ಚಿಗಾಗಿ 9,900 ರೂಪಾಯಿ ಮಂಜೂರಾಯಿತು. ಇಷ್ಟು ದೊಡ್ಡ ಮೊಬಲಗು ಕೊಡಗಿನಲ್ಲಿ ಡಿಸ್ಟ್ರಿಕ್ಟ್ ಬೋರ್ಡು ಸ್ಥಾಪಿತವಾದಂದಿನಿಂದ ಯಾವುದು ವರುಷವೂ ಈ ಕೆಲಸಕ್ಕಾಗಿ ಕೊಟ್ಟದ್ದಿಲ್ಲ. ಇದರಿಂದ ಡಿಸ್ಟ್ರಿಕ್ಟ್ ಬೋರ್ಡಿನಲ್ಲಿರುವ ಜನರ ಪ್ರತಿನಿಧಿ ಮೆಂಬರುಗಳ ಹೋರಾಟವು ಸ್ವಲ್ಪವಾದರೂ ಫಲದಾಯಕವಾಯಿತೆಂದು ಕಂಡುಬರುತ್ತದೆ. ಆದರೆ ಈ ಮೊಬಲಗು ಈಗಕ್ಕೆ ಸಾಕಷ್ಟಾಗಿ ತೋರಿದರೂ ಕೊಡಗ ಗ್ರಾಮಗಳಲ್ಲಿರುವ ರಸ್ತೆಗಳ ಕೆಟ್ಟ ಸ್ಥಿತಿಯನ್ನು ನೋಡಿದರೆ, ಈ ಕೆಲಸಕ್ಕೆ ಸಾಲದೆಂದೇ ಹೇಳುವೆವು. ಈಗ ಮೂರು ನಾಲ್ಕು ವರುಷಗಳಿಂದ ಹೆಚ್ಚಿಸುತ್ತಾ ಬಂದಂತೆಯೇ ಬೋರ್ಡಿನವರು ಈ ಮೊಬಲಗನ್ನು ಇನ್ನು ಮುಂದಕ್ಕೂ ಹೆಚ್ಚಿಸುತ್ತಾ ಬರುವರಾಗಿ ನಂಬುತ್ತೇವೆ. ಮುಂದಿನ ವರುಷದ ಬಜೆಟ್ ಮೀಟಿಂಗು ಬರುವ ತಿಂಗಳಲ್ಲಿ ನಡೆಯುವದಾದುದರಿಂದ ಬೋರ್ಡಿನ ಮೆಂಬರುಗಳೂ ಪ್ರೆಸಿಡೆಂಟರೂ ಈ ವಿಷಯದಲ್ಲಿ ಹೆಚ್ಚಿನ ನಿಗಾ ವಹಿಸಬೇಕಾಗಿ ಆಶಿಸುತ್ತೇವೆ.

ಹಣ ಮಂಜೂರುಮಾಡುವುದೇನೋ ಬೋರ್ಡಿನವರ ಕೆಲಸವಾಗಿದೆ. ಆದರೆ ಆ ಹಣವನ್ನು ನ್ಯಾಯವಾದ ರೀತಿಯಲ್ಲಿ ಉಪಯೋಗಿಸುವುದು ಗ್ರಾಮಸ್ಥರ ಪಾಲಿಗೆ ಸೇರಿದೆ. ಕೆಲವು ವರುಷಗಳ ಹಿಂದೆ ಈ ಹಣವನ್ನು ಯಾವ ಕಂಟ್ರಾಕ್ಟುದಾರರಾದರೂ ರಿಪೇರಿ ಕೆಲಸಕ್ಕೆ ಒಪ್ಪಿಕೊಳ್ಳುವಂಥವರಿಗೆ ಕೊಡುತ್ತಿದ್ದರು. ಇಂಥಾ ಕಂಟ್ರಾಕ್ಟುದಾರರಿಗೆ ಆಯಾಯ ರಸ್ತೆಗಳಲ್ಲಿ ಏನೊಂದೂ ಹಿತಚಿಂತನೆ ಇಲ್ಲದೆ ಇರುವುದರಿಂದ ಅವರು ಲಾಭದ ಮೇಲೆ ದೃಷ್ಟಿ ಇಟ್ಟು ಕೆಲಸಗಳನ್ನು ಚೆನ್ನಾಗಿ ಮಾಡಿಸುತ್ತಿರಲಿಲ್ಲ. ಇದನ್ನು ನೋಡಿ ಇತ್ತೀಚೆಗೆ ಇಂಥಾ ಕಂಟ್ರಾಕ್ಟುಗಳನ್ನು ಆಯಾಯ ರಸ್ತೆಗೆ ಸಂಬಂಧಪಟ್ಟ ಗ್ರಾಮಸ್ಥರಿಗೇನೆ ಕೊಡುತ್ತಾ ಬರುತ್ತಿರುವರು. ಆದರೂ ಈ ವರುಷ ದೊಡ್ಡ ಹಣವಾದ ದರಿಂದ ಗ್ರಾಮದವರ ಸ್ವಾರ್ಥತ್ಯಾಗವನ್ನು ಗಣಿಸದೆ ನಿಜವಾಗಿಯೂ ಗ್ರಾಮಸ್ಥರ ಹಿತವನ್ನು ಬಯಸುವ ಮಹನೀಯರಿಗೇನೇ ಅದನ್ನು ನಂಬಿಗೆ ಕಂಟ್ರಾಕ್ಟು ಕೊಡಲ್ಪಟ್ಟಿದೆಯೆಂದು ತಿಳಿದುಬರುತ್ತದೆ. ಈ ಕಂಟ್ರಾಕ್ಟುಗಳು ಎಲ್ಲಾ ಕಡೆಗಳಲ್ಲೂ ಎಲ್ಲರಿಗೂ ತೃಪ್ತಿಯನ್ನು ಉಂಟುಮಾಡಿರುವುದಿಲ್ಲವೆಂದು ಪುಕಾರುಗಳು ಕೇಳಿಬರುತ್ತಿವೆ. ಆದ ಕಾರಣ ಕಂಟ್ರಾಕ್ಟುದಾರರೆಲ್ಲರೂ ರಸ್ತೆಗಳಿಗೆ ಸಮ್ಮಂಧಪಟ್ಟ ಗ್ರಾಮಸ್ಥರೇ ಆಗಿರುವುದರಿಂದ ಹಣಕ್ಕೆ ಸರಿಯಾದ ಕೆಲಸವನ್ನು ಮಾಡಿಸಿಕೊಳ್ಳುವುದು ರೈತರ ಕೈಯಲ್ಲಿದೆ. ಕಂಟ್ರಾಕ್ಟುದಾರರು ಗ್ರಾಮನಿವಾಸಿಗಳಾದುದರಿಂದ ಅಲ್ಪಸ್ವಲ್ಪ ಲಾಭದ ಮೇಲೆ ದೃಷ್ಟಿಯನ್ನಿಟ್ಟು ಕೆಲಸವನ್ನು ಚೆನ್ನಾಗಿ ಮಾಡಿಸದೆ ಹೋದರೆ ರಸ್ತೆಗಳ ದುರವಸ್ಥೆಯಿಂದ ಗಾಡಿಗಳು ಸರಿಯಾಗಿ ನಡೆಯದೆ ಹೋದಲ್ಲಿ ಭತ್ತದ ಧಾರಣೆಯು ಕಮ್ಮಿಯಾಗಿ ತಮಗೂ ಊರವರಿಗೂ ಉಂಟಾಗುವ ನೂರಾರು ರೂಪಾಯಿಗಳ ನಷ್ಟಕ್ಕೆ ಕಾರಣರಾಗುವರು. ಕಾಸಿಗೆ ಗಂಟುಹಾಕಿ ರುಪಾಯಿಗಳನ್ನು ಕಳಕೊಂಡ ಸಮಾಚಾರವಾಗ ಪ್ರಸಂಗವನ್ನು ಕಂಟ್ರಾಕ್ಟುದಾರರೂ ಊರವರೂ ಮರೆಯಬಾರದು. ಪ್ರತಿ ಒಂದು ರಸ್ತೆಗೂ ತಕ್ಕಷ್ಟು ದೊಡ್ಡ ಮೊಬಲಗು ದೊರಕಿರುವ ಈ ವರುಷದಲ್ಲು ರೈತರು ತಮ್ಮ ರಸ್ತೆಗಳನ್ನು ಸರಿಪಡಿಸಿಕೊಳ್ಳದೆ ಹೋದರೆ ಇನ್ನು ಮುಂದೆ ಇಂಥಾ ಅನುಕೂಲವು ದೊರಕಲಾರದೆಂಬದನ್ನು ಜ್ಞಾಪಕದಲ್ಲಿಡತಕ್ಕದ್ದು. ಇಷ್ಟೊಂದು ಚಿಕ್ಕ ವಿಷಯದಲ್ಲಿ ಗ್ರಾಮಸ್ಥರು ಒಗ್ಗಟ್ಟಾಗಿ ಕೊಟ್ಟ ಹಣವನ್ನು ನ್ಯಾಯವಾಗಿ ಉಪಯೋಗಿಸದೆ ಹೋದರೆ ಇನ್ನು ಮುಂದೆ ಹೆಚ್ಚು ಹಣ ಮಂಜೂರುಮಾಡಲು ಬೋರ್ಡಿನವರು ಹಿಂಜರಿಯುವರಲ್ಲದೆ ಊರವರು ತಮ್ಮ ಕೆಲಸವನ್ನು ಚಿಕ್ಕದಾದರೂ ಕೂಡ ನಡಿಸಿಕೊಳ್ಳಲು ಅರ್ಹರಲ್ಲವೆಂಬದನ್ನು ವ್ಯಕ್ತಪಡಿಸಿದಂತಾಗುತ್ತದೆ. ಗ್ರಾಮಾಡಳಿತದ ಕೆಲವು ಭಾಗಗಳನ್ನು ಗ್ರಾಮ ಪಂಚಾಯಿತಿಗಳನ್ನು ಏರ್ಪಡಿಸಿ ಅವುಗಳಿಗೆ ಬಿಟ್ಟುಕೊಡಬೇಕೆಂದು ಕೌನ್ಸಿಲಿನಲ್ಲಿ ಹೋರಾಡುತ್ತಿರುವ ಸಮಯದಲ್ಲು ಗ್ರಾಮನಿವಾಸಿಗಳು ಅಂಥಾ ಆಡಳಿತವನ್ನು ಕೈಕೊಳ್ಳಲು ತಮ್ಮ ಯೋಗ್ಯತೆಯನ್ನು ತೋರ್ಪಡಿಸಬೇಕಾದದ್ದು ಅಗತ್ಯವಲ್ಲವೇ.

ಕೆಲವು ಕಡೆಗಳಲ್ಲಿ ಬೋರ್ಡಿನವರು ಕೊಡುವ ಹಣದೊಂದಿಗೆ ಗ್ರಾಮಸ್ಥರೂ ಚಂದಾ ಎತ್ತಿ ಹಣ ಸಂಗ್ರಹಿಸಿ ತಮ್ಮ ರಸ್ತೆಗಳನ್ನು ದುರುಸ್ತುಮಾಡುವುದರಲ್ಲಿ ಬಹು ಉತ್ಸಾಹವನ್ನು ತೋರಿಸುತ್ತಿರುವುದು ಸಂತೋಷಕರವೆ. ಹಾಗೆ ಮಾಡಲು ಎಲ್ಲಾ ಗ್ರಾಮದವರಿಗೆ ಸಾಧ್ಯವಿಲ್ಲದಿದ್ದರೆ ಬೋರ್ಡಿನಿಂದ ಕೊಡಲ್ಪಟ್ಟ ಹಣದ ಪ್ರತಿ ಕಾಸನ್ನೂ ರಸ್ತೆಯ ರಿಪೇರಿಗೇನೇ ಉಪಯೋಗಿಸುವಂತೆ ಕಂಟ್ರಾಕ್ಟುದಾರರಿಗೆ ಊರವರು ಸಹಾಯವನ್ನು ಕೊಟ್ಟು ಮೇಲ್ವಿಚಾರ ನಡಿಸುವುದು ಪ್ರತಿಯೊಬ್ಬ ಗ್ರಾಮಸ್ಥನ ಕರ್ತವ್ಯವಾಗಿದೆ. ಹಣ ಬಟವಾಡೆ ಮಾಡುವ ಉದ್ಯೋಗಸ್ಥರು ಬೋರ್ಡುಮೆಂಬರುಗಳೂ ತಕ್ಕ ಉಸ್ತುವಾರಿ ತೆಗೆದುಕೊಳ್ಳಬೇಕೆಂದು ನಾವು ಪ್ರತ್ಯೇಕ ಹೇಳಬೇಕಾಗಿಲ್ಲ. ಎಲ್ಲರೂ ಅವರವರ ಕರ್ತವ್ಯವನ್ನು ನ್ಯಾಯವಾಗಿ ಮಾಡಲೇಬೇಕಾಗಿದೆ. ಕೆಲಸದ ಸಮಯದಲ್ಲಿ ಉದಾಸೀನರಾಗಿದ್ದು ಕೆಲಸ ಮುಗಿದ ನಂತರ ಒಬ್ಬರನ್ನೊಬ್ಬರು ದೂರಿ ಪ್ರಯೋಜನವಿಲ್ಲ. ಆದುದರಿಂದ ಮೇಲ್ವಿಚಾರಕರೂ, ಕಂಟ್ರಾಕ್ಟುದಾರರೂ, ಗ್ರಾಮಸ್ಥರೂ ಈ ವಿಷಯಕ್ಕೆ ಹೆಚ್ಚು ಗಮನ ಕೊಡಬೇಕಾಗಿ ಅಪೇಕ್ಷಿಸುತ್ತೇವೆ.

ಗತಿಸಿದ ಮಿ. ಜಿ. ಎಲ್. ನಾರಾಯಣರಾಯರು.

ಕಳೆದ ವಾರ ನಮ್ಮ ಪತ್ರಿಕೆಯು ಪ್ರಕಟವಾದನಂತರ ಮಿ ಜಿ ಯಲ್ ನಾರಾಯಣರಾಯರು ತಾ. 23 10 24ರಲ್ಲಿ ಮದ್ರಾಸಿನಲ್ಲಿ ಶಿವಾಧೀನರಾದರೆಂಬ ವ್ಯಸನಕರವಾದ ವರ್ತಮಾನವು ಬಂತು. ಇವರು ಅನಾರೋಗ್ಯದ ಕಾರಣದಿಂದ ವೀರರಾಜಪೇಟೆ ಮುನಿಸೀಫ್ ಕೆಲಸದಿಂದ ರಜ ತೆಗೆದುಕೊಂಡು ಹೋಗಿ ಸುಮಾರು ಒಂದು ತಿಂಗಳು ಆಗುವಷ್ಟರಲ್ಲಿಯೇ ಮೃತರಾದದ್ದು ಎಲ್ಲರಿಗೂ ಆಶ್ಚರ್ಯವನ್ನುಂಟುಮಾಡದೆ ಇರಲಾರದು. ಇವರು ರಜ ತೆಗೆದುಕೊಳ್ಳುವ ಮುಂಚೆಯೇ ಕೆಲವು ಕಾಲದಿಂದ ಅನಾರೋಗ್ಯದಲ್ಲಿದ್ದರೂ ಕೋರ್ಟು ಕೆಲಸಗಳನ್ನು ಎಂದಿನಂತೆ ನಡೆಸುತ್ತಿದ್ದರೆಂತ ತಿಳಿಯುತ್ತೇವೆ. ಇದರಿಂದ ಇವರ ಕರ್ತವ್ಯ ಶೀಲತೆಯು ತಿಳಿಯುತ್ತೆ.

ಇವರು ಕೊಡಗಿನಲ್ಲಿ 1895ನೇ ಇಸವಿಯಲ್ಲಿ ಲಾಯರಾಗಿ ಬಂದು 1909ನೇ ಇಸವಿಯ ವರೆಗೆ ಆ ಕೆಲಸದಲ್ಲಿ ಕೋರ್ಟಿಗೂ ಕಕ್ಷಿಗಾರರಿಗೂ ಸಂಪೂರ್ಣ ತೃಪ್ತಿಯನ್ನು ಉಂಟುಮಾಡಿದ್ದರೆಂತ ತಿಳಿಯುತ್ತೇವೆ. ಮಡಿಕೇರಿಯಲ್ಲಿ 1909ನೇ ಇಸವಿಯಿಂದ 1923ನೇ ಇಸವಿಯ ವರೆಗೆ 14 ವರುಷ ಮಾಡಿದ ಜಡ್ಜಿ ಕೆಲಸದಲ್ಲಿ ಸಂಪೂರ್ಣ ತೃಪ್ತಿ ಕೊಟ್ಟಿದ್ದಾರೆ. ಇವರು ನಿಷ್ಪಕ್ಷಪಾತಿಗಳಾಗಿದ್ದರು. ಬುದ್ಧಿ ಚುರುಕು ಬಹಳ ಚೆನ್ನಾಗಿತ್ತು. ಸಾಕ್ಷಿಯರ ಹೇಳಿಕೆಯನ್ನೂ ವಾಗ್ವಾದಗಳ ಸಾರಾಂಶಗಳನ್ನೂ ಬಹು ಸುಲಭವಾಗಿ ತಿಳಿದುಕೊಂಡು ಫೈಸಲ್ ಕೊಡುತ್ತಿದ್ದರು. ಕಾನೂನು ತಿಳುವಳಿಕೆಯೂ ಚೆನ್ನಾಗಿ ಇತ್ತು. ಇವರ ಮರಣದಿಂದ ಒಳ್ಳೇ ಜಡ್ಜಿಯೊಬ್ಬರನ್ನು ದೇಶವು ಕಳಕೊಂಡಿದೆ.

ಇವರಿಗೆ ಈಗ 53 ವರುಷ ಮಾತ್ರ ಪ್ರಾಯವಾಗಿತ್ತು. ಈ ಅಕಾಲ ಮರಣಕ್ಕೆ ನಾವು ವಿಷಾದಿಸುತ್ತೇವೆ. ಅವರ ಆತ್ಮಕ್ಕೆ ಶಾಂತಿ ಇರಲಿ.

ಅಸಹಕಾರದ ಮಹತ್ವ.

(ಮಹಾತ್ಮಗಾಂಧಿಯವರ ಲೇಖನದ ಅನುವಾದ.)

ನಾನು ಸ್ವರಾಜ್ಯಪಕ್ಷದವರೆಡೆಗೂ ಲಿಬರಲ್ ಪಕ್ಷದ ಕಡೆಗೂ ಪ್ರೀತಿಯನ್ನು ತೋರಿಸಿದ ಬಗ್ಗೆ ಕಾಂಗ್ರೆಸ್ ಕಾರ್ಯಕ್ರಮದಲ್ಲಿ ವ್ಯತ್ಯಾಸವಾಗಬಾರದೆಂತ ಹೇಳುವವರ (ಅಸಹಕಾರಿಗಳ) ಸ್ನೇಹ ಬಿಟ್ಟಿರುವದರಿಂದ ನನ್ನಲ್ಲಿ ಆಗುವ ವ್ಯತ್ಯಾಸಗಳಿಂದ ಇವರಿಗೆ ಗಾಬರಿಯಾಗಿದೆಯೆಂತ ಒಬ್ಬರು ಸ್ನೇಹಿತರು ನನ್ನಲ್ಲಿ ಹೇಳಿದರು. ಅಸಹಕಾರಿಗಳ ಕಡೆಗೆ ನನ್ನ ಅಭಿಪ್ರಾಯವೇನಿದೆ ಎಂಬದನ್ನೂ ಮತ್ತು ನನ್ನಲ್ಲಿ ಆಗುವ ವ್ಯತ್ಯಾಸಗಳಿಗೆ ಕಾರಣವನ್ನೂ ವಿವರಿಸಬೇಕೆಂತ ಅದೇ ಸ್ನೇಹಿತರು ಹೇಳುತ್ತಾರೆ. ನಾನು ಪ್ರಾರಂಭಿಸಿದ ಅಸಹಕಾರದ ಸತ್ಯಾಗ್ರಹದ ಮಹತ್ವವನ್ನು ಸಹ ವಿವರಿಸಬೇಕೆಂತ ಹೇಳುತ್ತಾರೆ.

ನನ್ನ ಅಭಿಪ್ರಾಯದಲ್ಲಿ ಏನೂ ವ್ಯತ್ಯಾಸವಾಗದೆ ಇದೆಯೆಂತ ಮೊದಲೇ ಹೇಳಬೇಕಾಗಿದೆ. ಅಹಿಂಸಾಯುಕ್ತ ಅಸಹಕಾರ ಮತ್ತು ಅದರ ಸಂಗಡಲೇ ಬರುವ ಐದು ತರದ ಬಹಿಷ್ಕಾರಗಳನ್ನೂ ನಾನು ಸಂಪೂರ್ಣ ನಂಬಿದ್ದೇನೆ. ದೇಶವೆಲ್ಲಾ ಅಹಿಂಸಾ ತತ್ವವನ್ನು ತಿಳಿದುಕೊಂಡಿಲ್ಲವೆಂತಲೂ ಆದ್ದರಿಂದ ಅಸಹಕಾರವನ್ನು ಸಹ ತಿಳಿದುಕೊಂಡಿಲ್ಲವೆಂತಲೂ ನನಗೆ ಈಗ ಹಗಲು ಬೆಳಕಿನಂತೆ ಪ್ರತ್ಯಕ್ಷವಾಯಿತು. ಜುಹುವಿನಲ್ಲಿರುವಾಗ ಗ[illegible]ರಲ್ಲಿ ಅದ್ದರಿಂದ ಅಸಹಕಾರದ ಮುಖ್ಯ ಅಂಶವಾದ ಅಹಿಂಸೆಯನ್ನು ಬಿಟ್ಟು ಅಸಹಕಾರವನ್ನು ಇಟ್ಟುಕೊಂಡರೆ ದೇಶಕ್ಕೆ ಕೆಡಕಾಗುತ್ತೆಂತಲೂ ನನಗೆ ಹಾಗೆಯೇ ಸ್ಪಷ್ಟವಾಯಿತು. ದೇಶವನ್ನೆಲ್ಲಾ ಪಂಗಡಗಳಾಗಿ ವಿಭಾಗಿಸಿಬಿಟ್ಟಿರುವದರಿಂದ ಈಗಾಗಲೇ ಅದು ಕೆಡಕನ್ನುಂಟುಮಾಡಿದೆ. ಅಸಹಕಾರವನ್ನು ರಾಷ್ಟ್ರೀಯ ಕಾರ್ಯಕ್ರಮದಿಂದ [illegible] ಬಾಕಿಯಲ್ಲಿಡಬೇಕು.

ಅಸಹಕಾರದ ಮೂಲವು ಸತ್ಯಾಗ್ರಹದಲ್ಲಿ ಇದೆ. ಸತ್ಯಾಗ್ರಹವೆಂದರೆ ಪ್ರೀತಿ. ಪ್ರೀತಿಯೋ ಆಕರ್ಷಣ, ಅನ್ಯೋನ್ಯ ಸಂಬಂಧ ಎಂಬ ಯಾವ ಹೆಸರಿನಿಂದ ಕರೆದರೂ ಪ್ರಪಂಚವನ್ನು ನಡಿಸುತ್ತಿರುವದು. ನಾಶಕ್ಕೆ ಎದುರಾಗಿ ಜೀವವು ಹೋರಾಡುತ್ತಿದೆ. ಸದಾಕಾಲದಲ್ಲು ನಾಶವಾಗುತ್ತಿದ್ದರೂ ಪ್ರಪಂಚವು ನಡೆಯುತ್ತಲೇ ಇದೆ. ಅಸತ್ಯಕ್ಕಿಂತ ಸತ್ಯಕ್ಕೇ ಜಯ. ಪ್ರೀತಿಯು ದ್ವೇಷವನ್ನು ಜಯಿಸುತ್ತದೆ. ಸೈತಾನನ ಮೇಲೆ ಯಾವಾಗಲೂ ದೇವರಿಗೆ ಜಯವಿದೆ. ನಾನು ಅಭಿಪ್ರಾಯಪಟ್ಟ ಅಸಹಕಾರವು ಸರ್ವರನ್ನೂ ಒಟ್ಟು ಗೂಡಿಸುವ ಶಕ್ತಿಯಾಗಿರಬೇಕು. ಕಾಂಗ್ರೆಸ್ಸಿನವರೊಳಗೇ ಮತಭೇದಗಳೂ, ಇದಕ್ಕಿಂತ ಹೆಚ್ಚಾಗಿ ಹಿಂದೂ ಮುಸಲ್ಮಾನ್ ಹೋರಾಟಗಳೂ ಈಗಿನ ಅಸಹಕಾರವು ಚದರಿಸುವ ಕೆಲಸವಮಾಡಿದೆ ಎಂಬುದನ್ನು ತೋರಿಸುತ್ತದೆ. ಅಸಹಕಾರವನ್ನು ಬಾಕಿಯಲ್ಲಿಟ್ಟು ಸಂಪೂರ್ಣಸೋತು ಅಸಹಕಾರದ ಮಹತ್ವವನ್ನು ತೋರಿಸಲು ನಾನು ಪ್ರಯತ್ನಿಸಬೇಕಾಗಿದೆ. ಹಾಗೆಮಾಡಲು ಕಾರ್ಯಕ್ರಮ ವ್ಯತ್ಯಾಸಮಾಡಬಾರದೆನ್ನುವವರ (ಅಸಹಕಾರಿಗಳ) ಪ್ರೀತಿಯನ್ನು ಸಂಪಾದಿಸಲು ಪ್ರಯತ್ನಿಸಬೇಕಾಗಿಲ್ಲ. ಅಹಿಂಸೆಯನ್ನೂ ಮತ್ತು ಅದರಿಂದ ಯಾವದೆಲ್ಲಾ ಸಂಭವಿತವಾಗಿದೆಯೆಂಬದು ಅವರಿಗೆ (ಅಸಹಕಾರಿಗಳಿಗೆ) ಗೊತ್ತೇ ಇದೆ. ಅವರು ಬೇರೆ ವಿಷಯವನ್ನು ಬಿಟ್ಟು ದೇಶದ ಜೀವನಕ್ಕೆಂದು ಕಾರ್ಯಕ್ರಮದಲ್ಲಿ ಸಂಪೂರ್ಣ ನಂಬಿಗೆಯನ್ನಿಟ್ಟವರಾಗಿದ್ದಾರೆ. ಆ ಕಾರ್ಯಕ್ರಮದಿಂದ ಒಂದು ಎಳ್ಳಷ್ಟಾದರೂ ನಾನು ಬಿಟ್ಟುಕೊಡುವದಿಲ್ಲ. ನಾನುಮಾಡುವ ಪ್ರತಿಕೆಲಸವೂ ಅದಕ್ಕೆ ಬಲಕೊಡುವದಾಗಿದೆ.

ಹಿಂದೂ ಮುಸಲ್ಮಾನ್ ಒಗ್ಗಟ್ಟಿನ ವಿಷಯವು ಬಹಳ ಪ್ರಾಮುಖ್ಯವಾದುದು. ಅದಕ್ಕೆ ಒಟ್ಟು ದೇಶದಭಾರವನ್ನೇ ಹಾಕಬೇಕಾಗಿದೆ. ಜಯಿಸಲಿಕ್ಕೆ ನಾವು ತಗ್ಗಬೇಕು. ನಮ್ಮ ತತ್ವಕ್ಕೆ ಅಸಹಕಾರದ ಪ್ರತಿ ಅಂಶವನ್ನೂ ಇಟ್ಟುಕೊಂಡು ಅಸಹಕಾರದಲ್ಲಿ ನಂಬಿಕೆಯಿಲ್ಲದವರು ದೇಶದ ಬೆಳವಣಿಗೆಯ ಕಾರ್ಯಕ್ರಮಕ್ಕೆ ಸಹಾಯಕರಾಗಲು ನಾವು ಅನುಕೂಲ ಮಾಡಬೇಕು. ಕಳೆದ ನಾಲ್ಕು ವರ್ಷಗಳು ನಮ್ಮ ದಾರಿಯನ್ನು ತೋರಿಸಿಕೊಟ್ಟಿವೆ. ತುಂಬಾ ಪ್ರಯೋಜನ ಹೊಂದಿದ್ದೇವೆ. ತುಂಬಾ ನಷ್ಟಹೊಂದಿಯೂ ಇದ್ದೇವೆ. ಜಯಿಸಿದ್ದನ್ನು ಉಳಿಸಿಕೊಂಡು ಕಳಕೊಂಡದ್ದನ್ನು ಪುನಹ ಪಡೆಯಬೇಕು. ಸಮುದಾಯದ ಜನರ ಎಚ್ಚರಿಕೆಯೇ ಅತಿ ದೊಡ್ಡಲಾಭ. ಇದನ್ನು ಉಳಿಸಿಕೊಳ್ಳಬೇಕು. ಅನ್ಯೋನ್ಯ ಜಗಳಗಳ ಉದ್ಭವವೇ ಅತಿ ದೊಡ್ಡನಷ್ಟ. ಶೀಘ್ರದಲ್ಲಿ ಇದನ್ನು ಸರಿಪಡಿಸಿಕೊಳ್ಳಬೇಕು. ಅಸಹಕಾರದ ಭೀಕರ ಸ್ವಭಾವವನ್ನು ಬಿಟ್ಟ ವಿನಹ ಒಗ್ಗಟ್ಟನ್ನು ಉಳಿಸಿಕೊಳ್ಳಲು ಈಗ ಸಾಧ್ಯವಿಲ್ಲ. ಕಾರ್ಯಕ್ರಮ ವ್ಯತ್ಯಾಸವಾಗಬಾರದೆನ್ನುವವರಲ್ಲಿ ಏನಾದರೂ ಸಾರವಿದೆಯಾದರೆ ಸ್ವಾರ್ಥವನ್ನು ಸಂಪೂರ್ಣಮರೆತು ಮೌನ ಕೆಲಸದಲ್ಲಿ ನಿರತರಾಗಬೇಕು. ಪದ್ಧತಿಗಾಗಿಯಾಗಲೀ, ಶಕ್ತಿಗಾಗಿಯಾಗಲೀ [illegible]ಗಾಗಿಯಾಗಲೀ ಕೆಲಸಮಾಡಬಾರದು. ಫಲ ಸಿಕ್ಕಲೀ ಸಿಕ್ಕದಿರಲೀ ಮೌನವಾಗಿ ಕೆಲಸಮಾಡುತ್ತಿರಬೇಕು. ಸ್ವರಾಜ್ಯ ಪಕ್ಷದವರು, ಲಿಬರಲ್ ಪಕ್ಷದವರು ಪುನಹ ಕಾಂಗ್ರೆಸ್ಸಿಗೆ ಸೇರುವದಾದರೆ, ಅವರು ಬಿಟ್ಟರೆ ಇವರು ಜೀವಿಸಬೇಕಷ್ಟೆ. ಇದನ್ನು ಹಾಗೆಮಾಡಲು ಸಾಧ್ಯವಿದೆಯೆಂತ ತೋರಿಸಲು ನಾನು ಕಾರ್ಯತಃ ಮಾಡಿಯೇ ತೋರಿಸುವದು ಉತ್ತಮ. ಸ್ವರಾಜ್ಯ ಪಂಗಡದವರಿಗೂ, ಲಿಬರಲ್ ಪಂಗಡದವರಿಗೂ ನನ್ನಿಂದ ಸಾಧ್ಯವಿರುವಷ್ಟು ಬಿಟ್ಟುಕೊಡುವುದರಲ್ಲೇ ಉದ್ಯುಕ್ತನಾಗಿದ್ದೇನೆ. ಕಾರ್ಯಕ್ರಮ ವ್ಯತ್ಯಾಸವಾಗಬಾರದೆನ್ನುವವರಿಗೆ ನಾನು ಬಿಟ್ಟುಕೊಡಬೇಕಾದದ್ದು ಏನೂ ಇಲ್ಲ. ಯಾಕೆಂದರೆ ಅವರಿಗೂ ನನಗೂ ಅಭಿಪ್ರಾಯ ಭೇದವೇ ಇಲ್ಲವೆಂತ ತಿಳಿದುಕೊಂಡಿರುವರಲ್ಲವೇ? ನಾನು ಪಾರ್ಟಿಮನುಷ್ಯನಾಗಬಾರದು. ಹಾಗೆ ಕಾರ್ಯಕ್ರಮ ವ್ಯತ್ಯಾಸವಾಗಬಾರದೆನ್ನುವವರೂ ಆಗಬೇಕು. ಸ್ವರಾಜ್ಯಪಂಗಡದವರ ಬಹು ಕಷ್ಟದ ಕೆಲಸಕ್ಕೆ ನಾವು ಅಡ್ಡಿಮಾಡಬಾರದು. ನಮ್ಮನ್ನು ಕೆಡುಕಾ

ಹೋರಾಟವಾದ ನಿಸಹ ಅಸಹಕಾರಿಗಳಿಗೆ ಹೋರಾಟ ನಿನ್ನೆ ಪರಿಷ್ಟನಂತ ಅದುದೇಗಳಲ್ಲಿ ಸ್ವರಾಜ್ಯ ಸಂಗಡದವರಿಗೆ ಸಾಹಸ ದಿಂದ ಮನಃಪೂರ್ತಿಯಾಗಿ ಗೌರವದೊಡನೆ ಬೆಂಬಲ ಕೊಡಬೇಕು. ಅಸಹಕಾರಿಗಳಿಗೆ ಉದ್ಯೋಗವಾಗಲೀ ಶಕ್ತಿಯಾಗಲೀ ಇರಬೇಕಾದರೆ ಓಟಿನ ಬಲದಿಂದ ಆಗಬಾರದು. ತಮ್ಮ ಸೇವೆಯ ಬಲದಿಂದಮಾತ್ರ ಆಗಬೇಕು. ಓಟುಕೊಡುವ ಪದ್ಧತಿಯು ಇಷ್ಟೇ ಇರುತ್ತೆ. ಸಂಶಯವಿಲ್ಲ. ಆದರೆ ಅದು ಬರುವುದಾದರೆ ಕೇಳದೇನೇ ಬರಬೇಕು. ಸೇವೆಗೆ ಶಕ್ತಿಯಾಗಲಿ (ಪವರ್) ಉದ್ಯೋಗವಾಗಲೀ ದೊಡ್ಡ ಸ್ಥಿತಿಯಾಗಲೀ ಬೇಕಾಗಿಲ್ಲವೆಂತ ತಿಳಿಯುವುದು ಸುಲಭವಲ್ಲ. ನಾವು ಪ್ರತಿಯೊಬ್ಬರು ಜನಾಂಗದ ಬರೇ ಸೇವಕರಾಗಿರ ಬೇಕೆಂತ ನನ್ನ ಅಪೇಕ್ಷೆ. ಸ್ವರಾಜ್ಯ ಸಂಗಡದವರೂ, ಲಿಬರಲ್‌ಗಳೂ ಇತರರೂ ಸಹ ತಮ್ಮ ಸಹಾಯವನ್ನು ಕೇಳುವಂತೆ ಅಸಹಕಾರಿಗಳು ನಡೆದುಕೊಳ್ಳಬೇಕು.

ಅವರು ಹಾಗೆ ಮಾಡುತ್ತಾರೋ ಇಲ್ಲವೋ, ನಾನು ನನ್ನ ತತ್ವಕ್ಕೆ ಸರಿಯಾಗಿ ನಡೆದುಕೊಳ್ಳಬೇಕು. ಅಖಿಳ ಭಾರತೀಯ ಕಾಂಗ್ರೆಸ್ ಕಮಿಟಿ ಮೀಟಿಂಗಿನ್ಲ್ಲಿ ದೇವರು ನನ್ನನ್ನು ತೂಗಿನೋಡಿ ನನ್ನ ತೂಕ ಸಾಲಲಿಲ್ಲವೆಂತ ಗೊತ್ತಾಯಿತು. ಸ್ವರಾಜ್ಯ ಸಂಗಡದವರೊಂದಿಗೆ ಹೋರಾಡಬೇಕೆಂತ ನನ್ನ ಹೆಮ್ಮೆಯು ಹೇಳಿತು, ಆದರೆ ನನ್ನಲ್ಲಿ ಸದಾ ಇರುವ ಸೇವಾ ಬುದ್ಧಿಯು ಸ್ವರಾಜ್ಯ ಸಂಗಡದೊಂದಾಗಲೀ ಲಿಬರಲ್‌ಗಳ ಸಂಗಡವಾಗಲೀ ಇಂಗ್ಲೀಷ್‌ಜನರ ಸಂಗಡವಾಗಲೀ ಹೋರಾಡಬೇಡವೆಂತ ಹೇಳುತ್ತೆ. ನಾನು ಹೇಳಿಕೊಳ್ಳುವಂತೆಯೇ ಇದ್ದೇನೆಂತ ಅಾದರೆ ಸರ್ವರ ಸ್ನೇಹಿತ ಮತ್ತು ಸೇವಕನಾಗಿದ್ದೇನೆಂತ ನಾನು ಪ್ರತ್ಯಕ್ಷ ಪಡಿಸಬೇಕಾಗಿದೆ. ದೇವರ ಸೇವೆಯೇ ಆದ್ದರಿಂದ ಮನುಷ್ಯಜಾತಿಯ ಸೇವೆಯೇ ನನ್ನಮತ. ಹಿಂದೀಯನಾಗಿ ಹಿಂದೂಸ್ಥಾನದ ಸೇವೆಯನ್ನು ಹಿಂದೂವಾಗಿ ಹಿಂದೂಸ್ಥಾನದ ಮುಸಲ್ಮಾನರ ಸೇವೆಯನ್ನು ನಾನು ಮಾಡದೆ ಹೋದರೆ ದೇವರ ಸೇವೆಯನ್ನಾಗಲೀ ಮನುಷ್ಯ ಜಾತಿಯ ಸೇವೆಯನ್ನಾಗಲೀ ಮಾಡಲು ಸಾಧ್ಯವಿಲ್ಲ. ಪ್ರತಿಫಲವಿಲ್ಲದ ಸೇವೆಯೆಂದರೆ ಶುದ್ಧಪ್ರೀತಿ. ನನ್ನಿಂದ ಎಷ್ಟುಪ್ರೀತಿಯನ್ನು ತೋರಿಸಲು ಸಾಧ್ಯವಿದೆಯೋ ಅದನ್ನೆಲ್ಲಾ ಈ ಮುಂದಿನ ವರ್ಷದಲ್ಲಿ ತೋರಿಸಲಿಕ್ಕೆ ನಾನು ನನ್ನಿಂದ ಸಾಧ್ಯವಿದ್ದಷ್ಟು ಪ್ರಯತ್ನಿಸುತ್ತೇನೆ.

ಕೊಡಗು ಲೆಜಿಸ್ಲೇಟಿವ್ ಕೌನ್ಸಿಲಿನ ಪ್ರೊಸೀಡಿಂಗ್ಸ್.

ಕೊಡಗು ಡಿಸ್ಟ್ರಿಕ್ಟಿಗೆ ಮ. ರಾ. ಎ. ಡಬ್ಲ್ಯು. ಚಂಗ ಪ್ಪನವರನ್ನು ಡಿಸ್ಟ್ರಿಕ್ಟ್ ಏಜಂಟರಾಗಿ ನೇಮಿಸಿದ್ದೇವೆ. ಸಬ್ ಏಜಂಟರುಗಳಾಗಿ ಚಟುವಟಿಕೆಯಿಂದ ಕೆಲಸಮಾಡಲು ಇಷ್ಟ ವುಳ್ಳವರು ಪೊಲ್ಲಂಡ ಅಮ್ಮತ್ತಿಯಲ್ಲಿರುವ ಎ. ಡಬ್ಲ್ಯು. ಚಂಗಪ್ಪನವರಿಗೆ ಬರೆಯತಕ್ಕದ್ದು.

T. Saravanam & Co.,
Chief Agents,
Mysore Agricultural Dairy
farm Co., Ltd.,
MYSORE.

4—4

ARMS & AMMUNITION MART.

Mahomedally-Noorbhoy.

337, Abdul Rehman, Street, near Crawford Market, BOMBAY.

Telegraphic Address:—"SHOOTER" Bombay.

[24-9] Please write for latest Catalogues.

ಸಂಪತ್ತಿಯ ಸಾಧನಗಳು.

ಆಯಾ ಒಂದುಗಳೇ ಸಂಪತ್ತಿಯು ಅಸ್ಥಿರ ಚಾಕರಿ ಯಲ್ಲಿರದೆ ನಿಮ್ಮ ಭೂಮಿಯಲ್ಲಿಯೇ ಅಡಗಿರುವದು ಅದನ್ನು ಶೋಧಿಸಿ ತೆಗೆಯಲು ಕಿರ್ಲೋಸ್ಕರ ವ್ಯವಸಾ ಯ ಮುಟ್ಟುಗಳೇ ಯೋಗ್ಯವಾದ ಸಾಧನಗಳು.

ಲಕ್ಷಾವಧಿ ರೈತರು ಕೂಡಿ ಅನುಭವ ತೆಗೆದುಕೊಂ ಡಿರುವರು. ಭೂಮಿಯತಕ್ಕ ತರತರದ ನೇಗಿಲುಗಳೂ ಗಾಣಗಳೂ ದೊರೆಯುತ್ತವೆ. ಕಬ್ಬಿನ ಗಾಣವು ಒಂದು ಗಂಟೆಗೆ ೪೦೦ ಪೌಂಡು ಕಬ್ಬನ್ನು ಹಿಂಡಿ ಹಿಸ್ಕುತ್ತದೆ.

"ಕೊ" ಎಂಬ ಕ್ಯಾಟಲಾಗನ್ನು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್,
16-19 ಕಿರ್ಲೋಸ್ಕರವಾಡಿ, ಜಿಲ್ಲಾ, ಸಾತಾರಾ.

ನೋಟೀಸ್.

"ಕೊಡಗು" ಪತ್ರಿಕೆಯ ಹಳೆ ಚಂದಾಹಣ ಕೊಡಲಿ ಕ್ಕಿರುವವರೂ, ಹೊಸ ಚಂದಾದಾರರಾಗ ಬೇಕೆಂದಿರುವವರೂ, ಮತ್ತು ಶೇರುಹಣ ಸಲ್ಲಿಸಲಿಕ್ಕಿರುವವರೂ ದಯವಿಟ್ಟು ವೀರರಾಜಪೇಟೆಯಲ್ಲಿರುವ ನಮ್ಮ ಕಂಪೆನಿಯ ಏಜಂಟರವರ ಆಫೀಸಿನಲ್ಲಿ ಪಾವತಿಮಾಡಬೇಕಾಗಿ ಕೋರಿಕೆ.

ಮಡಿಕೇರಿ, ಮೇನೇಜರ್,
15-9-24. 'ಕೊಡಗು' ಲಿಮಿಟೆಡ್.

ಪ್ರಕಟಣೆ.

ಒಂದು ಕಡೆ ಇಂಗ್ಲೀಷಿನಲ್ಲಿಯೂ, ಇನ್ನೊಂದು ಕಡೆ ಕನ್ನಡದಲ್ಲಿಯೂ ಪ್ರಿಂಟಾಗಿರುವ ಕಾಫಿ ತೋಟದ ಆಳುಗಳ ಪ್ರಿಂಟಾದ ಕಂಟ್ರಾಕ್ಟ, ಗ್ರಿಮೆಂಟ್ ಫಾರಮುಗಳೂ ಮತ್ತು ಅಪ್ಲಿಕೇಶನ್ (complaint) ಫಾರಂಗಳೂ ಸಹ ಮಾರಾ ಟಕ್ಕೆ ದೊರೆಯುವವು. ಬೇಕಾದವರು 'ಕೊಡಗು' ಆಫೀಸಿನಿಂ ದ ಪಡೆಕೊಳ್ಳಬಹುದು.

ಮಡಿಕೇರಿ,
17-9-24. ಮೇನೇಜರ್.

Health is Wealth.

WANTED all to improve health strength and vitality and thus save our nation from physical degeneracy. Send half-anna stamp and get 23 specimen photographs with full particulars from

Director, Physical Culture,
P. O. BASAVANAGUDI,
Bangalore City

Printed & published by Kodandera Appayya, R.B., Chairman, Board of Directors, at "Kodagu" Press, Mercara for "Kodagu" Ltd.

Reg. No. M. 1550.

If not delivered please return to
"KODAGU" OFFICE, MERCARA.

ಕೊಡಗು.

ಸತ್ಯೇನ ಧರ್ಮೇಣ ವಿದ್ಯಾ ನೀತಿ ಪ್ರಯುಕ್ತಯಾ || ಏಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ ||

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಎಡಿಟರ್ ಪಂದ್ಯಂಡ ಐ. ಬೆಳ್ಯಪ್ಪ.

ಸಂಪುಟ ೪] ಕೊಡಗು, ಸನ ೧೯೨೪ನೇ ಇಸವಿ ನವಂಬರ್ ತಾರೀಕು ೭ನೆಯ ಶುಕ್ರವಾರ [ಸಂಚಿಕೆ ೨೨

ಆರೋಗ್ಯ ಚಂದ್ರಿಕೆ.

ಸಂಪಾದಕರು [illegible] ರಾವ್

ಆರೋಗ್ಯ [illegible] ಕ ಒಂದ ವಿಷಯದಲ್ಲಿ [illegible] ದೂರಿಯ ವ ದಕ್ಕಾಗಿ ಏರ್ಪಡಿಸಿದ ಒಂದು ಸ್ವತಂತ್ರ ಮಾಸಪತ್ರಿಕೆ ಈ ಮಾಸಪತ್ರಿಕೆಯು [illegible] ಇಂಗ್ಲಿಷ್ ಮಾಸಪತ್ರಿಕೆಯ ಕನ್ನಡ ಪ್ರತಿಯಾದ ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧರಾದ [illegible] ದ ಪಂಡಿತರ ಲೇಖನಗಳು ಅಗಿಂದಾಗ್ಗೆ [illegible]

ಆರೋಗ್ಯ [illegible] ಹೇಳಿಯದಾಗದೆ ಪುನಃ ಪುನಃ [illegible] ಗಳಾಗಿರುವುದು ಆರೋಗ್ಯ ಚಂದ್ರಿಕೆಯನ್ನು ತರಿಸಿ ಬೈಂಡ್ ಮಾಡಿಸಿ ಇಟ್ಟುಕೊಂಡರೆ ಎಲ್ಲರಿಗೂ ಉಪಯುಕ್ತವಾಗುವ ಅಮೂಲ್ಯವಾದ ಗ್ರಂಥವಾಗುವುದು. [illegible] ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ 1-8-0 ಬಿಡಿ ಪತ್ರಿಕೆ 1ಕ್ಕೆ 0-2-0 ಹಿಂದಿನ ಸಂಚಿಕೆಗಳು ಕೂಡಾ ದೊರೆಯುವವು.

ಪತ್ರವ್ಯವಹಾರಕ್ಕೆ 'ಆರೋಗ್ಯ ಚಂದ್ರಿಕೆ' 323,
[illegible] ಮದ್ರಾಸ್

ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿಯ ಜೀವವಿಮೆಯ ಕಂಪೆನಿ, ಲಿಮಿಟೆಡ್.

ಹೆಡ್ ಆಫೀಸು, ಬೊಂಬಾಯಿ.

ಹಿಂದುಸ್ಥಾನದಲ್ಲಿ ಕಳೆದ ೫೦ ವರ್ಷಗಳಿಂದಲೂ ಜೀವವಿಮೆಯ ಕಸುಬನ್ನು ನಡೆಸಿದ ಸ್ವದೇಶೀಯ ಜೀವವಿಮೆ ಸಂಘಗಳಲ್ಲಿ ಅತ್ಯಂತ ದೊಡ್ಡದೂ ಮತ್ತು ಭದ್ರವಾದದ್ದೂ ಆದ "ಓರಿಯಂಟಲಿನ" ಜೀವವಿಮೆ ಪತ್ರಗಳಿಂತಲೂ ಉತ್ತಮವಾದ ಅಸ್ತಿ ಬೇರೆ ದೊರೆಯಲಾರದು.

ಈಗಾಗಲೇ ವಿಮೆ ಸಂಬಂಧವಾದ ಮೊತ್ತ 8,00,00,000 ಕೈಯಲ್ಲಿ [illegible]

ಕಸ್ತು ಜಮಾ [illegible] ಹಣ	6,00,00,000
ವಾರ್ಷಿಕ ಉತ್ಪತ್ತಿ	1,00,00,000

ಇಷ್ಟು ಭದ್ರವಾದ [illegible] ಪತ್ರ ತೆಗೆದುಕೊಳ್ಳಲಿಚ್ಛಿಸುವವರು ಇದರ ವಿಷಯ ಹೆಚ್ಚಿನ ಸಂಗತಿ ತಿಳಿಯಬೇಕೆಂದಿರುವವರು ದಯವಿಟ್ಟು ಈ ಕೆಳಗಿನವರಿಗೆ ಬರೆದುಕೊಳ್ಳುವದು

ಕೆ. ಪಿ. [illegible]ನವರು,
ಓರಿಯಂಟಲ್ ಏಜನ್ಸೀ ಆಫೀಸು,
ವೀರರಾಜಪೇಟೆ. ದಕ್ಷಿಣ ಕೊಡಗು.

24—21

"ಕೊಡಗು"

ರಾಜಕೀಯ, ವಿದ್ಯಾ, ಕೃಷಿ, ವೃತ್ತಿ, ವಿಜ್ಞಾನ, ಮತ್ತು ನೀತಿ ಸಂಬಂಧ ವಿಷಯಗಳಿಂದೊಡಗೂಡಿದ [illegible] ಪತ್ರಿಕೆ

1 ಪ್ರವರ್ಷಕ್ಕೆ [illegible] 'ಕೊಡಗು' ಮಡಿಕೇರಿ, ಈ ವಿಳಾಸಕ್ಕೆ [illegible] 2 ಲೇಖನಗಳನ್ನು ಸಂಪಾದಕರು [illegible] ಈ ವಿಳಾಸಕ್ಕೆ ಕಳುಹಿಸಬೇಕು [illegible] ಪತ್ರಿಕಾಕರ್ತರು [illegible] ದ ವಾರ್ತೆಗಳು [illegible] ಹೆಸರು ವಿಳಾಸ [illegible] ಕೈಲವು ದೊರೆಯ[illegible] ಪ್ರಕಟಿಸಲ್ಪಡುವವು 5. ಪ್ರಕಟನಕ್ಕಾಗದ [illegible] ಕಳುಹಿಸುವ ಜವಾಬ್ದಾರಿಕೆಯನ್ನು ಸಂಪಾದಕರು ವಹಿಸಿಕೊಳ್ಳುವದಿಲ್ಲ

ಪ್ರಕಟಣೆಗಳು.

ಅತ್ಯಂತ ಸುಲಭವಾಗಿ ಪ್ರಕಟಿಸಲ್ಪಡುತ್ತವೆ. ಹೆಚ್ಚು ಸಂಗತಿಗಳನ್ನು ಈ ಕೆಳಗಿನವರಿಗೆ ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,
"ಕೊಡಗು" ಆಫೀಸ್, ಮಡಿಕೇರಿ.

ಅಪೂರ್ವ! ಹೊಸ ಪುಸ್ತಕ!! ಅಪೂರ್ವ!!!

ಶಿಶು ವೈದ್ಯ ಸಂಜೀವಿನೀ.

ಕನ್ನಡಿಗರಿಗೆ ಇಂಥಾ ವೈದ್ಯ ಸಂಹಿತೆಯು ಇದ ವರೆಗೆ ಸಿಗುವ ಹಾಗಿಲ್ಲ! ಅದಕ್ಕಾಗಿ ಇದನ್ನು ಎಲ್ಲಾ ಆಯುರ್ವೇದದ ಆಧಾರದಿಂದ ಪ್ರಕಟಿಸಿದ್ದೇನೆ. ಇದರಲ್ಲಿ ಸ್ತ್ರೀಪುರುಷರ ದೇಹತತ್ವ, ವಿವಾಹ ದಾಂಪತ್ಯ ಸುಖ ಸಾತ್ವಿಕ ಧರ್ಮ, ಗರ್ಭಿಣಿಯರ ರೋಗ ನಿದಾನ, ಚಿಕಿತ್ಸೆ ಉಪಚಾರ, ಸಪ್ರಸವೋಪಾಯಗಳು, ಪ್ರಸವವಿಧಿ ದಾಯಿಯ ಕರ್ತವ್ಯ ಶಿಶುಪರಿಚರ್ಯಾ ಶಿಶುಗಳ ಸಕಲ ರೋಗ ಚಿಕಿತ್ಸೆ, ಹಾಗೂ ಎಲ್ಲಾ ರೋಗಾದಿಗಳ ಶುದ್ಧಿ ಕ್ರಮ ಮತ್ತು ಜನ್ಮಗಳ ಮಾಡುವ [illegible] ಧಾತು ಪುಷ್ಟಿ ಔಷದಿಗಳು ಇವೆಲ್ಲ ಶಾಸ್ತ್ರೀಯ ಮತ್ತು ಅನುಭವವಾಗಿ ವಿವರಿಸಲ್ಪಟ್ಟಿದೆ. ಈ ಪುಸ್ತಕ ಕೇವಲ ದೊಡ್ಡದು. ಇದರಲ್ಲಿ ಹೆಂಗಸರು ಹುಡುಗರು ಸಹ ಸುಲಭವಾಗಿ ತಯಾರು ಮಾಡುವಂಥಾ ೫೦೦ ಔಷಧಗಳಿಗಿಂತ ಹೆಚ್ಚಾಗಿರ ನನ್ನ ಈ ಪುಸ್ತಕದ ಕ್ರಯವು ಅದರಲ್ಲಿರ [illegible] ಒಂದೊಂದು ಔಷಧದ ಬೆಲೆಯಾಗಲಾರದೆಂಬುದನ್ನು ನೀವೇ ತಿಳಿದುಕೊಳ್ಳುವಿರಿ!! ಈ ಪುಸ್ತಕವನ್ನು ಕೊಂಡುಕೊಳ್ಳುವ ಪ್ರತಿ ಮನುಷ್ಯನೂ ಖಂಡಿತವಾಗಿ ಒಬ್ಬ ವೈದ್ಯನೇ ಆಗುತ್ತಾನೆ. ಕ್ರಯ ಪುಸ್ತಕಕ್ಕೆ ೨-೮-೦

ಸಿಕ್ಕುವ ವಿಳಾಸ:—ಭಾರತಿ ಬುಕ್ ಡಿಪೊ,
179 ೪೯೧, ನಗರ್ತರಪೇಟೆ, ಬೆಂಗಳೂರು ಸಿಟಿ.

ಕೃಷಿತೋ ನಾಸ್ತಿ ದುರ್ಭಿಕ್ಷಃ

NITRATE OF SODA (15—16 per cent.) Nitrogen,
"The best and cheapest form of Nitrogen highly concentrated and immediately available. Nothing like it to make plants grow."

ವ್ಯವಸಾಯದಲ್ಲಿ [illegible] ಹೆಚ್ಚಿನ ಉತ್ಪನ್ನ ಬೆಳೆಗಳಿಗೆ ನಾರಜನಕ (Nitrogen) ಒದಗಿಸಿಕೊಡುವದಾಗಿರುತ್ತದೆ 'ನೈಟ್ರೇಟ್ ಆಫ್ ಸೋಡಾ' ಎಂಬ ರಸಾಯನಿಕ ಗೊಬ್ಬರವು (15—16%) ಅಂದರೆ ಹೊಸಗೊಬ್ಬರದಲ್ಲಿಯಕ್ಕಿಂತ ಮೂವತ್ತು ಪಾಲು ಜಾಸ್ತಿ ನಾರಜನಕ ಧರಿಸಿದ್ದಾಗಿದ್ದು ಬೆಳೆಗಳಿಗೆ ಪಕ್ಕನೆ ಒದಗುವಂತೆಯೂ ಇರುತ್ತದೆ. ಇದರ ಉಪಯೋಗದಿಂದ ಫಸಲು ಬಹಳ ಅಭಿವೃದ್ಧಿಯಾಗುವುದು. ಹಿಡಿಕುಂಬ ರಸಾಯನಿಕ ಗೊಬ್ಬರವು [illegible] (ಹುಕ್ಕ) ಹೆಂಬ ಹಟ್ಟಿಗೊಬ್ಬರಕ್ಕೆ ಸಮವಾಗಿರುತ್ತದೆ. ಈ ರಸಾಯನಿಕ ಗೊಬ್ಬರವು ಅನೇಕ ದೇಶದ [illegible] ತಯಾರಿಸಿ [illegible] ಹಳ ದೂರದೇಶದಿಂದ ಬರಮಾಡಬೇಕಾದ್ದರೂ ಅದು ಪಳ್ಳಿ ಮೂಲಗಳ ತೋಟಗದ್ದೆ ಪೈರು ಕೃಷಿಗಳಿಗೆ ಉಪಯೋಗಿಸಲು ಹಟ್ಟಿ ಸುಲಭವಾಗಿಯೂ ಹಟ್ಟಿ ಗೊಬ್ಬರಕ್ಕಿಂತಲೂ ಬಹಳ ಹೆಚ್ಚಿನ ಆದಾಯವನ್ನು ಕೊಡುವದಾಗಿಯೂ ಇರುತ್ತದೆ. ಒಂದು ಎಕ್ರೆ ಭೂಮಿಗೆ 120—160 ಪಾಊಂಡು ಬೇಕಾಗುವದು. ಇದರ ವಿಷಯ ಹೆಚ್ಚಿನ ಮಾಹಿತಿಯನ್ನು ಮತ್ತು ತಿಳುವಳಿಕೆಯನ್ನು ದರ್ಖಾಸ್ತಾಗಿ ನಮ್ಮಿಂದ ಪಡೆಯಬಹುದು

ದಿ ಚಿಲಿಯನ್ ನೈಟ್ರೇಟ್
24—8 ಕಮಿಟಿಯವರ ಕಡೆ

ಕೊಡಗಿನಲ್ಲು—
R P Ayapa Hon. Representative Pollibetta, Coorg.

The Chilean Nitrate Committee, 6 Mission Row, Post Box 409, CALCUTTA

ಮಲೆಯೂಳ ವೈದ್ಯಶಾಲಾ.

ಮಲಬಾರಿನ ನಂಬೀಶನ್ ಮತ್ತು ಕಂಪೆನಿ ಎಂಬ ಆಯುರ್ವೇದ ವೈದ್ಯ ಶಾಲೆಯ ಒಂದು ಶಾಖೆಯು ವೀರರಾಜೇಂದ್ರಪೇಟೆಯಲ್ಲಿ ಇರುತ್ತಿರುತ್ತದೆ. ಇಲ್ಲಿ ಯಾವ ವಿಧದ ಕಾಯಿಲೆಯಾಗಿದ್ದರೂ ಪಂಡಿತರಿಂದ ಪರೀಕ್ಷಿಸಿ ಔಷಧಿಕೊಟ್ಟು ಗುಣಪಡಿಸಲ್ಪಡುತ್ತದೆ. ಔಷಧದ ಚಾರ್ಜು ಬಹಳ ಕಡಿಮೆ. ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ವಿವರವನ್ನು ತಿಳಿದುಕೊಳ್ಳಬಹುದು.

ನಾರಾಯಣ ನಂಬೀಶನ್,
ಆಯುರ್ವೇದ ವೈದ್ಯರು,
52—41 ವೀರರಾಜೇಂದ್ರಪೇಟೆ.

ಕಲ್ಪತರು ತಾಯಿತ.

ಪರೀಕ್ಷೆ ಪಾಸಾಗೋಣ ಶರೀರ ಸುಖವಾಗೋಣ, ನೌಕರಿ ಸಿಗೋಣ, ಸುಖಳ ಹೆಣ್ಣೋಣ, ವಿವಾಹವಾಗೋಣ ಸಂತತಿಯಾಗೋಣ, ಕೈಕೊಂಡ ಉದ್ಯೋಗದಲ್ಲಿ ಯಶಸ್ಸು ಸಿಗೋಣ, ವ್ಯಾಪಾರದಲ್ಲಿ ಬಹಳ ಲಾಭ ಸಿಗೋಣ, ಸಾಲಮುಕ್ತ ಆಗೋಣ, ಭೂತ ಪಿಶಾಚ ಗ್ರಹಭಾದೆ ಆಗದಿರೋಣ, ಪ್ರತಿಕೂಲ ಜನರು ಅನುಕೂಲವಾಗೋಣ, ಇವೇ ಮತ್ತು ಬೇರೆ ಎಷ್ಟೋ ಮೊತುಗಳು ಇಚ್ಛೆಯಂತೆಯೇ ಆಗುವ [illegible]ಕ್ಷೆ ಇದ್ದರೆ ಇಚ್ಛಿತಫಲ ಕೊಡುವ ಲೋಕಮಾನ್ಯ ಕಲ್ಪತರು ತಾಯಿತ ಯಾವಾಗಲೂ ಹತ್ತಿರ ಇಡಿರಿ, ಅಂದರೆ ಇಚ್ಛೆ ಪೂರ್ಣವಾಗುವದು. ಅನುಭವದ ಹೊರತು ಖಾತ್ರಿ ಆಗಲಾರದು. [illegible] ರೂ. [illegible] ಗುಣ ತೀವ್ರವಾಗಿ, ತಾ [illegible] ರೂ. [illegible] ಗುಣ [illegible] ದಿವಸಗಳಲ್ಲಿ, ತಾ [illegible] ರೂ. [illegible] ಗುಣ [illegible] ಪ್ಪ ವಿ. ಪಿ. ಖರ್ಚು ಬೇರೆ. ಗುಣಬಾರದಲ್ಲಿ ತಾಯಿತದ [illegible] ವಜಾಹೋಗಿ ಬಾಕೀ ಸಿಗುವದು.

ವಿಳಾಸ —ಮ್ಯಾನೇಜರ ಕಲ್ಪತರು ತಾಯಿತ, ಕೆ. ಎಮ್.
[52 14] ಪೋ. ಸಂಕೇಶ್ವರ ಜಿ. ಬೆಳಗಾಂವ.

The shopping centre of Coorg, Spencer & Co. Ltd., Mercara and Pollibetta.

The cheapest House for high class wines, stores, arms and ammunition and everything you want

Price lists sent post free on application

Trial under solicited.

SALE OF SANDALWOOD

On 24th Novembr at noon 380 tons of cleansed sandalwood will be sold in small lots in public auction at Fraserpet. For particulars apply to V G Darrington, Esquire, I F S, Acting Chief Forest Officer, Coorg, Mercara.

3—3

"ಕೊಡಗು"

ಸ॥ ೧೯೨೪ನೇ ಇಸವಿ ನವಂಬರ್ ತಾ. ೭ನೇ ಶುಕ್ರವಾರ.

ವೈಸರಾಯರ ಹೊಸ ಖಾನೂನು.

ಕಳೆದ ತಿಂಗಳು 25ರ ಬೆಳಿಗ್ಗೆ ಕಲ್ಕತ್ತಾ ಪಟ್ಟಣವು ಘಕ್ಕನೆ [illegible]ಸ್ಮಯಭರಿತವಾಯಿತು. [illegible] ರಾತ್ರಿ [illegible]ಗ್ಗೆ [illegible] ಯೋಚಿಸದಂಥ [illegible] ಆ ದಿನ ಬೆಳಿಗ್ಗೆ [illegible]ಯಿತು. [illegible] ಪೋಲೀಸಿನವರ [illegible] ಕಂಡುಬಂದ [illegible] ಕಾಂಗ್ರೆಸ್ [illegible] ಸ್ವರಾಜ್ಯ [illegible] ಪೋಲೀಸಿನವರ [illegible]ಬಲ್ಪಟ್ಟವು. [illegible] 72 ಜನರು ಸೆರೆ ಹಿಡಿಯಲ್ಪಟ್ಟರು. [illegible] ಎಕ್ಸಿಕ್ಯುಟಿವ್ [illegible] ಸಾದ [illegible] ಚಂದ್ರಬೋಸರವರೂ, ಕೆಲವು [illegible] ಮೆಂಬರುಗಳೂ [illegible] ಒಯ್ಯಲ್ಪಟ್ಟವರಲ್ಲಿ ಕೆಲವರು. [illegible]ಟ್ಟದ ಸುತ್ತಮುತ್ತಲೂ ಹೀಗೆಯೇ ದಸ್ತಗಿರಿ ನಡೆಯಿತು. [illegible] ದಸ್ತಗಿರಿಗಳು ವಾರಂಟಿಲ್ಲದೆ ಮಾಡಲ್ಪಟ್ಟವಾಗಿವೆ! ಹೀಗೆ ಹಿಡಿದು ಜೇಲಿಗೆ ಹಾಕಿದವರನ್ನು ಸ್ಥಳೀಯ ಸರಕಾರದವರು ನೇಮಿಸುವ ಮೂರು ಕಮೀಷನರುಗಳು ವಿಚಾರಿಸಿ ಶಿಕ್ಷಿಸತಕ್ಕದ್ದು. ಇದೀಗ ಹೊಸ ಕಾನೂನು. ಇದರ ಸಂಗಡ ದಂಗೆ ಕೋರರೆಂದು ಸೆರೆ ಹಿಡಿಯಲ್ಪಟ್ಟವರನ್ನು ವಿಚಾರವಿಲ್ಲದೆ ಜೈಲಿನಲ್ಲಿಡಬಹುದೆಂಬ 1818ನೆ ಇಸವಿಯ 3ನೆ ರೆಗ್ಯುಲೇಶನನ್ನು ಅಲ್ಲಿ ಉಪಯೋಗಿಸಲು ಪ್ರಾರಂಭಿಸಿರುವರು. ಇಂಡಿಯಾದ ವೈಸರಾಯರಾಗಿರುವ ಲಾರ್ಡ್ ರೀಡಿಂಗ್‌ರವರು ಅದೇ ದಿನ ಬೆಳಿಗ್ಗೆ ಈ ಹೊಸ ಕಾನೂನನ್ನು ಪ್ರಕಟಿಸಿ ಜಾರಿಗೆ ತರಿಸಿರುವರು. ಈ ಕಾನೂನು ಹೊರಬಿದ್ದ ದಿನವೇ ಇಂಥಾ ಮುಖ್ಯ ದಸ್ತಗಿರಿಗಳು ನಡೆಯಲ್ಪಟ್ಟದ್ದು ಯಾರನ್ನು ತಾನೆ ಆಶ್ಚರ್ಯಗೊಳಿಸದೆ ಇರುವುದು?

ಈ ಕಾನೂನನ್ನು ಪ್ರಕಟಿಸಿದಾಗ್ಯೆ ವೈಸರಾಯಿ ಪ್ರಭುಗಳು ತಮ್ಮ ಕಾರಣಗಳನ್ನು ದೀರ್ಘವಾಗಿ ವಿವರಿಸಿರುವರು. 'ಬಂಗಾಳದಲ್ಲಿ ರಾಜದ್ರೋಹದ ಮತ್ತು ಅನಾಯಕತ್ವದ ಸಂಘಗಳು ಪ್ರಬಲವಾಗಿವೆ. ಈ ಸಂಘಗಳು ಬಹು ಗುಟ್ಟಿನಲ್ಲೇ ಕೆಲಸ ಮಾಡುತ್ತಿವೆ. ಸರಕಾರದ ಮೇಲೆ ಅವರಿಗಿರುವ ದ್ವೇಷವನ್ನು ಸರಕಾರಿ ಉದ್ಯೋಗಸ್ಥರನ್ನು ಕೊಲ್ಲುವುದರಲ್ಲಿ ಕಳೆಯಲು ಪ್ರಾರಂಭಿಸಲಿಕ್ಕಿರುವರು. ಈಗಾಗಲೆ ಒಬ್ಬ ವಿದ್ಯರ್ ಬೆಟ್ಟಿ ವ್ಯಾಪಾರಿಯನ್ನು ಬಾಂಬು ಹೊಡೆದು ಕೊಂದಿರುವರು. ಈ ಅನಾಯಕತ್ವದ ಚಳವಳಿಯು ಬಹು ವರುಷಗಳಿಂದ ಬಂಗಾಳದಲ್ಲಿ ವಿಸ್ತಾರವಾಗುತ್ತಾ ಇದೆ. ಈಗ ಅದು ಸಹಿಸಲಾರದಷ್ಟು ಪ್ರಬಲವಾಗುವಂತಿದೆ. ಸರಕಾರದವರು ಇದನ್ನು ಗಣನೆಗೆ ತೆಗೆದುಕೊಳ್ಳದೆ ಸುಮ್ಮನಿದ್ದರೆ ಸರಕಾರಕ್ಕೂ ದೇಶದ ಶಾಂತ ಜನರಿಗೂ ಎಂದಿಗೂ ಸುರಕ್ಷಿತ ಇರಲಾರದು. ಆದುದರಿಂದ ಈ ಚಳವಳಿಯು ತಲೆ ಎತ್ತದಂತೆ ಮಾಡಲು ರಾಜ ಕಂಟಕರೆಂದು ಕಂಡು ಬರುವವರನ್ನು ವಾರಂಟಿಲ್ಲದೆ ದಸ್ತಗಿರಿ ಮಾಡುವ ಮತ್ತು ವಿಚಾರವಿಲ್ಲದೆ ಸೆರೆಯಲ್ಲಿಡುವ ಕಾನೂನನ್ನು ಪಟ್ಟನೆ ಜಾರಿಗೆ ತಾರದೆ ನಿರ್ವಾಹವಿಲ್ಲ' ವೆಂದು ಮೊದಲಾಗಿ ಸೂಚಿಸಿರುವರು.

ದೇಶದಲ್ಲಿ ಶಾಂತಿ ಇರಬೇಕಾದರೆ ಅನಾಯಕತ್ವ ಚಳವಳಿಯ ಬಲ ಮುರಿದು, ಅದನ್ನು ನಾಶಪಡಿಸಬೇಕಾದದ್ದು ನಿಜವೆಂದು ಎಲ್ಲರೂ ಒಪ್ಪತಕ್ಕದ್ದಾಗಿದೆ. ಬಂಗಾಳದಲ್ಲಿ ರಾಜಕಂಟಕರ ಸಂಘಗಳು ಇವೆಯೆಂಬುದಾಗಿ ಮಿ॥ ಸಿ. ಆರ್. ದಾಸ್‌ರವರು ಹೇಳಿರುವರೆಂದು ಸರಕಾರದವರು ಸೂಚಿಸಿರುವರು. ಆದರೆ ತಾನು ಹೇಳಿರುವ ಕಾಯಿಲೆಯನ್ನು ಮಾತ್ರ ಸರಕಾರದವರು ಒಪ್ಪಿಕೊಂಡಿರುವರೇ ಹೊರತು, ತಾನು ಸೂಚಿಸಿರುವ ಚಿಕಿತ್ಸೆಯನ್ನು ಅವರು ಗಣನೆಗೆ ತೆಗೆದುಕೊಂಡಿರುವುದಿಲ್ಲವೆಂದು ಮಿ॥ ದಾಸ್‌ರವರ ಪುಕಾರು. ಇದು ನಿಜವೆಂದೇ ತೋರುತ್ತದೆ. ದಂಗೆಕೋರರನ್ನೂ ರಾಜಕಂಟಕರನ್ನೂ ಅಡಗಿಸುವದು ಸರಕಾರದವರ ಕರ್ತವ್ಯವಾದರೂ ಇಷ್ಟು ಘಕ್ಕನೆ ಇಂಥಾ ಕಠಿಣವಾದ ಕಾನೂನನ್ನು ಜಾರಿಗೆ ತಂದದ್ದು ನ್ಯಾಯವಲ್ಲವೆಂದು ಅನೇಕ ಮುಂದಾಳುಗಳು ತಮ್ಮ ಅಭಿಪ್ರಾಯಗಳನ್ನು ಸೂಚಿಸಿರುವರಲ್ಲದೆ ವೈಸರಾಯರ ಈ ಜುಲೋಂಸ್ವರೂಪದ ಕಾನೂನನ್ನು ನಿಷೇಧಿಸಿ ಬರೆದಿರುವರು. ಈಗಾಗಲೇ ಬಂಗಾಳದ ಎಲ್ಲಾ ನಗರಗಳಲ್ಲೂ ಹಿಂದೂ ದೇಶದ ಅನೇಕ ಕಡೆಗಳಲ್ಲೂ ಪಬ್ಲಿಕ್ ಮೀಟಿಂಗ್‌ಗಳು ನಡೆದು ಹೊಸ ಕಾನೂನನ್ನು ಬಂಗಾಳದ ದಸ್ತಗಿರಿಯನ್ನೂ ಖಂಡಿಸಿ ಠರಾವುಗಳನ್ನು ಪಾಸು ಮಾಡಿರುವರು. ನವಂಬರು 1ನೆ ದಿನ ಬಂಗಾಳದಲ್ಲೆಲ್ಲಾ ಹರತಾಳವನ್ನು ಆಚರಿಸಿದ್ದರು.

ಈ ಕಾನೂನಿನ ಮೇರೆ ನಿಜವಾದ ರಾಜಕಂಟಕರನ್ನು ಮಾತ್ರವಲ್ಲ, ರಾಜದ್ರೋಹಿಗಳೆಂದು ಸರಕಾರದ ಉದ್ಯೋಗಸ್ಥರು ಸಂಶಯಪಡುವವರನ್ನೆಲ್ಲಾ ವಾರಂಟಿಲ್ಲದೆ ದಸ್ತಗಿರಿ ಮಾಡುತ್ತಿರುವುದಾಗಿರುವುದರಿಂದ ಈ ಅಧಿಕಾರದ ಬಲದಿಂದ ಪೋಲೀಸಿನವರು ಕೊಡಬಹುದಾದ ಕಡಕು ಇಷ್ಟೆಂದು ಹೇಳಲಾಗುವುದಿಲ್ಲ. ಸ್ವಾತಂತ್ರ್ಯವನ್ನು ಪ್ರೀತಿಸಿ ತನ್ನ ಮನೋಭಿಪ್ರಾಯವನ್ನು ಮರೆಮಾಚದೆ ಸೂಚಿಸುವವರು ಎಷ್ಟೇ ನ್ಯಾಯಶೀಲರೂ, ಪ್ರಮಾಣಿಕರೂ ಆದರೂ ಕೂಡ ಅಂಥವರು ಏನೊಂದೂ ವಿಚಾರವಿಲ್ಲದೆ ಈ ಕಾನೂನಿಗೆ ತುತ್ತಾಗುವ ಸಂಭವವಿದೆ. ಈಗಾಗಲೇ ಸೆರೆಹಿಡಿಯಲ್ಪಟ್ಟಿರುವ ಯಸ್. ಚಂದ್ರಬೋಸರವರೂ, ಕೆಲವು ಕೌನ್ಸಿಲು ಮೆಂಬರುಗಳೂ ಇದಕ್ಕೆ ದೃಷ್ಟಾಂತವಾಗಿದೆ. ದೇಶದವರ ಮೇಲೆ ಕೆಲವು ಉದ್ಯೋಗಸ್ಥರಿಗೆ ಪೂರ್ತಿ ಅಧಿಕಾರ ಕೊಟ್ಟಂತಾಗಿದೆ. ಅವರು ತಮ್ಮ ಮನಸ್ಸಿಗೆ ಇಚ್ಛೆ ನಡಿಸುವ ಅನುಕೂಲವಿದೆ. ಇದು ಯಾರಿಗೂ ಸಮಂಜಸವಾಗಲಾರದು.

ಹಿಂದೀಯರಿಗೆ ತಮ್ಮ ದೇಶದ ಆಡಳಿತದಲ್ಲಿ ಜವಾಬ್ದಾರಿಯನ್ನು ಹೆಚ್ಚಿಸುತ್ತಾ ಬರಬೇಕೆಂಬ ಇರಾದೆಯಿಂದ ನಿರ್ಮಿಸಿರುವ ನ್ಯಾಯಾಧಿಕಾರಿಕ ಸಭೆಗಳ ಅಭಿಪ್ರಾಯವನ್ನು ಕೇಳದೇನೇ ವೈಸರಾಯರು ಇಂಥಾ ಕಠಿಣ ಕಾನೂನನ್ನು ಜಾರಿಗೆ [illegible] ಇಂಥಾ ಸಭೆಗಳಿಂದ ಪ್ರಯೋಜನವಿಲ್ಲವೆಂದು [illegible] [illegible] ಬಂಗಾಳದಲ್ಲಿ [illegible] ದ ಇಂಥಾ [illegible] ಹುಟ್ಟಿದ್ದುದಾದರೆ ಸರಕಾರದವರು [illegible] ಅನಾಯಕ [illegible] ಆಲೋ[illegible] ಈ ಸಂಘಗಳನ್ನು ಅಡಗಿಸುವ ಪ್ರಯತ್ನ [illegible].

ಅದಲ್ಲದೆ [illegible] ಬಂಗಾಳ [illegible] ಸರಾಗವಾದ [illegible] ಅಸ್ತಿಯಾಗಿರುವ ಸ್ವರಾಜ್ಯ [illegible] ಪರ ಬಲ ಮುರಿಯಲಿಕ್ಕಾಗಿಯೇ ಈ ವೇಳೆಯಲ್ಲಿ ಈ ಕಾನೂನಿಗೆ ಸರಕಾರದವರು ಕೈ ಇಕ್ಕಿರುವರೆಂದೂ, ಈಗ ನಡೆದಿರುವ ದಸ್ತಗಿರಿಯಿಂದ ಇದು ಪ್ರತ್ಯಕ್ಷವಾಗುತ್ತದೆಂದೂ ಅನೇಕ ಧುರೀಣರು ಅಭಿಪ್ರಾಯವನ್ನಿತ್ತಿರುವರು. ಇಷ್ಟರ ವರೆಗೆ ಯಾವ ಸರಕಾರದವರೂ ರಾಜಕಂಟಕರನ್ನು ದಬ್ಬಾಳಿಕೆಯಿಂದ ನಿಗ್ರಹಿಸುವುದರಲ್ಲಿ ಜಯಶೀಲರಾಗಿರುವದಿಲ್ಲವೆಂಬುದು ಚರಿತ್ರೆಯಿಂದ ಸ್ಪಷ್ಟವಾಗಿದೆ. ಆದುದರಿಂದ ಬ್ರಿಟಿಷ್ ಸರಕಾರದವರು ಬಲಿಷ್ಠರೆಂಬ ಕಾರಣದಿಂದ ಬಲಹೀನವಾದ ಇಂಡಿಯಾದಲ್ಲಿರುವ ಅನಾಯಕತ್ವ ಚಳವಳಿಯನ್ನು ತಗ್ಗಿಸಲು ದಬ್ಬಾಳಿಕೆಯನ್ನು ಕೈಕೊಳ್ಳುವುದು ಪ್ರಯೋಜನಕರವಾಗಲಿಕ್ಕಿಲ್ಲ. ಬದಲು ಜನರಲ್ಲಿ ಅನಾಯಕ ಸ್ಥಿತಿಯು ಹರಡಿ ಪ್ರಬಲವಾಗುವುದು. ದಬ್ಬಾಳಿಕೆಯನ್ನು ಜಾರಿಗೆ ತರುವವರ ಮೇಲೆ ಪ್ರಜೆಗಳಿಗೆ ದ್ವೇಷವು ಹೆಚ್ಚುವುದು. ಇದರ ಬದಲು ಈ ಅನಾಯಕತ್ವ ರೋಗದ ಕಾರಣವನ್ನು ಕಂಡುಹಿಡಿದು ಅದಕ್ಕೆ ತಕ್ಕ ಚಿಕಿತ್ಸೆಯನ್ನು ಮಾಡುವುದೇ ಉತ್ತಮದಾರಿಯು. ಪರರ ಕೈಕೆಳಗೆ ಇರದೆ ತಮ್ಮ ದೇಶದಲ್ಲಿ ತಮಗೆ ಸ್ವಾತಂತ್ರ್ಯವಿರಬೇಕೆಂಬುದೇ ಈ ಕಾಯಿಲೆಯ ಮುಖ್ಯ ಕಾರಣವೆಂದು ಬೇರೆ ವಿವರಿಸಿ ಹೇಳಬೇಕಾಗಿಲ್ಲ. ಆದುದರಿಂದ ಹೆಚ್ಚು ಹೆಚ್ಚಿನ ಸುಧಾರಣೆಗಳನ್ನು ಕೊಡುತ್ತಾ ಬಂದರೆ ಈ ಕಾಯಿಲೆಯು ತಾನಾಗಿಯೇ ವಾಸಿಯಾಗುತ್ತಾ ಬರುವದರಲ್ಲಿ ಸಂಶಯವಿಲ್ಲ.

ರಾ॥ ಸಾ॥ ಪಾಂಡಂಡ ಅಪ್ಪಚ್ಚನವರು.

ಕೊಡಗಿನ ಜನಸಮುದಾಯದ ಕೆಲಸದಲ್ಲಿ ಕೈಹಚ್ಚಿದ ವೃದ್ಧ ಮಹನೀಯರು ಒಬ್ಬರನಂತರ ಒಬ್ಬರು ಯಮನ ಪಾಶಕ್ಕೆ ಒಳಗಾಗುತ್ತಿರುವುದು ವ್ಯಸನಕರವಾದ ವಿಷಯವಾಗಿದೆ. ಇಂಥವರಲ್ಲಿ ಒಬ್ಬರಾದ ರಾವ್ ಸಾಹೇಬ ಪಾಂಡಂಡ ಅಪ್ಪಚ್ಚನವರು ಈಗ ಎರಡು ವರುಷಗಳಿಂದ ಅನಾರೋಗ್ಯದಲ್ಲಿದ್ದು ಕೆಲವು ವೇಳೆಗಳಲ್ಲಿ ಕಾಯಿಲೆಯು ಬಹಳ ಜೋರಾಗಿ ಒಂದೆರಡು ಕಠಿಣ ಕಂಟಕಗಳನ್ನೂ ಕಳೆದರು. ಆದರೆ ಈ ತಾರೀಕು 3ರಲ್ಲು ಸಂಭವಿಸಿದ ಕಂಟಕವು ನಿವಾರಿಸಲಾರದಾಗಿತ್ತು. ಆ ದಿನ ಬೆಳಿಗ್ಗೆ ಇವರು ತನ್ನ ಮಡಿಕೇರಿ ಭವನದಲ್ಲು ಪರಲೋಕವನ್ನೈದಿದರು.

ಇವರು ತನ್ನ ಯೌವ್ವನವನ್ನು ಸರಕಾರಿ ಉದ್ಯೋಗದಲ್ಲಿ ಕಳೆದು ಪಿಂಚಿನ್ ಪಡೆದರೂ ಕೂಡ, ಉದ್ಯೋಗದ ಸಮಯದಲ್ಲಿ ಇವರು ತನ್ನ ಸ್ವಂತ ಆಸ್ತಿ ಸಂಪಾದನೆಯ ವಿಷಯ ಅಲಕ್ಷ್ಯ ಮಾಡಲಿಲ್ಲ. ಸರಕಾರಿ ನೌಕರಿಯಲ್ಲಿದ್ದಾಗಲೇ ಬಿಡು ಸಮಯದಲ್ಲಿ ಬಹಳ ಕಷ್ಟಪಟ್ಟು ಕೆಲಸ ಮಾಡಿ ಸ್ವಂತ ಆಸ್ತಿಯನ್ನು ಏಲಮಾಡಿಕೊಂಡರು. ಈ ಆಸ್ತಿಯು ಅವರ ವಿಶ್ರಾಂತಿ ಕಾಲವಾದ ವೃದ್ಧಾಪ್ಯದಲ್ಲು ಒಳ್ಳೇ ಉತ್ಪತ್ತಿಯನ್ನು ಕೊಡುತ್ತಿತ್ತು. ಐಶ್ವರ್ಯವಂತರ ವರ್ಗಕ್ಕೆ ಸೇರಿದ ಇವರು ತನ್ನ ಧನಾರ್ಜನೆಯನ್ನು ಸ್ವಂತ ಪ್ರಯೋಜನಕ್ಕಾಗಿ ಮಾತ್ರ ಉಪಯೋಗಿಸಿಕೊಳ್ಳಲಿಲ್ಲ. ಇವರ ಉದಾರಬುದ್ಧಿಯ ವಿಷಯ ಕೆಲವು ತಿಂಗಳುಗಳ ಹಿಂದೆ ವಿವರವಾಗಿ ಬರೆದಿದ್ದೆವು. ಅದನ್ನು ಸಂಕ್ಷೇಪವಾಗಿ ಹೇಳುವದಾದರೆ, ಯುದ್ಧದ ಸಮಯದಲ್ಲು ಎರಡುಸಾವಿರ ರೂಪಾಯಿ ಖರ್ಚುಮಾಡಿ ಸುಂಟಿಕೊಪ್ಪದಲ್ಲಿ ನ ಶಾಲೆಯನ್ನು ಕಟ್ಟಿಸಿದರು. ಒಂದೆರಡು ವರುಷಗಳ ಹಿಂದೆ ಮಡಿಕೇರಿ ಆಸ್ಪತ್ರೆಯ ಪ್ರಯೋಜನಕ್ಕಾಗಿ ಒಂದುಸಾವಿರ ರೂಪಾಯಿ ಕೊಟ್ಟದ್ದಲ್ಲದೆ ಕಳೆದ ವರುಷ ಜನೋಪಕಾರದ ಕೆಲಸಕ್ಕೆ ಉಪಯೋಗಿಸುವಂತೆ ನಾಲ್ಕುಸಾವಿರ ರೂಪಾಯಿಗಳನ್ನು ಸ್ಥಳೀಯ ಸರಕಾರಕ್ಕೆ ಕೊಟ್ಟರು. ಸರಕಾರದವರು ಇವರು ಮಾಡಿದ ಪರೋಪಕಾರ ಕೆಲಸಗಳನ್ನು ಮೆಚ್ಚಿ ಚಕ್ರವರ್ತಿಯವರ ವರ್ಧಂತಿ ದಿನವಾದ ಕಳೆದ ಮೇ ತಿಂಗಳು 23ರಲ್ಲಿ ರಾವ್ ಸಾಹೇಬ್ ಬಿರುದನ್ನು ಇವರಿಗೆ ದಯಪಾಲಿಸಿದರು. ಇವರ ಅಸ್ವಸ್ಥದ ದೆಸೆಯಿಂದ ಈ ಸನ್ನದನ್ನು ಇಷ್ಟರವರೆಗೆ ಕೊಡಲು ಅನುಕೂಲವಾಗದ್ದರಿಂದ ಮರಣದ ದಿನ ಕೊಡಲ್ಪಟ್ಟಿತ್ತೆಂದು ತಿಳಿಯುತ್ತೇವೆ.

ರಾ॥ ಸಾ॥ ಅಪ್ಪಚ್ಚನವರ ಜನಸಮುದಾಯಕ್ಕೆ ಧನ ಸಹಾಯಮಾತ್ರವಲ್ಲ. ತನು ಸಹಾಯವನ್ನು ಸಹ ಮಾಡಿದರು. ಇವರು ದೀರ್ಘಕಾಲ ಜಮೀನುದಾರರ ಸಂಘದ ಖಜಾಂಚಿಯಾಗಿದ್ದು ಸಂಘಕ್ಕೆ ಪೂರ್ತಿ ಸಹಾನುಭೂತಿಯನ್ನು ತೋರಿಸಿದರು. ಅನಾರೋಗ್ಯದಕಾರಣ 1922ರಲ್ಲು ಈ ಖಜಾಂಚಿಯನ್ನು ಬಿಟ್ಟುಬಿಟ್ಟರು. ಇವರ ಉತ್ಸಾಹವನ್ನು ಮೆಚ್ಚಿ ದೇಶದವರು ಇವರನ್ನು 1921ನೇ ಇಸವಿಯಲ್ಲು ಮಡಿಕೇರಿಯಲ್ಲು ನಡೆದ ಸಂಘದ ಕಾನ್‌ಫರೆನ್ಸಿನ ಸ್ವಾಗತಕಮಿಟಿಯ ಅಧ್ಯಕ್ಷರನ್ನಾಗಿ ಚುನಾಯಿಸಿದರು. ಈ ಕೆಲಸವನ್ನು ಇವರು ತೃಪ್ತಿಕರವಾಗಿ ನಡಿಸಿದರೆಂದು ತಿಳಿಯುತ್ತೇವೆ.

[illegible]ವಾಗಿತ್ತು. ಇವರ [illegible] [illegible]ಸಲು [illegible] ಅನುಭವಿಸ [illegible]ತ್ತೇವೆ. ಇವರ ಆತ್ಮಕ್ಕೆ ಶಾಂತಿಯನ್ನೂ, ಇವರ ಕುಟುಂಬಕ್ಕೆ ಸಮಾಧಾನವನ್ನೂ ದೇವರು ದಯಪಾಲಿಸಲಿ.

ಬಂಗಾಳದಲ್ಲಿ ದಸ್ತಗಿರಿ.

ಬಂಗಾಳದಲ್ಲಿ ಪ್ರಮುಖರ ದಸ್ತಗಿರಿ ವಿಷಯ ಮತ್ತು ಈ ಬಗ್ಗೆ ವೈಸರಾಯರು ಮಾಡಿದ ಹೊಸ ಖಾನೂನಿನ ವಿಷಯವಾಗಿ ಮಹಾತ್ಮ ಗಾಂಧಿಯವರು ಬರೆದಿರುವದರ ಅನುವಾದ.

ಬರಬಹುದೆಂದು ನೆನಸಿದ್ದು ಬಂತು. ಇಂಗ್ಲಿಷರ ವರ್ತಮಾನ ಪತ್ರಿಕೆಗಳು ವೈಸರಾಯರ ಬಾಂಬ್ ಒರುತ್ತಿಂತ ಸೂಚಿಸಿದ್ದವು. ಹಿಂದೂಗಳ ಹೊಸವರ್ಷದ ದಿನದಲ್ಲಿ ಬಂಗಾಳಕ್ಕೂ ಆ ಮೂಲಕ ಹಿಂದೂಸ್ಥಾನಕ್ಕೂ ಕೊಟ್ಟ ಉಚಿತವಾಗಿದೆ. ಇದರಿಂದ ನಾವು ಆಶ್ಚರ್ಯಗೊಳ್ಳಬೇಕಾದ ಅಥವಾ ಭಯಪಡಬೇಕಾದ ಅವಶ್ಯವಿಲ್ಲ. ರೌಲತ್ತ್ ಆಕ್ಟ್ ಸತ್ತಿತು. ಆದರೆ ರೌಲತ್ತ್ ಆಕ್ಟಿಗೆ ಕಾರಣವಾದ ತತ್ವವು ಎಂದೂ ಬಾಡದ ಎಲೆಗಳುಳ್ಳ ಮರದಂತಿದೆ. ಇಂಗ್ಲೀಷರ ಧ್ಯೇಯವು ಹಿಂದೀಯರ ಧ್ಯೇಯಕ್ಕೆ ವಿರೋಧವಾಗಿರುವಷ್ಟು ಕಾಲ, ರಾಜದ್ವೇಷದ ಕೊಲೆಪಾತಕಗಳು ಅಥವ ಅವುಗಳ ಭಯವಾದರೂ ಇರಲೇಬೇಕು, ಅದಕ್ಕೆ ಪ್ರತಿಯಾಗಿ ರೌಲತ್ತ್ ಆಕ್ಟಿನ ಹೊಸ ಪ್ರತಿಯೊಂದು ಸಹ ಇರಲೇಬೇಕು. ಅಹಿಂಸಾ ಯುಕ್ತಾ ಯುಕ್ತ ಅಸಹಕಾರವೇ ಇವಕ್ಕೆ ತಪ್ಪಿಸಿಕೊಳ್ಳುವ ದಾರಿಯಾಗಿತ್ತು. ಆದರೆ ಅದನ್ನು ಬೇಕಾದಷ್ಟು ಕಾಲವೂ, ಬೇಕಾದಷ್ಟು ಬಲವಾಗಿಯೂ ಉಪಯೋಗಿಸಲಿಕ್ಕೆ ನಮಗೆ ಸಮಾಧಾನವಿರಲಿಲ್ಲ. ಇಂಗ್ಲೀಷರ ಧ್ಯೇಯವು ಹಿಂದೀಯರ ಧ್ಯೇಯಕ್ಕೆ ಹೇಗೆ ವಿರೋಧವೆಂಬದನ್ನು ನೋಡೋಣ. ಹಿಂದೂಸ್ಥಾನದ ಆರ್ಥಿಕ ದೇಳವಣಿಗೆಗೆ ಲಂಕಾಶೈರೇ ದೊಡ್ಡ ಅಡಚಣೆಯಾಗಿದೆ. ಲಂಕಾಶಯರಿನ ಅಥವ ಇತರ ಪರದೇಶದ ಒಂದು ಗಜ ಬಟ್ಟೆಯಾಗಲೀ ನೂಲಾಗಲೀ ಬರಬಾರದೆನ್ನುವುದು ಹಿಂದುಸ್ಥಾನದ ಪ್ರಯೋಜನಕ್ಕೆಂಬದು ಪ್ರತ್ಯಕ್ಷವಾಗಿದೆ. ಆದರೆ ಲಂಕಾಶಯರಿನ ಗಿರಣಿಗಳ ಮಾಲೀಕರು ಸುಲಭವಾಗಿ ಅಥವ ಹೋರಾಡದ ಈ ಅಧಾರ್ಮಿಕ ವ್ಯಾಪಾರವನ್ನು ಬಿಡಲಾರರು. ಅಧಾರ್ಮಿಕವೆಂತ ಯಾಕೆ ಹೇಳುತ್ತೇನೆಂದರೆ—ಅದರಿಂದ ಹಿಂದುಸ್ಥಾನದ ಕೃಷಿಕರು ಕೆಟ್ಟು ಕ್ಷಾಮದಬಾಯಿಗೆ ತುತ್ತಾಗಲು ಅನುಕೂಲರಾಗಿದ್ದಾರೆ. ಹಿಂದುಸ್ಥಾನದ ಸ್ಥಿತಿಯನ್ನು ನೋಡಿದರೆ ಬಹಳ ದೊಡ್ಡ ಸಂಬಳ ಪಡೆಯುವ ಸಿವಿಲ್ ಸರ್ವೆಂಟುಗಳನ್ನು ಇಟ್ಟುಕೊಂಡಿದೆ. ಈ ಸರ್ವೀಸು ಎಷ್ಟೋ ಚನ್ನಾಗಿ ಕೆಲಸಮಾಡುವದಾದರೂ ಇದನ್ನು ತೆಗೆದುಹಾಕಿ ಎಷ್ಟೇ ಕೆಟ್ಟದಾಗಿ ಕೆಲಸಮಾಡುವದಾದರೂ ದೇಶೀಯ ಸರ್ವೀಸನ್ನು ಸ್ಥಾಪಿಸುವದು ಹಿಂದುಸ್ಥಾನದ ಪ್ರಯೋಜನಕ್ಕಾಗಿದೆ. ಮನುಷ್ಯನು ಎರವು ತೆಗೆದುಕೊಂಡ ಶ್ವಾಸಕೋಶದಿಂದ ಉಸುರಾಡಲು ಸಾಧ್ಯವಿಲ್ಲ. ಇಂಡಿಯನ್ನು ಇಂಗ್ಲಿಷ್ ಸಿಪಾಯಿಗಳಿಗೆ ತರಬೇತುಮಾಡುವ ಸ್ಥಳವಾಗಿದೆ. ಅಷ್ಟರಿಂದ ಒಟ್ಟು ಸರಕಾರಿ ಉತ್ಪತ್ತಿಯ ಅರ್ಧಕ್ಕಿಂತ ಹೆಚ್ಚಿನ ಭಾಗವನ್ನು ಸಲಹಿ ಕೊಳ್ಳುವ ಮಿಲಿಟರಿ ಬಜೆಟ್ಟಿಗೆ ಪೂರೈಸಲಿಕ್ಕಾಗಿ ರಕ್ತವೇ ಹೀರಿ ಹೋಗುವ ದರಿದ್ರ ಜನರ ಮೇಲೆ ಹಾಕಲ್ಪಟ್ಟಿದೆ. ಇದ್ದರಿಂದ [illegible] ಪ್ರಸ್ತುತವಾಗಿಯಾಗದಿದ್ದರೂ ತನ್ನನ್ನು ತಾನೇ ಸಂರಕ್ಷಿಸಿಕೊಳ್ಳುವುದು ಹಿಂದುಸ್ಥಾನದ ಕರ್ತವ್ಯಕ್ಕಾಗಿದೆ. ಒಳಗಿನ ಮತ್ತು ಹೊರಗಿನ ಶತ್ರುಗಳ ಬಾಧೆಯನ್ನು ತಪ್ಪಿಸಿಕೊಳ್ಳಲು ಹೊರಗಿನವರ ಸಹಾಯವನ್ನೇ - ಎಷ್ಟೇ ಒಳ್ಳೆ ಅಭಿಪ್ರಾಯದವರಾದರೂ - ನಿರೀಕ್ಷಿಸುವದೆಂದರೆ ಸರಿಯಾದ ಕೆಲಸವನ್ನು ಮಾಡಬೇಕಾದ ಪುರುಷತ್ವದ ಮುಖ್ಯಾಲು ಭಾಗವನ್ನೇ ಕಳಕೊಳ್ಳುವದಾಗಿದೆ. ಇಂಗ್ಲಿಷ್ ಜನರು ಆಳುವ ಜನಾಂಗದವರಾದ್ದರಿಂದ ಅವರಿಗೆ ಅನುಕೂಲಗಳಿವೆ. ಸಿವಿಲ್ ಸರ್ವೀಸಿನಲ್ಲಿದ್ದ ಇಂಗ್ಲಿಷ್ ಗುಮಾಸ್ತರು, ಹಾಗೆ ಸದಾ ಬ್ರಿಟಿಷ್ ಆಳ್ವಿಕೆಯಿಂದ ಆಗುವ ಅನಾಹುತಗಳನ್ನು ತಿಳಿದುಕೊಳ್ಳಬೇಕು. ಸ್ವತಂತ್ರವನ್ನು ಕಳಕೊಂಡಮೇಲೆ, ಪಾರ್ಲಿಮೆಂಟನ್ನು ಹೆಚ್ಚಿಸುತ್ತಿರುವಾಗ ಬ್ರಿಟಿಷ್ ಸಾಮ್ರಾಜ್ಯದೊಳಗಿದ್ದೇವೆ ಎಂಬುದು ಪ್ರಯೋಜನವಿಲ್ಲದ ಸಮಾಧಾನವಾಗಿದೆ.

ಮೈಸೂರಾಯರುಕೊಟ್ಟ ತಪಶೀಲು ಕಾರಣಗಳನ್ನು ನೋಡಿದರೂ ಸಹ ಅವರ ಮನಸ್ಸೋ ಇಚ್ಛೆ ಮಾಡಿದ ಕಾನೂನಿನ ಆವಶ್ಯಕತೆಯು ಕಂಡುಬರುವದಿಲ್ಲ. ಅತ್ಯಾಚಾರಕ್ಕೆ ಅಡ್ಡಿ ಇಲ್ಲದೆ ಶಿಕ್ಷೆ ಕೊಡಲಿ; ರಾಜದ್ರೋಹದ ಕೊಲೆಪಾತಕವನ್ನು ಸಹಿಯೆಂತ ನಾನು ಹೇಳುವವನಲ್ಲ. ಆದರಿಂದ ದೇಶಕ್ಕೆ ಪ್ರಯೋಜನವಿಲ್ಲವೆಂತ ನನಗೆ ಗೊತ್ತಿದೆ. ತಪ್ಪುಮಾಡಿದವರಿಗೂ ಮಾಡಲು ಪ್ರಯತ್ನಿಸಿದವರಿಗೂ ಶಿಕ್ಷೆ ಕೊಡುವದೇ ಬೇರೆ, ವಾರಂಟಿಲ್ಲದೆ ದಸ್ತಗಿರಿಮಾಡಲು ಅದೂ ಬರೇ ಸಂಶಯದ ಮೇಲೆ ದಸ್ತಗಿರಿಮಾಡಲು ಅಧಿಕಾರಿಗಳಿಗೆ ಮನಸ್ಸೋ ಅಧಿಕಾರ ಕೊಡುವದೇ ಬೇರೆ. ಸಂಶಯಕ್ಕೆ ಗುರಿಯಾದವರನ್ನು ಹಿಂಸಿಸುವದೇ ಈ ಕಾನೂನಿನ ಫಲಿತಾಂಶವಾಗುತ್ತೆ. ಸರಕಾರದವರು ಬೆದರಿಕೊಂಡಾಗ ತಪ್ಪಿತಸ್ಥರಿಗಿಂತ ಹೆಚ್ಚು ನಿರಪರಾಧಿಗಳೇ ಶಿಕ್ಷಿಸಲ್ಪಡುತ್ತಾರೆಂತ ನಮಗೆ ಅನುಭವ ಸಿದ್ಧವಾಗಿದೆ. 1918ರಲ್ಲಿ ಪಂಜಾಬಿನಲ್ಲಿ ಶಿಕ್ಷಿಸಲ್ಪಟ್ಟ ಜನರಲ್ಲಿ ಬಹಳ ಹೆಚ್ಚು ಜನರು ನಿರಪರಾಧಿಗಳಾಗಿದ್ದರಂತ ಎಲ್ಲರಿಗೂ ಗೊತ್ತಿದೆ. ಸರಕಾರವು ಮನಸ್ಸೋ ಇಚ್ಛೆ ಉಪಯೋಗಿಸುವ ಕಾನೂನುಗಳ ಸಹಾಯ ತೆಗೆದುಕೊಳ್ಳುವದೆಂದರೆ ಸರಕಾರಕ್ಕೆ ಜನ ಸಮುದಾಯದ ಅಭಿಪ್ರಾಯದ ಪತ್ರಾಸೆ ಇಲ್ಲವಂತಲೇ ಅರ್ಥ. ಬಂಗಾಳದ ಸರಕಾರಕ್ಕೆ ಜನರ ಪತ್ರಾಸೆ ಇಲ್ಲವೆಂಬದನ್ನು ದೇಶಬಂಧು ದಾಸರು ಬಂಗಾಳ ಕೌನ್ಸಿಲಿನಲ್ಲಿ ಮಾಡಿದ ಕೆಲಸದಿಂದ ನಿದರ್ಶಿಸಿದ್ದಾರೆ. ಅವರು ಭಯೋತ್ಪಾದಕ ಸಂಸ್ಥೆಯೊಂದನ್ನು ಸ್ಥಾಪಿಸಿದ್ದಾರೆಂಬದಕ್ಕೆ ರುಜುವಾತಿಲ್ಲ. ಆದ್ದರಿಂದ ಆ ಮಾತನ್ನು ತಳ್ಳಿಬಿಡಬೇಕು. ಭಯೋತ್ಪಾದಕರ ರೀತಿಯಿಂದ ಜನ ಸಮುದಾಯದ ಚುನಾವಣೆಯನ್ನು ಹೊಂದಲೂ ಸಾಧ್ಯವಿಲ್ಲ. ಮತ್ತು ಆ ರೀತಿಯಿಂದ ಒಂದು ದೊಡ್ಡ ಸಂಸ್ಥೆಯನ್ನು ಬಗ್ಗಟ್ಟಿನಲ್ಲಿಟ್ಟುಕೊಳ್ಳುವದೂ ಸಾಧ್ಯವಿಲ್ಲ. ಬಂಗಾಳದ ಬಹುಮತದ ಮುಖ್ಯಸ್ಥನಾಗಬೇಕಾದರೆ ದೇಶಬಂಧುದಾಸರಲ್ಲಿ ಜನ ಪ್ರೀತಿಗೆ ಅರ್ಹವಾದ ಏನೋ ಗುಣವಿರಬೇಕು. ಕಾರಣವು ಮೇಲೆಯೇ ಇದೆ. ಜನರಿಗೆ ಶಕ್ತಿ ದೊರಕಿಸಬೇಕೆಂಬದೇ ಅವರ ಉದ್ದೇಶ. ಆಳುವವರ ಮುಂದೆ ತಮ್ಮ ಮಂಡಿಯನ್ನು ಬಗ್ಗಿಸುವದಿಲ್ಲ. ಬಂಗಾಳವನ್ನೂ ಹಿಂದುಸ್ಥಾನವನ್ನೂ ಮೂರು ವಿಧದ ಭಾರದಿಂದತಪ್ಪಿಸಲು ಆತುರರಾಗಿದ್ದಾರೆ. ಇನ್ನೊಂದು ಕಾಗದವನ್ನು ಅವರು ಬಾಡಲಿ, ಜನರಿಗೆ ಸ್ವತಂತ್ರಬೇಕಾಗಿಲ್ಲವೆಂತ ಅವರು ಹೇಳಲಿ, ಆಗ ಅವರು ಭಯೋತ್ಪಾದಕ ಸಂಸ್ಥೆಯನ್ನು ನಿರ್ಮಿಸಿದವರಾದರೂ ಜನರಮೇಲೆ ಅವರಿಗೆ ಇರುವ ಶಕ್ತಿಯು ಒಂದು ನಿಮಿಷವೂ ನಿಲ್ಲುವದಿಲ್ಲ. ದೇಶಬಂಧು ದಾಸರಿಗೂ ನನಗೂ ಭಿನ್ನಾಭಿಪ್ರಾಯಗಳಿವೆ. ಆ ಕಾರಣದಿಂದ ಅವರ ಉಜ್ವಲದೇಶಭಕ್ತಿಯೂ, ತ್ಯಾಗವೂ ನನ್ನ ದೃಷ್ಟಿಗೆ ಗೋಚರವಾಗದೆ ಹೋಗುವದು ಹೇಗೆ? ನಮ್ಮಲ್ಲಿನ ಅತ್ಯುತ್ತಮ ದೇಶಭಕ್ತನಿಗಿರುವ ದೇಶಭಕ್ತಿಯೂ ಅವರಲ್ಲಿಯೂ ಇದೆ. ಅವರ ಬಲಗೈ ಮನುಷ್ಯನನ್ನು ಸೆಳೆದೊಯ್ದಿದ್ದಾರೆ. ಅವರೆಲ್ಲರೂ ಯೋಗ್ಯಮನುಷ್ಯರಾಗಿದ್ದಾರೆ. ಜನರ ಪ್ರೀತಿಯನ್ನು ಪಡೆದವರಾಗಿದ್ದಾರೆ. ಅವರಿಗೆ ಯಾಕೆ ಖುಲ್ಲಾ, ನ್ಯಾಯವಾದ ಸಾಧಾರಣ ವಿಚಾರಣೆ ಸಾಲದು?

ಅಂಥಾ ಮನುಷ್ಯರ ಗುಂಪು ಗುಂಪನ್ನೇ ವಿಶೇಷವಾದ ಪವರಿನ ಮೇಲೆ ದಸ್ತಗಿರಿಮಾಡುವದೆಂದರೆ ಈಗ ಇರುವ ಆಡಳಿತ ಪದ್ಧತಿಯು ದೋಷಯುಕ್ತವಾಗಿದೆ ಎಂತಾಯಿತು. ಕೋಟ್ಯಾಂತರ ಜನರ ಮಧ್ಯದಲ್ಲಿ ಅತಿ ಸ್ವಲ್ಪ ಜನರು ಬಂದೂಕ, ಕೋವಿ ಮದ್ದು ಮತ್ತು ಮನಸ್ಸೋ ಇಚ್ಛೆ ಉಪಯೋಗಿಸುವ ಹಕ್ಕುಗಳ ಸಹಾಯದಿಂದ ಶಾಸನಮಾಡುವದು ತಪ್ಪು ಮತ್ತು ಅನಾಗರೀಗ ಸ್ವಭಾವ. ತಮಗಿಂತ ಹೆಚ್ಚಿನಸಂಖ್ಯೆ ಜನರ ಮೇಲೆ ತಮ್ಮ ಅಧಿಕಾರವನ್ನು ಚಲಾಯಿಸುವದು ಅವರ ಶಕ್ತಿಯನ್ನು ತೋರಿಸುವದೇನೋ ಹೌದು, ತೆಳುವಾದ ನಾಗರೀಕತೆಯ ಪರೆಯ ಒಳಗೆ ಇರುವ ಅನಾಗರೀಕ ಸ್ವಭಾವವನ್ನೂ ಸಹ ತೋರಿಸುತ್ತೆ. ಕಷ್ಟಕ್ಕೆ ಗುರಿಯಾಗಿರುವ ಬಂಗಾಳಿಗಳಿಗೆ ನಾನು ಗೌರವದಿಂದ ಹೇಳುವದೇನಂದರೆ—'ನೀವು ನಿರಪರಾಧಿಗಳಾಗಿದ್ದರೆ—ಹೆಚ್ಚಿನ ಜನರು ನಿರಪರಾಧಿಗಳಂತ ನನಗೆ ಗೊತ್ತಿದೆ—ನಿಮ್ಮ ಬಂದೀವಾಸದಿಂದ ದೇಶಕ್ಕೂ ನಿಮಗೂ ಪ್ರಯೋಜನವೇ ಆಗುತ್ತೆ. ಕಷ್ಟಪಡದೆ ನಮಗೆ ಸ್ವತಂತ್ರ ದೊರೆಯುವದಿಲ್ಲ. ನಿಜವಾದ ರಾಜದ್ರೋಹದ ಕೊಲೆಪಾತಕದ ದಾರಿಯನ್ನು ನಂಬುವವರಿಗೆ, ಮತ್ತು ಹಿಂಸೆಯಲ್ಲಿ ನಂಬಿಗೆ ಇರುವವರಿಗೆ ನಾನು ಹೇಳುವದೇನಂದರೆ—, ನಿಮ್ಮ ದೇಶಭಕ್ತಿಗೆ ನನ್ನ ಸ್ಲಾಘನೆ ಇದೆ, ಆದರೆ ನಿಮ್ಮ ದೇಶ ಭಕ್ತಿಯು ಕುರುಡು ಭಕ್ತಿಯಾಗಿದೆ'—ನನ್ನ ಅಭಿಪ್ರಾಯದಲ್ಲಿ ಹಿಂದುಸ್ಥಾನದ ಸ್ವತಂತ್ರವು ಹಿಂಸೆಯ ದಾರಿಯಿಂದ ಸಂಪಾದಿಸಲ್ಪಡುವದಿಲ್ಲ. ಪ್ರತೀಕಾರಮಾಡದೆ ಶುದ್ಧರೀತಿಯಿಂದ ಕಷ್ಟವನ್ನು ಸಹಿಸುವದರಿಂದಲೇ ಸ್ವತಂತ್ರ ಸಂಪಾದನೆಯಾಗುತ್ತೆ ಎಂತ ನನ್ನ ಅಭಿಪ್ರಾಯ. ಇದೇ ನಿಂದಿತವಾದ ಮತ್ತು ಶೀಘ್ರದಲ್ಲಿ ಫಲಕೊಡುವ ದಾರಿ. ಆದರೆ ಹಿಂಸೆಯ ದಾರಿಯಲ್ಲಿ ನಿಮಗೆ ಇರುವ ನಂಬಿಗೆಯನ್ನು ಬಿಡುವದಿಲ್ಲವಾದರೆ ನಿಮ್ಮ ಮತವನ್ನು ಧೈರ್ಯವಾಗಿ ಒಪ್ಪಿಕೊಳ್ಳಿ. ಮರಣದ ವರೆಗಾದರೂ ನಿಮ್ಮ ಧ್ಯೇಯಕ್ಕಾಗಿ ಕಷ್ಟ ಸಹಿಸಲು ತಯಾರಿರಿ. ಅದರಿಂದ ನಿಮ್ಮ ಧೈರ್ಯವನ್ನೂ ಸತ್ಯತೆಯನ್ನೂ ಪ್ರದರ್ಶಿಸಿದಂತೆ ಆಗುತ್ತೆ, ಮತ್ತು ಅನೇಕ ನಿರಪರಾಧಿಗಳ ಅನಾವಶ್ಯ ಕಷ್ಟವನ್ನು ತಪ್ಪಿಸಿದಂತಾಗುತ್ತೆ.

ಕೊಡಗು ಲೆಜಿಸ್ಲೇಟಿವ್ ಕೌನ್ಸಿಲಿನ ಪ್ರೊಸೀಡಿಂಗ್ಸ್.

(13ನೇ ಠರಾವಿನ ಚರ್ಚೆ ಮುಂದರಿಸಿದ್ದು).

ಮೆ. ಪಿ. ಬಿ. ಮೇದಪ್ಪನವರು.

ಅಧ್ಯಕ್ಷರೆ, ಠರಾವನ್ನು ಅನುಮೋದಿಸುವದರಲ್ಲಿ ಒಂದೆರಡು ಮಾತು ಮಾತ್ರ ಆಡಬೇಕಾಗಿದೆ. ಠರಾವನ್ನು ಸಭೆಯ ಮುಂದೆ ತಂದವರು ಹೇಳಿದಮೇರೆ ಒಂದೆರಡು ಬಹು ಪ್ರಾಮುಖ್ಯದ ವಿಷಯಗಳು ತೀರ್ಮಾನವಾಗಬೇಕಾಗಿದೆ. ಈ ದೇಶದಲ್ಲಿ ಭೂಮಿಯ ಮಾಲೀಕನು ಯಾರು? ಸರಕಾರವ್ರೋ, ರೈತನೋ? ಈ ಸವಾಲಿಗೆ ಜವಾಬು ಈಗ ಚರ್ಚೆಗೆ ಬಂದಿರುವ ಠರಾವಿನ ಉತ್ತರವಲ್ಲಿದೆ. ರೆವಿನ್ಯು ಮ್ಯಾನ್ಯುವೆಲ್ಲಿನ ಗ್ರಂಥಕರ್ತರು ಊಹಿಸಿರುವಂತೆ ಸರಕಾರವೇ ಭೂಮಿಯ ಮಾಲೀಕರಾದರೆ, ಠರಾವು ತಂದವರು ತಪಶೀಲಾಗಿ ವಿವರಿಸಿದ ಅಡಚಣೆಗಳೆಲ್ಲಾ ನ್ಯಾಯವಾದವೇ. ನಿಜವಾಗಿ ರೈತನೇ ಮಾಲೀಕನೆಂಬದಕ್ಕೆ ಆಧಾರವಿದೆ. ರೈತನೇ ಮಾಲೀಕನಾದರೆ ಈ ಅಡಚಣೆಗಳೆಲ್ಲಾ ನ್ಯಾಯಕ್ಕೆ ವಿರೋಧವಾದವು ಮತ್ತು ಅವು ಇರಲಿಕ್ಕೇನೇ ಕಾರಣಗಳಿಲ್ಲ. ಈ ವಿಷಯದಲ್ಲಿ ತೀರ್ಮಾನಕ್ಕೆ ಬರಬೇಕಾದರೆ ಈ ದೇಶದ ವಿಶೇಷ ಸ್ಥಿತಿ ಮತ್ತು ಚರಿತ್ರೆಯನ್ನು ನೆನಪಿನಲ್ಲಿಟ್ಟುಕೊಳ್ಳಬೇಕು.

ಕೊಡಗನ್ನು ಬ್ರಿಟಿಷರು ಜಯಿಸಿ ಸ್ವಾಧೀನಪಡಿಸಿಕೊಂಡದ್ದಲ್ಲ. ಜನರೇ ಒಗ್ಗಟ್ಟಾಗಿ ಒಪ್ಪಿಗೆಯಿಂದ ದೇಶವನ್ನು ಬ್ರಿಟಿಷರಿಗೆ ಬಿಟ್ಟುಕೊಟ್ಟದ್ದಾಗಿದೆ. ಈಸ್ಟ ಇಂಡಿಯಾ ಕಂಪೆನಿಗೆ ದೇಶವನ್ನು ಜನರು ಬಿಟ್ಟುಕೊಡುವ ಮುಂಚೆ ಕೆಲವು ಹಕ್ಕುಗಳನ್ನೂ, ವಾಗ್ದಾನಗಳನ್ನೂ ಪಡೆದುಕೊಂಡಿದ್ದಾರೆ. ಇವುಗಳ ಪೈಕಿ ಮುಖ್ಯವಾದದ್ದು ಯಾವದೆಂದರೆ—ಜನರಿಗೆ ರಾಜರಕಾಲದಲ್ಲಿ ಇದ್ದ ಹಕ್ಕುಗಳನ್ನೆಲ್ಲಾ ಉಳಿಸಿಕೊಳ್ಳುತ್ತೇವೆಂತಲೂ, ಕಾಪಾಡುತ್ತೇವೆಂತಲೂ ವಚನಕೊಟ್ಟಿದ್ದರು. ಆದ್ದರಿಂದ ರಾಜರಕಾಲದಲ್ಲಿ ಭೂಮಿಯ ಮಾಲೀಕನು ಯಾರೆಂಬದನ್ನು ಕಂಡು ಹಿಡಿಯಬೇಕಾಗಿ ಬಂತು. ಈ ವಿಷಯವು ಶಾಸ್ತ್ರಗಳ ಆಧಾರದಿಂದಲೂ ನ್ಯಾಯಸ್ಥಾನಗಳ ತೈರ್ಪಿನಿಂದಲೂ ತೀರ್ಮಾನವಾಗಿದೆ. ಇಂಗ್ಲೆಂಡಿನ ಭೂಮಿ ಹಿಡುವಳಿ ಪದ್ಧತಿಗೆ ಎಷ್ಟೇ ವಿರೋಧವಾದರೂ, ಮುಸಲ್ಮಾನರ ಸ್ವಭಾವಕ್ಕೆ ವಿರೋಧವಾದರೂ [illegible] ಶಾಸ್ತ್ರ, ಹಿಂದೂ ಲಾ ಪ್ರಕಾರ ಭೂಮಿಯ ಮಾ[illegible]ಗೇ ಇದೆ. ಋಗ್ವೇದದ ಕೆಲವು ಭಾಗದಿಂದಲೂ [illegible]ಶಾಸ್ತ್ರ ಮತ್ತು ಸ್ಮೃತಿಗಳಿಂದಲೂ ಮನು, ಯಜ್ಞವಲ್ಕ್ಯ ಮತ್ತು ಇತರ ಭಾಷ್ಯಕಾರರ ಆಧಾರದಿಂದಲೂ ಹಿಂದೂ ರಾಜರ ಕಾಲದಲ್ಲಿ ಭೂಮಿಯ ಹಕ್ಕು ರೈತನಿಗೇ ಇತ್ತೆಂಬದು ಸ್ಪಷ್ಟವಾಗುತ್ತದೆ. ಈ ಅಭಿಪ್ರಾಯವು ಅನೇಕ ತೈರ್ಪುಗಳಲ್ಲಿ ಒಪ್ಪಿಕೊಳ್ಳಲಾಗಿದೆ. ಹೈಕೋರ್ಟುಗಳು ಮಾತ್ರವಲ್ಲ, ಪ್ರಿವಿ ಕೌನ್ಸಿಲು ಸಹ ಇದನ್ನು ಒಪ್ಪಿಕೊಂಡಿದೆ. ಆದ್ದರಿಂದ ಹಿಂದೂ ರಾಜರ ಕಾಲದಲ್ಲಿ ಭೂಮಿಯ ಮಾಲೀಕನು ಯಾರೆಂಬ ವಿಷಯದಲ್ಲಿ ಮತಭೇದವೇ ಇಲ್ಲ. ಮುಸಲ್ಮಾನರು ದೇಶವನ್ನು ಜಯಿಸಿಕೊಂಡ ಮೇಲೆ ಮುಸಲ್ಮಾನ್ ರಾಜರೇ ಭೂಮಿಯ ಮಾಲೀಕರೆಂತ ಭಾವಿಸಿಕೊಂಡದ್ದರಿಂದ ಗಲಿಬಿಲಿಗೆ ಕಾರಣವಾಯಿತು. ಈ ದೇಶದ ಚರಿತ್ರೆಯೇ ಬೇರೆ. ಇದು ಎಂದೂ ಮುಸಲ್ಮಾನರ ಅಧೀನಕ್ಕೆ ಹೋಗಿತ್ತಿಲ್ಲ. ಈ ಕೌನ್ಸಿಲನ್ನು ತೆರೆಯುವ ಸಮಾರಂಭದ ಭಾಷಣದಲ್ಲಿ ಅಧ್ಯಕ್ಷರೇ ಈ ಸಂಗತಿಯನ್ನು ಹೇಳಿದ್ದಾರೆ. ಮುಸಲ್ಮಾನರ ಆಳಿಕೆಗೆ ದೇಶವು ಹೋಗದೆ ಹಿಂದೂ ರಾಜರ ಸ್ವಾಧೀನದಿಂದಲೇ ಅನುಮತಿ ಮೇರೆ ಬ್ರಿಟಿಷರಿಗೆ ದೇಶವು ಬಂದದ್ದಾದ್ದರಿಂದ ಭೂಮಿಯ ಹಕ್ಕು ರೈತನಲ್ಲೇ ಉಳಿಯಿತು. ಸರಕಾರದಲ್ಲಿ ಅಲ್ಲ. ಇಷ್ಟು ಒಪ್ಪಿತವಾದರೆ ರೆವಿನ್ಯು ಮ್ಯಾನ್ಯುವಲಿನಲ್ಲಿರುವ ಹೆಚ್ಚಿನ ಅಡಚಣೆಗಳೆಲ್ಲಾ ಇರಲು ಕಾರಣವಿಲ್ಲ. ನಾವು ಭೂಮಿಯ ಮಾಲೀಕರೆಂತ ವಾದಿಸುತ್ತೇವೆ. ಜಮ್ಮ ಹಿಡುವಳಿಯ ವಿಷಯ ನಾನು ಮಾತಾಡುವದಿಲ್ಲ. ಮಲಬಾರಿನ ಜನ್ಮಿ ಹಿಡುವಳಿಗೂ ಜಮ್ಮಕ್ಕೂ ಹೋಲಿಕೆಯನ್ನು ತೋರಿಸಿ ಗಲಿಬಿಲಿ ಪಡಿಸಲು ಇಚ್ಛೆಪಡುವದಿಲ್ಲ. ಮಲಬಾರಿನ ಹಿಡುವಳಿಗೂ ಜಮ್ಮಕ್ಕೂ ವ್ಯತ್ಯಾಸವಿದೆಯೆಂತಲೇ ಆಗಲಿ, ಹಿಂದೂ ರಾಜರಿಂದ ಈಸ್ಟ ಇಂಡಿಯಾ ಕಂಪೆನಿಯು ದೇಶವನ್ನು ಸ್ವಾಧೀನಕ್ಕೆ ತೆಗೆದುಕೊಂಡದ್ದರಿಂದಲೂ, ಪ್ರಜೆಗಳ ಹಕ್ಕುಗಳನ್ನು ಕಾಪಾಡುತ್ತೇವೆಂತ ಬ್ರಿಟಿಷ್ ಸರಕಾರದವರು ಮಾತುಕೊಟ್ಟಿರುವದರಿಂದ ಪ್ರಜೆಗಳೇ ಭೂಮಾಲೀಕರೆಂಬದನ್ನು ನಂಬಬೇಕು. ಸನ್ನದ್‌ಗಳ ಅರ್ಥಮಾಡುವದರಲ್ಲೂ ಅವುಗಳ ತಪ್ಪು ತರ್ಜುಮೆಯಿಂದಲೋ ಅಥವ ಬೇರೆ ಯಾವ ಕಾರಣದಿಂದಲೋ, ತುಂಬಾ ಗಲಿಬಿಲಿಯಾಗಿದೆ. ನಮ್ಮ ಚೀಫ್ ಕಮಿಷನರಾಗಿದ್ದ ಸರ್ ಜೇಮ್ಸ್ ಲಯಲ್ ಎಂಬವರು ಮತ್ತು ಇತರ ದೊಡ್ಡ ಮನುಷ್ಯರು ಭೂಮಿಯ ಕಂದಾಯವು ಶಾಶ್ವತವಾಗಿ ನಿಶ್ಚೈಸಲ್ಪಟ್ಟದ್ದೆಂತ ಅಭಿಪ್ರಾಯಪಟ್ಟಿದ್ದಾರೆ. ಆದರೆ ಸರಕಾರದವರು ಕಂದಾಯವನ್ನು ವ್ಯತ್ಯಾಸಮಾಡಿದರು. 1875ನೇ ಇಸವಿಗೆ ಮೊದಲು ಕೊಡಗಿನ ಸುಪರಿಂಟೆಂಡೆಂಟರುಗಳು ಕಂದಾಯವನ್ನು ಹೆಚ್ಚಿಸುವ ವಿಷಯ ಚೆನ್ನಾಗಿ ಪರ್ಯಾಲೋಚಿಸಿ ದೈತರ ಹಿಡುವಳಿಯನ್ನು ವ್ಯತ್ಯಾಸ ಮಾಡಬಾರದೆಂತ ತೀರ್ಮಾನಿಸಿದರು. 1890ನೆ ಇಸವಿಯ ಅನಂತರ ಕಂದಾಯವನ್ನು ಹೆಚ್ಚಿಸಿದ್ದಾಗಿದೆ.

ಭೂಮಿಯ ಮಾಲೀಕರು ಯಾರು, ಮತ್ತು ಸನ್ನದಿನ ಮೇರೆ ಕಂದಾಯವನ್ನು ಹೆಚ್ಚಿಸಲು ಹಕ್ಕಿದೆಯೋ ಎಂಬ ಎರಡು ಮುಖ್ಯ ವಿಷಯಗಳನ್ನು ಚೆನ್ನಾಗಿ ಪರ್ಯಾಲೋಚಿಸಿದನೆ ರೆಗ್ಯುಲೇಶನನ್ನು ತಯಾರಿಸಿದ್ದಾರೆ. ಆದ್ದರಿಂದ ರೆಗ್ಯುಲೇಶನಿನ ಸೆಕ್ಷನುಗಳು ಈ ಎರಡು ಮೂಲ ಹಕ್ಕುಗಳಿಗೆ ಎಷ್ಟರಮಟ್ಟಿಗೆ ವಿರೋಧವಾಗಿವೆ ಎಂಬದನ್ನು ಅಜಮಾಯಿಸಲಿಕ್ಕೆ ಕಮಿಟಿಯು ಬೇಕಾಗಿದೆ.

ಮೆ. ಯಸ್. ಯಂ. ಪೊಂಜೊರವರು.

ಠರಾವಿಗೆ ನನ್ನ ಅನುಮೋದನೆ ಇದೆ. ಈ ಮೊದಲು ಮಾತಾಡಿದ ಮೆಂಬರರು ಹೇಳಿದ್ದನ್ನೆಲ್ಲಾ ನಾನು ಒಪ್ಪದಿದ್ದರೂ ರೆಗ್ಯುಲೇಶನಿನಲ್ಲಿ ಪುರಾತನ ಕಾಲದ ಸೆಕ್ಷನ್‌ಗಳು ಕೆಲವೂ, ಅನಾವಶ್ಯಕವು ಕೆಲವೂ ಇವೆಯೆಂತ ನಾನು ಒಪ್ಪುತ್ತೇನೆ. ಈ ಕೌನ್ಸಿಲಿನ ಹಿಂದಿನ ಮೀಟಿಂಗಿನಲ್ಲಿ ಮೆ. ಸುಬ್ಬಯ್ಯನವರ ಠರಾವು ಮೇರೆ ಪಟ ಆದ ಒಂದು ಸೆಕ್ಷನೇ ಉದಹರಣೆಯಾಗಿದೆ. ಮರ ಸಾಗಿಸಲು ಪಾಸ್‌ಕೊಡುವ ಪದ್ಧತಿ ಎಲ್ಲಾ ಅತ್ಯಸ್ಥಿಕರವಾಗಿದೆ. ಇತರ ಉದಹರಣೆಗಳನ್ನೂ ಕೊಡಬಹುದು. ಆದರೆ ಅವನ್ನೆಲ್ಲಾ ನೇಮಕವಾಗುವ ಕಮಿಟಿ ಮುಂದೆ ಕೊಡಬಹುದಾದ್ದರಿಂದ ಬಾಕಿಮಾಡಿಕೊಂಡಿದ್ದೇನೆ.

ಮೆ. ಪಿ. ಶ್ರೀಪತಿರಾಯರು.

ಅಧ್ಯಕ್ಷರೇ, ಇಗ ಚರ್ಚೆಯಲ್ಲಿರುವ ಠರಾವು ಬಹಳ ಪ್ರಾಮುಖ್ಯವಾದದ್ದು. ಚಕ್ರವರ್ತಿಯವರ ಪ್ರಜೆಗಳಾಗಿ ಈ ದೇಶದಲ್ಲಿ ನಮ್ಮ ಇರುವಿಕೆಗೇ ಸಂಬಂಧ ಪಡುವದಾಗಿದೆ. ಈ ರೆಗ್ಯುಲೇಶನು 20, 25 ವರುಷದಿಂದ ಆಡಳಿತ ನಡಿಸಲಿಕ್ಕಾಗಿ ಉಪಯೋಗಿಸಲ್ಪಡುತ್ತಲಿದೆ. ಪ್ರಪಂಚವು ವರುಷದಿಂದ ವರುಷಕ್ಕೆ ಅಲ್ಲ, ದಿನದಿಂದ ದಿನಕ್ಕೆ ಮುಂದರಿಯುತ್ತಿರುವಾಗ ನಮ್ಮನ್ನು ಮಾತ್ರ ಹಳೇ ಆಡಳಿತ ಕ್ರಮವನ್ನೇ ಅನುಸರಿಸಿ ಆಳುತ್ತಿರುವದು ನಮ್ಮ ದುರಾದೃಷ್ಟವೇ ಸರಿ. ನಾಗು ಪ್ರತಿನಿಧಿಯಾಗಿ ರೆವಿನ್ಯು ಮ್ಯಾನ್ಯುವಲಿನಲ್ಲಿರುವ ಕೊರತೆಗಳಿಂದ ನಾಗು ರೈತರಿಗೆ ಇರುವ ಕೊರತೆಗಳನ್ನು ವಿವರಿಸುತ್ತೇನೆ. ನಮಗೆ ಇರುವ ಅನಾನುಕೂಲತೆಗಳನ್ನು ತಪಶೀಲಾಗಿ ವರ್ಣಿಸುವದು ಅನಾವಶ್ಯವಾಗಿದೆ. ನಾಗು ರೈತರಿಗೂ ಜಮ್ಮ ರೈತರಂತೆಯೇ ಕಷ್ಟಗಳಿವೆಯೆಂತ ಹೇಳಿದರೆ ಸಾಕಾಗಿದೆ. ಮೆ. ಮೇದಪ್ಪನವರು ಈ ದಿವಸದ ಪ್ರಾರಂಭದ ಭಾಷಣದಲ್ಲಿ ಎಲ್ಲವನ್ನೂ ವಿವರಿಸಿದ್ದಾರೆ. ಈ ಕಾಲದ ಸ್ಥಿತಿ ಮಾತ್ರವಲ್ಲ, ಪುರಾತನ ಕಾಲದ ಸ್ಥಿತಿಯನ್ನೂ ಸಹ ವಿವರಿಸಿದ್ದಾರೆ. ಮ್ಯಾನ್ಯುವಲಿನ ಕೊರತೆಗಳನ್ನು ಕಮಿಟಿ ಮುಂದೆ ವಿವರಿಸಬಹುದು. ಠರಾವಿಗೆ ಅನುಮತಿ ಕೊಡುತ್ತೇನೆ.

ಮೆ. ಟಿ. ಜೆ. ಬಾಸ್ಕರ್‌ರವರು.

ಚೀಫ್ ಕಮಿಷನರಿಗೆ ಶಿಫಾರಸ್ಸು ಮಾಡುವ ಕಮಿಟಿಗಳ ವಿಷಯ ಕೆಲವು ಮಾತುಗಳನ್ನು ಹೊದಲೇ ಮಾತಾಡಬೇಕಾಗಿದೆ. ಈ ಅಧಿವೇಶನದಲ್ಲಿ 8 ಅಥವ 9 ಕಮಿಟಿಗಳನ್ನು ನೇಮಿಸುವಂತೆ ಚೀಫ್ ಕಮಿಷನರಿಗೆ ಶಿಫಾರಸ್ಸು ಮಾಡಲು ಈ ಸಭೆಯು ಯೋಚಿಸಬೇಕಾಗಿದೆ. ಕಾನೂನಿನ ಮೇರೆ ನಿರ್ಮಾಣವಾದ ಫೈನಾನ್ಸ್ ಕಮಿಟಿಯು ಜನವರಿಯಲ್ಲಿ ಕೆಲಸ ಮಾಡಬೇಕು. ಸಕ್ಕಿ ಮಕುಟ್ಟದ ಫಾರೆಸ್ಟಿನಿಂದ ಮರ ಮಾರಲು ಕಂಟ್ರಾಕ್ಟ್‌ಮಾಡಲು ನಿರ್ಮಾಣವಾದ—ಅದಕ್ಕೆ ಇನ್ನೂ ಮೆಂಬರುಗಳನ್ನು ಸೇರಿಸುವ ತೀರ್ಮಾನವಾಗಿದೆ—ಕಮಿಟಿಯೊಂದು ಇದೆ. ಆದ್ದರಿಂದ ಅನೇಕ ಕಮಿಟಿಗಳನ್ನು ನೇಮಿಸುವಂತೆ ಸರಕಾರಕ್ಕೆ ಹೇಳಿಕೊಳ್ಳುವದರಲ್ಲಿ ಪ್ರಯೋಜನವಿಲ್ಲ. ಉದ್ಯೋಗಸ್ತರ ಸಹಾಯವಿಲ್ಲದೆ ಕಮಿಟಿಗಳು ಹೆಚ್ಚಿನ ಕೆಲಸವೇನೂ ಮಾಡಲು ಸಾಧ್ಯವಿಲ್ಲ. ಆದರೆ ಉದ್ಯೋಗಸ್ಥರಿಗೆ ತುಂಬಾ ಕೆಲಸವಿರುವ ಹಂಗಾಮ್ ಈಗ ಪ್ರಾರಂಭವಾಗುತ್ತದೆ. ಆದ್ದರಿಂದ ಯಾವಯಾವ ಕಮಿಟಿಗಳು ಪ್ರಾಮುಖ್ಯವಾದವೆಂಬದನ್ನು ಮೆಂಬರುಗಳು ಮುಂದಾಲೋಚನೆಯಿಂದ ತೀರ್ಮಾನಿಸಬೇಕೆಂತ ನಾನು ಕೇಳಿಕೊಳ್ಳುತ್ತೇನೆ. ಇನ್ನು ಮುಂದೆ ಬರುವ ತಿಂಗಳಲ್ಲಿ ಇನ್ನು ಎರಡು ಕಮಿಟಿಗಳು ಕೆಲಸ ಮಾಡಬಹುದೇ ಹೊರತು ಹೆಚ್ಚಿಗೆ ಕಮಿಟಿಗಳು ಕೆಲಸ ಮಾಡಲು ಸಾಧ್ಯವಿಲ್ಲ. ನೇಮಕವಾಗಬಹುದಾದ ಕಮಿಟಿಗಳಿಗೆ ಸಾಧ್ಯವಾದಷ್ಟು ಸರಕಾರದ ಸಹಾಯ ಕೊಡಬೇಕೆಂಬ ಅಭಿಪ್ರಾಯದಿಂದ ನಾನು ಹೀಗೆ ಹೇಳುವದಾಗಿದೆ.

ಚೀಫ್ ಕಮಿಷನರಿಂದ ನೇಮಕವಾಗುವ ಕಮಿಟಿ ಎಂದರೆ ಏನೆಂತ ನಾವು ಚೆನ್ನಾಗಿ ಅರ್ಥಮಾಡಿಕೊಳ್ಳಬೇಕು. ಅದು ಈ ಸಭೆಯ ಒಂದು ಸಬ್ ಕಮಿಟಿಯಲ್ಲ; ಯಾಕೆಂದರೆ ಈ ಸಭೆಗೆ ಸಬ್ ಕಮಿಟಿಗಳನ್ನು ನೇಮಿಸುವ ಹಕ್ಕಿಲ್ಲ. ಅಂಥಾ ಕಮಿಟಿಗೆ ಸರಕಾರದ ಮಂಜೂರಾತಿ ಇದೆ. ಸರಕಾರವನ್ನು ಕಮಿಟಿಗಳನ್ನು ನೇಮಿಸಲಿಕ್ಕೆ ಸುಲಭವಾಗಿ ಕೇಳಿಕೊಳ್ಳಕೂಡದು. ಅಂಥಾ ಕಮಿಟಿಯನ್ನು ನೇಮಿಸುವದೆಂದರೆ ದೇಶದಲ್ಲಿ ಮಹತ್ತಾದ ತೊಂದರೆ ಏನೋ ಇದೆ, ಅಂಥಾ ತೊಂದರೆಯ ಪರಿಹಾರಕ್ಕೆ ಕಮಿಟಿಯ ಸಹಾಯ ಬೇಕು ಎಂಬದನ್ನು ಒಪ್ಪಿಕೊಂಡಂತೆಯೂ ಆಯಿತು ಮತ್ತು ಅಂಥಾ ಕಮಿಟಿಯೂ ಮಾಡುವ ಶಿಫಾರಸ್ಸುಗಳನ್ನು ಜಾರಿಗೆ ತರುತ್ತೇವೆಂತ ಸರಕಾರದವರು ಒಪ್ಪಿಕೊಂಡಂತೆಯೂ ಆಗುತ್ತೆ. ಆದರೆ ಸರಕಾರದವರು ತಮ್ಮ ಮುಖಾಂತರದಿಂದ ಒಂದು ಕಮಿಟಿಯನ್ನು ನೇಮಿಸಿ ಅಂಥಾ ಕಮಿಟಿಯ ಶಿಫಾರಸ್ಸನ್ನು ಜಾರಿಗೆ ತರಲಿಕ್ಕೂ ತಯಾರಿರಬೇಕು. ಆದ್ದರಿಂದ ಸರಕಾರವನ್ನು ಕೇಳುಗುವ ಕಮಿಟಿಗಳನ್ನು ನೇಮಿಸುವಂತೆ ಕೇಳಿಕೊಳ್ಳಬಾರದು. ಅಂಥಾ ಕಮಿಟಿಯು ಯಾವಯಾವ ವಿಷಯಗಳನ್ನು ಅಜಮಾಯಿಸುತ್ತದೆ ಎಂಬದು ಮೊದಲೇ ಸರಕಾರಕ್ಕೆ ತಿಳಿದಿರಬೇಕು. ಆದ್ದರಿಂದ ಸರಕಾರಕ್ಕೆ ಯುಕ್ತ ಕಾಣದವರು ಇದ ಕೌನ್ಸಿಲಿನ ಹೊರಗಿನಿಂದಾದರೂ ಕಮಿಟಿಗೆ ಜನಾನ್ನು

[illegible] ವಿವರಣೆ.

ದೇಶಭಕ್ತರೇ,

[illegible]

ತಮ್ಮ ಸೇವಕ,

[illegible]

[illegible]

[illegible]

ವರ್ತಮಾನ ಸಂಗ್ರಹ.

[illegible]

[illegible]

ಈ ವಾರ ಮಡಿಕೇರಿಯಲ್ಲಿ ಕಾಫಿ ... 40 ... ಯೊಳಕ್ಕೆ ವ ... 7 ... ರೂಪಾಯಿ ... ಸಾರ ಯೊಳಕ್ಕೆ ... 100 ರೂಪಾಯಿ ... ಕ್ರಯವಿಲ್ಲ).

ರಾವ್ ಸಾಹೇಬ ... ಅಸ್ಪೃಶ್ಯರವರು ಈ ತಾ ೧೯ಕ್ಕೆ 3ನೇ ಸೋಮವಾರ ಬೆಳಿಗ್ಗೆ ಮಡಿಕೇರಿಯಲ್ಲಿರುವ ಅವ ರ ಭವನದಲ್ಲಿ ಪರಲೋಕವನ್ನೈದಿದರು

ಕೊಡಗು ಸಬ್‌ಜಡ್ಜಿ ಕೋರ್ಟಿನಲ್ಲಿ ಹೈಲಾಗುವ ದಿಕ್ಲರೇ ಟರಿ ದಾವಗಳಿಗೆ 100 ರೂಪಾಯಿ ಕೋರ್ಟುಫೀಸು ಕಟ್ಟಬೇ ಕಂತ ಇತ್ತು. ಮುನ್ಸೀಫ್‌ಕೋರ್ಟಿನಲ್ಲಿ 2,000 ರುಪಾಯಿ ಒಳಿಯ ಸೂತ್ತಿನ ಸಂಬಂಧವಾಗಿ ಇದೇ ತರದ ದಾವವೂ ... ಪ್ರವಕ್ಕೆ 15 ರುಪಾಯಿ ಸಾಕೆಂತಇತ್ತು. ಆದುದರಿಂದ ಸಬ್ ಜಡ್ಜಿ ಕೋರ್ಟಿನಲ್ಲೂ 2,500 ರುಪಾಯಿ ವರೆಗಿನ ಇಂಥಾ ದಾ ವಗಳಿಗ 15 ರುಪಾಯಿ ಕೋರ್ಟುಫೀಸು ಮಾಡಿಕೊಡಬೇಕೆಂ ದು ವಾಯಿದೆಗಳ ನೆರವು ಕೇಳಿಕೊಂಡವರಮೇಲೆ ಚೀಫ್ ಕಮಿಷನರವರು ... ಇದ್ದಾರೆ.

ಬಂಗಳೂರ ... ಆಸ್ಪತ್ರೆಯಲ್ಲಿ ಆಪರೇಶನಾಗಿ ಚಿಕಿತ್ಸೆ ಹೊಂದುತ್ತಿದ್ದ ಡಾ. ಕಂಬೀರಾಡೆ ಕಾಳಪ್ಪನವರು ಅಲ್ಲಿ ತಾ 28ಲ್ಲು ಮೃತಪಟ್ಟರೆಂದೂ ಅವರನ್ನು ಮರ ದಿನ ವಿಟ್ಟಂಗಾಲಕ್ಕೆ ತಂದು ಅಲ್ಲಿ ದಫನಾ ಮಾಡಿದರೆಂದೂ ತಿಳಿಯುತ್ತದೆ

ಒಕ್ಟೋಬರು 31ರಲ್ಲು ಮಡಿಕೇರಿಯಲ್ಲಿ ಕೊಡಗು ಕೊ ಆಪರೇಟಿವ್ ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ನಡೆದು ... ಬ್ಯಾಂಕಿನಿಂದ 2,000 ರುಪಾ ... ಯಿತು.

... ಮು ಪುಲಿಯಂಡ ಸಂಬ ... ರಾತ್ರಿ ಮಗ್ಗುಲ ... ವಿವಾಹಿತನಾದರೆಂದು ತಿಳಿಯು ತ್ತದೆ

... ಗಾಲ್ಫ್ ಗ್ರೌಂಡಿನಲ್ಲು ಯೂ ... "ಬೇಬಿ ಷೋ" ನಡೆಯುವುದು

... ಸಿದ್ದಾಪುರದ ಬಳಿ ಇರು ... ವೀರಬುಬೇಟಿ ... ತೆಗೆದು ಅಸ್ಪತ್ರೆ ... ಆಸ್ಪತ್ರೆಯಲ್ಲಿ ಇಟ ... ವ್ಯಸನಪಡುತ್ತೇವೆ

ಸೋಮವಾರಪೇಟೆಯಲ್ಲಿರುವ ... ಯವರು ... ಮನೆ ಬಿಟ್ಟು ... ಮನೆ ಯ ಒಗಳಿಯಲ್ಲಿ ... ರಾತ್ರಿವೇಳೆಯಲ್ಲಿ ... ಗುಂಡು ಹಾಕಿದ್ದು ... ಚಿಕಿತ್ಸೆ ಹೊಂದುತ್ತಿರುವರೆಂದು ... ತಾವ ...

... ಕನ್ನಡ ವಾರಪತ್ರಿಕೆಯೊಂದು ... ಹೊರಡಲಿಕ್ಕಿದೆ. ಇದರಲ್ಲಿ ... ರಾಜ ಕೀಯ ... ಜೀವನವನ್ನ ... ಸಂಪಾದಕರು. ... ದೇಶದಲ್ಲು ... ಅವಶ್ಯಕತೆಯು ... ಗಿದೆ. ... ನಾವು ಸಂಪೂರ್ಣ ಸ್ವಾಗತವನ್ನೀಡುತ್ತೇವೆ ಇದು ... ಹಾರೈಸುತ್ತೇವೆ. ... 380 ... 'ಲೋಕ ಧ್ವನಿ' ಕ್ಕೆ ...

ಒಂದೂ ದೇಶ.

ಸಂಯುಕ್ತ ಪ್ರಾಂತ್ಯದ ರಾಜಕೀಯ ಕಾನ್‌ಫರೆನ್ಸಿನ 19ನೇ ವಾರ್ಷಿಕ ಮೀಟಿಂಗು ತಾ 1, 2ರಲ್ಲು ಗೋರಖಪುರ ದಲ್ಲಿ ನಡೆಯಿತು ಮ. ಪುರುಷೋತ್ತಮದಾಸ್ ಟಂಡನ್ ರವರು ಅಧ್ಯಕ್ಷರಾಗಿದ್ದರು. ಕಾಂಗ್ರೆಸ್ಸು ... ವಾರ್ಷಿಕ ... ನೂರು ... ಕಾಂಗ್ರೆಸ್ಸಿಗೆ ಒಪ್ಪಿದೆ

... ಪಕ್ಷವಾದಿಯು ... ದೇಶದಲ್ಲಿ ... ಡೋರಾ ... ನಿಷೇಧ ... ಕ್ಕೆ ... ಲ್ಲಿ ...

... ಮುಹಮ್ಮದ್ ... ಗಾಂಧಿಯವರನ್ನು ... ಹೋಲಿಸಿ ... ಲ್ಲಿ ... ಮಾಡಿದರು

... ಸೋಶಲಿಸ್ಟ್ ಸಂಗದ ... ಮುಂದಾ ... ಭಾಷಣ ... ಕಾರಣದಿಂದ ಒಂದು ... ವಿಧಿಸಲ್ಪಟ್ಟಿದೆ.

... ಜೋರಾಗಿ ... ಕಾರಣ ... ಕ್ರೈಸ್ ... ತ್ರಿವೇದಿ ... ವರ್ತಮಾನ

ಬಂಗಾಳದಲ್ಲಿ ನಡೆದ ದಸ್ತಗಿರಿಯ ಸಮ್ಮಂಧ ಹಿಂದೂ ದೇಶದ ಅನೇಕ ಕಡೆಗಳಲ್ಲು ಮೀಟಿಂಗು ನಡೆದು ಸರ್ಕಾರದವ ರ ಕೃತ್ಯವನ್ನು ಖಂಡಿಸಿರುವರು ಬಂಗಾಳದಲ್ಲೆಲ್ಲಾ ತಾ 1ರಲ್ಲು ಹರತಾಳವು ಆಚರಿಸಲ್ಪಟ್ಟಿತು. ಕಲ್ಕತ್ತಾ ಮುನ್ಸಿಪಾ ಲಿಟಿಯವರ ಮೀಟಿಂಗಿನಲ್ಲು ಅಧ್ಯಕ್ಷರಾದ ಮ ಸಿ. ಆರ್ ದಾ ಸ ರವರು ಎಲ್ಲರಲ್ಲಿಯೂ ಹುರಿದುಂಬಿಸುವ ಭಾಷಣವನ್ನು ಮಾ ಡಿದರು. ಈ ದಸ್ತಗಿರಿಯ ಸಂಬಂಧ ಮಹಾತ್ಮ ಗಾಂಧಿಯವ ರು ತಾ 2 ರಲ್ಲು ಡೆಲ್ಲಿಯಿಂದ ಕಲ್ಕತ್ತಾಕ್ಕೆ ಹೋಗಿರುವರು.

ತಾ 4ರಲ್ಲು ಮಹಾತ್ಮ ಗಾಂಧಿಯವರು ಕಲ್ಕತೆಗೆ ತಲ ಪಿದರು. ಬಂಗಾಳದ ಬಿಕ್ಕಟ್ಟಿನ ಸಮಯದಲ್ಲಿ ಮಹಾತ್ಮರಂ ಥವರ ಒದ್ದಿವಾದವೂ ಮುಂದಾಳುತನವೂ ಅವಶ್ಯವೆಂದು ಆ ಲ್ಲಿಯ ಪತ್ರಿಕೆಗಳು ಅವರಿಗೆ ಸ್ವಾಗತವನ್ನೀಡಿದವು. ಮುನಿಸಿ ಪಾಲಿಟಿಯವರು ಅವರಿಗೆ ಒಂದು ಸ್ವಾಗತ ಪತ್ರವನ್ನು ಅರ್ಪಿ ಸಿದರು. ಆ ದಿನವೇ ನಡೆದ ಸ್ವರಾಜ್ಯ ಪಕ್ಷದ ಎಗ್ಸಿಕ್ಯುಟಿ ವ್ ಕಮಿಟಿ ಮೀಟಿಂಗಿನಲ್ಲಿ ಮೆಂಬರುಗಳಲ್ಲದವರ ಪೈಕಿ ಮ ಹಾತ್ಮರೂ, ಶ್ರೀಮತಿ ಸರೋಜಿನಿ ದೇವಿಯವರೂ ಹಾಜರಿದ್ದ ರು

ವಿದೇಶ.

ನವಂಬರು 1ರಲ್ಲಿ ಬ್ರಿಟಿಷ್ ಸಾಮ್ರಾಜ್ಯದ ವೆಂಬ್ಲಿ ಪ್ರದ ರ್ಶನವು ಮುಕ್ತಾಯಗೊಳಿಸಲ್ಪಟ್ಟಿತು. ಮಳೆಯು ಜೋರಾ ಗಿದ್ದರೂ ಕೂಡ ಸುಮಾರು 50,000 ಜನರು ನೆರೆದಿದ್ದರು. ಪ್ರಿನ್ಸ್ ಆಫ್ ವೇಲ್ಸ್‌ರವರು ಅಂತ್ಯದ ಭಾಷಣ ಮಾಡಿದರು. ಪ್ರದರ್ಶನವನ್ನು ನೋಡಲು ಒಟ್ಟು 18ಮಿಲಿಯ ಜನರು—ಅದ ರಲ್ಲಿ 5 ಮಿಲಿಯ ಮಕ್ಕಳು—ಹೋಗಿದ್ದರಂತೆ

ಬೆಲ್‌ಫಾಸ್ಟ್ ಕೋರ್ಟಿನಲ್ಲಿ ವಿಚಾರಿಸಲ್ಪಟ್ಟಾಗ ಡಿ ವೇಲೆರ ರವರು, ಆ ಕೋರ್ಟು ಐರ್ಲೆಂಡಿನ ಜನರಿಂದ ಒಪ್ಪಲ್ಪಟ್ಟದಲ್ಲ ವಾದುದರಿಂದ ಅದರಲ್ಲಿ ವಾದ ಮಾಡುವುದಿಲ್ಲವೆಂದು ಹೇಳಿದ ರು. ಅವರಿಗೆ ಒಂದು ತಿಂಗಳ ಸಜೆ ವಿಧಿಸಿರುವರು

ಇಂಡಿಯಾದ ಮುಂದಿನ ವೈಸರಾಯರು ಡಿವೋನ್‌ಶಯ ರಿನ ಡ್ಯೂಕ್‌ರಾಗಬಹುದೆಂದು 'ಡೆಯಿಲಿ ಕ್ರಾನಿಕಲ್' ಪತ್ರಿ ಕೆಯು ಸೂಚಿಸಿದೆ

ಅಲ್ಹಾರ್ ಯೂನಿವರ್ಸಿಟಿಯ ವಿದ್ಯಾರ್ಥಿಗಳ ಕೋರಿಕೆಗ ಳನ್ನು ಈಜಿಪ್ಟ್ ಸರಕಾರದವರು ನಿರಾಕರಿಸಿದ್ದರಿಂದ ಇಡೀ ಈಜಿಪ್ಟಿನ ದೇವಜ್ಞಾನ ಶಾಸ್ತ್ರದ ವಿದ್ಯಾರ್ಥಿಗಳೆಲ್ಲರೂ ಮುಷ್ಕ ರ ಹಿಡಿದಿರುವರು

ಬ್ರಿಟನ್ನಿನ ಪಾರ್ಲಿಮೆಂಟ್ ಚುನಾವಣೆಯು ಕಳೆದ ತಾ. 29ರಲ್ಲು ನಡೆಯಿತು. ಪಾರ್ಲಿಮೆಂಟು ಮುಕ್ತಾಯವಾದಾ ಗ ಅದರಲ್ಲಿ 357 ಕನ್‌ಸರ್‌ವೇಟಿವ್, 187 ಲೇಬರ್, 156 ಲಿ ಬರಲ್ ಮತ್ತು 11 ಬೇರೆ ಮೆಂಬರುಗಳಿದ್ದರು. ತಾ 1ರಲ್ಲು —ಒಂದು ಸ್ಥಳದ ಫಲಿತಾಂಶವು ತಿಳಿದಿರುವುದಿಲ್ಲ—408 ಕ ನ್ಸರ್‌ವೇಟಿವ್, 150 ಲೇಬರ್, 37 ಲಿಬರಲ್ ಮತ್ತು 11 ಬೇರೆ ಮೆಂಬರುಗಳು ಚುನಾಯಿಸಲ್ಪಟ್ಟಿರುವರು. ಆದುದರಿಂದ ಕ ನ್ಸರ್‌ವೇಟಿವ್ ಪಂಗಡದವರ ಬಹುಮತವು ಇರುವ ಕಾರಣ ಅವರ ಪಂಗಡವು ಸರಕಾರವನ್ನು ನಡೆಸುವುದು. ಆ ಪಂಗಡದ ಮುಂದಾಳಾದ ಮ. ಬಾಲ್ಡ್‌ವಿನ್‌ರವರು ಮುಖ್ಯಮಂತ್ರಿಯಾ ಗಿ ಮಂತ್ರಿಮಂಡಳಿಯನ್ನು ಏರ್ಪಡಿಸುವರು. ಈ ಪಂಗಡ ದ ಸರಕಾರದಿಂದ ಇಂಡಿಯಾದೇಶಕ್ಕೆ ಹೆಚ್ಚಿನ ಸುಧಾರಣೆ ಸಿ ಕ್ಕುವ ಸಂಭವವೇ ಇಲ್ಲವೆಂದು ತೋರುತ್ತದೆ. ಇನ್ನು ನೋ ಡಬೇಕಷ್ಟೆ

ಚೈನಾದ ಯುದ್ಧದಲ್ಲಿ ಜನರಲ್ ಫೆಂಗ್‌ರವರು ಪೆಂಗ್‌ಯು ಹ್ಯಾಂಗ್‌ರವರಿಂದ ಸೋಲಿಸಲ್ಪಟ್ಟಿರುವರೆಂದೂ, ಅವರಿಬ್ಬರೂ ರಾಜಿಗೆ ಪತ್ರವ್ಯವಹಾರ ನಡೆಸುತ್ತಿರುವರೆಂದೂ, ಈ ಮಧ್ಯೆ ತತ್ಕಾಲ ಯುದ್ಧ ನಿಲ್ಲಿಸಲ್ಪಟ್ಟಿದೆ ಎಂದೂ ವರ್ತಮಾನ

ಅಕ್ಟೋಬರು ಅಖೈರಿನಲ್ಲು ಬ್ರಿಟಿಷ್ ದ್ವೀಪಗಳ ಮೇಲೂ ಫ್ರಾನ್ಸ್ ದೇಶದಮೇಲೂ ದೊಡ್ಡ ಬಿರುಗಾಳಿಯು ಬೀಸಿ ಮ ಳೆಯು ಜೋರಾಗಿ ಬಿತ್ತು. ಅನೇಕ ಕಡೆಗಳು ನೆರೆಯಿಂ ತುಂಬಲ್ಪಟ್ಟಿದ್ದವು.

ಬ್ರಿಟನ್ನಿನಲ್ಲಿ ನಡೆಯುತ್ತಿರುವ ಮುನ್ಸಿಪಲ್ ಚುನಾವಣೆ ಯಲ್ಲಿ ಲೇಬರ್ ಪಂಗಡದವರು ಹೆಚ್ಚಾಗಿ ಗೆಲ್ಲುತ್ತಿರುವರು ಅವರನಂತೆ ಬೇರೆ ಎರಡು ಪಂಗಡದವರ ಸಂಖ್ಯೆಗಿಂತ ಹೆಚ್ಚಾ ಗುತ್ತಿದೆ

ಮೈಸೂರು ಮಾದರಿ ರಾಜ್ಯವೆ?

ಮೈಸೂರಿಗೆ ನಾನು ಆಗಾಗ್ಗೆ ಹೋಗುವುದುಂಟು. ನಮ್ಮ ಪೂರ್ವಿಕರು ಈ ಕಡೆಯವರಾದುದರಿಂದ, ನೆಂಟರಿಷ್ಟ ರನ್ನು ನೋಡಲು ಆಗಾಗ್ಗೆ ಅಲ್ಲಿಗೆ ಹೋಗಬೇಕಾಗುತ್ತೆ. ಸರ್ತಿ ಆರೋಗ್ಯನಿಮಿತ್ತವಾಗಿ ನಾನು ಈ ಮೈಸೂರು ಪಟ್ಟ ಣ್ಣದಲ್ಲಿ ಹೆಚ್ಚು ಕಾಲ ನಿಲ್ಲಬೇಕಾಯಿತು.

ಮೈಸೂರು ಪಟ್ಟಣವನ್ನು ನೋಡಿದ ಮಾತ್ರಕ್ಕೆ ಮೈಸೂ ರಸಂಸ್ಥಾನವೆಲ್ಲವೂ ಇಂಥಾ ಫಲವೃಕ್ಷಗಳಿಂದ ಕೂಡಿದೆಯೆಂ ಯ ... ಭಾಸವಾಗದಿರದು. ಮೈಸೂ ರು ಪಟ್ಟಣದಲ್ಲಿ ದೊಡ್ಡ ದೊಡ್ಡ ಬಂಗ್ಲೆಗಳಿವೆ. ರಸ್ತೆಗಳು ಬ ಹಳ ಅಗಲವಾಗಿವೆ. ಅಲ್ಲಲ್ಲಿ ಒಂದು ಹೋದ ವೈಸರಾಯರ ಸ್ಮರಣಾರ್ಥವಾಗಿ ಕಟ್ಟಿಸಿದ ಉದ್ಯಾನ ವನಗಳಿವೆ. ಕರ್ಜನ್ ಪಾರ್ಕ್ ... ಹಾರ್ಡಿಂಜ್ ಸರ್ಕಲ್ ನೋಟಕ್ಕೆ ಆನಂದವಾಗಿದೆ. ಸೂರು ... ಪಟ್ಟಣಗಳು, ವಿದ್ಯುಚ್ಛಕ್ತಿಯೇ ಮೊದ

ರಣ. ನೀರಾವರಿಯ ಬದಲಾವಣೆಯು ಈ ದೇಶಕ್ಕೆ ಹೆಚ್ಚಿನ ಧಾನ್ಯವನ್ನು ಕೊಟ್ಟಿದೆ. 20, 30 ವರ್ಷಗಳ ಹಿಂದೆ ಬರಗಾಲಗಳಿಂದ ಪೀಡಿತವಾಗುತ್ತಿದ್ದ ದೇಶವು ಈಗ ಧವಸ ಧಾನ್ಯಗಳಿಂದ ತುಂಬಿ ತುಳುಕುತ್ತಿದೆ.

ಕೆಲವು ವರ್ಷಗಳ ಹಿಂದಿನವರೆಗೂ, ಮೈಸೂರು ಸಂಸ್ಥಾನವು ದೊಡ್ಡ ಪ್ರದೇಶವಾದರೂ, ಅದಕ್ಕೊಂದು ವಿಶ್ವವಿದ್ಯಾನಿಲಯವಿರಲಿಲ್ಲ. ಈಗ ಅಮೇರಿಕಾ ದೇಶದ ಮಾದರಿಯನ್ನನುಸರಿಸಿದ ಒಂದು ವಿಶ್ವವಿದ್ಯಾಲಯವು ಇದೆ. ಈ ವಿದ್ಯಾನಿಲಯವನ್ನು ನೋಡಲಿಕ್ಕೆ ಹೋದ ಪ್ರತಿಯೊಬ್ಬ ಮನುಷ್ಯನು ಆಶ್ಚರ್ಯ ಪಡದಿರಲಾರನು. ವಿದ್ಯಾ ಪ್ರಸಾರಕ್ಕಾಗಿ ಮೈಸೂರಿನಲ್ಲಿ ಬಹಳ ದ್ರವ್ಯ ವ್ಯಯವಾಗುತ್ತಿದೆ. ಪ್ರಾಥಮಿಕ ವಿದ್ಯಾಭ್ಯಾಸ ಕ್ರಮವು ಮದ್ರಾಸಿನವರಷ್ಟು ಉತ್ತಮ ತರದ್ದೆಂದು ಹೇಳಲಾಗದಿದ್ದರೂ, ತತ್ಕಾಲಿಕ ಕ್ರಮವನ್ನು ಸರಿಪಡಿಸಬೇಕೆಂಬ ವಿಚಾರವು ಉದ್ಯೋಗಸ್ಥರಿಗಿದೆ. ಪ್ರೌಢವಿದ್ಯಾಭ್ಯಾಸವು ಒಳ್ಳೆ ತರದ್ದಿದೆ. ಇಲ್ಲಿನ ವಿದ್ಯಾ ನಿಲಯದ ವೈಸ್ ಛಾನ್ಸಲರಾದ ಮ ಬ್ರಜೇಂದ್ರನಾಥ ಶೀಲರವರ ವಿದ್ಯಾಕ್ರಮವನ್ನು ಉತ್ತಮಪಡಿಸುತ್ತಲಿರುವರು. ಇವರು ಬಹು ದೊಡ್ಡ ಮೇಧಾವಿಗಳಾಗಿದ್ದು, ಮೈಸೂರಿಗೆ ಹಿತಪ್ರಾಯರಾಗಿರುವರು. ಇವರಂತೆ ಮ ರಾಮಲಿಂಗ ರೆಡ್ಡಿಯವರು ವಿದ್ಯಾವಂತರಾಗಿದ್ದು ಮೈಸೂರಿನಲ್ಲಿಯೇ ಸುಮಾರು ಹನ್ನೆರಡು ವರ್ಷಗಳು ಪ್ರೊಫೆಸರಾಗಿಯೂ, ವಿದ್ಯಾ ಇಲಾಖೆಯ ಮುಖ್ಯಾಧಿಕಾರಿಯೂ ಇದ್ದು, ಕೆಲಕಾಲಕ್ಕೆ ಹಿಂದೆ ಪಿಂಚಿನ್ ತೆಗೆದು ಮದ್ರಾಸಿಗೆ ಹೋಗಿ, ಅಲ್ಲಿ ಜನಸೇವೆ ಮಾಡುತ್ತಲಿದ್ದಾರೆ. ಮೈಸೂರು ಯೂನಿವರ್ಸಿಟಿ ನಿರ್ಮಾಣಕ್ಕೆ ಇವರ ವಿದ್ವತ್ತೆ ಮುಖ್ಯ ಕಾರಣವೆಂದು ಜನರ ಅಭಿಪ್ರಾಯ. ವಿದ್ಯಾ ಪ್ರಚಾರಕ್ಕಾಗಿ ಬಹಳ ಮೆಹನತ್ತಿನಿಂದ ಕೆಲಸಮಾಡಿದರು. ಸ್ತ್ರೀ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಉತ್ತೇಜನಕೊಟ್ಟವರು ಇವರೇ. ಕೆಲವು ಬ್ರಾಹ್ಮಣರು ಇವರನ್ನು ಅಬ್ರಾಹ್ಮಣ ಪಕ್ಷಪಾತಿಗಳೆಂದು ದೂರಿದರು. ಇರಲಿ. ಇವರ ದೊಡ್ಡಸ್ತಿಕೆಯು ಇವರು ವಿದ್ಯಾ ಇಲಾಖೆಯಲ್ಲಿ ಮಾಡಿರುವ ಸುಧಾರಣೆಗಳಿಂದ ವ್ಯಕ್ತವಾಗುವದು.

ಇವರೇ ಇನ್ನು ಕೊಂಚಕಾಲ ವಿದ್ಯಾ ಇಲಾಖೆಯ ಅಧಿಕಾರಿಗಳಾಗಿದ್ದರೆ, ಬಹಳ ಪ್ರಯೋಜನಕರವಾಗಿರುತ್ತಿತ್ತೆಂದು ಹಲವು ವಿದ್ಯಾವಂತರ ಅಭಿಪ್ರಾಯ. ಮೈಸೂರು ಪಟ್ಟಣದಲ್ಲಿ ಸೊಗಸಾದ ದೊಡ್ಡದೊಂದು ಆಸ್ಪತ್ರೆ ಇದೆ. ಇದರ ಎದುರಿನಲ್ಲಿ ಒಂದು ಕೈಗಾರಿಕ ಶಾಲೆ ಇದೆ. ಇಲ್ಲಿ [illegible] ಕೆಲಸ, ಚಿತ್ರದ ಕೆಲಸ, ಕ್ಯಾಬಿನೆಟ್ ಕೆಲಸ, ಇತ್ಯಾದಿ ಸಣ್ಣ ಕೈ ಕೆಲಸಗಳು ಕಲಿಸಲ್ಪಡುತ್ತವೆ. ಇಲ್ಲಿ ಕೆಲಸಗಳನ್ನು ಕಲಿತ ಹುಡುಗರು ಚೆನ್ನಾಗಿ ದುಡಿಯುತ್ತಿದ್ದಾರೆ.

ನಾಲ್ಕೈದು ವರ್ಷಗಳ ಹಿಂದೆ ಸ್ಥಾಪಿತವಾದ ಕೃಷ್ಣರಾಜ ಕಾರ್ಖಾನೆಯು ಹೆಚ್ಚು ಕೆಲಸ ನಡೆಸುತ್ತಿಲ್ಲವಾದರೂ, ದಿನೇ ದಿನೇ ಬೆಳೆಯುತ್ತಿದೆ. ದೇಶಕ್ಕೆ ಸಾಕಾಗುವಷ್ಟು ಬಟ್ಟೆಯನ್ನು ತಯಾರುಮಾಡುವಷ್ಟು ಕಾರ್ಖಾನೆಗಳಿಲ್ಲ. ಹೊಸ ಹೊಸ ಕಾರ್ಖಾನೆಗಳನ್ನು ಸ್ಥಾಪಿಸುವ ಕುತೂಹಲವು ಜನರಿಗಿದೆ.

ಮೈಸೂರು ದೇಶಕ್ಕೆ ಒಂದು ದೊಡ್ಡ ಬ್ಯಾಂಕು ಇದೆ. ಇದರ ಸಹಾಯದಿಂದ ವ್ಯಾಪಾರದ ವ್ಯವಹಾರವು ಚೆನ್ನಾಗಿ ನಡೆಯುತ್ತಿದೆ. ಇದರ ಶೇರುಗಳನ್ನು ಹೆಚ್ಚು ಬೆಲೆ ಕೊಟ್ಟು ಕೊಂಡುಕೊಳ್ಳಲು ಜನರು ಆತುರರಾಗಿದ್ದಾರೆ.

ಮೈಸೂರು ಮಹಾರಾಜರು ಈ ವರ್ಷ ಹೆಚ್ಚು ರಾಜಕೀಯ ಸುಧಾರಣೆಗಳನ್ನು ಮಾಡಿರುತ್ತಾರೆ. ರಾಜನಿಗೆ ಪ್ರಜೆಗಳ ಮೇಲೆ ಇರುವ ಪ್ರೀತಿಗಿಂತಲೂ, ಪ್ರಜೆಗಳ ಪ್ರೇಮವು ರಾಜನಮೇಲೆ ದ್ವಿಗುಣವಾಗಿದೆ. "ರಾಜಾ ಪ್ರತ್ಯಕ್ಷದೇವತಾ" ಎಂಬ ನಾಣ್ಣುಡಿಯು ಈ ಜನ್ಮದಿನದ ಮಹೋತ್ಸವದಿಂದ ಸಾರ್ಥಕವಾಗುತ್ತದೆ. ಆ ದಿನದ ಮೆರವಣಿಗೆಯನ್ನು ನೋಡಲಿಕ್ಕಾಗಿ ಅಸಂಖ್ಯಾತ ಜನರು ನಾನಾ ಕಡೆಗಳಿಂದ ದಯಮಾಡಿಸುತ್ತಾರೆ. ಇದನ್ನೆಲ್ಲಾ ನೋಡುವಾಗ, ಹಿಂದುಗಳಿಗೆ ಪ್ರಜಾಪ್ರಭುತ್ವದ ಮೇಲೆ ಪ್ರೀತಿ ಕಡಿಮೆಯೆಂದು ಅನೇಕ ಆಂಗ್ಲೇಯರು ತಿಳಿದುಕೊಳ್ಳುತ್ತಾರೆ. ಆದರೆ ಇದು ಸುಳ್ಳು. ಆಂಗ್ಲ ಸರಕಾರವು ಉಳಿದಿರುವುದು ಬಹಳ ದಿನಗಳಿಂದಲೇ ಪಾರ್ಲಿಮೆಂಟಿನಂತೆ, ಪ್ರಜಾ ಪ್ರತಿನಿಧಿ ಸಭೆಯಿಂದ ಈ ಕಾಲಕ್ಕೆ ತಕ್ಕಂತೆ ರಾಜ್ಯಭಾರ ನಡೆಸುವುದು ಸುಲಭವಿದೆ. ಆದುದರಿಂದಲೇ ಮಹಾರಾಜರು ಹೊಸ ಸುಧಾರಣೆಗಳನ್ನು ಮಾಡಿ ಕೋಮುವಾರು ಪ್ರತಿನಿಧಿಗಳನ್ನು ಸಭೆಗೆ ನೇಮಿಸಿರುತ್ತಾರೆ. ಮಹಾರಾಜರು ಪ್ರಜಾಪಕ್ಷಿಗಳೆಂಬುದು ಇನ್ನೊಂದು ಸಂಗತಿಯಿಂದ ತಿಳಿಯುವುದು. ಬೆಂಗಳೂರಿನ ಗೋರಕ್ಷಣಾಸಂಘದವರು ಗೋಹತ್ಯವನ್ನು ಮೈಸೂರುದೇಶದಲ್ಲಿ ಮುಕ್ತಮಾಡಬೇಕೆಂದು ಬರಕೊಂಡ ಮನವಿಯನ್ನು ರಾಜರು ಪರ್ಯಾಲೋಚಿಸಿ, ಕೌನ್ಸಿಲಿನಲ್ಲಿರತಕ್ಕ ನಿಮ್ಮ ಪ್ರತಿನಿಧಿಗಳು ಒಪ್ಪಿದರೆ, ಗೋಹತ್ಯವನ್ನು ನಿಲ್ಲಿಸಬಹುದೆಂದು ಹುಕುಂ ಕೊಟ್ಟಿರುತ್ತಾರೆ.

ಮೈಸೂರಿನಲ್ಲಿ ಸಹಕಾರವು ವೃದ್ಧಿಗೊಂಡಿದೆ. ಆದರೆ ಕಳೆದ ವರ್ಷದ ವರದಿಯಿಂದ ಹೆಚ್ಚು ಉತ್ಸಾಹವು ತೋರಿಬರುವದಿಲ್ಲವಾದರೂ, ಇಷ್ಟು ಕಾಲದ ವರೆಗೆ ಸಹಕಾರ ಚಳವಳಿಯು ಸೊಗಸಾಗಿ ನಡೆದಿದೆಯೆಂದು ಗೋಚರವಾಗುವುದು. ಈ ಚಳವಳಿಯಿಂದ ಅನೇಕಾನೇಕ ಜನವರ್ಗಕ್ಕೆ ಹೆಚ್ಚು ಪ್ರಯೋಜನ ಉಂಟಾಗಿದೆ. ಜನರ ಆರ್ಥಿಕ ಸ್ಥಿತಿಯೂ ಉತ್ತಮವಾಗುತ್ತಿದೆ.

ಮೈಸೂರು ಪಟ್ಟಣದ ಕರ್ಜನ್‌ಪಾರ್ಕಿನಲ್ಲಿ ಸಾಯಂಕಾಲ ಕೊಂಚ ಹೊತ್ತು ನಿಂತರೆ, ಹುಣ್ಣಿಮೆ ಚಂದ್ರಗಳು ಗೋಚರವಾಗುವವು. ನಾವಿರುವುದು ಇಂದ್ರಲೋಕವೋ ಎನ್ನುವಂತೆ ತೋರುವುದು. ಇಂದ್ರಲೋಕವು ಹೀಗಿರಬಹುದೇ? ವಿದ್ಯುಚ್ಛಕ್ತಿ ದೀಪಗಳು ಮೈಸೂರು ಪಟ್ಟಣವನ್ನು ಮಾದರಿ ಪಟ್ಟಣವನ್ನಾಗಿಯೂ ಮಾಡಿವೆ. ಅದು ಕಾರಣ, ಮೈಸೂರು ಪಟ್ಟಣವು ಮಾದರಿಯೆಂದರೂ ಆಗಬಹುದು, ಇಲ್ಲವೆ ಮೈಸೂರು ದೇಶವಾದರೂ ಮಾದರಿಯಾದರೂ ಆಗಬಹುದು. ಮೈಸೂರು ಇಂಥಾ ಊರ್ಜಿತಸ್ಥಿತಿಗೆ ಬರಲಿಕ್ಕೆ ಸರ್. ಕೆ. ಶೇಷಾದ್ರಿ ಅಯ್ಯರವರೇ ಕಾರಣರು.

"ಕೊಡಗ".

ಪತ್ರವ್ಯವಹಾರಗಳು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ. ಸಂ

ಕೌನ್ಸಿಲಿನಲ್ಲಿ ಪ್ರತಿನಿಧಿಗಳು

ಅಯ್ಯ,

ಈಗ ನಾಲ್ಕೈದು ವಾರಗಳಿಂದ ತಮ್ಮ ಪತ್ರಿಕೆಯಲ್ಲಿ ಕೊಡಗು ಕೌನ್ಸಿಲಿನಲ್ಲಿ ನಡೆದ ಚರ್ಚೆಗಳು, ಸರಕಾರದವರನ್ನು ಕೇಳಿದ ಸವಾಲು, ಅವರು ಕೊಟ್ಟ ಜವಾಬು, ಸಭೆಯಲ್ಲಿ ಚರ್ಚೆಯಿಂದ ಪಾಸಾದ ಅಂಶಗಳನ್ನು ಕಂಡು ಕೌನ್ಸಿಲ್ ಚರ್ಚೆಯನ್ನು ಓದಿ ನೋಡಿಯೂ ಹರುಷವಂತನಾಳಿದೆನು. ಈ ಮೊದಲು ಎಂದಾವರ್ತಿ ಕೂತ ಸೆಶನ್‌ನಲ್ಲಿ ಸಹ ಇದೇ ಮೇರೆ ಕೆಲವು ಠರಾವುಗಳು ಮಂಜೂರಾದವು, ಆದರೆ ಅವು ಯಾವದೂ ಇದುವರೆಗೆ ಒಂದು ಸಾರಿ ತಮ್ಮ ಪತ್ರಿಕೆಯಲ್ಲಿ ಕಂಡುಬರಲಿಲ್ಲ. ಸರಕಾರದವರು ತಮಗೆ ತಿಳಿಸದ್ದರಿಂದ ಪ್ರಕಟವಾಗಲಿಲ್ಲವೋ, ಅದಲ್ಲ, ಕೌನ್ಸಿಲ್‌ನವರ ಠರಾವುಗಳು ಯಾವದನ್ನೂ ಹ ಒರತ್ ಚೀಫ್ ಕಮಿಷನರ್ ಸಾಹೇಬರವರು ಗಮನಿಸಲಿಲ್ಲವೋ ಎಂಬುದು ಗೊತ್ತಾಗುವುದಿಲ್ಲ. ಈ ಕೌನ್ಸಿಲ್ ಮೆಂಬರುಗಳಿಗೆ ಭತ್ಯ, ಸಕ್ರೆಟರಿ, ಗುಮಾಸ್ತ, ಇತ್ಯಾದಿ ವಗೈರ ಸಿಬ್ಬಂದಿಗಳ ಸಂಬಳ ಮಾತ್ರ ಖರ್ಚಿಗಾಗಿ ಒಂದು ಸಭೆಯೋ? ಇದರಿಂದ ದೇಶೀಯರಿಗೆ ಇದುವರೆಗೆ ಯಾವ ಪ್ರಯೋಜನದ ಠರಾವು ಮಂಜೂರಾದಾಗ್ಯೂ ಜಾರಿಗೆ ಬರಲಿಲ್ಲ. ದೇಶದಲ್ಲಿ ಜನಸಂಖ್ಯೆಯೇ ಕಮ್ಮಿಯಾಗಿ ಹೋಯಿತು. ಇದರ ಕಾರಣ ಕಂಡು ಹಿಡಿಯಲು ಒಂದು ಕಮಿಟಿ ನೇಮಕವಾಗಬೇಕೆಂಬ ಠರಾವು ಬಹುಮತದಿಂದ ಮಂಜೂರಾಯಿತು. ಇನ್ನೂ ಯಾವ ಫಲಿತಾಂಶವೂ ಕಾಣುವದಿಲ್ಲ, ಈ ಠರಾವು ಒಡನೆ ಜಾರಿಗೆ ಬರಬೇಕೆಂಬುದಕ್ಕೆ ಒಂದು ಸಾಮ್ಯವನ್ನು ಕೊಡುವೆನು, ಅದೇನೆಂದರೆ —ನಾಪೋಕ್ಲುನಾಡು ನೆಲಜಿಗ್ರಾಮದಲ್ಲಿ ಕಳೆದ ಜನವರಿ ಲೆಕ್ಕದ ಮೇರೆ 700 ಜನಸಂಖ್ಯೆ, ಇದರಲ್ಲಿ ಈ 1924ನೇ ಏಪ್ರಿಲ್ ಒಂದರ ಆರಭ್ಯವಾಯಿತು ಇಂದಿನವರೆಗೆ ಅಂದರೆ ಅಕ್ಟೋಬರ್ 28ರ ವರೆಗೆ 51 ಮರಣ, 18 ಜನನ. ಈ ಮರಣಕ್ಕೆ ಕಾರಣವೇನೆಂದು ಸಹಸ ಸರಕಾರದವರು ಪರ್ಯಾಲೋಚಿಸದೆ ಹೋದರೆ, ದೇಶದಲ್ಲಿ ರೈತರಿಲ್ಲದೆ ಹೋದರೆ ದೊರೆತನ ಎಲ್ಲಿಯದು? ಆದ್ದರಿಂದ ಈ ಕಾರಣವನ್ನು ಕಂಡುಹಿಡಿಯಲು ಒಡನೆ ಒಳ್ಳೆ ಅನುಭವಶಾಲಿಗಳ ಕಮಿಟಿ ಖಂಡಿತ ನಿರ್ಮಾಣವಾಗಬೇಕು.

ಕೌನ್ಸಿಲ್ ಮೆಂಬರತನ ದೊರೆಯುವ ವರೆಗೆ ದೇಶಸೇವಕ, ಈಶಸೇವಕ, ತಾನು ಹಾಗೆ ಮಾಡುವೆನು, ಹೀಗೆ ಮಾಡುವೆನೆಂದು ಬೋಧಿಸಿ ಮೆಂಬರತನ ದೊರೆತನಂತರ ಈಗ ದೇಶದ ಏಳಿಗೆಗಾಗಿ ಚರ್ಚೆಗೆ ಬಂದ ಮುಖ್ಯ ಠರಾವುಗಳಿಗೂ ಕೂಡ (ನ್ಯೂಟರಲ್) ಯಾವ ಪರವೂ ಇಲ್ಲದೆಯೂ, ಕಲವು ಸಮಯ ಸರಕಾರಿ ಪರ ಸೇರುವ ಮೆಂಬರುಗಳನ್ನೂ ಸಹ ಈ ಲೇಖಕನು ನೋಡಿರುವನು. ಅಂಥಾವರಿಗಲ್ಲವೇ ಇನ್ನೊಂದಾವರ್ತಿ ಓಟ್ಸ್ ಕೊಡಬೇಕಾದದ್ದು! ದೇಶೀಯರು ಓಟ್ಸ್ ಕೊಟ್ಟು ಮನೆಯಲ್ಲಿ ಕೂರುವದಲ್ಲ, ನಾವು ಚುನಾಯಿಸಿ ಕಳುಹಿದ ಮೆಂಬರು ನಮ್ಮ ಕ್ಷೇಮಾರ್ಥದ ಕೆಲಸ ಮಾಡುತ್ತಾರೋ ಇಲ್ಲವೋ ಎಂಬದನ್ನು ನಾವು ಪ್ರತೀ ಕೌನ್ಸಿಲ್ ಸೆಶನ್ ದಿನಗಳಲ್ಲೂ ಹೋಗಿ, ಕಾದು ನೋಡುವದೇ ನಮ್ಮ ಮುಖ್ಯ ಕರ್ತವ್ಯವಾಗಿದೆ. ದೇಶೀಯರಲ್ಲಿ ಅನೇಕರು ತಾನು ಮೆಂಬರಲ್ಲದ್ದರಿಂದ ತನ್ನನ್ನು ಆ ಸಭೆಗೆ ಸೇರಿಸಲಾರರೆಂಬ ಭಾವನೆಯಲ್ಲಿದ್ದಾರೆ. ಇದು ತಪ್ಪು. ಒಂದು ದಿನಕ್ಕೆ ಮುಂದಾಗಿ ಈ ಕೌನ್ಸಿಲ್ ಸಕ್ರೆಟರಿಯವರಿಗೆ ಒಂದು ಕಾಗದ ಬರಕೊಂಡರೆ ಧಾರಾಳವಾಗಿ ಟಿಕೇಟು ಕೊಡುವರು. ಈಗ ನಾವು ಮುಖ್ಯವಾಗಿ ನೋಡಿದರೆ ಇನ್ನು ಬರುವ ಚುನಾವಣೆಯಲ್ಲಿ ಯಾರಿಗೆ ಕೊಡಬೇಕು ಕೊಡಬಾರದು ಎಂಬುದನ್ನು ಸರ್ವರೂ ಗೊತ್ತುಮಾಡಿಕೊಳ್ಳಬಹುದು.

ಕೊಡಗು ಕೌನ್ಸಿಲ್ ಮೀಟಿಂಗಿನಲ್ಲಿ ಹಾಜರಿದ್ದವ.

ನಾಟಕ ಮಂಡಳಿ.

ದೇಶಬಾಂಧವರೇ,

ಕೊಡಗು ಕೊಡ್ಲಿಪೇಟೆ ಶ್ರೀ ಬಸವೇಶ್ವರ ಕೃಪಾಪೋಷಿತ ಕರ್ನಾಟಕ ಮಂಡಳಿಯವರು ಸುಭದ್ರಾ ಪರಿಣಯ, ರಾಜಹಂಸ ಸದಾರಾಮ ನಾಟಕ, ಗುಲೇಬಕಾವಲಿ, ಲಂಕಾದಹನ, ಕಾಳಿದಾಸ ಚರಿತ್ರೆ ಎಂಬ ಆರು ನಾಟಕಗಳನ್ನು ಕಲಿತಿರುವರು, ಇನ್ನು ಒಂದು ತಿಂಗಳೊಳಗಾಗಿ ಪ್ರಹ್ಲಾದ ಚರಿತ್ರೆಯನ್ನು ಪೂರ್ಣವಾಗಿ ಕಲಿಯುವರಾಗಿ ನಂಬಿಕೆ ಹರಡಿದೆ. ಈ ನಾಟಕ ಮಂಡಳಿಯಲ್ಲಿ ಚಿಕ್ಕ ಹುಡುಗರು ಇಂಪಾದ ಗಾನದಿಂದ ಬಲು ಚೆನ್ನಾಗಿ ಅಭಿನಯಿಸುವರು. ನವೆಂಬರ್ ತಿಂಗಳಲ್ಲಿ ಸ್ಥಳದಲ್ಲಿ ಡೇರೆಹಾಕಿ ನಾಟಕಗಳು ಅಭಿನಯಿಸಿ ನಂತರ ಸೋಮವಾರಪೇಟೆಗೆ ಪ್ರಯಾಣಮಾಡಿ ಅಲ್ಲಿಯ ಬಾಂಧವರ ಉತ್ತೇಜನ ಪಡೆದು ಮಡಿಕೇರಿ, ವೀರಾಜಪೇಟೆ ಪ್ರಾಂತ್ಯಗಳಿಗೆ ಪ್ರಯಾಣ ಮಾಡುವರಾಗಿ ತಿಳಿದು ಸಂತೋಷಪಡುತ್ತೇನೆ.

ಇತರ ದೇಶಗಳಿಂದ ಒಂದು ನಮ್ಮ ದೇಶದಲ್ಲಿ ಬಹಳ ಹಣವನ್ನು ಸಂಪಾದಿಸಿಕೊಂಡು ಹೋಗುವದು ತಿಳಿದೇ ಇದೆ. ಅವರುಗಳನ್ನು ಪ್ರೋತ್ಸಾಹಿಸುವಂತೆಯೇ ದೇಶೀಯರಿಂದ ನಮಗೆ ಬಾಲ ಮಂಡಳಿಯವರನ್ನು ಪ್ರೋತ್ಸಾಹಿಸಿ ಉತ್ತೇಜನ ಕೊಡಬೇಕಾಗಿ ಬಯಸುತ್ತೇನೆ. ಪರಸ್ಥಳಕ್ಕೆ ಹೊರಡುವದು ಇದೇ ಮೊದಲನೇ ಸಾರಿಯಾದ್ದರಿಂದ ಆಯಾಯ ಸ್ಥಳದ ಬಾಂಧವರು ಸಂಪೂರ್ಣ ಸಹಾಯ ಮಾಡಬೇಕಾಗಿ ಕೋರುತ್ತೇನೆ. ಕೊಡಗು ದೇಶದಲ್ಲಿ ಸಂಗೀತ ವಿದ್ಯೆಯು ಬಹಳ ಕಮ್ಮಿಯಾಗಿದೆ ಎಂಬದು ತಿಳಿದೇ ಇದೆ. ಆದ್ದರಿಂದ ಮುಂದೆ ನಿಂತಿರುವ ಮಂಡಳಿಯವರಿಗೆ ದೇಶಾಭಿಮಾನಿಗಳು ಪೂರ್ಣಾನುರಾಗದಿಂದ ಪ್ರೋತ್ಸಾಹಿಸಬೇಕಾಗಿ ನನ್ನ ಪ್ರಾರ್ಥನೆ.

ಈ ಮಂಡಳಿ ಸ್ಥಾಪಕರಾದ ಮ ರಾ ಅರೆ ಸಣ್ಣ ಕರಿಬಸಪ್ಪನವರು ಪ್ರೊಪ್ರೈಟರಾದ ಮ ರಾ ಉದ್ದೂರು ವೀರಭದ್ರಪ್ಪನವರೂ ತಮ್ಮಂದಿರಾದ ಮ. ರಾ. ಅರೆ ಷಣ್ಮುಖಯ್ಯನವರೂ ಮಂಡಳಿ ನಡೆಸಿರುವ ಉದಾರವಾದ ತನು, ಮನ, ಧನ ಸಹಾಯಕ್ಕಾಗಿ ಮಂಡಳಿ ಬಾಲಕರು ಬಹಳ ಕೊಂಡಾಡುತ್ತಲಿದ್ದಾರೆ. ಈ ಮಂಡಳಿಯನ್ನು ಸ್ಥಿರಗೊಳಿಸಿ ದೇಶದಲ್ಲಿ ಆನಂದ ಉಂಟುಮಾಡಬೇಕೆಂದು ಉದ್ಯೋಗಸ್ಥರು, ಪ್ರಮುಖರು, ಬಾಲಕರಾದ ನಮಗೆಲ್ಲ ಬೋಧಿಸುತ್ತಾ ಮಾತಾಪಿತೃಗಳೋಪಾದಿ ರಕ್ಷಿಸುತ್ತಿರುವರು.

ಸ್ಥಳೀಯ ದೊಡ್ಡ ಮನಸ್ಸುಗಳಾದ ಮೇಲ್ಕಂಡ ಧಾರ್ಮಿಕರುಗಳು ನಮಗಳ ಅಭಿವೃದ್ಧಿಗಾಗಿ ನಮಗಳಿಂದ ಯಾವ ಸಹಾಯವನ್ನೂ ಬಯಸದೆ ಮುಂದೆ ನಿಂತಿರುವದು ನಮಗಳ ಸುದೈವವೇ ಸರಿ. ಇವರಿಗೂ ಇವರ ಕುಟುಂಬಕ್ಕೂ ಭಗವಂತನು ಆಯುರಾರೋಗ್ಯ ಐಶ್ವರ್ಯಗಳನ್ನು ಕೊಟ್ಟು ಉದಾರಗುಣ ಹೆಚ್ಚಿಸಿ ಕಾಪಾಡಲೆಂದು ಪ್ರಾರ್ಥಿಸುತ್ತೇನೆ.

ದೇಶಾಭಿಮಾನಿ.

ಕೊಡಗು ವೇದಾಂತ ಸಂಘ.

ಮಡಿಕೇರಿಯಲ್ಲಿರುವ ವೇದಾಂತ ಸಂಘವು ಅನೇಕ ಮಹನೀಯರ ಉದಾರಾಶ್ರಯದಿಂದ ಅನೇಕ ದಿವಸಗಳಿಂದಲೇ ಮೊಳೆತಿರುವದು. ಆದರೆ ಅದು ಇನ್ನೂ ಹಣ್ಣಾಗದೆ ಕಾಯಾಗಿಯೇ ಇರುವಂತೆ ನಮಗೆ ತೋರುತ್ತದೆ. 'ವೇದಾಂತ'ವೆಂದ ಮಾತ್ರಕ್ಕೆ ಜನರ ಕಿವಿಯು ದೂರವಾಗುವುದು. ಹೀಗಿರಲು ಸಂಘಕ್ಕೆ ಉತ್ತೇಜನವು ಕಡಿಮೆಯಾದರೂ ಅದರ ಆ ಪ್ರಚಾರವು ಕುಗ್ಗುವಂತಿಲ್ಲ. ಶ್ರೀರಾಮಕೃಷ್ಣ ಪರಮಹಂಸರ ಭಜನೆಯು ಪ್ರತಿ ಶನಿವಾರವೂ ತಪ್ಪದೆ ಅವರ ಕೃಪೆಯಿಂದ ನೆರವೇರುತ್ತಿರುವುದು. ಅನೇಕ ಭಕ್ತರು ಇಂಥ ಭಜನಾಕೂಟಗಳಿಗೆ ಬಂದು ಶ್ರೀ ಪರಮಾತ್ಮನ ಸಂಬಂಧವಾದ ಸಂಕೀರ್ತನಗಳಿಂದ ಸರ್ವರನ್ನೂ ಆನಂದಗೊಳಿಸುತ್ತಿರುವರು.

ಇತ್ತೀಚೆಗೆ ಇದೇ ಸಂಘದಲ್ಲಿ ಪ್ರತಿ ಆದಿತ್ಯವಾರವೂ ಭಕ್ತರ ಚರಿತ್ರೆಯನ್ನಾಗಲೀ ಅಥವಾ ಭಕ್ತಿ ಸಂಬಂಧವಾದ ಉಪನ್ಯಾಸಗಳನ್ನಾಗಲೀ ನಡೆಯಿಸಲು ಉಪಕ್ರಮಿಸಿರುವರು. ಈ ಉಪನ್ಯಾಸಗಳಲ್ಲಿ ಹೆಚ್ಚು ಶ್ರಮವನ್ನೂ, ಇನ್ನೂ ಈ ಕಾರ್ಯದಲ್ಲಿ ಬಾಲಕರಾಗಿರುವ ಉಪನ್ಯಾಸಕರಿಗೆ ಉತ್ಸಾಹವನ್ನು ಕೊಡುತ್ತ ಬಹಳ ಶ್ರದ್ಧೆಯಿಂದ ಕೆಲಸ ಮಾಡುತ್ತಿರುವುದು ಸ್ತೋತ್ರಾರ್ಹವಾದುದು. ಇವರೆಲ್ಲರ ಆದರಣೆಗೆ ಪಾತ್ರರಾಗಿರುವರು. ಈ ಪರ್ಯಂತರ ಶ್ರೀಕೃಷ್ಣಲೀಲೆ, ರಾಮಕೃಷ್ಣ ಪರಮಹಂಸ, ವಿವೇಕಾನಂದ, ಕಬೀರದಾಸ, ಶ್ರೀ ಶಂಕರಾಚಾರ್ಯ ಮುಂತಾದ ಭಕ್ತ ಶಿರೋಮಣಿಗಳ ಜೀವನ ಚರಿತ್ರೆಗಳೂ ಭಕ್ತಿ ಸಂಬಂಧವಾದ ಉಪನ್ಯಾಸಕ್ರಮಗಳೂ ನಡೆದವು. ತನ್ಮಧ್ಯ ಕೀರ್ತನಾಕಾರರು ತಮ್ಮ ಹಾಡಿಕೆಯಿಂದ ಭಕ್ತರ ಮನಸ್ಸನ್ನು ಉಲ್ಲಾಸಗೊಳಿಸುತ್ತಿರುವರು. ಆ ಪರಮಹಂಸರ ದಯದಿಂದ ಉಪನ್ಯಾಸಕರೂ ಕೀರ್ತನಾಕಾರರೂ ಉತ್ಸಾಹವನ್ನು ಹೊಂದುತ್ತಾ ತಾವಾಗಿಯೇ ಮುಂದೆ ಬಂದು ತಮ್ಮ ಭಾಗದ ಕೆಲಸವನ್ನೂ ಮಾಡುತ್ತಿರುವುದು, ಸಂಘದ ಏಳಿಗೆಗೆ ಮೂಲ ಕಾರಣವಾಗಿದೆ. ಆದುದರಿಂದ ಇನ್ನೂ ಈ ಸತ್ಸಂಗತಿಯನ್ನರಿಯದ ಭಕ್ತರು ಈ ವೇದಾಂತ ಸಂಘದಲ್ಲಿ ಸೇರಿ ಅಲ್ಲಿ ತಮಗೆ ತೋರಿಬರುವಂತಹ ಸಂಗತಿಗಳನ್ನು ತಿಳಿಯಹೇಳುವುದು ಅವರ ಕರ್ತವ್ಯವೆಂದು ಭಾವಿಸುತ್ತೇನೆ. ಈ ಉಪನ್ಯಾಸಗಳನ್ನು ಕೇಳುವುದರಲ್ಲಿಯೂ, ಭಜನೆಗಳಲ್ಲಿ ಸೇರುವುದರಲ್ಲಿಯೂ ಮನಸ್ಸು ನಿಶ್ಚಲವಾದ ಭಕ್ತಿಯನ್ನು ಪ್ರವೇಶಿಸುವುದರಲ್ಲಿ ಸಂಶಯವಿಲ್ಲ. ಆದುದರಿಂದ ಅಭ್ಯಾಸಿಗಳೂ ಭಕ್ತಿ ಮಾರ್ಗವನ್ನು ಪ್ರವೇಶಿಸಲು ಈ ಸಂಘದಲ್ಲಿ ಸೇರಬೇಕೆಂದು ನಾನು ತಿಳಿಯುವೆನು. ಶ್ರೀರಾಮಕೃಷ್ಣ ಪರಮ

ಪ್ರಸರ ಕಟಾಕ್ಷದಿಂದ ಈ ಸಂಘಕ್ಕೆ ದೀರ್ಘಾಯುವಿರಲೆಂದು ನಾನು ಅನವರತವೂ ಪ್ರಾರ್ಥಿಸುವೆನು.

'ಪ್ರತ್ಯಕ್ಷದರ್ಶಿ'

ಸರಕಾರಕ್ಕೆ ಬಾಯಿಂ ಕಂದಾಯ ಉತ್ಪತ್ತಿ ಮತ್ತು ಪ್ರಜೆಗಳ ಜೀವನಕ್ಕೆ ಅನುಕೂಲ.

ಅಯ್ಯಾ,

ಭೂಮಿಗೆ ಸೇರಿದ ಬಾಣೆಜಾಗದಲ್ಲು ಕಾಪಿತೋಟ ಮಾಡಿಕೊಂಡರೆ ಮರಕಂದಾಯ ವಿಧಿಸುವದು, ತೋಟಮಾಡಿದವರು ಸರಕಾರ ರಾಜನೀತಿಗೆ ವಿರೋಧವಾಗಿ ಕಂದಾಯ ವಿಧಿಸುವುದು ಕೂಡಲೇ ರದ್ದಾಗಬೇಕು. ಜಮ್ಮಾ ಸಾಗುವಳಿಗೆ ಸೇರಿಸಿಕೊಂಡಿರುವ ತಿಸ್ತು ಜಮ್ಮಾಭೂಮಿ ಮತ್ತು ಸೇರಿದ ಸ್ಥಳ ನಮ್ಮ ಪ್ರಜೆಗಳಿಗೆ ಬಾಯಿಂ ಸಾಗುವಳಿಗೆ ಕಟ್ಟಿಕೊಡುವದು, ಗೋಮಾಳ ರದ್ದು ಮಾಡುವದು.

ಗುಡ್ಡದಮೇಲೆ ಬಾಣೆಜಾಗದಲ್ಲಿರುವದನ್ನು ಮಾರ್ಕೆಟ್ ರೇಟಿನ ಅರ್ಧಾಂಶ ಕ್ರಯಕೊಟ್ಟು ಸರಕಾರ ತೆಗೆದುಕೊಳ್ಳುವದು, ತಕ್ಷಣದಿಂದ ಮಜಾಮಾಡುವದು.

ಟಕಾವಿಸಾಲ ಸರಕಾರದವರು ಕೊಡುವದು ಮಜಾಮಾಡಬೇಕು. ಆಯಾ ನಾಡಿನ ಪರಸ್ಪರ ಸಂಘಕ್ಕೆ ಕೊಡುವ ಏರ್ಪಾಡಾಗಬೇಕು.

ಕಂದಾಯ ವಸೂಲ್ ಪಟೇಲರಮೂಲಕ ನಡಿಯಬೇಕು. ಪ್ರೋಸೆಸ್ ಅಮೀನರ ಏರ್ಪಾಡು ಕುದ್ದಾಂಗ ರದ್ದಾಗಬೇಕು.

ಪರಸ್ಪರ ಸಂಘದವರು ಕೊಡುವ ಸಾಲದ ಬಡ್ಡಿ ಕಡಮೆ ಮಾಡಬೇಕು. ಭೂಮಿ ಹರಾಜು ಕುದ್ದಾಂಗ ರದ್ದಾಗಬೇಕು.

ಬಾಯಿಂಕಂದಾಯ ವಿಧಿಸಿ 1814ನೇ ಭಾವ ಸಂವತ್ಸರದಲ್ಲು ತಿಸ್ತು ನಿಘಂಟಾಗಿರುವದಕ್ಕೆ ವಿರೋಧವಾಗಿ ಕಾರಣ ತೋರಿಸದೆ ಕಳೆದ ಸೆಟ್ಲ್‌ಮೆಂಟಿನಲ್ಲು ವಿಧಿಸಿ ವಸೂಲ್ಮಾಡುವ ಕಂದಾಯ ಮಜಾ ಮಾಡಲಿಕ್ಕೂ ಮುಂದೆ ಸೆಟ್ಲ್‌ಮೆಂಟ್ ಮಾಡದಹಾಗೆ ರೂಲ್ಸ್ ಆಗಬೇಕು.

ಸನ್ 1814ನೇ ಭಾವ ಸಂವತ್ಸರದಲ್ಲು ಭೂಮಿ ಅಳ್ತಿಮಾಡಿ ದರ 100ಕ್ಕೆ ಹತ್ತರ ಕಂದಾಯ ತಿಸ್ತಿನಲ್ಲು ಬರದು ರಾಜಸ್ವನ್ ಮೊಹರ್‌ನಿಂದ ಸರಕಾರದಲ್ಲು ಇಟ್ಟದ್ದಕ್ಕೆ ಬದ್ಲಾಗಿ ಪ್ರತಿ ವರ್ಗದಾರನಿಗೆ ದರ 100ಕ್ಕೆ 5ರ ಕಂದಾಯಕ್ಕೆ ಸನ್ನದ್ ಬರಕೊಟ್ಟಕಾರಣ ಅದಕ್ಕೆ ವಿರುದ್ಧವಾಗಿ ಹಾಲಿ ನಮ್ಮನ್ನಾಳುವ ಸರಕಾರದವರು ಕಂದಾಯ ಹೆಚ್ಚಿಸುವ ಹಕ್ಕಿಲ್ಲವೆಂಬ ಬಾಬಿಗೆ ರೂಲ್ಸಾಗಬೇಕು.

ದರ 5ರ ಕಂದಾಯದ ಭೂಮಿಗೆ ಸೇರಿದ ಬಾಣೆಜಾಗದ ಕಾಪಿತೋಟಕ್ಕೆ ಏಕರೆಗೆ ಒಂದು ರುಪಾಯಿ ಕಂದಾಯ ವಿಧಿಸುವ ಹಕ್ಕೇ ಹೊರ್ತು ಸಾಗಿನ ಭೂಮಿ ಬಾಣೆ ದರದ 2 ರುಪಾಯಿ ಕಂದಾಯ ವಿಧಿಸುವ ಹಕ್ಕಿಲ್ಲದ್ದರಿಂದ ಜಮ್ಮದ ಕಂದಾಯಕ್ಕೆ ರೂಲ್ಸಾಗಬೇಕು.

ರೈತರು ತೆರುವ ಕಂದಾಯ ದರ ರುಪಾಯಿ ಒಂದಕ್ಕೆ ಎರಡಾಣೆ ವರೆಗೆ ಸೆಸ್ ಹಾಕುವ ರೂಲ್ಸ್ ಇರುವಾಗ್ಯೂ 5 ರುಪಾಯಿ ತೆರುವ ರೈತನಿಗೆ ರುಪಾಯಿ ಒಂದರ 4 ಆಣೆ ವಿಧಿಸಿ ವಸೂಲ್ಮಾಡುವದು ದೊಡ್ಡ ಅನ್ಯಾಯ. ಇದರಿಂದ ಜಮ್ಮದ ಹಕ್ಕು ಕಳಕೊಳ್ಳಬೇಕಾಯ್ತು. ಕಲಿ 4919ನೇ ಸಂವತ್ಸರದಲ್ಲು ತಮ್ಮ ಜಮ್ಮ ಭೂಮಿ ಹಕ್ಕನ್ನು ಸ್ಥಿರ ಪಡಿಸುವದಕ್ಕೆ ಸಂವತ್ಸರ 1809ರಲ್ಲು ಪಟ್ಟಕ್ಕೆ ಬಂದ ಕೊಡಗಿನ 11ನೇ ಅರಸು ಲಿಂಗರಾಜರಿಂದ ಪಡದ ಭೂಮಿ ಸನ್ನದಿನ ಅರ್ಥವನ್ನೇ ಗಮನಕ್ಕೆ ತಾರದೆ ಅಪಾರ್ಥದಿಂದ ನಾಲ್ಕಾಣೆ ವಿಧಿಸಿದ್ದಾಗಿದೆ. ಆದ್ದರಿಂದ ಅದು ಕುದ್ದಾಂಗ ರದ್ದಾಗಬೇಕಾಗಿ ಬಾಸೂನ್ ತಿದ್ದಬೇಕಾಗಿದೆ.

ಮಹನೀಯರೆ! ಒಂದಾಣೆ ಕಂದಾಯ ತೆರುವ ಬಂದು ಕಾಲುಬಟ್ಟಿ ಭೂಮಾಲಿಕರ—ಮೇಲ್ಕಂಡ ಹತ್ತು ಕಲಮಿನಲ್ಲು ಕಂಡ ಅಂಶಗಳಿಗೆಲ್ಲಾ ಸರಕಾರಿ ರಿಕಾರ್ಡ್‌ದಾಖ್ಲೆಯಿಂದಲೇ ತಕ್ಕ ಸಮಾಧಾನದ ರುಜುವಾತು ಕೊಡಬೇಕಾಪ್ಪರಿಂದ ಕೊಡಗು ಜಮೀನ್‌ದಾರರ ಸಂಘದ ಒಂದು ಮೀಟಿಂಗ್ ಮಡಿಕೇರಿಯಲ್ಲಿ ಮಾಡಿ ಪ್ರತಿ ಭೂಮಾಲಿಕನು ಲಿಖಾವಟ್ಟು ಆಧಾರದ ರುಜುವಾತು ಸಹಿತ ಮೀಟಿಂಗಿಗೆ ಬಂದು ದೃಢಪಡಿಸಬೇಕಾಗಿ ಕೋರುತ್ತೇನೆ.

ಅಸ್ವದೇಶದಿಂದ ಕೊಡಗಿಗೆ ಬರುವಾಗುವ ಎಲ್ಲಾ ಸಾಮಾನುಗಳಮೇಲೆ ಇಂದ್ಯಾ ಸರಕಾರದವರು ವಿಧಿಸಿ ವಸೂಲ್ಮಾಡುವ ಸುಂಕ ನಮ್ಮ ಕೊಡಗು ಸರಕಾರ ಜವೆಗೆ ತರುವ ರೂಲ್ಸಾಗಬೇಕು.

ಸ್ವದೇಶಾಭಿಮಾನಿ.

ಪಟ್ಟೋಲೆಸಮೆ.

ಕೊಡಗಿನ ಬಾಂಧವನೆ,

ಈ ವರೆಗೆ ನಿರಾಧಾರವಾಗಿದ್ದ ನಮ್ಮ ನಡವಳಿಕೆಗಳನ್ನು ಮುಂದೆ ಮರೆತು ಹೋಗದಂತೆ ಆಧಾರ ಮಾಡಿದಲು ಗ್ರಂಥಕರ್ತರು ತೆಗೆದುಕೊಂಡ ಪರಿಶ್ರಮಕ್ಕೆ ಎಷ್ಟು ಕೃತಜ್ಞತೆ ತೋರಿಸಿದರೂ ಸ್ವಲ್ಪವೇ ಆಗುತ್ತು. ಆದರೆ ರಚನೆ ಮಾಡುವ ಮೊದಲು ನ್ಯಾಯವಿದ್ದಂತೆ ಬಂಡಿಸಿ ಮಾಡನೆ ಹೋದರೆ ಜನರ ಮನ ನೋಯುವದಲ್ಲದೆ ಕಲಹಕ್ಕೆ ಅವಕಾಶವಾಗುವದೆಂತಲೂ, ಯೋಚಿಸಿ ಮಾಡಿದಂತೆ ಇಗಾಗಲೇ ಬೇಂಗುನಾಡು ತಕ್ಕಾಮೆ ವಿಷಯ ಪತ್ರಿಕೆಯಲ್ಲು ಪ್ರಕಟವಾದ ಮೂರು ಬಾತ್ಮಿಗಳಿಂದಲೂ ಮತ್ತು ಈ ಗ್ರಂಥದಲ್ಲಿ ಅಡಕವಾಗಿರುವ ಇನ್ನು ಅನೇಕ ಕುಂದು ಕೊರತೆಗಳಿಂದಲೂ ಹೇಳಲು ಶಕ್ಯವಿಲ್ಲ.

ಪೂರ್ವದಲ್ಲಿ 35 ನಾಡುಗಳಿಗೆ 35 ತಕ್ಕರಿದ್ದರೆಂತಲೂ ಈಚೆಗೆ ನಾಡುಗಳು ಹೆಚ್ಚಾದುದರಿಂದಲೂ ಮತ್ತು ಈಗಿನ ಸರಕಾರದವರು ತಕ್ಕಾಮೆಯನ್ನು ಅಂಗೀಕರಿಸದರಿಂದಲೂ ಹಣದ ಮತ್ತು ಉದ್ಯೋಗದ ಬಲದಿಂದ ತಕ್ಕರಲ್ಲದವರು ತಕ್ಕಾಮೆಯನ್ನು ಉಂಟು ಮಾಡಿಕೊಂಡದರಿಂದ ತಕ್ಕಾಮೆ ಲೆಕ್ಕವು ಕಂಡಾಬಟ್ಟೆ ಆಗಿ ಹೋಯಿತು ಎಂಬದಾಗಿ ಗ್ರಂಥಕರ್ತರು ಉದಹರಿಸಿ 35 ನಾಡುಗಳನ್ನು 26 ನಾಡುಗಳನ್ನಾಗಿಯೂ 35 ತಕ್ಕರ ಬದಲಿಗೆ 64 ತಕ್ಕರನ್ನು, ಕೆಲವು ನಾಡುಗಳಿಗೆ ಮಾತ್ರ ... ಪದವಿಗಳನ್ನು ಸೇರಿಸುವದು, ನೋಡಿದರೆ ಈ ಗ್ರಂಥದಲ್ಲು ನ್ಯಾಯವಿದೆಯೆಂತ ಯಾರಿಂದ ತಾನೆ ಒಪ್ಪಬಹುದು?

... ಆದ ಈ ಮೇಲ್ಕಂಡ ಸಂಗತಿಯನ್ನೇ ಗ್ರಂಥಕರ್ತರ ... ಕಾರಣ ... ಒಂದೆ ಇರುವಾಗ ಪ್ರತಿ ನಾಡ ... ಸ್ವಲ್ಪ ಹೆಚ್ಚು ಕಮ್ಮಿಯಾಗಿ ಆಚರಿಸುತ್ತಿರ ... ನಡವಳಿಕೆಗಳ ಕುಂದು ಕೊರತೆಗಳನ್ನು ಕಂಡು ಹಿಡಿದು ... ವಾದದ ಎಲ್ಲರೂ ಏಕೋಭಾವದ ಆಚರಣೆಗೆ ಬರುವಂತ ನ್ಯಾಯವಾದ ನಡವಳಿಕೆಯ ವಿಧಾನಗಳನ್ನೇ ಸೂಚಿಸುವಂತ ಹೇಳಲಿಕ್ಕೇನೇ ಆಗುವದಿಲ್ಲವಾದ ಕಾರಣ ಸರ್ವರೂ ಈ ಗ್ರಂಥವು ಸಿಂಧು ಆದದ್ದೆಂದು ಒಪ್ಪಿ ಆಚರಿಸಲು ಆಗತಕ್ಕದ್ದಲ್ಲ. ಮತ್ತು ಇದು ನ್ಯಾಯವಾದ ಆಧಾರವೆಂತ ಭಾವಿಸಿ ವಾದ ವಿವಾದಗಳನ್ನು ಮಾಡಿ ವೃಥಾ ಕಷ್ಟನಷ್ಟಗಳಿಗೆ ಗುರಿಯಾಗುವದಕ್ಕಿಂತ ತಮತಮಗೆ ಇರುವಹಕ್ಕುಗಳಂತೆಯೇ ತಾವು ತಾವು ಆಚರಿಸುತ್ತಿರುವ ನಡವಳಿಕೆಗಳನ್ನು ಅನುಸರಿಸಿ ನಡಿಯುವುದು ಉತ್ತಮವಾದದ್ದೆಂದು ಖಂಡಿತ ಹೇಳುತ್ತೇನೆ. ಗ್ರಂಥಕರ್ತರ ಪರಿಶ್ರಮವನ್ನು ಸಾರ್ಥಕಗೊಳಿಸಲು ಗ್ರಂಥವು ಎಡೆಕೊಡದೆ ಇರುವದಕ್ಕೆ ಕುಂಬಾ ವ್ಯಸನ ಪಡುತ್ತೇನೆ.

ಓದಿದವ.

ರೈಲ್ವೆಯ ಉದ್ಯೋಗ.

ಒಂದುಬಾರಿ ಮಡಿಕೇರಿ ಜನ ಸಮುದಾಯಕ್ಕೂ, ಮತ್ತೊಂದು ಬಾರಿ ಕೊಡಗಿನಲ್ಲಿ ಕಾಲೋಚಿತವಾಗಿ ಸಲಹೆಗಳನ್ನು ಮಾಡುವಂಥ ಮಹನೀಯರಿಗೂ ಕೆಲವು ಮಾತುಗಳನ್ನು ಹೇಳಿದ್ದಾಯಿತು. ಈ ದಿನ ದೇಶಿಯ ಯುವಕರಿಗೆ ಅಗತ್ಯವೆಂದು ಕಾಣುವ ಕೆಲವು ಬುದ್ಧಿವಾದಗಳನ್ನು ಹೇಳಲು ಅನುಕೂಲ ದೊರತದ್ದಕ್ಕೆ ನಾನೇ ಧನ್ಯನು.

ನಮ್ಮ ಈ ಚಿಕ್ಕದೇಶದಲ್ಲಿ ಸಿಬ್ಬಂದಿ ಕೊರತೆಯೇ ಮೊದಲಾದ ಕಾರಣಗಳಿಂದ ಕೊಂಚ ಇಂಗ್ಲೀಷ್ ಮೊದಲಾದ ವಿದ್ಯೆಗಳನ್ನು ಕಲಿತವರಿಗೆ ಯೋಗ್ಯವಾದ ಉದ್ಯೋಗವು ದೊರಕದೆ ಯುವಕರು ಪಡುವ ಕಷ್ಟವನ್ನು ಮಹನೀಯರು ಅರಿಯದ್ದಲ್ಲ. ಅನೇಕರು ಗಟ್ಟಿ ಮುಟ್ಟಾಗಿ ಉದ್ಯೋಗ ಮಾಡಬೇಕೆಂದು ಆಸಕ್ತಿಯಿಂದ ಇರುವರು. ಈ ಕಾರಣದಿಂದ ಬೇರೆ ದಾರಿತೋರದೆ ಪರದೇಶಗಳಿಗೆ ಹೋಗಿ ಮೊದಲು ಮೂವತ್ತು ನಲವತ್ತು ರುಪಾಯಿ ಸಂಬಳವನ್ನು ಪಡದು ಬಡ್ತಿಯ ಆಶೆ ಇಲ್ಲದೆ ಸಿಕ್ಕಿ ಕೊಂಡವರು ಅನೇಕರಿರುವರು. ಈ ರೀತಿಯವರಿಗೂ, ಲೋಕದಲ್ಲಿ ಉದ್ಯೋಗಗಳೆಲ್ಲ ಮುಗಿದು ಹೋಗಿದೆಯೆಂದು ತಿಳಿದಿರುವವರಿಗೂ ನಾನು ಈ ಬರವಣಿಗೆಯನ್ನು ಬರೆದಿರುವೆನು.

ಎಲ್ಲರಿಗೂ ತಿಳಿದಂತೆ, ಕೆಲವು ವರ್ಷಗಳಲ್ಲಿ ನಮ್ಮ ದೇಶಕ್ಕೆ ರೈಲು ಬರುವದು ಖಂಡಿತ ಹೊಸದಾಗಿ ಇಡುವಾಗ ಕೆಲಸಗಾರರನೇಕರು ಬೇಕಾಗುವರು. ಈ ಸಮಯದಲ್ಲಿ ನಮ್ಮವರು ಸಿದ್ಧವಾಗಿದ್ದರೆ ಈ ಉದ್ಯೋಗಗಳು ನಮ್ಮವರ ಪಾಲಿಗೆ ಬದ್ದು ಕೆಲವು ವರ್ಷಗಳ ವರೆಗಾದರೂ ತೊಂದರೆ ಇರಲಿಕ್ಕಿಲ್ಲ. ಆದರೆ ಈ ಉದ್ಯೋಗಗಳಲ್ಲಿ ಅನುಭವವಿಲ್ಲದವರಿಗೆ ಇದು ದೊರಕದು. ಈ ಕಾರಣ ದೇಶೀಯ ಯುವಕರು ಅವರವರಿಗೆ ಅನುಕೂಲವಾದಂತೆ ಈಗಲೇ ಪರದೇಶಗಳಿಗೆ ಹೋಗಿ ಕಲಿತು ... ಗಳಲ್ಲಿ ತನ್ನ ... ನವೀನವೇ ... ಈಗಾಗಲೆ ... ಇರುವರು. ಉನ್ನತಿಗೆ ಯುವಕರೂ ಮತ್ತು ... ಲ್ಯಾಸದಲ್ಲಿಯೂ ವೃದ್ಧರಾದ ಅವರ ಹಿತಚಿಂತಕರೂ ಗಮನಕೊಡದೆ ಹೋದರೆ ಹೊಸ ರೈಲ್ವೆ ಬರುವಾಗ ಹೊಸ ... ಬರುವನ್ನು. ಅದರ ಬದಲು ನಾವೇ ಸಿದ್ಧರಾದರೆ ಮನಿಯ ... ಮನೆಯವರು ನಮ್ಮವರಾಗುವರು. ದೇಶಾಟನಮಾಡಿ ಅನುಭವ ಇರುವವರಿಗೆ ಇದರ ಗುಣದೋಷಗಳು ಚೆನ್ನಾಗಿ ಹೊಳೆಯುವುದು. ಎಲ್ಲಿಯೂ ನಮ್ಮವರಾದರೆ ಎಷ್ಟೊಂದು ಸಂತೋಷ! ಏನೊಂದು ಅನುಕೂಲ!

ಈ ಉದ್ಯೋಗಗಳು ಓದಿದವರಾಗಿ ಕೊಂಚ ವಿದ್ಯೆ ಕಲಿತಿರುವವರಿಗೆ ಬಹಳ ಸುಲಭವಾಗಿ ದೊರಕುವುದು. ಬೇರೆ ದೇಶಗಳಲ್ಲಿ ಅಡಿಗೆ ಮೊದಲಾದ ಕೂಲಿಕೆಲಸಗಳನ್ನು ಮಾಡುತ್ತಿದ್ದು ರೈಲು ಕೆಲಸಕ್ಕೆ ಸೇರಿ ಆ ಮೇಲೆ ವಿದ್ಯಾರ್ಜನೆಮಾಡಿ ದೊಡ್ಡ ಹುದ್ದೆಗೆ ಏರಿದವರು ಅನೇಕರಿರುವರು. ಹೀಗಿರುವಾಗ, ಮೊದಲೇ ಯೋಗ್ಯರಾದವರಿಗೆ ಇದರಲ್ಲಿ ಸ್ಥಳ ಸಿಕ್ಕುವದು ಕಷ್ಟವೇ? ಉದ್ಯೋಗದ ಪ್ರಾರಂಭದಲ್ಲಿ ಚನ್ನಾಗಿ ಮೈಬಗ್ಗಿ ದುಡಿಯಬೇಕು. ಮೊದಲು ಎಷ್ಟು ಕಷ್ಟವೋ ವಯಸ್ಸು ಹೆಚ್ಚಿದ ಹಾಗೆ ಅಷ್ಟೇ ಸುಖದಾಯಕವಾಗುವದು. ಹೋಗಿ ಸೇರುವಾಗ ಮೂರರಲ್ಲಿ ಯಾವದಾದರೂ ಒಂದು ಸಣ್ಣ ಹುದ್ದೆಯಲ್ಲಿ ಸೇರಬೇಕು. ಒಂದು ಇಂಜಿನ್ ಕ್ಲೀನರ್, ಈ ಕೆಲಸಕ್ಕೆ ಸೇರಿದರೆ ನಾಲ್ಕೈದು ವರ್ಷಗಳಲ್ಲಿ ಫಯರ್‌ಮ್ಯಾನ್ ಆಗಿಯೂ, ಇನ್ನೂ ಕೆಲವು ವರ್ಷಗಳಲ್ಲಿ 'ಡ್ರೈವರ್' ಆಗಿಯೂ ಆಗಬಹುದು. ಮಧ್ಯೆ ಮಧ್ಯೆ ಇತರ ತರಗತಿಗಳಿವೆ. ಸ್ಥಳ ಸಂಕೋಚದಿಂದ ಇದನ್ನು ಬರೆಯಲು ಆಸ್ಪದವಿಲ್ಲ. ಟ್ರೈಯಿನ್ ಕ್ಲೀನರಾದರೆ ಅಫ್‌ಟರ್ ಮತ್ತು ಕೇರೇಜ್ ಎಗ್ಸಾಮಿನರಾಗಿಯೂ, ಆಗಬಹುದು. ಲೋವರ್ ಸೆಕೆಂಡರಿ ಪಾಸಾಗಿ ಚೆನ್ನಾಗಿ ಇಂಗ್ಲಿಷ್ ಅಭ್ಯಾಸ ಇರುವವರಾದರೆ ಬ್ರೇಕ್ಸ್‌ಮೇನ್ ಅಂಡರ್‌ಗಾರ್ಡ್ ಮತ್ತು ಗಾರ್ಡ್ ಆಗಬಹುದು. ಕೆಲಸದಲ್ಲಿ ... ಇರುವವರಿಗೆ ಇನ್ನೂ ದೊಡ್ಡ ಹುದ್ದೆ ಸಿಕ್ಕುವ ಸಂದರ್ಭ ಇದೆ.

... ಯಾವ ಜಾತಿಯವನೇ ಆಗಲಿ ರೈಲಿನಲ್ಲಿ ಕೆಲಸ ... ಕಾದರೆ ಈ ಸಣ್ಣ ಸಂಬಳದ ಕಷ್ಟ ಕೆಲಸವನ್ನು ಮಾಡಬೇಕು. ಮೊದಲು ತಿಂಗಳಿಗೆ 15 ರುಪಾಯಿ ಸಂಬಳ 2 ರುಪಾಯಿ 'ಅಕ್ಕಿ ಹಣ' ಮತ್ತು ಆದಿತ್ಯವಾರ ಕೆಲಸಮಾಡಿದರೆ 2 ರುಪಾಯಿ ಸಿಕ್ಕುವದು. ಈ ಕೆಲಸ ಕಷ್ಟ, ಸಂಬಳ ಕಮ್ಮಿ ಎಂದು ಕೆಲವರು ಅಭಿಪ್ರಾಯ ಪಡಬಹುದು. ... ವಕನಾಗಿರುವಾಗ ಮುಂದಕ್ಕೆ ಸಂಪತ್ತಿದೆ ಎಂದು ತಿಳಿದಿರುವಾಗ ಎಷ್ಟು ಕಷ್ಟವಿದ್ದರೂ ಹೆದರುವರೇ? ಎಷ್ಟು ಕಷ್ಟ ಪಟ್ಟರೂ ಪೋಲೀಸಿನವರಂತೆ ನಿದ್ರೆಗೆಟ್ಟು ಕೆಲಸ ಮಾಡಬೇಕೆಂತಿಲ್ಲ. ಒಂದೆರಡು ವರ್ಷಗಳ ವರೆಗೆ ನಾವು ಗದ್ದೆಯಲ್ಲಿ ದುಡಿಯುವಷ್ಟು ದುಡಿದರೆ ಸಾಕು. ಸಂಬಳವು ಪೋಲೀಸಿನವರಷ್ಟೆ ಇದೆ. ದೊಡ್ಡ ಹುದ್ದೆಗೆ ಆದರೆ ಮೆಡಿಕಲ್ ಮತ್ತು ಇಂಜಿನೀಯರಿಂಗ್ ಓದುವವರು ಎಫ್. ಎ., ಬಿ. ಎ. ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿ ಮತ್ತೆ ತಮ್ಮ ಕೈಯ್ಯಿಂದ ಹಣ ವೆಚ್ಚಮಾಡಿಕೊಂಡು ನಾಲ್ಕೈದುವರ್ಷ ಕಷ್ಟಪಡುವಾಗ ಕಮ್ಮಿ ವಿದ್ಯೆ ಇರುವವರಿಗೆ ಊಟದ ಖರ್ಚನೆತು ಸಿಕ್ಕುವಾಗ ಟ್ರೈನಿಂಗ್ ಅಥವ 'Apprentice course' ಗೆ ಯಾಕೆ ಹೋಗಬಾರದು. ಕೆಲವು ವರ್ಷಗಳಲ್ಲಿಯೇ ಕೆಲಸ ಕಲಿತುಕೊಂಡರೆ ಸಂಬಳ ಹೆಚ್ಚುವುದು. ಕೆಲಸದ ಕಷ್ಟ ಕಮ್ಮಿಯಾಗುವುದು. ಯಾವ ರೀತಿಯಲ್ಲಿ ಕೆಲಸಕ್ಕೆ ಸೇರಿದರೂ 10, 15 ವರ್ಷಗಳಲ್ಲಿ 100, 150 ರುಪಾಯಿಗಳಷ್ಟು ಸಂಬಳವಾಗುವುದು. ಕಾಪಿಲರ ಸಂಬಳವನ್ನು ಪ್ರಾರಂಭದಲ್ಲಿ ಪಡೆದು 15 ವರ್ಷಗಳೊಳಗೆ 20 ವರ್ಷ ಸರ್ವಿಸು ಮಾಡಿದ ಕೊಡಗು ಸಬ್ ಇನ್ಸ್‌ಪೆಕ್ಟರರಿಗಿಂತ ಹೆಚ್ಚು ಸಂಬಳ ಅವರ ಸಣ್ಣ ವಿದ್ಯೆಗೆ ಸಿಕ್ಕುವದಾದರೆ ಆ ಉದ್ಯೋಗವನ್ನು ಯಾರು ತಾನೆ ಅಪೇಕ್ಷಿಸರು?

ಈ ವಿಷಯವನ್ನು ನಾನು ಕೆಲವು ಮಟ್ಟಿಗೆ ವರ್ಣಿಸುವಾಗ ಒಂದು ನವೀನ ಸಂಗತಿಯನ್ನು ವರ್ಣಿಸುತ್ತಿರುವೆನೆಂದು, ಇದರಲ್ಲಿ ನಮ್ಮ ಜನರು ಯಾರು ಇಂದಿನವರೆಗೆ ಇಲ್ಲವೆಂದು ತಪ್ಪು ಅಭಿಪ್ರಾಯ ಪಟ್ಟುಕೊಳ್ಳಬಾರದು. ಅನೇಕ ಯುವಕರಿಗೆ ರೈಲ್ವೆಯಲ್ಲಿ ಯಾರಿಗೆ ಕೆಲಸ ಸಿಕ್ಕುತ್ತೆ, ಹ್ಯಾಗೆ ಸಿಕ್ಕುತ್ತೆ, ಅದರ ಅನುಕೂಲಗಳೇನೆಂದು ವಿಶದ ಪಡಿಸುವದಕ್ಕಾಗಿ ಈ ಬಾತ್ಮಿಯನ್ನು ಬರೆದೆನು. ನಾನು ವರ್ಣಿಸಿರುವ ರೀತಿಯಲ್ಲಿಯೇ ಸಣ್ಣ ಕೆಲಸಕ್ಕೆ ಸೇರಿ ಈಗ ಸುಮಾರು 100 ರುಪಾಯಿ ಸಂಬಳ ಪಡೆಯುವವರು ಬೇರೆ ಬೇರೆ ಸ್ಥಳಗಳಲ್ಲಿ 2, 3 ಜನರಿರುವರು. ನಮ್ಮ ದೇಶದ ಯುವಕರು ಈ ಮಹನೀಯರಿಗೆ ಬರೆದರೆ ಅವರ ಅನುಭವವನ್ನು ಅವರ ಕಷ್ಟ ಸುಖಗಳನ್ನು ಖಂಡಿತವಾಗಿಯೂ ತಿಳಿಸಲು ಅವರು ಸಂತೋಷ ಪಡುವರೆಂದು ನಾನು ತಿಳಿಯುತ್ತೇನೆ. ತಮ್ಮ ಅಭಿಪ್ರಾಯಮಾತ್ರದಿಂದ ಪರೋಪಕಾರವೂ ಬಹು ಅನುಕೂಲ ದೊರೆತರೆ ಯಾರು ತಾನೆ ಮಾಡದೆಬಿಟ್ಟಾರು!

ಈಗ ದೂರದೇಶಕ್ಕೆ ಹೋಗಿ ಸೇರಿಕೊಂಡು ಕೆಲಸ ಕಲಿತುಕೊಂಡರೆ ನಮ್ಮ ದೇಶಕ್ಕೆ ರೈಲ್ ಬಂಡಿಯು ಓಡುವಾಗ ಇಲ್ಲಿಯೇ ಉದ್ಯೋಗ ದೊರಕುವದು. ಈ ರೀತಿ ಉದ್ಯೋಗ ಸಿಕ್ಕುವ ಮೂರು ಸ್ಥಳಗಳ ವಿಳಾಸವನ್ನು ಕೆಳಗೆ ಕೊಟ್ಟಿರುವೆನು.

G. I. P. Railway, Bombay, S. I. Railway, Coimbuthur or Trich. M. S. M. Railway, Madras. ಇವುಗಳು ಸ್ಥಳದಲ್ಲಿ ಸೇರುವದಕ್ಕೆ ಗಾರ್ಡ್ ಆಗಬೇಕೆಂದಿದ್ದರೆ District Trafic Superintendent ಅವರಿಗೆ Carriage examiner ಅಥವ ಡ್ರೈವರ್ ಆಗಬೇಕೆಂದಿದ್ದರೆ Loco Foreman ಅವರಿಗೂ ಬರೆದರೆ ಎಲ್ಲವೂ ತಿಳಿಯುತ್ತದೆ.

ಉಪಾಧ್ಯಾಯರ ಮತ್ತು ಒಬ್ಬ ಮೇಜಿಸ್ಟ್ರೇಟರ ಕೈಯಿಂದ ಶಿಫಾರಸು ಪತ್ರಗಳನ್ನು ಪಡೆದುಕೊಂಡು ಅಲ್ಲಿಗೆ ತಾವೇ ಹೋದರೆ ಖಂಡಿತವಾಗಿಯೂ ದೊರೆಯುವುದು. ಬೊಂಬಾಯಿ ಮದ್ರಾಸ್ ಮೊದಲಾದ ಸ್ಥಳಗಳಲ್ಲಿ ಹೋಗಿ ಕ್ಲಾರ್ಕ್ ಕೆಲಸಕ್ಕೆ ಮಾಡುವಷ್ಟು ಪ್ರಯತ್ನ ಇಲ್ಲಿ ಮಾಡಬೇಕೆಂತಿಲ್ಲ.

ಸ್ಥಳ ಕಮ್ಮಿಯಾದುದರಿಂದ ಹೆಚ್ಚು ಸಂಗತಿ ಬರೆಯಲಿಕ್ಕೆ ಆಗುವುದಿಲ್ಲ. ಈ ಕೆಲಸಕ್ಕೆ ಹೋಗಬೇಕೆಂದು ಅಪೇಕ್ಷೆ ಇರುವವರು ಹೆಚ್ಚು ಸಂಗತಿ ತಿಳಿಯಬೇಕೆಂದಿದ್ದರೆ ಮೇಲೆ ಕೊಟ್ಟ ವಿಳಾಸಗಳಿಗೆ ಕಾಗದ ಬರೆದರೆ ಸಂತಸವು ನೀಗುವುದು.

ಸರಸ್ವತಿ.

ನವೀನಕಾಲದ ಸಾಲಕೊಡುವ ಕ್ರಮ.

ಮಹನೀಯರೆ,

ನಾನು ಈ ಸಂಗತಿಯನ್ನು ನಿಮಗೆ ತಿಳಿಯಪಡಿಸುವುದರಿಂದ ಅದನ್ನು ನೀವು ಗಮನಕ್ಕೆ ತೆಗೆದುಕೊಂಡು ಐಶ್ವರ್ಯವಂತನಾಗಲೀ ಗರೀಬನಾಗಲೀ ನಮ್ಮ ಜನಾಂಗವನ್ನು ಹಾಳುಮಾಡದೆ ಅಭಿವೃದ್ಧಿಪಡಿಸುವುದಕ್ಕಾಗಿ ಈ ಸಂಗತಿಯನ್ನು ನೆನಪಿನಲ್ಲಿ ಇಡುವಿರೆಂದು ನೆನಸುತ್ತೇನೆ. ಒಬ್ಬ ಮನುಷ್ಯನು ಮತ್ತೊಬ್ಬನಿಂದ ಸಾಲ ತೆಗೆಯಲು ಯೋಚಿಸಿ ಅವನ ಹತ್ತಿರ ಮಾತಾಡಲು ಹೋಗುವನು. ಅಷ್ಟರಲ್ಲಿಯೇ ಸಾಲಕೊಡುವವನು ಈ ದಿನ ನನಗೆ ಸಮಯವಿಲ್ಲ, ಸ್ವಲ್ಪದಿನ ಕಳೆದನಂತರ ಬಂದು ಮಾತಾಡು, ಎಲ್ಲಾ ಸಂಗತಿಯನ್ನು ಆ ಸಮಯದಲ್ಲಿ ನಿನಗೆ ಹೇಳುತ್ತೇನೆ ಎಂದು ಹೇಳುವನು. "ದೊಡ್ಡವನ ಭಾಷೆ ಬಡವನ ಆಶೆ" ಎಂಬಂತೆ ಅವನ ಹತ್ತಿರ ನೂರಾರು ಸಲ ನಡೆದು ಹಾಗೂ ಹೀಗೂ ಕೊಡಲಿಕ್ಕೊಪ್ಪುವನು. ಅದರೊಳಗೆ ಬರಕೊಡುವವನಿಗೆ ಬೇಕಾದ ಕೆಲವು ಕೆಲಸವೆಲ್ಲವೂ ತೆಗೆದುಕೊಳ್ಳುವವನಿಂದ ನಡೆಯಲ್ಪಡುವುದು. ಅದು ಹಾಗಾಗದಿದ್ದರೆ ಸಾಲಕೊಡುವುದಕ್ಕೆ ಇವನು ಒಪ್ಪಲಾರನು. ಪೂರ್ತಿ ಹಣವನ್ನು ಕೊಡುವುದಕ್ಕೆ ಮುಂಚೆಯೇ ಕರಾರು ಪತ್ರಗಳೆಲ್ಲವೂ ನಡೆಯುವುವು. ಅದರ ಕ್ರಮವೋ, ಕೊಡುವುದರ ಎರಡು ಪಾಲು ಬರೆಸಿ, ಅದಕ್ಕೂ ಚಕ್ರಬಡ್ಡಿಯನ್ನು (compound interest) ಕೊಡುವಂತೆ ಒಪ್ಪತಕ್ಕದ್ದು. ವಾಯಿದೆ ಒಳಗೆ ಕೊಡದಿದ್ದರೆ ಒತ್ತೆಯ ಮಾತು ಪರಸ್ಪರ ನಡೆಯುವುದು. ಕರಾರು ಪತ್ರವಿಲ್ಲದೆ ಹಣಕ್ಕೆ ಜಾಮೀನು ಅಥವಾ ಈಡು ಇಡತಕ್ಕದ್ದು. ಅದೂ ಅಲ್ಲದೆ ಹಣವನ್ನು ಎಂದಿಗೂ ಒಂದೇ ಸಾರಿ ಕೊಡಲಾರನು. ಒಮ್ಮೆ ಸಂತೆಯಲ್ಲಿ 10 ರುಪಾಯಿ ಕೊಡುವನು. ನಮ್ಮ ಪದ್ಧತಿಮೇರೆ ಅದರಲ್ಲಿ ಎರಡು ರುಪಾಯಿಯ ಸಾರಾಯಿ ಇಬ್ಬರೂ ಕೂಡಿ ಕುಡಿಯುವರು. ಸಾಲ ತೆಗೆದುಕೊಳ್ಳುವವನು ತನ್ನ ಆಪತ್ತನ್ನು ಎಂದಿಗೂ ತೀರಿಸಲಾರನು. ಹೀಗೆಯೇ ನೂರು ರುಪಾಯಿಗೆ ಒಪ್ಪಿದ್ದ ಪಕ್ಷದಲ್ಲಿ ವರುಷಕ್ಕೆ 12 ಸಾರಿ ಮೇರೆ 60 ರುಪಾಯಿ ಸಿಕ್ಕಿಯಾಗುವುದು. ಅದರಲ್ಲಿ 24 ರುಪಾಯಿ ಸಾರಾಯಿಗೂ, 1 ರುಪಾಯಿ ಪ್ರೋನೋಟಿಗೂ ಹೋಗಿ ಬಾಕಿ 35 ರುಪಾಯಿ ಇರುವುದು. ಒಪ್ಪಿದಂತೆ ಪೂರ್ತಿ ಹಣವನ್ನು ಕೊಡಲಾರನು. 100 ರುಪಾಯಿಗೆ ಅಸಲು ಬಡ್ಡಿ ಸೇರಿ ಹಣವನ್ನು ಸಲ್ಲಿಸಿ ಮಾಡುವುದು ತೆಗೆದುಕೊಂಡವನ ಕೆಲಸ. ಈಡು ಇಟ್ಟ ಸಂಗತಿ ನೀವೇ ಯೋಚಿಸಿಕೊಳ್ಳಿರಿ! ಮೇಲಿನ ಹಣವು ಸಾಕಾಗದ ಪಕ್ಷದಲ್ಲು (ಸಾಧಾರಣವಾಗಿ ಸಾಕಾಗುವುದಿಲ್ಲ) ಬೇರೆ ಸ್ಥಳದಿಂದ ತೆಗೆಯಬೇಕು. ಅದಕ್ಕೆ ಒತ್ತೆ ಕೊಡುವಂತೆ ಒಪ್ಪುವನು. ಅದರ ಕ್ರಮವೋ ಭತ್ತ ಬಟ್ಟಿಗೆ ಬಟ್ಟಿ (ಹೊಲಿ) ಕೊಡತಕ್ಕದ್ದು. ಆ ಮೇಲೆ ಊಟಕ್ಕೆ ಭತ್ತವಿಲ್ಲ, ಹಾವಲಿಕ್ಕೆ ಉಡುಗೆರೆಗಳೂ ಇಲ್ಲ. ಅವನು ಸಂತೆಯಲ್ಲಿ ಓಡಾಡುವ ನಾಯಿಗೂ ಕಡೆ, ಹೆಚ್ಚಿಗೆ ಏನಿರುವುದು? ಅವನು ಮನುಷ್ಯನಲ್ಲ. ಇದುದರಿಂದ ಸಾಲ ಎಂಬ ಅಕ್ಷರವು ನಮ್ಮಲ್ಲಿ ಕನಸಿನಲ್ಲಿಯೂ ಸಹ ಇರದಂತೆ ಪ್ರತಿ ಒಬ್ಬ ಮನುಷ್ಯನು ಎಚ್ಚರ ನೋಡಿಕೊಳ್ಳಬೇಕೆಂದು ನನ್ನ ಕೋರಿಕೆ.

'ಅನುಭವಶಾಲಿ'

OM.

To

The Secretary & Treasurer,
Mysore Govt. Security Life
and Marriage,
Assurance Company Ltd., Mysore.

Dear Sir,

Re. Policy No. 489, (Deceased) Mrs. Nelamakkala Chinnamma Achaiya.

I acknowledge with cordial thanks the receipt of your cheque No. B. 215160 dated 4th October 1924, issued on the Imperial Bank of India, Madras, for Rs 1,000 through Mr. K. Krishnamurthy, B.A., B.L., Advocate, Mercara, in full and final settlement of my claim under the abovesaid policy No. 489.

Further, I express my indebtedness to your Company for this insurance protection and appreciate very much for the help rendered by the Company so promptly as this.

Mercara, 29-10-1924.

Yours faithfully,
Sd. N. M. Achayya,
Land holder, Ammatti P.O.
S. Coorg.

Adv "True copy"

For Sale.

Estate for sale—3 miles from Mercara on the Sunticoppa-Mercara road.

Details:—

15 acres of young coffee.
500 batties of wetland (fully under cultivation)
3 acres of Manjarabad cardamum.
2 acres of orangery.
100 acres of jungle.

**Price.—Rs. 11,000, or nearest offer.
For further particulars please apply to:—**

X
C/o Manager,
'Kodagu'
Mercara.

43

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್,
ಲಿಮಿಟೆಡ್, ಕೊ ಆಪರೇಟಿವ್ ಸೊಸೈಟೀಸ್
ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

		ರೂ.
ಶೇರ್ ಬಂಡವಾಳ	....	50,000
ವಸೂಲಾದ ಶೇರ್ ಮೊಬಲಗು	....	7,720
ಜಮೂಬಂದ ಠೇವಣಾತಿ	....	61,200

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 6-4-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 5ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಜಮಾಯಿಷಿ ಮಾಡುತ್ತಾರೆ.

ಪ್ರೆಸಿಡೆಂಟರು,
ಕೊಡಂದೇರ ಕುಟ್ಟಯ್ಯನವರು,
ರಾಯ್ ಬಹದ್ದೂರ್.

ಟ್ರೆಜರರ್.
ಯಂ. ಭುಜಂಗರಾಯರು
ಬಿ.ಎ., ಬಿ.ಎಲ್.

ಸೆಕ್ರೆಟರಿ.
ಸಿ. ಯನ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್.

ತಾರೀಕು, 1—7—1924.

ಶ್ರೀ

ಶ್ರೀ ಧನ್ವಂತರಿ.

ಕರ್ನಾಟಕಾಯುರ್ವೇದ ಪಕ್ಷಪತ್ರಿಕೆ.

ಎಡಿಟರ್.—ವಿದ್ವಾನ್ ಕೆ. ಶೇಷಶಾಸ್ತ್ರೀ ಆಯುರ್ವೇದರತ್ನಂ, ಇತ್ಯಾದಿ.

ದೇಶೀಯ ವೈದ್ಯವನ್ನು ಸರ್ವ ಸಂಪೂರ್ಣಾಭಿಪ್ರಾಯದಿಂದ ಕನ್ನಡ ನಾಡಿನಲ್ಲಿ ಪ್ರಕಟಿಸುವ ಮೊದಲನೇಯ ಪತ್ರಿಕೆ ಎಂದರೆ! ಇದೇ. ಆರೋಗ್ಯವಂತನಾಗಿ ಬಹುಕಾಲ ಬದುಕಿರಬೇಕೆಂದು ಯೋಚಿಸುವ ಪ್ರತಿಯೊಬ್ಬನಿಗೂ ಈ ಪತ್ರಿಕೆಯು ಬೇಕೇಬೇಕು. ವ್ಯಾಧಿ ಬಂದಾಗ ತಕ್ಷಣ ತಿಳಿದುಕೊಳ್ಳುವಂತೆ ಆಯಾ ರೋಗಲಕ್ಷಣ ಚಿಕಿತ್ಸೆಗಳು ಬರೆಯಲ್ಪಡುವುದರಿಂದ ಮುಖ್ಯವಾಗಿ ಸ್ತ್ರೀಯರೂ ಹಳ್ಳಿಯವರೂ ಈ ಪತ್ರಿಕೆಯನ್ನು ಓದಲೇ ಬೇಕು. ವಿಶೇಷವೇನು? ಮನೆಯಲ್ಲಿ ಈ ಪತ್ರಿಕೆ ಇದ್ದರೆ ಒಬ್ಬ ಗುರುವೂ ವೈದ್ಯನೂ ಇದ್ದಂತಾಗುವುದು.

ವಾರ್ಷಿಕ ಚಂದಾ ಮೂರು ರುಪಾಯಿ.

ವಿಳಾಸ:—

**ಮೇನೇಜರ್, ಶ್ರೀ ಧನ್ವಂತರಿ,
ಶೃಂಗೇರಿ, ಮೈಸೂರುಸ್ಟೇಟ್.**

ಹಳೆ ವಿದ್ಯಾರ್ಥಿಗಳ ತ್ರೈಮಾಸಿಕೆ.

ಸಂಪುಟ 2] ವರ್ಷದಚಂದಾ ಒರೇ ರೂ. 1-4-0 [ಸಂಚಿಕೆ 1

ಸಂಪಾದಕ —ಸಿ. ಬಿ. ಮೇದಪ್ಪ, ಬಿ.ಎ., ಎಲ್. ಎ. ಎಲ್. ಸಿ.

ಈ ಸಂಚಿಕೆಯಲ್ಲಿ ಮನೋಹರವಾದ
ಕೊಡಗಿನ ಪವಿತ್ರ ಸ್ಥಳವಾದ ಶ್ರೀ ಮೂಲ
ಕಾವೇರಿಯ ಚಿತ್ರಗಳಿವೆ.

1. ಶ್ರೀ ಕಾವೇರಿಯ ಜನ್ಮ, ಅವತಾರ
2. ಸರಕಾರಕ್ಕೆ ಸಾಲವೆಂದರೇನು?
3. ಪೋಲಿಟಿಕ್ಸ್ ಅಂದರೇನು?
4. ವಿನೋದಜ್ಞಾನ.

ಇವೇ ಮುಂತಾದ ಬಹು ಸ್ವಾರಸ್ಯದ ವಿಷಯಗಳಿವೆ.

ಮೇನೇಜರ್,
ಓ. ಎಸ್. ಎಸೋಸಿಯೇಷನ್,
ಮಡಿಕೇರಿ.

ARMS & AMMUNITION MART,

Mahomedally-Noorbhoy.

337, Abdul Rehman, Street, near Crawford Market, BOMBAY.

Telegraphic Address:-"SHOOTER' Bombay.

[24-10] Please write for latest Catalogues.

ಸಂಪತ್ತಿಯ ಸಾಧನಗಳು.

ಅಯ್ಯಾ ಬಂಧುಗಳೇ ಸಂಪತ್ತಿಯು ಅನ್ಯರ ಚಾಕರಿಯಲ್ಲಿರದೆ ನಿಮ್ಮ ಭೂಮಿಯಲ್ಲಿಯೇ ಅಡಗಿರುವದು. ಅದನ್ನು ಶೋಧಿಸಿ ತೆಗೆಯಲು ಕಿರ್ಲೋಸ್ಕರ ವ್ಯವಸಾಯ ಮುಟ್ಟುಗಳೇ ಯೋಗ್ಯವಾದ ಸಾಧನಗಳು.

ಲಕ್ಷಾವಧಿ ರೈತರು ಪೂರ್ತಿ ಅನುಭವ ತೆಗೆದುಕೊಂಡಿರುವರು. ಭೂಮಿಯ ತಕ್ಕ ತರತರದ ನೇಗಿಲುಗಳೂ ಗಾಣಗಳೂ ದೊರೆಯುತ್ತವೆ. ಕಿನಾನ ಗಾಣವು ಒಂದು ಗಂಟೆಗೆ ೪೦೦ ಪೌಂಡು ಕಬ್ಬನ್ನು ಹಿಂಡಿ ಚೆಲ್ಲುತ್ತದೆ.

"ಕೊ" ಎಂಬ ಕ್ಯಾಟಲಾಗನ್ನು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್,
16-20 ಕಿರ್ಲೋಸ್ಕರವಾಡಿ, ಜಿಲ್ಲಾ, ಸಾತಾರಾ.

ನೋಟೀಸ್.

"ಕೊಡಗು" ಪತ್ರಿಕೆಯ ಹಳೆ ಚಂದಾಹಣ ಕೊಡಲಿಕ್ಕಿರುವವರೂ, ಹೊಸ ಚಂದಾದಾರರಾಗ ಬೇಕೆಂದಿರುವವರೂ, ಮತ್ತು ಶೇರುಹಣ ಸಲ್ಲಿಸಿಮಾಡಲಿಕ್ಕಿರುವವರೂ ದಯವಿಟ್ಟು ವೀರರಾಜಪೇಟೆಯಲ್ಲಿರುವ ನಮ್ಮ ಕಂಪೆನಿಯ ಏಜಂಟರವರ ಆಫೀಸಿನಲ್ಲಿ ಪಾವತಿಮಾಡಬೇಕಾಗಿ ಕೋರಿಕೆ.

ಮಡಿಕೇರಿ,
15.9.24.

ಮೇನೇಜರ್,
'ಕೊಡಗು' ಲಿಮಿಟೆಡ್.

ಪ್ರಕಟಣೆ.

ಒಂದು ಕಡೆ ಇಂಗ್ಲೀಷಿನಲ್ಲಿಯೂ, ಇನ್ನೊಂದು ಕಡೆ ಕನ್ನಡದಲ್ಲಿಯೂ ಪ್ರಿಂಟಾಗಿರುವ ಕಾಫಿ ತೋಟದ ಆಳುಗಳ ಬ್ರಿಚಾವು ಕಂಟ್ರಾಕ್ಟು ಎಗ್ರಿಮೆಂಟ್ ಫಾರಮುಗಳೂ ಮತ್ತು ಅಪ್ಲಿಕೇಶನ್ (complaint) ಫಾರಂಗಳೂ ನಮ್ಮ ಮಾರಾಟಕ್ಕೆ ತಯಾರಿವೆ. ಬೇಕಾದವರು 'ಕೊಡಗು' ಆಫೀಸಿನಿಂದ ಪಡಕೊಳ್ಳಬಹುದು.

ಮಡಿಕೇರಿ,
17.9.24.

ಮೇನೇಜರ್.

Health is Wealth.

WANTED all to improve health strength and vitality and thus save our nation from physical degeneracy. Send half-anna stamp and get 23 specimen photographs with full particulars from

Director, Physical Culture,
P. O. BASAVANAGUDI,
Bangalore City

Printed & published by Kodanda Appayya, R.B., Chairman, Board of Directors, at "Kodagu" Press, Mercara for "Kodagu" Ltd.

Reg. No. M. 1550.
If not delivered please return to "KODAGU" OFFICE, MERCARA.

ಕೊಡಗು.

ಸತ್ಯೇನ ಧರ್ಮೇಣ ವಿದ್ಯಾ ನೀತಿ ಪ್ರಯತ್ನತಾ || ಏಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ ||

ಎಡಿಟರ್ ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೪] ಕೊಡಗು, ಸ್ ೧೯೨೪ನೇ ಇಸವಿ ನವಂಬರ್ ತಾರೀಕು ೧೪ನೆಯ ಶುಕ್ರವಾರ [ಸಂಚಿಕೆ ೨೩

ಆರೋಗ್ಯ ಚಂದ್ರಿಕೆ.

ಮದ್ರಾಸ್

ಸಂಪಾದಕರು ಡಾಕ್ಟರ್ ಯು ರಾಮರಾವ್

ಯಮ್ ಎಲ್ ಸಿ ಯ್‌ರು

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಚಿಕಿತ್ಸೆಯ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ ಈ ಪತ್ರಿಕೆಯು 'ಹೆಲ್ತ್' ಎಂಬ ಇಂಗ್ಲಿಷ್ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಯೆ ಪ್ರಕಟವಾಗುವವು.

ಆರೋಗ್ಯ ಚಂದ್ರಿಕೆಯಲ್ಲಿರುವ ಲೇಖನಗಳು ಹಳೆಯದಾದರೂ ಪುನಃ ಪುನಃ ಓದಲು ಅರ್ಹವಾದವುಗಳಾಗಿರುವುವು ಆರೋಗ್ಯ ಚಂದ್ರಿಕೆಯನ್ನು ತರಿಸಿ ಬೈಂಡ್ ಮಾಡಿಸಿ ಇಟ್ಟುಕೊಂಡರೆ ಎಲ್ಲರಿಗೂ ಉಪಯುಕ್ತವಾಗುವ ಅಮೂಲ್ಯವಾದ ಗ್ರಂಥವಾಗುವುದು ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ದರ ಮೊದಲಗು ವರ್ಷಕ್ಕೆ 1-8-0 ಬಿಡಿ ಪತ್ರಿಕೆ 1ಕ್ಕೆ ೨-೦ ಹಿಂದಿನ ಸಂಚಿಕೆಗಳು ಕೂಡಾ ದೊರೆಯುವವು.

ಪತ್ರವ್ಯವಹಾರಕ್ಕೆ 'ಆರೋಗ್ಯ ಚಂದ್ರಿಕೆ 323, ತಂಬುಚೆಟ್ಟಿ ಬೀದಿ, ಮದ್ರಾಸ್.

ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿಯ ಜೀವವಿಮೆಯ ಕಂಪನಿ, ಲಿಮಿಟೆಡ್.

ಹೆಡ್ ಆಫೀಸು, ಬೊಂಬಾಯಿ.

ಹಿಂದುಸ್ಥಾನದಲ್ಲಿ ಕಳೆದ 50 ವರ್ಷಗಳಿಂದಲೂ ಜೀವವಿಮೆಯ ಅನುಭವವನ್ನು ಪಡೆದಿರುವ ದೇಶೀಯ ಜೀವವಿಮೆ ಕಂಪೆನಿಗಳಲ್ಲಿ ಅತ್ಯಂತ ದೊಡ್ಡದೂ ಮತ್ತು ಭದ್ರವಾದದ್ದೂ ಆದ "ಓರಿಯಂಟಲಿನ" ಜೀವವಿಮೆ ಪತ್ರಕ್ಕಿಂತಲೂ ಉತ್ತಮವಾದ ಆಸ್ತಿ ಬೇರೆ ದೊರೆಯಲಾರದು

ಈಗಾಗಲೇ ವಿಮೆ ಸಂದಾಯತವಾದ ಮೊತ್ತ	8 00,00,000
ಕೈಯಲ್ಲಿ ಮುಂದೆ ಬರಬಹುದಾದ ತಗಾದೆಗಳನ್ನು ಸುದಾರಿಸಲಿಕ್ಕೆ ಇಟ್ಟುಕೊಂಡಿರುವ ಹಣ	6,00,00 000
ವಾರ್ಷಿಕ ಉತ್ಪತ್ತಿ	1,00,00 000

ಇಷ್ಟು ಭದ್ರತೆಯುಳ್ಳ ಕಂಪೆನಿಯಲ್ಲಿ ಜೀವವಿಮೆಯ ಪತ್ರ ತೆಗೆದುಕೊಳ್ಳಲಿಚ್ಛಿಸುವವರು ಯಾ, ಇದರ ವಿಷಯ ಹೆಚ್ಚಿನ ಸಂಗತಿ ತಿಳಿಯಬೇಕೆಂದಿರುವವರು, ದಯವಿಟ್ಟು ಈ ಕೆಳಗಿನವರಿಗೆ ಬರೆದುಕೊಳ್ಳುವದು.

ಕೆ. ಪಿ. ಚಿಣ್ಣಪ್ಪನವರು,
ಓರಿಯಂಟಲ್ ಏಜನ್ಸೀ ಆಫೀಸು,
ವೀರಾಜಪೇಟೆ, ದಕ್ಷಿಣ ಕೊಡಗು.

14—22

"ಕೊಡಗು"

ರಾಜಕೀಯ, ವಿದ್ಯಾ, ಕೃಷಿ, ವೃತ್ತಿ, ವಿಜ್ಞಾನ, ಮತ್ತು ನೀತಿ ಮುಂತಾದ ವಿಷಯಗಳಿಂದೊಡಗೂಡಿದ ಕೊಡಗಿನ ವಾರ ಪತ್ರಿಕೆ

1 ಪ್ರಕಟಣೆಗಳನ್ನು ಮೇನೇಜರ್ 'ಕೊಡಗು' ಮಡಿಕೇರಿ, ಈ ವಿಳಾಸಕ್ಕೆ ಕಳುಹಿಸಬೇಕು. 2 ಲೇಖನಗಳನ್ನು ಸಂಪಾದಕರು 'ಕೊಡಗು' ಮಡಿಕೇರಿ ಈ ವಿಳಾಸಕ್ಕೆ ಕಳುಹಿಸಬೇಕು 3 ಬಾತ್ಮೀದಾರರ ಅಭಿಪ್ರಾಯಕ್ಕೆ ಕೊಡಗು ಪತ್ರಿಕಾಕರ್ತರು ಒಪ್ಪಾಗ್ದವರಲ್ಲ 4 ನಮ್ಮಲ್ಲಿಗೆ ಕಳುಹಿಸುವ ಬಾತ್ಮಿಗಳು ಕಾಗದದ ಒಂದೇ ಕಡೆಯೂ, ಸ್ಪಷ್ಟವಾಗಿಯೂ, ಹೆಸರು, ವಿಳಾಸಗಳಿಂದ ಕೂಡಿಯೂ ಬರಯಲ್ಪಟ್ಟಿರಬೇಕು ಸ್ವೀಕೃತವಾಗದ ಲೇಖನಗಳನ್ನು ಹಿಂತಿರುಗಿಸಲಾಗುವುದಿಲ್ಲ. ಈ ಪತ್ರಗಳ ಪ್ರಕಟಿಸಲ್ಪಡುವವು 5. ಪ್ರಕಟಿಸಲಾಗದ ಬಾತ್ಮಿಗಳನ್ನು ಮರಳಿ ಕಳುಹಿಸುವ ಜವಾಬ್ದಾರಿಕೆಯನ್ನು ಸಂಪಾದಕರು ವಹಿಸಿಕೊಳ್ಳುವದಿಲ್ಲ

ಪ್ರಕಟಣೆಗಳು.

ಅತ್ಯಂತ ಸುಲಭವಾಗಿ ತಾಳಲ್ಪಡುತ್ತವೆ. ಹೆಚ್ಚು ಸಂಗತಿಗಳಿಗೋಸ್ಕರ ಬರೆದು ತಿಳಿದುಕೊಳ್ಳಬಹುದು.

ಮೇನೇಜರ್,
"ಕೊಡಗು" ಆಫೀಸ್, ಮಡಿಕೇರಿ.

ಅಪೂರ್ವ! ಹೊಸ ಪುಸ್ತಕ!! ಅಪೂರ್ವ!!!

ಶಿಶು ವೈದ್ಯ ಸಂಜೀವಿನೀ.

ಕನ್ನಡಿಗರಿಗೆ ಯಾವ ವೈದ್ಯ ಸಂಹಿತೆಯೂ ಇದುವರೆಗೆ ಸಿಗುತ್ತಿಲ್ಲ! ಅದಕ್ಕಾಗಿ ಇದನ್ನು ಎಲ್ಲಾ ಆಯುರ್ವೇದದ ಆಧಾರದಿಂದ ಪ್ರಕಟಿಸಿದ್ದೇವೆ ಇದರಲ್ಲಿ ಸ್ತ್ರೀಪುರುಷರ ದೇಹತತ್ವ, ವಿವಾಹ, ದಾಂಪತ್ಯ ಸುಖ, ಪಾತಿವ್ರತ್ಯ ಧರ್ಮ, ಗರ್ಭಿಣಿಯರ ರೋಗನಿದಾನ, ಚಿಕಿತ್ಸೆ, ಉಪಚಾರ, ಸುಖಪ್ರಸವಾಔಷಧಗಳು, ಪ್ರಸವವಿಧಿ, ದಾಯಿಯ ಕರ್ತವ್ಯ, ಶಿಶುಪರಿಚರ್ಯಾ ಶಿಶುಗಳ ಸಕಲ ರೋಗ ಚಿಕಿತ್ಸೆ, ಹಾಗೂ ಎಲ್ಲಾ ಲೋಹಾದಿಗಳ ಶುದ್ಧಿ ಕ್ರಮ ಮತ್ತು ಭಸ್ಮಗಳು ಮಾಡುವ ವಿಧಾನ, ಧಾತುಪುಷ್ಟಿ ಔಷಧಿಗಳು ಇವೆಲ್ಲ ಶಾಸ್ತ್ರೀಯ ಮತ್ತು ಸನುರ್ಮವಾಗಿ ವಿವರಿಸಲ್ಪಟ್ಟಿದೆ. ಈ ಪುಸ್ತಕ ಕೇವಲ ದೊಡ್ಡದು ಇದರಲ್ಲಿ ಹೆಂಗಸರು ಹುಡುಗರು ಸಹ ಸುಲಭವಾಗಿ ತಯಾರು ಮಾಡುವಂಥಾ ೫೦೦ ಔಷಧಗಳಿಗಿಂತ ಹೆಚ್ಚಾಗಿರುವವು. ಈ ಪುಸ್ತಕದ ಕ್ರಯವು ಅದರಲ್ಲಿರುವ ಒಂದೊಂದು ಔಷಧದ ಬೆಲೆಯಾಗಲಾರದೆಂಬುದನ್ನು ನೀವೇ ತಿಳಿದುಕೊಳ್ಳುವಿರಿ!! ಈ ಪುಸ್ತಕವನ್ನು ಕೊಂಡುಕೊಳ್ಳುವ ಪ್ರತಿ ಮನುಷ್ಯನೂ ಖಂಡಿತವಾಗಿ ಒಬ್ಬ ವೈದ್ಯನೇ ಆಗುತ್ತಾನೆ ಕ್ರಯ ಪುಸ್ತಕಕ್ಕೆ ೨-೮-೦.

ನಮ್ಮ ವಿಳಾಸ:—ಭಾರತಿ ಬುಕ್‌ಡಿಪೋ,

12 10 ೪೯೧, ನಗರ್ತರಪೇಟೆ, ಬೆಂಗಳೂರು ಸಿಟಿ.

ಕೃಷಿಕೋ ನಾಸ್ತಿ ದುರ್ಭಿಕ್ಷಃ

NITRATE OF SODA (15—16 per cent.) Nitrogen "The best and cheapest form of Nitrogen highly concentrated and immediately available Nothing like it to make plants grow"

ವ್ಯವಸಾಯದಲ್ಲಿ ಗೊಬ್ಬರವಿಡುವದರ ಹೆಚ್ಚಿನ ಉದ್ದೇಶವು ಬೆಳೆಗಳಿಗೆ ಸಾರಜನಕ (Nitrogen) ಒದಗಿಸಿಕೊಡುವದಾಗಿರುತ್ತದೆ 'ನೈಟ್ರೇಟ್ ಆಫ್ ಸೋಡಾ' ಎಂಬ ರಸಾಯನಿಕ ಗೊಬ್ಬರವು (15—16%) ಅಂದರೆ ಮಿಕ್ಕ ಗೊಬ್ಬರದಲ್ಲಿಯಕ್ಕಿಂತ ಮೂರುಪಾಲು. ಜಾಸ್ತಿ ಸಾರಜನಕ ಭರಿತವಾಗಿದ್ದು ಬೆಳೆಗಳಿಗೆ ಕ್ಷಣನೆ ದೊರಗುವರೀತಿಯಲ್ಲಿರುತ್ತದೆ ಇದರ ಉಪಯೋಗದಿಂದ ಫಸಲು ಬಹಳ ಸಮೃದ್ಧಿಯಾಗುವುದು ಹಿಡಿತಲುಂಬ ರಸಾಯನಿಕ ಗೊಬ್ಬರವು ಮುಡಿ (ಕುಕ್ಕೆ) ತ ಂಬ ಹಟ್ಟಿಗೊಬ್ಬರಕ್ಕೆ ಸಮವಾಗಿರುತ್ತದೆ. ಈ ರಸಾಯನಿಕ ಗೊಬ್ಬರವು ಅಮೇರಿಕ ದೇಶದ 'ಚಿಲ್ಲಿ' ಎಂಬಲ್ಲಿ ತಯಾರಾಗಿ ಒ

ಹಳ ದೂರದೇಶದಿಂದ ಬರಬೇಕಾದರೂ ಸಹ ಅದು ಹಳ್ಳಿ ತೋಟಗಳ ತೋಟ ಗದ್ದೆ ವಗೈರ ಕೃಷಿಗಳಿಗ ಉಪಯೋಗಿಸಲು ಅಷ್ಟು ಸ ಲಭವಾಗಿಯು ಹಟ್ಟಿ ಗೊಬ್ಬರಕ್ಕಿಂತಲೂ ಅಗ್ಗದಲ್ಲಿ ಸಿಕ್ಕುವುದು ಅದಾಯವನ್ನು ಕೊಡತಕ್ಕದಾಗಿಯೂ ಇರುತ್ತದೆ. ಒಂದು ಎಕ್ರೆ ಭೂಮಿಗೆ 120—160 ರಾತಲು ಬೇಕಾಗುವದು ಇದರ ವಿಷಯ ಹೆಚ್ಚಿನ ಮಾಹಿತಿಯನ್ನು ಮತ್ತು ತಿಳುವಳಿಕೆಯನ್ನು ಧರ್ಮಾರ್ಥವಾಗಿ ನಮ್ಮಿಂದ ಪಡೆಯಬಹುದು

ದಿ ಚಿಲಿಯನ್ ನೈಟ್ರೇಟ್
24—9 ಕಮಿಟಿಯವರ ಕಡೆ

ಕೊಡಗಿನಲ್ಲು—
B P Ayapa, Hon Representative Pollibetta, Coorg.

The Chilean Nitrate Committee, 6 Mission Row, Post Box 469, CALCUTTA

ಮಲೆಯಾಳ ವೈದ್ಯಶಾಲಾ.

ಮಲಬಾರಿನ ಸಂನ್ಯಾಸೀಸ್ ಮತ್ತು ಕಂಪನಿ ಎಂಬ ಆಯುರ್ವೇದ ವೈದ್ಯ ಶಾಲೆಯು ಒಂದು ಶಾಖೆಯು ವೀರರಾಜೇಂದ್ರಪೇಟೆಯಲ್ಲಿ ತೆರೆದಿರುತ್ತದೆ ಇಲ್ಲಿ ಯಾವ ವಿಧದ ಕಾಯಿಲೆಯಾಗಿದ್ದರೂ ಪಂಡಿತರಿಂದ ಪರೀಕ್ಷಿಸಿ ಔಷಧಿಕೊಟ್ಟು ಗುಣಪಡಿಸಲ್ಪಡುತ್ತೆ ಔಷಧದ ಚಾರ್ಜು ಬಹಳ ಕಡಮೆ ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ವಿವರವನ್ನು ತಿಳಿದುಕೊಳ್ಳಬಹುದು.

ನಾರಾಯಣ ಸಂನ್ಯಾಸೀ,
ಆಯುರ್ವೇದ ವೈದ್ಯರು,
52—42 ವೀರರಾಜೇಂದ್ರಪೇಟೆ.

ಕಲ್ಪತರು ತಾಯಿತ.

ಪರೀಕ್ಷೆ ಪಾಸಾಗೋಣ, ಶರೀರ ಸುಖವಾಗೋಣ, ಸಕರಿ ಸಿಗೋಣ, ಸಂಬಳ ಹೆಚ್ಚೋಣ, ವಿವಾಹವಾಗೋಣ, ಸಂತತಿಯಾಗೋಣ, ಕೈಕೊಂಡ ಉದ್ಯೋಗದಲ್ಲಿ ಯಶಸ್ಸು ಸಿಗೋಣ, ವ್ಯಾಪಾರದಲ್ಲಿ ಬಹಳ ಲಾಭ ಸಿಗೋಣ, ಸಮುಕ್ತ ಆಗೋಣ, ಭೂತ ಪಿಶಾಚ ಗ್ರಹಭಾದೆ ಆಗದಿರೋಣ, ಪ್ರತಿಕೂಲ ಒಸರು ಅನುಕೂಲವಾಗೋಣ, ಇವೇ ಮುಂತಾಗಿ ಬೇರೆ ಎಷ್ಟೋ ಮಾತುಗಳು ಇಷ್ಟೆಯುಂತೆಯೇ ಆಗುವ ಅಪೇಕ್ಷೆ ಇದ್ದರೆ ಇಷ್ಟಿತಫಲ ಕೊಡುವ ಲೋಕಮಾನ್ಯ ಕಲ್ಪತರು ತಾಯಿತ ಯಾವಾಗಲೂ ಹತ್ತಿರ ಇಡಿರಿ ಆಂದರೆ ಇಚ್ಛೆ ಪೂರ್ಣವಾಗುವದು. ಅನುಭವದ ಹೊರತು ಖಾತ್ರಿ ಆಗಲಾರದು. ತಾ, ಸ. ೧೬ ರೂ. ೧೨ ಗುಣ ತೀವ್ರವಾಗಿ, ತಾ ೨೬ ರೂ ೬ ಗುಣ ೧೫ ದಿವಸಗಳಲ್ಲಿ, ತಾ ಸ ೩೬. ರೂ. ಗುಣ ೧ ತಿಂಗಳಲ್ಲಿ. ವ್ಹಿ ಪಿ ಖರ್ಚು ಬೇರೆ. ಗುಣಬಾರದ ತಾಯಿತದ ಖರ್ಚ ವಜಾಹೋಗಿ ಬಾಕೀ ಸಿಗುವದು ವಿಳಾಸ —ಮ್ಯಾನೇಜರ ಕಲ್ಪತರು ತಾಯಿತ ಕೆ. ಎವ

[52 15] ಪೋ. ಸುಳೇಶ್ವರ ಜಿ. ಬೆಳಗಾಂವ.

The shopping centre o

Coorg, Spencer & Co. Lt

Mercara and Pollibetta

The cheapest House for high cl wines, stores, arms and ammunition everything you want.

Price lists sent post free on appl tion

Trial order solicited

SALE OF SANDALWOOD

On 24th November at noon 380 of cleansed sandalwood will be so small lots in public auction at Fraser For particulars apply to V G Darring Esquire, I F S. Acting Chief Fo Officer, Coorg, Mercara

3—3

"ಕೊಡಗು"

೧೯೨೪ನೇ ಇಸವಿ ನವೆಂಬರ್ ತಾ. ೧೪ನೇ ಶುಕ್ರವಾರ.

ಇಂಗ್ಲೆಂಡಿನಲ್ಲಿ ಹೊಸ ಮಂತ್ರಿ ಮಂಡಲ.

ಹಿಂದುಸ್ಥಾನದ ಆಡಳಿತವನ್ನು ಬ್ರಿಟಿಷ್ ಮಂತ್ರಿಮಂಡಲವೇ ನಡಿಸುತ್ತಿರುವದಾಗಿದೆ. 1919ನೇ ಇಸವಿಯ ಸುಧಾರಣೆಯಿಂದ ಪ್ರಾಂತ್ಯಗಳಲ್ಲಿ ಕೆಲವು ಇಲಾಖೆಗಳ ಆಡಳಿತವನ್ನು ಮಾತ್ರ ಹಿಂದುಸ್ಥಾನದ ಪ್ರಜೆಗಳ ಪ್ರತಿನಿಧಿಗಳಿಗೆ ಬಿಟ್ಟುಕೊಟ್ಟಿದ್ದಾರೆ. ಇದು ಸಹ ಬಾಯಿಮಾತಿನ ಮೇರೆ ಬಿಟ್ಟುಕೊಟ್ಟದ್ದೇ ಹೊರತು ಕಾರ್ಯತಃ ಪ್ರಜಾ ಪ್ರತಿನಿಧಿಗಳಿಗೆ ಆಡಳಿತ ಸ್ವತಂತ್ರ ಸಿಕ್ಕಿರುವದಿಲ್ಲವೆಂತ ಮಂತ್ರಿಗಳೇ ಹೇಳಿದ್ದಾರೆ. ಹಿಂದುಸ್ಥಾನದ ಆಡಳಿತಕ್ಕೆ ಅಧಿಕಾರಿಗಳು ಪಾರ್ಲಿಮೆಂಟಿಗೆ ಜವಾಬ್ದಾರರೆಂತಲೂ ಆದ್ದರಿಂದಲೇ ಈ ಹಕ್ಕನ್ನು ಹಿಂದುಸ್ಥಾನದ ಪ್ರಜೆಗಳಿಗೆ, ಹಿಂದುಸ್ಥಾನದವರು ತರಬೇತು ಹೊಂದುವವರೇಗೆ ಬಿಟ್ಟುಕೊಡಲಾಗುವದಿಲ್ಲವೆಂತಲೂ ಬ್ರಿಟಿಷ್ ಅಧಿಕಾರಿಗಳು ಹೇಳುತ್ತಿದ್ದಾರೆ. ಇದರಿಂದ ಹಿಂದುಸ್ಥಾನವನ್ನು ಆಳುವುದು ಇಂಗ್ಲಿಷ್ ಓಟರುಗಳಿಗೆ ತೃಪ್ತಿಯಾಗುವಂತೆಯೇ ಹೊರತು ಹಿಂದುಸ್ಥಾನದ ಪ್ರಜೆಗಳಿಗೆ ತೃಪ್ತಿಕೊಡಬೇಕಾದದ್ದಿಲ್ಲವೆಂಬದು ಸ್ಪಷ್ಟವಾಯಿತು. ಈಗ ಬ್ರಿಟಿಷ್ ಪಾರ್ಲಿಮೆಂಟಿಗೆ ಹೊಸದಾಗಿ ಚುನಾವಣೆ ನಡೆಯಿತು. ಕೂಲಿಕಾರರ ಹಿತವನ್ನು ಬಯಸುವ ಪ್ರತಿನಿಧಿಗಳ ಸಂಖ್ಯೆಯು ಕಡಿಮೆಯಾಗಿ ಕನ್ಸರ್‌ವೇಟಿವ್ ಪಾರ್ಟಿಯ ಪ್ರತಿನಿಧಿಗಳ ಸಂಖ್ಯೆಯೇ ಒಡನೆವಾಗಿ ಹೆಚ್ಚಿ ಹೋದ್ದರಿಂದ ಕೂಲಿಕಾರರ ಪ್ರತಿನಿಧಿಗಳ ಮಂತ್ರಿ ಮಂಡಲವು ರಾಜಿನಾಮೆ ಕೊಡಬೇಕಾಯಿತು. ಕನ್ಸರ್‌ವೇಟಿವ್ ಸಂಗಡದ ಮುಖ್ಯಸ್ಥರಾದ ಮಿ. ಬಾಲ್ಡ್ವಿನ್ ಎಂಬವರು ಮುಖ್ಯ ಮಂತ್ರಿಯಾಗಿ ಚಕ್ರವರ್ತಿಯವರಿಂದ ಆರಿಸಲ್ಪಟ್ಟಿದ್ದಾರೆ. ಇವರು ಇತರ ಮಂತ್ರಿಗಳನ್ನು ಆರಿಸಿಕೊಳ್ಳುತ್ತಾರೆ. ಅರ್ಲ್ ಬರ್ಕೆನ್‌ಹೆಡ್ ಎಂಬವರು ಹಿಂದುಸ್ಥಾನದ ಸ್ಟೇಟ್ ಸೆಕ್ರೆಟರಿಯವರಾಗಿ ನೇಮಿಸಲ್ಪಟ್ಟಿದ್ದಾರೆ. ಇವರು ಸಹ ಬ್ರಿಟಿಷ್ ಮಂತ್ರಿಗಳಲ್ಲೊಬ್ಬರಾಗಿದ್ದಾರೆ.

ಕೂಲಿಕಾರರ ಸಂಗಡದವರು ಸುಮಾರು ಒಂಬತ್ತು ತಿಂಗಳು ಮಾತ್ರ ರಾಜ್ಯಭಾರವನ್ನು ನಡೆಸಿದರು. ಇವರು ಸಾಮ್ರಾಜ್ಯದ ಆಡಳಿತವನ್ನೂ ಇಂಗ್ಲೆಂಡಿನ ಒಳಗಿನ ಆಡಳಿತವನ್ನೂ ತೃಪ್ತಿಕರವಾಗಿಯೇ ನಡೆಸಿದರು. ಆದರೆ ಹಿಂದುಸ್ಥಾನದ ವಿಷಯದಲ್ಲಿ ಮಾತ್ರ ಆ ಪಾರ್ಟಿಯು ಅಧಿಕಾರಕ್ಕೆ ಬರುವ ಮುಂಚೆ ಆಡುತ್ತಿದ್ದ ಮಾತುಗಳಂತೆ ನಡೆದುಕೊಳ್ಳಲಿಲ್ಲ. ಕೂಲಿಕಾರರ ಪ್ರತಿನಿಧಿಗಳ ಸಂಖ್ಯೆಯು ಬೇಕಾದಷ್ಟು ಇಲ್ಲದೆ ಇದ್ದದ್ದರಿಂದ ತಮ್ಮ ತತ್ವಗಳನ್ನು ಪೂರ್ತಿಯಾಗಿ ಜಾರಿಮಾಡಲು ಸಾಧ್ಯವಾಗಲಿಲ್ಲ. ಇವರು ಅಧಿಕಾರದಲ್ಲಿರುವಾಗ ಪಾರ್ಲಿಮೆಂಟಿನಲ್ಲಿ ಕೂಲಿಕಾರರ ಪಕ್ಷ, ಲಿಬರಲ್ ಪಕ್ಷ, ಮತ್ತು ಕನ್ಸರ್‌ವೇಟಿವ್ ಪಕ್ಷ, ಎಂಬ ಮೂರು ಪಾರ್ಟಿಗಳಿದ್ದವು. ಅನೇಕ ವಿಷಯಗಳಲ್ಲಿ ಲಿಬರಲ್ ಪಾರ್ಟಿಯವರು ಕೂಲಿಕಾರರ ಪಕ್ಷದವರೊಂದಿಗೆ ಓಟ್ ಕೊಡುತ್ತಿದ್ದದ್ದರಿಂದ ಒಂಬತ್ತು ತಿಂಗಳಾದರೂ ಅವರು ಅಧಿಕಾರದಲ್ಲಿ ಇರುವದು ಸಾಧ್ಯವಾಯಿತು. ಈ ಲಿಬರಲ್ ಪಾರ್ಟಿಯವರು ಹಿಂದುಸ್ಥಾನದ ವಿಷಯದಲ್ಲಿ ಸುಮಾರು ಕನ್ಸರ್‌ವೇಟಿವ್ ಸಂಗಡದ ಅಭಿಪ್ರಾಯದವರೇ ಆಗಿದ್ದದ್ದರಿಂದ ಹಿಂದುಸ್ಥಾನದ ವಿಷಯದಲ್ಲಿ ಕೂಲಿಕಾರರ ಪಕ್ಷದ ಆಡಳಿತವು ಕನ್ಸರ್‌ವೇಟಿವ್ ಆಡಳಿತದಂತೆಯೇ ನಡೆಯಿತೆಂತ ಹೇಳಬಹುದು. ಆದರೂ ಹಿಂದುಸ್ಥಾನದ ವಿಷಯದಲ್ಲಿ ಕನ್ಸರ್‌ವೇಟಿವ್‌ಗಳಿಗಿಂತ ಕೂಲಿಕಾರರ ಪಕ್ಷದವರು ಹೆಚ್ಚಿನ ಸಹಾನುಭೂತಿ ತೋರಿಸುತ್ತಿದ್ದರು, ಎಂಬ ಆಶೆ ಅನೇಕರಲ್ಲಿ ಇತ್ತು. ಈ ಆಶೆಯು ಈಗ ನಿರಾಶೆಯಾಯಿತು.

ಹೊಸ ಚುನಾವಣೆಯ ಗುಟ್ಟೆಂತ ಗದ್ದಲವಾಗುವಾಗಲೇ ಒಂಗಾಳದಲ್ಲಿ ದಬ್ಬಾಳಿಕೆಯು ಪ್ರಾರಂಭವಾಗಿದೆ. ಕೂಲಿಕಾರರ ಪಕ್ಷದ ಮಂತ್ರಿ ಮಂಡಲಿಯವರು ಹಿಂದುಸ್ಥಾನದ ವಿಷಯದಲ್ಲಿ ಬಲವಾಗಿಲ್ಲ, ಹಿಂದೀ ಚಳವಳಿಗಾರರಿಗೆ ಅತಿ ಸುಟ್ಟಿಸಿಕೊಂಡು ಕೆ[illegible]ತ್ತಾರೆಯೆಂತ ಮುಂತಾಗಿ ಕನ್ಸರ್‌ವೇಟಿವ್‌ಗಳು ಹೇಳುತ್ತಿದ್ದರು. ಆದ್ದರಿಂದ ಓಟರುಗಳಿಗೆ ಸಮಾಧಾನ ಕೊಡಲಿಕ್ಕಾಗಿ ತಾವು ಹಿಂದುಸ್ಥಾನವನ್ನು ಬಲವಾಗಿಯೇ ಆಳುತ್ತೇವೆಂತ ತೋರಿಸಲಿಕ್ಕಾಗಿ ದಬ್ಬಾಳಿಕೆಗೆ ಉತ್ತೇಜನ ಕೊಟ್ಟಿರಬೇಕೆಂತ ಕೆಲವರ ಅಭಿಪ್ರಾಯ. ನಮಗೆ ಇದು ಸರಿ ತೋರುವದಿಲ್ಲ. ಕೂಲಿಕಾರರ ಪಕ್ಷದವರು ಪುನಃ ಅಧಿಕಾರಕ್ಕೆ ಬರುವ ಸಂಭವವಿಲ್ಲವೆಂಬ ಧೈರ್ಯದಿಂದ ಇಂಡಿಯಾ ಸರಕಾರದವರೇ ದಬ್ಬಾಳಿಕೆಯನ್ನು ಪ್ರಾರಂಭಿಸಿ ಇರಬೇಕೆಂತ ನಮಗೆ ತೋರುತ್ತದೆ. ಹೇಗಾದರೂ ಈಗ ಪ್ರಾರಂಭವಾದ ದಬ್ಬಾಳಿಕೆಯು ಈಗ ಅಧಿಕಾರಕ್ಕೆ ಬಂದ ಸಂಗಡದವರ ಆಡಳಿತದ ರೀತಿಯಾದರೆ ಹಿಂದುಸ್ಥಾನದವರಿಗೆ ತತ್ಕಾಲ ಸ್ವತಂತ್ರ ದೊರೆಯುವ ಆಶೆ ಯಾವುದೂ ಇಲ್ಲ. ಇನ್ನು ಮುಂದೆ ಬಹಳ ಕಷ್ಟದ ದಿವಸಗಳು ಬರುವದು ನಿಶ್ಚಿತವಾಗಿ ತೋರುತ್ತದೆ.

ಮುಖ್ಯಮಂತ್ರಿಯಾದ ಮಿ. ಬಾಲ್ಡ್ವಿನ್ನರವರು ಇಲೆಕ್ಷನ್ ಹೋರಾಟದಲ್ಲಿ ಇಂಡಿಯಾದ ಆಳ್ವಿಕೆಯ ವಿಷಯ ಏನು ಹೇಳಿದ್ದಾರೆಂತ ನೋಡೋಣ. "ಇಂಡಿಯಾದಲ್ಲಿ ಸರಕಾರದ ಕೆಲಸಗಳಿಗೆ ಅಟಂಕಮಾಡುವ ತತ್ವವನ್ನು ಕೆಲವರು ಅವಲಂಬಿಸಿದ್ದಾರೆ. ಇವರ ಮತಬಲ್ಪದಿಂದ ಬಂಗಾಳದಲ್ಲು ಮಧ್ಯಪ್ರಾಂತ್ಯದಲ್ಲೂ ಸುಧಾರಣೆಯಿಂದ ದೊರೆತ ಕೌನ್ಸಿಲಿನ ಕೆಲಸವನ್ನು ಕಟುಸ್ಥಿತಿಗೆ ತಂದುಬಿಟ್ಟಿದ್ದಾರೆ. ಬೆಳವಣಿಗೆಯ ದಾರಿಯನ್ನು ಅವಲಂಬಿಸುವುದರ ಬದಲು ಮುರಿಯುವ ದಾರಿಯನ್ನು ಹಿಡಿದಿದ್ದಾರೆ. ಇದರಿಂದ ಪ್ರಜಾಪ್ರತಿನಿಧಿ ಸರಕಾರಕ್ಕೆ ಇವರು ಅರ್ಹರಲ್ಲವೆಂಬದು ನಿದರ್ಶನವಾದಂತಾಯಿತು" ಹೀಗೆಂತ ಸ್ವರಾಜ್ಯಪಕ್ಷದವರ ಕೆಲಸದ ವಿಷಯದಲ್ಲಿ ಹೇಳಿದ್ದಾರೆ. ಈ ವೃದ್ಧ ಸಾಮ್ರಾಜ್ಯದ ಮುಖ್ಯಮಂತ್ರಿಗೆ ಸ್ವರಾಜ್ಯ ಪಕ್ಷದವರು ಈ ರಾಜತಂತ್ರವನ್ನು ಯಾಕೆ ಹೂಡಿದ್ದಾರೆಂಬದು ಗೊತ್ತಾಗಿರುವದಿಲ್ಲವೇ? ಈಗ ಕೊಟ್ಟಿರುವ ಆಡಳಿತದ ಮಾರ್ಪಾಟುಗಳಿಂದ ಪ್ರಜೆಗಳಿಗೆ ಏನೂ ಪ್ರಯೋಜನವಾಗಿರುವುದಿಲ್ಲ. ಇನ್ನೂ ಪ್ರಜೆಗಳ ಹೊರೆ ಹೆಚ್ಚಾಯಿತಷ್ಟೆ, ಎಂಬುದು ಸ್ವರಾಜ್ಯದ ಪಕ್ಷದ ಮುಂದಾಳುಗಳಿಗೆ ಖಂಡಿತ ತೋರಿದ್ದರಿಂದ ಈ ಸುಧಾರಿಸಿದ ಕೌನ್ಸಿಲುಗಳನ್ನು ಶೀಘ್ರದಲ್ಲೇ ಮುರಿದು ಪ್ರಜೆಗಳಿಗೆ ಪ್ರಯೋಜನಮಾಡಿಕೊಳ್ಳಬಹುದಾದ ಕೌನ್ಸಿಲುಗಳನ್ನು ಅಂದರೆ ಸ್ವರಾಜ್ಯವನ್ನು ಶೀಘ್ರದಲ್ಲೇ ಪಡೆಯಬೇಕೆಂಬುವದೇ ಸ್ವರಾಜ್ಯಪಕ್ಷದವರ ಉದ್ದೇಶ. ಇಂಡಿಯಾ ದೇಶವನ್ನು ಮೂಗುದಾರಹಾಕಿ ಹಿಡಿದ ಕರಡಿಯಂತೆ ಕುಣಿ ಎಂತ ಹೇಳಿದಾಗ ಕುಣಿಯಬೇಕು, ಮಲಗು ಎಂತ ಹೇಳುವಾಗ ಮಲಗಬೇಕು, ಎಂತ ಹೇಳುವ ಸಾಮ್ರಾಜ್ಯ ಸ್ಥಾಪಕರ ಬೋಧನೆಯನ್ನು ನಿರಾಕರಿಸುವ ಸ್ವರಾಜ್ಯಪಕ್ಷದವರು ಸರಕಾರಕ್ಕೆ ತಲೆಬೇನೆಯನ್ನುಂಟುಮಾಡುವದು ಸಹಜವಾಗಿಯೇ ಇದೆ.

ಹಿಂದೂ ಮುಸಲ್ಮಾನರ ಜಗಳಗಳನ್ನು ಎತ್ತಿ ತೋರಿಸಿ ಬ್ರಿಟಿಷ್ ಸರಕಾರವು ಇಂಡಿಯಾದಲ್ಲಿ ಇಲ್ಲದೆ ಇದ್ದಿದ್ದರೆ ಈ ರೀತಿ ಜಾತಿಭೇದದ ಹೊಡದಾಟದಿಂದ ಜನರಲ್ಲಿ ಶಾಂತಿಯೇ ಇರಲಿಕ್ಕಿಲ್ಲ, ಇಂಗ್ಲೀಷರು ಈ ದೇಶವನ್ನು ಬಲವಾಗಿ ಆಳುತ್ತಾ ಇರದಿದ್ದರೆ ಇಂಗ್ಲೀಷರು ಈ ದೇಶವನ್ನು ಆಧೀನಪಡಿಸುವ ಮುಂಚೆ ಇದ್ದರೀತಿ ಅನಾಯಕತ್ವವಾಗಿ ಹೋದೀತು ಎಂತ ಮಿ. ಬಾಲ್ಡ್ವಿನ್ನರು ಹೇಳಿದ್ದಾರೆ. ಆದರೆ ಈ ಮಂತ್ರಿವರ್ಯರಿಗೆ ಇಂಗ್ಲೀಷರು ಬಲವಾಗಿ ಆಳುತ್ತಿದ್ದರೂ ಈ ಹಿಂದೂ ಮುಸಲ್ಮಾನ್ ಜಗಳಗಳು ಯಾಕೆ ಆಗುತ್ತಲೇ ಇವೆ ಎಂಬ ಸವಾಲಿಗೆ ಜವಾಬು ಹೇಳಬೇಕೆಂತ ತೋಚಲಿಲ್ಲವೇ? ಈ ಹಿಂದೂ ಮುಸಲ್ಮಾನ್ ಜಗಳಗಳೇ ಇಂಗ್ಲೀಷರು ಹಿಂದುಸ್ಥಾನವನ್ನು ಪ್ರಜೆಗಳಿಗೆ ಬಿಟ್ಟುಕೊಡಬಾರದೆನ್ನುವ ಮಾತಿಗೆ ಪತ್ರಾಸೆ ಕೊಡುವದಾದ್ದರಿಂದ ಹಿಂದೂ ಮುಸಲ್ಮಾನರ ಜಗಳಕ್ಕೆ ಸರಕಾರದ ಉದ್ಯೋಗಸ್ಥರು ಅನೇಕವೇಳೆ ಕಾರಣರೆಂತ ಜನರಲ್ಲಿ ಇರುವ ನಂಬಿಕೆಗೆ ಆಧಾರವಾಗುವುದಿಲ್ಲವೇ?

ಹಿಂದುಸ್ಥಾನದ ಮೂವತ್ತು ಕೋಟಿ ಜನರ ಕ್ಷೇಮವನ್ನು ಕಾಪಾಡಿಕೊಳ್ಳುವ ಭಾರವು ಕನ್ಸರ್‌ವೇಟಿವ್ ಸಂಗಡದ ಮೇಲೆ ಬಿದ್ದಿದೆಯಂತೆ! ಮೂವತ್ತುಕೋಟಿ ಜನರಲ್ಲಿ ಹೆಚ್ಚಿನ ಜನರು ಬಡತನದಿಂದ ಕೊರಗುತ್ತಿರುವಾಗ ಸಿವಿಲ್ ಸರ್ವೀಸಿನ ಸಂಬಳವನ್ನು ಹೆಚ್ಚಿಸುತ್ತಲೂ ಒಟ್ಟು ಸರಕಾರಿ ಉತ್ಪತ್ತಿಯ ಅರ್ಧಕ್ಕಿಂತ ಹೆಚ್ಚು ಮಿಲಿಟರಿ ಇಲಾಖೆಗೆ ಖರ್ಚುಮಾಡುತ್ತಲೂ ವಿದ್ಯಾ, ಆರೋಗ್ಯಕ್ಕೆ ಹಣ ಕೇಳಿದರೆಮಾತ್ರ ಕಂದಾಯ ಹಾಕಿಕೊಳ್ಳಿ, ಎಂತ ಹೇಳುತ್ತಲೂ ಇಂಡಿಯಾವನ್ನು ಬ್ರಿಟಿಷರು ಆಳುತ್ತಿರುವದೋ? ಬಡವರ ಕ್ಷೇಮವನ್ನು ಹಾರೈಸುತ್ತಿರುವ ಮಹಾತ್ಮ ಗಾಂಧಿಯವರನ್ನು ಮೂವತ್ತುಕೋಟಿ ಜನರು ದೇವರ ಅವತಾರವೆಯೋ ಏನೋ ಎಂಬ ಭಕ್ತಿಯಿಂದ ಪೂಜಿಸುತ್ತಿದ್ದರೂ ಅಂಥಾ ಮನುಷ್ಯನು ಬ್ರಿಟಿಷ್ ಸರಕಾರಕ್ಕೆ ಶತ್ರುವಾಗುತ್ತಾನೆ. ಆಗ ಈ ಸರಕಾರವು ಮೂವತ್ತುಕೋಟಿ ಜನರ ಹಿತೈಷಿಗಳೆಂತ ನಾವು ನಂಬುವುದು ಹೇಗೆ? ಬ್ರಿಟಿಷ್ ಜನಾಂಗದ ಕ್ಷೇಮವನ್ನು ಕಾಪಾಡಿಕೊಳ್ಳುವದೇ ಕನ್ಸರ್‌ವೇಟಿವ್ ಪಕ್ಷದವರ ಕರ್ತವ್ಯವಾಗಿದೆ. ಅದನ್ನು ಕಾಪಾಡಿಕೊಳ್ಳುವಾಗ ಹಿಂದುಸ್ಥಾನಕ್ಕೆ ಕ್ಷೇಮವಾದರೆ ಆಗಲಿ, ಎಂಬದೇ ಕನ್ಸರ್‌ವೇಟಿವ್ ಪಕ್ಷದ ತತ್ವವಾಗಿದೆ ಎಂತ ನಮಗೆ ತೋರುತ್ತೆ.

ಎಷ್ಟು ಒದೆಸರೂ ಏನು? ಹಿಂದೀಯರಿಗೆ ಸ್ವತಂತ್ರ ಬೇಕಾದರೆ ಹಿಂದೀಯರೇ ಪ್ರಯತ್ನಿಸಿ ಸಂಪಾದಿಸಬೇಕೆಂಬುವ ತತ್ವವನ್ನು ಖಂಡಿತವಾಗಿಯೂ ಎಲ್ಲರೂ ಚೆನ್ನಾಗಿ ಮನಸ್ಸಿಗೆ ಹಚ್ಚಿಕೊಳ್ಳಬೇಕಾಗಿದೆ. ಕೂಲಿಕಾರರ ಸರಕಾರವಿರುವಾಗ ಹಿಂದೀಯರಿಗೆ ಅವರಿಂದ ಏನಾದರೂ ಸ್ವತಂತ್ರ ದೊರಕೀತೋ ಎಂಬ ಆಶೆ ಇರುತ್ತಿತ್ತು. ಅದರಿಂದ ಹಿಂದೀಯರು ತಮ್ಮ ಕರ್ತವ್ಯವನ್ನು ಮರೆಯಲು ಎಡೆಯಾಯಿತು. ಕನ್ಸರ್‌ವೇಟಿವ್ ಸರಕಾರವು ಸ್ಥಾಪಿತವಾದ್ದರಿಂದ ಬ್ರಿಟಿಷ್ ಪಾರ್ಲಿಮೆಂಟಿನಿಂದ ಇನ್ನು ನಾಲ್ಕೈದು ವರುಷಗಳ ವರೇಗಂತೂ ಏನೇನೂ ದೊರೆಯುವ ಸಂಭವವಿಲ್ಲವೆಂತ ಎಲ್ಲರಿಗೂ ಖಂಡಿತವಾಯಿತು. ಕನ್ಸರ್‌ವೇಟಿವ್ ಸರಕಾರವು ಬಂದದ್ದರಿಂದ ಈ ಒಂದು ಪ್ರಯೋಜನವಾಯಿತು. ಈ ತಿಳುವಳಿಕೆಯು ಹಿಂದೀ ಮುಂದಾಳುಗಳ ಮನಸ್ಸಿಗೆ ಚೆನ್ನಾಗಿ ಹೊಕ್ಕಿತೆನ್ನುವದಕ್ಕೆ ಮೊನ್ನೆ ತಾನೇ ಕಲ್ಕತ್ತದಿಂದ ಹೊರಟ ಒಗ್ಗಟ್ಟಿನ ಪತ್ರವೇ ಸಾಕ್ಷಿ. ಸ್ವರಾಜ್ಯ ಪಕ್ಷ, ಅಸಹಕಾರ ಪಕ್ಷ, ಎಂಬ ಭೇದಗಳನ್ನು ಬಿಟ್ಟು ಎಲ್ಲರೂ ಕಾಂಗ್ರೆಸ್ಸಿನ ಧ್ವಜದ ನೆರಳಲ್ಲಿ ಕೆಲಸ ಮಾಡಬೇಕೆಂತ ತೀರ್ಮಾನವಾಯಿತು. ಕನ್ಸರ್‌ವೇಟಿವ್ ಸರಕಾರ ಬಂದದ್ದಕ್ಕೆ ಮುಖ ಕೆಳಗೆ ಹಾಕಿ ದಿಕ್ಕು ತೋಚದೆ ಕೂರುವ ಕಾಲವೆಲ್ಲಾ ಹಿಂದೆಯೇ ಹೋಯಿತು. ಹಿಂದೀಯರು ಯಾವ ಯಾವ ಕಾಲಕ್ಕೆ ಯಾವ ಯಾವ ರಾಜನೀತಿಯನ್ನು ಅನುಸರಿಸಬೇಕೆಂಬದನ್ನು ಚೆನ್ನಾಗಿ ಅರಿತು ಕೆಲಸ ಮಾಡುತ್ತಿದ್ದಾರೆ. ಕನ್ಸರ್‌ವೇಟಿವ್ ಮಂತ್ರಿಯ 'ಧೈರ್ಯ'ದ ಮಾತಿಗೆ ಯಾರೂ ಬೆದರದೆ ಮುಂದಾಳುಗಳು ತೋರಿಸುವ ದಾರಿಯನ್ನು ನಮ್ಮ ದೇಶದವರೂ ಬಹು ಧೈರ್ಯದಿಂದ ಅವಲಂಬಿಸ ಬೇಕಾಗಿದೆ.

ಕೊಡಗು ಲೆಜಿಸ್ಲೇಟಿವ್ ಕೌನ್ಸಿಲಿನ ಪ್ರೊಸೀಡಿಂಗ್ಸ್.

(ಕಳೆದವಾರದ ಮುಂದರಿದದ್ದು)

[illegible]

19ನೇ ಠರಾವು "ಈ ದೇಶದಲ್ಲಿ ಬಡತನವು ದಿನೇ ದಿನೇ ಹೆಚ್ಚುತ್ತಿರುವುದಕ್ಕೂ, ಜನಸಂಖ್ಯೆಯು ಕಡಿಮೆಯಾಗುತ್ತಿರುವುದಕ್ಕೂ ಕಾರಣಗಳನ್ನು ಪರಿಶೋಧಿಸಲು ಮತ್ತು ಸಾಧನಗಳನ್ನು ಕಲ್ಪಿಸಲು ಒಂದು ಕಮಿಟಿಯನ್ನೇರ್ಪಡಿಸಬೇಕೆಂದು ಈ ಕೌನ್ಸಿಲ್ ಚೀಫ್ ಕಮಿಷನರವರಿಗೆ ಸಿಫಾರಸ್ಸು ಮಾಡುತ್ತದೆ."

ಈ ಠರಾವಿನ ವಿಷಯ ಮಾತಾಡುವಾಗ, ಇದೇ ವಿಷಯವು ಕಳೆದ ಅನೇಕ ವರುಷಗಳಿಂದ ಪ್ರಜಾಪಕ್ಷದ ಪ್ರಮುಖರ ಅವಗಾಹನೆಗೆ ಬಂದಿತ್ತೆಂದು ಹೇಳಬೇಕಾಗಿದೆ. ಪ್ರತಿ ವರುಷದ ಕೊಡಗು ಜಮೀನ್ದಾರರ ಸಂಘದ ವಾರ್ಷಿಕ ಮೀಟಿಂಗಿನಲ್ಲಿ ಇದಕ್ಕೆ ತಕ್ಕ ನಿವಾರಣೆಯಾಗಬೇಕೆಂದು ಜನರು ಠರಾವು ತರುತ್ತಲೇ ಇದ್ದಾರೆ. ಜಮೀನ್ದಾರ್ ಸಂಘದವರು ಎಷ್ಟು ಕೇಳಿಕೊಂಡರೂ ಜನರ ಕೂಗು ಅರಣ್ಯ ರೋಧನವಾಯಿತಲ್ಲದೆ ಅನ್ಯಥಾ ಆಗಲಿಲ್ಲ. ಈ ವ್ಯಸನಕರವಾದ ಮತ್ತು ದುರಾದೃಷ್ಟದ ಸಂಗತಿಗಳಿಗೆ ತಕ್ಕ ಸಾಧನಗಳನ್ನು ಕಂಡುಹಿಡಿದು ನಿವಾರಣೆ ಮಾಡದ ಹೊರತು ನಮ್ಮ ದೇಶದ ಮುಂದಣ ಅಭಿವೃದ್ಧಿಯು ಎಂದೂ ಆಗತಕ್ಕದ್ದಲ್ಲವೆಂದು ಖಂಡಿತವಾಗಿ ಹೇಳುತ್ತೇನೆ.

ಠರಾವಿನಲ್ಲಿ ಎರಡು ಸಂಗತಿಗಳಿವೆ. ಒಂದು ಜನರ ಮಿತಿಮೀರಿದ ಬಡತನ (2) ಜನಸಂಖ್ಯೆ ವಿಪರೀತವಾಗಿ ಕಡಿಮೆಯಾಗುತ್ತಾ ಇರುವುದು. ಈ ಕಾರಣಗಳು ಒಂದರನ್ನೊಂದು ಅನುಸರಿಸಿದೆ. ಆದರೂ ಅವುಗಳನ್ನು ಪ್ರತ್ಯೇಕವಾಗಿ ವಿವರಿಸಬೇಕಾಗಿದೆ. ಬಡತನವೆಂಬ ಶಬ್ದದ ಅರ್ಥವನ್ನು ಯಾವ ತರವಲ್ಲಾದರೂ ಹೇಳಬಹುದು. ಏತಕ್ಕೆಂದರೆ ಅದು ಜನರು ಹೇಳುವುದಕ್ಕೆ ಅನುಕೂಲವಾಗಿದೆ. ಉದಾಹರಣೆಯಾಗಿ ಇಂಗ್ಲೆಂಡಿನಲ್ಲಿ ಬಡವನೆಂದೆನ್ನಿಸಿಕೊಂಡ ಒಬ್ಬನನ್ನು ಇಂಡಿಯಾ ದೇಶದಲ್ಲಿ ಐಶ್ವರ್ಯವಂತನೆಂದೆಣಿಸಬಹುದು. ಬಡತನವನ್ನು ಅವರವರು ಅನುಭವಿಸುತ್ತಿರುವ ಸುಖ ದುಃಖಗಳ ಮೇಲೆಯೇ ವರ್ಣಿಸುವುದಾಗಿದೆ. ಬಡತನವು ಯಾವಾಗಲೂ ಮನುಷ್ಯನಲ್ಲಿ ಕೆಲಸಮಾಡಲು ಚೈತನ್ಯವಿಲ್ಲದಿರೋಣದರಿಂದಲೂ, ಅನ್ನಬಟ್ಟೆ, ವಿದ್ಯಾಭ್ಯಾಸ, ವಾಸಕ್ಕೆ ಲಾಯಕ್ಕಾದ ಮನೆ ಇಲ್ಲದಿರುವುದರಿಂದಲೂ, ಇನ್ನೂ ಅನೇಕ ಕಾರಣಗಳಿಂದಲೂ ಉಂಟಾಗುತ್ತದೆ. ಈಗಿನ ಕಾಲದಲ್ಲಿ ನವನಾಗರೀಕತೆಯನ್ನು ಪಡೆದ ಅನೇಕ ದೇಶಗಳು ಜನರಿಂದ ಬಡತನವನ್ನು ಹೋಗಲಾಡಿಸಲಿಕ್ಕೆ ತಕ್ಕ ಕಾರಣಗಳನ್ನು ಕಂಡುಹಿಡಿದಿದ್ದಾರೆ. ಬಡತನವು ಎರಡು ಕಾರಣಗಳಿಂದುಂಟಾಗುತ್ತವೆ. (1) ಜೀವನಕ್ಕೆ ಅನ್ನಬಟ್ಟೆಯೂ ಮೊದಲನ್ನು ಕರ್ಚು ಮಾಡಲಿಕ್ಕೆ ತಕ್ಕಷ್ಟು ಅನುಕೂಲವಿಲ್ಲದಿರುವುದರಿಂದ ಕೆಲಸಮಾಡಲು ಇರುವ ಅನಾನುಕೂಲತೆಯೊಂದು (2) ಶರೀರವೇ ಕೃಶವಾಗಿ ಬಲಹೀನವಾಗಿ ಯಾವ ಕೆಲಸವನ್ನು ಮಾಡಲು ಅಸಾಧ್ಯವಾಗಿರುವ ಕಾರಣ ಇನ್ನೊಂದು. ಮೊದಲಿನ ತರದ ಬಡಜನರಿಗೆ ಇಂಗ್ಲೆಂಡ್ ಮೊದಲಾದ ದೇಶಗಳಲ್ಲಿ ಸರಕಾರದವರು ತಕ್ಕ ಕೆಲಸಗಳನ್ನು ಕಲ್ಪಿಸಿ ಬಡತನವನ್ನು ನಿವಾರಣೆ ಮಾಡಿದ್ದಾರೆ. ಎರಡನೇ ತರದ ಜನರಿಗೂ ಸಹ ಸರಕಾರದವರು ಸಹಾಯ ಮಾಡಲು ಮುಂದೆ ಬಂದಿರುತ್ತಾರೆ. ಹೀಗೆಯೇ ಬಡತನವನ್ನು ನಿವಾರಣೆ ಮಾಡಲು, ಮತ್ತು ಕೆಲಸಗಾರರಿಗೆ ಸಾಕಷ್ಟು ಕೆಲಸಗಳನ್ನು ಕೂಡಿಸಲು, ಸಾಧನೆಗಳನ್ನು ಮಾಡುವದರಲ್ಲೇ ಇದ್ದಾರೆ.

ಬಡತನವನ್ನು ನೀಗಿಸಬೇಕಾದರೆ, ದೇಶದಲ್ಲಿ ಉತ್ಪತ್ತಿ ಹೆಚ್ಚಾಗಬೇಕಲ್ಲದೆ ಕೂಲಿಕಾರರ ಜೀವನದ ತರಗತಿಯು ಅಭಿವೃದ್ಧಿಯಾಗಿ, ದುಂದುಗಾರಿಕೆಯ ಖರ್ಚನ್ನು ನಿಲ್ಲಿಸಬೇಕೆಂದು ಇತರ ದೇಶದ ಕೆಲಸಗಳಿಂದ ತಿಳಿಯುತ್ತೆ.

ಹೊರಗಿನ ದೇಶದ ಕಾರಣಗಳನ್ನು ತೆಗೆದುಕೊಂಡರೆ, ಅಂಥಾ ಕಾರಣಗಳು ನಮ್ಮ ದೇಶಕ್ಕೂ ವ್ಯಾಪಿಸುತ್ತವೆ. ಇಲ್ಲಿಯೂ ಸಹ ಅನೇಕ ಜನರಿಗೆ ಕೆಲಸವೇನೂ ಇಲ್ಲದೆ ಸೋಮಾರಿಗಳಾಗಿರುತ್ತಾರೆ. ಇಂಥಾ ಸೋಮಾರಿ ಜನರು ಕುಡುಕತನಕ್ಕೆ ಬಿದ್ದುದರಿಂದ ಮಿತಿಮೀರಿದ ಬಡವರಾಗಿದ್ದಾರೆ. ನಮ್ಮ ದೇಶದ ಬಡಜನರ ಸಂಖ್ಯೆಯನ್ನು ನೋಡಿದರೆ ಅವರು ಈ ಕುಡುಕತನದಲ್ಲೇ ಮಗ್ನರಾಗಿ ಆ ಮೂಲಕ ತಮ್ಮ ಆಸ್ತಿಪಾಸ್ತಿಯನ್ನು, ಮನೆಮಾರುಗಳನ್ನು ಕಳಕೊಂಡು ಬುದ್ಧಿಹೀನರಾಗಿ, ಸೋಮಾರಿಗಳಾಗಿ ಅಲೆದಾಡುತ್ತಲೇ ಇದ್ದಾರೆ.

ಇನ್ನೊಂದು ಕಾರಣವು ಕೊಡಗರ ಕುಟುಂಬದಲ್ಲಿ ಆಸ್ತಿಯನ್ನು ಪಾಲುಮಾಡಲಿಕ್ಕೆ ನಿರುಪಾಯವಿದ್ದು, ಹೀಗೆ ಪಾ

ಉಪಯೋಗವುದರಲ್ಲಿ ಕೆಲವು ಸಟ್ಟಿಗೆ ಅನುಕೂಲವಿದ್ದರೂ, ಅದರಿಂದುಂಟಾಗುವ ಕೇಡು [illegible] ಸಂಸನವಾಗಿದೆ. ಕೊಡಗಿನ ಜನರಿಗೆ ಈ ಪಾಲುವಾಳಿಕೆಯಿಂದಲೇ ಈ ತರದ ಕಷ್ಟವೂ ಮಿತಿಮೀರಿದ ಬಡತನವೂ ಉಂಟಾಯಿತೆಂದು ನನ್ನ ಅಭಿಪ್ರಾಯ. ಇನ್ನೊಂದು ಕಾರಣವು ದೇಶದಲ್ಲಿ ದನಕರಗಳು ಸಾಯುವುದು. ಜಾನುವಾರುಗಳ ಮರಣ ಸಂಖ್ಯೆಯನ್ನು ಅತಿಸ್ಥಿತ ಕಾಯಿಲೆಯಿಂದ ಕಡಿಮೆ ಮಾಡುವುದಕ್ಕೆ ಪಶು ವೈದ್ಯ ಇಲಾಖೆ ಇದ್ದರೂ ಅದರಿಂದ ಹೆಚ್ಚೇನು ಪ್ರಯೋಜನವಾಗಲಿಲ್ಲ. ರೈತರಿಗೆ ಅದರ ಮೇಲೆ ಅಷ್ಟೇನೂ ನಂಬಿಗೆಯೂ ಸಹ ಇರುವುದಿಲ್ಲ.

ನಾನು ಈ ಮೊದಲೇ ಹೇಳಿದಂತೆ ದೇಶದಲ್ಲಿ ದಿನೇ ದಿನೇ ಹೆಚ್ಚುತ್ತಿರುವ ಮರಣಸಂಖ್ಯೆಯು ಜನರ ಬಡತನದಲ್ಲಿ ಅಡಗಿದೆ. ಬಡತನವು ಹೆಚ್ಚಾಗಿರುವುದರಿಂದಲೇ, ಜನರು ಹೆಚ್ಚಾಗಿ ಸಾಯುತ್ತಿರುವುದು. 1870ರಿಂದ ಈ ವರೆಗೆ ಆಗುತ್ತಿರುವ ಪ್ರತಿ ವರುಷದ ಜನನ ಮತ್ತು ಮರಣ ಸಂಖ್ಯೆಯನ್ನು ನೋಡಿದರೆ ಪ್ರತಿ ವರುಷವೂ ಮರಣವು ಜನನಕ್ಕಿಂತ ಒಂದು ಸಾವಿರದಿಂದ ಮೇಲ್ಪಟ್ಟೇ ಇರುವುದು. ಈ ಲೆಕ್ಕ ಪ್ರಕಾರ ಇನ್ನು ಒಂದುನೂರಿಪ್ಪತ್ತು ವರುಷದಲ್ಲಿ ಕೊಡಗಿನಲ್ಲಿ ಜನರೇ ಇಲ್ಲದಂತಾಗಿ ದೇಶವು ನಿರ್ಜನ ಪ್ರದೇಶವಾಗುವುದು. ದೇಶದಲ್ಲಿ ಸ್ಥಾಪನೆಯಾದ ಆಸ್ಪತ್ರೆಗಳು ಮತ್ತು ಚಿಕಿತ್ಸಾಲಯಗಳಿಂದ ಯಾವದೊಂದು ಪ್ರಯೋಜನವೂ ಆಗಿರುವುದಿಲ್ಲ. ಈ ವಿಷಯ ಕೊಡಗು ಪತ್ರಿಕೆಯ ಅಗ್ರಲೇಖನದಲ್ಲಿ ಬರೆದಿದ್ದಾಗ ಸಿವಿಲ್ ಸರ್ಜನರಾಗಿದ್ದ ಕರ್ನಲ್ [illegible]ರವರು ಆಸ್ಪತ್ರೆಗಳು ಕಾಯಿಲೆ ಬಂದವರನ್ನು ನೋಡಿ ಚಿಕಿತ್ಸೆ ಮಾಡುವುದಕ್ಕಿರುವುದೆಂದೂ, ಕಾಯಿಲೆ ಬಾರದಂತೆ ಮಾಡಲು, [illegible] ಪ್ರತ್ಯೇಕ ಒಂದು [illegible] ಸ್ಥಳವಂತೆ ಆಗಬೇಕೆಂದು ಜವಾಬು ಕೊಟ್ಟಿರುತ್ತಾರೆ.

1914ರಲ್ಲಿ ಇಂಡಿಯಾ ಸರಕಾರದವರು ಒಂದು ದೊಡ್ಡ ಮೊತ್ತವನ್ನು ಎಲ್ಲಾ ಪ್ರಾಂತಿಕ ಸರಕಾರಕ್ಕೆ, ಆಯಾಯ [illegible] ಊರೂರಿನ ನಿರ್ಮಲ ಸ್ಥಿತಿಯನ್ನು ಅಭಿವೃದ್ಧಿ ಪಡಿಸಬೇಕೆಂದು ಕೊಟ್ಟರು. ಕೊಡಗಿಗೂ ಸಹ ಒಳ್ಳೇ ಮೊಬಲಗು ಸಿಕ್ಕಿದೆ. ಸಿಕ್ಕಿದರೂ ಸಹ ಈ ಹಣವನ್ನು ಒಳ್ಳೇ ಮುನಿಸಿಪಾಲಿಟಿಗಳಿಗೆ ಮಾತ್ರ ಖರ್ಚು ಮಾಡಿದರಾಗಿ ತಿಳಿಯುತ್ತೇನೆ. ಕೆಲವು ಸರಕಾರವು ಪಟ್ಟಣಗಳ ಅಭಿವೃದ್ಧಿಯಲ್ಲೇ ನಿಗ್ರರಾಗಿರುತ್ತಾರೆ. ಇದು ಶುದ್ಧ ತಪ್ಪು. ಏಕೆಂದರೆ ಊರೂರಿನ ರೈತನಿಂದಲೇ ಸರಕಾರದ ಬೊಕ್ಕಸ ತುಂಬುವುದರಿಂದ ಅವರ ಅಭಿವೃದ್ಧಿಯ ಮೇಲೆ ನಿಗವಿಡುವುದು ಸರಕಾರದವರ ಕರ್ತವ್ಯ.

ಯಾವ ದೇಶದಲ್ಲಾದರೂ, ನಂಜರಾಜಪಟ್ಣ ತಾಲೋಕಿನಲ್ಲಿರುವಂತ ಕೊಳಕು ಜನರೂ, ಹುಚ್ಚು ಕೆಟ್ಟು ಹೋದ ಜನರೂ ಇರಲಿಕ್ಕಿಲ್ಲವೆಂದು ಹೇಳಬೇಕಾಗಿದೆ. ಸರಕಾರದವರು ಆ ಬಡಜನರ ಕ್ಷೇಮದಲ್ಲಿ ಆಸಕ್ತಿಯನ್ನು ತೋರಿಸುವದರ ಬದಲಾಗಿ, ಆ ಪ್ರದೇಶದ ನಾಡಿನ ಉತ್ಪತ್ತಿಗಳನ್ನು ತೆಗೆಯುವುದರಲ್ಲಿಯೂ, ಗಂಧವನ್ನು ಕೇಳುವುದರಲ್ಲಿಯೂ ನಿರತರಾಗಿರುವರಾಗಿದ್ದಾರೆ. ಪ್ರತಿ ವರುಷದ ರಾಜ್ಯಾಡಳಿತ ವರದಿಯಲ್ಲಿ ಜನರ ಆರೋಗ್ಯವು ಚೆನ್ನಾಗಿದೆ, ಚೆನ್ನಾಗಿದೆ ಎಂದು ಬರೆಯುವುದು ನೋಡುವವರಿಗೆ ನಿಜವೆಂತಿದ್ದು, ಒಳ್ಳೇ ಸುಳ್ಳೇ ಆಗಿದೆ. ಆದರೆ ಈಗಿನ ಕಮಿಷನರವರು ಮಾತ್ರ ನಿಜವನ್ನೇ ಬರೆದಿರುತ್ತಾರೆ. ರಾಜ್ಯಾಡಳಿತವು ಒಳ್ಳೇದು. ಜನರ ಆರೋಗ್ಯವು ಚೆನ್ನಾಗಿದೆ ಎಂಬುದು ಹಲವು ವರುಷಗಳಿಂದ ಮೇಲುಪಂಕ್ತಿಯಂತೆ ಬರೆಯುತ್ತಾ ಬಂದದ್ದರಿಂದ ಅದರಲ್ಲಿ ನಿಜವೇನೂ ಇರುವುದಿಲ್ಲ.

**ಸರಕಾರದವರು ಹೇಳುವುದನ್ನೇ ಈ ವರದಿಗಳ ಮೂಲಕ, ಅದು ಅವರ ಪ್ರಯೋಜನಕ್ಕೆ ಮಾತ್ರ ಆಗಿದೆ. ಮೈಸೂರಿನ ಪೋಲೀಸು ಡಿಪಾರ್ಟ್‌ಮೆಂಟಿನಲ್ಲಿಯೂ, ಡಿ. ಪಿ. ಡಬ್ಲ್ಯು. ಶಾಖೆಯಲ್ಲಿಯೂ, [illegible] ಟ್ರಾನ್ಸ್‌ಪೋರ್ಟಿನಲ್ಲಿ ಆಗುತ್ತಿರುವ ಅನಾವಶ್ಯಕ ಖರ್ಚನ್ನು ನಿಲ್ಲಿಸಿ ಹಾಗೆ ಉಳಿಕೆಯಾದ ಹಣವನ್ನು, ಕೊಡಗು ದೇಶದಲ್ಲಿ ಮಲೇರಿಯಾ ಜ್ವರವನ್ನು ಕಡಿಮೆ ಮಾಡಲಿಕ್ಕೂ ವಿದ್ಯಾಭಿವೃದ್ಧಿ, ಕೈಗಾರಿಕೆಗಳು, ಆಸ್ಪತ್ರೆಗಳಿಗೂ ಉಪಯೋಗಿಸುವುದು ಒಳ್ಳೇದು. ಸರಕಾರದವರು ಪ್ರಜೆಗಳ ಕ್ಷೇಮವನ್ನು ಬಿಟ್ಟರೆ ತಮ್ಮ ಸರಕಾರದ ಆಡಳಿತವು ಚೆನ್ನಾಗಿದೆ ಎಂದು ಹೇಳುತ್ತಾರೆ. ಇದರಿಂದ ಸ್ಪಷ್ಟವಾಗಿ ನಮಗೆ ಒಳ್ಳೇ ಸರಕಾರವಾಗಲೀ ಸ್ವರಾಜ್ಯವಾಗಲೀ ಇಲ್ಲವೆಂದು [illegible].

ಮರಣ ಸಂಖ್ಯೆಯು ಹೆಚ್ಚಾಗಲಿಕ್ಕೆ ಜನಸಂಖ್ಯೆಯು ಕಡಿಮೆಯಾಗಲಿಕ್ಕೂ ಮಲೇರಿಯಾ ಜ್ವರವು ಮುಖ್ಯ ಕಾರಣ. [illegible] ಸಂಖ್ಯೆಯು ಹೆಚ್ಚುತ್ತಿರುವುದು, ಮತ್ತು [illegible] ಜನರ ಹೆಂಗಸರು ಸಾಯುತ್ತಿರುವುದು, ಕಡುಬಡತನವೂ, ಕುಡಿಯಲಿಕ್ಕೆ ಒಳ್ಳೆ ನೀರು ಅನೇಕ ಕಡೆ ಇಲ್ಲದಿರುವುದು ಇತರ ಕಾರಣಗಳಲ್ಲೊಂದಾಗಿದೆ.

ಇದನ್ನು ಪರಿಹರಿಸಲು ಒಂದು ಕಮಿಟಿಯನ್ನೇ ನೇಮಿಸಬೇಕೆಂದು. ಕಮಿಟಿಯಲ್ಲಿ ಸಿವಿಲ್ ಸರ್ಜನರು ಇರಬೇಕೆಂದೂ, ಕಮಿಟಿಯವರು ಊರೂರು ತಿರುಗಿ ಬಲ್ಲವರ ಮತ್ತು ಅನುಭವಸ್ಥರ ಸಾಕ್ಷಿ ವಿಚಾರಗಳನ್ನು [illegible] ರಿಪೋರ್ಟನ್ನು ಕೌನ್ಸಿಲ್ ಮುಂದೆ ಚರ್ಚೆಗೆ ಇಡಬೇಕೆಂದೂ ನಾನು ಕೇಳಿಕೊಳ್ಳುತ್ತೇನೆ.

ಮಿ. ಮುಸಿಯಪ್ಪಂಡ ಚಿನ್ನಪ್ಪನವರು.

ಅಧ್ಯಕ್ಷರೇ, ಕಳೆದ 25 ವರುಷಗಳಿಂದ ಜನರ ಆರ್ಥಿಕ ಸ್ಥಿತಿಯು ಬಹಳ ಹೀನ ಸ್ಥಿತಿಗೆ ಬಂದಿದೆ ಎಂಬುದೂ, 10ರಲ್ಲಿ 8 ಭಾಗದ ಜನರು ಬಹಳ ಬಡತನದಲ್ಲಿದ್ದಾರೆಂಬುದೂ, ಮತ್ತು ಹೆಚ್ಚಿನ ಜನರು ತಲೆ ಎತ್ತಲಾರದಷ್ಟು ಸಾಲದಲ್ಲಿ ಮುಳುಗಿದ್ದಾರೆಂಬುದೂ ಒಪ್ಪಿಕೊಂಡ ವಿಷಯಗಳಾಗಿವೆ. ಇದಕ್ಕೆ ವಿಧ ವಿಧ ಕಾರಣಗಳನ್ನು ಹೇಳುತ್ತಾರೆ. ಮೇಲೆ ಮೇಲೆ ನೋಡುವವರು ಹುಡುಗತನ, ದುಂದು ಖರ್ಚು, ಮಿತವ್ಯಯ ಗೊತ್ತಿಲ್ಲದೆ ಇರುವದು, ಮತ್ತು ಸೋಮಾರಿತನ ಮುಂತಾದವು ಕಾರಣವೆನ್ನುತ್ತಾರೆ. ಈ ಆರೋಪಣವನ್ನು ಕೊಡಗ ಜಾತಿಯವರ ಮೇಲೆ ಮುಖ್ಯವಾಗಿ ಹೇಳುವದಾಗಿದೆ. ಇತರ ಜಾತಿಯವರೂ ಸಹ ಅದೇ ಸ್ಥಿತಿಯಲ್ಲಿದ್ದಾರೆ. ಈ ಕಾರಣಗಳು ನ್ಯಾಯವಾದವಲ್ಲ. ಮತ್ತು ಅಲ್ಪ ಕಾರಣವನ್ನು ದೊಡ್ಡದಾಗಿ ಮಾಡಿ ಹೇಳುವದಾಗಿದೆ. ಬೇರೆ ಕಡೆ ಜನರಿಗಿಂತ ಕೊಡಗಿನ ಜನರು ಈ ನಾಡಿನಲ್ಲಿ ಹೆಚ್ಚಿನ ತಪ್ಪಿತಸ್ಥರು ಹೇಗೆ ಆದಾರು? ನನ್ನ ಅಭಿಪ್ರಾಯದಲ್ಲಿ ಬಡತನಕ್ಕೂ ಸಾಲಕ್ಕೂ ಈ ಕೆಳಗಿನ ಕಾರಣಗಳಂತೆ ತೋರುತ್ತೆ.

(1) ಆರ್ಥಿಕ ಸಹಾಯಕ್ಕೆ ಅನುಕೂಲವಿಲ್ಲದಿರೋಣ

(2) ಚಿಕ್ಕ ವ್ಯಾಪಾರಗಳು ಹಾಕುವ ಹೆಚ್ಚಿನ ದರದ ಬಡ್ಡಿ.

(3) ಕೃಷಿ ಜಾನುವಾರುಗಳು ಹೆಚ್ಚಾಗಿ ಸಾಯುವದು.

(4) ಕೃಷಿ ಬೆಳೆಗಳಿಗೆ ಅನುಕೂಲವಿಲ್ಲದಿರೋಣ.

(5) ಎರಡನೇ ಕಸುಬು ಇಲ್ಲದಿರೋಣ. ಕೊಡಗಿನ ಸಿಪಾಯಿಗಳಲ್ಲಿ [illegible] ಮರಣದ ದರಕ್ಕೆ ಬಡತನದಿಂದ [illegible] ಕಾರಣವೆಂತ ನನಗೆ ತೋರುತ್ತೆ. [illegible] ಸಾಯುತ್ತಿದ್ದರೆ [illegible] ಕಾರಣ ಮತ್ತು [illegible] ಕಾರಣಗಳೇನೆಂದರೆ (1) [illegible] ಒಳ್ಳೆ ನೀರು ಇಲ್ಲದಿರೋಣ, (2) ಸಾಧಾರಣ [illegible] ಶಕ್ತಿ ಇಲ್ಲದಿರೋಣ. ಇದಕ್ಕೆ ಪ್ರತ್ಯುಪಾಯಗಳು ಏನೆಂದರೆ—(1) ಹಣ ಸಾಲ ಕೊಡುವ ಸಂಸ್ಥೆಗಳನ್ನು ಸ್ಥಾಪಿಸೋಣ, (2) ಜಾನುವಾರುಗಳನ್ನು ಒದಗಿಸಿಕೊಡೋಣ, (3) ಮನೆ ಕೈಗಾರಿಕೆಯನ್ನು [illegible] ಸೋಣ, (4) ತಿರುಗಾಡುತ್ತಿರುವ ಆಸ್ಪತ್ರೆಗಳಿರೋಣ. ಒಂದು ನೂರು ಬಟ್ಟೆ ಭೂಮಿಗೆ ಒಂದು ಜೊತೆ ಎತ್ತು ಬಂದರೆ [illegible] ಇರುವ ರೈತನು ಬಡವನಾಗಲಾರನೆಂತ ನಾನು ನಂಬುತ್ತೇನೆ. ಜನರು ಕೆಲಸಗಾರರಾಗಿಯೂ ಅನುಕೂಲವಿದ್ದರೆ ಹೊಸ ಕ್ರಮಗಳನ್ನು ಅನುಸರಿಸುವವರಾಗಿಯೂ ಇದ್ದಾರೆ.

ಈ ಸಂಬಂಧ ಇವುಗಳಲ್ಲಿ ಸ್ಥಳೀಯ ಸರಕಾರದವರ ಸಹಾಯ ಕಡಿಮೆ ಮಾಡಿದ್ದಕ್ಕೆ ನಾನು ತುಂಬ ವ್ಯಸನಪಡುತ್ತೇನೆ. ಈ ಮಾತುಗಳೊಡನೆ ಠರಾವನ್ನು ನಾನು ಅನುಮೋದಿಸುತ್ತೇನೆ.

ಮಿ. ಟಿ. ಜಿ. ಟಾಸ್ಪರಾವರು

ಅಧ್ಯಕ್ಷರೇ, ನಮಗೂ ಇಂಡಿಯಾ ಸರಕಾರಕ್ಕೂ ನಡೆದ ಪತ್ರವ್ಯವಹಾರದ ಸಾರಾಂಶವನ್ನು ಈ ಸಭೆಗೆ ಹೇಳಬೇಕೆಂತ ಇದ್ದೇನೆ. ಕೌನ್ಸಿಲ್ ಆಫ್ ಸ್ಟೇಟಿನಲ್ಲಿ ಕಳೆದ ಏಪ್ರಿಲಿನಲ್ಲಿ ಪಾಸಾದ ಒಂದು ಠರಾವು ಏನೆಂದರೆ—"ಬ್ರಿಟಿಷ್ ಇಂಡಿಯಾದ ಆರ್ಥಿಕ ಸ್ಥಿತಿಯ ವಿಷಯ ತನಿಖೆ ಮಾಡಬೇಕಾದ ಅವಶ್ಯವಿದೆಯೋ ಎಂತಲೂ, ಈ ಬಗ್ಗೆ ಕಮಿಟಿ ನೇಮಕವಾದರೆ ಕಮಿಟಿಯ ಕೆಲಸಕ್ಕೆ ಸಹಾಯಕರಾಗುತ್ತಾರೋ ಎಂತಲೂ ಸ್ಥಳೀಯ ಸರಕಾರದವರನ್ನು ಕೇಳಬೇಕು" ಈ ಠರಾವಿನ ಮೇಲೆ ಕೊಡಗು ಸರಕಾರದ ಅಭಿಪ್ರಾಯ ಕೊಡಬೇಕೆಂದಿದ್ದಾಗ, ನಾವು ಒಪ್ಪಿಗೆ ಕೊಟ್ಟಿದ್ದೇವೆ. ಮಧ್ಯ [illegible] ಕಮಿಟಿಯಿಂದ ನೇಮಿಸಲ್ಪಟ್ಟ ಬದಲು ಯಾವ ಯಾವ ವಿಷಯ ತನಿಖೆ ಮಾಡಬೇಕೆಂತ ನಿರ್ಧರಿಸಬೇಕೆಂತಲೂ ಪ್ರಾಂತೀಯ ಕಮಿಟಿಗಳು [illegible] ಕಮಿಟಿಗೆ ಸಹಾಯ ಮಾಡಬೇಕೆಂತಲೂ ಇಂಡಿಯಾ ಸರಕಾರದ ಅಭಿಪ್ರಾಯವಾಗಿದೆ. [illegible] ಸ್ಥಳೀಯ ಸರಕಾರಗಳ ಅಭಿಪ್ರಾಯವನ್ನು [illegible] ಸರಕಾರ [illegible] ಒಪ್ಪಿಗೆ [illegible] ಆವಶ್ಯಕವೆಂತ [illegible]

[illegible]

ರಾವಿನಲ್ಲಿ "ಬಡತನ ಹೆಚ್ಚುತ್ತಿದೆ" ಎಂತಲೂ "ಜನಸಂಖ್ಯೆ ಕಡಿಮೆಯಾಗುತ್ತಿದೆ" ಎಂತಲೂ ಬರೆದಿದೆ. ಬಡತನವೆಂದರೆ ಏನೆಂತ ಖಂಡಿತವಾಗಿ ಹೇಳಲಿಕ್ಕಾಗುವದಿಲ್ಲವೆಂತ ಠರಾವು ತಂದವರೇ ಹೇಳುತ್ತಾರೆ. ಜನಸಂಖ್ಯೆಯು ಕಡಿಮೆಯಾಗುತ್ತಿದೆ ಎಂಬುದು ನಿಜವಲ್ಲ. ಕಳೆದ 20 ವರುಷಗಳ ಈಚೆಗೆ ಆದ ಎರಡು ಜನಗಣತಿಯ ರಿಪೋರ್ಟನ್ನು ಈ ಸಭೆಯಲ್ಲಿ ಯಾರಾದರೂ ಓದಿ ನೋಡಿದರೆ ಜನಸಂಖ್ಯೆ ಕಡಿಮೆ ಇದ್ದರೂ, ಇದು ಪರದೇಶದಿಂದ ಬರುವ ಜನರ ಸಂಖ್ಯೆಯ ವ್ಯತ್ಯಾಸದಿಂದ ಹೀಗಾಗುವದೆಂತ ಗೊತ್ತಾಗುತ್ತೆ. ಹೊರಗಿನಿಂದ ಬರುವ ಜನರು ಮುಖ್ಯವಾಗಿ ನೌಕರಿಗಾಗಿ ಬರುವವರಾದ್ದರಿಂದ ಅವರಲ್ಲಿ ಮರಣ ಸಂಖ್ಯೆ ಹೆಚ್ಚಾಗಿರುವದು ಸ್ವಾಭಾವಿಕವಾಗಿದೆ. ಆದ್ದರಿಂದ ದೇಶದ ಜನಸಂಖ್ಯೆ ಕಡಿಮೆಯಾಗುತ್ತಿದೆ ಎಂಬುದು ನಿಜವಲ್ಲ. ಮತ್ತು ಬಡತನ ಹೆಚ್ಚುತ್ತಿದೆ ಎಂಬುದನ್ನು ನಾನು ಒಪ್ಪುವದಿಲ್ಲ.

ಜನರ ಆರ್ಥಿಕ ಸ್ಥಿತಿಯನ್ನು ಅಭಿವೃದ್ಧಿಗೊಳಿಸಲು ಸರಕಾರವನ್ನು [illegible] ವರು ಬೇರೆ ಯಾರೂ ಇರಲಾರರು. ಸರಕಾರವು ಈ ಬಾಬಿನಲ್ಲಿ ತನ್ನ ಕರ್ತವ್ಯವನ್ನು ಮಾಡುತ್ತಿಲ್ಲವೆಂಬುದನ್ನು ನಾನು ವಿರೋಧಿಸುವ ಅವಶ್ಯವೇ ಇಲ್ಲ. ಕೊಡಗಿನ ಜನರ ಆರ್ಥಿಕ ಸ್ಥಿತಿಯನ್ನು ಹೇಗೆ ಉನ್ನತ ಸ್ಥಿತಿಗೆ ತರಬೇಕೆಂಬುದೇ ಸಭೆಯು ಆಲೋಚಿಸಬೇಕಾಗಿದೆ. ಇರುವ ನಿಜವಾದ ಸ್ಥಿತಿಯನ್ನು ಕಂಡು ಹಿಡಿದು ಪ್ರಯೋಜನವಾಗುವ ಕೆಲಸಗಳನ್ನು ಮಾಡುವ ಉಪಾಯವನ್ನು ಆಲೋಚಿಸುವುದೇ ಈ ಸಭೆಯ ಕೆಲಸವಾಗಿದೆ. ಈ ತಿರುಗಾಡುವ [illegible] ಪಾಲಿನಿಂದ ಹಿಡಿದು [illegible] ಕೃಷಿ [illegible] ಭಾಗಗಳನ್ನು ಅಭ್ಯಾಸಿಸಬೇಕಾಗುತ್ತೆ. [illegible] ನೇಮಕವಾಗುವ ಕಮಿಟಿಯು ಇಷ್ಟೆಲ್ಲಾ ವಿಷಯಗಳನ್ನು ತನಿಖೆ ಮಾಡಲು ಸಾಧ್ಯವಿಲ್ಲವಂತೆ ನಾನು ಈ ಸಭೆಗೆ ತಿಳಿಸಬೇಕಾಗಿದೆ. [illegible] ವಿಷಯಗಳನ್ನು ಮಾತ್ರ [illegible] ಕಮಿಟಿಯನ್ನು ನೇಮಿಸುವುದು ಉತ್ತಮ. [illegible] ಕಾರಣವನ್ನು ಕಂಡು ಹಿಡಿಯಲೂ, ಜಾನುವಾರುಗಳ ಹೀನಸ್ಥಿತಿಗೆ ಕಾರಣವನ್ನು ಕಂಡು ಹಿಡಿಯಲೂ ಕಮಿಟಿಗಳು ಆಗಬೇಕೆಂತ ಇನ್ನು ಮುಂದೆ ಚರ್ಚೆಗಳಿವೆ. ಆದ್ದರಿಂದ, [illegible] ವಿಷಯಗಳನ್ನು ತನಿಖೆ ಮಾಡುವ ಕಮಿಟಿಯನ್ನು ನೇಮಿಸುತ್ತಾ ಹೋದರೆ ನಮ್ಮ ಕೆಲಸವನ್ನು ತಿಳಿದು ನಾವು ತೀರ್ಮಾನಿಸಿದಂತೆ ಆಗುವದಿಲ್ಲವೆಂತ ನಾನು ಹೇಳುತ್ತೇನೆ.

ಮಿ. ಸಿ. ಎಸ್. ಸಂಕಪ್ಪಯ್ಯನವರು.

ಅಧ್ಯಕ್ಷರೇ, ಇಂಡಿಯಾ ಸರಕಾರದವರು ನೇಮಿಸುವ ಕಮಿಟಿಯವರಿಗೆ ನಮ್ಮ ದೇಶದ ಆರ್ಥಿಕ ಸ್ಥಿತಿ ಮತ್ತು ಆರೋಗ್ಯ ಸ್ಥಿತಿ ಎರಡು ಸಂಪೂರ್ಣವಾಗಿ ಅಭ್ಯಾಸಿಸಲು ಸಾಧ್ಯವಿದೆಯೆಂತ ನನಗೆ ತೋರುವದಿಲ್ಲ. ಒಟ್ಟು ಇಂಡಿಯಾದ ಸ್ಥಿತಿಯನ್ನು ಅಭ್ಯಾಸಿಸುವಾಗ ನಮ್ಮ ದೇಶದ ಸ್ಥಿತಿಗಳು ಸಂಪೂರ್ಣ ಗಣನೆಗೆ ಬೀಳಲಾರವು. ನಮ್ಮ ದೇಶದಲ್ಲಿ ಮಾತ್ರ ಇರುವ ಅನೇಕ ಕಾರಣಗಳು ಇರುವುವು. ಇಂಡಿಯಾ ಸರಕಾರದವರು ಈ ವಿಷಯ ತನಿಖೆಗೆ ಕಮಿಟಿಯನ್ನು ನೇಮಿಸುವದೇ ಇನ್ನೂ ನಿಶ್ಚಯವಾಗಲಿಲ್ಲ. ಅಂಥಾ ಒಂದು ಕಮಿಟಿಯಾಗಬೇಕೆಂತ [illegible] ಹೇಳಿದಂತೆ—ಕೌನ್ಸಿಲ್ ಆಫ್ ಸ್ಟೇಟಿನಲ್ಲಿ ಠರಾವು ಪಾಸಾಗಿದೆ—ನೇಮಕವಾದರೂ ಆ ಕಮಿಟಿಯು ಒಳ್ಳೇ ಆರ್ಥಿಕ ವಿಷಯ ಮಾತ್ರ ಅಭ್ಯಾಸಿಸುತ್ತದೆ. ಈಗ ಚರ್ಚೆಗೆ ಬಂದಿರುವ ಠರಾವು ಆರೋಗ್ಯ ಸ್ಥಿತಿಯನ್ನು ಅಭ್ಯಾಸಿಸಬೇಕೆಂತ ಹೇಳುತ್ತೆ. ಈ ದೇಶಕ್ಕೆ ಪ್ರತ್ಯೇಕ ಕಮಿಟಿ ಆಗಬೇಕೆಂಬ ಠರಾವಿಗೆ ನನ್ನ ಅನುಮೋದನೆ ಇದೆ.

[illegible] ಜನಸಂಖ್ಯೆ ಕಡಿಮೆಯಾಗುತ್ತೆಂತ [illegible] ದೇಶದ [illegible] 1871 ರಿಂದ 1921ರ ವರೆಗಿನ [illegible] ಲೆಕ್ಕವನ್ನು ನೋಡಿದ್ದೇನೆ. ಜನಸಂಖ್ಯೆ [illegible]

[illegible]

ಕ್ಕೈದು ವರ್ಷಗಳ ಕೆಳಗೆ ಕಮಿಷನರು ಬಿಹಿತಸ್ವಾರರ ಸಂಘದ ಇದೇ ಠರಾವಿಗೆ ಏನು ಜವಾಬು ಹೇಳಿದರೆಂದರೆ—ಮೈಸೂರಿನ ಮಲ್ನಾಡು ಪ್ರಾಂತ್ಯದಲ್ಲಿ ಈ ವಿಷಯವಾಗಿ ಮೈಸೂರು ಸರಕಾರವು ತನಿಖಿ ಮಾಡಿದೆ. ಅಲ್ಲಿನ ಸ್ಥಿತಿಯೂ ಕೊಡಗಿನ ಸ್ಥಿತಿಯೂ ಒಂದೇ ಆಗಿದೆ. ಆ ತನಿಖಿಯ ಫಲಿತಾಂಶವನ್ನು ಮೈಸೂರು ಸರಕಾರದಿಂದ ತರಿಸಿ ಅದರಂತೆ ಜಾರಿಮಾಡಲಾಗುತ್ತೆಂತ ಹೇಳಿದರೂ ಈ ವರೇಗೂ ಹಾಗೆ ಮಾಡಿದ್ದು ಕಾಣುವದಿಲ್ಲ.' ಅಂಥಾ ಕಮಿಟಿಯು ತುಂಬಾ ಹಣವನ್ನೂ ಕಾಲವನ್ನೂ ತೆಗೆದುಕೊಳ್ಳುತ್ತೆ, ನಿಜವೇ. ಇಂಥಾ ಕಮಿಟಿಯು ಮಾಡುವ ಶಿಫಾರಸ್ಸುಗಳನ್ನು ಸ್ಥಳೀಯ ಸರಕಾರವು ಜಾರಿಗೆ ತರದೆ ಹೋದರೆ ರೈತರ ಹಣವನ್ನು ಖರ್ಚು ಮಾಡಿದ್ದರಿಂದ ಏನೂ ಪ್ರಯೋಜನವಾಗಲಾರದು. ಕಮಿಟಿಯ ಶಿಫಾರಸ್ಸನ್ನು ಒಪ್ಪಿಕೊಳ್ಳುತ್ತೇವೆಂತ ಸರಕಾರದವರು ಭರವಸೆ ಕೊಡಬೇಕೆಂತ ನನ್ನ ಅಭಿಪ್ರಾಯವಾಗಿದೆ.

ಈ ಮಾತುಗಳಿಂದ ಠರಾವಿಗೆ ಒತ್ತಾಸೆ ಕೊಡುತ್ತೇನೆ.

ಮೆ. ಟಿ. ಜಿ. ಟಾಸ್ಕರವರು.

ಸೆನ್ಸರ್ ಸುಪರಿಂಟೆಂಡೆಂಟರು ಬರೆದಿರುವ ಮಾತುಗಳ ಊಹನೆಯಿಂದ ಬರೆದದ್ದಲ್ಲ. ಕೊಡಗಿನ ಹೊರಗೆ ಹುಟ್ಟಿದ ಜನರ ಸಂಖ್ಯೆಯ ಆಧಾರದಿಂದ ಬರೆದದ್ದಾಗಿದೆ. ಜನಸಂಖ್ಯೆ ಕಡಿಮೆಯಾಗಲು ಕಾರಣವನ್ನು ಸಹ ಬರೇ ಊಹನೆಯಿಂದ ಬರೆದದ್ದಲ್ಲ. ತಿಳಿದ ಸಂಗತಿಗಳಿಂದ ಬರೆದದ್ದಾಗಿದೆ. ನಿಜವಾದ ಕಾರಣಗಳನ್ನು ಕಂಡುಹಿಡಿಯಲು ಸರಕಾರವು ಸಹ ಬೇರೆಯವರಂತೆಯೇ ಕುತೂಹಲವುಳ್ಳದ್ದಾಗಿದೆ. ಆದ್ದರಿಂದ ಇಂಡಿಯಾ ಸರಕಾರದ ಅಭಿಪ್ರಾಯಗಳನ್ನು ತಿಳಿದುಕೊಂಡು ಮುಂದರಿಸುವದು ಉತ್ತಮ. ಆ ವರೇಗೆ ನಮಗೆ ತಿಳಿದ ಕಾರಣಗಳನ್ನು ಅಜಮಾಯಿಸುವದು ಉತ್ತಮ.

ಮೆ. ಬಿ. ಶ್ರೀಪತಿರಾಯರು.

ಕೌನ್ಸಿಲ್ ಆಫ್ ಸ್ಟೇಟಿನ ಠರಾವಿನ ಮೇರೆ ನೇಮಕವಾಗುವ ಕಮಿಟಿಯ ಸಂಬಂಧವಾಗಿ ಏನಾದರೂ ಕಾಗದ ಬಂದದೆಯೋ ಎಂತ ನನಗೆ ತಿಳಿಯಬೇಕಾಗಿದೆ. ಬಂದಿದ್ದರೆ ನಮ್ಮ ಸರಕಾರದಿಂದ ಏನು ಜವಾಬು ಹೋಗಿದೆ. ಅದು ತಿಳಿದ ನಂತರ ನಾನು ಹೇಳತಕ್ಕದ್ದನ್ನು ಹೇಳುತ್ತೇನೆ.

ಮೆ. ಟಿ. ಜಿ. ಟಾಸ್ಕರವರು.

ಇಂಡಿಯಾ ಸರಕಾರದವರು ನಡಿಸಬಹುದಾದ ತನಿಖಿಗೆ ನಮ್ಮ ಸರಕಾರವು ಸಹಾಯ ಮಾಡಲು ತಯಾರಿದೆಯೆಂತ ಜವಾಬು ಬರೆಯಲಾಗಿದೆಯೆಂತ ನಾನು ಈ ಮೊದಲೇ ಹೇಳಿದ್ದೇನೆ.

ಮೆ. ಬಿ. ಶ್ರೀಪತಿರಾಯರು.

ಆದಾಗ್ಯೂ ಕೂಡ ಕೌನ್ಸಿಲ್ ಆಫ್ ಸ್ಟೇಟಿನ ಠರಾವಿನ ಮೇರೆ ಸ್ಥಳೀಯ ಸರಕಾರವು ದೇಶದ ಆರ್ಥಿಕ ಸ್ಥಿತಿಯನ್ನು ವಿಚಾರಿಸಲು ಒಂದು ಒತ್ತಾಸೆ ಕಮಿಟಿಯನ್ನು ಏರ್ಪಡಿಸಬೇಕಾಗಿದೆ. ಅದರ ಮೇರೆ ಈ ಠರಾವು ಈ ವಿಷಯದಲ್ಲಿ ಈ ಸಭೆಯ ಅಭಿಪ್ರಾಯವನ್ನು ಅಂದರೆ ದೇಶದವರ ಅಭಿಪ್ರಾಯವನ್ನು ಸೂಚಿಸುತ್ತದೆ. ಆದುದರಿಂದ ಈ ಠರಾವನ್ನು ಪಾಸು ಮಾಡಿ, ಚರ್ಚೆಯ ಸಾರಾಂಶವನ್ನು ಇಂಡಿಯಾ ಸರಕಾರಕ್ಕೆ ಕಳುಹಿಸುವುದರಿಂದ ನಮ್ಮ ವಿಷಯಕ್ಕೆ ಏನೂ ಅಡ್ಡಿಯಾಗಲಿಕ್ಕಿಲ್ಲ. ಆದುದರಿಂದ ಈ ವಿಷಯದಲ್ಲಿ ನಮ್ಮ ಅಭಿಪ್ರಾಯ ಯಾವದೆಂದು ಸೂಚಿಸಲಿಕ್ಕಾಗಿ ಈ ಠರಾವಿಗೆ ನಾನು ಒತ್ತಾಸೆಕೊಡುತ್ತೇನೆ. ಅಧ್ಯಕ್ಷರು—ದೇಶದಲ್ಲಿ ಸದಾ ಜನಸಂಖ್ಯೆಯು ಕಡಿಮೆಯಾಗುತ್ತಿದೆಂದು ಠರಾವಿನಲ್ಲಿರುವ ವಿಷಯಕ್ಕೂ ನೀವು ಒಪ್ಪುತ್ತೀರೋ?

ಮೆ. ಬಿ. ಶ್ರೀಪತಿರಾಯರು—ಅದೊಂದು ಮುಖ್ಯ ಸಂಗತಿ ಎಂಬದಕ್ಕೆ ಸಂಶಯವಿಲ್ಲ. ಹ್ಯಾಗೂ ಒಂದು ಇನ್ನೊಂದರ ಸಂಗಡವೇ ಇರುವುದರಿಂದ ಅವೆರಡನ್ನು ವಿಂಗಡಿಸಲಿಕ್ಕಾಗುವದಿಲ್ಲ. ಜನರ ಆರ್ಥಿಕ ಸ್ಥಿತಿಯು ಕೆಲವುಮಟ್ಟಿಗೆ ಜನಸಂಖ್ಯೆ ಕಡಮೆಯಾಗಲು ಕಾರಣವಾಗಿದೆ. ಅದು ಹ್ಯಾಗೂ ಕಮಿಟಿಯ ವಿಚಾರದ ಕೆಲಸವಾಗಿದೆ. ಇವೆರಡು ಸಂಗತಿಗಳನ್ನು ವಿಚಾರಿಸಲು ಒಂದು ಕಮಿಟಿಯೇ ಸಾಕೋ, ಅಥವಾ ಬೇರೆ ಬೇರೆ ಕಮಿಟಿಗಳು ಬೇಕೋ ಎಂಬದನ್ನು ತೀರ್ಮಾನಿಸುವುದು ಸ್ಥಳೀಯ ಸರಕಾರಕ್ಕೆ ಬಿಟ್ಟಿದೆ. ಹ್ಯಾಗೂ ಈಗಿನ ಕಾಲದಲ್ಲು ಮುಖ್ಯವಾಗಿರುವುದರಿಂದ ಈ ವಿಷಯಗಳನ್ನು ಸರಕಾರದವರ ಗಣನೆಗೆ ನಾವು ತರಬೇಕಾಗಿದೆ.

ಮೆ. ಕೆ. ಪಿ. ಚಿಣ್ಣಪ್ಪನವರು—ಠರಾವನ್ನು ಓಟಿಗೆ ಹಾಕಬೇಕೆಂದು ಅಧ್ಯಕ್ಷರನ್ನು ಕೇಳಿಕೊಳ್ಳುವದಲ್ಲದೆ ನನಗೆ ಮತ್ತೇನೂ ಹೇಳಲಿಕ್ಕಿಲ್ಲ.

ಠರಾವು ಓಟಿಗೆ ಹಾಕಲಾಗಿ ಪಾಸಾಯಿತು.

ರಾಟೆಯೇ ಕ್ಷಾಮ ನಿವಾರಣೆಯ ಮುಖ್ಯೋಪಾಯವು.

ಬೆಂಗಾಲದಲ್ಲಿ ಖಾದಿ ಪ್ರಸಾರ ಮಾಡುವದರಲ್ಲಿ ಹಗಲಿರುಳು ಪ್ರಯತ್ನಿಸುತ್ತಿರುವ ಆಚಾರ್ಯ ಪ್ರಫುಲ್ಲಚಂದ್ರರಾಯರವರು ಖಾದಿಯ ಪ್ರಯೋಜನಗಳನ್ನು ಕುರಿತು ಹೇಳುವದೇನಂದರೆ—

"ಖಾದಿಯ ಅಗಣಿತ ಪ್ರಯೋಜನಗಳ ವಿಚಾರಮಾಡುತ್ತ ಹೋದರೆ, ನಾನು ನನ್ನನ್ನೇ ಮರೆತುಬಿಡುತ್ತೇನೆ. ರಾಟೆಗೂ, ಗಿರಣಿಗೂ, ಹೋಲಿಕೆಯನ್ನು ಮಾಡಿ, ರಾಟೆಯ ಅಸಮರ್ಥತೆಯನ್ನು ತೋರಿಸುವ ಮಂದಮತಿಗಳ ಮೂರ್ಖತನವನ್ನು ನೋಡಿ ನನಗೆ ವಿಷಾದವಾಗುತ್ತದೆ. ಈಗ ನೂರು ವರುಷಗಳ ಪೂರ್ವದಲ್ಲಿ ಬೆಂಗಾಲವು ತನಗೆ ಬೇಕಾದಷ್ಟು ಬಟ್ಟೆಯನ್ನು ತನ್ನಲ್ಲಿಯೇ ಪೂರೈಸಿಕೊಳ್ಳುತ್ತಿದ್ದಿತಲ್ಲದೆ, 2 ಕೋಟಿ ರೂಪಾಯಿಗಳ ಬೆಲೆಯ ಢಾಕಾ ಮಸಲಿನ್ ಬಟ್ಟೆಯನ್ನು ಪರದೇಶಕ್ಕೆ ಕಳುಹಿಸುತ್ತಿದ್ದಿತು. ಆಕಾಲದ 2 ಕೋಟಿ ಎಂದರೆ ಈಗಿನ 10 ಕೋಟಿಯಾಗುವದು. ಹಿಂದುಸ್ಥಾನದ ಆರ್ಥಿಕ ಸ್ಥಿತಿಯ ಅಧ್ಯಯನ ಮಾಡಿದ ಮಿ. ಬುಚಾನನ್ ಹ್ಯಾಮಿಲ್ಟನ್ ಇವರು ರಂಗಪೂರದ ಕುಲೀನ ಸ್ತ್ರೀಯರು ಪ್ರೀತಿಯಿಂದ ದಿನಾಲು ಕೆಲವು ತಾಸು ನೂಲುತ್ತಿದ್ದರೆಂದು ಹೇಳುತ್ತಾರೆ.

ಲ್ಯಾಂಕಶಯರದ ಕಡಿಮೆ ಬೆಲೆಯ ಬಟ್ಟೆ ಹೇರಳವಾಗಿ ಬಂದು ನಮ್ಮ ಕೈ ಕಸಬು ಮೂಲೆಗುಂಪಾಯಿತು. ಇದನ್ನು ಪುನರುಜ್ಜೀವನಗೊಳಿಸುವದೇ ಈಗಿನ ಮುಖ್ಯ ಪ್ರಶ್ನೆಯಾಗಿದೆ. ಯಾರಾದರೂ ಅತ್ರಾಯಿ ಮತ್ತು ನವೋರಾ ಎಂಬಲ್ಲಿಗೆ ಹೋಗಿ ಅಲ್ಲಿಯ ಕಾರ್ಯಾಲಯಗಳನ್ನು ನೋಡಿದರೆ, ಈ ಮುಗ್ಗಿದ ಉದ್ಯೋಗದ ಪುನರುಜ್ಜೀವನವು ಹೇಗೆ ಆಗಿರುವದೆಂಬದು ವ್ಯಕ್ತವಾಗುವದು. ಪ್ರತಿ ವಾರದಲ್ಲಿ 3.4 ಸಾವಿರ ರೂಪಾಯಿಗಳ ಖಾದಿಯು ಉತ್ಪನ್ನವಾಗುವದು. ಇದು ಮಾರಾಟವಾಗಿ ಪುನಃ ಆ ಹಣವು ನೂಲುವವರೂ, ನೇಯುವವರೂ, ಮೊದಲಾದ ಬಡ ಜನರಲ್ಲಿ ಹಂಚಲ್ಪಡುವದು.

ನಿರಾಶ್ರಿತ ಜನರಿಗೆ ಸಹಾಯ ಮಾಡಬೇಕೆಂಬ ಉದ್ದೇಶದಿಂದ ಹಣವಾಗಲಿ, ಧಾನ್ಯವಾಗಲಿ ಹಂಚಲ್ಪಟ್ಟರೆ, ಇದರಿಂದ ಅಲ್ಪ ಸಮಾಧಾನವಾಗುವದಲ್ಲದೆ, ನೈತಿಕ ದೃಷ್ಟಿಯಿಂದ ಅವರನ್ನು ನಿರ್ಬಲರನ್ನು ಮಾಡಿದಂತಾಗುವದು. ಆದರೆ ಖಾದಿ ಪ್ರಸಾರ ಕಾರ್ಯದಲ್ಲಿ ಜನರಿಗೆ ಧನ ಸಹಾಯವನ್ನು ಮಾಡಿದರೆ ಅವರಲ್ಲಿ ಸ್ವಾಭಿಮಾನ ಉಂಟಾಗಿ ಆಲಸ್ಯದ ದುರ್ಗುಣಗಳು ದೂರಾಗುವವು, ಮತ್ತು ಒಮ್ಮೆ ಮಾಡಿದ ಸಹಾಯವು ನಿರಂತರವಾಗಿ ನಡೆಯುವುದು. ಈ ಉಪಾಯಕ್ಕೆ ರಾಟೆಯು ಪ್ರತಿ ಒಂದು ಮನೆಯಲ್ಲಿಯೂ ಇರುವದು ಅವಶ್ಯವು. ರಾಟೆಯು ಪ್ರತಿ ಒಂದು ಮನೆಯಲ್ಲಿದ್ದರೆ, ಒಂದು ವರುಷ ಬೆಳೆ ಇಲ್ಲದೆ ಕಠಿಣ ಕಾಲವು ಪ್ರಾಪ್ತವಾದರೆ ಆ ಜನರ ಉದರ ನಿರ್ವಾಹವು ನಡೆಯಲು ರಾಟೆಯು ಒಂದು ಸಾಧನವಾಗಿದೆ.

ನಾನು ರಾಟೆಯನ್ನು ಈ ಪ್ರಕಾರ ಸ್ತುತಿಸಲು ನಾನೊಬ್ಬ ಹುಚ್ಚನೆಂದು ಜನರು ತಿಳಿಯಬಹುದು; ನಾನು ಬೆಂಗಾಲ ಕೆಮಿಕಲ್ ಮೊದಲಾದ 7 ಜಾಯಿಂಟ್ ಸ್ಟಾಕ್ ಕಂಪನಿಗಳ ಡೈರೆಕ್ಟರನಿದ್ದೇನೆ. ಅಂದ ಮೇಲೆ ಈ ಕಾಲದ ಉದ್ಯೋಗಗಳ ಅನುಭವವು ಸ್ವಲ್ಪಾದರೂ ನನಗುಂಟೆಂದು ತಿಳಿಯಬಹುದು. ಹೀಗಿದ್ದರೂ ನಾನು ರಾಟೆಯನ್ನು ಈ ಪ್ರಕಾರ ಹೊಗಳಲು ಕಾರಣವೇನು? ನಾನು ರಾಟೆಯ ಆರ್ಥಿಕ ಮಹತ್ವವನ್ನು ತೋರಿಸಲು ಇಲ್ಲಿ ಒಂದೆರಡು ಉದಾಹರಣೆಗಳನ್ನು ಕೊಡುತ್ತೇನೆ.

ಬೆಂಗಾಲದ ಜನಸಂಖ್ಯೆಯು 5 ಕೋಟಿ ಇದೆ. ಈ ಪ್ರಾಂತದಲ್ಲಿಯ ಒಂದು ಮನೆಯಲ್ಲಿರುವ ಜನರ ಸರಾಸರಿ ಸಂಖ್ಯೆಯು 5; ಎಂದರೆ ಬೆಂಗಾಲದಲ್ಲಿ 1 ಕೋಟಿ ಮನೆಗಳಿದ್ದಂತಾಯಿತು. ಒಂದು ಮನೆಯಲ್ಲಿ ಒಬ್ಬರು ದಿನಾಲು 2 ತೊಲೆಯಷ್ಟು ನೂತು ಅರ್ದಾಣೆಯನ್ನು ಗಳಿಸಿದರೆ, ಒಂದು ತಿಂಗಳಿಗೆ ಸರಾಸರಿ ಒಂದು ರೂಪಾಯಿ ಅಥವಾ ಒಂದು ಕೋಟಿ ರೂಪಾಯಿ ಆಗುವದು. ಈ ಪ್ರಕಾರ ಬೆಂಗಾಲದಲ್ಲಿ 12 ಕೋಟಿ ರೂಪಾಯಿ ಉತ್ಪನ್ನವಾಗುವದು. 5 ಜನರಲ್ಲಿ ಒಬ್ಬನೇ ನೂಲಬೇಕೆಂಬ ನಿಯಮವಿಲ್ಲ. ಇಬ್ಬರು ನೂತರೆ, 21 ಕೋಟಿ ರೂಪಾಯಿಗಳ ಉತ್ಪನ್ನವಾಗುವದು. ಬಾರಿಸಾಲ, ಕುಲ್ನಾ ಮೊದಲಾದ ಬೆಂಗಾಲದ ಜಿಲ್ಲೆಗಳಲ್ಲಿ ವರ್ಷದಲ್ಲಿ ಒಂದೇ ಬೆಳೆ ಬರುವದು. 'ಅಮನ್' ಭತ್ತವನ್ನು ಬೆಳೆಯಲು ಒಕ್ಕಲಿಗರು 3 ತಿಂಗಳು ಮಾತ್ರ ಕೆಲಸ ಮಾಡುವರು. ಉಳಿದ 9 ತಿಂಗಳುಗಳನ್ನು ವ್ಯರ್ಥವಾಗಿ ಕಳೆಯುವರು.

ಇದು ಗಿರಣಿ ಮತ್ತು ಯಂತ್ರಾಲಯಗಳೊಂದಿಗೆ ಸ್ಪರ್ಧೆ ಮಾಡುವ ಪ್ರಶ್ನೆಯಲ್ಲ. ಹಗಲು ನಿದ್ರೆ ಮಾಡೋಣ, ಹಾಳು ಹರಟೆ, ಕ್ಷುಲ್ಲಕ ವಿನೋದ, ಇನ್ನೂ ಕೆಟ್ಟ ಕೆಲಸಗಳಲ್ಲಿ ಕಾಲಾಪವ್ಯಯವನ್ನು ಮಾಡುವದಕ್ಕೆ ಬದಲು ಆ ಕಾಲದ ಸದುಪಯೋಗವನ್ನು ಮಾಡಿಕೊಳ್ಳುವದರ ಪ್ರಶ್ನೆಯಾಗಿದೆ. ಮ್ಯಾಂಚೆಸ್ಟರ ಮತದ ಅರ್ಥ ಶಾಸ್ತ್ರಜ್ಞರು ಹೇಳುವದನ್ನು ಕೇಳಿ ನಾನು ಬೇಸತ್ತಿರುವೆನು."

ಆಚಾರ್ಯ ರಾಯರವರು ಇಂಗ್ಲಂಡದ ಮುಖ್ಯ ಪ್ರಧಾನರಾದ ಮಿ. ರ್‍ಯಾಮಸೇ ಮ್ಯಾಕ್ಡೊನಾಲ್ಡರವರ 'ಭರತ ಖಂಡದ ಜಾಗೃತಿ' ಎಂಬ ಪುಸ್ತಕದ ಅವತರಣಿಕೆಗಳಿಂದಲೂ, ತಮ್ಮ ಸ್ವಂತ ಅನುಭವದಿಂದಲೂ ಹಿಂದುಸ್ಥಾನವು ಕ್ಷಾಮಪೀಡಿತವಾಗಿರುವದೆಂತಲೂ, ಈ ಕ್ಷಾಮ ನಿವಾರಣೆಗೆ ರಾಟೆಯೇ ಮುಖ್ಯೋಪಾಯವೆಂತಲೂ ಸಿದ್ಧ ಮಾಡಿ ಕೊನೆಗೆ ಹೇಳುವದೇನಂದರೆ—

"ಕೈರಾಟೆಯೂ, ಕೈಮಗ್ಗವೂ ಪ್ರತಿಯೊಂದು ಹಳ್ಳಿಯಲ್ಲಿಯೂ ಪ್ರಚಾರದಲ್ಲಿದ್ದರೆ, ಕ್ಷಾಮಗಳ ಉಪದ್ರವವು ನಿರಾಯಾಸವಾಗಿ ಪರಿಹರಿಸಲ್ಪಡಬಹುದು. ಮತ್ತು ರಾಟೆಯು ಪ್ರತಿಯೊಂದು ಮನೆಯಲ್ಲಿ ಪ್ರಸ್ಥಾಪಿಸಲ್ಪಟ್ಟರೆ, ಪ್ರತಿ ವರುಷವೂ 30 ಕೋಟಿ ರೂಪಾಯಿಗಳು ಬೆಂಗಾಲದಲ್ಲಿ ಉಳಿಯುವವು."

(ಕರ್ಮವೀರದಿಂದ.)

ಕೌನ್ಸಿಲ್ ಮೀಟಿಂಗು.

(ಪ್ರಶ್ನೋತ್ತರಗಳು ಮುಂದುವರಿದದ್ದು.)

ಮೆ. ಎ. ಬಿ. ಚಂಗಪ್ಪನವರು.

126. ಪ. (1) ಕಳೆದ ಹತ್ತು ವರುಷಗಳ ಫಾರೆಸ್ಟ್ ಉತ್ಪತ್ತಿ ಎಷ್ಟು?

(2) ಸೈಸಾರಿ ಮತ್ತು ಖಾಸಗಿ ಜಾಗಗಳ ಗಂಧದ ಮರಗಳನ್ನು ಮಾರುವುದಲ್ಲದೆ ಬೇರೆ ಯಾವ ವಿಧದಿಂದಾದರೂ ಫಾರೆಸ್ಟ್ ಉತ್ಪತ್ತಿಯನ್ನು ಹೆಚ್ಚಿಸಲು ಏನಾದರೂ ಪ್ರಯತ್ನ ನಡೆದಿದೆಯೋ?

ಉ. (1) ಉತ್ಪತ್ತಿಯು ಈ ಕೆಳಗೆ ಕಾಣಿಸಲ್ಪಟ್ಟಿದೆ—

ವರ್ಷ.	ಒಟ್ಟು ಉತ್ಪತ್ತಿ.	ಗಂಧದ ಉತ್ಪತ್ತಿ.
	ರೂ.	ರೂ.
1914-15	1,83,181	24,113
1915-16	4,49,960	3,44,303
1916-17	4,85,834	3,46,362
1917-18	6,73,503	4,54,433
1918-19	5,35,952	3,01,547
1919-20	9,00,083	5,88,109
1920-21	3,69,564	2,17,051
1921-22	7,33,726	5,59,219
1922-23	9,42,653	7,47,571
1923-24	7,00,857	5,39,873
	ಜುಮ್ಲ	41,22,613

(2) ಒಂದು ಪ್ರಶ್ನೆಗೆ ಉತ್ತರದಲ್ಲಿ ಉತ್ಪತ್ತಿಯನ್ನು ಹೆಚ್ಚಿಸಲು ಒಂದು ಇಲಾಖೆಯು ಮಾಡಿದ ಪ್ರಯತ್ನಗಳನ್ನೆಲ್ಲಾ ವಿವರವಾಗಿ ಸೂಚಿಸಲು ಸಾಧ್ಯವಿಲ್ಲ. ಫಾರೆಸ್ಟು ಆಡಳಿತ ವರದಿಯಲ್ಲಿ ತಪಶೀಲ್ ಇದೆ. ಇ ಕೆಳಗಿನವು ಮಾಡಿದ ಏರ್ಪಾಡುಗಳಲ್ಲಿ ಕೆಲವು ಆಗಿವೆ—

(ಎ) ಸೈಸಾರಿ ಮತ್ತು ಖಾಸಗಿ ಜಾಗಗಳಿಂದ ತೆಗೆಯುವ ಗಂಧವನ್ನು ಸರಿಮಾಡಲಿಕ್ಕೆ ರಿಸರ್ವ ಫಾರೆಸ್ಟುಗಳಲ್ಲಿ ಗಂಧದ ತೋಟಗಳನ್ನು ಇಲಾಖೆಯವರು ಮಾಡುತ್ತಿದ್ದಾರೆ.

(ಬಿ) ಪೂರ್ವ ಫಾರೆಸ್ಟುಗಳ ಹೊಸ ತಿಳುವಳಿಕೆ ಇರುವದರಿಂದ ಈಗ ಇಲಾಖೆಯವರು ಮಾರ್ಕೆಟ್ಟಿನಲ್ಲಿ ಉಂಟಾಗುವ ಕ್ರಯದ ಬದಲಾವಣೆಗಳಿಂದ ಪ್ರಯೋಜನ ಹೊಂದುವ ಸ್ಥಿತಿಯಲ್ಲಿದ್ದಾರೆ.

(ಸಿ) ತೊಲೆಗಳನ್ನು ಕತ್ತರಿಸುವ ಕೆಲಸವು ಸ್ವಲ್ಪಮಟ್ಟಿಗೆ ಪ್ರಾರಂಭಿಸಲ್ಪಟ್ಟಿದೆ.

(ಡಿ) ಕಟ್ಟೆ ಫಾರೆಸ್ಟುಗಳನ್ನು ಉಪಯೋಗಿಸಲು ಮಾಮೂಲ ಸಂಸ್ಥೆಯು ಪೂರೈಸಲ್ಪಟ್ಟಿದೆ.

(ಇ) ಕೊಡಗಿನಲ್ಲಿ ಅರಗು ಮಾಡಲು ಸಾಧ್ಯವೋ ಎಂಬದು ವಿಚಾರಿಸಲ್ಪಡುತ್ತಿದೆ.

ಮೆ. ಕೆ. ಪಿ. ಚಿಣ್ಣಪ್ಪನವರು.

127. ಪ. ಹುಣಸೂರು ವರ್ಕ್ಸನಿಂದ ಕೆಲವು ಕಾಲದ ಹಿಂದೆ 930 ರೂಪಾಯಿಗೆ ಕೊಂಡುಕೊಂಡ ಒಂದು 'ವೇಗನ್' ಕೊಂಡುಕೊಂಡ ಲಾಗಾಯಿತು ಉಪಯೋಗಿಸದೆ ಇಟ್ಟಿರುವದು ನಿಜವೋ, ಮತ್ತು ಫಾರೆಸ್ಟು ಇಂಜಿನೀಯರು ಅದನ್ನು ಪರೀಕ್ಷಿಸಿ ಉಪಯೋಗಿಸಲು ಪ್ರಯತ್ನಿಸಿದರೋ?

ಉ. ನಮ್ಮ ಇರಾದೆ ಪ್ರಕಾರ ಹುಣಸೂರು ವರ್ಕ್ಸನವರು ಮಾಡಿದ ವೇಗನಿಗೆ 1920-21ರಲ್ಲು 800 ರೂಪಾಯಿ ಕ್ರಯ ಕೊಡಲಾಗಿದೆ. ಅದನ್ನು ಉಪಯೋಗಿಸಿಯೇ ಇಲ್ಲ. ವೇಗನನ್ನು ಉಪಯೋಗಿಸುವುದಕ್ಕಾಗಿ ಅದನ್ನು ಫಾರೆಸ್ಟು ಇಂಜಿನೀಯರು ಪರೀಕ್ಷಿಸಿದರು. ಅದರ ಈಗಿನ ಸ್ಥಿತಿಯಲ್ಲಿ ಅದನ್ನು ಉಪಯೋಗಿಸಕೂಡದೆಂದೂ, ಅದನ್ನು ಬದಲಾಯಿಸಿದರೂ ಕೂಡ ಅದರ ವಿಪರೀತ ಭಾರದ ದೆಸೆಯಿಂದ ಅದನ್ನು ಎಳೆಯುವ ಖರ್ಚು ಬಹಳವಾಗುವುದರಿಂದ ಅದನ್ನು ಉಪಯೋಗಿಸುವುದು ಸಾಧ್ಯವಲ್ಲವೆಂದೂ ಹೇಳಿರುವರು.

128. ಪ. (ಎ) ಕುಟುಂಪೊಳೆ ರೇಂಜಿನಲ್ಲಿ ಕಡಿದು ಸಾಗಿಸಲು ತಯಾರಾಗಿರುವ ಮರಗಳು ಅಂದಾಜು ಎಷ್ಟು ಟನ್ನುಗಳಿರಬಹುದು?

(ಬಿ) ಬೀಳಿಸಲ್ಪಟ್ಟ ಮರಗಳಪೈಕಿ 1920-21, 21-22, ಮತ್ತು 22-23ರಲ್ಲಿ ಎಷ್ಟು ಸಾಗಿಸಲ್ಪಟ್ಟವು ಮತ್ತು ಸಾಗಿಸಲು ಬಾಕಿಯಾದವೆಷ್ಟು?

(ಸಿ) ಕಡಿದುಹಾಕಿ ಸಾಗಿಸಲು ತಯಾರಾಗಿರುವ ಮರಗಳನ್ನೆಲ್ಲಾ ಸಾಗಿಸುವ ಮುಂಚೆ ಪುನಹ ಮರಗಳನ್ನು ಕಡಿಯಲು ಇಲಾಖೆಯವರು ಪ್ರಾರಂಭಿಸುತ್ತಾರೋ?

ಉ. (ಎ) ಸಾಗಿಸಲಿಕ್ಕಿರುವ ಮರ ಸುಮಾರು 2,000 ಟನ್ನುಗಳು.

(ಬಿ) 1920-21	232	ಟನ್ನುಗಳು.
1921-22	437	,,
1922-23	564	,,
ಬಾಕಿ ಇರುವದು ಸುಮಾರು	2,000	,,

ಲ್ಕೈದು ವರ್ಷಗಳ ಕೆಳಗೆ ಕಮೀಷನರು ಜಮೀನ್ದಾರರ ಸಂಘದ ಇದೇ ಠರಾವಿಗೆ ಏನು ಜವಾಬು ಹೇಳಿದರೆಂದರೆ—ಮೈಸೂರಿನ ಮಲ್ನಾಡು ಪ್ರಾಂತ್ಯದಲ್ಲಿ ಈ ವಿಷಯವಾಗಿ ಮೈಸೂರು ಸರಕಾರವು ಕಮಿಟಿ ಮಾಡಿದೆ. ಅಲ್ಲಿನ ಸ್ಥಿತಿಯೂ ಕೊಡಗಿನ ಸ್ಥಿತಿಯೂ ಒಂದೇ ಆಗಿದೆ. ಆ ಕಮಿಟಿಯ ಫಲಿತಾಂಶವನ್ನು ಮೈಸೂರು ಸರಕಾರದಿಂದ ತರಿಸಿ ಅದರಂತೆ ಜಾರಿಗೆ ತರಲಾಗುತ್ತದೆಂತ ಹೇಳಿದರೂ ಈ ವರೇಗೂ ಹಾಗೆ ಮಾಡಿದ್ದು ಕಾಣುವದಿಲ್ಲ.' ಅಂಥಾ ಕಮಿಟಿಯು ತುಂಬಾ ಹಣವನ್ನೂ ಕಾಲವನ್ನೂ ತೆಗೆದುಕೊಳ್ಳುತ್ತೆ, ನಿಜವೇ. ಇಂಥಾ ಕಮಿಟಿಯು ಮಾಡುವ ಶಿಫಾರಸ್ಸುಗಳನ್ನು ಸ್ಥಳೀಯ ಸರಕಾರವು ಜಾರಿಗೆ ತರದೆ ಹೋದರೆ ರೈತರ ಹಣವನ್ನು ಖರ್ಚು ಮಾಡಿದ್ದರಿಂದ ಏನೂ ಪ್ರಯೋಜನವಾಗಬಾರದು ಕಮಿಟಿಯ ಶಿಫಾರಸ್ಸನ್ನು ಒಪ್ಪಿಕೊಳ್ಳುತ್ತೇವೆಂತ ಸರಕಾರದವರು ಭರವಸೆ ಕೊಡಬೇಕೆಂತ ನನ್ನ ಅಭಿಪ್ರಾಯವಾಗಿದೆ.

ಈ ಮಾತುಗಳಿಂದ ಠರಾವಿಗೆ ಒತ್ತಾಸೆ ಕೊಡುತ್ತೇನೆ.

ಮೆ. ಟಿ. ಜಿ. ಟಾಸ್ಕರವರು.

ಸೆನ್ಸಸ್ ಸುಪರಿಂಟೆಂಡೆಂಟರು ಬರೆದಿರುವ ಮಾತುಗಳು ಊಹನೆಯಿಂದ ಬರೆದದ್ದಲ್ಲ. ಕೊಡಗಿನ ಹೊರಗೆ ಹುಟ್ಟಿದ ಜನರ ಸಂಖ್ಯೆಯ ಆಧಾರದಿಂದ ಬರೆದದ್ದಾಗಿದೆ. ಜನಸಂಖ್ಯೆ ಕಡಿಮೆಯಾಗಲು ಕಾರಣವನ್ನು ಸಹ ಬರೇ ಊಹನೆಯಿಂದ ಬರೆದದ್ದಲ್ಲ. ತಿಳಿದ ಸಂಗತಿಗಳಿಂದ ಬರೆದದ್ದಾಗಿದೆ. ನಿಜವಾದ ಕಾರಣಗಳನ್ನು ಕಂಡುಹಿಡಿಯಲು ಸರಕಾರವು ಸಹ ಬೇರೆಯವರಂತೆಯೇ ಕುತೂಹಲವುಳ್ಳದ್ದಾಗಿದೆ. ಆದ್ದರಿಂದ ಇಂಡಿಯಾ ಸರಕಾರದ ಅಭಿಪ್ರಾಯಗಳನ್ನು ತಿಳಿದುಕೊಂಡು ಮುಂದರಿಸುವದು ಉತ್ತಮ ಆ ವರೇಗೆ ನಮಗೆ ತಿಳಿದ ಕಾರಣಗಳನ್ನು ಅಜಮಾಯಿಸುವದು ಉತ್ತಮ.

ಮೆ. ಬಿ. ಶ್ರೀಪತಿರಾಯರು.

ಕೌನ್ಸಿಲ್ ಆಫ್ ಸ್ಟೇಟಿನ ಠರಾವಿನ ಮೇರೆ ನೇಮಕವಾಗುವ ಕಮಿಟಿಯ ಸಂಬಂಧವಾಗಿ ಏನಾದರೂ ಕಾಗದ ಬಂದದೆಯೋ ಎಂತ ನನಗೆ ತಿಳಿಯಬೇಕಾಗಿದೆ. ಬಂದಿದ್ದರೆ ನಮ್ಮ ಸರಕಾರದಿಂದ ಏನು ಜವಾಬು ಹೋಗಿದೆ. ಅದು ತಿಳಿದ ನಂತರ ನಾನು ಹೇಳತಕ್ಕದ್ದನ್ನು ಹೇಳುತ್ತೇನೆ.

ಮೆ. ಟಿ. ಜಿ. ಟಾಸ್ಕರವರು.

ಇಂಡಿಯಾ ಸರಕಾರದವರು ನಡಿಸಬಹುದಾದ ತನಿಖೆಗೆ ನಮ್ಮ ಸರಕಾರವು ಸಹಾಯ ಮಾಡಲು ತಯಾರಿದೆಯೆಂತ ಜವಾಬು ಬರೆಯಲಾಗಿದೆಯೆಂತ ನಾನು ಈ ಮೊದಲೇ ಹೇಳಿದ್ದೇನೆ.

ಮೆ. ಬಿ. ಶ್ರೀಪತಿರಾಯರು.

ಆದಾಗ್ಯೂ ಕೂಡ ಕೌನ್ಸಿಲ್ ಆಫ್ ಸ್ಟೇಟಿನ ಠರಾವಿನ ಮೇರೆ ಸ್ಥಳೀಯ ಸರಕಾರವು ದೇಶದ ಆರ್ಥಿಕ ಸ್ಥಿತಿಯನ್ನು ವಿಚಾರಿಸಲು ಒಂದು ಒತ್ತಾಸೆ ಕಮಿಟಿಯನ್ನು ಏರ್ಪಡಿಸಬೇಕಾಗಿದೆ. ಅದರ ಮೇರೆ ಈ ಠರಾವು ಈ ವಿಷಯದಲ್ಲಿ ಈ ಸಭೆಯ ಅಭಿಪ್ರಾಯವನ್ನು ಅಂದರೆ ದೇಶದವರ ಅಭಿಪ್ರಾಯವನ್ನು ಸೂಚಿಸುತ್ತದೆ. ಆದುದರಿಂದ ಈ ಠರಾವನ್ನು ಪಾಸು ಮಾಡಿ, ಚರ್ಚೆಯ ಸಾರಾಂಶವನ್ನು ಇಂಡಿಯಾ ಸರಕಾರಕ್ಕೆ ಕಳುಹಿಸುವುದರಿಂದ ನಮ್ಮ ವಿಷಯಕ್ಕೆ ಏನೂ ಅಡ್ಡಿಯಾಗಲಿಕ್ಕಿಲ್ಲ. ಆದುದರಿಂದ ಈ ವಿಷಯದಲ್ಲಿ ನಮ್ಮ ಅಭಿಪ್ರಾಯ ಯಾವದೆಂದು ಸೂಚಿಸಲಿಕ್ಕಾಗಿ ಈ ಠರಾವಿಗೆ ನಾನು ಒತ್ತಾಸೆಕೊಡುತ್ತೇನೆ. ಅಧ್ಯಕ್ಷರು—ದೇಶದಲ್ಲಿ ಸದಾ ಜನಸಂಖ್ಯೆಯು ಕಡಿಮೆಯಾಗುತ್ತಿದೆಂದು ಠರಾವಿನಲ್ಲಿರುವ ವಿಷಯಕ್ಕೂ ನೀವು ಒಪ್ಪುತ್ತೀರೋ?

ಮೆ. ಬಿ. ಶ್ರೀಪತಿರಾಯರು—ಅದೊಂದು ಮುಖ್ಯ ಸಂಗತಿ ಎಂಬದಕ್ಕೆ ಸಂಶಯವಿಲ್ಲ. ಹ್ಯಾಗೂ ಒಂದು ಇನ್ನೊಂದರ ಸಂಗಡವೇ ಇರುವುದರಿಂದ ಅವೆರಡನ್ನು ವಿಂಗಡಿಸಲಿಕ್ಕಾಗುವದಿಲ್ಲ. ಜನರ ಆರ್ಥಿಕ ಸ್ಥಿತಿಯು ಕೆಲವುಮಟ್ಟಿಗೆ ಜನಸಂಖ್ಯೆ ಕಡಿಮೆಯಾಗಲು ಕಾರಣವಾಗಿದೆ. ಅದು ಹ್ಯಾಗೂ ಕಮಿಟಿಯ ವಿಚಾರದ ಕೆಲಸವಾಗಿದೆ. ಇವೆರಡು ಸಂಗತಿಗಳನ್ನು ವಿಚಾರಿಸಲು ಒಂದು ಕಮಿಟಿಯೇ ಸಾಕೋ, ಅಥವಾ ಬೇರೆ ಬೇರೆ ಕಮಿಟಿಗಳು ಬೇಕೋ ಎಂಬದನ್ನು ತೀರ್ಮಾನಿಸುವುದು ಸ್ಥಳೀಯ ಸರಕಾರಕ್ಕೆ ಬಿಟ್ಟಿದೆ. ಹ್ಯಾಗೂ ಈಗಿನ ಕಾಲದಲ್ಲು ಮುಖ್ಯವಾಗಿರುವುದರಿಂದ ಈ ವಿಷಯಗಳನ್ನು ಸರಕಾರದವರ ಗಣನೆಗೆ ನಾವು ತರಬೇಕಾಗಿದೆ.

ಮೆ. ಕೆ. ಪಿ. ಚಿನ್ನಪ್ಪನವರು—ಠರಾವನ್ನು ಓಟಿಗೆ ಹಾಕಬೇಕೆಂದು ಅಧ್ಯಕ್ಷರನ್ನು ಕೇಳಿಕೊಳ್ಳುವದಲ್ಲದೆ ನನಗೆ ಮತ್ತೇನೂ ಹೇಳಲಿಕ್ಕಿಲ್ಲ.

ಠರಾವು ಓಟಿಗೆ ಹಾಕಲಾಗಿ ಪಾಸಾಯಿತು.

ರಾಟಿಯೇ ಕ್ಷಾಮ ನಿವಾರಣೆಯ ಮುಖ್ಯೋಪಾಯವು.

ಬೆಂಗಾಲದಲ್ಲಿ ಖಾದಿ ಪ್ರಸಾರ ಮಾಡುವದರಲ್ಲಿ ಹಗಲಿರುಳು ಪ್ರಯತ್ನಿಸುತ್ತಿರುವ ಆಚಾರ್ಯ ಪ್ರಫುಲ್ಲಚಂದ್ರರಾಯರವರು ಖಾದಿಯ ಪ್ರಯೋಜನಗಳನ್ನು ಕುರಿತು ಹೇಳುವದೇನಂದರೆ—

"ಖಾದಿಯ ಅಗಣಿತ ಪ್ರಯೋಜನಗಳ ವಿಚಾರಮಾಡುತ್ತ ಕೂತರೆ, ನಾನು ನನ್ನನ್ನೇ ಮರೆತುಬಿಡುತ್ತೇನೆ. ರಾಟಿಗೂ, ಗಿರಣಿಗೂ ತುಲನೆಯನ್ನು ಮಾಡಿ, ರಾಟಿಯ ಆರ್ಥಿಕ ಮಹತ್ವವನ್ನು ತೋರಿಸುವ ಮಂದಮತಿಗಳ ಮೂರ್ಖತನವನ್ನು ನೋಡಿ ನನಗೆ ವಿಷಾದವಾಗುತ್ತದೆ. ಈಗ ನೂರು ವರುಷಗಳ ಪೂರ್ವದಲ್ಲಿ ಬೆಂಗಾಲವು ತನಗೆ ಬೇಕಾದಷ್ಟು ಬಟ್ಟೆಯನ್ನು ತನ್ನಲ್ಲಿಯೇ ಪೂರೈಸಿಕೊಳ್ಳುತ್ತಿದ್ದಿತಲ್ಲದೆ, 2 ಕೋಟಿ ರುಪಾಯಿಗಳ ಬೆಲೆಯ ಢಾಕಾ ಮಸಲಿನ್ ಬಟ್ಟೆಯನ್ನು ಪರದೇಶಕ್ಕೆ ಕಳುಹಿಸುತ್ತಿದ್ದಿತು. ಆ ಕಾಲದ 2 ಕೋಟಿ ಎಂದರೆ ಈಗಿನ 10 ಕೋಟಿಯಾಗುವದು. ಹಿಂದುಸ್ಥಾನದ ಆರ್ಥಿಕ ಸ್ಥಿತಿಯ ಅಧ್ಯಯನ ಮಾಡಿದ ಮಿ. ಬುಚಾನನ್ ಹ್ಯಾಮಿಲ್ಟನ್ ಇವರು ರಂಗಪೂರದ ಕುಲೀನ ಸ್ತ್ರೀಯರು ಪ್ರೀತಿಯಿಂದ ದಿನಾಲು ಕೆಲವು ತಾಸು ನೂಲುತ್ತಿದ್ದರೆಂದು ಹೇಳುತ್ತಾರೆ

ಲ್ಯಾಂಕಶಾಯರದ ಕಡಿಮೆ ಬೆಲೆಯ ಬಟ್ಟೆ ಹೇರಳವಾಗಿ ಬಂದು ನಮ್ಮ ಕೈ ಕಸಬು ಮೂಲೆಗುಂಪಾಯಿತು. ಇದನ್ನು ಪುನರುಜ್ಜೀವನಗೊಳಿಸುವದೇ ಈಗಿನ ಮುಖ್ಯ ಪ್ರಶ್ನೆಯಾಗಿದೆ ಯಾರಾದರೂ ಅತ್ರಾಯಿ ಮತ್ತು ಕಲೋರಾ ಎಂಬಲ್ಲಿಗೆ ಹೋಗಿ ಅಲ್ಲಿಯ ಕಾರ್ಯಾಲಯಗಳನ್ನು ನೋಡಿದರೆ, ಈ ಮುಗ್ಗಿದ ಉದ್ಯೋಗದ ಪುನರುಜ್ಜೀವನವು ಹೇಗೆ ಆಗಿರುವದೆಂಬದು ವ್ಯಕ್ತವಾಗುವದು. ಪ್ರತಿ ವಾರದಲ್ಲಿ 3-4 ಸಾವಿರ ರುಪಾಯಿಗಳ ಖಾದಿಯು ಉತ್ಪನ್ನವಾಗುವದು. ಇದು ಮಾರಾಟವಾಗಿ ಪುನಃ ಆ ಹಣವು ನೂಲುವವರೂ, ನೇಯುವವರೂ, ಮೊದಲಾದ ಬಡ ಜನರಲ್ಲಿ ಹಂಚಲ್ಪಡುವದು.

ನಿರಾಶ್ರಿತ ಜನರಿಗೆ ಸಹಾಯ ಮಾಡಬೇಕೆಂಬ ಉದ್ದೇಶದಿಂದ ಹಣವಾಗಲಿ, ಧಾನ್ಯವಾಗಲಿ ಹಂಚಲ್ಪಟ್ಟರೆ, ಇದರಿಂದ ಅಲ್ಪ ಸಮಾಧಾನವಾಗುವದಲ್ಲದೆ, ನೈತಿಕ ದೃಷ್ಟಿಯಿಂದ ಅವರನ್ನು ನಿರ್ಬಲರನ್ನು ಮಾಡಿದಂತಾಗುವದು. ಆದರೆ ಖಾದಿ ಪ್ರಸಾರ ಕಾರ್ಯದಲ್ಲಿ ಜನರಿಗೆ ಧನ ಸಹಾಯವನ್ನು ಮಾಡಿದರೆ ಅವರಲ್ಲಿ ಸ್ವಾಭಿಮಾನ ಉಂಟಾಗಿ ಆಲಸ್ಯದ ದುರ್ಗುಣಗಳು ದೂರಾಗುವವು, ಮತ್ತು ಒಮ್ಮೆ ಮಾಡಿದ ಸಹಾಯವು ನಿರಂತರವಾಗಿ ನಡೆಯುವುದು. ಈ ಉಪಾಯಕ್ಕೆ ರಾಟೆಯು ಪ್ರತಿ ಒಂದು ಮನೆಯಲ್ಲಿಯೂ ಇರುವದು ಅವಶ್ಯವು ರಾಟೆಯು ಪ್ರತಿ ಒಂದು ಮನೆಯಲ್ಲಿದ್ದರೆ, ಒಂದು ವರುಷ ಬೆಳೆ ಇಲ್ಲದೆ ಕಠಿಣ ಕಾಲವು ಪ್ರಾಪ್ತವಾದರೆ ಆ ಜನರ ಉದರ ನಿರ್ವಾಹವು ನಡೆಯಲು ರಾಟೆಯು ಒಂದು ಸಾಧನವಾಗಿದೆ.

ನಾನು ರಾಟೆಯನ್ನು ಈ ಪ್ರಕಾರ ಸ್ತುತಿಸಲು ನಾನೊಬ್ಬ ಹುಚ್ಚನೆಂದು ಜನರು ತಿಳಿಯಬಹುದು, ನಾನು ಬೆಂಗಾಲ ಕೆಮಿಕಲ್ ಮೊದಲಾದ 7 ಜಾಯಿಂಟ್ ಸ್ಟಾಕ್ ಕಂಪೆನಿಗಳ ಡೈರೆಕ್ಟರನಿದ್ದೇನೆ. ಅಂದ ಮೇಲೆ ಈ ಕಾಲದ ಉದ್ಯೋಗಗಳ ಅನುಭವವು ಸ್ವಲ್ಪಾದರೂ ನನಗುಂಟೆಂದು ತಿಳಿಯಬಹುದು. ಹೀಗಿದ್ದರೂ ನಾನು ರಾಟೆಯನ್ನು ಈ ಪ್ರಕಾರ ಹೊಗಳಲು ಕಾರಣವೇನು? ನಾನು ರಾಟೆಯ ಆರ್ಥಿಕ ಮಹತ್ವವನ್ನು ತೋರಿಸಲು ಇಲ್ಲಿ ಒಂದೆರಡು ಉದಾಹರಣೆಗಳನ್ನು ಕೊಡುತ್ತೇನೆ.

ಬೆಂಗಾಲದ ಜನಸಂಖ್ಯೆಯು 5 ಕೋಟಿ ಇದೆ, ಆ ಪ್ರಾಂತದಲ್ಲಿಯ ಒಂದು ಮನೆಯಲ್ಲಿರುವ ಜನರ ಸರಾಸರಿ ಸಂಖ್ಯೆಯು 5, ಎಂದರೆ ಬೆಂಗಾಲದಲ್ಲಿ 1 ಕೋಟಿ ಮನೆಗಳಿದ್ದಂತಾಯಿತು. ಒಂದು ಮನೆಯಲ್ಲಿ ಒಬ್ಬರು ದಿನಾಲು 2 ತೊಲೆಯಷ್ಟು ನೂತು ಆದಾಯವನ್ನು ಗಳಿಸಿದರೆ, ಒಂದು ತಿಂಗಳಿಗೆ ಸರಾಸರಿ ಒಂದು ರುಪಾಯಿ ಅಥವಾ ಒಂದು ಕೋಟಿ ರುಪಾಯಿ ಆಗುವದು, ಈ ಪ್ರಕಾರ ಬೆಂಗಾಲದಲ್ಲಿ 12 ಕೋಟಿ ರುಪಾಯಿ ಉತ್ಪನ್ನವಾಗುವದು. 5 ಜನರಲ್ಲಿ ಒಬ್ಬನೇ ನೂಲಬೇಕೆಂಬ ನಿಯಮವಿಲ್ಲ. ಇಬ್ಬರು ನೂತರೆ, 24 ಕೋಟಿ ರುಪಾಯಿಗಳ ಉತ್ಪನ್ನವಾಗುವದು. ಬಾರಿಸಾಲ, ಕುಲ್ನಾ ಮೊದಲಾದ ಬೆಂಗಾಲದ ಜಿಲ್ಲೆಗಳಲ್ಲಿ ವರ್ಷದಲ್ಲಿ ಒಂದೇ ಬೆಳೆ ಬರುವದು. 'ಅಮನ್' ಭತ್ತವನ್ನು ಬೆಳೆಯಲು ಒಕ್ಕಲಿಗರು 3 ತಿಂಗಳು ಮಾತ್ರ ಕೆಲಸ ಮಾಡುವರು. ಉಳಿದ 9 ತಿಂಗಳುಗಳನ್ನು ವ್ಯರ್ಥವಾಗಿ ಕಳೆಯುವರು.

ಇದು ಗಿರಣಿ ಮತ್ತು ಯಂತ್ರಾಲಯಗಳೊಂದಿಗೆ ಸ್ಪರ್ಧೆ ಮಾಡುವ ಪ್ರಶ್ನೆಯಲ್ಲ. ಹಗಲು ನಿದ್ರೆ ಮಾಡೋಣ, ಹಾಳು ಹರಟೆ, ಕ್ಷುಲ್ಲಕ ವಿನೋದ, ಇನ್ನೂ ಕೆಟ್ಟ ಕೆಲಸಗಳಲ್ಲಿ ಕಾಲಾಪವ್ಯಯವನ್ನು ಮಾಡುವದಕ್ಕೆ ಬದಲು ಆ ಕಾಲದ ಸದುಪಯೋಗವನ್ನು ಮಾಡಿಕೊಳ್ಳುವದರ ಪ್ರಶ್ನೆಯಾಗಿದೆ. ಮ್ಯಾಂಚೆಸ್ಟರ ಮತದ ಅರ್ಥ ಶಾಸ್ತ್ರಜ್ಞರು ಹೇಳುವದನ್ನು ಕೇಳಿ ನಾನು ಬೇಸತ್ತಿರುವೆನು."

ಆಚಾರ್ಯ ರಾಯರವರು ಇಂಗ್ಲಂಡದ ಮುಖ್ಯ ಪ್ರಧಾನರಾದ ಮಿ. ಮ್ಯಾಕಡೋನಾಲ್ಡರವರ 'ಭರತ ಖಂಡದ ಜಾಗೃತಿ' ಎಂಬ ಪುಸ್ತಕದ ಅವತರಣಿಕೆಗಳಿಂದಲೂ, ತಮ್ಮ ಸ್ವಂತ ಅನುಭವದಿಂದಲೂ ಹಿಂದುಸ್ಥಾನವು ಕ್ಷಾಮಪೀಡಿತವಾಗಿರುವದೆಂತಲೂ, ಈ ಕ್ಷಾಮ ನಿವಾರಣೆಗೆ ರಾಟೆಯೇ ಮುಖ್ಯೋಪಾಯವೆಂತಲೂ ಸಿದ್ಧ ಮಾಡಿ ಕೊನೆಗೆ ಹೇಳುವದೇನಂದರೆ—

"ಕೈರಾಟೆಯೂ, ಕೈಮಗ್ಗವೂ ಪ್ರತಿಯೊಂದು ಹಳ್ಳಿಯಲ್ಲಿಯೂ ಪ್ರಚಾರದಲ್ಲಿದ್ದರೆ, ಕ್ಷಾಮದ ಉಪದ್ರವವು ನಿರಾಯಾಸವಾಗಿ ಪರಿಹರಿಸಲ್ಪಡಬಹುದು. ಮತ್ತು ರಾಟೆಯು ಪ್ರತಿಯೊಂದು ಮನೆಯಲ್ಲಿ ಪ್ರಸ್ಥಾಪಿಸಲ್ಪಟ್ಟರೆ, ಪ್ರತಿ ವರುಷವೂ 30 ಕೋಟಿ ರುಪಾಯಿಗಳು ಬೆಂಗಾಲದಲ್ಲಿ ಉಳಿಯುವವು."

(ಕರ್ಮವೀರದಿಂದ.)

ಕೌನ್ಸಿಲ್ ಮೀಟಿಂಗು.

(ಪ್ರಶ್ನೋತ್ತರಗಳು ಮುಂದುವರಿದದ್ದು.)

ಮೆ. ಎ. ಬಿ. ಚಂಗಪ್ಪನವರು.

126. ಪ್ರ. (1) ಕಳೆದ ಹತ್ತು ವರುಷಗಳ ಫಾರೆಸ್ಟ್ ಉತ್ಪತ್ತಿ ಎಷ್ಟು?

(2) ಸೈಸಾರಿ ಮತ್ತು ಖಾಸಗಿ ಜಾಗಗಳ ಗಂಧದ ಮರಗಳನ್ನು ಮಾರುವುದಲ್ಲದೆ ಬೇರೆ ಯಾವ ವಿಧದಿಂದಾದರೂ ಫಾರೆಸ್ಟ್ ಉತ್ಪತ್ತಿಯನ್ನು ಹೆಚ್ಚಿಸಲು ಏನಾದರೂ ಪ್ರಯತ್ನ ನಡೆದಿದೆಯೋ?

ಉ. (1) ಉತ್ಪತ್ತಿಯು ಈ ಕೆಳಗೆ ಕಾಣಿಸಲ್ಪಟ್ಟಿದೆ—

ವರ್ಷ.	ಒಟ್ಟು ಉತ್ಪತ್ತಿ	ಗಂಧದ ಉತ್ಪತ್ತಿ.
	ರೂ.	ರೂ.
1914-15	1,63,181	24,113
1915-16	4,49,960	3,44,303
1916-17	4,85,834	3,46,362
1917-18	6,73,503	4,54,433
1918-19	5,35,952	3,01,547
1919-20	9,00,083	5,88,109
1920-21	3,69,564	2,17,051
1921-22	7,33,726	5,59,219
1922-23	9,42,653	7,47,571
1923-24	7,00,857	5,39,873
	ಜುಮ್ಲ	41,22,613

(2) ಒಂದು ಪ್ರಶ್ನೆಗೆ ಉತ್ತರದಲ್ಲಿ ಉತ್ಪತ್ತಿಯನ್ನು ಹೆಚ್ಚಿಸಲು ಒಂದು ಇಲಾಖೆಯು ಮಾಡಿದ ಪ್ರಯತ್ನಗಳನ್ನೆಲ್ಲಾ ವಿವರವಾಗಿ ಸೂಚಿಸಲು ಸಾಧ್ಯವಿಲ್ಲ. ಫಾರೆಸ್ಟು ಆಡಳಿತ ವರದಿಯಲ್ಲಿ ತಪಶೀಲ್ ಇದೆ ಇತ್ತ ಕೆಳಗಿನವು ಮಾಡಿದ ಏರ್ಪಾಡುಗಳಲ್ಲಿ ಕೆಲವು ಆಗಿವೆ—

(ಎ) ಸೈಸಾರಿ ಮತ್ತು ಖಾಸಗಿ ಜಾಗಗಳಿಂದ ತೆಗೆಯುವ ಗಂಧವನ್ನು ಸರಿಮಾಡಲಿಕ್ಕೆ ರಿಸರ್ವ್ ಫಾರೆಸ್ಟುಗಳಲ್ಲಿ ಗಂಧದ ತೋಟಗಳನ್ನು ಇಲಾಖೆಯವರು ಮಾಡುತ್ತಿದ್ದಾರೆ.

(ಬಿ) ಪೂರ್ವ ಫಾರೆಸ್ಟುಗಳ ಹೆಚ್ಚಿನ ತಿಳುವಳಿಕೆ ಇರುವದರಿಂದ ಈಗ ಇಲಾಖೆಯವರು ಮಾರ್ಕೆಟ್ಟಿನಲ್ಲಿ ಉಂಟಾಗುವ ಕ್ರಯದ ಬದಲಾವಣೆಗಳಿಂದ ಪ್ರಯೋಜನ ಹೊಂದುವ ಸ್ಥಿತಿಯಲ್ಲಿದ್ದಾರೆ.

(ಸಿ) ತೊಲೆಗಳನ್ನು ಕತ್ತರಿಸುವ ಕೆಲಸವು ಸ್ವಲ್ಪಮಟ್ಟಿಗೆ ಪ್ರಾರಂಭಿಸಲ್ಪಟ್ಟಿದೆ.

(ಡಿ) ಘಟ್ಟ ಫಾರೆಸ್ಟುಗಳನ್ನು ಉಪಯೋಗಿಸಲು ಮಾವುಕೂಟ ಸಂಸ್ಥೆಯು ಪೂರೈಸಲ್ಪಟ್ಟಿದೆ.

(ಇ) ಕೊಡಗಿನಲ್ಲಿ ಅರಗು ಮಾಡಲು ಸಾಧ್ಯವೋ ಎಂಬದು ವಿಚಾರಿಸಲ್ಪಡುತ್ತಿದೆ.

ಮೆ. ಕೆ. ಪಿ. ಚಿನ್ನಪ್ಪನವರು.

127. ಪ್ರ. ಹುಣುಸೂರು ವರ್ಕ್ಸಿನಿಂದ ಕೆಲವು ಕಾಲದ ಹಿಂದೆ 930 ರುಪಾಯಿಗೆ ಕೊಂಡುಕೊಂಡ ಒಂದು 'ವೇಗನ್' ಕೊಂಡುಕೊಂಡ ಲಾಗಾಯಿತು ಉಪಯೋಗಿಸದೆ ಇಟ್ಟಿರುವದು ನಿಜವೋ, ಮತ್ತು ಫಾರೆಸ್ಟು ಇಂಜಿನೀಯರು ಅದನ್ನು ಪರೀಕ್ಷಿಸಿ ಉಪಯೋಗಿಸಲು ಪ್ರಯತ್ನಿಸಿದರೋ?

ಉ. ನಮ್ಮ ಇರಾದೆ ಪ್ರಕಾರ ಹುಣುಸೂರು ವರ್ಕ್ಸಿನವರು ಮಾಡಿದ ವೇಗನಿಗೆ 1920-21ರಲ್ಲಿ 800 ರುಪಾಯಿ ಕ್ರಯ ಕೊಡಲಾಗಿದೆ. ಅದನ್ನು ಉಪಯೋಗಿಸಿಯೇ ಇಲ್ಲ. ವೇಗನನ್ನು ಉಪಯೋಗಿಸುವುದಕ್ಕಾಗಿ ಅದನ್ನು ಫಾರೆಸ್ಟು ಇಂಜಿನೀಯರು ಪರೀಕ್ಷಿಸಿದರು ಅದರ ಈಗಿನ ಸ್ಥಿತಿಯಲ್ಲಿ ಅದನ್ನು ಉಪಯೋಗಿಸಕೂಡದೆಂದೂ, ಅದನ್ನು ಬದಲಾಯಿಸಿದರೂ ಕೂಡ ಅದರ ವಿಪರೀತ ಭಾರದ ದೆಸೆಯಿಂದ ಅದನ್ನು ಎಳೆಯುವ ಖರ್ಚು ಬಹಳವಾಗುವುದರಿಂದ ಅದನ್ನು ಉಪಯೋಗಿಸುವುದು ಸಾಧ್ಯವಲ್ಲವೆಂದೂ ಹೇಳಿರುವರು.

128. ಪ್ರ. (ಎ) ಕೂಟುಂಪೊಳೆ ರೇಂಜಿನಲ್ಲಿ ಕಡಿದು ಸಾಗಿಸಲು ತಯಾರಾಗಿರುವ ಮರಗಳು ಅಂದಾಜು ಎಷ್ಟು ಟನ್ನುಗಳಿರಬಹುದು?

(ಬಿ) ಹೇಳಲ್ಪಟ್ಟ ಮರಗಳಷ್ಟೆ 1920-21, 21-22, ಮತ್ತು 22-23ರಲ್ಲಿ ಎಷ್ಟು ಸಾಗಿಸಲ್ಪಟ್ಟವು ಮತ್ತು ಸಾಗಿಸಲು ಬಾಕಿಯಾದವೆಷ್ಟು?

(ಸಿ) ಕಡಿದುಹಾಕಿ ಸಾಗಿಸಲು ತಯಾರಾಗಿರುವ ಮರಗಳನ್ನೆಲ್ಲಾ ಸಾಗಿಸುವ ಮುಂಚೆ ಹೊಸಹ ಮರಗಳನ್ನು ಕಡಿಯಲು ಇಲಾಖೆಯವರು ಪ್ರಾರಂಭಿಸುತ್ತಾರೋ?

ಉ. (ಎ) ಸಾಗಿಸಲಿಕ್ಕಿರುವ ಮರ ಸುಮಾರು 2,000 ಟನ್ನುಗಳು.

(ಬಿ)	1920-21	272	ಟನ್ನುಗಳು.
	1921-22	437	,,
	1922-23	564	,,
	ಬಾಕಿ ಇರುವದು ಸುಮಾರು	4,000	,,

(ಸಿ) ಮೊದಲು ಈ ಪದ್ಧತಿಯಾಗಿತ್ತು. ಆದರೆ ಈಗ ಆಯಾಯ ವರ್ಷದಲ್ಲಿ ಸಾಗಿಸಲು ಸಾಧ್ಯವಾಗುವ ಅಂದಾಜಿನಷ್ಟೇ ಕಡಿಯುವದಾಗಿದೆ.

129. ಪ್ರ. (ಎ) ತಿತಿಮತಿಯಲ್ಲಿ ತೊಲೆ ಕೊರೆಯುವ ಯಂತ್ರವನ್ನು ಸ್ಥಾಪಿಸಿದಕ್ಕೆ ಒಟ್ಟು ಖರ್ಚೆಷ್ಟು?

(ಬಿ) ಅದನ್ನು ಯಾಕೆ ನಿಲ್ಲಿಸಿದರು?

ಉ. (ಎ) ಇಂಜಿನ್	ರೂ.	6,000
ಕಟ್ಟಡಗಳು ಭಾವಿವಗೈರೆಗಳು....	,,	4,000
		10,000

(ಬಿ) 1.7.1920 ರಿಂದ 30.11.1921ರ ವರೆಗೆ—(1) ರೂ. 18711 ಖರ್ಚುಮಾಡಿ 15,064 ಘನ ಅಡಿಗಳ 738 ತೊಲೆಗಳು ಕೊರೆಯಲ್ಪಟ್ಟು 7,966 ಘನ ಅಡಿ ಕೊರೆದ ಮರ ಮಾರಲ್ಪಟ್ಟವು. (2) ಈ ಕೊರೆದ ಮರಗಳನ್ನು ಡಿ. ಪಿ. ಡಬ್ಲ್ಯು. ಇಲಾಖೆಯವರಿಗೆ ಮಾರಿ ಸಿಕ್ಕಿದ ಉತ್ಪತ್ತಿ ರೂ. 13,370

(ಸಿ) ತೇಗ ಮೊದಲಾದ ಮರಗಳ ಕೊಂಬೆಗಳನ್ನು ಪ್ರಯೋಜನಕ್ಕೆ ಬಾರದ ಭಾಗಗಳನ್ನೂ ಸಣ್ಣದಾಗಿ ಕೊಯಿಸಿ ಕುರ್ಚಿ ಮೊದಲಾದ ಬಡಗಿ ಕೆಲಸಕ್ಕೆ ಉಪಯೋಗಿಸುವ ಅಭಿಪ್ರಾಯದಿಂದಲೇ ಈ ಯಂತ್ರವು ಮೊದಲು ಸ್ಥಾಪಿಸಲ್ಪಟ್ಟದ್ದು. ಇದರಂತೆ ನಡೆಯದೆ ಇಲಾಖೆಯವರು ಡಿ. ಪಿ. ಡಬ್ಲ್ಯು. ಇಲಾಖೆಯವರಿಗೆ ಬೇಕಾಗುವ ಹಲಿಗೆ ಮೊದಲಾದವುಗಳನ್ನು ಕುಯ್ಯಲಿಕ್ಕೆ ಸುರುಮಾಡಿದರು. ಈ ತರದ ದೊಡ್ಡ ಕೆಲಸಕ್ಕೆ ಆ ಯಂತ್ರವು ತಯಾರಿಸಲ್ಪಟ್ಟದ್ದಲ್ಲವಾದುದರಿಂದ ಅದು ಆಗಾಗ್ಯೆ ರಿಪೇರಿಗೆ ಬರುತ್ತಿತ್ತು.

ತಿತಿಮತಿಯು ಒಂದು ಯಂತ್ರಕ್ಕೆ ಸಾಕಷ್ಟು ಮುಖ್ಯ ಸ್ಥಳವಲ್ಲವೆಂಬದು ಇದರಷ್ಟೇ ಮುಖ್ಯಸಂಗತಿಯಾಗಿತ್ತು. ಅಷ್ಟು ಉತ್ತಮತರವಲ್ಲದ ತೇಗ, ಬೀಟಿ ಮೊದಲಾದವುಗಳು ಮಾತ್ರ ಅಲ್ಲಿ ದೊರೆಯುವುದರಿಂದಲೂ, ಅವೂ ಬಹು ಕೊರತೆಗೀಡುವವಾದುದರಿಂದಲೂ ಬಹಳ ಮರ ಹಾಳಾಗುತ್ತಿತ್ತು.

ಹಣ ನಷ್ಟದ ಈ ಎರಡು ಮುಖ್ಯ ಕಾರಣಗಳಿಂದ ಯಂತ್ರ ನಿಲ್ಲಿಸಲ್ಪಟ್ಟಿತು.

ದೇಶೀಯರಲ್ಲಿ ವಿನಂತಿ.

ದೇಶಬಾಂಧವರೇ,

"ಕೊಡಗು" ಪತ್ರಿಕೆಯು ನಮ್ಮ ದೇಶಕ್ಕೆ ಮಾಡಿದ ಸೇವೆಯು ಅಸಾಧಾರಣವಾದುದೆಂದು ತಾವೆಲ್ಲರೂ ಒಪ್ಪುತ್ತೀರಿ. ಇದನ್ನು ಅರಿತೂ ಕೂಡಾ ತಮಗಳ ಪರಸ್ಪರ ಸಹಾಯವು ಆ ಪತ್ರಿಕೆಯ ಚಂದಾದಾರರನ್ನು ಹೆಚ್ಚಿಸುವ ಬಗ್ಗೆ ಕಡಮೆಯಾದುದು ಕೇವಲ ವ್ಯಸನಕರ. "ಕೊಡಗು" ಪತ್ರಿಕೆಯ ಪ್ರಯೋಜನವನ್ನು ಎಷ್ಟು ವರ್ಣಿಸಿದರೂ ಸಾಲದು. ಈ ಪತ್ರಿಕೆಯನ್ನು ಲಾಭ ಪಡೆಯುವ ಉದ್ದೇಶದಿಂದ ಹೊರಡಿಸಲಿಲ್ಲ. ಪತ್ರಿಕೆಯನ್ನು ತಮ್ಮಲ್ಲಿ ಹುಟ್ಟಿದ ಒಂದು ಮಗುವಿನೋಪಾದಿಯಲ್ಲಿ ಕಂಡು, ಮಗುವಿನ ವಿದ್ಯಾಭ್ಯಾಸಕ್ಕೆ ವರ್ಷಕ್ಕೆ ರೂ. 3-8-0 ದಯವಿಟ್ಟು ಕೊಡುವಿರಾಗಿ ಹಾರೈಸುತ್ತೇನೆ. ದೇಶದವರೆಲ್ಲರೂ ಕೂಡಿಮಾಡಿದ ಒಂದೇ ಒಂದು ಪತ್ರಿಕೆಯನ್ನು ಓದುವವರು ಸಾಕಷ್ಟು ಜನರು ಇಲ್ಲವೆಂಬದು ಬಹಳ ಆಕ್ಷೇಪಣೆಯೆಂದು ಹೇಳುವುದರಿಂದ ಪ್ರಯೋಜನವಿಲ್ಲ. ಆದ್ದರಿಂದ ಮಹನೀಯರೇ, ತಮ್ಮ ಉತ್ಸಾಹವನ್ನು ಪತ್ರಿಕೆಗೆ ಹೆಚ್ಚು ಚಂದಾದಾರರನ್ನು ಮಾಡುವ ಉದ್ದೇಶದಲ್ಲಿ ತೋರಿಸಬೇಕಾಗಿ ಕೋರುತ್ತೇನೆ.

ಕೇರುದಾರರುಗಳಲ್ಲಿ ಪುನಃ ಇನ್ನೊಂದು ವಿಜ್ಞಾಪನೆ—ತಮಗಳ ಕೇರಿನ ಒಂದು ಮತ್ತು ಎರಡನೇ ಕಿಸ್ತಿನ ಹಣವು ಅನೇಕರಿಂದ ಪಾವತಿಯಾಗಿರುವದಿಲ್ಲ. ಕಾಲ್‍ಮೇಲೆ ಒಡನೆ ಪಾವತಿಮಾಡದಿದ್ದರೆ, ಕೊಟ್ಟ ಹಣವು ಕಳಕೊಳ್ಳಲಾಗುತ್ತೆ. ಆದ್ದರಿಂದ ಅನರ್ಥಕ್ಕೆ ಆಸ್ಪದ ಕೊಡದ ಹಾಗೂ, ಒಡನೇ ಕಂಪೆನಿಗೆ ಪಾವತಿಮಾಡಿ ರಶೀತಿ ಪಡೆಯುವಂತೆಯೂ, ಎಲ್ಲಾ ಕೇರುದಾರರುಗಳಲ್ಲಿ ಅತಿವಿನಯದಿಂದ ಅಪ್ಪೀಲುಮಾಡಿಕೊಳ್ಳುತ್ತೇನೆ.

ತಮಗಳ ಸೇವಕ,
ಕೋದಂಡ ಉತ್ತಯ್ಯ.
ಆರ್ಗನೈಜಿಂಗ್ ಡೈರೆಕ್ಟರ್.

ವರ್ತಮಾನ ಸಂಗ್ರಹ.

ಒಳದೇಶ.

ಕೊಡಗು ಕೌನ್ಸಿಲಿನ ಫೈನೇನ್ಸ್ ಕಮಿಟಿಗೆ ಮಾಜಿ ಚುನಾಯಿತ ಮೆಂಬರುಗಳಲ್ಲದೆ ಮೆ. ಎ. ಜಿ. ಡೇರಿಂಗ್ಟನ್ ಮತ್ತು ಮೆ. ಪಿ. ಜಿ. ಟಿಪ್ಪಿಂಗ್‍ರವರನ್ನು ಮೆಂಬರುಗಳಾಗಿ ಚೀಫ್ ಕಮಿಷನರವರು ನೇಮಿಸಿರುವರು.

ಸೆಷನ್ ಜಡ್ಜಿಯವರು ತಮ್ಮ ಇಲಾಖೆ ಮೇರೆ ತಮ್ಮ ಕೋರ್ಟನ್ನು ಮಡಿಕೇರಿಯಲ್ಲಾಗಲೀ, ವೀರಾಜಪೇಟೆಯಲ್ಲಾಗಲೀ ನಡಿಸುತ್ತಾರೆಂದು ಚೀಫ್ ಕಮಿಷನರವರು ಹುಕುಂ ಮಾಡಿರುವರು.

ಮಡಿಕೇರಿ ಮುನಿಸಿಪಾಲಿಟಿ ಕಮಿಟಿಯಲ್ಲಿ ರಾಜೀನಾಮೆ ಕೊಟ್ಟ ರಾ. ಸಾ. ಪಟ್ಟಮಾಡ ದೇವಯ್ಯನವರ ಸ್ಥಳದ ಮೆಂಬರುತನಕ್ಕೆ ಈ ತಾರೀಕು 15ರಲ್ಲು ಚುನಾವಣೆ ನಡೆಯುವುದು. ಮೆ. ಕೋದಂಡ ತಿಮ್ಮಯ್ಯನವರು ಒಬ್ಬರೇ ಉಮೇದ್ವಾರರಾಗಿ ನಿಂತಿದ್ದಾರೆ.

ವೀರಾಜಪೇಟೆಯಲ್ಲಿ ತಾರೀಕು 16ರಲ್ಲು ನಡೆಯುವ ಸೆಂಟ್ರಲ್ ಬ್ಯಾಂಕಿನ ಜನರಲ್ ಮೀಟಿಂಗಿನ ನಂತರ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ಒಂದು ನಡೆಯುವುದು.

ಮಡಿಕೇರಿ ಗಣಪತಿ ಬೀದಿಯಲ್ಲಿ ದೇವಾಂಗದ ಅಚ್ಚಮ್ಮನೆಂಬ ಒಬ್ಬ ಮುದುಕಿಯ ಮನೆಗೆ ಅವಳ ಗೈರ್ಹಾಜರಿನಲ್ಲಿ ತಾ. 6-11-24ರಲ್ಲು ಗಾರೆ ರಾಮಸ್ವಾಮಿ ಎಂಬವನು ಬೀಗ ಮುರಿದು ನುಗ್ಗಿ ಒಟ್ಟೆ ವಗೈರೆ ಕಳವು ಮಾಡಿ ಓಡಿ ಹೋಗುತ್ತಿರಬೇಕಾಗ್ಯೆ ಮಹದೇವಪೇಟೆ ಬೀದಿಯಲ್ಲು ಹೆ. ಕಾನ್‍ಸ್ಟೇಬಲ್ ಮಾಚಿಮಂಡ ದೇವಯ್ಯನವರು ಅವನನ್ನು ಹಿಡಿದರು.

ಕೊಡಗಿನ ಕೋಆಪರೇಟಿವ್ ಸಂಘಗಳ 1923-24ನೇ ವರುಷದ ಕೆಲಸದ ವರದಿಯ ಒಂದು ಪ್ರತಿಯು ನಮ್ಮ ಕೈ ಸೇರಿದೆ. ಇದನ್ನು ವಂದನೆಯಿಂದ ಸ್ವೀಕರಿಸುತ್ತೇವೆ. ಇದರ ಮೇಲೆ ನಮ್ಮ ಅಭಿಪ್ರಾಯವನ್ನು ಹಿಂದಣಿಂದ ಬರೆಯುವೆವು.

ವೀರಾಜಪೇಟೆ ಹೈಸ್ಕೂಲು ಹಣದ ಸಂಬಂಧ ಚೆಟ್ರಂಡ ಚೀಯಣ್ಣನವರ ಸಮನ್ಸ್ ಕೇಸು ವೀರಾಜಪೇಟೆಯಲ್ಲಿ ಡಿಸೆಂಬರು ತಾರೀಕು 5ರಲ್ಲು ವಿಚಾರಿಸಲ್ಪಡುವುದು.

ಮಡಿಕೇರಿ ಮುನ್ಸಿಪಾಲಿಟಿಯವರಂತೆಯೇ ವೀರಾಜಪೇಟೆ ಮುನ್ಸಿಪಾಲ್ಟಿಯವರು ತಮ್ಮ ಲೆಕ್ಕಗಳನ್ನು ಆಡಿಟ್ ಮಾಡಲು ಮೆ. ಬಿ. ಶ್ಯಾಮಣ್ಣನವರನ್ನು ನೇಮಿಸಿಕೊಂಡಿರುವರು.

ಮದ್ರಾಸುಪ್ರಾಂತ್ಯದಲ್ಲಿ ಸುಪರಿಂಟೆಂಡೆಂಟ್ ಇಂಜಿನೀಯರಾಗಿರುವ ಮೆ. ವೋಲ್ಸ್‍ವರ್ತ್‍ರವರು ಟ್ರಾಮ್ ಲೈನನ್ನು ನೋಡಲಿಕ್ಕಾಗಿ ತಾರೀಕು 13ರಲ್ಲು ಮೂವ್ವುರಕೂಟಕ್ಕೆ ಬಂದು ಅರಮನೆಯನ್ನು ನೋಡಲಿಕ್ಕೆ ತಾರೀಕು 15ರಲ್ಲು ಮಡಿಕೇರಿಗೆ ಬರಲಿಕ್ಕಿರುವರು.

ಮಡಿಕೇರಿ ಆಸ್ಪತ್ರೆಯಲ್ಲಿರುವ ಸಬ್ ಅಸಿಸ್ಟೆಂಟ್ ಸರ್ಜನರಾದ ಮೆ. ಚೇರಂಡ ಸೋಮಯ್ಯನವರು ಈ ತಾರೀಕು 15ರಲ್ಲು ಉದ್ಯೋಗದಿಂದ ರಿಟೈರ್ ಆಗುವರು.

ವಿಶಾಖಪಟ್ಟಣದಿಂದ ಕೊಡಗಿಗೆ ವರ್ಗವಾದ ಪಿ. ವಾಮನಮೂರ್ತಿರಾಯರು ಕಳೆದ ತಿಂಗಳು 30ರಲ್ಲು ಇಲ್ಲಿ ಡಿ. ಪಿ. ಡಬ್ಲ್ಯು. ಆಫೀಸಿನ ಮೇನೇಜರು ಕೆಲಸದ ಚಾರ್ಜನ್ನು ವಹಿಸಿಕೊಂಡರು.

ಈ ತಾ. 9ರಲ್ಲು ಮಡಿಕೇರಿ ದೇವಸ್ಥಾನದ ಹಾಲಿನಲ್ಲು ಟೆಂಪರ್ ಫಂಡ್ ಕಮಿಟಿಯ ಮೀಟಿಂಗು ಒಂದು ನಡೆಯಿತು.

ನವಂಬರ್ 9ರಲ್ಲು ಶ್ರೀಮತಿ ಸಾಕಮ್ಮನವರ ಕುಸುಬೂರು ತೋಟದ ಆಳೊಬ್ಬನು ಮಧ್ಯಾಹ್ನ ಸಮಯದಲ್ಲು ಅಲ್ಲಿ ಒಂದು ಕೆರೆಯದಡದಲ್ಲಿ ಏನೋ ಗೆಡ್ಡೆ ಅಗೆಯುತ್ತಿದ್ದಾಗ ಸಮೀಪದ ಕಾಡಿನಲ್ಲಿ ಬೇಟೆಯಾಡುತ್ತಿದ್ದವರೊಬ್ಬರ ಗುಂಡು ಅವನಿಗೆ ಆಕಸ್ಮಿತ ತಗಲಿ ಅವನ ಮೈಯಲ್ಲೆಲ್ಲಾ ಚಿಲ್ಲುಗಳು ನಾಟಿಕೊಂಡವು. ಅವನನ್ನು ಮಡಿಕೇರಿ ಆಸ್ಪತ್ರೆಗೆ ತಂದು ಚಿಕಿತ್ಸೆ ಮಾಡುತ್ತಿರುವರು.

ಕೊಡಗಿನ ಬ್ರಾಹ್ಮಣರ ವಿದ್ಯಾಭಿವೃದ್ಧಿ ಸಂಘದ ಮೀಟಿಂಗು ನಡದು ಅವರ ವಿದ್ಯಾರ್ಥಿಗಳ ಬೋರ್ಡಿಂಗಿಗಾಗಿ ಒಂದು ಹೊಸ ಕಟ್ಟಡವನ್ನು ಕಟ್ಟಿಸುವಂತೆ ತೀರ್ಮಾನಿಸಿರುವರು.

ತಾ. 8ರಲ್ಲು ಸೆಂಟ್ರಲ್ ಹೈಸ್ಕೂಲ್ ಹಾಲಿನಲ್ಲು ಯೂರೋಪಿಯನರು ಒಂದು ಇಂಗ್ಲೀಷು ನಾಟಕವನ್ನೂ, ಹಳೆ ವಿದ್ಯಾರ್ಥಿಗಳ ಸಂಘದವರು "ಧ್ರುವಚರಿತ್ರೆ" ಎಂಬ ನಾಟಕವನ್ನೂ ಅಭಿನಯಿಸಿದರು. ಅನೇಕ ಜನರು ನೆರೆದಿದ್ದರು. ಇದರ ಉತ್ಪತ್ತಿಯು "ರೆಡ್ ಕ್ರಾಸ್" ಸಂಘಕ್ಕೆ ಕೊಡಲ್ಪಡುವದು. ಮುನ್ನೂರು ರುಪಾಯಿಗಿಂತ ಹೆಚ್ಚು ಉತ್ಪತ್ತಿಯಾಗಿದೆಯೆಂದು ವರ್ತಮಾನ.

ಹಿಂದೂ ದೇಶ.

ಇಂಡಿಯನ್ ನೇಶನಲ್ ಕಾಂಗ್ರೆಸ್ಸಿನ ಅಧ್ಯಕ್ಷರಾದ ಮೌಲಾನ ಮಹಮದ್ ಅಲಿಯವರು ಕಾಂಗ್ರೆಸ್ಸಿನ ಎಗ್ಸಿಕ್ಯುಟಿವ್ ಕಮಿಟಿಯ ಮೀಟಿಂಗು ದೇಶದ ಈಗಿನ ರಾಜಕೀಯ ಸ್ಥಿತಿಯನ್ನು ಚರ್ಚಿಸಲಿಕ್ಕಾಗಿ ಬೊಂಬಾಯಿಯಲ್ಲಿ ಈ ತಾ. 21ರಲ್ಲಿ ನಡಯುವುದೆಂದು ತಿಳಿಸಿರುವರು. ಅದೇ ದಿನ ರಾತ್ರಿ ವರ್ಕಿಂಗ್ ಕಮಿಟಿಯ ಮೀಟಿಂಗೂ ನಡೆಯುವುದು.

ನೇಪಾಳಿನವರ ಒಬ್ಬ ಕಾಂಗ್ರೆಸ್ ಮುಂದಾಳಾದ ಮೆ. ದಾಳ್ ಬಹದ್ದೂರ್ ಗಿರಿಯವರು ತಾ. 11ರಲ್ಲು ಕಲಿಂಪೊಂಗಿನಲ್ಲಿ ಮೃತರಾದರು. ಅಸಹಕಾರದ ಸಮಯದಲ್ಲಿ ಇವರು ಬಹಳ ಮುತುವರ್ಜಿಯಿಂದ ಕೆಲಸಮಾಡಿ ಜೈಲ್‍ವಾಸವನ್ನು ಪಡೆದಿದ್ದರು.

ತಾರೀಕು 8, 9, 10ರಲ್ಲು ಡೆಲ್ಲಿಯಲ್ಲಿ ನಡೆದ ಅಖಿಲ ಭಾರತ ಹಿಂದಿ ಲಿಟರರಿ ಕಾನ್‍ಫರೆನ್ಸಿನಲ್ಲಿ ಹಿಂದೀ ಭಾಷೆಯನ್ನು ಹಿಂದೂ ದೇಶದಲ್ಲೆಲ್ಲಾ ಅದಷ್ಟು ಪ್ರಚರಿಸಬೇಕೆಂದೂ, ಅದು ಜನ ಪ್ರೀತಿಯಾಗುವಂತೆ ಮಾಡಬೇಕೆಂದೂ, ಇದಕ್ಕೆ ಸರಕಾರದವರ ಸಹಾಯ ಸಹ ಕೇಳಬೇಕೆಂದೂ ತೀರ್ಮಾನಿಸಿರುವರು.

ಇಂಡಿಯನ್ ಲೆಜಿಸ್ಲೇಟಿವ್ ಎಸೆಂಬ್ಲಿಯ ಬರುವ ಮೀಟಿಂಗ್ ಜನವರಿ 19ರಲ್ಲಿ ಪ್ರಾರಂಭವಾಗ ಬಹುದೆಂದು ವರ್ತಮಾನ.

ಬಂಗಾಳ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರು ಪುನಹ ಮೆ. ಸಿ. ಆರ್. ದಾಸ್‍ರವರನ್ನೇ ತಮ್ಮ ಪ್ರೆಸಿಡೆಂಟರಾಗಿ ಚುನಾಯಿಸಿರುವರು.

ಕಲ್ಕತ್ತಾದಲ್ಲಿ ಸ್ವರಾಜ್ಯ ಪಂಗಡದವರ ಮತ್ತು ಮಹಾತ್ಮ ಗಾಂಧಿಯವರ ಮೀಟಿಂಗು ನಡೆದನಂತರ ತಾರೀಕು 7ರಲ್ಲು ಮಹಾತ್ಮ ಗಾಂಧಿಯವರು, ಸಿ. ಆರ್. ದಾಸ್‍ರವರು ಮತ್ತು ಪಂಡಿತ ಮೋತಿಲಾಲ್ ನೇಹರುರವರು ರುಜು ಮಾಡಿ ಒಂದು ಒಗ್ಗಟ್ಟಿನ ಪತ್ರವನ್ನು ಪ್ರಕಟಿಸಿರುವರು. ಅದರ ಸಾರಾಂಶವೇನಂದರೆ—ದೇಶದಲ್ಲಿಯೂ, ಇಂಡಿಯನ್ ನೇಶನಲ್ ಕಾಂಗ್ರೆಸ್ಸಿನಲ್ಲಿಯೂ ಪಂಗಡಗಳಾಗಿಕೊಂಡು, ಎಲ್ಲರ ಉದ್ದೇಶವು ಸ್ವರಾಜ್ಯವಾದರೂ ಕೂಡ, ಎಲ್ಲರಿಗೂ ಕಾಣುವಂತೆ ಪಂಗಡಗಳು ಒಂದಕ್ಕೊಂದು ವಿರೋಧವಾಗಿ ಕೆಲಸ ಮಾಡುತ್ತಿರುವುದರಿಂದ ದೇಶದ ಅಭಿವೃದ್ಧಿಗೆ ಕುಂದಕವುಂಟಾದ ಕಾರಣ, ನೇಶನಲ್ ಕಾಂಗ್ರೆಸ್ಸು ಪರದೇಶಗಳ ಬಟ್ಟೆಗೆ ಬಹಿಷ್ಕಾರ ಹಾಕುವುದು ವಿನಹ ಬಾಕಿ ಅಸಹಕಾರವನ್ನೆಲ್ಲಾ ತತ್ಕಾಲ ಬಿಡಬೇಕು; ಕಾಂಗ್ರೆಸ್ಸಿನೊಳಗಿರುವ ಪಂಗಡಗಳು ತಮಗೆ ತೋರಿದಂತೆ ಕೆಲಸ ಮಾಡಬಹುದು; ಆದರೆ ಎಲ್ಲರೂ ಖಾದಿ ಪ್ರಚಾರಕ್ಕೂ, ಹಿಂದೂ ಮುಸಲ್ಮಾನರ ಒಗ್ಗಟ್ಟಿಗೂ, ಹಿಂದೂ ಜನರು ಅಸ್ಪೃಶ್ಯತೆಗೂ ಪೂರ್ತಿ ಗಮನ ಕೊಡಬೇಕು; ಸ್ವರಾಜ್ಯ ಪಂಗಡದವರು ಕಾಂಗ್ರೆಸ್ಸಿನ ಪರವಾಗಿ ಕೌನ್ಸಿಲುಗಳಲ್ಲಿ ಕೆಲಸ ಮಾಡಬಹುದು, ಆದರೆ ಅವರ ಫಂಡನ್ನೂ ರೂಲ್ಸನ್ನೂ ಅವರೇ ಮಾಡಿಕೊಳ್ಳತಕ್ಕದ್ದು; ಕಾಂಗ್ರೆಸು ಮೆಂಬರುತನಕ್ಕೆ ಹಣದ ಫೀಸಿನ ಬದಲು ಪ್ರತಿಯೊಬ್ಬನೂ ತಿಂಗಳಿಗೆ 2000 ಗಜ ಚರಕಾದಿಂದ ನೂಲುಮಾಡಿ ಅಲ್ಲವೇ ಮಾಡಿಸಿ ಕಳುಹಿಸಿಕೊಡತಕ್ಕದ್ದು.

ಮಹಾತ್ಮರಿಗೆ ಕಲ್ಕತ್ತಾ ಮುನ್ಸಿಪಾಲ್ಟಿಯವರು ಸ್ವಾಗತ ಪತ್ರವನ್ನು ತಾ 6 ರಲ್ಲು ಅರ್ಪಿಸಿದಾಗ ಸುಮಾರು 50 ಸಾವಿರ ಜನರು ನೆರೆದಿದ್ದರಂತೆ. ಮಹಾತ್ಮರ ದರ್ಶನಕ್ಕಾಗಿಯೇ ಎಷ್ಟೋ ಜನರು ಬಹು ಕುತೂಹಲವುಳ್ಳವರಾಗಿದ್ದರು. ಅವರನ್ನು ನೋಡುವ ಪ್ರಯತ್ನದಲ್ಲಿ ಒಬ್ಬಿಬ್ಬರು ಮೂರ್ಛಿತರಾದರಂತೆ. ಹೌರ ಮುನ್ಸಿಪಾಲಿಟಿಯವರೂ ಮಹಾತ್ಮರಿಗೆ ಒಂದು ಅಡ್ರೆಸ್ಸನ್ನು ಅರ್ಪಿಸಿದರು. ಅವರು ತಾ 8ರಲ್ಲು ನಾಸಿಕು ಡೆಲ್ಲಿಗೆ ಹೋದರು.

ವಿದೇಶ.

ಬ್ರಿಟನ್ನಿನ ಹೊಸ ಮಂತ್ರಿ ಮಂಡಲು ಏರ್ಪಾಡಾಗಿದೆ. ಮಿ. ಬಾಲ್ಡ್‍ವಿನ್ನರವರು ಪ್ರಧಾನ ಮಂತ್ರಿಯಾಗಿರುವರು. ಲಾರ್ಡ್ ಬರ್ಕನ್ ಹೆಡ್‍ರವರು ಇಂಡಿಯಾ ಸ್ಟೇಟ್ ಸೆಕ್ರೆಟರಿಯಾಗಿರುವರು.

ಚೈನಾದ ಒಬ್ಬ ದೊಡ್ಡ ಸೇನಾಧಿಪತಿಯಾದ ಉಪೀಫು ರವರು ಈಗ ಚೀಫೂನಲ್ಲಿರುವರು. ಅವರು ದಕ್ಷಿಣಕ್ಕೆ ಹೋಗಿ ಪುನಹ ಒಂದು ದೊಡ್ಡ ಸೈನ್ಯವನ್ನು ಸೇರಿಸುವರಂತೆ.

ತುರ್ಕಿಯ ಅಂಗೋರ ಎಸೆಂಬ್ಲಿಯಲ್ಲಿ ತಾರೀಕು 9ರಲ್ಲು ಒಂದು ಹೊಸ ಪಂಗಡ ಉಂಟಾಯಿತು. ಕೆಮಲಿಸ್ಟ್ ಚಳವಳನಂತರ ಪಂಗಡ ಉಂಟಾದದ್ದು ಇದೇ ಮೊದಲನೇ ಸಾರಿ. ರಿಪಬ್ಲಿಕನ್ ಪಾರ್ಟಿಯನ್ನು ಏರ್ಪಡಿಸುವ ಉದ್ದೇಶ್ಯ 18 ಮೆಂಬರುಗಳು ಜನರ ಪಾರ್ಟಿಯಿಂದ ಬಿಟ್ಟು ಸರಕಾರಕ್ಕೆ ವಿರೋಧವಾಗಿ ಓಟು ಮಾಡಿದರು.

ಬಾಲ್ಡ್‍ವಿನ್ನರ ಮಂತ್ರಿಮಂಡಲಿಯಲ್ಲಿ ಅಂಡರ್ ಸೆಕ್ರೆಟರಿಯಾಗಿ ಒಬ್ಬ ಸ್ತ್ರೀಯೂ ಸಹ ಇರುವಳೆಂದು ವರ್ತಮಾನ.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರಿಗೆ ರಶೀತಿ ಪುಸ್ತಕಗಳನ್ನು ನಮ್ಮ ಏಜಂಟರು ಮೆ. ಕೋಟೀರ ಚಿಣ್ಣಪ್ಪನವರ ಜವಾಬುದಾರಿಕೆಯಮೇಲೆ ಕೊಡಲಾಗಿದೆ. ದಯವಿಟ್ಟು ಚಂದಾದಾರರೆಲ್ಲರೂ ಅವರವರಿಗೆ ಅನುಕೂಲವಿರುವ ಜಾಗದಲ್ಲಿ ಪಾವತಿಮಾಡಬೇಕಾಗಿ ಕೋರಿಕೆ.

ಏಜಂಟರುಗಳು.

ವೀರಾಜಪೇಟೆ—ಮೆ. ಕೆ. ಚಿಣ್ಣಪ್ಪನವರ ಆಫೀಸಿನಲ್ಲಿ.
ಪೊನ್ನಂಪೇಟೆ... ಮೂರ್ನಾಡು—ಕಮರ್ಷಿಯಲ್ ಸ್ಟೋರಿನಲ್ಲಿ ಮೆ. ಮನೆಯಪಂಡ ಬೆಳ್ಯಪ್ಪನವರು.
ನಾಪೋಕ್ಲು—ಮೆ. ಪೊನ್ನಜಂಡ ಮುದ್ದಪ್ಪನವರು.
ಗೋಣಿಕೊಪ್ಪಲು—ಮೆ. ಮುಕ್ಕಾಟೀರ ಪೊಣಚ್ಚನವರು.
ಪೊನ್ನಂಪೇಟೆ—ಮೆ. ಪುತ್ತಮನೆ ಮುದ್ದಯ್ಯನವರು.
ಮಡಿಕೇರಿ—ಜಿ. ಮಾದಪ್ಪನವರು.
ಅಮ್ಮತ್ತಿ ಸಿದ್ದಾಪುರ—ಐನಂಡ ಮಾದಪ್ಪನವರು.

ಕೋದಂಡ ಉತ್ತಯ್ಯ.
ಆರ್ಗನೈಜಿಂಗ್ ಡೈರೆಕ್ಟರು, "ಕೊಡಗು" ಲಿಮಿಟೆಡ್.

ನೋಟೀಸ್.

ಕೊಡಗು ವಿದ್ಯಾಭಿವೃದ್ಧಿ ಸಂಘದ ಜನರಲ್ ಮೀಟಿಂಗ್ ಇದೇ ನವಂಬರು ತಾ. 21ನೇ ಶುಕ್ರವಾರ ದಿನ ಸಾಯಂಕಾಲ 5 ಗಂಟೆಗೆ ಮಡಿಕೇರಿ ಓಂಕಾರೇಶ್ವರ ದೇವಸ್ಥಾನದ ಹಾಲಿನಲ್ಲು ನಡಿಯುವುದರಿಂದ ಎಲ್ಲಾ ಚಂದಾದಾರರು ದಯವಿಟ್ಟು ಬರಬೇಕಾಗಿ ಕೇಳಿಕೊಳ್ಳಲಾಗಿದೆ.

M. BHIMAYYA, *Hon. Secretary.* (Sd). K. CHENGAPPA *President.*

ಗೌಡುಗಳ ಚರಿತ್ರೆ.

ದಕ್ಷಿಣಕನ್ನಡ ಮತ್ತು ಕೊಡಗು ಈ ಎರಡು ಜಿಲ್ಲೆಗಳಲ್ಲಿ ಸುಮಾರು ಅರುವತ್ತು ಸಾವಿರ ಗೌಡುಗಳಿರುವರು. ಆದರೆ ಗೌಡುಗಳು ಈ ಜಿಲ್ಲೆಗಳ ಮೂಲನಿವಾಸಿಗಳಲ್ಲ. ಹಿಂದೂ ದೇಶದ ಇತರ ನಿವಾಸಿಗಳಂತೆ ಇವರೂ ಸಹ ಬೇರೆ ಕಡೆಯಿಂದ ಬಂದು ಇಲ್ಲಿ ನೆಲೆಗೊಂಡರು. ಇವರು ಎಲ್ಲಿಂದ ಬಂದರು? ಇವರು ಇಲ್ಲಿಗೆ ಬರುವ ಮೊದಲು ಎಲ್ಲಿ ವಾಸವಾಗಿದ್ದರು? ಇವರ ಆಗಿನ ಕಸುಬೇನು ಮತ್ತು ಇವರ ಭಾಷೆ, ನಡತೆ, ಆಚಾರ ಹೇಗಿದ್ದಿತೆಂಬುದು ಅನೇಕ ಗೌಡುಗಳಿಗೆ ತಿಳಿದಿರಲಾರದು. ಕೆಲವರುಮಾತ್ರ ತಾವು ಬಗೂರು ಶೀಮೆಯಿಂದ ಬಂದವರೆಂದು ಹೇಳುತ್ತಿರುವರು. ಆದರೆ ಆ ಬಗೂರು ಶೀಮೆಯು ಈಗ ಎಲ್ಲಿರುವುದೆಂದು ಅವರಿಗೆ ತಿಳಿದಿರುವುದಿಲ್ಲ. ಆದುದರಿಂದ ಗೌಡ ಜನಾಂಗದವರ ಅನುಭವಕ್ಕಾಗಿ ನನಗೆ ತಿಳಿಯಲು ಸಾಧ್ಯವಾದಷ್ಟು ಸಂಗ್ರಹಿಸಿದ ಗೌಡರ ಚರಿತ್ರೆಯನ್ನು ಈ ಕೆಳಗೆ ವಿವರಿಸುವೆನು.

ಗೌಡುಗಳು ಇಲ್ಲಿಗೆ ಬರುವ ಮೊದಲು ಪೂರ್ವದ ವಿಜಯನಗರದ ಸಂಸ್ಥಾನದಲ್ಲಿ ವಾಸವಾಗಿದ್ದರೆಂದು ತಿಳಿಯಬರುತ್ತದೆ. ಅವರ, ಅದರ ಮೊದಲಿನ ಚರಿತ್ರೆಯನ್ನು ಖಂಡಿತವಾಗಿ ಹೇಳಲು ಸಾಧ್ಯವಿಲ್ಲ. ಆದರೆ ವಿಜಯನಗರ ಸಂಸ್ಥಾನವು ಒಡೆದುಹೋಗುವ ಕಾಲದಲ್ಲಿ ಗೌಡುಗಳು ವಿಜಯನಗರದ ಒಂದು ಮುಖ್ಯವಾದ ಜನಾಂಗದವರಾಗಿದ್ದರು. ಅಲ್ಲಿ ಇವರು ಈಗಿನಂತೆಯೇ ಬೇಸಾಯದಿಂದ ಜೀವನಮಾಡುತ್ತಿದ್ದರು. ಇವರು ಸಮಷ್ಟಿ ಕುಟುಂಬಗಳ (joint family) ಜೀವನ ನಡಸುತ್ತಾ ವಿಸ್ತಾರವಾದ ಗದ್ದೆ ಹೊಲಗಳಿಗೆ ಯಜಮಾನರಾಗಿ ಗ್ರಾಮಗಳಿಗೆ ಮುಖ್ಯಸ್ಥರಾಗಿದ್ದರು. ಆದುದರಿಂದಲೇ ಈ ಜನಾಂಗದವರಿಗೆ ಗೌಡರೆಂಬ ಹೆಸರು ಬಂತು. ಹಿಂದೆ [illegible] ಇದ್ದ ನಡತೆ, ಪದ್ಧತಿ, ಭಾಷೆ, ಇವೆಲ್ಲವೂ ಈಗಿನಂತೆಯೇ ಇದ್ದುವು. ಈ ವಿಷಯಗಳಲ್ಲಿ ಗೌಡುಗಳು ಇದುವರೆಗೂ ಯಾವ ಬದಲಾವಣೆಗಳನ್ನೂ ಮಾಡಿರುವಂತೆ ಕಾಣುವುದಿಲ್ಲ.

ವಿಜಯನಗರ ಸಂಸ್ಥಾನವು 1565ರಲ್ಲಿ ಒಡೆದು ಮುಸಲ್ಮಾನರ ಪಾಲಾಯಿತು. ಅಂದಿನಿಂದ ಮುಸಲ್ಮಾನರು ಬಿಡದೆ ವಿಜಯನಗರ ಸಂಸ್ಥಾನವನ್ನು ಸೂರೆಗೊಳ್ಳಲು ಪ್ರಾರಂಭಿಸಿದರು. ಇವರ ಉಪದ್ರವನ್ನು ತಡೆಯಲಾರದೆ ಅಲ್ಲಿಯ ನಿವಾಸಿಗಳಲ್ಲಿ ಅನೇಕರು ತಮ್ಮ ದೇಶವನ್ನು ಬಿಟ್ಟು ದಕ್ಷಿಣಕ್ಕೆ ತೆರಳಿದರು. ಹಾಗೆ ದಕ್ಷಿಣಕ್ಕೆ ಬಂದ ಜನಾಂಗಗಳಲ್ಲಿ ಗೌಡುಗಳು ಒಂದು ಪಂಗಡದವರಾಗಿದ್ದರು. ಇವರು ದಕ್ಷಿಣಕ್ಕೆ ಬಂದು ಆಗ ನಿರ್ಜನ ಪ್ರದೇಶವಾಗಿದ್ದ ಕೊಡಗು ಜಿಲ್ಲೆಯ ಕೆಲವು ಭಾಗಗಳನ್ನು ಆಕ್ರಮಿಸಿಕೊಂಡರು. (ಆಗಿನ ಕೊಡಗು ದೇಶವು ಈಗಿನ ಬಂಟ್ವಾಳದ ವರೆಗೂ ವಿಸ್ತರಿಸಿತ್ತು. ಇದನ್ನು ಮನಸ್ಸಿಗೆ ತಂದುಕೊಂಡರೆ ಗೌಡುಗಳೆಲ್ಲರೂ ಕೊಡಗಿನಲ್ಲಿಯೇ ನೆಲೆಗೊಂಡರೆಂಬುದು ಸ್ಪಷ್ಟವಾಗುವುದು.) ಆದುದರಿಂದಲೇ ಗೌಡುಗಳ ಹೆಚ್ಚಿನ ಜನಸಂಖ್ಯೆಯು ಹೆಚ್ಚು ಕಾಡು ಪ್ರದೇಶಗಳಾದ ಪಾಣಿಸಾಮ್ರನಾಡು, ಸಂಪಾಜೆ, ಕಡಮಕಲ್ಲು, ಸುಬ್ರಹ್ಮಣ್ಯ, ಪೆರಾಜೆ, ಅಮರಸುಳ್ಯ, ಚೊಕ್ಕಾಡಿ ಈ ಪ್ರದೇಶಗಳಲ್ಲಿ ಈಗಲೂ ಕಂಡುಬರುವದು. ಹೀಗೆ ಬಂದು ನೆಲೆಗೊಂಡ ಗೌಡುಗಳು ಕಾಲಕ್ರಮೇಣ ಆಸ್ತಿಪಾಸ್ತಿಗಳನ್ನು ಮಾಡಿ ಕೆಲವು ಕಾಲದಲ್ಲಿಯೇ ವೃದ್ಧಿಹೊಂದಿದ್ದರು. ಈಗ ಸುಮಾರು 20 ವರ್ಷದ ವರೆಗೂ ಪುತ್ತೂರಿನಿಂದ ಪೂರ್ವದಿಕ್ಕಿನ ಭೂಮಿ ತೋಟವೆಲ್ಲಾ ಹೆಚ್ಚುಕಮ್ಮಿ ಗೌಡುಗಳ ಸ್ವಾಧೀನದಲ್ಲಿದ್ದವು.

ತಮ್ಮ ಮೊದಲಿನ ದೇಶವಾದ ವಿಜಯನಗರ ದೇಶವನ್ನು ಬಿಟ್ಟು ಬಂದಾಗ ಕೆಲವು ಗೌಡುಗಳು ಅಲ್ಲಿಯೇ ಉಳಿದುಕೊಂಡರು. ಹಾಗೆ ಹಿಂದೆ ಉಳಿದುಕೊಂಡವರು ಈಗಿನ ಧಾರವಾಡ, ಪೂನಾ ಮೊದಲಾದ ಬೊಂಬಾಯಿ ಸಂಸ್ಥಾನಕ್ಕೆ ಒಳಪಟ್ಟ ಪ್ರಾಂತ್ಯಗಳಲ್ಲಿರುವರು. ಅವರೂ ಸಹ ಗೌಡರೆಂಬ ಹೆಸರಿನಿಂದಲೇ ಈಗಲೂ ಕರೆಯಲ್ಪಡುವರು. ಅವರ ಭಾಷೆಯು ಈಗಲೂ ಕನ್ನಡ. ನಡೆನುಡಿ ಪದ್ಧತಿ ಮೊದಲಾದವೆಲ್ಲವೂ ಇಲ್ಲಿಯ ಗೌಡುಗಳ ನಡತೆ ಪದ್ಧತಿಗಳನ್ನೇ ಹೋಲುವುವು. ಅವರ ನಾಮಕರಣಗಳನ್ನು ಸ್ವಲ್ಪ ವಿಚಾರಿಸಿ ನೋಡಿದರೆ, ಈಗ ಸುಮಾರು 400 ವರ್ಷ ಕಾಲಗಳಿಂದ ಬೇರೆಯಾಗಿದ್ದರೂ ನಮಗೂ ಅವರಿಗೂ ಎಳ್ಳಷ್ಟು ಅಂತರವು ಇಲ್ಲವೆಂದು ಕಂಡುಬರುವುದು. ಅವರ ಸ್ತ್ರೀ ಹೆಂಗಸರು, ನೀಲಮ್ಮ, ಸಣ್ಣಕ್ಕ, ತಂಗಮ್ಮ, ಕಾಳಮ್ಮ, ಗೌರಿ ಎಂಬ ಹೆಸರುಗಳಿಂದ ಕರೆಯಲ್ಪಡುವರು. ಗಂಡಸರು ಮಲ್ಲಣ್ಣ, ಸಣ್ಣಣ್ಣ, ಮುತ್ತಣ್ಣ, ಲಿಂಗಣ್ಣ, ಸಣ್ಣಯ್ಯ, ರಾಮಣ್ಣ ಎಂಬ ಹೆಸರುಗಳಿಂದ ಕರೆಯಲ್ಪಡುವರು. ಇವರು ಈಗ ಭೂಮಿ ಕಾಣಿಗಳನ್ನು ಹೊಂದಿ ದೊಡ್ಡ ಸಮಷ್ಟಿ ಕುಟುಂಬಗಳಲ್ಲಿ ಜೀವನ ಮಾಡುತ್ತಿರುವರು.

ದಕ್ಷಿಣಕ್ಕೆ ಬಂದ ಗೌಡುಗಳು ಆಗಿನ ಕೊಡಗು ಜಿಲ್ಲೆಯಲ್ಲಿ ನೆಲೆಗೊಂಡರೆಂದೂ, ಆಗಿನ ಕೊಡಗು ಜಿಲ್ಲೆಯು ಬಂಟ್ವಾಳದ ವರೆಗೂ ವಿಸ್ತರಿಸಿತ್ತೆಂದೂ ಮೇಲೆ ಹೇಳಿದೆನು. ಆದರೆ 18ನೆಯ ಶತಮಾನದ ಮಧ್ಯದಲ್ಲಿ ಕೊಡಗು ದೇಶದ ಕೆಲವು ಭಾಗವು ದಕ್ಷಿಣಕನ್ನಡ ಜಿಲ್ಲೆಯು ಅಧೀನವಾಗಿದ್ದ ಬಿದನೂರ (?) ಕ್ಕೆ ಸೇರಿತು. ಆದುದರಿಂದ ಗೌಡಗಳ ಜನಾಂಗದವರು ಎರಡು ಪಾಲಾದರು. ಅಂದಿನಿಂದ ಅವರ ಅನ್ಯೋನ್ಯತೆಗೆ ಸ್ವಲ್ಪ ಕುಂದುಕ ಉಂಟಾಯಿತು. ಹಾಗೆ ಬಿದನೂರ (?) ಕ್ಕೆ ಸೇರಿದಭಾಗಗಳ ಸ್ಥಿತಿ ಈಗಿನ ಚೆಂಬು ಪೆರಾಜೆ ಸಂಪಾಜೆ ಸಹ ಕೂಡಿಹೋಗಿತ್ತು. ಆದರೂ ಈ ಜನಾಂಗವು ಆಡಳಿತದ ಮಟ್ಟಿಗೆ ಮಾತ್ರ ವಿಂಗಡವಾದದ್ದಲ್ಲದೆ ಬೇರೆ ಎಲ್ಲಾ ವಿಷಯದಲ್ಲಿಯೂ ಒಗ್ಗಟ್ಟಿನಲ್ಲಿಯೇ ಇದ್ದರು. ಅವರ ತಮ್ಮೊಳಗಿನ ಸಂಬಂಧ ಕೂಡಾಟ ಎಲ್ಲವೂ ಸರಾಗವಾಗಿ ನಡೆಯುತ್ತಾ ಬಂದಿತು. **ಹೀಗೆ ಒಂದಾವರ್ತಿ ವಿಂಗಡವಾದದ್ದಲ್ಲದೆ 19ನೇಯ ಶತಮಾನದ ಪ್ರಾರಂಭದಲ್ಲಿ ಸಂಪಾಜೆ ಚೆಂಬು ಪೆರಾಜೆಯು ಪುನಃ ಕೊಡಗಿಗೆ ಸೇರಿತು.** ಆ ಕಾಲದಿಂದ ಹೆಚ್ಚಿನ ಬದಲಾವಣೆಗಳೇನೂ ಆಗಲಿಲ್ಲ. ಆದರೆ 183[illegible]ರ ನಂತರ ಈ ಎರಡು ಜಿಲ್ಲೆಗಳೂ ಬ್ರಿಟಿಷರ ಕೈಗೆ ಸೇರಿದರೂ ಸಹ ಗೌಡುಗಳಿಗೆ ಏನೂ ಪ್ರಯೋಜನವಾಗಲಿಲ್ಲ. ಕೊಡಗು ದೇಶವನ್ನು ಪ್ರತ್ಯೇಕ ಪ್ರಾಂತ್ಯವಾಗಿ ಇಟ್ಟದ್ದೇ ಗೌಡುಗಳ ಕುಂದಕಕ್ಕೆ ಕಾರಣ.

ಗೌಡುಗಳು ದಕ್ಷಿಣದೇಶಕ್ಕೆ ಬಂದು ಈಗ ಸುಮಾರು 350 ವರ್ಷಗಳಿಗಿಂತ ಹೆಚ್ಚಾದರೂ ಅವರ ಪೂರ್ವದ ಸ್ಥಿತಿಗೂ ಈಗಿನ ಸ್ಥಿತಿಗೂ ಹೆಚ್ಚಿನ ವ್ಯತ್ಯಾಸ ಕಂಡುಬರುವುದಿಲ್ಲ. ಇವರು ಆಕ್ರಮಿಸಿಕೊಂಡ ಹೆಚ್ಚುಭಾಗವು ಹಳ್ಳಿಯ ಕಾಡು ಪ್ರದೇಶವಾದ್ದರಿಂದಲೂ, ಪಟ್ಟಣ ದೂರವಾದ್ದರಿಂದಲೂ ಇವರಿಗೆ ವಿದ್ಯಾಭ್ಯಾಸದ ಅನುಕೂಲತೆಯು ಕಮ್ಮಿಯಾಗಲು ಕಾರಣವಾಯಿತು. ಇವರ ಭಾಷೆಯು ಹೆಚ್ಚುಕಮ್ಮಿ ಹಾಗಾಗಿಯೇ ಶುದ್ಧವಾಗಿ ಉಳಿದಿದೆ. ಆದರೆ ಕೆಲವು ಗೌಡುಗಳು ದಕ್ಷಿಣಕನ್ನಡಜಿಲ್ಲೆಯ (ಈಗಿನ ದಕ್ಷಿಣಕನ್ನಡ) ಮಧ್ಯಭಾಗದಲ್ಲಿ ಪೂರಾ ತುಳು ಬಾಷೆ ಮಾತನಾಡುವವರ ನಡುವೆ ಇದ್ದುದರಿಂದ ತುಳು ಭಾಷೆಯನ್ನು ಕಲಿತುಕೊಂಡರು. ಆದರೆ ಇವರ ಸಂಖ್ಯೆಯು ಬಹು ಕಮ್ಮಿ. ಅದರಂತೆಯೇ ಕೆಲವು ಕುಟುಂಬಗಳು ಈಗಲೂ ದೇಶದ ಮನೆಯಲ್ಲಿಯೂ ಕೊಡಗು ಭಾಷೆಯನ್ನು ಉಪಯೋಗಿಸುತ್ತಿರುವರು. ಆದರೆ ಗೌಡುಗಳು ಪ್ರಾಬಲ್ಯರಾಗಿರುವ ಪಾಣಿಸಾಮ್ರನಾಡು, ಸಂಪಾಜೆ, ಸುಳ್ಯ, ಚೊಕ್ಕಾಡಿ, ಪಂಜ, ಕಡಮಕಲ್ಲು, ಸುಬ್ರಹ್ಮಣ್ಯ, ಈ ಕಡೆಗಳಲ್ಲಿ ಗೌಡುಗಳು ತಮ್ಮ ಪೂರ್ವದ ಬಾಷೆಯಾದ ಹಳೆಗನ್ನಡವನ್ನು ವಿನಾ ಬೇರೆ ಭಾಷೆಯನ್ನು ಉಪಯೋಗಿಸುವದಿಲ್ಲ.

ಗೌಡುಗಳು ಆರ್ಯರ ಇತರ ಪಂಗಡದವರಂತೆ ಅನಾದಿಯಿಂದಲೂ ಸಮಷ್ಟಿ ಕುಟುಂಬಗಳಲ್ಲಿ ಜೀವಿಸುತ್ತಿದ್ದರು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೆಲವು ಕುಟುಂಬಗಳಲ್ಲಿ ನೂರಕ್ಕಿಂತ ಮೇಲ್ಪಟ್ಟು ಜನರು ಒಂದೇ ಕುಟುಂಬದಲ್ಲಿ ಒಟ್ಟಿಗೆ ಊಟ ಉಪಚಾರಗಳನ್ನು ಮಾಡುತ್ತಾ ಜೀವನ ನಡೆಸುತ್ತಿರುವರು. ಕೊಡಗಿನಲ್ಲಿ ಮಾತ್ರ ಅಂತಹ ಕುಟುಂಬಗಳೆಲ್ಲಾ ಒಡೆದು ಪಾಲಾಗಿ ಹೋಗಿರುವವು. ಗೌಡುಗಳು ಆದಿಯಿಂದಲೂ ಬೇಸಾಯಗಾರರು. ಪ್ರತಿ ಒಬ್ಬನಿಗೂ ಸ್ವಂತಆಸ್ತಿ ಮನೆ ಇಲ್ಲದೆ ಇರಲಿಲ್ಲ. ಆದುದರಿಂದಲೇ ದಕ್ಷಿಣಕ್ಕೆ ಬಂದಾಗಲೂ ಸಹ ಇವರು ಬಹು ಬೇಗನೆ ತಮಗೆ ಬೇಕಷ್ಟು ಆಸ್ತಿಯನ್ನು ಮಾಡಿ ನೆಲೆಗೊಂಡರು. ಆದರೆ ಇವರು ಪೂರ್ವದಲ್ಲಿದ್ದ ಸ್ಥಳದಂತೆ ಹೆಚ್ಚು ವಿಸ್ತಾರವಾದ ಭೂಮಿಯನ್ನು ಮಾಡಲು ದಕ್ಷಿಣದಲ್ಲಿ ಸಾಧ್ಯವಾಗಲಿಲ್ಲ. ಆದರೂ ಇವರು ಬೇಸಾಯ ಒಂದಲ್ಲದೆ ಬೇರೆ ಯಾವ ಕಸುಬಿಗೂ ಸಹ ಕೈ ಇಡಲಿಲ್ಲ.

ಇತರ ಬೇಸಾಯಗಾರ ಜನಾಂಗದವರಂತೆ ಗೌಡುಗಳು ಸಹ ಅತಿ ಸಾಧುಜನರು, ಸತ್ಯವಂತರು. ಕೊಟ್ಟ ಭಾಷೆಯನ್ನು ತಪ್ಪುವದೆಂದರೆ ಇವರಿಗೆ ತಿಳಿಯದು. ತಿಳಿಯದೆ ಮಾತುಕೊಟ್ಟು ಆ ಮೇಲೆ ಹಿಂತೆಗೆಯಲು ಮನಸು ಬಾರದೆ ಅನೇಕ ಗೌಡುಗಳು ಮನೆಯನ್ನು ಕಳಕೊಂಡದ್ದುಂಟು. ಇಂತಹ ನಡತೆಯಿಂದ ಬರಬರುತ್ತಾ ಗೌಡನೆಂದರೆ ಬಹು ಪೆದ್ದನೆಂಬುದು ಒಂದು ಗಾದೆಯಾಯಿತು. ಈಗಲೂ ಸಹ ಒಬ್ಬ ಪೆದ್ದ ಮನುಷ್ಯನನ್ನು ಕಂಡರೆ, ಅವನೊಬ್ಬ ಗೌಡನೆಂದು ಹೇಳುವ ವಾಡಿಕೆಯುಂಟು. ಆದರೆ ಇವರು ಬೇಸಾಯದಲ್ಲಿಯೇ ನಿರತರಾಗಿ ಬೇರೆಯಾವ ವೃತ್ತಿಗೂ ಕೈ ಹಾಕದೆ ಇದ್ದದರಿಂದ ಇವರಲ್ಲಿ ಎಳ್ಳಷ್ಟಾದರೂ ತಾರತಮ್ಯಗಳು ಹುಟ್ಟಲಿಲ್ಲ. ಎಲ್ಲಾ ಗೌಡುಗಳೂ ಹೆಚ್ಚುಕಡಿಮೆ ಒಂದೇತರದ ಪದ್ಧತಿಯನ್ನೂ ಆಚಾರವನ್ನೂ ನಡೆಸುತ್ತಾ ಬರುತ್ತಿರುವರು. ಹೀಗೆ ಪದ್ಧತಿಗಳೆಲ್ಲಾ ಸರಾಗವಾಗಿ ನಡೆಯುತ್ತಾ ಬರುತ್ತಿದ್ದುದರಿಂದಲೂ ಮತ್ತು ಯಾರಿಗೂ ವಿದ್ಯೆಯಲ್ಲಿ ರುಚಿ ಹುಟ್ಟದ್ದರಿಂದಲೂ, ಇವರಿಗೆ ಒಕ್ಕಟ್ಟಿನ ಪ್ರಯೋಜನವೂ ಅದರ ಆವಶ್ಯಕತೆಯೂ ತಿಳಿದಿರುವುದಿಲ್ಲ. ಆದರೆ ಇವರಲ್ಲಿ ಯಾರೊಬ್ಬರೂ ಒಂದು ಜನಾಂಗದವರು, ತಾವು ಸಹ ಒಕ್ಕಟ್ಟಿನಿಂದ ಕೆಲಸಮಾಡಬೇಕೆಂಬ ಆಲೋಚನೆಯು ಹುಟ್ಟಲಿಲ್ಲ. ಮತ್ತು ಇದರ ಆಲೋಚನೆಗೆ ಯಾವ ಸಂದರ್ಭವೂ ಸಿಕ್ಕಲಿಲ್ಲ. ಈಗ ಕೆಲವು ಕಾಲಗಳಿಂದ ಕೊಡಗಿನಲ್ಲಿಯೂ ಮತ್ತು ಕನ್ನಡಜಿಲ್ಲೆಯಲ್ಲಿಯೂ ನಡೆದ ವಿದ್ಯಾವರ್ಧಕ ಸಂಘಗಳು ಇವರ ಒಕ್ಕಟ್ಟನ್ನು ಸೂಚಿಸುತ್ತವೆಂದು ತಿಳಿದುಕೊಳ್ಳಲಾಗುವುದಿಲ್ಲ. ಇದು ಬೇರೆ ಜನರನ್ನು ಹಿಂಬಾಲಿಸಿ ಮಾಡಿದ ಕಾರ್ಯಗಳೇ ವಿನಹ ತಾವು ನಿದ್ರೆಯಿಂದ ಎಚ್ಚತ್ತು ಮಾಡಿದ ಕಾರ್ಯಗಳೆಂದು ಹೇಳಕೂಡದು. ಒಕ್ಕಟ್ಟಿನ ವೈರಿಗಳಾದ ಅಭಿಮಾನ, ನಾಚಿಕೆ, ಗರ್ವ, ತಾವು ಹಿಂದುಳಿಯುವ ಭಯ, ತಮ್ಮನ್ನು ಕಾಪಾಡಿಕೊಳ್ಳುವ ಮಾರ್ಗ, ಯೌವನಸ್ಥರನ್ನು [illegible] ಇವೆಲ್ಲಾ ಯಾವ ಜನಾಂಗದವರಲ್ಲಿ ಕಂಡು ಬರುವದಿಲ್ಲವೋ ಅಷ್ಟರವರೆಗೂ ಅಂತಹ ಜನಾಂಗವು ಒಕ್ಕಟ್ಟಿನಲ್ಲಿದೆ ಎಂದು ಹೇಳಲಾಗದು.

ಎನ್. ಮುದ್ದಪ್ಪ.

(ಮುಂದುವರಿಯುವುದು).

ಹುಬ್ಬಳ್ಳಿಯಲ್ಲಿ ತಾ. 10-10-24ನೆಯ ದಿವಸ ಕೂಡಿದ ಕರ್ನಾಟಕ ಪ್ರಾಂತಿಕ

ಭಗಿನೀ ಮಂಡಳದ ಸಭೆಯವರು ಮಾಡಿದ ಠರಾವುಗಳು.

1ನೇ ಠರಾವು—ಬೆಳಗಾವಿಯಲ್ಲಿ ಕೂಡುವ ಕಾಂಗ್ರೆಸ ಸಭೆಯ ಕಾಲದಲ್ಲಿ ಕರ್ನಾಟಕ ಪ್ರಾಂತಿಕ ಭಗಿನೀ ಪರಿಷತ್ತನ್ನು ನೆರೆಯಿಸಬೇಕು ಮತ್ತು ಅದರ ಕಾರ್ಯಕಾರೀ ಮಂಡಳವು ಹೀಗೆ ಇರುವದು—ಅಂದರೆ ಕರ್ನಾಟಕ ಪ್ರಾಂತಿಕ ಭಗಿನೀ ಮಂಡಳದ ಕಾರ್ಯಕಾರೀ ಸಮಿತಿಯೇ ಇರಲಿ.—

ಸ್ವಾಗತಾಧ್ಯಕ್ಷೆ — ಸೌ ಉಮಾಬಾಯಿ ಜೋಶಿ.

ಕಾರ್ಯದರ್ಶಿಗಳು,—ಸೌ. ರಂಬಾಬಾಯಿ ಮುಜುಮದಾರ

ಸೌ ಕೃಷ್ಣಬಾಯಿ ಕುಲಕರ್ಣಿ

2ನೇ ಠರಾವು—ಮಹಾರಾಷ್ಟ್ರೀಯ ಪರಿಷತ್ತಿಗೆ ಹೋಗುವ ಪ್ರತಿನಿಧಿಗಳ [illegible] ಭಗಿನೀಮಂಡಳದವರು ಮಾಡಬೇಕು, ಮತ್ತು ಪರಿಷತ್ತಿನ [illegible] ಪ್ರಾಂತೀಕ ಭಗಿನೀಮಂಡಳಕ್ಕೆ ಸಾದರಪಡಿಸಬೇಕು. ಈ ಠರಾವನ್ನು ಕಾರ್ಯದರ್ಶಿಗಳು ಬೆಳಗಾವಿಯ ಭಗಿನೀ ಮಂಡಳಕ್ಕೆ ತಿಳಿಸಬೇಕು.

3ನೇ ಠರಾವು—ಈ ಪರಿಷತ್ತಿನ ಅಧ್ಯಕ್ಷ ಸ್ಥಾನವನ್ನು ಇದೇ ಪ್ರಾಂತದೊಳಗಿನ ಒಬ್ಬ [illegible] ಕೊಡತಕ್ಕದ್ದು. ಅದು ಸಾಧ್ಯವಾಗದೆ ಇದ್ದ ಪಕ್ಷದಲ್ಲಿ ಶ್ರೀಮತಿ ಸರೋಜಿನಿನಾಯಡು ಇವರಿಗೆ ಕೊಡಬೇಕು. ಮತ್ತು ಈ ಸಂಬಂಧದಿಂದ ಅವರೊಡನೆ ಪತ್ರವ್ಯವಹಾರವನ್ನು ನಡಿಸಬೇಕು.

4ನೇ ಠರಾವು—ಪರಿಷತ್ತಿನ ತಾರೀಕು ಮುಂತಾದ ಕಿರುಕುಳ ಸಂಗತಿಗಳನ್ನು ನಿರ್ಣಯಿಸುವ ಅಧಿಕಾರವನ್ನು ಈ ಸಭೆಯು ಮೇಲ್ಮಾಣಿಸಿದ ಕಾರ್ಯಕಾರೀ ಮಂಡಳಕ್ಕೆ ಕೊಡುತ್ತದೆ.

5ನೇ ಠರಾವು—ಕಾಂಗ್ರೆಸಿಗೆ ಸ್ವಯಂ ಸೇವಿಕೆಯರಾಗಿ ಬರುವವರೆಲ್ಲರೂ ಪ್ರತಿನಿಧಿಗಳೆಂದು ಎಣಿಸಲ್ಪಡುವರು. ಪರಿಷತ್ತಿಗೆ ಪ್ರತಿ ಒಬ್ಬ ಪ್ರತಿನಿಧಿಯು 3 ಆಣೆ ಫೀಯನ್ನು ಕೊಡತಕ್ಕದ್ದು ಮತ್ತು ಪ್ರೇಕ್ಷಕಿಯರು ಪ್ರತಿ ಒಬ್ಬರು 1 ರೂಪಾಯಿ ಫೀ ಕೊಡತಕ್ಕದ್ದು.

6ನೇ ಠರಾವು—ಕಾಂಗ್ರೆಸ್ಸಿನ ವೇಳೆಯಲ್ಲಿಯೇ ಅಖಿಲ ಭಾರತೀಯ ಮಹಿಳಾ ಪರಿಷತ್ತನ್ನು ಕರ್ನಾಟಕ ಪ್ರಾಂತೀಕ ಭಗಿನೀ ಮಂಡಳದವರು ನೆರೆಯಿಸಬೇಕು ಮತ್ತು ಆ ಪರಿಷತ್ತಿನ ಸಂಬಂಧದ ಕೆಲಸವನ್ನು ಶ್ರೀಮತಿ ಜಾನಕೀಬಾಯಿ ಭಾತಖಂಡೆ, ಮತ್ತು ಸೌ. ಶಾಂತಾಬಾಯಿ ಜೋಶಿ ಇವರು ಈಗಿನಿಂದಲೇ ಪ್ರಾರಂಭಿಸತಕ್ಕದ್ದು.

7ನೇ ಠರಾವು—ಅಖಿಲ ಭಾರತೀಯ ಮಹಿಳಾ ಪರಿಷತ್ತಿನ ಅಧ್ಯಕ್ಷಸ್ಥಾನವನ್ನು ಶ್ರೀಮತಿ ಸೌ. ಕಸ್ತೂರಿಬಾಯಿ ಗಾಂಧಿಯವರು ಸ್ವೀಕರಿಸುವ ಬಗ್ಗೆ ಅವರೊಡನೆ ಪತ್ರವ್ಯವಹಾರವನ್ನು ಪ್ರಾರಂಭಿಸತಕ್ಕದ್ದು.

8ನೇ ಠರಾವು—ಕಾಂಗ್ರೆಸ್ಸಿನ ಕಾಲದಲ್ಲಿ ಕೆಲಸಮಾಡುವದಕ್ಕಾಗಿ ಕರ್ನಾಟಕದ ಬೇರೆ ಬೇರೆ ಜಿಲ್ಲೆಗಳೊಳಗಿನ ಭಗಿನೀ ಮಂಡಳದವರು ತಮ್ಮ ತಮ್ಮ ಜಿಲ್ಲೆಯೊಳಗಿಂದ ಕೆಳಗೆ ಬರೆದಷ್ಟು ಸ್ವಯಂ ಸೇವಿಕೆಯರನ್ನು ಕೂಡಿಸತಕ್ಕದ್ದು.

ಜಿ. ಬೆಳಗಾವ—ಬೆಳಗಾವ ಶಹಾಪೂರ, ಗಳಕವಾಡಿ 100 ಅಥಣಿ 20, ಚಿಕ್ಕೋಡಿ 5, ಖಾನಾಪೂರ 2, ಪಾಚ್ಛಾಪೂರ 5.

ಜಿ. ಧಾರವಾಡ—ಧಾರವಾಡ 10, ಹುಬ್ಬಳ್ಳಿ 20, ಗದಗ 2, ಹಾವೇರಿ, ಹಾನಗಲ್ಲ, ಶಿರಹಟ್ಟಿ 8.

ಜಿ. ವಿಜಾಪುರ—21, ಬಾಗಲಕೋಟಿ 5, ಇತರ ತಾಲೋಕುಗಳು 5.

ಜಿ. ದ. ಕನ್ನಡಾ—15, ಜಿ. ಉ. ಕನ್ನಡಾ 15, ಮೈಸೂರ 5, ಬಳ್ಳಾರಿ 5, ಇತರ ಭಾಗಗಳು 30.

ಧಾರವಾಡ, ಜಾನಕೀಬಾಯಿ ಭಾತಖಂಡೆ,

ತಾ. 25-10-24 ಕಾರ್ಯದರ್ಶಿ.

ಜಾಜುಲಿ ಋಷಿ.

ಜಾಜುಲಿ ಋಷಿಯನ್ನು ಕುರಿತ ಕಥೆಯೊಂದು ಮಹಾಭಾರತದಲ್ಲಿದೆ. ಈ ಋಷಿಯು ಬಹಳ ಕಠೋರತರದ ತಪಸ್ಸನ್ನು ಮಾಡಿದಂಥವನು. ನಿರ್ಜೀವ ಕಲ್ಲಿನೋಪಾದಿಯಲ್ಲಿ ಅಚಲನಾಗಿ ಬಹುಕಾಲ ತಪಸ್ಸು ಮಾಡುತ್ತಾ ಈತನು ಕುಳಿತಿರಲು, ತಾಲವನದಂತೆ ಪಕ್ಷಿಪಕ್ಷಿಗಳು ಅವನ ಜಡೆಯಲ್ಲಿ ಗೂಡುಮಾಡಿ ಮೊಟ್ಟೆಗಳನ್ನಿಟ್ಟವು. ಹೀಗೆ ಮೊಟ್ಟೆಗಳಿಂದ ಮರಿಗಳು, ಮರಿಗಳಿಂದ ಮೊಟ್ಟೆಗಳು ಆಗುತ್ತಾ ಅನೇಕ ವರುಷಗಳು ಕಳೆದವು. ಎಷ್ಟೋ ವರ್ಷಗಳನಂತರ ತಪಸ್ಸು ಮುಗಿಯಿತು. ಋಷಿಯು ಕಣ್ಣುಗಳನ್ನು ತೆರೆದನು. ಆವನಿಗೆ ತಕ್ಷಣವೇ ಅಹಂ ಹುಟ್ಟಿತು. "ನಾನು ಈಗ ಮಹಾ ಋಷಿಯಾಗಿದ್ದೇನೆ, ನನ್ನಂತೆ ಇಷ್ಟುಕಾಲ ತಪಸ್ಸು ಮಾಡಿರತಕ್ಕವರು ಕೇವಲ ಕಡಿಮೆ. ಒಂದುವೇಳೆ ಆಧವರು ಇದ್ದಾರೋ ಇಲ್ಲವೋ ಸಂದೇಹವಾಗಿದೆ. ಇದರ ಮೇಲೆ ನಾನು ವೇದ, ಪುರಾಣ, ಶಾಸ್ತ್ರಗಳನ್ನ

ಲ್ಲಿ ಪರಿಸಿ ದೊಡ್ಡ ವಿವೇಕಿಯಾಗಿರುತ್ತೇನೆ. ಮತ್ತು ನನಗೆ ಅನೇಕ ಸಿದ್ಧಿಗಳು ಕೈಗೂಡಿವೆ. ಹಿಮಕಾಲದಲ್ಲಿ ತಣ್ಣೀರಿನಲ್ಲಿ ಸ್ನಾನಮಾಡುತ್ತೇನೆ. ಬೇಸಿಗೆಯಲ್ಲಿ ಎಂಥಾ ಶೆಕೆಯನ್ನಾದರೂ ಸಹಿಸಬಲ್ಲೆನು. ಬಹುಕಾಲ ಸಮಾಧಿಯಲ್ಲಿ ಕೂರುವ ಶಕ್ತಿ ನನಗುಂಟು. ಹೀಗಿರುವಲ್ಲಿ ನಾನು ಋಷಿಗಳ ಸಮೂಹದಲ್ಲಿ ಅಗ್ರಗಣ್ಯನಾಗಿದ್ದೇನಲ್ಲವೇ"? ಎಂದು ಯೋಚಿಸುತ್ತಿದ್ದನು.

ಅಷ್ಟರಲ್ಲಿ ಆಕಾಶವಾಣಿಯಾಯಿತು. "ಹೇ! ಜಾಜುಲಿ! ನೀನು ಮಾಡಿದ ತಪಸ್ಸಿಗಾಗಿ ನಿನಗೆ ಅಹಂಕಾರವು ಹೆಚ್ಚಿಹೋಗಿದೆ. ಇಲ್ಲಿಗೆ ಸಮೀಪದಲ್ಲಿ ತುಲಾಧಾರಿಯೊಬ್ಬನಿರುತ್ತಾನೆ. ಅವನು ಮಹಾ ಜ್ಞಾನಿ, ಧರ್ಮಪರ. ಅವನು ನಿನ್ನಂತೆ ಅಹಂಕಾರಿಯಲ್ಲ. ಧರ್ಮಸೂಕ್ಷ್ಮವನ್ನು ತಿಳಿಯಬೇಕಾದರೆ, ನೀನು ಅವನಲ್ಲಿಗೆ ಹೋಗು. ನೀನು ಇನ್ನು ಜ್ಞಾನಿಯಾಗಿಲ್ಲ".

ಜಾಜುಲಿಯು ಆಕಾಶಕ್ಕೆ ಮುಖತಿರುಗಿಸಿ, ಆ ವಾಣಿಯನ್ನು ಕೇಳುತ್ತಾ ಮಂಕಾದನು. "ಆಗಲಿ ಚಿಂತೆಯಿಲ್ಲ ಸಾಹಸಪಟ್ಟು ಆ ತುಲಾಧಾರಿಯನ್ನು ಕಂಡು ಹಿಡಿದು' ಅವನಲ್ಲಿ ಧರ್ಮವಿಚಾರವಾಗಿ ಪ್ರಸ್ತಾಪಿಸುವೆನು" ಎಂದು ನಿಶ್ಚಯ ಮಾಡಿದನು.

ದಾರಿಯಲ್ಲಿ ಹೋಗುತ್ತಾ ಇದ್ದಹಾಗೆ, ಎದುರು ಸಿಕ್ಕಿದವನಿಂದ ತುಲಾಧಾರಿಯು ಇರುವ ಜಾಗವನ್ನು ಗೊತ್ತುಮಾಡಿಕೊಂಡನು. ಊರಿನೊಳಕ್ಕೆ ನುಗ್ಗಿ, ಸಂತೆಗೆ ಹೋದನು. "ಓಹೋ! ಅಗೋ! ನನಗೆ ಬೇಕಾದ ತುಲಾಧಾರಿಯು ಅಲ್ಲಿ ಅಂಗಡಿಯಮೇಲೆ ಕುಳಿತುಕೊಂಡಿದ್ದಾನೆ. ಸರಿ. ಅವನಲ್ಲಿಗೆ ಈಗಲೇ ಹೋಗುವೆನು" ಎಂದು ಯೋಚಿಸಿ, ಮುಂದರಿದು ಅಂಗಡಿಯ ಸಮೀಪಕ್ಕೆ ಹೋದನು.

ಜಾಜುಲಿ ಋಷಿಯು ಅಂಗಡಿಯ ಸಮೀಪಕ್ಕೆ ಬಂದ ಕೂಡಲೆ ತುಲಾಧಾರಿಯು ಬೇಗನೆ ಎದ್ದು ನಿಂತು ಸಾಷ್ಟಾಂಗ ನಮಸ್ಕಾರ ಮಾಡಿ "ಸ್ವಾಮಿ ತಾವು ಯತಿಗಳು. ನಾನೋರ್ವ ಅಲ್ಪ ವ್ಯಾಪಾರಿ, ಉಪ್ಪು ಮೆಣಸು ಮಾರತಕ್ಕವನು, ತಮ್ಮ ದರ್ಶನದಿಂದ ನಾನುಧನ್ಯನಾದೆನು. ತಾವು ದೊಡ್ಡ ಮುನಿಗಳಾಗಿರುತ್ತೀರಿ. ತಮ್ಮ ತಲೆಯ ಜಡೆಯಲ್ಲಿ ಪಕ್ಷಿ ಗೂಡುಗಳಿರುವದನ್ನು ನೋಡಿದರೆ, ತಾವು ಬಹುಕಾಲ ತಪಸ್ಸು ಮಾಡಿದವರಂತೆ ಸಂಬುತ್ತೇನೆ. ಆಗಲಿ. ತಾವು ಇಲ್ಲಿಗೆ ದಯಮಾಡಿಸಿದ್ದು ಯಾವ ನಿಮಿತ್ತ?" ಎಂದು ಕೇಳಿದನು.

ಜಾಜುಲಿ—"ನಿನ್ನಿಂದ ಧರ್ಮಸೂಕ್ಷ್ಮವನ್ನು ತಿಳಿದುಕೊಳ್ಳಲಿಕ್ಕೆ ಬಂದೆನು."

ತುಲಾಧಾರಿ—"ಹೇ! ಮಹಾನ್! ಧರ್ಮದ ರೀತಿಯು ಸೂಕ್ಷ್ಮವಾದದ್ದು. 'ಧರ್ಮಸ್ಯ ತ್ವರಿತಗತಿ' ಎಂದು ಶಾಸ್ತ್ರಗಳು ಉದ್ಘೋಷಿಸುತ್ತವೆ. ಬಾಹ್ಯಾಡಂಭರಕ್ಕೂ ಧರ್ಮ ವಿಚಾರಕ್ಕೂ ಯಾವ ಸಂಬಂಧವು ಇಲ್ಲ. ಮನಸ್ಸನ್ನು ಸಂಯಮ ಮಾಡತಕ್ಕದ್ದು ಮೊದಲನೇ ಕೆಲಸ. ನಾನು ಯಾವ ತೀರ್ಥಯಾತ್ರೆಯನ್ನು ಮಾಡಿದವನಲ್ಲ ಮತ್ತು ವಿದ್ಯಾವಂತನೂ ಅಲ್ಲ; ತಪಸ್ವಿಯೂ ಅಲ್ಲ. ಆದರೆ ಹಗಲೂ ರಾತ್ರಿ ಆ ಪರಮಾತ್ಮನ ಸ್ಮರಣೆಯನ್ನು ತಪ್ಪದೆ ಮಾಡುತ್ತೇನೆ. ಎಲ್ಲರನ್ನೂ ಸಮದೃಷ್ಟಿಯಿಂದ ನೋಡುತ್ತೇನೆ. ತಾಯಿ ತಂದೆಗಳ ಸೇವೆಯನ್ನು ಮನಃಪೂರ್ವಕವಾಗಿ ಮಾಡುತ್ತೇನೆ. ಯಾರ ವಿಷಯದಲ್ಲಿಯೂ ನಾನು ಕೆಡಕನ್ನು ಎಣಿಸಲಾರೆ. ಯಾರಿಗೂ ಮೋಸಮಾಡಿದವನೂ ಅಲ್ಲ. ಎಲ್ಲರ ಸಲು ಸಂತೋಷಗಳನ್ನು ಸದಾ ಹಾರೈಸುತ್ತೇನೆ ಸಾಧು ಸಜ್ಜನರ ಮತ್ತು ಹರಿಭಕ್ತರ ಸೇವೆಯನ್ನು ವಿನಯತೆಯಿಂದ ನಡೆಸಿ ಅವರ ಬೋಧನೆಯನ್ನು ಪಡೆಯುವದರಲ್ಲಿ ನನಗೆ ಆಸಕ್ತಿ ಹೆಚ್ಚು. ನನ್ನ ಜೀವನವು ಹೀಗಿರುತ್ತೆ".

ಜಾಜುಲಿ—"ನಿನ್ನ ಮಾತಿನಿಂದ ನನಗೆ ಆಶ್ಚರ್ಯವಾಗುತ್ತದೆ. ನೀನು ಸದಾ ಸರ್ವದಾ ಅಂಗಡಿಯಲ್ಲಿ ಕುಳಿತು ಸಾಮಾನುಗಳನ್ನು ಮಾರುತ್ತಿರಬೇಕಾಗುವಾಗ ಆ ಪರಮಾತ್ಮನ ಧ್ಯಾನವು ನಿನ್ನಿಂದ ಹೇಗಾದೀತು? ನಾನು ಸನ್ಯಾಸಿಯಾಗಿದ್ದು, ಅರಣ್ಯದಲ್ಲಿ ತಪಸ್ಸುಮಾಡಿಯೂ, ಆ ಪರಮಾತ್ಮನ ಕೃಪೆಯು ನನಗೆ ದೊರೆಯಲಿಲ್ಲ. ಒಂದೇ ತರವೇ ಹೇ! ಭಗವಂತ, ಹೇ! ಪರಮಾತ್ಮ! ಎಂದರೆ, ನಿನಗೆ ಅವನ ಪ್ರೇಮವು ಪ್ರಾಪ್ತವಾಗುವಷ್ಟು ಸಾಧ್ಯವಿದೆಯೇ?

ತುಲಾಧಾರಿ—"ಇದು ಸಹಜ. ನಾನು ಸಂಸಾರಿ, ವ್ಯಾಪಾರ ಮಾಡುತ್ತಲೂ, ಅವನನ್ನು ಧ್ಯಾನಮಾಡುತ್ತೇನೆ. ಅವನ ಮೇಲೆ ಭಕ್ತಿಯು ನಿಷ್ಕಪಟ ವಿಶಾಲವಾಗಿದೆ. ಯಾವನ ಮನಸ್ಸು ಈರ್ಷ್ಯೆ ಅಹಂಕಾರಾದಿಗಳಿಂದ ಕೂಡಿದೆಯೋ, ಅಂಥವನಿಗೆ ಪರಮಾತ್ಮನು ದೂರದಲ್ಲಿರುತ್ತಾನೆ. ನಾನು ಕೂತಲ್ಲಿಯೇ ಆ ಪರಮಾತ್ಮನ ದರುಶನ ಮಾಡುತ್ತೇನೆ. ನನಗೆ ಕಾಣುವದೆಲ್ಲಾ ಆ ಪರಮಾತ್ಮನೇ ಆಗಿರುತ್ತಾನೆ. ಜಾತಿ ಭೇದವನ್ನೇ ನಾನು ಮರೆತಿದ್ದೇನೆ. ಧನಾಶೆಯನ್ನು ತ್ಯಾಜ್ಯಮಾಡಿರುತ್ತೇನೆ. ಉಚ್ಚ ನೀಚ ವಿಚಾರವೇ ನನ್ನಲ್ಲಿಲ್ಲ. ಪರಮಾತ್ಮನು ಎಲ್ಲವರಲ್ಲಿಯೂ ವಾಸವಾಗಿಯೂ, ಯಾವ ಪದಾರ್ಥ ತುಚ್ಛವಲ್ಲವು. ನನಗೆ ಸಿಟ್ಟು ಕೋಪ ಇತ್ಯಾದಿ ದುರ್ಗುಣಗಳಿಲ್ಲ. ಶಾಂತಿಯೇ ನನ್ನ ಬೆಂಬಲ. ಇಂಥಾ ನಾನೊಬ್ಬ ಬಡವ್ಯಾಪಾರಿ.

ಜಾಜುಲಿ—"ಹೇ! ಮಿತ್ರ! ಅಹಂಕಾರವೆಂಬ ಶತ್ರುವು ನನ್ನನ್ನು ಈ ರೀತಿ ಮಾಡಿತು. ಬಾಹ್ಯಾಡಂಬರದಲ್ಲಿ ಧರ್ಮ ವಿಚಾರವಿಲ್ಲ. ಅಹಂಕಾರವನ್ನು ಚೂರ್ಣಮಾಡಿ, ಸ್ವಾರ್ಥ ತ್ಯಾಗಿಯಾದನೋಲೆ, ಆ ಪರಮಾತ್ಮನ ಸ್ಮರಣೆಯಲ್ಲಿ ನಿರತನಾಗಿರುವುದೇ ಧರ್ಮ.

ಈಗಲೀಗ ಜಾಜುಲಿ ಋಷಿಗೆ ಧರ್ಮದ ಗುಟ್ಟು ತಿಳಿಯಿತು.

"S."

ಈ ಕಥೆಯು "ಹಿಂದಿ ಪ್ರಚಾರ" ದಿಂದ ತೆಗೆಯಲ್ಪಟ್ಟದ್ದು. ಒಬ್ಬ ಋಷಿಯು ತಪಸ್ಸು ಕೈಗೂಡಿತೆಂದು ಪರೀಕ್ಷೆ ಮಾಡಲು ಕಣ್ಣು ಬಿಡಲಾಗಿ, ಮರದ ಮೇಲಿದ್ದ ಕಾಗೆಯು ಭಸ್ಮವಾಯಿತೆಂದೂ, ನಂತರ ಋಷಿಯು ಭಿಕ್ಷೆಗಾಗಿ ಒಬ್ಬಾನೊಬ್ಬ ಪತಿವ್ರತೆಯ ಮನೆಗೆ ಹೋಗಲು, ಅವಳು ಕಾರ್ಯದ ಭರದಿಂದ ಹೊರಕ್ಕೆ ಬರಲು ತಡವಾದಾಗ, ಆ ಋಷಿಯು ಕಣ್ಣು ಕೆರಳಿಸಿದ್ದನ್ನು ಪತಿವ್ರತೆಯು ನೋಡಿ, ನಾನು ಕಾಗೆಯಲ್ಲ ಎಂದು ಅವಳು ಹೇಳಿ ಧರ್ಮವ್ಯಾಧನಲ್ಲಿಗೆ ಹೋಗಿ ಧರ್ಮದ ಗುಟ್ಟನ್ನು ತಿಳಿ ಎಂದು ಅವನಿಗೆ ಬುದ್ಧಿ ಹೇಳಿದಳೆಂದೂ, ಹಾಗೆಯೇ ಋಷಿಯು ಮಾಡಿದನೆಂದೂ ಮತ್ತೊಂದು ಕಥೆಯು ಇದೆ.

ಪತ್ರವ್ಯವಹಾರಗಳು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾ ಕರ್ತರು ಉತ್ತರವಾದಿಗಳಲ್ಲ ಸಂ.

ಮೂರ್ನಾಡು ಸಹಕಾರಿ ಸಂಘಗಳ ಕಾನ್ ಫರೆನ್ಸ್.

ಮಹನೀಯರೆ,

ಕಳೆದ ತಾ 9-10-24ರಲ್ಲಿ ಮೂರ್ನಾಡಿನಲ್ಲಿ ಸಹಕಾರ ಸಂಘಗಳ ಪ್ರತಿನಿಧಿಗಳ ಕಾನ್ ಫರೆನ್ಸ್ ಒಂದು ನಡೆಯಿತು. ಮೆಂಬರುಗಳು 150ಕ್ಕಿಂತ ಹೆಚ್ಚಾಗಿದ್ದರು. ಮೆ. ಸಿ. ಎಸ್. ವೆಂಕಪ್ಪಯ್ಯ, ಎಂ. ಎಲ್. ಸಿ. ಯವರು ಅಧ್ಯಕ್ಷರಾಗಿದ್ದರು.

ಅಧ್ಯಕ್ಷರು ಪ್ರಥಮಭಾಷಣ ಮಾಡಿದನಂತರ, ಗೌರವ ಪ್ರಚಾರಕರಾದ ಕೆ. ಪಿ. ಚಿಣ್ಣಪ್ಪನವರು ಸಹಕಾರದ ಉದ್ದೇಶಗಳನ್ನೂ, ಸಹಕಾರದ ನೀತಿಯನ್ನೂ, ಸಹಕಾರ ತತ್ವಗಳನ್ನೂ ಅಮೂಲಾಗ್ರವಾಗಿ ವಿವರಿಸಿದರು.

ಇದೇ ವಿಷಯ, ಉತ್ತರಕೊಡಗಿನ ಗೌರವ ಪ್ರಚಾರಕರಾದ ಯಂ.ಯಂ ಬೆಳ್ಯಪ್ಪನವರು, ಚಂಗಂಡ ಕುಟ್ಟಪ್ಪನವರು, ಮಡೆಯಂಡ ದೇವಯ್ಯನವರು, ಉದಿಯಂಡ ಪೂವಯ್ಯನವರೂ, ಕಲಿಯಂಡ ಸೋಮಯ್ಯನವರೂ ಮಾತಾಡಿದರು.

ರಿಜಿಸ್ಟ್ರಾರವರು ಸಹಕಾರದ ವಿಷಯ, ಮತ್ತು ಯೂನಿಯನ್ನಿನ ವಿಷಯ ಬಹಳವಾಗಿ ವಿವರಿಸಿ ಮಾತಾಡಿದರು.

ಪಳಂಗಂಡ ಚಂಗಪ್ಪನವರು ಮೂರ್ನಾಡಿನ ಸಂಘಗಳೆಲ್ಲವೂ ಸೆಂಟ್ರಲ್‌ಬ್ಯಾಂಕಿಗೆ ಸೇರಬೇಕೆಂದೂ, ಕೋ ಆಪರೇಟಿವ್ ಯೂನಿಯನ್ ಮಾಡಬೇಕೆಂದು ಸೂಚಿಸಿದ ಠರಾವನ್ನು, ಮೆ. ನಾಂಗಮಂಡ ಪೊಣ್ಣಪ್ಪನವರು ಅನುಮೋದಿಸಿದರು. ಈ ಠರಾವು ಸರ್ವಸಮ್ಮತದಿಂದ ಮಂಜೂರಾಯಿತು.

ಮೆ. ಅಮ್ಮಟಂಡ ದೇವಯ್ಯನವರು ಬಿಕ್ರಿಮಾಡುವರ ಮೇಲೆ, ಕೋರ್ಟಿನವರು ಮತ್ತು ರಿಜಿಸ್ಟ್ರಾರವರು ತೋರಿಸಿದ ಉದಾಸೀನತೆಯನ್ನು ಕುರಿತು ಮಾತಾಡಿ, ಈ ವಿಷಯದಲ್ಲಿ ಒಬ್ಬರು ಖಾಸಾ ಸಂಘಕ್ಕೆ ಕೊಟ್ಟ ತೊಂದರೆಯನ್ನು ವಿವರಿಸಿದರು.

ಅಧ್ಯಕ್ಷರಾದ ಮೆ. ಸಿ. ಎಸ್. ವೆಂಕಪ್ಪಯ್ಯನವರು ಬಹಳ ಸ್ವಾರಸ್ಯವಾದ ಭಾಷಣೆಯಿಂದ ಸಹಕಾರವು ನಮ್ಮ ದೇಶಕ್ಕೆ ಮಾಡಿದ ಪ್ರಯೋಜನವನ್ನೂ, ಸೆಂಟ್ರಲ್‌ಬ್ಯಾಂಕಿನ ಕೆಲಸಗಳನ್ನೂ ವಿವರಿಸಿ ತಮ್ಮ ಭಾಷಣವನ್ನು ತೀರಿಸಿ ಕಾನ್ ಫರೆನ್ಸನ್ನು ಮುಕ್ತಾಯಮಾಡಿದರು. ಅಧ್ಯಕ್ಷರಿಗೂ, ರಿಜಿಸ್ಟ್ರಾರವರಿಗೂ, ಸಭಿಕರಿಗೂ, ವಂದನೆಗಳನ್ನು ಸಮರ್ಪಿಸಿದನಂತರ ಮೀಟಿಂಗು ಮುಕ್ತಾಯವಾಯ್ತು.

'ಹಾಜರಿದ್ದವ'.

ಜಮೀನ್‌ದಾರರ ಸಂಘದ ಆರ್ಗನೈಜರ ಕೆಲಸ.

ಅಯ್ಯಾ,

ಕೊಡಗು ಜಮೀನ್‌ದಾರರ ಸಂಘದ ಆರ್ಗನೈಜರ್ ಮೆ. ಉದಿಯಂಡ ಪೂವಯ್ಯನವರು ಈ ತಾರೀಕು 18 ರಾಗಾಯ್ತು ಉತ್ತರ ಕೊಡಗಿನಲ್ಲಿ ಕುಂದಸುರುಮಾಡಿ, ಬಿದರಗಾಲು, ನಲ್ಲೂರು, ತೊರೆನೂರು, ಹಬ್ಬಾಲೆ ಗ್ರಾಮಗಳಲ್ಲಿ ಮೀಟಿಂಗುಗಳನ್ನು ನಡಿಸಿದರು. ಸುಮಾರು 100 ಮೆಂಬರುಗಳು ಸೇರುವರಾಗಿಯೂ ಗ್ರಾಮಗ್ರಾಮಗಳಿಗೆ ಕಮಿಟಿ ಬೇಡವೆಂತಲೂ, ಹಾಗೇ ಪದ್ಧತಿಮೇರೆ ಇದುವರೆವಿಗೂ ರಾಮಸ್ವಾಮಿ ಕಣಿವೆಯವರೆಲ್ಲಾ ಕೂಡಿ ನಡೆಯುವದರಿಂದ ರಾಮಸ್ವಾಮಿ ಕಣಿವೆ ಹೋಬಳಿಗೆ ಒಂದುಕಮಿಟಿ ಮಾಡಬೇಕಾಗಿ ಎಲ್ಲವರ ಒಪ್ಪಿಗೆ ಮೇರೆ ಒಂದು ಕಮಿಟಿಯನ್ನು ತೆರೆಯುವಂತೆಯೂ, ಕೂಡಿಗೆಯಿಂದ ಹಿಡಿದು ಗುಡ್ಡೆ ಹೊಸೂರು ವರೆಗೆ ಪೂರ್ವದಿಂದ ಇರುವರೆಗೆ ಕೂಡ್ಯಾಡುವ ನಂಜರಾಜಪಟ್ಣ ಕಣಿವೆ ಹೋಬಳಿಗೆ ಒಂದು ಕಮಿಟಿ ಮಾಡಬೇಕಾಗಿಯೂ ತೀರ್ಮಾನವಾಯಿತು. ಆದರೆ ಮೆಂಬರುಗಳು ಮತ್ತು ರಶೀತಿ ಬುಕ್ಕುಗಳು ಹೆಡ್ಡಾಫೀಸಿನಿಂದ ದೊರೆಯದ್ದರಿಂದ ಇನ್ನೊಂದು ಮೀಟಿಂಗಿನ ವರೆಗೆ ಕೆಲಸ ನಿಲ್ಲಿಸಿದೆ. ಇನ್ನೊಂದು ತಿಂಗಳಲ್ಲಿ ಈ ಎರಡು ನಾಡು ಕಮಿಟಿಗಳು ಕೆಲಸಕ್ಕೆ ಸುರುಮಾಡುವವು.

'ಹಾಜರಿದ್ದವ'.

ವೀರಾಜಪೇಟೆ ಆಸ್ಪತ್ರೆಗೆ ಒಬ್ಬ ಮೆಡಿಕಲ್ ಗ್ರಾಜ್ವೇಟನ್ನು ಯಾಕೆ ನೇಮಿಸಬಾರದು?

ಅಯ್ಯಾ,

ಕಳೆದ ಒಂದು ಸಂಚಿಕೆಯಲ್ಲಿ ಸಿವಿಲ್ ಸರ್ಜನರವರಿಗೆ ಬಹಳ ಕೆಲಸವಾದುದರಿಂದ ಕಠಿಣ ರೋಗಪೀಡಿತರಾಗಿ ವೀರಾಜಪೇಟೆ ಆಸ್ಪತ್ರೆಯಲ್ಲಿರುವರನ್ನು ನೋಡಲಿಕ್ಕೆ ಹೋಗುವದು ಅಸಾಧ್ಯವೆಂದು ಕೌನ್ಸಿಲ್ ಉತ್ತರ ಮುಖಲಕ ತಿಳಿದೆನು. ಆದರೆ ವೀರಾಜಪೇಟೆಯಲ್ಲಿ ಒಬ್ಬ ಗಟ್ಟಿಗನಾದ ಮೆಡಿಕಲ್ ಗ್ರಾಜ್ವೇಟನ್ನು ನೇಮಿಸಿದರೆ ಜನರ ಕಷ್ಟನಿವಾರಣೆಯಾಗುವದಲ್ಲದೆ ಪಶುಪ್ರಾಣಗಳಂತೆ ದಿಕ್ಕುದೆಸೆಯಿಲ್ಲದೆ ಕಾಯಿಲೆಯಿಂದ ಮೃತರಾಗುವ ದಕ್ಷಿಣ ಕೊಡಗು ಜನರು ಸರಕಾರದವರಿಗೆ ಬಹಳ ವಂದನೆ ಮಾಡುತ್ತಾರೆ.

ಸಬ್ ಅಸಿಸ್ಟೆಂಟ್ ಸರ್ಜನರು ಎಂದಿಗೂ ಮೆಡಿಕಲ್ ಗ್ರಾಜ್ವೇಟುಗಳಂತೆ ಆಪರೇಶನ್ನುಗಳಾಗಲಿ ಮದ್ದುಕೊಡುವ ರೀತಿಯಲ್ಲಾಗಲಿ ಸಾಧ್ಯವಾಗಲಿಕ್ಕಿಲ್ಲ. ವೀರಾಜಪೇಟೆ ಆಸ್ಪತ್ರೆಯು ಬಹಳ ದುರ್ದಶೆಯಲ್ಲಿದೆಯೆಂದು ನಾನು ಕಣ್ಣಾರೆ ಕಂಡೆನು. ಬಿಟ್ಟಿಯಂಡ ನಂಜಪ್ಪ ರಾಯರವರು ವೀರಾಜಪೇಟೆ ಆಸ್ಪತ್ರೆಯಲ್ಲೇ ಇದ್ದಿದ್ದರೆ ಚೆಂಬಾಂಡ ಮಂದಣ್ಣನವರಂತೆ ವೈಕುಂಠ ಸೇರುತ್ತಿದ್ದರೆಂದು ಕಾಣುತ್ತದೆ. ಇಂಗ್ಲೀಷು ಚಿಕಿತ್ಸೆಯಲ್ಲಿ ಜನರಿಗೆ ನಂಬಿಕೆ ಕಡಿಮೆಯಾಗಿ ಜೋರು ಕಾಯಿಲೆಯವರು ಮಲೆಯಾಳ ವೈದ್ಯರ ಒಳಿ ಹೋಕ್ಕುತ್ತಿರುವರು. ಈ ಪಾಪಕ್ಕೆ ಸರಕಾರದವರು ಹೊಣೆಯಲ್ಲದೆ ಇತರರು ಯಾರೂ ಅಲ್ಲ.

ನಡಿಕೇರಿಯಂಡ ಅಪ್ಪಯ್ಯನವರು ಎಲ್. ಆರ್. ಸಿ. ಪಿ., ಯಂ. ಆರ್ ಸಿ. ಎಸ್., ಎಲ್. ಯಂ. ಆಂಡ್ ಡಿ. ಪಿ. ಹೆಚ್. ಪ್ಯಾಸುಮಾಡಿ, ಡಿಸೆಂಬರಿನಲ್ಲಿ ಕೊಡಗಿಗೆ ಬರುವರಂತೆ. ಇವರನ್ನು ವೀರಾಜಪೇಟೆ ಆಸ್ಪತ್ರೆಗೆ ಮುಖ್ಯ ಅಧಿಕಾರಿಯಾಗಿ ಮಾಡಿ ಘನ ಸರಕಾರದವರು ಕಾಯಿಲೆದವರಿಗೆ ತಕ್ಕ ಚಿಕಿತ್ಸೆ ಮಾಡುವ ತಮ್ಮ ದೊಡ್ಡ ಜವಾಬುದಾರಿಕೆಯನ್ನು ನೆರವೇರಿಸಬೇಕೆಂದು ಜನರೆಲ್ಲಾ ಕೇಳಿಕೊಳ್ಳಬೇಕೆಂಬುದು ನನ್ನ ಅಭಿಲಾಷೆಯಾಗಿದೆ.

ಇತರ ಪ್ರಾಂತ್ಯಗಳಲ್ಲಿ ಪ್ರತಿಯೊಂದು ಜನಾಂಗದವರಿಗೆ ಅವರ ಜನರನ್ನೇ ಡಾಕ್ಟರುಗಳನ್ನಾಗಿ ನೇಮಿಸುತ್ತಾರೆ. ಬೊಂಬಾಯಿಯಲ್ಲಿ ಪಾರ್ಸಿ ಜನರಾಗಲೀ, ಮದ್ರಾಸಿನಲ್ಲಿ ತಮಿಳು ಜನರಾಗಲೀ ಎಂದಿಗೂ ಕೊಡಗ ಡಾಕ್ಟರುಗಳಿಂದ ಪರೀಕ್ಷೆ ಮಾಡಿಸಿಕೊಳ್ಳಲಿಕ್ಕಿಲ್ಲ. ನಮ್ಮ ಅಕ್ಕ ತಂಗಿಯರನ್ನು ಅನ್ಯ ಜಾತಿಯ ಡಾಕ್ಟರುಗಳಿಂದ ಪರೀಕ್ಷೆ ಮಾಡಿಸಿ ಮದ್ದು ಕುಡಿಸುವದೆಂದರೆ ನನಗೆ ಎಂದಿಗೂ ಸಮಾಧಾನವಿಲ್ಲ. ಕೊಡಗು ಜನರ ಸೂತನ ಮನಸ್ಸು ಈ ವಿಚಾರ ದ್ಯಾಗಿರುವದೆಂದು ನಾನು ಪೂರ್ತಿ ತಿಳಿಯೆ. ಇಷ್ಟರ ವರೆಗೆ ನಮ್ಮವರಲ್ಲಿ ಸಾಕಷ್ಟು ಅರ್ಹರಾದ ಡಾಕ್ಟರುಗಳು ಇಲ್ಲದ್ದರಿಂದ ಬೇರೆ ಜಾತಿಯ ಡಾಕ್ಟರುಗಳಿಂದ ಚಿಕಿತ್ಸೆ ಹೊಂದಬೇಕಾಯಿತು. ಈಗ ನಮ್ಮಲ್ಲಿಯೇ ಅರ್ಹರಾದವರು ಇರುವಾಗ್ಯೆ ಅವರ ಸಹಾಯವು ಜನರಿಗೆ ದೊರೆಯುವಂತೆ ಸರಕಾರದವರು ಯಾಕೆ ಮಾಡಬಾರದು?

ಸಬ್ ಅಸಿಸ್ಟೆಂಟ್ ಸರ್ಜನರಿಗೆ ಮದ್ರಾಸ್ ಪ್ರಾಂತ್ಯಗಳಲ್ಲಿ ಎಂದಿಗೂ ಅಸಿಸ್ಟೆಂಟ್ ಸರ್ಜನರ ಕೆಲಸ ಈಗ ಕೊಡುವದಿಲ್ಲ. ಯಾತಕ್ಕೆಂದರೆ ಸಬ್ ಅಸಿಸ್ಟೆಂಟರು ಕಲಿತದ್ದು ಅಷ್ಟೇ. ಅದರಲ್ಲೂ ಹಳೇ ಸಬ್ ಅಸಿಸ್ಟೆಂಟರುಗಳು ಈಗೀಗ ಪ್ಯಾಸು ಮಾಡುವ ಸಬ್ ಅಸಿಸ್ಟೆಂಟರಿಗಿಂತ ಎಷ್ಟೋ ಕಡಿಮೆ ಕಲಿತವರಾಗಿರುವರು. ಆದುದರಿಂದ ಸರಕಾರದವರು ಕೊಡಗಿನಲ್ಲಿ ಮಾತ್ರ ಒಂದು ಹೊಸ ಪದ್ಧತಿಯನ್ನು ಏರ್ಪಡಿಸುವದು ನ್ಯಾಯವಲ್ಲ. ಅಸಿಸ್ಟೆಂಟ್ ಸರ್ಜನರುಗಳ ಹುದ್ದೆಗಳು ಎಲ್. ಯಂ. ಪಿ. ಯವರಿಗೆ ಕೊಡುವದಾದರೆ ಅವರಿಗಿಂತ ಹೆಚ್ಚಿನ ಅರ್ಹತೆಯುಳ್ಳ ಯಂ. ಬಿ. ಸಿ ಯಂ. ಮತ್ತು ಎಲ್. ಯಂ ಆಂಡ್ ಎಸ್. ರವರ ಗತಿ ಏನು? ಇಷ್ಟು ಮಾತ್ರವಲ್ಲ, ಕೊಡಗು ಕೌನ್ಸಿಲಿನ ಪ್ರಥಮ ಮೀಟಿಂಗಿನಲ್ಲಿ ಮೆ. ಅಪ್ಪಾರಂಡ ಚಂಗಪ್ಪನವರು ಈ ವಿಷಯ ತಂದ ಠರಾವಿನ ಚರ್ಚೆಯಲ್ಲಿ ಖಂಡಿತವಾಗಿಯೂ ಅರ್ಹರಾದ ಅಂದರೆ ಯೂನಿವರ್ಸಿಟಿ ಪರೀಕ್ಷೆಯಲ್ಲಿ ಪಾಸಾದವರನ್ನೇ ವೀರಾಜಪೇಟೆಗೆ ಅಸಿಸ್ಟೆಂಟ್ ಸರ್ಜನರಾಗಿ ನೇಮಿಸಬೇಕೆಂದು ವಿವರಿಸಿ ಹೇಳಿರುವರು, ಈ ಪದವಿಗ ಸಬ್ ಅಸಿಸ್ಟೆಂಟ್ ಸರ್ಜನರುಗಳು ನಮಗೆ ಎಂದಿಗೂ ಬೇಡವೆಂದೂ ಕೂಡ ಅವರು ವಿಶದ ಪಡಿಸಿದರು. ಆ ಠರಾವು ಕೌನ್ಸಿಲಿನಲ್ಲಿ ಬಹುಮತದಿಂದ ಪಾಸಾಗಿದೆ. ಹೀಗಿರುವಲ್ಲಿ ಮೆ. ಪಿ. ಟಿ. ಕುಶಾಲಪ್ಪನವರು ಈ ಸಮ್ಮಂಧ ಕಳೆದ ಮೀಟಿಂಗಿನಲ್ಲಿ ಕೇಳಿದ ಪ್ರಶ್ನೆಗೆ ಸರಕಾರದವರು ಕೊಟ್ಟ ಜವಾಬು ಎಂದಿಗೂ ತೃಪ್ತಿಕರವಲ್ಲ. ಜನರ ಪ್ರತಿನಿಧಿಗಳಿಂದ ಕೂಡಿರುವ ಕೌನ್ಸಿಲಿನ ಅಭಿಪ್ರಾಯಕ್ಕೆ ಬೆಲೆಕೊಡದೆ ಅದಕ್ಕೆ ವಿರೋಧವಾಗಿ ಸರಕಾರದವರು ವರ್ತಿಸುವದಾದರೆ, ಈ ಕೌನ್ಸಿಲಿನಿಂದ ಪ್ರಯೋಜನವೇನು? ಮಕ್ಕಳು ಅಳುವಾಗ್ಯೆ ವಾಡಿಕೆಯಾಗಿ ಕೊಡುವ ಬಾಳೆ ಹಣ್ಣು ಕೂಡ ಅಲ್ಲ. ಬಿಳೇ ಬಾಳೆ ಹಣ್ಣಿನ ಸಿಪ್ಪೆಯಂತೆ ಕೌನ್ಸಿಲೆಂದು ಯಾರಿಗೆ ತಾನೆ ತಿಳಿಯದೆ ಇರುವದು? ಚೀಫ್ ಕಮೀಷನರವರು ಜನರ ಇಂಥಾ ಮುಖ್ಯವಿಷಯಗಳಿಗೆ ಗಮನಕೊಡಬೇಕು

ಹೋದರೆ ಈಗಿನ ಕೌನ್ಸಿಲಿನಿಂದ ಏನೊಂದೂ ಪ್ರಯೋಜನ ವಿಲ್ಲವೆಂಬುದನ್ನು ದೇಶೀಯರು ಚೆನ್ನಾಗಿ ಅರಿತುಕೊಂಡು ಹೆಚ್ಚಿನ ಸುಧಾರಣೆಗಾಗಲೀ ಮದ್ರಾಸು ಅಮಲ್ಗಮೇಶನಿಗಾಗಲೀ ಚಳವಳ ಎಬ್ಬಿಸಬೇಕಾದದ್ದು ಅವಶ್ಯವಾಗಿದೆ.

"ತಿಳಿದವ"

ಶಿಬ್ಬಿಗೇರಿ ನಾಲ್ಕೇರಿ ರಸ್ತೆ

ಅಯಸ್ಯ,

'ರಸ್ತೆ ನೋಡಿದ' ಮಹಾತ್ಮರೆ, ತಾರೀಕು 24-10-24ರ ಪತ್ರಿಕೆಯ 6ನೇ ಪೇಜಿನಲ್ಲಿ ಶ್ರೀಮಂಗಲನಾಡಿನ ಶಿಬ್ಬಿಗೇರಿಯಿಂದ ನಾಲ್ಕೇರಿಗಾಗಿ ನಾಗರ ಹೊಳೆಗೆ ಹೋಗುವ ಲೋಕಲ್‌ಫಂಡ್ ರಸ್ತೆಯ ವಿಷಯವಾಗಿ ಪ್ರಕಟಿಸಿರುವ ಬಾತ್ಮಿಯನ್ನು ನೋಡಿ ತುಂಬಾ ಸಂತೋಷವಾಯಿತು ತಮ್ಮ ಅಭಿಪ್ರಾಯದಂತೆ ಕೆಲವು ಸಂಗತಿಗಳನ್ನು ವಿವರಿಸಬೇಕಾಗಿದೆ ಈ ರಸ್ತೆ ರಿಪೇರನ್ನು ಕೆಲವು ವರುಷಗಳಿಂದ ನಾನೇ ರಿಪೇರಿ ಮಾಡಿಸುತ್ತಾ ಬಂದಿರುತ್ತೇನೆ ಈ ಕೆಲಸದ ಆದಾಯದಿಂದಲೇ ನನ್ನ ಆಸ್ತಿ ಸಂಪಾದನೆಯಾಗಿರಬಹುದು, ಇನ್ನು ಮುಂದಕ್ಕೂ ಸಹ ಈ ಕೆಲಸದ ಆದಾಯದಿಂದ ನನ್ನ ಜೀವನ ನಡಿಸಿಕೊಳ್ಳಲು ಉದ್ಯುಕ್ತನೆಂಬ ಅಭಿಪ್ರಾಯ ಸೂಚಿಸುವಂತೆ ತೋರುತ್ತೆ ಆದರೆ ಮಾನವ ವರ್ಗಕ್ಕೆ ಸೇರಿದ ಪ್ರತಿ ಒಬ್ಬನಿಗೂ ದ್ರವ್ಯದ ಮೇಲೆ ಆಶೆ ಇದ್ದೇ ಇದೆ ಆದರೂ ಯೋಗ್ಯತಾನುಸಾರ ತಿಳಿಯದೆ ಮನಸ್ಸು ಬರಿಯುವುದು ನ್ಯಾಯವಲ್ಲ ಸದರಿ ಕೆಲಸವನ್ನು ನಾನೇ ಮಾಡಿಸುತ್ತೇನೆಂದು ಸರಕಾರಕ್ಕೆ ಕರಾರು ಬರೆದುಕೊಟ್ಟಿರುವದಿಲ್ಲ ತಾವು ಈ ಕೆಲಸವನ್ನು ಮಾಡಿಸಿ ತುಂಬಾ ಆದಾಯವನ್ನು ಹೊಂದಿಕೊಂಡು ನನ್ನಂತೆಯೇ ಆಗಬಾರದೇ? ಈ ರೀತಿ ಬಿಟ್ಟು ಪತ್ರಿಕೆಯಲ್ಲಿ ಇಷ್ಟ ಬಂದಂತೆ ಸರಿಯಾದ ವಿಳಾಸವಿಲ್ಲದ ಬಾತ್ಮಿಯನ್ನು ಪ್ರಕಟಿಸುವದು ಪುರುಷ ಧರ್ಮವಲ್ಲ ಈ ಕೆಲಸವು ನನ್ನ ಮನೆಯೊಳಗೆ ಅಡಗಿಸಿಕೊಳ್ಳುವದಲ್ಲ ಕಾಗದದ ಮೇಲೆ ಬರೆದು ಎಸೆಯುವದಲ್ಲ ಹತ್ತಾರು ಜನರು ನೋಡುವ ಕೆಲಸವಾಗಿದೆ. ಇದರ ಮೇಲೂ ಸರಕಾರದಿಂದ ಮಂಜೂರ್ ಮಾಡಿದ ಹಣಕ್ಕೆ ಸರಿಯಾದ ಕೆಲಸ ಆಗಿದೆಯೋ ಎಂಬದನ್ನು ಅಜಮಾಯಿಸಲು ಮೇಲಧಿಕಾರಿಗಳು ತಯಾರಿರುತ್ತಾರೆ. ಇದರ ಮೇಲೂ ಕೌನ್ಸಿಲ್ ಮೆಂಬರುಗಳು ಸಹ ಎಚ್ಚರ ತೆಗೆದುಕೊಳ್ಳುವ ವಿಷಯ ತಮ್ಮ ಗೋಚರಕ್ಕೆ ಬರಲಿಲ್ಲವೇ? ಮೇಲ್ಕಂಡವರ ಅಜಮಾಯಿಸಿಕೆಯಿಂದ ನಡೆಯುವದು ತೃಪ್ತಿ ಹೊಂದಿಕೊಂಡಾಗ್ಯೂ ತಮ್ಮ ಭಾಗಕ್ಕೆ ಅತೃಪ್ತಿಯೆಂದು ತೋರಿದ ಪಕ್ಷ ದೊರೆಗಳಿಗೆ ಅರ್ಜಿ ಬರೆದುಕೊಳ್ಳಬಹುದಿತ್ತು. ಅದೂ ಅಲ್ಲ, ತಾವೇ ಈ ಕೆಲಸವನ್ನು ಕೈಕೊಂಡಿದ್ದ ಪಕ್ಷ ಮೇಲ್ಕಂಡ ಅಧಿಕಾರಿಗಳ ಕಣ್ಣು ತಪ್ಪಿಸಿ ಸಿಕ್ಕುವ ಆದಾಯವನ್ನು ಹೊಂದಿ ತೃಪ್ತರಾಗ ಬಹುದಿತ್ತು. ಅಂಥಾ ಆದಾಯದ ಆಸೆಯಿಯೇ ತಮ್ಮನ್ನು ಈ ರೀತಿ ಮಾಡಿರುವದಲ್ಲದೆ ಅನ್ಯಥಾ ಅಲ್ಲ. ಈ ಕಾಲದಲ್ಲು ಉಪಕಾರಮಾಡಿದರೆ ಅದಕ್ಕೆ ಪ್ರತಿಯಾಗಿ ಅಪಕಾರವೂ, ಮರ್ಯಾದೆಗೆ ಅವಮರ್ಯಾದೆಯೂ ಕಾಲ ಸಿದ್ಧಾಂತವಾಗಿದೆ. ಆದರೆ ಭೂಷಣೆಗೆ ಹಿಗ್ಗದೆಯೂ ದೂಷಣೆಗೆ ತಗ್ಗದೆಯೂ, ನಡೆಯತಕ್ಕದ್ದು ಸಹಜ ಧರ್ಮವಾಗಿದೆ. ಈ ರಸ್ತೆಯ ಸಮ್ಬಂಧ ನನ್ನ ಪ್ರಯತ್ನವು ದ್ರವ್ಯ ಖರ್ಚು ಮಾಡಿದ್ದು, ನಾನೇ ವಿವರಿಸುವದು ಯೋಗ್ಯವಲ್ಲ. ಈ ಸಂಗತಿ ತಿಳಿದ, ರಸ್ತೆಯಿಂದ ಉಪಯೋಗ ಹೊಂದುವ ಮಹನೀಯರಿಗೆ ಗೊತ್ತಿಲ್ಲದೆ ಇರಲಾರದಾಗಿ ನಂಬುತ್ತೇನೆ ಅಲ್ಲದೆ ರಸ್ತೆ ನೋಡಿದ ಮಹನೀಯರು ತಮ್ಮ ವಿಳಾಸವನ್ನು ಪ್ರಕಟಿಸಿದ್ದರೆ ಚೆನ್ನಾಗಿತ್ತು ಮಹನೀಯರಿಗೆ ಆ ರೀತಿ ಪ್ರಕಟಿಸಲು ಸಾಮರ್ಥ್ಯವಿಲ್ಲದಪಕ್ಷ ನನ್ನ ಸಂತೋಷದ ವಂದನೆಯನ್ನು ಸಮರ್ಪಿಸಿರುತ್ತೇನೆ.

ಕೆ.ಎ. ಮೇದಪ್ಪ.

ಪ್ರಕಟಣೆ.

"ವಾರುಣ್ಣಿ" ಆಸ್ಪತ್ರೆಯು ಮೊದಲಿನ 'ಸುಂದರ ವಿಲಾಸ ಪ್ರೆಸ್ಸಿನ ಕಟ್ಟಡಕ್ಕೆ ಈಗ ವರ್ಗಾಯಿಸಲ್ಪಟ್ಟಿದೆ ಸ್ಥಳ ವಿಶಾಲತೆಗಾಗಿಯೂ ಕಾಯಿಲಸ್ತರಷ್ಟು ಆಸ್ಪತ್ರೆಯಲ್ಲಿಯೇ ಇರಲು ಅನುಕೂಲವಾಗಿಯೂ ಈಗಿನ ಕಟ್ಟಡಕ್ಕೆ ಬಂದದ್ದಾಗಿದೆ ಪೇಟೆಂಟು ಔಷಧಿಗಳೂ, ತೋಟಗಾರರ ಉಪಯೋಗಕ್ಕೆ ಆಗಾಗ್ಗೆ ಬೇಕಾಗುವ ಔಷಧಿಮಿಶ್ರಣಗಳೂ ಇಲ್ಲಿ ಮಾರಾಟಕ್ಕೆ ಇಡಲ್ಪಟ್ಟಿವೆ ಎಸ್ಟೇಟ್ ಔಷಧಶಾಲೆಗಳಿಗೆ ಬೇಕಾಗುವ ಔಷಧಿಗಳು ಇಲ್ಲಿಂದ ರಿಯಾಯಿತಿಯಾಗಿ ದೊರೆಯುವವು. ಅರ್ಹರಾದ ಬಡವರಿಗೆ ಚಿಕಿತ್ಸಾನುಭೂತಿಯು ತೋರಿಸಲ್ಪಡುವುದು

ಎ. ಎ. ವಾರುಣ್ಣಿ, ಎಲ್ ಎಂ ಪಿ.

ಮಡಿಕೇರಿ ಮೆಡಿಕಲ್ ಪ್ರಾಕ್ಟೀಶನರ್.

3.2,

For Sale.

Estate for sale—3 miles from Mercara on the Sunticoppa Mercara road

Details—

15 acres of young coffee.

500 batties of wetland (fully under cultivation)

3 acres of Manjarabad cardamum

2 acres of orangery

100 acres of Jungle.

Price.—Rs. 11,000, or nearest offer. For further particulars please apply to:— X

C/o Manager,
'Kodagu'
Mercara.

4 4

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೊ ಆಪರೇಟಿವ್ ಸೊಸೈಟೀಸ್ ಆಕ್ಟ್ಸ ಪ್ರಕಾರ ರಿಜಿಸ್ಟರಾಗಿದೆ.

		ರೂ.
ಶೇರ್ ಬಂಡವಾಳ	..	50,000
ವಸೂಲಾದ ಶೇರ್ ಮೊಬಲಗು	...	7,720
ಜಮೆಬಂದ ಠೇವಣಾತಿ	....	61,200

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ಮಾಯಿದೆ ಅಥವ ಹೆಚ್ಚಿನ ಮಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ 6-4-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ಮಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 5ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡುತ್ತಾರೆ.

ಪ್ರೆಸಿಡೆಂಟರು, ಕೊಡಂದೇರ ಕುಟ್ಟಯ್ಯನವರು, ರಾಯ್ ಬಹದ್ದೂರ್.

ಟ್ರೆಜರರ್ ಎಂ. ಭುಜಂಗರಾಯರು ಬಿ.ಎ., ಬಿ.ಎಲ್.

ಸೆಕ್ರೆಟರಿ.

ಸಿ. ಟಿ. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್

ತಾರೀಕು, 1—7—1924.

ಶ್ರೀ

ಶ್ರೀ ಧನ್ವಂತರಿ.

ಕರ್ನಾಟಕಾಯುರ್ವೇದ ಪಕ್ಷಪತ್ರಿಕೆ.

ಎಡಿಟರ್.—ವಿದ್ವಾನ್ ಕೆ. ಶೇಷಶಾಸ್ತ್ರೀ ಆಯುರ್ವೇದರತ್ನಂ, ಇತ್ಯಾದಿ.

ದೇಶೀಯ ವೈದ್ಯವನ್ನು ಸರ್ವ ಸುಪ್ರಚಾರಾಭಿಪ್ರಾಯದಿಂದ ಕನ್ನಡ ನಾಡಿನಲ್ಲಿ ಪ್ರಕಟಿಸುವ ಮೊದಲನೇಯ ಪತ್ರಿಕೆ ಎಂದರೆ! ಇದೇ ಆರೋಗ್ಯವಂತನಾಗಿ ಬಹುಕಾಲ ಬದುಕಿರಬೇಕೆಂದು ಯೋಚಿಸುವ ಪ್ರತಿಯೊಬ್ಬನಿಗೂ ಈ ಪತ್ರಿಕೆಯು ಬೇಕೇಬೇಕು. ವ್ಯಾಧಿ ಬಂದಾಗ ತಕ್ಷಣ ತಿಳಿದುಕೊಳ್ಳುವಂತೆ ಆಯಾ ರೋಗಲಕ್ಷಣ ಚಿಕಿತ್ಸೆಗಳು ಬರೆಯಲ್ಪಡುವುದರಿಂದ ಮುಖ್ಯವಾಗಿ ಸ್ತ್ರೀಯರೂ ಹಳ್ಳಿಯವರೂ ಈ ಪತ್ರಿಕೆಯನ್ನು ಓದಲೇ ಬೇಕು. ವಿಶೇಷವೇನು? ಮನೆಯಲ್ಲಿ ಈ ಪತ್ರಿಕೆ ಇದ್ದರೆ ಒಬ್ಬ ಗುರುವೂ ವೈದ್ಯನೂ ಇದ್ದಂತಾಗುವುದು.

ವಾರ್ಷಿಕ ಚಂದಾ ಮೂರು ರುಪಾಯಿ.

ವಿಳಾಸ:—

ಮೇನೇಜರ್, ಶ್ರೀ ಧನ್ವಂತರಿ, ಶೃಂಗೇರಿ, ಮೈಸೂರುಸ್ಟೇಟ್.

ಹಳೆ ವಿದ್ಯಾರ್ಥಿಯರ ತ್ರೈಮಾಸಿಕ.

ಸಂಪುಟ 2] ವರ್ಷದ ಚಂದಾ ಬರೇ ರೂ 1 4 0 [ಸಂಚಿಕೆ 1

ಸಂಪಾದಕ ಐ. ಪಿ. ಮೇದಪ್ಪ, ಬಿ ಎ, ಬಿ ಎಲ್ ಎಂ ಎಲ್ ಸಿ

ಈ ಸಂಚಿಕೆಯಲ್ಲಿ ಮನೋಹರವಾದ ಕೊಡಗಿನ ಪವಿತ್ರ ಸ್ಥಳವಾದ ಶ್ರೀ ತಲ ಕಾವೇರಿಯ ಚಿತ್ರಗಳಿವೆ.

1. ಶ್ರೀ ಕಾವೇರಿಯ ಜನ್ಮ ಅವತಾರ
2. ಸರಕಾರಕ್ಕೆ ಸಾಲವೆಂದರೇನು?
3. ಪೋಲಿಟಿಕ್ಸ್ ಅಂದರೇನು?
4. ವಿರಾಜಾಂಬು.

ಇವೇ ಮೊದಲಾದ ಬಹು ಸ್ವಾರಸ್ಯದ ವಿಷಯಗಳಿವೆ

ಮೆನೇಜರ್,
ಟಿ. ಎಸ್. ಎಸೋಸಿಯೇಶನ್,
ಮಡಿಕೇರಿ

ARMS & AMMUNITION MART.

Mahomedally-Noorbhoy.

337, Abdul Rehman, Street, near Crawford Market, BOMBAY.

Telegraphic Address:-"SHOOTER" Bombay.

[24 11] Please write for latest Catalogues,

ಸಂಪತ್ತಿಯ ಸಾಧನಗಳು.

ಆಯ್ಯಾ ಬಂಧುಗಳೇ ಸಂಪತ್ತಿಯು ಅನ್ಯರ ಬಾಕರಿಯಲ್ಲಿರದೆ ನಿಮ್ಮ ಭೂಮಿಯಲ್ಲಿಯೇ ಅಡಗಿರುವದು ಅದನ್ನು ಶೋಧಿಸಿ ತೆಗೆಯಲು ಕಿರ್ಲೋಸ್ಕರ ವ್ಯವಸಾಯ ಮುಟ್ಟುಗಳೇ ಯೋಗ್ಯವಾದ ಸಾಧನಗಳು,

ಲಕ್ಷಾವಧಿ ರೈತರು ಕೂಡಿ ಅನುಭವ ತೆಗೆದುಕೊಂಡಿರುವರು ಭೂಮಿಯತಕ್ಕ ತರತರದ ನೇಗಿಲುಗಳೂ ಗಾಣಗಳೂ ದೊರೆಯುತ್ತವೆ. ಕಿಸಾನ ಗಾಣವು ಒಂದು ಗಂಟೆಗೆ ೪೦೦ ಪೌಂಡು ಕಬ್ಬನ್ನು ಹಿಂಡಿ ಚೆಲ್ಲುತ್ತದೆ.

"ಕೊ" ಎಂಬ ಕ್ಯಾಟಲಾಗನ್ನು ತರಿಸಿಕೊಳ್ಳಿರಿ,

ಕಿರ್ಲೋಸ್ಕರ ಬಂಧು ಲಿಮಿಟೆಡ್,

16-5 ಕಿರ್ಲೋಸ್ಕರವಾಡಿ, ಜಿಲ್ಲಾ, ಸಾತಾರಾ.

ನೋಟೀಸ್.

"ಕೊಡಗು" ಪತ್ರಿಕೆಯ ಹಳೆ ಚಂದಾಹಣ ಕೊಡಬೇಕಿರುವವರೂ, ಹೊಸ ಚಂದಾದಾರರಾಗ ಬೇಕೆಂದಿರುವವರೂ, ಮತ್ತು ಶೇರುಹಣ ಸಲ್ಲಿಸಬೇಕಿರುವವರೂ ದಯವಿಟ್ಟು ವೀರರಾಜಪೇಟೆಯಲ್ಲಿರುವ ನಮ್ಮ ಕಂಪೆನಿಯ ಏಜಂಟರವರ ಆಫೀಸಿನಲ್ಲಿ ಪಾವತಿಮಾಡಬೇಕಾಗಿ ಕೋರಿಕೆ.

ಮಡಿಕೇರಿ, 15 9 24

ಮೇನೇಜರ್, 'ಕೊಡಗು ಲಿಮಿಟೆಡ್

ಪ್ರಕಟಣೆ.

ಒಂದು ಕಡೆ ಇಂಗ್ಲೀಷಿನಲ್ಲಿಯೂ, ಇನ್ನೊಂದು ಕಡೆ ಕನ್ನಡದಲ್ಲಿಯೂ ಪ್ರಿಂಟಾಗಿರುವ ಕಾಫಿ ತೋಟದ ಆಳುಗಳ ಪ್ರಿಚಾಪು ಕಂಟ್ರಾಕ್ಟು ಎಗ್ರಿಮೆಂಟ್ ಫಾರಮುಗಳೂ ಮತ್ತು ಅಪ್ಲಿಕೇಶನ್ (complaint) ಫಾರಂಗಳೂ ಸಹ ಮಾರಾಟಕ್ಕೆ ತಯಾರಿವೆ ಬೇಕಾದವರು 'ಕೊಡಗು ಆಫೀಸಿನಿಂದ ಪಡಕೊಳ್ಳಬಹುದು.

ಮಡಿಕೇರಿ, 17-9-24

ಮೇನೇಜರ್.

Health is Wealth.

WANTED all to improve health strength and vitality and thus save our nation from physical degeneracy Send half anna stamp and get 25 specimen photographs with full particulars from

Director, Physical Culture,
P O. BASAVANAGUDI,
Bangalore City

Printed & published by Kodanda Appayya, R.B., Chairman, Board of Directors, at "Kodagu" Press, Mercara for "Kodagu" Ltd.

Reg. No. M. 1550.
If not delivered please return to
"KODAGU" OFFICE, MERCARA.

ಕೊಡಗು.

[illegible]

[illegible] ॥ [illegible] ॥ ಎಡಿಟರ್ [illegible] ಬೆಳ್ಯಪ್ಪ.

ಪ್ರತಿ [illegible] ಪ್ರಕಟಿಸಲ್ಪಡುವದು.

ಸಂಪುಟ ೯] ಕೊಡಗು, [illegible] ತಾರೀಕು [illegible] [ಸಂಚಿಕೆ ೨೪

ಆರೋಗ್ಯ ಚಂದ್ರಿಕೆ.

ಮದ್ರಾಸ್

ಸಂಪಾದಕರು: ಡಾಕ್ಟರ್ [illegible],

[illegible]

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಚಿಕಿತ್ಸೆದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ಕೊಡುವ ದಕ್ಕಾಗಿ ಪ್ರಕಟಿಸಿದ ಒಂದು ಸಚಿತ್ರ ಮಾಸಪತ್ರಿಕೆ. ಈ ಮಾಸಪತ್ರಿಕೆಯು '[illegible]' ಎಂಬ ಇಂಗ್ಲಿಷ್ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ. ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಅಗಿಂದಾಗ್ಯ ಪ್ರಕಟವಾಗುವದು.

ಆರೋಗ್ಯ ಚಂದ್ರಿಕೆಯಲ್ಲಿರುವ [illegible] ಹಲವು ಗಡಿ ಪುನಃ ಪುನಃ ಓದಲು ಅರ್ಹವಾದವುಗಳಾಗಿರುವವು. ಆರೋಗ್ಯ ಚಂದ್ರಿಕೆಯನ್ನು ತರಿಸಿ ಬೈಂಡ್ ಮಾಡಿಸಿ ಇಟ್ಟುಕೊಂಡರೆ ಎಲ್ಲರಿಗೂ ಉಪಯುಕ್ತವಾಗುವ ಅಮೂಲ್ಯವಾದ ಗ್ರಂಥವಾಗುವದು. ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ 1-8-0. ಬಿಡಿ ಪತ್ರಿಕೆ 1ಕ್ಕೆ 0-2-0. ಹಿಂದಿನ ಸಂಚಿಕೆಗಳು ಕೂಡಾ ದೊರೆಯುವವು.

ಪತ್ರವ್ಯವಹಾರಕ್ಕೆ: 'ಆರೋಗ್ಯ ಚಂದ್ರಿಕೆ' 323,
ತಂಬುಶೆಟ್ಟಿ ಬೀದಿ, ಮದ್ರಾಸ್.

ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿಯ ಜೀವವಿಮೆಯ ಕಂಪೆನಿ, ಲಿಮಿಟೆಡ್.

ಹೆಡ್ ಆಫೀಸು: ಬೊಂಬಾಯಿ.

ಹಿಂದುಸ್ಥಾನದಲ್ಲಿ ಕಳೆದ 50 ವರ್ಷಗಳಿಂದಲೂ ಜೀವವಿಮೆಯ ಅನುಭವವುಳ್ಳ ನಡೆಯುವ ದೇಶೀಯ ಜೀವವಿಮೆ ಸಂಘಗಳಲ್ಲಿ ಅತ್ಯಂತ ದೊಡ್ಡದೂ ಮತ್ತು ಭದ್ರವಾದದ್ದೂ ಆದ "ಓರಿಯಂಟಲಿನ" ಜೀವವಿಮೆ ಪತ್ರಕ್ಕಿಂತಲೂ ಉತ್ತಮವಾದ ಆಸ್ತಿ ಬೇರೆ ದೊರೆಯಲಾರದು.

ಈಗಾಗಲೇ ವಿಮೆಸಂದಾಯಕವಾದಮೊತ್ತ		8,00,00,000
ಕೈಯಲ್ಲಿ ಮುಂದೆ ಬರಬಹುದಾದ ತಗಾದೆಗಳನ್ನು ಸುದಾರಿಸಲಿಕ್ಕಿಟ್ಟುಕೊಂಡಿರುವ ಹಣ	....	6,00,00,000
ವಾರ್ಷಿಕ ಉತ್ಪತ್ತಿ	....	1,00,00,000

ಇಷ್ಟು ಭದ್ರತೆಯುಳ್ಳ ಕಂಪೆನಿಯಲ್ಲಿ ಜೀವವಿಮೆಯ ಪತ್ರ ತೆಗದುಕೊಳ್ಳಲಿಚ್ಛಿಸುವವರು ಯಾ, ಇದರ ವಿಷಯ ಹೆಚ್ಚಿನ ಸಂಗತಿ ತಿಳಿಯಬೇಕೆಂದಿರುವವರು, ದಯವಿಟ್ಟು ಈ ಕೆಳಗಿನವರಿಗೆ ಬರದುಕೊಳ್ಳುವದು.

ಕೆ. ಪಿ. ಚಣ್ಣಪ್ಪನವರು,
ಓರಿಯಂಟಲ್ [illegible] ಆಫೀಸು,
ವೀರಾಜಪೇಟೆ, ದಕ್ಷಿಣ ಕೊಡಗು.

24—23

"ಕೊಡಗು"

ರಾಜಕೀಯ, ವಿದ್ಯಾ, ಕೃಷಿ, [illegible] ವಿಜ್ಞಾನ, ಮತ್ತು ನೀತಿ ಸಂಬಂಧವಾದ [illegible] ಕೂಡಿದ ಕೊಡಗಿನ ವಾರ ಪತ್ರಿಕೆ.

1. ಪ್ರಕಟಣೆಗ[illegible] "ಕೊಡಗು" [illegible] 2. ಲೇಖನಗಳನ್ನು ಕೇರಿ. ಈ ವಿಳಾಸಕ್ಕೆ ಕಳುಹಬೇಕು. [illegible] ಈ ವಿಳಾಸಕ್ಕೆ ಕಳು ಸಂಪಾದಕರು "ಕೊಡಗು" [illegible] ಹಿಸಬೇಕು. 3. ಬಾತ್ಮಿದಾರರ ಅಭಿಪ್ರಾಯಕ್ಕೆ [illegible] ಪತ್ರಿಕಾಕರ್ತರು ಜವಾಬ್ದಾರರಲ್ಲ. 4. ನಮ್ಮಲ್ಲಿಗೆ ಕಳುಹಿಸುವ ಬಾತ್ಮಿಗಳು ಕಾಗದದ ಒಂದೇ ಕಡೆಯೂ, ಸ್ಪಷ್ಟವಾಗಿಯೂ, ಹೆಸರು ವಿಳಾಸಗಳಿಂದ ಕೂಡಿಯೂ, ಬರೆಯಲ್ಪಟ್ಟಿರಬೇಕು. ಸ್ಥಳವು ದೊರೆತಂತೆಲ್ಲಾ ಈ ಪತ್ರಗಳು ಪ್ರಕಟಿಸಲ್ಪಡುವವು. 5. ಪ್ರಕಟಿಸಲಾಗದ ಬಾತ್ಮಿಗಳನ್ನು ಮರಳಿ ಕಳುಹಿಸುವ ಜವಾಬ್ದಾರಿಕೆಯನ್ನು ಸಂಪಾದಕರು ವಹಿಸಿಕೊಳ್ಳುವದಿಲ್ಲ.

ಪ್ರಕಟಣೆಗಳು.

ಅತ್ಯಂತ ಸುಲಭವಾಗಿ ದಾಕಲ್ಪಡುತ್ತವೆ. ಹೆಚ್ಚು ಸಂಗತಿಗೆ ಮೇನೇಜರಿಗೆ ಬರೆದು ತಿಳಿದುಕೊಳ್ಳಬಹುದು.

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ.

[illegible] ಆಶ್ಚರ್ಯ!!!

ಶಿಶು ವೈದ್ಯ ಸಂಜೀವಿನೀ.

ಕನ್ನಡಿಗರಿಗೆ ಯಾವ ವೈದ್ಯ ಪುಸ್ತಕವೂ ಇದುವರೆಗೆ ಸಿಗುವಂತಿಲ್ಲ! ಆದಕ್ಕಾಗಿ ಇದನ್ನು [illegible] ಆಯುರ್ವೇದದ ಆಧಾರದಿಂದ ಪ್ರಕಟಿಸಿದ್ದೇವೆ. ಇದರಲ್ಲಿ ಸ್ತ್ರೀ ಪುರುಷರ ದೇಹತತ್ವ, ವಿವಾಹ, ದಾಂಪತ್ಯ ಸುಖ, ಪಾತಿವ್ರತ್ಯ ಧರ್ಮ, ಗರ್ಭಿಣಿಯರ ರೋಗನಿದಾನ, ಚಿಕಿತ್ಸೆ, ಉಪಚಾರ, ಸುಖಪ್ರಸವಾಷಧಗಳು, ಪ್ರಸವವಿಧಿ, ದಾಯಿಯ ಕರ್ತವ್ಯ, ಶಿಶುಪರಿಚರ್ಯಾ, ಶಿಶುಗಳ ಸಕಲ ರೋಗ ಚಿಕಿತ್ಸೆ, ಹಾಗೂ ಎಲ್ಲಾ ಲೋಹಾದಿಗಳ ಶುದ್ಧಿ ಕ್ರಮ ಮತ್ತು ಭಸ್ಮಗಳು ಮಾಡುವ ವಿಧಾನ, ಧಾತುಪುಷ್ಟಿ ಔಷಧಿಗಳು ಇವೆಲ್ಲ ಶಾಸ್ತ್ರೀಯ ಮತ್ತು ಸಮರ್ಪಕವಾಗಿ ವಿವರಿಸಲ್ಪಟ್ಟಿದೆ. ಈ ಪುಸ್ತಕ ಕೇವಲ ದೊಡ್ಡದು. ಇದರಲ್ಲಿ ಹೆಂಗಸರು ಹುಡುಗರು ಸಹ ಸುಲಭವಾಗಿ ತಯಾರು ಮಾಡುವಂಥಾ ೫೦೦ ಔಷಧಗಳಿಗಿಂತ ಹೆಚ್ಚಾಗಿರುವವು. ಈ ಪುಸ್ತಕದ ಕ್ರಯವು ಇದರಲ್ಲಿರುವ ಒಂದೊಂದು ಔಷಧದ ಬೆಲೆಯಾಗಬಾರದೆಂಬುದನ್ನು ನೀವೇ ತಿಳಿದುಕೊಳ್ಳಿರಿ!! ಈ ಪುಸ್ತಕವನ್ನು ಕೊಂಡುಕೊಳ್ಳುವ ಪ್ರತಿ ಮನುಷ್ಯನೂ ಒಂದು ಡಿತವಾಗಿ ಒಬ್ಬ ವೈದ್ಯನೇ ಆಗುತ್ತಾನೆ. ಕ್ರಯ ಪುಸ್ತಕಕ್ಕೆ ೨-೮-೦.

ಸಿಕ್ಕುವ ವಿಳಾಸ:—ಭಾರತಿ ಬುಕ್‌ಡಿಪ್ಪೊ,
17-11 ೪೯೧, ನಗರ್ತರಪೇಟೆ, ಬೆಂಗಳೂರು ಸಿಟಿ.

ಕೃಷಿತೋ ನಾಸ್ತಿ ದುರ್ಭಿಕ್ಷಃ

NITRATE OF SODA [illegible] 1.—16 per cent.) Nitrogen.

"The best [illegible] d cheapest form of Nitrogen high[illegible] [illegible]oncentrated and immediately available. Nothing like it to make plants grow."

ವ್ಯವಸಾಯದಲ್ಲಿ ಗೊಬ್ಬರವಿಡುವದರ ಹೆಚ್ಚಿನ ಉದ್ದೇಶ [illegible] ಬೆಳೆಗಳಿಗೆ ಸಾರಜನಕ (Nitrogen) ಒದಗಿಸಿಕೊಡುವದಾಗಿರುತ್ತದೆ "ನೈಟ್ರೇಟ್ ಆಫ್ ಸೋಡಾ" ಎಂಬ ರಸಾಯನಿಕ ಗೊಬ್ಬರವು (15—16%) ಆದರೆ [illegible] ದಲ್ಲಿರುವುದಕ್ಕಿಂತ [illegible] ಬೆಳೆಗಳಿಗೆ [illegible] [illegible]

ಕಡಿಮೆ [illegible] ಇದರ ವಿಷಯ ಹೆಚ್ಚಿನ [illegible] ಒಂದು ಎಕ್ರೆ ಭೂಮಿಗೆ 120—180 ರಾತಲು ಬೇಕಾಗುವದು. ಇದರ ವಿಷಯ ಹೆಚ್ಚಿನ ಮಾಹಿತಿಯನ್ನು ಮತ್ತು ತಿಳುವಳಿಕೆಯನ್ನು ಧರ್ಮಾರ್ಥವಾಗಿ ನಮ್ಮಿಂದ ಪಡೆಯಬಹುದು.

ದಿ. ಚಿಲಿಯನ್ನ್ ನೈಟ್ರೇಟ್
24—10 ಕಮಿಟಿಯವರ ಕಡೆ

ಕೊಡಗು [illegible]—
B. P. Ayapa, Hon. Representative
Pollibetta, Coorg.

The Chilean Nitrate Committee, 6 Mission Row, Post Box 469,
CALCUTTA

ಮಲೆಯಾಳ ವೈದ್ಯಶಾಲಾ.

[illegible] ಅಯುರ್ವೇದ ವೈದ್ಯ [illegible] ಒಂದು ಶಾಲೆಯು ವೀರರಾಜೇಂದ್ರಪೇಟೆಯಲ್ಲಿ ತೆರೆಯಲ್ಪಟ್ಟಿದೆ. ಇಲ್ಲಿ ಯಾವ ವಿಧದ ಕಾಯಿಲೆಯಾಗಿದ್ದರೂ ಪಂಡಿತರಿಂದ ಪರೀಕ್ಷಿಸಿ ಔಷಧಿಕೊಟ್ಟು ಗುಣಪಡಿಸಲ್ಪಡುತ್ತೆ. ಔಷಧದ ಚಾರ್ಜು ಬಹಳ ಕಡಮೆ. ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ವಿವರವನ್ನು ತಿಳಿದುಕೊಳ್ಳಬಹುದು.

ನಾರಾಯಣ ನಂಬೀಶರ್,
ಆಯುರ್ವೇದ ವೈದ್ಯರು,
52—43 ವೀರರಾಜೇಂದ್ರಪೇಟೆ.

ಕಲ್ಪತರು ತಾಯಿತ.

ಪರೀಕ್ಷೆ ಪಾಸಾಗೋಣ, ಶರೀರ ಸುಖವಾಗೋಣ, ನೌಕರಿ ಸಿಗೋಣ, ಸಂಬಳ ಹೆಚ್ಚೋಣ, ವಿವಾಹವಾಗೋಣ ಸಂತತಿಯಾಗೋಣ, ಕೈಕೊಂಡ ಉದ್ಯೋಗದಲ್ಲಿ ಯಶಸ್ಸು ಸಿಗೋಣ, ವ್ಯಾಪಾರದಲ್ಲಿ ಬಹಳ ಲಾಭ ಸಿಗೋಣ, ಸಾಲಮುಕ್ತ ಆಗೋಣ, ಭೂತ ಪಿಶಾಚ ಗ್ರಹಬಾಧೆ ಆಗದಿರೋಣ, ಪ್ರತಿಕೂಲ ಜನರು ಅನುಕೂಲವಾಗೋಣ, ಇವೇ ಮತ್ತು ಬೇರೆ ಎಷ್ಟೋ ಮಾತುಗಳು ಇಷ್ಟವಿದ್ದಂತೆಯೇ ಆಗುವ ಅಪೇಕ್ಷೆ ಇದ್ದರ ಇಚ್ಛಿತಫಲ ಕೊಡುವ ಲೋಕಮಾನ್ಯ ಕಲ್ಪತರು ತಾಯಿತ ಧಾರಣಮಾಡಿರಿ, ಅಂದರೆ ಇಚ್ಛೆ ಪೂರ್ಣವಾಗುವದು. ಅನುಭವದ ದೊರತು ಖಾತ್ರಿ ಆಗಲಾರದು. ತಾ. ನಂ. ೧ಕೆ ರೂ. ೧೨ ಗುಣ ತೀವ್ರವಾಗಿ, ತಾ. ನಂ ೨ಕೆ. ರೂ. ೬ ಗುಣ ೧೫ ದಿವಸಗಳಲ್ಲಿ, ತಾ. ನಂ. ೩ಕೆ. ರೂ. ೩ ಗುಣ ೧ ತಿಂಗಳಲ್ಲಿ. ವ್ಹಿ. ಪಿ. ಖರ್ಚು ಬೇರೆ. ಗುಣವಾದಲ್ಲಿ ತಾಯಿತದ ಖರ್ಚು ವಜಾಹೋಗಿ ಬಾಕೀ ಸಿಗುವದು.

ವಿಳಾಸ:—ವ್ಯಾನೇಜರ, ಕಲ್ಪತರು ತಾಯಿತ, ಕೆ. ಎಸ್.
[52-16] ಪೋ. ಸಂಕೇಶ್ವರ ಜಿ. ಬೆಳಗಾಂವ.

THE SHOPPING CENTRE OF COORG,

Spencer & Co. Ltd.,

MERCARA & POLLIBETTA.

Arms & Ammunition.

New arrivals! Revised Prices!!
S. B. B L. guns Rs. 65, 85, 95 each
D. B. B. L. „ Rs. [illegible] 235 [illegible], 135 each
S. B. [illegible] „ R. [illegible] each.
Cartridges of every description from Nos. [illegible] to [illegible] R. 14—8—0 per 100

4

Health is Wealth.

WANTED all to improve heal[th] strength and vitality and thus save o[illegible] ration from physical degeneracy. Se[nd] half-anna stamp and get 23 specim[en] photographs with full particulars from

Director, Physical Culture,
P. O. BASAVANAGUDI
Bangalore City

"ಕೊಡಗು"

ಸ॥ ೧೯೨೪ನೇ ಇಸವಿ ಸಪ್ಟಂಬರ್ ತಾ.
೨೧ನೇ ಶುಕ್ರವಾರ.

ಸಹಕಾರಿ ಸಂಘಗಳ ೧೯೨೩—೨೪ರ ಆಡಳಿತದ ವರದಿ.

ಕೊಡಗಿನ ಸಹಕಾರಿ ಸಂಘಗಳ 1923-24ನೇ ವರುಷದ ಆಡಳಿತ ವರದಿಯು ಕೆಲವು ದಿವಸಗಳ ಮುಂಚೆಯೇ ನಮ್ಮ ಕೈಸೇರಿದ್ದರೂ ಕೂಡ ಇದರ ವಿಷಯ ಒಡನೆ ಬರೆಯಲು ಅನುಕೂಲವಾಗಲಿಲ್ಲ. ತಡವಾದರೂ, ದೇಶದ ಎಲ್ಲಾ ಚಳವಳಿಕ್ಕೂ ಮೂಲವಾಗಿರುವ ಈ ಕೋಆಪರೇಟಿವ್ ಚಳವಳದ ಅಭಿವೃದ್ಧಿಯ ವಿಷಯ ಒಂದೆರಡು ಮಾತುಗಳನ್ನು ಬರೆಯದೆ ಕಳೆಯದು.

ಈ ಇಲಾಖೆಯ ಆಫೀಸಿನ ಸಿಬ್ಬಂದಿಯು ಬಹಳ ಕಡಿಮೆಯಾಗಿರುವುದರಿಂದ ಇದರ ಕೆಲಸಕ್ಕೆ ಅನಾನುಕೂಲವೆಂಬ ರಿಜಿಸ್ಟ್ರಾರವರ ಹಳೇ ಪುಕಾರು ಇನ್ನೂ ಸರಕಾರದವರ ಗಣನೆಗೆ ಬಾರದಿರುವದು ವ್ಯಸನಕರವಾಗಿದೆ. ಇನ್ನಾದರೂ ಅಧಿಕಾರಿಗಳು ಈ ನ್ಯಾಯವಾದ ಪುಕಾರನ್ನು ಹೋಗಲಾಡಿಸುವರೆಂದು ಆಶಿಸುತ್ತೇವೆ. ಕಳೆದ ವರುಷ ನೇಮಿಸಿದಂತ ಐದು ಸುಪರ್‌ವೈಜರುಗಳು ಮಡಿಕೇರಿಯಲ್ಲಿ ಮೂರು ತಿಂಗಳು ತರಬೇತು ಹೊಂದಿ ಸೊಸೈಟಿಗಳ ಮೇಲ್ವಿಚಾರದ ಕೆಲಸವನ್ನು ತಕ್ಕಮಟ್ಟಿಗೆ ತೃಪ್ತಿಕರವಾಗಿ ಮಾಡುತ್ತಾರಂತೆ. ಆದರೆ ಈ ಸುಪರ್‌ವೈಜರುಗಳೆಲ್ಲರೂ ಈ ಕೆಲಸಕ್ಕೆ ಪೂರ್ತಿ ಯೋಗ್ಯತೆಯುಳ್ಳವರಲ್ಲವೆಂದು ಕೆಲವರು ಅನ್ನುತ್ತಿರುವರೆಂದೂ, ಇದಕ್ಕೆ ಸುಪರ್‌ವೈಜರುಗಳಿಗೆ ಅನುಭವ ಹೊಂದಲು ಸಾಕಷ್ಟು ಸಮಯ ಇನ್ನೂ ದೊರೆತಿರುವುದಿಲ್ಲವಾದುದರಿಂದ ಅವರ ಕೆಲಸದ ಯೋಗ್ಯತೆ ವಿಷಯ ಈಗಲೇ ಅಭಿಪ್ರಾಯ ಕೊಡಲು ಸಾಧ್ಯವಿಲ್ಲವೆಂದೂ ರಿಪೋರ್ಟಿನಲ್ಲಿ ಸೂಚಿಸಿದೆ. ಇದು ಒಪ್ಪತಕ್ಕ ಸಮಜಾಯಿಸಿಕೆಯಾಗಿದೆ. ಅವರ ಮುಂದಿನ ಕೆಲಸವನ್ನು ಎಚ್ಚರಿಕೆಯಿಂದ ನೋಡುವ. ಇದಲ್ಲದೆ ಸುಪರ್‌ವೈಜರುಗಳಿಂದ ಪ್ರಯೋಜನವೇ ಇಲ್ಲವೆಂದು ಅಭಿಪ್ರಾಯ ಪಡುವವರೂ ಕೆಲವರು ಇರುವರೆಂದು ಬರೆದಿರುತ್ತಾರೆ. ಹೀಗೆನ್ನುವವರ ಸೊಸೈಟಿಗಳು ಉತ್ತಮತರದವುಗಳಾಗಿದ್ದರೂ (?) ಇನ್ನೂ ಕ್ರಮವಾಗಿ ನಡೆಯಲು ಕಲಿಯದೆ ಇರುವಂಥ ಹೆಚ್ಚಿನ ಸಂಘಗಳ ಪ್ರಯೋಜನಕ್ಕಾಗಿಯಾದರೂ ಸುಪರ್‌ವೈಜರುಗಳ ಸಿಬ್ಬಂದಿಗೆ ಅವರು ಸಹಾಯ ಕೊಡಬೇಕಾದದ್ದು ಸಹಕಾರ ತತ್ವವಲ್ಲವೇ? ಸಂಘಗಳನ್ನು ತಮ್ಮ ಮನಸ್ಸಿನ ಇಚ್ಛೆ ನಡಿಸಲು ಸುಪರ್‌ವೈಜರುಗಳು ಅಡ್ಡಿಯಾಗುವರೆಂಬ ಕಾರಣದಿಂದ ಮೇಲ್ವಿಚಾರಕರೇ ಬೇಡವೆನ್ನುವವರು ಇರಬಹುದು. ಇಂಥವರಿಗೆ ಆಯಾ ಸಂಘದ ಮೆಂಬರುಗಳೇ ಬುದ್ಧಿ ಕಲಿಸಬೇಕಾಗಿದೆ.

ಈ ವರುಷ ಈ ಚಳವಳದ ಕೆಲಸವು ಹೆಚ್ಚಿನ ಅಭಿವೃದ್ಧಿ ಹೊಂದದಿದ್ದರೂ ನಿಂತಲ್ಲೇ ನಿಲ್ಲದೆ ಮುಂದುವರಿಯುತ್ತಿದೆ. ಸಂಘಗಳ ಸಂಖ್ಯೆಯು 153ರಿಂದ 152ಕ್ಕೂ, ಠೇವಣಾತಿಯು ರುಪಾಯಿ 54,278ರಿಂದ 45,353ಕ್ಕೂ, ಸರಕಾರದಿಂದ ಸಾಲವು 1995ರಿಂದ 1575ಕ್ಕೂ ಇಳಿದರೂ ಕೂಡ ಮೆಂಬರುಗಳ ಸಂಖ್ಯೆಯು 7,910ರಿಂದ 8449ಕ್ಕೂ, ವಸೂಲಾದ ಶೇರ್ ಭಂಡವಾಳವು ರುಪಾಯಿ 1,33,995ರಿಂದ 1,44,713ಕ್ಕೂ, ಸೆಂಟ್ರಲ್ ಬ್ಯಾಂಕಿನಿಂದ ಸಾಲ ರುಪಾಯಿ 32,572ರಿಂದ 55,050ಕ್ಕೂ ರಿಜರ್ವ್ ಫಂಡು 91,622ರಿಂದ 1,06,710ಕ್ಕೂ, ಸಂಘಗಳ ಒಟ್ಟು ಬಂಡವಾಳವು ರುಪಾಯಿ 3,17,589ರಿಂದ 3,53,401ಕ್ಕೂ ಏರಿದೆ. ನಾಲ್ಕು ಎಗ್ರಿಕಲ್ಚರಲ್ ಸೊಸೈಟಿಗಳೂ, ನಾಲ್ಕು ಸುಪರ್‌ವೈಜಿಂಗ್ ಯೂನಿಯನ್‌ಗಳೂ ರಿಜಿಸ್ಟರ್ ಮಾಡಲ್ಪಟ್ಟವು. ಐದು ಕ್ರಮವಾಗಿ ನಡೆಯದೆ ಇದ್ದಂತ ದನವಿಮೆ ಸಂಘಗಳು ರದ್ದು ಮಾಡಲ್ಪಟ್ಟವು. ಆದುದರಿಂದ ಸೆಂಟ್ರಲ್ ಬ್ಯಾಂಕು ಮತ್ತು ಯೂನಿಯನ್‌ಗಳನ್ನು ಸೇರಿಸಿ ಸಂಘಗಳ ಒಟ್ಟು ಸಂಖ್ಯೆಯು 165 ಆಯಿತು. ಸೆಂಟ್ರಲ್ ಬ್ಯಾಂಕು ಬಹು ಜನಪ್ರಿಯವಾಗುತ್ತಿರುವುದರಿಂದ ಠೇವಣಾತಿಗಳು ಬೇಕಾದುದಕ್ಕಿಂತ ಹೆಚ್ಚಾಗಿ ಬರುತ್ತಿವೆ. ಎಗ್ರಿಕಲ್ಚರಲ್ಲದ ಸೊಸೈಟಿಗಳ ಕೆಲಸವು ತೃಪ್ತಿಕರವಲ್ಲ. ದನವಿಮೆಯ ಸಂಘಗಳು ಅನಾವಶ್ಯವೆಂದೇ ಹೇಳಬೇಕು,' ಎಂದು ವರದಿಯಲ್ಲಿ ಹೇಳಲ್ಪಟ್ಟಿದೆ.

ಸೆಂಟ್ರಲ್ ಬ್ಯಾಂಕಿಗೆ ಸೇರಿದ ಸಂಘಗಳ ಸಂಖ್ಯೆಯು 96ರಿಂದ 107ಕ್ಕೂ ಮೆಂಬರುಗಳು 26ರಿಂದ 30ಕ್ಕೂ ಏರಿದರೂ ಕೂಡ ಈ ವಿಷಯ ಕಳೆದ ವರುಷದಷ್ಟು ಉತ್ತೇಜನಕರವಾಗಿಲ್ಲ. ಈ ಬ್ಯಾಂಕಿನ ಪ್ರಯೋಜನವು ದೇಶೀಯರಿಗೆಲ್ಲಾ ತಿಳಿದಿರುವಲ್ಲಿ ಇನ್ನೂ ಕೆಲವು ಸಂಘಗಳು ಇದಕ್ಕೆ ಮೆಂಬರುಗಳಾಗದೆ ನಿದ್ರಿಸುತ್ತಿರುವುದು ಅವುಗಳ ಅಭಿವೃದ್ಧಿಯನ್ನೂ ಸಹಕಾರ ಶೀಲತೆಯನ್ನೂ ಸೂಚಿಸಿದಂತೆ ಆಗುವುದಿಲ್ಲ. ಬ್ಯಾಂಕಿನ ಶೇರ್ ಬಂಡವಾಳವು 6,560ರಿಂದ 7,720ಕ್ಕೂ, ಠೇವಣಾತಿಗಳು 34,125ರಿಂದ 53,308ಕ್ಕೂ, ಒಟ್ಟು ಬಂಡವಾಳವು **40,724ರಿಂದ 68,139ಕ್ಕೂ ಏರಿದ್ದು ಶ್ಲಾಘನೀಯವೆ. ಸರಕಾರದವರು 1,000 ರುಪಾಯಿ ಸಾಲಕೊಟ್ಟಿರುವರು. ಲಾಭವು ಕಳೆದ ವರುಷ ಸಿಕ್ಕಿದ 41 ರುಪಾಯಿಯಿಂದ ಈ ವರುಷ 863 ರುಪಾಯಿಗೆ ಹೆಚ್ಚಿತು.' ಈ ತಾರೀಕು 16ರಲ್ಲು ವೀರಾಜಪೇಟೆಯಲ್ಲು ನಡೆದ ಬ್ಯಾಂಕಿನ ಜನರಲ್ ಮೀಟಿಂಗಿನಲ್ಲು ಶೇಕಡ 5ರಂತೆ ಲಾಭ ಹಂಚಲಾಯಿತೆಂದು ತಿಳಿಯಬರುತ್ತದೆ. ಬ್ಯಾಂಕು ಪ್ರಾರಂಭವಾಗಿ ಒಂದೆರಡು ವರುಷಗಳಲ್ಲೇ ಇಷ್ಟು** ಲಾಭವನ್ನು ಹಂಚಿರುವಾಗ್ಯೆ ಅದು ಹ್ಯಾಗೆ ಜನಪ್ರಿಯವಾಗದೆ ಇರುವುದು? 'ಬ್ಯಾಂಕಿನಿಂದ ಸೊಸೈಟಿಗಳಿಗೆ ಕೊಡಲ್ಪಟ್ಟ ಸಾಲವು ಕಳೆದ ವರುಷ 43,250 ಮಾತ್ರವಾಗಿತ್ತು, ಆದರೆ ಈ ವರುಷ 53,250ಕ್ಕೆ ಅಂದರೆ ಹತ್ತುಸಾವಿರ ಹೆಚ್ಚಿತು. ಬಿಡಿ ಮೆಂಬರುಗಳಿಗೆ 1,070 ರುಪಾಯಿ ಸಾಲಕೊಡಲ್ಪಟ್ಟಿತು. ಸಾಲದ ವಸೂಲಿ 20,206ರಿಂದ 32,761ಕ್ಕೆ ಏರಿತು. ಕಾಲಕ್ಕೆ ಸರಿಯಾಗಿ ವಸೂಲಾಗದೆ ಇರುವ ಸಾಲ 1,347 ಮಾತ್ರ. ಇದಕ್ಕೆ ಏಳು ಸಂಘಗಳು ಜವಾಬ್ದಾರಿಯಾಗಿವೆ. ಬ್ಯಾಂಕು ಅದರ ಮೆಂಬರುಗಳಿಗೆ ಮಾತ್ರ ತೃಪ್ತಿಕರವಾದರೆ ಸಾಲದು. ಡಿಪಾಜಿಟ್ಟರುಗಳಲ್ಲಿ ನಂಬಿಕೆಯನ್ನು ಹುಟ್ಟಿಸಬೇಕು. ಡಿಪಾಜಿಟ್ಟುಗಳನ್ನು ಕಾಲಕ್ಕೆ ಸರಿಯಾಗಿ ವಾಪಾಸುಕೊಡುವದಕ್ಕೆ ಹೆಚ್ಚು ಗಮನಿಸಬೇಕು. ಸೊಸೈಟಿಗಳಿಂದ ಸಾಲ ಮರುಪಾವತಿಯ ಸಮಯವಾದ ಮಾರ್ಚಿ ತಿಂಗಳಲ್ಲೇ ಹೆಚ್ಚಿನ ಠೇವಣಾತಿಗಳ ಅವಧಿಯು ತೀರುವುದರಿಂದ ಇಷ್ಟರ ವರೇಗೆ ಬ್ಯಾಂಕಿನ ಕೆಲಸವು ಚೆನ್ನಾಗಿ ನಡೆಯುತ್ತಾ ಬಂದಿದೆ. ಹ್ಯಾಗೂ ಇನ್ನು ಮುಂದೆ ಠೇವಣಾತಿಗಳ ಅವಧಿಯನ್ನು ನಿಶ್ಚೈಸುವಾಗ ಬಹಳ ಎಚ್ಚರಿಕೆ ತೆಗೆದುಕೊಳ್ಳತಕ್ಕದ್ದು' ಎಂದು ಬರೆದಿರುವರು. ಬ್ಯಾಂಕಿನ ಮುಖ್ಯ ಸಂಗತಿಯಾದ ಠೇವಣಾತಿಗಳ ವಿಷಯ ರಿಜಿಸ್ಟ್ರಾರವರು ಕೊಟ್ಟಿರುವ ಸೂಚನೆಯನ್ನು ಬ್ಯಾಂಕಿನ ಡೈರೆಕ್ಟರುಗಳಿಗೂ ಕಾರ್ಯದರ್ಶಿಯವರಿಗೂ ನಾವು ಪುನಹ ಒತ್ತಿ ಹೇಳುತ್ತೇವೆ. ಬ್ಯಾಂಕಿನ ಇಷ್ಟರ ಮಟ್ಟಿನ ಜಯಕ್ಕೆ ಅದರ ಪರಿಪಾಲಕರನ್ನೂ, ಬಹು ಮುತುವರ್ಜಿಯಿಂದ ಕೆಲಸ ಮಾಡುವ ಗೌರವ ಕಾರ್ಯದರ್ಶಿ ಖಜಾನ್ಜಿಯವರನ್ನೂ, ಆಗಾಗ್ಯೆ ಆಲೋಚನೆಗಳನ್ನು ಕೊಡುತ್ತಿರುವ ರಿಜಿಸ್ಟ್ರಾರವರನ್ನೂ ಅಭಿನಂದಿಸುತ್ತೇವೆ.

ಸಂತಾನ ನಿರ್ಮೂಲ ಮಾಡಲಿಕ್ಕಾಗಿ ರೂಲ್ಸುಗಳನ್ನು ಮಾಡಲು ಏರ್ಪಾಡಾಗಿದ್ದ ಒಂದು ಕಮಿಟಿಯು ಏನೊಂದೂ ಕೆಲಸಮಾಡಲಿಲ್ಲವೆಂಬುದು ಶೋಚನೀಯವೇ ಸರಿ. ನಮ್ಮ ದೇಶೀಯರಲ್ಲಿ ಕೆಲವರು ಬರೀ ಹೆಸರುವಾಸಿಗೆ ಪ್ರಯತ್ನಿಸುವರೇ ಹೊರತು ದೇಶದ ಉನ್ನತಿಗಾಗಿ ಜವಾಬ್ದಾರಿಕೆಯನ್ನು ತೆರದುಕೊಂಡು ಕೆಲಸಮಾಡಲು ಮುಂದೆ ಬರುವುದು ಬಹಳ ಕಡಿಮೆ. ದೇಶ ಸೇವಕರು ಅತಿ ವಿರಳವಾಗಿರುವ ಈ ದೇಶದಲ್ಲಿ. ಇನ್ನಾದರೂ ಮಹನೀಯರು ದೊಡ್ಡ ಮನಸ್ಸು ಮಾಡಿ ಜನ ಸಮುದಾಯದ ಕೆಲಸಕ್ಕೆ ಸೊಂಟ ಕಟ್ಟುವರಾಗಿ ಕೋರುತ್ತೇವೆ. 'ಸಂತಾನ ರೂಲ್ಸನ್ನು ರಿಜಿಸ್ಟ್ರಾರವರೇ ತಯಾರಿಸುವರೆಂದೂ ಇದೊಂದು ಹೊಸ ಏರ್ಪಾಡಾದುದರಿಂದ ಉತ್ತಮ ಸ್ಥಿತಿಯಲ್ಲಿರುವ ಗ್ರಾಮಗಳಲ್ಲಿ ಪ್ರಯತ್ನಿಸಿ ಜಯ ಹೊಂದಬೇಕಾಗಿದೆ' ಎಂದೂ ಮೊದಲಾಗಿ ಸೂಚಿಸಿರುವರು. ಯಾವ ಕಾರ್ಯವಾಗಲೀ ಪ್ರಾರಂಭದಲ್ಲೇ ಫಕ್ಕನೆ ಜಯ ಹೊಂದುವದು ಅಪರೂಪ. ಆದುದರಿಂದ ಕೆಲವು ಗ್ರಾಮಗಳಲ್ಲಿ ಪ್ರಯತ್ನಿಸಿದನಂತರ ಅದರ ಪ್ರಯೋಜನವನ್ನು ಕಂಡು ಹಿಡಿಯಬಹುದು.

'316 ಕೇಸುಗಳಲ್ಲಿ 288 ತೀರ್ಮಾನಿಸಲ್ಪಟ್ಟವು: ಒಂದು ದಾವಾವಾದರೂ ಸಿವಿಲ್ ಕೋರ್ಟಿಗೆ ದಾಖಲ್ಮಾಡಲ್ಪಡಲಿಲ್ಲ. ಯಾವ ತೀರ್ಮಾನದ ಮೇಲೆಯೂ ಅಪ್ಪೀಲು ಮಾಡಲಾಗಲಿಲ್ಲ. ಡಿಕ್ರಿ ಮೊಬಲಗನ್ನು ವಸೂಲು ಮಾಡಲು ಗಿರ್ವಿಯ—ಸಾಗು ಯಾ ಜಮ್ಮ—ಭೂಮಿ ಯಾವದೂ ಹರಾಜುಮಾಡಲ್ಪಡಲಿಲ್ಲ.' ಈ ವಿಷಯಗಳಿಂದ ರಿಜಿಸ್ಟ್ರಾರವರ ಕೆಲಸವು ಎಷ್ಟರಮಟ್ಟಿಗೆ ತೃಪ್ತಿಕರವೆಂಬುವುದನ್ನು ವಾಚಕರೇ ಊಹಿಸಿಕೊಳ್ಳಬಹುದು.

'ಸಂಘಗಳ ಮೇಲ್ವಿಚಾರಕ್ಕಾಗಿ, ಕಳೆದ ವರ್ಷ 126 ದಿವಸ ತಿರುಗಿದ್ದರೂ ಈ ವರ್ಷ 97 ದಿವಸ ಮಾತ್ರ ತಿರುಗಲು ಸಾಧ್ಯವಾದದ್ದಕ್ಕೆ ವ್ಯಸನಪಡುತ್ತೇನೆಂದೂ, ನಾನು ಆಗಾಗ್ಗೆ ಟ್ರೆಜರಿ ಚಾರ್ಜಿನಲ್ಲಿರಬೇಕಾದುದೂ, ಸುಪರ್‌ವೈಜರುಗಳ ತರಬೇತಿಗಾಗಿ ಹೆಡ್‌ಕ್ವಾರ್ಟರ್ಸಿನಲ್ಲಿಯೇ ಹೆಚ್ಚು ಸಮಯ ಇರಬೇಕಾದುದೂ, ಕೌನ್ಸಿಲಿನ ಪ್ರಥಮ ಮೀಟಿಂಗು ಸಮಯದಲ್ಲೂ, ಅದಕ್ಕೆ ಮುಂಚೆಯೂ ಮಡಿಕೇರಿಯಲ್ಲಿರಬೇಕಾದುದೂ, ಇದಕ್ಕೆ ಕಾರಣಗಳೆಂದು ರಿಜಿಸ್ಟ್ರಾರರು ಹೇಳಿರುವರು. ರಿಜಿಸ್ಟ್ರಾರವರಿಗೆ ಸಹಕಾರ ಸಂಘಗಳನ್ನು ಸಂದರ್ಶಿಸಲು ಮೇಲಿನದರ ಎರಡರಷ್ಟು ಸಮಯವಾದರೂ ಇರಬೇಕಾದುದು ಅಗತ್ಯವಾದುದರಿಂದ ಅವರ ಬೇರೆ ಕೆಲಸಗಳನ್ನು ಕಡಿಮೆ ಮಾಡಬೇಕೆಂದು ನಾವು ಪುನಹ ಪುನಹ ಹೇಳಬೇಕಾಗಿಲ್ಲ.

'ಪಬ್ಲಿಕಿನವರೂ, 'ಕೊಡಗು' ಪತ್ರಿಕೆಯೂ ಈ ಚಳವಳದ ಅಭಿವೃದ್ಧಿಗೆ ಆಗುವಷ್ಟು ಸಹಾಯಮಾಡಿರುವರೆಂದೂ, ಸುಪರ್‌ವೈಜರುಗಳ ತರಬೇತಿಗೆ ಸಹಾಯಮಾಡಿದ್ದಕ್ಕೆ ಮೆ ಬಿ. ಶ್ಯಾಮಣ್ಣನವರಿಗೆ ವಂದಿಸುತ್ತೇನೆಂದೂ' ಬರೆದಿರುವರು. ದೇಶದ ಅಭಿವೃದ್ಧಿಯೇ ನಮ್ಮ ಪತ್ರಿಕೆಯ ಧ್ಯೇಯವಾಗಿರುವಾಗ್ಯೆ, ನಾವು ಸಹಕಾರ ಚಳವಳಕ್ಕೆ ಮಾಡಿದ ಸಹಾಯವು ಹೆಚ್ಚೇನೂ ಅಲ್ಲ. ಈ ವರದಿಯನ್ನು ಕಳುಹಿಸಿದಕ್ಕಾಗಿ ರಿಜಿಸ್ಟ್ರಾರವರಿಗೆ ನಮ್ಮ ವಂದನೆ.

ಕೊಡಗು ಲೆಜಿಸ್ಲೇಟಿವ್ ಕೌನ್ಸಿಲಿನ ಪ್ರೊಸೀಡಿಂಗ್ಸ್.

(ಕಳೆದ ವಾರದಿಂದ ಮುಂದರಿಸಿದ್ದು.)

16ನೇ ಠರಾವು.

ಮೆ ಕೆ ಸಿ ಚಿಣ್ಣಪ್ಪನವರು.

"ಬಲೆಯಿಂದ ಕೊಡಗಿನ ಹೊಳೆಗಳಲ್ಲಿ ಮೀನು ಹಿಡಿಯಕೂಡದೆಂತ ಇರುವ ರೂಲ್ಸನ್ನು ರದ್ದು ಪಡಿಸಬೇಕೆಂತ ಚೀಫ್ ಕಮಿಷನರಿಗೆ ಈ ಕೌನ್ಸಿಲು ಶಿಫಾರಸ್ಸು ಮಾಡುತ್ತದೆ."

ಕೊಡಗಿನ ಮುಖ್ಯ ಹೊಳೆಗಳಲ್ಲೂ ಮತ್ತು ಅವುಗಳಿಗೆ ಓಡಿ ಸೇರುವ ನದಿಗಳಲ್ಲೂ ವರ್ಷದ ಕೆಲವು ಭಾಗದಲ್ಲಿ ಬಲೆಯಿಂದ ಮೀನು ಹಿಡಿಯಬಾರದೆಂತ ಇರುವ ರೂಲಿನಿಂದ ವಿಧವಿಧ ಜಾತಿಗಳ ಮೀನುಗಳು ಹೆಚ್ಚಲಿ ಎಂಬ ಉದ್ದೇಶ ಆಗಿರಬಹುದು, ಉದ್ದೇಶವು ಒಳ್ಳೇದೇ ಇರಬಹುದು. ಆದರೆ ಆ ರೂಲಿನಿಂದ ಉದ್ದೇಶವು ಕೆಡುತ್ತದೆ. ಮೀನು ಹಿಡಿಯದಿದ್ದರೆ ದೊಡ್ಡಮೀನುಗಳು ಹೆಚ್ಚು ಚಿಕ್ಕಮೀನುಗಳನ್ನು ತಿಂದುಬಿಡುತ್ತವೆ. ಮತ್ತು ಮೀನಿನ ಇತರ ಶತ್ರುಗಳಾದ ನೀರುನಾಯಿ ಮುಂತಾದವು ಸಹ ಹೆಚ್ಚುತ್ತವೆ.

ಈ ರೂಲನ್ನು ತಪ್ಪಿಸಿಕೊಳ್ಳಲಿಕ್ಕಾಗಿ ಜನರು ಅಕ್ರಮವಾಗಿ ನೀರಿಗೆ ವಿಷಹಾಕಿ ನೀರಿನ ಎಲ್ಲಾ ಜೀವಜಂತುಗಳನ್ನು ಕೊಂದುಬಿಡುತ್ತಾರೆ. ತೋಟಹಾಕುವ ಪದ್ಧತಿಯು ಕೆಲವು ಕಡೆಗಳಲ್ಲಿ ಇದೆ. ಆದ್ದರಿಂದ ವರ್ಷವೆಲ್ಲಾ ಅಡ್ಡಿ ಇಲ್ಲದೆ ಬಲೆಯಿಂದ ಮೀನುಹಿಡಿಯಬಹುದೆಂತ ಮಾಡಿದರೆ ಈ ಕೆಡಕುಗಳೆಲ್ಲಾ ಹೋಗುತ್ತವೆ ಮತ್ತು ಜನರಿಗೆ ವಿಶೇಷವಾದ ಮತ್ತು ಆರೋಗ್ಯವಾದ ಒಂದು ಆಹಾರವನ್ನು ಒದಗಿಸಿಕೊಟ್ಟಂತೆ ಆಯಿತು.

ಮೆ ಚೌಡ್ಲ ಕಾಳಪ್ಪನವರು.

ಈ ಕೆಳಗಿನ ಕಾರಣಗಳಿಂದ ಠರಾವನ್ನು ನಾನು ಅನುಮೋದಿಸುತ್ತೇನೆ.

(1) ಈ ಅಡ್ಡಿಯಿಂದ ನಮ್ಮ ಹೊಳೆಗಳಲ್ಲಿ ಮೀನು ಹೆಚ್ಚುವದಿಲ್ಲ. ದೊಡ್ಡ ಮಳೆ ಹೋದನಂತರ ಮೀನೆಲ್ಲಾ ನಮ್ಮ ದೇಶದ ಹೊರಗೆ ಹೊಳೆಯ ದೊಡ್ಡ ಭಾಗಗಳಿಗೆ ಹೋಗಿಬಿಡುತ್ತವೆ.

(2) ಈಗ 12ವರ್ಷಗಳಿಂದ ತಡೆ ಇದ್ದರೂ ಮೀನು ಹೆಚ್ಚಿದ್ದೇನೂ ಕಾಣುವದಿಲ್ಲ.

(3) ಅತಿಬಡವರಿಗೆ ಆಹಾರವಾಗಿದೆ ಮತ್ತು ಇನ್ನು ಕೆಲವರಿಗೆ ತಮ್ಮ ಆಹಾರವನ್ನು ದೊರಕಿಸಿಕೊಡುವ ಉತ್ಪತ್ತಿಯಾಗಿದೆ.

(4) ಮೈಸೂರಲ್ಲಿ ಇಂಥಾ ತಡೆಯೇನೂ ಇಲ್ಲ.

ವಿಷದಿಂದಾಗಲೀ, ತೋಟದಿಂದಾಗಲೀ ಕೊಲ್ಲಬಾರದೆಂಬ ಅಡ್ಡಿಯನ್ನು ಇಟ್ಟುಕೊಂಡು ಬಲೆಯಿಂದ ಹಿಡಿಯಬಾರದೆಂಬ ಅಡ್ಡಿಯನ್ನು ತೆಗೆದುಹಾಕಿಬಿಡಬೇಕು.

ಮೆ. ಪಿ. ಬಿ. ಬೆಳ್ಯಪ್ಪನವರು.

ಅಧ್ಯಕ್ಷರೇ,

ಕೊಡಗಿನಲ್ಲಿ ಬಲೆಗಳಿಂದ ಮೀನು ಹಿಡಿಯ ಕೂಡದೆಂಬ ಅಡಚಣೆಯನ್ನು ತೆಗೆದುಹಾಕಲು ತಂದಿರುವ ಈ ಠರಾವಿಗೆ ನಾನು ಆಕ್ಷೇಪ ಕೊಡುತ್ತೇನೆ. ಕೊಡಗಿನ ಕೆಲವು ನದಿಗಳಲ್ಲಿ ವರ್ಷದ ಕೆಲವು ಭಾಗಗಳಲ್ಲಿಯೂ ಸಣ್ಣ ಕಣ್ಣಿನ ಬಲೆಗಳಿಂದ ಇಡೀ ವರ್ಷವೂ ಮೀನು ಹಿಡಿಯಕೂಡದೆಂದು ಸರಕಾರದವರು ಯಾಕೆ ಅಡ್ಡಿಮಾಡುತ್ತಿರುವರೆಂದು ನನಗೆ ಬಹಳಕಾಲ ತಿಳಿಯದೆ ಹೋಯಿತು. ಮೀನುಗಳ ಪ್ರಾಣಗಳಮೇಲೆ ಕರುಣೆಇಟ್ಟು ಅವುಗಳನ್ನು ಕಾಪಾಡುವದು ಸರಕಾರದವರ ಉದ್ದೇಶವಾದರೆ ಅವರ ಇಂಥಾ ಶ್ಲಾಘನೀಯವಾದ ಉದ್ದೇಶಕ್ಕೆ ವತ್ತಾಸೆ ಕೊಡಲು ನಾನು ಮೊದಲನೇಯವನಾಗುವೆನು. ಅವರು ಎಲ್ಲಾ ಜಾತಿಯ ಮೀನುಗಳನ್ನು ಎಲ್ಲಾ ತರದ ನಾಶದಿಂದ ಕಾಪಾಡಲು ಒಂದಿಷ್ಟಾದರೂ ಪ್ರಯತ್ನಿಸುತ್ತಿರುವದಿಲ್ಲವೆಂಬುದೇ ಅವರ ಉದ್ದೇಶ ಇದಲ್ಲವೆಂದು ಸ್ಪಷ್ಟವಾಗುತ್ತದೆ. ಮನುಷ್ಯರು ಮೀನುಗಳನ್ನು ಹಿಡಿಯಕೂಡದೆಂದು ಸರಕಾರದವರು ಕಾನೂನುಗಳನ್ನು ರೂಲ್ಸುಗಳನ್ನೂ ಮಾಡಿಕೊಳ್ಳಬಹುದು, ಆದರೆ ಮೀನುಗಳ ಬೇರೆ ಶತ್ರುಗಳಾದ ನೀರುನಾಯಿ, ದೊಡ್ಡ ಮೀನುಗಳು ಮುಂತಾದವುಗಳಿಗೆ ಮನುಷ್ಯರು ಹಿಡಿಯದಿರುವುದು ಬಹು ಅನುಕೂಲವಾಯಿತು.

ಸರಕಾರವು ಮೀನು ಹಿಡಿಯುವದಕ್ಕೆ ಅಡಚಣೆ ಮಾಡಿ ಕೊಡಗಿನ ನದಿಗಳಲ್ಲಿ ಮೀನು ಸಾಕುವದು, ಆಗಾಗ್ಗೆ ಅನುಕೂಲದ ಮೇಲೆ ಗಾಣಹಾಕಲಿಕ್ಕೂ ಗುಂಡುಹೊಡಿಯಲಿಕ್ಕೂ ನದಿಗಳಿಗೆ ಹೋಗುವ ಐಶ್ವರ್ಯವಂತರ ಪ್ರಯೋಜನಕ್ಕಾಗಿ ಎಂದು ದೇಶದ ಸಾಮಾನ್ಯ ಜನರಲ್ಲಿ ಒಂದು ನಂಬಿಕೆಯು ಹರಡಿಕೊಂಡಿದೆ. ಸಾಮಾನ್ಯ ಜನರ ಈ ನಂಬಿಕೆಯು ಸರಿಯೋ, ಯಾ ತಪ್ಪೋ ಎಂದು ನಾನು ಹೇಳಲಾರೆನು. ಆದರೆ **1915**ರಲ್ಲು ಕಾವೇರಿನದಿಯನ್ನು ಪರಿಶೋಧನೆಮಾಡಿದಂತ ಮೀನು ಪರೀಕ್ಷೆಯಲ್ಲಿ ಗಟ್ಟಿಗರಾದ ಮೆ ಹೆಚ್. ಸಿ ವಿಲ್ಸನ್‌ರವರ **ರಿಪೋರ್ಟನ್ನು** ನಾನು ಕೆಲವು ದಿವಸಗಳ ಹಿಂದೆ ನೋಡಿದ **ವರೇಗೆ ಇಂಥಾ ಅಡಚಣೆಗೆ ಬೇರೆಯಾವ ಕಾರಣವೂ ನನಗೆ ತೋರಿ ಬರಲಿಲ್ಲ. ಕೆಲವು ವರ್ಷಗಳ ವರೆಗೆ ಬೇರೆ ಬೇರೆ ತರದ ಮೀನುಗಳನ್ನು ಕಾಪಾಡಿದನಂತರ ನದಿಗಳ ಕೆಲವು ಭಾಗಗಳ**

ನ್ನು ವರ್ಷ ವರ್ಷವೂ ಮೀನು ಹಿಡಿಯಲು ಬಾಡಿಗೆಗೆ ಕೊಟ್ಟು ಸರಕಾರಕ್ಕೆ ಉತ್ಪತ್ತಿಯನ್ನು ಹೆಚ್ಚಿಸಬಹುದೆಂದು ಅವರು ರಿಪೋರ್ಟಿನಲ್ಲಿ ಸೂಚಿಸಿರುವರು. ಈ ಅಭಿಪ್ರಾಯವು ಕೊಡಗು ಜನಾಂಗಕ್ಕೆ ಹಚ್ಚೇನೂ ಕೂಡಿಸುವದಿಲ್ಲವಾದರೂ ಸಭಿಕರಿಗೆ ಬಾಧಕವೆಂದೇ ತೋರುತ್ತದೆ. ಆದರೆ ಅದನ್ನು ಜಾರಿಗೆ ತರಲು ಪ್ರಯತ್ನಿಸಿದರೆ ಅದು ಕಾರ್ಯಗತ ಮಾಡಿಸಲು ಸಾಧ್ಯವಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಮಳೆಗಾಲದ ಪ್ರಾರಂಭದಲ್ಲಿ ನೀರಿನ ಪ್ರವಾಹಕ್ಕೆ ಎದುರಾಗಿ ಹೋಗುವದು ಮೀನುಗಳ ಸ್ವಭಾವವಾದುದರಿಂದ ಅವುಗಳು ಆಗ ಮೈದಾನ ಸೀಮೆಗಳಿಂದ ನದಿಗಳ ಉದ್ಭವ ಸ್ಥಾನಗಳ ಕಡೆಗೆ ಮೇಲಕ್ಕೆ ಹತ್ತುತ್ತವೆ. ಕೊಡಗಿನಲ್ಲಿ ಅವು ಮೊಟ್ಟೆ ಇಟ್ಟು ಮರಿಮಾಡುತ್ತವೆ. ಬಳಿಕ ಸ್ವಸ್ಥಳಕ್ಕೇನೇ ಪುನಃ ಹೋಗುವದು ಅವುಗಳಿಗೆ ಸ್ವಾಭಾವಿಕವಾದುದರಿಂದ ಮಳೆಗಾಲದ ಕಡೇ ಭಾಗದಲ್ಲಿ ಅವುಗಳು ನೀರಿನ ಜೊತೆಯಲ್ಲಿ ಕೆಳಕ್ಕೆ ಇಳಿದು ಕೊಡಗಿನಿಂದ ಹೆಚ್ಚು ಕಮ್ಮಿ ಮೀನುಗಳೆಲ್ಲಾ ಮೈದಾನು ಸೀಮೆಗಳಿಗೆ ಹೋಗಿಬಿಡುತ್ತವೆ. ಆದುದರಿಂದ ಅವು ಮೈದಾನುಸೀಮೆಗಳನ್ನು ಬಿಟ್ಟು ಕೊಡಗಿನ ಎತ್ತರ ಸ್ಥಳಕ್ಕೆ ಬರುವುದು ಮರಿಮಾಡಲಿಕ್ಕೆ ಮಾತ್ರವೆಂದು ಗೊತ್ತಾಗುತ್ತದೆ. ಮಳೆಗಾಲದ ಪ್ರಾರಂಭದಲ್ಲಿ ಜನರನ್ನು ಮೀನು ಹಿಡಿಯಲಿಕ್ಕೆ ಬಿಡದಿದ್ದರೂ, ಕಡೇ ಭಾಗದಲ್ಲಿ ಹೆಚ್ಚು ಮೀನೇನೂ ಕೊಡಗಿನ ಹೊಳೆಯಲ್ಲಿ ಸಿಕ್ಕುವದಿಲ್ಲವೆಂಬುದು ಖಂಡಿತ. ಹೊಳೆಗಳ ಆಳವಾದ ಗುಂಡಿಗಳಲ್ಲಿ ಉಳಿಯುವ ಕೆಲವು ಮೀನುಗಳು ನೀರುನಾಯಿ ಮೊದಲಾದವುಗಳಿಂದ ನಾಶವಾಗಲ್ಪಡುತ್ತವೆ. ಇದರ ಜೊತೆಗೆ ದೊಡ್ಡ ಮೀನುಗಳು ಸಣ್ಣವುಗಳನ್ನು ತಿನ್ನುವದರಿಂದ ಎಲ್ಲವೂ ಮೀನುಗಳ ನಾಶಕ್ಕೆ ಸಹಾಯಕರವಾಗುತ್ತವೆ. ಆದುದರಿಂದ ಬಾಡಿಗೆಗೆ ಕೊಡಲು ಮೀನುಗಳನ್ನು ಕಾಪಾಡುವದು ಯೋಚನೆಯಲ್ಲಿ ಮಾತ್ರ ಒಳ್ಳೇ ಅಭಿಪ್ರಾಯವಾಗಿ ತೋರುತ್ತದೆ.

ಸರಕಾರದವರ ಈ ಅಭಿಪ್ರಾಯವು ನಡಿಸಲು ಸಾಧ್ಯವಾದರೂ ಕೂಡಾ ಶಾಸ್ತ್ರದಲ್ಲಿ ಅದು ಸರಿಯಾದದ್ದಲ್ಲ. ಇದರಿಂದ ಬಡವನ ಒಂದು ಹಕ್ಕನ್ನು ಹೋಗಲಾಡಿಸಿದಂತಾಗುತ್ತದೆ. ಬಹು ಸತ್ವವಿರುವಂಥ (ಮಾಂಸಾಹಾರಿಗಳಿಗೆ ಮಾತ್ರ) ಮತ್ತು ಸುಲಭವಾಗಿ ದೊರೆಯುವಂತ ಬಡವನ ವಿಶೇಷವಾದ ಆಹಾರವು ಮೀನಾಗಿದೆ. ಕಾಡು ಜಂತುಗಳ ಮಾಂಸಕ್ಕೂ ಕೂಡ ಬಡವನು ಕೋವಿ ಮದ್ದುಗುಂಡಿಗಾಗಿ ಸ್ವಲ್ಪ ಹಣ ಖರ್ಚುಮಾಡಬೇಕಾಗುತ್ತೆ. ಆದರೆ ಮೀನಿಗೆ ಬಹಳ ಕಮ್ಮಿ ಖರ್ಚು. ಆದುದರಿಂದ ಬಡ ಜನರನ್ನು ನದಿಗಳಲ್ಲಿ ಮೀನು ಹಿಡಿಯದಂತೆ ತಡೆಯುವದು ಬಹಳ ಅನ್ಯಾಯಕರ. ಪ್ರಕೃತಿಯೇ ಬಡವರಿಗೆ ಮೀನಿನ ರೂಪದಲ್ಲಿ ಸತ್ವವುಳ್ಳ ಆಹಾರವನ್ನು ಏರ್ಪಡಿಸಿರುವಾಗ್ಯೆ ಅವರ ಈ ಆಹಾರವನ್ನು ಹೋಗಲಾಡಿಸಲು ಸರಕಾರದವರಿಗೆ ಏನು ಹಕ್ಕಿದೆ?

ಕಾವೇರೀನದಿಯು ಹರಿದು ಹೋಗುವಂತ ಬೇರೆ ಜಿಲ್ಲೆಗಳಲ್ಲಿ ಮೀನು ಹಿಡಿಯುವ ಸ್ವತಂತ್ರವು ಜನರಿಗಿರುವಾಗ್ಯೆ ನಮ್ಮ ಈ ದೇಶದಲ್ಲಿ ಮಾತ್ರ ಕಾವೇರಿಯಲ್ಲಿ ಮೀನು ಹಿಡಿಯಕೂಡದೆಂದು ಸರಕಾರದವರು ಅಪ್ಪಣೆ ಮಾಡುವುದಕ್ಕೆ ಯಾವ ಕಾರಣವಿಲ್ಲವೆಂತಲೂ, ಹಾಗೆ ಮಾಡುವುದು ಆಶ್ಚರ್ಯಕರವಾಗಿಯೂ ಕಾಣುತ್ತದೆ. ನ್ಯಾಯವಾದ ರೀತಿಯಿಂದ ಮೀನು ಹಿಡಿಯಲು ಅಪ್ಪಣೆ ಮಾಡುವದರಿಂದ ಜನರನ್ನು ನ್ಯಾಯವಲ್ಲದ ಮತ್ತು ಎಲ್ಲರೂ ದೂಷಿಸತಕ್ಕ ವಿಷಮತ್ತು ಡೈನಾಮೈಟ್ (ತೋಟೆ) ಗಳನ್ನು ಹಾಕಿ ಎಲ್ಲವನ್ನೂ ನಾಶಮಾಡುವಂತ ವಿಧಾನಗಳಿಂದ ಮೀನು ಹಿಡಿಯಲು ಬಲತ್ಕರಿಸಿದಂತಾಗುತ್ತೆ.

ಈ ಕೆಲವು ಮಾತುಗಳಿಂದ, ಬಡಜನರ ಪ್ರತಿನಿಧಿಗಳ ಸಭೆಯವರು ಈ ವಿಷಯ ಚೆನ್ನಾಗಿ ಆಲೋಚಿಸಿ ಒಗ್ಗಟ್ಟಿನ ತೀರ್ಮಾನವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಮೆ ಟಿ ಜಿ ಭಾಸ್ಕರರವರು.

ಜವಾಬುಕೊಡುವಮುಂಚೆ 16ನೇ ಠರಾವಿಗೆ ಜವಾಬು ಕೊಟ್ಟರೆ ಸಾಕೋ ಅಥವ 17 18ನೇ ಠರಾವುಗಳೂ ಇದೇ ವಿಷಯವಾದರೂ ಸ್ವಲ್ಪ ಬೇರೆ ವಿಷಯವಾಗಿರುವದರಿಂದ ಅವಕ್ಕೂ ಜವಾಬು ಕೊಡಬೇಕೋ ಎಂತ ನನಗೆ ತಿಳಿಯಬೇಕಾಗಿದೆ.

ಮೆ ಪಿ ಬಿ ಚೆಂಗಪ್ಪನವರು

16ನೇ ಠರಾವಿನಲ್ಲಿ 17ನೇ ಠರಾವಿನ ಅಭಿಪ್ರಾಯವೇ ಇರುವದರಿಂದ, 17ನೇ ಠರಾವನ್ನು ನಾನು ಕಳುಹಿಸಿದ್ದ ಕಾರಣ 16ನೇ ಠರಾವಿಗೆ ಜವಾಬುಕೊಟ್ಟರೆ ಸಾಕೆಂತ ನಾನು ಹೇಳುತ್ತೇನೆ.

ಮೆ ಬೋಪಣ್ಣ ಕಾಳಪ್ಪನವರು.

18ನೇ ಠರಾವನ್ನು ನಾನೂ ಸಭೆಯಮುಂದೆ ತರುವದಿಲ್ಲ

ಮೆ ಟಿ ಜಿ ಭಾಸ್ಕರರವರು.

ಅಧ್ಯಕ್ಷರೇ, ಸಭೆಯವರು ಸ್ವಲ್ಪ ಸಮಾಧಾನ ಚಿತ್ತದಿಂದ ಕೇಳಬೇಕೆಂತ ಅಪೇಕ್ಷಿಸುತ್ತೇನೆ. ಮೀನು ಹಿಡಿಯಲಿಕ್ಕೆ ಇರುವ ಅಡ್ಡಿ ಏನು ಎಂಬುದನ್ನು ವಿವರಿಸಿ ತಿಳಿಸಬೇಕಾಗಿದೆ. ಮೊದಲು ಅಕ್ಕಿನಲ್ಲಿರುವ ಅಡ್ಡಿಗಳು ಯಾವವು ಎಂದು ನೋಡಿ, ಬೇರೆ ದೇಶಗಳಲ್ಲಿ ಇರುವ ಕಾನೂನನ್ನು ಅನುಸರಿಸಿ ಇಂಡಿಯಾ ಸರಕಾರದವರು 1897ರಲ್ಲಿ ಒಂದು ಕಾನೂನನ್ನು ಸುಂಚುರುಮಾಡಿದರು. ಆಕ್ಟ್ 4ನೇ ಸೆಕ್ಷನ್ ದೊಂದ? ಮೊದಲನೆ? ತೋಟೆಯಿಂದಲೂ, ವಿಷದಿಂದಲೂ ಮೀನು ಹಿಡಿಯಕೂಡದೆಂತ ಇದೆ. ಈ ಚಿಕ್ಕ ಬಾಬುಗಳ ಅಡ್ಡಿಗೆ ಈ ಸಭೆಯವರ್ತಾಕ್ಷೇಪಣೆ ಇದೆಯೆಂತ ತಿಳಿ

ದು ಸಂತೋಷವಾಯಿತು. ರೂಲ್ಸಿನಲ್ಲಿ ಏನು ಇದೆ ಎಂತ ನೋಡೋಣ. ಈ ಕೆಳಗಿನ ಬಾಬುಗಳಲ್ಲಿ ಚೀಫ್ ಕಮಿಷನರು ರೂಲ್ಸು ಮಾಡಬಹುದೆಂತ ಇದೆ.

ಮೊದಲನೇದು, ಇದ್ದಲ್ಲೇ ಇರುವ ಇಂಜಿನುಗಳ ವಿಷಯ ಹೆಸರು ವಿಶೇಷವಾಗಿ ಕೇಳುತ್ತೆ. ಆದರೆ ಇದರಿಂದ ಮೀರ ಸೊಪ್ಪಿನಿಂದ ಕಟ್ಟುವ ತಟ್ಟಿಗಳೂ, ಮತ್ತು ಪಾಟಿ, ಬಿದಿರಿನ ಕುಕ್ಕೆಗಳೂ, ಬಲೆ ಮೇರೆ ಈ ತರಹದ ಏರ್ಪಾಡು ಸಂಪೂರ್ಣವಾಗಿ ಅ ಹಿಡಿಸಲ್ಪಟ್ಟಿದೆ. ಇದಕ್ಕೆ ಯಾರದೂ ಆಕ್ಷೇಪವಿರಲಾರದೆಂತ ನಾನು ನಂಬುತ್ತೇನೆ. ಮೀನುಗಳಿಗೆ ಅತ್ತಿತ್ತ ಓಡಿಯಾಡಲು ಅಟಂಕವಿರಬಾರದು. ಅನಂತರ ಬಲೆಗಳ ಉಪಯೋಗ. ಎಷ್ಟು ಅಳತೆಯ ಕಣ್ಣಿನ ಬಲೆಯನ್ನು ಉಪಯೋಗಿಸಬಹುದು ಎಂಬ ವಿಷಯ. ಕೆಲವು ಹೊಳೆಗಳಲ್ಲಿ ಎರಡು ವರ್ಷದವರೆಗೆ ಯಾವ ತರದಿಂದಲೂ ಮೀನು ಹಿಡಿಯಬಾರದೆಂಬ ವಿಷಯವನ್ನೂ ಯಾವ ತರದ ಬಲೆಯನ್ನು ಹೇಗೆ ಉಪಯೋಗಿಸಬೇಕೆಂಬ ವಿಷಯವನ್ನೂ ಮತ್ತು ಎರಡು ವರ್ಷದ ವರೆಗೆ ಯಾವ ವಿಧದಿಂದಲೂ ಮೀನು ಹಿಡಿಯಕೂಡದೆಂಬ ವಿಷಯವನ್ನು ಯೋಚಿಸೋಣ.

1903ರಿಂದ ಒಂದೂವರೆ ಅಂಗುಲ ಇಂಚಿಗಿಂತ ಚಿಕ್ಕ ತೂತದ ಬಲೆಗಳನ್ನು ಯಾರಾಗಲೂ ಉಪಯೋಗಿಸಕೂಡದೆಂತ ರೂಲ್ಸ್ ಇದೆ. ಆ ಅಳತೆಯನ್ನು ನಿರ್ಣಯಿಸಲಿಕ್ಕೆ ಕಾರಣವೇನೆಂತ ನನಗೆ ಗೊತ್ತಿಲ್ಲ. 1917ರಲ್ಲಿ ಗತಿಸಿದ ಮೆ. ಹ್ಯಾಂಗ್ಟನ್ ಕಮಿಷನರಿಗೂ ಗತಿಸಿದ ರಾವ್‌ಬಹದ್ದೂರ್ ಮೆ. ಮುನಿಯಪ್ಪಂದ ಮುತ್ತಣ್ಣನವರಿಗೂ ನಡೆದ ಪತ್ರವ್ಯವಹಾರದಿಂದ ಈ ಕೆಳಗಿನ ವಿಷಯ ತಿಳಿದುಬರುತ್ತೆ.

ಜಮೀನ್‌ದಾರರ ಸಂಘದ ಪ್ರೆಸಿಡೆಂಟರು ಹೀಗೆ ಬರೆದರು ' 1903ನೇ ಇಸವಿಗೆ ಮೊದಲಿದ್ದ ರೂಲ್ಸುಗಳನ್ನೇ ಜಾರಿಗೆ ತಂದರೆ ಸಾಕೆಂತ ಸಭೆಯವರು ಹೇಳುವದಾಗಿದೆ. ಒಂದೂವರೆ ಇಂಚು ಮತ್ತು ಅದಕ್ಕಿಂತ ದೊಡ್ಡ ತೂತರದ ಬಲೆಗಳಲ್ಲಿ, ಮೀನು ಹಿಡಿಯಲು ಜನರನ್ನು ಬಿಡಬೇಕೆಂತ ಕೇಳುವದಾಗಿದೆ. ಮೆ. ಹ್ಯಾಂಗ್ಟನ್ನರು ಬರೆದದ್ದರಲ್ಲಿ ಏನೆಂದರೆ— 'ಇಂಚಿಗಿಂತ ಕಡಿಮೆಯ ತರದ ಬಲೆ ಇರಕೂಡದೆಂತ ಎಲ್ಲರೂ ಒಪ್ಪುವ ವಿಷಯವಾಗಿದೆ.' ಒಂದೂವರೆ ಇಂಚಿಗಿಂತ ಚಿಕ್ಕ ತೂತದ ಬಲೆಯನ್ನು ಉಪಯೋಗಿಸಲು ಬಿಡಬೇಕೆನ್ನುವದಕ್ಕೆ ಕಾರಣಗಳೇನೂ ಯಾರೂ ಹೇಳಲಿಲ್ಲ.

ವರ್ಷದ ಕೆಲವು ಭಾಗಗಳಲ್ಲಿ ಅಟಂಕಮಾಡುವ ವಿಷಯ ಯೋಚಿಸೋಣ. ಇದರ ಪಾತ್ರೆಯು ಸರಿಯಾಗಿ ಅರ್ಥವಾಗಲಿಲ್ಲ. ಮುಚ್ಚುವ ಕಾಲವನ್ನು ಆಗಿಂದಾಗ್ಯೆ ಬದಲಾಯಿಸಿದ್ದಾರೆ. ಕೊಡಗಿನ ಬೇರೆ ಬೇರೆ ಭಾಗಗಳಿಗೆ ಬೇರೆಬೇರೆ ಕಾಲಗಳಲ್ಲಿ ಅಟಂಕಮಾಡಿದ್ದಾರೆ. 1903ರಲ್ಲಿ ಮೊದಲು ರೂಲ್ಸು ಮಾಡಿದಾಗ ಕಾವೇರಿ, ಹಾರಂಗಿ, ಸಂಪಾಜೆ ಮತ್ತು ಬರಪೊಳೆ ಹೊಳೆಗಳಲ್ಲಿ ಮಾರ್ಚ್ 10ರಿಂದ ಜೂನ್ 10ರವರೆಗೆ ಅಟಂಕಿಸಿದರು. ಈ ಕಾನೂನು ಆಗಿಂದಾಗ್ಯೆ ಬದಲಾಯಿಸಲ್ಪಟ್ಟು ಈಗ ಮೊದಲಿನಂತೆಯೇ ಆಗಿದೆ. ಆದರೆ ಮಡಿಕೇರಿ ಮತ್ತು ಸೋಮವಾರಪೇಟೆ ತಾಲೂಕುಗಳಲ್ಲಿ 16ನೇ ಜನವರಿಯಿಂದ 30ನೇ ಜೂನ್ ವರೆಗೆ ಅಟಂಕಿಸಿದ್ದಾರೆ. ದಕ್ಷಿಣಕೊಡಗಿನಲ್ಲಿ 1ನೇ ಮಾರ್ಚಿಯಿಂದ ಜೂನ್ ಆಖೈರುವರೆಗೆ ಅಟಂಕಿಸಿದ್ದಾರೆ.

ಈ ಬದಲಾವಣೆಗಳು ಜಮೀನ್‌ದಾರರ ಸಂಘದ ಪ್ರೆಸಿಡೆಂಟರ ಸೂಚನೆ ಚರ್ಚಿಸಿ ಆದದ್ದಾಗಿದೆ. ಈ ವ್ಯತ್ಯಾಸಕ್ಕೆ ಕಾರಣವೇನೆಂದರೆ—ಪೂರ್ವಭಾಗದಲ್ಲಿ ಮೈಸೂರು ಒಸ್ತರ ಹಾವಳಿ ಹೆಚ್ಚಾಗಿತ್ತು. ಇವರನ್ನು ಬಿಡಬಾರದೆಂತ ಎಲ್ಲರೂ ಒಪ್ಪುವ ವಿಷಯವಾಗಿತ್ತು. ಕಾನೂನುಮೇರೆ ಬೇರೆ ಬೇರೆ ಜನರಿಗೆ ಬೇರೆ ಬೇರೆ ಹಕ್ಕುಗಳನ್ನು ಕೊಡಲು ಸಾಧ್ಯವಿಲ್ಲ. ಆದ್ದರಿಂದಲೇ ಕಾವೇರಿಯ ಕೆಳಗಿನ ಭಾಗಗಳಲ್ಲಿ ಹೆಚ್ಚು ಕಾಲ ಅಟಂಕಿಸಿದ್ದಾಗಿದೆ.

ಒಂದು ವಿಷಯದಲ್ಲಿ ಸ್ವಲ್ಪ ಉದ್ದವಾಗಿ ಚರ್ಚಿಸಬೇಕಾಗಿದೆ. ಈ ಠರಾವಿನಿಂದ ಬಡವನ ಹಕ್ಕುಗಳಿಗೆ ಅಟಂಕಿಸಿದ್ದೇವೆಂತ ಎಲ್ಲರೂ ಹೇಳಿದರು. ಇದೇ ವಾದದ ಮುಖ್ಯಾಂಶವಾಗಿದೆ. ಒಂದೂವರೆ ಇಂಚಿಗಿಂತ ಚಿಕ್ಕ ಕಣ್ಣಿನ ಬಲೆ ಉಪಯೋಗಿಸಕೂಡದೆಂಬುದೂ ಮತ್ತು ಕೆಲವು ಕಾಲದಲ್ಲಿ ಯಾವ ಬಲೆಯನ್ನೂ ಉಪಯೋಗಿಸಬೇಕು ಬಾರದೆಂಬುದೂ ಎರಡು ಮಾತ್ರಗಳೇ ಬಡವರಿಗೆ ಸಂಬಂಧಪಡುವವಾಗಿವೆ. ಈ ರೂಲುಗಳಿಗೆಲ್ಲಾ ಒಂದು ಪ್ರತಿಷೇಧವಿದೆ. ರಾತ್ರಿ ಗಾಣ ಕಟ್ಟಿ ಹಿಡಿಯಲಿಕ್ಕೆ ಏನೂ ಅಡ್ಡಿ ಇಲ್ಲ. ಈ ರೀತಿಯಲ್ಲಿ ಹೆಂಗಸು ಮೀನುಹಿಡಿಯುತ್ತಾರೆಂಬುದು ಎಲ್ಲರಿಗೂ ತಿಳಿದಿದೆ. ನ್ಯಾಯವಾಗಿ ನೋಡಿದರೆ ಬರು ನೀರು ಹರಿಸುವ ಇಂಜಿನು ಅಗತ್ಯವಿದೆ. ಇದನ್ನೂ ಅಟಂಕಿಸಬೇಕಿತ್ತು. ಆದರೆ ಬಡವರಿಗೆ ಈ ತರದಲ್ಲಿ ಮೀನು ಹಿಡಿಯುವ ಹಕ್ಕು ಬಹಳ ಮುಖ್ಯವಾದದ್ದೆಂತ ಯೋಚಿಸಿಯೇ ಸರಕಾರದವರು ಅದನ್ನು ಅಟಂಕಿಸಿರುವದಿಲ್ಲ. ಈಗ ಸಾವಿರಾರು ಇಂಥಾ ಗಾಣಗಳು ಉಪಯೋಗದಲ್ಲಿ ಇವೆಯೆಂತ ನನ್ನ ಒರಾರ್ಡಿನಿಂದ ಕಂಡುಬರುತ್ತದೆ. ಆದ್ದರಿಂದ ಬಡವನ ಕ್ಷೇಮವನ್ನು ಸರಕಾರದವರು ಮರೆತಿಲ್ಲ. ಚಿಕ್ಕ ಮೀನುಗಳನ್ನು ಸಹ ಹಿಡಿದು ಬಿಟ್ಟರೆ ಕ್ರಮೇಣ ದೊಡ್ಡಮೀನುಗಳೇ ಇಲ್ಲದಂತೆ ಆದೀತೆಂಬ ಕಾರಣದಿಂದ ಬಲೆ ಹಾಕಬಾರದೆಂತ ಮಾಡುವದಾಗಿದೆ. ಈ ವಿಷಯದಲ್ಲಿ ತನಿಖೆ ಮಾಡಬೇಕಾಗಿದೆಯೆಂತ ನಾನು ಒಪ್ಪುತ್ತೇನೆ. ಪೂರ್ತಿ ಸ್ವತಂತ್ರಕ್ಕೂ ಮೀನುಗಳನ್ನು ಉಳಿಸಿಕೊಳ್ಳುವದಕ್ಕೂ ಮಧ್ಯ ಒಂದು ರಾಜಿ ತೀರ್ಮಾನಮಾಡಿಕೊಳ್ಳಬೇಕಾಗಿದೆ. ಎಲ್ಲಾ ನಾಗರೀಕ ರಾಜ್ಯಗಳಲ್ಲೂ ಇದು ಜಾರಿಯಲ್ಲಿರುವದಾಗಿದೆ. ಇಲ್ಲಿ ಯಾವ ರೀತಿಯಲ್ಲಿ ಜಾರಿಯಲ್ಲಿ ಇಡಬೇಕೆಂಬದೇ ನಾವು ಯೋಚಿಸಬೇಕಾದದ್ದಾಗಿದೆ. ಈಗ ನಮ್ಮಲ್ಲಿ ಜಾರಿಯಲ್ಲಿರುವ ರೂಲ್‌ಗಳೇ ಸರಿಯೆಂತ ನಾನು ಹೇಳಲು ತಯಾರಾಗಿಲ್ಲ. ಮದ್ರಾಸಿನಲ್ಲಿ ತುಂಬಾ ಗೌರವಕ್ಕೆ ಪಾತ್ರರಾಗಿರುವ ಗತಿಸಿದ ಮೆ. ಹೆನ್ರಿವಿಲ್ಸನ್ನರು ಕಾವೇರಿಗೆ ಹೊಸ ಜಾತಿಮೀನು ಬಿಡುವ ಯೋಚನೆ ಇರುವದರಿಂದ ತಾತ್ಕಾಲಕ್ಕೆ ತಡೆ ಇರುವದು ಉತ್ತಮವೆಂತ 1917ರಲ್ಲಿ ಹೇಳಿದರು. ಕೊಂಸದಲ್ಲಿ ರವಾಗಲೇ ಇವರು ಮೃತರಾದರು. ಅವರನಂತರ ಬೇರೆ ಎಕ್ಸ್‌ಪರ್ಟ್ ಅಭಿಪ್ರಾಯವು ದೊರೆತಿಲ್ಲ. ಬಲೆಯ ಕಣ್ಣಿನ ವಿಷಯದಲ್ಲೂ ಯಾವ ಕಾಲದಲ್ಲಿ ಅಟಂಕಿಸಬೇಕೆಂಬ ವಿಷಯದಲ್ಲು ತನಿಖೆ ಮಾಡುತ್ತೇವೆಂತ ಸರಕಾರಕ್ಕಾಗಿ ನಾನು ಹೇಳುತ್ತೇನೆ.

ಠರಾವು ಈಗ ಇರುವಂತೆ ಒಪ್ಪಿಕೊಳ್ಳಲಿಕ್ಕಾಗುವದಿಲ್ಲ. ಠರಾವಿನಂತೆ ಮಾಡಲು ಸರಕಾರವನ್ನು ಕೇಳಲು ಸಕಾರಣವಾಗಿಲ್ಲ. ರೂಲನ್ನು ಪರೀಕ್ಷಿಸುವದೂ ಅಲ್ಲದೆ, ಯಾವ ರೀತಿಯಲ್ಲಿ ಬದಲಾಯಿಸ ಬಹುದೆಂತಲೂ ಯೋಚಿಸಲಾಗುತ್ತೆ. ಹೊಳೆಯ ಒಂದು ದಡದಲ್ಲಿ ಮೈಸೂರು ರೈತರು ಮೀನು ಹಿಡಿಯಬಹುದಂತ ಇರುವಾಗ ಇನ್ನೊಂದು ದಡದಲ್ಲಿ ಕೊಡಗು ರೈತರು ಹಿಡಿಯಬಾರದೆಂತ ಇರುವುದು ನ್ಯಾಯವಲ್ಲವೆಂತ ನಾನು ಒಪ್ಪುತ್ತೇನೆ. ಈ ವಿಷಯವನ್ನೆಲ್ಲಾ ಆಲೋಚಿಸಬೇಕಾಗಿದೆ. ಠರಾವು ತಂದವರೂ ಅನುಮೋದಿಸಿದವರೂ ಒಪ್ಪುವದಾದರೆ ಮೇಲೆ ಹೇಳಿದ ವಾಗ್ದಾನಕೊಡಲು ತಯಾರಿದ್ದೇನೆ.

ಮೆ. ಕೆ. ಚಿಣ್ಣಪ್ಪನವರು—ಸರಕಾರಿ ಮೆಂಬರು ಹಿಂದಿನ ಚರಿತ್ರೆಯನ್ನೆಲ್ಲಾ ಹೇಳಿದ್ದಕ್ಕೆ ಅವರನ್ನು ಅಭಿನಂದಿಸುತ್ತೇನೆ. ಜಮೀನ್‌ದಾರರ ಸಂಘದವರು 1913ನೇ ಇಸವಿ ರಾಗಾಯ್ತು ಮೀನು ಹಿಡಿಯಲು ಏನೂ ತಡ ಇರಬಾರದೆಂತ ಕೇಳುತ್ತಲಿದೆ. ಆದ್ದರಿಂದ ಮೀನು ಹಿಡಿಯಲು ಪೂರ್ತಿ ಸ್ವತಂತ್ರ ಕೊಡಬೇಕೆಂತ ಕೌನ್ಸಿಲಿನವರು ಕೇಳಿಕೊಳ್ಳಬೇಕಾಗಿದೆ. ಅಧ್ಯಕ್ಷರು ಠರಾವನ್ನು ಓಟಿಗೆ ಹಾಕಬೇಕೆಂತ ಕೋರುತ್ತೇನೆ.

ಮೆ. ಟಿ ಜಿ ಭಾಸ್ಕರರವರು—ನಾನು ಸರಕಾರದ ಪರವಾಗಿ ಒಂದು ಮಾತು ಕೊಟ್ಟಮೇಲೆ ಠರಾವನ್ನು ವಾಪಸುಮಾಡಿದರೆ ನಾನು ಕೊಟ್ಟಮಾತಿನಂತೆ ಸರಕಾರದವರು ನಡೆಕೊಳ್ಳುವರೆಂತ ನಾನು ಹೇಳಬಹುದು. ನಾನು ಅನುಮಾಯಿಸಿ ನಡಿಸುವದಿಲ್ಲವೆಂತ ಹೇಳುವದಿಲ್ಲ. ಆದರೆ ನನ್ನ ವಾಗ್ದಾನವು ಉಳಿಯಲಿಲ್ಲವೆಂತ ಹೇಳುತ್ತೇನೆ. ಠರಾವುಪಾಸಾದರೆ ಅದನ್ನು ಜಾರಿಮಾಡುವದೂ ಬಿಡುವದೂ ಚೀಫ್‌ಕಮಿಷನರಿಗೆ ಕೂಡಿದೆ.

ಠರಾವನ್ನು ಓಟಿಗೆ ಹಾಕಿದಾಗ ಈ ರೀತಿ ಓಟು ಕೊಡಲಾಯಿತು —

ಠರಾವಿಗೆ ಅನುಮತಿ ಓಟುಕೊಟ್ಟವರು.

1. ಮೆ ಬೋ ಕಾಳಪ್ಪನವರು
2. ಮೆ ಕೆ ಪಿ ಚಿಣ್ಣಪ್ಪನವರು
3. ಮೆ ಗಣಪಯ್ಯನವರು
4. ಮೆ. ಎಂ. ಎಂ ಚಿಣ್ಣಪ್ಪನವರು
5. ಮೆ ಎನ್ ಆರ್ ಸುಬ್ಬಯ್ಯನವರು.
6. ಮೆ ಸಿ ಎ ಬೆಳ್ಳಿಯಪ್ಪಯ್ಯನವರು.
7. ಮೆ ಪಿ ಬಿ ಚೆಂಗಪ್ಪನವರು.
8. ಮೆ ಪಿ ಟಿ ಕುಶಾಲಪ್ಪನವರು.
9. ಮೆ ಎ ಬಿ ಜಂಗಪ್ಪನವರು
10. ಮೆ ಎನ್ ಎಂ. ಪೊನ್ನಪ್ಪನವರು.
11. ಮೆ. ಕೆ ಎಂ ಮಂದಣ್ಣನವರು.

ಠರಾವಿಗೆ ವಿರೋಧಿಸಿದವರು.

1. ಮೆ ಟಿ ಜಿ ಭಾಸ್ಕರರವರು
2. ಮೆ ಕೆ. ಜಂಗಪ್ಪನವರು.
3. ಮೆ. ಎಸ್ ಎಸ್. ಶಾಮಣ್ಣರವರು
4. ಮೆ ವಿ ಜಿ. ಡೇರಿಂಗ್ಟನ್‌ರವರು.
5. ಮೆ. ಪಿ ಜಿ ಟಿಪ್ಪಿಂಗ್‌ರವರು.
6. ಮೆ ಎ ಇ ಜೆ ಸಿಕ್ವೇರನವರು.
7. ಮೆ. ಪಿ ಬಿ ಸೋದರ್ಸನವರು.
8. ಮೆ ಕೆ ಸುಬ್ರಾಯನವರು.

ಠರಾವು ಪಾಸಾಯಿತು.

ಕೌನ್ಸಿಲ್ ಮೀಟಿಂಗು.

(ಪ್ರಶ್ನೋತ್ತರಗಳು ಮುಂದುವರಿದದ್ದು)

ಮೆ. ಕೆ. ಪಿ ಚಿಣ್ಣಪ್ಪನವರು

130 ಪ್ರ (1) ಕಳೆದ ಮಳೆಯಿಂದ ಮೊಪ್ಪಸಾಲದ ಟ್ರಂಕ್‌ರೋಡ್‌ಗೆ ಉಂಟಾದ ಅಂದಾಜು ನಷ್ಟವೆಷ್ಟು?

(2) ಸದರಿ ಲೈನನ್ನು ರಿಪೇರಿಮಾಡಲಾಗುವುದೋ?

3. ರಿಪೇರಿ ಆಲೋಚನೆಮಾಡಿದ್ದರೆ, ಅದರ ಅಂದಾಜು ಖರ್ಚೆಷ್ಟು?

ಉ (1) ಮಾಪ್ಪಸಾಲದಲ್ಲಿ ಕಳೆದ ಮಳೆಯಿಂದ ಉಂಟಾಗಿರುವ ನಷ್ಟದ ಮೊಬಲಗು ಈಗಲೇ ಹೇಳಲು ಸಾಧ್ಯವಿಲ್ಲ. ಸುನ್ನೋತ್ತಿರುವ? ಈಗ ಕೆಲಸ ನಡಿಯುತ್ತಿರುವಲ್ಲಿವರೆಗೆ ಟ್ರಾಫಿಕ್ಕನ್ನು ನಡೆಸುವಂತೆ ಮಾಡಲು ಬೇಕಾಗುವ ರಿಪೇರಿ ಕೆಲಸ

ನ್ನು ಮಾತ್ರ ಫಾರೆಸ್ಟ್ ಇಂಜಿನೀಯರವರು ಅಂದಾಜು ಮಾಡಿರುವರು. ಆದರೆ ಇದು ಉರುಳಿಯಿಂದ ಮೇಲಕ್ಕೆ ಇರುವ ಲೈನನ್ನು ಒಳಕೊಂಡಿರುವುದಿಲ್ಲ.

(2) ನಿಜವಾಗಿಯೂ.

(3) ಮಲಬಾರಿನ ಕೂಟುಂಪೊಳೆ ಸೇತುವೆಯ ವಿನಹ ಬಾಕಿ ರಿಪೇರಿ ಕರ್ಚಿಗೆ ಅಂದಾಜು ರೂಪಾಯಿ 31,850.

ಮಿ. ಎ. ಬಿ. ಚಂಗಪ್ಪನವರು.

131. ಪ್ರ. (1) ಮೂವ್ರುಕೂಟದ ಟ್ರ್ಯಾಮ್ ಲೈನಿಗೆ ಕಳೆದ ನೆರೆಯಿಂದ ಉಂಟಾದ ನಷ್ಟದ ಅಂದಾಜು ಎಷ್ಟು ?

(2) ಅದನ್ನು ರಿಪೇರಿಮಾಡಲು ಯೋಚಿಸಲಾಗಿದೆಯೋ, ಯೋಚಿಸಿದ್ದರೆ ಎಷ್ಟು ಕರ್ಚಿನಿಂದ ?

(3) ಮಾರಾಟಕ್ಕೆ ಸರಿಮಾಡಿ ಸ್ಟಾಕಿನಲ್ಲಿಟ್ಟಿದ್ದ ಮರವು ಒಲ್ಯಪಟ್ಟಾಮಿನಲ್ಲಾಗಲೀ, ಯಾ, ತೇಲಿಸುವ ಸ್ಥಳದಲ್ಲಾಗಲೀ, ನೀರಿನ ಪ್ರವಾಹದಿಂದ ಕೊಚ್ಚಲ್ಪಟ್ಟಿತೋ ?

(4) ಕಳೆದ ವರ್ಷದ ಅನುಭವದಿಂದ ಈ ತರದ ನಷ್ಟಗಳನ್ನು ನಿವಾರಿಸಿಕೊಳ್ಳಲು ಮೊದಲೇ ಏನಾದರೂ ಎಚ್ಚರಿಕೆ ವಹಿಸಿಕೊಂಡರೋ ?

ಉ. (1) 130ನೇ ನವಾಲಿನ 1ನೇ ಸೇರಿದ ಉತ್ತರ ನೋಡತಕ್ಕದ್ದು.

(2) ಈ ವಿಷಯವು ಚೀಫ್ ಕಮಿಷನರವರ ಇನ್‌ಸ್ಪೆಕ್ಷನ್ನು ಕಾಯುತ್ತಿದೆ.

(3) ಇರ್ಕೂರಿನಿಂದ 167 ಮರದ ತುಂಡುಗಳೂ 281 ಗಣೆಗಳೂ, ಮೂವ್ರುಕೂಟದಿಂದ 34 ಮರದ ತುಂಡುಗಳೂ, 406 ಗಣೆಗಳೂ ಕೊಚ್ಚಲ್ಪಟ್ಟವು. ಒಲ್ಯಪಟ್ಟಾಮಿನಿಂದ ಏನೂ ಹೋಗಲಿಲ್ಲ.

(4) ಹೌದು, ಮರದ ತುಂಡುಗಳು ಜೊತೆಯಲ್ಲಿ ಕಟ್ಟಲ್ಪಟ್ಟು ದಕ್ಕಿನಮೇಲೆ ಎಳೆಯಲ್ಪಟ್ಟವು.

132. ಪ್ರ. (1) ಬಜೆಟ್ಟಿನಲ್ಲಿ ಕಾಣಿಸಿರುವಂತೆ ಫಾರೆಸ್ಟು ಇಲಾಖೆಗೆ ಒಬ್ಬ ವೆಟರಿನರಿ ಅಸಿಸ್ಟೆಂಟರನ್ನು ನೇಮಿಸಲಾಗಿದೆಯೋ ?

(2) ಇಲ್ಲವಾದರೆ ತಡಮಾಡಲು ಕಾರಣವೇನು ?

(3) ಈಗಿನವರನ್ನು ತಾಲೋಕಿನ ಕೆಲಸಕ್ಕೆ ಬಿಟ್ಟು, ಅವರ ಸ್ಥಳಕ್ಕೆ ಬೇರೆಯವರನ್ನು ನೇಮಿಸುವ ತರದೂತು ಬೇಗನೆ ಮಾಡಲಾಗುವದೊ ?

ಉ. (1) ಮತ್ತು (2) ಯಾವ ಗ್ರೇಡಿನ ಉದ್ಯೋಗಸ್ಥನನ್ನು ನೇಮಿಸಬೇಕೆಂಬುದು ತೀರ್ಮಾನಿಸುವುದು ಅವಶ್ಯವಾಗಿರುವದರಿಂದ ಆಧರ ವಿಷಯ ಪತ್ರವ್ಯವಹಾರಗಳು ನಡೆಯುತ್ತಿದ್ದವು. ಈಗಿರುವ ವೆಟರಿನರಿ ಉದ್ಯೋಗಸ್ಥರ ಸಂಖ್ಯೆಯನ್ನು ಹೆಚ್ಚಿಸಿ ಆಗಾಗ್ಗೆ ಒಬ್ಬರನ್ನು ಚೀಫ್ ಫಾರೆಸ್ಟ್ ಆಫೀಸರವರ ಕೈಕೆಳಗೆ ಕೆಲಸಮಾಡಲು ಬಿಡುವಂತೆ ಈಗ ತೀರ್ಮಾನಕ್ಕೆ ಬಂದಿದೆ.

(3) ನಿವಾರಿಸಲಾಗದಂತ ತಡ ಎಂದಿಗೂ ಸಂಭವಿಸಲಿಕ್ಕಿಲ್ಲ.

ಮಿ. ಕೆ. ಪಿ. ಚಿಣ್ಣಪ್ಪನವರು.

133. ಪ್ರ. (ಎ) ಸುಭೇದಾರರು, ಸಬ್ ಅಸಿಸ್ಟೆಂಟ್ ಸರ್ಜನರು, ಮತ್ತು ವೆಟರಿನರಿ ಅಸಿಸ್ಟೆಂಟರು ಮೊದಲಾದ ಉದ್ಯೋಗಸ್ಥರು ಒಂದೇ ಸ್ಥಳದಲ್ಲಿ ಐದು ವರುಷಕ್ಕಿಂತ ಹೆಚ್ಚು ಇರುವುದು ಉಂಟೋ, ಹಾಗಿದ್ದರೆ ಅಂಥವರನ್ನು ವರ್ಗಾಯಿಸುವ ಯೋಚನೆ ಸರಕಾರಕ್ಕೆ ಉಂಟೋ ? (ಬಿ) ಸಿವಿಲ್ ಸರ್ವಿಸ್ ರೆಗ್ಯುಲೇಶನಿನ ಪ್ರಕಾರ ಗೆಜೆಟೆಡ್ ಉದ್ಯೋಗಸ್ಥರು ಒಂದು ಸ್ಥಳದಲ್ಲಿ ಐದು ವರುಷಗಳಿಗಿಂತ ಹೆಚ್ಚು ಇರಬಹುದೋ, ಹಾಗೆ ಕೂಡದಿದ್ದರೆ ಅದರ ತೊಂದರೆಗಳನ್ನು ಸರಕಾರದವರು ಯೋಚಿಸಿದ್ದಾರೋ ?

ಉ. (ಎ) ವೆಟರಿನರಿ ಅಸಿಸ್ಟೆಂಟರು ಐದು ವರುಷಕ್ಕಿಂತ ಹೆಚ್ಚು ಒಂದು ಸ್ಥಳದಲ್ಲಿ ಇದ್ದಾರೆ. ಉತ್ತರವು 'ಇಲ್ಲ' ವೆಂದಾಗಿದೆ.

(ಬಿ) ಈ ವಿಷಯ ಸಿವಿಲ್ ಸರ್ವಿಸ್ ರೆಗ್ಯುಲೇಶನಿನಲ್ಲಿ ಏನೂ ಇಲ್ಲ.

134. ಪ್ರ. (ಎ) ಕಳೆದ ವರುಷ ಮಡಿಕೇರಿ ತಾಲೋಕು ಸಬ್ ಟ್ರೆಜರಿಯಲ್ಲಿ ಆದ ಕಳವಿನ ಸಮ್ಮಂಧ ಕಾಗದ ಪತ್ರಗಳನ್ನೂ ತೀರ್ಮಾನಗಳನ್ನೂ ಕೌನ್ಸಿಲ್ ಮೇಜಿನ ಮೇಲೆ ಇಡಲಾಗುವುದೋ ?

(ಬಿ) ವ್ಯಸನರಿನ ಹಣ ಭರ್ತಿ ಮಾಡಲ್ಪಟ್ಟಿತೋ, ಮತ್ತು ಹ್ಯಾಗೆ ?

ಉ. (ಎ) ಮತ್ತು (ಬಿ) ಕೇಸಿನ ಕಾಗದಗಳನ್ನು ಮೇಜಿನ ಮೇಲೆ ಇಡಲಾಗುವುದಿಲ್ಲ ಮತ್ತು ಇಲಾಖೆಯ ನಡತೆಯ ವಿಷಯದಲ್ಲಿ ಸಾಧಾರಣವಾಗಿ ತಿಳಿಯಪಡಿಸಲಾಗುವುದಿಲ್ಲ. ಕೇಸಿನ ಸಿಚ್ಚುತಿ ಏನೆಂದರೆ—1923ನೇ ಏಪ್ರಿಲ್ 13ರಲ್ಲು ತಾಲೋಕು ಆಫೀಸಿನೊಳಗೆ ಕಳ್ಳರು ನುಗ್ಗಿ 436-8-0 ಆಣೆಯನ್ನು ಕಬ್ಬಿಣದ ಪೆಟ್ಟಿಗೆಯಿಂದ ಕದ್ದರು. ಖಜಾನೆಯನ್ನು ರಾತ್ರಿ ಕಾವಲು ಇದ್ದಾಗ್ಯೂ ಬೀಗಗಳಿಲ್ಲದ ಒಂದು ಸರಿಯಾಗಿಲ್ಲದ ಪೆಟ್ಟಿಗೆಯಲ್ಲಿ ಹಣ ಇಟ್ಟಿದಕ್ಕಾಗಿ ಸುಭೇದಾರರು ಮತ್ತು ಶಿರಸ್ತೆದಾರರು ಜವಾಬ್ದಾರರಾದುದರಿಂದ ಕದ್ದ ಹಣವನ್ನೆಲ್ಲಾ ಅವರಿಂದ ಭರ್ತಿ ಮಾಡಲಾಯಿತು.

135. ಪ್ರ. (ಎ) ಅನೇಕ ಉದ್ಯೋಗಸ್ಥರು ಟೆರಿಟೋರಿಯಲ್ ಪಟಾಲಾಮಿಗೆ ಸೇರಿ ತರಬೇತಿನಲ್ಲಿರುವಾಗ ಅವರ ಬದಲಿಗೆ ಬೇರೆ ಯಾರನ್ನೂ ನೇಮಿಸದೆ ಇರುವುದರಿಂದ ರೈತರಿಗೆ ಉಂಟಾಗುವ ಕಷ್ಟಗಳು ಸರಕಾರದವರ ಗಣನೆಗೆ ಬಂದಿದೆಯೋ ?

(ಬಿ) ಹಾಗೆ ಉದ್ಯೋಗಸ್ಥರು ತರಬೇತಿಗೆ ಹೋಗುವಾಗ ಅವರ ಆಫೀಸುಗಳಲ್ಲಿ ಎಂದಿನಂತೆ ಕೆಲಸವು ಸರಾಗವಾಗಿ ನಡೆಯುತ್ತದೆಯೋ ?

(ಸಿ) ತರಬೇತಿನಲ್ಲಿರುವಾಗ ಅಂಥಾ ಆಫೀಸರುಗಳ ಸಂಬಳವನ್ನು ಇಂಪೀರಿಯಲ್ ಸರಕಾರದಿಂದ ಕೊಡಿಸುವಂತೆ ಸರಕಾರದವರು ಏನಾದರೂ ಏರ್ಪಾಡು ಮಾಡಿರುವರೋ ?

ಉ. (ಎ) ಮತ್ತು (ಬಿ) ಅಸಿಸ್ಟೆಂಟ್ ಕಮಿಷನರವರ ರೆವಿನ್ಯೂ ಅಧಿಕಾರವು ಟ್ರೆಜರಿ ಅಸಿಸ್ಟೆಂಟ್ ಕಮಿಷನರವರಿಗೆ ಆಕಾಲಕ್ಕೆ ಕೊಡಲ್ಪಟ್ಟಿತ್ತು. ಒಬ್ಬ ಸುಭೇದಾರರ ಮತ್ತು ಇಬ್ಬರು ಪಾರುಪತ್ತೆಗಾರರ ಬದಲಿಗೆ ಬೇರೆಯವರನ್ನು ನೇಮಿಸಲಾಗಿತ್ತು. ನಾಡು ಆಫೀಸಿನ 11 ಜನರು ತರಬೇತಿನಲ್ಲಿದ್ದರು, ಅವರ ಬದಲಿಗೆ ಯಾರನ್ನೂ ನೇಮಿಸಿರಲಿಲ್ಲ. ಫಿರ್ಯಾದುಗಳೇನೂ ಬರಲಿಲ್ಲ ಮತ್ತು ರೆವಿನ್ಯು ಆಫೀಸುಗಳಲ್ಲಿ ಕೆಲಸಕ್ಕೆ ತೊಂದರೆ ಏನೂ ಆಗಲಿಲ್ಲ.

(ಸಿ) ಉದ್ಯೋಗಸ್ಥರಿಗೆ ಅವರ ಮಿಲಿಟರಿ ರ್‍ಯಾಂಕಿನ ಪ್ರಕಾರ ಮಿಲಿಟರಿ ಇಲಾಖೆಯಿಂದ ಸಂಬಳ ಕೊಡಲಾಯಿತು; ಮಿಲಿಟರಿ ಸಂಬಳವು ಸಿವಿಲ್ ಸಂಬಳಕ್ಕಿಂತ ಕಡಿಮೆಯಾದಲ್ಲಿ ಕಡಿಮೆಯಾದಷ್ಟು ಸಿವಿಲ್ ಇಲಾಖೆಯಿಂದ ಕೊಡಲಾಯಿತು.

ಹೊಗೆಸೊಪ್ಪು.

ಒಂದು ಪೌಂಡು ತೂಕದಷ್ಟಿರುವ ಹೊಗೆಯಸೊಪ್ಪು ಮುನ್ನೂರು ಜನಗಳನ್ನು ಕೊಲ್ಲುತ್ತದೆ!

ಹೊಗೆಯ ಸೊಪ್ಪನ್ನು ಸೇವಿಸುವವರು ಕೋಟ್ಯಾನು ಕೋಟಿ ಜನಗಳಿರುವರು. ಅವರೆಲ್ಲರೂ ಅದರ ದಾಸಾನುದಾಸರಾಗಿರುವರು. ಇದರ ಉಪಯೋಗ ಈಚೆಗೆ ಮೂರು ನಾಲ್ಕು ಶತಮಾನಗಳಿಂದ ಬಂದಿರುತ್ತದೆ. ಮನುಷ್ಯವರ್ಗದಲ್ಲಿ ಇದು ಸಾರ್ವತ್ರಿಕ ಹರಡುತ್ತಾ ಇದೆ. ನಾಗರೀಕರಿಂದ ಮೊದಲ್ಗೊಂಡು ಕಾಡುಜನಗಳೂ ಕೂಡ ಇದನ್ನು ಉಪಯೋಗಿಸುತ್ತಾ ಇದ್ದಾರೆ.

ನಿಕೋಟೈನ್.

ಈ ಹೊಗೆಯಸೊಪ್ಪಿನಲ್ಲಿ ಮಬ್ಬನ್ನುಂಟುಮಾಡತಕ್ಕಂಥಾ ಒಂದು ವಿಷಪದಾರ್ಥವಿದೆ. ಅದಕ್ಕೆ 'ನಿಕೋಟೈನ್' ಎನ್ನುತ್ತಾರೆ. ಅದು ಎಣ್ಣೆಯಂತಿದೆ. ಭಟ್ಟಿ ಇಳಿಸುವ ಮಾರ್ಗದಿಂದ ಈ ಪದಾರ್ಥವನ್ನು ಎಲೆಯಿಂದ ಪ್ರತ್ಯೇಕಿಸಬಹುದು. ಸಾಧಾರಣವಾಗಿ ನೂರಕ್ಕೆ ಎರಡರಿಂದ ಎಂಟು ಭಾಗದವರಿವಿಗೂ 'ನಿಕೋಟೈನ್' ಎಂಬ ವಸ್ತುವಿರುವುದು. ಕೆಂಟುಕಿ ಮತ್ತು ವರ್ಜೀನಿಯಾ ಎಂಬ ಪ್ರದೇಶದ ಎಲೆಗಳಲ್ಲಿ ನೂರಕ್ಕೆ ಆರರಿಂದ ಏಳರ ವರಿವಿಗೂ ಇರುವುದು. ಸರಾಸರಿ ಒಂದು ಪೌಂಡು ಹೊಗೆಸೊಪ್ಪಿನಲ್ಲಿ ಮುನ್ನೂರ ಎಂಬತ್ತು 'ಗ್ರೈನ್' ಗಳಷ್ಟು ವಿಷಪದಾರ್ಥವಿರುವುದೆಂದೂ ಪತ್ತರ ಒಂದು ಭಾಗವು ನಾಯಿಯೊಂದನ್ನು ಹತ್ತು ನಿಮಿಷಗಳಲ್ಲಿ ಕೊಲ್ಲಬಲ್ಲದೆಂದೂ ನಿರ್ಧರಿಸಿರುತ್ತಾರೆ. ಒಂದು ಸಂದರ್ಭದಲ್ಲಿ ಒಬ್ಬಮನುಷ್ಯನು ಈ ವಿಷಪದಾರ್ಥದ ಸೇವನೆಯಿಂದ ಮೂವತ್ತು ನಿಮಿಷಗಳಲ್ಲಿ ಮರಣವನ್ನೇ ಹೊಂದಿದನು.

ಒಂದು ಪೌಂಡು ಹೊಗೆಯಸೊಪ್ಪಿನಲ್ಲಿ ಮುನ್ನೂರು ಜನಗಳನ್ನು ಕೊಲ್ಲುವಷ್ಟು ತಾಕತ್ತಿದೆ. ಒಂದು ಹೊಗೆಯ ಸುತ್ತಿನಲ್ಲಿ (cigar) ಇಬ್ಬರ ಪ್ರಾಣವನ್ನು ಹೀರುವಷ್ಟು ವಿಷವಿದೆ.

ಪ್ರಾಣಿಗಳನ್ನು ಕೊಲ್ಲುವುದಕ್ಕೆ ಈ ನಿಕೋಟೈನ್ ಎಣ್ಣೆಯನ್ನು ಉಪಯೋಗಿಸುತ್ತಿದ್ದರು. ಮೂವತ್ತು ವರ್ಷಗಳ ಕೆಳಗೆ ಕೌಂಟ್ ಬೊಕಾರ್ಮ್ (Count Bocarme) ಎಂಬುವನು ಆಸ್ತಿಗಾಗಿ ತನ್ನ ಅಪ್ಪನನ್ನು ಕೊಲ್ಲುವುದಕ್ಕೆ ಈ ಎಣ್ಣೆಯನ್ನು ಉಪಯೋಗಿಸಿದನಂತೆ.

ಹಾಟೆನ್‌ಟಾಟ್ಸ್ (Hottentots) ಎಂಬ ಜನಗಳು ಹಾವುಗಳನ್ನು ಕೊಲ್ಲುವುದಕ್ಕೆ ಈ ಎಣ್ಣೆಯನ್ನು ಉಪಯೋಗಿಸುತ್ತಾರೆ. ಒಂದು ಸೂಕ್ಷ್ಮ ಹನಿಯಷ್ಟು ಎಣ್ಣೆಯು ಮಿಂಚಿನೋಪಾದಿಯಲ್ಲಿ ಪ್ರಾಣವನ್ನು ತೆಗೆಯುತ್ತದೆ. ತೋಟಗಾರರು ವಿಷ ಕ್ರಿಮಿಗಳು ಗಿಡಗಳಿಗೆ ವ್ಯಾಪಿಸದಿರುವುದಕ್ಕೆ ಈ ಎಣ್ಣೆಯನ್ನು ಉಪಯೋಗಿಸುತ್ತಾರೆ.

ಹಾಗಾದರೆ ಹೊಗೆಸೊಪ್ಪನ್ನು ಸೇವಿಸುವ ಜನರೆಲ್ಲರೂ ಅದರ ವಿಷದಿಂದ ಏಕೆ ಸಾಯುವದಿಲ್ಲ?

ವಿಜ್ಞಾನ ಶಾಸ್ತ್ರಜ್ಞರು ಹೊಗೆಯಸೊಪ್ಪು ವಿಷಕರವೆಂದು ಸಾರುತ್ತಿದ್ದಾಗ್ಯೂ, ಕೋಟಿ ಜನಗಳಿಗಿಂತ ಅಧಿಕವಾಗಿ ಇದನ್ನು ಸೇವಿಸುತ್ತಾ ಇದ್ದಾಗ್ಯೂ, ಅದರ ವಿಷದಿಂದ ಏಕೆ ಸಾಯುವದಿಲ್ಲವೆಂಬದಾಗಿ ಪ್ರಶ್ನೆ ಕೇಳಬಹುದು. ಇದಕ್ಕೆ ಎರಡು ಕಾರಣಗಳಿವೆ.—

1. ನಮ್ಮ ಶರೀರಕ್ಕೆ ಉಂಟಾದ ತೊಂದರೆಗಳನ್ನು ಸುಮಾಡಿಕೊಳ್ಳುವಂಥಾ ಒಂದು ವಿಚಿತ್ರವಾದ ಶಕ್ತಿಯು ನಮ್ಮ ದೇಹದಲ್ಲಿರುವುದು. ಈ ಶಕ್ತಿ ಇರುವುದರಿಂದಲೇ ಅತಿ ಕಟು ವಿಷವಾದರೂ ನಿಧಾನವಾಗಿ ದೇಹಕ್ಕೆ ಸೇರುವುದು. ವಿಷವು ದೇಹಕ್ಕೆ ಸೇರಿ ವ್ಯಾಪಿಸುವದು ಹೆಚ್ಚು ಕಾಲ ಹಿಡಿಯುವುದರಿಂದ ಜಾಗ್ರತೆಯೂ ಅನರ್ಥಗಳಾಗುವದಿಲ್ಲ. 'ಸ್ಟ್ರಿಕ್ನಿಯ' (Strychnia) 'ಬೆಲ್ಲಡೋನಾ' (Belladona) ಮುಂತಾದ ವಿಷಗಳು ಕೂಡ ಸಾವಧಾನವಾಗಿ ಶರೀರಗತವಾಗುತ್ತವೆ.

2. ಹೊಗೆಯಸೊಪ್ಪನ್ನು ಉಪಯೋಗಿಸುವವರು ದೀರ್ಘಕಾಲ ಜೀವಿಸಲಾರರು. ಏತಕ್ಕೆಂದರೆ, ಶರೀರವು ವಿಷಮಯವಾಗಿ, ಆಯುಸ್ಸು ಕಡಮೆಯಾಗಿ ಮೂವತ್ತು ಅಥವಾ ನಲವತ್ತು ವರ್ಷಗಳ ಮುಂಚೆಯೇ ಸಾಯುವರು.

ವಿಷವು ಶರೀರಗತವಾಗುವುದು.

ಇಂಗ್ಲೆಂಡಿನ ಪ್ರಸಿದ್ಧ ವಿಜ್ಞಾನ ಶಾಸ್ತ್ರಜ್ಞರಾದ ಬಿ. ಡಬ್ಲ್ಯು. ರಿಚರ್ಡ್‌ಸನ್‌ರವರು ಹೊಗೆಯಸೊಪ್ಪಿನ ಸೇವನೆಯಿಂದ ವಿಷವು ಶರೀರಗತವಾಗುವುದನ್ನು ವರ್ಣಿಸಿದ್ದಾರೆ.

ಹೊಗೆಯಸೊಪ್ಪು ದೇಹಕ್ಕೆ ಅನೇಕ ತೊಂದರೆಗಳನ್ನುಂಟುಮಾಡುತ್ತದೆ.—

(ಅ) ರಕ್ತಸಂಚಾರವು ಕೆಡುವುದಲ್ಲದೆ ಕೆಂಪು ರಕ್ತಕಣಗಳು ವ್ಯತ್ಯಾಸಹೊಂದುತ್ತವೆ.

(ಆ) ಜೀರ್ಣ ಶಕ್ತಿಯು ಕಡಿಮೆಯಾಗಿ ಅಜೀರ್ಣ, ಮಲಬದ್ಧತೆಯುಂಟಾಗುವುದು.

(ಇ) ಎದೆಯ ಬಡಿತವು ಅತಿಕ್ರಮವಾಗುವುದು ಮತ್ತು ನಿಶ್ಪ್ರಾಣ ಹೊಂದುವುದು.

(ಈ) ದೃಷ್ಟಿಯು ಮಂದವಾಗುವುದು: ಕಿವಿಯು ಕಿವುಡಾಗುವುದು.

(ಉ) ಬುದ್ಧಿ ಶಕ್ತಿಯು ಮಂದವಾಗಿ 'ತಪ್ಪು' 'ಸರಿ' ಎಂದು ವಿಚಕ್ಷಣೆ ಮಾಡುವ ಭಾಗವು ಕಡಮೆಯಾಗುವುದು.

(ಊ) ನರಗಳು ನಿರ್ಬಲವಾಗುವುವು.

(ಋ) ಕೆಮ್ಮು, ಉಬ್ಬಸ, ಮುಂತಾದ ವ್ಯಾಧಿಗಳು ಉಂಟಾಗುವುವು.

ಮೇಲೆ ಹೇಳಿರುವ ಅಂಶಗಳು ಒಬ್ಬ ಪ್ರಸಿದ್ಧ ಶಾಸ್ತ್ರಜ್ಞರಿಂದ ಬಂದಿರುವನ್ನಲ್ಲದೆ, ಅದು ಅವರ ಶೋಧನೆಯ ಹಾಗೂ ಅನುಭವಸಿದ್ಧವಾದ ವಿಷಯವಾಗಿದೆ. ಆದ್ದರಿಂದ ಅವರ ನುಡಿಗಳಲ್ಲಿ ಅವಿಚಾರಪಡುವ ಪ್ರಸಂಗವಿಲ್ಲ.

ಅನುಭವಸಿದ್ಧವಾದ ವಿಷಯಕ್ಕೆ ತರ್ಕವಿತರ್ಕಗಳನ್ನು ನಡೆಸುವುದು ಮೌಢ್ಯತನ. ಹೆಚ್ಚು ಹೇಳುವುದೇನು? ಹೊಗೆಯಸೊಪ್ಪು ವಿಷಕರವಾದದ್ದು. ಹೆಚ್ಚಾಗಿ ಉಪಯೋಗಿಸುವುದರಿಂದ ಮರಣವೂ, ಸಾಧಾರಣವಾಗಿ ಉಪಯೋಗಿಸುವುದರಿಂದ ಹಾನಿಯೂ ಬಾರದೇ ಇರದು. ಅದರಿಂದ ಉಚ್ಛ್ವಾಸಿಸುವ ವಾಯುವು ಅಶುದ್ಧವಾಗುವುದು, ಜೀರ್ಣಕಾರ್ಯವು ಕೆಡುವುದು, ರುಚಿ ಮತ್ತು ವಾಸನೆಗಳು ಗೊತ್ತು ಹತ್ತದಂತಾಗುವುದು, ರಕ್ತವು ಕೆಡುವುದು, ಬುದ್ಧಿಯು ಶೂನ್ಯವಾಗುವುದು, ಎದೆಯು ಅಡ್ಡದಿಡ್ಡಿಯಾಗಿ ಒಡೆಯುವುದು, ನರಗಳ ಶಕ್ತಿ ಕುಂದುವುದು, ಮಾಂಸಖಂಡಗಳು ನವೆಯುವುವು, ಯಕೃತ್ತು ತಡೆಯಲ್ಪಡುವುದು, ದೃಷ್ಟಿಯು ಮಂದವಾಗುವುದು, ಚರ್ಮಕ್ಕೆ ಕರೆಹತ್ತುವುದು, ಅಲ್ಲದೆ ಶರೀರದ ಯಾವ ಭಾಗಕ್ಕಾದರೂ ಅದರ ಸಂಬಂಧ ಉಂಟಾದರೆ ದೌರ್ಬಲ್ಯ ಉಂಟಾಗಿ ಪ್ರಾಣವನ್ನೇ ಹರಣಮಾಡುವುದು. ಹಲ್ಲುಗಳು ಜಾಗ್ರತೆ ಉದುರುವುದು, ಕೆಮ್ಮು, ಬಾಯಿಯಿಂದ ಹೊರಡುವ ದುರ್ವಾಸನೆ, ಮಲಬದ್ಧತೆ ಮುಂತಾದ ದುರ್ಗುಣಗಳೆಲ್ಲವೂ ಇದರ ಪ್ರಭಾವದಿಂದಲೇ. ವೀರ್ಯವನ್ನು ಶೋಷಿಸುವುದಲ್ಲದೇ ಬೆಳವಣಿಗೆಯನ್ನು ಕಡಿಮೆಮಾಡಿ ಜೀವವನ್ನು ಪ್ರಾಯದಲ್ಲೇ ಹೀರುತ್ತದೆ.

ಹೊಗೆಯಸೊಪ್ಪು ಮೂರು ವಿಧವಾದ ಉಪಯೋಗದಲ್ಲಿದೆ. ಚೂರ್ಣಘ್ರಾಣ, ಧೂಮಪಾನ, ದಂತಚರ್ವಣ ಈ ಮೂರು ವಿಧಗಳಿಂದಲೂ ಮೇಲೆ ಹೇಳಿದ ದುರ್ಗತಿಗಳುಂಟಾಗುವುವು.

ಹೊಗೆಯಸೊಪ್ಪು ಮತ್ತು ಕ್ಷಯ.

ಅಶುದ್ಧವಾದ ವಾಯು ಸೇವನೆಯಿಂದ ಶ್ವಾಸಕೋಶ ಸಂಬಂಧವಾದ ರೋಗವು ಪ್ರಾಪ್ತವಾಗುವದೆಂದು ಎಲ್ಲರಿಗೂ ತಿಳಿದೇ ಇದೆ. ಕ್ಷಯರೋಗವು ಅಶುದ್ಧವಾದ ವಾಯುಸೇವನೆಯಿಂದ ಬರುವುದು. ಏತಕ್ಕೆಂದರೆ ರಕ್ತವನ್ನು ಶುದ್ಧಿಮಾಡತಕ್ಕ ಆಮ್ಲಜನಕವು ಗಾಳಿಯಲ್ಲಿಲ್ಲದೆ ಕೇವಲ ಕಲ್ಮಷವಾದ ವಾಯುವನ್ನು ಶ್ವಾಸಿಸುವುದರಿಂದ ವಿಷವು ರಕ್ತದಲ್ಲೆಲ್ಲಾ ಹೆಚ್ಚಾಗಿ ವ್ಯಾಪಿಸುತ್ತದೆ. ಒಂದಾವರ್ತಿ ಶ್ವಾಸಿಸಿದ ಗಾಳಿಯಲ್ಲಿ ರಕ್ತದಲ್ಲಿನ ಕಲ್ಮಷಗಳು ಇದ್ದೇ ಇರುವುವು. ಆದ್ದರಿಂದ ಪುನಃ ಉಚ್ಛ್ವಾಸಿಸುವುದಕ್ಕೆ ಯೋಗ್ಯವಾದದ್ದಲ್ಲ. ಹೀಗಿರುವಲ್ಲಿ ಪ್ರತಿನಿತ್ಯವೂ ಅನೇಕವೇಳೆ ಹೊಗೆಯಸುತ್ತಿನ ಕೊಳವೆಯಿಂದಾಗಲಿ ಅಥವಾ ಸಾಧಾರಣ ಬತ್ತಿಯಿಂದಾಗಲಿ ನಿಕೋಟೈನ್ ತುಂಬಿದ ಹೊಗೆಯನ್ನು ಗಂಟಲಿನಲ್ಲಿ ಎಳೆದು ಬಿಡುವುದರಿಂದ ಶ್ವಾಸಕೋಶ ರೋಗವು ಬಾರದೇ ಇರುವುದೇ?

ಹೊಗೆಯಸೊಪ್ಪು ಎದೆಯನೋವಿಗೆ ಕಾರಣ.

ಹೊಗೆಯಸೊಪ್ಪನ್ನು ಉಪಯೋಗಿಸುವವರ ಎದೆಯಬಡಿತವು ಅಡ್ಡಾದಿಡ್ಡಿಯಾಗುವುದು. ನಾಡಿಯ ಬಡಿತದಿಂದಲೇ ಹೃದಯದ ಕೆಲಸವು ಸರಿಯಾಗಿ ನಡೆಯುತ್ತದೆಯೋ ಇಲ್ಲವೋ ಎಂಬುದನ್ನು ಸ್ಪಷ್ಟವಾಗಿ ತಿಳಿಯಬಹುದು. ಹೃದಯ ವೇದನೆಯು ಇದರ ಕಾರಣದಿಂದಲೇ.

ಹೊಗೆಯಸೊಪ್ಪಿನಿಂದ ನರಗಳು ದುರ್ಬಲವಾಗುವುವು.

ಹೊಗೆಯಸೊಪ್ಪನ್ನು ಉಪಯೋಗಿಸುವವರೆಲ್ಲರೂ ನರಗಳ ದುರ್ಬಲತೆಯಿಂದ ನರಳುವರು. ನರಗಳ ದೌರ್ಬಲ್ಯವು ಮನುಷ್ಯರಿಗೆ ಅನೇಕ ವಿಧವಾಗಿದೆ. ಸ್ವಲ್ಪ ಶಬ್ದಕ್ಕೆ ಬೆಚ್ಚಿಬೀಳುವುದು, ಮಾತಿಗೆ ಮೊದಲು ಸಿಟ್ಟಿಗೇಳುವುದು, ರಾತ್ರಿ ನಿದ್ರೆ ಬಾರದೇ ಇರುವುದು, ಕೈಗಳು ನಡುಗುವುದು ಮುಂತಾದುವು. ಹೊಗೆಯಸೊಪ್ಪನ್ನು ಉಪಯೋಗಿಸುವುದನ್ನು ನಿಲ್ಲಿಸಿದಮೇಲೆ ಈ ಅವಗುಣಗಳು ನಿಂತುಹೋಗುತ್ತವೆ. ಹೊಗೆಯಸೊಪ್ಪಿನಿಂದ ಮೊದಲು ನರಗಳಿಗೆ ಶಕ್ತಿ ಬಂದಂತೆ ಕಾಣುವುದು. ಆದರೆ ಇದು ನಿಜವಾದ ಶಕ್ತಿಯಲ್ಲ. ಇದರ ಉತ್ತೇಜನದಿಂದ ನರಗಳ ಸ್ವಾಭಾವಿಕವಾದ ತ್ರಾಣವು ಕುಂದುವುದು.

ನಾವು ಅನೇಕಸಾರಿ, ಸಣ್ಣ ಮಕ್ಕಳು, ಸ್ತ್ರೀಯರು ನರಗಳ ದುರ್ಬಲತೆಯಿಂದ ನರಳುವುದನ್ನು ನೋಡಿರುವೆವು. ಅದರ ಕಾರಣವು ಮುಖ್ಯವಾಗಿ ಹೊಗೆಯಸೊಪ್ಪಿನ ಉಪಯೋಗದಿಂದ ಜಡವಾದ ನರಗಳುಳ್ಳ ಯುವಕರಿಂದ ಕಾರಣವಾದದ್ದು.

ಹೊಗೆಯಸೊಪ್ಪಿನಿಂದಾಗುವ ದುಷ್ಪರಿಣಾಮವು ಅಪರಿಮಿತವಾದದ್ದು. ರೋಗಾದಿಗಳಿಂದ ಶರೀರವು ಕೃಶವಾಗಿ, ಆರೋಗ್ಯವು ಕೆಟ್ಟು, ಮರಣಯಾತನೆಯನ್ನನುಭವಿಸುವುದಲ್ಲದೆ, ಅರ್ಥಹಾನಿಯೂ, ಮಾನಹಾನಿಯೂ ಸಂಭವಿಸುವುದು.

ನೀವು ಹೊಗೆಯಸೊಪ್ಪನ್ನು ಯಾವ ವಿಧದಿಂದಾದರೂ ಉಪಯೋಗಿಸುತ್ತಿದ್ದರೆ ಮೊಟ್ಟಮೊದಲು ನಿಲ್ಲಿಸುವುದಕ್ಕೆ ಪ್ರಯತ್ನಿಸಿರಿ. ಮುನ್ನೂರು ಶತಮಾನಗಳ ಹಿಂದೆ ಹೊಗೆಯಸೊಪ್ಪನ್ನು ಪಾಶ್ಚಿಮಾತ್ಯರಲ್ಲಿ ಕಿರಾತ ಜನರು ಉಪಯೋಗಿಸುತ್ತಿದ್ದರು. ಈಗಲಾದರೋ ಸುಧಾರಿಸಿದವರೆಂದು ಹೇಳಿಕೊಳ್ಳುವವರು, ನಾಗರೀಕರೆಂದು ಹೊಗಳಿಕೊಳ್ಳುವವರೇ ಹೆಚ್ಚಾಗಿ ಎಲ್ಲರೂ ಸೇವಿಸುತ್ತಿರುವುದನ್ನು ನೋಡಿದರೆ ಕಾಡುಜನಗಳಿಗಿಂತ ಇವರ ಸ್ಥಿತಿಯು ಹೇಗೆ ಉತ್ತಮವಾಯಿತೆಂದು ತಿಳಿಯಬೇಕು ?

ಸುಧಾರಣೆಯನ್ನು ಹೇಗೆ ತರುವುದು ?

ಹೊಗೆಯಸೊಪ್ಪಿನ ದುರಭ್ಯಾಸವನ್ನು ಮೊದಲು ನಿಲ್ಲಿಸಬೇಕು. ಪ್ರಾರಂಭದಲ್ಲಿ ಇದರ ಕೆಟ್ಟ ಚಾಳಿಯನ್ನು ಬಿಡುವುದು ಅಸಾಧ್ಯವಾಗಿ ತೋರಬಹುದು. ಶಾರೀರಕ, ಮಾನಸಿಕ ಹಿಂಸೆಗಳುಂಟಾಗಬಹುದು. ನರಗಳ ಹಸಿವು ಅಪರಿಮಿತವಾಗಿ ತೋರುವುದು. ಹೀಗೆ ತೊಂದರೆಗಳು ತೋರುವುದರಿಂದ ಜೀವಕ್ಕೇನಾದರೂ ಭಯ ಉಂಟಾಗುವುದೆಂದು ತಿಳಿಯಕೂಡದು. ದೃಢಮನಸ್ಸಿನಿಂದ ತ್ಯಜಿಸಿದ್ದೇ ಆದರೆ ದುರಭ್ಯಾಸದಿಂದ ನಿವೃತ್ತರಾಗಬಹುದು.

(" ಶರೀರ ವ್ಯಾಯಾಮ "ದಿಂದ.)

ವರ್ತಮಾನ ಸಂಗ್ರಹ.

ಒಳದೇಶ.

ತಾ. 15ರಲ್ಲು ನಡೆದ ಚುನಾವಣೆಯಲ್ಲು, ರಾಜಿನಾಮೆ ಕೊಟ್ಟ ರಾ. ಸಾ. ಪಟ್ಟಮಾಡ ದೇವಯ್ಯನವರ ಬದಲು ಮಿ. ಕೋದಂಡ ತಿಮ್ಮಯ್ಯನವರು ಮಡಿಕೇರಿ ಮುನ್ಸಿಪಾಲ್ ಕಮಿಟಿ ಮೆಂಬರಾಗಿ ಚುನಾಯಿಸಲ್ಪಟ್ಟಿರುವರು.

ಮಡಿಕೇರಿ ಹಾಕಿ ಟೋರ್ನಮೆಂಟು ತಾ. 14ರಿಂದ 19ರ ವರೆಗೆ ಮ್ಯಾನ್ಸ್ ಕಂಪೌಂಡಿನಲ್ಲಿ ನಡೆಯಿತು. ತಾ. 19ರಲ್ಲು ಎಲಿಮೆಂಟರಿ ಶಾಲೆಗಳ ಟೀಮು ವೀರಾಜಪೇಟೆ ಹೈಸ್ಕೂಲಿನ ಟೀಮನ್ನು ಸೋಲಿಸಿತು. ಆಖೈರು ಪಂತದಾಟವು ತಾ. 22ರಲ್ಲು ಹಳೇ ವಿದ್ಯಾರ್ಥಿಗಳ ಸಂಘದ ಟೀಮಿಗೂ, ಎಲಿಮೆಂಟರಿ ಶಾಲೆಗಳ ಟೀಮಿಗೂ ನಡೆಯುವುದು.

ತಾ. 17ರಲ್ಲಿ ವೀರಾಜಪೇಟೆಯಲ್ಲಿ ನಡೆದ ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗಿನಲ್ಲಿ ವೀರಾಜಪೇಟೆ ಟೌನ್ ಸೊಸೈಟಿಗೆ ಬ್ಯಾಂಕಿನಿಂದ 4,500 ರೂಪಾಯಿ ಸಾಲ ಮಂಜೂರಾಯಿತು.

ಸಿವಿಲ್ ಕೋರ್ಟುಗಳನ್ನು ಮಳೆಗಾಲದಲ್ಲಿ ಮುಚ್ಚುವುದು ಉತ್ತಮವೆಂದು ಗವರ್ನಮೆಂಟು ಪ್ಲೀಡರು ಕಮಿಷನರವರಿಗೆ ಬರೆದುಕೊಂಡಿದ್ದರು. 1917ನೇ ಇಸವಿಯಲ್ಲಿ ಮಳೆಗಾಲದಲ್ಲಿ ಕೋರ್ಟು ಮುಚ್ಚಿಯೂ ಇದೆ. ಆದರಿಂದ ಮೊಕದ್ದಮೆಗಳು ಬೇಗ ತೀರುವ ವಿಷಯದಲ್ಲಿ ಪ್ರಯೋಜನವಾಗದ್ದರಿಂದ ಮಳೆಗಾಲದಲ್ಲಿ ಕೋರ್ಟು ಮುಚ್ಚಲಾಗುವುದಿಲ್ಲವೆಂತ ಚೀಫ್ ಕಮಿಷನರು ಹುಕುಂ ಮಾಡಿದ್ದಾರೆ.

ವೀರಾಜಪೇಟೆ ಆಸ್ಪತ್ರೆಯಲ್ಲಿ ಸಿವಿಲ್ ಎಪ್ರೇಂಟಿಸರಾಗಿದ್ದ ಮಿ. ತಿಮ್ಮಪ್ಪಯ್ಯನವರನ್ನು ನವೆಂಬರು 1 ರಿಂದ ಆ ಆಸ್ಪತ್ರೆಯಲ್ಲಿಯೇ ಅಸಿಸ್ಟೆಂಟ್ ಸರ್ಜನರಾಗಿ ನೇಮಿಸಿರುವರು.

ಜೇಗಾಂ ಆಫ್ ಇಂಡಿಯಾ ಖಿಲಾಫತ್ ಕಾನ್‌ಫರೆನ್ಸಿನ ಪ್ರಚಾರಕರಾಗಿ ಬಂದ ಧಾರವಾಡದ ಮೆ. ಮುನ್ಷಿ ಅಬ್ದುರಹಮಾನ್ ಸಾಹೇಬರವರು ತಾ. 19ರಲ್ಲು ಸಾಯಂಕಾಲ ರಾಜಾ ಸೀಟಿನಲ್ಲಿ ಉಪನ್ಯಾಸ ಕೊಡುವಂತೆ ಏರ್ಪಾಡಾಗಿತ್ತು. ಆದರೆ ಆದಿನ ಮಧ್ಯಾಹ್ನ 2 ಗಂಟೆ ಸಮಯದಲ್ಲು ಫಸ್ಟ್ ಕ್ಲಾಸ್ ಮೇಜಿಸ್ಟ್ರೇಟಾದ ಸಬ್‌ಡಿವಿಷನರು ಸಿ. ಪಿ. ಸಿ 114ನೇ ಸೆಕ್ಷನ್ ಮೇರೆ ಎರಡು ತಿಂಗಳ ವರೆಗೆ ಮಡಿಕೇರಿಯಲ್ಲಾಗಲೀ, ಕೊಡಗಿನಲ್ಲಾಗಲೀ ಪಬ್ಲಿಕ್ ಭಾಷಣ ಮಾಡಕೂಡದೆಂದು ಮುನ್ಷಿಯವರಿಗೆ ಹುಕುಂ ಮಾಡಿದರು. ಆದರೂ ಸಾಯಂಕಾಲ 6 ಗಂಟೆಗೆ ನೇಮಕವಾದ ಸ್ಥಳದಲ್ಲಿ ಮಿ. ಮನಿಯಪಂಡ ಚಿಣ್ಣಪ್ಪನವರ ಅಧ್ಯಕ್ಷತೆಯಲ್ಲಿ ಒಂದು ಮೀಟಿಂಗು ನಡೆದು ಕೊಡಗಿನ ಆಫೀಸರುಗಳ ಇಂಥಾ ಹುಕುಂಗಳನ್ನು ನಿಷೇಧಿಸಿಯೂ ಅಲಿ ಸಹೋದರರ ಮಾತಾ ಶ್ರೀಯಾದ ಬಿ ಅಮ್ಮನ್‌ರವರ ಮರಣಕ್ಕೆ ಪರಿತಾಪವನ್ನು ಸೂಚಿಸಿಯೂ ಠರಾವುಗಳು ಪಾಸಾದವು.

ಸೆಂಟ್ರಲ್ ಬ್ಯಾಂಕಿನ ಜನರಲ್ ಮೀಟಿಂಗು ತಾ. 17ರಲ್ಲು ವೀರಾಜಪೇಟೆಯಲ್ಲು ನಡೆದು ಶೇರುದಾರರಿಗೆ ಶೇಕಡ 5 ರಂತೆ ಲಾಭ ಹಂಚಲು ಮಂಜೂರಾಯಿತು.

ಸೀನಿಯರ್ ಸಬ್ ಅಸಿಸ್ಟೆಂಟ್ ಸರ್ಜನರಾಗಿ ಮಡಿಕೇರಿ ಆಸ್ಪತ್ರೆಯಲ್ಲಿದ್ದ ಮಿ. ಚೇರಂಡ ಸೋಮಯ್ಯನವರು ರಿಟೈಯರ್ ಆಗುವ ಮೊದಲು ನವಂಬರು 15 ರಿಂದ ಮೂರು ತಿಂಗಳು ರಜೆಯಲ್ಲಿರುವರು. ಸ. ಅ. ಸರ್ಜನ್ ಮಿ. ಕೋದಂಡ ಕಾರ್ಯಪ್ಪನವರನ್ನು ಫ್ರೇಜರಪೇಟೆಯಿಂದ ಮಡಿಕೇರಿಗೂ, ಮಿ. ಸುಬ್ರಮಣ್ಯಂನವರನ್ನು ವೀರಾಜಪೇಟೆಯಿಂದ ಫ್ರೇಜರಪೇಟೆಗೂ ವರ್ಗಾಯಿಸಿ ಈಗ ತಾನೇ ಪಾಸಾಗಿ ಬಂದಿರುವ ಮಿ. ಪಂದಿಪುತ್ತಿರ ಗಣಪತಿಯವರನ್ನು ವೀರಾಜಪೇಟೆ ಆಸ್ಪತ್ರೆಗೂ ನೇಮಿಸಿರುವರು.

ಟೌನ್ ಕಮಿಟಿಯಲ್ಲಿ ಎಡೆತಗ್ಗಟ್ಟುನಾಡು ತಾಲೋಕುಗಳ ಪರವಾಗಿ ಮೆಂಬರಾಗಿರುವ ಮಿ. ಕೊಂಗಂಡ ಸುಬ್ಬಯ್ಯನವರ, ಮಡಿಕೇರಿ ನಂಜರಾಯಪಟ್ಟಣ ತಾಲೋಕುಗಳ ಪರವಾಗಿರುವ ರಾ. ಸಾ. ಪಟ್ಟಮಾಡ ದೇವಯ್ಯನವರ ಮತ್ತು ಮಡಿಕೇರಿ ನಾಡಿನಾಲ್ಕುನಾಡು ತಾಲೋಕುಗಳ ಪರವಾಗಿರುವ ಮೆ. ಸಿ. ಎಸ್. ವೆಂಕಪ್ಪಯ್ಯನವರ ಅವಧಿಯು ಬರುವ ಜನವರಿಯಲ್ಲಿ ಮುಗಿಯುವದರಿಂದ ಹೊಸ ಮೆಂಬರುಗಳ ಚುನಾವಣೆಯು ಜನವರಿ 7ರಲ್ಲಿ ವೀರಾಜಪೇಟೆಯಲ್ಲಿಯೂ 9ರಲ್ಲಿ ಮಡಿಕೇರಿಯಲ್ಲಿಯೂ ನಡೆಯಲಿಕ್ಕಿದೆ.

ಮೈಸೂರು ಪ್ರಾಂತ್ಯದಲ್ಲಿ ಪ್ರಸಿದ್ಧವಾದ 'ಪ್ರಸಾದ' ಸಂಸ್ಕೃತ ಮಹಾ ಪಾಠಶಾಲೆಯಲ್ಲಿ ಹಲವುವರ್ಷಗಳಿಂದ ಪ್ರೌಢ ವಿದ್ಯಾಭ್ಯಾಸಮಾಡಿಕೊಂಡಿದ್ದ ತಲಕಾವೇರಿ ದೇವಸ್ಥಾನಾಭಾಚಾರ್ಯರ ಮಗ ಮಿ. ಟಿ. ಪಿ. ನಾರಾಯಣಾಚಾರ್ಯರು ಈ ವರ್ಷ ನಡೆದ ಮೈಸೂರು ಸಾಹಿತ್ಯ ವಿದ್ವತ್ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಮಹಾರಾಜರಿಂದ 'ಸಾಹಿತ್ಯ ವಿದ್ವಾನ್' ಎಂಬ ಬಿರುದನ್ನೂ 100 ರೂಪಾಯಿ ಸಂಭಾವನೆಯನ್ನೂ, ಮತ್ತು ತಿರುಮಲಾಚಾರ್ಯರ ಸಾಹಿತ್ಯ ಸ್ಪೆಷಲ್ ಇನಾಮು 60 ರೂಪಾಯಿಯನ್ನು ಪಡೆದಿರುವದನ್ನು ತಿಳಿಯಲು ಸಂತೋಷಪಡುತ್ತೇವೆ. ಕೊಡಗಿನವರಲ್ಲಿ ಸಂಸ್ಕೃತ ವಿದ್ಯಾವ್ಯಾಸಂಗಕ್ಕೆ ಪತ್ರಾಲ ಇಷ್ಟು ಪರಿಶ್ರಮ ತೆಗೆದುಕೊಂಡವರು ಇವರೇ ಮೊದಲೆಂದು ಕಾಣುತ್ತದೆ.

ಪೋಲೀಸು ಇನ್ಸ್‌ಪೆಕ್ಟರಾಗಿದ್ದು ರಜೆಯಲ್ಲಿದ್ದ ಮಿ. ಕೋದಂಡ ಅಯ್ಯಣ್ಣನವರ ರಜೆಯು ಈ ತಾ. 1ಕ್ಕೆ ಮುಗಿದರೂ ಕೂಡ ಅವರಿಗೆ ಇನ್ನೂ ಏನೊಂದೂ ಹುಕುಂ ಬಂದಿರುವುದಿಲ್ಲವಾಗಿ ವರ್ತಮಾನ.

ನಂಜರಾಜಪಟ್ಟಣ ತಾಲೋಕಿನ ಕೆಲವು ಎಲಿಮೆಂಟರಿ ಸ್ಕೂಲುಗಳಿಗೆ ಈ ತಾ. 17ರಿಂದ ಮೂರು ವಾರ ಕುಯಿಲು ಕೆಲಸದ ರಜೆ ಬಿಡಲಾಗಿದೆ ಎಂದು ತಿಳಿಯುತ್ತೇವೆ.

ಹಿಂದೂ ದೇಶ.

ತಮಿಳುನಾಡು ಪ್ರಾಂತಿಕ ಕಾನ್‌ಫರೆನ್ಸಿನ 13ನೇ ಮಹಾಸಭೆಯು ತಿರುವಣ್ಣಾಮಲೆಯಲ್ಲಿ ತಾ. 15ರಲ್ಲು ಪ್ರಾರಂಭವಾಯಿತು. ಮೆ. ಇ. ವಿ. ರಾಮಸ್ವಾಮಿನಾಯಕರ್‌ರವರು ಅಧ್ಯಕ್ಷರಾಗಿದ್ದರು. ಈ ಸಭೆಯಲ್ಲಿ ಪಾಸಾದ ಮುಖ್ಯವಾದ ಠರಾವು—" ಕಾಂಗ್ರೆಸ್ ಕೆಲಸದ ಸಮಯದಲ್ಲಿ ಮಾತ್ರವಲ್ಲ ಎಲ್ಲಾ ಸಮಯಗಳಲ್ಲಿಯೂ ಖದ್ದರ್ ಉಪಯೋಗಿಸತಕ್ಕದ್ದು ಮತ್ತು ವರ್ಷಕ್ಕೆ 2,000 ಗಜ ನೂಲಿನ ಬದಲು 24,000 ಗಜವೆಂಬ ಬದಲಾವಣೆಗಳಿಂದ ಕಲ್ಕತ್ತಾದಲ್ಲಿ ಮಹಾತ್ಮ ಗಾಂಧಿ ಸಿ. ಆರ್. ದಾಸ್ ಮತ್ತು ಪಂಡಿತ ನೆಹರುರವರಿಗೆ ಉಂಟಾದ ಒಪ್ಪಂದವನ್ನು ಈ ಸಭೆಯು ಅಂಗೀಕರಿಸುತ್ತದೆ.

ಬಂಗಾಳದ ದಬ್ಬಾಳಿಕೆಯಿಂದ ಸೆರೆ ಹಿಡಿಯಲ್ಪಟ್ಟ ಮಹನೀಯರು ಮೂರು ವಾರಗಳಿಂದ ಜೈಲು ವಾಸದಲ್ಲಿದ್ದರೂ ಕೂಡಾ ಅವರ ಮೇಲೆ ಯಾವದೊಂದು ತಕ್ಕೀರನ್ನು ಇನ್ನೂ ಹೊರಿಸದೆ ಅವರಿಗೆ ನ್ಯಾಯವಾದ ಆಹಾರವನ್ನೂ ಮಲಗಲಿಕ್ಕೆ ಸರಿಯಾದ ಸ್ಥಳವನ್ನೂ ಕೊಡದೆ ತೊಂದರೆಪಡಿಸುತ್ತಿರುವರೆಂದು ಕಲ್ಕತ್ತಾದ ' ಫಾರ್‌ವರ್ಡ್ ' ಪತ್ರಿಕೆಯು ಸೂಚಿಸುತ್ತದೆ.

ತಾ. 21ರಲ್ಲು ಬೊಂಬಾಯಿಯಲ್ಲು ನಡೆಯುವ ಎಲ್ಲಾ ಪಾರ್ಟಿಗಳ ಮುಂದಾಳುಗಳ ಮೀಟಿಂಗಿಗೆ ಮುಂಚಿತವಾಗಿ ತಾ. 20ರಲ್ಲು ಕಾಂಗ್ರೆಸ್ಸಿಗೆ ಸೇರುವುದರ ವಿಷಯ ಚರ್ಚಿಸಲು ಲಿಬರಲ್ ಪಾರ್ಟಿಯವರ ಮೀಟಿಂಗು ಒಂದು ಬೊಂಬಾಯಿಯಲ್ಲಿ ನಡೆಯಿತು

ಬಂಗಾಳ ಕೌನ್ಸಿಲಿನ 'ಸ್ವರಾಜ್ಯ' ಮತ್ತು 'ನೇಶನಲಿಸ್ಟ' ಪಂಗಡಗಳ ಮೆಂಬರುಗಳ ಮೀಟಿಂಗು ಒಂದು ನಡೆದು, ಅಲ್ಲಿಯ ಕೌನ್ಸಿಲಿನಲ್ಲಿ ಹೊಸ ಆರ್ಡಿನೇನ್ಸನ್ನು ಸಂಪೂರ್ಣ ವಿರೋಧಿಸಬೇಕೆಂದು ತೀರ್ಮಾನಿಸಿಕೊಂಡಿರುವರು.

ಬಂಗಾಳದಲ್ಲಿ ಸರಕಾರದವರ ದಬ್ಬಾಳಿಕೆಯು ನ್ಯಾಯವಾದದ್ದಲ್ಲವೆಂದೂ, ಅಲ್ಲಿ ಅನಾಯಕತ್ವವಿದ್ದರೆ ಅದರ ಕಾರಣಗಳನ್ನು ಹೋಗಲಾಡಿಸಿ ಅದನ್ನು ನಿಲ್ಲಿಸಬೇಕಲ್ಲದೆ ದಬ್ಬಾಳಿಕೆಯಿಂದ ನಿಲ್ಲಿಸುವದು ಸಾಧ್ಯವಿಲ್ಲವೆಂದು ಮುಂಚಾಗಿ ನಾಮಧಾರಿ ಶ್ರೀನಿವಾಸ ಶಾಸ್ತ್ರಿಯವರು " ಸರ್ವೆಂಟ್ ಆಫ್ ಇಂಡಿಯಾ " ಪತ್ರಿಕೆಯಲ್ಲಿ ಬರೆದಿರುವರು.

ಚಿತ್ತೂರು ಜಿಲ್ಲೆಯ ಶಿವರಾಜಕಂಗ್ರಾಮದ ಮಿ. ಮಾನಿಸ್ ಮುನಿಸ್ವಾಮಿ ನಾಯುಡುರವರು ಮಹಾತ್ಮ ಗಾಂಧಿಯವರು ಭೂಲೋಕದ ಜನರಿಗಾಗಿ ಮಾಡುತ್ತಿರುವ ಸ್ವಾರ್ಥತ್ಯಾಗಕ್ಕಾಗಿ ಅವರು ಇಷ್ಟ ಬಂದಂತೆ ಉಪಯೋಗಿಸುವಂತೆ ಎರಡು ಸಾವಿರ ರೂಪಾಯಿ ಕ್ರಯ ಬಾಳುವ ತನ್ನ ಆಸ್ತಿಯನ್ನು ಮಹಾತ್ಮರಿಗೆ ಕೊಟ್ಟಿರುವರು.

ಅಹ್ಮದಾಬಾದಿನ ಮುನಿಸಿಪಲ್ ಬೋರ್ಡಿನವರು ಕಲೆಕ್ಟರವರ ಹುಕುಮನ್ನು ಉಲ್ಲಂಘಿಸಿ ಲೋಕಮಾನ್ಯ ತಿಲಕರವರ ಜೀವಗಾತ್ರ ಕಂಚಿನ ಪ್ರತಿಮೆಯನ್ನು ಮಾಡಿಸಲು 8,000 ರುಪಾಯಿ ಮಂಜೂರು ಮಾಡಿರುವರು.

ಅಲಿ ಸಹೋದರರ ಮಾತಾ ಶ್ರೀಯಾದ ಬಿ ಅಮ್ಮನ್‌ರವರು ತಾರೀಕು 13ರಲ್ಲು ಡೆಲ್ಲಿಯಲ್ಲಿ ಪರಲೋಕವನ್ನೈದಿದರು.

ಸೆಂಟ್ರಲ್ ಪ್ರಾವಿನ್ಸಿನ ಗವರ್ನರಾಗಿ ಸರ್ ಫ್ರೇಂಕ್ ಸ್ಲೈಯವರ ನಂತರ ಸರ್ ಮಾಂಟೇಗ್ಯು ಬಟ್ಲರ್‌ರವರನ್ನು ನೇಮಿಸಿರುವರು.

ತಾರೀಕು 16ರಲ್ಲು ಬೆಳಿಗ್ಗೆ ಎರಡುವರೆ ಗಂಟೆಗೆ ಅಲ್ಲಾಹಬಾದಿನಲ್ಲಿ ಸ್ವಲ್ಪ ಭೂಕಂಪವಾಯಿತು.

ತಾ. 17ರಲ್ಲಿ ' ಚೇಂಬರ್ ಆಫ್ ಪ್ರಿನ್ಸಸ್ ' ನ ವಾರ್ಷಿಕ ಸಭೆಯು ಲೆಜಿಸ್ಲೇಟಿವ್ ಎಸೆಂಬ್ಲಿ ಹಾಲಿನಲ್ಲಿ ವೈಸರಾಯರವರಿಂದ ಪ್ರಾರಂಭಿಸಲ್ಪಟ್ಟಿತು. ಅವರ ಪ್ರಥಮ ಭಾಷಣದಲ್ಲಿ ಗತಿಸಿದ ಮಿ. ಮೊಂಟೆಗ್ಯೂರವರ ವಿಷಯ ಶ್ಲಾಘಿಸಿ ಮಾತಾಡಿದರು. ಈ ಮೀಟಿಂಗು ಪತ್ರಿಕೆಗಳ ಪ್ರತಿನಿಧಿಗಳಿಗೆ ಪ್ರವೇಶವಿಲ್ಲದೆ ಗುಟ್ಟಾಗಿ ನಡೆಯಿತು.

ವಿದೇಶ.

ಮಿ. ಇ. ಎಸ್. ಮೊಂಟೇಗ್ಯುರವರು ತಾರೀಕು 15ರಲ್ಲಿ ಲಂಡನ್ನಿನಲ್ಲಿ ಶಿವಾಧೀನರಾದರು. ರಕ್ತಕ್ಕೆ ವಿಷ ಸೇರಿದ್ದೇ ಇವರ ಮರಣಕ್ಕೆ ಕಾರಣ. ಇವರು 1917ರಿಂದ 1922ರ ವರೇಗೆ ಇಂಡಿಯಾ ಸ್ಟೇಟ್ ಸೆಕ್ರೆಟರಿಯಾಗಿದ್ದರು. ಹಿಂದೂ ದೇಶಕ್ಕೆ ಈಗಿನ ಸುಧಾರಣೆಗಳನ್ನು ಕೊಡಲು ಮೂಲ ಪುರುಷರು ಇವರೇ ಆಗಿದ್ದರು. ಇವರ ಮೃತರಾದ ಕೂಡಲೆ ಇಂಗ್ಲೆಂಡಿನ ಪತ್ರಿಕೆಗಳನೇಕವು ಇವರನ್ನು ಶ್ಲಾಘಿಸಿ ಲೇಖನಗಳನ್ನು ಪ್ರಕಟಿಸಿದವು.

ತಾರೀಕು 15ರಲ್ಲು ಜಾವಾ ದ್ವೀಪದಲ್ಲು ಭಯಂಕರವಾದ ಭೂಕಂಪವು ಉಂಟಾಯಿತು. ಅನೇಕ ಕಡೆಗಳಲ್ಲಿ ಮಣ್ಣು ಜರೆದು ಬಿದ್ದಿದೆ, ನದಿಗಳಲ್ಲಿ ನೀರಿನ ಬದಲು ಮಣ್ಣು ಹರಿಯುತ್ತಿತ್ತಂತೆ. ಅವುಗಳಲ್ಲಿ ಅನೇಕ ಹೆಣಗಳು ತೇಲಾಡುತ್ತಿದ್ದುವೆಂದೂ ಇದರಿಂದ ಬಹಳ ನಷ್ಟ ಉಂಟಾಗಿದೆ ಎಂದೂ ವರ್ತಮಾನ. ಸುಮಾರು 500 ಜನ ಮೃತಪಟ್ಟಿರುವರು.

ಅನಾರೋಗ್ಯದ ಕಾರಣ ಈಜಿಪ್ಟಿನ ಪ್ರಧಾನ ಮಂತ್ರಿಯಾದ ಜಾಗ್‌ಲೂಲ್ ಪಾಷಾರವರು ತನ್ನ ಪದವಿಗೆ ತಾರೀಕು 15ರಲ್ಲು ರಾಜಿನಾಮೆಕೊಟ್ಟಿರುವರು. ಇದು ಎಲ್ಲರನ್ನೂ ವಿಸ್ಮಯಗೊಳಿಸಿದೆ. ಕೂಡಲೆ ಬೇರೆ ಕೆಲವು ಮಂತ್ರಿಗಳೂ ತಮ್ಮ ರಾಜಿನಾಮೆಗಳನ್ನು ಕಳುಹಿಸಿರುವರು. ಜನರೆಲ್ಲರೂ ಜಾಗುಲೂಲರ ಆಡಳಿತದ ಮೇಲೆ ಪೂರ್ತಿ ವಿಶ್ವಾಸವನ್ನು ಸೂಚಿಸಿರುವರು. ಮರುದಿನ ರಾಜರು ಇವರ ಕೆಲವು ಶರತ್ತುಗಳಿಗೆ ಒಪ್ಪಿದ್ದರಿಂದ ರಾಜಿನಾಮೆಯನ್ನು ವಾಪಾಸು ತೆಗೆದುಕೊಂಡಿರುವರು.

ಇಂಡಿಯಾ ಕೌನ್ಸಿಲಿನ ಮೆಂಬರಾಗಿ ಮಿ. ಸಾಹಿಬ್ಜಾದ ಆಫ್ತಾಬ್ ಅಹಮದ್ ಖಾನ್‌ರವರ ಬದಲಿಗೆ ಸರ್ ಮಹಮ್ಮದ್ ರಫೀಕ್‌ರವರನ್ನು ನೇಮಿಸಿರುವರು. ಇವರು ಇಂಡಿಯಾಕ್ಕೆ ಒಂದು ಬರುವ ಮಾರ್ಚಿಯಲ್ಲಿ ವಾಪಾಸು ಇಂಗ್ಲೆಂಡಿಗೆ ಹೋದನಂತರ ಇಂಡಿಯಾ ಕೌನ್ಸಿಲಿಗೆ ಸೇರುವರು.

ಅರ್ಲ್ ವಿಂಟರ್‌ಟನ್‌ರವರು ಇಂಡಿಯಾ ಸ್ಟೇಟ್ ಅಂಡರ್ ಸೆಕ್ರೆಟರಿಯಾಗಿ ನೇಮಿಸಲ್ಪಟ್ಟಿರುವರು.

ಈಜಿಪ್ಟಿನಲ್ಲಿ ಮುಷ್ಕರ ಹಿಡಿದಿದ್ದ ಅಲ್ ಅಜಾರ್ ಯುನಿವರ್ಸಿಟಿಯ ವಿದ್ಯಾರ್ಥಿಗಳೆಲ್ಲರೂ ತಾರೀಕು 8ರಲ್ಲು ಶಾಲೆ ಬಿಟ್ಟು ಹೋಗುವಂತೆ ತೀರ್ಮಾನಿಸಿದರು.

ಜಗತ್ತು ಸತ್ಯವೋ, ಮಿಥ್ಯವೋ?

ಒಂದುಕಾಲಕ್ಕೆ ಹಿಂದೆ ಒಬ್ಬ ರಾಜನಿದ್ದನು. ಈತನು ರಾಜ್ಯಭಾರವನ್ನು ವಿನಯಸಂಪನ್ನನಾಗಿಯೂ ಪ್ರಜೆಗಳಿಗನುಕೂಲವಾಗಿಯೂ ನಡಿಸುತ್ತಾ ಇದ್ದನು. ಈತನು ದೇವರಲ್ಲಿ ತುಂಬಾ ಭಕ್ತಿಯುಳ್ಳವನಾದುದರಿಂದ, ಹೆಚ್ಚಿನ ರಾಜ್ಯವನ್ನು ಬಲಾತ್ಕಾರದಿಂದ ಸಂಪಾದಿಸಬೇಕೆಂಬ ಆಸಕ್ತಿ ಇವನಿಗಿರಲಿಲ್ಲ. ಇಲ್ಲವೆ, ಇತರ ಅನೇಕ ರಾಜರಂತೆ, ಸುಖಾನಂದ ಭೋಗಿಯಾಗಿರಬೇಕೆಂಬ ಆಶೆಯೂ ಇವನಿಗಿರಲಿಲ್ಲ. ಈತನು ಸಕಲಾನುಕೂಲಗಳಿಂದ ಕೂಡಿದ್ದರೂ, ಗಂಡು ಸಂತಾನವಿಲ್ಲದ್ದರಿಂದ ತ

ನಿಗೆ ಸ್ವರ್ಗ ಪ್ರಾಪ್ತಿ [illegible] ದನೆಂದು ಕೊರಗುತಿದ್ದನು. ಆದರೂ, ಈ ಸಂಕಟವನ್ನು ಸ್ವಲ್ಪ ಮಟ್ಟಿಗಾದರೂ ಹೋಗಲಾಡಿಸುವಂತ ಸೌಂದರ್ಯ [illegible] ಮಗಳೊಬ್ಬಳಿದ್ದಳು. ಈಕೆಯು ಪ್ರಾಪ್ತ ಪ್ರಾಯಳಾದುದರಿಂದ, ಇವಳಿಗೆ ಯೋಗ್ಯ ವರನಂ ಹುಡುಕುವ ಚಿಂತೆಯು ರಾಜನಿಗೆ ಒದಗಿತ್ತು. ನಾನಾ ಕಡೆಗಳಲ್ಲಿ ಹುಡುಕಿದನು; ವರ ಪ್ರಾಪ್ತಿಯಾಗಲಿಲ್ಲ. ಆಗ ಘೋರವಾದ ಸಣ್ಣ ಗುಣ ಸಂಪನ್ನನಾದ ಯಾವನೇ ಆಗಲಿ, ಅಂಥವನಿಗೆ [illegible] ಕನ್ಯಾದಾನ ಮಾಡುತ್ತೇನೆಂದು ನಿಶ್ಚಯಿಸಿಕೊಂಡಿದ್ದನು. ಈಕೆಯು ಗಂಡನಿಗೆ ಮುಂದಿನ ಆಳಿಕೆಗೆ ಹಕ್ಕಿದೆಯೇ ?

ಕಾಶಿ [illegible] ವರುಷಗಳು ವಿದ್ಯಾಭ್ಯಾಸ ಮಾಡಿದ ಯು[illegible] ತನ್ನೂರಿಗೆ ಹೋಗುತ್ತಾ, ಈ ರಾಜನ ಪಟ್ಟಣಕ್ಕೆ ಬಂದನು. ಈ ಹುಡುಗನು ಪಟ್ಟಣದ ಅಂದ ಚಂದವನ್ನು ನೋಡಲಿಕ್ಕಾಗಿ ಸುತ್ತಿ ಸುತ್ತಿ ಸಾಕಾಗಿ, ಅಲ್ಲಿದ್ದ ದೊಡ್ಡ ದೇ[illegible]ನ ಸಮೀಪದಲ್ಲಿ ಸುಮ್ಮನೆ ಕುಳಿತುಕೊಂಡಿದ್ದನು. [illegible]ದಲ್ಲಿ ಹೆಂಗಸರಿಗೆ ಸ್ವಾತಂತ್ರ್ಯವು ಹೆಚ್ಚು [illegible] ಗೋಷಾ ಪದ್ಧತಿ ಇರಲಿಲ್ಲ. ಅರಸು ಮಕ್ಕಳು [illegible] ಎಲ್ಲರೂ ದೇವಸ್ಥಾನಗಳಿಗೆ ಹೋಗುತ್ತಿದ್ದರು. [illegible] ರಾಜನ ಮಗಳು ಪೂಜಾರ್ಥಿಯಾಗಿ, ದೇ[illegible] ಪೂಜಾ ಸಾಮಗ್ರಿಗಳನ್ನು ತಟ್ಟೆಯಲ್ಲಿ ಹಿಡಿದು[illegible] ಬಂದಳು.

ಆ ಮ[illegible] ಬರುತ್ತಿದ್ದ ಕನ್ನಿಕೆಯ ಸೌಂದರ್ಯಕ್ಕೆ ಮೆ[illegible] ಹನ್ನೆರಡು ವರುಷಗಳ ಪರ್ಯಂತ ಅಭ್ಯಾಸ[illegible] ಎಲ್ಲವೂ ಅರಣ್ಯವನ್ನು ಹಿಡಿಯಿತು. ಹುಡುಗ[illegible] ಇವನಿಗೆ ಅವಳ ಮೇಲಿನ ಕಾಮ[illegible]ತ್ತಾ ಬಂತು. ಮತ್ತೆ ಈತನು ಅನೇಕ[illegible]ದ ದೆಸೆಯಿಂದ ವ್ಯಾಮೋಹ[illegible], ಅವಳ ಬಿಂಬವನ್ನು [illegible] ಮೇಲೆ ಇಟ್ಟು, ಧ್ಯಾನಮಾಡುವಂತೆ, [illegible] ಈತನಿಗೆ ಪರನಾರಿಯನ್ನು ಮೋಹಿಸುವ [illegible] ಎಂದು ತಿಳಿದಿರಲಿಲ್ಲ. ಈತನು ಅಲ್ಲಿದ್ದ [illegible] ಅಕೆಯು ರಾಜಪುತ್ರಿಯೆಂದು ತಿಳಿದ[illegible] ಯು ತನಗಾಗಲಾರದೆಂದು ಇವನಿಗೆ [illegible] ಅವರೂ, ಪ್ರಯತ್ನ ಮಾಡಿದರೆ ದೊರಕ[illegible] ಧ್ಯಾನದಲ್ಲಿ ಕುಳಿತಿದ್ದನು.

ಕೆ[illegible]ದ ಮೇಲೆ ಆ ದೇವಾಲಯದ ಪೂಜಾರಿ[illegible] ಕಸ್ಮಿಕ? ಅಲ್ಲಿ ಧ್ಯಾನಾಸಕ್ತನಾಗಿ ಕುಳಿತಿದ್ದ ಸು[illegible]ಕನನ್ನು ನೋಡಿ ಕರುಣೆಯನ್ನು ತಾಳಿ, [illegible] ತಂದು, ಬಾಲಕನ ಮುಂದಿಟ್ಟನು. [illegible] ಸನಾಡದೆ ಸುಮ್ಮನಿದ್ದನು. ಅನಂತರ [illegible] ಈತನಿಗೆ ಹಾಲನ್ನು ಕೊಡ ಹೋದ[illegible] ಮೊತ್ತಿನೊಳಗಾಗಿ ಊರಜನರೇ[illegible] ಸುತ್ತೆಯಾಯಿತು. ಹುಡುಗನು [illegible] ಹಾಕಿ ಸುಮ್ಮನಿದ್ದನು. ಈ ವಿಚಾರವು [illegible] ಹರಡಿತು.

ಅದರೆ [illegible]ಗೆ ಆಲೋಚನೆ ಮಾಡಹತ್ತಿದನು "ನನಗಂತೂ [illegible] ಬೇಕು. ಅವಳು ನನ್ನ ವಶವಾಗದಿದ್ದರೆ, ನಾನು [illegible] ಇಲ್ಲಿನ ಜನರು ನನ್ನನ್ನು ಸನ್ಯಾ[illegible]ದರೆ, ರಾಜನು ತನ್ನ ಮಗಳನ್ನು ನನಗೊಪ್ಪಿ[illegible] ಇಷ್ಟಾರ್ಥವು ಕೈಗೂಡುವುದು" ಈ ರೀತಿ ಆ [illegible] ಮನಸ್ಸುಮಾಡಿ, ಕೈಕಟ್ಟಿ ರಾತ್ರಿಯೆಲ್ಲಾ ಅಲ್ಲಿಯೇ ಕುಳಿತನು.

ಬೆಳಕು ಹರಿ[illegible] ಆ ಸಾಧು ದೇವಾಲಯದಲ್ಲಿ ಇದ್ದಾನೋ [illegible]ಕ್ಕಾಗಿ, ಅನೇಕರು ಒಬ್ಬರ ಹಿಂದೆ ಒಬ್ಬರಾಗಿ ಬಂದರು. ಅಲ್ಲಿಯೇ ಈತನು ಕುಳಿತಿದ್ದನು. ಬಂದವರೆಲ್ಲರೂ ಅವನಿಗೆ ಸಾಷ್ಟಾಂಗ ಪ್ರಣಾಮ ಮಾಡಿ ಅಲ್ಲಿಯೇ ಕುಳಿತರು.

ಆ ಯುವಕನು ಅನ್ನ ಆಹಾರಾದಿಗಳನ್ನು ವರ್ಜಿತಮಾಡಿ, ಧ್ಯಾನಾರೂಢನಾಗಿ ಕುಳಿತಿರುವುದನ್ನು ಕಂಡರೆ ಯಾರಿಗೆತಾನೇ ಆಶ್ಚರ್ಯವಾಗಲಿಕ್ಕಿಲ್ಲ. ಗಂಡಸರೂ ಹೆಂಗಸರೂ ಸನ್ಯಾಸಿಗಳೂ ಆ ಹುಡುಗನನ್ನು ನೋಡಿ ಈತನು ಯಾರೋ ಮಹಾ ದೊಡ್ಡ ಯೋಗಿವರ[illegible] ಇವನ ಸನ್ನಿಧಿಯಲ್ಲೇ ಕಾಲಹರಣ ಮಾಡೋಣವೆಂದು ಹೇಳುತ್ತಿದ್ದರು. ಇಷ್ಟರೊಳಗಾಗಿ ಈ ಸಮಾಚಾರವು ಅರಸನಿಗೆ ತಿಳಿಯಿತು.

ಕೂಡಲೆ ಅರಸ[illegible]ವಾಲಯಕ್ಕೆ ವಿಶಾರಿಯಾಗಿ ಬಂದು, ಅಲ್ಲಿ ನೆರೆದಿರುವ ಜನದಾಳಿಯನ್ನು ನೋಡಿ, ಆಶ್ಚರ್ಯಭರಿತನಾಗಿ, ಮುಂದೆ ಬಂದು ಆಯುವಕ ಸಾಧುವಿನ ಮುಂದೆ ಆಸನ ಹಾಕಿದನು. ರಾಜನು ಆ ಹುಡುಗನನ್ನು ಕುರಿತು "ಸ್ವಾಮಿಾ, ಮಹನೀಯರೇ! ತಾವು ಯಾರು? ತಮ್ಮ ದೇಶವಾವುದು? ನನ್ನರಾಜ್ಯಕ್ಕೆ ಏನುಕಾರಣ ಬಂದಿರಿ? ನನ್ನಿಂದ ಏನಾಗಬೇಕು?" ಎಂದು ವಿಚಾರಿಸಿದನು.

ಆ ಹುಡುಗನ ಇಷ್ಟ ಸಿದ್ಧಿಗೆ ಕಾಲಸಮಿಾಪಿಸಿತೋ ಎನ್ನುವಂತಾಯಿತು. ಅದರೆ ಆತನೇನೂ ಮಾತಾಡಲಿಲ್ಲ. ಕಣ್ಣುಗಳನ್ನು ಮುಚ್ಚಿಕೊಂಡವನು ಮತ್ತು ಹೀಗೆ ಯೋಚಿಸಿದನು. "ಹೇ ಭಗವಾನ್! ನೀನೆಂಥಕರುಣಾಳು! ನಿನ್ನ ಮೇಲಿಟ್ಟ ನಿಶ್ಚಯವು ನಿನ್ನ ಭಕ್ತನೆಂದು ನನ್ನ ಮಾಡಿದೆನು. ಈ ದಿನ ರಾಜನು ನನ್ನಲ್ಲಿಗೆ ಬಂದನು [illegible] ಈತನು ನಾನುಕೇಳಿದ್ದನ್ನು ಕೊಡುವ

ಸು. ಆಸನಗಳನ್ನು ನಾನು ಈಗಬಲ್ಲೆನು. ನಿನ್ನ ಪ್ರೀತಿಮಾತ್ರ ಇದ್ದರೆ ಸಾಕು. ಲೋಕದಲ್ಲಿ ಜನರು ಹೆಣ್ಣು ಮಣ್ಣು ಮತ್ತು ಹೊನ್ನಿಗಾಗಿ ನಾನಾ ಕೆಲಸಗಳನ್ನು ಮಾಡುವರು. ಇದಾವುದರಲ್ಲಿಯೂ ಮನುಷ್ಯನಿಗೆ ತೃಪ್ತಿ ಇರದು. ಈ ದೃಶ್ಯ ಪ್ರಪಂಚವೆಲ್ಲವೂ ಸ್ವಪ್ನಪ್ರಾಯವಾದುದು. ಹಗ್ಗವನ್ನು ನೋಡಿ ಹಾವೆನ್ನುವಂತೆ, ಈ ಪ್ರಪಂಚವನ್ನು ನೋಡಿ ಇಲ್ಲಿನ ಕಾರ್ಯಗಳೆಲ್ಲವೂ ಸತ್ಯವೆಂದು ಅನ್ನುತ್ತೇವೆ. ಈ ಜಗತ್ತು ಮಿಥ್ಯವಲ್ಲದೆ ಸತ್ಯವಲ್ಲ. ಸತ್ಯವು ಪರಮಾತ್ಮನೊಬ್ಬನೆ, ಮನುಷ್ಯನು ಯಾವಾಗ ತನಗೆ ಜನನ ಮರಣಾದಿಗಳಿಲ್ಲವೆಂದು ತಿಳಿಯುತ್ತಾನೋ ಆವಾಗ ಅವನಿಗೆ ಸತ್ಯವು ಗೋಚರಿಸುವುದು. ಸಾವು ಒಂದು ಕನಸು, ರಾತ್ರೆಯನ್ನು ದಾಟುವಂತೆ, ಸಾವಿನಿಂದ ಒಂದು ಜನ್ಮವನ್ನು ದಾಟುವುದು ಸಹಜ. ಈ ಸಾವಿಗಾಗಿ ಮನುಷ್ಯರು ಬಹಳ ಅಂಜುವರು. ಜಡ ಶರೀರಕ್ಕೆ ಸಾವು ನಿಶ್ಚಯವು. ಆತ್ಮನಿಗೆ ಸಾವಿಲ್ಲ. ಅವನಿಗೆ ಜನನವಿಲ್ಲ. ಅವನಿಗೆ ಬಂಧು ಬಳಗ, ತಂದೆ ತಾಯಿ, ಯಾರೂ ಇಲ್ಲ. ತಾನೇ ತಾನಾಗಿದ್ದಾನೆ." ಹೀಗೆ ವಿಚಾರ ಮಾಡಿದನಂತರ, ರಾಜನಿಂದಲೂ, ಜನರಿಂದಲೂ ಅಪ್ಪಣೆ ಪಡೆದು ಮೇಲಿನ ಸಂಗತಿಯು ನಿಜವೋ ಎಂದು ಪರೀಕ್ಷೆ ಮಾಡಲಿಕ್ಕಾಗಿ ಅರಣ್ಯಕ್ಕೆ ತಪಸ್ಸಿಗೆ ಹೊರಟು ಹೋದನು.

'ಶಿವಯ್ಯ'

ಪತ್ರವ್ಯವಹಾರಗಳು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾ ಕರ್ತರು ಉತ್ತರವಾದಿಗಳಲ್ಲ. ಸಂ.

ಮುತ್ತಪ್ಪ ದೇವರಿಗೆ ಹರಿಕೆ.

ಅಯ್ಯಾ,

ಕೆಲವು ಸಮಯಕ್ಕೆ ಮುಂಚೆ ಕೊಡಗಿನಲ್ಲೆಲ್ಲಾ ಮುತ್ತಪ್ಪ ದೇವರ ಹೆಸರಿನಲ್ಲಿ ಸುಳ್ಳು ಹೇಳಿ ಮಲಬಾರಿನಿಂದ ಬಂದ ಕೆಲವರು ಹರಿಕೆಗಳನ್ನು ವಸೂಲುಮಾಡುತ್ತಿದ್ದದರ ವಿಷಯ ನಿಮ್ಮ ಅಮೂಲ್ಯವಾದ ಪತ್ರಿಕೆಯಲ್ಲಿ ಪ್ರಕಟಿಸಿದ್ದು ನೆನಿಯಷ್ಟೆ. ಮುತ್ತಪ್ಪ ದೇವರ ಕಡೆಯವರೆಂದು ನಟಿಸಿದವರು ನಂತರ ಕಷ್ಟಕ್ಕೊಳಗಾಗಿ ಆ ಕೆಟ್ಟ ಪದ್ಧತಿಯನ್ನು ನಿಲ್ಲಿಸಬೇಕಾಯಿತೆಂದು ತಿಳಿಯಲು ಸಂತೋಷಪಡುತ್ತೇನೆ. ನಾವು ಇಲ್ಲಿಂದ ಯಾರನ್ನೂ ಕಳುಹಿಸದೆ ಇದ್ದರೂ ಕೂಡ ಈಗ ಪುನಹ ಕೆಲವು ತುಂಟರು ಮುತ್ತಪ್ಪ ದೇವರ ಹೆಸರಿನಲ್ಲಿ ಹರಿಕೆ, ಕಾಣಿಕೆಗಳನ್ನು ವಸೂಲಿ ಮಾಡುತ್ತಿರುವರೆಂದು ಕೊಡಗಿನಿಂದ ಇಲ್ಲಿಗೆ ಬಂದ ಅನೇಕರು ನನಗೆ ತಿಳಿಸಿರುವರು. ಅವರು ವಸೂಲಿಮಾಡಿದ ಹಣವನ್ನು ತಮ್ಮ ಸ್ವಂತ ಕೆಲಸಕ್ಕೆ ಉಪಯೋಗಿಸಿಕೊಳ್ಳುತ್ತಿದ್ದಾರೆ. ಅಂಥಾ ಹಣವು ನಮಗೆ ತಲಪುವುದೇ ಇಲ್ಲವಾದುದರಿಂದ ಅದನ್ನು ಕೊಡುವ ಜನರ ಉದ್ದೇಶವು ನೆರವೇರುವುದಿಲ್ಲ. ಆದುದರಿಂದ ಇಂಥಾ ವಸೂಲಿಗೆ ನಾವು ಇಲ್ಲಿಂದ ಕೊಡಗಿಗೆ ಯಾರನ್ನೂ ಕಳುಹಿಸಿರುವುದಿಲ್ಲವೆಂದೂ, ಹಾಗೆ ಪರಚಿನಿ ಮುತ್ತಪ್ಪನವರ ಹೆಸರಿನಲ್ಲಿ ವಸೂಲಿ ಮಾಡುತ್ತಿರುವವರು ಮೋಸಗಾರರೆಂದೂ ಜನರ ತಿಳುವಳಿಕೆ ಬಗ್ಗೆ ಪ್ರಕಟಿಸಬೇಕೆಂದು ಕೋರುತ್ತೇನೆ. ಪರಚಿನಿ ಮಟಪ್ಪುರದ ಮುತ್ತಪ್ಪ ದೇವರಿಗಿರುವ ಹರಿಕೆಗಳನ್ನೆಲ್ಲಾ ಈ ಕೆಳಗಿನ ನನ್ನ ವಿಳಾಸಕ್ಕೆ ಕಳುಹಿಸಬೇಕೆಂದು ಕೊಡಗಿನ ಮಹನೀಯರಲ್ಲಿ ನನ್ನ ಕೋರಿಕೆಯಾಗಿದೆ.

ಪಿ. ಯಂ. ಕುಂಜಿರಾಮನ್,
ಪರಚಿನಿಕಡವು ಮಟಪ್ಪುರ ಮನೆ,
ತಳಿಪರಂಬು.

ಡಿಸ್ಟ್ರಿಕ್ಟು ಬೋರ್ಡು ಪ್ರೆಸಿಡೆಂಟರು ಮತ್ತು ಮೆಂಬರುಗಳಲ್ಲಿ ವಿನಂತಿ.

ಕೆಲವು ವರುಷಗಳಿಂದ ಈಚೆಗೆ ನ್ಯಾಯ ವಿರುದ್ಧವಾಗಿ ಖಾಯಂ ಕಂದಾಯವನ್ನು ಹೆಚ್ಚಿಸಿದ್ದಲ್ಲದೆ ಸೆಟ್ಲಮೆಂಟು ಕಾಲದಲ್ಲು ರೈತರು ಮಾಡಿಕೊಂಡಿದ್ದ ರಸ್ತೆಗಳಿಗೆಲ್ಲಾ ರಿಪೇರಿಬಗ್ಗೆ ಸ್ವಲ್ಪ ಸ್ವಲ್ಪ ಹಣವನ್ನು ಸರಕಾರದವರು ಕೊಟ್ಟು ಅವುಗಳನ್ನೆಲ್ಲಾ ರೈತರಿಂದಲೇ ರಿಪೇರಿ ಮಾಡಿಸಿ ವಿಲೇಜ್ ಕಮ್ಯುನಿಕೇಶನ್ ರಸ್ತೆ ಎಂತಲೂ, ಬತ್ತ ವಗೈರೆ ಸಾಗಿಸಲು ಅನುಕೂಲ ಇದೆ ಎಂತ ಹೇಳಿ ಕಂದಾಯವನ್ನು ಹೆಚ್ಚಿಸಿದ್ದಲ್ಲದೆ ಈಚೆಗೆ ಎಲ್ಲ ತೆರಿಗೆಗಳು ಹೆಚ್ಚಿಸಲ್ಪಟ್ಟಾಗ್ಯೂ ಕೂಡ ಹಳ್ಳಿ, ಹಳ್ಳಿಗಳಲ್ಲಿ ಇರುವ ರಸ್ತೆಗಳಿಗೆ ರಿಪೇರಿಗಳ ಹೆಚ್ಚು ಗಮನ ಕೊಟ್ಟು ಜನರಿಗೆ ತಕ್ಕ ಅನುಕೂಲಗಳು ಆಗುತ್ತಾ ಇವೆಯೋ, ಇಲ್ಲವೋ, ಎಂಬದನ್ನು ಉದ್ಯೋಗಸ್ಥ ಮೆಂಬರುಗಳಾಗಲಿ, ಯಾ, ಚುನಾಯಿತ ಮೆಂಬರುಗಳಾಗಲಿ, ನೋಡುವ ಹಾಗೆ ಕಾಣುವದಿಲ್ಲ. ರೈತರು ತಮಗೆ ಹೆಚ್ಚಿನ ಸೆಸ್ ಹಾಕಕೂಡದಾಗಿ ಎಷ್ಟು ಕೂಗಿಕೊಂಡರೂ ಕೂಡ, ಉದ್ಯೋಗಸ್ಥ ಮೆಂಬರುಗಳು, ಇವರ ಕೂಗನ್ನು ಗಣನೆಗೆ ತಾರದೇ ತಮಗಿಷ್ಟ ಒಪ್ಪಿಗೆ ಕೊಟ್ಟು ಹಾಕಿ ವಸೂಲು ಮಾಡುವದನ್ನು ಬಾಕಿ ಮಾಡುವದಿಲ್ಲ.

ಈಗ ಕೆಲವು ವರುಷಗಳ ಹಿಂದೆ ಇದ್ದ ಬಿಡುಕಳ ಮನೆ ಹಣವನ್ನು ವಜಾಮಾಡಿ ವ್ಯವಸಾಯಗಾರರಲ್ಲದ ಮತ್ತು ವ್ಯವಸಾಯಗಾರರಾದರೂ ಇತರ ವಿಧದಿಂದ ವರುಷ 1ಕ್ಕೆ 100 ರುಪಾಯಿ ಮೇಲ್ಪಟ್ಟು ಆದಾಯವನ್ನು ಪಡೆಯುತ್ತಿರುವವರಿಗೆಲ್ಲರಿಗೂ ಮತ್ತು ಇನ್ಕಂಟ್ಯಾಕ್ಸ್ ಕೊಡುತ್ತಿರುವ ವ್ಯಾಪಾರಿಗಳಿಗೂ ಮತ್ತು ಉದ್ಯೋಗಸ್ಥರಿಗೂ ಸಹ ಮನೆ ಕಂದಾಯವನ್ನು ವಿಧಿಸಿ ವಸೂಲು ಮಾಡುತ್ತಾರೆಂತಲೂ, ತೋಟಗಳ ಮ್ಯಾನೇಜರುಗಳೂ ಮತ್ತು ರೈಟರುಗಳೂ ಕುದ್ದು ವ್ಯವಸಾಯಗಾರರೆಂಬದಾಗಿ ಹೇಳಿ ಕಂದಾಯದಿಂದ ವಿನಾಯಿಸಲ್ಪಟ್ಟಿರುತ್ತಾರಾಗಿಯೂ ತಿಳಿಯಬರುತ್ತೆ. ಇದು ರಾಜನೀತಿಯೋ, ಯಾ, ಯೂರೋಪಿಯನರುಗಳಿಗೆ ತೋಟಗಳು ಹೆಚ್ಚಾಗಿರುವದರಿಂದಲೂ ಆದ ತೋಟಗಳ ವ್ಯವಸಾಯವನ್ನು ಹೆಚ್ಚಾಗಿ ಮ್ಯಾನೇಜರು, ಮತ್ತು ರೈಟರುಗಳು ಮುಖಾಂತರ ನಡಿಸುತ್ತಿರುವದರಿಂದ ತೋಟಗಳಲ್ಲಿ ಸಂಬಳ ಹೊಂದಿಕೊಂಡು ಕೆಲಸನಡಿಸುತ್ತಿರುವ ಮ್ಯಾನೇಜರು ಮತ್ತು ರೈಟರುಗಳನ್ನು ಈ ಕಂದಾಯದಿಂದ ವಿನಾಯಿಸುವಂತೆ ಮಾಡಲು ತಕ್ಕ ಸಲಕರಣೆಗಳನ್ನು ಮಾಡದೆ ಹೋದರೆ ತಮ್ಮ ಜನಾಂಗಕ್ಕೆ ಹೆಚ್ಚಿನ ನಷ್ಟ ಉಂಟಾಗುತ್ತೆ ಎಂಬ ಭಾವನೆಯಿಂದ ಮುಖ್ಯ ಉದ್ಯೋಗಸ್ಥರಾದ ಯೂರೋಪಿಯನರ ಸ್ವಇಚ್ಛಾ ತೀರ್ಮಾನವೋ? ಹ್ಯಾಗೆಂಬದು ಗೊತ್ತಾಗುವದಿಲ್ಲ. ಸಂಬಳ ಹೊಂದಿಕೊಂಡು ಕೆಲಸವಡಿಸುತ್ತಿರುವವರನ್ನು ಈ ರೀತಿ ವಿನಾಯಿಸಿದರಲ್ಲಿ ನ್ಯಾಯವಿದೆ ಎಂತ ಯಾರೂ ಹೇಳಲಾರರು, ಮತ್ತು ಇದು ಘನ ಸರಕಾರದವರ ತಿಳುವಳಿಕೆಗೆ ತಿಳಿದು ಬಂದಿದ್ದಲ್ಲಿ ಎಂದಿಗೂ ಇಂಥಾ ನ್ಯಾಯ ವಿರುದ್ಧವಾದ ತೀರ್ಮಾನ ಮಾಡುತ್ತಿರಲಿಲ್ಲವೆಂಬದಾಗಿ ಸಹ ತೋರುತ್ತೆ. ಇನ್ನಾದರೂ ಈ ಸಂಗತಿಯಲ್ಲಿ ನ್ಯಾಯ ಸಿಕ್ಕುವವರೇಗೆ ಚುನಾಯಿತ ಮೆಂಬರುಗಳು ಮಿಾಟಿಂಗಿನಲ್ಲಿ ಚರ್ಚಿಸಿ ನ್ಯಾಯ ದೊರಕದೆ ಹೋದರೆ ಕೌನ್ಸಿಲಿನಲ್ಲು ಈ ವಿಷಯವನ್ನು ಮುಂದಿಟ್ಟರೆ ರಾಜನೀತಿಗನುಸಾರವಾಗಿ ನ್ಯಾಯಕ್ಕೆ ಎಂದಿಗೂ ಚುತಿವುಂಟಾಗಲಾರದೆಂಬದು ಖಂಡಿತ.

ಈ ಮೊದಲು ಮೋಟರುಗಳಿಗೆ ಇದ್ದ ಸುಂಕವನ್ನು ಹೆಚ್ಚಿಸಿದಾಗ ಮೋಟಾರು ಬೈಸಿಕಲ್ಲುಗಳಿಗೂ ಸುಂಕವನ್ನು ಹೆಚ್ಚಿಸದೆ ಬಾಕಿಮಾಡಲು ಏನು ಕಾರಣವೆಂಬದು ಗೊತ್ತಾಗುವದಿಲ್ಲ. ಮುಂದಕ್ಕಾದರೂ ಇವುಗಳ ದರವನ್ನು ಈಗ ಇರುವ ದರಕ್ಕಿಂತ ಒಂದು ಪಾಲು ಹೆಚ್ಚಿಸುವುದರಲ್ಲಿ ನ್ಯಾಯವಿಲ್ಲವೆಂತ ಯಾರೂ ಹೇಳಲಾರರು. ಈ ವಾಹನಗಳು ಅಂದರೆ ಮೋಟಾರುಕಾರುಗಳು, ಬಸ್ಸುಗಳು ಮತ್ತು ಮೋಟಾರ್ ಬೈಸಿಕಲ್ಲುಗಳು ಬಹು ವೇಗವಾಗಿ ಚಲಿಸುವವುಗಳಾಗಿರುವದರಿಂದ 24 ಘಂಟೆಯೊಳಗೆ ಒಂದು ರಸ್ತೆಯಲ್ಲಿ ಬಂಡಿ ದಫೆಕ್ಕಿಂತ ಹೆಚ್ಚಾಗಿ ದಾಟುತ್ತಿರುವುದರಿಂದಲೂ ಇವುಗಳಿಂದ ರಸ್ತೆಯು ಹೆಚ್ಚಾಗಿ ಹಾಳಾಗುತ್ತಾ ಬರುವದರಿಂದ ರಸ್ತೆ ರಿಪೇರಿಗಾಗಿ ಹೆಚ್ಚಾದ ಹಣ ಖರ್ಚು ಮಾಡಬೇಕಾಗಿರುವದಲ್ಲದೆ ಇವುಗಳು ಬಂದುದರಿಂದ ರಸ್ತೆಗಳ ಬಡಾವಣೆಗಾಗಿ ಹಳ್ಳಿ, ಹಳ್ಳಿಗಳಲ್ಲಿ ಯಾವದೊಂದು ಪ್ರತಿಫಲವನ್ನು ಹೊಂದದೆ ಕಂದಾಯವನ್ನು ತೆರುತ್ತಾ ಇರುವ ರೈತರ ಹಣವು ಸಹ ಇದಕ್ಕಾಗಿ ವೆಚ್ಚಮಾಡಲ್ಪಟ್ಟದೆಯೆಂದರೆ ಅತಿಶಯೋಕ್ತಿಯಾಗಲಾರದು. ಆದ ಕಾರಣ ಈ ವಾಹನಗಳು ದಾಟುವ ಪ್ರತಿಯೊಂದು ಸಂದರ್ಭದಲ್ಲು ಸುಂಕವನ್ನು ಕೊಡುವಂತೆ ಮಾಡಿದರೆ ಆದಾಯವು ಹೆಚ್ಚಿ ನಾಡುಪ್ರಾಂತ್ಯದಲ್ಲಿರುವ ಹಳ್ಳಿ ರಸ್ತೆಗಳ ರಿಪೇರಿ ಬಗ್ಗೆ ಖರ್ಚು ಮಾಡಲು ಅನುಕೂಲಿಸುತ್ತೆ ಎಂಬದಾಗಿ ಖಂಡಿತ ಹೇಳುತ್ತೇನೆ.

ಸುಂಕಗಳು ಹೆಚ್ಚಿಸದೆ ಇದ್ದಾಗ್ಯೂ ಕೂಡ ಧಾರಣೆವಾಸಿಗಳು ಮತ್ತು ಗಾಡಿ ಬಾಡಿಗೆಗಳು ಸಹ ಹೆಚ್ಚಿಸುತ್ತಲೇ ಇದ್ದಾರೆ. ಆದಪ್ರಯುಕ್ತ ಸುಂಕದ ದರವನ್ನು ಸ್ವಲ್ಪ ಬದಲಾಯಿಸುವದರಿಂದ ಯಾರಿಗೂ ವಿಶೇಷ ನಷ್ಟವುಂಟಾಗಲಾರದೆಂದು ತೋರುತ್ತೆ. ಅಲ್ಲದೆ ಇಲ್ಲಿ ನಮೂದಿಸಿರುವ ಮೇರೆ ದರಗಳನ್ನು ಬದಲಾಯಿಸಿದರೆ ಗುತ್ತಿಗೆದಾರರಿಗೂ ಮತ್ತು ಗಾಡಿಯವರಿಗೂ ಉಂಟಾಗುವ ನಷ್ಟಗಳನ್ನೂ ಮತ್ತು ಕಲಹಗಳನ್ನೂ ತಪ್ಪಿಸಿದಂತಾಗುವದಲ್ಲದೆ ಸ್ವಲ್ಪ ಆದಾಯವೂ ಸಹ ಬರುವದರಿಂದ ಒಳ ರಸ್ತೆಗಳನ್ನು ಚನ್ನಾಗಿ ರಿಪೇರಿಮಾಡಿಸಲು ಅನುಕೂಲಿಸಲುಬಹುದು. ದೇಶೀಯ ಭರ್ತಿಗಾಡಿಗಳಿಗೆ 4 ಆಣೆಯಂತೆಯೂ ಕಾಲಿಗಾಡಿಗಳಿಗೆ 2 ಆಣೆಯಂತೆಯೂ ದರ ನಿಕ್ಕಿಸಿರುವದರಿಂದ ಗಾಡಿಯವರು ಸವಾರಿ ಜನರನ್ನು ಕೂರಿಸಿಕೊಂಡು ಬಂದು ಟೋಲುಗೇಟಿಗೆ ಸ್ವಲ್ಪ ದೂರದಲ್ಲಿ ಇಳಿಸಿ ಕಾಲಿಗಾಡಿ ಎಂದು ಹೇಳಿ 2ಆಣೆ ಸುಂಕಕೊಟ್ಟು ಕೆಲವುದೂರ ಹೋದನಂತರ ಇಳಿಸಿದ ಜನರನ್ನು ಪುನಃ ಕೂರಿಸಿಕೊಳ್ಳುತ್ತಾರೆ. ಕೆಲವು ಸಂದರ್ಭಗಳಲ್ಲಿ ಗುತ್ತಿಗೆದಾರರು ಗಾಡಿಎತ್ತುಗಳಿಗೆ ಬೇಕಾದಷ್ಟು ಹುಲ್ಲು ಹುರುಳಿ ಆದರೆ 10ಕಂತೆ ಹುಲ್ಲು ಆರ್ಧ ಚೀಲ ಹುರುಳಿಯನ್ನು ಸಹ ಗಾಡಿಯೊಳಗೆ ಹಾಕಿಕೊಂಡಿದ್ದರೆ ಭರ್ತಿಗಾಡಿ ಎಂದುಹೇಳಿ 4ಆಣೆ ವಸೂಲುಮಾಡುವದುಂಟು. ಹೀಗೆಲ್ಲಾ ಆಗುತ್ತಿರುವದರಿಂದ ಗುತ್ತಿಗೆದಾರರಿಗೂ ಗಾಡಿಯವರಿಗೂ ಜಗಳವಾಗುವದೂ ಉಂಟು. ಆದ ಕಾರಣ ಭರ್ತಿಯೇ ಇರಲಿ, ಇಲ್ಲದೇ ಇರಲಿ, 4ಆಣೆ ಸುಂಕವನ್ನು ವಿಧಿಸಿದರೆ ಯಾರಿಗೂ ಯಾವತೊಂದರೆಯೂ ಮತ್ತು ನಷ್ಟವೂ ಇರಲಾರದೆಂಬದು ಖಂಡಿತ.

ಜಾನುವಾರುಗಳ ಕ್ರಯವು ಸಹ ಚಡವಾಗುತ್ತಾ ಇರುವದರಿಂದಲೂ, ಇವುಗಳಲ್ಲಿಯೂ ಸಹ ಭರ್ತಿ ಕಾಲಿ ಎಂಬ ಭೇದ ಇಟ್ಟಿರುವದರಿಂದ ಇವುಗಳನ್ನು ಸಹ ಭೇದವಿಲ್ಲದಂತೆ ಮಾಡಿ ದಾಟುವ ಕುದುರೆ 1ಕ್ಕೆ 2ಆಣೆ ತಟ್ಟು ಮತ್ತು ಜಾನುವಾರಗಳಿಗೆ 1ಆಣೆ ಕತ್ತೆಗೆ 6ಕಾಸು ಆಡು ಕುರಿ ಮತ್ತು ಹಂದಿಗೆ 3ಕಾಸಿನಂತೆ ವಿಧಿಸುವದರಿಂದ ಯಾರಿಗೂ ವಿಶೇಷ ನಷ್ಟವಾಗಲಾರದೆಂಬದಾಗಿ ನನ್ನ ಭಾವನೆ.

ಕೆ. ಚಂಗಪ್ಪ.

ಪೌರುಷೇಯವೆಂದರೇನು ?

ಸಂಪಾದಕಮಹಾಶಯರೆ,

ವೇದವು ಪೌರುಷೇಯವೇ, ಅಥವಾ, ಅಪೌರುಷೇಯವೇ ? ಎಂಬುದೊಂದು ಲೇಖನವು ಈ ಮುಂಚೆ ಜಯಕರ್ನಾಟಕದಲ್ಲೊಂದು ಹೊರಟಿತ್ತು. ಆ ವಿಷಯವಾಗಿ ನಮ್ಮ ನಾಡಿನ ಕೆಲವು ಭಾಗಗಳಲ್ಲಿ ವೇದಗಳ ಮೇಲೆ ಕೆಲವು ಸಂಶಯಗಳು ಹುಟ್ಟಲಾರಂಭಿಸಿಯವೆ ಮತ್ತು ಆಗಾಗ್ಯೆ ಇದರ ಚರ್ಚೆಗೆ ಕಾರಣವಾಗಿರುವುದರಿಂದ ಆ ಸಂಬಂಧವಾಗಿ ಸ್ವಲ್ಪ ವಿವರಿಸಬೇಕಾಯಿತು. ವೇದಗಳು ಪೌರುಷೇಯವೋ ಅಲ್ಲದೆ ಅಪೌರುಷೇಯವೋ ಎಂಬ ವಾದವೇ ಅಪ್ರಯೋಜಕವು ಮತ್ತು ನಾಸ್ತಿಕತ್ವವೂ ಆಗಿರುತ್ತದೆ. ವೇದದ ವಿಷಯವಾಗಿ ಸಾಕ್ಷಾತ್ತು ವ್ಯಾಸ, ಶಂಕರಾಚಾರ್ಯ, ದಯಾನಂದ ಸರಸ್ವತಿ ಮುಂತಾದ ಯಾವ ಸಂಸ್ಕೃತ ವ್ಯಾಕರಣ ವೇದಾಂತ ಪಂಡಿತರಿಂದಲೂ ಸಾಧ್ಯವಾಗಲಿಲ್ಲ. ಈ ವರೇಗೂ ವೇದಕ್ಕೆ ಸಂಪೂರ್ಣವಾದ ಒಂದೇ ಅರ್ಥಗಳನ್ನು ಯಾರೂ ಮಾಡಿರುವುದಿಲ್ಲ. ವೇದಾರ್ಥವು ಬಹಳ ಗಹನವಾಗಿರುವುದರಿಂದ ಪ್ರತಿಯೊಂದು ಪಂಗಡದವರೂ, ಮತ್ತು ಹಾಗೆಯೇ ಪ್ರತಿ ವಿದ್ವಾಂಸರೂ ಪ್ರತ್ಯೇಕ ಪ್ರತ್ಯೇಕವಾದ ಅರ್ಥವನ್ನು ಮಾಡಿರುತ್ತಾರೆ ಹೊರತು ಸರ್ವರೂ ಒಪ್ಪತಕ್ಕ ನಿಜವಾದ ಒಂದೇ ಅರ್ಥಗಳನ್ನು ಮಾಡಲಿಲ್ಲ. ವೇದಾರ್ಥಗಳು ವಿದ್ವಾಂಸರ ಅಭಿಪ್ರಾಯಗಳು ಹೇಗೆ ಹೋಗಿರುತ್ತವೆಯೋ ಹಾಗೆ ಹಾಗೆ ಅರ್ಥ ಮಾಡುವರು. ಇಷ್ಟು ಮಾತ್ರದಲ್ಲಿ ವೇದದ ಸಿದ್ಧಾಂತವು ತಿಳಿದಂತಾಗಲಿಲ್ಲ. ಅಷ್ಟೇಕೆ, ವೇದಾರ್ಥವನ್ನೇ [illegible] ವ್ಯಾಖ್ಯೆಗೆ ಎಷ್ಟು ಭಾಷ್ಯಗಳಾಗಿರುತ್ತವೆಂಬುದನ್ನು ಸ್ವಲ್ಪ ವಿಚಾರಿಸಿದರ ವೇದಾರ್ಥಗಳನ್ನು ಮಾಡತಕ್ಕ ಪರಿಣಾಮವು ಹೊರಬೀಳುವದು. ವೇದವು ಸರ್ವಕ್ಕೂ ಪ್ರಮಾಣವತ್ತಾಗಿರುವುದರಿಂದ ವೇದದ ಆಳ ಶೋಧನೆಯು ಸಮುಚಿತವಾಗಿಲ್ಲ. ಆ ಲೇಖಕರು ಪೌರುಷೇಯವೆಂದರೇನು ? ಅಪೌರುಷೇಯವೆಂದರೇನು ಎಂಬ ವಿಚಾರವೇ ಮಾಡಿರುವಂತೆ ಕಾಣುವುದಿಲ್ಲ. ಪೌರುಷೇಯವಲ್ಲದ ವಸ್ತುವೇ ಇಲ್ಲ. ಪ್ರತ್ಯಕ್ಷವಾಗತಕ್ಕವುಗಳೆಲ್ಲವೂ ವಿಚಾರಿಸಿದರೆ ಪೌರುಷೇಯವೆ. ಹೆಚ್ಚು ಹೇಳಲೇಕೆ ಪುರುಷ ಪ್ರಯತ್ನದಿಂದ ದೇವರೂ ಆಗಬಹುದೆನ್ನುವಾಗ್ಯೆ ಪೌರುಷೇಯಕ್ಕೆ ಮಿಕ್ಕಿದನ್ನು ಆ ಲೇಖಕರು ತೋರಿಸಿಕೊಡಬಲ್ಲರೇ ? ಅಥವಾ ಇದೆಯೇ ? ಹೀಗಿರುವಾಗ ಆ ಪ್ರಶ್ನೆಯು ವ್ಯರ್ಥವಲ್ಲವೇ ? ಒಂದುವೇಳೆ ಈ ಲೇಖಕರು, ಆದಿಯೇ ? ಯಾ, ಅನಾದಿಯೇ ? ಎಂಬ ಪ್ರಶ್ನೆ ಇಟ್ಟು, ಉತ್ತರ ಬಯಸಬಹುದಿತ್ತು. ಅದು ಬಿನಹ ಪೌರುಷೇಯವೇ ಎಂಬ ಪ್ರಶ್ನೆ ಇಟ್ಟುಕೊಂಡು ವೇದಕ್ಕೆ ವಿಪರೀತಾರ್ಥಗಳನ್ನು ಕಲ್ಪಿಸಿಕೊಂಡು ನಾಸ್ತಿಕವಾದಕ್ಕೆ ಆರಂಭಿಸಿದ್ದು ಬಹಳ ಶೋಚನೀಯವಾದ ಸಂಗತಿಯಾಗಿದೆ. ಇನ್ನು ವಿಚಾರಿಸಿದರೆ ವೇದಗಳೆಲ್ಲವು ಫಲಸಿದ್ಧಿಯನ್ನು ಕೊಡತಕ್ಕವುಗಳಾದ್ದರಿಂದ ಅರ್ಥಕ್ಕಿಂತಲೂ ವರ್ಣಕ್ರಮವೇ ಶ್ರೇಷ್ಠವಾಗಿರುತ್ತದೆ. ಈ ಕ್ರಮದಿಂದಲೇ ಫಲಸಿದ್ಧಿಯುಂಟಾಗ ಬೇಕು ಹೊರತು ವೇದಪಠನದಲ್ಲಿ ಅರ್ಥಕ್ಕೆ ತಕ್ಕ ಹಾಗೆ ಕಲ್ಪಿಸಿಕೊಂಡು ಮಾಡಿದರೆ ಯಾವ ಪ್ರಯೋಜನವೂ ಇಲ್ಲ. ಲೇಖಕರು ಅರ್ಥ ಮಾಡಿದಂತೆ ಮಾಡಿದರೆ ಹಿಂದೂ ಸಂಬಂಧವಾದ ಯಾವ ಗ್ರಂಥವೂ ಸಮರ್ಪಕವಾಗಿರುವದಿಲ್ಲ. ಅವುಗಳಲ್ಲಿ ಎಷ್ಟೋ ಹೀನಾರ್ಥಗಳನ್ನು ಕಲ್ಪಿಸಬಹುದು. ಅದು ವಿದ್ವಾಂಸರಿಗೆ ಸಲ್ಲತಕ್ಕದ್ದಲ್ಲ. ಯಾವ ಗ್ರಂಥವನ್ನೇ ಆಗಲಿ ಆ ಗ್ರಂಥದ ಮುಖ್ಯೋದ್ದೇಶವಿಟ್ಟುಕೊಂಡೇ ಅದಕ್ಕೆ ಸರಿಯಾದ ಅರ್ಥವನ್ನೇ ಕಲ್ಪಿಸಬೇಕು. ಪೌರುಷೇಯವೆನ್ನುವರೆ ಯಾರು, ಎಲ್ಲಿಂದ, ಎಷ್ಟರವರೇಗೆ, ಯಾವ ಮಹತ್ವವುಳ್ಳವರು, ಪುರುಷರಾಗುವರೆಂಬ ವ್ಯತ್ಯಾಸವನ್ನು ನಿರ್ಣಯ ಮಾಡಬೇಕಿತ್ತು. ವಿಚಾರಿಸಿದರೆ ನಾವು ದೇವರೆಂದು ಹೇಳತಕ್ಕ ವಿಷ್ಣು, ಬ್ರಹ್ಮ, ರುದ್ರೇಂದ್ರಾದಿ ದೇವಾದಿ ದೇವತೆಗಳೂ, ನಾರದಾದಿ ಋಷಿ ಶ್ರೇಷ್ಠರೂ ಕೂಡ ಪುರುಷರಲ್ಲವೇ ?

ವೇದವನ್ನು ಯಾರು ನಿರ್ಮಿಸಿದ್ದೆಂದು ಈ ಮುಂಚೆ ಲೇಖಕರು ಗ್ರಹಿಸಿಕೊಂಡಿದ್ದರು, ದೇವರೆಂದು ಗ್ರಹಿಸಿಕೊಂಡಿದ್ದರೇ ? ಹಾಗಾದರೆ ದೇವರೆಂದರೆ ಯಾರ ? ಹಾಗೆ ದೇವರನ್ನ ಬೇಕಾದರ ಅವರ ಉತ್ಪತ್ತಿಯಾಗಲಿ, ಮಹತ್ವವಾಗಲಿ ಎಲ್ಲಿಂದ ಬಂತು ? ಅಥವಾ, ಯಾವ ಸಮಯದಿಂದ ' ಮನುಷ್ಯರೆಂದೇ ಗ್ರಹಿಸಿಕೊಂಡಿದ್ದರೆ ಈ ಲೇಖನ ಬರೆಯುವರ ಯಾವ ಕಾರಣ ? ಎಂಬಿತ್ಯಾದಿ ವಿಚಾರಗಳನ್ನು ಸ್ವಲ್ಪ ವಿಚಾರಿಸಿದರ ಸಮಾಗೇನೇ ಸ್ವತಃ ಈ ವಿಚಾರವು ಪ್ರಯೋಜನವಿಲ್ಲೆಂದು ವ್ಯಕ್ತವಾಗುತ್ತದೆ. ವೇದವು ಹುಟ್ಟಿದ ಸಮಯವು [illegible] ಕೆಂದು ಲೇಖಕರೇ ಒಪ್ಪುತ್ತಾರೆ. ವೇದವು [illegible] ವೇ ಆಗಿದ್ದರೆ ಆ ಕಾಲಾಂತರದಿಂದ ಯಾರೂ ವಿದ್ವಾಂಸರು ಹುಟ್ಟಲಿಲ್ಲವೇ ? ಹಾಗೆ ಹುಟ್ಟಿದ್ದರೆ ಆ ವೇದದ ಹಾಗೆ ಇರುವ ಇನ್ನೊಂದು ವೇದವನ್ನು ಬರೆಯಲಿಲ್ಲ. ನಾಸ್ತಿಕರಿಂದ ಮಾಡಲ್ಪಟ್ಟ ಎಷ್ಟೋ ಗ್ರಂಥಗಳಿಗೆ ಸರಿಯಾಗಿ ಪ್ರತಿ ಗ್ರಂಥವನ್ನು ಮಾಡಿರುವಾಗ ಮಹಾ ಗ್ರಂಥಗಳಿಗೆ ಸರಿಯಾದ ಪ್ರತಿ ಗ್ರಂಥ ಮಾಡದಿರಲು ಕಾರಣವೇನು, ಈ ಭೂಲೋಕವು ಯಾರಿಂದ ಸೃಷ್ಟಿಸಲ್ಪಟ್ಟಿತು ವೇದಕ್ಕಿರುವ ಮಹತ್ವವೇನು, ವೇದಗಳಿಗೆ ಎಷ್ಟು ಭಾಷ್ಯಗಳು ರಚಿಸಲ್ಪಟ್ಟಿವೆ, ಎಂಬೀ ಮುಂತಾದ ವಿಚಾರ ಸ್ವಲ್ಪ ಮಾಡಿದರ ವೇದವು ಅಪೌರುಷೇಯವೆಂದು ಯಾರಿಗೂ ಚೆನ್ನಾಗಿ ವ್ಯಕ್ತವಾಗದಿರಲಾರದು. ಆ ವಿಷಯ ಕುರಿತು ಸಪ್ರಮಾಣ ಮೂಲಕ ಲೇಖಿಸುವರೆ ಸ್ಥಳಭಯದಿಂದ ಈ ಲೇಖನಿಗೆ ವಿಶ್ರಾಂತಿ ಕೊಟ್ಟಿರುವೆನು.

ಟಿ, ಆರ್, ವಿ,

ಸರಕಾರವೂ ಪ್ರಜೆಗಳೂ

ಮಹನೀಯರೆ,

ಸರಕಾರವು ಪ್ರಜಾ ಪ್ರೀತಿಗೆ ಪಾತ್ರವೆ? ಅಥವ ಪ್ರಜೆಗಳು ಸರಕಾರದ ಪ್ರೀತಿಗೆ ಪಾತ್ರರೆ? ಎಂಬ ಈ ಪ್ರಶ್ನೆಯು ಬಹು ಮಹತ್ವ ಉಳ್ಳದ್ದಾಗಿದೆ. ಇದರ ವಿಚಾರ ಪರಿಶೀಲನೆಯು ಪ್ರಜಾ ಜನರಿಗೆ ಪ್ರಾಮುಖ್ಯವಾದ ಸಂಗತಿಯಾಗಿರಬಾರದು. ಸರಕಾರದ ಪ್ರೀತಿಗೆ ಪ್ರಜೆಗಳು ಪಾತ್ರರಾಗಬೇಕೆಂಬುದೇನೋ ಸಹಜವಾದರೂ, ಸರಕಾರವು ಪ್ರಜೆಗಳಲ್ಲಿ ಹೇಗೆ ವರ್ತಿಸಬೇಕೆಂಬುದನ್ನು ಚೆನ್ನಾಗಿ ಜ್ಞಾಪಕದಲ್ಲಿರಬೇಕಾಗಿದೆ.

ಈ ಪ್ರಶ್ನೆಯಲ್ಲಿ ಹಿಂಬಿತವಾಗಿಯೂ ಸರಕಾರವೇ ಪ್ರಜಾಜನರ ಪ್ರೀತಿಗೆ ಪಾತ್ರರಾಗಿರಬೇಕೆಂಬ ಉತ್ತರವು ಹೊರಬೀಳಬೇಕು. ಯಾಕೆಂದರೆ, ಯಾವ ಸರಕಾರವು ಆಚಂದ್ರಾರ್ಕದ ವರೇಗೆ ಚಿರಸ್ಥಾಯಿಯಾಗಿಯೂ, ಕೀರ್ತಿಯುತ್ತಾಗಿಯೂ ಇರಬೇಕೆನ್ನುವುದೋ ಆ ಸರಕಾರವು ಪ್ರಜಾ ಪ್ರೀತಿಯನ್ನು ಸಂಪಾದಿಸುವದರಲ್ಲಿ ನಿಪುಣತೆಯನ್ನು ಹೊಂದಿರಬೇಕು. ಪ್ರಜೆಗಳಿಗೆ ಯಾವ ಯಾವ ಕಾಲದಲ್ಲಿ ಹೇಗೆ ಹೇಗೆ ವರ್ತಿಸಿದರ ಸುಖವಾದೀತೋ ಹಾಗೆ ಸರಕಾರವು ವರ್ತಿಸಬೇಕು. [illegible] ಸರಕಾರಕ್ಕೆ ಪ್ರಜೆಗಳು ಸ್ವದೇಶ ಪ್ರೀತಿಗೆ ಪಾತ್ರರಾಗುತ್ತಾರೆ. ದೇಶದ ಪ್ರಜೆಗಳಿಗೆ ಯಾವಾಗಲೂ ತಂದೆಯಂತೆ ಸರಕಾರವು, ಸರಕಾರಕ್ಕೆ ಪ್ರಜೆಗಳು ಮಕ್ಕಳಂತೆಯೂ ಆಗುತ್ತಾರೆ. ಈ ಭಾವನೆಯಲ್ಲಿ ಮೇಲಿನ ಪ್ರೀತಿ ಇದಕ್ಕೆ ಸಂಬಂಧವುಳ್ಳದ್ದೇ ಮುಂದೆ ಯೋಚಿಸಬೇಕು. ಮಾತ್ರವಲ್ಲ, ಯಾರ ಪ್ರೀತಿಯಿಂದ ಯಾರು ಪ್ರೀತಿಸ ತಕ್ಕವರೆಂಬುದೇ ಈ ಪ್ರಶ್ನೆಯ ಮುಖ್ಯೋದ್ದೇಶವು.

ಇಲ್ಲಿ ಮಕ್ಕಳೆಂಬ ವಿಚಾರದಲ್ಲಿ ಶಿಶುಗಳಿಗೆ ತಂದೆಯೆಂದು ಪ್ರಥಮತ ಗೊತ್ತಾಗಬೇಕಾದರೆ ತಂದೆಯ ಪ್ರೀತಿಯೇ ಮುಖ್ಯ ಕಾರಣ. ಪ್ರೀತಿಗನುಸಾರವಾಗಿ ಮಕ್ಕಳು ತಂದೆಯನ್ನು ಪೂಜಿಸುತ್ತಾರೆ, ಆದಕಾರಣ ಮೊದಲು ಪ್ರೀತಿಸತಕ್ಕವರು ಪಿತೃಭಾವಕರೆಂಬುದು ಸಿದ್ಧವಾಯಿತು. ಆದರೆ ಈ ಪ್ರೀತಿಯಲ್ಲಿ ಎರಡು ತರವಿದೆ. ಅದು ನಯ ಭಯಗಳೆಂದು ಹೆಸರುಗೊಂಡಿದೆ. ಅವುಗಳೊಳಗೆ ಒಂದು ಸಹಜಪ್ರೀತಿಯಾಗಿಯೂ ಇನ್ನೊಂದು ಅಸಹಜ ಸಮ್ಬಂಧವಾಗಿಯೂ ಇದೆ. ಈ ಅಸಹಜ ಸಂಬಂಧವು ತಂದೆಯನ್ನು ಮಕ್ಕಳು ಪ್ರೀತಿಸಲೇ ಬೇಕೆಂಬ ನಿರ್ಬಂಧದ ದೆಸೆಯಿಂದ ಪ್ರೀತಿಸೋಣವು. ಸಹಜ ಸಮ್ಬಂಧವು ಸ್ವತಃ ನ ಕೃತ್ಯಗಳಿಂದುಂಟಾಗೋಣವು ಆಗಿದೆ. ಈ ಅಸಹಜ ಸಂಬಂಧವು ಇರುವಲ್ಲಿ ದೇಶವು ನೆಮ್ಮದಿಯಿಂದಿರಲಾರದು. ದೇಶವು ನೆಮ್ಮದಿಯಲ್ಲಿರಬೇಕಾದರೆ ಸರಕಾರವೇ ಮುಖ್ಯ ಕಾರಣ. ಯಾವ ಸರಕಾರವು ಪ್ರಜಾ ಜನರ ಪ್ರೀತಿಗೆ ಪಾತ್ರರಾಗಿಕೊಂಡು ನಿಷ್ಪಕ್ಷಪಾತದಿಂದ ಕೆಲಸಮಾಡಿಕೊಂಡು ಬರುತ್ತದೋ ಆ ಸರಕಾರವು ದೈವ ಸಮಾನವಾಗಿರುತ್ತದೆ. ಅಲ್ಲ ದುರ್ಭಿಕ್ಷ, ಭಯಂಕರ, ದೇಶೋಪದ್ರವಗಳಾವುದೂ ತಲೆದೋರವು. ಪ್ರಜೆಗಳ ಮನೋರಥಗಳನ್ನು ಈಡೇರಿಸುದು ಸರಕಾರದ ಮುಖ್ಯ ಕರ್ತವ್ಯ. ಆದರೆ ಈಗಿನ ಕಲ ಸರಕಾರಗಳು ಬಾಯಿಯಲ್ಲಿಮಾತ್ರ ಪ್ರಜೆಗಳ ಕಷ್ಟ ಸುಖಕ್ಕೆ ಬಾಗಿಯಾದವುಗಳೆಂದು ಹೇಳಿಕೊಂಡು ಕಾರ್ಯತಃ ಆಚರಣೆಗಳನ್ನು ಮರೆತು ಬಿಟ್ಟಿರುತ್ತವೆ.

ಆಚರಣೆ ಹ್ಯಾಗಿದ್ದರೂ ಪ್ರಜೆಗಳು ತಮ್ಮ ಸಂಕಟಗಳನ್ನು ಅರಿಕೆಮಾಡಿಕೊಳ್ಳುವಾಗ ಅದೇ ಆಲೋಚನೆಯಲ್ಲಿದ್ದೇವೆ, ಮುಂದಕ್ಕೆ ಆಲೋಚಿಸುತ್ತೇವೆ, ಹಿಂದಿನಿಂದ ವಿಮರ್ಶಿಸುತ್ತೇವೆ, ಆಲೋಚನೆಗೆ ತೆಗೆದುಕೊಳ್ಳುತ್ತೇವೆ, ಎಂಬಿತ್ಯಾದಿ ಉತ್ತರಗಳನ್ನು ಮಾತ್ರ ಮರೆಯುವದಿಲ್ಲ. ಹ್ಯಾಗೂ ಪ್ರಜೆಗಳನ್ನು ಅಲ್ಪ ಸಂತುಷ್ಟಿ ಪಡಿಸುವದರಲ್ಲಿ ನಿಪುಣತ್ವವನ್ನು ಪಡೆದಿರುತ್ತವೆ. ಇಂಥಾ ಹುಸಿ ಸಂತುಷ್ಟಿಯಿಂದ ಪ್ರಜೆಗಳಿಗೆ ಉದಾಸೀನಕ್ಕೆ ಕಾರಣವಾಗಿದೆ. ಇಂತಾ ಉದಾಸೀನಗಳಿಂದ ಅಲ್ಲಲ್ಲಿ ಜನಗಳು ರಾಜಕೋಪಕ್ಕೆ ಪಾತ್ರರಾಗುತ್ತಾರೆ. ಆ ರಾಜಕೋಪದ ದೆಸೆಯಿಂದ ದೇಶವೇ ಶ್ಮಶಾನವಾಗುತ್ತದೆ. ಸರಕಾರದ ಅಪರಾಧವು ಪ್ರಜೆಗಳ ಮನಸ್ಸಿಗೆ ಅತೃಪ್ತಿಯು [illegible] ಜನರ ದೋಷವು ಸುಲಕ್ಷಕರವಾಗಿರುತ್ತದೆ. ಹಾಗೆ ತಿದ್ದದೆ ಕೇವಲ ಸ್ವಾರ್ಥವನ್ನು ವಲಂಬಿಸಿದರ ಪ್ರಜೆಗಳೇ ಪ್ರತ್ಯೇಕ [illegible] ಗುತ್ತದೆ. ಆದಕಾರಣ ಸರಕಾರವು [illegible] ಸರಕಾರವೇ ಮುಖ್ಯಕಾರಣ [illegible] ಸರಕಾರವು ಯಾವಾಗಲೂ ಪ್ರಜೆಗಳ ಪ್ರೀತಿಯನ್ನು ಸಂಪಾದಿಸುವದರಲ್ಲಿ ಮುಖ್ಯ ಧ್ಯೇಯವನ್ನಿಟ್ಟುಕೊಂಡು ಹಾಗೆಯೇ ಪ್ರಜೆಗಳು ಕೂಡಾ ಸರಕಾರದ ಪ್ರೀತಿಗೆ [illegible] ಪ್ರತಿ ಪ್ರೀತಿಯೂ ಗಳಿಸಿಕೊಂಡು ಬಂದರೆ ಈ ಭೂಲೋಕದ ಸರಕಾರವು ಸ್ವರ್ಗಕ್ಕೆ ಮಿಗಿಲೆನಿಸಿಕೊಳ್ಳದಿರಲಾರದು. ಈ ವಿಷಯದಲ್ಲಿ ಘನವೆತ್ತ ನಮ್ಮ ಇಂಡಿಯಾ ಸರಕಾರವು ಬಹಳ ಎಚ್ಚರಿಕೆಯಲ್ಲಿಯೇ ಇದೆ ಎಂಬುದು ತಿಳಿದವರಿಗೆ ವ್ಯಕ್ತವಾಗದಿರದು.

ಒಬ್ಬ ಹಿತೈಷಿ

ಲೇಟ್ ಪುಲಿಯಂಡ ಸಂಜಪ್ಪನವರು.

ವೀರಾಜಪೇಟೆನಾಡು ಮಲೆ ಮಹದೇವರ ಭಕ್ತಜನ ಸಂಘದ ಕಮಿಟಿಯವರಿಂದ.

ಮೆ. ಸಂಜಪ್ಪನವರು ಈಗ ಆರೇಳು ತಿಂಗಳಿಂದ ಅನಾರೋಗ್ಯದಲ್ಲಿದ್ದವರು ಈ ತಾರೀಕು 4ನೇ ಮಂಗಳವಾರ ಸಾಯಂಕಾಲ 4ಗಂಟೆಗೆ ಸ್ವರ್ಗಸ್ಥರಾದ ಸಂಗತಿ ಸೂಚಿಸಲು ವಿಷಾದಿಸುತ್ತೇವೆ. ಇವರು 1920ನೇ ಇಸವಿಯಲ್ಲು ಈ ಕಮಿಟಿ ಏರ್ಪಾಡು ಆದ ಆರಂಭದಿಂದ ವೈಸ್ ಪ್ರೆಸಿಡೆಂಟರಾಗಿ ಈ ಕಳದ 5 ವರ್ಷದ ಹಬ್ಬದಲ್ಲು ಮತ್ತು ಕಮಿಟಿ ಮೀಟಿಂಗಿನಲ್ಲು ಸಹ ಕಾಲಕ್ಕೆ ಸರಿಯಾಗಿ ಸೇರಿ ಅತಿ ಮುತುವರ್ಜಿ ಇಟ್ಟು ಕೆಲಸಮಾಡುತ್ತಾ ಬಂದವರು ಸ್ವರ್ಗಸ್ಥರಾದ ಕಾರಣ ವ್ಯಸನಪಡುತ್ತೇವೆ. ಇವರು ಸದ್ಗತಿಯನ್ನು ಪರಲೋಕದಲ್ಲಿ ಅನುಭವಿಸಲೆಂದು ಹಾರೈಸುತ್ತೇವೆ. ಇವರ ಆತ್ಮಕ್ಕೆ ಶಾಂತಿಯನ್ನೂ ಇವರ ಕುಟುಂಬಕ್ಕೆ ಸಮಾಧಾನವನ್ನೂ ದೇವರು ದಯಪಾಲಿಸಲೆಂದು ಪ್ರಾರ್ಥಿಸುತ್ತೇವೆ.

ತಾ. 12 11 24

ಮಾ. ಉತ್ತಯ್ಯ,
ಸೆಕ್ರೆಟರಿ.

" ನವನಾಗರೀಕತೆ '

ಮಹನೀಯರೇ,

ಈಗಿನ ಜಾರವೆಯಲ್ಲಿ ಮೊದಲಿನಂತೆ ತೇಜಸ್ಸು ಒಡೆದು ಕಾಣುತ್ತಲಿಲ್ಲ. ಆದರೆ ತಿಳಿಯಲು ಮಾದರಿನಂತೆ ಜಗವಲ್ಲವನ್ನು ಬೇಗ ಹತ್ತಿರುವುದಿಲ್ಲ. ಸರ್ವರ ಮುಖಗಳು ಪಾಶ್ಚಾತ್ಯ ಸಂಸ್ಕೃತಿಯ ಕಡೆಗೆ ಭಾರತೀಯರಿಗೂ ಸ್ವಸ್ವರೂಪ ವಿಸ್ಮೃತಿಯಾಗಿದೆ. ಈಗಿನ ಭಾರತೀಯರಿಗೆ ಯಾಲಕ್ಕಿ ತಿಂದರೆ ಥಳಿಯೂ ಲವಂಗ ತಿಂದರೆ ಕಾವ್ವೂ' ಎಂಬ ಸ್ಥಿತಿಯು ಉಂಟಾಗಿದೆ. ಕುದುರೆ ಕಂಡರೆ ಕಾಲು ನೋಯುವುದು, ಮೋಟರ್ ಬಂಡಿ, ಬೈಸಿಕಲ್ ಮೊದಲಾದವುಗಳು ಬಂದಂದಿನಿಂದ ಈಗಿನ ಭಾರತೀಯರಿಗೆ ಒಂದು ಕಡಿಮೆಯಾಗಿದೆ ಇಲ್ಲದೆ, ಅವರ ಕಾಲುಗಳಿಗೆ ನೆಲದ ಗುರುತೆ ಮರೆತು ಹೋಗಿದೆ. ಈಗಿನ ಜನರ ಅಂಗಾಲುಗಳಿಗೆ ಬಾಳೆಹಣ್ಣಿನ ಸಿಪ್ಪೆ ಸಿಕ್ಕಿ ಒತ್ತಿಹೋದ ಪಕ್ಷದಲ್ಲಿ ಮುಂದಕ್ಕೆ ನಡಿಯಲಾರದೆ ಸ್ವಲ್ಪ ಹೊತ್ತನ್ನು ಕಳೆದುಕೊಳ್ಳಬೇಕಾಗುತ್ತದೆ. ಹಿಂದಿನ ಕಾಲದಲ್ಲಿ ಮಹನೀಯರೆಲ್ಲರು ಬಾಲ್ಯಾವಸ್ಥೆಯಿಂದಾಗಲೇ ಗುರುವಿನ ಅಶ್ರಮದಲ್ಲಿದ್ದುಕೊಂಡು ಅನೇಕ ಕಾಯಕಷ್ಟಗಳನ್ನು ಅನುಭವಿಸಿ, ವಿದ್ಯೆಯನ್ನು ಕಲಿತರೂ ಅವರಿಗೆ ಕನ್ನಡಕಗಳು ಅವಶ್ಯವಾಗಿರಲಿಲ್ಲ. ಆದರೆ ಪಾಶ್ಚಾತ್ಯ ನವನಾಗರೀಕತೆ ಯಂತ್ರದಲ್ಲಿ ತಯಾರಾದ, ಈಗಿನ ಸಜೀವ ಮಾನವ ಗೊಂಬೆಗಳಿಗೆ ಕೌಮಾರ್ಯದಲ್ಲೇ ಕನ್ನಡಕಗಳು ಬೇಕೆನ್ನಿಸುವವು. ಅದಕ್ಕೆ ಉದಾಹರಣೆಯಾಗಿ ಶ್ರೀಮದಾದಿ ಶಂಕರಾಚಾರ್ಯರು ಶೃಂಗೇರಿ ಜಗನ್ನಾಥಪುರಿಯೆಂಬ ಬದರಿ ದ್ವಾರಕೆ ಎಂಬ ಸಂಸ್ಥಾನಗಳಲ್ಲಿ ತಮ್ಮ 4 ಪೀಠಗಳನ್ನು ಸ್ಥಾಪಿಸಿದ್ದಾರೆ. ಇವುಗಳಲ್ಲಿ ಜಗನ್ನಾಥಪುರಿಯ ಈಗಿನ ಪೀಠಾಧಿಪತಿಗಳು ಬಹಳ ವೃದ್ಧರಾಗಿರುವರು. ಅವರಿಗೆ ಈಗ 96 ವಯಸ್ಸಾದಾಗ್ಯೂ ಅವರು ರಾತ್ರಿಯಲ್ಲೂ ಕೂಡ ಸೂಕ್ಷ್ಮವಾದ ಅಕ್ಷರಗಳನ್ನು ಓದಬಲ್ಲರೆಂದು ತಿಳಿಯಬರುತ್ತದೆ. ಈ ಪಾಶ್ಚಾತ್ಯ ನವನಾಗರೀಕತೆಯ ಯಂತ್ರದಲ್ಲಿ ತಯಾರಾದ 16ನೇ ವಯಸ್ಸಿನ ಯುವಕನಿಗಾದರೂ ಕೂಡ ಕನ್ನಡಕಗಳು ಅಗತ್ಯವಾಗಿ ಬೇಕಾಗುತ್ತವೆ.

ಭಾರತ ಪುತ್ರರೇ, ನಾವು ಯಾವ ಯಾವ ಶುಭಾಶುಭಗಳಿಗೂ, ಇನ್ನು ಇತರ ಕೆಲಸಗಳಿಗೂ ಅರ್ಹರಲ್ಲವೆಂತಲೂ, ನಾಗರೀಕತೆಯನ್ನು ಹೊಂದಿದವರಲ್ಲವೆಂತಲೂ, ನಮ್ಮಲ್ಲಿ ಒಂದು ಭಾವನೆಯು ನಾಡಿಕೆಯೂ ಇದೆ. ಮತ್ತು ವಿದೇಶಸ್ಥರು ನಮ್ಮಲ್ಲಿ ಹೇಳ್ತಾದ ವಿದ್ಯೆ ಇಲ್ಲವೆಂತಲೂ, ಅವರಲ್ಲೇ ಎಲ್ಲಾ ಹುಟ್ಟಿದ್ದೆಂದೂ ಅಭಿಪ್ರಾಯಪಡುತ್ತಾರೆ. ಆದರೆ ನಮ್ಮ ಪ್ರಾಚೀನಗ್ರಂಥಗಳನ್ನು ಒಂದು ಸಾರಿ ತೆರೆದು ನೋಡಿದಲ್ಲಿ ಈ ಮೇಲೆ ಅಭಿಪ್ರಾಯಪಟ್ಟ ವಿಷಯಕ್ಕೆ ಅವಕಾಶ ಕೊಡುವುದಿಲ್ಲ. ಈಗ ಇರುವಂಥ ವಿದ್ಯೆಕ್ಕಿಂತಲೂ ಅಧಿಕವಾಗಿ ಇತ್ತೆಂದೂ ಸ್ಪಷ್ಟವಾಗುತ್ತದೆ. ವಿಮಾನ ವಾಹನಗಳೂ, ಚಿತ್ರ ಲೇಖನಗಳೂ ಭೂಗೋಳ ಶಾಸ್ತ್ರಗಳೂ ನಮ್ಮಲ್ಲಿ ಇತ್ತಿಲ್ಲವೆಂತಲೂ ಅವರಲ್ಲೇ ಉದ್ಭವವಾಯಿತೆಂದೂ ಅಭಿಪ್ರಾಯ ಪಡುತ್ತಾರೆ. ಆದರೆ ಆ ವಿದ್ಯೆಗಳಿಲ್ಲದೆ ಎಷ್ಟು ಹಿಂದೆ ಇದ್ದ ಇತ್ತೆಂದು ನಮ್ಮ ಪ್ರಾಚೀನ ಗ್ರಂಥಗಳಿಂದ ತಿಳಿಯಬರುತ್ತದೆ.

' ಅಯೋಧ್ಯಾಪುರಿ ಪುಷ್ಪಕ [illegible] ಹಿಮಾಲಯಾ' ಅಂದರೆ ಪುಷ್ಪಕ [illegible] ಇದೇನು ? ಭೂಗೋಳ ಶಾಸ್ತ್ರವಲ್ಲವೇ ? ಪ್ರಾಚೀನಕಾಲದಲ್ಲಿ ಸ್ತ್ರೀಯರು ರಂಗೋಲೆ ಬರೆಯುವದೇನು ? ಅದು ಚಿತ್ರಲೇಖನವಲ್ಲವೇ ? ಒಬ್ಬಾಕೆಯನ್ನು [illegible] ಎಂಬ ಗಾದೆಗೆ ಸರಿಯಾಗಿ ತೋರುತ್ತದೆ. [illegible] ಸರಿಯಾಗಿ ಎಲ್ಲಾ [illegible] ಎಲ್ಲಲ್ಲಿ ನೋಡಿದರೂ ಗೋಚರವಾಗುತ್ತವೆ. ನಮ್ಮ ಈಗಿನ ಭಾರತೀಯರು [illegible] ಈಗಿನ ನವನಾಗರೀಕತೆಯ ತೀವ್ರತೆಯನ್ನು ಗಮನಿಸದೆ ಹಿಂದಿನ ಅಂದರೆ ನಮ್ಮ ಪೂರ್ವಿಕರ ಪದ್ಧತಿಯಂತೆ ನಡೆದುಕೊಳ್ಳುತ್ತಾರೆಂದು ನಾನು ಪೂರ್ಣವಾಗಿ ನಂಬಿದ್ದೇನೆ.

ಟಿ. ತಿಮ್ಮಯ್ಯ,

ಎಡೆ ಬೆಪ್ಪುನಾಡು ಸಹಕಾರ ಸಂಘಗಳ ಕಾನ್ಫರೆನ್ಸ್.

ಕಳೆದ ತಾ. 25-10-24ರಲ್ಲಿ ಎಡೆ ಬೆಪ್ಪುನಾಡುಗಳಲ್ಲಿರುವ ಸಹಕಾರಸಂಘಗಳ ಕಾನ್ಫರೆನ್ಸ್ ಒಂದು ವೀರಾಜಪೇಟೆಯಲ್ಲಿ ನಡೆಯಿತು. ಮೆಂಬರುಗಳು 320ಕ್ಕಿಂತ ಹೆಚ್ಚಾಗಿದ್ದರು. ಮೆ: ಕೇಳಪಂಡ ಅಚ್ಚಯ್ಯನವರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು.

ಅಧ್ಯಕ್ಷರು ಪ್ರಥಮ ಭಾಷಣವನ್ನು ಮಾಡಿದನಂತರ ಗೌರವ ಪ್ರಚಾರಕರಾದ ಮೆ. [illegible] ಸಹಕಾರದ ಮಹತ್ವವನ್ನು ಮತ್ತು ಪ್ರತಿಯೊಂದು ಗ್ರಾಮದಲ್ಲಿ ಸಂಘವನ್ನು ಸ್ಥಾಪಿಸುವುದರಿಂದ ಕೊಡಗು ನಿವಾಸಿಗಳು ಎಷ್ಟರ ಮಟ್ಟಿಗೆ [illegible] ಹೊಂದಬಹುದೆಂಬದನ್ನು ವಿವರಿಸಿದರು.

ಮೆ. [illegible] ಅವರು [illegible] ಮಟ್ಟಿಗೆ [illegible] ಅನುಸರಿಸಬೇಕೆಂಬದನ್ನು ಒತ್ತಿ ಒತ್ತಿ ಹೇಳಿದರು. ಅಂದರೆ ಹಳೆ ನಾಣ್ನುಡಿಯಂತೆ ([illegible]), ಇಂಗ್ಲೀಷಿನಲ್ಲಿ (cut your coat according to the cloth) ಅಲ್ಲದೆ ಡಿವಿಡೆಂಡ್ ಮೆಂಬರುಗಳಿಗೆ ಹಂಚದೆ [illegible] ಗಳ ರಿಸರ್ವಿಗೆ ವಿನಿಯೋಗಿಸಬೇಕೆಂಬದಾಗಿ ಸೂಚಿಸಿದರು.

ಮೆ. ಕೋದಂಡ ಉತ್ತಯ್ಯನವರು ದೇಶದ ಒಕ್ಕಲತನವು ಕುಟುಂಬ ಸಾಲುಸಂಖ್ಯೆಗಳಿಂದಲೆ ಕುಂಠಿತವಾಗಿರುವುದಾಗಿಯೂ ಇನ್ನು ಮುಂದಕ್ಕೆ ಇಂಥಾ ಸಾಲು [illegible] ಮಾಡದೆ ಕುಟುಂಬಸ್ಥರು ಒಗ್ಗಟ್ಟಿನಲ್ಲಿ ಮಿತವ್ಯಯವನ್ನು ಅವಲಂಬಿಸಬೇಕೆಂದು ಭಾಷಣಮಾಡಿದರು.

ಮೆ. [illegible] ರವರು, [illegible] ಸೋಮೆಯ್ಯನವರ, [illegible] ತಿಮ್ಮಯ್ಯನವರು, [illegible] ಉತ್ತಪ್ಪನವರು, [illegible] ದೇವಯ್ಯನವರು, [illegible] ಬೆಳ್ಯಪ್ಪನವರು ಇನ್ನೂ ಅನೇಕ ಮಹನೀಯರುಗಳು ಸಂಘದ ಕೆಲಸವನ್ನು [illegible] ವಿಷಯ ಮಾತನಾಡಿದರು.

ರಿಜಿಸ್ಟ್ರಾರವರು ಸಹಕಾರದ ವಿಷಯ, ಯೂನಿಯನ್ ಮತ್ತು ಸೆಂಟ್ರಲ್ ಬ್ಯಾಂಕುಗಳು ಯಾವ ರೀತಿಯಲ್ಲಿ ನಡೆಯಬೇಕು ಮತ್ತು ಅವುಗಳ ಕರ್ತವ್ಯಗಳನ್ನು ಬಹು ಚನ್ನಾಗಿ ವಿವರಿಸಿದರು.

ಕೊನೆಗೆ ಅಧ್ಯಕ್ಷರಾದ ಮೆ. ಕೇಳಪಂಡ ಅಚ್ಚಯ್ಯನವರು ಈ ಕೆಳಗಿನ ವಿಷಯಗಳನ್ನು ಸೂಚಿಸಿದರು.

(1) ಪ್ರತಿಯೊಂದು ಸಂಘವು ಸೆಂಟ್ರಲ್ ಬ್ಯಾಂಕಿಗೆ ಸೇರಬೇಕು.

(2) ಪ್ರತಿಯೊಂದು ಸಂಘದ ರಿಜರ್ವ್‌ಫಂಡ್ ಸೆಂಟ್ರಲ್ ಬ್ಯಾಂಕಿನಲ್ಲಿಯೇ ಡಿಪಾಜಿಟ್ಟಾಗಿರಬೇಕು. ಲಾಭವನ್ನು ಮೆಂಬರುಗಳಿಗೆ ಹಂಚಕೂಡದು. ಆ ಮೊಬಗನ್ನು 2ನೇ ಶೇರನ್ನಾಗಿ ತಿಗೆದುಕೊಳ್ಳಬೇಕು.

(3) ಯೂನಿಯನ್ನುಗಳನ್ನು ಏರ್ಪಡಿಸಿ ಪ್ರತಿ ಒಂದು ಯೂನಿಯನ್ನಿನಿಂದ ಒಬ್ಬ ಪ್ರತಿನಿಧಿಯನ್ನು ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರನ್ನಾಗಿ ಮಾಡಬೇಕು.

(4) ಸೆಂಟ್ರಲ್ ಬ್ಯಾಂಕಿನಿಂದ ಸಂಘಗಳಿಗೆ ಯೂ, ಸಂಘಗಳಿಂದ ಸೆಂಟ್ರಲ್ ಬ್ಯಾಂಕಿಗೆ ಹಣವನ್ನು (ಸಾಲ ಹೊಂದಿಕೊಳ್ಳುವದು ಯೂ ಸಾಲಮರು ಪಾವತಿ) ಪಾವತಿ ಮಾಡುವಾಗ ಹಣವನ್ನು ಖಜಾನೆಗಳ ಮೂಲಕ ಕಳುಹಿಸಬೇಕು.

(5) ಸೂಪರ್‌ವೈಜರುಗಳು ಪ್ರತಿಯೊಂದು ಸಂಘದ ಪ್ರೆಸಿಡೆಂಟರು ಮತ್ತು ಕಮಿಟಿ ಮೆಂಬರುಗಳ ರೂಬು ರೂಬು ಲೆಕ್ಕಗಳನ್ನು ಆಡಿಟು ಮಾಡಿಸಬೇಕು ವಗೈರೆಯಾಗಿ ಇನ್ನು ಅನೇಕ ವಿಷಯಗಳನ್ನು ವಿವರಿಸಿ ತಮ್ಮ ಭಾಷಣವನ್ನು ತೀರಿಸಿ ಕಾನ್ಫರೆನ್ಸನ್ನು ಮುಕ್ತಾಯಮಾಡಿದರು. ಅಧ್ಯಕ್ಷರಿಗೂ, ರಿಜಿಸ್ಟ್ರಾರವರಿಗೂ ಸಭಿಕರಿಗೂ ಶಾಲೆಯ ಹೆಡ್ಮಾಸ್ಟರವರಿಗೂ ವಂದನೆಗಳನ್ನು ಸಮರ್ಪಿಸಿದನಂತರ ಮೀಟಿಂಗು ಮುಕ್ತಾಯವಾಯಿತು.

ವರದಿಗಾರನ.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು [illegible] ಬಾಕಿ ಉಳಿಸಿಕೊಂಡಿದ್ದುದರಿಂದ, ಅವರಿಗೆ [illegible] ಮೆ. ಕೋದಂಡ ಚಿಣ್ಣಪ್ಪನವರ ಜವಾಬು [illegible] ಕೊಡಲಾಗಿದೆ. ದಯವಿಟ್ಟು ಚಂದಾದಾರರು ಅವರವರಿಗೆ ಅನುಕೂಲವಿರುವ ಜಾಗದಲ್ಲಿ ಪಾವತಿಮಾಡಬೇಕಾಗಿ ಕೋರಿಕೆ.

ಏಜಂಟರುಗಳು.

ವೀರಾಜಪೇಟೆ—ಮೆ. ಕೆ. ಚಿಣ್ಣಪ್ಪನವರ ಆಫೀಸಿನಲ್ಲಿ.
ಮೂರ್ನಾಡು—[illegible] ಸ್ಟೋರಿನಲ್ಲಿ ಮೆ. ಮಚ್ಚಿಯಂಡ ದೇವಯ್ಯನವರು.
ನಾಪೋಕ್ಲು—ಮೆ. [illegible] ಚಂಡ ಮುದ್ದಪ್ಪನವರು.
ಗೋಣಿಕೊಪ್ಪಲು—ಮೆ. ಮುಕ್ಕಾಟಿರ [illegible] ನವರು.
ಪೊನ್ನಂಪೇಟೆ—ಮೆ. ಪುತ್ತಮನೆ ಮುದ್ದಯ್ಯನವರು.
ಮಡಿಕೇರಿ—ಜಿ ನಾರಾಯಣನವರು.
ಅಮ್ಮತ್ತಿ, ಸಿದ್ಧಾಪುರ—[illegible] ಪೂವಪ್ಪನವರು.

ಕೋದಂಡ ಉತ್ತಯ್ಯ,
ಮ್ಯಾನೇಜಿಂಗ್ ಡೈರೆಕ್ಟರು, "ಕೊಡಗು" ಲಿಮಿಟೆಡ್.

ಪ್ರಕಟಣೆ.

"ವಾರುಣಿ" ಆಸ್ಪತ್ರೆಯು ಮೊದಲಿನ 'ಸುಂದರ ವಿಲಾಸ ಪ್ರೆಸ್ಸಿ'ನ ಕಟ್ಟಡಕ್ಕೆ ಈಗ ವರ್ಗಾಯಿಸಲ್ಪಟ್ಟಿದೆ. ಸ್ಥಳ ವಿಶಾಲತೆಗಾಗಿಯೂ ಕಾಯಿಲಸ್ಥರನ್ನು ಆಸ್ಪತ್ರೆಯಲ್ಲಿಯೇ ಇಡುವದಕ್ಕಾಗಿಯೂ ಈಗಿನ ಕಟ್ಟಡಕ್ಕೆ [illegible] ಜಮೀನು [illegible] ರರ ಉಪಯೋಗಕ್ಕೆ ಆಗಾಗ್ಗೆ ಬೇಕಾಗುವ ಔಷಧಿಗಳು [illegible] ಔಷಧಶಾಲೆಗಳಿಗೆ ಬೇಕಾಗುವ [illegible] ಇಲ್ಲಿಂದ ರಕಮಾಗಿ ದೊರೆಯುವವು. ಅರ್ಹರಾದ ಜನರಿಗೆ ಸಹಾನುಭೂತಿಯು ತೋರಿಸಲ್ಪಡುವುದು.

[illegible]
ಮಡಿಕೇರಿ, ಮೆಡಿಕಲ್ ಪ್ರಾಕ್ಟೀಷನರ್.

33.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್,
ಲಿಮಿಟೆಡ್, ಕೊ ಅಪರೇಟಿವ್ ಸೊಸೈಟೀಸ್
ಆಕ್ಟ್ಸ್ ಪ್ರಕಾರ ರಿಜಿಸ್ಟರಾಗಿದೆ.

		ರೂ.
ಶೇರ್ ಬಂಡವಾಳ	....	50,000
ವಸೂಲಾದ ಶೇರ್ ಮೊಬಲಗು	....	7,720
ಜಮಾಬಂದ ಠೇವಣಾತಿ	....	61,200

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ 6-4-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 5ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊ ಅಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟು ಮಾಡುತ್ತಾರೆ.

ಪ್ರೆಸಿಡೆಂಟರು, ಟ್ರೆಜರರ್.
ಕೊಡಂದೇರ ಕುಟ್ಟಯ್ಯನವರು, ಯಂ. ಭುಜಂಗರಾಯರು
ರಾಯ್ ಬಹದ್ದೂರ್. ಬಿ.ಎ., ಬಿ.ಎಲ್.

ಸೆಕ್ರೆಟರಿ
ಸಿ. ಯನ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್
ತಾರೀಕು, 1—7—1924.

ಶ್ರೀ

ಶ್ರೀ ಧನ್ವಂತರಿ.

ಕರ್ನಾಟಕಾಯುರ್ವೇದ ಪಕ್ಷಪತ್ರಿಕೆ.

ಎಡಿಟರ್.—ವಿದ್ವಾನ್ ಕೆ. ಕೇಶವಶಾಸ್ತ್ರೀ ಆಯುರ್ವೇದರತ್ನಂ, ಇತ್ಯಾದಿ.

ದೇಶೀಯ ವೈದ್ಯವನ್ನು ಸರ್ವ ಸಂಪೂರ್ಣಾಭಿಪ್ರಾಯದಿಂದ ಕನ್ನಡ ನಾಡಿನಲ್ಲಿ ಪ್ರಕಟಿಸುವ ಮೊದಲನೇಯ ಪತ್ರಿಕೆ ಎಂದರೆ! ಇದೇ. ಆರೋಗ್ಯವಂತನಾಗಿ ಬಹುಕಾಲ ಬದುಕಿರಬೇಕೆಂದು ಯೋಚಿಸುವ ಪ್ರತಿಯೊಬ್ಬನಿಗೂ ಈ ಪತ್ರಿಕೆಯು ಬೇಕೇಬೇಕು. ವ್ಯಾಧಿ ಬಂದಾಗ ತಕ್ಷಣ ತಿಳಿದುಕೊಳ್ಳುವಂತೆ ಆಯಾ ರೋಗಲಕ್ಷಣ ಚಿಕಿತ್ಸೆಗಳು ಬರೆಯಲ್ಪಡುವುದರಿಂದ ಮುಖ್ಯವಾಗಿ ಸ್ತ್ರೀಯರೂ ಹಳ್ಳಿಯವರೂ ಈ ಪತ್ರಿಕೆಯನ್ನು ಓದಬೇಕು [illegible]? ಮನೆಯಲ್ಲಿ ಈ ಪತ್ರಿಕೆ ಇದ್ದರೆ ಒಬ್ಬ ಗುರುವೂ ವೈದ್ಯನೂ ಇದ್ದಂತಾಗುವುದು.

ವಾರ್ಷಿಕ ಚಂದಾ ಮೂರು ರುಪಾಯಿ.

ವಿಳಾಸ—
ಮೇನೇಜರ್, ಶ್ರೀ ಧನ್ವಂತರಿ,
ಶೃಂಗೇರಿ, ಮೈಸೂರುಸ್ಟೇಟ್.

ಪ್ರಕಟಣೆ.

ಒಂದು ಕಡೆ ಇಂಗ್ಲೀಷಿನಲ್ಲಿಯೂ, ಇನ್ನೊಂದು ಕಡೆ ಕನ್ನಡದಲ್ಲಿಯೂ ಪ್ರಿಂಟಾಗಿರುವ ಕಾಫಿ ತೋಟದ ಆಳುಗಳ ಬ್ರಿಚಾಫ್ ಕಂಟ್ರಾಕ್ಟ್ ಎಗ್ರಿಮೆಂಟ್ ಫಾರಮುಗಳೂ ಮತ್ತು ಅಪ್ಲಿಕೇಶನ್ (complaint) ಫಾರಂಗಳೂ ಸಹ ಮಾರಾಟಕ್ಕೆ ತಯಾರಿವೆ. ಬೇಕಾದವರು 'ಕೊಡಗು' ಆಫೀಸಿನಿಂದ ಪಡೆಕೊಳ್ಳಬಹುದು,

ಮಡಿಕೇರಿ,
17-9-24, ಮೇನೇಜರ್.

ARMS & AMMUNITION MART.

Mahomedally-Noorbhoy.

337, Abdul Rehman, Street, near Crawford Market, BOMBAY.
Telegraphic Address:—"SHOOTER" Bombay.

[21-12] Please write for latest Catalogues.

ಸಂಪತ್ತಿಯ ಸಾಧನಗಳು.

ಆಯಾ ಬಂಧುಗಳೇ ಸಂಪತ್ತಿಯು ಅಪಾರ ಬಾಕರ ಯಲ್ಲಿರದೆ ನಿಮ್ಮ ಭೂಮಿಯಲ್ಲಿಯೇ ಅಡಗಿರುವದು ಅದನ್ನು ಶೋಧಿಸಿ ತೆಗೆಯಲು ಕಿರ್ಲೋಸ್ಕರ ವ್ಯವಸಾಯ ಮುಟ್ಟುಗಳೇ ಯೋಗ್ಯವಾದ ಸಾಧನಗಳು

ಲಕ್ಷಾವಧಿ ರೈತರು ಹೂಡಿ ಅನುಭವ ತಿಳಿದುಕೊಂಡಿರುವರು, [illegible] ಕರತಳದ ನೇಗಿಲುಗಳೂ ಗಾಣಗಳೂ ದೊರೆಯುತ್ತವೆ. ಕಿಸಾನ ಗಾಣವು ಒಂದು ಗಂಟೆಗೆ ೨೦೦ ಪೌಂಡು ಕಬ್ಬನ್ನು ಒಂದಿ ಹಾಕುತ್ತದೆ.

"ಕೊ" ಎಂಬ ಕ್ಯಾಟಲಾಗನ್ನು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್,
16 6 **ಕಿರ್ಲೋಸ್ಕರವಾಡಿ, ಜಿಲ್ಲಾ, ಸಾತಾರಾ.**

ನೋಟೀಸ್.

"ಕೊಡಗು" ಪತ್ರಿಕೆಯ ಹಳೆ ಬಾಬಾಹಣ ಕೊಡಲಿಕ್ಕಿರುವವರೂ, ಹೊಸ ಚಂದಾದಾರರಾಗ ಬೇಕೆಂದಿರುವವರೂ, ಮತ್ತು ಶೇರುಹಣ ಸಲ್ಲಿಸಲಿಕ್ಕಿರುವವರೂ ದಯವಿಟ್ಟು ವೀರಾಜಪೇಟೆಯಲ್ಲಿರುವ ನಮ್ಮ ಕಂಪೆನಿಯ ಏಜಂಟರವರ ಆಫೀಸಿನಲ್ಲಿ ಪಾವತಿಮಾಡಬೇಕಾಗಿ ಕೋರಿಕೆ.

ಮಡಿಕೇರಿ, ಮೇನೇಜರ್,
15.9.24. 'ಕೊಡಗು' ಲಿಮಿಟೆಡ್.

ಹಳೆ ವಿದ್ಯಾರ್ಥಿಯರ ತ್ರೈಮಾಸಿಕ.

ಸಂಪುಟ 2] ವರ್ಷದಚಂದಾ ಬರೇ ರೂ 1-4-0 [ಸಂಚಿಕ 1
ಸಂಪಾದಕ—ಪಿ. ಬಿ ಮೇದಪ್ಪ, ಬಿ ಎ, [illegible]

ಈ ಸಂಚಿಕೆಯಲ್ಲಿ ಮನೋಹರವಾದ
ಕೊಡಗಿನ ಪವಿತ್ರ ಸ್ಥಳವಾದ ಶ್ರೀ ಮೂಲ
ಕಾವೇರಿಯ ಚಿತ್ರಗಳಿವೆ.

1. ಶ್ರೀ ಕಾವೇರಿಯ ಜನ್ಮ ಅವತಾರ
2. ಸರಕಾರಕ್ಕೆ ಸಾಲವೆಂದರೇನು ?
3. ಪೋಲಿಟಿಕ್ಸ್ ಅಂದರೇನು ?
4. ವಿಜಾಪುರ.

ಇವೇ ಮುಂತಾದ ಬಹು ಸ್ವಾದಿಷ್ಟದ ವಿಷಯಗಳಿವೆ.

ಮೇನೇಜರ್,
ಬಿ. ಎಸ್. ಎಸೋಸಿಯೇಷನ್,
ಮಡಿಕೇರಿ.

Printed & published by Kodanda Appayya, R.B., Chairman, Board of Directors, at "Kodagu" Press, Mercara for "Kodagu" Ltd.

Reg. No. M. 1550.
If not delivered please return to "KODAGU" OFFICE, MERCARA.

ಕೊಡಗು.

ವರ್ಷಕ್ಕೆ ಚಂದಾ ರೂ. ೩-೦-೦

ಐಕ್ಯೇನ ಭೂತದಯಯಾ ವಿದ್ಯಾ ನೀತಿ ಪ್ರಯತ್ನತಾ || ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ ||

ಎಡಿಟರ್ ಪಂಧ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೯] ಕೊಡಗು, ಸ ೧೯೨೪ನೇ ಇಸವಿ ಡಿಸೆಂಬರ್ ತಾರೀಕು ೧೨ನೆಯ ಶುಕ್ರವಾರ [ಸಂಚಿಕೆ ೩೬

ಆರೋಗ್ಯ ಚಂದ್ರಿಕೆ.

ಮದ್ರಾಸ್.

ಸಂಪಾದಕರು: ಡಾಕ್ಟರ್ ಯು. ರಾಮರಾವ್, ಯಮ್. ಎಲ್. ಸಿ. ಯವರು.

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಶುಚಿತ್ವದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವ ದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ. ಈ ಮಾಸಪತ್ರಿಕೆಯು 'ಹೆಲ್ತ್' ಎಂಬ ಇಂಗ್ಲಿಷ್ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ. ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಗೆ ಪ್ರಕಟವಾಗುವುದು.

ಆರೋಗ್ಯ ಚಂದ್ರಿಕೆಯಲ್ಲಿರುವ ಲೇಖನಗಳು ಹಳೆಯದಾಗದೆ ಪುನಃ ಪುನಃ ಓದಲು ಅರ್ಹವಾದವುಗಳಾಗಿರುವುವು. ಆರೋಗ್ಯ ಚಂದ್ರಿಕೆಯನ್ನು ತರಿಸಿ ಬೈಂಡ್ ಮಾಡಿಸಿ ಇಟ್ಟುಕೊಂಡರೆ ಎಲ್ಲರಿಗೂ ಉಪಯುಕ್ತವಾಗುವ ಅಮೂಲ್ಯವಾದ ಗ್ರಂಥವಾಗುವುದು. ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಗೊಬಲಗು ವರ್ಷಕ್ಕೆ 1-8-0. ಬಿಡಿ ಪತ್ರಿಕೆ 1ಕ್ಕೆ 0-2-0. ಹಿಂದಿನ ಸಂಚಿಕೆಗಳು ಕೂಡಾ ದೊರೆಯುವವು.

ಪತ್ರವ್ಯವಹಾರಕ್ಕೆ: 'ಆರೋಗ್ಯ ಚಂದ್ರಿಕೆ' 323, ತಂಬುಚೆಟ್ಟಿ ಬೀದಿ, ಮದ್ರಾಸ್.

"ಕೊಡಗು"

ರಾಜಕೀಯ, ವಿದ್ಯಾ, ಕೃಷಿ, ವೃತ್ತಿ ವಿಜ್ಞಾನ, ಮತ್ತು ನೀತಿ ಮುಂತಾದ ವಿಷಯಗಳಿಂದೊಡಗೂಡಿದ ಕೊಡಗಿನ ವಾರ ಪತ್ರಿಕೆ.

1. ಪ್ರಕಟಣೆಗಳನ್ನು ಮೇನೇಜರ್ "ಕೊಡಗು" ಮಡಿಕೇರಿ, ಈ ವಿಳಾಸಕ್ಕೆ ಕಳುಹಿಸಬೇಕು. 2. ಲೇಖನಗಳನ್ನು ಸಂಪಾದಕರು "ಕೊಡಗು" ಮಡಿಕೇರಿ, ಈ ವಿಳಾಸಕ್ಕೆ ಕಳುಹಿಸಬೇಕು. 3. ಬಾತ್ಮಿದಾರರ ಅಭಿಪ್ರಾಯಕ್ಕೆ ಕೊಡಗು ಪತ್ರಿಕಾಕರ್ತರು ಜವಾಬ್ದಾರರಲ್ಲ. 4. ನಮ್ಮಲ್ಲಿಗೆ ಕಳುಹಿಸುವ ಬಾತ್ಮಿಗಳು ಕಾಗದದ ಒಂದೇ ಕಡೆಯೂ, ಸ್ಪಷ್ಟವಾಗಿಯೂ, ಹೆಸರು ವಿಳಾಸಗಳಿಂದ ಕೂಡಿಯೂ, ಬರೆಯಲ್ಪಟ್ಟಿರಬೇಕು. ಸ್ಥಳವು ದೊರೆತಂತೆಲ್ಲಾ ಈ ಪತ್ರಗಳು ಪ್ರಕಟಿಸಲ್ಪಡುವವು. 5. ಪ್ರಕಟಿಸಲಾಗದ ಬಾತ್ಮಿಗಳನ್ನು ಮರಳಿ ಕಳುಹಿಸುವ ಜವಾಬ್ದಾರಿಕೆಯನ್ನು ಸಂಪಾದಕರು ವಹಿಸಿಕೊಳ್ಳುವದಿಲ್ಲ.

ಪ್ರಕಟಣೆಗಳು.

ಅತ್ಯಂತ ಸುಲಭವಾಗಿ ಹಾಕಲ್ಪಡುತ್ತವೆ. ಹೆಚ್ಚು ಸಂಗತಿಗೆ ಮೇನೇಜರಿಗೆ ಬರೆದು ತಿಳಿದುಕೊಳ್ಳಬಹುದು.

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ.

ಕಲ್ಪತರು ತಾಯಿತ.

ಪರೀಕ್ಷೆ ಪಾಸಾಗೋಣ, ಶರೀರ ಸುಖವಾಗೋಣ, ಸ್ತ್ರೀ ಸಂಗ ಸಿಗೋಣ, ಸಂಬಳ ಹೆಚ್ಚೋಣ, ವಿವಾಹವಾಗೋಣ, ಸಂತತಿಯಾಗೋಣ, ಕೈಕೊಂಡ ಉದ್ಯೋಗದಲ್ಲಿ ಯಶಸ್ಸು ಸಿಗೋಣ, ವ್ಯಾಪಾರದಲ್ಲಿ ಬಹಳ ಲಾಭ ಸಿಗೋಣ, ಸಾಲ ಮುಕ್ತ ಆಗೋಣ, ಭೂತ ಪಿಶಾಚ ಗ್ರಹಬಾಧೆ ಆಗದಿರೋಣ, ಪ್ರತಿಕೂಲ ಜನರು ಅನುಕೂಲವಾಗೋಣ, ಇವೇ ಮತ್ತು ಬೇರೆ ಎಷ್ಟೋ ಮಾತುಗಳು ಇಚ್ಛೆಯಂತೆಯೇ ಆಗುವ ಅಪೇಕ್ಷೆ ಇದ್ದರೆ ಇಚ್ಛಿತಫಲ ಕೊಡುವ ಲೋಕಮಾನ್ಯ ಕಲ್ಪತರು ತಾಯಿತ ಯಾವಾಗಲೂ ಹತ್ತಿರ ಇಡಿರಿ, ಅಂದರೆ ಇಚ್ಛೆ ಪೂರ್ಣವಾಗುವದು. ಅನುಭವದ ಹೊರತು ಖಾತ್ರಿ ಆಗಲಾರದು. ತಾ. ನ. ೧ಕೆ. ರೂ. ೧೨ ಗುಣ ತೀವ್ರವಾಗಿ, ತಾ. ನ. ೩ಕೆ. ರೂ. ೩ ತಿ. ರೂ. ೬ ಗುಣ ೧೫ ದಿವಸಗಳಲ್ಲಿ, ತಾ. ನ. ೩ಕೆ. ರೂ. ೩ ಗುಣ ೧ ತಿಂಗಳಲ್ಲಿ. ವ್ಹಿ. ಪಿ. ಖರ್ಚು ಬೇರೆ. ಗುಣಬಾರದಲ್ಲಿ ತಾಯಿತದ ಖರ್ಚು ವಜಾಹೋಗಿ ಬಾಕೀ ಸಿಗುವದು.

ವಿಳಾಸ:—ಮ್ಯಾನೇಜರ, ಕಲ್ಪತರು ತಾಯಿತ, ಕೆ. ಎಮ್. [52-19] ಪೋ. ಸಂಕೇಶ್ವರ ಜಿ. ಬೆಳಗಾವಿ.

Health is Wealth.

WANTED all to improve health strength and vitality and thus save our nation from physical degeneracy. Send half-anna stamp and get 23 specimen photographs with full particulars from

Director, Physical Culture,
P. O. BASAVANAGUDI
Bangalore City

THE SHOPPING CENTRE OF COORG,

Spencer & Co. Ltd.,

MERCARA & POLLIBETTA.

An Announcement.

Our prices of wines, spirits, stores, etc., are down.

Send for our Xmas list and be convinced

Trial order Solicited.

7

ಕೃಷಿತೋ ನಾಸ್ತಿ ದುರ್ಭಿಕ್ಷಃ

NITRATE OF SODA (15—16 per cent.) Nitrogen,

"The best and cheapest form of Nitrogen highly concentrated and immediately available Nothing like it to make plants grow."

ವ್ಯವಸಾಯದಲ್ಲಿ ಗೊಬ್ಬರದಿಂದಾಗುವ ಹೆಚ್ಚಿನ ಉದ್ದೇಶವು ಬೆಳೆಗಳಿಗೆ ಸಾರಜನಕ (Nitrogen) ಒದಗಿಸಿಕೊಡುವದಾಗಿರುತ್ತದೆ "ನೈಟ್ರೇಟ್ ಆಫ್ ಸೋಡಾ" ಎಂಬ ರಸಾಯನಿಕ ಗೊಬ್ಬರವು (15—16%) ಆದರೆ ಮೀನುಗೊಬ್ಬರದಲ್ಲಿಯಕ್ಕಿಂತ ಮೂರುಪಾಲು ಜಾಸ್ತಿ ಸಾರಜನಕ ಭರಿತವಾಗಿದ್ದು ಬೆಳೆಗಳಿಗೆ ಥಟ್ಟನೆ ಒದಗುವರೀತಿಯಲ್ಲಿರುತ್ತದೆ. ಇದರ ಉಪಯೋಗದಿಂದ ಫಸಲು ಬಹಳ ಸಮೃದ್ಧಿಯಾಗುವುದು. ಹಿಡಿತುಂಬ ರಸಾಯನಿಕ ಗೊಬ್ಬರವು ಮುಡಿ (ಕುಕ್ಕೆ) ತುಂಬ ಹಟ್ಟಿಗೊಬ್ಬರಕ್ಕೆ ಸಮವಾಗುತ್ತದೆ. ಈ ರಸಾಯನಿಕ ಗೊಬ್ಬರವು ಅಮೇರಿಕ ದೇಶದ "ಚಿಲ್ಲಿ" ಎಂಬಲ್ಲಿ ತಯಾರಿಸಿ ಬಹಳ ದೂರದೇಶದಿಂದ ಬರಬೇಕಾದರೂ ಸಹ ಅದು ಹಳ್ಳಿ ಮೊದಲಾದ ತೋಟಗಳನ್ನೆ ವಗೈರೆ ಕೃಷಿಗಳಿಗೆ ಉಪಯೋಗಿಸಲು ಬಹಳ ಸುಲಭವಾಗಿಯೂ ಹಟ್ಟಿ ಗೊಬ್ಬರಕ್ಕಿಂತಲೂ ಬಹಳ ಹೆಚ್ಚಿನ ಲಾಭವನ್ನು ಕೊಡುವದಾಗಿಯೂ ಇರುತ್ತದೆ. ಒಂದು ಎಕ್ರೆ ಭೂಮಿಗೆ 120—180 ರಾತಲು ಬೇಕಾಗುವದು. ಇದರ ವಿಷಯ ಹೆಚ್ಚಿನ ಮಾಹಿತಿಯನ್ನು ಮತ್ತು ತಿಳುವಳಿಕೆಯನ್ನು ಧರ್ಮಾರ್ಥವಾಗಿ ನಮ್ಮಿಂದ ಪಡೆಯಬಹುದು.

ದಿ. ಚಿಲಿಯನ್ನ ನೈಟ್ರೇಟ್
24—13 ಕಮಿಟಿಯವರ ಕಡೆ

ಕೊಡಗಿನಲ್ಲು—
B. P. Ayapa, Hon. Representative
Pollibetta, Coorg.

The Chilean Nitrate Committee, 6 Mission Row, Post Box 469, CALCUTTA

ಮಲೆಯೂಳ ವೈದ್ಯಶಾಲಾ.

ಮಲಬಾರಿನ ಸಾಮೋರಿನ್ ಮತ್ತು ಕೊಚ್ಚಿನ ಎಂಬ ಆಯುರ್ವೇದ ವೈದ್ಯ ಶಾಲೆಯು ಒಂದು ಶಾಖೆಯು ವೀರರಾಜೇಂದ್ರಪೇಟೆಯಲ್ಲಿ ತೆರೆದಿರುತ್ತದೆ. ಇಲ್ಲಿ ಯಾವ ವಿಧದ ಕಾಯಿಲೆಯಾಗಿದ್ದರೂ ಪಂಡಿತರಿಂದ ಪರೀಕ್ಷಿಸಿ ಔಷಧಿಕೊಟ್ಟು ಗುಣಪಡಿಸಲ್ಪಡುತ್ತೆ. ಔಷಧದ ಚಾರ್ಜು ಬಹಳ ಕಡಮೆ. ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ವಿವರವನ್ನು ತಿಳಿದುಕೊಳ್ಳಬಹುದು.

ನಾರಾಯಣ ನಂಬೀಶನ್,
ಆಯುರ್ವೇದ ವೈದ್ಯರು,
52—46 ವೀರರಾಜೇಂದ್ರಪೇಟೆ.

ಕಾಂಗ್ರೆಸ್ ಕಾಲದಲ್ಲಿ

ಕರ್ನಾಟಕ ವೃತ್ತವು

ಪ್ರತಿನಿತ್ಯ ಹೊರಡುವ ವಿಚಾರವು.

1. ಬೆಳಗಾಂವಿಯಲ್ಲಿ ಕೂಡತಕ್ಕ ರಾಷ್ಟ್ರೀಯ ಮಹಾಸಭೆಯ ವಿಷಯಗಳೆಲ್ಲಾ ಕರ್ನಾಟಕದ ಜನಾಂಗಕ್ಕೆ ಆದಷ್ಟು ಬೇಗ ತಿಳಿಯುವಂತೆ ಮಾಡುವದಕ್ಕೆ ಹಾಗೂ ಮಹಾಸಭೆಯ ಕಾಲಕ್ಕೆ ಬೆಳಗಾಂವಿಯಲ್ಲಿಯೇ ಕೂಡತಕ್ಕ ಲಕ್ಷೋಪಲಕ್ಷ ಕನ್ನಡಿಗರಿಗೆ ಮಹಾ ಸಭೆಯಲ್ಲಿ ನಡೆಯುವ ಕೆಲಸಗಳ ವಿವರಣೆಯನ್ನು ತಮ್ಮ ಭಾಷೆಯಿಂದ ಓದಿಕೊಂಡು ತಿಳಿದುಕೊಳ್ಳುವ ಅನುಕೂಲಮಾಡುವದಕ್ಕೆ ಡಿಸೆಂಬರ್ 23ನೇ ತಾರೀಖಿನಿಂದ 10 ದಿವಸಗಳ ವರೆಗೆ—

ಕರ್ನಾಟಕ ವೃತ್ತವು

ಪ್ರತಿನಿತ್ಯ ಹೊರಡುವದು.

ಕನ್ನಡ ಜನಾಂಗದ ಸೇವೆಗಾಗಿಯೇ ಕೈಕೊಂಡಿರುವ ಈ ಮಹತ್ಕಾರ್ಯಕ್ಕೆ ಎಲ್ಲ ಕರ್ನಾಟಕಸ್ಥರು ಸಹಾಯಮಾಡಬೇಕೆಂದು ವಿನಂತಿಸುವೆ.

1. ಹತ್ತು ದಿವಸಗಳವರೆಗೆ ಚಂದಾದಾರರಾಗ ಬಯಸುವವರು 10 ಆಣೆಗಳ ಟಪಾಲು ಟಿಕೀಟು ಕಳುಹಿಸಬೇಕು. ವ್ಹಿ. ಪಿ. ಮಾಡುವದಿಲ್ಲ.

2. ಕರ್ನಾಟಕವೃತ್ತದ ಚಂದಾದಾರರು ಎಂಟೇ ಆಣೆಗಳ ಟಿಕೀಟು ಕಳುಹಿಸಬೇಕು. ಈ ಹಣ ಬಂದಕೂಡಲೆ ದಿನ ಪತ್ರವು ಕಳುಹಿಸಲ್ಪಡುವದು.

3. ಕರ್ನಾಟಕ ವೃತ್ತಕ್ಕೆ ಹೊಸದಾಗಿ ಚಂದಾದಾರರಾಗುವವರು ನಾಲ್ಕೇ ರೂಪಾಯಿ ಮನಿಯಾರ್ಡರ್ ಮಾಡಿ ವರ್ಷದ ಪತ್ರವನ್ನೂ ಕಾಂಗ್ರೆಸ ದೈನಿಕವನ್ನೂ ಪಡೆಯಬಹುದು.

4. ಕರ್ನಾಟಕದಲ್ಲಿ ರಾಷ್ಟ್ರೀಯ ಮಹಾಸಭೆಯು ಕೂಡತಕ್ಕ ಈ ಸಮಯದಲ್ಲಿ ಕನ್ನಡ ಜನಾಂಗದ ಸೇವೆ ಮಾಡುವ ಈ ಅದ್ಭುತ ಸಾಹಸಕ್ಕೆ ನಾನು ಕೈ ಹಾಕಿದ್ದೇನೆ. ಈ ಕಾರ್ಯಕ್ಕೆ 5 ರೂಪಾಯಿ ಅಥವ ಹೆಚ್ಚಿಗೆ ಹಣವನ್ನು ತಮ್ಮ ಶಕ್ತಿಗೆ ಅನುಸಾರವಾಗಿ ಕೊಟ್ಟು ಕರ್ನಾಟಕ ಜನತೆಯ ಸೇವಾಕಾರ್ಯದಲ್ಲಿ ಸಹಾಯಮಾಡತಕ್ಕ ಮಹನೀಯರು ಕರ್ನಾಟಕ ವೃತ್ತದ ಪೋಷಕರೂ ಆಶ್ರಯದಾತರೂ ಎಂದು ಎನಿಸಲ್ಪಡುವರು. ಇಂಥವರಿಗೆ ಕೆಲವುಕಾಲದ ವರೆಗೆ ವೃತ್ತವು ಪುಕ್ಕಟೆಯಾಗಿ ಕಳುಹಿಸಲ್ಪಡುವದು. ಹಣ ಮನಿಯಾರ್ಡರ್ ಮಾಡಬೇಕು.

ವ್ಹಿ. ಪಿ. ಮಾಡುವದಿಲ್ಲ.

ಜಾಹಿರಾತು ಕೊಡುವವರೂ ಏಜಂಟರಾಗ ಬಯಸುವವರೂ ಇತ್ತಕಡೆಗೆ ಲಕ್ಷ್ಯ ಕೊಡಬೇಕು.

ಕನ್ನಡಿಗರ ದಾಸಾನುದಾಸ,
ಮುದವೀಡಕರ ಕೃಷ್ಣರಾಯ,
"ಕರ್ನಾಟಕ ವೃತ್ತ"ದ ಸಂಪಾದಕ, ಧಾರವಾಡ

Reg. No. M. 1550.

If not delivered please return to "KODAGU" OFFICE, MERCARA.

ಕೊಡಗು.

ವರ್ಷಕ್ಕೆ ಅಂಚೆ ಸಹ ರೂ. ೩—೦—೦

ಸತ್ಯೇನ ಭೂಷಣಮಯು ವಿದ್ಯಾ ನೀತಿ ಪ್ರಯತ್ನತಾಃ || ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ ||

ಎಡಿಟರ್ ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೯] ಕೊಡಗು, ಸ೯ ೧೯೨೪ನೇ ಇಸವಿ ಡಿಶಂಬರ್ ತಾರೀಕು ೧೨ನೆಯ ಶುಕ್ರವಾರ [ಸಂಚಿಕೆ ೩೩

ಆರೋಗ್ಯ ಚಂದ್ರಿಕೆ.

ಮದ್ರಾಸ್.

ಸಂಪಾದಕರು: ಡಾಕ್ಟರ್ ಯು. ರಾಮರಾವ್,
ಯಮ್. ಎಲ್. ಸಿ. ಯವರು.

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಶುಚಿತ್ವದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ. ಈ ಮಾಸಪತ್ರಿಕೆಯು 'ಹೆಲ್ತ್' ಎಂಬ ಇಂಗ್ಲಿಷ್ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ. ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಯೆ ಪ್ರಕಟವಾಗುವುದು.

ಆರೋಗ್ಯ ಚಂದ್ರಿಕೆಯಲ್ಲಿರುವ ಲೇಖನಗಳು ಹಳೆಯದಾಗದೆ ಪುನಃ ಪುನಃ ಓದಲು ಅರ್ಹವಾದವುಗಳಾಗಿರುವುವು. ಆರೋಗ್ಯ ಚಂದ್ರಿಕೆಯನ್ನು ಕೊಂಡು ಬೈಂಡ್ ಮಾಡಿಸಿ ಇಟ್ಟುಕೊಂಡರೆ ಎಲ್ಲರಿಗೂ ಉಪಯುಕ್ತವಾಗುವ ಅಮೂಲ್ಯವಾದ ಗ್ರಂಥವಾಗುವುದು. ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ನೊಬಲಗು ವರ್ಷಕ್ಕೆ 1-8-0. ಬಿಡಿ ಪತ್ರಿಕೆ 1ಕ್ಕೆ 0-2-0. ಹಿಂದಿನ ಸಂಚಿಕೆಗಳು ಕೂಡಾ ದೊರೆಯುವವು.

ಪತ್ರವ್ಯವಹಾರಕ: 'ಆರೋಗ್ಯ ಚಂದ್ರಿಕೆ' 323,
ತಂಬುಚೆಟ್ಟಿ ಬೀದಿ, ಮದ್ರಾಸ್.

"ಕೊಡಗು"

ರಾಜಕೀಯ, ವಿದ್ಯಾ, ಕೃಷಿ, ವೃತ್ತಿ ವಿಜ್ಞಾನ, ಮತ್ತು ನೀತಿ ಮುಂತಾದ ವಿಷಯಗಳಿಂದೊಡಗೂಡಿದ ಕೊಡಗಿನ ವಾರ ಪತ್ರಿಕೆ.

1. ಪ್ರಕಟಣೆಗಳನ್ನು ಮೇನೇಜರ್ "ಕೊಡಗು" ಮಡಿಕೇರಿ, ಈ ವಿಳಾಸಕ್ಕೆ ಕಳುಹಿಸಬೇಕು. 2. ಲೇಖನಗಳನ್ನು ಸಂಪಾದಕರು "ಕೊಡಗು" ಮಡಿಕೇರಿ, ಈ ವಿಳಾಸಕ್ಕೆ ಕಳುಹಿಸಬೇಕು. 3. ವಾತ್ಮೀದಾರರ ಅಭಿಪ್ರಾಯಕ್ಕೆ ಕೊಡಗು ಪತ್ರಿಕಾಕರ್ತರು ಜವಾಬ್ದಾರರಲ್ಲ. 4. ನಮ್ಮಲ್ಲಿಗೆ ಕಳುಹಿಸುವ ವಾತ್ಮಿಗಳು ಕಾಗದದ ಒಂದೇ ಕಡೆಯೂ, ಸ್ಪಷ್ಟವಾಗಿಯೂ, ಹೆಸರು ವಿಳಾಸಗಳಿಂದ ಕೂಡಿಯೂ, ಬರೆಯಲ್ಪಟ್ಟಿರಬೇಕು. ಸ್ಥಳವು ದೊರೆತಂತೆಲ್ಲಾ ಈ ಪತ್ರಗಳು ಪ್ರಕಟಿಸಲ್ಪಡುವವು. 5. ಪ್ರಕಟಿಸಲಾಗದ ವಾತ್ಮಿಗಳನ್ನು ಮರಳಿ ಕಳುಹಿಸುವ ಜವಾಬ್ದಾರಿಕೆಯನ್ನು ಸಂಪಾದಕರು ವಹಿಸಿಕೊಳ್ಳುವದಿಲ್ಲ.

ಪ್ರಕಟಣೆಗಳು.

ಅತ್ಯಂತ ಸುಲಭವಾಗಿ ಹಾಕಲ್ಪಡುತ್ತವೆ. ಹೆಚ್ಚು ಸಂಗತಿಗೆ ಮೇನೇಜರಿಗೆ ಬರೆದು ತಿಳಿದುಕೊಳ್ಳಬಹುದು.

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ.

ಕಲ್ಪತರು ತಾಯಿತ.

ಪರೀಕ್ಷೆ ಪಾಸಾಗೋಣ, ಶರೀರ ಸುಖವಾಗೋಣ, ಸ್ತ್ರೀ ಸಂತತಿ ಸಿಗೋಣ, ಸಂಬಳ ಹೆಚ್ಚೋಣ, ವಿವಾಹವಾಗೋಣ ಸಂತತಿಯಾಗೋಣ, ಕೈಕೊಂಡ ಉದ್ಯೋಗದಲ್ಲಿ ಯಶಸ್ಸು ಸಿಗೋಣ, ವ್ಯಾಪಾರದಲ್ಲಿ ಬಹಳ ಲಾಭ ಸಿಗೋಣ, ಸಾಲ ಮುಕ್ತ ಆಗೋಣ, ಭೂತ ಪಿಶಾಚ ಗ್ರಹಬಾಧೆ ಆಗದಿರೋಣ, ಪ್ರತಿಕೂಲ ಜನರು ಅನುಕೂಲವಾಗೋಣ, ಇವೇ ಮತ್ತು ಬೇರೆ ಎಷ್ಟೋ ಮನೋರಥಗಳು ಇಚ್ಛೆಯಂತೆಯೇ ಆಗುವ ಅಪೇಕ್ಷೆ ಇದ್ದರೆ ಇಚ್ಛಿತಫಲ ಕೊಡುವ ಲೋಕಮಾನ್ಯ ಕಲ್ಪತರು ತಾಯಿತ ಯಾವಾಗಲೂ ಹತ್ತಿರ ಇಡಿರಿ, ಅಂದರೆ ಇಚ್ಛೆ ಪೂರ್ಣವಾಗುವದು. ಅನುಭವದ ಹೊರತು ಖಾತ್ರಿ ಆಗಲಾರದು. ತಾ. ನ. ೧ಕೆ. ರೂ. ೧೨ ಗುಣ ತೀವ್ರವಾಗಿ, ತಾ. ನ. ೩ಕೆ. ರೂ. ೩ ತಿ. ರೂ. ೬ ಗುಣ ೧೫ ದಿವಸಗಳಲ್ಲಿ, ತಾ. ನ. ೩ಕೆ. ರೂ. ೩ ಗುಣ ೧ ತಿಂಗಳಲ್ಲಿ. ವ್ಹಿ. ಪಿ. ಖರ್ಚು ಬೇರೆ. ಗುಣಬಾರದಲ್ಲಿ ತಾಯಿತದ ಖರ್ಚು ವಜಾ ಹೋಗಿ ಬಾಕೀ ಸಿಗುವದು.

ವಿಳಾಸ:—ಮ್ಯಾನೇಜರ, ಕಲ್ಪತರು ತಾಯಿತ, ಕೆ. ಎಮ್.

[52-19] ಪೋ. ಸಂಕೇಶ್ವರ ಜಿ. ಬೆಳಗಾವಿ.

Health is Wealth.

WANTED all to improve health strength and vitality and thus save our nation from physical degeneracy. Send half-anna stamp and get 23 specimen photographs with full particulars from

Director, Physical Culture,
P. O. BASAVANAGUDI
Bangalore City

THE SHOPPING CENTRE OF COORG,

Spencer & Co. Ltd.,

MERCARA & POLLIBETTA.

An Announcement.

Our prices of wines, spirits, stores, etc., are down.

Send for our Xmas list and be convinced

Trial order Solicited.

7

ಕೃಷಿತೋ ನಾಸ್ತಿ ದುರ್ಭಿಕ್ಷಃ

NITRATE OF SODA (15—16 per cent.) Nitrogen,

"The best and cheapest form of Nitrogen highly concentrated and immediately available Nothing like it to make plants grow."

ವ್ಯವಸಾಯದಲ್ಲಿ ಗೊಬ್ಬರವಿಡುವವರ ಹೆಚ್ಚಿನ ಉದ್ದೇಶವು ಬೆಳೆಗಳಿಗೆ ಸಾರಜನಕ (Nitrogen) ಒದಗಿಸಿಕೊಡುವದಾಗಿರುತ್ತದೆ. "ನೈಟ್ರೇಟ್ ಆಫ್ ಸೋಡಾ" ಎಂಬ ರಸಾಯನಿಕ ಗೊಬ್ಬರವು (15—16%) ಅಂದರೆ ಮಿಕ್ಕ ಗೊಬ್ಬರದಲ್ಲಿಯಕ್ಕಿಂತ ಮೂರುಪಾಲು ಜಾಸ್ತಿ ಸಾರಜನಕ ಭರಿತವಾಗಿದ್ದು ಬೆಳೆಗಳಿಗೆ ಥಕ್ಕನೆ ದಕ್ಕುವರೀತಿಯಲ್ಲಿರುತ್ತದೆ. ಇದರ ಉಪಯೋಗದಿಂದ ಫಸಲು ಬಹಳ ಸಮೃದ್ಧಿಯಾಗುವುದು. ಹಿಡಿತುಂಬ ರಸಾಯನಿಕ ಗೊಬ್ಬರವು ಮಂಡಿ (ಬುಕ್ಕೆ) ತುಂಬ ಹಟ್ಟಿಗೊಬ್ಬರಕ್ಕೆ ಸಮವಾಗುತ್ತದೆ. ಈ ರಸಾಯನಿಕ ಗೊಬ್ಬರವು ಅಮೇರಿಕ ದೇಶದ "ಚಿಲ್ಲಿ" ಎಂಬಲ್ಲಿ ತಯಾರಿಸಿ ಬಹಳ ದೂರದೇಶದಿಂದ ಬರಬೇಕಾದರೂ ಸಹ ಅದು ಹೊಲ, ತೋಟಗದ್ದೆ ವಗೈರೆ ಕೃಷಿಗಳಿಗೆ ಉಪಯೋಗಿಸಲು ಬಹಳ ಸುಲಭವಾಗಿಯೂ ಹಟ್ಟಿ ಗೊಬ್ಬರಕ್ಕಿಂತಲೂ ಬಹಳ ಹೆಚ್ಚಿನ ಲಾಭವನ್ನು ಕೊಡುವದಾಗಿಯೂ ಇರುತ್ತದೆ. ಒಂದು ಎಕ್ರೆ ಭೂಮಿಗೆ 120—180 ರಾತಲು ಬೇಕಾಗುವದು. ಇದರ ವಿಷಯ ಹೆಚ್ಚಿನ ಮಾಹಿತಿಯನ್ನು ಮತ್ತು ತಿಳುವಳಿಕೆಯನ್ನು ಧರ್ಮಾರ್ಥವಾಗಿ ನಮ್ಮಿಂದ ಪಡೆಯಬಹುದು.

ದಿ. ಚಿಲಿಯನ್ ನೈಟ್ರೇಟ್

24—13 ಕಮಿಟಿಯವರ ಕಡೆ

ಕೊಡಗಿನಲ್ಲಿ—
B. P. Ayapa, Hon. Representative
Pollibetta, Coorg.

The Chilean Nitrate Committee, 6 Mission Row, Post Box 469,
CALCUTTA

ಮಲೆಯೂಳ ವೈದ್ಯಶಾಲಾ.

ಮಲಬಾರಿನ ಸರ್ಜೇಪನ್ ಮತ್ತು ಕಂಪನಿ ಎಂಬ ಆಯುರ್ವೇದ ವೈದ್ಯ ಶಾಲೆಯು ಒಂದು ಶಾಖೆಯು ವೀರರಾಜೇಂದ್ರಪೇಟೆಯಲ್ಲಿ ತೆರೆದಿರುತ್ತದೆ. ಅಲ್ಲಿ ಯಾವ ವಿಧದ ಕಾಯಿಲೆಯಾಗಿದ್ದರೂ ಪಂಡಿತರಿಂದ ಪರೀಕ್ಷಿಸಿ ಔಷಧಿಕೊಟ್ಟು ಗುಣಪಡಿಸಲ್ಪಡುತ್ತೆ. ಔಷಧದ ಚಾರ್ಜು ಬಹಳ ಕಡಮೆ. ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ವಿವರವನ್ನು ತಿಳಿದುಕೊಳ್ಳಬಹುದು.

ನಾರಾಯಣ ನಂಬೀಶನ್,
ಆಯುರ್ವೇದ ವೈದ್ಯರು,
52—46 ವೀರರಾಜೇಂದ್ರಪೇಟೆ.

ಕಾಂಗ್ರೆಸ್ ಕಾಲದಲ್ಲಿ

ಕರ್ನಾಟಕ ವೃತ್ತವು

ಪ್ರತಿನಿತ್ಯ ಹೊರಡುವ ವಿಚಾರವು.

1. ಬೆಳಗಾಂವಿಯಲ್ಲಿ ಕೂಡತಕ್ಕ ರಾಷ್ಟ್ರೀಯ ಮಹಾಸಭೆಯ ವಿಷಯಗಳೆಲ್ಲಾ ಕರ್ನಾಟಕದ ಜನಾಂಗಕ್ಕೆ ಅದನ್ನು ಬೇಗ ತಿಳಿಯುವಂತೆ ಮಾಡುವದಕ್ಕೆ ಹಾಗೂ ಮಹಾಸಭೆಯ ಕಾಲಕ್ಕೆ ಬೆಳಗಾಂವಿಯಲ್ಲಿಯೇ ಕೂಡತಕ್ಕ ಲಕ್ಷೋಪಲಕ್ಷ ಕನ್ನಡಿಗರಿಗೆ ಮಹಾ ಸಭೆಯಲ್ಲಿ ನಡೆಯುವ ಕೆಲಸಗಳ ವಿವರಣೆಯನ್ನು ತಮ್ಮ ಭಾಷೆಯಿಂದ ಓದಿಕೊಂಡು ತಿಳಿದುಕೊಳ್ಳುವ ಅನುಕೂಲಮಾಡುವದಕ್ಕೆ ಡಿಸೆಂಬರ್ 23ನೇ ತಾರೀಖಿನಿಂದ 10 ದಿವಸಗಳ ವರೆಗೆ.—

ಕರ್ನಾಟಕ ವೃತ್ತವು

ಪ್ರತಿನಿತ್ಯ ಹೊರಡುವದು.

ಕನ್ನಡ ಜನಾಂಗದ ಸೇವೆಗಾಗಿಯೇ ಕೈಕೊಂಡಿರುವ ಈ ಮಹತ್ಕಾರ್ಯಕ್ಕೆ ಎಲ್ಲ ಕರ್ನಾಟಕಸ್ಥರು ಸಹಾಯಮಾಡಬೇಕೆಂದು ವಿನಂತಿಸುವೆವು.

1. ಹತ್ತು ದಿವಸಗಳವರೆಗೆ ಚಂದಾದಾರರಾಗ ಬಯಸುವವರು 10 ಆಣೆಗಳ ಟಪಾಲು ಟಿಕೇಟು ಕಳುಹಿಸಬೇಕು. ವ್ಹಿ. ಪಿ. ಮಾಡುವದಿಲ್ಲ.

2. ಕರ್ನಾಟಕವೃತ್ತದ ಚಂದಾದಾರರು ಎಂಟೇ ಆಣೆಗಳ ಟಿಕೇಟು ಕಳುಹಿಸಬೇಕು. ಈ ಹಣ ಬಂದರೆ ದಿನ ಪತ್ರವು ಕಳುಹಿಸಲ್ಪಡುವದು.

3. ಕರ್ನಾಟಕ ವೃತ್ತಕ್ಕೆ ಹೊಸದಾಗಿ ಚಂದಾದಾರರಾಗುವವರು ನಾಲ್ಕೇ ರೂಪಾಯಿ ಮನಿಯಾರ್ಡರ್ ಮಾಡಿ ವರ್ಷದ ಪತ್ರವನ್ನೂ ಕಾಂಗ್ರೆಸ ವೈನಿಕವನ್ನೂ ಪಡೆಯಬಹುದು.

4. ಕರ್ನಾಟಕದಲ್ಲಿ ರಾಷ್ಟ್ರೀಯ ಮಹಾಸಭೆಯು ಕೂಡತಕ್ಕ ಈ ಸಮಯದಲ್ಲಿ ಕನ್ನಡ ಜನಾಂಗದ ಸೇವೆ ಮಾಡುವ ಈ ಅವ್ಯಕ್ತ ಸಾಹಸಕ್ಕೆ ನಾವು ಕೈ ಹಾಕಿದ್ದೇವೆ. ಈ ಕಾರ್ಯಕ್ಕೆ 5 ರೂಪಾಯಿ ಅಥವ ಹೆಚ್ಚಿಗೆ ಹಣವನ್ನು ತಮ್ಮ ಶಕ್ತಿಗೆ ಅನುಸಾರವಾಗಿ ಕೊಟ್ಟು ಕರ್ನಾಟಕ ಜನತೆಯ ಸೇವಾಕಾರ್ಯದಲ್ಲಿ ಸಹಾಯಮಾಡತಕ್ಕ ಮಹನೀಯರು ಕರ್ನಾಟಕ ವೃತ್ತದ ಪೋಷಕರೂ ಆಶ್ರಯದಾತರೂ ಎಂದು ಎನಿಸಲ್ಪಡುವರು. ಇಂಥವರಿಗೆ ಕೆಲವುಕಾಲದ ವರೆಗೆ ವೃತ್ತವು ಧರ್ಮಾರ್ಥವಾಗಿ ಕಳುಹಿಸಲ್ಪಡುವದು. ಹಣ ಮನಿಯಾರ್ಡರ್ ಮಾಡಬೇಕು.

ವ್ಹಿ. ಪಿ. ಮಾಡುವದಿಲ್ಲ.

ಜಾಹಿರಾತು ಕೊಡುವವರೂ ಏಜಂಟರಾಗ ಬಯಸುವವರೂ ಇತ್ತಕಡೆಗೆ ಲಕ್ಷ್ಯ ಕೊಡಬೇಕು.

ಕನ್ನಡಿಗರ ದಾಸಾನುದಾಸ,
ಮುದವೇಡಕರ ಕೃಷ್ಣರಾಯ,
"ಕರ್ನಾಟಕ ವೃತ್ತ"ದ ಸಂಪಾದಕ, ಧಾರವಾಡ

"ಕೊಡಗು"

ಸನ್ ೧೯೨೪ನೇ ಇಸವಿ ಡಿಸಂಬರ್ ತಾ. ೧೨ನೇ ಶುಕ್ರವಾರ.

ಅಳತೆಯ ಪರೆ.

ಕೊಡಗು ಲೆಜಿಸ್ಲೇಟಿವ್ ಕೌನ್ಸಿಲಿನ ಕಳೆದ ಮೀಟಿಂಗಿನಲ್ಲಿ ಕೊಡಗಿನಲ್ಲಿ ಭತ್ತ ಅಳೆಯಲಿಕ್ಕೆ ಒಂದು ತರದ ಅಳತೆಯನ್ನು ಸರಕಾರದವರು ಏರ್ಪಡಿಸಿ ಸೀಲ್ ಹಾಕಿ ಕೊಡಬೇಕೆಂಬ ಠರಾವು ಒಂದು ಚರ್ಚಿಸಲ್ಪಟ್ಟು ಪಾಸಾಯಿತೆಂಬುದು ಕಳೆದ ಸಂಚಿಕೆಯಲ್ಲಿ ಪ್ರಕಟವಾದ ಕೌನ್ಸಿಲ್ ಪ್ರೊಸೀಡಿಂಗ್ಸಿನಿಂದ ತಿಳಿಯಬರುತ್ತದೆ. ಈ ವಿಷಯ ನಡೆದ ಚರ್ಚೆಯನ್ನು ಚೆನ್ನಾಗಿ ಓದಿನೋಡಿದರೆ ಫಿನೇನ್ಸ್ ಮೆಂಬರರು. ಈ ಠರಾವಿನ ಮುಖ್ಯ ಅಭಿಪ್ರಾಯವನ್ನು ತಿಳಕೊಂಡಂತೆಯೂ, ಅದನ್ನು ಚರ್ಚೆಯಲ್ಲಿ ಭಾಗಿಗಳಾದ ಮೆಂಬರುಗಳ್ಯಾರೂ ವಿವರವಾಗಿ ತಿಳಿಸಿದಂತೆಯೂ ಕಂಡು ಬರುವುದಿಲ್ಲ. ಏಕ ರೀತಿಯ ಅಳತೆಯನ್ನು ಏರ್ಪಡಿಸುವ ವಿಧಾನವನ್ನು ತೋರಿಸಿಕೊಡುವುದು ಕೌನ್ಸಿಲಿನವರಿಗೆ ಕಠಿಣ ಎಂದು ಫಿನೇನ್ಸ್ ಮೆಂಬರರು ತಮ್ಮ ಭಾಷಣದಲ್ಲಿ ಒತ್ತಿ ಹೇಳಿದ್ದಾರೆ. ಅವರಿಗೆ ಠರಾವೇನೋ ಪಾಸಾಯಿತು. ಆದರೆ ಏಕ ರೀತಿಯ ಅಳತೆಯನ್ನು ಹ್ಯಾಗೆ ನಿರ್ಣಯಿಸಬೇಕೆಂಬದನ್ನು ಕೌನ್ಸಿಲಿನವರು ತೀರ್ಮಾನಿಸಿದಂತೆ ಕಾಣುವುದಿಲ್ಲ. ಆದುದರಿಂದ ಈ ವಿಷಯದಲ್ಲಿ ನಮ್ಮ ಅಭಿಪ್ರಾಯವನ್ನು ಸೂಚಿಸುವುದು ಅಗತ್ಯವೆಂದು ತೋರುತ್ತದೆ.

ದೇಶದ ಮುಖ್ಯ ಧಾನ್ಯವಾದ ಭತ್ತವನ್ನು ಅಳೆಯಲಿಕ್ಕೆ ದೇಶದ ಎಲ್ಲಾ ಕಡೆಗಳಲ್ಲಿಯೂ ಒಂದೇ ತರವಾದ ಒಂದು ನಿಘಂಟಿನ ಅಳತೆ ಇಲ್ಲವೆಂಬುದು ಅಲ್ಪವಾದ ಸಂಗತಿಯಲ್ಲ. ಭತ್ತವನ್ನು ಚಿಲ್ಲರೆಯಾಗಿ ಮಾರುವಾಗ ಮಾತ್ರ ಜನರು ಸೇರನ್ನು ಉಪಯೋಗಿಸುವರು. ಹೆಚ್ಚಾಗಿ ಭತ್ತದ ಅಳತೆಗೆ ಪರೆಯೇ ದೇಶದಲ್ಲಿ ವಾಡಿಕೆಯಾಗಿರುವುದು. ಆದುದರಿಂದ ಪರೆಯನ್ನೇ ನಿಘಂಟಿನ ಅಳತೆಯಾಗಿ ಮಾಡಬೇಕಾದದ್ದು ಅಗತ್ಯವಾಗಿದೆ. ಠರಾವಿನ ಮುಖ್ಯ ಅಂಶವು ಪರೆಯಾಗಿರುವಲ್ಲು ಚರ್ಚೆಯ ಹೆಚ್ಚಿನ ಭಾಗವೆಲ್ಲಾ ಸೇರಿನ ಮೇಲೆಯೇ ನಡೆದುದು ಸರಿಯಾಗಲಿಲ್ಲ. ಸರಕಾರಿ ಮೆಂಬರರು ಹೇಳಿದಂತೆ ಸರಕಾರದವರು ಕೆಲವು ವರುಷಗಳ ಹಿಂದೆ ಸೇರನ್ನು ನಿಬಂಧನೆಗೆ ತಂದಿರುವರು. ಈಗ ಸೇರಿನ ಗಲಾಟೆ ಏನೂ ಇಲ್ಲ. ದೇಶದ ಎಲ್ಲಾ ಭಾಗಗಳಲ್ಲಿಯೂ ಸೇರಿನ ಅಳತೆಯು ಏಕ ರೀತಿಯಾಗಿದೆ. ನಮ್ಮ ದೇಶದಲ್ಲಿ ಈಗ ಜಾರಿಯಲ್ಲಿರುವ ಸೇರಿಗೆ 80 ತೊಲೆ ನವಧಾನ್ಯಗಳು ಹಿಡಿಯುತ್ತವೆಂದು ತಿಳಿಯುತ್ತೇವೆ. ಅಂದರೆ ಅಕ್ಕಿ, ಉದ್ದು, ಹೆಸರು, ಗೋಧಿ, ಅವರೆ, ಕಡ್ಲೆ, ಎಳ್ಳು, ತೊಗರಿ ಮತ್ತು ಹುರುಳಿ ಈ ಒಂಭತ್ತು ಧಾನ್ಯಗಳನ್ನು ಸಮಾನ ಅಳತೆಯಿಂದ ಮಿಶ್ರಮಾಡಿದ ರಾಶಿಯಿಂದ ಒಂದು ಸೇರು ಅಳೆದು ತೂಕ ಮಾಡಿದರೆ 80 ರುಪಾಯಿ ತೂಕವಾಗುವುದು. ನವ ಧಾನ್ಯದ ಅಳತೆಯಿಂದಲೇ ನಮ್ಮ ಪೂರ್ವೀಕರು ಅಳತೆಯ ನಿಘಂಟು ಮಾಡುತ್ತಿದ್ದರು. ಆದರೆ ಪಾಶ್ಚಿಮಾತ್ಯರು ಸೇರಿನ ಅಳತೆಯ ಸಹಾಯದಿಂದ ನಿಘಂಟು ಅಳತೆಯನ್ನು ಏರ್ಪಡಿಸಿದರು. ಈಗ ಇಲ್ಲಿಯೂ ಬೇಕಾದರೆ ನೀರನ್ನೇ ನಿಘಂಟಿನ ಅಳತೆಗೆ ಉಪಯೋಗಿಸಬಹುದು. ಇದಿಷ್ಟು ಸೇರಿನ ನಿಘಂಟಿಗೆ ಆಯಿತು.

ಹ್ಯಾಗೂ ಸೇರಿನ ಅಳತೆಯು ಸಾಧಾರಣ ಒಂದೇ ತರಕ್ಕೆ ಬಂದಿರುವಲ್ಲು ಪರೆಯನ್ನು ನಿಬಂಧನೆಗೆ ತರುವುದು ಕಷ್ಟವೇನೂ ಅಲ್ಲ. ಈಗ ದೇಶದಲ್ಲಿ ಜಾರಿಯಲ್ಲಿರುವ 80 ತೊಲೆಯ ಸೇರಿನ ಮಾದರಿಯೊಂದನ್ನು ಖಜಾನೆಯಲ್ಲಿರಿಸಿಕೊಂಡು ಅದರಲ್ಲಿ ಹಿಡಿಯುವ ನೀರಿನ ನಿರಕು ಡಿಗ್ರಿಯ ತೂಕವನ್ನು ನಿಬಂಧನೆ ಸೇರು ಅಳತೆಯಾಗಿ ಮಾಡಿಕೊಳ್ಳಬೇಕು. ಹೀಗೆ ಮಾಡುವುದರಿಂದ ಈಗ ದೇಶದಲ್ಲಿರುವ ಸಾವಿರಾರು ಸೇರುಗಳನ್ನೇ ಉಪಯೋಗಿಸಬಹುದು. ಇಂಥಾ ಸೇರಿನಲ್ಲಿ ಹತ್ತು ಸೇರು ಅಕ್ಕಿ ಹಿಡಿಯುವ ಪರೆಯನ್ನು ದೇಶದಲ್ಲಿ ನಿಘಂಟಿನ ಪರೆಯಾಗಿ ಜಾರಿಗೆ ತರಬಹುದು. ಪರೆಯ ಅಗಲವನ್ನು ಎತ್ತರವನ್ನೂ ಗಮನ ಕೊಡಬೇಕಾದ ಆವಶ್ಯವಿಲ್ಲ. ಯಾವ ಪರೆಯೇ ಆಗಲಿ ಖಜಾನೆಯಲ್ಲಿರುವ ಸೇರಿನಲ್ಲಿ ಹತ್ತು ಹಿಡಿಯಬೇಕು. ಪರೆಯು ಸಾಧಾರಣವಾಗಿ ಮರದಿಂದ ಮಾಡಲ್ಪಡುವುದರಿಂದ ಅದಕ್ಕೆ ಸೀಲು ಹಾಕುವುದು ಬೇಗನೆ ಅಳಿಸಿ ಹೋಗುವುದೆಂದೂ, ವಾಡಿಕೆಯಾಗಿ ಲೋಹದ ಅಳತೆಗಳಿಗೇನೇ ಸೀಲು ಹಾಕುವುದೆಂದೂ ಸರಕಾರಿ ಮೆಂಬರರು ಸೂಚಿಸಿದರು. ಆದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಲ್ಲಿಯ 14 ಸೇರು ಹಿಡಿಯುವ ಕಳಸೆ ಎಂಬ ಅಳತೆಯು ಮರದಲ್ಲಿ ಮಾಡಲ್ಪಟ್ಟದ್ದಾದರೂ ಅದಕ್ಕೆ ಸರಕಾರದವರು ಸೀಲು ಹಾಕಿ ಕೊಡುತ್ತಿದ್ದಾರೆಂದು ತಿಳಿಯುತ್ತೇವೆ. ನಮ್ಮ ದೇಶದಲ್ಲಿಯೂ ಕೂಡ ಕೋವಿಗಳ ಮರದ ಹಿಡಿಗೆ ನಂಬರು ಹಾಕುವಂತೆಯೇ ಮರದ ಪರೆಗೆ ಸೀಲು ಹಾಕುತ್ತಾ ಬರಬಹುದು. ಸೀಲು ಸವೆದು ಹೋಗುವದಾದರೆ ವರುಷ ವರುಷವೂ ಕೋವಿಗಳನ್ನು ಚೆಕ್ ಮಾಡುವಂತೆ ಪರೆಗಳನ್ನು ಅಜಮಾಯಿಸಿ ಸೀಲು ಹಾಕಿ ಕೊಡಬಹುದು. ಪರೆಯೇ ಸವೆದು ಹೋಗದಂತೆ ಅದರ ಬಾಯಿಗೆ ಲೋಹದ ತಗಡನ್ನು ಹೊಡೆಯಬಹುದು. ಇದು ಈಗಲೂ ವಾಡಿಕೆಯಾಗಿದೆ. ಇಲ್ಲವಾದರೆ ಪರೆಯ ಮೂಲೆಗಳಿಗೆ ಹಾಕುವ ಲೋಹದ ಕಟ್ಟಿನ ತಗಡಿಗೇನೇ ಸೀಲು ಹಾಕಬಹುದು. ಈ ತೊಂದರೆಗಳನ್ನು ಹೋಗಲಾಡಿಸಲು ಲೋಹದ ಪರೆಗಳನ್ನೇ ಮಾಡಬಹುದೆಂದು ಒಬ್ಬ ಮೆಂಬರರು ಸೂಚಿಸಿದರು. ಆದರೆ ಪರೆ ಬಡಿಯುವದರಲ್ಲಿ ವ್ಯಾಪಾರಿಗಳು ಬಹಳ ಮೋಸ ಮಾಡುವುದುಂಟು. ಲೋಹದ ಪರೆಗೆ ಪರೆ ಕೋಲಿನಿಂದ ಸ್ವಲ್ಪ ಜೋರಾಗಿ ತಟ್ಟಿದರೆ ಅದರೊಳಗೆ ಧಾನ್ಯವು ಹೆಚ್ಚಾಗಿ ಹಿಡಿಯುವುದು. ಆದುದರಿಂದ ಲೋಹದ ಪರೆಗಳು ಪ್ರಯೋಜನಕರವಲ್ಲವೆಂದೇ ನಮ್ಮ ಭಾವನೆ.

ಇಷ್ಟು ಮಾಡಿದರೂ ಕೂಡ ಮೋಸದ ವ್ಯಾಪಾರಿಗಳ ಹಾವಳಿಯನ್ನು ತಡೆಯಲು ಸಾಧ್ಯವಿಲ್ಲ. ಪರೆಯನ್ನು ಬಾಯಿಗೆ ಸರಿಯಾಗಿ ತಟ್ಟಲು ಉಪಯೋಗಿಸುವ ಉದ್ದವಾದ ಮತ್ತು ಭಾರವಾದ ಕೋಲನ್ನು ಪರೆಯ ಮೇಲೆ ಉರುಳಿಸಿಯೂ, ಪರೆಗೆ ಜೋರಾಗಿ ತಟ್ಟಿಯೂ, ಬೆರಳನ್ನು ಪರೆಯ ಮೇಲಿಟ್ಟು ಅದರ ಮೇಲೆ ಕೋಲನ್ನು ಜಾರಿಸಿಯೂ, ಮತ್ತು ಕೋಲನ್ನು ಪರೆಯ ಆಚೆ ಈಚೆ ತಟ್ಟಿ ಮಧ್ಯದಲ್ಲಿ ಧಾನ್ಯವನ್ನು ಹಾಗೆಯೇ ಬಿಟ್ಟು ಹೆಚ್ಚು ಭತ್ತ ಅಳೆಯುವುದುಂಟು. ಇದನ್ನು ತಪ್ಪಿಸಲು ಕೆಲವು ವಾರಗಳ ಹಿಂದೆ ಒಬ್ಬ ಬಾತ್ಮಿದಾರರು ಸೂಚಿಸಿದಂತೆ ತೆಳ್ಳಗಾದ ಪಟ್ಟಿ ಕೋಲನ್ನು ಉಪಯೋಗಿಸುವಂತೆ ಮಾಡಬೇಕು. ಇದಕ್ಕಿಂತ ಉತ್ತಮವಾದ ದಾರಿ ಇನ್ನೊಂದಿದೆ. ಪರೆಯ ತಲೆ ಬಡಿಯುವ ಪದ್ಧತಿಯನ್ನೇ ನಿಲ್ಲಿಸಿಬಿಡಬೇಕು. ಸೇರಿನಲ್ಲಿ ಅಳೆಯುವಂತೆಯೇ ಪರೆಯಲ್ಲೂ ಬಾಯಿ ತಟ್ಟದೆ ತುಂಬಾ ಅಳೆಯುವಂತೆ ಮಾಡುವುದು ಒಳ್ಳೆಯದು. ತುಂಬಾ ಅಳೆದರೆ ಹತ್ತು ಸೇರು ಆಗುವಂತೆ ಪರೆಯನ್ನು ಮಾಡಿಕೊಳ್ಳಬೇಕು. ಹೀಗೆ ಮಾಡುವುದರಿಂದ ಈಗ ಜಾರಿಯಲ್ಲಿರುವ ಪರೆಗಳನ್ನೇ ಸ್ವಲ್ಪ ಸಣ್ಣದು ಮಾಡಿಕೊಂಡು ಉಪಯೋಗಿಸಬಹುದಲ್ಲದೆ, ಕೊಡುವವರಿಗೂ ಕೊಂಡುಕೊಳ್ಳುವವರಿಗೂ ಯಾವುದೊಂದೂ ಅನ್ಯಾಯ ಉಂಟಾಗುವುದಿಲ್ಲ. ಎಲ್ಲದಕ್ಕಿಂತಲೂ ತೂಕದ ಮೂಲಕ ಅಳೆಯುವುದೇ ಉತ್ತಮ. ಅದು ಈಗ ಸಾಧ್ಯವಿಲ್ಲದಿದ್ದರೆ ಹತ್ತು ಸೇರಿನ ಪರೆ ಏರ್ಪಡಿಸಿ ಅದರ ತುಂಬಾ ಅಳೆಯುವುದೇ ಒಳ್ಳೆಯದು.

ಕೌನ್ಸಿಲ್ ಚರ್ಚೆಯಲ್ಲಿ ಒಬ್ಬರು ಸೂಚಿಸಿದಂತೆ ಇಷ್ಟು ಮಾಡಿದರೆ ಸಾಲದು. ಸೀಲು ಹಾಕಿದ ಸೇರು ಮತ್ತು ಪರೆಗಳನ್ನೇ ದೇಶದಲ್ಲಿ ಉಪಯೋಗಿಸಬೇಕು, ಇಲ್ಲವಾದರೆ ಶಿಕ್ಷಿಸಲ್ಪಡುವರೆಂದು ಖಾನೂನು ಮಾಡತಕ್ಕದ್ದು. ಪ್ರತಿ ವರುಷವೂ ನಿಯಮಿತ ಸಮಯದಲ್ಲು ಒಂದೊಂದು ಸೆಂಟರಿಗೆ ಸುತ್ತಮುತ್ತಲಿನವರೆಲ್ಲರೂ ತಮ್ಮ ಅಳತೆಗಳನ್ನು ತರುವಂತೆ ಪ್ರಕಟಿಸಿ ಅಲ್ಲಿ ಅವುಗಳನ್ನು ಅಜಮಾಯಿಸಿ ಸರಕಾರಿ ಸೀಲು ಹಾಕಿಕೊಡುವಂತೆ ಏರ್ಪಾಡು ಮಾಡಬಹುದು. ಈ ಕ್ರಮವು ಕನ್ನಡ ಜಿಲ್ಲೆಯಲ್ಲಿ ಜಾರಿಯಲ್ಲಿ ಇದೆಯಂತ ತಿಳಿಯುತ್ತೇವೆ.

ಈ ವಿಷಯ ಸರಕಾರದವರಿಗೆ ಹ್ಯಾಗೆ ವರ್ತಿಸಬೇಕೆಂದು ಇನ್ನೂ ಸಾಕಷ್ಟು ತಿಳುವಳಿಕೆ ದೊರೆಯದಿದ್ದರೆ, ಅಳತೆಯಲ್ಲಿ ತುಂಬಾ ಅನುಭವ ಹೊಂದಿರುವವರ ಅಭಿಪ್ರಾಯಗಳನ್ನು ತೆಗೆದುಕೊಳ್ಳುವಂತೆ ಒಂದು ಸಣ್ಣ ಕಮಿಟಿಯನ್ನು ನೇಮಿಸಬಹುದು. ಸುಭೇದಾರರುಗಳು ಒಬ್ಬ ಉದ್ಯೋಗಸ್ಥನಲ್ಲದ ಮೆಂಬರನ ಸಮೇತ ತಮ್ಮ ತಮ್ಮ ತಾಲೋಕುಗಳಲ್ಲಿರುವ ಮುಖ್ಯಸ್ಥರ ಅಭಿಪ್ರಾಯಗಳನ್ನು ತೆಗೆದುಕೊಂಡು ಆ ರಿಪೋರ್ಟುಗಳ ಮೇಲೆ ನ್ಯಾಯವಾದ ಅಳತೆಯನ್ನು ಏರ್ಪಡಿಸಲು ಸುಲಭವಾಗುವುದರಲ್ಲಿ ಸಂಶಯವಿಲ್ಲ. ಭತ್ತ ಮಾರಾಟದ ಜೇಸಿಗೆ ಕಾಲವು ಸಮೀಪವಾದುದರಿಂದ ಸರಕಾರದವರು ಈ ವಿಷಯ ಹೆಚ್ಚು ತಡಮಾಡದೆ ಒಡನೆ ತಕ್ಕ ಏರ್ಪಾಡು ಮಾಡುವರಾಗಿ ಆಶಿಸುತ್ತೇವೆ.

ಕೊಡಗು ಲೆಜಿಸ್ಲೇಟಿವ್ ಕೌನ್ಸಿಲಿನ ಪ್ರೊಸೀಡಿಂಗ್ಸ್.

(ಕಳೆದ ವಾರದಿಂದ ಮುಂದರಿಸಿದ್ದು.)

23ನೇ ಠರಾವು.

ಮ. ಪಿ. ಗಣಪಯ್ಯನವರು:

"ಹುದಿಕೇರಿಯಿಂದ ತೆರಾಲಿಗೆ ಒಂದು ರಸ್ತೆ ಮಾಡಿಸಬೇಕಂತ ಚೀಫ್ ಕಮೀಷನರಿಗೆ ಈ ಕೌನ್ಸಿಲು ಶಿಫಾರಸು ಮಾಡುತ್ತದೆ."

ಮರೆನಾಡೆಂದರೆ ಪಶ್ಚಿಮಘಟ್ಟಗಳಿಗೆ ಸಮೀಪವಾಗಿ ಉಳಿದ ಮೂರುಕಡೆಗಳಲ್ಲೂ ಹೊಳೆಗಳಿಂದ ಆವರಿಸಲ್ಪಟ್ಟ ಐದು ಗ್ರಾಮಗಳುಳ್ಳ ಪ್ರಾಂತ್ಯವಾಗಿದೆ. ಕೊಡಗಿನಲ್ಲಿ ಇಂಪೀರಿಯಲ್ ಡಿಸ್ಟ್ರಿಕ್ಟ್ ಬೋರ್ಡ್ ಅಥವ ಗ್ರಾಮರಸ್ತೆಯಾದರೂ ಇಲ್ಲದೆ ಇರುವ ಗ್ರಾಮಗಳು ಅಪರೂಪ. ಮರೆನಾಡಿಗಿರುವ ಗ್ರಾಮರಸ್ತೆಯು ತೇರಾಟದ ಎತ್ತುಗಳಿಗೆ ಸಹ ಅನುಕೂಲವಾಗಿಲ್ಲ. ಬೇರೆಕಡೆಗಳಲ್ಲಿರುವ ಗ್ರಾಮರಸ್ತೆಗಳು ಗಾಡಿಗಳಿಗೆ ಸಹ ಅನುಕೂಲವಾಗಿವೆ. ಕೊಡಗಿನ ಇತರ ಯಾವ ಭಾಗವೂ ಮರೆನಾಡಿನಷ್ಟು ರಸ್ತೆಯ ಅನುಕೂಲವಿಲ್ಲದಿರುವುದಿಲ್ಲ. ಈ ಗ್ರಾಮಗಳಲ್ಲಿ ರೂ. 3,530-12-0 ಕಂದಾಯ ಮತ್ತು 753-10-0 ಲೋಕಲ್ ಫಂಡ್ ಸೆಸ್ ಕೊಡುವ ಮೂರುಸಾವಿರಕ್ಕಿಂತ ಹೆಚ್ಚಿನ ಜನಸಂಖ್ಯೆ ಇರುವ ಪ್ರಾಂತ್ಯವಾಗಿದೆ.

ಈ ಗ್ರಾಮಗಳಿಗೆ ರಸ್ತೆ ಇಲ್ಲದೆ ಇರುವುದರಿಂದ ಆ ಗ್ರಾಮದವರಿಗೆ ಸಂತೆ, ಆಸ್ಪತ್ರೆ, ಕೋರ್ಟು ಕಚೇರಿಗಳಿಗೆ ಸಹ ವರ್ಷದ ಯಾವ ಭಾಗದಲ್ಲೂ ಹೋಗಲಿಕ್ಕೆ ಅನುಕೂಲವಿಲ್ಲ. ಟಪ್ಪಾಲು ಸಿಕ್ಕುವದೇ ಅಪರೂಪ. ಮಳೆಗಾಲದಲ್ಲಿ ಆಸ್ಪತ್ರೆ ವೈದ್ಯರ ಅನುಕೂಲವಿಲ್ಲದೆ ಎಷ್ಟೋ ಅಕಾಲಮರಣಗಳಾಗುತ್ತವೆ. ಮರೆನಾಡಿನಲ್ಲಿ ಬೆಳೆಯುವ ಪಸಲುಗಳಿಗೆ ಕ್ರಯ ದೊರೆಯುವದೇ ಇಲ್ಲ. ರಸ್ತೆ ಬದಿಗಳಲ್ಲಿ ಬತ್ತಕ್ಕೆ ಗಾಡಿಗೆ 80 ರುಪಾಯಿ ಕ್ರಯವಿರುವಾಗ ಮರೆನಾಡಿನಲ್ಲಿ 50 ರುಪಾಯಿ ಸಿಕ್ಕುವುದು ಕಷ್ಟ. ಹುದಿಕೇರಿಗೂ ಬಿರುನಾಣಿಗೂ ಮಧ್ಯೆ ಒಂದೇ ಹೊಳೆ ಇರುವದು. ಇಂಪೀರಿಯಲ್ ರೋಡ್ ಮಾಡುವದಾದರೆ ಇದೊಂದು ಹೊಳೆಗೆ ಸೇತುವೆ ಕಟ್ಟಿದರೆ ಆಯಿತು. ಸೇತುವೆ ಕಟ್ಟಲು ಸಾಧ್ಯವಿಲ್ಲದಿದ್ದರೂ ಬೇಸಿಗೆಯಲ್ಲಿ ಕಾಸ್‌ವೇ ಮತ್ತು ಮಳೆಗಾಲದಲ್ಲಿ ದೋಣಿಸಹ ಹಾಕಿ ಕೊಟ್ಟರೆ ಸಾಕು.

ಅಧ್ಯಕ್ಷರು ಈ ಗ್ರಾಮವಾಸಿಗಳಮೇಲೆ ಕನಿಕರವಿಟ್ಟು ಈ ರಸ್ತೆಯನ್ನು ಮಂಜೂರ್ಮಾಡಬೇಕೆಂತ ಕೇಳಿಕೊಳ್ಳುತ್ತೇನೆ. ಕಳೆದ ಮಳೆಗಾಲದಲ್ಲಿ ಈ ಗ್ರಾಮದವರು ಎಷ್ಟರಮಟ್ಟಿಗೆ ಕಷ್ಟಪಟ್ಟರೆಂಬದನ್ನು ವಿವರಿಸಬೇಕಾಗಿಲ್ಲ.

ಮ. ಪಿ. ಟಿ. ಕುಶಾಲಪ್ಪನವರು.

ಈ ಠರಾವಿಗೆ ನನ್ನ ಅನುಮೋದನೆ ಇದೆ. ಠರಾವು ತಂದವರು ಸಾಕಷ್ಟು ಕಾರಣಗಳನ್ನು ಕೊಟ್ಟಿದ್ದಾರೆ. ಈ ರಸ್ತೆಯು ಅವಶ್ಯವಾಗಿದೆ ಎಂತಲೂ ಇದಕ್ಕೆ ಸರಕಾರದವರು ಹಣ ವದಗಿಸ್ಯಾರೆಂತಲೂ ನನಗೆ ಗೊತ್ತಿದೆ.

ಈ ಪ್ರಾಂತ್ಯದಲ್ಲಿ ಜನರು ಪೂರ್ವದಲ್ಲಿ ಬಹಳ ಚನ್ನಾಗಿದ್ದರು. ಇಂಥಾ ಪ್ರಾಮುಖ್ಯವಾದ ವಿಷಯಕ್ಕೆ ಸರಕಾರದವರು ಗಮನಕೊಡದೆ ಇರಬಾರದು. ಆ ಪ್ರಾಂತ್ಯದ ಜನರು ಸರಕಾರಕ್ಕೆ ಕೊಡುವ ಕಂದಾಯಕ್ಕೆ ಪ್ರತಿಯಾಗಿ ಅವರಿಗೆ ಏನೂ ಸಹಾಯ ದೊರಕುವದಿಲ್ಲ. ಪೋಸ್ಟಾಫೀಸಿಲ್ಲ, ಎರಡು ಗ್ರಾಮ ಪಾಠಶಾಲೆಗಳು ಮಾತ್ರ ಇವೆ. ಗ್ರಾಮರಸ್ತೆಗಳಿಲ್ಲ. ವರ್ಷದಲ್ಲಿ ಆರು ತಿಂಗಳು ರೈತರು ತಮ್ಮ ಜೀವನಕ್ಕೆ ಆಪಾಯವಿಲ್ಲದೆ ತಮ್ಮ ಗ್ರಾಮಗಳಿಂದ ಹೊರಡಲಿಕ್ಕಾಗುವದಿಲ್ಲ. ಗೋಣಿಕೊಪ್ಪಲಿಗಾಗಲೀ ಶ್ರೀಮಂಗಲಕ್ಕಾಗಲೀ ಆಸ್ಪತ್ರೆಗೆ ಹೋಗಬೇಕಾದರೆ ಹತ್ತು ಹದಿನೈದುಮೈಲು ದೂರ ಒಂದಕ್ಕಿಂತ ಹೆಚ್ಚು ಹೊಳೆದಾಟಿ ಹೋಗಬೇಕು. ಈ ನಾಡು ತುಂಬಾ ಬೆಟ್ಟ ಸಾಲಾಗಿದೆ. ಈ ಪ್ರಾಂತ್ಯದಲ್ಲಿ ಮಳೆಯೂ ಹೆಚ್ಚು, ಮಲೇರಿಯ ಜ್ವರದ ಹಾವಳಿಯು ಅತ್ಯಧಿಕವಾಗಿದೆ. ಈ ಐದು ಗ್ರಾಮಗಳಲ್ಲಿ ಒಬ್ಬ ಆರೋಗ್ಯಸ್ಥನನ್ನಾದರೂ ಕಾಣುವದು ಕಷ್ಟ. ಈ ರಸ್ತೆಬೇಕೆಂತ ಜಮೀನ್‌ದಾರರ ಸಂಘದವರು ಪ್ರತಿವರ್ಷವೂ ಕೇಳಿಕೊಳ್ಳುತ್ತಿದ್ದಾರೆ. ಆದರೆ ಸರಕಾರದವರು ಗಮನಕೊಡಲೇ ಇಲ್ಲ. ಕಳೆದ ಫೈನಾನ್ಸ ಕಮಿಟಿ ಮೀಟಿಂಗ್‌ಗಳು ಇದನ್ನೇಕೆ ಮಾತ್ರ ಯೋಚನೆಗೆ ತೆಗೆದುಕೊಂಡಂತೆ ಕಾಣುತ್ತೆ. ಈ ಠರಾವನ್ನು ಈ ಸಭೆಯು ಪಾಸುಮಾಡೀತೆಂತಲೂ, ಸರಕಾರದವರು ಈ ರೈತರ ಕಷ್ಟ ಪರಿಹಾರಮಾಡಿಯಾರೆಂತಲೂ ನಂಬಿದ್ದೇನೆ.

ಮ. ಟಿ. ಜಿ. ಟಾಸ್ಕರ್‌ರವರು.

ಈ ವಿಷಯ ಡಿಸ್ಟ್ರಿಕ್ಟ್ ಬೋರ್ಡಿಗೆ ಸಂಬಂಧಪಡುವಂಥಾದ್ದೆಂತ ನಾನು ಆಕ್ಷೇಪಿಸಬೇಕಿತ್ತು. ಮರೆನಾಡು ವಿಷಯವು ಮಹತ್ವದೆಂದು ಸರಕಾರದವರು ಒಪ್ಪುವದರಿಂದಲೂ, ಸರಕಾರದ ಹಣದಿಂದ ಸ್ವಲ್ಪಭಾಗವಾದರೂ ಕೊಡಬೇಕಾದ್ದರಿಂದಲೂ ಈ ಠರಾವನ್ನು ತಿರಸ್ಕರಿಸಲಿಲ್ಲ.

ಠರಾವಿನಲ್ಲಿ ಹುದಿಕೇರಿಯಿಂದ ಬಿರುನಾಣಿಗೆ ರಸ್ತೆ ಬೇಕಂತ ಇದ್ದರೂ ಭಾಷಣದಲ್ಲಿ ಹುದಿಕೇರಿಯಿಂದ ತೆರಾಲಿಗೆ ರಸ್ತೆಯಾಗಬೇಕಂತ ಹೇಳಿದರು. ಅನುಮೋದಿಸಿದವರು ಹುದಿಕೇರಿಗೆ ರಸ್ತೆ ಆದರೆ ಸಾಕೆಂತ ಹೇಳಿದರು. ಮರೆನಾಡಿಗೆ ತೃಪ್ತಿಕರವಾದ ರಸ್ತೆಯಾಗಬೇಕೆಂತ ಠರಾವಿನ ಅಭಿಪ್ರಾಯವಾದರೆ ಅದಕ್ಕೆ ನನ್ನ ಸಂಪೂರ್ಣ ಒಪ್ಪಿಗೆ ಇದೆ. ಆದರೆ ಹುದಿಕೇರಿಯಿಂದ ತೆರಾಲಿಗೆ ರಸ್ತೆ ಮಾಡುವದು ಬಹಳ ಕಷ್ಟ. ಕಳೆದ ಮೇ ಅಪ್ರೈಲಿನಲ್ಲಿ ಈ ಪ್ರಾಂತ್ಯದಲ್ಲಿ ಕೆಲವು ದಿವಸ ಇದ್ದು ಬೊಮ್ಮಂಜಿಯಿಂದ ಮರೆನಾಡಿಗೆ ದಾಟಲು ಯಾವದಾರಿ ಒಳ್ಳೇದೆಂತ ಚನ್ನಾಗಿ ಅಜಮಾಯಿಸಿದೆ. ಈಗ ಶ್ರೀಮಂಗಲವು ನಾಡು ಕಚೇರಿ ಇರುವ ಜಾಗವೆಂಬದನ್ನು ನಾವು ನೆನಪಿನಲ್ಲಿಡಬೇಕು. ಅಲ್ಲಿ ಪೋಲೀಸ್‌ಸ್ಟೇಶನ್ ಆಸ್ಪತ್ರೆಸಹ ಇದೆ. ಈಗ ಆದ ಸಾಧಾರಣ ಅಜಮಾಯಿಷಿಕೆಯಿಂದ ಶ್ರೀಮಂಗಲಕ್ಕೂ ಹುದಿಕೇರಿಗೂ ಮಧ್ಯದಿಂದ ಅಂದರೆ ಸುಮಾರು ಕೆಟ್ಟಗೇರಿ ಶಾಲೆ ಬಳಿಯಿಂದ ನೂರಾಡಿಗೂ ಅಲ್ಲಿಂದ ಇತರ ಗ್ರಾಮಗಳಿಗೆ ಶಾಖೆಗಳು ಆಗಬೇಕೆಂತ ನನಗೆ ತೋರಿದೆ. ಇದೇ ಬಹಳ ಸುಲಭವಾದ ಮತ್ತು ಅನುಕೂಲವಾದ ದಾರಿಯೆಂತ ನಾನು ನಂಬುತ್ತೇನೆ. ಆದರೆ ಈಗ ಡಿಟೇಲ್‌ಗಳನ್ನು ಕೊಟ್ಟು ಈ ಸಭೆಗೆ ತೊಂದರೆಕೊಡಬೇಕೆಂತ ನನಗೆ ಇಚ್ಛೆ ಇಲ್ಲ. ಈ ಮುಂದಿನ ಚಳಿಗಾಲದಲ್ಲಿ ಅಳತೆಮಾಡಿ ನಾನು ಹೇಳುವ ದಾರಿ ಆಗಬಹುದೋ ಎಂತ ನೋಡಲು ಎಗ್ಸಿಕ್ಯೂಟಿವ್ ಇಂಜಿನೀಯರು ಒಪ್ಪಿದ್ದಾರೆ. ನನ್ನ ಭಾಷಣದ ಸಾರವನ್ನು ಸೂಚಿಸುವ ರೀತಿಯಲ್ಲಿ ಠರಾವನ್ನು ಬದಲಾಯಿಸಿಕೊಂಡರೆ ನಾನು ಒಪ್ಪಿಗೆ ಕೊಡಲು ತಯಾರಿದ್ದೇನೆ.

ಮೆ. ಗುಂಡಪ್ಪಯ್ಯನವರು.

ಹುದಿಕೇರಿಯಿಂದ ತೆರಾಲಿಗೆ ರಸ್ತೆಯಾದರೆ ಮರೆನಾಡು ಮಧ್ಯಕ್ಕೆ ಹೋಗುತ್ತೆ. ಕಿಟ್ಟಿಗೇರಿಸ್ಕೂಲಿನಿಂದ ಮರೆನಾಡಿಗೆ ಹೋಗುವದಾದರೆ ಮರೆನಾಡು ಮಧ್ಯಕ್ಕೆ ಹೋದಂತಾದುವದಿಲ್ಲ.

ಮೆ. ಪಿ. ಟಿ. ಕುಶಾಲಪ್ಪನವರು.

ಈ ವಿಷಯವು ಕಳೆದ ಜಮಾನ್‌ದಾರರ ಸಂಘದ ಹುದಿಕೇರಿಮೀಟಿಂಗಿನಲ್ಲಿ ಚನ್ನಾಗಿ ಚರ್ಚಿಸಲ್ಪಟ್ಟು ಮರೆನಾಡಿನವರೆಲ್ಲರೂ ಒಗ್ಗಟ್ಟಾಗಿ ಹುದಿಕೇರಿ ತೆರಾಲು ರಸ್ತೆಗೆ ಒಪ್ಪಿದ್ದಾಗಿದೆ. ಶ್ರೀಮಂಗಲ ಮರೆನಾಡು ರಸ್ತೆಗೆ ಮಟ್ಟದಾರಿಯೇ ಸಿಕ್ಕುವದು ಕಷ್ಟವೆಂತಲೂ ಮತ್ತು ತುಂಬಾ ಹೊಳೆ ಮತ್ತು ಹಳ್ಳಗಳು ಸಿಕ್ಕುವದರಿಂದ ಖರ್ಚುಹೆಚ್ಚಾಗಬಹುದೆಂತ ಸ್ಟೇಡಬಸುಘನವಿರುವವರು ಹೇಳಿದರು. ಶ್ರೀಮಂಗಲ ಮರೆನಾಡು ರಸ್ತೆಯಾಗಬೇಕಾದರೆ ತುಂಬಾ ಹಳೆ ಕಡಂಗಗಳನ್ನು ದಾಟಬೇಕಾಗುತ್ತೆ. ಬೇಸಿಗೆಯಲ್ಲಿ ಕೂಡ ಈ ಕಡಂಗಗಳಲ್ಲಿ ನೀರು ತಪ್ಪುವದಿಲ್ಲ. ಸಂಘದ ಮೀಟಿಂಗಿನಲ್ಲಿ ಕಿಟ್ಟಿಗೇರಿ ಮರೆನಾಡುರಸ್ತೆ ಆಗಬಹುದೆಂತ ನಾನು ವಾದಿಸಿದೆ. ಮರೆನಾಡಿನವರೇ ಇದಕ್ಕೆ ಒಪ್ಪಲಿಲ್ಲ. ಮರೆನಾಡಿನವರೇ ಹುದಿಕೇರಿ ರಸ್ತೆಯಾದರೆ ಸಂತೆ, ಪಿಚೇರಿ, ಆಸ್ಪತ್ರೆ ಎಲ್ಲದಕ್ಕೂ ಅನುಕೂಲವಾಗುತ್ತೆಂತ ಹೇಳಿದರು. ಬಿಟ್ಟಂಗಾಲಕ್ಕೂ ಮುಂದರಿಸಬೇಕೆಂತ ವಾದಿಸಿದರು. ಆದರೆ ಈಗಿನ ಠರಾವು ಹುದಿಕೇರಿಯಿಂದ ತೆರಾಲಿಗೆ ರಸ್ತೆ ಆಗಬೇಕೆಂತಮಾತ್ರ ಇದೆ. ಬಿಟ್ಟಂಗಾಲಕ್ಕೆ ಈಗಲೇ ಮುಂದರಿಸಬೇಕೆಂತ ನಾನು ಒತ್ತುವದಿಲ್ಲ.

ಮೆ. ಟಿ. ಜಿ. ಟಾಸ್ಕರ್‌ರವರು.

ಇಂಜನೀಯರು ಪೈಸಲುಮಾಡಬೇಕಾದ ವಿಷಯವನ್ನು ಈ ಸಭೆಯು ತೀರ್ಮಾನಿಸುವುದು ಸಾಧ್ಯವಿಲ್ಲ. ಈ ಭಾಗದ ಪ್ರದೇಶವು ನನಗೆ ಚನ್ನಾಗಿ ಗೊತ್ತಿದೆ. ಅನೇಕ ಮರೆನಾಡಿನವರ ಸಂಗಡ ನಾನುಮಾತನಾಡಿದೆ. ಅಜಮಾಯಿಷಿ ಆಗುವವರೆಗೆ ನಾವು ಕಾಯಬಹುದು. ಠರಾವಿಗೆ ಅನುಮೋದಿಸಿದವರು ಸಂಘದ ಮೀಟಿಂಗಿನಲ್ಲಿ ವಾದಿಸಿದಮೇರೆ ಕಿಟ್ಟಿಗೇರಿ ಮರೆನಾಡು ರಸ್ತೆಯನ್ನೇ ಬಿಡದೆ ಇದ್ದಿದ್ದರೆ ಚನ್ನಾಗಿ ಇತ್ತೆಂತ ನನಗೆ ತೋರುತ್ತೆ. ಠರಾವಿನ ಮಾತುಗಳಿಗೆ ನಾನು ಒಪ್ಪಲಾಗುವದಿಲ್ಲ.

ಮೆ. ಪಿ. ಟಿ. ಕುಶಾಲಪ್ಪನವರು.

ಇಂಜನೀಯರ ತೀರ್ಪಿಗೆ ಬಿಡಲು ಆಕ್ಷೇಪಣೆ ಇಲ್ಲ.

ಮೆ. ಟಿ. ಜಿ. ಟಾಸ್ಕರ್‌ರವರು.

ಅದೇ ನನಗೆ ಬೇಕಾದದ್ದು.

ಅಧ್ಯಕ್ಷರು.—ಮರೆನಾಡಿಗೆ ರಸ್ತೆ ಮಾಡಿಸಿಕೊಡಬೇಕೆಂತ ಠರಾವು ವ್ಯತ್ಯಾಸಮಾಡಿಕೊಳ್ಳಲಾಗುತ್ತೆ ಎಂತ ತಿಳಿಸಿ ಅಭಿಪ್ರಾಯ ತಿಳಿಯುವಾಗ ಸರ್ವರೂ ಸಮ್ಮತಿಸಿದರು.

ಉಳಿಯಿತಿನ್ನೇನು?

ಒಂದಾನೊಂದುಕಾಲಕ್ಕೆ ಹೊನ್ನಿನಮಳೆಯನ್ನು ಕರೆಸಿದ ನಮ್ಮ ಈ ಭರತಖಂಡದಲ್ಲಿ ಈಗ ತಿನ್ನುವದಕ್ಕೆ ಸರಿಯಾಗಿ ಕೂಳಿಲ್ಲದೆ ಹೊಟ್ಟೆಯಮೇಲೆ ಒದ್ದೆಯ ಬಟ್ಟೆಯನ್ನು ಹಾಕಿಕೊಂಡು ಪ್ರಾಣಬಿಡುವ ಕಾಲವು ಒದಗಿರುತ್ತೆ. ನಮಗೆ ಜ್ಞಾನವು ಹೆಚ್ಚುತ್ತ ಹೆಚ್ಚುತ್ತ ನಮ್ಮ ಬುದ್ಧಿಯು ವಿಚಿತ್ರಸ್ವರೂಪವನ್ನು ಹೊಂದುತ್ತಲಿವೆ. ನಮ್ಮ ಹಿರಿಯರು ನಮಗಾಗಿ ಇಟ್ಟಿರುವ ಇತಿಹಾಸಗಳೂ, ಅವುಗಳ ಕುರುಹುಗಳೂ, ಭವ್ಯಕಟ್ಟಡಗಳೂ, ಅವರ ನಾಗರೀಕತೆ, ಅವರ ಶಾಸ್ತ್ರಾಸ್ತ್ರಪ್ರಯೋಗ ಪದ್ಧತಿ, ಅವರ ರಾಜ್ಯಭಾರಪದ್ಧತಿ, ಅವರ ಸಮಾಜದ ವ್ಯವಸ್ಥೆ, ಅವರ ಆರ್ಥಿಕ ವ್ಯಾವಹಾರಿಕ ಉನ್ನತಿ, ಅವರ ನೀತಿ, ಸದಾಚಾರ, ಇವುಗಳೆಲ್ಲಾ ಸುಬಾಲಿಸಿದ ನಮಗೆ ಕೇವಲ ವರ್ಣನಾತ್ಮಕ ಕಾದಂಬರಿಯಂತೆ ಆಗಿವೆ. ಇವುಗಳನ್ನೆಲ್ಲಾ ಕಾದಿಡುವುದು ಒಂದು ಉಚ್ಚ ಧ್ಯೇಯದಿಂದ. ಆದರೆ ಕಾರ್ಯತಃ ಅದಕ್ಕೆ ಅತಿವಿರುದ್ಧವಾಗಿ ನಡೆದುಕೊಳ್ಳುತ್ತಲಿದ್ದೇವೆಂದಮೇಲೆ ನಮಗೆ ಕೃತಘ್ನರೆನ್ನದೆ ಮತ್ತೇನೆನ್ನಬೇಕು? ನಮ್ಮ ಹಿರಿಯರು ಇವುಗಳನ್ನೆಲ್ಲಾ ಕಾದಿಟ್ಟಿರುವುದು ಯಾತಕ್ಕೆ? ಅವುಗಳನ್ನು ಅನುಕರಣಮಾಡಿ ಅದಕ್ಕಿಂತಲೂ ಹೆಚ್ಚಿನ ಅಭಿವೃದ್ಧಿಗೆ ಬರಬೇಕೆಂದಲ್ಲವೆ? ಕೇವಲ ರಾಜರುಗಳ ನತನನ್ನೂ ಅವರ ಹೆಸರನ್ನೂ ತಿಳಿಯಬೇಕೆಂದು ಇತಿಹಾಸವನ್ನು ಬರೆದಿರುವುದಿಲ್ಲ. ಆದರೆ ಅವರು ಸಾಹಸವನ್ನು, ಸ್ವಧರ್ಮವನ್ನೂ, ಸ್ವಾಭಿಮಾನವನ್ನೂ ಸ್ವತಂತ್ರವಾಗಿ ಹೇಗೆ ಹೋರಾಡಿ, ಹೊಡೆದಾಡಿ, ಕಾದಾಡಿ ಲೋಕಕ್ಕೆ ಸೌಕರ್ಯ, ಸೌಲಭ್ಯಗಳನ್ನು ಉಂಟುಮಾಡಿದ್ದರು ಎಂಬುದರ ಒಂದು ಭಾವಚಿತ್ರವನ್ನು ನಮ್ಮ ಮುಂದೆ ಇಡುವದಕ್ಕಾಗಿಯೇ ಹೊರತು ಮತ್ತೆ ಬೇರೆ ಅಲ್ಲ. ಅವರ ಭವ್ಯ ಕಟ್ಟಡಗಳೂ, ಗುಡಿಗೋಪುರಗಳೂ, ಶೃಂಗಾರಿತ ಕುಶಲವಿದ್ಯೆಗಳೂ, ಆ ಕಾಲದ ನಾಗರೀಕತೆಯು ಎಷ್ಟು ಉನ್ನತ ಶಿಖರವನ್ನು ಏರಿತ್ತು ಎಂಬುದನ್ನು ತೋರಿಸುತ್ತಲಿವೆಯಲ್ಲವೆ? ಎಲ್ಲಾ ಜನಾಂಗದವರೂ ನಾನುಮುಂದು ತಾನುಮುಂದು ಎಂದು ಮುಂಗಡಿಸಿ ತಮ್ಮ ಧರ್ಮವನ್ನು ಕಾಯ್ದುಕೊಂಡು ಬರಿ ಇರುತ್ತಿರಲು ಎಲ್ಲರಿಗೂ ಮುಂದೆ ಸಲಗನಂತೆ ಇರುತ್ತಿದ್ದ ನಾವು ಈಗ ಎಲ್ಲರಿಗೂ ಹಿಂದುಳಿದುದೂ, ಮುಂದೆ ಹೋಗಲು ಮನಃಪೂರ್ವಕ ಪ್ರಯತ್ನಮಾಡದಿರುವುದೂ ಎಷ್ಟು ಲಜ್ಜಾಸ್ಪದವಾಗಿದೆ ಎಂಬುದನ್ನು ವಾಚಕರೇ ವಿಚಾರಮಾಡಿಕೊಳ್ಳಿರಿ. ಇಂಥ ಸಂಸ್ಕೃತಿಯುಳ್ಳ ಕೂಡ ಹಿತ್ತಲಗಿಡವು ಮದ್ದಲ್ಲವೆಂಬ ಗಾದೆಯನ್ನು ಅನುಸರಿಸಿ ಹಿರಿಯರ ದಾರಿಯನ್ನು ಬಿಟ್ಟು ನಮ್ಮ ಮನಗಂಡ ಹಾದಿಯಲ್ಲಿ ನಡೆಯುತ್ತಿದ್ದೇವೆ. ಮುಂದೆ ಹೋದರೆ ಕಷ್ಟದ ದಾರಿಯೇನಾದೀತು? ನಮ್ಮಲ್ಲಾದರೂ ಹೆಚ್ಚಿದವರಿಗಾದರೂ ನಮ್ಮ ಹಿರಿಯರ ಮಾರ್ಗ, ಪೂರ್ವ ಹಿರಿಮೆಯನ್ನು [illegible] ಚ್ಚುತ್ತಿದೆ. ಈ ಮಾರ್ಗವನ್ನು ಹಿಡಿದವರ್ಯಾರು? ಹೊಸಗಿನವರ್ಯಾರೂ ಒಂದು ದಾರಿಗಿಳಿದರು. ಸಮುದಾಯದವೃದ್ಧಿ ನಮ್ಮ ಕೈಯಿಂದ ನಾವೇ ಮಾಡಿಕೊಂಡಿದ್ದೇವೆ. ಪ್ರಪಂಚದಲ್ಲಿ ಪ್ರತಿಯೊಂದು ಜನಾಂಗವೂ ತನ್ನದೆಂದು ವೈಶಿಷ್ಟ್ಯವನ್ನು ಕಾಯ್ದುಕೊಳ್ಳಲು ಹೆಣಗಾಡುತ್ತಲಿದೆ. ಆದರೆ ನಮ್ಮ ಭರತಖಂಡದ ವೈಶಿಷ್ಟ್ಯವನ್ನು ಕೇಳಬೇಕೆಂದರೆ ನಮ್ಮಲ್ಲೇನು ವೈಶಿಷ್ಟ್ಯ ಉಳಿದಿರುತ್ತದೆ? ಎಲ್ಲವೂ ನಮ್ಮ ಪೂರ್ವಿಕರ ಇತಿಹಾಸವೇ ಹೊರತು ಮತ್ತೆ ಬೇರೆ ಇಲ್ಲ. ಇವೆಲ್ಲ ನಮ್ಮ ಕಾದಂಬರಿಯಂತೆ ಇರುವಾಗ ಹೊಸಬರಿಗೆ ಅವು ವ್ಯರ್ಥ ಪುರಾಣವಲ್ಲದೆ ಮತ್ತೇನು? ಆಧ್ಯಾತ್ಮಿಕ, ಭೌತಿಕ, ನೈತಿಕ ಮೊದಲಾದ ಯಾವ ದಾರಿಯಲ್ಲಿ ನಮ್ಮ ಹಿತವನ್ನು ನೋಡಿಕೊಳ್ಳಬೇಕಾದರೂ ಪರಕೀಯರ ಅನುಕರಣಮಾಡುವ ಕಾಲವು ನಮ್ಮ ಪಾಲಿಗೆ ಬಂದಿರುವದು ಅತಿಶೋಚನೀಯವೇ ಸರಿ. ಒಂದಾನೊಂದುಕಾಲಕ್ಕೆ ಇಡೀ ಪ್ರಪಂಚದ ಎಲ್ಲಾ ಜನಾಂಗಕ್ಕೂ ಆದರ್ಶಭೂತರಾಗಿದ್ದ ಈ ಭರತಖಂಡದವರಾದ ನಾವು ಈಗ ಎಲ್ಲರಿಗೂ ಹಿಂದುಳಿದು ಹುಟ್ಟಿದವರಿಗೆಲ್ಲಾ ಅಜ್ಞಾನಿಗಳೆಂದು [illegible] ಎಂಬ ಗಾದೆಯನ್ನು ಸ್ವೀಕರಿಸಿ [illegible] ಕೊಳ್ಳಬೇಕಾಯಿತೆ? ಇದಕ್ಕೆ ಕಾರಣವೇನು?

ಮೋಹವು ಮನುಷ್ಯನನ್ನು ಹಾಳುಮಾಡುತ್ತದೆ. ನಮ್ಮವರು ಒಂದು ಒಂದುವರೆ ಶತಮಾನದಿಂದಲೂ ನಾವು ಪಾಶ್ಚಿಮಾತ್ಯರ ಮೋಹಪಾಶಕ್ಕೆ ಬಿದ್ದು ಪರದಾಸ್ಯದಲ್ಲಿ ಮುಳುಗುವ ಕಾಲವೊದಗಿದೆ. ಯಾವುದಾದರೊಂದು ಸನ್ನಿವೇಶದಲ್ಲಿ ಬೇಕಾದರೂ ಪಾಶ್ಚಿಮಾತ್ಯರ ಅಂದರೆ ಪರಕೀಯರ ರೀತಿಯನ್ನು ನೋಡಬೇಕಾಗಿದೆ. ನಮ್ಮ ಪ್ರತಿಯೊಂದು ಆಚಾರದಲ್ಲಿಯೂ ವ್ಯವಹಾರದಲ್ಲಿಯೂ ಸ್ವಾವಲಂಬನೆಯು ಮರೆಯಾಗಿ ಪರಕೀಯರ ಮುಷ್ಟಿಯಿಂದ ಒಪ್ಪುತ್ತಲಿದೆ. ನಮ್ಮ ಶಾಸ್ತ್ರದಲ್ಲಿ ವರ್ಣಿಸಲು ಸಹ ಅಸಾಧ್ಯವಾದ ಕಟ್ಟು ನಿಯಮಗಳಿರುತ್ತವೆ. ಕೇವಲ ಕ್ಷುಲ್ಲಕ ಬಹಿರ್ಭೂಮಿಗೆ ಹೋಗಬೇಕಾದರೂ ಎಷ್ಟೋ ನಿಯಮಗಳನ್ನು ವಿಧಿಸುತ್ತಾರೆ. ಇಂಥ ನಿಯಮಗಳನ್ನು ಹೇಳಲು ಮರೆತೆವು. ಪ್ರತಿಯೊಂದು ಹೆಜ್ಜೆಯಲ್ಲಿಯೂ ಪ್ರತಿನಿಯಮಗಳಿಗೂ ಅನುಷ್ಠಾನ ಬೆಲೆಯನ್ನು ಕೊಟ್ಟಿದ್ದೆವು. ಈಗ ಅವುಗಳೆಲ್ಲವೂ ವಿಪರ್ಯಾಸವಾಗಿವೆ. ಸಂಸ್ಕೃತಿಗೆ ವಿರುದ್ಧ ಅಸಂಸ್ಕೃತಿ ಎಂಬ ಭಾವನೆಯು ನಮ್ಮಲ್ಲಿತ್ತು. ಈಗ ಸಂಸ್ಕೃತಿಗೆ ಅಂದರೆ ಗಡಸಿಗೆ ಮಾತ್ರ ಅಸಂಸ್ಕೃತಿ ಎಂಬ ಟೀಕೆಮಾಡುವ ಆತ್ಮರು ನಮ್ಮಲ್ಲಾಗುತ್ತಿದ್ದಾರೆ. ಎಂದಮೇಲೆ ಮುಂದೆಮಾಡುವದೇನು? ಇದರಿಂದ ಅನರ್ಥ ಪರಂಪರೆಯುಂಟಾಗತೊಡಗಿದವು. ಪ್ರಾಚೀನ ಪದ್ಧತಿಗಳೆಲ್ಲಾ ಅಳಿದವು. ಹೀಗೆಂದಕೂಡಲೆ ಆಧುನಿಕ ಸುಧಾರಕರೆಲ್ಲ ಸಿಟ್ಟಿಗೆದ್ದು "ಅಪ್ಪಹಾಕಿದ ಆಲದಮರವೆಂದು ನೇಣುಹಾಕಿಕೊಂಬರೆ?" ಎಂಬ ಗಾದೆಯನ್ನು ಮುಂದಿಡುವರು. ಬರಿ ಮಾತಿನ ಶೂರರಾಗಿರುವದಕ್ಕಿಂತ ಅಭಿಮಾನದಿಂದ ಹಾಗೆ ಮಾಡುವದು ಲೇಸು. ಸತ್ಯದಲ್ಲಿ ನಾವು ಅಭಿಮಾನಶೂನ್ಯರಾದದ್ದರಿಂದಲೇ ನಮ್ಮ ಗತಿಯು ಶೋಚನೀಯಸ್ಥಿತಿಗೆ ಬಂದಿತು. ನಮ್ಮ ಕೈಯಲ್ಲಿದ್ದ ರಾಜದಂಡವನ್ನು ಪರರ ಕೈಯಲ್ಲಿ ಕೊಟ್ಟೆವು. ನಮ್ಮ ಆರ್ಯ ಸಂಸ್ಕೃತಿ ಪದ್ಧತಿಯು ಮಾಯವಾಗಿ ಪರಕೀಯ ರಾಜಪದ್ಧತಿಯೂ ಅವರ ದಬ್ಬಾಳಿಕೆಯೂ ಬೇರು ಬಲಕಾಯಿತು. ....ಎಲ್ಲೆಲ್ಲಿಯೂ ಅಧೋಗತಿಯ ಅವನತಿಯು ಬೇರೂರಿತು. ಏಕಸ್ವತಂತ್ರ ಗೋಕುಲವಿತ್ತು. ಗ್ರಾಮದ ವ್ಯವಸ್ಥೆಯು ಮುರಿಯುತ್ತಾ ಬಂತು. ಪಂಚಾಯಿತಿಯ ಕೋರ್ಟುಗಳು ಕಾಣದಾದವು. ಇದೇ ಪಂಚಾಯಿತಿ ಕೋರ್ಟಿನ ಪದ್ಧತಿಯು "Nations Conference" "ಜನಾಂಗಗಳ ಕೋರ್ಟು"ನಲ್ಲಿ ಈಗಲೂ ಪ್ರಚಾರವಲ್ಲಿದ್ದಾಗ್ಯೂ ನಮ್ಮಲ್ಲಿದ್ದ ಪದ್ಧತಿಯನ್ನು ಹಾಳುಮಾಡಿಕೊಂಡೆವು. ಪಂಚಾಯಿತಿ ಎಂಬ ಶಬ್ದದ ನೆನಪು ನಮಗೆ ಉಳಿದಿಲ್ಲ. ಪ್ರತಿಗ್ರಾಮವೂ ಪ್ರತ್ಯೇಕವಾಗಿ ಸ್ವತಂತ್ರವಾಗಿ ಬಾಳುತ್ತಿದ್ದವು. ಜಾತಾ ಬಯಲಾತಿ ಎಂಬ ಹಿಂದುಸ್ಥಾನಿ ಶಬ್ದ ಹೇಳಿದ ಕೂಡಲೆ ಮುಸಲ್ಮಾನರ ಕಾಲಕ್ಕೆ ಬಂದಿದ್ದೆಂದು ತಿಳಿಯಬಾರದು. ನಮ್ಮಲ್ಲಿ ವರ್ಣಾಶ್ರಮವು ಹುಟ್ಟಿದಕಾಲದಿಂದಲೂ ನಡೆದು ಬಂದಿತ್ತು. ಈಗ ಇವೆಲ್ಲಾ ಮಣ್ಣುಗೂಡಿದವು. ದೇಶದಲ್ಲಿ ಎಲ್ಲಿನೋಡಿದರೂ ಜನರಿಗೆ ತೊಂದರೆ ಇದೆ, ಎಂದು ಹೇಳುವದಕ್ಕೆ ಮಾತ್ರ ನಮಗೆ ಗೊತ್ತುಂಟು. ಕಾರಣವೇನೆಂಬ ಸೃಷ್ಟಿಮಾತ್ರ ನಮ್ಮ ಮುಂದೆ ನಿಲ್ಲುವದಿಲ್ಲ. ಪರರಕ್ಕೆ ಬಿದ್ದು ನಮ್ಮ ಜನಸ್ಥಿತರ ಕೂಡಿಯುಕೆಲಸಕ್ಕೆ ಕಲ್ಲು ಹಾಕಿದೆವು. ಇದರಿಂದ ಅನೇಕ ದೇಶಬಾಂಧವರ ವ್ಯಾಪಾರಕ್ಕೆ ಗುರಿಯಾದೆವೆಂಬ ಅರಿವೂ ನಮಗಿರುವದಿಲ್ಲ. ನಮ್ಮ ಗ್ರಾಮದ ಕುಂಬಾರನ ಸ್ವಂತ ಕೈಯಿಂದ ಮಾಡಿದ ಮಣ್ಣಿನ ಪಾತ್ರೆಗಳನ್ನೂ, ಮಡಕೆಗಳನ್ನೂ ಗೊಬ್ಬರಗುಂಡಿಯಲ್ಲಿ ಹಾಕಿ ದು ಕುಂಬಾರನ ಬಾಯಿಗೆ ಮಣ್ಣು ಮೆತ್ತಿದೆವು. ನಮ್ಮ ಆಗಸನು ಮಾಡಿದ ಮಡಿಯು ಶುಭ್ರವಾಗಿ ಕಾಣುವದಿಲ್ಲ. ನಮ್ಮ ಮೈ ಮೇಲಿನ ಅರಿವೆಯು ಫ್ರಾನ್ಸ್ ದೇಶಕ್ಕೆ ಹೋಗಿ ಮಡಿಯಾಗಬೇಕು, ಎಂದಮೇಲೆ ಆಗಸನು ಬದುಕುವದೆಂತು? ಹಿಂದಿನವರು ನಮ್ಮಲ್ಲಿ ಇಲ್ಲವೇ ಇಲ್ಲವೆಂಬ ಭಾವನೆಯು ಈಗೀಗ ಹುಟ್ಟುತ್ತಲಿದೆ. ಪರಕೀಯರ್ಯಾರುಗಳೇ ಮುಂದೆ ಕಾಣುತ್ತಲಿವೆ. ಕೌಶಲ್ಯದ ಶಕ್ತಿಯುಕ್ತ ಕೂಡ ಪರದೇಶದವರೇ ಬಯಿತು. ದೇಶಿಯನನ್ನು ಮೂಕನಾಗಿಸುವವರೇ ಇನ್ನ

[illegible]

... Spencer Co ...

[illegible]

"[illegible]"

ಕೌನ್ಸಿಲ್ ಮೀಟಿಂಗು.

(ಪ್ರಶ್ನೋತ್ತರಗಳು ಮುಂದುವರಿದದ್ದು.)

ಮೆ. ಕೆ. ಪಿ. ಚಿಣ್ಣಪ್ಪನವರು.

142. ಪ್ರ. (1) ಕೊಡಗಿನಲ್ಲಿ ತರಬೇತು ಹೊಂದಿದ ಸೇನಿಟರಿ ಇನ್ಸ್‌ಪೆಕ್ಟರುಗಳು ಎಷ್ಟಿದ್ದಾರೆ?

(2) ಅವರೆಲ್ಲರೂ ಕೊಡಗುಜಿಲ್ಲೆಯ ಆರೋಗ್ಯದ ವಿಷಯ ನೋಡಲಿಕ್ಕಾಗಿ ಸರಕಾರದಿಂದ ನೇಮಿಸಲ್ಪಟ್ಟಿರುವರೊ?

(3) ಕಣಿವೆ ಹೋಬಳಿ ಗ್ರಾಮಗಳ ಹೆಚ್ಚು ಅನಾರೋಗ್ಯದ ಸ್ಥಿತಿಯನ್ನು ಅವರ್‍ಯಾರು ನೋಡಲಿಲ್ಲವೊ?

(4, ನೋಡಿದ್ದರೆ ಅವುಗಳ ನಿವಾರಣೆಗಾಗಿ ಏನು ಏರ್ಪಾಡು ಮಾಡಲಾಗಿದೆ?

(5) ಅವರು ಗ್ರಾಮಗಳನ್ನು ನೋಡಿ ಮೇಲಿನ ಅಧಿಕಾರಿಗಳಿಗೆ ರಿಪೋರ್ಟು ಬರೆಯುತ್ತಿದ್ದಾರೊ?

(6) 1923-24ರಲ್ಲಿ ಕೊಡಗಿನಲ್ಲಿ ಸೇನಿಟರಿ ಇನ್ಸ್‌ಪೆಕ್ಟರು ನೋಡಿದ ಗ್ರಾಮಗಳೆಷ್ಟು?

ಉ. (1) ಮತ್ತು (2) ನಾಲ್ಕು ಜನರು ತರಬೇತು ಹೊಂದಿರುವರೆಂದು ತಿಳಿಯಲಾಗಿದೆ. ಒಬ್ಬರು ಡಿಸ್ಟ್ರಿಕ್ಟ್ ಬೋರ್ಡಿನ ಕೈಕೆಳಗೆ ಸೇನಿಟರಿ ಇನ್ಸ್‌ಪೆಕ್ಟರಾಗಿದ್ದಾರೆ. ಇನ್ನೊಬ್ಬರು ಸುಂಟಿಕೊಪ್ಪನಾಡಿನ ಪಾರುಪತ್ಯಗಾರರು, ಮತ್ತೆ ಇಬ್ಬರು ಮಡಿಕೇರಿ ಮತ್ತು ವೀರರಾಜಪೇಟೆ ಮುನ್ಸಿಪಾಲಿಟಿಗಳ ಪಾರುಪತ್ಯಗಾರರು.

(3) ರಿಂದ (6)ರ ವರೆಗೆ—ರೂಲಿನ ಮೇರೆ ಸೇನಿಟರಿ ಇನ್ಸ್‌ಪೆಕ್ಟರವರು ಪೇಟೆಗಳನ್ನು ಮಾತ್ರ ನೋಡಬೇಕು. ಅವರ ಇನ್ಸ್‌ಪೆಕ್ಷನ್ ರಿಪೋರ್ಟು ಪ್ರೆಸಿಡೆಂಟರುಗಳಿಗೂ, ಬೇರೆ ಸಂದರ್ಭಗಳಲ್ಲಿ ಪಾರುಪತ್ಯಗಾರರಿಗೂ ಕಳುಹಿಸಲ್ಪಡುವದು. ಅವರು ಕಳೆದ ಮಾರ್ಚಿಯಲ್ಲಿ ಶಾಂತಿಬೇದಿ ಕಾಯಿಲೆಯ ಸಮ್ಬಂಧ ಕಣಿವೆ ಹೋಬಳಿಗೆ ಹೋಗಿದ್ದರು. ಆದರೆ ಅಲ್ಲಿಯ ಆರೋಗ್ಯ ಸ್ಥಿತಿಯ ವಿಷಯ ರಿಪೋರ್ಟು ಮಾಡಲಿಲ್ಲ.

ಮೆ. ಪಿ. ಟಿ. ಕುಶಾಲಪ್ಪನವರು.

143. ಪ್ರ. (ಎ) ಸರ್ವೆಮಾಡಿರುವ ರೈಲ್ವೆ ಲೈನಿಗಾಗಿ ರಸ್ತೆಮಾಡಲ್ಪಟ್ಟ ರೈತರಿಗುಂಟಾಗುವ ನಷ್ಟವನ್ನು ಪರಿಹರಿಸಲು ಏನಾದರೂ ಏರ್ಪಾಡುಮಾಡಲಾಗಿದೆಯೊ?

(ಬಿ) ಲಕ್ಷ್ಮಣತೀರ್ಥದಿಂದ ಪೊನ್ನಂಪೇಟೆವರೆಗೆ ಬಾಣೆಗಾಗಿ ರೈಲ್ವೆಲೈನನ್ನು ಬದಲಾಯಿಸದೆ ಹೋದರೆ ಗಲಾಟೆಯುಂಟಾಗಬಹುದೆಂಬುದು ಸರಕಾರಕ್ಕೆ ತಿಳಿದು ಬಂದಿದೆಯೊ?

ಉ. (ಎ) ಈ ವಿಷಯ ಸರ್ವೆಯ ಮುಖ್ಯ ಇಂಜಿನೀಯರವರಿಗೆ ತಿಳಿಸಲಾಗಿ ಅವರು ಅದಕ್ಕೆ ಗಮನ ಕೊಟ್ಟಿರುವರು.

(ಬಿ) ಈ ವಿಷಯ ಫಿರ್ಯಾದುಗಳು ಬಂದಿವೆ. ಸರ್ವೆ ಅಧಿಕಾರಿಗಳು ಬದಲಾವಣೆಯ ಲೈನನ್ನು ದೃಷ್ಟಿಯಲ್ಲಿಟ್ಟುಕೊಂಡಿರುವರು.

ಮೆ. ಎಂ. ಎಂ. ಚಿಣ್ಣಪ್ಪನವರು.

144. ಪ್ರ. (ಎ) ಚಿಕ್ಲಿ ಹೊಳೆಯಲ್ಲಿ ನೀರು ಬತ್ತಿ ಹೋದರೆ ರಂಗಸಮುದ್ರ ನಾಲೆಯಬಳಿ ಇರುವ ರೈತರಿಗೆ ಮೊದಲು ನೀರು ಕೊಡಲಾಗುವದೆಂದು ಬಾಳುಗೋಡು ನಾಲೆಯನ್ನು ತೆರೆಯುವ ಮುಂಚೆ ಭಾಷೆಕೊಟ್ಟದ್ದುಂಟೊ?

(ಬಿ) ಈ ನಾಲೆಗಳ ಖರ್ಚಿಗೆ ಎಷ್ಟು ಹಣ ಇಡಲಾಗಿದೆ?

ಉ. (ಎ) ಅಂಥಾ ಭಾಷೆಯು ಏನೂ ಕಂಡುಬರುವದಿಲ್ಲ.

(ಬಿ) ಈ ವರ್ಷ ಬಾಳುಗೋಡುನಾಲೆಗೆ ರೂ. 700, ರಂಗಸಮುದ್ರ ನಾಲೆಗೆ ರೂ. 500 ಇಡಲಾಗಿದೆ.

ಮೆ. ಬಿ. ಶ್ರೀಪತಿರಾಯರು.

145. ಪ್ರ. (ಎ) ಮಡಿಕೇರಿ ಭಾಗಮಂಡಲರಸ್ತೆಯ ವಿಷಯ ಇನ್ನುಮುಂದಕ್ಕೆ ಏನು ಮಾಡಲಾಗುವದೆಂಬದರ ವಿಷಯ ಎಗ್ಸಿಕ್ಯೂಟಿವ್ ಇಂಜಿನೀಯರು ಕೊಡುತ್ತೇನೆಂದು ಹೇಳಿದ ವರದಿಯನ್ನು ಮೇಜಿನಮೇಲೆ ಇಡುವರೊ?

(ಬಿ) ಈ ವರುಷ ಈ ರಸ್ತೆ ಕೆಲಸಕ್ಕೆ ಮಂಜೂರಾದ ಹಣವೆಷ್ಟು ಮತ್ತು ಕೆಲಸದ ತಪಶೀಲೇನು?

ಉ. (ಎ) ಜೂನ್ 19ರಲ್ಲು ಎಗ್ಸಿಕ್ಯೂಟಿವ್ ಇಂಜಿನಿಯರವರು ಈ ರಸ್ತೆಯನ್ನು ಇನ್‌ಸ್ಪೆಕ್ಷನ್ ಮಾಡಿದರು. ಪುನಹ ಸರ್ವೆ ಮಾಡದೆ ರಿಪೋರ್ಟು ತಯಾರಿಸಲಿಕ್ಕಾಗುವುದಿಲ್ಲವೆಂದು ಹೇಳಿದರು. ಈ ಕೆಲಸ ಮಾಡಲು ಒಬ್ಬ ಸರ್ವೆಯರಿಗೆ ಒಂದೂವರೆ ತಿಂಗಳಾಗುವುದು. ಈ ಕೆಲಸಕ್ಕೆ ಬೇಗನೆ ಒಬ್ಬನನ್ನು ನೇಮಿಸಲಾಗುವುದಾದರೂ ಜನವರಿ ಆಖೈರಿಗೆ ಮುಂಚೆ ರಿಪೋರ್ಟು ತಯಾರಾಗುವ ಹಾಗಿಲ್ಲ.

(ಬಿ) 1924-25ಕ್ಕೆ ಒಟ್ಟು 4,400 ರುಪಾಯಿ ಇಡಲಾಗಿದೆ. ಇದರಲ್ಲಿ 2,650 ರುಪಾಯಿ ವಾರ್ಷಿಕ ರಿಪೇರಿಗೂ, 1,750 ರುಪಾಯಿ ಹೊಸ ಕೆಲಸಗಳಿಗೂ ಆಗಿದೆ. ಹೊಸ ಕೆಲಸಗಳ ತಪಸೀಲು ಪಟ್ಟಿ ಇನ್ನು ಮಾಡಲಿಕ್ಕಿದೆ.

ಮೆ. ಕೆ. ಎಂ. ಮಂದಣ್ಣನವರು.

146. ಪ್ರ. (1) ಪೆರಂಬುಕೊಲ್ಲಿ ತೋಟದ ಕರ್ನಲ್ ಬಕ್‌ನಲ್‌ರವರು ಅಲ್ಲಿಗೆ ಒಂದು ಕೇಸನ್ನು ವಿಚಾರಿಸಲು ಹೋದ ಪೋಲೀಸ್ ಸಬ್ ಇನ್‌ಸ್ಪೆಕ್ಟರನ್ನು ಅವರ ಕೆಲಸದಲ್ಲು ಅಡ್ಡಿ ಮಾಡಿದರೆಂದು 'ಕೊಡಗು' ಪತ್ರಿಕೆಯಲ್ಲಿ ಪ್ರಕಟವಾದ ವಿಷಯವು ಸರಕಾರದ ಗಮನಕ್ಕೆ ಬಂದಿದೆಯೊ?

(2) ಸಬ್ ಇನ್‌ಸ್ಪೆಕ್ಟರವರಿಗೆ ರಿಪೋರ್ಟಾದ ಕೇಸು ವಿಚಾರಿಸತಕ್ಕದ್ದೊ, ಅಲ್ಲವೊ?

(3) ಯೂರೋಪಿಯನರ ತೋಟಗಳಿಗೆ ಪೋಲೀಸಿನವರು ಹೋಗಕೂಡದೆಂದು ವಿಶೇಷ ರೂಲುಗಳು ಏನಾದರು ಇವೆಯೊ?

(4) ಈ ವಿಷಯದಲ್ಲಿ ಸರಕಾರದವರು ಏನಾದರೂ ತನಿಖೆ ಮಾಡಿರುವರೊ?

(5) ಈ ಸಮ್ಬಂಧ ರಿಕಾರ್ಡುಗಳನ್ನು ಸರಕಾರದವರು ಕೌನ್ಸಿಲಿನ ಮುಂದೆ ಇಡುವರೊ?

ಉ. (1) ಆ ಲೇಖನವು ಓದಲಾಗಿದೆ. ಆದರೆ ಸಬ್ ಇನ್‌ಸ್ಪೆಕ್ಟರವರ ನಡತೆ ವಿಷಯ ಕರ್ನಲ್ ಬಕ್‌ನಲ್‌ರವರೇ ಮುಂದಾಗಿ ಆ ದಿನ ರಾತ್ರಿ ಸಾಯಂಕಾಲವೇ ಖುದ್ದು ಬಂದು ಪೋಲೀಸ್ ಅಸಿಸ್ಟೆಂಟ್ ಸುಪರಿಂಟೆಂಡೆಂಟರವರಿಗೆ ಫಿರ್ಯಾದು ಹೇಳಿದರು.

(2) ರಿಪೋರ್ಟಾದ ಕೇಸು ವಿಚಾರಿಸತಕ್ಕದ್ದೆ.

(3) ಇಲ್ಲ.

(4) ಕಮೀಷನರವರು ಈ ಸಂಗತಿಯನ್ನು ಎರಡು ಕಡೆಯೂ ವಿಚಾರಿಸಿ ಮುಂದರಿಸುವ ಅವಶ್ಯವಿಲ್ಲವೆಂದು ತೀರ್ಮಾನಿಸಿದರು.

(5) ಆಗುವುದಿಲ್ಲ.

ಮೆ. ಮಂದಣ್ಣನವರು.—ಎರಡು ಕಡೆಯವರಿಗೆ ರಾಜಿ ಮಾಡಲಾಯಿತೆಂದು ತಿಳಕೊಳ್ಳತಕ್ಕದ್ದೊ?

ಕಮೀಷನರು.—ಇಲ್ಲ.

ಮೆ. ಸಿ. ಯಸ್. ವೆಂಕಪ್ಪಯ್ಯನವರು.

147. ಬ್ರಿಟಿಷ್ ಸಾಮ್ರಾಜ್ಯ ಪ್ರದರ್ಶನಕ್ಕೆ ಮರಗಳು ಕಳುಹಿಸಲ್ಪಟ್ಟಿವೆಯೊ, ಕಳುಹಿಸಲ್ಪಟ್ಟಿದ್ದರೆ ಎಷ್ಟು?

ಉ. ಪೂರಾಟವಾದರೆ ಆ ಉತ್ಪತ್ತಿಯು ಕೊಡಗಿಗೆ ಬರುವ ಭಾವನೆಯಿಂದ ಕೊಡಗಿನ ಖರ್ಚಿನಲ್ಲಿ ಈ ಕೆಳಗಿನ ಮರಗಳು ಕಳುಹಿಸಲ್ಪಟ್ಟಿವೆ. ಲಂಡನ್ನಿನ ಹವರ್ಡ್ ಬ್ರದರ್ಸ್ ಕಂಪೆನಿಯವರಿಗೆ (ಮೂರು ತರದ) 2920 ಘನ ಅಡಿ. ಮದ್ರಾಸ್ ಫಾರೆಸ್ಟ್ ಯುಟಿಲೈಸೇಶನ್ ಆಫೀಸರ ಮೂಲಕ 305 ಘನ ಅಡಿ, ಡೇರಾಡನ್ನಿನ ಫಾರೆಸ್ಟ್ ರಿಸರ್ಚ್ ಆಫೀಸರಿಗೆ (5 ತರದ) 45 ಹಲಿಗೆಗಳು, ಮದ್ರಾಸ್ ಫಾರೆಸ್ಟ್ ಯು. ಆಫೀಸರ ಮೂಲಕ ಎಲ್ಲಾ ತರದ ಗಂಧದ ಮರ 4 ಹಂಡ್ರಡ್‌ವೈಟ್ ಮತ್ತು ನಾಲ್ಕುವರೆ ಪೌಂಡು.

ಮೆ. ಕೆ. ಪಿ. ಚಿಣ್ಣಪ್ಪನವರು.

148. ಪ್ರ. (ಎ) 1922-23ರಲ್ಲಿ ಕುಟುಂಪೊಳೆ, ಭಾಗಮಂಡಲ, ಸೋಮವಾರಪೇಟೆ, ಫ್ರೇಜರ್‌ಪೇಟೆ, ತಿತಿಮತಿ, ಕಾರ್ಮಾಡು, ನಾಗರಹೊಳೆ ಮತ್ತು ಮಡಿಕೇರಿ ರೇಂಜುಗಳಲ್ಲಿ ಉತ್ಪತ್ತಿ ಎಷ್ಟು? (ಬಿ) ಖರ್ಚೆಷ್ಟು? ಉ. (ಉತ್ಪತ್ತಿಯ ಮತ್ತು ಖರ್ಚಿನ ಉದ್ದವಾದಪಟ್ಟಿಯು ಕೊಡಲಾಗಿದೆ.)

149. ಪ್ರ. 1922-23ರಲ್ಲು ಫಾರೆಸ್ಟು ಇಲಾಖೆಯಲ್ಲಿ ಜೀವಧನದ ಪೋಷಣೆಯ ಖರ್ಚೆಷ್ಟು ಮತ್ತು ಅವುಗಳ ಕೆಲಸದಿಂದ ಉತ್ಪತ್ತಿ ಎಷ್ಟು?

ಉ. ಪೋಷಣೆಯ ಖರ್ಚು	38,879-12-10
ಕೆಲಸದ ಉತ್ಪತ್ತಿ	47,905-4-11

ಪ್ರಪಂಚದಲ್ಲೆಲ್ಲಾ ಅತ್ಯಂತ ಎತ್ತರವಾದ ಮನುಷ್ಯ.

ಲಂಡನ್ ನಗರಕ್ಕೆ ಈಗ ಕೆಲವು ದಿವಸಗಳ ಹಿಂದೆ ಒಬ್ಬ ಮನುಷ್ಯನು ಯಾಂಡರ್‌ಟನ್ (Anderton) ಹೊಟೇಲಿಗೆ ಬಂದಿಳಿದಿದ್ದನು. ಆತನು ೯ ಅಡಿ ೩½ ಅಂಗುಲ ಎತ್ತರವಾಗಿರುತ್ತಾನೆ. ಆಳು ಎತ್ತರಕ್ಕೆ ತಕ್ಕಂತೆ ಗಾತ್ರದಲ್ಲಿಯೂ ರಾಕ್ಷಸನಂತೆ ಕಾಣುತ್ತಾನೆ. ಜನಗಳು ಆತನನ್ನು ನೋಡುವುದಕ್ಕೆ ಕಿಕ್ಕಿರಿದು ತುಂಬುತ್ತಿದ್ದರು.

ಆತನ ತಂದೆಯ ಹೆಸರು ಆಲ್ಬರ್ಟ್ ವ್ಯಾನ್ ಆಲ್ಬರ್ಟ್, ವಾಸಮಾಡುವುದು ಹಾಲೆಂಡಿನ ಮುಖ್ಯ ಪಟ್ಟಣವಾದ ಆಮ್‌ಸ್ಟರ್‌ಡ್ಯಾಮ್ (Amsterdam). ಚಿತ್ರ ವಿಚಿತ್ರವಾದ ಬುಟ್ಟಿಗಳನ್ನು ತಯಾರಿಸುವುದೇ ಅವನ ಕಸಬು. ಅತನಾದರೋ ೫ ಅಡಿ ೮ ಅಂಗುಲ ಎತ್ತರವುಳ್ಳವನಾಗಿರುತ್ತಾನೆ. ಮನೆಯವರಲ್ಲಿ ಮತ್ಯಾರೂ ಅಷ್ಟು ಎತ್ತರವಾಗಿಲ್ಲ.

ಲಂಡನ್ ನಗರದಲ್ಲಿ ಇಳಿದಿದ್ದ ಎತ್ತರ ಮನುಷ್ಯನು ಯಾವಾಗಲೂ ಉದ್ದವಾಗಿಯೇ ಇದ್ದನು. ಏಳು ವರುಷದಲ್ಲಿ ಕೂಡ ೭ ಅಡಿ ಎತ್ತರ ಇದ್ದನೆಂದು ಹೇಳಿರುವನು.

ಈತನ ಪ್ರಾತಃಕಾಲದ ಉಪಹಾರವು ರಾಕ್ಷಸನಂತೆ ಬಹು ಅಮಾನುಷಕರವಾಗಿದೆ:—

೧೨ ಮೊಟ್ಟೆಗಳು.

೩ ಬೇಯಿಸಿದ ಮೀನುಗಳು.

ಒಂದು ದೊಡ್ಡ ಮಾಂಸದ ತುಂಡು.

೨ ತಟ್ಟೆಗಳ ತುಂಬ 'ಓಟ್‌ಮೀಲ್' ಉಪಹಾರ,

೭ ರೊಟ್ಟಿಯ ತುಂಡುಗಳು ಮತ್ತು ಟೀ,

೮ ಬಟ್ಟಲು ತುಂಬ ಟೀ ಪಾನ.

ಆತನು ಎತ್ತರವಾದ ಟೋಪಿಯನ್ನೂ 'ಫ್ರಾಕ್' ಎಂಬ ಮೇಲಂಗಿಯನ್ನೂ ಧರಿಸುವನು. ಸಾಧಾರಣವಾದ 'ಸಿಗಾರ್' ಎಂಬ ಹೊಗೆಸುತ್ತನ್ನು ಸೇದುವನು. ಗಾಡಿಯಲ್ಲಿ ಕುಳಿತರೆ ಇವನ ಭಾರಕ್ಕೆ ಕುಸಿದು ಬೀಳುವುದಂತೆ! ದೈವಸೃಷ್ಟಿಯಲ್ಲಿ ಇದೊಂದು ಅಘಾದವಾದ ವ್ಯಕ್ತಿ.

ದೇಶೀಯರಲ್ಲಿ ವಿನಂತಿ.

ದೇಶಬಾಂಧವರೇ,

"ಕೊಡಗು" ಪತ್ರಿಕೆಯು ನಮ್ಮ ದೇಶಕ್ಕೆ ಮಾಡಿದ ಸೇವೆಯು ಅಸಾಧಾರಣವಾದುದೆಂದು ತಾವೆಲ್ಲರೂ ಒಪ್ಪುತ್ತೀರಿ. ಇದನ್ನು ಅರಿತೂ ಕೂಡಾ ತಮಗಳ ಪರಸ್ಪರ ಸಹಾಯವು ಈ ಪತ್ರಿಕೆಯ ಚಂದಾದಾರರನ್ನು ಹೆಚ್ಚಿಸುವ ಬಗ್ಗೆ ಕಡಮೆಯಾದುದು ಕೇವಲ ವ್ಯಸನಕರ. "ಕೊಡಗು" ಪತ್ರಿಕೆಯ ಪ್ರಯೋಜನವನ್ನು ಎಷ್ಟು ವರ್ಣಿಸಿದರೂ ಸಾಲದು. ಈ ಪತ್ರಿಕೆಯನ್ನು ಲಾಭ ಪಡೆಯುವ ಉದ್ದೇಶದಿಂದ ಹೊರಡಿಸಲಿಲ್ಲ. ಪತ್ರಿಕೆಯನ್ನು ತಮ್ಮಲ್ಲಿ ಹುಟ್ಟಿದ ಒಂದು ಮಗುವಿನೋಪಾದಿಯಲ್ಲಿ ಕಂಡು, ಮಗುವಿನ ವಿದ್ಯಾಭ್ಯಾಸಕ್ಕೆ ವರ್ಷಕ್ಕೆ ರೂ. 3-8-0 ದಯವಿಟ್ಟು ಕೊಡುವಿರಾಗಿ ಹಾರೈಸುತ್ತೇನೆ. ದೇಶದವರೆಲ್ಲರೂ ಕೂಡಿಮಾಡಿದ ಒಂದೇ ಒಂದು ಪತ್ರಿಕೆಯನ್ನು ಓದುವವರು ಸಾಕಷ್ಟು ಜನರು ಇಲ್ಲವೆಂಬುದು ಬಹಳ ಆಕ್ಷೇಪಣೆಯೆಂದು ಹೇಳುವುದರಿಂದ ಪ್ರಯೋಜನವಿಲ್ಲ. ಆದ್ದರಿಂದ ಮಹನೀಯರೇ, ತಮ್ಮ ಉತ್ಸಾಹವನ್ನು ಪತ್ರಿಕೆಗೆ ಹೆಚ್ಚು ಚಂದಾದಾರರನ್ನು ಮಾಡುವ ಉದ್ದೇಶದಲ್ಲಿ ತೋರಿಸಬೇಕಾಗಿ ಕೋರುತ್ತೇನೆ.

ಶೇರುದಾರರುಗಳಲ್ಲಿ ಪುನಃ ಇನ್ನೊಂದು ವಿಜ್ಞಾಪನೆ—ತಮಗಳ ಶೇರಿನ ಒಂದು ಮತ್ತು ಎರಡನೇ ಕಿಸ್ತಿನ ಹಣವು ಅನೇಕರಿಂದ ಪಾವತಿಯಾಗಿರುವದಿಲ್ಲ. ರೂಲ್‌ಮೇಲೆ ಒಡನೆ ಪಾವತಿಮಾಡದಿದ್ದರೆ, ಕೊಟ್ಟ ಹಣವು ಕಳಕೊಳ್ಳಲಾಗುತ್ತೆ. ಆದ್ದರಿಂದ ಅಂಥಾದ್ದಕ್ಕೆ ಆಸ್ಪದ ಕೊಡದ ಹಾಗೂ, ಒಡನೇ ಕಂಪೆನಿಗೆ ಪಾವತಿಮಾಡಿ ರಶೀತಿ ಪಡೆಯುವಂತೆಯೂ, ಎಲ್ಲಾ ಶೇರುದಾರರುಗಳಲ್ಲಿ ಅತಿವಿನಯದಿಂದ ಅಪ್ಪೀಲುಮಾಡಿಕೊಳ್ಳುತ್ತೇನೆ.

ತಮಗಳ ಸೇವಕ,
ಕೋದಂಡ ಉತ್ತಯ್ಯ,
ಆರ್ಗನೈಜಿಂಗ್ ಡೈರೆಕ್ಟರ್.

LOOK SHARP! PLEASE LOOK SHARP!

For Superior rugs, shawls, silk and cotton banians of different varieties, sarees, socks, silk coating and shirting, tweed etc., etc., place your orders with the undersigned. Samples may be examined before placing orders at Messrs. H. C. Raja & Bros., Brahmin Valley, Mercara.

B. S. VENKAT RAO,
Silk Cloth Agent, Mercara.

ದಯವಿಟ್ಟು ಗಮನಕೊಡಿ! ಸುಲಭ ಕ್ರಯ!

ಉತ್ತಮ ತರದ ರಗ್ಗುಗಳು, ರೇಶ್ಮೆ ಮತ್ತು ನೂಲಿನ ಬನಿಯನ್ನುಗಳು, ರೇಶ್ಮೆ ಕೋಟಿನ ಮತ್ತು ಷರಟಿನ ಬಟ್ಟೆಗಳು, ತರಹವಾರಿ ಸೀರೆಗಳು, ಪ್ಲಾನೆಲ್ ಮತ್ತು ಟ್ವೀಡುಗಳು, ಕಾಲು ಚೀಲಗಳು ಮತ್ತು ಇತರ ಬಟ್ಟೆಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ಹೆಚ್ಚಾಗಿ ಕೊಡತಕ್ಕ ಹಣವನ್ನು ಉಳಿಸಿಕೊಳ್ಳಿ. ಬಟ್ಟೆಗಳ ಸ್ಯಾಂಪಲುಗಳನ್ನು ಮೆ. ಹೆಚ್. ಸಿ. ರಾಜ ಅಂಡ್ ಬ್ರದರ್ಸ್, ಬ್ರಾಹ್ಮಣರ ಬೀದಿ, ಮಡಿಕೇರಿ, ಇವರ ಅಂಗಡಿಯಲ್ಲಿ ನೋಡಬಹುದು.

ಬಿ. ಯಸ್. ವೆಂಕಟರಾವ್,
ರೇಶ್ಮೆ ಬಟ್ಟೆಗಳ ಏಜೆಂಟ್,
ಮಡಿಕೇರಿ

MOTOR CYCLE FOR SALE.

A. J. S. Motor cycle 3-500 C.C. A high class English Machine imported direct from makers. Very little used, and open for any trial or expert examination. Original cost about Rs. 1,600.

Apply stating offers, to 'Motor cycle' C/o The Editor 'Kodagu,' Mercara.

ಸೂಚನೆ.

ಉತ್ತರಿಹಬ್ಬದ ಕಾರಣ ತಾ. ೧೯—೧೨—೨೪ರ "ಕೊಡಗು" ಪತ್ರಿಕೆಯು ಪ್ರಕಟವಾಗುವುದಿಲ್ಲವೆಂನ್ನು ಈ ಮೂಲಕ ನಮ್ಮ ವಾಚಕರಿಗೆ ತಿಳಿಸಲಾಗಿದೆ.

ಸಂ.

ವರ್ತಮಾನ ಸಂಗ್ರಹ.

ಒಳದೇಶ.

ಕಳೆದ ತಾರೀಕು 29ನೇ ಶನಿವಾರ ಬೆಳಿಗ್ಗೆ ಪಟ್ರಪಂಡ ಸುಬ್ಬಣ್ಣನವರ ಮಗ ಅಚ್ಚಯ್ಯನೆಂಬ, ವೀರಾಜಪೇಟೆ ಶಾಲೆಯ ಸೆಕೆಂಡ್ ಫಾರಮಿನ ವಿದ್ಯಾರ್ಥಿಯು ತನ್ನ ಬಾವನಾದ ಕಾವಾಡಿ ಗ್ರಾಮದ ನೆಲ್ಲಮಕ್ಕಳ ದೇವಯ್ಯನವರ ಮನೆಯ ಹಿಂದುಗಡೆ ಹಿತ್ತಲಲ್ಲಿ ಕೋವಿಯಿಂದ ಗುಂಡು ಹೊಡೆದುಕೊಂಡು ಆತ್ಮಹತ್ಯ ಮಾಡಿಕೊಂಡನೆಂದು ತಿಳಿಯುತ್ತೇವೆ.

ವೀರಾಜಪೇಟೆ ಶಾಲೆಯ ಕ್ಲಾರ್ಕ್ ಆಗಿದ್ದ ಚೆಟ್ರಂಡ ಚೀಯಣ್ಣನು ಸ್ಕೂಲುಫೀಸು ಸುಮಾರು 1,020 ರುಪಾಯಿಗಳನ್ನು ಟ್ರೆಜರಿಗೆ ಕಳುಹಿಸದೆ ಅಲ್ಲಿಯ ಶಿರಸ್ತೆದಾರರ ರುಜುವನ್ನು ಫೋರ್ಜರಿಮಾಡಿದ್ದು ಕಳೆದ ಜೂಲೈ ತಿಂಗಳಲ್ಲಿ ಕಂಡುಹಿಡಿಯಲ್ಪಟ್ಟು ಕೇಸು ನಡಿಸಿದ್ದರಲ್ಲಿ ಶೆಷನ್ ಜಡ್ಜಿಯವರ ಕೋರ್ಟಿನಲ್ಲಿ ತಾ. 6ರಲ್ಲಿ ಚೀಯಣ್ಣನಿಗೆ ಮೂರು ವರುಷ ಕಠಿಣ ಸಜೆಯು ವಿಧಿಸಲಾಯಿತು.

ಈ ತಿಂಗಳು 26ನಲ್ಲಿ ಬೆಳ್ಗಾಮಿನಲ್ಲಿ ಪ್ರಾರಂಭವಾಗುವ ಇಂಡಿಯನ್ ನೇಶನಲ್ ಕಾಂಗ್ರೆಸ್ಸಿಗೆ ಕೊಡಗಿನಿಂದ ಸುಮಾರು ಇಪ್ಪತ್ತೈದು ಮಹನೀಯರು ಸ್ವಾಗತ ಮಂಡಳಿಯ ಮೆಂಬರುಗಳಾಗಿ ಬೆಳ್ಗಾಮಿಗೆ ಹೋಗುವರೆಂದುತಿಳಿಯಲು ಸಂತೋಷಪಡುತ್ತೇವೆ.

ನಮಗೆ ಟ್ರೆಡಲ್ ಮೆಶಿನು ಬಂದು ತಲಪಿರುವುದರಿಂದ ಸಣ್ಣ ಮತ್ತು ದೊಡ್ಡ ಪ್ರಿಂಟಿಂಗ್ ಕೆಲಸಗಳು ಇಂಗ್ಲೀಷಿನಲ್ಲಿಯೂ ಮತ್ತು ಕನ್ನಡದಲ್ಲಿಯೂ ಅಗ್ಗವಾಗಿಯೂ ಅಂದವಾಗಿಯೂ ಪ್ರಿಂಟ್‌ಮಾಡಲಾಗುವುವು. ಆದುದರಿಂದ ಮಹನೀಯರೆಲ್ಲರೂ ತಮ್ಮ ಯಾವ ಪ್ರಿಂಟಿಂಗ್ ಕೆಲಸವಿದ್ದರೂ ನಮ್ಮಲ್ಲಿಗೆ ಕಳುಹಿಸಿ ದೇಶಸೇವೆ ಮಾಡುತ್ತಿರುವ ನಮ್ಮ ಪತ್ರಿಕೆಯ ಕೆಲಸಕ್ಕೆ ಸಹಾಯಮಾಡಬೇಕಾಗಿ ಕೋರುತ್ತೇವೆ.

ಒಂದುವರ್ಷ ರಜೆಯಲ್ಲಿದ್ದ ಪೋಲೀಸ್ ಇನ್ಸ್‌ಪೆಕ್ಟರ್ ಮ। ಕೋದಂಡ ಐಯ್ಯಣ್ಣನವರಿಗೆ ಪುನಹ ನವಂಬರ್ 1 ರಿಂದ 2 ತಿಂಗಳು ರಜೆಕೊಡಲಾಗಿದೆ.

ಪೋಲೀಸ್ ಅಸಿಸ್ಟೆಂಟ್ ಸುಪರಿಂಟೆಂಡೆಂಟರಾದ ರಾ. ಸಾ. ಪಟ್ಟಮಾಡ ದೇವಯ್ಯನವರು ಕೊಯಮುತ್ತೂರಿನಲ್ಲಿ ತಾ. 26-11-24 ರಲ್ಲಿ ನಡೆದ ಸದರ್ನ್ ರೇಂಜ್ ಪೊ. ಸುಪರಿಂಟೆಂಡೆಂಟರುಗಳ ವಾರ್ಷಿಕ ಕಾನ್‌ಫರೆನ್ಸಿಗೆ ಹೋಗಿ, ವಾಪಾಸು ಬಂದಿರುವರು.

ಮಡಿಕೇರಿಮತ್ತು ವೀರಾಜಪೇಟೆ ಹೈಸ್ಕೂಲುಗಳಿಗೆ ಉತ್ತರಿ ಮತ್ತು ಕ್ರಿಸ್ಮಸ್ ಹಬ್ಬಗಳಿಗಾಗಿ ಈ ತಾ 9 ರಿಂದ ಜನವರಿ 5ರ ವರೆಗ ರಜೆ ಬಿಡಲಾಗಿದೆ. ಮಡಿಕೇರಿ ಹುಡುಗಿಯರ ಹೈಸ್ಕೂಲಿಗೆ ಈ ತಾ. 6 ರಿಂದ ಜನವರಿ 15ರವರೆಗೆ ರಜೆ ಕೊಟ್ಟಿರುವರು.

ಈ ವಾರ ಕೆಲವು ದಿವಸ ಮಳೆಮೋಡವು ಬಲವಾಗಿತ್ತು. ತಾ 5, 6ರಲ್ಲಿ ಮಡಿಕೇರಿಯಲ್ಲಿ ಸ್ವಲ್ಪ ಸ್ವಲ್ಪ ಮಳೆ ಹನಿತು. ತಾ. 7ಮತ್ತು 8ರ ರಾತ್ರಿಗಳಲ್ಲೂ ಬಲವಾದ ಮಳೆಗಳು ಬಿದ್ದವು.

ಕಾಫಿ ಮತ್ತು ಯಾಲಕ್ಕಿಯ ಧಾರಣೆಯಲ್ಲಿ ಹೆಚ್ಚು ಕಮ್ಮಿ ಏನೂ ಆಗಿರುವದಿಲ್ಲ. ಆದರೆ ಭತ್ತದ ಕ್ರಯವು ವೀರಾಜಪೇಟೆಯಲ್ಲಿ ಕಳೆದವಾರ 105 ರುಪಾಯಿವರೆಗೆ ಇತ್ತೆಂದು ವರ್ತಮಾನ.

ಉತ್ತರಿ ಹಬ್ಬದಕಾರಣ "ಕೊಡಗು" ಆಫೀಸು ಈ ತಾ. 10ರಿಂದ 19ರ ವರೆಗೆ ಮುಚ್ಚಲ್ಪಟ್ಟಿದೆ.

ಉತ್ತರ ಕೊಡಗಿನ ಸಹಕಾರಿ ಸಂಘಗಳ ಗೌರವ ಆರ್ಗನೈಜರಾಗಿದ್ದ ಮ. ಮನಿಯಪಂಡ ಬೆಳ್ಯಪ್ಪನವರು ತಮ್ಮ ಆ ಕೆಲಸಕ್ಕೆ ರಾಜಿನಾಮೆ ಕಳುಹಿಸಿರುವರು.

ಸೋಮವಾರಪೇಟೆ ಸಂತೆಕಾಡು ತೋಟದ ರೈಟರು ಸೂರಪ್ಪನವರ ಪತ್ನಿಯು ಇದೇ ತಾರೀಕು 8ನೇ ದಿನ ಸಾಯಂಕಾಲ 8 ಗಂಟೆ ಸಮಯಕ್ಕೆ ಮಡಿಕೇರಿ ಆಸ್ಪತ್ರೆಯಲ್ಲಿ 2 ಗಂಡು ಮತ್ತು 1 ಹೆಣ್ಣು ಮಕ್ಕಳನ್ನು ಹೆತ್ತು 3 ಮಕ್ಕಳೂ ಮತ್ತು ತಾಯಿಯೂ ಸಹ ಸೌಖ್ಯದಲ್ಲಿರುವರು.

ವಿಮರ್ಶೆ

ಸನ್ 1925ನೇ ಇಸವಿಯ ಸರಸ್ವತಿ ಪಾಕೆಟ್ ಡೈರಿ ಒಂದನ್ನು ನಾವು ಮುದನೆಯಿಂದ ಸ್ವೀಕಾರ ಮಾಡುತ್ತೇವೆ. ಕ್ಯಾಲಿಕೋದಿಂದ ಅಂದವಾಗಿ ಬೈಂಡು ಮಾಡಲ್ಪಟ್ಟಿರುವ ಈ ಚಿಕ್ಕ ಡೈರಿಯಲ್ಲಿ ದಿವಸಕ್ಕೊಂದು ಪುಟ ಬರೆಯಲಿಕ್ಕೆ ಇಟ್ಟಿರುವುದಲ್ಲದೆ ಎಲ್ಲರಿಗೂ ಉಪಯುಕ್ತವಾದ ಕರಾರು ಪತ್ರಗಳ ರಿಜಿಸ್ಟ್ರೇಶನ್ ದರಗಳು, ಪೋಸ್ಟ್ ಮತ್ತು ಟೆಲಿಗ್ರಾಫ್ ತಿಳುವಳಿಕೆಗಳು, ಬಡ್ಡಿ ದರ, ನಕ್ಷತ್ರ ಫಲಗಳು, ಶಕುನಗಳು, ಹಿಂದೂ, ಮುಸಲ್ಮಾನ್ ಮತ್ತು ಕ್ರೈಸ್ತರ ಹಬ್ಬದ ಪಟ್ಟಿಗಳೇ ಮೊದಲಾದ ಸಂಗತಿಗಳು ಅಡಕವಾಗಿವೆ. ಇದರ ಪ್ರತಿಗಳು, ಸರಸ್ವತಿ ಪ್ರಿಂಟಿಂಗ್ ವರ್ಕ್ಸ್ ಲಿಮಿಟೆಡ್, ಮಂಗಳೂರು, ಇಲ್ಲಿ ದೊರೆಯುವವು.

ಹಿಂದೂ ದೇಶ.

ದಕ್ಷಿಣ ಹಿಂದೂ ದೇಶದ ಘನವಂತ ಮಳೆಗರಾದ ಡಾಕ್ಟರ್, ಯಸ್. ಸುಬ್ರಮಣ್ಯ ಐಯ್ಯರ್‌ರವರು ತಮ್ಮ 82ನೇ ವಯಸ್ಸಿನಲ್ಲಿ ಈ ತಾರೀಕು 5ರಲ್ಲಿ ಗಿಂಡಿಯಲ್ಲಿ ಶಿವಾಧೀನರಾದರು.

ಈ ವರುಷದ ಇಂಡಿಯನ್ ನೇಶನಲ್ ಸೋಶ್ಯಲ್ ಕಾನ್‌ಫರೆನ್ಸ್ ಈ ತಾರೀಕು 27, 28 ಮತ್ತು 29ರಲ್ಲಿ ಬೆಳ್ಗಾಮಿನಲ್ಲಿ ನಡೆಯುವುದು. ಇಂಗ್ಲೆಂಡಿನಿಂದ ಈಗ ತಾನೇ ವಾಪಾಸು ಬಂದಿರುವ ಸರ್ ಶಂಕರ್ ನಾಯರವರು ಇದರ ಅಧ್ಯಕ್ಷಸ್ಥಾನವನ್ನು ವಹಿಸಲು ಒಪ್ಪಿಕೊಂಡಿರುವರು.

ಮ। ವಿ. ಜೆ. ಪಟೇಲರವರು ಬೊಂಬಾಯಿ ಮುನಿಸಿಪಾಲಿಟಿಯ ಅಧ್ಯಕ್ಷ ಪದವಿಗೆ ತಾರೀಕು 5ರಲ್ಲಿ ರಾಜಿನಾಮೆ ಕೊಟ್ಟರು. ಆದರೂ ಆ ದಿನದ ಮೀಟಿಂಗನ್ನು ನಡಿಸಲು ಅವರನ್ನೇ ಅಧ್ಯಕ್ಷರನ್ನಾಗಿ ಬಹು ಮತದವರು ಚುನಾಯಿಸಿಕೊಂಡರು.

ಬರುವ ಕಾಂಗ್ರೆಸ್ ವಾರದಲ್ಲಿ ಬೆಳ್ಗಾಮಿನಲ್ಲಿ ನಡೆಯಲಿಕ್ಕಿರುವ ಅಖಿಲ ಭಾರತ ಪುಸ್ತಕಾಲಯಗಳ ಮೂರನೆ ಕಾನ್‌ಫರೆನ್ಸಿನ ಅಧ್ಯಕ್ಷರಾಗಲು ಮ। ಸಿ. ಆರ್. ದಾಸ್‌ರವರು ಒಪ್ಪಿರುವರು.

ಲೀ ಕಮೀಷನಿನ ರಿಪೋರ್ಟಿನ ಮೇಲೆ ಬ್ರಿಟಿಷ್ ಸರ್ಕಾರದ ತೀರ್ಮಾನವು ಡೆಲ್ಲಿಯಲ್ಲಿ ತಾ. ೨ರಲ್ಲಿ ಪ್ರಕಟವಾಯಿತು. ಸಿವಿಲ್ ಸರ್ವೀಸಿನವರ ಸಂಬಳವನ್ನು ಪೆನ್ಶನನ್ನು ಹೆಚ್ಚಿಸುವುದಕ್ಕೂ, ಅವರಿಗೆ ಇಂಗ್ಲೆಂಡಿಗೆ ಹೋಗಿಬರುವ ಖರ್ಚನ್ನು ಕೊಡುವುದಕ್ಕೂ, ಈ ಬಾಬುಗಳ ಹೆಚ್ಚಿನಖರ್ಚಿನಮೇಲೆ ನ್ಯಾಯವಿಧಾಯಕ ಸಭೆಗಳಿಗೆ ಓಟುಮಾಡುವ ಹಕ್ಕಿಲ್ಲವೆಂಬದಕ್ಕೂ ಸರ್ಕಾರದವರು ಒಪ್ಪಿರುವರು. ಈ ವಿಷಯಗಳು ಕಳೆದ ಎಪ್ರಿಲ್‌ನಿಂದ ಜಾರಿಗೆ ಬರುವಂತೆಯೂ ಮಂಜೂರು ಮಾಡಿರುವರು.

ಅಕಾಲಿಗಳ ಚಳವಳದ ವಿಷಯ ವಿಚಾರಿಸಲು ಏರ್ಪಡಿಸಿರುವ ಕಮಿಟಿಯ ಅಧ್ಯಕ್ಷಸ್ಥಾನವನ್ನು ಮ। ಗಾಂಧಿಯವರ ಸೂಚನೆಮೇರೆ ಡಾಕ್ಟರ್ ಕಿಚ್ಲೂರವರು ಸ್ವೀಕರಿಸಿರುವರು.

ಕಾಂಗ್ರೆಸ್ಸಿನ ಸಮಯದಲ್ಲಿ ಬೆಳ್ಗಾಮಿನಲ್ಲಿ ಬ್ರಾಹ್ಮಣೇತರರ ಕಾನ್‌ಫರೆನ್ಸು ಒಂದು ನಡೆಯುವುದು. ಇದಕ್ಕೆ ದಕ್ಷಿಣ ಹಿಂದೂಸ್ಥಾನದ ಬ್ರಾಹ್ಮಣೇತರರೂ ಸೇರಬೇಕೆಂದು ದಕ್ಷಿಣ ಹಿಂದೂಸ್ಥಾನದ ಲಿಬರಲ್ ಫೆಡರೇಶನಿನವರು ತೀರ್ಮಾನಿಸಿರುವರು.

ದೇಶಬಂಧು ದಾಸರವರು ಎಂಟು ಲಕ್ಷ ರುಪಾಯಿ ಬೆಲೆ ಬಾಳುವ ತಮ್ಮ ಆಸ್ತಿಯನ್ನು ಪರೋಪಕಾರದ ಕೆಲಸಕ್ಕಾಗಿ ಐದು ಮೆಂಬರುಗಳ ಒಂದು ಕಮಿಟಿ ವಶಕ್ಕೆ ಬಿಟ್ಟುಕೊಟ್ಟಿರುವರು. ಅವರು ಸ್ವಲ್ಪ ಬಾಗವನ್ನು ಕ್ರಯಕ್ಕೆ ತೆಗೆದುಕೊಂಡು ಅಲ್ಲಿ ಒಂದು ಸಣ್ಣ ಮನೆ ಕಟ್ಟಿ ವಾಸ ಇರುವರಂತೆ. ಈಗ ಅವರಿಗೆ ತಿಂಗಳಿಗೆ 200ರಿಂದ 300 ರುಪಾಯಿ ವರೆಗೆ ಉತ್ಪತ್ತಿ ಮಾತ್ರ ಉಳಿದಿದೆ. ಇದು ನಿಜವಾಗಿಯೂ ಶ್ಲಾಘನೀಯವಾದ ಸ್ವಾರ್ಥ ತ್ಯಾಗನಲ್ಲವೆ?

ಸರ್ ಅಬ್ದುರ್ ರಹೀಮ್ ಬಹದ್ದೂರ್‌ರವರು ಕಲ್ಕತ್ತೆಯ ಶೆರೀಫರಾಗಿ ನೇಮಿಸಲ್ಪಟ್ಟಿರುವರು. ಅವರು ತಾ 20ರಲ್ಲಿ ಸರ್ ಡಬ್ಲ್ಯು. ಎಲ್. ಕೇರಿಯವರಿಂದ ಪಟ್ಟದ ಚಾರ್ಜನ್ನು ವಹಿಸಿಕೊಳ್ಳುವರು.

ಮೈಸೂರಾಯರ ಸ್ವಾಗತಕ್ಕೆ ಅಧ್ಯಕ್ಷರಾದ ಮ। ಪಟೇಲರವರು ಸೇರಬೇಕೆಂದು ಬೊಂಬಾಯಿ ಮುನಿಸಿಪಲ್ ಕಮಿಟಿಯು ಬಹುಮತದಿಂದ ತೀರ್ಮಾನಿಸಿದರೂ ಕೂಡ ಪಟೇಲರವರು ಸ್ವಾಗತಕ್ಕೆ ಹೋಗಲಿಲ್ಲ. ಆದುದರಿಂದಲೇ ಅವರು ಅಧ್ಯಕ್ಷಸ್ಥಾನಕ್ಕೆ ರಾಜಿನಾಮೆ ಕೊಟ್ಟದ್ದಾಗಿದೆ.

ವೈಸರಾಯರು ಕಲ್ಕತ್ತೆಕ್ಕೆ ಬರುವಾಗ ಆ ಮುನಿಸಿಪಾಲಿಟಿಯ ಅಧ್ಯಕ್ಷರಾದ ಶ್ರೀಯುತ ದಾಸ್‌ರವರು ಸ್ವಾಗತಕ್ಕೆ ಸೇರಬೇಕೆಂದು ತೀರ್ಮಾನಿಸಲಿಕ್ಕೆ ಮುನಿಸಿಪಾಲಿಟಿಯ ಮೀಟಿಂಗು ಒಂದು ನಡೆದುದರಲ್ಲಿ ಬಹುಮತದವರು ಅಧ್ಯಕ್ಷರು ಸೇರಕೂಡದೆಂದು ತೀರ್ಮಾನಿಸಿದರು.

ಖಿಲಾಫತ್ ಕಾನ್‌ಫರೆನ್ಸು ಬೆಳ್ಗಾಮಿನಲ್ಲಿ ಕಾಂಗ್ರೆಸ್ ಚಪ್ಪರದಲ್ಲಿಯೇ ತಾರೀಕು 24, 25ರಲ್ಲಿ ನಡೆಯುವುದು.

ಅಮೇರಿಕದ ಮೆತೋಡಿಸ್ಟ್ ಬೋಧಕರಾದ ಡಾಕ್ಟರ್ ಬ್ಲೇಕ್‌ಸ್ಲೀಯವರು ಲಾಹೋರಿನಲ್ಲಿ ಭಾಷಣ ಮಾಡಿದಾಗ, ಅಮೇರಿಕದಲ್ಲಿ ಸರಕಾರದವರು ಮಾಡಿರುವ ನಿಶಾ ನಿಷೇಧದ ಕಾನೂನು ಜಯ ಹೊಂದಿರುವದಿಲ್ಲವೆಂದು ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿರುವುದು ಸುಳ್ಳೆಂತಲೂ, ಈ ಕಾನೂನಿನಿಂದ ಅಮೇರಿಕದಲ್ಲಿ 180,000 ಅಮಲು ಪದಾರ್ಥ ಮಾರಾಟದ ಅಂಗಡಿಗಳು ಮುಚ್ಚಲ್ಪಟ್ಟದ್ದರಿಂದ ಕುಡಿಕತನವು ಕಡಿಮೆಯಾಗಿ, ಪಾಪಕೃತ್ಯಗಳೂ, ಕಲಹಗಳೂ, ಆತ್ಮಹತ್ಯವೂ, ದುಷ್ಕೃತ್ಯವೂ ಮೊದಲಾಗಿ ಕಮ್ಮಿಯಾಗಿರುವದಲ್ಲದೆ, ಜನರಲ್ಲಿ ಒಳ್ಳೇ ಗುಣಗಳೂ, ಸಂತೋಷವೂ, ಆರೋಗ್ಯವೂ ಹೆಚ್ಚಾಗಿರುವುದೆಂದೂ ಮುಂತಾಗಿಯೂ ಹಿಂದೂದೇಶದವರು ಪೂರ್ತಿನಿಷೇಧಕ್ಕೆ ಒಗ್ಗಟ್ಟಾಗಿ ಬಿಡದೆ ಪ್ರಯತ್ನಿಸಬೇಕೆಂದೂ ಅಪ್ಪೀಲು ಮಾಡಿದರು.

ಅಮೃತಸರದ ಮುನಿಸಿಪಲ್ ಕಮಿಟಿಯವರು ಮಹಾತ್ಮ ಗಾಂಧಿಯವರು ಅಲ್ಲಿಗೆ ಹೋಗುವಾಗ್ಯೆ ಸ್ವಾಗತಪತ್ರವನ್ನು ಕೊಡಕೂಡದೆಂದು ಬಹುಮತದಿಂದ ತೀರ್ಮಾನಿಸಿದರು. ಇದನ್ನು ವಿರೋಧಿಸಲು ಒಂದು ಪಬ್ಲಿಕ್ ಮೀಟಿಂಗ್ ಮಾಡಲಾಯಿತು.

ವಿದೇಶ.

ಲಂಡನಿನಲ್ಲಿರುವ ಇಂಡಿಯನ್ ಎಸೋಸಿಯೇಶನಿನ ಮೀಟಿಂಗು ಒಂದು ಮ। ವಕೀಲರವರ ಅಧ್ಯಕ್ಷತೆಯಲ್ಲಿ ನಡೆದು ಬಂಗಾಳ ಆರ್ಡಿನೇನ್ಸನ್ನು ನಿಷೇಧಿಸಿಯೂ, ಈಜಿಪ್ಟಿನವರಿಗೆ ಸಹಾನುಭೂತಿಯನ್ನು ತೋರಿಸಿಯೂ ಠರಾವುಗಳು ಪಾಸು ಮಾಡಲಾದುವು.

ಬ್ರಿಟಿಷ್ ಸಾಮ್ರಾಜ್ಯದ ಪ್ರದರ್ಶನದ ಎಗ್ಸಿಕ್ಯುಟಿವ್ ಕಮಿಟಿಯವರು ವೆಂಬ್ಲಿ ಪ್ರದರ್ಶನವನ್ನು 1925ನೇ ವರ್ಷದಲ್ಲಿಯೂ ನಡಿಸಬೇಕೆಂದು ತೀರ್ಮಾನಿಸಿರುವರು.

ಈಜಿಪ್ಟಿಗೆ 1922ರಲ್ಲಿ ಕೊಟ್ಟಿರುವ ಸ್ವತಂತ್ರ (ಇಂಡಿಪೆಂಡೆನ್ಸ್) ವನ್ನು ಎಂದಿಗೂ ವಾಪಾಸುತೆಗೆಯುವದಿಲ್ಲವೆಂದೂ, ಆದರೆ ಅಗ್ರಸೂಚಿಸಿದ ಶರತ್ತುಗಳನ್ನು ನಡಿಸುವುದು ಎರಡು ಕಡೆಯವರ ಕರ್ತವ್ಯವೆಂದು ಬ್ರಿಟಿಷ್ ಪ್ರಧಾನಮಂತ್ರಿಯಾದ ಮ। ಬಾಲ್ಡ್‌ವಿನ್‌ರವರು ಒಂದು ಭಾಷಣದಲ್ಲಿ ಸೂಚಿಸಿರುವರು. ಇಂಗ್ಲೆಂಡಿನಲ್ಲಿರುವ ಈಜಿಪ್ಟಿನ ಕೆಲವರು ಬ್ರಿಟಿಷ್ ಮಂತ್ರಿಗಳನ್ನು ಕೊಲ್ಲಲು ಗುಪ್ತ ಏರ್ಪಾಡುಮಾಡುತ್ತಿರುವರೆಂದು ಲಂಡನಿನಲ್ಲಿ ವರ್ತಮಾನಹುಟ್ಟಿ, ವೈಟ್ ಹಾಲಿನಲ್ಲಿ ಗುಪ್ತಚಾರರನ್ನು ನೇಮಿಸಿರುವದಲ್ಲದೆ ಮಂತ್ರಿಗಳ ಮಿಲಿಟರಿ ಪಹರೆಯನ್ನು ಭದ್ರಪಡಿಸಿರುವರು.

ಬ್ರಿಟನ್ನಿನ ಪಾರ್ಲಿಮೆಂಟಿನಲ್ಲಿರುವ ಲೇಬರ್‌ಪಾರ್ಟಿಯವರು ಮ। ರಾಮ್ಸೆ ಮೆಕ್ಡೊನಾಲ್ಡ್‌ರವರನ್ನು ತಮ್ಮ ಮುಂದಾಳಾಗಿ ಚುನಾಯಿಸಿಕೊಂಡಿರುವರು.

ಪ್ರಿನ್ಸ್ ಮತ್ತು ಪ್ರಿನ್ಸೆಸ್ ಆರ್ತರ್ ಆಫ್ ಕಾನ್ನಟ್‌ರವರು ಫ್ರಾನ್ಸಿಗಾಗಿ ಇಂಡಿಯಾಕ್ಕೆ ಹೊರಟಿರುವರು. ಅವರು ಬರುವ ಚಳಿಗಾಲವನ್ನು ಇಂಡಿಯಾ ಪ್ರಯಾಣದಲ್ಲಿ ಕಳೆಯುವರಂತೆ.

ಈಜಿಪ್ಟಿನ ಅನೇಕ ಡೆಪ್ಯುಟಿಗಳು ರುಜುಮಾಡಿ ಈಜಿಪ್ಟಿನ ಪಾರ್ಲಿಮೆಂಟಿನ ಮೀಟಿಂಗನ್ನು ಒಡನೆಮಾಡಬೇಕೆಂದೂ, ಈಗಿರುವ ಮಂತ್ರಿಮಂಡಳವು ಜನಾಂಗದ ಇಚ್ಛೆಯಂತೆ ನಡೆಯದೆ ತಮ್ಮ ಸ್ವತಂತ್ರವನ್ನು ಕಳಕೊಳ್ಳುತ್ತಿರುವರೆಂದೂ ಇದನ್ನು ತೀರ್ಮಾನಿಸಲು ಪಾರ್ಲಿಮೆಂಟಿಗೆ ಮಾತ್ರ ಹಕ್ಕಿದೆಯೆಂದೂ ಮುಂತಾಗಿ ಒಂದು ಅರ್ಜಿಯನ್ನು ಫಾವ್‌ರಾಜರವರಿಗೆ ಕೊಟ್ಟಿರುವರು.

ಕೆಮ ರೆಸಿಡೆನ್ಸಿಯಲ್ಲಿರುವ ಸಾಂಗ್ ಜೊಲೋರ್ ಪಟ್ಟಣವು ಭೂಕಂಪದ ದೆಸೆಯಿಂದ ಪೂರ್ತಿ ನಾಶವಾಗಿದೆ. ಸುಮಾರು 90 ಜನರು ಮೃತಹೊಂದಿರುವರೆಂದು ವರ್ತಮಾನ.

ಪುಸ್ತಕ ಪರಿಚಯ.

ಭಗವಾನ್ ಶ್ರೀಕೃಷ್ಣ —ಗ್ರಂಥಕರ್ತ-ಶ್ರೀಮದ್ವ ಭೀಮರಾವ್ ಕಟ್ಟಿ. ಬೆಲೆ ೪ ಆಣೆ ಮಾತ್ರ.

ಕನ್ನಡಿಗರ ಸುದೈವದಿಂದ ಇಂತಹ ಅಮೌಲ್ಯ ಗ್ರಂಥಗಳನ್ನು ಕನ್ನಡ ಲೇಖಕರು ಬರೆಯಲು ಮನಮಾಡಿರುವರು. ಈ ಗ್ರಂಥವು ಸೊಗಸಾದ ವಾಕ್ಯ ಬಂಧನಗಳಿಂದ ಕೂಡಿ ಓದುಗರ ಮನಸ್ಸನ್ನಾಕರ್ಷಿಸುತ್ತದೆ. ಇದರಲ್ಲಿ ಶ್ರೀಕೃಷ್ಣನ ಚರಿತ್ರೆಯು ಸಾಂಗವಾಗಿದ್ದು, ಇತರ ಮತಸ್ಥರಿಗೆ ಈಮಹಾತ್ಮನ ನಡತೆಯ ವಿಷಯದಲ್ಲಿರತಕ್ಕ ದುರಭಿಪ್ರಾಯಗಳನ್ನು ಹೋಗಲಾಡಿಸುವುದಕ್ಕೆ ಸಮರ್ಥವಾದ ವಿಷಯಗಳನ್ನೊಳಕೊಂಡಿದೆ. ಜನರ ಸಂಶಯಗಳಿಗೆ ಸಮಾಧಾನ ರೂಪದಲ್ಲಿ ವಿಷಯಗಳು—ತೀರ ದೊರೆಯಲಾರದಾದರೂ—ಸಂಗ್ರಹವಾಗಿ ಹೇಳಲ್ಪಟ್ಟಿದೆ, ಮತ್ತು ಮುಖ್ಯ ವಿಷಯಗಳು ಚರ್ಚಿಸಲ್ಪಟ್ಟಿದೆ. ಆದರೆ ಶೈಲಿಯು ಸ್ವಲ್ಪ ಕಠಿಣವಾದುದೊಂದು ಕೊರತೆ. ಈ ಗ್ರಂಥವನ್ನೋದಿದ ಪ್ರತಿಯೊಬ್ಬ ಭಾರತೀಯನ ಹೃದಯದಲ್ಲಿಯೂ ಪ್ರಾಚೀನ ಮಾತೃಭೂಮಿಯ ಚಿತ್ರವು ಚಿತ್ರಿತವಾಗದಿರದು. ಭಕ್ತಿ ರಸವು ಆಗ ಹೊರ ಹೊಮ್ಮದಿರದು. ಆದುದರಿಂದ ಕನ್ನಡಿಗರೆಲ್ಲರೂ ಈ ಪುಸ್ತಕವನ್ನೋದಿ ಆನಂದಿಸುವರೆಂದು ನಮ್ಮ ಭಾವನೆ.

ಅಂಚೆ ಮನೆ. ಇದು ಸುಪ್ರಸಿದ್ಧ ಕವಿಶ್ರೇಷ್ಠ ರವೀಂದ್ರನಾಥ ಠಾಕೂರರ "The Post Office" ಎಂಬ ಪುಸ್ತಕದ ಅನುವಾದ. ಅನುವಾದಕ ಪ್ರ ಯಾ. ಯನಾ. ಕಾಮತ್—ದೊರೆಯುವ ಸ್ಥಳ, ಉಡುಪಿ, ಸತ್ಯಾಗ್ರಹೀ ಮುದ್ರಣಾಲಯ. ಬೆಲೆ ೪ ಆಣೆ.

ಆಂಗ್ಲ ಭಾಷೆಯನ್ನರಿತವರಲ್ಲದೆ ಶ್ರೀ ರವೀಂದ್ರರ ಅದ್ವಿತೀಯ ಪುಸ್ತಕಗಳನ್ನು ಓದಿ ಆನಂದ ಪಡೆಯದವರಿಲ್ಲ. ಆದರೆ ರವೀಂದ್ರರ ಕಿರಣಗಳು ಕರ್ನಾಟಕದಲ್ಲಿ ಇನ್ನೂ ವ್ಯಾಪಿಸಿಲ್ಲವೆಂದೇ ಹೇಳಬೇಕು. ಆ ಮಹಾ ಕವಿಗಳ ತೇಜಸ್ಸು ಕನ್ನಡದ ಕನ್ನಡಿಯಲ್ಲಿ ಇನ್ನೂ ಪ್ರತಿಬಿಂಬಿಸಿರುವುದಿಲ್ಲ. ಹೀಗಿರುವಲ್ಲಿ ಶ್ರೀ ಕಾಮತರ ಪ್ರಯತ್ನವು ಸಂಪೂರ್ಣ ಆದರಕ್ಕೆ ಪಾತ್ರರಾಗುವುದರಲ್ಲಿ ಸಂಶಯವಿಲ್ಲ. ಇವರ ಪ್ರಯತ್ನಕ್ಕೆ ತಕ್ಕ ಸಂಭಾವನೆಯನ್ನು ಕೊಡಬೇಕಾದುದು ಕನ್ನಡಿಗರಾದ ನಮ್ಮ ಕರ್ತವ್ಯ. ಭಾಷಾಂತರವು ಹೇಗೂ ಮೂಲ ಗ್ರಂಥದ ಸ್ವಾರಸ್ಯವನ್ನು ಹೊಂದಿರಲಾರದಾದರೂ, ಕಾಮತರ ಅನುವಾದವು ರಸ ಗರ್ಭಿತವಾಗಿರುವುದು. ಆದರೆ ಇದರಲ್ಲಿ 'ಪ್ರಾಯಜಿನ' 'ದತ್ತರ' 'ಸುದ್ದಿ' 'ತಮಾಷೆ' ಮುಂತಾದ ಶಬ್ದಗಳೂ, 'ಅವನನ್ನು ಎಲ್ಲರೂ ಹೊಡೆಯುವರು,' 'ನನ್ನ ಕೆಲಸವು ಬಹಳ ದೊಡ್ಡ

ಷ್ಟದು' ಮುಂತಾದ ಪ್ರಯೋಗಗಳೂ ಸ್ವಲ್ಪ ವಿಜಾತೀಯವಾಗಿ ತೋರುವುದು. ಅಲ್ಲದೆ ಭಾಷೆಯಲ್ಲಿ ಅಷ್ಟು ಪರಿಜ್ಞಾನವಿಲ್ಲದವರಿಗೆ ಅರ್ಥವನ್ನು ಗ್ರಹಿಸಲು ಕಷ್ಟ ಕೊಡುವುದು. ಕನ್ನಡಿಗರೆಲ್ಲರೂ ಈ ಪುಸ್ತಕವನ್ನು ಓದಿ ಆನಂದಗೊಳ್ಳುವರಾಗಿ ನಂಬಿದ್ದೇವೆ.

ಪತ್ರವ್ಯವಹಾರಗಳು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ. ಸಂ:

ಬೇಂಗುನಾಡು ತಕ್ಕಾಮೆ.

ಅಯ್ಯಾ,

ಕಳೆದ ಕೆಲವು ವಾರಗಳ ಹಿಂದಿನ 'ಕೊಡಗು' ಪತ್ರಿಕೆಯಲ್ಲು ಮ. ರಾ. ಶ್ರಿ ಕಲ್ಲುಬೊಡನ ಪೂವ್ವಯ್ಯನವರು ಬೇಂಗುನಾಡು ತಕ್ಕಾಮೆ ವಿಷಯದಲ್ಲಿ ಬರೆದ ಬಾತ್ಮಿಯನ್ನು ನೋಡಿ ಅದರಲ್ಲು ನನಗೆ ಕೆಲವು ಅಂಶಗಳು ಕಂಡು ಬಂದದ್ದರಿಂದ ನನಗೂ ಸಹ ತಿಳುವಳಿಕೆಗೆ ಬರಲು ಕಾರಣವಾಯಿತು. ಆದರೆ ಮ. ಕೆ. ಪೂವ್ವಯ್ಯನವರು ನನ್ನ ಈ ಕೆಳಗಿನ ಕೆಲವು ಅಂಶಗಳಿಗೆ ದಯವಿಟ್ಟು 'ಕೊಡಗು' ಪತ್ರಿಕೆಯಲ್ಲಿ ಉತ್ತರವನ್ನು ಪ್ರಕಟಿಸಬೇಕಾಗಿ ಅತಿ ವಿನಯದಿಂದ ಕೇಳಿಕೊಳ್ಳುವವನಾಗಿದ್ದೇನೆ.

1 ಬೇಂಗುನಾಡಿಗೆ ಒಂದನೆ ದೇವಸ್ಥಾನ ಯಾವದು, ಮತ್ತು ಯಾವ ದೇವರು?

2. ಊರು ಮಂದಿನಲ್ಲಾಗಲಿ ನಾಡುಮಂದಿನಲ್ಲಾಗಲಿ ಮನುಷ್ಯರಮೇಲೆ ಬರುವ ದೇವರು ಸುರುವಿನಲ್ಲಿ ಯಾವ್ಯಾವ ತಕ್ಕರನ್ನು ಕರೆಯುತ್ತಾರೆ ಮತ್ತು ಹಾಗೆ ಕರೆಯಲು ಕಾರಣವೇನು?

3. ಹುತ್ತರಿಯಲ್ಲು ಪೂರ್ವ ಪದ್ಧತಿ ಮೇರೆ ಎರಡು ಕೇರಿ ಊರವರು ಮೊದಲು ಯಾವ ತಕ್ಕರ ಮನೆಗೆ ಪಡ ಹೇಳಲು ಹೋಗುತ್ತಾರೆ ಮತ್ತು, 1ನೆ ದಿವಸ, 2ನೆ ದಿವಸ, 3ನೆ ದಿವಸ ಯಾವ್ಯಾವ ತಕ್ಕರ ಮನೆಗೆ, ಇದಕ್ಕೆ ಕಾರಣಗಳು ಯಾವವು?

4. ಬೇಂಗುನಾಡಿನಲ್ಲಿ 1ನೇ ನಾಡು ದೇವರು ಕಾಡಾಲಪ್ಪ ದೇವರೋ, ಅಥವ ಕ್ಷೇತ್ರಪಾಲ ದೇವರೋ, ಮತ್ತು ಕಾಡಾಲಪ್ಪ ದೇವರು ಮೊದಲು ಇದ್ದದ್ದೋ ಅಥವ ಕ್ಷೇತ್ರಪಾಲ ದೇವರೋ? ಕಾಡಾಲಪ್ಪ ದೇವರು ಮೊದಲು ಬೇಂಗುನಾಡಿನಲ್ಲಿ ಇದ್ದ ದೇವರೆಂದು ತಿಳಿಯುತ್ತೇನೆ. ಅದು ಸರಿಯಾದಲ್ಲಿ ಆವಾಗ್ಯೆ ಯಾವ್ಯಾವ ತಕ್ಕರಿದ್ದರು, ಮತ್ತು ಆವಾಗ್ಯೆ ಮನುಷ್ಯರ ಮೇಲೆ ಬರುತ್ತಿದ್ದ ದೇವರು ಯಾವ ತಕ್ಕರನ್ನು ಮೊದಲಾಗಿ ಕರೆಯುತ್ತಿದ್ದರು, ಮತ್ತು ಅದಕ್ಕೆ ಕಾರಣವೇನು? ಈಗ 1ನೆ, 2ನೆ, 3ನೆ ತಕ್ಕರೆಂದು ಹೇಳುವ ತಕರಾರುಗಳನ್ನು ಯಾತಕ್ಕೋಸ್ಕರ ಆಗ ನಿಮರ್ಶೆಮಾಡಿಕೊಳ್ಳಲಿಲ್ಲ? ಅಲ್ಲದೆ ತಕ್ಕಾಮೆಗಳನ್ನು ಒಡಲಾವಣೆಮಾಡುವ ವಿಚಾರದಿನಂತೆ ದೇವರನ್ನು ಸಹ ಬದಲಾವಣೆಮಾಡುವಂತೆ ಕಾಣುತ್ತೆ. ತೇಲಪಂಡಮನೆಯವರು 1ನೇ ತಕ್ಕನಾಗಬೇಕೆಂದು ನಮ್ಮ ದ್ರವ್ಯದ ಅಹಂಕಾರದಿಂದಾಗಲೀ, ಉದ್ಯೋಗ ಅಹಂಕಾರದಿಂದಾಗಲೀ ಹೇಳಿಕೊಳ್ಳುವದಲ್ಲವೆಂದು ಎಲ್ಲರೂ ಜ್ಞಾಪಕದಲ್ಲಿ ಇಟ್ಟುಕೊಳ್ಳತಕ್ಕದ್ದಾಗಿದೆ. ನನ್ನ ನೆನಪಿಗೆ ಬಂದಂದಿನಿಂದ ಅನೇಕ ಪ್ರಾಯಪಟ್ಟ ಮನುಷ್ಯರು ತೇಲಪಂಡ ಮನೆಯವರು 1ನೇ ತಕ್ಕರೆಂದು ಹೇಳುವುದು ಕೇಳಿದ್ದೇನೆ. ಅಲ್ಲದೆ ಇದಕ್ಕೆ ಬೇರೆ ಅನೇಕ ಕಾರಣಗಳಿವೆ. ಇದೆಲ್ಲಾ ಮಹಾನುಭಾವರುಗಳಿಗೆ ಚನ್ನಾಗಿ ಗೊತ್ತಿದ್ದರೂ ಕೂಡ ತನ್ನ ತನ್ನ ಅಧಿಕಾರವು ನಡದುಹೋಗಲಿ ಎಂಬದಾಗಿ ಮಾಡುವದಾಗಿದೆ. ಇದರಿಂದ ಅನೇಕ ಅನರ್ಥಗಳು ಉಂಟಾಗ ಬಹುದು. ಮಾಮೂಲ್‌ಮೇರೆ ನಡೆಕೊಂಡು ಬರುವುದು ನಮ್ಮ ಒಗ್ಗಟ್ಟಿಗೂ ಪ್ರೀತಿಗೂ ಕಾರಣ. ಒಡನೆ ಉತ್ತರ ದಯಪಾಲಿಸಬೇಕಾಗಿ ಕೋರುತ್ತೇನೆ.

ಟಿ. ಮಾಚ್ಚಯ್ಯ.

ಪೊನ್ನಂಪೇಟೆ ಕಾನ್‌ಫರೆನ್ಸ್.

ಅಯ್ಯಾ,

ತಾ. 10.11.24ರಲ್ಲು ಪೊನ್ನಂಪೇಟೆ ನಾಡಿನ ಸಹಕಾರಿ ಸಂಘಗಳ ಒಂದು ಕಾನ್‌ಫರೆನ್ಸು ಪೊನ್ನಂಪೇಟೆ ಸ್ಕೂಲಿನಲ್ಲಿ ರಾಯ ಬಹದ್ದೂರ್ ಮ. ಕೆ. ಚಂಗಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ಸುಮಾರು 200 ಜನರ ವರೆಗೆ ಹಾಜರಿದ್ದರು. ಈ ಕಾನ್‌ಫರೆನ್ಸಿಗೆ ಸಹಕಾರಿ ಸಂಘಗಳ ರಿಜಿಸ್ಟ್ರಾರವರು, ರಾವುಸಾಹೇಬ್ ಪಟ್ಟಮಾಡ ದೇವಯ್ಯನವರು ಮತ್ತು ಕಿಗ್ಗಟ್ಟುನಾಡಿನ ಕೌನ್ಸಿಲ್‌ಮೆಂಬರುಗಳು ಸಹ ಹಾಜರಿದ್ದರು.

ಮೊದಲಾಗಿ ಆರ್ಗನೈಜರಾದ ಕೋಟೆರ ಚಣ್ಣಪ್ಪನವರು ಸಹಕಾರದ ತತ್ವಗಳನ್ನು ಮತ್ತು ಅದರಿಂದಾಗುವ ಗುಣದೋಷ ಮತ್ತು ಅದರ ಬವಾಬ್ದಾರಿ ಮತ್ತು ಇತರದ ಸಹಕಾರ ಸಂಘಗಳು ಬೇರೆ ಕಡೆಗಳಲ್ಲಿ ಹೇಗೆ ನಡಿಯುತ್ತಿವೆ ಎಂಬ ವಿಷಯವನ್ನು ಸವಿಸ್ತಾರವಾಗಿ ಜನರಿಗೆ ಮನದಟ್ಟಾಗುವ ಹಾಗೆ ಬೋಧಿಸಿದರು.

ಆ ಮೇಲೆ ಮೆ: ಪಿ. ಟಿ. ಕುಶಾಲಪ್ಪನವರು, ಮೆ. ಎಂ. ಎಂ. ಚಣ್ಣಪ್ಪನವರು ಮತ್ತು ಪಿ. ಗಣಪಯ್ಯನವರು ಸಹ ಇದೇ ವಿಷಯ ಬಗೆಗೆ ಛಲವಾಗಿ ಮಾತಾಡಿದರು.

ಆ ಮೇಲೆ ಸಂಘದ ಮೆಂಬರುಗಳು ಸಹ ಕೆಲವು ವಿಷಯಗಳನ್ನು ಸೂಚಿಸಿ ಮಾತಾಡಿದರು.

ಆಖೈರಿನಲ್ಲಿ ರಿಜಿಸ್ಟ್ರಾರವರು ಸಹಕಾರದ ತತ್ವವನ್ನು ಈ ಸಂಘಗಳಿಂದ ನಾವು ಹೇಗೆ ಇನ್ನು ಮುಂದಕ್ಕೆ ಬುದ್ಧಿವಂತರಾಗಬಹುದು ಮತ್ತು ಇದರಿಂದಾಗುವ ಉಪಯೋಗವನ್ನು ಬೋಧಿಸಿದರು.

ಮೆ. ಕೆ. ಪಿ. ಚಣ್ಣಪ್ಪನವರು ಬಾಕಿದಾರರನ್ನು ಹೊರಗಿನ ಊರುಗಳಲ್ಲಿ ಹೇಗೆ ಕಾಣುತ್ತಾರೆ ಮತ್ತು ಅವರಿಂದ ನಾವು ಹೇಗೆ ವಸೂಲ್ಮಾಡಬೇಕು ಮತ್ತು ಇದರಿಂದ ನಮಗೆ ಇರುವ ಕೇಡುಗಳನ್ನು ಜನರಿಗೆ ಚನ್ನಾಗಿ ಬೋಧಿಸಿದರು.

ಆಖೈರಿನಲ್ಲಿ ಅಧ್ಯಕ್ಷರು ಸ್ವಲ್ಪಹೊತ್ತಿನವರೆಗೆ ಮಾತಾಡಿದರು. ಇವರು ಹೇಳಿದ್ದೇನಂದರೆ:—ನನಗೆ ಸಹಕಾರಿ ತತ್ವಗಳೇ ಚನ್ನಾಗಿ ಗೊತ್ತಿರಲಿಲ್ಲ. ಇಲ್ಲಿ ಮಾತಾಡಿದ ಮಹಾಶಯರಿಂದ ನನಗೆ ಈಗ ಚನ್ನಾಗಿ ತಿಳಿಯಿತು. ಇದರಿಂದ ಬಹಳ ತರವಾದ ಉಪಕಾರವಿದೆ. ಇಂಥ ಸಂಘಗಳಲ್ಲಿ ಪ್ರತಿಯೊಬ್ಬ ಮೆಂಬರನು ಶೇರುದಾರನಾಗಿ ಅದರಿಂದ ಬುದ್ಧಿವಂತನಾಗಬೇಕು. ಮತ್ತು ಇನ್ನು ಮುಂದಕ್ಕೆ ಇಂಥಾ ಕಾನ್‌ಫರೆನ್ಸಿಗೆ ನಾನು ಅನುಕೂಲವಾದಷ್ಟುಮಟ್ಟಿಗೆ ಹಾಜರಾಗಿ ನಾನು ನಿಮ್ಮಲ್ಲಿ ಭಾಗಿಯಾಗಿರಲು ಸಂತೋಷಪಡುತ್ತೇನೆಂದು ಹೇಳಿ ಮುಕ್ತಾಯಗೊಳಿಸಿದರು.

ಕಡೆಗೆ ಅಧ್ಯಕ್ಷರಿಗೆ ಸಭೆಯ ಪರವಾಗಿ ಮೆ. ಪಿ. ಟಿ. ಕುಶಾಲಪ್ಪನವರು ತುಂಬಾ ವಂದನೆಗಳಿಂದ ಕಾನ್‌ಫರೆನ್ಸನ್ನು ಬರಕಾಸ್ತುಮಾಡಿದರು.

ಕಾನ್‌ಫರೆನ್ಸ್ ಮುಕ್ತಾಯವಾದ ವಡನೆ ಪೊನ್ನಂಪೇಟೆ ನಾಡಿನ ಯೂನಿಯನ್ನಿನ ಜನರಲ್‌ಮೀಟಿಂಗು ರಿಜಿಸ್ಟ್ರಾರವರ ಅಧ್ಯಕ್ಷತೆಯಲ್ಲಿ ಮಾಡಲಾಯಿತು. ರಿಜಿಸ್ಟ್ರಾರವರು ಯೂನಿಯನ್ನಿನ ಕೆಲಸಗಳನ್ನು ವಿವರಿಸಿದರು. ಜನರಲ್‌ಬಾಡಿಯವರು ಪೈಕಿ 7 ಜನ ಕಮಿಟಿಮೆಂಬರುಗಳನ್ನು ಚುನಾಯಿಸಿದರು. ಇವರ ಪೈಕಿ ಮೆ. ಪಿ. ಟಿ. ಕುಶಾಲಪ್ಪನವರನ್ನು ಪ್ರೆಸಿಡೆಂಟರಾಗಿ ಚುನಾಯಿಸಲಾಯ್ತು. ಪ್ರತಿ ಕಮಿಟಿ ಮೆಂಬರನು ಯಾವ್ಯಾವ ಸಂಘಗಳನ್ನು ನೋಡಬೇಕೆಂದು ತೀರ್ಮಾನವಾಯ್ತು. ಕಡೆಗೆ ಅಧ್ಯಕ್ಷರಿಗೆ ಮಂಗಳ ಜಯಘೋಷದಿಂದ ಮೀಟಿಂಗ್ ಬರಕಾಸ್ತುಮಾಡಲಾಯಿತು.

ಪ್ಲೇಗ್.

ಅಯ್ಯಾ,

ಶನಿವಾರ ಸಂತೆಯಲ್ಲಿ ಈಗ್ಯೆ ಮೂರು ತಿಂಗಳಲ್ಲಿ ಪ್ಲೇಗ್ ಸೂಚನಾರ್ಥವಾಗಿ ಇಲಿಗಳು ಸತ್ತ ಕೂಡಲೆ ಪಟ್ಟಣ ನಿವಾಸಿಗಳೆಲ್ಲರೂ ಊರು ಬಿಟ್ಟು ಹೊರಗೆ ಚಪ್ಪರಗಳನ್ನು ಕಟ್ಟಿ, ಇರುವಾಗ್ಯೆ ಕೂಡಲೇ ಸರಕಾರದವರು ಇನಾಕ್ಯುಲೇಶನ್ ಮಾಡಿಸಿದರು. ಜನರಿಗೆ ಯಾವ ಉಪಟಳವೂ ಉಂಟಾಗಲಿಲ್ಲ. ಶನಿವಾರ ಸಂತೆಗೆ ಒಂದೂವರೆ ಮೈಲು ದೂರದಲ್ಲಿರುವ ತಿರಂಗಾಲದಲ್ಲಿ ಇಲಿ ಸತ್ತು, ಒಂದೂವರೆ ತಿಂಗಳು ಆದಾಗ್ಯೂ ಸರಕಾರಕ್ಕೆ ತಿಳಿಸದೆಯೂ, ತಾವೂ ಊರನ್ನು ಬಿಡದೆಯೂ ಪ್ಲೇಗ್ ರೋಗವು ತಲೆದೋರಿ ಸುಮಾರು ಮೂರು ಜನರು ಮರಣವನ್ನು ಹೊಂದಿದ್ದಲ್ಲದೆ ಏಳು ಜನರಿಗೆ ಕಾಯಿಲೆ ಆಗಿದೆ. ಈ ಪ್ಲೇಗ್ ರೋಗಕ್ಕೆ ಊರು ಬಿಡುವದು ಒಂದನೇ, ಇನಾಕ್ಯುಲೇಶನ್ ಮಾಡಿಸಿಕೊಳ್ಳುವದು ಎರಡನೇ ಎಚ್ಚರಿಕೆಗಳೆಂದು ಅನುಭವದ ಮೇಲೆ ತಿಳಿದ ಸಂಗತಿಯಾಗಿದೆ. ಪ್ಲೇಗ್ ರೋಗಕ್ಕೆ ಮುಖ್ಯ ಊರನ್ನು ಬಿಡುವುದು ಒಳ್ಳೇಯದೆಂದು ನಾನು ಒತ್ತಿ ಹೇಳುತ್ತೇನೆ.

'ದೇಶ ಹಿತೈಷಿ'

ಪ್ರಿಯ ಪತ್ರಿಕಾ ಕರ್ತರೇ,

ನಮ್ಮ ದೇಶಕ್ಕೆ ದೊರೆತಿರುವ ಹೊಸ ಕೌನ್ಸಿಲಿನ ಪ್ರಭಾವದಿಂದ ಈ ಕಾಲದ ವರೆಗೂ ದೊರೆಯದಿದ್ದ ಫಲವು ಹುತ್ತಗಟ್ಟುನಾಡಿನ ರೈತರಿಗೆ ಲಭಿಸಿದಂತೆ ಆಯಿತು. ಗೋಣಿಕೊಪ್ಪಲಿಂದ ಹೊರಟು ಮೈಸೂರಿಗೆ ಹೋಗುವ ಸರಕಾರಿ ರಸ್ತೆಯಲ್ಲಿ ಹೆಬ್ಬಾಲೆ ಗ್ರಾಮದ ಬಳಿ ಒಡೆದು ಬಾಳೆಲೆ ಅರಮನೆ ಬಾಣೆಗೆ ಹೋಗುವ ಒಂದು ಗಾಡಿ ದಾರಿಯನ್ನು ರಿಪೇರಿಮಾಡಿಸುವ ಬಗ್ಗೆ ಮುನ್ಸಿಫರು ಕುಡಾಯಿಗಳನ್ನು ಸರಕಾರದವರು ಮಂಜೂರು ಮಾಡಿದರು, ಇದನ್ನು ಕೇಳಿದ ಅಬುಬಾಬು ರೈತರೆಲ್ಲರೂ ಬಹಳ ಆನಂದಪಟ್ಟರು. ಅಷ್ಟರಲ್ಲೇ ಮ. ರಾ. ಕೆಚ್ಚುಮಂಡ ಗಣಪತಿಯವರು, ಚಿಟ್ಯಪ್ಪನವರು, ಕುಟ್ಟಪ್ಪನವರು ಈ ಮೂರು ಜನರು ರಸ್ತೆ ಕ್ಲೀನ್ ಮಾಡಿಸಲು ಒಪ್ಪಿಕೊಂಡು ಕೆಲಸವನ್ನು ಸುರುಮಾಡಿಸಿ ಎರಡೂವರೆ ಮೈಲು ವರೆಗೆ ಚೆನ್ನಾಗಿ ಮಾಡಿಸಿ ಇಷ್ಟರಲ್ಲೇ ಮುನಸೀಫರು ಕುಡಾಯಿ ದಸ್ತವಾಯಿತು. ಗ್ರಾಮಸ್ಥರು ಸಹಾಯ ಕೊಡಬೇಕೆಂದು ಜಾಗೆ ಕೊಡದೆ ಹೋದರೆ ಆಗುವದಿಲ್ಲವೆಂದು ಹೇಳಲಿಕ್ಕೆ ಸುರು ಆಯಿತು. ಈ ವರುಷ ಮತ್ತು ಕಳೆದ ವರುಷ ಸಹ ಮಳೆಯಲ್ಲು ಉಂಟಾದ ನಷ್ಟವನ್ನು ಅನುಭವಿಸುತ್ತಿದ್ದರೂ ಕೂಡ ಶಕ್ತಿಯುಳ್ಳದಂತಾಗುತ್ತೆಂದು ಕುಳಿ ಒಂದಕ್ಕೆ ಎರಡು ಮೂರು, ಇದಕ್ಕೂ ಹೆಚ್ಚು ರೂಪಾಯಿ ಸಹ ಕೊಟ್ಟರು. ಆದಾಗ್ಯೂ ಕೂಡ ಮುಂದಕ್ಕೆ ಒಂದು ಮೈಲು ಸಾಧಾರಣ ಮಾಡಿ ಮುಂದಕ್ಕೆ ಕಾಡು ಸವರಿ ತಗ್ಗೋಗಕ್ಕೆ ಸ್ವಲ್ಪ ಸ್ವಲ್ಪ ಮಣ್ಣುತಕ್ಕಳಿಸಿ ಮರಗಳ ಸಂದು ಸಂದಿನಲ್ಲಿಯೇ ರಸ್ತೆಯನ್ನು ಮುಂದಕ್ಕೆ ಸಾಗಿಸುತ್ತಿದ್ದಾರೆ. ಮಹನೀಯರು ಮಾಡಿರುವ ಕೆಲಸಕ್ಕೆ ಒಂದು ಮಳೆ ಬಿದ್ದರೆ ನೀರು ಹೋಗಲು ರಸ್ತೆ ಮಾಡಿದಂತಲ್ಲದೆ ಇದರಿಂದ ಬೇರೆ ಉಪಕಾರ ಕಾಣುವುದಿಲ್ಲ. ಇನ್ನಾದರು ಮಹನೀಯರು ಅದನ್ನು ಉತ್ತಮ ರೀತಿಯಿಂದ ಮಾಡಿಸಿ ಕೀರ್ತಿಗೆ ಪಾತ್ರರಾಗಬೇಕಾಗಿ ಪ್ರಾರ್ಥಿಸುವ,

'ಪ್ರೇಕ್ಷಕ'

ನಿಕ್ಕಲ್ ಎಂಟಾಣೆ.

ಮಹನೀಯರೆ,

ನಿಕ್ಕಲ್ ಎಂಟಾಣೆಯನ್ನು ಬರುವ 1925ನೇ ಇಸವಿ ಅಕ್ಟೋಬರ್ ತಾರೀಕು 30 ರಿಂದ ಆಚೆಗೆ ಉಪಯೋಗಿಸದಂತೆ ಸರಕಾರದವರು ಮಾಡುತ್ತಾರೆಯೆಂದು ಕೊಡಗು ಖಜಾನೆಯಿಂದ ಒಂದು ನೋಟಿಫಿಕೇಶನ್ ಹುಟ್ಟಿದ್ದು ಸರಿಯಷ್ಟೆ. ಅಷ್ಟರಲ್ಲಿ ಆಕ್ಟೋಬರ್ ಎಂಬದನ್ನು ಪ್ರಾಮುಖವಾಗಿ ತೆಗದುಕೊಂಡು ಇಸವಿಯನ್ನು ಮರೆತು ಆ ದುಡ್ಡನ್ನೇ ತೆಗೆಯಬಾರದೆಂಬ ಚಳವಳವು ವ್ಯಾಪಾರಸ್ಥರಲ್ಲಿ ಪ್ರಾರಂಭಿಸಿಕೊಂಡಿದೆ. ಆದ್ದರಿಂದ ವ್ಯಾಪಾರಸ್ಥರೇ, ಪ್ರತಿ ಪೋಸ್ಟಾಫೀಸಿನಲ್ಲಿ ಮತ್ತು ಪಬ್ಲಿಕ್ ಸ್ಥಳಗಳಲ್ಲಿ ಈ ವಿಷಯ ಹಚ್ಚಿಸಿರುವ ನೋಟೀಸ್‌ಬೋರ್ಡಿಗೆ ನಿಮ್ಮ ಗಮನವನ್ನು ಕೊಡುವಿರಾ? ಇದು ಅಲ್ಲದೆ ನಿಕ್ಕಲ್ ನಾಲ್ಕಾಣೆಯನ್ನು ಕೂಡ ತೆಗೆಯಬಾರದೆಂದು ತಿಳುವಳಿಕೆ ಇಲ್ಲದೆ ಹುಟ್ಟಿಸಿಕೊಂಡ ವರ್ತಮಾನವನ್ನು ಇಂದಿನಿಂದಲೇ ಬಿಟ್ಟುಬಿಡಿ. ನಿಮ್ಮ ನಿಕ್ಕಲ್ ಎಂಟಾಣೆಯನ್ನು ಪೇಟೆಯವರು ತೆಗೆದುಕೊಳ್ಳದಿದ್ದ ಪಕ್ಷದಲ್ಲಿ ಎಲ್ಲಿ ಖಜಾನೆವುಂಟೊ ಅಲ್ಲಿ ತೆಗೆದುಕೊಂಡುಹೋಗಿಕೊಟ್ಟಲ್ಲಿ ಅಷ್ಟೇ ದುಡ್ಡು ವಾಪಾಸು ಸಿಕ್ಕುವುದು. ಆದ್ದರಿಂದ ಅಂಥಾ ದುಡ್ಡಿನಿಂದ ನಷ್ಟಹೊಂದಬೇಡಿ. ಇದರಲ್ಲು ಇನ್ನೊಂದು ಮಾತು ಇದೆ. ರಾತ್ರಿಯಲ್ಲಿ ಹೋಗುವಾಗ್ಯೆ ಮನುಷ್ಯನೊ, ಪಿಶಾಚಿಯೊ, ಎಂದು ಪರಿಶೋಧನೆ ಮಾಡುವುದು ನಿಮ್ಮ ಕೆಲಸವಾಗಿದೆ. ಅದೇ ರೀತಿಯಲ್ಲಿ ನಿಕ್ಕಲ್ ದುಡ್ಡುಗಳಲ್ಲಿ ಕೌಂಟರ್‌ಫೀಟ್ ಕಾಯಿನ್ (ಮೋಸದ ನಾಣ್ಯ) ಮಿಶ್ರವಿರುತ್ತದೆ. ಇದು ನಿಮ್ಮ ಹ್ಯಾಗೆ ಇರುತ್ತದೆ, ಪರೀಕ್ಷೆಮಾಡಿದರು, ಎಂತದ್ದು? ಸೀಸವಿಶ್ರಮಾಡಿ ದುಡ್ಡು ಮಾಡಿಸಲ್ಪಟ್ಟದ್ದು. ಇದು ಹೇಗೆ ಇರುವದೆಂದು ಕೇಳುವಿರಾ? ಫೇಸ್‌ಪೌಡರ್ ಹಾಕಿಕೊಂಡ ಹೆಂಗಸಿನೋಪಾದಿಯಲ್ಲಿ ತನ್ನ ನಿಜ ಆಕಾರವನ್ನು ಬಿಟ್ಟು ತನ್ನ ಮುಖದಮೇಲೆ ಕಪ್ಪುವರ್ಣ ಇರುತ್ತದೆ. ತೂಕ ಕಮ್ಮಿ, ಇದೇ ಕಳ್ಳ ದುಡ್ಡು. ಈ ದುಡ್ಡಿಗೆ ಮಾತ್ರ ಒಂದುಕಾಸೂ ಸಿಕ್ಕಲಿಕ್ಕಿಲ್ಲವೆಂದು ದೃಢವಾಗಿ ನೆನಪಿನಲ್ಲಿಟ್ಟುಕೊಳ್ಳಿ. ಈ ಮಧ್ಯ ನನ್ನ ಸ್ನೇಹಿತನೊಬ್ಬನು ಬ್ರಾಹ್ಮಣರ ಬೀದಿಯಲ್ಲಿ ಒಂದು ಕಳ್ಳದುಡ್ಡನ್ನು ಹಿಡಿದುಕೊಂಡು ನಿಂತಿದ್ದನು, ಅದು ಅವರಿಗೆ ತಿಳಿಯದೆ ನನಗೆ ತೋರಿಸಿದರು. ನಾನುಕೈಗೆ ಸಿಕ್ಕಿದ ಕೂಡ್ಲೆ ಕೌಂಟರ್‌ಫೀಟ್ ಕಾಯಿನ್ ಎಂದು ವಾಪಾಸುಕೊಟ್ಟೆ. ಅಷ್ಟರಲ್ಲಿಯೇ ಇನ್ನೊಬ್ಬ ಸ್ನೇಹಿತನು ಬಂದು ಇದು ನ್ಯಾಯವಾದದುಡ್ಡು ಖಜಾನೆಯಲ್ಲಿ ಯಾತಕ್ಕೋಸ್ಕರ ತೆಗೆಯಬಾರದೆಂಬ ಚರ್ಚೆಯಾಯಿತು. ಖಜಾನೆಯವರು ಹ್ಯಾಗೆತಾನೆ ಕಳ್ಳದುಡ್ಡಿಗೆ ಒಳ್ಳೆದುಡ್ಡು ಕೊಟ್ಟಾರು? ಕಳ್ಳದುಡ್ಡನ್ನು ತೆಗೆದುಕೊಳ್ಳಲಿಕ್ಕೆ ಹೇಳಿದವರ್ಯಾರು ಎಂಬ ಚರ್ಚೆಯಿಂದ ದುಡ್ಡು ಮುರಿಯಲಾಯ್ತು. ಬಲ್ಲವನೇ ಬಲ್ಲ ಬೆಲ್ಲದ ರುಚಿಯೆಂದು ನಾನು ತಿಳಿದುಕೊಂಡೆ. ಯಾಕೆಂದರೆ ಸಿಂಹವನ್ನು ಸರ್ಕಸಿನಲ್ಲಿ ಆಡಿಸಲಿಕ್ಕೆ ಅದರಲ್ಲಿ ತರಬೇತು ಹೊಂದಿದವನಿಗೇನೇ ಗೊತ್ತಲ್ಲದೆ ನಮಗೆ ಗೊತ್ತಿದೆಯೋ? ಆದ್ದರಿಂದ ಸರ್ವರೂ ಈ ಮೇಲಿನ ವಿಷಯವನ್ನು ಚನ್ನಾಗಿ ನೆನಪಿನಲ್ಲಿಟ್ಟುಕೊಳ್ಳಿ.

ತಿಳಿದವ.

ಅಮ್ಮತ್ತಿ ನೇಶನಲ್ ಸ್ಕೂಲು.

ಮಹನೀಯರೆ,

ಕೊಡಗು ದೇಶದ ಹಿತವು ನಿಮ್ಮ ಹೃದಯದಲ್ಲಿ ಎಳ್ಳಿನಷ್ಟಾದರೂ ಇದ್ದರೆ ಆ ದೇಶಭಕ್ತಿಯನ್ನು ಅಮ್ಮತ್ತಿ ನೇಶನಲ್ ಶಾಲೆಗೆ ತಮ್ಮ ಉದಾರವಾದ ಚಂದಾದಿಂದ ತೋರಿಸಬೇಕಾಗಿ ಕೋರುತ್ತೇನೆ. ಕೊಡಗು ದೇಶದಲ್ಲು ಇದೊಂದೇ ನೇಶನಲ್ ಸ್ಕೂಲು ಇರುವುದು. ಇದರ ಇರುವಿಕೆಯಿಂದ ಎಷ್ಟು ಪ್ರಯೋಜನವಿದೆಯೆಂದು ದೇಶದವರಿಗೆ ತಿಳಿಯದ್ದಲ್ಲ. ಇದರ ಅಭಿವೃದ್ಧಿಗಾಗಿ ನಾವು ಸಹ ಎಷ್ಟು ಮೇಹನತ್ತು ಮಾಡುತ್ತಾ ಇದ್ದೇವೆ ಎಂಬುದು ದೇಶೀಯರಿಗೆ ಚೆನ್ನಾಗಿ ಗೊತ್ತಿದೆ. ಈ ಸಮಯದಲ್ಲು ದೇಶದ ಮಹನೀಯರು ಧಾರಾಳವಾದ ಮನಸ್ಸಿನಿಂದ ಧರ್ಮ ಮಾಡಿ ಈ ನೇಶನಲ್ ಸ್ಕೂಲಿಗೆ ಚಂದ ದಯಪಾಲಿಸದಿದ್ದರೆ ಇದನ್ನು ನಿಲ್ಲಿಸಬೇಕಾಗಿ ಬರುತ್ತೆ. ಕೊಡಗು ದೇಶದಲ್ಲಿ ಅತಿ ವಿರಳವಾಗಿರುವ ಪಬ್ಲಿಕ್ ಕಾರ್ಯದಲ್ಲಿ ಒಂದು ಅಂತ್ಯವಾಗಿ ಹೋಗುತ್ತೆ. ದೇಶದ ಮಹನೀಯರು ಇದರ ವಿಷಯ ಮನಃಪೂರ್ವಕವಾಗಿ ಯೋಚನೆ ಮಾಡಬೇಕಾಗಿದೆ. ನಾನು ದೇಶದವರಿಗೆ ಈ ಸತ್ಯವಾದ ಸಂಗತಿಯನ್ನು ಬಹಿರಂಗಪಡಿಸಿ ನನ್ನ ಭಾರವನ್ನು ಇಳಿಸಿರುತ್ತೇನೆ.

ಮ. ರಾ. ರಾ. ಕೆ. ಕಾರ್ಯಪ್ಪಯ್ಯನವರು ನಾನೂ ಕಳೆದ ತಿಂಗಳಲ್ಲಿ ಮಡಿಕೇರಿಗೆ ಚಂದಾ ವಸೂಲಿಗೆ ಹೋಗಿದ್ದೆವು. ಮಡಿಕೇರಿಯಲ್ಲಿ ಕೆಲವು ದಸ್ತಯಾರದಾರರು ತಮ್ಮ ತಮ್ಮ ಬಾಬ್ತು ಕೋರ್ಟಿಗೆ ಹೋಗಿದ್ದರು. ಅವರ್ನ್ನ ಕಂಡನ

ಹೋದರೆ ಚಂದವನ್ನು ದಯಪಾಲಿಸುವರು ಎಂಬ ಭರವಸೆಯು ಓಂಪಾ ಇದೆ

ಅಲ್ಲಿ ವಸೂಲಾದ ಚಂದದ ತಪಶೀಲು — ಮೆ ಯಸ್ ಮಂ ಪಿಂಟೋರವರು ಯಂ ಎಲ್ ಸಿ ರು 10, ಯಂ ಚಿಕ್ಕಪ್ಪನವರು ಯಂ ಎಲ್ ಸಿ ರು 10, ಸಿ ದೇವಯ್ಯನವರು ರು 5, ರಾ ಬಾ ಕೆ ಕುಟ್ಟಯ್ಯನವರು ರು 10, ಸಿದ್ದಲಿಂಗಪ್ಪನವರು ರು 3, ರಾ ಬಾ ಕೆ ಅಯ್ಯಯ್ಯನವರು ರು 0, ಕೆ ಅಯ್ಯಯ್ಯನವರು ರು 2, ಸಿ ಯನ್ ವೆಂಕಪ್ಪಯ್ಯನವರು ಯಂ ಎಲ್ ಸಿ ರು 10, ಪಿ ಬೆಳ್ಳಿಯಪ್ಪನವರು ಯಂ ಎಲ್ ಸಿ ರು 2, ಶ್ರೀಮತಿ ಸಿದ್ದಮ್ಮನವರು ರು 5, ಮೆ ಸಿ ಬೋಪಯ್ಯನವರು ರು 1, ಜುಮ್ಲ 68 ರುಪಾಯಿ ವಸೂಲಾಯಿತು

ತಮ್ಮ ವಿಧೇಯ,
ಅಬ್ದುಲ್ ಗಫೂರ್ ಖಾನ್.

ಮೂರ್ನಾಡಿಗಾಗಿ ಬಸ್ಸು ಸರ್ವೀಸು

ಸ್ವಾಮಿ,

ನಮ್ಮ ಈ ಕೊಡಗಿನಲ್ಲಿ ಪುರಾತನದಿಂದಲೂ ವೀರಾಜಪೇಟೆ ಮಡಿಕೇರಿ ರಸ್ತೆ ಬಿಟ್ಟರೆ, ಮೂರ್ನಾಡಿಗಾಗಿ ಹೋಗುವ ರಸ್ತೆಯೇ ಪ್ರಧಾನಪಟ್ಟ ರಸ್ತೆಯಾಗಿರುತ್ತೆ. ಈ ರಸ್ತೆಗ ಅಡ್ಡ ಇರುವ ಬೇತರಿಕಡು ಎಂಬ ಕಾವೇರಿ ಹೊಳೆಗೆ ಸೇತುವೆ ಆಗತಕ್ಕದ್ದೆಂದು ದೇಶೀಯರು ಬಹಳ ದಿವಸದಿಂದ ಹೋರಾಡುವದಲ್ಲದೆ, ಒಮ್ಮೊನ್ನಾರ್ ಸಂಘ ಉಂಟಾದಂದಿನಿಂದಲೂ ಸರಕಾರವನ್ನು ಕೇಳುತ್ತಲಿದೆ. ಅಲ್ಲದೆ ಈಗ ಹೊಸದಾಗಿ ಏರ್ಪಾಡಾದ ಕೌನ್ಸಿಲ್ ಸಹ ಹೋರಾಡುತ್ತಲಿದೆ. ಹೀಗಿರುವ ಮುಖ್ಯಪಟ್ಟ ರಸ್ತೆಗಾಗಿ ಅನೇಕ ಪ್ರಯಾಣಿಕರು ಮತ್ತು ಮುಖ್ಯ ಪಟ್ಟಣವಾದ ಮಡಿಕೇರಿಯಲ್ಲು ದೊಡ್ಡ ದೊಡ್ಡ ಮೊಕದ್ದಮೆಗಳು, ಅಪೀಲ್ ಮೊಕದ್ದಮೆಗಳಿಗೆ ಕಕ್ಷಿಗಾರರು ಸಹ ಸಮೀಪ ಮಾರ್ಗವಾದ ಈ ರಸ್ತೆಯಲ್ಲೇ ಬರ ಹೋಗುವದಾಗಿದೆ. ಹೀಗಿರುತ್ತಾ ಈ ರಸ್ತೆಗಾಗಿ ಬಸ್ಸು ಓಡಾಡುವದಿಲ್ಲವೆಂದರೆ ವ್ಯಸನಕರವಾದ ಸಂಗತಿಯಾಗಿದೆ. ಈಗ ಕೆಲವು ತಿಂಗಳ ಹಿಂದೆ ಮೆ ಪುದಿಯಂಡಿಯವರ ಬಸ್ಸು ಓಡಾಡುತ್ತಿರುವಾಗ್ಯೆ ಅನೇಕ ರೈತರು ತಮಗೆ ಮಡಿಕೇರಿಯಲ್ಲಿದ್ದ ಕೆಲಸವನ್ನು ಪೂರೈಸಿಕೊಂಡು ಸಾಯಂಕಾಲಕ್ಕೆ ಅವರವರ ಮನೆಯನ್ನು ಸೇರುತ್ತಿದ್ದರು. ಈ ಸರ್ವೀಸಿಗೆ ಖಾಯಂ ಲೈಸನ್ಸು ಕೊಡದೆ, ಕಾವೇರಿ ಬಸ್ಸು ಕಂಪೆನಿಯವರಿಗೇನೆ ಈ ಲೈಸನಲ್ಲಿ ಸಹ ಲೈಸನ್ಸ್ ಕೊಟ್ಟಿರುತ್ತಾರಂತಲೂ ಆದ್ದರಿಂದ ಪುದಿಯಂಡಿಯವರ ಸತ್ಯನಾರಾಯಣ ಸರ್ವೀಸಿನ ಬಸ್ಸು ನಡಿಯುವದಿಲ್ಲವೆಂತಲೂ ತಿಳಿಯಬರುತ್ತದೆ. ಈ ಲೈಸೆನ್ಸಿನಲ್ಲಿ ಓಡಿಸಿದರೆ ಅವರಿಗೆ ಚಾರ್ಜು ಕಮ್ಮಿಯಾಗುವದರಿಂದ ಸಿದ್ದಾಪುರಕ್ಕಾಗಿ ವೀರಾಜಪೇಟೆಗೆ ಓಡಿಸುತ್ತಾರೆ. ಆ ಕಾರಣ ಈ ಲೈಸನ್ಸ್ ಮುಚ್ಚಿದೆ. ಮಡಿಕೇರಿ ಮಂಗಳೂರು ರಸ್ತೆಗಾಗಿ ಎರಡು ಕಂಪೆನಿಯವರ ಎರಡು ಬಸ್ಸು ನಿತ್ಯ ಓಡ್ಯಾಡುತ್ತಲಿರುವಾಗ್ಯೆ ಈ ದೇಶದ ಮಧ್ಯಕ್ಕಾಗಿ ಹೋಗುವ ಮುಖ್ಯಪಟ್ಟ ರಸ್ತೆಗಾಗಿ ಎರಡು ಕಂಪೆನಿಯವರಿಗೂ ಯಾಕೆ ಲೈಸನ್ಸು ಕೊಟ್ಟು ದೇಶೀಯರ ಕಷ್ಟ ನಿವಾರಣೆ ಮಾಡಬಾರದೆಂದು ಗೊತ್ತಾಗುವದಿಲ್ಲ. ಈ ಸಂಗತಿಯನ್ನು ಸರಕಾರದವರು ದಿವ್ಯ ಚಿತ್ತಕ್ಕೆ ತಂದು ಈ ರಸ್ತೆಗಾಗಿ ನಿತ್ಯ ಕಮ್ಮಿ ಎಂದರೆ ಒಂದು ಬಸ್ಸನ್ನಾದರೂ ಓಡಿಸುವಂತ ಬೇರೆ ಕಂಪನಿಗೆ ಲೈಸೆನ್ಸ್ ಕೊಟ್ಟು ರೈತರನ್ನು ಕಾಪಾಡಬೇಕೆಂದು ವಿನಂತಿ

'ಪ್ರಯಾಣಿಕ'

ವೀರಶೈವ ವಿದ್ಯಾನಿಧಿ

ಸ್ವಾಮಿ,

ಸೋಮವಾರಪೇಟೆ ತಾಲೋಕಿನಲ್ಲಿ ಲಿಂಗಾಯತರು ಬಹಳ ಹಿಂದುಳಿದವರೆಂದು ಅಲ್ಲಿನ ಮುಖ್ಯಸ್ಥರೆಲ್ಲರೂ ಸೇರಿ ಒಂದು 'ವೀರಶೈವ ವಿದ್ಯಾನಿಧಿ' ಎಂಬ ಫಂಡನ್ನು ಏರ್ಪಡಿಸಿ ಮೂರು ವರುಷಗಳು ಕಳೆದವು. ಸಂಘವು ಸ್ಥಾಪನೆಯಾದ ಒಂದನೆಯ ವರುಷದಲ್ಲಿ 2,300 ರುಪಾಯಿ ಚಂದಾ ವಸೂಲ್ ಆಗಿದ್ದಲ್ಲದೆ ಸುಮಾರು 6,000 ರುಪಾಯಿ ಕೊಡುವಂತೆ ಮತ ಬಾಂಧವರು ವಾಗ್ದಾನ ಮಾಡಿದರು. ಇಂದಿಗೆ ಒಂದೂವರೆ ವರುಷದಲ್ಲಿ ಕೊಡ್ಲಿಪೇಟೆಯಲ್ಲಿ ಒಂದು ಜನರಲ್ ಮೀಟಿಂಗು ನಡೆದು ಅಲ್ಲಿ ನೆರೆದಿದ್ದ ಮತ ಬಾಂಧವರು ಸಂಘೋದ್ಧಾರ್ಥವಾಗಿ 600 ರುಪಾಯಿ ಚಂದಾ ಕೊಟ್ಟಿದ್ದಲ್ಲದೆ ವರುಷ ಒಂದರ 2 ಅಥವ 3 ರುಪಾಯಿಯ ನೇರ ಚಂದಾ ಕೊಡುವುದಾಗಿ ವಾಗ್ದಾನ ಮಾಡಿದರು. ಜನರಲ್ ಮೀಟಿಂಗ್ ನಡೆದಂದೀಚೆಗೆ ಸಂಘದ ವಸೂಲಿಯು ನಿಂತು ಸಬ್ ಕಮಿಟಿ ಮೆಂಬರುಗಳ ಅನುಮತಿ ಇಲ್ಲದೆ ಡಿಪಾಜಿಟ್‌ನಲ್ಲಿದ್ದ ಹಣವನ್ನು ತೆಗೆದು ಸಂಘದ ಮುಖ್ಯಸ್ಥರೇ ಸಾಲವನ್ನು ಹೊಂದಿಕೊಂಡದ್ದನ್ನು ನೋಡಿ ಸಂಘವನ್ನು ಈ ವರೆಗೆ ರಿಜಿಸ್ಟರ್ ಮಾಡದಿರುವುದರಿಂದ ಸಬ್ ಕಮಿಟಿ ಮೆಂಬರುಗಳಿಗೂ ಮತ ಬಾಂಧವರಿಗೂ ಈ ಸಂಘದ ಮೇಲೆ ಅಸಮಾಧಾನ ಹುಟ್ಟುವದಾಗಿದೆ. ಈಗಲೂ ಮತ ಬಾಂಧವರೆಲ್ಲರೂ ಒಮ್ಮನಸ್ಸಿನಿಂದ ಹಿಂದಿನ ಈ ಸಂಘದ ಕರೆಸ್ಪಾಂಡೆನ್ಸುಗಳನ್ನು ಮುಂದಕ್ಕೆ ನಡಿಸಿ ಸಂಘವನ್ನು ರಿಜಿಸ್ಟರ್ ಮಾಡಿಸಿ ಬಾಕಿ ಹಣವನ್ನು ವಸೂಲು ಮಾಡದೆ ಇದ್ದರೆ ಮೋಜಿಲ ರಾಜನು ಮೂರ್ಖ ಪ್ರಜೆಗಳಿಗೆ ಕಾಶೀ ಮಾರ್ಗದಲ್ಲಿ ಮೋಕ್ಷವನ್ನು ತೋರಿಸಿದಂತೆ ಆಗುವುದಿಲ್ಲವೇ ? ಮತ ಬಾಂಧವರೆಲ್ಲರೂ ಮುಂದಕ್ಕೆ ಒಂದು ಸಂಘವನ್ನು ಉದ್ಧರಿಸಬೇಕೆಂದು ನನ್ನ ಕೋರಿಕೆಯಾಗಿದೆ

ಮತ ಹಿತೈಷಿ

ಮಡಿಕೇರಿ ವೀರಾಜಪೇಟೆ ಬಸ್ಸು ಸರ್ವಿಸ್

ಮಹಾಶಯರೆ,

ಶ್ರೀ ಕಾವೇರಿ ಮೋಟಾರ್ ಸರ್ವೀಸನ್ನು ಕೊಡಗಿನ ಕೆಲವು ಮುಖ್ಯಸ್ಥರಾಗಿಯೂ, ವಿದ್ಯಾವಂತರಾಗಿಯೂ ಮತ್ತು ಧನವಂತರಾಗಿಯೂ ಇರುವ ನಮ್ಮ ಸ್ವಂತ ಜನರೇ ಪ್ರಯಾಣಸ್ಥರಿಗೆ ಆದಷ್ಟು ಮಟ್ಟಿಗೆ ಪ್ರಯೋಜನವನ್ನೂ ಅನುಕೂಲತೆಯನ್ನೂ ಉಂಟು ಮಾಡಲಿಕ್ಕೋಸ್ಕರ ಕೈಕೊಂಡರೆಂದು ತಿಳಿದು ಆನಂದವಾಗಿದೆ. ಆದರೆ ಈ ಕಂಪೆನಿಯು ಬಂದಂದಿನಿಂದ ಇದರಲ್ಲಿ ಪ್ರಯಾಣಮಾಡಿ ಅನುಭವವನ್ನು ಹೊಂದಿದ ಕೆಲವು ಮಹಾಶಯರು ಈ ಸರ್ವೀಸು ಆಗಾಗ್ಯೆ ದಾರಿಯಲ್ಲಿ ನಿಂತು ಹೋಗಿ ಪ್ರಯಾಣಿಕರಿಗೆ ಉಂಟಾದ ಕಷ್ಟಗಳನ್ನೂ ಸ್ತ್ರೀಯರಿಗೆ ಕೂತುಕೊಳ್ಳಲು ಸ್ಥಳದ ಅನಾನುಕೂಲತೆಯನ್ನೂ ಚೆನ್ನಾಗಿ 'ಕೊಡಗು' ಪತ್ರಿಕೆಯಲ್ಲು ವಿವರಿಸಿದಾಯಿತು. ಈಗಲೂ ಮಡಿಕೇರಿಯಿಂದ ಅಮ್ಮತ್ತಿಗೆ ಮತ್ತು ವೀರಾಜಪೇಟೆಗೆ ಮೈಲಿಗೆ ಒಂದಾಣೆ ದರದಲ್ಲೂ, ಬಾಕಿ ಸ್ಥಳಗಳಿಗೆ ಮೈಲಿಗೆ 0 1 3 ಕಾಸಿನ ದರದಲ್ಲೂ ಚಾರ್ಜು ತೆಗೆದುಕೊಳ್ಳುತ್ತಿದ್ದಾರೆ. ಇದು ಸರ್ವ ಸಾಧಾರಣವಾಗಿ ಎಲ್ಲರಿಗೂ ತಿಳಿದ ಮಟ್ಟಿಗೆ ಹೆಚ್ಚಾಗಿದೆ. ಈ ಕಂಪನಿಗಿಂತ ಮೊದಲಿದ್ದ ಆಂಬನೇಯ ಬಸ್ಸು ಕಂಪೆನಿಯವರು ಮಡಿಕೇರಿಯಿಂದ ವೀರಾಜಪೇಟೆಗೆ 1 8 0 ಯಾ ಬೇರೆ ಯಾವ ಸ್ಥಳಕ್ಕಾದರೂ ಮೈಲಿಗೆ ಒಂದಾಣೆ ಮೇರೆ ಚಾರ್ಜು ಮಾಡುತ್ತಿದ್ದರು. ಇದೂ ಅಲ್ಲದೆ ಅವರ ಬಸ್ಸಿನಲ್ಲಿ ಸ್ತ್ರೀಯರಿಗೆ ಕೂತುಕೊಳ್ಳಲು ಸಹ ಅನುಕೂಲವಾಗಿತ್ತು. ಈಗ ನಮ್ಮ ಸ್ವಂತ ಜನರು ಸರ್ವೀಸನ್ನು ಇಟ್ಟು ಪ್ರಯಾಣಿಕರಾದ ಗರೀಬ ಜನರಿಗೆ ಯಾವುದೊಂದೂ ಪ್ರಯೋಜನವೂ ಆಗಿ ಇರುವುದಿಲ್ಲವೆಂದು ಹೇಳಬೇಕಾಗಿದೆ

ಈ ಕಂಪನಿಯಲ್ಲಿ ಆಗಾಗ್ಯೆ ಡ್ರೈವರುಗಳನ್ನು ಮತ್ತು ಕಂಡಕ್ಟರುಗಳನ್ನು ಸಹ ಬದಲಾಯಿಸುವುದರಿಂದ ಪ್ರಯಾಣಿಕರಿಗೆ ಬಹಳ ತರದ ತೊಂದ್ರೆಗಳಿಗೆ ಕಾರಣವಾಗಿದೆ. ಇದರ ಮಧ್ಯೆ ಬೇರೆ ಕಂಪನಿಗಳು ಲೈಸನ್ಸಿಗೆ ಅರ್ಜಿ ಹಾಕಿಕೊಂಡದ್ದಕ್ಕೆ ಸರಕಾರದವರು ತಿರಸ್ಕಾರ ಮಾಡಿದರೆಂದೂ ಸಹ ವರ್ತಮಾನ. ಹೀಗೆ ಲೈಸನ್ಸ್ ಕೊಡದೆ ತಿರಸ್ಕಾರ ಮಾಡಲು ಕಾರಣವೇನೆಂದು ಗೊತ್ತಾಗುವದಿಲ್ಲ. ಇಂತಾ ತಿರಸ್ಕಾರಕ್ಕೆ ಜವಾಬ್ದಾರರಾದ ಅಧಿಕಾರಿಗಳು ಜನರ ತಿಳುವಳಿಕೆ ಬಗ್ಗೆ ಆ ಕಾರಣಗಳನ್ನು ಪ್ರಕಟಿಸುವರಾಗಿ ಕೋರಿಕೆ. ಹಾಗೆ ಪ್ರಕಟಿಸದೆ ಹೋದರೆ ಜನರಲ್ಲಿ ಅನೇಕ ತರದ ಊಹನೆಗಳಿಗೆ ಎಡೆಕೊಟ್ಟಂತಾಗುತ್ತೆ. ಒಂದು ಪಕ್ಷ ಬೇರೆ ಕಂಪೆನಿಯವರಿಗೆ ಲೈಸೆನ್ಸ್ ಕೊಟ್ಟ ಪಕ್ಷದಲ್ಲಿ ಅವರು ನಮ್ಮವರ ಕಂಪೆನಿಗಿಂತಲೂ ಕಮ್ಮಿ ಚಾರ್ಜು ಮಾಡಿ ಪ್ರಯಾಣಿಕರಾದ ಗರೀಬ ಜನರಿಗೆ ಪ್ರಯೋಜನವನ್ನುಂಟು ಮಾಡಬಹುದೆಂತಲೂ ಹಾಗೆ ಮಾಡಿದ ಪಕ್ಷದಲ್ಲಿ ನಮ್ಮ ಜನರ ಕಂಪೆನಿಯ ವೃದ್ಧಿಗೆ ಅಡ್ಡಿ ಮಾಡಿದ ಹಾಗೆ ಆಗುತ್ತದೆ ಎಂದು ತಿಳಿದು ಡಿ ಮೇಜಿಸ್ಟ್ರೇಟರು ಬೇರೆ ಕಂಪೆನಿಯವರಿಗೆ ಲೈಸೆನ್ಸ್ ಕೊಡಲಿಲ್ಲವೆಂತ ಅನೇಕರ ಭಾವನೆ. ಈ ಕಾರಣಗಳೇ ಅಲ್ಲದೆ ಇನ್ನೂ ಬೇರೆ ಕಾರಣಗಳೂ ಇರಬಹುದೆಂದು ಜನರು ಹೇಳುವುದನ್ನು ನಾನು ಕೇಳಿದ್ದೇನೆ. ಆದುದರಿಂದ ನಮ್ಮ ಕಾವೇರಿ ಸರ್ವೀಸಿನವರು ಇನ್ನು ಮುಂದಕ್ಕಾದರೂ ಈಗ ವೀರಾಜಪೇಟೆಗಿರುವ ಚಾರ್ಜನ್ನು ರುಪಾಯಿ 1-8-0 ಕ್ಕೂ ಬೇರೆ ಸ್ಥಳಗಳಿಗೆ ಮೈಲಿಗೆ ಒಂದಾಣೆಯಂತೆಯೂ ಇಳಿಸಿ ಬಡ ಜನರಿಗೆ ಉಪಕಾರವನ್ನು ಮಾಡಿ ಅವರ ಕಷ್ಟಗಳನ್ನು ಸ್ವಲ್ಪವಾದರೂ ನಿವಾರಣೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮ ಸ್ವಂತ ಜನರೇ ಈ ಮೋಟಾರ್ ಕಾರ್ಯವನ್ನು ಕೈಕೊಂಡಲ್ಲಿ ನಮ್ಮ ದೇಶದ ಗರೀಬ ಜನರ ಪ್ರಯಾಣಕ್ಕೆ ಇತರರ ಕಂಪನಿಗಿಂತ ಹೆಚ್ಚು ಅನುಕೂಲವಾಗಬಹುದೆಂದು ನಮ್ಮ ಜನರು ಅವರಲ್ಲೂ ಗರೀಬರು ಬಹಳ ಕುತೂಹಲವುಳ್ಳವರಾಗಿದ್ದದ್ದು ಈಗ ನಿರಾಶೆಯಾಗುತ್ತಿರುವುದು ಬಹು ವ್ಯಸನಕರವಾದ ಸಂಗತಿಯಾಗಿದೆ. ನಮ್ಮ ದೇಶೀಯರೇ ನಮ್ಮ ಗರೀಬ ಜನರ ಕಷ್ಟಗಳನ್ನು ಸ್ವಲ್ಪವಾದರೂ ಮನಸ್ಸಿಗೆ ತಗೆದುಕೊಳ್ಳದ ಪಕ್ಷದಲ್ಲಿ ಹೊರಗಿನ ಬೇರೆ ಜನರು ನಮ್ಮ ದೇಶದ ಜನರಿಗೆ ಯಾತಕ್ಕೋಸ್ಕರ ಸಹಾಯ ಮಾಡಬೇಕು ? ಅವರನ್ನು ಸಹಾಯ ಮಾಡಿ ಎಂದು ಕೇಳುವುದೂ ಸಹ ನಮಗೆ ನಾಚಿಕೆ ಕೇಡಲ್ಲವೇ ? ಈ ಮೇಲ್ಕಂಡ ವಿಷಯದಲ್ಲಿ ಘನ ಸರಕಾರದವರೂ ಪ್ರಜಾ ಕೌನ್ಸಿಲ್ ಮೆಂಬರುಗಳೂ ಸಹ ಸ್ವಲ್ಪ ನಿಗವಿಟ್ಟು ಆದಷ್ಟುಮಟ್ಟಿಗೆ ಬೇರೆ ಕಂಪನಿಯವರಿಗೆ ಲೈಸೆನ್ಸ್ ಕೊಟ್ಟು ಪೋಲಿಬೆಟ್ಟೆಗೆ ಬಿಟ್ಟು ಪ್ರಯಾಣಿಕರಿಗೆ ಅನುಕೂಲವನ್ನು ಮಾಡಿ ಕೊಡುವುದಕ್ಕೆ ಉತ್ತೇಜನವನ್ನು ಕೊಡಬೇಕೆಂದು ಅತಿ ವಿನಯದಿಂದ ಕೋರುವ,

ಕೆ. ಓ. ಟಿ

ಉದ್ಯೋಗಸ್ಥರ ಪಾಡು

ಸ್ವಾಮಿ,

ನವಂಬರ ತಾರೀಕು 28ನೇ 'ಕೊಡಗು' ಪತ್ರಿಕೆಯಲ್ಲಿ ಉದ್ಯೋಗಸ್ಥರ ಸ್ಥಿತಿಯ ವಿಷಯವಾಗಿ ಬರೆದ ವಾರ್ತೆಯನ್ನು ಓದಿ ನೋಡಿದೆ. ಅದರಲ್ಲಿ ಬರೆದ ಸಂಗತಿ ಎಲ್ಲಾ ನಿಜವಾದದ್ದೆಂಬುದಕ್ಕೆ ಸಂಶಯವಿಲ್ಲ. ಇದೇ ಮಾತ್ರವಲ್ಲ ಇನ್ನು ಅನೇಕ ತರದ ಕಷ್ಟ ತೊಂದ್ರೆ ಇದೆ. ಅದರಲ್ಲಿ ನನಗೆ ತಿಳಿದಮಟ್ಟಿಗೆ ಕೆಲವು ಅಂಶವನ್ನು ವಿವರಿಸುತ್ತೇನೆ

ಕೆಲವು ಜನರು ರೆವಿನ್ಯೂ ಸರ್ವೆ ಕಾಲದಲ್ಲಿ ಸರಕಾರಿ ನೌಕರಿಗೆ ಸೇರಿದವರು ಸರ್ವೀಸು 30 ವರುಷವಾದರೂ ಕೂಡ ಅವರ ಪೆನ್‌ಷನೇಬಲ್ ಸರ್ವಿಸ್ ಸುಮಾರು 1909ನೆ ಇಸವಿಯಿಂದ ಸೇರಿದವರ ಸರ್ವೀಸಿಗೆ ಸಮ ಹೋಲುತ್ತೆ. ಅವರದರಿ ತಂದೆಗೂ ಮಗನಿಗೂ ಸರ್ವೀಸು ಒಂದಾಯಿತು ಎಂಬ ಗಾದೆಗೆ ಸರಿಯಾಯಿತು. ಅದು ಹ್ಯಾಗೆಂದರೆ ಮೊದಲು 7 ಪ್ಲಸ್ 5 ಮತ್ತು 10 ಪ್ಲಸ್ 5 ರ ವಾಯಿ ಎಂಬ ಎರಡು ಗ್ರೇಡು ಶ್ಯಾನುಭೋಗರಿಗೆ ಇದ್ದದನ್ನು ಅದು ಮೈನರ್ ಸರ್ವೀಸ್ ಎಂಬದಾಗಿ ಸರಕಾರದವರು ಮಾಡಿದ್ದರಿಂದ 30 ವರುಷಕ್ಕೆ ಮೇಲ್ಪಟ್ಟವನು ಪೆನ್ಶನ್ ಆಗುವಾಗ ಅವರಿಗೆ 6 7 ರುಪಾಯಿ ಅಥವ 10 ರುಪಾಯಿ ಪೆನ್ಶನ್ ಸಿಕ್ಕುವದು ಕಷ್ಟ. ಅದು ಅಲ್ಲದೆ ಮೇಲೆ ಹೇಳಿದ ಉದಾಹರಣೆ ಹ್ಯಾಗೆಂದರೆ— 1919 20ನೇ ಇಸವಿಯಲ್ಲಿ 15 ಯಾ 20 ವರುಷ ಸರ್ವಿಸ್ ಆದ ಶ್ಯಾನುಭೋಗರು ಕ್ಲಾರ್ಕಿಗೆ 15 ಮತ್ತು 20 ರುಪಾಯಿ ಸಂಬಳ ಸಿಕ್ಕುತಿತ್ತು. ಅನಂತರ ರಿಟ್ರೆಂಚ್‌ಮೆಂಟ್‌ನಲ್ಲಿ ಎಲ್ಲರಿಗೂ ಸಂಬಳವನ್ನು ಹೆಚ್ಚಿಸಿದರು. ಒಂದೆರಡು ವರುಷ ಸರ್ವೀಸಿನ ಶ್ಯಾನುಭೋಗರಿಗೂ ಮತ್ತು ಕ್ಲಾರ್ಕಿಗೂ ಮತ್ತು 10, 15 ಯಾ 25 ವರುಷ ಸರ್ವಿಸ್ ಇರುವವರಿಗೆ ಸಹ ಸಂಬಳ ಮಿನಿಮಮ್ 30-2 40ರ ವರೆಗೂ ಕೆಲವರಿಗೆ 30-2-40-1-50ರ ವರೆಗೂ ಮತ್ತು ಶ್ಯಾನುಭೋಗರ ಸಂಬಳ 25-1-40ರ ವರೆಗೂ ಮಾಡಿದ್ದಾಗಿದೆ. ಈ ಮೊದಲಿನ ಸಂಬಳ ಈಗ ಕೊಡಿದವರಿಗೆ ಏನೋ ಅನುಕೂಲ. 30 ಯಾ 25 ವರುಷ ಸರ್ವೀಸ್ ಮಾಡಿದವರಿಗೆ ಯಾವತರದ ಅನುಕೂಲ ಕಾಣುವದಿಲ್ಲ. ಅವರ ಮೇಕ್ಸಿಮಮ್ ಸಂಬಳಕ್ಕೆ ಹೋಗಬೇಕಾದರೆ ಸರಿಯಾಗಿ ಇನ್‌ಕ್ರಿಮೆಂಟ್ ಸಿಕ್ಕಿದರೆ ಕಮ್ಮಿ ಪಕ್ಷ 15 ವರುಷ ಬೇಕಾಗುತ್ತೆ. 20-25 ವರುಷದ ವರೆಗೆ ಕಮ್ಮಿ ಸಂಬಳದಲ್ಲಿ ಕೆಲಸ ಮಾಡಿದವರಿಗೆ ಯಾವ ತರದ ಕುಮ್ಮಕು ಆಯಿತೆಂದು ವಾಚಕರೆ ಊಹಿಸಿರಿ. ಆಗಿನ ದಯಾಳುಗಳಾದ ಡಿ ಮೆ ಸಾಹೇಬರವರಿಗೆ ಈ ಸಂಗತಿ ಚೆನ್ನಾಗಿ ವೇದ್ಯ ಇರಬಹುದು. ಆದ್ದರಿಂದ ಸದರಿ ಸಂಗತಿಯನ್ನು ಕಮಿಷನರ್ ಸಾಹೇಬರವರೂ ಡಿ ಮೆ ಸಾಹೇಬರವರು ಮತ್ತು ಈಗಿನ ಹೊಸ ಕೌನ್ಸಿಲ್ ಮೆಂಬರುಗಳು ಸಹ ಚಿತ್ತಕ್ಕೆ ತೆಗೆದುಕೊಂಡು ಆಯಾಯ ಉದ್ಯೋಗಸ್ಥರ ಸರ್ವಿಸ್ ಮೇರೆ ಮೇಕ್ಸಿಮಮ್ ಸಂಬಳ ಕೊಡುವಂತ ಹುಕುಂ ಮಾಡಿದರೆ ಸರಕಾರಿ ನೌಕರಿಯಲ್ಲಿ 25 ಯಾ 30 ವರುಷ ಕಮ್ಮಿ ಸಂಬಳದಲ್ಲಿ ಕಷ್ಟಪಟ್ಟು ಕೆಲಸಮಾಡಿದವರಿಗೆ ಮುಪ್ಪಿನಲ್ಲಿಯಾದರೂ ಕೆಲವು ಮಟ್ಟಿಗೆ ಸಾರ್ಥಕವಾಗಬಹುದು. ಇದು ಅಲ್ಲದೆ ಸಂಬಳ ಜಾಸ್ತಿ ಮಾಡಿದ್ದರಿಂದ ಸರಕಾರಕ್ಕೆ ಯಾವ ತರದ ನಷ್ಟ ಇಲ್ಲ. ಸಿಬ್ಬಂದಿ ಬೋಕೆಯಿಂದ ಉಂಟಾದ ಉಳಿತಾಯ ಹಣವೂ ಸಂಬಳ ಬದ್ತಿ ಮಾಡಿದ್ದರಿಂದ ತಗಲಿದ ಹೆಚ್ಚು ವ್ಯಯಕ್ಕಿಂತ ಜಾಸ್ತಿಯಾಗಿ ಒಡುದಾಗಿ ನಂಬುತ್ತೇನೆ.

'ಅನುಭವಸ್ಥ'

ವೀರಾಜಪೇಟೆ ಸಂತೆ,

ಸಂಪಾದಕರೆ,

ಜಕವಳದ ಅಭಿವೃದ್ಧಿಯು ದಿನೆ ದಿನೆ ಹೆಚ್ಚುತ್ತಾ ಇರುವುದು, ಮಾನವ ಕುಟುಂಬದ ಅನುಕೂಲತೆಗೋಸ್ಕರ ಎಂಬ ಸಂಗತಿಯು ಎಲ್ಲರಿಗೂ ತಿಳಿಯದ್ದಲ್ಲ. ಆದುದರಿಂದ ಇಂಥಾ ಅನುಕೂಲತೆಗೋಸ್ಕರ ಈ ಕೆಳಗಿನ ಒಂದು ಚಿಕ್ಕ ಅಭಿಪ್ರಾಯವನ್ನು ವೀರಾಜಪೇಟೆ ಸಂತೆಯನ್ನು ಉಪಯೋಗಿಸುವ ಸರ್ವ ಜನರ ಚಿತ್ತಕ್ಕೆ ತರಲು ಇರಾದೆಪಡುತ್ತೇನೆ. ಈ ಮೇಲೆ ಹೇಳಿದ ಸಂತೆಯು ಪ್ರತಿ ವಾರದ ಮಧ್ಯ ದಿನವಾಗುವುದರಿಂದ ಜನರಿಗೆ ಉಂಟಾಗುವ ನಷ್ಟವನ್ನು ಇಷ್ಟೆಂದು ಹೇಳಲಾರೆನು. ಆರಂಭ ಕೆಲಸಗಳ ಸಮಯಗಳಲ್ಲಿ ವಿಶೇಷವೇನೆಂದರೆ ಅನೇಕ ಸಾವಿರ ರೈತರು ಮತ್ತು ಆಳುಗಳು ಬುಧವಾರ ದಿನ ಸಂತೆಗೆ ಹೋಗಿ ಗುರುವಾರ ಕೆಲಸಕ್ಕೆ ಸುರುಮಾಡಿ ಪುನಹ ಸೋಮವಾರ ದಿನ ಅಂದರೆ ಹಿಂದುಗಳಾದ ನಮ್ಮ ವಿಶ್ರಾಮ ದಿನವೂ ಮತ್ತು ಗೋವುಗಳ ಸಹ ಕೆಲಸಕ್ಕೆ ಬೊಡೆಯದೆ ಇರಿಸುವಲ್ಲಿ ಆಳುಗಳಿಗೂ ಸಹ ಅರ್ಧ ಕೆಲಸ ಮಾಡಬೇಕಾದುದರಿಂದ ಅವರು ಪೂರ್ತಿ ವಿಶ್ರಾಮವನ್ನೇ ಪಡೆಯುತ್ತಾರೆ. ಮತ್ತು ಮಂಗಳವಾರ ಕೆಲಸ ಬುಧವಾರ ದಿನ ನಮಗೆ ಸಂತೆಗೆ ಹೋಗಬೇಕೆಂದು ಎಂಬುವುದೇ ಇಲ್ಲ. ಈ ಪ್ರಕಾರ ತಿಂಗಳಿಗೆ ಒಟ್ಟು ಆಳು 8-10 ದಿನ ಕೆಲಸವಿಲ್ಲದೆ ನಿಂತರೆ 8 ದಿನ ಮೊದಲು ಆಗುವ ಕೆಲಸವು 15 ದಿನ ತಡವಾಗುತ್ತೆ. ನಮ್ಮ ಪೂರ್ವಿಕರು ಹೇಳುತ್ತಿದ್ದ "ಮುಂಬಣಿ ಪೊಂಬಣಿ" ಯು ಈಗ ಹೇಗೆ ತಾನೆ ಪೊಂಬಣಿ ಆಗುವುದು.

ಮತ್ತು ಆದಿತ್ಯವಾರ ಸಿದ್ದಾಪುರ, ಗೋಣಿಕೊಪ್ಪಲು ಸಂತೆಗಳಿಗೆ ಆಮದಾಗುವ ಸರಕುಗಳು ಮೈಸೂರು ಸೀಮೆಯಿಂದ ಹೆಚ್ಚಾಗಿ ಬರುತ್ತಿರುವುದಿಲ್ಲವೆ. ಇದನ್ನು ತರುವ ವ್ಯಾಪಾರಿಗಳು ಸಂಧ್ಯಾಕಾಲದ ವರೆಗೆ ಮಾರಿ ಮಿಕ್ಕಿದ್ದನ್ನು ನಮ್ಮ ದೊಡ್ಡ ಸಂತೆಯಾದ ವೀರಾಜಪೇಟೆಗೆ ತರಲಿಕ್ಕೆ ಎರಡು ದಿನ ತಡವಾಗುವುದರಿಂದ ಅದನ್ನೆಲ್ಲಾ ಬೇರೆ ವ್ಯಾಪಾರಿಗಳಿಗೆ ಮಾರಿ ಹಿಂದಕ್ಕೆ ಹೊರಡುತ್ತಾರೆ. ಇವನ್ನು ಕೊಂಡುಕೊಳ್ಳುವ ವ್ಯಾಪಾರಿಗಳು ಹೆಚ್ಚಿನ ಕ್ರಯಕ್ಕೆ ಮಾರಲೆ ಬೇಕಾಗುತ್ತ ಮ

ಷ್ಟಮ' ಮುಂತಾದ ಪ್ರಯೋಗಗಳೂ ಸ್ವಲ್ಪ ವಿಜಾತೀಯವಾಗಿ ತೋರುವುದು ಅಲ್ಲದೆ ಭಾಷೆಯಲ್ಲಿ ಅಷ್ಟು ಪರಿಜ್ಞಾನವಿಲ್ಲದವರಿಗೆ ಅರ್ಥವನ್ನು ಗ್ರಹಿಸಲು ಕಷ್ಟ ಕೊಡುವುದು ಕನ್ನಡಿಗರೆಲ್ಲರೂ ಈ ಪುಸ್ತಕವನ್ನು ಓದಿ ಆನಂದಗೊಳ್ಳುವರಾಗಿ ನಂಬಿದ್ದೇವೆ.

ಪತ್ರವ್ಯವಹಾರಗಳು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾ ಕರ್ತರು ಉತ್ತರವಾದಿಗಳಲ್ಲ. ಸಂ.

ಬೇಂಗುನಾಡು ತಕ್ಕಾಮೆ.

ಅಯ್ಯಾ,

ಕಳೆದ ಕೆಲವು ವಾರಗಳ ಹಿಂದಿನ 'ಕೊಡಗು' ಪತ್ರಿಕೆಯಲ್ಲು ಮ. ರಾ. ಶ್ರಿ ಕಲ್ಲುಮಾಡನ ಪೊನ್ನಯ್ಯನವರು ಬೇಂಗುನಾಡು ತಕ್ಕಾಮೆ ವಿಷಯದಲ್ಲಿ ಬರೆದ ಬಾತ್ಮಿಯನ್ನು ನೋಡಿ ಅದರಲ್ಲು ನನಗೆ ಕೆಲವು ಅಂಶಗಳು ಕಂಡು ಬಂದದ್ದರಿಂದ ನನಗೂ ಸಹ ತಿಳುವಳಿಕೆಗೆ ಬರಲು ಕಾರಣವಾಯಿತು. ಆದರೆ ಮ ಕೆ. ಪೊನ್ನಯ್ಯನವರು ನನ್ನ ಈ ಕೆಳಗಿನ ಕೆಲವು ಅಂಶಗಳಿಗೆ ದಯವಿಟ್ಟು 'ಕೊಡಗು' ಪತ್ರಿಕೆಯಲ್ಲಿ ಉತ್ತರವನ್ನು ಪ್ರಕಟಿಸಬೇಕಾಗಿ ಅತಿ ವಿನಯದಿಂದ ಕೇಳಿಕೊಳ್ಳುವವನಾಗಿದ್ದೇನೆ.

1. ಬೇಂಗುನಾಡಿಗೆ ಒಂಬನೆ ದೇವಸ್ಥಾನ ಯಾವದು, ಮತ್ತು ಯಾವ ದೇವರು ?

2. ಊರು ಮಂದಿನಲ್ಲಾಗಲಿ ನಾಡುಮಂದಿನಲ್ಲಾಗಲಿ ಮನುಷ್ಯರಮೇಲೆ ಬರುವ ದೇವರು ಹುತ್ತರಿಯಲ್ಲಿ ಯಾವ್ಯಾವ ತಕ್ಕರನ್ನು ಕರೆಯುತ್ತಾರೆಮತ್ತುಹಾಗೆಕರೆಯಲು ಕಾರಣವೇನು?

3. ಹುತ್ತರಿಯಲ್ಲು ಪೂರ್ವ ಪದ್ಧತಿ ಮೇರೆ ಎರಡು ಕೇರಿ ಊರವರು ಮೊದಲು ಯಾವ ತಕ್ಕರ ಮನೆಗೆ ಪದ ಹೇಳಲು ಹೋಗುತ್ತಾರೆ ಮತ್ತು 1ನೆ ದಿವಸ, 2ನೆ ದಿವಸ, 3ನೆ ದಿವಸ ಯಾವ್ಯಾವ ತಕ್ಕರ ಮನೆಗೆ, ಇದಕ್ಕೆ ಕಾರಣಗಳು ಯಾವವು ?

4. ಬೇಂಗುನಾಡಿನಲ್ಲಿ 1ನೇ ನಾಡು ದೇವರು ಕಾಡಾಲಪ್ಪ ದೇವರೋ, ಅಥವ ಕ್ಷೇತ್ರಪಾಲ ದೇವರೋ, ಮತ್ತು ಕಾಡಾಲಪ್ಪ ದೇವರು ಮೊದಲು ಇದ್ದದ್ದೊ ಅಥವ ಕ್ಷೇತ್ರಪಾಲ ದೇವರೊ? ಕಾಡಾಲಪ್ಪ ದೇವರು ಮೊದಲು ಬೇಂಗುನಾಡಿನಲ್ಲಿ ಇದ್ದ ದೇವರೆಂದು ತಿಳಿಯುತ್ತೇನೆ. ಅದು ಸರಿಯಾದಲ್ಲಿ, ಆವಾಗ್ಯೆ ಯಾವ್ಯಾವ ತಕ್ಕರಿದ್ದರು, ಮತ್ತು ಆವಾಗ್ಯೆ ಮನುಷ್ಯರ ಮೇಲೆಬರುತ್ತಿದ್ದ ದೇವರು ಯಾವ ತಕ್ಕರನ್ನು ಮೊದಲಾಗಿ ಕರೆಯುತ್ತಿದ್ದರು, ಮತ್ತು ಅದಕ್ಕೆ ಕಾರಣವೇನು ? ಈಗ 1ನೆ, 2ನೆ, 3ನೆ ತಕ್ಕರೆಂದು ಹೇಳುವ ತಕರಾರುಗಳನ್ನು ಯಾತಕ್ಕೋಸ್ಕರ ಆಗ ವಿಮರ್ಶೆಮಾಡಿಕೊಳ್ಳಲಿಲ್ಲ ? ಅಲ್ಲದೆ ತಕ್ಕಾಮೆಗಳನ್ನು ಒಪ್ಪಾವಣೆಮಾಡುವ ಏರ್ಪಾಡಿನಂತೆ ದೇವರನ್ನು ಸಹ ಒಪ್ಪಾವಣೆಮಾಡುವಂತೆ ಕಾಣುತ್ತೆ. ತೇಲಪಂಡಮನೆಯವರು 1ನೇ ತಕ್ಕನಾಗಬೇಕೆಂದು ನಮ್ಮ ದ್ರವ್ಯದ ಅಹಂಕಾರದಿಂದಾಗಲೀ, ಉದ್ಯೋಗ ಅಹಂಕಾರದಿಂದಾಗಲೀ ಹೇಳಿಕೊಳ್ಳುವದಲ್ಲವೆಂದು ಎಲ್ಲರೂ ಜ್ಞಾಪಕದಲ್ಲಿ ಇಟ್ಟುಕೊಳ್ಳತಕ್ಕದ್ದಾಗಿದೆ. ನನ್ನ ನೆನಪಿಗೆ ಬಂದಂದಿನಿಂದ ಅನೇಕ ಪ್ರಾಯಸ್ಥ ಮನುಷ್ಯರು ತೇಲಪಂಡ ಮನೆಯವರು 1ನೇ ತಕ್ಕರೆಂದು ಹೇಳುವುದು ಕೇಳಿದ್ದೇನೆ. ಅಲ್ಲದೆ ಇದಕ್ಕೆ ಬೇರೆ ಅನೇಕ ಕಾರಣಗಳಿವೆ. ಇದೆಲ್ಲಾ ಮಹಾನುಭಾವರುಗಳಿಗೆ ಚನ್ನಾಗಿ ಗೊತ್ತಿದ್ದರೂ ಕೂಡ ತನ್ನ ತನ್ನ ಅಧಿಕಾರವು ನಡದುಹೋಗಲಿ ಎಂಬದಾಗಿ ಮಾಡುವದಾಗಿದೆ. ಇದರಿಂದ ಅನೇಕ ಅನರ್ಥಗಳು ಉಂಟಾಗ ಬಹುದು. ಪೂಮಾಲೆಮೇಲೆ ನಡೆಯೆಂದು ಬರುವುದು ನಮ್ಮ ಒಗ್ಗಟ್ಟಿಗೂ ಪ್ರೀತಿಗೂ ಕಾರಣ, ಒಡನೆ ಉತ್ತರ ದಯಪಾಲಿಸಬೇಕಾಗಿ ಕೋರುತ್ತೇನೆ.

ಟಿ. ಮಾಚ್ಚಯ್ಯ.

ಪೊನ್ನಂಪೇಟೆ ಕಾನ್‌ಫರೆನ್ಸ್.

ಅಯ್ಯಾ,

ತಾ. 10.11.24ರಲ್ಲು ಪೊನ್ನಂಪೇಟೆ ನಾಡಿನ ಸಹಕಾರಿ ಸಂಘಗಳ ಒಂದು ಕಾನ್‌ಫರೆನ್ಸ್ ಪೊನ್ನಂಪೇಟೆ ಸ್ಕೂಲಿನಲ್ಲಿ ರಾಯ ಬಹದ್ದೂರ್ ಮ. ಕೆ. ಚಂಗಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ಸುಮಾರು 200 ಜನರ ವರೆಗೆ ಹಾಜರಿದ್ದರು. ಈ ಕಾನ್‌ಫರೆನ್ಸಿಗೆ ಸಹಕಾರಿ ಸಂಘಗಳ ರಿಜಸ್ಟ್ರಾರವರು, ಕಾವ್ರುಸಾಹೇಬ್ ಪಟ್ಟಮಾಡ ದೇವಯ್ಯನವರು ಮತ್ತು ಕಿಗ್ಗಟ್ಟುನಾಡಿನ ಕೌನ್ಸಿಲಾಮೆಂಬರುಗಳು ಸಹ ಹಾಜರಿದ್ದರು.

ಮೊದಲಾಗಿ ಅಗ್ರಿಕಲ್ಚರಾದ ಕೊಟೀರ ಚಿಣ್ಣಪ್ಪನವರು ಸಹಕಾರದ ತತ್ವಗಳನ್ನು ಮತ್ತು ಅದರಿಂದಾಗುವ ಗುಣದೋಷ ಮತ್ತು ಅವರ ಜವಾಬ್ದಾರಿ ಮತ್ತು ಇತರದ ಸಹಕಾರ ಸಂಘಗಳು ಬೇರೆಕಡೆಗಳಲ್ಲಿ ಹೇಗೆ ನಡಿಯುತ್ತಿವೆ ಎಂಬ ವಿಷಯವನ್ನು ಸವಿಸ್ತಾರವಾಗಿ ಜನರಿಗೆ ಮಂದಟ್ಟಾಗುವ ಹಾಗೆ ಬೋಧಿಸಿದರು.

ಆ ಮೇಲೆ ಮ: ಪಿ. ಟಿ. ಕುಶಾಲಪ್ಪನವರು, ಮ. ಎಂ. ಎಂ. ಚಿಣ್ಣಪ್ಪನವರು ಮತ್ತು ಪಿ. ಗಣಪಯ್ಯನವರು ಸಹ ಇದೇ ವಿಷಯ ಬಹಳ ರಸವಾಗಿ ಮಾತಾಡಿದರು.

ಆ ಮೇಲೆ ಸಂಘದ ಮೆಂಬರುಗಳು ಸಹ ಕೆಲವು ವಿಷಯಗಳನ್ನು ಸೂಚಿಸಿ ಮಾತಾಡಿದರು.

ಅಖೈರಿನಲ್ಲಿ ರಿಜಸ್ಟ್ರಾರವರು ಸಹಕಾರದ ತತ್ವವನ್ನು ಈ ಸಂಘಗಳಿಂದ ನಾವು ಹೇಗೆ ಇನ್ನು ಮುಂದಕ್ಕೆ ಬುದ್ಧಿವಂತರಾಗುಹುದು ಮತ್ತು ಇದರಿಂದಾಗುವ ಉಪಯೋಗವನ್ನು ಬೋಧಿಸಿದರು.

ಮ. ಕೆ. ಪಿ. ಚಿಣ್ಣಪ್ಪನವರು ಬಾಕಿದಾರರನ್ನು ಹೊರಗಿನ ಊರುಗಳಲ್ಲಿ ಹೇಗೆ ಕಾಣುತ್ತಾರೆ ಮತ್ತು ಅವರಿಂದ ನಾವು ಹೇಗೆ ವಸೂಲ್ಮಾಡಬೇಕು ಮತ್ತು ಇದರಿಂದ ನಮಗೆ ಇರುವ ಕೇಡುಗಳನ್ನು ಜನರಿಗೆ ಚನ್ನಾಗಿ ಬೋಧಿಸಿದರು

ಅಖೈರಿನಲ್ಲಿ ಅಧ್ಯಕ್ಷರು ಸ್ವಲ್ಪಹೊತ್ತಿನವರೆಗೆ ಮಾತಾಡಿದರು. ಇವರು ಹೇಳಿದ್ದೇನಂದರೆ.—ನನಗೆ ಸಹಕಾರಿ ತತ್ವಗಳೇ ಚನ್ನಾಗಿ ಗೊತ್ತಿರಲಿಲ್ಲ. ಇಲ್ಲಿ ಮಾತಾಡಿದ ಮಹನೀಯರಿಂದ ನನಗೆ ಈಗ ಚನ್ನಾಗಿ ತಿಳಿಯಿತು. ಇದರಿಂದ ಬಹಳ ತರವಾದ ಉಪಕಾರವಿದೆ. ಇಂಥ ಸಂಘಗಳಲ್ಲಿ ಪ್ರತಿಯೊಬ್ಬಮೆಂಬರನು ಶೇರುದಾರನಾಗಿ ಅದರಿಂದ ಬುದ್ಧಿವಂತನಾಗಬೇಕು ಮತ್ತು ಇನ್ನು ಮುಂದಕ್ಕೆ ಇಂಥಾ ಕಾನ್‌ಫರೆನ್ಸಿಗೆ ನಾನು ಅನುಕೂಲವಿರುವಷ್ಟುಮಟ್ಟಿಗೆ ಹಾಜರಾಗಿ ನಾನು ನಿಮ್ಮಲ್ಲಿ ಭಾಗಿಯಾಗಿರಲು ಸಂತೋಷಪಡುತ್ತೇನೆಂದು ಹೇಳಿ ಮುಕ್ತಾಯಗೊಳಿಸಿದರು.

ಕಡೆಗೆ ಅಧ್ಯಕ್ಷರಿಗೆ ಸಭೆಯ ಪರವಾಗಿ ಮ. ಪಿ. ಟಿ. ಕುಶಾಲಪ್ಪನವರು ತುಂಬಾ ವಂದನೆಗಳಿಂದ ಕಾನ್‌ಫರೆನ್ಸನ್ನು ಬರಕಾಸ್ತುಮಾಡಿದರು.

ಕಾನ್‌ಫರೆನ್ಸ್ ಮುಕ್ತಾಯವಾದ ವಡನೆ ಪೊನ್ನಂಪೇಟೆ ನಾಡಿನ ಯೂನಿಯನ್ನಿನ ಜನರಲ್‌ಮೀಟಿಂಗು ರಿಜಸ್ಟ್ರಾರವರ ಅಧ್ಯಕ್ಷತೆಯಲ್ಲಿ ಮಾಡಲಾಯಿತು. ರಿಜಸ್ಟ್ರಾರವರು ಯೂನಿಯನ್ನಿನ ಕೆಲಸಗಳನ್ನು ವಿವರಿಸಿದರು. ಜನರಲ್‌ಬಾಡಿಯವರ ಪೈಕಿ 7 ಜನ ಕಮಿಟಿಮೆಂಬರುಗಳನ್ನು ಚುನಾಯಿಸಿದರು. ಇವರ ಪೈಕಿ ಮ. ಪಿ ಟಿ. ಕುಶಾಲಪ್ಪನವರನ್ನು ಪ್ರೆಸಿಡೆಂಟರಾಗಿ ಚುನಾಯಿಸಲಾಯ್ತು. ಪ್ರತಿ ಕಮಿಟಿ ಮೆಂಬರನು ಯಾವ್ಯಾವ ಸಂಘಗಳನ್ನು ನೋಡಬೇಕೆಂದು ತೀರ್ಮಾನವಾಯ್ತು ಕಡೆಗೆ ಅಧ್ಯಕ್ಷರಿಗೆ ಮಂಗಳ ಜಯಘೋಷದಿಂದ ಮೀಟಿಂಗ್ ಬರಕಾಸ್ತುಮಾಡಲಾಯಿತು.

ಪ್ಲೇಗ್.

ಅಯ್ಯಾ,

ಶನಿವಾರ ಸಂತೆಯಲ್ಲಿ ಈಗ್ಯೆ ಮೂರು ತಿಂಗಳಲ್ಲಿ ಪ್ಲೇಗ್ ಸೂಚನಾರ್ಥವಾಗಿ ಇಲಿಗಳು ಸತ್ತ ಕೂಡಲೆ ಪಟ್ಟ ನಿವಾಸಿಗಳೆಲ್ಲರೂ ಊರು ಬಿಟ್ಟು, ಹೊರಗೆ ತೆಡ್ಡುಗಳನ್ನು ಕಟ್ಟಿ, ಇರುವಾಗ್ಯೆ ಕೂಡಲೇ ಸರಕಾರದವರು ಇನಾಕ್ಯುಲೇಶನ್ ಮಾಡಿಸಿದರು. ಜನರಿಗೆ ಯಾವ ಉಪಹತಿಯು ಉಂಟಾಗಲಿಲ್ಲ. ಶನಿವಾರ ಸಂತೆಗೆ ಒಂದೂವರೆ ಮೈಲು ದೂರದಲ್ಲಿರುವ ತಿರಂಗಾಲದಲ್ಲಿ ಇಲಿ ಸತ್ತು ಒಂದೂವರೆ ತಿಂಗಳು ಆದಾಗ್ಯು ಸರಕಾರಕ್ಕೆ ತಿಳಿಸದೆಯೂ, ತಾವೂ ಊರನ್ನು ಬಿಡದೆಯೂ ಪ್ಲೇಗ್ ರೋಗವು ತಲೆದೋರಿ ಸುಮಾರು ಮೂರು ಜನರು ಮರಣವನ್ನು ಹೊಂದಿದ್ದಲ್ಲದೆ ಏಳು ಜನರಿಗೆ ಕಾಯಿಲೆ ಆಗಿದೆ. ಈ ಪ್ಲೇಗ್ ರೋಗಕ್ಕೆ ಊರು ಬಿಡುವದು ಒಂದನೇ, ಇನಾಕ್ಯುಲೇಶನ್ ಮಾಡಿಸಿಕೊಳ್ಳುವದು ಎರಡನೇ ಎಚ್ಚರಿಕೆಗಳೆಂದು ಅನುಭವದ ಮೇರೆ ತಿಳಿದ ಸಂಗತಿಯಾಗಿದೆ. ಪ್ಲೇಗ್ ರೋಗಕ್ಕೆ ಮುಖ್ಯ ಊರನ್ನು ಬಿಡುವುದು ಒಳ್ಳೇಯದೆಂದು ನಾನು ಒತ್ತಿ ಹೇಳುತ್ತೇನೆ.

'ದೇಶ ಹಿತೈಷಿ'

ಪ್ರಿಯ ಪತ್ರಿಕಾ ಕರ್ತರೇ,

ನಮ್ಮ ದೇಶಕ್ಕೆ ದೊರೆತಿರುವ ಹೊಸ ಕೌನ್ಸಿಲಿನ ಪ್ರಭಾವದಿಂದ ಈ ಕಾಹಲ್ ವರೆಗೂ ದೊರೆಯದಿದ್ದ ಫಲವು ಹುತ್ತುಗಟ್ಟನಾಡಿನ ರೈತರಿಗೆ ಲಭಿಸಿದಂತೆ ಆಯಿತು. ಗೋಣಿಕೊಪ್ಪಲಿಂದ ಹೊರಟು ಮೈಸೂರಿಗೆ ಹೋಗುವ ಸರಕಾರಿ ರಸ್ತೆಯಲ್ಲಿ ಹೆಬ್ಬಾಲೆ ಗ್ರಾಮದ ಬಳಿ ಒಡೆದು ಬಾಳೆಲೆ ಅರಮನೆ ಬಾಗೆಗೆ ಹೋಗುವ ಒಂದು ಗಾಡಿ ದಾರಿಯನ್ನು ರಿಪೇರಿಮಾಡಿಸುವ ಬಗ್ಯೆ ಮುನ್ನೂರು ರುಪಾಯಿಗಳನ್ನು ಸರಕಾರದವರು ಮಂಜೂರು ಮಾಡಿದರು, ಇದನ್ನು ಕೇಳಿದ ಆಜುಬಾಜು ರೈತರೆಲ್ಲರೂ ಬಹಳ ಆನಂದಪಟ್ಟರು. ಅಷ್ಟರಲ್ಲೆ ಮ. ರಾ. ಸಣ್ಣುವಂಡ ಗಣಪತಿಯವರು, ಚಿಟ್ಟಿಯಪ್ಪನವರು, ಕುಟ್ಟಪ್ಪನವರು ಈ ಮೂರು ಜನರು ರಸ್ತೆ ಕ್ಲೀನ್ ಮಾಡಿಸಲು ಒಪ್ಪಿಕೊಂಡು ಕೆಲಸವನ್ನು ಶುರುಮಾಡಿಸಿ ಎರಡೂವರೆ ಮೈಲು ವರೆಗೆ ಚೆನ್ನಾಗಿ ಮಾಡಿಸಿ ಇಷ್ಟರಲ್ಲೇ ಮುನ್ನೂರು ರುಪಾಯಿ ವೆಚ್ಚವಾಯಿತು. ಗ್ರಾಮಸ್ಥರು ಸಹಾಯ ಕೊಡಬೇಕೆಂದು ಹಾಗೆ ಕೊಡದೆ ಹೋದರೆ ಆಗುವದಿಲ್ಲವೆಂದು ಹೇಳಲಿಕ್ಕುತುರು ಆಯಿತು. ಈ ವರುಷ ಮತ್ತು ಕಳೆದ ವರುಷ ಸಹ ಮಳೆಯಲ್ಲು ಉಂಟಾದ ನಷ್ಟವನ್ನು ಅನುಭವಿಸುತ್ತಿದ್ದರೂ ಕೂಡ ರಸ್ತೆಯುಲ್ಲದಂತಾಗುತ್ತೆಂದು ತಲೆ ಒಂದಕ್ಕೆ ಎರಡು, ಮೂರು, ಇದಕ್ಕೂ ಹೆಚ್ಚು ರುಪಾಯಿ ಸಹ ಕೊಟ್ಟರು ಆದಾಗ್ಯೂ ಕೂಡ ಮುಂದಕ್ಕೆ ಒಂದು ಮೈಲು ಸಾಧಾರಣ ಮಾಡಿ ಮುಂದಕ್ಕೆ ಕಾಡು ಸವರಿ ಹಳ್ಳಕೊಳ್ಳಕ್ಕೆ ಸ್ವಲ್ಪ ಸ್ವಲ್ಪ ಮಣ್ಣು ಕಿತ್ತಕೆಳಿಸಿ ಮರಗಳ ಸಂದು ಸಂದಿನಲ್ಲಿಯೇ ರಸ್ತೆಯನ್ನು ಮುಂದಕ್ಕೆ ಸಾಗಿಸುತ್ತಿದ್ದಾರೆ. ಮಹನೀಯರು ಮಾಡಿರುವ ಕೆಲಸಕ್ಕೆ ಒಂದು ಮಳೆ ಬಿದ್ದರೆ ನೀರು ಹೋಗಲು ರಸ್ತೆ ಮಾಡಿದಂತಲ್ಲದೆ ಇದರಿಂದ ಬೇರೆ ಉಪಕಾರ ಕಾಣುವುದಿಲ್ಲ. ಇನ್ನಾದರು ಮಹನೀಯರು ಅದನ್ನು ಉತ್ತಮ ರೀತಿಯಿಂದ ಮಾಡಿಸಿ ಕೀರ್ತಿಗೆ ಪಾತ್ರರಾಗಬೇಕಾಗಿ ಪ್ರಾರ್ಥಿಸುವ,

'ಪ್ರೇಕ್ಷಕ'

ನಿಕ್ಕಲ್ ಎಂಟಾಣೆ.

ಮಹನೀಯರೆ,

ನಿಕ್ಕಲ್ ಎಂಟಾಣೆಯನ್ನು ಬರುವ 1925ನೇ ಇಸವಿ ಅಕ್ಟೋಬರ್ ತಾರೀಕು 30 ರಿಂದ ಆಚೆಗೆ ಉಪಯೋಗಿಸದಂತೆ ಸರಕಾರದವರು ಮಾಡುತ್ತಾರೆಯೆಂದು ಕೊಡಗು ಖಜಾನೆಯಿಂದ ಒಂದು ನೋಟಿಫಿಕೇಶನ್ ಹುಟ್ಟಿದ್ದು ಸರಿಯಷ್ಟೆ. ಅಷ್ಟರಲ್ಲೆ ಅಕ್ಟೋಬರ್ ಎಂಬದನ್ನು ಪ್ರಾಮುಖವಾಗಿ ತೆಗದುಕೊಂಡು ಇಸವಿಯನ್ನು ಮರೆತು ಆ ದುಡ್ಡನ್ನೇ ತೆಗಿಯಬಾರದೆಂಬ ಚಳವಳವು ವ್ಯಾಪಾರಸ್ಥರಲ್ಲಿ ಪ್ರಾರಂಭಿಸಿಕೊಂಡಿದೆ. ಆದ್ದರಿಂದ ವ್ಯಾಪಾರಸ್ಥರೇ, ಪ್ರತಿ ಪೋಸ್ಟಾಫೀಸಿನಲ್ಲಿ ಮತ್ತು ಪಬ್ಲಿಕ್ ಸ್ಥಳಗಳಲ್ಲಿ ಈ ವಿಷಯ ಹಚ್ಚಿಸಿರುವ ನೋಟೀಸ್‌ಬೋರ್ಡಿಗೆ ನಿಮ್ಮ ಗಮನವನ್ನು ಕೊಡುವಿರಾ? ಇದು ಅಲ್ಲದೆ ನಿಕ್ಕಲ್ ನಾಲ್ಕಾಣೆಯನ್ನು ಕೂಡ ತೆಗಿಯಬಾರದೆಂದು ತಿಳುವಳಿಕೆ ಇಲ್ಲದೆ ಹುಟ್ಟಿಸಿಕೊಂಡ ವರ್ತಮಾನವನ್ನು ಇಂದಿನಿಂದಲೇ ಬಿಟ್ಟುಬಿಡಿ. ನಿಮ್ಮ ನಿಕ್ಕಲ್ ಎಂಟಾಣೆಯನ್ನು ಪೇಟೆಯವರು ತೆಗೆದುಕೊಳ್ಳದಿದ್ದ ಪಕ್ಷದಲ್ಲಿ ಎಲ್ಲಿ ಖಜಾನೆವುಂಟೊ ಅಲ್ಲಿ ತೆಗೆದುಕೊಂಡುಹೋಗಿಕೊಟ್ಟಲ್ಲಿ ಅಷ್ಟೇ ದುಡ್ಡು ವಾಪಾಸು ಸಿಕ್ಕುವುದು. ಆದ್ದರಿಂದ ಅಂಥಾ ದುಡ್ಡಿನಿಂದ ನಷ್ಟಹೊಂದಬೇಡಿ. ಇದರಲ್ಲು ಇನ್ನೊಂದು ಮಾತು ಇದೆ. ರಾತ್ರಿಯಲ್ಲಿ ಹೋಗುವಾಗ್ಯೆ ಮನುಷ್ಯನೆ, ಪಿಶಾಚಿಯೊ, ಎಂದು ಪರಿಶೋಧನೆ ಮಾಡುವುದು ನಿಮ್ಮ ಕೆಲಸವಾಗಿದೆ. ಅದೇ ರೀತಿಯಲ್ಲಿ ನಿಕ್ಕಲ್ ದುಡ್ಡುಗಳಲ್ಲಿ ಕೌಂಟರ್‌ಫೀಟ್ ಕಾಯಿನ್ (ಮೋಸದ ನಾಣ್ಯ) ಮಿಶ್ರವಿರುತ್ತದೆ. ಇದು ಏನು, ಹ್ಯಾಗೆ ಇರುತ್ತದೆ, ಯಾರು ಮಾಡಿದರು, ಎಂತದ್ದು? ನೀಸಮಿಶ್ರಮಾಡಿ ದುಡ್ಡು ಮಾಡಿಬಿಟ್ಟದ್ದು. ಇದು ಹೇಗೆ ಇರುವದೆಂದು ಕೇಳುವಿರಾ? ಫೇಸ್‌ಪೌಡರ್ ಹಾಕಿಕೊಂಡ ಹೆಂಗಸಿನೋಪಾದಿಯಲ್ಲಿ ತನ್ನ ನಿಜ ಆಕಾರವನ್ನು ಬಿಟ್ಟು ತನ್ನ ಮುಖದಮೇಲೆ ಕಪ್ಪುವರ್ಣ ಇರುತ್ತದೆ. ತೂಕ ಕಮ್ಮಿ, ಇದೇ ಕಳ್ಳ ದುಡ್ಡು, ಈ ದುಡ್ಡಿಗೆ ಮಾತ್ರ ಒಂದುಕಾಸೂ ಸಿಕ್ಕಲಿಕ್ಕಿಲ್ಲವೆಂದು ದೃಢವಾಗಿ ನೆನಪಿನಲ್ಲಿಟ್ಟುಕೊಳ್ಳಿ. ಈ ಮಧ್ಯೆ ನನ್ನ ಸ್ನೇಹಿತನೊಬ್ಬನು ಬ್ರಾಹ್ಮಣರ ಬೀದಿಯಲ್ಲಿ ಒಂದು ಕಳ್ಳದುಡ್ಡನ್ನು ಹಿಡಿದುಕೊಂಡು ನಿಂತಿದ್ದನು. ಅದು ಅವರಿಗೆ ತಿಳಿಯದೆ ನನಗೆ ತೋರಿಸಿದರು. ನಾನುಕೈಗೆ ಸಿಕ್ಕಿದ ಕೂಡ್ಲೆ ಕೌಂಟರ್‌ಫೀಟ್ ಕಾಯಿನ್ ಎಂದು ವಾಪಾಸುಕೊಟ್ಟೆ. ಅಷ್ಟರಲ್ಲಿಯೇ ಇನ್ನೊಬ್ಬ ಸ್ನೇಹಿತನು ಬಂದು ಇದು ನ್ಯಾಯವಾದದ್ದುದನ್ನು ಖಜಾನೆಯಲ್ಲಿ ಯಾತಕ್ಕೋಸ್ಕರ ತೆಗೆಯಬಾರದೆಂಬ ಚರ್ಚೆಯಾಯಿತು. ಖಜಾನೆಯವರು ಹ್ಯಾಗೆತಾನೆ ಕಳ್ಳದುಡ್ಡಿಗೆ ಒಳ್ಳೆದುಡ್ಡು ಕೊಟ್ಟಾರು? ಕಳ್ಳದುಡ್ಡನ್ನು ತೆಗೆದುಕೊಳ್ಳಲಿಕ್ಕೆ ಹೇಳಿದವರ್ಯಾರು ಎಂಬ ಚರ್ಚೆಯಿಂದ ದುಡ್ಡು ಮುರಿಯಲಾಯ್ತು. ಒಬ್ಬನೇ ಬುದ್ಧಿ ಇಲ್ಲದ ರುಚಿಯೆಂದು ನಾನು ತಿಳಿದುಕೊಂಡೆ. ಯಾಕಂದರೆ ಸಿಂಹವನ್ನು ಸರ್ಕಸಿನಲ್ಲಿ ಆಡಿಸಲಿಕ್ಕೆ ಅದರಲ್ಲಿ ತರಬೇತು ಹೊಂದಿದವನಿಗೇನೇ ಗೊತ್ತಲ್ಲದೆ ನಮಗೆ ಗೊತ್ತಿದೆಯೋ? ಆದ್ದರಿಂದ ಸರ್ವರೂ ಈ ಮೇಲಿನ ವಿಷಯವನ್ನು ಚನ್ನಾಗಿ ನೆನಪಿನಲ್ಲಿಟ್ಟುಕೊಳ್ಳಿ.

ತಿಳಿದವ.

ಅಮ್ಮತ್ತಿ ನೇಶನಲ್ ಸ್ಕೂಲು.

ಮಹನೀಯರೆ,

ಕೊಡಗು ದೇಶದ ಹಿತವು ನಿಮ್ಮ ಹೃದಯದಲ್ಲಿ ಎಳ್ಳಿನಷ್ಟಾದರೂ ಇದ್ದರೆ, ಆ ದೇಶಭಕ್ತಿಯನ್ನು ಅಮ್ಮತ್ತಿ ನೇಶನಲ್ ಶಾಲೆಗೆ ತಮ್ಮ ಉದಾರವಾದ ಚಂದಾದಿಂದ ತೋರಿಸಬೇಕಾಗಿ ಕೋರುತ್ತೇನೆ. ಕೊಡಗು ದೇಶದಲ್ಲು ಇದೊಂದೇ ನೇಶನಲ್ ಸ್ಕೂಲು ಇರುವುದು. ಇದರ ಇರುವಿಕೆಯಿಂದ ಎಷ್ಟು ಪ್ರಯೋಜನವಿದೆಯೆಂದು ದೇಶದವರಿಗೆ ತಿಳಿಯದ್ದಲ್ಲ. ಇದರ ಅಭಿವೃದ್ಧಿಗಾಗಿ ನಾವು ಸಹ ಎಷ್ಟು ಮೇಹನತ್ತು ಮಾಡುತ್ತಾ ಇದ್ದೇವೆ ಎಂಬದು ದೇಶೀಯರಿಗೆ ಚೆನ್ನಾಗಿ ಗೊತ್ತಿದೆ. ಈ ಸಮಯದಲ್ಲು ದೇಶದ ಮಹನೀಯರು ಧಾರಾಳವಾದ ಮನಸ್ಸಿನಿಂದ ಧರ್ಮ ಮಾಡಿ ಈ ನೇಶನಲ್ ಸ್ಕೂಲಿಗೆ ಚಂದ ದಯಪಾಲಿಸದಿದ್ದರೆ ಇದನ್ನು ನಿಲ್ಲಿಸಬೇಕಾಗಿ ಬರುತ್ತೆ. ಕೊಡಗು ದೇಶದಲ್ಲಿ ಅತಿ ವಿರಳವಾಗಿರುವ ಪಬ್ಲಿಕ್ ಕಾರ್ಯದಲ್ಲಿ ಒಂದು ಅಂತ್ಯವಾಗಿ ಹೋಗುತ್ತೆ. ದೇಶದ ಮಹನೀಯರು ಇದರ ವಿಷಯ ಮನಃಪೂರ್ತಿಯಾಗಿ ಯೋಚನೆ ಮಾಡಬೇಕಾಗಿದೆ. ನಾನು ದೇಶದವರಿಗೆ ಈ ಸತ್ಯವಾದ ಸಂಗತಿಯನ್ನು ಬಹಿರಂಗಪಡಿಸಿ ನನ್ನ ಭಾರವನ್ನು ಇಳಿಸಿರುತ್ತೇನೆ.

ಮ. ರಾ. ರಾ. ಕೆ. ಕರುಂಬಯ್ಯನವರೂ ನಾನೂ ಕಳೆದ ತಿಂಗಳಲ್ಲಿ ಮಡಿಕೇರಿಗೆ ಚಂದಾ ವಸೂಲಿಗೆ ಹೋಗಿದ್ದೆವು. ಮಡಿಕೇರಿಯಲ್ಲಿ ಕೆಲವು ಐಶ್ವರ್ಯವಂತರು ತಮ್ಮ ತಮ್ಮ ಕಾಫಿ ತೋಟಗಳಿಗೆ ಹೋಗಿಬಿಟ್ಟಿದ್ದರು, ಅವರಲ್ಲಿ ಪ್ರಸಿದ್ಧ

ಹೋದರೆ ಚಂದವನ್ನು ದಯಪಾಲಿಸುವರು ಎಂಬ ಭರವಸೆಯು ತುಂಬಾ ಇದೆ.

ಅಲ್ಲಿ ವಸೂಲಿಯಾದ ಚಂದದ ತಪಶೀಲ್ :—ಮೆ. ಯಸ್. ಯಂ. ಪಿಂಟೋರವರು ಯಂ. ಎಲ್. ಸಿ. ರು. 10, ಯಂ. ಚಿಣ್ಣಪ್ಪನವರು ಯಂ. ಎಲ್. ಸಿ. ರು. 10, ಸಿ ದೇವಯ್ಯನವರು ರು. 5, ರಾ. ಬಾ. ಕೆ ಕುಟ್ಟಯ್ಯನವರು ರು. 10, ಸಿದ್ದಲಿಂಗಪ್ಪನವರು ರು. 3, ರಾ. ಬಾ. ಕೆ. ಅಪ್ಪಯ್ಯನವರು ರು. 10, ಕೆ. ಅಪ್ಪಯ್ಯನವರು ರು. 2, ಸಿ. ಯನ್. ವೆಂಕಪ್ಪಯ್ಯನವರು ಯಂ. ಎಲ್. ಸಿ ರು. 10, ಪಿ. ಬೆಳ್ಳಪ್ಪನವರು ಯಂ ಎಲ್. ಸಿ. ರು. 2, ಶ್ರೀಮತಿ ಸಿದ್ದಮ್ಮನವರು ರು. 5, ಪಿ. ಬಿ. ಬೋಪಯ್ಯನವರು ರು. 1, ಜುಮ್ಲ 68 ರುಪಾಯಿ ವಸೂಲಾಯಿತು.

ತಮ್ಮ ವಿಧೇಯ,

ಅಬ್ದುಲ್ ಗಫೂರ್‌ಖಾನ್.

ಮೂರ್ನಾಡಿಗಾಗಿ ಬಸ್ಸ್ ಸರ್ವೀಸು.

ಅಯ್ಯಾ,

ನಮ್ಮ ಈ ಕೊಡಗಿನಲ್ಲಿ ಪುರಾತನದಿಂದಲೂ ವೀರಾಜಪೇಟೆ ಮಡಿಕೇರಿ ರಸ್ತೆ ಆದರೆ, ಮೂರ್ನಾಡಿಗಾಗಿ ಹೋಗುವ ರಸ್ತೆಯೇ ಪ್ರಧಾನಪಟ್ಟ ರಸ್ತೆಯಾಗಿರುತ್ತೆ. ಈ ರಸ್ತೆಗೆ ಅಡ್ಡ ಇರುವ ಬೇತರಿಕಡು ಎಂಬ ಕಾವೇರಿ ಹೊಳೆಗೆ ಸೇತುವೆ ಅಗತ್ಯ ಎಂದು ದೇಶೀಯರು ಲಾಗಾಯಿತಿನಿಂದ ಹೋರಾಡುವದಲ್ಲದೆ, ಜಮೀನ್ದಾರ್ ಸಂಘ ಉಂಟಾದಂದಿನಿಂದಲೂ ಸರಕಾರವನ್ನು ಕೇಳುತ್ತಲಿದೆ, ಅಲ್ಲದೆ ಈಗ ಹೊಸದಾಗಿ ಏರ್ಪಾಡಾದ ಕೌನ್ಸಿಲ್ ಸಹ ಹೋರಾಡುತ್ತಲಿದೆ. ಹೀಗಿರುವ ಮುಖ್ಯಪಟ್ಟ ರಸ್ತೆಗಾಗಿ ಅನೇಕ ಪ್ರಯಾಣಿಕರು ಮತ್ತು ಮುಖ್ಯ ಪಟ್ಟಣವಾದ ಮಡಿಕೇರಿಯಲ್ಲಿ ದೊಡ್ಡ ದೊಡ್ಡ ವ್ಯಾಜ್ಯಗಳು, ಅಪ್ಪೀಲ್ ಮೊಕದ್ದಮೆಗಳಿಗೆ ಕಕ್ಷಿಗಾರರು ಸಹ ಸಮೀಪ ದಾರಿಯಾದ ಈ ರಸ್ತೆಯಲ್ಲೇ ಬರ ಹೋಗುವದಾಗಿದೆ. ಹೀಗಿರುತ್ತಾ ಈ ರಸ್ತೆಗಾಗಿ ಬಸ್ಸ್ ಓಡಾಡುವದಿಲ್ಲವೆಂದರೆ ವ್ಯಸನಕರವಾದ ಸಂಗತಿಯಾಗಿದೆ. ಈಗ ಕೆಲವು ತಿಂಗಳ ಹಿಂದೆ ಮೆ. ಪುದಿಯಾಂಡಿಯವರ ಬಸ್ಸ್ ಓಡಾಡುತ್ತಿರುವಾಗ್ಯೆ ಅನೇಕ ರೈತರು ತಮಗೆ ಮಡಿಕೇರಿಯಲ್ಲಿದ್ದ ಕೆಲಸವನ್ನು ಪೂರೈಸಿಕೊಂಡು ಸಾಯಂಕಾಲಕ್ಕೆ ಅವರವರ ಮನೆಯನ್ನು ಸೇರುತ್ತಿದ್ದರು. ಈ ಸರ್ವಿಸಿಗೆ ಖಾಯಂ ಲೈಸೆನ್ಸ್ ಕೊಡದೆ, ಕಾವೇರಿ ಬಸ್ಸ್ ಕಂಪೆನಿಯವರಿಗೇನೆ ಈ ಲೈಸಿನ್ನಿಗೆ ಸಹ ಲೈಸೆನ್ಸ್ ಕೊಟ್ಟಿರುತ್ತಾರೆಂತಲೂ ಆದ್ದರಿಂದ ಪುದಿಯಾಂಡಿಯವರ ಸತ್ಯನಾರಾಯಣ ಸರ್ವಿಸಿನ ಬಸ್ಸ್ ನಡಿಯುವದಿಲ್ಲವೆಂತಲೂ ತಿಳಿಯಬರುತ್ತದೆ. ಈ ಲೈನಿನಲ್ಲಿ ಓಡಿಸಿದರೆ ಅವರಿಗೆ ಚಾರ್ಜು ಕಮ್ಮಿಯಾಗುವದರಿಂದ ಸಿದ್ದಾಪುರಕ್ಕಾಗಿ ವೀರಾಜಪೇಟೆಗೆ ಓಡಿಸುತ್ತಾರೆ. ಆ ಕಾರಣ ಈ ಲೈನ್ ಮುಚ್ಚಿನೆ. ಮಡಿಕೇರಿ ಮಂಗಳೂರು ರಸ್ತೆಗಾಗಿ ಎರಡು ಕಂಪೆನಿಯವರ ಎರಡು ಬಸ್ಸ್ ನಿತ್ಯ ಓಡ್ಯಾಡುತ್ತಲಿರುವಾಗ್ಯೆ ಈ ದೇಶದ ಮಧ್ಯಕ್ಕಾಗಿ ಹೋಗುವ ಮುಖ್ಯಪಟ್ಟ ರಸ್ತೆಗಾಗಿ ಎರಡು ಕಂಪೆನಿಯವರಿಗೂ ಯಾಕೆ ಲೈಸೆನ್ಸ್ ಕೊಟ್ಟು ದೇಶೀಯರ ಕಷ್ಟ ನಿವಾರಣೆ ಮಾಡಬಾರದೆಂದು ಗೊತ್ತಾಗುವದಿಲ್ಲ. ಈ ಸಂಗತಿಯನ್ನು ಸರಕಾರದವರು ದಿವ್ಯ ಚಿತ್ತಕ್ಕೆ ತಂದು ಈ ರಸ್ತೆಗಾಗಿ ನಿತ್ಯ ಕಮ್ಮಿ ಒಂದು ಒನ್ನನ್ನಾದರೂ ಓಡಿಸುವಂತೆ ಬೇರೆ ಕಂಪನಿಗೆ ಲೈಸೆನ್ಸ್ ಕೊಟ್ಟು ರೈತರನ್ನು ಕಾಪಾಡಬೇಕೆಂದು ವಿನಂತಿ;

'ಪ್ರಯಾಣಿಕ'

ವೀರಶೈವ ವಿದ್ಯಾನಿಧಿ.

ಅಯ್ಯಾ,

ಸೋಮವಾರಪೇಟೆ ತಾಲೋಕಿನಲ್ಲಿ ಲಿಂಗಾಯತರು ಬಹಳ ಹಿಂದುಳಿದವರೆಂದು ಅಲ್ಲಿನ ಮುಖ್ಯಸ್ಥರೆಲ್ಲರೂ ಸೇರಿ ಒಂದು 'ವೀರಶೈವ ವಿದ್ಯಾನಿಧಿ' ಎಂಬ ಫಂಡನ್ನು ಏರ್ಪಡಿಸಿ ಮೂರು ವರುಷಗಳು ಕಳೆದವು. ಸಂಘವು ಸ್ಥಾಪನೆಯಾದ ಒಂದನೆಯ ವರುಷದಲ್ಲಿ 2,000 ರುಪಾಯಿಯ ಚಂದಾವು ವಸೂಲ್ ಆಗಿದ್ದಲ್ಲದೆ ಸುಮಾರು 6,000 ರುಪಾಯಿ ಕೊಡುವಂತೆ ಮತ ಭಾಂಧವರು ವಾಗ್ದಾನ ಮಾಡಿದರು. ಇಂದಿಗೆ ಒಂದನೆಯ ವರುಷದಲ್ಲಿ ಕೊಡ್ಲಿಪೇಟೆಯಲ್ಲಿ ಒಂದು ಜನರಲ್ ಮೀಟಿಂಗು ನಡೆದು ಅಲ್ಲಿ ನೆರೆದಿದ್ದ ಮತ ಭಾಂಧವರು ಸಂತೋಷಾರ್ಥವಾಗಿ 600 ರುಪಾಯಿ ಚಂದಾ ಕೊಟ್ಟದ್ದಲ್ಲದೆ ವರುಷ ಒಂದರ 2 ಅಥವ 3 ರುಪಾಯಿಯ ಮೇರೆ ಚಂದಾ ಕೊಡುವುದಾಗಿ ವಾಗ್ದಾನ ಮಾಡಿದರು. ಜನರಲ್ ಮೀಟಿಂಗ್ ನ ಠರಾವಿನಂತೆ ಸಂಘದ ವಸೂಲಿಯು ನಿಂತು ಸಬ್ ಕಮಿಟಿ ಮೆಂಬರುಗಳ ಅನುಮತಿ ಇಲ್ಲದೆ ಡಿಪಾಜಿಟಿನಲ್ಲಿದ್ದ ಹಣವನ್ನು ತೆಗೆದು ಸಂಘದ ಮುಖ್ಯಸ್ಥರೇ ಸಾಲವನ್ನು ಹೊಂದಿಕೊಂಡದ್ದನ್ನು ನೋಡಿ ಸಂಘವನ್ನು ಈ ವರೆಗೆ ರೆಜಿಸ್ಟರ್ ಮಾಡದೆ ಇರುವುದರಿಂದ ಸಬ್ ಕಮಿಟಿ ಮೆಂಬರುಗಳಿಗೂ ಮತ ಭಾಂಧವರಿಗೂ ಈ ಸಂಘದ ಮೇಲೆ ಅಪನಂಬಿಕೆ ಹುಟ್ಟುವುದಾಗಿದೆ. ಈಗಲೂ ಮತ ಭಾಂಧವರೆಲ್ಲರೂ ಒನ್ನುಮನಸ್ಸಿನಿಂದ ಹಿಂದಿನ ಈ ಸಂಘದ ಕರೆಸ್‌ಪಾಂಡೆನ್ಸುಗಳನ್ನು ಮುಂದಕ್ಕೆ ತಂದು ಸಂಘವನ್ನು ರಿಜಿಸ್ಟರ್ ಮಾಡಿಸಿ ಬಂಡವಾಳವನ್ನು ವಸೂಲ್ ಮಾಡದೆ ಇದ್ದರೆ ಮಾರ್ಜಾಲ ರಾಜನು ಮೂಷಿಕ ಪ್ರಜೆಗಳಿಗೆ ಕಾಶೀ ಮಾರ್ಗದಲ್ಲಿ ಮೋಕ್ಷವನ್ನು ತೋರಿಸಿದಂತೆ ಆಗುವುದಿಲ್ಲವೇ ? ಮತ ಭಾಂಧವರೆಲ್ಲರೂ ಮುಂದಕ್ಕೆ ಬಂದು ಸಂಘವನ್ನು ಉದ್ಧರಿಸಬೇಕೆಂದು ನನ್ನ ಕೋರಿಕೆಯಾಗಿದೆ.

ಮತ ಹಿತೈಷಿ.

ಮಡಿಕೇರಿ ವೀರಾಜಪೇಟೆ ಬಸ್ಸ್ ಸರ್ವಿಸ್.

ಮಹನೀಯರೆ,

ಶ್ರೀ ಕಾವೇರಿ ಮೋಟಾರ್ ಸರ್ವೀಸನ್ನು ಕೊಡಗಿನ ಕೆಲವು ಮುಖ್ಯಸ್ಥರಾಗಿಯೂ, ವಿದ್ಯಾವಂತರಾಗಿಯೂ ಮತ್ತು ಧನವಂತರಾಗಿಯೂ ಇರುವ ನಮ್ಮ ಸ್ವಂತ ಜನರೇ ಪ್ರಯಾಣಸ್ಥರಿಗೆ ಆದಷ್ಟು ಮಟ್ಟಿಗೆ ಪ್ರಯೋಜನವನ್ನೂ ಅನುಕೂಲತೆಯನ್ನೂ ಉಂಟು ಮಾಡಲಿಕ್ಕೋಸ್ಕರ ಕೈಕೊಂಡರೆಂದು ತಿಳಿದು ಬಂದದಾಗಿದೆ. ಆದರೆ ಈ ಕಂಪೆನಿಯು ಬಂದಂದಿನಿಂದ ಇದರಲ್ಲಿ ಪ್ರಯಾಣಮಾಡಿ ಅನುಭವವನ್ನು ಹೊಂದಿದ ಕೆಲವು ಮಹನೀಯರು ಈ ಸರ್ವೀಸು ಆಗಾಗ್ಯೆ ದಾರಿಯಲ್ಲಿ ನಿಂತು ಹೋಗಿ ಪ್ರಯಾಣಿಕರಿಗೆ ಉಂಟಾದ ಕಷ್ಟಗಳನ್ನೂ ಸ್ತ್ರೀಯರಿಗೆ ಕೂತುಕೊಳ್ಳಲು ಸ್ಥಳದ ಅನಾನುಕೂಲತೆಯನ್ನೂ ಚೆನ್ನಾಗಿ 'ಕೊಡಗು' ಪತ್ರಿಕೆಯಲ್ಲಿ ವಿವರಿಸಿದಾಯಿತು. ಈಗಲೂ ಮಡಿಕೇರಿಯಿಂದ ಅಮ್ಮತ್ತಿಗೆ ಮತ್ತು ವೀರಾಜಪೇಟೆಗೆ ಮೈಲಿಗೆ ಒಂದಾಣೆ ದರದಲ್ಲೂ, ಬಾಕಿ ಸ್ಥಳಗಳಿಗೆ ಮೈಲಿಗೆ 0-1-3 ಕಾಸಿನ ದರದಲ್ಲೂ ಚಾರ್ಜು ತೆಗೆದುಕೊಳ್ಳುತ್ತಿದ್ದಾರೆ. ಇದು ಸರ್ವ ಸಾಧಾರಣವಾಗಿ ಎಲ್ಲರಿಗೂ ತಿಳಿದ ಮಟ್ಟಿಗೆ ಹೆಚ್ಚಾಗಿದೆ. ಈ ಕಂಪೆನಿಗಿಂತ ಮೊದಲಿದ್ದ ಆಂಟನೀಯ ಬಸ್ಸ್ ಕಂಪೆನಿಯವರು ಮಡಿಕೇರಿಯಿಂದ ವೀರಾಜಪೇಟೆಗೆ 1-8-0 ಯೂ ಬೇರೆ ಯಾವ ಸ್ಥಳಕ್ಕಾದರೂ ಮೈಲಿಗೆ ಒಂದಾಣೆ ಮೇರೆ ಚಾರ್ಜು ಮಾಡುತ್ತಿದ್ದರು. ಇದೂ ಅಲ್ಲದೆ ಅವರ ಬಸ್ಸಿನಲ್ಲಿ ಸ್ತ್ರೀಯರಿಗೆ ಕೂತುಕೊಳ್ಳಲು ಸಹ ಅನುಕೂಲವಾಗಿತ್ತು. ಈಗ ನಮ್ಮ ಸ್ವಂತ ಜನರು ಸರ್ವೀಸನ್ನು ಇಟ್ಟು ಪ್ರಯಾಣಿಕರಾದ ಗರೀಬ ಜನರಿಗೆ ಯಾವುದೊಂದೂ ಪ್ರಯೋಜನವೂ ಆಗಿ ಇರುವುದಿಲ್ಲವೆಂದು ಹೇಳಬೇಕಾಗಿದೆ.

ಈ ಕಂಪೆನಿಯಲ್ಲಿ ಆಗಾಗ್ಯೆ ಡ್ರೈವರುಗಳನ್ನು ಮತ್ತು ಕಂಡಕ್ಟರುಗಳನ್ನು ಸಹ ಬದಲಾಯಿಸುವುದರಿಂದ ಪ್ರಯಾಣಿಕರಿಗೆ ಬಹಳ ತರದ ತೊಂದ್ರೆಗಳಿಗೆ ಕಾರಣವಾಗಿದೆ. ಇದರ ಮಧ್ಯ ಬೇರೆ ಕಂಪನಿಗಳು ಲೈಸನ್ಸಿಗೆ ಅರ್ಜಿ ಬರಕೊಂಡದ್ದಕ್ಕೆ ಸರಕಾರದವರು ತಿರಸ್ಕಾರ ಮಾಡಿದರೆಂದೂ ಸಹ ವರ್ತಮಾನ ಸಿಕ್ಕಿದೆ. ಹೀಗೆ ಲೈಸೆನ್ಸ್ ಕೊಡದೆ ತಿರಸ್ಕಾರ ಮಾಡಲು ಕಾರಣವೇನೆಂಬದು ಗೊತ್ತಾಗುವುದಿಲ್ಲ. ಇಂಥಾ ತಿರಸ್ಕಾರಕ್ಕೆ ಜವಾಬ್ದಾರರಾದ ಅಧಿಕಾರಿಗಳು ಜನರ ತಿಳುವಳಿಕೆ ಬಗ್ಯೆ ಆ ಕಾರಣಗಳನ್ನು ಪ್ರಕಟಿಸುವರಾಗಿ ಕೋರಿಕೆ. ಹಾಗೆ ಪ್ರಕಟಿಸದೆ ಹೋದರೆ ಜನರಲ್ಲಿ ಅನೇಕ ತರದ ಊಹನೆಗಳಿಗೆ ಎಡೆಕೊಟ್ಟಂತಾಗುತ್ತೆ. ಒಂದು ವಕ್ಷ ಬೇರೆ ಕಂಪೆನಿಯವರಿಗೆ ಲೈಸೆನ್ಸ್ ಕೊಟ್ಟ ಪಕ್ಷದಲ್ಲಿ ಅವರು ನಮ್ಮವರ ಕಂಪೆನಿಗಿಂತಲೂ ಕಮ್ಮಿ ಚಾರ್ಜು ಮಾಡಿ ಪ್ರಯಾಣಿಕರಾದ ಗರೀಬ ಜನರಿಗೆ ಪ್ರಯೋಜನವನ್ನುಂಟು ಮಾಡಬಹುದೆಂತಲೂ ಹಾಗೆ ಮಾಡಿದ ಪಕ್ಷದಲ್ಲಿ ನಮ್ಮ ಜನರ ಕಂಪೆನಿಯ ವೃದ್ಧಿಗೆ ಅಡ್ಡಿ ಮಾಡಿದ ಹಾಗೆ ಆಗುತ್ತದೆ ಎಂದು ತಿಳಿದು ಡಿ. ಮೇಜಿಸ್ಟ್ರೇಟರು ಬೇರೆ ಕಂಪೆನಿಯವರಿಗೆ ಲೈಸೆನ್ಸ್ ಕೊಡಲಿಲ್ಲವೆಂತ ಅನೇಕರ ಭಾವನೆ. ಈ ಕಾರಣಗಳೇ ಅಲ್ಲದೆ ಇನ್ನೂ ಬೇರೆ ಕಾರಣಗಳೂ ಇರಬಹುದೆಂದು ಹಲವರು ಹೇಳುವುದನ್ನು ನಾನು ಕೇಳಿರುತ್ತೇನೆ. ಆದುದರಿಂದ ನಮ್ಮ ಕಾವೇರಿ ಸರ್ವಿಸಿನವರು ಇನ್ನು ಮುಂದಾದರೂ ಈಗ ವೀರಾಜಪೇಟೆಗಿರುವ ಚಾರ್ಜನ್ನು ರುಪಾಯಿ 1-8-0 ಕ್ಕೂ ಬೇರೆ ಸ್ಥಳಗಳಿಗೆ ಮೈಲಿಗೆ ಒಂದಾಣೆಯಂತೆಯೂ ಇಳಿಸಿ ಬಡ ಜನರಿಗೆ ಉಪಕಾರವನ್ನು ಮಾಡಿ ಅವರ ಕಷ್ಟಗಳನ್ನು ಸ್ವಲ್ಪವಾದರೂ ನಿವಾರಣೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮ ಸ್ವಂತ ಜನರೇ ಈ ಮೇಲ್ಕಂಡ ಕಾರ್ಯವನ್ನು ಕೈಕೊಂಡಲ್ಲಿ ನಮ್ಮ ದೇಶದ ಗರೀಬ ಜನರ ಪ್ರಯಾಣಕ್ಕೆ ಇತರರ ಕಂಪೆನಿಗಿಂತ ಹೆಚ್ಚು ಅನುಕೂಲವಾಗಬಹುದೆಂದು ನಮ್ಮ ಜನರು ಅದರಲ್ಲೂ ಗರೀಬರು ಬಹಳ ಕುತೂಹಲವುಳ್ಳವರಾಗಿದ್ದದ್ದು ಈಗ ನಿರಾಶೆಯಾಗುತ್ತಿರುವುದು ಬಹು ವ್ಯಸನಕರವಾದ ಸಂಗತಿಯಾಗಿದೆ. ನಮ್ಮ ದೇಶೀಯರೇ ನಮ್ಮ ಗರೀಬ ಜನರ ಕಷ್ಟಗಳನ್ನು ಸ್ವಲ್ಪವಾದರೂ ಮನಸ್ಸಿಗೆ ತೆಗದುಕೊಳ್ಳದ ಪಕ್ಷದಲ್ಲಿ ಹೊರಗಿನ ಬೇರೆ ಜನರು ನಮ್ಮ ದೇಶದ ಜನರಿಗೆ ಯಾತಕ್ಕೋಸ್ಕರ ಸಹಾಯಮಾಡಬೇಕು ? ಅವರನ್ನು ಸಹಾಯ ಮಾಡಿ ಎಂದು ಕೇಳುವುದೂ ಸಹ ನಮಗೆ ನಾಚಿಕೆ ಕೇಡಲ್ಲವೇ ? ಈ ಮೇಲ್ಕಂಡ ವಿಷಯದಲ್ಲಿ ಘನ ಸರಕಾರದವರೂ ಮತ್ತು ಕೌನ್ಸಿಲ್ ಮೆಂಬರುಗಳೂ ಸಹ ಸ್ವಲ್ಪ ನಿಗವಿಟ್ಟು, ಆದಷ್ಟುಮಟ್ಟಿಗೆ ಬೇರೆ ಕಂಪೆನಿಯವರಿಗೆ ಲೈಸನ್ಸ್ ಕೊಟ್ಟು ಪ್ರೋಟಾಪೋಟಿಗೆ ಬಿಟ್ಟು ಪ್ರಯಾಣಿಕರಿಗೆ ಅನುಕೂಲವನ್ನು ಮಾಡಿ ಕೊಡುವುದಕ್ಕೆ ಉತ್ತೇಜನವನ್ನು ಕೊಡಬೇಕೆಂದು ಅತಿ ವಿನಯದಿಂದ ಕೋರುವ,

ಕೆ. ಪಿ. ಬಿ.

ಉದ್ಯೋಗಸ್ಥರ ಪಾಡು.

ಅಯ್ಯಾ,

ನವಂಬರ್ ತಾರೀಕು 28ನೇ 'ಕೊಡಗು' ಪತ್ರಿಕೆಯಲ್ಲಿ ಉದ್ಯೋಗಸ್ಥರ ಸ್ಥಿತಿಯ ವಿಷಯವಾಗಿ ಬರೆದ ವಾರ್ತೆಯನ್ನು ಓದಿ ನೋಡಿದೆ. ಅದರಲ್ಲಿ ಬರೆದ ಸಂಗತಿ ಎಲ್ಲಾ ನಿಜವಾದವೆಂಬದಕ್ಕೆ ಸಂಶಯವಿಲ್ಲ. ಇದೇ ಮಾತ್ರವಲ್ಲ ಇನ್ನು ಅನೇಕತರದ ಕಷ್ಟ ತೊಂದ್ರೆ ಇದೆ. ಅದರಲ್ಲಿ ನನಗೆ ತಿಳಿದಮಟ್ಟಿಗೆ ಕೆಲವು ಅಂಶವನ್ನು ವಿವರಿಸುತ್ತೇನೆ.

ಕೆಲವು ಜನರು ರಿವಿನ್ಯು ಸರ್ವೆ ಕಾಲದಲ್ಲಿ ಸರಕಾರಿ ನೌಕರಿಗೆ ಸೇರಿದವರು ಸರ್ವಿಸು 30 ವರುಷವಾದರೂ ಕೂಡ ಅವರ ಪೆನ್‌ಶನೇಬಲ್ ಸರ್ವಿಸ್ ಸುಮಾರು 1909ನೆ ಇಸವಿಯಿಂದ ಸೇರಿದವರ ಸರ್ವಿಸಿಗೆ ಸಮ ಹೋಲುತ್ತೆ. ಅಂದರೆ ತಂದೆಗೂ ಮಗನಿಗೂ ಸರ್ವಿಸು ಒಂದಾಯಿತು ಎಂಬ ಗಾದೆಗೆ ಸರಿಯಾಯಿತು. ಅದು ಹ್ಯಾಗಂದರೆ ಮೊದಲು 7 ಪ್ಲಸ್ 5 ಮತ್ತು 10 ಪ್ಲಸ್ 5 ರುಪಾಯಿ ಎಂಬ ಎರಡು ಗ್ರೇಡು ಶ್ಯಾನುಭೋಗರರಿಗೆ ಇದ್ದದನ್ನು ಅದು ಮೈನರ್ ಸರ್ವೀಸ್ ಎಂಬದಾಗಿ ಸರಕಾರದವರು ಮಾಡಿದ್ದರಿಂದ 30 ವರುಷಕ್ಕೆ ಮೇಲ್ಪಟ್ಟವನು ಪೆನ್ಶನ್ ಆಗುವಾಗ ಅವರಿಗೆ 6-7 ರುಪಾಯಿ ಅಥವ 10 ರುಪಾಯಿ ಪೆನ್ಶನ್ ಸಿಕ್ಕುವದು ಕಷ್ಟ. ಅದು ಅಲ್ಲದೆ ಮೇಲೆ ಹೇಳಿದ ಉದಾಹರಣೆ ಹ್ಯಾಗಂದರೆ— 1919-20ನೇ ಇಸವಿಯಲ್ಲಿ 15 ಯಾ 20 ವರುಷ ಸರ್ವಿಸ್ ಆದ ಶ್ಯಾನುಭೋಗರು ಕ್ಲಾರ್ಕಿಗೆ 15 ಮತ್ತು 20 ರುಪಾಯಿ ಸಂಬಳ ಸಿಕ್ಕುತಿತ್ತು. ಅನಂತರ ರಿಟ್ರೆಂಚ್‌ಮೆಂಟಿನಲ್ಲಿ ಎಲ್ಲರಿಗೂ ಸಂಬಳವನ್ನು ಹೆಚ್ಚಿಸಿದರು. ಒಂದೆರಡು ವರುಷ ಸರ್ವಿಸಿನ ಶ್ಯಾನುಭೋಗರಿಗೂ ಮತ್ತು ಕ್ಲಾರ್ಕಿಗೂ ಮತ್ತು 10, 15 ಯಾ 25 ವರುಷ ಸರ್ವಿಸ್ ಇರುವವರಿಗೆ ಸಹ ಸಂಬಳ ಮಿನಿಮಮ್ 30-2 40ರ ವರೆಗೂ ಕೆಲವರಿಗೆ 30-2-40-1-50ರ ವರೆಗೂ ಮತ್ತು ಶ್ಯಾನುಭೋಗರ ಸಂಬಳ 25-1-40ರ ವರೆಗೂ ಮಾಡಿದ್ದಾಗಿದೆ. ಈ ಮಾದರಿ ಸಂಬಳ ಈಗ ಕೂಡಿದವರಿಗೆ ಏನೋ ಅನುಕೂಲ, 30 ಯಾ 25 ವರುಷ ಸರ್ವಿಸ್ ಮಾಡಿದವರಿಗೆ ಯಾವತರದ ಅನುಕೂಲ ಕಾಣುವದಿಲ್ಲ. ಅವರ ಮೇಕ್ಸಿಮಮ್ ಸಂಬಳಕ್ಕೆ ಹೋಗಬೇಕಾದರೆ ಸರಿಯಾಗಿ ಇನ್‌ಕ್ರಿಮೆಂಟ್ ಸಿಕ್ಕಿದರೆ ಕಮ್ಮಿ ಪಕ್ಷ 15 ವರುಷ ಬೇಕಾಗುತ್ತೆ, 20-25 ವರುಷದ ವರೆಗೆ ಕಮ್ಮಿ ಸಂಬಳದಲ್ಲಿ ಕೆಲಸ ಮಾಡಿದವರಿಗೆ ಯಾವ ತರದ ಸುಮ್ಮಕು ಆಯಿತೆಂಬದು ವಾಚಕರೆ ಊಹಿಸಿರಿ. ಈಗಿನ ದಯಾಳುಗಳಾದ ಡಿ. ಮೆ. ಸಾಹೇಬರವರಿಗೆ ಈ ಸಂಗತಿ ಚೆನ್ನಾಗಿ ವೇದ್ಯ ಇರಬಹುದು. ಆದ್ದರಿಂದ ಸದರಿ ಸಂಗತಿಯನ್ನು ಕಮಿಶನರ್ ಸಾಹೇಬರವರು ಡಿ. ಮೆ. ಸಾಹೇಬರವರು ಮತ್ತು ಈಗಿನ ಹೊಸ ಕೌನ್ಸಿಲ್ ಮೆಂಬರುಗಳು ಸಹ ಚಿತ್ತಕ್ಕೆ ತೆಗೆದುಕೊಂಡು ಆಯಾಯ ಉದ್ಯೋಗಸ್ಥರ ಸರ್ವಿಸ್ ಮೇರೆ ಮೇಕ್ಸಿಮಮ್ ಸಂಬಳ ಕೊಡುವಂತೆ ಹುಕುಂ ಮಾಡಿದರೆ ಸರಕಾರಿ ನೌಕರಿಯಲ್ಲಿ 25 ಯಾ 30 ವರುಷ ಕಮ್ಮಿ ಸಂಬಳದಲ್ಲಿ ಕಷ್ಟಪಟ್ಟು ಕೆಲಸಮಾಡಿದವರಿಗೆ ಮುಪ್ಪಿನಲ್ಲಿಯಾದರೂ ಕೆಲವು ಮಟ್ಟಿಗೆ ಸಾರ್ಥಕವಾಗಬಹುದು. ಅದು ಅಲ್ಲದೆ ಸಂಬಳ ಬಡ್ತಿಮಾಡಿದ್ದರಿಂದ ಸರಕಾರಕ್ಕೆ ಯಾವ ತರದ ನಷ್ಟ ಇಲ್ಲ. ಸಿಬ್ಬಂದಿ ಕಡಿಮೆಯಿಂದ ಉಂಟಾದ ಉಳಿವರಿಯ ಹಣವು ಸಂಬಳ ಬಡ್ತಿಮಾಡಿದ್ದರಿಂದ ತಗಲಿದ ಹೆಚ್ಚು ವ್ಯಯಕ್ಕಿಂತ ಜಾಸ್ತಿಯಾಗ ಬಹುದಾಗಿ ನಂಬುತ್ತೇನೆ.

'ಅನುಭವಸ್ಥ'

ವೀರಾಜಪೇಟೆ ಸಂತೆ.

ಸಂಪಾದಕರೆ,

ಜಳವಳದ ಅಭಿವೃದ್ಧಿಯು ದಿನೆ ದಿನೆ ಹೆಚ್ಚುತ್ತಾ ಇರುವುದು, ಜನರ ಕುಟುಂಬದ ಅನುಕೂಲತೆಗೋಸ್ಕರ ಎಂಬ ಸಂಗತಿಯು ಎಲ್ಲರಿಗೂ ತಿಳಿಯದ್ದಲ್ಲ. ಆದುದರಿಂದ ಇಂಥಾ ಅನುಕೂಲತೆಗೋಸ್ಕರ ಈ ಕೆಳಗಿನ ಒಂದು ಚಿಕ್ಕ ಅಭಿಪ್ರಾಯವನ್ನು ವೀರಾಜಪೇಟೆ ಸಂತೆಯನ್ನು ಉಪಯೋಗಿಸುವ ಸರ್ವ ಜನರ ಚಿತ್ತಕ್ಕೆ ತರಲು ಇರಾದೆಪಡುತ್ತೇನೆ. ಈ ಮೇಲೆ ಹೇಳಿದ ಸಂತೆಯು ಪ್ರತಿ ವಾರದ ಮಧ್ಯ ದಿನವಾಗುವುದರಿಂದ ಜನರಿಗೆ ಉಂಟಾಗುವ ನಷ್ಟವನ್ನು ಇಷ್ಟೆಂದು ಹೇಳಲಾರೆನು. ಆರಂಭ ಕೆಲಸಗಳ ಸಮಯಗಳಲ್ಲಿ ವಿಪರೀತ ಅಡೇನಂದರೆ ಅನೇಕ ಸಾವಿರ ರೈತರು ಮತ್ತು ಆಳುಗಳು ಬುಧವಾರ ದಿನ ಸಂತೆಗೆ ಹೋಗಿ ಗುರುವಾರ ಕೆಲಸಕ್ಕೆ ಸುರುಮಾಡಿ ಪುನಹ ಸೋಮವಾರ ದಿನ ಅಂದರೆ ಹಿಂದುಗಳಾದ ನಮ್ಮ ವಿರಾಮ ದಿನವೂ ಮತ್ತು ಗೋವುಗಳ ಸಹ ಕೆಲಸಕ್ಕೆ ಜೋಡಿಯಾಗಿ ಇರುವಲ್ಲಿ ಆಳುಗಳಿಗೂ ಸಹ ಅರ್ಧ ಕೆಲಸ ಮಾಡಬೇಕಾದುದರಿಂದ ಅವರು ಪೂರ್ತಿ ವಿರಾಮವನ್ನೇ ಪಡೆಯುತ್ತಾರೆ. ಮತ್ತು ಮಂಗಳವಾರ ಕಳೆದು ಬುಧವಾರ ದಿನ ಪುನಹ ಸಂತೆಗೆ ಹೋಗಬೇಕೆಂದು ಬರುವುದೇ ಇಲ್ಲ. ಈ ಪ್ರಕಾರ ತಿಂಗಳಿಗೆ ಬಪ್ಪ ಆಳು 8-10 ದಿನ ಕೆಲಸವಿಲ್ಲದೆ ನಿಂತರೆ 8 ದಿನ ಮೊದಲು ಆಗುವ ಕೆಲಸವು 15 ದಿನ ತಡವಾಗುತ್ತೆ. ನಮ್ಮ ಪೂರ್ವೀಕರು ಹೇಳುತಿದ್ದ "ಮುಂಬಣಿ ಪೊಂಬಣಿ" ಯು ಈಗ ಹೇಗೆ ತಾನೆ ಪೊಂಬಣಿ ಆಗುವುದು.

ಮತ್ತು ಆದಿತ್ಯವಾರ ಸಿದ್ದಾಪುರ, ಗೋಣಿಕೊಪ್ಪಲು ಸಂತೆಗಳಿಗೆ ಆಮದಾಗುವ ಸರಕುಗಳು ಮೈಸೂರು ಸೀಮೆಯಿಂದ ಹೆಚ್ಚಾಗಿ ಬರುತ್ತವೆಯಲ್ಲವೆ. ಇದನ್ನು ತರುವ ವ್ಯಾಪಾರಿಗಳು ಸಂಧ್ಯಾಕಾಲದ ವರೆಗೆ ಮಾರಿ ಮಿಕ್ಕಿದ್ದನ್ನು ನಮ್ಮ ದೊಡ್ಡ ಸಂತೆಯಾದ ವೀರಾಜಪೇಟೆಗೆ ತರಲಿಕ್ಕೆ ಎರಡು ದಿನ ತಡವಾಗುವುದರಿಂದ ಅದನ್ನೆಲ್ಲಾ ಬೇರೆ ವ್ಯಾಪಾರಿಗಳಿಗೆ ಮಾರಿ ಹಿಂದಕ್ಕೆ ಹೊರಡುತ್ತಾರೆ. ಇದನ್ನು ಕೊಂಡುಕೊಳ್ಳುವ ವ್ಯಾಪಾರಿಗಳು ಹೆಚ್ಚಿನ ಕ್ರಯಕ್ಕೆ ಮಾರಲ ಬೇಕಾಗುತ್ತೆ. ಮ

ತ್ತು ಮೇರೆತ್ತಲೂ ಅದ್ದಾರೆ. ಈ ಪ್ರಕಾರದ ಉದಾಹರಣೆಗಳನ್ನು ಇನ್ನೂ ದೇಕ್ಕಾಗಿ ಒಂದು ನಮ್ಮ ಮುಂದರಿದ ವಾಚಕ ಮಹಾಶಯರಿಗೆ ತಿಳಿಸುವುದು ಅವಶ್ಯವಿಲ್ಲದುದರಿಂದ ಅವರ ಊಹನೆಗೆ ಬಿಟ್ಟು ಇಲ್ಲಿ ನಿಲ್ಲಿಸುತ್ತೇನೆ.

ಮಹನೀಯರೆ, ಈ ಸಂತೆಯನ್ನು ಸೋಮವಾರದ ದಿನ ನಡಿಸಿದರೆ ಈ ಮೇಲೆ ವಿವರಿಸಿದ ಮತ್ತು ಇನ್ನೂ ಅನೇಕ ಅನುಕೂಲತೆಗಳು ನಮಗೆ ದೊರೆಯುವುದರಲ್ಲಿ ಯಾವ ಸಂಶಯವೂ ಇಲ್ಲ. ಈ ಸಂಗತಿಯನ್ನು ನಮ್ಮ ಘನ ಸರಕಾರವು ಪ್ರಜೆಗಳ ಅನುಕೂಲತೆಗೆ ಸರಿಯಾಗಿ ನಡಿಸಿ ಕೊಡಬೇಕೆಂದು ಕೋರುವ,

ಕುಕ್ಲೂರು, ಕಾರ್ಯಸ್ಥ.

ಪ್ರಕಟಣೆ.

ಮಡಿಕೇರಿ ಪೋಲೀಸ್ ಸಬ್ ಇನ್‌ಸ್ಪೆಕ್ಟರುಗಳ ಕ್ವಾರ್ಟರ್ಸ್‌ಗಳಿಗೆ ಅಂದವಾಗಿಯೂ ಹೊಸಮರಗಳಿಂದ ಭದ್ರವಾಗಿಯೂ 3 ವರ್ಷಗಳ ಹಿಂದೆ ಕಟ್ಟಲ್ಪಟ್ಟ ಸಂಸಾರ ಸಮೇತ ವಾಸ ಇರಲಿಕ್ಕೆ ಯೋಗ್ಯವಾದ 9 ಕೊಠಡಿಗಳಿರುವ ಮನೆ 3 ಅಂಕಣಗಳ ಕೊಟ್ಟಿಗೆ ಯಾವಾಗಲೂ ನಿರ್ಮಲವಾದ ನೀರು ಇರುವ ಕಲ್ಲು ಕಟ್ಟಿದ ಭಾವಿ (ನೀರು ಗೋಚಿ ತೆಗಿಯುವಂಥಾದ್ದು) ಕಾಫಿ, ಬಾಳೆ, ಕಿತ್ತಳೆ, ನಿಂಬೆ ಮರಗಳೂ ಮತ್ತು ಹಲಸು ಮತ್ತು ಹೂವಿನ ಗಿಡಗಳೂ ಇರುವ ಹಿತ್ತಲೂ ಸಹ ಇರುವ ಆಸ್ತಿ ಒಂದು ಮಾರಾಟಕ್ಕೆ ಇದೆ. ಇದಕ್ಕೆ (11,000) ಹನ್ನೊಂದು ಸಾವಿರ ರೂಪಾಯಿ ಹೆಚ್ಚು ಕಡಿಮೆ ಖರ್ಚಾಗಿದೆ. ಈ ಸ್ಥಳವು ಗುಪ್ತವಾಗಿಯೂ ಸಂಸಾರ ಸಮೇತ ವಾಸ ಇರುವದಕ್ಕೆ ಯೋಗ್ಯವಾಗಿಯೂ ಇದೆ. ವಾಸಕ್ಕೆ ಇಂಥಾ ಯೋಗ್ಯವಾದ ಸ್ಥಳ ಮಡಿಕೇರಿಯಲ್ಲಿ ಸಿಕ್ಕುವದು ದುರ್ಲಭ. ಕೊಂಡುಕೊಳ್ಳುವದಕ್ಕೆ ಖಾಯಿಷ್ ಇರುವವರು ಸ್ವತಃ ನೋಡಿ ಕ್ರಯ ನಿಶ್ಚೈಸಬಹುದು. ಹೆಚ್ಚಿನ ವಿವರ ಈ ಕೆಳಗಿನ ವಿಳಾಸಕ್ಕೆ ಬರದು ತಿಳಿದುಕೊಳ್ಳಬೇಕಾಗಿದೆ.

VENDER,
C/o EDITOR, "KODAGU."
Mercara.

4 2

ಪ್ರಕಟಣೆ.

ಶ್ರೀಘ್ರ ಈ ಸಂದರ್ಭವನ್ನು ಕಳಕೊಳ್ಳಬೇಡಿರಿ.

ಮಡಿಕೇರಿ ದೇವಸ್ಥಾನ ಪಕ್ಕದಲ್ಲಿ ಹೈಸ್ಕೂಲ್‌ಬಳಿ ಒಂದು ಎಕರೆ ಕಾಫಿತೋಟದಿಂದ ಕೂಡಿದ ಒಂದು ಪಂಚಾಂಗ ಹಾಕಿದ ಮನೆಯನ್ನು ಅಡಿಗೆಮನೆ, ಇನ್ನು ಮನೆ ಕಟ್ಟಲಿಕ್ಕೆ ಉತ್ತರ ಭಾಗದಲ್ಲಿರುವ ಮನೆದಳವು ಸಹ ಮಾರಲಿಕ್ಕೆ ಇಟ್ಟಿದೆ. ಖಾಯಿಷ್‌ದಾರರು ಶೀಘ್ರದಲ್ಲಿಯೇ ಈ ಕೆಳಗಿನವರಿಗೆ ದಯವಿಟ್ಟು ಬರಕೊಳ್ಳುವದು.

C. C/o EDITOR,
"*Kodagu*" MERCARA.

12—3

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರಿಗೆ ರಶೀತಿ ಪುಸ್ತಕಗಳನ್ನು ನಮ್ಮ ಏಜಂಟರು ಮೆ. ಕೋಟೆರ ಚಿಣ್ಣಪ್ಪನವರ ಬಜಾರು ದಾರಿಯ ಮೇಲೆ ಕೊಡಲಾಗಿದೆ. ದಯವಿಟ್ಟು ಚಂದಾದಾರರೆಲ್ಲರೂ ಅವರವರಿಗೆ ಅನುಕೂಲವಿರುವ ಭಾಗದಲ್ಲಿ ಪಾವತಿಮಾಡಬೇಕಾಗಿ ಕೋರಿಕೆ.

ಏಜಂಟರುಗಳು.

ವೀರಾಜಪೇಟೆ—ಮೆ. ಕೆ. ಚಿಣ್ಣಪ್ಪನವರ ಆಫೀಸಿನಲ್ಲಿ.
ಮೂರ್ನಾಡು—ಕಮರ್ಶಿಯಲ್ ಸ್ಟೋರಿನಲ್ಲಿ ಮೆ. ಮುಡಿಯಂಡ ದೇವಯ್ಯನವರು.
ನಾಪೋಕ್ಲು—ಮೆ. ಪೋನ್ನಚಂಡ ಮುದ್ದಪ್ಪನವರು.
ಗೋಣಿಕೊಪ್ಪಲು—ಮೆ. ಮುಕ್ಕಾಟಿರಪೂಣಚ್ಚನವರು.
ಪೊನ್ನಂಪೇಟೆ—ಮೆ. ಪುತ್ತಮನೆ ಮುದ್ದಮ್ಮಯ್ಯನವರು.
ಮಡಿಕೇರಿ—ಮೆ. ಜಿ. ಮಾದಮ್ಮನವರು.
ಅಮ್ಮತ್ತಿ ಸಿದ್ದಾಪುರ—ಮೆ. ಪಸಂಡ ಮಾದಪ್ಪನವರು.
ಮೆ. ಪಂಗಂಡ ಕುಟ್ಟಪ್ಪನವರು.

ಕೋಟೇರ ಉತ್ತಯ್ಯ.
ಮೇನೇಜಿಂಗ್ ಡೈರೆಕ್ಟರು, "ಕೊಡಗು" ಲಿಮಿಟೆಡ್.

ಪ್ರಕಟಣೆ.

ಇಲ್ಲಿ ನೋಡಿರಿ! ಇದೀಗ ಸುಸಮಯ!!

ಒಳ್ಳೇ ಸೊತ್ತು ಮಾರಾಟಕ್ಕಿದೆ.

ಅರವತ್ತೊಕ್ಲು ಗ್ರಾಮದಲ್ಲಿ ಅಂದರೆ ಚೆಟ್ಟಳ್ಳಿ ದೊಡ್ಡರಸ್ತೆಗೆ ಸಮೀಪ 200ಬಟ್ಟಿಭೂಮಿ. ಭೂಮಿಗ ವತ್ತು, 15 ಎಕರು ಜಾಗ. ಈಜಾಗದಲ್ಲು ಸಗ್ಗ ಭೂಮಿ ಮಾಡತಕ್ಕ 3 ಎಕರು ಮಕ್ಕಿ ಇದೆ ಮಜ್ಜು ಹಾಕಿದ ಅಂದಾಜು ಸಾವಿರ ರುಪಾಯಿ ಬಾಳತಕ್ಕ ಮನೆ ಇದೆ. ಪಸಲಿಗೆ ಬರತಕ್ಕಾದ ಕಿತ್ತಳೆಗಿಡ. ಮನೆಮುಂದೆ ತೆಂಗು ಅಡಿಕೆಸಹ ಇದೆ. ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆದಾಗಲೀ ಖುದ್ದಾಗಿ ನೋಡಿಯಾಗಲೀ ತಿಳಿಯಬಹುದು. ಅಂದಾಜು ಕ್ರಯ 3,000 ರುಪಾಯಿ ಇಲ್ಲವೆ ಅದರ ಸಮೀಪದ ಕ್ರಯ

ನೆರವಂಡ ಅಪ್ಪಚ್ಚು,
4-2 ಬಟ್ಟೆವ್ಯಾಪಾರಿ, ಮಡಿಕೇರಿ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೊ ಆಪರೇಟಿವ್ ಸೊಸೈಟೀಸ್ ಆಕ್ಟ್ಸ ಪ್ರಕಾರ ರಿಜಿಸ್ಟರಾಗಿದೆ.

		ರೂ.
ಶೇರ್ ಬಂಡವಾಳ	....	50,000
ವಸೂಲಾದ ಶೇರ್ ಮೊಬಲಗು	....	7,720
ಜಮೂಬಂದ ಠೇವಣಾತಿ	....	61,200

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 6-4-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 5ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಜಮಾಯಿಷಿ ಮಾಡುತ್ತಾರೆ.

ಪ್ರೆಸಿಡೆಂಟರು,	ಟ್ರೆಜರರ್.
ಕೊಡಂದೇರ ಕುಟ್ಟಯ್ಯನವರು, ರಾಯ್ ಬಹದ್ದೂರ.	ಯಂ. ಭುಜಂಗರಾಯರು. ಬಿ.ಎ., ಬಿ.ಎಲ್.

ಸೆಕ್ರಟರಿ.

ಸಿ. ಯಸ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್.

ತಾರೀಕು, 1—7—1924.

ಶ್ರೀ

ಶ್ರೀ ಧನ್ವಂತರಿ,

ಕರ್ನಾಟಕಾಯುರ್ವೇದ ಪಕ್ಷಪತ್ರಿಕೆ.

ಎಡಿಟರ್.—ವಿದ್ವಾನ್ ಕೆ. ಶೇಷಶಾಸ್ತ್ರೀ ಆಯುರ್ವೇದರತ್ನಂ, ಇತ್ಯಾದಿ.

ದೇಶೀಯ ವೈದ್ಯವನ್ನು ಸರ್ವ ಸಂಪೂರ್ಣಾಭಿಪ್ರಾಯದಿಂದ ಕನ್ನಡ ನಾಡಿನಲ್ಲಿ ಪ್ರಕಟಿಸುವ ಮೊದಲನೇಯ ಪತ್ರಿಕೆ ಎಂದರೆ! ಇದೇ. ಆರೋಗ್ಯವಂತನಾಗಿ ಬಹುಕಾಲ ಬದುಕಿರಬೇಕೆಂದು ಯೋಚಿಸುವ ಪ್ರತಿಯೊಬ್ಬನಿಗೂ ಈ ಪತ್ರಿಕೆಯು ಬೇಕೇಬೇಕು. ವ್ಯಾಧಿ ಬಂದಾಗ ತಕ್ಷಣ ತಿಳಿದುಕೊಳ್ಳುವಂತೆ ಆಯಾ ರೋಗಲಕ್ಷಣ ಚಿಕಿತ್ಸೆಗಳು ಬರೆಯಲ್ಪಡುವುದರಿಂದ ಮುಖ್ಯವಾಗಿ ಸ್ತ್ರೀಯರೂ ಹಳ್ಳಿಯವರೂ ಈ ಪತ್ರಿಕೆಯನ್ನು ಓದಲೇ ಬೇಕು. ವಿಶೇಷವೇನು? ಮನೆಯಲ್ಲಿ ಈ ಪತ್ರಿಕೆ ಇದ್ದರೆ ಒಬ್ಬ ಗುರುವೂ ವೈದ್ಯನೂ ಇದ್ದಂತಾಗುವುದು.

ವಾರ್ಷಿಕ ಚಂದಾ ಮೂರು ರುಪಾಯಿ.

ವಿಳಾಸ.—

ಮೇನೇಜರ್, ಶ್ರೀ ಧನ್ವಂತರಿ, ಶೃಂಗೇರಿ, ಮೈಸೂರುಸ್ಟೇಟ್.

ಪ್ರಕಟಣೆ.

ಒಂದು ಕಡೆ ಇಂಗ್ಲೀಷಿನಲ್ಲಿಯೂ, ಇನ್ನೊಂದು ಕಡೆ ಕನ್ನಡದಲ್ಲಿಯೂ ಪ್ರಿಂಟಾಗಿರುವ ಕಾಫಿ ತೋಟದ ಆಳುಗಳ ಬ್ರಿಟಾಪ್ತ ಕಂಟ್ರಾಕ್ಟು ಎಗ್ರಿಮೆಂಟ್ ಫಾರಮುಗಳೂ ಮತ್ತು ಅಪ್ಲಿಕೇಶನ್ (complaint) ಫಾರಂಗಳೂ ಸಹ ಮಾರಾಟಕ್ಕೆ ತಯಾರಿವೆ. ಬೇಕಾದವರು 'ಕೊಡಗು' ಆಫೀಸಿನಿಂದ ಪಡಕೊಳ್ಳಬಹುದು.

ಮಡಿಕೇರಿ

17-9-24. ಮೇನೇಜರ್.

ARMS & AMMUNITION MART.

Mahomedally-Noorbhoy.

337, Abdul Rehman, Street, near Crawford Market, BOMBAY.

Telegraphic Address :- "SHOOTER" Bombay.

[24 15] Please write for latest Catalogues.

ಸಂಪತ್ತಿಯ ಸಾಧನಗಳು.

ಅಯ್ಯಾ ಬಂಧುಗಳೇ ಸಂಪತ್ತಿಯು ಅನ್ಯರ ಚಾಕರಿಯಲ್ಲಿರದೆ ನಿಮ್ಮ ಭೂಮಿಯಲ್ಲಿಯೇ ಅಡಗಿರುವದು. ಅದನ್ನು ಶೋಧಿಸಿ ತೆಗಿಯಲು ಕಿರ್ಲೋಸ್ಕರ ವ್ಯವಸಾಯ ಮುಟ್ಟುಗಳೇ ಯೋಗ್ಯವಾದ ಸಾಧನಗಳು.

ಲಕ್ಷಾವಧಿ ರೈತರು ಹೂಡಿ ಅನುಭವ ತೆಗೆದುಕೊಂಡಿರುವರು. ಭೂಮಿಯತಕ್ಕ ತರತರದ ನೇಗಿಲುಗಳೂ ಗಾಣಗಳೂ ದೊರೆಯುತ್ತವೆ. ಕಿಸಾನ ಗಾಣವು ಒಂದು ಗಂಟೆಗೆ ೪೦೦ ಪೌಂಡು ಕಬ್ಬನ್ನು ಹಿಂಡಿ ಚಲ್ಲುತ್ತದೆ.

"ಕೊ" ಎಂಬ ಕ್ಯಾಟಲಾಗನ್ನು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್,
16-9 **ಕಿರ್ಲೋಸ್ಕರವಾಡಿ, ಜಿಲ್ಲಾ, ಸಾತಾರಾ.**

ನೋಟೀಸ್.

"ಕೊಡಗು" ಪತ್ರಿಕೆಯ ಹಳೆ ಚಂದಾಹಣ ಕೊಡಲಿಕ್ಕಿರುವವರೂ, ಹೊಸ ಚಂದಾದಾರರಾಗ ಬೇಕೆಂದಿರುವವರೂ, ಮತ್ತು ಶೇರುಹಣ ಸಲ್ಲಿಸಮಾಡಲಿಕ್ಕಿರುವವರೂ ದಯವಿಟ್ಟು, ವೀರಾಜಪೇಟೆಯಲ್ಲಿರುವ ನಮ್ಮ ಕಂಪೆನಿಯ ಏಜಂಟರವರ ಆಫೀಸಿನಲ್ಲಿ ಪಾವತಿಮಾಡಬೇಕಾಗಿ ಕೋರಿಕೆ.

ಮಡಿಕೇರಿ, ಮೇನೇಜರ್,
15.9.24. 'ಕೊಡಗು' ಲಿಮಿಟೆಡ್.

ಹಳೆ ವಿದ್ಯಾರ್ಥಿಯರ ತ್ರೈಮಾಸಿಕ.

ಸಂಪುಟ 2] ವರ್ಷದಚಂದಾ ಬರೇ ರೂ. 1-4-0 [ಸಂಚಿಕೆ 1
ಸಂಪಾದಕ—ಸಿ. ಬಿ. ಮೇದಪ್ಪ, ಬಿ ಎ., ಬಿ ಎಲ್ ಎಂ ಎಲ್. ಸಿ

ಈ ಸಂಚಿಕೆಯಲ್ಲಿ ಮನೋಹರವಾದ ಕೊಡಗಿನ ಪವಿತ್ರ ಸ್ಥಳವಾದ ಶ್ರೀ ಮೂಲ ಕಾವೇರಿಯ ಚಿತ್ರಗಳಿವೆ.

1. ಶ್ರೀ ಕಾವೇರಿಯ ಜನ್ಮ, ಅವತಾರ.
2. ಸರಕಾರಕ್ಕೆ ಸಾಲವೆಂದರೇನು?
3. ಪೋಲಿಟಿಕ್ಸ್ ಅಂದರೇನು?
4. ಮಿರಾಬಾಯಿ.

ಇವೇ ಮುಂತಾದ ಬಹು ಸ್ವಾರಸ್ಯದ ವಿಷಯಗಳಿವೆ.

ಮೇನೇಜರ್,
ಓ. ಎಸ್. ಎಸೋಸಿಯೇಶನ್,
ಮಡಿಕೇರಿ.

Printed & published by Kodanda Appayya, R.B., Chairman, Board of Directors, at "Kodagu" Press, Mercara for "Kodagu" Ltd.

Reg. No. M. 1550.

If not delivered please return to "KODAGU" OFFICE, MERCARA.

ಕೊಡಗು.

ವರ್ಷಕ್ಕೆ ಚಂದಾ ರೂ. ೪—೦—೦

ಸತ್ಯೇನ ಧರ್ಮೇಣ ವಿದ್ಯಾ ಕೃಷಿ ಪ್ರಯತ್ನ ಕಾ || ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ ||

ಎಡಿಟರ್ ಸಂದ್ಯಂಡ ಐ. ಬೆಳ್ಳಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೪] ಕೊಡಗು, ಸ೯ ೧೯೩೪ನೇ ಇಸವಿ ನವಂಬರ್ ತಾರೀಕು ೨೮ನೆಯ ಶುಕ್ರವಾರ [ಸಂಚಿಕೆ ೨೫

ಆರೋಗ್ಯ ಚಂದ್ರಿಕೆ.

ಮದ್ರಾಸ್

ಸಂಪಾದಕರು: ಡಾಕ್ಟರ್ ಯು ರಾಮರಾವ್,

ಯಮ್. ಎಲ್ ಸಿ. ಯವರು.

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಶುಚಿತ್ವದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ. ಈ ಮಾಸಪತ್ರಿಕೆಯು 'ಹೆಲ್ತ್' ಎಂಬ ಇಂಗ್ಲಿಷ್ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ. ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಗೆ ಪ್ರಕಟವಾಗುವವು.

ಆರೋಗ್ಯ ಚಂದ್ರಿಕೆಯಲ್ಲಿರುವ ಲೇಖನಗಳು ಹಳೆಯದಾಗದೆ ಪುನಃ ಪುನಃ ಓದಲು ಅರ್ಹವಾದವುಗಳಾಗಿರುವವು. ಆರೋಗ್ಯ ಚಂದ್ರಿಕೆಯನ್ನು ತರಿಸಿ ಬೈಂಡ್ ಮಾಡಿಸಿ ಇಟ್ಟುಕೊಂಡರೆ ಎಲ್ಲರಿಗೂ ಉಪಯುಕ್ತವಾಗುವ ಅಮೂಲ್ಯವಾದ ಗ್ರಂಥವಾಗುವುದು. ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ 1-8-0. ಬಿಡಿ ಪತ್ರಿಕೆ 1ಕ್ಕೆ 0-2-0 ಹಿಂದಿನ ಸಂಚಿಕೆಗಳು ಕೂಡಾ ದೊರೆಯುವವು.

ಪತ್ರವ್ಯವಹಾರಕ: 'ಆರೋಗ್ಯ ಚಂದ್ರಿಕೆ' 323,

ತಂಬುಶೆಟ್ಟಿ ಬೀದಿ, ಮದ್ರಾಸ್.

ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟೀಸು ಜೀವವಿಮೆಯ ಕಂಪೆನಿ, ಲಿಮಿಟೆಡ್.

ಹೆಡ್ ಆಫೀಸು, ಬೊಂಬಾಯಿ.

ಹಿಂದುಸ್ಥಾನದಲ್ಲಿ ಕಳೆದ 50 ವರ್ಷಗಳಿಂದಲೂ ಜೀವವಿಮೆಯ ಅನುಭವವನ್ನು ಪಡೆದಿರುವ ದೇಶೀಯ ಜೀವವಿಮೇ ಸಂಘಗಳಲ್ಲಿ ಅತ್ಯಂತ ದೊಡ್ಡದೂ ಮತ್ತು ಭದ್ರವಾದದ್ದೂ ಆದ "ಓರಿಯಂಟಲಿನ" ಜೀವವಿಮೇ ಪತ್ರಕ್ಕಿಂತಲೂ ಉತ್ತಮವಾದ ಅನ್ಯ ಬೇರೆ ದೊರೆಯಲಾರದು.

ಈಗಾಗಲೇ ವಿಮೇಸಂದಾಯಿತವಾದಮೊತ್ತ		8,00,00,000
ಕೈಯಲ್ಲಿ ಮುಂದೆ ಬರಬಹುದಾದ ತಗಾದೆಗಳನ್ನು ಸುದಾರಿಸಲಿಕ್ಕಿಟ್ಟುಕೊಂಡಿರುವ ಹಣ	....	6,00,00,000
ವಾರ್ಷಿಕ ಉತ್ಪತ್ತಿ	....	1,00,00,000

ಇಷ್ಟು ಭದ್ರತೆಯುಳ್ಳ ಕಂಪೆನಿಯಲ್ಲಿ ಜೀವವಿಮೆಯ ಪತ್ರ ತೆಗೆದುಕೊಳ್ಳಲಿಷ್ಟಪಡುವವರು ಯಾ, ಇದರ ವಿಷಯ ಹೆಚ್ಚಿನ ಸಂಗತಿ ತಿಳಿಯಬೇಕೆಂದಿರುವವರು, ದಯವಿಟ್ಟು ಈ ಕೆಳಗಿನವರಿಗೆ ಬರೆದುಕೊಳ್ಳುವದು.

ಕೆ. ಪಿ. ಚಿಣ್ಣಪ್ಪನವರು,
ಓರಿಯಂಟಲ್ ಏಜನ್ಸೀ ಆಫೀಸು,
ವೀರಾಜಪೇಟೆ, ದಕ್ಷಿಣ ಕೊಡಗು.

24—24

"ಕೊಡಗು"

ರಾಜಕೀಯ, ವಿದ್ಯಾ, ಕೃಷಿ, ವೃತ್ತಿ ವಿಜ್ಞಾನ, ಮತ್ತು ನೀತಿ ಮುಂತಾದ ವಿಷಯಗಳಿಂದೊಡಗೂಡಿದ ಕೊಡಗಿನ ವಾರ ಪತ್ರಿಕೆ.

1. ಪ್ರಕಟಣೆಗಳನ್ನು ಮೇನೇಜರ್ "ಕೊಡಗು" ಮಡಿಕೇರಿ, ಈ ವಿಳಾಸಕ್ಕೆ ಕಳುಹಿಸಬೇಕು. 2 ಲೇಖನಗಳನ್ನು ಸಂಪಾದಕರು "ಕೊಡಗು" ಮಡಿಕೇರಿ, ಈ ವಿಳಾಸಕ್ಕೆ ಕಳುಹಿಸಬೇಕು. 3. ವಾರ್ತೆದಾರರ ಅಭಿಪ್ರಾಯಕ್ಕೆ ಕೊಡಗು ಪತ್ರಿಕಾಕರ್ತರು ಜವಾಬ್ದಾರರಲ್ಲ. 4. ನಮ್ಮಲ್ಲಿಗೆ ಕಳುಹಿಸುವ ವಾರ್ತೆಗಳು ಕಾಗದದ ಒಂದೇ ಕಡೆಯೂ, ಸ್ಪಷ್ಟವಾಗಿಯೂ, ಹೆಸರು ವಿಳಾಸಗಳಿಂದ ಕೂಡಿಯೂ, ಬರೆಯಲ್ಪಟ್ಟಿರಬೇಕು. ಸ್ಥಳವು ದೊರೆಯದಿದ್ದಲ್ಲಿ ಈ ಪತ್ರಗಳು ಪ್ರಕಟಿಸಲ್ಪಡುವವು. 5. ಪ್ರಕಟಿಸಲಾಗದ ವಾರ್ತೆಗಳನ್ನು ಮರಳಿ ಕಳುಹಿಸುವ ಜವಾಬ್ದಾರಿಯನ್ನು ಸಂಪಾದಕರು ವಹಿಸಿಕೊಳ್ಳುವದಿಲ್ಲ.

ಪ್ರಕಟಣೆಗಳು.

ಅತ್ಯಂತ ಸುಲಭದಾಗಿ ಹಾಕಲ್ಪಡುತ್ತವೆ. ಹೆಚ್ಚು ಸಂಗತಿಗಳಬೇಕಾದರೆ ಬರೆದು ತಿಳಿದುಕೊಳ್ಳಬಹುದು.

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ.

ಅಪೂರ್ವ! ಹೊಸ ಪುಸ್ತಕ!! ಅಪೂರ್ವ!!!

ಶಿಶು ವೈದ್ಯ ಸಂಜೀವಿನೀ.

ಕನ್ನಡಿಗರಿಗೆ ಯಾವ ವೈದ್ಯ ಸಂಹಿತೆಯೂ ಇದುವರೆಗೆ ಸಿಗುವಂತಿಲ್ಲ! ಆದಕ್ಕಾಗಿ ಇದನ್ನು ಎಲ್ಲಾ ಆಯುರ್ವೇದದ ಆಧಾರದಿಂದ ಪ್ರಕಟಿಸಿದ್ದೇವೆ. ಇದರಲ್ಲಿ ಸ್ತ್ರೀಪುರುಷರ ದೇಹತತ್ವ, ವಿವಾಹ, ದಾಂಪತ್ಯ ಸುಖ, ಪಾತಿವ್ರತ್ಯ ಧರ್ಮ, ಗರ್ಭಿಣಿಯರ ರೋಗನಿದಾನ, ಚಿಕಿತ್ಸೆ, ಉಪಚಾರ, ಸುಖಪ್ರಸವೌಷಧಗಳು, ಪ್ರಸವವಿಧಿ, ದಾಯಿಯ ಕರ್ತವ್ಯ, ಶಿಶುಪರಿಚರ್ಯಾ ಶಿಶುಗಳ ಸಕಲ ರೋಗ ಚಿಕಿತ್ಸೆ, ಹಾಗೂ ಎಲ್ಲಾ ಲೋಹಾದಿಗಳ ಶುದ್ಧಿ ಕ್ರಮ ಮತ್ತು ಭಸ್ಮಗಳು ಮಾಡುವ ವಿಧಾನ, ಧಾತು ಪುಷ್ಟಿ ಔಷಧಿಗಳು ಇವೆಲ್ಲ ಶಾಸ್ತ್ರೀಯ ಮತ್ತು ಸಮರ್ಪವಾಗಿ ವಿವರಿಸಲ್ಪಟ್ಟಿವೆ. ಈ ಪುಸ್ತಕ ಕೇವಲ ದೊಡ್ಡದು. ಇದರಲ್ಲಿ ಹೆಂಗಸರು ಹುಡುಗರು ಸಹ ಸುಲಭವಾಗಿ ತಯಾರು ಮಾಡುವಂಥಾ ೫೦೦ ಔಷಧಗಳಿಗಿಂತ ಹೆಚ್ಚಾಗಿರುವವು. ಈ ಪುಸ್ತಕದ ಕ್ರಯವು ಅದರಲ್ಲಿರುವ ಒಂದೊಂದು ಔಷಧದ ಬೆಲೆಯಾಗಲಾರದೆಂಬುದನ್ನು ನೀವೇ ತಿಳಿದುಕೊಳ್ಳುವಿರಿ!! ಈ ಪುಸ್ತಕವನ್ನು ಕೊಂಡುಕೊಳ್ಳುವ ಪ್ರತಿ ಮನುಷ್ಯನೂ ಖಂಡಿತವಾಗಿ ಒಬ್ಬ ವೈದ್ಯನೇ ಆಗುತ್ತಾನೆ. ಕ್ರಯ ಪುಸ್ತಕಕ್ಕೆ ೨ ರೂ.

ನಮ್ಮ ವಿಳಾಸ:—ಭಾರತಿ ಬುಕ್ ಡಿಪೋ,
12 12 ೪೯೧, ನಗರ್ತರಪೇಟೆ, ಬೆಂಗಳೂರು ಸಿಟಿ.

ಕೃಷಿತೋ ನಾಸ್ತಿ ದುರ್ಭಿಕ್ಷಃ

NITRATE OF SODA (15—16 per cent.) Nitrogen,

"The best and cheapest form of Nitrogen highly concentrated and immediately available. Nothing like it to make plants grow."

ವ್ಯವಸಾಯದಲ್ಲಿ ಗೊಬ್ಬರವಿಡುವದರ ಹೆಚ್ಚಿನ ಉದ್ದೇಶವು ಬೆಳೆಗಳಿಗೆ ಸಾರಜನಕ (Nitrogen) ಒದಗಿಸಿಕೊಡುವದಾಗಿರುತ್ತದೆ "ನೈಟ್ರೇಟ್ ಆಫ್ ಸೋಡಾ" ಎಂಬ ರಸಾಯನಿಕ ಗೊಬ್ಬರವು (15—16%) ಅಂದರೆ ಮೂಸುಗೊಬ್ಬರದಲ್ಲಿಯಕ್ಕಿಂತ ಮೂರುಪಾಲು ಜಾಸ್ತಿ ಕ್ಷಾರಜನಕ ಭರಿತವಾಗಿದ್ದು ಬೇಗಳಿಗೆ ಥಕ್ಕನೆ ಪದಗುವರೀತಿಯಲ್ಲಿರುತ್ತದೆ. ಇದರ ಉಪಯೋಗದಿಂದ ಫಸಲು ಬಹಳ ಸಮೃದ್ಧಿಯಾಗುವುದು. ಹಿಡಿತುಂಬ ರಸಾಯನಿಕ ಗೊಬ್ಬರವು ಮಂದಿ (ಕುಕ್ಕೆ) ತುಂಬ ಪಟ್ಟಿಗೊಬ್ಬರಕ್ಕ ಸಮವಾಗಿರುತ್ತದೆ. ಈ ರಸಾಯನಿಕ ಗೊಬ್ಬರವು ಅಮೇರಿಕ ದೇಶದ "ಚಿಲ್ಲಿ" ಎಂಬಲ್ಲಿ ತಯಾರಿಸಿ ಬಹಳ ದೂರದೇಶದಿಂದ ಬರಬೇಕಾದರೂ ಸಹ ಅದು ಹಳ್ಳಿಮೂಲೆಗಳ ಕೋಟೆಗಳ್ಲಿ ವಗ್ಯೆರೆ ಕೃಷಿಗಳಿಗೆ ಉಪಯೋಗಿಸಲು ಬಹಳ ಸುಲಭವಾಗಿಯೂ ಪಟ್ಟಿ ಗೊಬ್ಬರಕ್ಕಿಂತಲೂ ಬಹಳ ಹೆಚ್ಚಿನ ಆದಾಯವನ್ನು ಕೊಡುವದಾಗಿಯೂ ಇರುತ್ತದೆ. ಒಂದು ಎಕ್ರೆ ಭೂಮಿಗೆ 120—180 ರಾತಲು ಬೇಕಾಗುವದು. ಇದರ ವಿಷಯ ಹೆಚ್ಚಿನ ಮಾಹಿತಿಯನ್ನು ಮತ್ತು ತಿಳುವಳಿಕೆಯನ್ನು ಧರ್ಮಾರ್ಥವಾಗಿ ನಮ್ಮಿಂದ ಪಡೆಯಬಹುದು.

ದಿ ಚಿಲಿಯನ್ನ್ ನೈಟ್ರೇಟ್
24—11 ಕಮಿಟಿಯವರ ಕಡೆ

ಕೊಡಗಿನಲ್ಲು— B. P. Ayapa, Hon Representative Pollibetta, Coorg.	The Chilean Nitrate Committee, 6 Mission Row, Post Box 469, CALCUTTA

ಮಲೆಯೂಳ ವೈದ್ಯಶಾಲಾ.

ಮಲಬಾರಿನ ಸಂಪೇಸನ್ ಮತ್ತು ಕಂಪೆನಿ ಎಂಬ ಆಯುರ್ವೇದ ವೈದ್ಯ ಶಾಲೆಯು ಒಂದು ಶಾಖೆಯು ವೀರರಾಜೇಂದ್ರಪೇಟೆಯಲ್ಲಿ ತೆರದಿರುತ್ತದೆ. ಇಲ್ಲಿ ಯಾವ ವಿಧದ ಕಾಯಿಲೆಯಾಗಿದ್ದರೂ ಪಂಡಿತರಿಂದ ಪರೀಕ್ಷಿಸಿ ಔಷಧಿಕೊಟ್ಟು ಗುಣಪಡಿಸಲ್ಪಡುತ್ತೆ. ಔಷಧದ ಚಾರ್ಜು ಬಹಳ ಕಡಮೆ. ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ವಿವರವನ್ನು ತಿಳಿದುಕೊಳ್ಳಬಹುದು.

ನಾರಾಯಣ ಸಂಬೀಯರ್,
ಆಯುರ್ವೇದ ವೈದ್ಯರು,
52—44 ವೀರರಾಜೇಂದ್ರಪೇಟೆ.

ಕಲ್ಪತರು ತಾಯಿತ.

ಪರೀಕ್ಷೆ ಪಾಸಾಗೋಣ, ಶರೀರ ಸುಖವಾಗೋಣ, ನೌಕರಿ ಸಿಗೋಣ, ಸಂಬಳ ಹೆಚ್ಚೋಣ, ವಿವಾಹವಾಗೋಣ ಸಂತತಿಯಾಗೋಣ, ಕೈಕೊಂಡ ಉದ್ಯೋಗದಲ್ಲಿ ಯಶಸ್ಸು ಸಿಗೋಣ, ವ್ಯಾಪಾರದಲ್ಲಿ ಬಹಳೇ ಲಾಭ ಸಿಗೋಣ, ಸಾಲ ಮುಕ್ತ ಆಗೋಣ, ಭೂತ ಪಿಶಾಚ ಗ್ರಹಬಾಧೆ ಆಗದಿರೋಣ, ಪ್ರತಿಕೂಲ ಜನರು ಅನುಕೂಲವಾಗೋಣ, ಇವೇ ಮತ್ತು ಬೇರೆ ಎಷ್ಟೋ ಮನೋರಥಗಳು ಇಷ್ಟೆಯಂತೆಯೇ ಆಗುವ ಅಪೇಕ್ಷೆ ಇದ್ದರೆ ಇಚ್ಛಿತಫಲ ಕೊಡುವ ಲೋಕಮಾನ್ಯ ಕಲ್ಪತರು ತಾಯಿತ ಯಾವಾಗಲೂ ಹತ್ತಿರ ಇಡಿರಿ, ಅಂದರೆ ಇಚ್ಛೆ ಪೂರ್ಣವಾಗುವದು. ಅನುಭವದ ಹೊರತು ಖಾತ್ರಿ ಆಗಲಾರದು. ತಾ. ನ. ೧ಕೆ. ರೂ. ೧॥ ಗುಣ ತೀವ್ರವಾಗಿ, ತಾ. ನ. ೨ಕೆ. ರೂ. ೬ ಗುಣ ೧೫ ದಿವಸಗಳಲ್ಲಿ, ತಾ. ನ. ೩ಕೆ. ರೂ. ೩ ಗುಣ ೧ ತಿಂಗಳಲ್ಲಿ. ವ್ಹಿ. ಪಿ. ಖರ್ಚು ಬೇರೆ. ಗುಣಬಾರದಲ್ಲಿ ತಾಯಿತದುಖರ್ಚು ವಜಾಹೋಗಿ ಬಾಕೀ ಸಿಗುವದು.

ವಿಳಾಸ:—ಮ್ಯಾನೇಜರ, ಕಲ್ಪತರು ತಾಯಿತ, ಕೆ. ಎಸ್.
[52-17] ಪೋ. ಸಂಕೇಶ್ವರ ಜಿ. ಬೆಳಗಾಂವ.

THE SHOPPING CENTRE OF COORG,

Spencer & Co. Ltd.,

MERCARA & POLLIBETTA.

Arms & Ammunition.

New arrivals! Revised Prices!!

S. B. B. L. guns	Rs. 65, 85, 95 each.	
D. B. B. L. „	Rs. 260, 235, 210, 195 each;	
S. B. M. L. „	Rs. 60 each.	

Cartridges of every discription from Nos. 1 to 8 Rs. 14—8—0 per 100.

5

Health is Wealth.

WANTED all to improve health strength and vitality and thus save our nation from physical degeneracy. Send half-anna stamp and get 23 specimen photographs with full particulars from

Director, Physical Culture,
P. O. BASAVANAGUDI
Bangalore City.

"ಕೊಡಗು"

ಸನ್ ೧೯೨೪ನೇ ಇಸವಿ ನವಂಬರ್ ತಾ. ೨೮ನೇ ಶುಕ್ರವಾರ.

ಪ್ರಿಸಿ: ೧೪೪ನೇ ಸೆಕ್ಷನ್.

ಒಕ್ಟೋಬರ್ [illegible] ಟಿನಲ್ಲಿ ನಡಿಯುವ ಖಿಲಾಫತ್ತ್ ಕಾನ್ಫರೆನ್ಸಿಗ [illegible] ಉಪಕಾರಕ್ಕೆ [illegible] ದ ಸ್ವಾಗತಸಮಿತಿ [illegible] ಕಾರಕನಾಗಿ ನೇಮಿತರಾದ ಧಾರವಾಡದ [illegible] ಅಬ್ದುಲ್‌ರಹಮಾನ ಎಂಬವರು [illegible] 17ನೇ ತಾರೀಕು ಸಾಯುಂಕಾಲಕ್ಕೆ [illegible] ಬಂದರು. [illegible] ಬೊಂಬಾಯಿ ಆದಿಪತ್ಯಕ್ಕೆ ಸೇರಿದ ಉತ್ತರಕನ್ನಡ ಜಿಲ್ಲೆಗಳಿಗೂ [illegible] ಮದ್ರಾಸ್ ಆದಿಪತ್ಯಕ್ಕೆ ಸೇರಿದ ದಕ್ಷಿಣಕನ್ನಡ [illegible] ತಮ್ಮ ಪ್ರಚಾರಕ ಕೆಲಸವನ್ನು [illegible] ಆ ಎರಡು ಸರಕಾರಗಳಲ್ಲೂ ಇವರಿಗ [illegible] ಆಗಲಿಲ್ಲ. ಉಪನ್ಯಾಸಗಳಿಗೆ ಅಡ್ಡಿಯೂ ಬರಲಿಲ್ಲ. ಆ ದೇಶಗಳಲ್ಲಿ ಪ್ರಜೆಗಳು ಮೊದಲು ಇದ್ದ [illegible] ಶಾಂತರಾಗಿಯೇ ಇದ್ದಾರೆ ರಾಜದ್ರೋಹಿಗಳಾಗಿ [illegible]

[illegible] 1 ರಲ್ಲಿ ಸಾಯುಂಕಾಲ [illegible] ಖಿಲಾಫತ್ತ್ [illegible] ವಿಷಯದಮೇಲ ಉಪನ್ಯಾಸ [illegible] ನಿವಾಸಿಗ ಪ್ರಕಟ [illegible] ಸರಕಾರಿ [illegible] ಗಳಲ್ಲಿ [illegible] ಮತ್ತು ಸರಕಾರಿ ಕೌನ್ಸಿಲಿನಲ್ಲಿ [illegible] ಮ. ಸಿ. ಎಸ್. ರಂಗಸ್ವಾಮಿಯ್ಯಂಗಾರ್ [illegible] ಸಾಹುಕಾರರಾಗಿದ್ದ [illegible] ದೊಡ್ಡಪ್ಲಾಂಟರಾದ ಎಂ. ಎಂ. ಸಿದ್ದೀಕರೂ ಸಹ ಸ್ವಾಗತ [illegible] ಮೀಟಿಂಗಿನ ನೋಟೀಸನ್ನು ಹೊರಡಿಸಿದರು. [illegible] ನಡಿಯುವ ಈ ಮೀಟಿಂಗಿಗೆ [illegible] ಹುಲವಾಗಿತ್ತು.

[illegible] ಒಂದು ಗಂಟೆಗ [illegible] ಕ್ಲಾಸ್ ಮೇಜಸ್ಟ್ರೇಟರಾದ [illegible] ಪೋಲೀಸಿನವರ ಮೂಲಕ ಈ ಮುಸ್ಲಿಂ [illegible] ಮುನ್ಶಿಯವರು [illegible] ಬರುವದಿಲ್ಲವೆಂದು [illegible] ದಿತ್ತು. [illegible] ನಹ [illegible] ಹೋದರು. ರಾಜಕೀಯ ವಿಷಯ [illegible] ರಾಜಕೀಯ [illegible] ಮಾತಾಡುತ್ತೇನೆಂತಲೂ [illegible] ಆದರೂ ರಾಜಕೀಯ ವಿಷಯ [illegible] ಪ್ರಮಾಣವಾಗಿ ಹೇಳಬೇಕೆಂದು [illegible] ರಾಜಕೀಯ ವಿಷಯ [illegible] ಪ್ರಮಾಣ [illegible] ಮಾಡುವದಿಲ್ಲವೆಂದು [illegible] ಕೊಡಗಿನಲ್ಲಿ ಎಲ್ಲಿಯೂ [illegible] ಉಪನ್ಯಾಸವನ್ನೂ [illegible] ರಾಜಕೀಯ ವಿಷಯವನ್ನೇ [illegible] ಹೇಳಲು ಕಾರಣವೇನಿದೆ? ರಾಜದ್ರೋಹ [illegible] ಮಾಡಬೇಕೆನ್ನುವಂತ ಜಡ್ಡಿಯವರು [illegible] ರಾಜಕೀಯ ವಿಷಯವನ್ನೇ ಮಾತಾಡಬಾರದೆಂತ [illegible] ಮತ ವಿಷಯ [illegible] ರಾಜಕೀಯ ವಿಷಯ [illegible] ಆದ್ದರಿಂದ ರಾಜಕೀಯ ವಿಷಯ [illegible] ಪ್ರಮಾಣವಾಗಿ ಹೇಳುವದು [illegible] ಪ್ರಮಾಣವ [illegible] ಮತ ಧರ್ಮಕ್ಕೆ [illegible] ಪ್ರಮಾಣ [illegible] ಹೊರತು ರಾಜಕೀಯ ವಿಷಯ [illegible] ಉಪನ್ಯಾಸದಲ್ಲಿ [illegible] ಪ್ರಮಾಣಕ್ಕೆ ಅಕ್ಷೇಪಿಸಿದ್ದಲ್ಲ. ಪ್ರಮಾಣ [illegible] ಮುಸಲ್ಮಾನ ಮತಕ್ಕೆ ವಿರೋಧವೋ ಎಂಬುದು ನಮಗೆ ಗೊತ್ತಿಲ್ಲ. ಹೇಗೂ ಮುನ್ಶಿಯವರು ಪ್ರಮಾಣಮಾಡ [illegible] ತನ್ನ ಧರ್ಮಕ್ಕೆ ವಿರೋಧವೆಂತ ಹೇಳಿದಾಗ ಜಡ್ಜಿಯವರು ಅವರನ್ನು ದೃಢೀಕರಿಸಿ ಹೇಳೆಂತ [illegible] ಅನೇಕರು ಪ್ರಮಾಣ [illegible] ತಮ್ಮ ಧರ್ಮ [illegible] ಅಂಥವರು ಕೋರ್ಟುಗಳಲ್ಲಿ ಸಾಕ್ಷಿ [illegible] ಕೊಡುವಾಗ ದೃಢೀಕರಿಸಿ ಹೇಳುವ [illegible] ಇದೆ. ಈ [illegible] ಮುನ್ಶಿಯವರ [illegible] ಹೇಳುವ [illegible] ಎಂತ ಕೇಳಬಹುದಿತ್ತು. ಹೀಗೆ [illegible] ಮುನ್ಶಿಯವರು [illegible] ತರದ ಉಪನ್ಯಾಸವನ್ನು [illegible] ಮಾಡಿದ್ದು ಸರಿಯಲ್ಲವಂತ ನಮಗೆ ತೋರುತ್ತಿ

'ನೀವು ರಾಜದ್ರೋಹ [illegible] ಉಪನ್ಯಾಸಮಾಡಿ ದೇಶದ ಶಾಂತತೆ [illegible] ಭಂಗ [illegible] ಮಾಡುವಿರೆಂತ ನನಗೆ ತಿಳಿಸಿರುವದರಿಂದ ನಿಮಗೆ ಉಪನ್ಯಾಸ [illegible] ತಡೆ ಮಾಡಿರುತ್ತೇನೆ [illegible] ಇವರಿಗ ಶಾಂತತಾ ಭಂಗ [illegible] ತಿಳಿಸಿದ್ದು ಮಡಿಕೇರಿ ಟೌನು ಸಬ ಇನ್‌ಸ್ಪೆಕ್ಟರೆಂತ ನಮಗೆ ತಿಳಿಯಬರುತ್ತೆ. ಸಬ್ ಇನ್‌ಸ್ಪೆಕ್ಟರ ರಿಪೋರ್ಟು ಮೇರೆ ಒಬ್ಬ ಬ್ರಿಟಿಷ್ ಸರಕಾರದ ಪ್ರಜೆಯ **ಮಾತಾಡುವ ಸ್ವತಂತ್ರವನ್ನೇ ತೆಗೆದು ಹಾಕಿಬಿಡುವುದು, ಬ್ರಿಟಿಷ್ ಕೋರ್ಟಿಗೆ ತಕ್ಕಂತೆ ಕಂಡುಬರುವದಿಲ್ಲ. ದೊಡ್ಡ ಯುದ್ಧದ ಸಮಯದಲ್ಲಿಯೂ, ಯುದ್ಧ ತೀರಿದನಂತರ ಟರ್ಕರಿಗೂ,** ಗ್ರೀಸಿಗೂ ಯುದ್ಧ ನಡಿಯುತ್ತಿರುವಾಗಲೂ ಹಿಂದುಸ್ಥಾನದ ಮುಸಲ್ಮಾನರ ಮನಸ್ಸೆಲ್ಲಾ ಗಲಿಬಿಲಿಯುಳ್ಳದ್ದಾಗ ಖಿಲಾಫತ್ತು ಚಳವಳವು ದೇಶದ ಶಾಂತತಾ ಭಂಗ ಬರಬಹುದೆಂತ ಅನೇಕ ಕಡೆಗಳಲ್ಲಿ 144ನೇ ಸೆಕ್ಶನಿನ ಉಪಯೋಗ ಮಾಡುತ್ತಿದ್ದರು ಟರ್ಕಿ ಯುದ್ಧವೆಲ್ಲಾ ತೀರಿದಮೇಲೆ ಖಿಲಾಫತ್ತು ಚಳವಳಕ್ಕೆ ಯಾವ ಸರಕಾರದವರೂ ಗಮನವೇ ಕೊಡುವದಿಲ್ಲ. ಹೀಗಿರುವಾಗ ನಮ್ಮ ದೇಶದಲ್ಲಿ 144ನೇ ಸೆಕ್ಶನಿನ ಉಪಯೋಗವು ಅನಾವಶ್ಯವಾಗಿತ್ತು.

ಈ ಸೆಕ್ಶನಿನ ಉಪಯೋಗವು ಮೂರು ವರುಷಗಳಿಂದ ನಾಲ್ಕೈದು ಸಾರಿ ಆಗಿ ಹೋಯಿತು. ಹೊರಗಿನಿಂದ ಒಬ್ಬ ದೇಶ ಭಕ್ತರ ಮಾತನ್ನೂ ಕೊಡಗಿನವರು ಕೇಳಬಾರದೆಂತ ಕೊಡಗಿನ ಪೋಲೀಸಿನವರ ಮತ್ತು ಮೇಜಸ್ಟ್ರೇಟರುಗಳ ಉದ್ದೇಶವಾಗಿರುವಂತೆ ಕಾಣುತ್ತೆ. ಈ ತರದ ಅವಮಾನಕರವಾದ ಸ್ಥಿತಿಯನ್ನು ಕೊಡಗಿನ ನಿವಾಸಿಗಳು ಸಹಿಸಿಕೊಳ್ಳುವದು ಬಹಳ ವ್ಯಸನಕರ. ಕೊಡಗಿನ ನಿವಾಸಿಗಳು ಹೊರಗಿನವರ ಮಾತು ಕೇಳಿದಕೂಡಲೇ ರಾಜದ್ರೋಹಿಗಳಾಗಿ ಹೋಗುವದಾದರೆ ಕೊಡಗಿನ ರಾಜಭಕ್ತಿಯಲ್ಲಿ ನಮ್ಮ 1ನೇ ಕ್ಲಾಸ್ ಮೇಜಸ್ಟ್ರೇಟರಿಗೆ ನಂಬಿಕೆಯೇ ಇಲ್ಲವಂತಾಯಿತು. ಹೊರಗಿನಿಂದ ಒಂದವರು ರಾಜದ್ರೋಹವನ್ನು ಬೋಧಿಸಿದರೂ ಕೂಡ ದೇಶದವರ ರಾಜಭಕ್ತಿಯು ಘಟ್ಟಿಯಾಗಿರುವಾಗ ದೇಶದಲ್ಲಿ ಅಶಾಂತಿಯುಂಟಾಗುವದು ಸಾಧ್ಯವೇ ಇಲ್ಲ. ರಾಜದ್ರೋಹ ಮಾತಾಡಿದರೆ ಮಾತಾಡಿದವನ ಮೇಲೆ ರಾಜದ್ರೋಹದ ತಕ್ರೀರಿಗ [illegible] ಮಾಡಿ ಶಿಕ್ಷಿಸುವದಕ್ಕೆ ದೇಶದವರು ಯಾರೂ ಅಕ್ಷೇಪಿಸಿಯಾರರು. ಹೊರಗಿನಿಂದ ಬರುವವರ ಒಂದು ಉಪನ್ಯಾಸವನ್ನಾದರೂ ಕೇಳಿ ಅದರಲ್ಲಿ ರಾಜದ್ರೋಹವಿದೆಯೆಂದ ಮೇಜಸ್ಟ್ರೇಟರಿಗೆ ತಿಳಿದುಬಂದರೆ 144ನೇ ಸೆಕ್ಶನನ್ನು ಉಪಯೋಗಿಸುವದರಲ್ಲಿ ನ್ಯಾಯವಿತ್ತು. ಈ ಸೆಕ್ಶನನ್ನು ಬಹಳ ಅವಸರವಿದ್ದಾಗ ಮಾತ್ರ ಉಪಯೋಗಿಸಬೇಕಂತ ನಾವು ತಿಳಿಯುತ್ತೇವೆ. ಈ ಮುನ್ಶಿಯವರು ಮಾತಾಡಿದ ಕೂಡಲೇ ಕೊಡಗಿನಲ್ಲಿ ಉಂಡಾಗಬಹುದೆಂತ ಜಡ್ಜಿಯವರಿಗೆ ತೃಪ್ತಿಯಾಯಿತೇ? ಅದವಾ ನೋಟೀಸಿನಲ್ಲಿ ಹೇಳಿದಂತೆ ಪುಂಡಾಗುತ್ತೆಂತ ಜಡ್ಜಿಯವರಿಗೆ ತಿಳಿಸಿದ ಮಾತ್ರಕ್ಕೆ ಇಂಥಾ ಹುಕುಮನ್ನು ಅವರು ಕೊಡಬಹುದೇ? ತಿಳುವಳಿಕೆ ಇರುವ ಪ್ರತಿಯೊಬ್ಬ ಕೊಡಗಿನ ಪ್ರಜೆಯು ಇಂಥಾ ನ್ಯಾಯವಿಲ್ಲದ ಹುಕುಮಿಗೆ ವಿರೋಧಿಸದೆ ಇರಲಾರನು.

ಮುನ್ಶಿಯವರ ಉಪನ್ಯಾಸಕ್ಕೆ ನಿಶ್ಚಯವಾದ ಕಾಲಕ್ಕೇ ಮೀಟಿಂಗ್ ನಡೆದು ಈ ಸೆಕ್ಶನಿನ ದುರುಪಯೋಗಕ್ಕೆ ಅಕ್ಷೇಪಿಸಿದ್ದು ಬಹಳ ತೃಪ್ತಿಕರ. ಅಲ್ಲಿ ಮಂಜೂರಾದ ಠರಾವು ಮಡಿಕೇರಿ ನಿವಾಸಿಗಳ ಮನಸ್ಸನ್ನು ಸರಿಯಾಗಿಯೇ ಸೂಚಿಸಿಯದೆ. "ಸರಕಾರದ ಅಧಿಕಾರಿಗಳು ಕ್ರಿಮಿನಲ್ ಪ್ರೊಸೀಜರ್ ಕೋಡಿನ 144ನೇ ಸೆಕ್ಶನನ್ನು ಹೊರಗಿನಿಂದ ಬರುವ ರಾಜಕೀಯ ಕೆಲಸಗಾರರ ಮೇಲೆ ಉಪಯೋಗಿಸುವ ಪದ್ಧತಿಗೆ ಈ ಪಬ್ಲಿಕ್ ಮೀಟಿಂಗಿನಲ್ಲಿ ನೆರೆದ ಮಡಿಕೇರಿ ನಿವಾಸಿಗಳು ಸಿಟ್ಟಿನಿಂದ ಆಕ್ಷೇಪಿಸುತ್ತಾರೆ. ಮತ್ತು ಕ್ರಮವಾಗಿಯೂ, ಚೆನ್ನಾಗಿ ಅಜಮಾಯಿಸಿಯೂ ಅಕ್ರಮವಾಗಿಯೂ ಈ ಸೆಕ್ಶನನ್ನು ಇನ್ನುಮುಂದೆ **ಉಪಯೋಗಿಸದಂತೆ ಮಾಡಬೇಕೆಂತ ಕಮಿಷನರನ್ನು ಕೇಳಿಕೊಳ್ಳುತ್ತಾರೆ." ಈ ಠರಾವಿಗೆ ನಾವು ಮನಃಪೂರ್ವಕವಾಗಿ ಒಪ್ಪುತ್ತೇವೆ. ಮತ್ತು ದೇಶದ ನಿವಾ**ಸಿಗಳೆಲ್ಲಾ ಒಪ್ಪಿಯಾರೆಂತ ನಾವು ನಂಬುತ್ತೇವೆ. ನಮ್ಮ ಈಗಿನ ಕಮಿಷನರಾದ ಮ. ಭಾಸ್ಕರರವರು ಕೆಲಸಕ್ಕೆ ಬಂದಮೇಲೆ ಇದೇ ಮೊದಲಿನ ಸಾರಿ ಈ ಸೆಕ್ಶನಿನ ಉಪಯೋಗವಾದದ್ದಾಗಿದೆ. ಇವರು ಈ ವರೆಗೆ ತಮ್ಮ ಕೆಲಸದಲ್ಲಿ ತೋರಿಸಿರುವ ನ್ಯಾಯಪ್ರೀತಿಯನ್ನು ಈ ಸಂದರ್ಭದಲ್ಲೂ ತೋರಿಸಿಯಾರೆಂತ ನಂಬುತ್ತೇವೆ. ಕೌನ್ಸಿಲ್ ಸ್ಥಾಪಿತವಾದ ಮೇಲೆ ಈ ಸೆಕ್ಶನಿನ ಉಪಯೋಗವು ಇದೇ ಮೊದಲು. ಆದ್ದರಿಂದ ಕೌನ್ಸಿಲಿನವರು ಸಹ ದೇಶಕ್ಕೆ ಉಂಟಾದ ಈ ಅವಮರ್ಯಾದೆಯನ್ನು ಹೋಗಲಾಡಿಸಿಕೊಂಡಾರೆಂತ ನಾವು ಆಶಿಸುತ್ತೇವೆ.

ಕೊಡಗು ಲೆಜಿಸ್ಲೇಟಿವ್ ಕೌನ್ಸಿಲಿನ ಪ್ರೊಸೀಡಿಂಗ್ಸ್.

(ಕಳೆದ ವಾರದಿಂದ ಮುಂದರಿಸಿದ್ದು.)

19ನೇ ಠರಾವು

ಮ. ಎಸ್. ಆರ್ ಸುಬ್ಬಯ್ಯನವರು.

'ಸೋಮವಾರಪೇಟೆ ಮತ್ತು ಕೊಡ್ಲಿಪೇಟೆ ಸ್ಕೂಲುಗಳನ್ನು ಶೀಘ್ರದಲ್ಲೇ ಲೋವರ್‌ಸೆಕಂಡರಿ ಶಾಲೆಗಳಾಗಿಮಾಡಬೇಕೆಂತ ಈ ಕೌನ್ಸಿಲು ಚೀಫ್‌ಕಮಿಷನರಿಗೆ ಸಿಫಾರಸ್ಸುಮಾಡುತ್ತದೆ."

ಈ ಠರಾವನ್ನು ಈ ಸಭೆಯ ಮುಂದೆ ತರುವದರಲ್ಲಿ ಸಂಬರಾಜಪೇಟೆ ತಾಲೋಕಿನವರು ಪದೇ ಪದೇ ಕೇಳುತ್ತಿದ್ದ ಕೋರಿಕೆಯನ್ನೇ ಕೇಳುವುದಾಗಿದೆ. ಬೇರೆ ತಾಲೋಕಿನವರಿಗಿಂತ ಈ ತಾಲೋಕಿನವರು ವಿದ್ಯೆಯಲ್ಲಿ ಬಹಳ ಹಿಂದೆ ಇದ್ದಾರೆ. ಆದರೆ ಬಡತನದಲ್ಲಿ ಮುಂದಾಗಿದ್ದಾರೆ. ಪ್ರೈಮರಿ ವಿದ್ಯೆಯನ್ನು ಬಲಾತ್ಕಾರದಿಂದ ಕೊಡಬೇಕೆಂತ ಮಾಡುವಾಗ ಈ ತಾ**ಲೋಕಿನಲ್ಲಿ ಮೊದಲು ಬಲತ್ಕರಿಸಲಿಕ್ಕೆ ಪ್ರಾರಂಭಿಸಬೇಕು. ಈಗ ದೊರೆಯುವ ಪ್ರೈಮರಿ ವಿದ್ಯೆಗೇನೇ ಹೆಚ್ಚಲ್ಲದಿದ್ದರೂ ಎರಡು ಲೋವರ್‌ಸೆಕಂಡರಿ ಶಾಲೆಗಳ ಅವಶ್ಯಕತೆ ಇದೆ.** 1919ನೇ ಇಸವಿಯಲ್ಲಿ ನನಗೆ ದೊರೆತ ಲೆಕ್ಕದಮೇರೆ ಕೊಡ್ಲಿಪೇಟೆ ಟೌನ್ ಶಾಲೆಗಳಲ್ಲಿ 270 ಹುಡುಗರೂ ಸೋಮವಾರಪೇಟೆ ಟೌನ್ ಶಾಲೆಗಳಲ್ಲಿ 157 ಹುಡುಗರೂ ಇದ್ದರು. ಆಗಕ್ಕಿಂತ ಈಗ ಸಂಖ್ಯೆ ಹೆಚ್ಚಾಗಿದೆಯೆಂದು ನಂಬಿಗೆ ಇದೆ. ಸೋಮವಾರಪೇಟೆಶಾಲೆಗೆ ಹುಡುಗರನ್ನು ಕಳುಹುವ [illegible] ಶಾಲೆಗಳಲ್ಲಿ 120 ಹುಡುಗರಿದ್ದಾರೆ. 150 ಹುಡುಗರಿರುವ 5 ಶಾಲೆಗಳು ಕೊಡ್ಲಿಪೇಟೆಯ ಅಜುಬಾಜಿನಲ್ಲಿವೆ.

ಈ ಭಾಗದ ಜನರು ಬಹಳ ಬಡವರಾದ್ದರಿಂದ ತಮ್ಮ ಹುಡುಗರನ್ನು ಸೆಕಂಡರಿ ವಿದ್ಯೆಗೆ ಮಡಿಕೇರಿಗೆ ಕಳುಹಿಸಲು ಆಗಲಾರದು. ಕೊಡ್ಲಿಪೇಟೆಯಿಂದ ಮಡಿಕೇರಿಗೆ 44 ಮೈಲ್ ದೂರವಿದೆ. ಸೋಮವಾರಪೇಟೆಯಿಂದಲೂ 26ಮೈಲಿದೆ. ಈಗಲೂ ಮಡಿಕೇರಿಯಲ್ಲಿ ಕೆಲವು ವಿದ್ಯಾರ್ಥಿಗಳಿದ್ದಾರೆ. [illegible] ನಿವಾರಿಸುತ್ತೆ ಹೋಬಳಿಯ ಕಡೆಯವರು ಐದು ಡಜನ್ ವಿದ್ಯಾರ್ಥಿಗಳಾದರೂ ಕೊಡಗಿನ ಹೊರಗೆ ಸೆಕಂಡರಿ ಶಾಲೆಗಳಲ್ಲಿ ಓದಿದ್ದಾರೆ ಮತ್ತು ಓದುತ್ತಿದ್ದಾರೆ. ಈ ಎರಡು ಸ್ಥಳಗಳಲ್ಲಿ ಲೋವರ್‌ಸೆಕಂಡರಿ ಶಾಲೆಗಳನ್ನು ಏರ್ಪಡಿಸಿದರೆ ಪ್ರೈಮರಿ ಶಾಲೆಗಳಲ್ಲಿ ಸಂಖ್ಯೆಯು ಹೆಚ್ಚುತ್ತೆ. ಅಲ್ಲಿ ಲೋವರ್‌ಸೆಕೆಂಡರಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಸಾಲದೆ ತೊಂದರೆಯಾಗಲಾರದೆಂತ ನನಗೆ ನಂಬಿಕೆಇದೆ. ಅಲ್ಲದೆ ಲಿಂಗಾಯತರಿಗೂ ಗೌಡುಗಳಿಗೂ ಮಡಿಕೇರಿಯಲ್ಲಿ ಬೋರ್ಡಿಂಗ್ ಅನುಕೂಲಗಳಿಲ್ಲ. ಸೋಮವಾರಪೇಟೆ ಕೊಡ್ಲಿಪೇಟೆಗಳಲ್ಲಿ ತಮ್ಮ ಜಾತಿಯವರ ಛತ್ರಗಳೂ ನಂಟರಿಷ್ಟರುಗಳೂ ಊಟಕ್ಕೆ ಏರ್ಪಡಿಸಿಕೊಳ್ಳಲು ಅನುಕೂಲವಿದೆ. ಜಾತಿವಾರು ಬೋರ್ಡಿಂಗುಗಳನ್ನು ಸ್ಥಾಪಿಸಲಿಕ್ಕೆ ಮಡಿಕೇರಿಗಿಂತ ಆ ಸ್ಥಳಗಳಲ್ಲಿ ತಮ್ಮ ಜಾತಿಯವರಿರುವದರಿಂದ ಅನುಕೂಲವಿದೆ. ಜನರು ತಮ್ಮ ಮಕ್ಕಳಿಗೆ ವಿದ್ಯೆ ಕೊಡಲು ಹಿಂದರೂ ಅನುಕೂಲಗಳನ್ನು ಏರ್ಪಡಿಸಿಕೊಟ್ಟು ಎಲ್ಲರ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಿಸುವದು ಸರಕಾರದ ಕರ್ತವ್ಯವಂತ ನಾನುನಂಬುತ್ತೇನೆ.

ಸೋಮವಾರಪೇಟೆ ಮತ್ತು ಕೊಡ್ಲಿಪೇಟೆ ಶಾಲೆಗಳಲ್ಲಿ ಹ್ಯಾಯರ್ ಎಲಿಮೆಂಟರಿ ಕ್ಲಾಸ್‌ಗಳಿವೆ. ಅದರ ಉಪಯೋಗವನ್ನು ಜನರು ಹೆಚ್ಚು ಪಡೆದಿಲ್ಲ. ಈ ಕ್ಲಾಸ್‌ಗಳಲ್ಲಿ ಓದಿದವರನ್ನು ಹಕ್ಕಿನಮೇರೆ 4ನೇ ಫಾರಮಿಗೆ ತೆಗೆದುಕೊಳ್ಳುವದಿಲ್ಲ. ಜಮಿಂದಾರ್ ಸಂಘದ ಕಳೆದ ವಾರ್ಷಿಕ ಮಹಾಸಭೆಯಲ್ಲಿ ಹ್ಯಾಯರ್ ಎಲಿಮೆಂಟರಿ ಮತ್ತು ಲೋವರ್‌ಸೆಕಂಡರಿ ಈ ಎರಡು ತರದ ಕ್ಲಾಸ್‌ಗಳಲ್ಲಿ ಯಾವುದು ಉತ್ತಮವೆಂತ ಬಹಳ ಚರ್ಚೆ ನಡೆದು ಲೋವರ್‌ಸೆಕಂಡರಿಗೇನೇ ಎಲ್ಲರೂ ಒಪ್ಪಿಗೆಕೊಟ್ಟರು.

ಸೋಮವಾರಪೇಟೆಕೊಡ್ಲಿಪೇಟೆ ಶಾಲೆಕಟ್ಟಡಗಳಲ್ಲಿ ಲೋವರ್‌ಸೆಕಂಡರಿ ಕ್ಲಾಸ್‌ಗಳನ್ನು ಇಡಲು ಸ್ಥಳವಿದೆಯೆಂತಲೂ ಮತ್ತು ಒಂದೊಂದುಶಾಲೆಗೆ ಒಬ್ಬರಿಬ್ಬರು ಹೆಚ್ಚಿಗೆ ಉಪಾಧ್ಯಾಯರುಗಳನ್ನು ಕೊಟ್ಟರೆ ಲೋವರ್ ಸೆಕೆಂಡರಿ ಕ್ಲಾಸ್‌ಗಳನ್ನು ತೆರೆಯಲುಸಾಧ್ಯವಿದೆಯೆಂತಲೂ ನಾನುತಿಳಿಯುತ್ತೇನೆ. 1922ನೆ ಇಸವಿಯಲ್ಲಿ ಈ ಸಂಬಂಧವಾಗಿ ಚೀಫ್ ಕಮಿಷನರಿಗೆ ನಾನು ಬರಕೊಂಡಿದ್ದೆ. ಅವರ ಅಭಿಪ್ರಾಯವನ್ನು ಸೂಚಿಸುವ ತುಂಬಾ ಸಹಾನುಭೂತಿ ತೋರಿಸುವ ಜವಾಬು ಕಮಿಷನರಿಂದ ನನಗೆ ಬಂತು. ಆದರೆ ಈ ಪ್ರಾಂತ್ಯದ ಜನರು ಹೈಯರ್ ಎಲಿಮೆಂಟರಿ ಕ್ಲಾಸ್‌ಗಳನ್ನು **ಪೂರ್ತಿಯಾಗಿ ಉಪಯೋಗಿಸಿಕೊಳ್ಳುತ್ತಿಲ್ಲವೆಂತಲೂ ಮತ್ತು ಶಾಲೆಗೆ ಹೋಗುವದರ ಬದಲು ಅಂಗಡಿ ವ್ಯಾಪಾರ ಮಾಡುವದು ಉತ್ತಮವೆಂತ ಹುಡುಗರು ಯೋಚಿಸುತ್ತಾರೆಂತಲೂ ಚೀಫ್ ಕಮಿಷನರ ಅಭಿಪ್ರಾಯವನ್ನು ಸೂಚಿಸಿದ್ದರೂ ಈ ಲೋಪಗಳನ್ನು ಸಂಪಡಿಸುವದು ವಿದ್ಯಾ**ಇಲಾಖೆಯವರ ಕೈಯಲ್ಲೇ ಇದೆ. ವ್ಯಾಪಾರ ಲೆಕ್ಕ ಇಡುವಿಕೆ ಮತ್ತು ಕೃಷಿ ಅಭ್ಯಾಸಗಳನ್ನು ಸ್ವಲ್ಪಮಟ್ಟಿಗೆ ವ್ಯಾಸಂಗ ವಿಷಯಗಳೊಂದಿಗೆ ಸೇರಿಸಿಕೊಂಡರೆ ಜನರು ಹುಡುಗರನ್ನು ಸಂತೋಷದೊಡನೆ ಶಾಲೆಗೆ ಕಳುಹಿಸಿಯಾರು. ಈ ಮಾತುಗಳೊಡನೆ ಠರಾವನ್ನು ಸಭೆಯ ಅಂಗೀಕಾರಕ್ಕೆ ಇಟ್ಟಿದ್ದೇನೆ. ಮುಂದಿನ ಬಜೆಟ್ಟಿನಲ್ಲೇ ಈ ಶಾಲೆಗಳಿಗೆ ಹಣವನ್ನು ಇಡಬೇಕೆಂತ ಸರಕಾರವನ್ನು ಕೇಳಿಕೊಳ್ಳುತ್ತೇನೆ.

ಮ. ಸಿ. ಕಾಳಪ್ಪನವರು.

ಈ ಠರಾವಿಗೆ ಅನುಮೋದಿಸುತ್ತೇನೆ. ಸರಕಾರಿ ನೌಕರಿಯಲ್ಲಿ ನಂಜರಾಜಪಟ್ಣ ತಾಲೋಕಿನವರು ಬೇಕಾದಷ್ಟು ಜನವಿಲ್ಲವೆಂಬುದು ಈ ತಾಲೋಕಿನ ಬೇಸರವಾಗಿದೆ. ಸೋಮವಾರಪೇಟೆ ಮತ್ತು ಕೊಡ್ಲಿಪೇಟೆಗಳಲ್ಲಿ ಲೋವರ್ ಸೆಕೆಂಡರಿ ಶಾಲೆಗಳಿಲ್ಲದಿರುವುದೇ ಇದಕ್ಕೆ ಕಾರಣ. ಹೈಯರ್ ಎಲಿಮೆಂಟರಿ ಕ್ಲಾಸ್‌ಗಳಿವೆಯೆಂತ ಹೇಳಬಹುದು. ಈ ಕ್ಲಾಸ್‌ಗಳಲ್ಲಿ ವಿದ್ಯಾಭ್ಯಾಸವು ಮುಖ್ಯವಾಗಿ ಕನ್ನಡದಲ್ಲೇ ಇರುವದರಿಂದಲೂ, ಪಾಠ ಪುಸ್ತಕಗಳು ಲೋವರ್ ಸೆಕೆಂಡರಿ ಕ್ಲಾಸ್‌ಗಳ ಪುಸ್ತಕಗಳಿಂದ ಬೇರೆಯಾಗಿರುವದರಿಂದಲೂ ಈ ಕ್ಲಾಸ್‌ಗಳಲ್ಲಿ ಕಲಿತ ವಿದ್ಯಾರ್ಥಿಗಳಿಗೆ ಹೈಸ್ಕೂಲಿನಲ್ಲಿ ಕಷ್ಟವಾಗುತ್ತೆ. ಹುಡುಗರು ಚಿಕ್ಕವರಾದ್ದರಿಂದಲೂ, ಬೋರ್ಡಿಂಗ್‌ಗಳು ಇಲ್ಲದ್ದರಿಂದಲೂ ಮಡಿಕೇರಿಗೆ ಸೆಕೆಂಡರಿ ವಿದ್ಯಾಭ್ಯಾಸಕ್ಕೆ ಅಡ್ಡಿಯಾಗಿದೆ. **ದೇಶದವರೂ ಈ ಕೋರಿಕೆಯನ್ನು ಒಪ್ಪಿದ್ದಾರೆ. 1922ನೇ ಇಸವಿ ಜಮೀನ್ದಾರರ ಸಂಘದಲ್ಲಿ ಈ ಕೋರಿಕೆಯು** ಮಂಜೂರಾಗಿದೆ.

ನಾನು 20ನೇ ಠರಾವನ್ನು ನನ್ನೆಯು ಮುಂದೆ ತರಬೇಕಾದ ಅವಶ್ಯವಿಲ್ಲವೆಂತ ಈಗಲೇ ತಿಳಿಸುತ್ತೇನೆ

ಮಿ. ಕೆ ಪಿ ಚಿಣ್ಣಪ್ಪನವರು.

ಅಧ್ಯಕ್ಷರು ಅನುಮತಿ ಕೊಟ್ಟರೆ ಈ ಠರಾವನ್ನು ಸ್ವಲ್ಪ ವ್ಯತ್ಯಾಸಮಾಡಲು ಅಪೇಕ್ಷಿಸುತ್ತೇನೆ. ಈ ಠರಾವಿನಲ್ಲಿ ನಾಪೋಕ್ಲು ಹುದಿಕೇರಿಯಲ್ಲೂ ಲೋವರ್ ಸೆಕೆಂಡರಿ ಶಾಲೆಗಳು ಬೇಕೆಂತ ಸೇರಿಸಿಕೊಳ್ಳಬೇಕೆಂಬದೇ ನನ್ನ ವ್ಯತ್ಯಾಸವಾಗಿದೆ.

ಅಧ್ಯಕ್ಷರು :—ಈ ವ್ಯತ್ಯಾಸವನ್ನು ಮಾಡಲು ನೋಟೀಸ್ ಕೊಟ್ಟಿದ್ದೀರೋ ?

ಮಿ. ಕೆ. ಪಿ. ಚಿಣ್ಣಪ್ಪನವರು :—ಅಧ್ಯಕ್ಷರು ಅನುಮತಿ ಕೊಟ್ಟರೆ ನೋಟೀಸ್ ಕೊಡದೆ ವ್ಯತ್ಯಾಸವನ್ನು ಸೂಚಿಸಬಹುದು.

ಅಧ್ಯಕ್ಷರು —ಆದರೆ ಇಲಾಖೆ ಮೆಂಬರಿಗೆ ಜವಾಬು ಕೊಡಲು ಸಮಯ ಬೇಕಲ್ಲ, ಠರಾವು ತಂದವರು ಈ ವ್ಯತ್ಯಾಸಕ್ಕೆ ಒಪ್ಪುತ್ತಾರೊ ?

ಮಿ. ಯನ್ ಆರ್ ಸುಬ್ಬಣ್ಣಯ್ಯನವರು ವ್ಯತ್ಯಾಸವನ್ನು ಒಪ್ಪಿಕೊಳ್ಳಲು ನನ್ನ ಆಕ್ಷೇಪಣೆ ಇಲ್ಲ.

ಅಧ್ಯಕ್ಷರು—ವಿದ್ಯಾ ಇಲಾಖೆಯ ಮೆಂಬರದ್ದು ಆಕ್ಷೇಪಣೆ ಇದೆಯೋ ?

ಮಿ. ಎಂ' ಎಸ್'. ಹೆಚ್'. ಥಾಮ್ಸನ್—ನನ್ನ ಆಕ್ಷೇಪಣೆ ಇಲ್ಲ.

ಮಿ. ಟಿ. ಜಿ. ಟಾಸ್ಕರವರು—ಆರ್ಥಿಕ ಕಾರಣದಿಂದ ನನ್ನ ಆಕ್ಷೇಪಣೆ ಇದೆ ಈ ಠರಾವು ಮಂಜೂರಾಗಿ ಚೀಫ್ ಕಮಿಷನರು ಒಪ್ಪಿದರೆ ಈ ವ್ಯತ್ಯಾಸದ ಠರಾವನ್ನು ನಡಿಸಲು ಹಣವೇನು ಬೇಕಾಗುತ್ತೆ ಎಂಬದು ತಿಳಿದಿರಬೇಕು. ಆದ್ದರಿಂದ ನೋಟೀಸಿಲ್ಲದೆ ಠರಾವಿಗೆ ವ್ಯತ್ಯಾಸವನ್ನು ಮಾಡಲು ನಾನು ಒಪ್ಪುವದಿಲ್ಲ.

ಮಿ. ಎ. ಬಿ. ಚಂಗಪ್ಪನವರು.

ಇನ್ನೂ ಮುಂದರಿಸುವ ಮುಂಚೆ ಇಲಾಖೆ ಮೆಂಬರರು ಹೈಯ್ಯರ್ ಎಲಿಮೆಂಟರಿಗೂ ಲೋವರ್‌ಸೆಕಂಡರಿಗೂ ವ್ಯತ್ಯಾಸವೇನೆಂತ ತಿಳಿಯಲು ಅಪೇಕ್ಷಿಸುತ್ತೇನೆ.

ಮಿ ಎಂ ಎಸ್ ಹೆಚ್ ಥಾಮ್ಸನಾರವರು.

ನನ್ನ ಭಾಷಣವನ್ನು ಒರದಿದ್ದೇನೆ ಅಧ್ಯಕ್ಷರ ಅನುಮತಿ ಇದ್ದರೆ ಓದುತ್ತೇನೆ. 1918ನೇ ಇಸವಿಯಿಂದ ಈಚೆಗೆ ನಂಜರಾಜಪಟ್ಣ ತಾಲೋಕು ವಿದ್ಯೆಯಲ್ಲಿ ಹಿಂದೆ ಬಿದ್ದಿದೆಎಂತ ಎಂದಕ್ಕಿಂತ ಹೆಚ್ಚಿಗೆ ಅರ್ಜಿಗಳು ಸರಕಾರಕ್ಕೆ ಬಂದಿವೆ ಜನರು ವಿದ್ಯೆಗೆ ಗಮನಕೊಡದೆ ಇರುವದಕ್ಕೆ ವ್ಯಸನವನ್ನು ಸೂಚಿಸಲಾಗಿದೆ ಠರಾವನ್ನು ತಂದವರು ಕಳೆದ ಮೀಟಿಂಗಿನಲ್ಲಿ ತಮ್ಮ ಭಾಷಣದಲ್ಲಿ ಹೀಗೆಂತ ಹೇಳಿದ್ದಾರೆ—"ಮಡಿಕೇರಿಗೆ ಸೆಕೆಂಡರಿ ವಿದ್ಯಾಭ್ಯಾಸಕ್ಕೆ ಕಳುಹಿಸದೆ ಇರುವದು ಮಾತ್ರವಲ್ಲ, ಇರುವ ಪ್ರೈಮರಿಶಾಲೆಗಳಿಗೇನೇ ಹುಡುಗರನ್ನು ಕಳುಹಿಸದೆ ಕೆಲಸಕ್ಕಾಗಿ ನಿಲ್ಲಿಸಿಕೊಂಡುಬಿಡುತ್ತಾರೆ" ಇರುವ ಸಂಸ್ಥೆಗಳನ್ನೇ ಉಪಯೋಗಿಸಿಕೊಳ್ಳುವದಿಲ್ಲವೆಂತ ಒಪ್ಪಿಕೊಂಡಿದ್ದಾರೆ. ಉತ್ತರಕೊಡಗಿನ ಸುಪರ್‌ವೈಜರ ಡೈರಿನೋಡಿದರೂ ಇದು ನಿಜವೆಂತ ಗೊತ್ತಾಗುತ್ತೆ ಇದಕ್ಕೆ ಪರಿಹಾರವು ಈ ಠರಾವಿನಲ್ಲಿ ಹೇಳಿದಂತೆ ಕೊಡ್ಲಿಪೇಟೆಯಲ್ಲೂ, ಸೋಮವಾರಪೇಟೆಯಲ್ಲೂ ಲೋವರ್ ಸೆಕಂಡರಿ ಶಾಲೆಗಳನ್ನು ತೆರೆಯುವದೇ ಎಂದು ಅನೇಕಸಾರಿ ಹೇಳಿದ್ದಾರೆ ಈ ಕಾರಣವು ಸರಿಯಾಗಿ ಕಾಣುವುದಿಲ್ಲ. ಉಚ್ಛವಿದ್ಯೆಗೆ ಅನುಕೂಲ ಕೊಟ್ಟರೆ ಪ್ರೈಮರಿ ವಿದ್ಯಾಭ್ಯಾಸಕ್ಕೆ ಹುಡುಗರನ್ನು ಕಳುಹಿಸುತ್ತಾರೆಂತ ಹೇಳಿದಂತಾಯಿತು. 5ನೇ ಸ್ಟೇಂಡಾರ್ಡಿನಿಂದ 7ನೇ ಸ್ಟೇಂಡಾರ್ಡವರೆಗೆ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗುವದಿಲ್ಲ, 3ನೇ ಸ್ಟೇಂಡಾರ್ಡಿನಲ್ಲಿ ನಹ ಹುಡುಗರ ಸಂಖ್ಯೆ ಕಡಿಮೆಯಾಗುತ್ತೆ. ಈ ಸಹಾಸರಿಲೆಕ್ಕವು ಒಟ್ಟು ಇಂಡಿಯಾ ದೇಶಕ್ಕೆಲ್ಲಾ ಒಂದೇಯಾಗಿದೆ. ಇದು ಆಶ್ಚರ್ಯವೇನರಿ.

"ಎಲಿಮೆಂಟರಿ ಮತ್ತು ಸೆಕೆಂಡರಿ ವಿದ್ಯಾಭ್ಯಾಸವು ಬೇರೆ ಬೇರೆ ವಿಧದಿಂದ ಕೊಡಲ್ಪಡುತ್ತದೆ ವ್ಯತ್ಯಾಸವು ಜಾತಿಯಲ್ಲಿ ಅಲ್ಲ. ಗುಣದಲ್ಲಿ ಮಾತ್ರವಾಗಿದೆ. ಇಲ್ಲವಾದರೆ ಒಂದರಿಂದ ಒಂದಕ್ಕೆ ದಾಟುವದು ಸಾಧ್ಯವಾಗಲಾರದು. ಎರಡು ತರದ ವಿದ್ಯೆಯೂ ಬೇಕಾಗಿರುವದಾಗಿದೆ. ಎರಡರಲ್ಲಿ ಹೆಚ್ಚಿನ ನಿಗಕ್ಕೆ ಅರ್ಹವಾದದ್ದು ಎಲಿಮೆಂಟರಿ ವಿದ್ಯಾಭ್ಯಾಸವೇ ಒಂದುತಾಲೋಕಿನ ಹುಡುಗರು ಪ್ರೈಮರಿಶಾಲೆಗೆ ಹೋಗುವದಿಲ್ಲವೆನ್ನುವದಕ್ಕೆ ವ್ಯಸನಪಡಬೇಕೇ ಹೊರ್ತು ಲೋವರ್ ಸೆಕೆಂಡರಿ ಶಾಲೆಗಳು ಇಲ್ಲವೆಂಬದಕ್ಕೆ ವ್ಯಸನಪಡಬೇಕಾದದ್ದಿಲ್ಲ ಕಳೆದ ಮೀಟಿಂಗಿನಲ್ಲಿ ಮಿ. ಬಿ. ಶ್ರೀಪತಿರಾಯರು ಹೇಳಿದಂತೆ ಸೆಕೆಂಡರಿ ವಿದ್ಯಾಭ್ಯಾಸಕ್ಕೆಂತ ಪ್ರೈಮರಿ ವಿದ್ಯೆಗೆ ಹೆಚ್ಚು ನಿಗ ಕೊಡಬೇಕು. ದೊಡ್ಡತಲೆಯು ಸಣ್ಣಕಾಲುಗಳಮೇಲೆ ಇದ್ದರೆ ಪ್ರಯೋಜನವಿಲ್ಲ."

ಉಚ್ಛವಿದ್ಯೆ ಬೇಕೆನ್ನುವ ಕೆಲವು ಹುಡುಗರ ಪ್ರಯೋಜನಕ್ಕಾಗಿ ಸರಕಾರದ ಹಣದ ಅನುಕೂಲಕ್ಕೆ ತಕ್ಕಂತೆ 5 ರಿಂದ 7ನೇ ಸ್ಟೇಂಡಾರ್ಡ್ ಕ್ಲಾಸ್‌ಗಳನ್ನು ಇಟ್ಟಿದೆ. ಈ ಶಾಲೆಗಳನ್ನು ಸರಿಯಾಗಿ ಉಪಯೋಗಿಸಿಕೊಳ್ಳದೆ ಇರಲಿಕ್ಕೆ ಅಂಥ ಶಾಲೆಗಳಲ್ಲಿ ಒಳ್ಳೇ ಫಲ ದೊರೆಯದೆ ಇರಲಿಕ್ಕೆ ಬೇಕಾದ ಸೆಕೆಂಡರಿ ಗ್ರೇಡಿನ ಉಪಾಧ್ಯಾಯರುಗಳು ಇಲ್ಲದೆ ಇರುವದೇ ಅಲ್ಲ. ಸೋಮವಾರಪೇಟೆಗೆ ಮುಖ್ಯವರೂ ಕೊಡ್ಲಿಪೇಟೆಗೆ ಏವರೂ ಬೇಕಾಗಿದೆ ಇಷ್ಟುಮೊಸ್ತರುಗಳಿದ್ದರೆ ಈ ಕ್ಲಾಸ್‌ಗಳಲ್ಲಿ ಕೊಡುವ ವಿದ್ಯೆಯಿಂದ ಹೈಸ್ಕೂಲಿಗೆ ಸೇರಲಿಕ್ಕೆ ಅರ್ಹರಾಗುವದರಲ್ಲಿ ಸಂಶಯವಿಲ್ಲ. ಹೈಯರ್ ಎಲಿಮೆಂಟರಿ ಶಾಲೆಗಳಲ್ಲಿ ಹೇಳುವ ಪಾಠ ಪುಸ್ತಕಗಳನ್ನು ಸ್ವಲ್ಪ ವ್ಯತ್ಯಾಸಮಾಡಿಕೊಂಡರೆ ಹೈಸ್ಕೂಲ್ ಶಾಲೆಗೆ ಸೇರಲು ಅರ್ಹರನ್ನಾಗಿ ಮಾಡಬಹುದು. ಹೀಗಾದರೆ ಸಾಕೆಂತ 1919ರಲ್ಲಿ ರಾಯ್ ಒಹದ್ದೂರ್ ಮಿ. ಸಿ ಮಾದೈಯ್ಯನವರ ಅಧ್ಯಕ್ಷತೆಯಲ್ಲಿ ನಡೆದ ಎಜ್ಯುಕೇಶನ್ ಕಾನ್‌ಫರೆನ್ಸಿನಲ್ಲಿ ಮಂಜೂರಾಗಿದೆ.

ಠರಾರಿ ಸೆಕೆಂಡರಿ ಎಜುಕೇಶನ್ ಕೊಡುತ್ತೀರಿ. ನಿಜವಾದ ಸೆಕೆಂಡರಿ ವಿದ್ಯಾಭ್ಯಾಸವೇ ನಮಗೆ ಬೇಕಾದದ್ದು ಎಂತ ಕೆಲವರು ಹೇಳಬಹುದು 1919ನೇ ಕಾನ್‌ಫರೆನ್ಸಿನಲ್ಲಿ ಅಪ್ಪರ್ ಪ್ರೈಮರಿ ವಿದ್ಯಾಭ್ಯಾಸ ಬೇಡವೆಂತ ಠರಾವು ಪಾಸಾಗಿ ಇದೆ. ಲೋವರ್‌ಸೆಕೆಂಡರಿ ವಿದ್ಯಾಭ್ಯಾಸ ಪಡಕೊಳ್ಳಬಹುದಾದ ಕೆಲವು ವಿದ್ಯಾರ್ಥಿಗಳಿಗಾಗಿ ಎಲ್ಲೆಲ್ಲಿಯೂ ಲೋವರ್ ಸೆಕೆಂಡರಿ ಶಾಲೆಗಳನ್ನು ಸ್ಥಾಪಿಸುವದು ಸಾಧ್ಯವಿದೆಯೋ ಎಂಬದನ್ನು ಯೋಚಿಸಬೇಕು ಇದು ಸಾಧ್ಯವಿಲ್ಲ. ಹೈಯರ್ ಎಲಿಮೆಂಟರಿ ಶಾಲೆಗಳನ್ನೇ ಸ್ಥಾಪಿಸಿಕೊಳ್ಳುವದರಲ್ಲಿ ಅನೇಕ ಗುಣಗಳಿವೆ

ಖರ್ಚು ಬಹಳ ಕಡಿಮೆಯಾಗುತ್ತೆ. ಸೆಕೆಂಡರಿ ಶಾಲೆಗೆ ಟ್ರೈಯಿನಾ ಆದ ಗ್ರಾಜುಯೇಟೇ ಹೆಡ್ಮಾಸ್ಟರಾಗಬೇಕು. ಹೈಯರ್ ಎಲಿಮೆಂಟರಿ ಶಾಲೆಯಾದರೆ ಟ್ರೈಯಿನ್ ಆದ ಅಂಡರ್ ಗ್ರಾಜುಯೇಟ್ ಆದರೆ ಸಾಕು ಹೈಯರ್ ಎಲಿಮೆಂಟರಿಯಲ್ಲಿ ಫೀಸ್ ಬಹಳ ಕಡಮೆ. ಕೆಳಗಿನ ದರ್ಜೆಗಳಲ್ಲಿ ಕಡಮೆ ಕರ್ಚಿನ ವಿದ್ಯೆಯೇ ಬೇಕಾಗಿದೆ ಹೈಯರ್ ಎಲಿಮೆಂಟರಿ ಕ್ಲಾಸ್‌ಗಳೇ ಬಹಳ ಉತ್ತಮವೆಂತ ಜನರಿಗೆ ಸಂದರ್ಭವಿದ್ದಾಗಲೆಲ್ಲಾ ಬೋಧಿಸಬೇಕು ಬೇರೆ ಜಿಲ್ಲೆಗಳಲ್ಲಿ ಹೈಯರ್ ಎಲಿಮೆಂಟರಿಯ ಪ್ರಯೋಜನವನ್ನು ನಾನು ನೋಡಿದ್ದೇನೆ ನಾಪೋಕ್ಲು ಶಾಲೆಯಲ್ಲಿ ಹೈಯರ್ ಎಲಿಮೆಂಟರಿ ಕ್ಲಾಸ್‌ಗಳಲ್ಲಿ ತುಂಬಾ ವಿದ್ಯಾರ್ಥಿಯರು ಇದ್ದಾರೆ. ನಾಲ್ಕುನಾಡವರಿಗೆ ಈ ಜಾತಿ ವಿದ್ಯೆಗೆ ಆಕ್ಷೇಪಣೆ ಇಲ್ಲ. ಈ ವರ್ಷ ನಾಪೋಕ್ಲು ಹೈಯರ್ ಎಲಿಮೆಂಟರಿ ಕ್ಲಾಸಿನಿಂದ ಮೂವರನ್ನು ವೀರರಾಜಪೇಟೆಯಲ್ಲಿ ಫೋರ್ತ್ ಫಾರಂಗೆ ತೆಗೆದುಕೊಂಡಿದ್ದಾರೆ

ಹೈಯರ್ ಎಲಿಮೆಂಟರಿಯಿಂದ ಫೋರ್ತ್ ಫಾರಂಗೆ ಏನೂ ಸಂಶಯವಿಲ್ಲದೆ ಪ್ರಮೋಶನ್ ಸಿಕ್ಕಬೇಕೆಂತ ತಂದೆತಾಯಿಗಳ ಆಶೆ ಇರಬಹುದು ಆದರೆ ಸೆಕೆಂಡರಿ ಶಾಲೆಗಳಿಗೆ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಬೇಕಾದರೆ ತುಂಬಾ ಎಚ್ಚರವಿಡಬೇಕಾದದ್ದು ಅವಶ್ಯವೆಂತ ಜನರಿಗೆ ನಾವು ತಿಳಿಸಬೇಕು. ಇಂಗ್ಲೆಂಡಿನಲ್ಲಿ ಕಳೆದ ವರುಷ ಜಾರಿಗೆ ಬಂದ ಓಂದು ಬಾನೂನು ಮೇರೆ ಸೆಕೆಂಡರಿ ಶಾಲೆಗೆ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಬೇಕಾದರೆ ಬಹು ಚೆನ್ನಾಗಿ ಪರೀಕ್ಷಿಸಬೇಕೆಂತ ಆಗಿದೆ. ಆದ್ದರಿಂದ ನಮ್ಮ ಸೆಕೆಂಡರಿ ಶಾಲೆಗಳಲ್ಲೂ ಪರೀಕ್ಷೆಯನ್ನು ಚೆನ್ನಾಗಿ ನಡಿಸಬೇಕು.

ಆರ್ಥಿಕ ಕಾರಣದಿಂದಲೂ ಮತ್ತು ಮೇಲ್ಕಂಡ ಇತರ ತತ್ವಗಳಿಂದಲೂ ಠರಾವಿಗೆ ನಾನು ವಿರೋಧಿಸುತ್ತೇನೆ

ಮಿ ಕೆ. ಪಿ ಚಿಣ್ಣಪ್ಪನವರು

ನನ್ನ ವ್ಯತ್ಯಾಸ ಸೂಚನೆಯ ವಿಷಯ ಏನಾಯಿತು? ಅದು ಅಂಗೀಕರಿಸಲ್ಪಟ್ಟಿತೋ ?

ಅಧ್ಯಕ್ಷರು —ಅದನ್ನು ಅಂಗೀಕರಿಸಲಾಗುವದಿಲ್ಲ ಅದಕ್ಕೆ ತಕ್ಕ ನೋಟೀಸ್ ಕೊಡಬೇಕು

ಮಿ ಯನ್ ಆರ್. ಸುಬ್ಬಣ್ಣಯ್ಯನವರು.

ಕನ್ನಡದಲ್ಲಿ ಜವಾಬುಕೊಟ್ಟರು ಅದರ ಸಾರಾಂಶವೇನೆಂದರೆ—

ನಂಜರಾಜಪಟ್ಣ ತಾಲೋಕಿನಲ್ಲಿ ಲೋವರ್ ಸೆಕೆಂಡರಿ ಶಾಲೆಗಳು ಸ್ಥಾಪಿಸಲ್ಪಡಲೇ ಬೇಕು. ಶಾಲೆಗಳಾದ ವಿನಹ ಜನರ ಮೌಢ್ಯ ಹೋಗುವದಿಲ್ಲವೆಂತ ಜನರಿಗೆ ನಂಬಿಕೆಯಾಗಿದೆ ಆ ತಾಲೋಕಿನವರಿಗೆ ಇಂಗ್ಲಿಷ್ ಭಾಷೆ ಆಡಲು ಶಕ್ತಿ ಇರುವ ಮೆಂಬರನನ್ನು ಈ ಕೌನ್ಸಿಲಿಗೆ ಚುನಾಯಿಸಲು ಸಾಧ್ಯವಾಗದೆ ಇರುವದರಿಂದಲೇ ಇಂಗ್ಲಿಷಿಗೆ ಆ ತಾಲೋಕಿನಲ್ಲಿ ಉತ್ತೇಜನ ಕೊಡಬೇಕೆಂಬದು ಪ್ರತ್ಯಕ್ಷವಾಯಿತು ಹಣವಿಲ್ಲವೆಂಬ ಕಾರಣವು ತಡೆಯಾಗಲಾರದು ಈ ಕಾರಣವನ್ನು ಸರಕಾರದವರು ಎಲ್ಲಾ ಬಾಬಿಗೂ ಉಪಯೋಗಿಸುತ್ತಾರೆ.

ಠರಾವು ಓಟಿಗೆ ಹಾಕಲಾಯಿತು ಸರಕಾರಿ ಮೆಂಬರುಗಳು ಮಾತ್ರ ಠರಾವಿಗೆ ವಿರೋಧವಾಗಿ ಓಟ್ ಕೊಟ್ಟರು. ಮಿ ಪಿ ಬಿ ಮೇದಪ್ಪನವರು, ಎ ಬಿ ಚಂಗಪ್ಪನವರು, ಕೆ. ಸುಬ್ಬಾಯನವರು ಮತ್ತು ಕೆ ಮಂದಣ್ಣನವರು ನಹ ಯಾವ ಕಡೆಗೂ ಓಟ್ ಕೊಡಲಿಲ್ಲ. ಮಿಕ್ಕವರೆಲ್ಲರೂ ಠರಾವಿಗೆ ಓಟು ಮಾಡಿದರು.

ಗೌಡುಗಳ ದುರ್ದೆಶೆಗೆ ಕಾರಣ.

(ತಾ. 11ನೇ ಪತ್ರಿಕೆಯಿಂದ ಮುಂದರಿಸಿದ್ದು)

ಗೌಡುಗಳ ಪೂರ್ವಚರಿತ್ರೆಯ ಸಾರಾಂಶವನ್ನು ಕಳೆದ ಸಂಚಿಕೆಯಲ್ಲಿ ಬರೆದದ್ದಾಯಿತು ಆದರೆ ಅವರ ಈಗಿನ ದುರ್ದೆಶೆಗೆ ಏನುಕಾರಣವೆಂಬುದನ್ನು ಇಲ್ಲಿ ವಿವರಿಸಬಹುದು. ಗೌಡುಗಳ ಹೀನ ಸ್ಥಿತಿಗೆ ಅನೇಕ ಕಾರಣಗಳಿರುವವು. ಆದರೆ ಮುಖ್ಯವಾದ ಕೆಲವು ಕಾರಣಗಳನ್ನು ಮಾತ್ರ ಇಲ್ಲಿ ಒರೆಯಲು ಪ್ರಯತ್ನಪಡುವೆನು.

ಬಹು ಕಾಲದಿಂದಲೂ ಎಡೆಬಿಡದೆ ನಡೆದು ಬಂದಿದ್ದ ಸಮುಷ್ಟಿ ಕುಟುಂಬಗಳ (joint families) ನಾಶವೇ ಗೌಡುಗಳ ದುರ್ದೆಶೆಗೆ ಒಂದು ಕಾರಣವೆನ್ನಬಹುದು. ಇವರು ಅತಿ ಪೂರ್ವಕಾಲದಿಂದಲೂ ಸಮುಷ್ಟಿ ಕುಟುಂಬಗಳಲ್ಲಿ ಜೀವನ ಮಾಡಿದವರು ಸಮುಷ್ಟಿ ಕುಟುಂಬದ ಜೀವನವು ನವನಾಗರೀಕತೆಗೆ ಎಷ್ಟು ವಿರೋಧವೆಂದು ಕಂಡು ಬಂದರೂ, ಅದರಲ್ಲಿ ಅನೇಕ ಗುಣಗಳಿದ್ದವು, ಸಮುಷ್ಟಿ ಕುಟುಂಬಗಳಲ್ಲಿ ಕೃಷಿಯು ಸರಿಯಾಗಿ ನಡೆಯುತ್ತಿದ್ದಿತು. ಈಗಿನ ಪಾಶ್ಚಿಮಾತ್ಯರ ಪದ್ಧತಿಯಂತೆ ಸಮುಷ್ಟಿ ಕುಟುಂಬಗಳಲ್ಲಿ ಕೆಲಸವು ಸರಿಯಾಗಿ ವಿಂಗಡಿಸಲ್ಪಡುತ್ತಿದ್ದಿತು (Division of labour) ಕುಟುಂಬದ ಜನರನ್ನು ಯಜಮಾನನು ವಂಗಡ ವಂಗಡಗಳಾಗಿ ಆಯಾಯ ಕಲಸಕ್ಕೆ ನೇಮಿಸುತ್ತಿದ್ದನು. ಮತ್ತು ಒಂದು ಕೆಲಸದವರು ಏನಾದರು ಕಾರಣದಿಂದ ಅವರ ಕೆಲಸವನ್ನು ಮಾಡಲು ಪೂರೈಸಲಾರದಿದ್ದರೆ ಬಾಕಿ ಇರುವವರು ಅವರ ಕೆಲಸವನ್ನು ಮಾಡುತ್ತಿದ್ದರಲ್ಲದೆ, ಕೆಲಸವೂ ಉಳಿಯುತ್ತಿದ್ದಿಲ್ಲ ಪ್ರತಿ ಒಂದು ಕೆಲಸಕ್ಕೂ ಬೇಕಾದಷ್ಟು ಜನರನ್ನು ಮಾತ್ರ ನೇಮಿಸುತ್ತಿದ್ದನು. ಈಗಿನ ಕಾಲದಲ್ಲಿ ಹಾಗಲ್ಲ. ಪ್ರತಿ ಮನೆಯಲ್ಲಿಯೂ ಒಬ್ಬ ಯಜಮಾನನು, ಅವನ ಪತ್ನಿಯು ಯಜಮಾನತಿ, ಅವರಿಗೆ ಎರಡು ಮಕ್ಕಳು, ಮನೆಯಲ್ಲಿ ಬೇರೆ ಜನರಿಲ್ಲ. ಮಕ್ಕಳನ್ನು ಎತ್ತಲಿಕ್ಕೆ ಪ್ರತ್ಯೇಕ ಒಬ್ಬ ಹುಡುಗಿಯನ್ನಾಗಲಿ ಅಥವಾ ಮುದುಕಿಯಾಗಲಿ ಆಗಬೇಕು. ಯಜಮಾನನಿಗೆ ಕೆಲಸಕ್ಕೆ ಸಮಯ ಸಿಕ್ಕುವದಿಲ್ಲ, ಸಿಕ್ಕಿದರೂ ನಹ ಎಲ್ಲಾ ಕೆಲಸವನ್ನು ಒಬ್ಬನೇ ಮಾಡಬೇಕು, ದನಕಾಯಲಿಕ್ಕೆ ಒಬ್ಬ ಹುಡುಗನು ಬೇಕೇಬೇಕು, ಅವನಿಗೆ ಸಂಬಳವಾಗಬೇಕು, ಪತ್ನಿಯು ಮನೆಯಲ್ಲಿ ಯಜಮಾನತಿ, ಅವಳಿಗೆ ಅಡಿಗೆಯೊಂದಲ್ಲದೆ ಬೇರೆ ಕೆಲಸಕ್ಕೆ ಸಮಯವಿಲ್ಲ ಸಮುಷ್ಟಿ ಕುಟುಂಬಗಳಲ್ಲಿ ಮೇಲೆ ಹೇಳಿದ ಮನೆ ಕೆಲಸಗಳನ್ನೆಲ್ಲಾ ಮನೆಯಲ್ಲಿಯ ಚಿಕ್ಕ ಚಿಕ್ಕ ಹುಡುಗಿಯರೂ ಮುದುಕಿಯರೂ ಮಾಡುತ್ತಿದ್ದರು. ಹೆಂಗಸರೆಲ್ಲಾ ಕೆಲಸಕ್ಕೆ ಹೋಗುವರು ಮನೆಗೆ ಒಬ್ಬ ಯಜಮಾನನು ಮಾತ್ರ ಸಾಕಾಗಿತ್ತು, ಬಾಕಿ ಎಲ್ಲಾ ಯೌವ್ವನಸ್ಥರೂ ಕೆಲಸಕ್ಕೆ ಹೊರಡುವರು, ಈಗ ಮನೆಯಲ್ಲಿ ಒಬ್ಬನೆ ಇರುವಾಗ, ಅವನು ಯಜಮಾನನಾದುದರಿಂದ ಕೆಲಸ ಮಾಡುವದು ಯಾರು? ಅದರಲ್ಲಿಯೂ ಅವನಿಗ ಒಂದು ಸಮಯ ಜ್ವರಬಂದರೆ ಎಲ್ಲವೂ ತೀರಿತು, ಅಥವಾ ಕೋರ್ಟು ಕಚೇರಿಗಳಲ್ಲಿ ಕಲಸವಿದ್ದರೆ ಒಂದು ವರುಷದ ಕೃಷಿ ಸಮಯ ತಪ್ಪಿ ಮಾಡಿದ್ದರಿಂದ ನಷ್ಟವಾಯಿತು ಮೊದಲನೆಯ ಸರ್ತಿ ಮಾಪಿಳ್ಳೆಯ ಅಂಗಡಿಯಲ್ಲಿ ಸಾಲವಾಯಿತು. ಅಲ್ಲಿಂದ ಅವನ ಸಾಲವು ಸೂರ್ಯನ ಕೂಸಿನಂತೆ ಬೆಳೆದು ದೊಡ್ಡದಾಯಿತು. ಅಲ್ಲಿಂದ ಅವನು ವರಹಕ್ಕೆ ಎರಡು ಒಟ್ಟೆ ಒತ್ತೆ ಪ್ರಕಾರ ಸಾಲ ಮುಗಿಸಲಿಕ್ಕೆ ಪ್ರಾರಂಭ ಮಾಡಿದನು. ಆದ್ದರಿಂದ ಬೆಳೆ ಕಟಾವಿಗೆ ಬಂದ ಕೂಡಲೆ ಮನೆಯಲ್ಲಿ ಧಾನ್ಯವಿಲ್ಲದಂತಾಯಿತು. ಇದು ಈಗಿನ ನವನಾಗರೀಕತೆಯ ಫಲ. ಈ ಕಷ್ಟಗಳೆಲ್ಲಾ ಸಮುಷ್ಟಿ ಕುಟುಂಬಗಳಲ್ಲಿ ಬಹಳ ಕಡಿಮೆಯಾಗಿದ್ದವು.

ಗೌಡುಗಳು ವಿದ್ಯೆಯಲ್ಲಿ ಹಿಂದುಳಿಯಲಿಕ್ಕೆ ಅನೇಕ ಕಾರಣಗಳಿರುವುವು ಬೇಸಾಯಗಾರರಿಗೆ ಮೊದಲಿನಿಂದಲೂ ವಿದ್ಯೆಯಲ್ಲಿ ಹೆಚ್ಚು ಕುತೂಹಲ ಕಡಿಮೆ. ನಾಲದುದಕ್ಕೆ ಅವರಲ್ಲಿ ಮುಕ್ಕಾಲು ಪಾಲು ಜನರು ಪಟ್ಣದಿಂದ ಹದಿನಾರು ಗಾವುದ ದೂರದಲ್ಲಿಯೆ ಇದ್ದವರು ಆದುದರಿಂದ ಅವರ ಮಕ್ಕಳನ್ನು ಶಾಲೆಗೆ ಕಳುಹಿಸುವುದೇ ದುರ್ಲಭವಾಯಿತು. ಆದರ ಬ್ರಿಟಿಷರ ಆಳಿಕೆಯಲ್ಲಿ ಹಿಂದೂ ದೇಶದ ಬೇರೆ ಪ್ರಾಂತ್ಯಗಳಲ್ಲಿ ರೈತರನ್ನು ನಹ ವಿದ್ಯಾವಂತರನ್ನಾಗಿ ಮಾಡಲಿಕ್ಕೆ ಅನೇಕ ಪ್ರಯತ್ನಗಳನ್ನು ಮಾಡಿರುವರು. ಮೈಸೂರು ದೇಶದಲ್ಲಿ ಒಕ್ಕಲಿಗರ ವಿದ್ಯಾಭಿವೃದ್ಧಿಗೆ ಮೈಸೂರು ಸರಕಾರವು ಎಷ್ಟು ಪ್ರಯತ್ನ ತೆಗೆದುಕೊಳ್ಳುತ್ತಿದೆಯೆಂದು ಎಲ್ಲರಿಗೂ ತಿಳಿದಿದೆ ಆದರೆ ಕೊಡಗಿನಲ್ಲಿ ಇವರಿಗೆ ಯಾವ ಉತ್ತೇಜನವೂ ದೊರೆತಿಲ್ಲ. ಇವರ ವಂಗಡದವರೂ ಯಾರೂ ಸರಕಾರ ಉದ್ಯೋಗದಲ್ಲಿ ಇಲ್ಲದಿದ್ದದ್ದೇ ಹೀಗೆ ಇವರು ಹಿಂದುಳಿಯಲಿಕ್ಕೆ ಒಂದು ಕಾರಣವೆನ್ನುವದರಲ್ಲಿ ಸಂದೇಹವಿಲ್ಲ. ಹಿಂದೂ ದೇಶದಲ್ಲಿ ಮೊಟ್ಟಮೊದಲು ಸರಕಾರಿ ಉದ್ಯೋಗವು ಯಾವ್ಯಾವ ವಂಗಡದವರಿಗ ಸಿಕ್ಕಿದೆಯೋ ಅವರೆಲ್ಲರೂ ಈಗ ಉತ್ತಮ ಸ್ಥಿತಿಯಲ್ಲಿರುತ್ತಾರೆ ಈ ಕಾಲದಲ್ಲಿ ಒಂದಾವೃತ್ತಿ ಒಂದು ವಂಗಡವು ಹಿಂದುಳಿದರೆ ಆ ಮೇಲೆ ಅವರು ಮುಂದುವರಿಯಲು ಅತಿ ಕಷ್ಟವಾಗುವುದು ಕೊಡಗು ಸರಕಾರಕ್ಕೆ ಗೌಡುಗಳೆಂಬ ನಿವಾಸಿಗಳು ಕೊಡಗಿನಲ್ಲಿರುವರೆಂಬ ಸಂಗತಿಯು ನಹ ಬಹು ಕಾಲದವರೆಗೆ ತಿಳಿದಿಲ್ಲವೆಂತ ಕಾಣುತ್ತದೆ ಬ್ರಿಟಿಷ್ ಸರಕಾರದಲ್ಲಿ ಹೆಚ್ಚುಕಮ್ಮಿ ಅಳುವ ಕೂಸಿಗೆ ಮಾತ್ರ ಅನ್ನವಾದುದರಿಂದ ಮುಂದೆ ಬಂದು ಕೂಗಿಕೊಳ್ಳಲು ಶಕ್ತಿ ಸಾಲದಂತ ಗೌಡುಗಳಿಗೆ ಯಾವ ಸರಕಾರ ಸಹಾಯವೂ ಬಹು ಕಾಲದವರೆಗೆ ಸಿಕ್ಕಲಿಲ್ಲ ಈಗ್ಗೆ ಸುಮಾರು ಹದಿನಾರು ವರುಷಗಳಿಗೆ ಹಿಂದೆ, ಕೆಲವು ಗೌಡ ಮುಖಂಡರು ತಮ್ಮ ಹುಡುಗರ ವಿದ್ಯಾಭಿವೃದ್ಧಿಗೆ ಹೋರಾಡುವುದನ್ನು ಕಂಡು ಆಗಿನ ಕೊಡಗಿನ ಕಮೀಷನರಾಗಿದ್ದ ಚಾಪ್ಲಿನ್ ದೊರೆಗಳವರು ಗೌಡುಗಳ ಹುಡುಗರಿಗಾಗಿ ಒಂದು ಬೋರ್ಡಿಂಗನ್ನು ದಯಪಾಲಿಸಿದರು. ಅಂದಿನಿಂದ ಗೌಡುಗಳು ಅವರ ವಿದ್ಯೆಯಲ್ಲಿ ಸ್ವಲ್ಪ ಪ್ರಯತ್ನವನ್ನು ತೆಗೆದುಕೊಂಡಂತೆ ಕಾಣುತ್ತದೆ

ಗೌಡುಗಳ ದುರ್ದೆಶೆಗೆ ಮೂರನೆ ಕಾರಣ ಮದ್ಯಪಾನ ಮದ್ಯಪಾನವು ಬಹಳ ಜನರನ್ನು ದುರ್ದೆಶೆಗೆ ತಂದಿರುತ್ತದೆ. ಆದರೆ ಗೌಡುಗಳು ಅದಕ್ಕೆ ತುತ್ತಾದಷ್ಟು ಬೇರೆ ಯಾವ ಪಂಗಡವೂ ಆಗಿರಲಾರದು ಎಷ್ಟು ಗೌಡುಗಳ ಕುಟುಂಬಗಳು ಶಿಶಾ ಸೇವೆಯಿಂದ ಕೆಟ್ಟು ಹೋಗಿರಬಹುದೆಂದು ಹೇಳುವುದು ಅಸಾಧ್ಯ ಹೆಂಡಕುಡುಕನಿಂದ ರಹಸ್ಯವನ್ನೂ ಅವನ ಅಸ್ತಿಯನ್ನೂ ಬಹು ಸುಲಭವಾಗಿ ಕಿತ್ತುಕೊಳ್ಳಬಹುದು ಆದುದರಿಂದಲೇ ದಕ್ಷಿಣಕನ್ನಡ ಜಿಲ್ಲೆಯಲ್ಲಿರುವ ಅನೇಕ ಗೌಡುಗಳು ದರಿದ್ರರಾಗಿರುವರು. ಅದೂ ಅಲ್ಲದೆ ದಕ್ಷಿಣಕನ್ನಡ ಜಿಲ್ಲೆಯಲ್ಲಿಯ ಬಂಟರ ಅಳಿಯ ಸಂತಾನದ ಕಾನೂನಿನಿಂದ ಅವರಲ್ಲಿ ಒಂದ ಆಸ್ತಿಯು ಪುನಹ ಬೇರೆಯವರಿಗೆ ಹೋಗುವುದಿಲ್ಲ ಹೀಗಾದುದರಿಂದ ಅಲ್ಲಿಯ ಗೌಡುಗಳು ಮತ್ತು ಇವರಂತಿರುವ ಬೇರೆ ಮದ್ಯಪಾನಮಾಡುವವರು ತಮ್ಮ ಆಸ್ತಿಪಾಸ್ತಿಗಳನ್ನು ಕಳೆದುಕೊಂಡರು ಕೊಡಗಿನಲ್ಲಿರುವ ಗೌಡುಗಳು ಹೀಗೆ ಆಸ್ತಿಗಳನ್ನು ಕಳದುಕೊಂಡಿಲ್ಲ ಯಾಕಂದರೆ ಕೊಡಗಿನ ಬೇರೆ ನಿವಾಸಿಗಳಲ್ಲಿ ಮುಖ್ಯಾಲುಪಾಲು ಜನರು ಪಾನದಲ್ಲಿ ಗೌಡುಗಳಿಗೆ ಕಡಿಮೆಇಲ್ಲ ಹಾಗಾದುದರಿಂದ ಹಣನಷ್ಟವಲ್ಲದೆ ಬೇರೆ ನಷ್ಟವಿಲ್ಲದಂತಾಯಿತು ಆದಾಗ್ಯೂ ಅಲ್ಲದೆ ಜಮ್ಮದ ಭೂಮಿಯನ್ನು ಸಾಲಕ್ಕೆ ಮಾರಾಟಮಾಡಕೂಡದ್ದರಿಂದ ಆಸ್ತಿಯಮೇಲೆ ಹೆಂಡದ ಸಾಲ ಬರುವುದಿಲ್ಲ ಆದರೆ ಅನೇಕಸೇಳೆ ಬಿಲ್ಲವರ ಗುತ್ತಿಗೆ ಹಣಕ್ಕೆ ಜಾಮೀನು ನಿಂತ ಗೌಡುಗಳ ಭೂಮಿಯು ಕಡೆಯಲ್ಲಿ ಪರಾಜು ಆಗಿದ್ದನ್ನು ಅನೇಕರು ನೋಡಿರಬಹುದು

ಗೌಡುಗಳಲ್ಲಿ ಕೆಲವು ಕುಟುಂಬದವರು ಅವರ ಗೋತ್ರಾಸು ಸಂಬಂಧ ಹೆಂಡ ಕುಡಿಯಲಾರದವರಾಗಿದ್ದರು. ಆದರೆ ಕಾಲಕ್ರಮೇಣ ಅವರು ಸಹ ಬಾಕಿ ಉಳಿದವರ ಸಂಘಕ್ಕೆ ಸೇರುತ್ತಿರುವರು. ಗೌಡುಗಳಲ್ಲಿ ಮದ್ಯಪಾನವು ದಿನೇದಿನೇ ಹೆಚ್ಚುತ್ತಿರುವುದು ಪೂರ್ವದಲ್ಲಿ ಸಹ ಕುಡುಕರ್ತನವಿತ್ತು. ಆದರೆ ಹೆಚ್ಚಾಗಿ ಬೈನೆ ಅಥವಾ ತೆಂಗಿನ ಹೆಂಡವನ್ನು ಮಾತ್ರ ಕುಡಿಯುತ್ತಿದ್ದರು ಈ ಹೆಂಡವನ್ನು ಕುಡಿದು ಭೂಮಿಯನ್ನು ಕಳೆದುಕೊಳ್ಳುವದು ಸ್ವಲ್ಪ ನಿಧಾನ ಈಗಿನ ಸರಾಯಿ ಬ್ರಾಂಡಿಗಳನ್ನು ತಲೆಗೇರಿಸಿ ಅತ್ಯಂತ ಬೇಗನೆ ಮನೆಯನ್ನು ಕಳೆದುಕೊಳ್ಳಬಹುದು ಮತ್ತು ಬೈನೆ ಅಥವ ತೆಂಗಿನ ಹೆಂಡವು ಹಿತ್ತಲಲ್ಲಿಯೇ ಬೇಕಷ್ಟು ಸಿಕ್ಕುತ್ತಿದ್ದುದರಿಂದ ಹೆಚ್ಚಿನ ಹಣ ಖರ್ಚು ಇರುತ್ತಿದ್ದಿಲ್ಲ ಹಿತ್ತಲಲ್ಲಿನ ಒಬ್ಬದರಿಮರನ ಅಥವ ಕಣ್ಣಿನ ಜೀವನ ಕಾಪಾಡಿದರೆ ಬೇರೆ ಹಣ್ಣಿನ ಬಾಧೆ ಇರಲಿಲ್ಲ ಈಗ ಹಾಗಲ್ಲ ದೊಡ್ಡ ದೊಡ್ಡ ಕ್ರಯದ ಸಂಚಗಳು ದೊರೆಯುತ್ತವೆ ಅದಕ್ಕೆಲ್ಲಕ್ಕೂ ಹಣವನ್ನೇ ಕೊಡಬೇಕು ಸಂತೆಗೆ ಅಕ್ಕಿಮಾರಾಟಕ್ಕೆ ಒಂದಂತ ಬಡವರು ಸಹ ಹಿಂತಿರುಗಿ ಹೋಗುವಾಗ ಜೇಬಿನೊಳಗೆ ಸಾರಾಯಿಸೀಸೆಯಿಲ್ಲದೆ ಹಿಂದಿರುಗಲಾರರು

ಕೊಡಗಿನಿಂದ ವರ್ಷ ಒಂದರ ಸುಮಾರು ಮೂರುವರೆ ಲಕ್ಷ ರುಪಾಯಿ ಅಬ್ಕಾರಿ ಇಲಾಖೆಗಾಗಿ ಹೋಗುತ್ತದೆಯೆಂತೆ ಇದಷ್ಟು ಕಂದಾಯದಿಂದ ಮಾತ್ರ. ಹಾಗಾದರೆ ನಿಜವಾದ ಸಾರಾಯದ ಕ್ರಯವೆಷ್ಟು ಆಗ ಬಹುದೆಂದು ವಾಚಕರು ಊಹಿಸಿಕೊಳ್ಳಬಹುದು ಈ ಮೇಲೆ ಹೇಳಿದ ಮೂರುವರೆ ಲಕ್ಷದ ಪೈಕಿ ಗೌಡುಗಳು ಒಂದುಲಕ್ಷವಾದರೂ ಕೊಡದೆ ಇದ್ದಲ್ಲಿ ತಮ್ಮ ಗಾಂಭೀರ್ಯಕ್ಕೆ ಕುಂದಕವೆಂದು ಯೋಚಿಸಿ ವರ್ಷ ಒಂದರ ಒಂದು ಲಕ್ಷಕ್ಕಿಂತ ಹೆಚ್ಚು ಹಣ ಅಬ್ಕಾರಿ ಇಲಾಖೆಗೆ ಕೊಡುವರು ಇವರು ಹಂಚಕ್ಕ ಕೊಡುವ ಹಣ ಒಂದು ಇಪ್ಪತ್ತನೆಯ ಅಂಶವನ್ನು ವಿದ್ಯಾಫಂಡಿಗೆ ಕೂಟ್ಟರೆ ವರುಷ ಒಂದರ ಇಬ್ಬರು ಗೌಡಹುಡುಗರನ್ನು ದೂರದೇಶಗಳಿಗೆ ವಿದ್ಯಾಭ್ಯಾಸಕ್ಕೆ ಕಳುಹಿಸಬಹುದು ಅಥವ ಸುಮಾರು ಅರುವತ್ತು ಯುವಕರಿಗೆ ಮದ್ರಾಸು ಅಥವ ಬೊಂಬಾಯಿ ಪಟ್ಟಣಗಳಲ್ಲಿ ವಿದ್ಯಕಲಿಸಬಹುದು. ಯಾವದೂ ಇಲ್ಲದಿದ್ದರೆ ಪರಸ್ಪರ ಸಂಘಗಳನ್ನು ಏರ್ಪಡಿಸಿ ಇಡೀ ಗೌಡಜನಾಂಗದವರ ದಾರಿದ್ರ್ಯವನ್ನೇ ಹೋಗಲಾಡಿಸಬಹುದು

ಕೊಡಗು ಕೌನ್ಸಿಲಿನ ಒಬ್ಬ ಮಹನೀಯರು ಕೆಲವು ದಿನಗಳ ಹಿಂದೆ ಕೊಡಗಿನ ಬಡತನಕ್ಕೆ ಕಾರಣವೇನೆಂದು ಒಂದು ಪ್ರಶ್ನೆಯನ್ನು ಕೇಳಿದರಂತೆ. ಅವರು ಕೌನ್ಸಿಲಿನಲ್ಲಿ ಕೇಳಿದ ಪ್ರಶ್ನೆಗಳಿಗೆ ಕೌನ್ಸಿಲು ಹೊರಗಡೆ ಇರುವ ನಾವು ಉತ್ತರ ಕೊಡುವದು ಕಾನೂನಿಗೆ ವಿರೋಧ ಆದರೆ ಅದೇ ಪ್ರಶ್ನೆಯನ್ನು ಬೇರೆ ಯಾರಾದರೂ ಕೇಳಿದ್ದರೆ ನಾನು ಸುಲಭವಾಗಿ ಉತ್ತರಕೊಡುತ್ತಿದ್ದೆನು ಹಿಂದೂ ದೇಶದ ಬೇರೆ ಕಡೆಗಳಲ್ಲಿ ಬಡತನಕ್ಕೆ ಯಾವ ಕಾರಣವೋ ಇರಲಿ ಕೊಡಗಿನ ಬಡತನಕ್ಕೆ ಮೊದಲನೆಯ ಕಾರಣ ಮದ್ಯಪಾನ ಎರಡನೇ ಕಾರಣ ನಿಶಾ ಸೇವನೆ ಮೂರನೇ ಕಾರಣ ಹೆಂಡ ಇವು ಮೂರಲ್ಲದೆ ನವನಾಗರೀಕತೆ ನೋವಿನರಿತನ ಇವೇ ದೊಡಬಾದ ಕೆಲವು ಚಿಕ್ಕ ಚಿಕ್ಕ ಕಾರಣಗಳು ಸಹ ಇರುವುವು ಕೊಡಗಿನ ವಿಸ್ತಾರ ನಷ್ಟೂ ಅದರ ಜನಸಂಖ್ಯೆಯನ್ನೂ ತೆಗೆದು ಅದನ್ನು ಕೊಡಗಿನ ಅಬ್ಕಾರಿ ಆದಾಯಕ್ಕೆ ಹೋಲಿಸಿದರೆ ಇಂಡಿಯಾ ದೇಶದ ಎಲ್ಲಾ ಭಾಗಗಳಿಗಿಂತಲೂ ಕೊಡಗೇ ಮದ್ಯಪಾನದಲ್ಲಿ ಮೇಲು ಎಂಬುದಾಗಿ ತಿಳಿಯಬರುವುದು.

ವಿಪರೀತ ಕುಡುಕತನದಿಂದ ಒಂದು ಜನಾಂಗವು ನಿರ್ಮೂಲವಾಗುತ್ತದೆಯೆಂದು ಒಬ್ಬ ಅಮೇರಿಕ ದೇಶದ ಪಾದ್ರಿಯು ಹೇಳಿರುವನು. ಅಮೇರಿಕ ದೇಶವು ಜಯಿಸಲ್ಪಟ್ಟಂದಿನಿಂದ ಅಲ್ಲಿಯ ಮೂಲ ನಿವಾಸಿಗಳಾದ ರೆಡ್ ಇಂಡಿಯನ್ನರ ಜನಸಂಖ್ಯೆ ಸಾರಾಯಿಯನ್ನು ಕುಡಿಯಲಾರಂಭಿಸಿದಂದಿನಿಂದ ಕ್ಷೀಣಿಸುತ್ತಾ ಬಂದಿತು ಕುಡಿಯ ತೊಡಗಿದ್ದರಿಂದ ಅವರ ಜನಾಂಗವು ದಿನೇ ದಿನೇ ನಾಶವಾಗುತ್ತಾ ಬರುತ್ತಿರುವದರಿಂದ ಇದರ ಕಾರಣವನ್ನು ಪರೀಕ್ಷಿಸಿನೋಡಿದಾಗ ಕುಡುಕತನವೇ ಹೀಗಾಗಲಿಕ್ಕೆ ಕಾರಣವೆಂದು ಕಂಡು ಬಂದಿರುವುದು. ಕುಡುಕರಲ್ಲಿಯೂ ಎರಡು ಬಗೆಯಿರುವರು. ಕೆಲವು ಜ್ಞಾನವುಳ್ಳವರು ಕುಡಿದರೂ ಮಿತವಾಗಿ ಕುಡಿಯುವರು ಅವರು ಸಾಯಂಕಾಲ ಹೊತ್ತಿನಲ್ಲಿ ಮಾತ್ರ ಸ್ವಲ್ಪ ಕುಡಿದು ಬಿಡುವರು ಇದು ಒಳ್ಳೆಯದೆಂದು ಹೇಳುವದಲ್ಲ ಆದರೆ ಇವರಿಗಿಂತಲೂ ನಿಪುಣರಾದ ಇನ್ನೊಂದು ಬಗೆಯವರಿರುವರು ಇವರಿಗೆ ಸಮಯದ ಗಣನೆ ಇಲ್ಲ ಅಳತೆಯ ಅಂದಾಜು ಇಲ್ಲ ದಿವಸದ ಯಾವ ಸಮಯದಲ್ಲಾಗಲೀ ಸಿಕ್ಕಿದಷ್ಟು ಹೆಂಡವನ್ನು ಕುಡಿಯುವರು ಒಂದು ದಿನ ಬೇಕಷ್ಟು ಕುಡಿದು ಮರುದಿನ ಹೆಚ್ಚು ಆಯಾಸವಾಯಿತೆಂದು ಆಯಾಸ ಪರಿಹಾರಕ್ಕೆ ಪುನಹ ಹೆಂಡವನ್ನೇ ಕುಡಿಯುವರು ಎರಡನೆಯದಿನವೂ ಮೊದಲನೆಯ ದಿನದ ಗತಿ ಹೊಂದಿ ಮೂರನೆಯ ದಿನವೂ ಸಹ ಪರಿಹಾರಕ್ಕೆ ಕುಡಿಯಬೇಕಾಗುವುದು ಈ ರೀತಿಯಲ್ಲಿ ಕೆಲವರು ಒಂದುವಾರದ ವರೆಗೆ ತಲೆಯಿಂದಿಳಿಯದೆ ಕುಡಿಯುವುದೂ ಉಂಟು ಇದೆಲ್ಲಾ ಒರೆಯುವಾಗ ಅಸತ್ಯವಾಗಿಕಾಣಬಹುದು ಆದರೆ ಇದೆಲ್ಲಾ ಪ್ರತಿದಿನವೂ ನಮ್ಮ ಕಣ್ಣಿನಲ್ಲಿ ನೋಡುತ್ತಿರುವ ವಿಷಯಗಳು ಆದ್ದರಿಂದ ಯಾರೂ ಆಶ್ಚರ್ಯಪಡಬೇಕಾಗಿಲ್ಲ

ಹೆಂಡದಿಂದ ಆಗುವ ಇತರಅನರ್ಥಗಳು ಎಷ್ಟೋ ಇರುವವು ಅವುಗಳನ್ನು ಸುಲಭವಾಗಿ ಹೇಳಿ ಪೂರೈಸದು ಮನೆಯಲ್ಲಿ ಪತ್ನೀ ಪುತ್ರರಿಗೆ ಸುಖವಿಲ್ಲ ಹೆಂಡತಿಯ ಪ್ರತಿ ದಿನವೂ ಗದರಿಸುವಳು ಮಕ್ಕಳೂ ಸಹ ಕೆಲವು ಕಾಲದಲ್ಲಿ ತಮ್ಮ ಹಿರಿಯರ ಮಾರ್ಗವನ್ನು ಅನುಸರಿಸುವರು ಧನ ನಷ್ಟ, ಧಾನ್ಯ ನಷ್ಟ, ಊಟಕ್ಕಿಟ್ಟ ಅಕ್ಕಿಯನ್ನು ಕೊಟ್ಟೂ ಸಹ ಭ್ರಮೆಯಿಂದ ಪೀಡಿತರಾದವರು ಹೆಂಡ ಕುಡಿಯುವುದುಂಟು. ಹೆಚ್ಚು ಹೇಳಿ ಫಲವಿಲ್ಲ ಗೌಡುಗಳ ಈಗಿನ ದುರವಸ್ಥಿತಿಗೆ ಮುಖ್ಯ ಕಾರಣವೇ ಮದ್ಯಪಾನ.

ಎನ್. ಮುದ್ದಪ್ಪ

(ಮುಂದುವರಿಯುವುದು)

ಕೌನ್ಸಿಲ್ ಮೀಟಿಂಗು.

(ಪ್ರಶ್ನೋತ್ತರಗಳು ಮುಂದುವರದದ್ದು)

ಮೆ ಪಿ ಐ ಬೆಳ್ಯಪ್ಪನವರು

136 ಪ್ರ (ಎ) ಇಂಡಿಯನ್ ಆಫೀಸರುಗಳ ಕ್ವಾರ್ಟರುಗಳಲ್ಲಿ ಅವಶ್ಯವಿರುವ ಸಾಮಾನುಗಳಲ್ಲಾ ಇವೆಯೋ?

(ಬಿ) ಈಗ ಅವುಗಳಲ್ಲಿರುವ ಸಾಮಾನುಗಳ್ಯಾವುವು?

(ಸಿ) ಈ ಸಾಮಾನುಗಳು ಒಬ್ಬ ಉದ್ಯೋಗಸ್ಥನಿಗೆ ಅಲ್ಲಿ ಕೆಲವು ದಿವಸ ಉಳಕೊಳ್ಳಲಿಕ್ಕೆ ಸಾಕಾಗುವುದೋ?

ಉ (ಎ) ಹೌದು

(ಬಿ) ಮತ್ತು (ಸಿ) ಈಗಿರುವ ಸಾಮಾನುಗಳ ಪಟ್ಟಿ ತಯಾರಾಗಿಲ್ಲ ಆದರೆ ಪ್ರಕಾರಾಗಳಿಗೇನೂ ಬಂದಿರುವುದಿಲ್ಲ ಇರುವ ಪಟ್ಟಿಯಲ್ಲಿ ಅತ್ಯಗತ್ಯವಾದ ಸಾಮಾನುಗಳಿವೆ

137 ಪ್ರ ರಿಫಾರ್ಮ್ಸ್ ಇನ್‌ಕ್ವಯರಿ ಕಮಿಟಿಗೆ ಅಭಿಪ್ರಾಯ ಕೊಡಲು ನಮ್ಮ ದೇಶದಿಂದ ಒಬ್ಬ ಪ್ರತಿನಿಧಿಯನ್ನು ಕಳುಹಿಸುವ ವಿಷಯ ಸ್ಥಳೀಯ ಸರಕಾರವು ಇಂಡಿಯಾ ಸರಕಾರಕ್ಕೆ ಬರದಿದೆನೋ?

ಉ ಇಲ್ಲ

ಮೆ ಯಸ್ ಯಂ ಸಿಂಪೋರರವರು

138. ಪ್ರ (1) ಬಜೆಟಿನ ವಿಷಯ ಈ ಸಭೆಯು ಮಾಡಿದ ಸಿಪಾರಸ್ಸುಗಳು ಜಾರಿಗೆ ತರಲ್ಪಟ್ಟಿವೆಯೋ?

(2) ಜಾರಿಗೆ ತಾರದವುಗಳ್ಯಾವುವು? ಮತ್ತು ಅವುಗಳ ಕಾರಣವೇನು?

ಉ (1) ಮತ್ತು (2) ಅಚ್ಚು ಹಾಕಿ ಮೆಂಬರುಗಳಿಗೆಲ್ಲಾ ಕಳುಹಿಸಿರುವ ಬಜೆಟ್ಟನ್ನು ನೋಡಿಕೊಳ್ಳುವುದು.

ಮೆ ಪಿ ಐ ಬೆಳ್ಯಪ್ಪನವರು

139. ಪ್ರ ಲೀ ಕಮಿಷನಿನವರ ಸಿಪಾರಸ್ಸುಗಳನ್ನು ನಮ್ಮ ದೇಶದಲ್ಲಿ ಜಾರಿಗೆ ತಂದರೆ ನಮ್ಮ ಸರಕಾರದ ಖರ್ಚು ಎಷ್ಟು ಹೆಚ್ಚುವುದು?

ಉ ಇಲ್ಲಿ ಅದನ್ನು ಕಂಡು ಹಿಡಿಯಲಿಕ್ಕಾಗಿರುವುದಿಲ್ಲ ಎಕೌಂಟೆಂಟ್ ಜನರಲರನ್ನು ಕೇಳಲಾಗಿದೆ. ಅವರ ಜವಾಬು ಬಂದಮೇಲೆ ತಿಳಿಸಲಾಗುವುದು

ಮೆ. ಕೆ ಪಿ. ಚಿಣ್ಣಪ್ಪನವರು

140 ಪ್ರ (ಎ) ಮಡಿಕೇರಿ ಮತ್ತು ವೀರಾಜಪೇಟೆ ಆಸ್ಪತ್ರೆಗಳ ಖರ್ಚು ಬೇರೆ ಬೇರೆ ಎಷ್ಟು?

(ಬಿ) ಮಡಿಕೇರಿಗಿಂತ ವೀರಾಜಪೇಟೆ ಆಸ್ಪತ್ರೆಯಲ್ಲಿ ಕಾಯಿಲೆಸ್ತರು ಹೆಚ್ಚುತ್ತಿರುವ ಕಾರಣ ವೀರಾಜಪೇಟೆಗೆ ಹೆಚ್ಚಿಗೆ ಒಬ್ಬ ಸಬ್ ಅಸಿಸ್ಟೆಂಟ್ ಸರ್ಜನರನ್ನು ಕಳುಹಿಸುವ ವಿಷಯ ಸರಕಾರದವರು ಯೋಚಿಸುವರೋ?

ಉ (ಎ) ಮತ್ತು (ಬಿ) 1923-24ರಲ್ಲು ಮಡಿಕೇರಿ ಆಸ್ಪತ್ರೆಯ ಖರ್ಚು ರು 26,000. ಅಸಿಸ್ಟೆಂಟ್ ಸರ್ಜನರ ಉದ್ಯೋಗವನ್ನು ತೆಗೆದುಬಿಟ್ಟಿದ್ದರಿಂದ ಆ ಖರ್ಚು 3,400 ರುಪಾಯಿ ಕಡಿಮೆಯಾಗುವುದು ವೀರಾಜಪೇಟೆ ಆಸ್ಪತ್ರೆಯ ಖರ್ಚು ರು 16,400. ಮಡಿಕೇರಿಯಿಂದ ತೆಗೆಯಲ್ಪಟ್ಟ ಜೂನ್ 16ರಿಂದ ವೀರಾಜಪೇಟೆಯಲ್ಲಿ ಒಬ್ಬ ಸಬ್ ಅಸಿಸ್ಟೆಂಟ್ ಸರ್ಜನರನ್ನು ನೇಮಿಸಿರುವುದರಿಂದ ರು 900 ಖರ್ಚು ಹೆಚ್ಚುವುದು

ಮೆ. ಪಿ ಐ ಬೆಳ್ಯಪ್ಪನವರು

141 ಪ್ರ (ಎ) ಆಸ್ಪತ್ರೆಗಳ ಕಂಪೌಂಡರುಗಳು ರು 35 ಸಂಬಳದಲ್ಲಿ ಗ್ರಾಜುಯೇಟ್ ಆದ ಸಂಬಳದಲ್ಲಿ ರಿಟಯರ್ ಆಗುವುದು ನಿಜವೋ?

(ಬಿ) ಇದು ನಿಜವಾದರೆ, ವಾಡಿಕೆಯಲ್ಲಿರುವ ಟೈಮ್ ಸ್ಕೇಲ್ ಯಾ ಗ್ರೇಡ್ ಸಂಬಳದ ಪದ್ಧತಿಯನ್ನು ಬಿಟ್ಟು ಈ ಹೊಸ ಪದ್ಧತಿಯನ್ನು ಕೈಕೊಳ್ಳಲು ಕಾರಣವೇನು?

ಉ (ಎ) ಮಡಿಕೇರಿ ಮತ್ತು ವೀರಾಜಪೇಟೆ ಆಸ್ಪತ್ರೆಗಳಲ್ಲಿ ಕಂಪೌಂಡರುಗಳಿಗೆ ಸ್ಥಿರವಾದ 35 ರ ಪಾಯಿ ಸಂಬಳವಿದೆ ಲೋಕಲ್ ಫಂಡ್ ಆಸ್ಪತ್ರೆಗಳಲ್ಲಿ 30—1—35 ಸಂಬಳವಿದೆ

(ಬಿ) ಮದ್ರಾಸಿನ ಸ್ಕೇಲ್ ಪ್ರಕಾರ ಸರಕಾರ ಆಸ್ಪತ್ರೆಗಳ ಕಂಪೌಂಡರುಗಳ ಸಂಬಳವು ಸರಿಮಾಡಲಾಯಿತು ಮದ್ರಾಸಿನಲ್ಲಿಯೂ ಕೊಡಗಿನಲ್ಲಿಯೂ ಒಂದೇ ತರದ ಸಂಬಳವಿದೆ ಬೇಕೆಂದೇ ಇದಾದೆಯಿಂದ ಸರಕಾರದವರು ಟೈಮ್ ಸ್ಕೇಲ್ ಯಾ ಗ್ರೇಡ್ ಸಂಬಳವನ್ನು ಕೊಡಲಿಲ್ಲ

ಹುತ್ತರಿ ಹಬ್ಬ.

(ಒಬ್ಬ ವಾತ್ಯಿ ದಾರರಿಂದ)

ಸನ್ 1924ನೇ ಇಸವಿ ನವಂಬರು ತಾ. 25ರಲ್ಲು ಪಾಡಿನಾಡಿನವರಕ್ಕ ಮುಖ್ಯಸ್ಥರೆಲ್ಲಾ ಪಾಡಿ ಸುಬ್ರಾಯ (ಇಗ್ಗುತಪ್ಪ) ದೇವರ ದೇವಸ್ಥಾನದಲ್ಲು ಜಮೆಯಾಗಿ ಅಮ್ಮಂಗೇರಿ ಕಣಿಸ ಮತ್ತು ಕಡಿಯತ್ತುನಾಡು ಅರಪಟ್ಟು ಕಣಿಸನಿಂದೊಡಗೂಡಿ ಶಾಸ್ತ್ರವಿದಿ ಪ್ರಕಾರ ದಿಸಿದ್ದಲ್ಲು ಕಂಡುಬಂದ ಹುತ್ತರಿ ಹಬ್ಬದ ಮುಹೂರ್ತದ ತಖ್ತೆಪಟ್ಟಿ—ರಕ್ತಾಕ್ಷಿ ಸಂವತ್ಸರದ ಮಾರ್ಗಶಿರ ಶುಕ್ಲಪಕ್ಷ ಚತುರ್ದಶಿ ಕುಜವಾರ ಕೃತಿಕಾ ನಕ್ಷತ್ರದಲ್ಲು ದೇವರ ಕಲಾಡಿಚೆ ಹಬ್ಬವನ್ನು, ಮಾರನೆ ದಿನ ಅಂದರೆ ವೃಶ್ಚಿಕಮಾಸ 25ನೇ ತೇದಿ (ತಾ 10 12 24) ಬುಧವಾರ ದಿನ ರೋಹಿಣಿ ನಕ್ಷತ್ರದಲ್ಲು ದೇವ ಪೊಳದು, ಸದ್ದಿದಿನ ರಾತ್ರಿ 7 ಗಂಟೆಗೆ ಮಿಥುನ ಲಗ್ನದ ಬುಧನ ಕಾಲಾ ಹೋರೆಯಲ್ಲು ನೆರೆಕಟ್ಟುವದು 8ಗಂಟೆಗೆ ಚಂದ್ರನಕಾಲಾ ಹೋರೆಯಲ್ಲು ಕದಿರು ತೆಗೆಯುವದು, 9 ಗಂಟೆ ಶನಿಕಾಲಾ ಹೋರೆಯಲ್ಲು ಊಟಮಾಡುವ ಮುಹೂರ್ತ. ಮಾರನೆ ದಿನ ಅಂದರೆ 26ನೇ ತೇದಿ (ತಾ 11 12 24) ಗುರುವಾರ ರಾತ್ರಿ 8 ಗಂಟೆಗೆ ಮೃಗಶಿರ ನಕ್ಷತ್ರದಲ್ಲು ಮಿಥುನ ಲಗ್ನದ ಕುಜನ ಕಾಲಾ ಹೋರೆಯಲ್ಲು ನೆರೆ ಕಟ್ಟುವದು, 9 ಗಂಟೆಗೆ ಕರ್ಕಾಟಕ ಲಗ್ನದ ಆದಿತ್ಯನ ಕಾಲಾ ಹೋರೆಯಲ್ಲು ಕದಿರು ತೆಗೆಯುವದು, 10 ಗಂಟೆಗೆ ಕರ್ಕಾಟಕ ಲಗ್ನದ ಶುಕ್ರನ ಕಾಲಾ ಹೋರೆಯಲ್ಲು ಊಟಮಾಡುವ ಮುಹೂರ್ತ. ಈ ಮೇರೆ ಈ ವರ್ಷದ ಹುತ್ತರಿಹಬ್ಬದ ಮುಹೂರ್ತ ಪಟ್ಟಿ ಆದಮೇಲೆ ದೇವರಿಗೆ ಮಹಪೂಜೆಯಾದನಂತರ ದೇವತಕ್ಕ, ನಾಡುತಕ್ಕ, ದೇವತಕ್ಕ, ಶಾಂತಿಗಾರ, ಸ್ಥಾನಿಕ, ಕೋಲುಕಾರರಿಂದೊಡಗೂಡಿ ಮಲೆ ಮೇಲಕ್ಕೆ (ಇಗ್ಗುತಪ್ಪ ಮಲೆ ಬೆಟ್ಟದ ತುದಿಗೆ) ಹೋಗಿ ಅಲ್ಲಿ ದೇವರಿಗೆ ನೈವೇದ್ಯ ವಗೈರೆಯಿಂದ ಪೂಜೆ ಪೂರೈಸಿ ಹುಬ್ಬದಕಟ್ಟು ಈ ಕೆಳಗೆ ಕಂಡಮೇರೆ ತಕ್ಕನು ನುಡಿಯುವದಾಗಿದೆ "ವಿಶಾಕ ನಕ್ಷತ್ರತ್‌ಲ್ ಇಗ್ಗುತಪ್ಪ ದೇವಡ ಪಾಲಾಡಿಕಟ್ಟ್, ಕೃತಿಕಾ ನಕ್ಷತ್ರ ಕೈಯ್ಯಣೆ ಇಗ್ಗುತಪ್ಪದೇವಂಡ ಪೊಮ್ಮಾಲೆ ಕೊಡವುಲ್ ಕುಟ್ಟತ್ತ್ ಮಲೆಲಂಡ ಬೊಟ್ಟತ್ತ್ ಮಲೆಕೆತ್ತನಕ್ಕೂ, ಪಾಡಿನೊರತ್ತುಂಡ ಪಟ್ಟಣತ್ತ್ ಕಂಡಿಕತ್ತನಕ್ಕೂ, ಅರಾಜೇಂಗೂ ನೈಯೋಳ ಮುರಿಯೇಂಗಿನೂ, ಎಳ್ಳೋಳ ಪುಡುಪೇಂಗಿನೂ, ನಂಜೆ ನಾಯಟ್ ಮಾಡುವಕ್ಕಾಗ್ಗ ಮೊದನಮಂಡ ಮನೆಲ್ ಅಂಬೆತಂಡಿ ಬೊಳಕಡ್. ಮೊದ್‌ನಾನ ಅರಿಂಗಿ ಕಂಡ್‌ಕೇಟ್‌ತುಂದೇರಿಗೂ ಅರಿಂಜಾನ ಎಣ್ಣಲು. ಅನ್ನನೆ ಅರಿಂಜಾನಯಣ್ಣತಿ ಪೋಚೇಂಗಿ ಅಂಡ ಫಲ ದೇವ ಕೊಡುಳು ಅಕಸ್ಮತಚಕ್‌ಚೀಲತ್ ಬಂದಾಂಗ್ ನಾಡ್‌ಕಂಡ ಬಿದಿ.' ಈ ಮೇರೆ 3 ನಾಡಿನ ಪಡಾರ ಪಾಡಿ, ನೆಲಜಿ, ಬ್ಲುತ್‌ನಾಡಿನವರು ಸಹ ಬೆಟ್ಟದ ತುದಿಯಾದ ಇಗ್ಗುತಪ್ಪದೇವರ ಆದಿ ಸ್ಥಳವಾದ ಮಲೆಮೊದಲ್ಲು ಕಟ್ಟುವ ಕಟ್ಟಾಗಿರುತ್ತೆ.

ದೇಶೀಯರಲ್ಲಿ ವಿನಂತಿ.

ದೇಶಬಾಂಧವರೇ,

"ಕೊಡಗು" ಪತ್ರಿಕೆಯು ನಮ್ಮ ದೇಶಕ್ಕೆ ಮಾಡಿದ ಸೇವೆಯು ಅಸಾಧಾರಣವಾದುದೆಂದು ತಾವೆಲ್ಲರೂ ಒಪ್ಪುತ್ತೀರಿ. ಇದನ್ನು ಅರಿತೂ ಕೂಡಾ ತಮಗಳ ಪರಸ್ಪರ ಸಹಾಯವು ಈ ಪತ್ರಿಕೆಯ ಚಂದಾದಾರರನ್ನು ಹೆಚ್ಚಿಸುವ ಬಗ್ಗೆ ಕಡಮೆಯಾಗುದು ಕೇವಲ ವ್ಯಸನಕರ. "ಕೊಡಗು"ಪತ್ರಿಕೆಯ ಪ್ರಯೋಜನವನ್ನು ಎಷ್ಟು ವರ್ಣಿಸಿದರೂ ಸಾಲದು ಈ ಪತ್ರಿಕೆಯನ್ನು ಲಾಭ ಪಡೆಯುವ ಉದ್ದೇಶದಿಂದ ಹೊರಡಿಸಲಿಲ್ಲ ಪತ್ರಿಕೆಯನ್ನು ನಮ್ಮಲ್ಲಿ ಹುಟ್ಟಿದ ಒಂದು ಮಗುವಿನೋಪಾದಿಯಲ್ಲಿ ಕಂಡು, ಮಗುವಿನ ವಿದ್ಯಾಭ್ಯಾಸಕ್ಕೆ ವರ್ಷಕ್ಕೆ ರೂ. 3-8-0 ವಹಿಸುವುದನ್ನು ಕೇವಿಡುವಾಗಿ ಹಾಕೃಸುತ್ತೇನೆ ದೇಶಬಾಂಧವ

ಹೂ ಕೂಡಿಸೋಡಿದ ಒಂದೇ ಒಂದು ಪತ್ರಿಕೆಯನ್ನು ಓದುವರ ು ಸಾಕಷ್ಟು ಜನರು ಇಲ್ಲವೆಂದು ಒಬ್ಬ ಆಕ್ಷೇಪಣೆಯೊಂದು ಕೇಳುವುದರಿಂದ ಪ್ರಯೋಜನವಿಲ್ಲ ಆದ್ದರಿಂದ ಮಹಾಶಯರೇ, ತಮ್ಮ ಉತ್ಸಾಹವನ್ನು ಪತ್ರಿಕೆಗೆ ಹಚ್ಚು ಚಂದಾದಾರರನ್ನು ಮಾಡುವ ಉದ್ದೇಶದಲ್ಲಿ ತೋರಿಸಬೇಕಾಗಿ ಕೋರುತ್ತೇನೆ

ಶೇರುದಾರರುಗಳಲ್ಲಿ ಪುನಃ ಇನ್ನೊಂದು ವಿಜ್ಞಾಪನೆ— ತಮಗಳ ಶೇರಿನ ಒಂದು ಮತ್ತು ಎರಡನೇ ಕಿಸ್ತಿನ ಹಣವು ಅನೇಕರಿಂದ ಪಾವತಿಯಾಗಿರುವದಿಲ್ಲ ರೂಲ್‌ಮೇಲೆ ಒಡನೆ ಪಾವತಿಮಾಡದಿದ್ದರೆ, ಕೊಟ್ಟ ಹಣವು ಕಳಕೊಳ್ಳಲಾಗುತ್ತೆ ಆದ್ದರಿಂದ ಅಂಥಾದ್ದಕ್ಕೆ ಆಸ್ಪದ ಕೊಡದ ಹಾಗೂ ಒಡನೇ ಕಂಪೆನಿಗೆ ಪಾವತಿಮಾಡಿ ರಶೀತಿ ಪಡೆಯುವಂತೆಯೂ, ಎಲ್ಲಾ ಶೇರುದಾರರುಗಳಲ್ಲಿ ಅತಿವಿನಯದಿಂದ ಅಪ್ಪೀಲುಮಾಡಿಕೊಳ್ಳುತ್ತೇನೆ.

ತಮಗಳ ಸೇವಕ,
ಕೋದಂಡ ಉತ್ತಯ್ಯ,
ಆರ್ಗನೈಜಿಂಗ್ ಡೈರೆಕ್ಟರ್

ವರ್ತಮಾನ ಸಂಗ್ರಹ.

ಒ ಳ ದೇ ಶ.

ಬೆಳಗಾಂ ಕಾಂಗ್ರೆಸ್ಸಿನ ಸ್ವಾಗತ ಮಂಡಳಿಯ ಮೆಂಬರಾದ ಧಾರವಾಡದ ಶ್ರೀಯುತ ಮುದವೇಡ್‌ಕರ್ ಕೃಷ್ಣರಾಯರು ಮತ್ತು ಬೆಂಗಳೂರು ಕಾಂಗ್ರೆಸ್ ಕಮಿಟಿಯ ಸಕ್ರೆಟರಿಯಾದ ಶ್ರೀಯುತ ಟಿ ಟಿ ಶರ್ಮರವರು ತಾರೀಕು 25ರಲ್ಲು ಸಾಯಂಕಾಲ ಮಡಿಕೇರಿಗೆ ಬಂದರು ಮರು ದಿನ ಇವರು ವೀರಾಜಪೇಟೆಗೆ ಹೋಗಿ ವಿಕ್ಟೋರಿಯ ಕ್ಲಬ್ಬಿನ ಎದುರಿನಲ್ಲಿ ಮಧ್ಯಾಹ್ನ ಎರಡುವರೆ ಗಂಟೆಗೆ ಕೃಷ್ಣರಾಯರು ‘ ಕರ್ನಾಟಕದ ಭಾಗವಾದ ಕೊಡಗಿನ ಕರ್ತವ್ಯ ’ ಶರ್ಮರವರು “ ಕರ್ನಾಟಕ ಸಂಸ್ಕೃತಿ ” ಇವುಗಳವಿಷಯ ಸ್ವಾರಸ್ಯವಾದ ಭಾಷಣಗಳನ್ನು ಮಾಡಿದರು ಮೆ. ನಡಿಕೇರಿಯಂಡ ನಂಜಪ್ಪನವರು ಅಧ್ಯಕ್ಷರಾಗಿದ್ದರು. ಸುಮಾರು 400 ಜನರು ಹಾಜರಿದ್ದರು. ಸುಮಾರು 200 ರುಪಾಯಿ ವರಗೆ ಕಾಂಗ್ರೆಸ್ಸಿನ ಸ್ವಾಗತ ಕರ್ಚಿಗೆ ವಸೂಲಾಯಿತು ಇವರಿಬ್ಬರು ಅದೇ ದಿನ ಸಾಯಂಕಾಲ 6 ಗಂಟೆಗೆ ಮಡಿಕೇರಿಯಲ್ಲಿ ರಾಜಾಸೀಟು ಸ್ಥಾನದಲ್ಲಿ ಮೇಲಿನ ವಿಷಯಗಳ ಮೇಲೆಯೇ ದೀರ್ಘವಾಗಿ ಭಾಷಣ ಮಾಡಿದರು ರಾ ಸಾ ಕೋಡಿಮಣಿಯಂಡ ಸುಬ್ಬಯ್ಯನವರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು ಸುಮಾರು 150 ಜನರು ನೆರದಿದ್ದರು ಈ ಭಾಷಣಕ್ಕೆ ಸರಕಾರ ಉದ್ಯೋಗಸ್ಥರು ಹೋಗಕೂಡದೆಂಬವಾಗಿ ಆಫೀಸುಗಳಲ್ಲಿ ಎಚ್ಚರಗೊಳಿಸಿದ್ದ ಕಾರಣ ದೊಡ್ಡ ಸಭೆಯು ನೆರೆಯಲು ಅನುಕೂಲವಾಗಲಿಲ್ಲವೆಂದು ವರ್ತಮಾನ

ಈ ವರುಷದ ಹುತ್ತರಿ ಹಬ್ಬವು ಡಿಸಂಬರು ತಾರೀಕು 10ನೇ ಬುಧವಾರ ರಾತ್ರಿ ದೇವ ಪೊಳುದೂ, 11ನೇ ಗುರುವಾರ ರಾತ್ರಿ ನಾಡು ಪೊಳುದೂ ಆಗುವುದು ಈ ವಿಷಯ ವಿವರವಾಗಿ ಇನೊಂದು ಕಡೆ ಪ್ರಕಟವಾಗಿದೆ

ಮಡಿಕೇರಿ ಹಾಕಿ ಟೂರ್ನಮೆಂಟು ತಾರೀಕು 22ರಲ್ಲು ಅಂತ್ಯವಾಯಿತು ಅದೇ ದಿನ ಎಲಿಮೆಂಟರಿ ಸ್ಕೂಲುಗಳ ಟೀಮಿನವರು ಹಳೇ ವಿದ್ಯಾರ್ಥಿಗಳ ಸಂಘದ ಟೀಮನ್ನು ಸೋಲಿಸಿದರು. ಆಟವಾದನಂತರ ಗೆದ್ದ ಟೀಮಿನವರಿಗ ಡಿ ಮೇಜಿಸ್ಟ್ರೇಟರಾದ ರಾ ಬಾ ಕೆ ಬಂಗಪ್ಪನವರು ಬಹುಮಾನ ಕೊಟ್ಟರು

ದೇಶದಲ್ಲಿ ಜಮಾಬಂದಿಯು ಪ್ರಾರಂಭವಾಗಿದೆ ಜಮಾಬಂದಿ ಆಫೀಸರುಗಳಾದ ಕಮೀಷನರವರೂ ಫಸ್ಟ್ ಅಸಿಸ್ಟೆಂಟ್ ಕಮೀಷನರವರೂ ಬೇರ ಬೇರೆ ಸ್ಥಳಗಳಿಗೆ ತಿರುಗುತ್ತಲಿದ್ದಾರೆ ಕಮೀಷನರವರು ನಂಜರಾಜಪಟ್ಣ ತಾಲೋಕಿನಲ್ಲಿ ಕೆಲವು ದಿವಸಗಳಿದ್ದು, ತಾರೀಕು 26ರಲ್ಲು ವಾಪಾಸು ಬಂದಿರುವರು

ಈ ವರುಷ ಕಾರ್ತಿಕಮಾಸದಲ್ಲು ಆರು ಉತ್ಸವಗಳು ಮಡಿಕೇರಿ ಓಂಕಾರೇಶ್ವರ ದೇವಸ್ಥಾನದಲ್ಲಿ ನಡೆದವು ಕಳೆದ ಹುಣ್ಣಿಮೆಯಲ್ಲಿ ಮೆ ಕೊಡಂದೇರ ತಿಮ್ಮಯ್ಯನವರ ‘ ದೀಪೋತ್ಸವ ” ದಿಂದ ಪ್ರಾರಂಭವಾಗಿ ತಾರೀಕು 26ನೇ ಅಮಾವಾಸ್ಯೆ ದಿನದಲ್ಲು ಶ್ರೀಮತಿ ಪಾಕಮ್ಮನವರ “ ಲಕ್ಷ ದೀಪ ’ ಉತ್ಸವದಲ್ಲಿ ಅಂತ್ಯವಾಯಿತು.

‘ದಿ ನ್ಯೂ ಇಂಡಿಯನ್ ಸರ್ಕಸ್ಸ್’ ನವರು ವೀರಾಜಪೇಟೆಯಿಂದ ತಾರೀಕು 21ರಲ್ಲು ಮಡಿಕೇರಿಗೆ ಬಂದು ಬಂದು ವಾರದ ವರೆಗೆ ತಮ್ಮ ಆಟಗಳನ್ನು ತೋರಿಸಿದರು ಒಂದು ದಿನ ವಿದ್ಯಾರ್ಥಿಗಳಿಗೂ, ಆಖೈರ್ ದಿನ ಪಬ್ಲಿಕ್‌ನವರಿಗೂ ಆಟಗಳನ್ನು ಅರ್ಧ ಚಾರ್ಜಿನಿಂದ ತೋರಿಸಲಾದುವು

ಹಾಲುಗುಂದ ಗ್ರಾಮದ ಪೂಪಿಳಿ ಬಾಗ್ಲಿ ಅಬ್ದುಲ್ಲ ಎಂಬವನು ತನ್ನ ಹೆಂಡತಿ ಐಸುಮ್ಮ ಎಂಬವಳು ತಾರೀಕು 11-24ರಲ್ಲು ಪೈಬೂದ್ ಹಬ್ಬದ ಉದ್ದಿಶ್ಯ ಅವಳ ತವರು ಮನೆಗೆ ಹೋಗಿದ್ದವಳನ್ನು ಆ ದಿನವೇ ವಾಪಾಸು ತನ್ನ ಮನೆಗೆ ಬಂದಿತೆಂದು ಹೊಡೆದು ಹಿಂಸೆ ಮಾಡಿ ತನ್ನ ಮನೆಗೆ ಕರೆದುಕೊಂಡು ಹೋಗಲ್ಲು ಮರು ದಿನ ಅವಳು ಮೃತಳಾದಳಂತೆ ಇದು ಪೋಲೀಸಿನವರ ವಿಚಾರದಲ್ಲಿದೆ.

ಲೇಟ್ ಮಡಿಕೇರಿಯಂಡ ಕಾರ್ಯಪ್ಪನವರ ಪತ್ನಿ ನೀಲಮ್ಮನವರು ತಾ 2*ರಲ್ಲು ಕರಡ ಗ್ರಾಮದಲ್ಲಿರುವ ಅವರ ಭವನದಲ್ಲು ಶಿವಾಧೀನರಾದರು

ಕುಶಾಲನಗರದಲ್ಲಿ ಕೆಲವು ದಿವಸಗಳಲ್ಲಿ ಹುಚ್ಚುನಾಯಿ ಕಚ್ಚಿದ ಒಂದು ಆನೆಗೆ ಆಸ್ಪತ್ರೆಯಲ್ಲಿ ವೆಟರಿನರಿ ಅಸಿಸ್ಟೆಂಟರು ಇಂಜೆಕ್ಷನ್ ಚಿಕಿತ್ಸೆ ಮಾಡಿರುವರು

ಕೆಲವು ವಾರಗಳ ಹಿಂದೆ ಮಡಿಕೇರಿಯಲ್ಲಿ ಲೇಟ್ ಅಂಗಪ್ಪನವರ ಮೆಡಿಕಲ್‌ಹಾಲ್ ಶಾಪಿಗೆನುಗ್ಗಿ ಕಳವುಮಾಡಿದ ಮಲೆಯಾಳಿ (ಇತ್ತಲಾಗಿ ಮಹಮ್ಮದೀಯ) ಜವಾನನಿಗೆ ನಾಲ್ಕು ತಿಂಗಳು ಸಜೆ ವಿಧಿಸಲಾಯಿತು.

ಹಿಂ ದೂ ದೇ ಶ.

ಮಿಸ್ ಕಾರ ನೀಲಿಯ, ಸೊರಾಬ್ಜಿಯವರನ್ನು ಕಲ್ಕತ ಹೈಕೋರ್ಟಿನ ಎಡ್ವಕೇಟರಾಗಿರಲು ರಿಜಿಸ್ಟರ್ ಮಾಡಿರುವರು ಕಲ್ಕತದಲ್ಲಿ ಲಾಯರ್‌ಕೆಲಸವನ್ನು ಸ್ತ್ರೀಯರು ಕೈಕೊಂಡದ್ದು ಇದೇ ಮೊದಲು

ಬಂಗಾಳ ಆರ್ಡಿನೆನ್ಸಿನ ಪ್ರಕಾರ ವಿಚಾರವಾದ ಬೇಸಿನಲ್ಲು ಮೆ ಜಿತೈನ್ ರಾಯಿ ಮತ್ತು ಮೆ ಸೈಲೇಂದ್ರದಾಸ ಗುಪ್ತರವರನ್ನು ಕೊಲೆಪಾತಕವನ್ನು ಮಾಡಿದರೆಂದು ಒಬ್ಬರನ್ನು ಬರಾಬಮ್ಟ್ ಮತ್ತೊಬ್ಬರನ್ನು ಮಿದ್ನಾಪುರ್ ಜಿಲ್ಲೆಗಳ ಸರಹದ್ದಿನೊಳಗೆ ಇರುವಂತೆ ಹುಕುಂಮಾಡಿರುವರು

ವೈಸರಾಯರು ಬೊಂಬಾಯಿಗೆ ಬರುವಾಗ್ಯೆ ಅಲ್ಲಿ ನಡಿಸತಕ್ಕ ಸ್ವಾಗತ ಏರ್ಪಾಡುಗಳಿಗೆ ಸೇರಲಿಕ್ಕಾಗುವದಿಲ್ಲವೆಂದೂ ಬೊಂಬಾಯಿ ಮುನ್ಸಿಪಾಲಿಟಿಯ ಪ್ರೆಸಿಡೆಂಟರಾದ ಮೆ, ವಿ. ಜೆ ಪಟೇಲರವರು ಸರಕಾರದವರಿಗೆ ಉತ್ತರಕೊಟ್ಟಿರುವರು

ತಾ 21ರಲ್ಲು ಬೊಂಬಾಯಿಯಲ್ಲಿ ನಡೆದ ಕನ್‌ಫರೆನ್ಸಿನಲ್ಲು ಹಿಂದೂ ದೇಶದ ಎಲ್ಲಾ ಪಂಗಡಗಳ ಪ್ರತಿನಿಧಿಗಳು ಸುಮಾರು 400 ಜನರು ಹಾಜರಿದ್ದರು ಮೊದಲನೆಯ ದಿನ ಸರ್ ದಿನ್ಶಾ ಪಟೀಟ್‌ರವರೂ ಎರಡನೆಯ ದಿನ ನಾಮದಾರಿ ಶ್ರೀನಿವಾಸ ಶಾಸ್ತ್ರಿಯವರು ಅಧ್ಯಕ್ಷ ಸ್ಥಾನವನ್ನು ವಹಿಸಿದ್ದರು ಬಂಗಾಳದ ದಬ್ಬಾಳಿಕೆಯನ್ನು ನಿಷೇಧಿಸಿಯೂ ವೈಸರಾಯರ ಹೊಸಕಾನೂನನ್ನೂ 1818ನೇ ವರ್ಷದ 3ನೆಯ ರೆಗ್ಯುಲೇಷನನ್ನೂ ಒಡನೆ ಹಿಂತೆಗೆಯಬೇಕೆಂದೂ ದೇಶದವರ ನ್ಯಾಯವಾದ ಹಕ್ಕುಗಳನ್ನು ಕೊಡದಿರುವುದೇ ದೇಶದ ಈಗಿನ ಗಳಿಬಿಳಿಕ್ಕೆ ಕಾರಣವೆಂತಲೂ ಶೀಘ್ರದಲ್ಲೆ ಸ್ವರಾಜ್ಯವ ಪಡೆಯುವದೇ ಇದಕ್ಕೆ ಪರಿಹಾರವೆಂತಲೂ ಠರಾವನ್ನು ಒಂದು ಮತದಿಂದ ಪಾಸುಮಾಡಿದರು ಬರುವ ಮಾರ್ಚಿ 31ರ ವಳಗೆ ಸ್ವರಾಜ್ಯದ ಒಂದು ರಚನೆಯನ್ನು ತಯಾರಿಸುವಂತೆ ಎಲ್ಲಾ ಪಂಗಡಗಳ ಪ್ರತಿನಿಧಿಗಳುಳ್ಳ ಒಂದು ಕಮಿಟಿಯನ್ನು ಏರ್ಪಡಿಸಿದರು ಏಪ್ರಿಲ್ 1ರಲ್ಲು ಎಲ್ಲಾ ಪಂಗಡಗಳ ಒಂದು ಕಾನ್‌ಫರೆನ್ಸನ್ನು ನಡೆಸುವಂತೆ ಒಪ್ಪಲಾಯಿತು. ಕಾಂಗ್ರೆಸಿನ ಪ್ರೆಸಿಡೆಂಟರಾದ ಮೌಲಾನ ಮಹಮ್ಮದಾಲಿಯವರ ಕೋರಿಕ ಮೇರೆ ಸಾಧ್ಯವಾದಷ್ಟು ಎಲ್ಲಾ ಪಂಗಡಗಳು ತಮ್ಮ ತಮ್ಮ ಕಾನ್‌ಫರೆನ್ಸುಗಳನ್ನು ಕಾಂಗ್ರೆಸ್ ಮಹಾಸಭೆಯ ವೇಳೆಯಲ್ಲಿ ಬೆಳ್ಗಾಮಿನಲ್ಲಿ ನಡೆಸುವಂತೆ ಒಪ್ಪಿಕೊಂಡಿರುವರು

ತಾ 23ರಲ್ಲು ಬೊಂಬಾಯಿಯಲ್ಲು ನಡೆದ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಮೀಟಿಂಗಿನಲ್ಲು ಗಾಂಧಿ, ನೆಹರು, ದಾಸರವರಿಗೆ ಕಲ್ಕತದಲ್ಲಿ ಆದ ಒಪ್ಪಂದವನ್ನು ಅಂಗೀಕರಿಸಿರುವರು ಕೂಡಲೇ ನಡದ ಸ್ವರಾಜ್ಯಪಾರ್ಟಿಯವರ ಜನರಲ್ ಕೌನ್ಸಿಲಿನ ಮೀಟಿಂಗಿನಲ್ಲೂ ಈ ಒಪ್ಪಂದವು ಪಾಸಾಯಿತು ನಂತರ ಚೌಪಟಿ ತೀರದಲ್ಲು ಮೃತರಾದ ಬಿ ಅಮ್ಮನವರ ವಿಷಯ ಪರಿತಾಪಸೂಚಕ ಮೀಟಿಂಗಿನಲ್ಲು ಮಹಾತ್ಮ ಗಾಂಧಿ ನೇಹರು, ಮತ್ತು ದಾಸರವರು ಹೃದಯವನ್ನು ಕರಗಿಸುವಂತ ಭಾಷಣವನ್ನು ಮಾಡಿದರು ಶ್ರೀಮತಿ ಸರೋಜಿನಿದೇವಿಯವರು ಅಧ್ಯಕ್ಷರಾಗಿದ್ದರು

ತಾ 19ರಿಂದ ಬಂಗಾಳಕೊಲ್ಲಿಯಲ್ಲಿ ಬಿರುಗಾಳಿ ಪ್ರಾರಂಭವಾಗಿದೆ ಅನೇಕ ಹಡಗುಗಳು ಅಲ್ಲಲ್ಲಿ ನಿಲ್ಲಿಸಲ್ಪಟ್ಟವೆ ಪೂರಿ ಮತ್ತು ಗೋಪಾಲಪುರದ ಒಳ ಗಾಳಿಯದೆಸೆಯಿಂದ ಆತ್ತಿತ್ತ ವ್ಯಾಪಾರಗಳೇ ನಿಂತುಹೋಗಿದ್ದವು ದಾರಿಯಲ್ಲಿ ಬಿರುಸಾದ ಮಳೆಗಾಳಿಯು ಆದುದರಿಂದ ಮದ್ರಾಸಿನಿಂದ ಕಲ್ಕತ್ತಕ್ಕೆ ಹೋಗುವ ಟ್ರೈನುಗಳು ತಡವಾದುವು

ಡಿಸಂಬರು ಮೊದಲನೇ ವಾರದಲ್ಲಿ ಲಾಹೋರಿನಲ್ಲಿ ನಡೆಯಲಿಕ್ಕಿರುವ ಪಂಜಾಬು ರಾಜಕೀಯ ಪರಿಷತ್ತಿನ ಅಧ್ಯಕ್ಷಸ್ಥಾನವನ್ನು ವಹಿಸಿಕೊಳ್ಳಲು ಮಹಾತ್ಮ ಗಾಂಧಿಯವರು ಒಪ್ಪಿರುವರೆಂದು ವರ್ತಮಾನ

ಲಂಡನಿನಲ್ಲಿ ಒಂದು ಧರ್ಮಶಾಲೆಯನ್ನೂ, ಒಂದು ಹಿಂದೂ ದೇವಸ್ಥಾನವನ್ನು ಕಟ್ಟಿಸಲು ಇಂಡಿಯಾದಲ್ಲಿ ಹಣ ಸಂಗ್ರಹಿಸಲು ಏರ್ಪಾಡಾಗುತ್ತಿದೆ ಸುಮಾರು 30 ಲಕ್ಷ ರೂಪಾಯಿ ಬೇಕಾಗುವುದಂತೆ ಓರ್ಛ ಮತ್ತು ದರ್ಭಾಂಗದ ಮಹಾರಾಜರುಗಳು ಇದರಲ್ಲಿ ಬಹಳ ಆಸಕ್ತರಾಗಿರುವರೆಂದೂ ದರ್ಭಾಂಗದ ಮಹಾರಾಜರು ಮೇನೇಜಿಂಗ್‌ಕಮಿಟಿಯ ಅಧ್ಯಕ್ಷರಾಗಿರುವರೆಂದೂ ಸುದ್ದಿ

ವಿ ದೇ ಶ.

ಕೆಲವು ದಿವಸಗಳಿಗೆ ಹಿಂದೆ ಸುಡಾನಿನ ಗವರ್ನರ್ ಜನರಲ್ ಮತ್ತು ಈಜಿಪ್ಟ್ ಸೈನ್ಯದ ಸರದಾರರಾದ ಸರ್ ಲೀಸ್ಟೇಕ್‌ರವರು ಕೈರೊ ಪಟ್ಟಣದಲ್ಲಿ ಮೋಟಾರಿನಲ್ಲಿ ಹೋಗುತ್ತಿರುವಾಗ್ಯೆ ಯಾರೋ ಕೆಲವರು ಅವರಿಗೆ ಗುಂಡು ಹೊಡೆದು ಗಾಯಮಾಡಿ ಓಡುತ್ತಿರುವಾಗ್ಯೆ ಹಿಡಿಯಲಿಕ್ಕೆ ಹೋದ ಪೋಲೀಸ್‌ನವನಿಗೂ ಗುಂಡಿನಿಂದ ಗಾಯಮಾಡಿ ತಪ್ಪಿಸಿಕೊಂಡು ಓಡಿಹೋದರು ಲೀಸ್ಟೇಕ್‌ರವರು ಆಸ್ಪತ್ರೆಯಲ್ಲಿ ಮೃತರಾದರು. ಈಜಿಪ್ಟಿನ ಪ್ರಧಾನ ಮಂತ್ರಿಯವರು ಈ ಸಂಗತಿಗೆ ಬಹಳ ವ್ಯಸನವನ್ನು ಸೂಚಿಸಿದರು ಬ್ರಿಟಿಷ್‌ನವರು ಈ ನಷ್ಟ ಪರಿಹಾರಕ್ಕೆ ಐನೂರುಸಾವಿರ ಪೌನುಗಳನ್ನು ಕೊಡಬೇಕೆಂದು ಕೇಳಿದನ್ನು ಈಜಿಪ್ಟ್ ಸರಕಾರದವರು ಕೊಟ್ಟಿರುವರು. ಅದರ ಸುಡಾನಿನಲ್ಲಿರುವ ಈಜಿಪ್ಟ ಸೈನ್ಯವನ್ನು ವಾಪಾಸ್ ಕರೆಯಬೇಕೆಂಬದಕ್ಕೂ ಈಜಿಪ್ಟಿನಲ್ಲಿ ಪರದೇಶದವರ ಹಿತವನ್ನು ಕಾಪಾಡುವುದರ ವಿಷಯ ಬ್ರಿಟಿಷರ ಅಭಿಪ್ರಾಯಕ್ಕೆ ಈಜಿಪ್ಟಿನವರು ವಿರೋಧ ಹೋಗಕೂಡದೆಂಬದಕ್ಕೂ ಈಜಿಪ್ಟ್ ಸರಕಾರವು ಒಪ್ಪಿರುವುದಿಲ್ಲ ಜಾಗುಲಾಲ್ ಪಾಷಾರವರು ಮುಖ್ಯ ಮಂತ್ರಿ ಪದವಿಗೆ ರಾಜಿನಾಮೆ ಕೊಟ್ಟಿರುವರು ಜಿವಾರ್ ಪಾಷಾರವರು ಮುಖ್ಯ ಮಂತ್ರಿಯಾಗಿ ಮಂತ್ರಿ ಮಂಡಲವನ್ನು ಏರ್ಪಡಿಸಿರುವರು. ಈಜಿಪ್ಟ ಸರಕಾರದವರು ಬ್ರಿಟಿಷರ ಎಲ್ಲಾ ಶರತ್ತುಗಳಿಗೆ ಒಪ್ಪದಿರುವುದರಿಂದ ಎಲೆಕ್ಸಾಂಡ್ರಿಯದಲ್ಲಿರುವ ಬಂದರುಗಳನ್ನು ಬ್ರಿಟಿಷ್ ಹಡಗುಗಳು ಸ್ವಾಧೀನಮಾಡಿಕೊಂಡಿರುವವು ಅಲ್ಲಿ ಏನೊಂದು ಕೆಲಸವು ನಡೆಯುವುದಿಲ್ಲ ಗಾಯ ಹೊಂದಿದ ಪೋಲೀಸಿನವನಿಗೆ ಈಜಿಪ್ಟಿನ ರಾಜರಾದ ಫಾಡ್‌ರವರು ಒಂದು ಮೆಡಲನ್ನು ಕೊಟ್ಟಿರುವುದಲ್ಲದೆ ಬ್ರಿಟಿಷ್ ಹೈಕಮಿಷನರಾದ ಲಾರ್ಡ್ ಎಲೆನ್ಬಿಯವರು ಬ್ರಿಟಿಷರ ವಂದನೆಯನ್ನು ಅವನಿಗ ಅರ್ಪಿಸಿ ಒಂದುಸಾವಿರ ಪೌನನ್ನು ಇನಾಮಾಗಿ ಕೊಟ್ಟಿರುವರು ಈ ಕೊಲೆಯಿಂದ ಬ್ರಿಟನಿನಲ್ಲಿ ಈಜಿಪ್ಟ್ ಸರಕಾರದವರ ಮೇಲೆ ಸಿಟ್ಟೇರಿದೆ ದಬ್ಬಾಳಿಕೆಯಿಂದಲೇ ಇಂಥಾ ಕೆಲಸವನ್ನು ಅಂತ್ಯಗೊಳಿಸಬೇಕೆಂದು ಬ್ರಿಟಿಷ್ ಪತ್ರಿಕೆಗಳೆಲ್ಲವೂ ಬರೆಯುತ್ತಿವೆ

ಜಾವಾದ್ವೀಪದಲ್ಲಿ ಉಂಟಾದ ಭೂಕಂಪದಿಂದ 664 ಜನರು ಮೃತರಾದರು, 52 ಜನರಿಗೆ ಜಖಂ ಉಂಟಾಯಿತು.

ಪ ತ್ರ ವ್ಯ ವ ಹಾ ರ ಗ ಳು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ ಸಂ

ಮೂರ್ನಾಡು ಸಹಕಾರಿ ಕಾನ್‌ಫರೆನ್ಸ್.

ಶ್ರೀ ಸ್ವಾಮಿ ಸಂಪಾದಕರೇ

ನಮ್ಮ ತಾ. 14 11 24ರ ಪತ್ರಿಕೆಯಲ್ಲು ‘ ಡಿಕ್ರಿಯಾದವರ ಮೇಲೆ ಕೋರ್ಟಿನವರೂ ಮತ್ತು ರಿಜಿಸ್ಟ್ರಾರರವರು ತೋರಿಸಿದ ಉದಾಸೀನತೆಯನ್ನು ಕುರಿತು ’ ಅಮ್ಮಟಾಂಡ್ರ ದೇವಯ್ಯನವರು ಮಾತಾಡಿದರಾಗಿ ಬರೆದ ಬಾತ್ಮಿಗೆ ವಿಷಾದಿಸುತ್ತೇನೆ ಸಿವಿಲ್ ಕೋರ್ಟಿನವರು ವಿತಿಮೀರಿದ ವಾಯಿದೆಕೊಟ್ಟದ್ದರಿಂದ ಡಿಲೇಯಾಯಿತೆಂಬದಾಗಿ ಹೇಳಿದ್ದಲ್ಲದೆ ರಿಜಿಸ್ಟ್ರಾರವರಿಂದ ಡಿಲೇಯಾಯಿತೆಂಬದಾಗಿ ಹೇಳಲಿಲ್ಲ ಇಂಥಾದ್ದಕ್ಕೆ ಕಾರಣವೂ ಇಲ್ಲ ಇನ್ನುಮುಂದೆ ಇಂಥಾ ಸುಳ್ಳುಬಾತ್ಮಿಗೆ ಆಸ್ಪದ ಕೊಡಲಾಗದೆಂಬದಾಗಿ ನಂಬುತ್ತೇನೆ.

ಹಾಜರಿದ್ದ ಮತ್ತೊಬ್ಬ

ಜರ್ಮನ್ ಮಿಶನೂ ಕೊಡಗಿನ ಕ್ರೈಸ್ತರೂ.

ಸ್ವಾಮಿ,

ಮಡಿಕೇರಿಯ ಪ್ರೊಟೆಸ್ಟೆಂಟ್ ಕ್ರೈಸ್ತರೊಳಗೆ ಕಳೆದ ಮೂರು ವರ್ಷದಿಂದ ಗಲಿಬಿಲಿಗಳು ಇದ್ದವು ಬಾಸಲ್ ಮಿಶನಿನವರು ಹಿಂತಿರುಗಿ ಬಂದು ಕೆಲಸ ನಡಿಸುತ್ತಾರೆಂಬ ಸುಳ್ಳುಸುದ್ದಿ ಎಲ್ಲಾ ಕಡೆಯಲ್ಲಿಯೂ ಹರಡಿತ್ತು 1923ನೇ ಇಸವಿ ಜನವರಿಯಿಂದ ಈ ಗಲಿಬಿಲಿಯು ವಿಪರೀತವಾಗುತ್ತಾ ಬಂತು. ಈ ಗಲಿಬಿಲಿಗಳ ವಿಷಯವಾಗಿ, ಇದೇ ತಿಂಗಳ ತಾ 15ರಲ್ಲು ಮದ್ರಾಸಿನಿಂದ ಜರ್ಮನ್ ಮಿಶನ್‌ಕಮಿಟಿಯ ಪ್ರತಿನಿಧಿಗಳಾದ ರೆವರೆಂಡ್ ಫಿಲಿಫ್ಸ್ ಮತ್ತು ವಿ ಜಿ ಫಿಲಿಫ್ ಎಂಬಿಬ್ಬರೂ, ಅವರ ಕೂಡ ಸೆಪ್ಟಂಬರ್ ತಿಂಗಳಲ್ಲಿ ಮಲಬಾರಿಗೆ ಎಸ್. ಜಿ. ಯು ಸಿ ಮಿಶನ್ ಸಂಘದ ಆಡಳಿತದಲ್ಲಿ ಕೆಲಸಮಾಡಲಿಕ್ಕೆ ಬಂದ ಜರ್ಮನ್‌ಮಿಶನೆರಿಯಾದ ರೆವರೆಂಡ್ ಪಿ ಸಂಗ್ಲೆ ದೊರೆಯವರೂ ಮಡಿಕೇರಿಗೆ ಬಂದಿದ್ದರು.

15ನೇ ತಾರೀಕಿನಲ್ಲಿ ಪ್ರತಿ ಒಬ್ಬೊಬ್ಬರು ತಮ್ಮ ತಮ್ಮ ಇರಾದೆಗಳನ್ನು ಹೇಳಿಕೊಳ್ಳಲು ಅನುಕೂಲಿಸಿದ್ದರು 16ನೇ ತಾರೀಕು ಆದಿತ್ಯವಾರ ಬೆಳಗ್ಯೆ 10 ಗಂಟೆಗೆ ಸಂಗ್ಲೆ ದೊರೆಯವರು ಮಿಶನ್‌ದೇವಾಲಯದಲ್ಲಿ ಆರಾಧನೆ ನಡಿಸಿದರು ತರುವಾಯ 11 ಗಂಟೆಗೆ ಅದೇ ಸ್ಥಳದಲ್ಲಿ ಒಂದು ಮೀಟಿಂಗ್ ನಡಿಸಲ್ಪಟ್ಟಿತು ಈ ಮೀಟಿಂಗಿನಲ್ಲಿ ಸಭೆಯಪರವಾದ ಪ್ರಶ್ನೆಗಳ ಅರಿಕೆಮಾಡಲ್ಪಟ್ಟಮೇಲೆ ಪಿ ಜಿ. ಫಿಲಿಪ್ ಎಂಬವರು ಮಾತನಾಡಿದರು ನಂತರ ಸಂಗ್ಲೆ ದೊರೆಯವರು ಇನ್ನು ಮುಂದೆ ಬಾಸೆಲ್ ಮಿಶನ್ ಇಲ್ಲಿಗೆ ಬರುವದಿಲ್ಲವೆಂತಲೂ, ಆದ್ದರಿಂದ ಈ ವಿಷಯವಾಗಿ ಒಂದು ಪತ್ರವನ್ನು ಇಲ್ಲಿಯ ಸಭಿಕರಿಗೆ ಕಳುಹಿಸುತ್ತಾರೆಂತಲೂ ತಾನು ಜರ್ಮನಿಯಿಂದ ಬರುವ ಸಮಯದಲ್ಲಿ ಅದರ ಪ್ರೆಸಿಡೆಂಟರು ತನಗೆ ತಿಳಿಸಿ ಸಮಾಚಾರಗಳನ್ನು ತೋರಿಸಿದರೆಂತಲೂ ತಿಳಿಸಿ, ನೀವು ಈ ದೇವಾಲಯವನ್ನು ಬಿಡದೆ ವೆಸ್ಲಿಯನ್ ಮಿಶನಿನವರ ಕೂಡ ಸಮಾಧಾನದಿಂದ ಐಕ್ಯದಲ್ಲಿರುವದನ್ನು ನೋಡುವಾಗ ನಮಗೆ ಬಹು ಸಂತೋಷವಾಗಿದೆ, ಅವರು ಎಂದೂ ನಿಮ್ಮನ್ನು ಬಿಟ್ಟು ಹಾಕಲಿಕ್ಕಿಲ್ಲ ಎಂಬಿತ್ಯಾದಿ ಅನೇಕ ಬುದ್ಧಿ ಬೋಧನೆಗಳನ್ನು ಹೇಳಿ 12 ಗಂಟೆ

ಗೆ ಮೀಟಿಂಗನ್ನು ಬೆಂಗಳೂರಿನಿಂದ ಬಂದ ವೆಸ್ಲಿಯನ್ ಮಿಶನಿನ ಚೇರ್ಮೇನರಾದ ರೆವೆರೆಂಡ್ ಥೋರ್ಪ್ ದೊರೆಗಳವರ ಆಶೀರ್ವಾದ ವಚನದೊಡನೆ ಕೂಟವನ್ನು ಸಂತೋಷದಿಂದ ಮುಕ್ತಾಯಗೊಳಿಸಿದರು.

ದೇಶಪ್ರೇಯ ಕುಂದರರ ಪಾರ್ಟಿಯವರನ್ನು ಬರಲಿಕ್ಕೆ ಹೇಳಿದರೂ ಬಾರದ್ದರಿಂದ ಪ್ರತಿನಿಧಿಗಳು ಯೋಚಿಸಿ ಯಾವ ವಿಧದಿಂದಲಾದರೂ ಸಮಾಧಾನಪಡಿಸುವ ಎಂಬ ಯೋಚನೆಯಿಂದ ಅವರ ಅಪೇಕ್ಷೆಯಂತೆ ಅವರು ಸೂಚಿಸಿದ ಸ್ಥಳದಲ್ಲಿ ಡಿಪ್ಯುಟೇಷನಿನವರೂ ಸಂಗ್ಲೆ ದೊರೆಯವರೂ ತಾ 16ರಲ್ಲು ಮದ್ಯಾನ್ಹ 2 ಗಂಟೆಯಿಂದ ಸಂಜೆ 7 ಗಂಟೆ ವರೆವಿಗೂ ಮಾರನೆ ದಿನ ಬೆಳಿಗ್ಯೆ 8 ಗಂಟೆಯಿಂದ 1 ಗಂಟೆವರೆವಿಗೂ ಮೀಟಿಂಗ್ ನಡಿಸಿ, ಸಕಲ ಸಂಗ್ತಿಗಳನ್ನು ಸವಿಸ್ತಾರವಾಗಿ ತಿಳಿಸಿ ಸಮಾಧಾನಕ್ಕೆ ಪ್ರಯತ್ನಿಸಿ ಎಷ್ಟು ಬುದ್ಧಿವಾದಗಳನ್ನಿತ್ತರೂ ಏನೊಂದೂ ಪ್ರಯೋಜನವಾಗಲಿಲ್ಲ. ಜರ್ಮನ್ ಮಿಶನರಿಯಾದ ಸಂಗ್ಲೆ ದೊರೆಯವರು ಮತ್ತು ಮತ್ಯಾ ಬಾಸೆಲ್ ಮಿಶನಿನವರೂ ಬರುವದಿಲ್ಲ, ಹಣಮುಂತಾದ ತೊಂದರೆಗಳಿವೆ, ಬೇರೆ ಯಾವ ಮಿಶನಿನವರೂ ತೆಗೆದುಕೊಳ್ಳುವದಿಲ್ಲ, ನನಗೆ ಚನ್ನಾಗಿ ಗೊತ್ತಿದೆ, ನಿಮಗೆ ಈಗ ಸಂತೋಷವಾಗಿರಬಹುದು, ಮುಂದಕ್ಕೆ ನಿಮಗೆ ಇದರಿಂದ ಕೇಡು ಸಂಭವಿಸುವದು ಎಂಬಿತ್ಯಾದಿ ಅನೇಕ ಬುದ್ಧಿವಾದಗಳನ್ನಿತ್ತು, ಸಮಜಾಯಿಸಿದರೂ ಪ್ರಯೋಜನವಾಗದೆ ನಿರರ್ಥಕವಾದ್ದರಿಂದ ಬಹು ವ್ಯಸನದಿಂದ ಮೀಟಿಂಗನ್ನು ಮುಕ್ತಾಯಗೊಳಿಸಿದರು.

ಡಿಪ್ಯುಟೇಶನಿನವರಲ್ಲೊಬ್ಬರಾದ ರೆವೆರೆಂಡ್ ಫಿಲಿಪ್ಸ್ ದೊರೆಯವರು 16ನೇ ತಾರೀಕು ಬೆಳಿಗ್ಯೆ ಆನಂದಪುರಕ್ಕೆ ಹೋಗಿ ಆರಾಧನೆಯನ್ನು ನಡಿಸಿ ಅದೇ ದಿನ ಮಡಿಕೇರಿಯಲ್ಲಿ ಮೀಟಿಂಗ್ ಇದ್ದದರಿಂದ ವಾಪಾಸು ಬಂದರು. 17ನೇ ತಾರೀಕಿನಲ್ಲು ಅಲ್ಲಿಯವರ ಅಪೇಕ್ಷೆಯಂತೆ ಡಿಪ್ಯುಟೇಶನಿನವರೂ ಸಂಗ್ಲೆ ದೊರೆಯವರೂ ವೆಸ್ಲಿಯನ್ ಮಿಶನಿನ ಚೇರ್ಮೇನರೂ, ಇಲ್ಲಿಯ ಮಿಶನಿನ ಸುಪರಿಂಟೆಂಡೆಂಟರೂ ಆನಂದಪುರಕ್ಕೆ ಹೋದರು. ಡಿಪ್ಯುಟೇಶನಿನವರು ನಾಲ್ಕುವರೆ ಗಂಟೆಗೆ ಮೀಟಿಂಗನ್ನು ನಡಿಸಿದರು. ಎಲ್ಲವೂ ಸಮಾಧಾನದಿಂದಲೂ ನ್ಯಾಯವಾಗಿಯೂ ನಡೆಯಿತು. ಸಭೆಯವರು ತಮ್ಮ ಬಿನ್ನಹಗಳನ್ನು ತಿಳಿಸಿದಮೇಲೆ ಅವರಿಗೆ ಬುದ್ಧಿವಾದವನ್ನು ಹೇಳಿ ಮೀಟಿಂಗನ್ನು ಮುಕ್ತಾಯಗೊಳಿಸಿದರು. ನಂತರ 6 ಗಂಟೆಗೆ ರೆವೆರೆಂಡ್ ಸಂಗ್ಲೆ ದೊರೆಯವರು ಡಿಪ್ಯುಟೇಶನಿನವರ ಕೋರಿಕೆಯಂತೆ ಒಂದು ಪ್ರಾರ್ಥನಾಕೂಟವನ್ನು ನಡಿಸಿ ಸ್ವಾರಸ್ಯವಾದ ಭಾಷಣವನ್ನು ಸಭಿಕರಿಗೆ ಮಾಡಿದರು. ನಂತರ ಎಂಟುವರೆ ಗಂಟೆಗೆ ಮಡಿಕೇರಿಗೆ ವಾಪಾಸು ಬಂದು ಮಾರಣೆದಿನ ವಾಪಾಸು ತಮ್ಮ ತಮ್ಮ ಊರುಗಳಿಗೆ ಹಿಂತೆರಳಿದರು.

ದೇಶಪ್ರೇಯಕುಂದರರ ಪಾರ್ಟಿಯವರು ಆನಂದಪುರಕ್ಕೆ ಹೋಗಿ ಎಷ್ಟೋ ಪ್ರಯತ್ನಗಳನ್ನು ನಡಿಸಿದರೂ ಕೆಲವರು ಅವರಕಡೆ ಸೇರಿದ್ದರೂ 17ನೇ ತಾರೀಕಿನಲ್ಲಿ ಆನಂದಪುರದವರು ದೇವಾಲಯಕ್ಕೆ ಸೇರಿಬಂದು ತಮ್ಮ ತಮ್ಮ ಇಷ್ಟಾರ್ಥಗಳನ್ನು ಹೇಳಿಕೊಂಡು, ವೆಸ್ಲಿಯನ್ ಮಿಶನ್ ಸಂಘಕ್ಕೆ ವಿಧೇಯರಾಗಿರುತ್ತೇವೆಂತ ಒಪ್ಪಿಕೊಂಡದ್ದು ಸಂತೋಷಕರವಾದ ಸಂಗತಿಯಾಗಿದೆ.

ಹಿತವಾದಿ

ಉದ್ಯೋಗಸ್ಥರ ಸ್ಥಿತಿ

ಅಯ್ಯಾ,

ನನಗೆ ನಮ್ಮ ಉದ್ಯೋಗಸ್ಥರ ಸ್ಥಿತಿಯು ಪ್ರಾರಂಭದಲ್ಲಿ ಚನ್ನಾಗಿ ತಿಳಿದಿರಲಿಲ್ಲ. ಆ ಸಮಯದಲ್ಲಿ ನಾನು ನಾಡಿನಲ್ಲಿರುವಾಗ ಕೆಲವು ಉದ್ಯೋಗಸ್ಥರು ಸಮಯಾನುಸಾರ ನಾಡಿಗೆ ಹೋಗುವದನ್ನು ಎಷ್ಟೋ ಸಲ ನೋಡಿದ್ದೆನು. ನಾನು ನೋಡಿದವರಲ್ಲಿ ಕೆಲವರು ಬೈಸಿಕಲ್ಲಿನಲ್ಲಿ ಹೋಗುತ್ತಲೂ ಮತ್ತು ಕೆಲವರು ಬಸ್ಸಿನಲ್ಲಿ ಹೋಗುತ್ತಲೂ ಇದ್ದರು. ಇದನ್ನು ನೋಡಿ ನಾನು ಉದ್ಯೋಗಸ್ಥರ ಜೀವನವೆ ಬಹು ಒಳ್ಳೆಯದೆಂದು ತಿಳಿದುಕೊಂಡಿದ್ದೆನು. ಯಾಕೆಂದರೆ ಅವರಿಗೆ ಸಮಯಕ್ಕೆ ಸರಿಯಾಗಿ ಪ್ರತಿ ತಿಂಗಳಲ್ಲಿಯೂ ಸಂಬಳವು ದೊರೆಯುತ್ತೆ ಮತ್ತು ಆಫೀಸಿಗೆ ಹೋದರೆ ಹೆಚ್ಚಿನ ಕೆಲಸವೇನೂ ಇರಲಿಕ್ಕಿಲ್ಲವೆಂತಲೂ ಮತ್ತು ಅಲ್ಪಸ್ವಲ್ಪವಿದ್ದರೂ ನೆರಳು ಚೇರಿಯ ಮೇಲೆ ಕೂತುಕೊಂಡು ಬರೆದುಬಿಟ್ಟು ಬರುವದು ಬಹು ಅನುಕೂಲವಾದ ಕೆಲಸವೆಂತಲೂ ಆಲೋಚಿಸಿದ್ದೆನು. ಆ ವೇಳೆ ಕೆಲವು ವರುಷಗಳ ಬಂದೆ ಉದ್ಯೋಗಸ್ಥರ ಸಂಬಳ ಹೆಚ್ಚಿಸಿದರೆಂದು ತಿಳಿದು ಇವರ ಸ್ಥಿತಿಯು ಮತ್ತಷ್ಟು ಚೆನ್ನಾಗಿರಬಹುದೆಂದು ಯೋಚಿಸಿದ್ದೆನು. ಆದರೆ ಈಚೆಗೆ ನನಗೆ ಮಡಿಕೇರಿಯಲ್ಲು ಒಬ್ಬ ಉದ್ಯೋಗಸ್ಥನು ಸ್ನೇಹಿತನಾದನು. ಅವನು ಒಬ್ಬ ಗುಮಾಸ್ತನು (clrek) ಆಗಿರುತ್ತಾನೆ. ಆ ಸ್ನೇಹಿತನಿಂದ ನಾನು ಆಫೀಸ್ ಕೆಲಸದ ಮತ್ತು ಅವರ ಸ್ಥಿತಿಯನ್ನು ವಿಚಾರಿಸಿ ಅವರ ನಿಜಸ್ಥಿತಿಯನ್ನು ತಿಳಿಯಲು ನನ್ನ ಅಭಿಪ್ರಾಯವು ಪೂರಾ ತಪ್ಪಾಯಿತು. ಅದು ಹ್ಯಾಗೆಂದರೆ:—

ಮಡಿಕೇರಿಯಲ್ಲಿ ಎಲ್ಲಾ ಸಾಮಾನು ಸಾಮಗ್ರಿಗಳ ಕ್ರಯವು ಮೊದಲಿನಂತೆಯೇ ಇದ್ದಿದ್ದರೆ ಅವರಿಗೆ ಸ್ವಲ್ಪ ಅನುಕೂಲವಾಗುತ್ತಿತ್ತು. ಆದರೆ ಈಗ ಸಾಮಾನುಗಳ ಕ್ರಯವು ಕೆಲವಕ್ಕೆ ದೇಶದಲ್ಲಿಗಿಂತ ಎರಡರಷ್ಟು, ಕೆಲವಕ್ಕೆ ಮೂರರಷ್ಟು ಮತ್ತು ಕೆಲವಕ್ಕೆ ನಾಲ್ಕರಷ್ಟು ಸಹ ಹೆಚ್ಚಿಸಲ್ಪಟ್ಟಿವೆ. ಇದಲ್ಲದೆ ಮಡಿಕೇರಿಯಲ್ಲಿ ಇತರ ಎಲ್ಲಾ ಸ್ಥಳಗಳಿಗಿಂತಲೂ ಸಾಮಾನುಗಳಿಗೆ ಕ್ರಯ ಹೆಚ್ಚು. ಪಟ್ಟಣವಾಸಿಗಳಾದ ಉದ್ಯೋಗಸ್ಥರು ಎಲ್ಲಾ ಸಾಮಾನುಗಳನ್ನು ಕ್ರಯ ಕೊಟ್ಟು ಕೊಂಡುಕೊಳ್ಳಬೇಕಾದ ಕಾರಣ ಅವರಿಗೆ ಸಂಬಳವನ್ನು ಹೆಚ್ಚಿಸಿ ನಿಜ ಏನೂ ಪ್ರಯೋಜನವು ಇಲ್ಲದಂತಾಯಿತೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಯಾಕೆಂದರೆ ಈಗ ಪ್ರಾರಂಭದಲ್ಲಿ ಒಬ್ಬ ಉದ್ಯೋಗಸ್ಥನಿಗೆ 30 ರುಪಾಯಿ ಸಂಬಳವಂತೆ. ಇದರಲ್ಲಿ ಅವನು ಕುಟುಂಬಸ್ತನಾದರೆ ತಿಂಗಳಿಗೆ ಈ ಕೆಳಗಿನ ಖರ್ಚುಗಳಿವೆ.—

ಕಮ್ಮಿ ತರದ ಮನೆ ಬಾಡಿಗೆ ತಿಂಗಳು ಬಾಬತ	ರು	5
ತಿಂಗಳಿಗೆ ಒಂದು ಗಾಡಿ ಸೌದೆ	ರು	5
ಒಬ್ಬ ಬಗಿಯಲಿಕ್ಕಾಗಿ ಆಳಿನಿಗೆ ಕಮ್ಮಿ ಪಕ್ಷಕ್ಕೆ	ರು	3
ಹಾಲು ಮೊಸರು ಸಹ ಕಮ್ಮಿಯಾದರೆ	ರು	4
ಒಬ್ಬ ಸಣ್ಣ ಅಡಿಗೆಯವನಿಗೆ	ರು	3
ಇವುಗಳಿಗೆ ಎಲ್ಲಾ ರುಪಾಯಿ		20

(ಕಚೇರಿಗೆ ಕಾಫಿಯನ್ನು ತೆಗೆದುಕೊಂಡು ಹೋಗಲಿಕ್ಕೂ ಬೀದಿಯಿಂದ ನೀರನ್ನು ತರುವುದಕ್ಕೂ ಮತ್ತು ಪೇಟೆಯಿಂದ ವ್ಯಾಪಾರ ತರಲಿಕ್ಕೂ ಅಡಿಗೆಯವನು ಅಗತ್ಯವಾಗಿ ಇರಬೇಕಾಗುತ್ತೆ)

ಈ ರೀತಿ 20 ರುಪಾಯಿ ಹೋದ ವೇಳೆ ಅವರಿಗೆ ಮುಖ್ಯವಾಗಿ ಬೇಕಾದ ಉಪ್ಪು ಮೆಣಸು ಮತ್ತೆ ಎಲ್ಲಾ ಸಾಮಾನುಗಳಿಗೂ ಮತ್ತು ವ್ಯಕ್ತಿಗಳಿಗೂ ಎಷ್ಟು ಉಳಿದಿರುತ್ತವೆ ಎಂಬುದನ್ನು ವಾಚಕರೇ ತಿಳಿದುಕೊಳ್ಳಬಹುದು.

ಈ ವಿಷಯಗಳಿಂದಲೇ ನಾವಾಲೋಚನೆ ಇರುವ ಕೆಲವು ಉದ್ಯೋಗಸ್ಥರು ಪಟ್ಟಣ ವಾಸವೆಯೇ ಬೇಡವೆಂದು ಇರುವರು. ಕೆಲವರು ಇದನ್ನು ಬುದ್ಧಿವಂತಿಕೆ ಎಂದು ಹೇಳಬಹುದು. ಆದರೆ ನಾನು ಹಾಗೆ ಹೇಳುವದಿಲ್ಲ. ಯಾಕೆಂದರೆ—ನಮ್ಮ ಈ ಚಿಕ್ಕ ಜಿಲ್ಲೆಯಲ್ಲಿ ಸ್ವಲ್ಪ ಮಾತ್ರವಿರುವ ವಿದ್ಯಾವಂತರು ಮತ್ತು ಬುದ್ಧಿವಂತರೆನಿಸಿಕೊಂಡವರೆಲ್ಲರೂ ಸಾಧಾರಣವಾಗಿ ಉದ್ಯೋಗದಲ್ಲಿದ್ದಾರೆ. ಅವರಿಗೆ ಮಕ್ಕಳ ಪೋಷಣೆ ಮತ್ತು ಅವರನ್ನು ಹ್ಯಾಗೆ ಮುಂದಕ್ಕೆ ತರಬೇಕೆಂಬ ಸಂಗತಿಯು ತಿಳಿದಿರುತ್ತದೆ. ಅಂಥವರೆ ಈ ರೀತಿ ಇರಾದೆ ಪಟ್ಟರೆ ನಮ್ಮ ಜಿಲ್ಲೆಯ ಅಭಿವೃದ್ಧಿಯಾಗುವದು ಹ್ಯಾಗೆ? ಇವರಲ್ಲಿ ಕೆಲವರ ಅವರವರ ಇರಾದೆಯಂತೆ ಮದುವೆ ಮಾಡಿಕೊಂಡು ಸಂಸಾರದಲ್ಲಿದ್ದಾರೆ. ಅಂಥವರ ಸ್ಥಿತಿಯನ್ನು ನಾನು ಮೇಲೆ ಹೇಳಿಯಾಗಿದೆ. ಹಾಗಾದರೆ ಈಗಿನವರು ಪೂರ್ವದ ಉದ್ಯೋಗಸ್ಥರಂತೆ ತಮ್ಮ ಹೆಂಡತಿ ಮಕ್ಕಳನ್ನು ನಾಡಿನಲ್ಲಿ ಬಿಟ್ಟು ಜತೆ ಇರಬಾರದೆಂದು ಕೇಳಬಹುದು. ಆದರೆ ಇದಕ್ಕೆ ಉತ್ತರವಾಗಿ ನಾನು ಈಗಿನ ಉದ್ಯೋಗಸ್ಥರ ಕೆಲಸದ ಸ್ಥಿತಿಯನ್ನು ಸ್ವಲ್ಪ ವಿವರಿಸಬೇಕಾಗಿದೆ. ಪೂರ್ವದಲ್ಲಿ ಬಂದಿದ್ದ ಆಫೀಸಲ್ಲಿ ಇದ್ದ ಜನರನ್ನು ಈಗ ಸಿಬ್ಬಂದಿ ಖೋತೆಗಾಗಿ ಅದರ ಅರ್ಧಕ್ಕೆ ಕಡಿಮೆ ಮಾಡಿರುತ್ತಾರಂತೆ. ಆದುದರಿಂದ ಈಗ ಇರುವವರಿಗೆ ಮೊದಲಿನ ಎರಡು ಜನರಷ್ಟು ಕೆಲಸವು ಹಿಂದಿನಂತಾಗಿ ಇರಬೇಕು. ಆದುದರಿಂದ ಅವರಿಗೆ ಈ ಕೆಲಸವನ್ನು ಪೂರೈಸಲು ಸಮಯವೆಲ್ಲಿಂದ ಬಂತು? ಖಂಡಿತವಾಗಿಯೂ ಅವರು ನ್ಯಾಯವಾದ ಆಫೀಸಿನ ಸಮಯ (Regulu office hours) ಕ್ಕಿಂತ ಮಿತಿಮೀರಿ ಬೇರೆ ಸಮಯಗಳಲ್ಲಿ (out of office hours) ಕೆಲಸ ಮಾಡಲೇ ಬೇಕಾಗಿರುತ್ತೆ. ಆದ ದರಿಂದ ಇವರಿಗೆ ಬೆಳಿಗ್ಯಯಿಂದ ಸಾಯಂಕಾಲದವರೆಗೂ ಮತ್ತು ಕೆಲವು ಸಮಯಗಳಲ್ಲಿ ರಾತ್ರೆ ವೇಳೆಯಲ್ಲಿ ಸಹ ಕೆಲಸ ಮಾಡಬೇಕಾಗುವದೆಂದು ಹೇಳಿದರೆ ತಪ್ಪಾಗಲಾರದು.

ಹೀಗಿರುವಾಗ ಉದ್ಯೋಗಸ್ಥರಿಗೆ ಈಗ ಕೆಲಸವು ಹೆಚ್ಚಾಗಿರುವಾಗ ಅದೇ ಮೇರೆ ಹೆಚ್ಚಿನ ವಿಶ್ರಾಂತಿ ತೆಗೆದುಕೊಳ್ಳಲೆಂದು ರಜವನ್ನಾದರೂ ಹೆಚ್ಚಿಸಿದ್ದಾರೋ ಎಂಬುದಾಗಿ ಸ್ವಲ್ಪ ಆಲೋಚಿಸೋಣ. ಈ ವಿಷಯದಲ್ಲಿ ಪೂರ್ವಕ್ಕಿಂತ ಕಡಿಮೆಯೆಂದು ಬತ್ತಿ ಹೇಳಬೇಕಾಗಿದೆ. ಅದೇನೆಂದರೆ—ಯಾವ ಸಮಯದಲ್ಲಿ ನೋಡಿದರೂ ಅವರ ಕೆಲಸವು ಮುಗಿಯುವದೇ ಇಲ್ಲ. ಹಾಗಿರುವಾಗ ರಜವನ್ನು ಹ್ಯಾಗೆ ಕೊಡುವದು, ಕೆಲಸವನ್ನು ಯಾರು ಮಾಡುವದು ಎಂಬ ಪ್ರಶ್ನೆಯು ಹೊರಬೀಳುವದು. ಆದ ದರಿಂದ ರಜೆಯನ್ನು ಮತ್ತು ಆದಿತ್ಯವಾರ ಸಹ ಆಫೀಸಿನಲ್ಲಿ ಕೆಲಸವಂತೆ. ಹಾಗಾದರೆ ಅವರವರಿಗೆ ವರುಷಕ್ಕೆ ಇಷ್ಟೆಂದು ನಿಶ್ಚಿತವಾದ ರಜವನ್ನಾದರೂ ತೆಗೆದುಕೊಂಡು ಸ್ವಲ್ಪ ವಿಶ್ರಾಂತಿಯನ್ನು ತೆಗೆದುಕೊಳ್ಳೋಣವೆಂದರೆ ನೀನೇ ಹಾಜರಿರುವಾಗ ಮುಗಿಯದೆ ಇರುವ ಕೆಲಸವನ್ನು ನಿನ್ನ ಗೈರುಹಾಜರಿನಲ್ಲಿ ಯಾರು ಮಾಡುವದು? ಆದುದರಿಂದ ರಜ ಕೊಡಲಿಕ್ಕೆ ಆಗುವದಿಲ್ಲವೆಂಬ ಜವಾಬು ಕೂಡಲೆ ಬರುತ್ತದೆ. ಆದುದರಿಂದ ಕಾಯಿಲೆಯವರಾಗಿದ್ದ ಉದ್ಯೋಗಸ್ಥರು ಪೂರ್ತಿ ವಾಸಿಯಾಗುವ ಮುಂಚೆ ಆಫೀಸಿಗೆ ಹೋಗುವದನ್ನು ನಾನು ನೋಡಿದ್ದೇನೆ.

ಈ ರೀತಿ ಕೆಲಸವು ಹೆಚ್ಚಾಗಿ ರಜವಿಲ್ಲದೆ ಇರುವ ಸಮಯದಲ್ಲಿ ಈ ಉದ್ಯೋಗಸ್ಥರು ಪೂರ್ವದಂತೆ ನಾಡಿಗೆ ಹ್ಯಾಗೆ ಹೋಗಬಹುದು? ಅದು ಪೂರಾ ಅಸಾಧ್ಯವಾಗಿದೆ. ಆದುದರಿಂದ ಅವರು ತಮ್ಮ ಕುಟುಂಬ ಸಮೇತ ಮಡಿಕೇರಿಯಲ್ಲಿಯೇ ಇರಬೇಕಾದದ್ದು ಅಗತ್ಯವಾಗಿದೆ. ಹೀಗೆ ಇರಬೇಕಾದರೆ ಮೇಲೆ ಹೇಳಿದ ರೀತಿ ಐದು ರುಪಾಯಿ ಬಾಡಿಗೆಯ ಪೇಟೆಯ ಮಧ್ಯದಲ್ಲಿರುವ ಮನೆಗಳು ವಾಸಕ್ಕೆ ಅನಾನುಕೂಲವಾಗಿರುತ್ತವೆ. ಯಾಕೆಂದರೆ ಅಲ್ಲಿಯ ಮನೆಗಳು ಬಹು ಹತ್ತಿರವಾಗಿರುವುದರಿಂದ ಅಲ್ಲಿ ನ್ಯಾಯವಾಗಿ ಗಾಳಿ ಸಂಚಾರವೂ ಬೆಳಕೂ ಇರುವುದಿಲ್ಲ. ಆದುದರಿಂದ ಅಲ್ಲಿ ವಾಸಮಾಡುವವರಿಗೆ ಯಾವಾಗಲೂ ಕಾಯಿಲೆಯು ತಪ್ಪುವದೇ ಇಲ್ಲ. ಅದರಿಂದ ಔಷಧಿ ಮತ್ತು ಅಸ್ಪತ್ರೆಗಳ ಖರ್ಚಿನ ಬಾಬು ಒಂದು ಹೆಚ್ಚಾಗುತ್ತೆ.

ಇಂಥಾ ತೊಂದ್ರೆಗಳು ಇರುವಾಗ ಮೇಲೆ ಹೇಳಿದಂತೆ ಉದ್ಯೋಗಸ್ಥರು ಬಸ್ಸಿನಲ್ಲಿ ಮತ್ತು ಬೈಸಿಕಲ್ಲಿನಲ್ಲಿ ಯಾಕೆ ತಿರುಗಬೇಕು, ನಮ್ಮ ಪೂರ್ವದವರಂತೆ ದೇವರು ಕೊಟ್ಟ ಕಾಲಿನಲ್ಲಿ ಯಾಕೆ ನಡೆದುಕೊಂಡು ಹೋಗಬಾರದೆಂಬ ಪ್ರಶ್ನೆಗೆ ಅವರು ಹೇಳುವದೇನೆಂದರೆ—ಪೂರ್ವದವರಿಗೆ ಬೇಕಾದಷ್ಟು ರಜ ಸಿಕ್ಕುತ್ತಿತ್ತು. ಎಷ್ಟು ದೂರವಿದ್ದರೂ ಒಂದೆರಡು ದಿನಗಳು ಹೋಗುವದಕ್ಕೂ ಅಲ್ಲಿ ಕೆಲವು ದಿನಗಳು ಇರುವದಕ್ಕೂ ಮತ್ತು ಒಂದೆರಡು ದಿನ ಹಿಂತಿರುಗಿ ಬರಲಿಕ್ಕೂ ರಜ ಸಿಕ್ಕುತ್ತಿತ್ತು. ಆದರೆ ಈಗಿನವರಿಗೆ ರಜವಿಲ್ಲವೆಂದು ಮೊದಲೇ ಹೇಳಿದ್ದಾಗಿದೆ. ಒಂದುವೇಳೆ ಅತಿ ಕಷ್ಟದಿಂದ ಒಂದೆರಡು ದಿನ ರಜ ಸಿಕ್ಕಿದರೂ ಆ ರಜದಲ್ಲಿ ದೂರದಲ್ಲಿರುವ ಮನೆಗಳಿಗೆ ಹೋಗಿಬರಲು ಇವೆರಡರನ್ನು ಬಿಟ್ಟರೆ ಬೇರೆ ಗತಿ ಇಲ್ಲ. ಆದುದರಿಂದ ಬೈಸಿಕಲ್ ಸಾಲಮಾಡಿಯಾಗಲಿ ಕೈಯಲ್ಲಿ ಹಣವಿಲ್ಲದಿದ್ದರೆ ಹಣ ಸಾಲಮಾಡಿಯಾಗಲಿ ಬಸ್ಸಿನಲ್ಲಿ ಹೋಗುವದು ಅಗತ್ಯವೆಂದು ಯಾರುತಾನೆ ಒಪ್ಪುವದಿಲ್ಲ.

ಇಂಥಾ ಕಷ್ಟಗಳಿಗಾಗಿ ಕ್ರಮೇಣ ನಮ್ಮ ದೇಶದವರು ಈ ಉದ್ಯೋಗಗಳಿಂದ ಪ್ರಯೋಜನವೇನೂ ಇಲ್ಲ, ತಮ್ಮ ತಮ್ಮ ಅಜ್ಜಂದಿಯರು ಸಂಪಾದಿಸಿಟ್ಟ ಭೂಮಿಯನ್ನು ಮತ್ತು ಅದಕ್ಕೆ ಸೇರಿದ ಬಾಣೆ ಹಿತ್ಲು ವಗೈರೆ ಜಾಗಗಳನ್ನು ರೂಢಿಸಿಕೊಂಡು ಇದ್ದರೆ ಸಾಕೆಂದು ಯೋಚಿಸಬಹುದು. ಅವರು ಹಾಗೆ ಮಾಡಿದರೆ ಕೆಲವು ವರುಷಗಳಲ್ಲಿಯೆ ಇಲ್ಲಿಯ ಉದ್ಯೋಗಗಳಿಗೆ ಪರದೇಶದವರು ಬರಬಹುದು. ಅವರು ಬಂದರೆ ಅವರಿಂದ ಕೊಡಲ್ಪಡಬೇಕಾದ ತೊಂದ್ರೆಗಳನ್ನು ನಮ್ಮ ದೇಶದ ರೈತರು ಅನುಭವಿಸಬೇಕಾಗುತ್ತೆ. ಆದುದರಿಂದ ಅಂಥಾ ಸಂದರ್ಭಗಳಿಗೆ ಎಡೆ ಇಲ್ಲದಂತೆ ನಮ್ಮ ದೇಶದಲ್ಲಿ ನಮ್ಮ ಜನರೇ ಉದ್ಯೋಗದಲ್ಲಿರುವಂತೆ ನೋಡಿಕೊಳ್ಳಬೇಕಾದದ್ದು ನಮ್ಮ ಕರ್ತವ್ಯವಾಗಿದೆ.

ಆದುದರಿಂದ ಈ ಮೇಲಿನ ಕಷ್ಟಗಳನ್ನೆಲ್ಲಾ ನೋಡಿ ಸರಕಾರದವರು ಈ ಬಡ ಉದ್ಯೋಗಸ್ಥರ ಸ್ಥಿತಿಯನ್ನು ಅಭಿವೃದ್ಧಿಪಡಿಸಲು ಯತ್ನಿಸುವರೆಂದು ಭಾವಿಸುತ್ತೇನೆ. ಇದಲ್ಲದೆ ನಮ್ಮ ಹೊಸ ಕೌನ್ಸಿಲ್ ಮೆಂಬರುಗಳು ಸಹ ಈ ವಿಷಯವನ್ನು ಗಮನಕ್ಕೆ ತೆಗೆದುಕೊಂಡು ಇವರ ಸ್ಥಿತಿಯನ್ನು ಚೆನ್ನಾಗಿ ವಿಚಾರಿಸಿ ಎಲ್ಲಾ ವಿಷಯದಲ್ಲೂ ಇವರಿಗೆ ಅನುಕೂಲವಾದಂತ ಠರಾವುಗಳನ್ನು ಪಾಸ್ ಮಾಡುವರಾಗಿ ನಂಬುತ್ತೇನೆ. ದಕ್ಷ ದಯಾಳುವಾದ ನಮ್ಮ ಈಗಿನ ಕಮಿಷನರ್ ಸಾಹೇಬರವರು ಮತ್ತು ಡಿ ಮೆ ಸಾಹೇಬರವರು ಸಹ ಅನುಮೋದಿಸುವರಾಗಿ ನನಗೆ ಪೂರ್ಣ ಭರವಸೆ ಇದೆ.

ನನ್ನ ಇರಾದೆ ಮೇರೆ ಇವರಿಗೆ ಪಟ್ಟಣದಲ್ಲಿ ವಾಸಕ್ಕೆ ಅನುಕೂಲವಾಗುವಂತ ಮನೆಗಳನ್ನು ಕಟ್ಟಿಸಿಕೊಡುವದಾಗಲಿ ಅಥವಾ ಇದರಬದಲಿಗೆ ಸಿಟಿಎಲೊವೆನ್ಸ್ (city alowance) ಎಂಬುದಾಗಿ ಸಂಬಳವನ್ನು ಹೆಚ್ಚಿಸಿ ಅವರಿಗೆ ಹ್ಯಾಗೆ ವಿಶ್ರಾಂತಿ ಸಿಕ್ಕುವಂತೆ ಎಲ್ಲಾ ರಜವನ್ನು ಕೊಟ್ಟು ಪ್ರತಿ ವಾರವೂ ಪೂರ್ವದಲ್ಲಿದ್ದಂತೆ ಶನಿವಾರ ಮಧ್ಯಾನ್ಹದ ವೇಳೆ ಮತ್ತು ಆದಿತ್ಯವಾರ ಸಹ ತಪ್ಪದೆ ರಜವನ್ನು ಕೊಟ್ಟರೆ ಅವರ ತೊಂದ್ರೆಯನ್ನು ಬಹುಮಟ್ಟಿಗೆ ಕಡಿಮೆ ಮಾಡಿದಂತೆ ಆಗುವದು.

ಹಿತಚಿಂತಕ.

ರಾ ಸಾ ಪಾಂಡಂಡ ಅಪ್ಪಚ್ಚನವರು.

ಅಯ್ಯಾ ಸಂಪಾದಕರೆ,

ರಾವು ಸಾಹೇಬ್ ಪಾಂಡಂಡ ಅಪ್ಪಚ್ಚನವರ ಮರಣದ ವಾರ್ತೆಯನ್ನು ತಮ್ಮ ಪತ್ರಿಕೆ ಮೂಲಕ ತಿಳಿದವನಾದೆನು. ಸದರಿಯವರು ಜನನ ಉದಾರಿಯವರಲ್ಲದೆ, ದೇವಭಕ್ತಿಯಲ್ಲು ಸಹ ಮಗ್ನರಾಗಿ ಪ್ರತಿ ವರುಷವೂ ಶ್ರೀಮೂಲ ಕಾವೇರಮ್ಮನವರಲ್ಲೂ ಮತ್ತು ಪಾಡಿ ಸುಬ್ರಾಯ (ಇಗ್ಗುತಪ್ಪ) ದೇವರ ಪ್ರೀತಿಗೆ ಪಾತ್ರರಾಗಿದ್ದರು. ನಾನು ಇವರನ್ನು 1880ನೇ ಇಸವಿಯಿಂದ ಬಲ್ಲವನಾಗಿದ್ದೇನೆ, ಅಂದರೆ ಇವರೇ ಪಾಡಿನಾಡು ಕಕ್ಕಬೆ ಸ್ಕೂಲಿಗೆ ಮೊದಲು ಇಂಗ್ಲಿಷ್ ಉಪಾಧ್ಯಾಯರಾಗಿ ಬಂದವರ ತಾಬೆಯಲ್ಲು ನಾನು ಶಿಕ್ಷೆ ಹೊಂದಿದವನಾಗಿದ್ದೇನೆ. ಇವರು ವೇದಾಂತ ಮಾರ್ಗವನ್ನವಲಂಭಿಸಿ ಸದಾ ಸಂಘದ ಮೆಂಬರಾಗಿಯೂ ಇದ್ದರು. ಇವರ ತಿಥಿ ದಿನ ಬಡಬಗ್ಗರಿಗೆ ದಾನಕೊಡಲು ಏರ್ಪಾಡು ಮಾಡಿದರಾಗಿ ತಿಳಿದೆನು. ಇವರ ಮರಣಾಂತರ ಧರ್ಮ ಕಾರ್ಯಗಳಿಗಾಗಿ ಇವರ ಸಂಪಾದನೆಯಲ್ಲು ಕಿಂಚಿತ ಭಾಗವನ್ನಾದರೂ ಉಪಯೋಗಿಸುವಂತೆ ಇವರ ಮರಣ ಶಾಸನದಲ್ಲು ಇಲ್ಲದೆ ಇರಲಾರದು. ಪಾಡಿ ಸುಬ್ರಾಯ ದೇವರ ಅಂಗಣಕ್ಕೆ ಕಲ್ಲು ಹಾಸುವ ಬಾಬಿಗೆ ತಾನು ಸಹಾಯ ಮಾಡುವದಾಗಿ ಈ ಲೇಖನದಲ್ಲಿ ಹೇಳಿದ್ದರು. ಇಂಥಾವರು ಈ ಜಗತ್ತನ್ನು ಬಿಟ್ಟು ಪರಲೋಕವನ್ನೈದಿದವರಿಗೆ ಶಾಂತಿಯನ್ನೂ ಇವರ ಕುಟುಂಬ ಮಕ್ಕಳಿಗೆ ಸಮಾಧಾನವನ್ನೂ ದೇವರು ದಯಪಾಲಿಸಲಿ.

ಮ. ಕು.

ಅಮ್ಮತ್ತಿನಾಡು ಸಹಕಾರ ಸಂಘಗಳ ಕಾನ್ಫರೆನ್ಸ್.

ಕಳೆದ ತಾ 27-10 2.ರಲ್ಲಿ ಅಮ್ಮತ್ತಿನಾಡಿನಲ್ಲಿರುವ ಸಹಕಾರಿ ಸಂಘಗಳ ಕಾನ್ಫರೆನ್ಸ್ ಒಂದು ಮೆ ಬಲ್ಲಂಡ್ರ ಐಯ್ಯಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ಮೆಂಬರುಗಳು ನೂರಕ್ಕಿಂತ ಹೆಚ್ಚಾಗಿ ಸೇರಿದ್ದರು.

ಅಧ್ಯಕ್ಷರು ಪ್ರಥಮ ಭಾಷಣವನ್ನು ಮಾಡಿದನಂತರ ಗೌರವ ಪ್ರಚಾರಕರಾದ ಮೆ. ಕೆ ಪಿ ಚಿಣ್ಣಪ್ಪನವರು ಸಹಕಾರದ ತತ್ವಗಳನ್ನು ವಿವರಿಸಿದರು

ಮೆ. ಕುಟ್ಟಂಡ ತಮ್ಮಯ್ಯನವರು, ಕೇಚಂಡ ಸಂಜಪ್ಪನವರು ಅಬ್ದುಲ್ ಗಫೂರ್ ಖಾನ್ ಸಾಹೇಬರು, ಐನಂಡ ಕಾರ್ಯಪ್ಪನವರು, ಅಜ್ಜಮಾಡ ಬೋಪಯ್ಯನವರು, ಮತ್ತು ಕಲಿಯಂಡ ಸೋಮಯ್ಯನವರು ಸಂಘದ ಕೆಲಸವು ಮತ್ತು ವಸೂಲಾತಿಯ ವಿಷಯ ಭಾಷಣಮಾಡಿದರು.

ಕಾನ್ಫರೆನ್ಸಿಗೆ ಪೊಳ್ಳಿಬೆಟ್ಟದಿಂದ ಬಂದಿದ್ದ ಪಂಚಮರು ಅವರಿಗೋಸ್ಕರ ಪ್ರತ್ಯೇಕ ಒಂದು ಸಂಘವನ್ನು ಏರ್ಪಡಿಸಿ ಕೊಡಬೇಕೆಂಬ ಒಂದು ಠರಾವನ್ನು ತಂದರು

ಗೌರವ ಪ್ರಚಾರಕರು ಈವಿಷಯ ಪೊಳ್ಳಿಬೆಟ್ಟಕ್ಕೆ ಹೋಗಿ ಪಂಚಮರ ಒಂದು ಮೀಟಿಂಗನ್ನು ಮಾಡಿ ಆಲೋಚಿಸುವುದಾಗಿ ತೀರ್ಮಾನವಾಯಿತು.

ಅಧ್ಯಕ್ಷರು ಮೆ. ಬಲ್ಲಂಡ ಐಯ್ಯಪ್ಪನವರು ಸಹಕಾರಿ ಸಂಘಗಳಿಂದ ಕೊಡಗುದೇಶವು ಎಷ್ಟರಮಟ್ಟಿಗೆ ಉನ್ನತ ಸ್ಥಿತಿಗೆ ಬಂದಿದೆ ಮತ್ತು ಇನ್ನ ಎಷ್ಟರಮಟ್ಟಿಗೆ ಬರಬಹುದೆಂಬುದನ್ನು ಚನ್ನಾಗಿ ವರ್ಣಿಸಿ ತಮ್ಮ ಭಾಷಣವನ್ನು ಮುಗಿಸಿ ಕಾನ್ಫರೆನ್ಸನ್ನು ಮುಕ್ತಾಯಮಾಡಿದರು.

ಅಧ್ಯಕ್ಷರಿಗೂ ಸಭಿಕರಿಗೂ ನೇಶನಲ್ ಶಾಲೆಯ ಹೆಡ್ಮಾಸ್ತರರಿಗೂ ವಂದನೆಗಳನ್ನು ಸಮರ್ಪಿಸಿದನಂತರ ಮೀಟಿಂಗು ಮುಕ್ತಾಯವಾಯಿತು.

ಹಾಜರಿದ್ದವ

ಕೊಡಗಿನ 'ಶೀತ'

ಸ್ವಾ,

ನಮ್ಮ ಈ ದೇಶವು ವಾಯುಗುಣದಲ್ಲಿ ಸಮಶೀತೋಷ್ಣದರೂ ಗುಣದಲ್ಲಿ ಮಾತ್ರ ಅಧಿಕ ಶೀತ ನಾಗರೀಕತೆ ಬಂದಿರುವ ನಗರಗಳಿಗೆ ಹೋಗಿ ವಿದ್ಯಾಭ್ಯಾಸವನ್ನು ಮಾಡುವಾಗ "ನನ್ನ ಮಾತೃ ಭೂಮಿಗೆ ಹೋದರ ಅಲ್ಲಿ ನಾನು ...ಮಾಡುತ್ತೇನೆ, ಬೆಟ್ಟ ಮಾಡಿ ಬಿಡುತ್ತೇನೆ" ಎಂದು ಎಷ್ಟು ...ಢ ವಿದ್ಯಾಭ್ಯಾಸಕರು ದೃಢ ಮಾಡಿಕೊಂಡು ಬಂದಿರುವು...? ಪರದೇಶದಲ್ಲಿ ಕಾಂಗ್ರೆಸ್ ಮತ್ತು ಇತರ ಚಳವಳಿಗ... ಮಗ್ನರಾಗಿದ್ದು, ಅದನ್ನು ಈ ಚಳಿದೇಶದಲ್ಲಿ ಪ್ರಚಾರಪಡಿಸಬೇಕೆಂದು ಕೊಡವಿಗೆ ಗಂಟು ಹಾಕಿಕೊಂಡವರು ಎಷ್ಟು ಜ... ತಿಯೂಷಪ್ಪಿ ಅಥ್ವ ನವ... ಅಥವ ಬ್ರಹ್ಮ ಸಮಾಜದ ತ...ಗಳನ್ನು ಮನದಣಿಯ ಓದಿ ಚೆನ್ನಾಗಿ ಕಲಿತು, ಕೊಡಗಿಗ...ದ ಮೇಲೆ ಆ ವಿಷಯಗಳನ್ನು ವಿದ್ಯಾಹೀನರಾದ ಜನರಿಗೆ ...ಯಪಡಿಸುವೆನೆಂದು ಆತ್ಮಸಾಕ್ಷಿಯಾಗಿ ವಾಗ್ದಾನ ಮಾಡಿ...ವರೆಷ್ಟು ಜನ! ವ್ಯಾಪಾರದಲ್ಲಾಗಲೀ, ಶಾಲೆ, ಬೋರ್ಡಿಂ... ಅಥವ ಹೋಟೇಲುಗಳಲ್ಲಿಯಾಗಲೀ ಪರದೇಶದಲ್ಲಿ ಕಂಡ ನ...ನ ರೀತಿಗಳನ್ನು ರೂಢೀಕರಿಸುವೆನೆಂದು ತಮ್ಮ ಸ್ನೇಹಿತರ ...ಪಿನಲ್ಲಿ ರಭಸದಿಂದ ಹೇಳಿದವರೆಷ್ಟು ಮಂದಿ ವಿದ್ಯಾರ್ಥಿ... ಇಂದಿನವರೆಗೆ ಬಿರುದಾವಳಿಗಳನ್ನು ಪಡೆದು ಬಂದಿರುವ...? ಆದರೆ ಪಾಪ ಮಾಡುವುದೇನು, ದೇಶದ ಎಲ್ಲೆಯಲ್ಲಿರು ಕಟ್ಟೆಗಳಲ್ಲಿ ಸುಂಕ ಕೊಡುವುದು. ಸೋಮಾರಿತನವೆಂಬ ಚ...ಯ ಬೆಲೆಯೋ ಎಂಬಂತೆ ಆ ಜ್ವರವು ಆ ಮಹನೀಯರನ್ನು ...ಥವ ಮಹಿಳೆಯರನ್ನು ಆವರಿಸಿಕೊಂಡು ಅವರ ಮನಸನ್ನು ...ದುರಿಸಿ ನಾಗರೀಕತೆಯನ್ನು ಹೊಂದಿದ ನಗರಗಳಲ್ಲಿ ಜೋ...ಣೆ ಮಾಡಿದ ಉತ್ತಮ ಅಭಿಪ್ರಾಯಗಳನ್ನು ಹೀರಿ ತೆಗೆದು ...ಂದು ಮರದ ಕುಂಬೆಗಿಂ ಕಡೆಯಾಗಿ ಮಾಡುವುದು ಮ...ದ ಕುಂಟೆ ಯಾಕೆಂದರ ಒಂದೋ ಅವನು ಕೆಲಕಾಲದ ಚಕ್ರ...ಲ್ಲಿ ಒಂದು ತುಂಡು ಆಗಿಯಾಗಲೀ ಅಥವ ಊರು ಜನರಿಗೂ ...ತ ಪ್ರಯೋಜನಕ್ಕೆ ಬಾರದೆ, ಅಪೂರ್ವದ ಉತ್ಸಹವನೆಲ್ಲಾ ...ರೆದು "Baby province" ಕೂಸಿನಂತ ದೇಶವನ್ನು ...ರ್ತಿಯಾಗಿ ಮರತು ಬಾಲಿ ಬವಾಯಿಂದ ಕಾಲಕಳೆಯು...ದ ದುರ್ಗತಿಗೆ ಇಳಿಯಬೇಕಾಗುವುದು.

ವರ್ಣನೆ ವಿಪರೀತವೇ? ಎಂದೂ ಅಲ್ಲ. ಉದಾಹರಣೆ ಪೂರ್ವಕವಾಗಿ ಚರ್ಚಿಸುವೆನು. ಉದಾಹರಣೆಗಳು ಗಳಿಗೆ ...ಳಿಗೆಗೂ ಹೆಚ್ಚುತ್ತಿರುವುದರಿಂದ ಪಕ್ಕಿ ತೆಗೆವ ಎವುದಕ್ಕೆ ಮಾತ್ರವೇ ಕೊಂಚ ಶ್ರಮಬೇಕು ಅದರ ನೋಡಿದರ ಕಲ್ಲಾನಕರೂ ಕರಗುವಂತ ಒಂದೆರಡು ಸಂಗತಿಗಳನ್ನು ವಾಚಕರ ಮುಂದೆ ತೋರುವೆನು. ಅಮ್ಮತ್ತಿಯಲ್ಲಿ ಇಡೀ ದೇಶಕ್ಕಾಗಿ ಬಂದಿರುವ ಸ್ವದೇಶಿಯ ಶಾಲೆಯನ್ನು ಸ್ಥಾಪಿಸಿದರು ವಿದ್ಯಾಭ್ಯಾಸಕ್ಕೆ ಕೈಹಚ್ಚುವುದು ಸಾಮಾನ್ಯ ಕೆಲಸವೋ? ಆ ಕಾಲ...ಸಿಗೆ ಜೀವದಾನವನ್ನು ಮಾಡಿ, ತೊಟ್ಟಿಲಲ್ಲಿಟ್ಟು ಅಲ್ಲಿ ಜೋ...ಗುಳ ಹಾಡಿ ಬಾಲಕನನ್ನು ಸಾಕಿದ ಆ ಮಹಾತ್ಮರ ಹೆಸರು ದೇಶೀಯರೆಲ್ಲರಿಗೆ ಮನನವಿದೆ. ಆ ಶಾಲೆಯು ಅನೇಕ ವಿರು...ಗ್ಗಳನ್ನನುಭವಿಸಿ ಕೊನೆಗೆ ಕೀರ್ತಿಯನ್ನು ಪಡೆದ ಸ್ವದೇಶೀಯ ಶಾಲೆಯಲ್ಲಿ ಪ್ರಾಥವಿದ್ಯೆಯ ಗುರುತನ್ನು ಪಡೆದ ಪ್ರವೀಣರಾದ ಒಬ್ಬರು ಅಲ್ಲಿಗೆ ಮಹೋಪಾಧ್ಯಾಯರಾದರು ಇಷ್ಟು... ನಮ್ಮ ದೇಶದ ಸ್ವಾಭಾವಿಕವಾದ ಚಳಿಯ ಅನುಭವವಿಲ್ಲದ ದೇಶಾಭಿಮಾನಿಗಳ ನ ...ಬರದಲ್ಲಿ ಆತ್ಮತೃಪ್ತಿಯ ಮುಗುಳ್ನಗೆಯು ಬೀರಿತು, ಅಲ್ಲದೆ "ಇಂದಿಗು ಸುದಿನ ನಮ್ಮ ಶಾಲೆಯ ಬಾಲ್ಯವು ಕಳೆಯಿತು, ಯೌವ್ವನವು ತಲೆದೋರಿದೆ, ಈ ಶಾಲೆಯ ಮಹೋಪಾಧ್ಯಾಯರಿಂದಲೂ ಮತ್ತು ಕರ್ತುಗಳಿಂದಲೂ ತಯಾರಾದ ವಿದ್ಯಾರ್ಥಿಗಳು ಊರೂರು ತಿರುಗಿ ನಮ್ಮ ಕಡುಬಡತನದಿಂದ ಬೆಂದು ಬೇಗುದಿಕೊಂಡಿರುವ ಹೀನತೆಯನ್ನು ಹೋಗಲಾಡಿಸಿ, ಭಾರತ ಮಾತೆಯ ಒಂದು ಕೊರತೆಯನ್ನಾದರೂ ನೀಗಿಸುವರು" ಎಂದು ಬಾಯಿ ಬಾಯಿ ಹೇಳಿ ಹಿಗ್ಗುತಿದ್ದರು. ಅಯ್ಯೋ ಪಾಪ, ಒಡತಾಯಿಗಳು ಅನುಭವಶಾಲಿಯಾದ ಕಾರಣ ಅವರ ಆಶೆಯು ಬಿಸಿಲ್ಗುದುರೆಯನ್ನು ನೋಡಿ ಹಿಗ್ಗಿದವರಂತೆ ನಿರಾಶೆಯಾಯಿತು. ಏತಕೆಂದರೆ ವಿಸಿದ್ಧರೇನು, ದೇಶಿಯರ ಕೃಪೆ ಇಲ್ಲ ಆದ ಕಾರಣ ಆ ಶಾಲೆಗೆ ಯೌವ್ವನದಲ್ಲಿಯೇ 'ಚಳಿ' ಕ್ಷಯವು ತಲೆದೋರಿದೆ. ಇದರ ನಿಜಸ್ಥಿತಿಯನ್ನು ತಿಳಿಯಬೇಕಾದರ ಈ ಪತ್ರಿಕೆಯಲ್ಲಿ ನಿಮ್ಮ ಅಭಿಪ್ರಾಯವನ್ನು ಸೂಚಿಸಿ

ಈ ಕಷ್ಟ ಸಾಧ್ಯವಾದ ಕೆಲಸವನ್ನು ಮುಂದರಿಸಿ ಶಾಲೆಯನ್ನು ಉದ್ಧರಿಸಿ ದೇಶದ ಮರ್ಯಾದೆಯನ್ನು ಉಳಿಸಲೋಸುಗ ಜಮೀನ್ದಾರರ ಸಂಘದವರು ಮುಂದೆ ಬಂದಿರುವರು ಇದಾದರೂ ಪುಣ್ಯದಿನವೋ? ರಾಶಿ ನೋಡಬೇಕು ಶಾಲೆಯಲ್ಲಿ ನಾಶವು ಘಟಿಸಿದರ ದೇಶದ ಮುಂದಿನ ವೇಷವನ್ನು ಪರಕೀಯರ ಮುಂದೆ ಸಕೇಸವಾಗಿ ಇಡುವನು ಮಹಾ ಪುರುಷರೇ, ದಯಾಸಾಗರರೇ, ಕಾರ್ಯಜ್ಞಾನಿಗಳೇ, ಇಂದಿನವರೆಗೆ ಮುಂದಾಲೋಚನೆ ಇಲ್ಲದೆ, ಒರೆ ಒರದರೂ ಸರಕಾರ ಸಹಾಯ, ಮನೆಬಿದ್ದರೂ ಸರಕಾರ ಸಹಾಯಕ್ಕಾಗಿ ಪ್ರಜೆಗಳು ಬಾಯಿಬಿಡುತ್ತಿದ್ದರು. ಆದರೆ ಈ ಶಾಲೆಯನ್ನು ಜೀರ್ಣೋದ್ಧಾರ ಮಾಡಬೇಕಾದರೆ ಪ್ರಾರಂಭದ ಸರಕಾರದವರ ಸಹಾಯವನ್ನು ಕೊಡರು, ಅಷ್ಟೆ ತಪ್ಪೆ ಕೇಳಿಬಿಟ್ಟರ ನೇಶನಲ್ ಶಾಲೆಯಲ್ಲಿ ಓದಿ ಸರಕಾರಿ ಉದ್ಯೋಗಕ್ಕೆ ಪ್ರಯತ್ನಿಸಿದಂತಾಗುವುದು—ಅಂದರೆ ಆ ವಿದ್ಯದ ತತ್ವವು ನಿರುಪಯೋಗವುದು ಜಮೀನುದಾರರ ಸಂಘದಂತೆ ಇದು ದೇಶೀಯರೆಲ್ಲರ ಸ್ವಂತ ಸಾಧನೆ ಅದು ಇಂದು ಮಡುಬಿದೆವೆಂತ್ರಿ ಕೈಕಟ್ಟಿ ನಿಂತರೆ ನಾಳೆಬಾಡುವದು! ಸಾವಿದು ಉದುರುವುದು!! ಈ ರೀತಿ ರೋಗವು ಹೆಚ್ಚಿ ಸ್ವಶಾಲೆಯು ಮಣ್ಣಾಪಾಲಾದರೆ ಸ್ವರಾಜ್ಯಕ್ಕೆ ನಾವು ಅಯೋಗ್ಯರು ಮಾತ್ರವಲ್ಲದೆ ಪರಕೀಯರ ನಮ್ಮ ಮುಂದೆ ನಿಲ್ಲಲು ಬೇರಿಯವರು ಅಯೋಗ್ಯರೆಂದು ಚಂದ್ರಾರ್ಕ ಸಾಕ್ಷಿಯಾಗಿ ಶಿಲಾ ಶಾಸನಮಾಡಿ ಅಲ್ಲಲ್ಲಿ ನಡಿಸಿದಂತಾಯಿತು.

ಹೇಳಿದನೂತು ಹೆಚ್ಚಾಯಿತೇ? ಈ ದೇಶದವರು ಸ್ವರಾಜ್ಯಕ್ಕೆ ಅರ್ಹರೆಂದು ಉದಾಹರಣೆ ಸಹಿತ ತೋರಿಸೆಂದು ಕೇಳಿದರ ಏನನ್ನು ತೋರಿಸುವುದು? ಈ ಶಾಲೆ ಮತ್ತು ಜಮೀನುದಾರರ ಸಂಘಗಳರಡೆ ಮುಖ್ಯವಟ್ಟ ಅನೇಕ ದೇವಸ್ಥಾನಗಳ ಆದಾಯಗಳೂ ನಮ ವಿಜಾತೀಯರಾದ ಪರದೇಶೀಯರೂ ಆದ ಸರಕಾರದವರ ಕಂಕುಳಲ್ಲಿ ಇದೆ ಅದರಲ್ಲು ಈ ಶಾಲೆಯು ಮಾಯವಾದರೆ ಮತ್ತೇನು! ಜಮೀನುದಾರರ ಸಂಘ ನಮ್ಮ ಅಭಿಪ್ರಾಯದಲ್ಲಿ ಕೊಡಗಿನ ಕಾಂಗ್ರೆಸು ಪಥಿಕೂರಿನವರು ಇದರ ಸ್ಥಿತಿಗಳನ್ನು ನೋಡಿ ಸದ್ಯಕ್ಕೆ ಅದನ್ನು ಶಾಲೆಯಲ್ಲಿ ತರ್ಕಾಭ್ಯಾಸ ಮಾಡುವ ಸಭೆಗಳಿಗ ಸರಿ ಹೋಲಿಸಿರುವರು.

ಈ ಕಾರಣ ದೇಶದ ಹಿತೈಷಿಗಳೇ ಮುಂದಿಟ್ಟು ಯುವಕರು ಮುಂದಾಳೆಂದು ಹಿಂದಕ್ಕೆ ನಿಂತರೆ ಬಂದಿಯು ಹಳ್ಳಕ್ಕೆ ಉರುಳಿ ಪುಡಿ ಪುಡಿಯಾಗುವುದು, ಹಗಲು ಕೊಡಿ ಬೇರೊಂದು ಮಾತಿದೆ. ಕಲವು ದಿನಗಳಿಗೆ ಹಿಂದೆ ಈ ಶಾಲೆಯನ್ನು ಉದ್ಧಾರ ಮಾಡುವುದಕ್ಕ ಜಮೀನುದಾರರು ಒಂದು ಸಬ್ ಕಮಿಟಿಯನ್ನು ನೇಮಿಸಿದರು ಅವರಲ್ಲಿ ನನ್ನದೊಂದು ಅರಿಕೆ ಈ ಶಾಲೆಯ ಎಲ್ಲ ತತ್ವಗಳನ್ನು ಜನರಿಗೆ ತಿಳಿಯಪಡಿಸುವಂತೆ, ಇದನ್ನು ಯಾರು ಯಾವಾಗ ಮತ್ತು ಯಾವ ಉದ್ದಿಶ್ಯ ಸ್ಥಾಪಿಸಿದರು. ಯಾವ ಸ್ಥಿತಿಗಳನ್ನು ಅನುಭವಿಸಿದೆ, ಈ ದಿನ ಯಾವ ಸ್ಥಿತಿಯಲ್ಲಿದೆ, ಏನೇನು ಕಲಿಸುತ್ತಾರೆ, ಗುರುಗಳು ಯಾರು ಮತ್ತು ಯಾವ ರೀತಿಯಲ್ಲಿ ಪಾಠಗಳನ್ನು ಮಾಡುತ್ತಾರೆ ಮೊದಲಾದವುಗಳಿಗ ಉತ್ತರವನ್ನು ಬರೆಯಿಸಿ ಅಮೂಲ್ಯವಾದ 'ಕೊಡಗು' ಪತ್ರಿಕೆಯೊಡನೆ ಕಳುಹಿಸಿಕೊಟ್ಟರೆ ಆ ಮಹನೀಯರ ಕೆಲಸವು ಸುಲಭವಾಗುವುದು, ಅಲ್ಲದೆ ಯಥೇಷ್ಟ ಫಲಕಾರಿಯಾಗುವದು. ನನಗಿಂತ ತಿಳಿದಿರುವ ಈ ಮಹನೀಯರಿಗೆ ನಾನು ಅರಿಕೆ ಮಾಡಿರುವೆನಲ್ಲದೆ ಸೂಚನೆಕೊಟ್ಟನೆಂದು ತಿಳಿಯಬಾರದು.

ಈ ಚಳಿಯು ಇಲ್ಲಿನ ಮೂಲನಿವಾಸಿಗಳ ತಿಳುವನ್ನೇ ತಿಂದಿದೆ ಅಲ್ಲದೆ ಸದ್ಯ ಒಂದು ನೆಲಸಿದವರನ್ನು ನಹ ನೋಕಿದೆ ವೀರರಾಜಪೇಟೆಯಲ್ಲಿ ಇಂಗ್ಲೀಷು ಶಾಲೆಯೊಂದು ಒಳ್ಳೆ ಕೀರ್ತಿಪಡೆದ ಪ್ರೈಮರಿಶಾಲೆ ಕಲವು ವರ್ಷಗಳಿಗೆ ಹಿಂದೆ ವೀರರಾಜಪೇಟೆಯ ಲೋವರ್ ಸೆಕೆಂಡರಿ ಶಾಲೆಯಲ್ಲಿ ಕೊಂಚ ಚುರುಕಾದ ವಿದ್ಯಾರ್ಥಿಗಳನ್ನು ತಿಳಿದವರೆ 'ಚರ್ಚ್ ಸ್ಕೂಲಿನವ'ರೆಂದು ಹೇಳುತ್ತಿದ್ದರು, ಇತ್ತೀಚಿಗೆ ವೀರರಾಜೇಂದ್ರಪೇಟೆ ಶಾಲೆಯಿಂದ ಮಡಿಕೇರಿಗೆ ಹೋದವರನೇಕರು ಯೂನಿವರ್ಸಿಟಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವರು ಕೀರ್ತಿಯನ್ನು ಪಡೆದು ದೇಶೋಪಕಾರ ಮಾಡಿದ ಈ ಶಾಲೆಗೂ ನಮ ಮೆಲ್ಲಗೆ ಕ್ಷಯ ಸೋಕಿದಂತಿದೆ ಇದು ಕ್ರೈಸ್ತರ ಶಾಲೆ, ಅವರಿಗೆ ಏನು ಕಮ್ಮಿ. ಲೋಕದಲ್ಲಿ ಈ ಜಾತಿಯವರೇ ಹೆಚ್ಚು ಅವರ ಶಾಲೆಗಳು ಸರಕಾರಿ ಕಾಲೇಜುಗಳಿಗಿಂತ ಹೆಚ್ಚಾಗಿಯೂ ಉತ್ತಮವಾಗಿಯೂ ಇವೆ. ಈ ಊರಿನ ಜನರು ಅವರ ಶಾಲೆಯ ಬಡತನದ ವಿಷಯ ಪತ್ತೆರದಲ್ಲಿರುವ ಕ್ರೈಸ್ತರ ಕಾಲೇಜನ್ನು ಕೇಳಿಕೊಂಡರೆ ಒಡನೆಯೆ ಇದನ್ನು ಹೈಸ್ಕೂಲು ಮಾಡಿದರೂ ಮಾಡಬಹುದು? ಆದರೆ ಈ ಕೆಲಸ ಯಾರಿಂದ ಜರಗಬೇಕು ಆ ಜನಾಂಗದವರಲ್ಲಿ ವಿದ್ಯೆ ಕಲಿತು ಸೋಮಾರಿತನವೆಂಬ ಚಳಿಗೆ ತುತ್ತಾಗದವರು ಹೆಚ್ಚು ಜನ ಪರ ದೇಶಕ್ಕೆ ಹೋಗಿರುವರು ಅನೇಕ ಜನರು ವಿದ್ಯಾ ಗಂಧವನ್ನೇ ಅರಿಯದೆ ಇತರ ಪ್ರವೃತ್ತಿಗಳನ್ನು ಅವಲಂಬಿಸಿರುವರು ಕೆಲವರು ಐಶ್ವರ್ಯವಂತರಾಗಿಯೂ ವಿದ್ಯಾವಂತರಾಗಿಯೂ ಇಲ್ಲಿಯೇ ನೆಲಸಿರುವರು. ಈ ಬಡಶಾಲೆಯನ್ನು ಪೂರ್ಣ ಮರೆತಿರುವರು ಇವರು ಐಶ್ವರ್ಯದಿಂದ ಈ ಬಡತನದ ಶಾಲೆಯನ್ನು ಮರೆತಿರುವರೆಂದು ದೂರು ಹೊರಿಸಿದರೆ ನಾನು ತಪ್ಪುದಾರನಾಗುವೆನು—ಇದಕ್ಕೆ ಕಾರಣ ಕರುಳನ್ನು ಕತ್ತರಿಸುವ ಶೀತವೆಂಬ 'ಸೋಮಾರಿ'.

ಮತ್ತೊಂದು ಜನಾಂಗದವರನ್ನು ಪರಿಶೀಲಿಸುವ. ಇವರು ವ್ಯಾಪಾರಸ್ಥರಾದುದರಿಂದ ದೇಶದ ಚಲಾವಣೆಯ ಹಣವೆಲ್ಲ ಇವರ ಹಸ್ತವಿದೆ ಈಗ ಕೊಡಗಿನಲ್ಲಿರುವ ಮೂರು ನಾಲ್ಕು ಮಹಮ್ಮದಿ ಶಾಲೆಗಳು ಸರಕಾರದವರವೆ ಇವರ ಮತ ಸಂಬಂಧ ಈ ರೀತಿಯ ಶಾಲೆಗಳಲ್ಲಿ ವಿದ್ಯಾರ್ಜನೆಮಾಡ ವುದಕ್ಕೆ ಕೆಲವರಿಗ ಜಿಗುಪ್ಸೆ ಇಲ್ಲಿಯ ಮಹಮ್ಮದೀಯರಂತೆ ತೋಟ ಗದ್ದೆ ಮತ್ತು ವ್ಯಾಪಾರ ಮೊದಲಾದವುಗಳ ಒಡೆಯರಾಗಿದ್ದರೆ ಅವರು ಕಾಲೇಜು ಕಟ್ಟಿಸುತ್ತಿದ್ದರು. ಇವರು ಅನುಕೂಲಸ್ಥರೆಂಬುದು ವೀರರಾಜಪೇಟೆಯಂಥ ಸಣ್ಣ ಪಟ್ಟದಲ್ಲಿ ಅವರು ಕಟ್ಟಿಸಿದ ನಾಲ್ಕೈದು ಗುಡಿಗಳೇ ಉದಾಹರಣೆಗಳು. ಈ ದೇಶದ ಶೀತದ ಕಾರಣವು ಅವರಿಗೆ ಒಟ್ಟಾರೆ ವಿದ್ಯದಮೇಲೆ ಹೆಚ್ಚು ಆಸಕ್ತಿ ಇಲ್ಲದ ಕಾರಣ ಅವರ ಕೀರ್ತಿಯನ್ನು ಉಳಿಸಿಕೊಳ್ಳಲು ಒಂದು ಶಾಲೆ ಇಲ್ಲ. ಆದರೆ ಮಹಮ್ಮದೀಯ ಐಶ್ವರ್ಯವಂತರಲ್ಲಿ ಈ ಅಭಿಪ್ರಾಯ ಒಳ್ಳೆಯದೆಂದು ತಿಳಿದು ಬಂದರೆ ತ್ವರೆಯಲ್ಲಿಯೇ ಒಂದು ಶಾಲೆಯನ್ನು ಕಟ್ಟಿಸುವರು.

ಆದರೆ ಈ ಸರ್ವನಾಶಕಾರಣವಾದ, ಸೋಮಾರಿತನವನ್ನು ಅಥವ ಚಳಿಯನ್ನು 'ದೂರ ಸಾರೊ, ದೂರ ಸಾರೊ, ನೀಚನೆ' ಎಂದು ಹಾಡುವನೂತು ಕೇಳುತ್ತಿದೆ. ಸೂಕ್ಷ್ಮದರ್ಶಿಗಳಿಗೆ ಈ ಕೂಗಿಗೆ ದೂರದಲ್ಲಿ ಆಗುವ ಉಜ್ವಾಟನೇ ಕಾರಣವೆಂದು ತಿಳಿದು ಬಂದಿದೆ ಈ ಸ್ಥಳದಲ್ಲಿ ಅವಶ್ಯವಿರುವಷ್ಟು ಶಕೆಯು ಹುಟ್ಟಿದರೆ ಈ ದೇಶದ ನಿವಾಸಿಗಳ ಸೋಮಾರಿತನವೆಂಬ ಚಳಿಯು ನಾಶವಾಗುವದು. ಆದರೆ ಇದು ಹರಿದು ಹಬ್ಬದರೆ ದೇಶವು ದಹಿಸಲ್ಪಡ್ಪ ಬೆಂಕಿಯು ಸಾಕು ಅಲ್ಲದೆ ಬೆಂಕಿಯ ಉದ್ಭವ ಸ್ಥಾನವು ಪೂರ್ಣವಾಗಿ ಕಣ್ಮರೆಯಾಗಲು ಬಹುದು. ಆ ಉಷ್ಣವು ಯಾವದೆಂದರೆ, ಕಾಲಕಾಲಾಂತರದಿಂದ ಹಿಂದುಳಿದವರೆಂಬ ಮರ್ಯಾದೆಯ ಹಸರನ್ನು ಧರಿಸಿಕೊಂಡವರಿಗೂ ಅವರಿಂದಲೇ ಮುಂದೆ ಸರಿದವರೆಂದು ಹೇಳಲ್ಪಟ್ಟವರಿಗೂ ಆಗುವ ಉಜ್ವಾಟ ಇದು ಸಾಮಾನ್ಯವೆಂದು ನೆನಸಬೇಡಿ! ಇದು ಮೂರು ನಾಲ್ಕು ವರುಷಗಳಿಂದಲೇ ಊರಲ್ಲಿ ಹಬ್ಬಿದೆ. ಹಿಂದುಳಿದವರನ್ನು ಮುಂದಕ್ಕೆ ತರುವ ಅಭಿಪ್ರಾಯದಿಂದ ಕೂಲಿ ಕೆಲಸಕ್ಕೆ ಕರದರೆ, ಕರೆಯುವವನು ಮುಂದೆ ನಡದ ಪಂಗಡದವನಾದರೆ "ನನ್ನಿಂದಾಗದು, ನಿಮ್ಮವರಲ್ಲಿ ಕೂಲಿಮಾಡುವದಕ್ಕಿಂತ ಒರೆಹೊಟ್ಟೆಯಲ್ಲಿ ಮಲಗುವೆನು" ಎಂದಾಡಿರುವರು ಅದರ ಒಗಟಕ್ಕಿಂತ ಜಟಿಲ ದೊಡ್ಡಪಾದ್ದರಿಂದ ಮಾತಿನಂತೆ ಕಾರ್ಯವಿಲ್ಲ ಈ ಒಗ್ಗಟ್ಟಿಗೆ ಮೂಲ ಕಾರಣವನ್ನು ವಾಚಕರೇ ಆಲೋಚಿಸಿ ಯಾವ ದೇಶವನ್ನು ನೋಡಿದರೂ ಜನರು ಪಂಗಡವಾದಲ್ಲದೆ ದೇಶ ಉದ್ಧಾರವಾಗಲಿಲ್ಲ ಈ ವಿಶೇಷವಾದ 'ಹಿಂದುಳಿದ' ಎಂಬ ಬಿರುದನ್ನು ಧರಿಸಿರುವ ಪದ್ಧಾರಿಗಳಲ್ಲಿ ಒಬ್ಬಿಬ್ಬರು ಮದ್ರಾಸಿನಲ್ಲಿ ಜೀವನೋಪಾಯವನ್ನು ಹುಡುಕುತ್ತಿರುವರು ಹಲಕೆಲವರು ದಕ್ಷಿಣಕನ್ನಡದಿಂದ ಇಲ್ಲಿಗೆ ಹೊಟ್ಟೆಹೊರೆಯಲಿಕ್ಕೆ ಬಂದವರು, ಅಲ್ಲದೆ ಇಲ್ಲಿಯೇ ವಾಸಮಾಡುವವರಲ್ಲಿ ಹಚ್ಚಿ ಉಡುವವರೆಂತಲೂ ಕುಪ್ಪಸ ತೊಡುವವರೆಂತಲೂ ಎರಡು ಪಂಗಡ ಈ ತರತರದವರು ದೇವರ ಕೃಪೆಯಿಂದ ಒಂದಾದರೆ ಅಂದೇ ಸುದಿನ ದೇಶವು ಉಚ್ಛ್ರಾಯ ಸ್ಥಿತಿಗೆ ಬರುತ್ತದೆ ಎಂಬುದಕ್ಕೆ ಇದೇ ಸಾಕ್ಷ್ಯ.

ಈ ಹಿಂದುಳಿದವರಲ್ಲ ಒಂದಾಗಿ ಆಚಾರದಲ್ಲಿಯೂ ಸೋಮಾರಿತನದಲ್ಲಿಯೂ ಮಾತ್ರ ಮುಂದೆ ನಡದ ಪಂಗಡದವರ ಮೇಲೆ ಬಿದ್ದರೆ ಅದು ನೋಡಲಿಕ್ಕೆ ಬಹಳ ಚಂದ, ಮನಸ್ಸಿಗೆ ಆನಂದ ಈ ನಾಲ್ಕು ಭಾಗದವರು ಹೇಗಾದರಂತೆ ಧ್ವಾನ? ವಿಪ್ರಯನ್ನು ಮಾಡುತ್ತಿರುವ ಇಲ್ಲಿಯ ಒಬ್ಬ ನಿವಾಸಿಗಳ ಮೇಲೆ ಒಲಿಯನ್ನೊತ್ತಿ ಬೆಂಕಿಹಾಕಿ ಚಳಿಯೋಜನವನ್ನು ಮಾಡುವ ಅಭಿಪ್ರಾಯದಲ್ಲಿದ್ದಾರೆ ಈ ಬೆಂಕಿಯ ಉಷ್ಣಕ್ಕಾದರೂ ಆ ಚಳಿಯು ಹೋಗದೆ? ಅಂದಿನವರೆಗೆ ಈ ದೇಶವು ಚಳಿಯ ಮತ್ತು ಕತ್ತಲೆಯ ಸುಖವನ್ನು ಅನುಭವಿಸುವುದು. ದೇವರ ದಯೆಯಿಂದ ಈ ಬೆಂಕಿಯು ಹಬ್ಬಲಿ, ಮಿತಿಯಾಗಿ ಹಬ್ಬಿದರೆ ಜಮೀನ್ದಾರರ ಸಂಘ, ಸ್ವದೇಶೀಯ ಶಾಲೆ, ಕೊಡಗು ಪತ್ರಿಕೆ, ಪ್ರತಿಷ್ಠಿತವಾಗಿರುವ ವಿದ್ಯಾಭಿವೃದ್ಧಿ ಸಂಘ ಮತ್ತು ಮೂಲೆಗೆ ಹಾಕಲ್ಪಟ್ಟ ಕೊಡಗು ಸಭೆ ಮೊದಲಾದುವುಗಳಿಗೆ ಹೊಸ ತೇಜಸ್ಸು ಬರುವದು.

ಆ ದಿನ ಕೊಡಗು ಯುವಕರು ಮುಂದೆ ಬಂದರೆ ಹೊಸ ಕಟ್ಟೆಂದು ಗಣಿಸಿಕೊಳ್ಳಬಹುದು.

'ಸರಸ್ವತಿ'

ಕೊಡಗಿನ ವಿದ್ಯಾಭಿವೃದ್ಧಿ ಸಂಘ.

ಮಹನೀಯರೆ,

ಕೊಡಗಿನ ವಿದ್ಯಾಭಿವೃದ್ಧಿ ಸಂಘವು ಹೊರಟದ್ದು ಆದರಿಂದ ನಮ್ಮ ದೇಶದವರಿಗೆ ಉಂಟಾದ ಪ್ರಯೋಜನವೂ ಎಲ್ಲರಿಗೂ ತಿಳಿದಿರಬಹುದಾಗಿರುವ ಕಾರಣ ಅದನ್ನು ನಾನು ಇಲ್ಲಿ ವಿವರಿಸಬೇಕಾದ ಅವಶ್ಯವಿಲ್ಲ. ಆದರೆ ಈಚೆಗೆ ಅದರಲ್ಲಿ ಹಣವು ಕಡಿಮೆಯಾಗಿರುವ ಕಾರಣ ಹೆಚ್ಚಿನ ಜನರಿಗೆ ಪ್ರಯೋಜನವಾಗುವದಿಲ್ಲವೆಂದು ತಿಳಿದು ತುಂಬಾ ವ್ಯಸನಪಡುತ್ತೇನೆ. ಇದರ ಹೀನಸ್ಥಿತಿಗೆ ಕಾರಣವೇನೆಂದು ವಿಚಾರಿಸಲು ಈಗ ಈ ಸಂಘಕ್ಕೆ ಹಣ ವಸೂಲು ಮಾಡಲು ಯಾರೂ ಹೆಚ್ಚಿನ ತೊಂದ್ರೆಯನ್ನು ತೆಗೆದುಕೊಳ್ಳುವದಿಲ್ಲವೆಂಬದಾಗಿ ತಿಳಿದೆನು. ಇದಕ್ಕೆ ಕಾರಣವೇನಿರಬಹುದೆಂದು ನಾನೇ ಸ್ವಲ್ಪ ಆಲೋಚಿಸಲು ಕೆಳಗಿನ ವಿಷಯವು ಗಣನೆಗೆ ಬಂತು. ಅದೇನೆಂದರೆ —ಈ ಸಂಘವನ್ನು ಹೊರಡಿಸಲು ಕೊಡಗಿನ ಈಗಿರುವ ಮತ್ತು ಕಳೆದು ಹೋದ ಕೆಲವು ಪುಣ್ಯಾತ್ಮರಾದ ಮುಂದಾಳುಗಳೇ ಕಾರಣರಾಗಿದ್ದರು. ಆ ಮೇಲೆ ಈಚೆಗೆ ಈ ಸಂಘದ ಸಹಾಯದಿಂದ ಓದಿ ಪಾಸಾಗಿ ಬಂದ ಕೆಲವು ವಿದ್ಯಾವಂತರು (graduates) ಈ ಮುಂದಾಳುಗಳಿಗೆ ವಿರೋಧವಾಗಿ ಕೆಲವು ಸಂಗತಿಗಳಲ್ಲಿ ಅವರನ್ನು ಗಣನೆಗೆ ತಾರದೆ ತಮ್ಮ ಇರಾದೆಯೇ ದೊಡ್ಡದೆಂದು ಸಂಗಡ ಭೇದವನ್ನುಂಟುಮಾಡಲು ಎಡೆಯನ್ನು ಕೊಟ್ಟದ್ದು. ಇದರಿಂದ ಈ ಮುಂದಾಳುಗಳು ನಮ್ಮಿಂದ ಸಹಾಯ ಹೊಂದಿ ಓದಿ ಬಂದವರೆಲ್ಲಾ ಇದೇ ರೀತಿ ನಮ್ಮ ಮೇಲೆ ಸವಾರಿ ಮಾಡಬಹುದಾದ ಕಾರಣ ನಾವೇಕೆ ಈ ಸಂಘಕ್ಕೆ ಇನ್ನು ಹೆಚ್ಚಾಗಿ ತೊಂದರೆಯನ್ನು ತೆಗೆದುಕೊಳ್ಳಬೇಕೆಂದು ಬಿಟ್ಟಿರಬಹುದು. ಆದರೆ ಈ ಯುವಕರು ತಾವಾದರೂ ಈ ಸಂಘವನ್ನು ಮುಂದಕ್ಕೆ ನಡೆಸಬೇಕೆಂದು ಯಾರೂ ಯೋಚಿಸಿರಲಿಕ್ಕಿಲ್ಲ. ಆದರೆ ಇಂಥಾ ಸಂಘವನ್ನು ಮೂಲೆಗೆ ಒತ್ತಿಬಿಡುವದು ಬಹು ವ್ಯಸನಕರವಾದ ಸಂಗತಿಯಾಗಿರುವ ಕಾರಣ ಈ ಮೊದಲು ಸಂಘದಿಂದ ಸಹಾಯವನ್ನು ಹೊಂದಿ ಓದಿಬಂದ ಯುವಕರು ತಾವು ಪೋಲೀಸ್ ಕಾನ್‌ಸ್ಟೇಬಲ್‌ಗಳ ಮತ್ತು ಫಾರೆಸ್ಟು ಗಾರ್ಡುಗಳ ಸಹ ಸಹಾಯದಿಂದ ಓದಿ ಬಂದೆವು ಎಂಬದನ್ನು ಮರೆಯದೆಯೂ ಮತ್ತು ತಮ್ಮಂತೆಯೇ ತಮ್ಮ ಹಿಂದೆ ಬರುವವರು ಸಹ ಇಂಥಾ ಸಹಾಯವನ್ನು ಹೊಂದಬೇಕೆಂಬದನ್ನು ಮನಸ್ಸಿನಲ್ಲಿಟ್ಟುಕೊಂಡು ಮೊದಲಿನಂತೆಯೇ ಎಲ್ಲರಿಂದಲೂ ಅವರವರ ಶಕ್ತ್ಯಾನುಸಾರವಾದ ಚಂದವನ್ನು ವಸೂಲ್ಮಾಡಿ ಸಂಘವನ್ನು ಅಭಿವೃದ್ಧಿಪಡಿಸುವರಾಗಿ ನಂಬುವ,

ಹಿತಚಿಂತಕ.

ಪ್ರಕಟಣೆ.

ಈ ಸಂದರ್ಭವನ್ನು ಕಳಕೊಳ್ಳಬೇಡಿರಿ.

ಮಡಿಕೇರಿ ದೇಚೂರು ಬ್ಲಾಕಿನಲ್ಲಿ ಕೃಷಿಸ್ಥಳವಾಗಿ ಒಂದು ಏಕರು ಕಾಪಿತೋಟದಿಂದ ಕೂಡಿದ ಒಂದು ಹಂಚುಹಾಕಿದ ಮನೆಯುತ್ತು ಅಡಿಗೆಮನೆ ಇನ್ನು ಮನೆ ಕಟ್ಟಲಿಕ್ಕೆ ಎತ್ತರ ಜಾಗದಲ್ಲಿರುವ ಮನೆವಠವು ಸಹ ಮಾರಲಿಕ್ಕೆ ಇಟ್ಟಿದೆ. ಖಾಯಿಷ್‌ದಾರರು ಶೀಘ್ರದಲ್ಲಿಯೇ ಈ ಕೆಳಗಿನವರಿಗೆ ದಯವಿಟ್ಟು ಬರಕೊಳ್ಳುವದು

C. Clo EDITOR,
"*Kodagu*" MERCARA.

12—1

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ ಅವರಿಗೆ ರಶೀತಿ ಪುಸ್ತಕಗಳನ್ನು ನಮ್ಮ ಏಜಂಟರು ಮ. ಕೋಟೀರ ಚಿಣ್ಣಪ್ಪನವರ ಜವಾಬುದಾರಿಕೆಯಮೇಲೆ ಕೊಡಲಾಗಿದೆ ದಯವಿಟ್ಟು ಚಂದಾದಾರರೆಲ್ಲರೂ ಅವರವರಿಗೆ ಅನುಕೂಲವಿರುವ ಜಾಗದಲ್ಲಿ ಪಾವತಿಮಾಡಬೇಕಾಗಿ ಕೋರಿಕೆ.

ಏಜಂಟರುಗಳು.

ವೀರಾಜಪೇಟೆ—ಮ. ಕೆ. ಚಿಣ್ಣಪ್ಪನವರ ಆಫೀಸಿನಲ್ಲಿ.
ಮೂರ್ನಾಡು—ನ್ಯಾಷನಲ್ ಸ್ಟೋರಿನಲ್ಲಿ ಮ. ಮಗೆಯಂಡ ದೇವಯ್ಯನವರು.
ನಾಪೋಕ್ಲು—ಮ. ಪೊನ್ನಚಂಡ ಮುದ್ದಪ್ಪನವರು.
ಗೋಣಿಕೊಪ್ಪಲು—ಮ. ಮುಕ್ಕಾಟೀರ ಪೂಣಚ್ಚನವರು.
ಪೊನ್ನಂಪೇಟೆ—ಮ. ಪುತ್ತಮನೆ ಮುದ್ದಮ್ಮೈಯ್ಯನವರು.
ಸುಂಟಿಕೊಪ್ಪ—ಮ. ಜಿ. ದೊಡ್ಡಮ್ಮನವರು.
ಅಮ್ಮತ್ತಿ ಸಿದ್ದಾಪುರ—ಮ. ಬಿಸಿಲ ಮೊಣ್ಣಪ್ಪನವರು.
ಮ. ಚಂಗಿಚಂಡ ಕುಟ್ಟಪ್ಪನವರು.

ಕೋಡಂಡ ಅಪ್ಪಯ್ಯ.
ಆಗ್ನಸ್ಟೆಜಿಂಗ್ ಡೈರೆಕ್ಟರ, "ಕೊಡಗು" ಲಿಮಿಟೆಡ್.

ನೋಟೀಸು.

ಇದೀಗ ತಕ್ಕ ಸಮಯು

ತಡಮಾಡಬೇಡಿರಿ! ಕಳಕೊಳ್ಳಬೇಡಿರಿ!!

ಮಗ್ಗುಲಗ್ರಾಮದ ಲೇಟ್ ಚೋವಂಡ ಸೋಮಯ್ಯನವರ ಹೆಸರಿನಿಂದ ನನ್ನ ಹೆಸರಿಗೆ ವರ್ಗಾಯಿಸಲ್ಪಟ್ಟಿರುವ ಐದುವರೆ ಏಕರು ಉತ್ತಮವಾದ ಭೂಮಿ ಅದಕ್ಕೆ ಸೇರಿದ ಬಾಣೆಸಹ ಮಾರಾಟಕ್ಕೆ ಇಟ್ಟಿದೆ. ಕ್ರಯ ರೂ. 3,500, ಯಾ, ಸಮೀಪದ ಮೊಬಲಗು. ಈ ಸೊತ್ತು ವೀರಾಜಪೇಟೆ ಅಮ್ಮತ್ತಿ ರಸ್ತೆಯ ಸಂಕದ ಕಟ್ಟೆಯ ಸಮೀಪವಿದೆ. ಹೆಚ್ಚಿನ ವಿವರಕ್ಕೆ ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳುವುದು.

ಪುಲಿಯಂಡ ಮುದ್ದೈಯ್ಯ,
ಪ್ಲಾಂಟರ್, ಮೇಕೂರು ಎಸ್ಟೇಟ್,
2.1 ಪೊಳ್ಳಿಬೆಟ್ಟ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೊ ಆಪರೇಟಿವ್ ಸೊಸೈಟೀಸ್ ಆಕ್ಟ್ಸು ಪ್ರಕಾರ ರಿಜಿಸ್ಟರಾಗಿದೆ.

		ರೂ.
ಶೇರ್ ಬಂಡವಾಳ	....	50,000
ವಸೂಲಾದ ಶೇರ್ ಮೊಬಲಗು	....	7,720
ಜಮೆಬಂದ ಠೇವಣಾತಿ	....	61,200

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 6–4–0ರ ದರವಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 5ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟು ಮಾಡುತ್ತಾರೆ.

ಪ್ರೆಸಿಡೆಂಟರು,
ಕೊಡಂದೇರ ಕುಟ್ಟಯ್ಯನವರು, ರಾಯ್ ಬಹದ್ದೂರ್.

ಟ್ರೆಜರರ್.
ಯಂ. ಭುಜಂಗರಾಯರು. ಬಿ.ಎ, ಬಿ.ಎಲ್.

ಸೆಕ್ರೆಟರಿ.
ಸಿ. ಯಮ್. ವೆಂಕಪ್ಪಯ್ಯನವರು, ಬಿ.ಎ, ಬಿ.ಎಲ್

ತಾರೀಕು, 1—7—1924.

ಶ್ರೀ

ಶ್ರೀ ಧನ್ವಂತರಿ.

ಕನ್ನಡ ಆಯುರ್ವೇದ ಪಕ್ಷಪತ್ರಿಕೆ.

ಎಡಿಟರ್.—ವಿದ್ವಾನ್ ಕೆ. ಕೇಶವಶಾಸ್ತ್ರೀ ಆಯುರ್ವೇದರತ್ನಂ, ಇತ್ಯಾದಿ.

ದೇಶೀಯ ವೈದ್ಯವನ್ನು ಸರ್ವ ಸಂಪೂರ್ಣಾಭಿಪ್ರಾಯದಿಂದ ಕನ್ನಡ ನಾಡಿನಲ್ಲಿ ಪ್ರಕಟಿಸುವ ಮೊದಲನೇಯ ಪತ್ರಿಕೆ ಎಂದರೆ! ಇದೇ. ಆರೋಗ್ಯವಂತನಾಗಿ ಬಹುಕಾಲ ಬದುಕಿರಬೇಕೆಂದು ಯೋಚಿಸುವ ಪ್ರತಿಯೊಬ್ಬನಿಗೂ ಈ ಪತ್ರಿಕೆಯು ಬೇಕೇಬೇಕು. ವ್ಯಾಧಿ ಬಂದಾಗ ತಕ್ಷಣ ತಿಳಿದುಕೊಳ್ಳುವಂತೆ ಆಯಾ ರೋಗಲಕ್ಷಣ ಚಿಕಿತ್ಸೆಗಳು ಬರೆಯಲ್ಪಡುವುದರಿಂದ ಮುಖ್ಯವಾಗಿ ಸ್ತ್ರೀಯರೂ ಹಳ್ಳಿಯವರೂ ಈ ಪತ್ರಿಕೆಯನ್ನು ಓದಲೇ ಬೇಕು. ವಿಶೇಷವೇನು? ಮನೆಯಲ್ಲಿ ಈ ಪತ್ರಿಕೆ ಇದ್ದರೆ ಒಬ್ಬ ಗುರುವೂ, ವೈದ್ಯನೂ ಇದ್ದಂತಾಗುವುದು.

ವಾರ್ಷಿಕ ಚಂದಾ ಮೂರು ರುಪಾಯಿ.

ವಿಳಾಸ—

ಮೇನೇಜರ್, ಶ್ರೀ ಧನ್ವಂತರಿ, ಶೃಂಗೇರಿ, ಮೈಸೂರುಸ್ಟೇಟ್.

ಪ್ರಕಟಣೆ.

ಒಂದು ಕಡೆ ಇಂಗ್ಲೀಷಿನಲ್ಲಿಯೂ, ಇನ್ನೊಂದು ಕಡೆ ಕನ್ನಡದಲ್ಲಿಯೂ ಪ್ರಿಂಟಾಗಿರುವ ಕಾಪಿ ತೋಟದ ಕೂಲಿಗಳ ಬ್ರಿಂಡಾವು ಕಂಟ್ರಾಕ್ಟು ಎಗ್ರಿಮೆಂಟ್ ಫಾರಮುಗಳೂ ಮತ್ತು ಅಪ್ಲಿಕೇಶನ್ (complaint) ಫಾರಂಗಳೂ ಸಹ ಮಾರಾಟಕ್ಕೆ ತಯಾರಿವೆ. ಬೇಕಾದವರು 'ಕೊಡಗು' ಆಫೀಸಿನಿಂದ ಪಡಕೊಳ್ಳಬಹುದು.

ಮಡಿಕೇರಿ
17.9.24. ಮೇನೇಜರ್.

ARMS & AMMUNITION MART.

Mahomedally-Noorbhoy.

337, Abdul Rehman, Street, near
Crawford Market, BOMBAY.
Telegraphic Address :- "SHOOTER"
Bombay.

[24-13] Please write for latest Catalogues.

ಸಂಪತ್ತಿಯ ಸಾಧನಗಳು.

ಅಯ್ಯಾ ಬಂಧುಗಳೇ ಸಂಪತ್ತಿಯು ಅನ್ಯತ್ರ ಇಲ್ಲ ಕಾಕರಯಲ್ಲಿರದೆ ನಿಮ್ಮ ಭೂಮಿಯಲ್ಲಿಯೇ ಅಡಗಿರುವದು ಅದನ್ನು ಶೋಧಿಸಿ ತೆಗೆಯಲು ಕಿರ್ಲೋಸ್ಕರ ವ್ಯವಸಾಯ ಮುಟ್ಟುಗಳೇ ಯೋಗ್ಯವಾದ ಸಾಧನಗಳು.

ಲಕ್ಷಾವಧಿ ರೈತರು ಹೂಡಿ ಅನುಭವ ತೆಗೆದುಕೊಂಡಿರುವರು ಭೂಮಿಯತಕ್ಕ ತರತರದ ನೇಗಿಲುಗಳೂ ಯಂತ್ರಗಳೂ ದೊರೆಯುತ್ತವೆ. ಕಿಸಾನ ಗಾಣವು ಒಂದು ಗಂಟೆಗೆ ೪೦೦ ಪೌಂಡು ಕಬ್ಬನ್ನು ಹಿಂಡುತ್ತದೆ.

"ಕೆ" ಎಂಬ ಕ್ಯಾಟಲಾಗನ್ನು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್,
16 7 ಕಿರ್ಲೋಸ್ಕರವಾಡಿ, ಜಿಲ್ಲಾ, ಸಾತಾರಾ.

ನೋಟೀಸ್.

"ಕೊಡಗು" ಪತ್ರಿಕೆಯ ಹಳೆ ಚಂದಾಹಣ ಕೊಡಲಿಕ್ಕಿರುವವರೂ, ಹೊಸ ಚಂದಾದಾರರಾಗ ಬೇಕೆಂದಿರುವವರೂ, ಮತ್ತು ಶೇರುಹಣ ಸಲ್ಲಿಸಮಾಡಲಿಕ್ಕಿರುವವರೂ ದಯವಿಟ್ಟು ವೀರಾಜಪೇಟೆಯಲ್ಲಿರುವ ನಮ್ಮ ಕಂಪೆನಿಯ ಏಜಂಟರವರ ಆಫೀಸಿನಲ್ಲಿ ಪಾವತಿಮಾಡಬೇಕಾಗಿ ಕೋರಿಕೆ.

ಮಡಿಕೇರಿ,
15-9-24.

ಮೇನೇಜರ್,
'ಕೊಡಗು' ಲಿಮಿಟೆಡ್.

ಹಳೆ ವಿದ್ಯಾರ್ಥಿಯರ ತ್ರೈಮಾಸಿಕ.

ಸಂಪುಟ 2] ವರ್ಷದ ಚಂದಾ ಒಟ್ಟೇ ರೂ. 1-4-0 [ಸಂಚಿಕೆ 1
ಸಂಪಾದಕ = ಪಿ. ಬಿ. ಮೇದಪ್ಪ, ಬಿ ಎ., ಬಿ ಎಲ್ ಎಂ ಎಲ್ ಸಿ

ಈ ಸಂಚಿಕೆಯಲ್ಲಿ ಮನೋಹರವಾದ ಕೊಡಗಿನ ಪವಿತ್ರ ಸ್ಥಳವಾದ ಶ್ರೀ ಮೂಲ ಕಾವೇರಿಯ ಚಿತ್ರಗಳಿವೆ.

1. ಶ್ರೀ ಕಾವೇರಿಯ ಜನ್ಮ, ಅವತಾರ.
2. ಸರಕಾರಕ್ಕೆ ಸಾಲವೆಂದರೇನು?
3. ಪೊಲಿಟಿಕ್ಸ್ ಅಂದರೇನು?
4. ವಿಚಾರಾಯಿ.

ಇವೇ ಮುಂತಾದ ಬಹು ಸ್ವಾರಸ್ಯದ ವಿಷಯಗಳಿವೆ.

ಮೇನೇಜರ್,
ಓ. ಎಸ್. ಎಸೋಸಿಯೇಷನ್,
ಮಡಿಕೇರಿ.

Printed & published by Kodanda Appayya, R.B., Chairman, Board of Directors, at "Kodagu" Press, Mercara for "Kodagu" Ltd.

"KODAGU" OFFICE, MERCARA.
If not delivered please return to

ಕೊಡಗು.

ಜಕ್ಯೇನ ಜೀವನಯುಯ ವಿದ್ಯಾ ನೀತಿ ಪ್ರಯುಕ್ತಕಾಃ || ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ ||

ಎಡಿಟರ್ ಪಂದ್ಯಂಡ ಐ. ಬೆಳ್ಳಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೪] ಕೊಡಗು, ಸ೯ ೧೯೨೪ನೇ ಇಸವಿ ಡಿಶಂಬರ್ ತಾರೀಕು ೫ನೆಯ ಶುಕ್ರವಾರ [ಸಂಚಿಕೆ ೨೬

ಆರೋಗ್ಯ ಚಂದ್ರಿಕೆ.

ಮದ್ರಾಸ್

ಸಂಪಾದಕರು ಡಾಕ್ಟರ್ ಯು ರಾಮರಾವ್,
ಯಮ್. ಎಲ್ ಸಿ ಯವರು

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಶುಚಿತ್ವದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ ಈ ಮಾಸಪತ್ರಿಕೆಯು 'ಹೆಲ್ತ್' ಎಂಬ ಇಂಗ್ಲಿಷ್ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಗೆ ಪ್ರಕಟವಾಗುವವು.

ಆರೋಗ್ಯ ಚಂದ್ರಿಕೆಯಲ್ಲಿರುವ ಲೇಖನಗಳು ಹಳೆಯದಾಗದೆ ಪುನಃ ಪುನಃ ಓದಲು ಅರ್ಹವಾದವುಗಳಾಗಿರುವವು. ಆರೋಗ್ಯ ಚಂದ್ರಿಕೆಯನ್ನು ಶೇರಿಸಿ ಬೈಂಡ್ ಮಾಡಿಸಿ ಇಟ್ಟುಕೊಂಡರೆ ಎಲ್ಲರಿಗೂ ಉಪಯುಕ್ತವಾಗುವ ಅಮೂಲ್ಯವಾದ ಗ್ರಂಥವಾಗುವದು ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ 1-8-0 ಬಿಡಿ ಪತ್ರಿಕೆ 1ಕ್ಕೆ 0-2-0 ಹಿಂದಿನ ಸಂಚಿಕೆಗಳು ಕೂಡಾ ದೊರೆಯುವವು.

ಪತ್ರವ್ಯವಹಾರಕ್ಕೆ 'ಆರೋಗ್ಯ ಚಂದ್ರಿಕೆ' 323,
ತಂಬುಶೆಟ್ಟಿ ಬೀದಿ, ಮದ್ರಾಸ್

"ಕೊಡಗು"

ರಾಜಕೀಯ, ವಿದ್ಯಾ, ಕೃಷಿ, ವೃತ್ತಿ ವಿಜ್ಞಾನ, ಮತ್ತು ನೀತಿ ಮುಂತಾದ ವಿಷಯಗಳಿಂದೊಡಗೂಡಿದ ಕೊಡಗಿನ ವಾರ ಪತ್ರಿಕೆ.

1. ಪ್ರಕಟಣೆಗಳನ್ನು ಮೇನೇಜರ್ "ಕೊಡಗು' ಮಡಿಕೇರಿ, ಈ ವಿಳಾಸಕ್ಕೆ ಕಳುಹಿಸಬೇಕು 2 ಲೇಖನಗಳನ್ನು ಸಂಪಾದಕರು "ಕೊಡಗು' ಮಡಿಕೇರಿ ಈ ವಿಳಾಸಕ್ಕೆ ಕಳುಹಿಸಬೇಕು. 3. ಬಾತ್ಮಿದಾರರ ಅಭಿಪ್ರಾಯಕ್ಕೆ ಕೊಡಗು ಪತ್ರಿಕಾಕರ್ತರು ಜವಾಬ್ದಾರರಲ್ಲ 4. ನಮ್ಮಲ್ಲಿಗೆ ಕಳುಹಿಸುವ ಬಾತ್ಮಿಗಳು ಕಾಗದದ ಒಂದೇಕಡೆಯೂ, ಸ್ಪಷ್ಟವಾಗಿಯೂ, ಹೆಸರು ವಿಳಾಸಗಳಿಂದ ಕೂಡಿಯೂ, ಬರೆಯಲ್ಪಟ್ಟಿರಬೇಕು ಸ್ಥಳವು ದೊರೆತಂತೆಲ್ಲಾ ಈ ಪತ್ರಗಳು ಪ್ರಕಟಿಸಲ್ಪಡುವವು ಪ್ರಕಟಿಸಲಾಗದ ಬಾತ್ಮಿಗಳನ್ನು ಮರಳಿ ಕಳುಹಿಸುವ ಜವಾಬ್ದಾರಿಕೆಯನ್ನು ಸಂಪಾದಕರು ವಹಿಸಿಕೊಳ್ಳುವದಿಲ್ಲ

ಪ್ರಕಟಣೆಗಳು.

ಅತ್ಯಂತ ಸುಲಭವಾಗಿ ಹಾಕಲ್ಪಡುತ್ತವೆ. ಹೆಚ್ಚು ಸಂಗತಿಗೆ ಮೇನೇಜರಿಗೆ ಬರೆದು ತಿಳಿದುಕೊಳ್ಳಬಹುದು.

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ

ಕಲ್ಪತರು ತಾಯಿತ.

ಪರೀಕ್ಷೆ ಪಾಸಾಗೋಣ ಶರೀರಸುಖವಾಗೋಣ ನೌಕರಿ ಸಿಗೋಣ, ಸಂಬಳ ಹೆಚ್ಚೋಣ ವಿವಾಹವಾಗೋಣ ಸಂತತಿಯಾಗೋಣ, ಕೈಕೊಂಡ ಉದ್ಯೋಗದಲ್ಲಿ ಯಶಸ್ಸು ಸಿಗೋಣ, ವ್ಯಾಪಾರದಲ್ಲಿ ಒಹಳ ಲಾಭ ಸಿಗೋಣ, ಸಾಲ ಮುಕ್ತ ಆಗೋಣ, ಭೂತ ಪಿಶಾಚ ಗ್ರಹಬಾಧೆ ಆಗದಿರೋಣ, ಪ್ರತಿಕೂಲ ಜನರು ಅನುಕೂಲವಾಗೋಣ, ಇವೇ ಮತ್ತು ಬೇರೆ ಎಷ್ಟೋ ಮಾತುಗಳು ಇಚ್ಛೆಯಂತೆಯೇ ಆಗುವ ಅಪೇಕ್ಷೆ ಇದ್ದರೆ ಇಚ್ಛಿತಫಲ ಕೊಡುವ ಲೋಕಮಾನ್ಯ ಕಲ್ಪತರು ತಾಯಿತ ಯಾವಾಗಲೂ ಹತ್ತಿರ ಇಡಿರಿ, ಅಂದರೆ ಇಚ್ಛೆ ಪೂರ್ಣವಾಗುವದು ಅನುಭವದ ಹೊರತು ಖಾತ್ರಿ ಆಗಲಾರದು. ತಾ. ಸ. ೧೬ ರೂ. ೧೨ ಗುಣ ತೀವ್ರವಾಗಿ, ತಾ. ಸ. ೩೬ ರೂ. ೩ ಗುಣ ೧೫ ದಿವಸಗಳಲ್ಲಿ, ತಾ. ಸ. ೩೬ ರೂ. ೩ ಗುಣ ೧ ತಿಂಗಳಲ್ಲಿ. ವ್ಹಿ. ಪಿ. ಖರ್ಚು ಬೇರೆ ಗುಣಬಾರದಲ್ಲಿ ಹಣವು ಮರಳಿ ಕೊಡಲಾಗುವದು

ವಿಳಾಸ—ಮ್ಯಾನೇಜರ, ಕಲ್ಪತರು ತಾಯಿತ, ಕೆ. ಎನ್,
[೨೬—] ಪೋ. ಸಾಕೇತ್ಕಾ ಜಿ. ಬೆಳಗಾಂವ

Health is Wealth.

WANTED all to improve health strength and vitality and thus save our nation from physical degeneracy Send half-anna stamp and get 23 specimen photographs with full particulars from

Director, Physical Culture,
P. O. BASAVANAGUDI
Bangalore City

THE SHOPPING CENTRE OF COORG,

Spencer & Co. Ltd.,

MERCARA & POLLIBETTA.

Arms & Ammunition.

New arrivals! Revised Prices!!

S. B B L. guns Rs. 65, 85 95 each

D B. B I. „ Rs 260, 235 210, 195 each

S B. M. L. „ Rs. 60 each

Cartridges of every discription from Nos. 1 to 8 Rs 14-8-0 per 100

6

ಕೃಷಿತೋ ನಾಸ್ತಿ ದುರ್ಭಿಕ್ಷಃ

NITRATE OF SODA (15—16 per cent.) Nitrogen,

"The best and cheapest form of Nitrogen highly concentrated and immediately available Nothing like it to make plants grow"

ವ್ಯವಸಾಯದಲ್ಲಿ ಗೊಬ್ಬರವಿಡುವದರ ಹೆಚ್ಚಿನ ಉದ್ದೇಶವು ಬೆಳೆಗಳಿಗೆ ಸಾರಜನಕ (Nitrogen) ಒದಗಿಸಿಕೊಡುವದಾಗಿರುತ್ತದೆ "ನೈಟ್ರೇಟ್ ಆಫ್ ಸೋಡಾ" ಎಂಬ ರಸಾಯನಿಕ ಗೊಬ್ಬರವು (15—16%) ಅಂದರೆ ದನಗೊಬ್ಬರವಲ್ಲಿಯಕ್ಕಿಂತ ಮೂವತ್ತುಪಾಲು ಜಾಸ್ತಿ ಕ್ಷಾರಜನಕ ಭರಿತವಾಗಿದ್ದು ಬೆಳೆಗಳಿಗೆ ಪಕ್ಕನೆ ಪಡಗುವರೀತಿಯಲ್ಲಿರುತ್ತದೆ ಇದರ ಉಪಯೋಗದಿಂದ ಫಸಲು ಬಹಳ ಸಮೃದ್ಧಿಯಾಗುವದು ಹಿಡಿತುಂಬ ರಸಾಯನಿಕ ಗೊಬ್ಬರವು ಮಡಿ (ಬುಕ್ಕೆ) ತುಂಬ ಹಟ್ಟಿಗೊಬ್ಬರಕ್ಕೆ ಸಮವಾಗಿರುತ್ತದೆ ಈ ರಸಾಯನಿಕ ಗೊಬ್ಬರವು ಅಮೇರಿಕ ದೇಶದ "ಚಿಲ್ಲಿ" ಎಂಬಲ್ಲಿ ತಯಾರಿಸಿ ಬಹಳ ದೂರದೇಶದಿಂದ ಬರಬೇಕಾದರೂ ಸಹ ಅದು ಹಳ್ಳಿ ಮೂಲೆಗಳ ತೋಟಗದ್ದೆ ವಗೈರ ಕೃಷಿಗಳಿಗೆ ಉಪಯೋಗಿಸಲು ಬಹಳ ಸುಲಭವಾಗಿಯೂ ಹಟ್ಟಿಗೊಬ್ಬರಕ್ಕಿಂತಲೂ ಬಹಳ ಹೆಚ್ಚಿನ ಆದಾಯವನ್ನು ಕೊಡುವದಾಗಿಯೂ ಇರುತ್ತದೆ ಒಂದು ಎಕ್ರೆ ಭೂಮಿಗೆ 120—180 ರಾತಲು ಬೇಕಾಗುವದು ಇದರ ವಿಷಯ ಹೆಚ್ಚಿನ ಮಾಹಿತಿಯನ್ನು ಮತ್ತು ತಿಳುವಳಿಕೆಯನ್ನು ಧರ್ಮಾರ್ಥವಾಗಿ ನಮ್ಮಿಂದ ಪಡೆಯಬಹುದು.

ದಿ ಚಿಲಿಯನ್ಸ್ ನೈಟ್ರೇಟ್

24—12 ಕಮಿಟಿಯವರ ಕಡೆ

ಕೊಡಗಿನಲ್ಲು— B. P Ayapa Hon. Representative Pollibetta, Coorg.	The Chilean Nitrate Committee, 6 Mission Row, Post Box 469, CALCUTTA

ಮಲೆಯಾಳ ವೈದ್ಯಶಾಲಾ.

ಮಲಬಾರಿನ ಸಂಜೀವನ್ ಮತ್ತು ಕಂಪೆನಿ ಎಂಬ ಆಯುರ್ವೇದ ವೈದ್ಯ ಶಾಲೆಯ ಒಂದು ಶಾಖೆಯು ವೀರರಾಜೇಂದ್ರಪೇಟೆಯಲ್ಲಿ ತೆರದಿರುತ್ತದೆ. ಇಲ್ಲಿ ಯಾವ ವಿಧದ ಕಾಯಿಲೆಯಾಗಿದ್ದರೂ ಪಂಡಿತರಿಂದ ಪರೀಕ್ಷಿಸಿ ಔಷಧಿಕೊಟ್ಟು ಗುಣಪಡಿಸಲ್ಪಡುತ್ತೆ. ಔಷಧದ ಚಾರ್ಜು ಬಹಳ ಕಡಮೆ. ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ವಿವರವನ್ನು ತಿಳಿದುಕೊಳ್ಳಬಹುದು.

ನಾರಾಯಣ ಸಂದೇಶ,
ಆಯುರ್ವೇದ ವೈದ್ಯರು,
52—45 **ವೀರರಾಜೇಂದ್ರಪೇಟೆ.**

ಕಾಂಗ್ರೆಸ್ ಕಾಲದಲ್ಲಿ

ಕರ್ನಾಟಕ ವೃತ್ತವು

ಪ್ರತಿನಿತ್ಯ ಹೊರಡುವ ಏರ್ಪಾಡು.

1 ಬೆಳಗಾಂವಿಯಲ್ಲಿ ಕೂಡತಕ್ಕ ರಾಷ್ಟ್ರೀಯ ಮಹಾಸಭೆಯವಿಷಯಗಳೆಲ್ಲಾ ಕರ್ನಾಟಕದ ಜನಾಂಗಕ್ಕೆ ಆದಷ್ಟು ಬೇಗ ತಿಳಿಯುವಂತೆ ಮಾಡುವದಕ್ಕೆ ಹಾಗೂ ಮಹಾಸಭೆಯ ಕಾಲಕ್ಕೆ ಬೆಳಗಾಂವಿಯಲ್ಲಿಯೇ ಕೂಡತಕ್ಕ ಲಕ್ಷೋಪಲಕ್ಷ ಕನ್ನಡಿಗರಿಗೆ ಮಹಾ ಸಭೆಯಲ್ಲಿ ಜರಗುವ ಕೆಲಸಗಳ ವಿವರಣೆಯನ್ನು ತಮ್ಮ ಭಾಷೆಯಿಂದ ಓದಿಕೊಂಡು ತಿಳಿದುಕೊಳ್ಳುವ ಅನುಕೂಲಮಾಡುವದಕ್ಕೆ ಡಿಸೆಂಬರ್ 23ನೇ ತಾರೀಖಿನಿಂದ 10 ದಿವಸಗಳ ವರೆಗೆ—

ಕರ್ನಾಟಕ ವೃತ್ತವು

ಪ್ರತಿನಿತ್ಯ ಹೊರಡುವದು.

ಕನ್ನಡ ಜನಾಂಗದ ಸೇವೆಗಾಗಿಯೇ ಕೈಕೊಂಡಿರುವ ಈ ಮಹತ್ಕಾರ್ಯಕ್ಕೆ ಎಲ್ಲ ಕರ್ನಾಟಕಸ್ಥರು ಸಹಾಯಮಾಡಬೇಕೆಂದು ಬಿನ್ನಹವಿದೆ.

1, ಹತ್ತು ದಿವಸಗಳ ಪಟ್ಟಿಗೆ ಚಂದಾದಾರರಾಗ ಬಯಸುವವರು 10 ಆಣೆಗಳ ಟಪಾಲು ಟಿಕೇಟು ಕಳುಹಿಸಬೇಕು ವ್ಹಿ. ಪಿ. ಮಾಡುವುದಿಲ್ಲ

2 ಕರ್ನಾಟಕವೃತ್ತದ ಚಂದಾದಾರರು ಎಂಟೇ ಆಣೆಗಳ ಟಿಕೇಟು ಕಳುಹಿಸಬೇಕು ಈ ಹಣ ಬಂದರೆ ದಿನ ಪತ್ರವು ಕಳುಹಿಸಲ್ಪಡುವದು

3 ಕರ್ನಾಟಕ ವೃತ್ತಕ್ಕೆ ಹೊಸದಾಗಿ ಚಂದಾದಾರರಾಗುವವರು ನಾಲ್ಕೇ ರುಪಾಯಿ ಮನಿಯಾರ್ಡರ್‌ಮಾಡಿ ವರ್ಷದ ಪತ್ರವನ್ನೂ ಕಾಂಗ್ರೆಸ ದೈನಿಕವನ್ನೂ ಪಡೆಯಬಹುದು

4. ಕರ್ನಾಟಕದಲ್ಲಿ ರಾಷ್ಟ್ರೀಯ ಮಹಾಸಭೆಯು ಕೂಡತಕ್ಕ ಈ ಸಮಯದಲ್ಲಿ ಕನ್ನಡ ಜನಾಂಗದ ಸೇವೆ ಮಾಡುವ ಈ ಅದ್ಭುತ ಸಾಹಸಕ್ಕೆ ನಾವು ಕೈ ಹಾಕಿದ್ದೇವೆ ಈ ಕಾರ್ಯಕ್ಕೆ ೧ ರುಪಾಯಿ ಅಧವ ಹೆಚ್ಚಿಗೆ ಹಣವನ್ನು ತಮ್ಮ ಶಕ್ತಿಗೆ ಅನುಸಾರವಾಗಿ ಕೊಟ್ಟು ಕರ್ನಾಟಕ ಜನತೆಯ ಸೇವಾಕಾರ್ಯದಲ್ಲಿ ಸಹಾಯಮಾಡತಕ್ಕ ಮಹನೀಯರು ಕರ್ನಾಟಕ ವೃತ್ತದ ಪೋಷಕರೂ ಆಶ್ರಯದಾತರೂ ಎಂದು ಎನಿಸಲ್ಪಡುವರು ಇಂಥವರಿಗೆ ಕೆಲವುಕಾಲದ ವರೆಗೆ ವೃತ್ತವು ಧುಕ್ಕಟೆಯಾಗಿ ಕಳುಹಿಸಲ್ಪಡುವದು ಹಣ ಮನಿಯಾರ್ಡರ್ ಮಾಡಬೇಕು

ವ್ಹಿ ಪಿ ಮಾಡುವುದಿಲ್ಲ.

ಟಾಚಿಕಾತು ಕೊಡುವವರೂ ಏಜಂಟರಾಗ ಬಯಸುವವರೂ ಇತ್ತಕಡೆಗೆ ಲಕ್ಷ್ಯ ಕೊಡಬೇಕು,

ಕನ್ನಡಿಗರ ದಾಸಾನುದಾಸ,
ಮುದವೇಡಕರ ಕೃಷ್ಣರಾಯ,
"ಕರ್ನಾಟಕ ವೃತ್ತ"ದ ಸಂಪಾದಕ, ಧಾರವಾಡ

"ಕೊಡಗು"

ಸ ೧೯೨೪ನೇ ಇಸವಿ ಡಿಶಂಬರ್ ತಾ. ೫ನೇ ಶುಕ್ರವಾರ.

ಮೂವ್ರುಕೂಟಿ ಟ್ರಾಮ್ವೆ.

ಕಳೆದ ಮಳೆಗಾಲದ ನೆರೆಯ ಹಾವಳಿಯಿಂದ ಮೂವ್ರುಕೂಟದಲ್ಲಿರುವ ಟ್ರಾಮ್ವೇಲೈನಿಗೆ ಉಂಟಾಗಿರುವ ವಿಪರೀತ ನಷ್ಟದ ದೆಸೆಯಿಂದ ಈ ಲೈನನ್ನು ರಿಪೇರಿಮಾಡಿಸಬೇಕೋ, ಅಥವಾ ಅದನ್ನು ಪೂರ್ತಿ ನಿಲ್ಲಿಸಿಬಿಡಬೇಕೋ, ಎಂಬ ವಿಷಯ ಕೌನ್ಸಿಲಿನ ಸಪ್ಟಂಬರ್ ಮೀಟಿಂಗಿನಲ್ಲಿ ಚೆನ್ನಾಗಿ ಚರ್ಚಿಸಲ್ಪಟ್ಟಿತು. ಆ ಕೆಲಸದಮೇಲೆ ಹಾಕಿರುವ ಲಕ್ಷಗಟ್ಲೆ ರುಪಾಯಿಯು ನಷ್ಟವಾದರೂ ಕೂಡ ಏನೂ ಲಾಭವಿಲ್ಲದೆ ಇರುವ ಟ್ರಾಮ್ವೆಯನ್ನು ನಿಲ್ಲಿಸಿಬಿಡುವದೇ ಉತ್ತಮವೆಂದು ಕೌನ್ಸಿಲಿನ ಹೆಚ್ಚಿನ ಭಾಗದ ಅಭಿಪ್ರಾಯವಾಗಿ ತೋರಿದರೂ ಅದರ ರಿಪೇರಿಗೆ ಬೇಕಾಗುವ ಖರ್ಚಿನಷ್ಟು ಈ ಕೆಲಸಕ್ಕೆ ಸಮ್ಮಂಧಪಡದ ಪರಪ್ರಾಂತ್ಯದ ಒಬ್ಬ ಎಕ್ಸ್ಪರ್ಟಿನಿಂದ ಅಂದಾಜುಮಾಡಿಸಿ, ನಂತರ ಅದನ್ನು ಕೌನ್ಸಿಲಿನಲ್ಲಿ ಚರ್ಚಿಸಬೇಕೆಂಬ ಠರಾವನ್ನು ಪಾಸ್ ಮಾಡಿದರು. ಹೀಗೆ ಅಂದಾಜುಮಾಡಲ್ಪಟ್ಟ ರಿಪೇರಿ ಖರ್ಚಿನ ಪಟ್ಟಿಯು ಕೌನ್ಸಿಲಿಂದ ಮಂಜೂರಾಗುವ ವರೆಗೆ ಯಾವ ರಿಪೇರಿ ಕೆಲಸವನ್ನೂ ಮಾಡಕೂಡದೆಂದು ತೀರ್ಮಾನವಾದುದರಿಂದ ಅಲ್ಲಿಯ ಸಿಬ್ಬಂದಿಯವರಿಗೆ ಕೆಲಸವಿಲ್ಲದೆ ಸುಮ್ಮನಿರಬೇಕಾದ ಕಾರಣ ಎಕ್ಸ್ಪರ್ಟನ್ನು ಬೇಗನೆ ಕರಿಸಿ ಅಂದಾಜುಮಾಡಿಸಬೇಕಾಗಿತ್ತು. ಎಕ್ಸ್ಪರ್ಟ್ ಬಂದು ನೋಡಲಿಕ್ಕೆ ಮೀಟಿಂಗ್ ಕಳೆದು ಒಂದೂವರೆ ತಿಂಗಳಾಯಿತು.

ಇದೇ ತಾ 13ರಲ್ಲಿ ಮದ್ರಾಸು ಪ್ರಾಂತ್ಯದ ಒಬ್ಬ ಸುಪರಿಂಟೆಂಡೆಂಟ್ ಇಂಜನಿಯರಾದ ಮಿ ಮೋಲ್ಸ್ವರ್ತರವರು ಮೂವ್ರುಕೂಟಕ್ಕೆ ಬಂದು ಟ್ರಾಮ್ವೆಲೈನನ್ನು ನೋಡಿದರೆಂದು ತಿಳಿಯುತ್ತೇವೆ. ಆದರೆ ಅವರು ಏನು ಅಭಿಪ್ರಾಯಪಟ್ಟರು ಮತ್ತು ರಿಪೇರಿಗೆ ಎಷ್ಟು ಅಂದಾಜುಮಾಡಿದರೆಂಬ ಸಂಗತಿ ಏನೂ ಗೊತ್ತಾಗಲಿಲ್ಲ. ಈ ಟ್ರಾಮ್ವೆಯ ವಿಷಯ ಬಹುಮುಖ್ಯವಾದ್ದರಿಂದ ಅದರ ವಿಷಯ ಠರಾವನ್ನು ಖಂಡಿತವಾಗಿಯೂ ಸಪ್ಟಂಬರ ಮೀಟಿಂಗಿನಲ್ಲೇ ಚರ್ಚಿಸಬೇಕೆಂದು ಕೌನ್ಸಿಲು ಮೆಂಬರುಗಳು ಕೇಳಿಕೊಂಡದರಮೇಲೆ ಈ ವಿಷಯವು ಚರ್ಚಿಸಿ ತೀರ್ಮಾನಿಸಲ್ಪಟ್ಟಿರುವಲ್ಲಿ, ಆ ಠರಾವಿನ ಅಭಿಪ್ರಾಯವನ್ನು ಜಾರಿಗೆ ತರಲು ಸರ್ಕಾರದವರು ಒಡನೆ ಏರ್ಪಾಡು ಮಾಡಬೇಕಾದದ್ದು ಅವಶ್ಯವಾಗಿತ್ತು. ಎಕ್ಸ್ಪರ್ಟ್ ಬರಲಿಕ್ಕೇ ಸಾವಕಾಶವಾಯಿತು. ಅವರು ಬಂದು ನೋಡಿದ ಕೂಡಲೆಯಾದರೂ ಅವರ ಅಭಿಪ್ರಾಯವನ್ನು ದೇಶದವರ ತಿಳುವಳಿಕೆ ಬಗ್ಗೆ ಪ್ರಕಟಿಸಬೇಕಾಗಿತ್ತು. ಇಲ್ಲವಾದರೆ ಕೌನ್ಸಿಲ್ ಮೆಂಬರುಗಳಿಗಾದರೂ ತಿಳಿಸಬೇಕಾಗಿತ್ತು. ಇದು ಯಾವದೂ ಮಾಡದೆ ಟ್ರಾಮ್ವೆಯ ಸಿಬ್ಬಂದಿಗೆ ಕೆಲಸವಿಲ್ಲದೆ ಸಂಬಳಕೊಡುವುದರ ಅರ್ಥವೇನೆಂದು ಗೊತ್ತಾಗುವುದಿಲ್ಲ.

ಇದರ ಮಧ್ಯೆ ಇನ್ನೊಂದು ವರ್ತಮಾನ ಹೊರಟಿದೆ. ಇದು ಎಷ್ಟರಮಟ್ಟಿಗೆ ನಿಜವೆಂದು ಹೇಳಲಾರೆವು. ಹೆಚ್ಚು ರಿಪೇರಿ ಮಾಡಬೇಕಾಗಿರುವ ಉರುಟಿಯಿಂದ ಮೇಲಕ್ಕೆ ಇರುವ ಆರು ಮೈಲು ಸೊಳ್ಳಕೊಲ್ಲಿ ಲೈನನ್ನು ತೆಗೆದುಬಿಟ್ಟು, ಉರುಟಿಯಿಂದ ಕೆಳಗೆ ಆರುಮೈಲು ಕುಸ್ನೋತುವರೆಗೆ ಮಾತ್ರ ರಿಪೇರಿ ಮಾಡಿಸುವಂತೆ ಆ ಇಲಾಖಾ ಅಧಿಕಾರಿಗಳು ಅಭಿಪ್ರಾಯಪಟ್ಟಿರುವರಂತೆ. ಇದು ನಿಜವಾದರೆ ಟ್ರಾಮ್ವೆಯನ್ನು ಪೂರ್ತಿ ನಿಲ್ಲಿಸಬೇಕೆಂಬ ಪಕ್ಷ ಅವರೇ ಒತ್ತಾಸೆ ಕೊಟ್ಟಂತಾಗುತ್ತದೆ. ಈ ವರುಷ ರಿಪೇರಿ ಹಿಂದ್ಕಾದುದರಿಂದ ಸೊಳ್ಳೆಕೊಲ್ಲಿ ಲೈನನ್ನು ಬಿಟ್ಟ ಹಾಗಾಯಿತು. ಇನ್ನೊಂದು ಸಾರಿ ಉರುಟಿ ಕುಸ್ನೋತು ಲೈನಿಗೆ ಹೆಚ್ಚು ನಷ್ಟ ಉಂಟಾದರೆ ಅದನ್ನು ನಿಲ್ಲಿಸಬೇಕಾಗುವುದು, ಮಾತ್ರವಲ್ಲ, ಒಟ್ಟು ರಿಪೇರಿಗೆ ಹೆಚ್ಚು ಹಣವು ಬೇಕಾಗುವುದೆಂದು ತೋರಿಸಿದರೆ ಅದಕ್ಕೆ ದೇಶದವರೂ, ಕೌನ್ಸಿಲ್ ಮೆಂಬರುಗಳೂ ಒಪ್ಪದೆ ಟ್ರಾಮ್ವೆಯನ್ನು ನಿಲ್ಲಿಸಿಬಿಡಬೇಕೆಂದು ಹೇಳುವರೆಂದೇ ಈಗ ಅರ್ಧ ಲೈನಿನ ರಿಪೇರಿಯ ಅಭಿಪ್ರಾಯ ಹುಟ್ಟಿರುವುದೋ ಏನೋ? ಮೊದಲಿನಂತೆ ಮಳೆಗಾಲದ ಹಚ್ಚಿನ ಭಾಗದಲ್ಲು ಮೂವ್ರುಕೂಟದಿಂದ ತೊಲೆಗಳನ್ನು ಕೆಳವಿಡಬಹುದಾದುದರಿಂದ ಉರುಟಿಯಿಂದ ಮೇಲಕ್ಕೇನೇ ಟ್ರಾಮ್ವೆಲೈನಿನ ಅವಶ್ಯಕತೆಯು ಹೆಚ್ಚಾಗಿರುವುದು. ಅಲ್ಲದೆ ಈಗ ಏನೂ ಕೆಲಸವಿಲ್ಲದೆ ಮೂವ್ರುಕೂಟದಲ್ಲಿ ಸುಮ್ಮನಿರುವ ಲಾರಿಯನ್ನು ಉರುಟಿಯಿಂದ ಇರ್ಪುರು ವರೆಗೆ ಹೊಳೆಯಲ್ಲಿ ಸಾಕಷ್ಟು ನೀರಿಲ್ಲದೆ ಇರುವಾಗ ರಸ್ತೆಗಾಗಿ ತೊಲೆಗಳನ್ನು ಸಾಗಿಸಲು ಉಪಯೋಗಿಸಬಹುದು. ಆದರೆ ಉರುಟಿಯಿಂದ ಮೇಲಕ್ಕೆ ಸೊಳ್ಳಕೊಲ್ಲಿ ಕಡೆ ಮರ ಸಾಗಿಸಲು ಮೇಲಿನ ಅನುಕೂಲಗಳ್ಯಾವವೂ ಇಲ್ಲ. ಅದುದರಿಂದ ಉರುಟಿಯಿಂದ ಕುಸ್ನೋತಿಗೆ ಟ್ರಾಮ್ವೆ ಲೈನು ಇದ್ದೇ ಇರಬೇಕೆಂಬ ಅವಶ್ಯಕತೆ ಇಲ್ಲ. ಹೀಗಿರುವಲ್ಲಿ ಹೆಚ್ಚು ಅವಶ್ಯವಿರುವ ಕಡೆ ಲೈನನ್ನು ಬಿಟ್ಟು ಬೇಕಾಗಿಲ್ಲದ ಕಡೆ ರಿಪೇರಿಮಾಡಿ ಇಟ್ಟುಕೊಳ್ಳುವ ಅಭಿಪ್ರಾಯವು ಯಾರಿಗೆತಾನೆ ಒಪ್ಪುವುದು. ಅಧಿಕಾರಿಗಳ ಈ ಏರ್ಪಾಡುಗಳನ್ನು ನೋಡಿದರೆ ಟ್ರಾಮ್ವೆ ಲೈನಿನಿಂದ ಲಾಭ ದೊರೆಯುವ ಸಂಭವವು ಇಲ್ಲವೆಂದೇ ತೋರುತ್ತದೆ. ಲಕ್ಷಗಟ್ಲೆ ರುಪಾಯಿ ಖರ್ಚು ಮಾಡಿಸಿ ಮಾಡಿದ ಏರ್ಪಾಡನ್ನು ಫಕ್ಕನೆ ನಿಲ್ಲಿಸಿಬಿಟ್ಟರೆ ಅದನ್ನು ಹೊರಡಿಸಿ ನಡಿಸುತ್ತಿರುವವರ ಘನತೆಯು ಕಮ್ಮಿಯಾಗುವದೋ, ಯಾ, ಅದಕ್ಕೆ ಸಮ್ಮಂಧಪಟ್ಟ ಉದ್ಯೋಗಸ್ಥರಿಗೆ ಬೇರೆ ಕಡೆ ಏರ್ಪಡಿಸಲು ಅನುಕೂಲವಿಲ್ಲವೆಂದೋ, ಸರಕಾರದವರು ಈ ಸಂಸ್ಥೆಯನ್ನು ಒಡನೆ ನಿಲ್ಲಿಸಲು ಹಿಂಜರಿಯುತ್ತಿರುವರೋ ತಿಳಿಯದು.

ಈ ಮೊದಲೇ ನಾವು ಸೂಚಿಸಿದಂತೆಯೂ, ಕೌನ್ಸಿಲ್ ಮೆಂಬರುಗಳು ಹೇಳಿರುವಂತೆಯೂ ಟ್ರಾಮ್ ಲೈನಿನ ರಿಪೇರಿಗೆ ಈಗ ಸ್ವಲ್ಪ ಹಣ ಸಾಕೆಂದು ಅಂದಾಜು ಮಾಡಿದರೂ, ಅದನ್ನು ಪೂರ್ತಿ ರಿಪೇರಿ ಮಾಡಬೇಕಾದರೆ ಸಾವಿರಗಟ್ಲೆ—ಕಡೆಗೆ ಲಕ್ಷವೋ ಹೇಳಲಿಕ್ಕಾಗುವುದಿಲ್ಲ,—ರುಪಾಯಿ ಬೇಕಾಗಿರುವುದರಿಂದ ಈಗ ಸ್ವಲ್ಪ ಮಂಜೂರು ಮಾಡಿದರೆ ನಂತರ ಹೆಚ್ಚೆಚ್ಚು ಮಾಡಬೇಕಾಗುವುದರಲ್ಲಿ ಸಂಶಯವಿಲ್ಲ. ಒಂದು ವೇಳೆ ಈಗ ಬಂದು ನೋಡಿರುವ ಎಕ್ಸ್ಪರ್ಟ್ ಮೋಲ್ಸ್ವರ್ತರವರು ಲೈನನ್ನು ರಿಪೇರಿ ಮಾಡಿದರೆ ನಂತರ ಲಾಭ ದೊರೆಯಬಹುದೆಂದು ಹೇಳಿದರೂ ಕೂಡ, ಟ್ರಾಮ್ವೆಯ ಇಷ್ಟರ ವರೆಗಿನ ಅನುಭವದಿಂದ ಕೌನ್ಸಿಲಿನವರು ರಿಪೇರಿ ಖರ್ಚಿಗೆ ಹಣ ಮಂಜೂರು ಮಾಡುವುದರಲ್ಲು ಬಹಳ ಯೋಚಿಸಬೇಕಾಗಿದೆ. ಎಕ್ಸ್ಪರ್ಟ್‌ಗಳೇನೋ ತಮಗೆ ತೋರಿದ ಅಭಿಪ್ರಾಯಗಳನ್ನು ಕೊಟ್ಟು ಹೋಗಿರುವರು. ಕೆಲವು ತಿಂಗಳುಗಳಲ್ಲಿ ಅವರು ಉದ್ಯೋಗದಿಂದ ರಿಟಯರ್ ಆಗುವರೆಂದೂ ಸಹ ವರ್ತಮಾನವಿದೆ. ರಿಪೇರಿ ಕೆಲಸವನ್ನು ಕೈಕೊಂಡರೆ ಆ ಕೆಲಸವು ಪೂರ್ತಿಯಾಗಬೇಕಾದರೆ ರೈತರು ಕಷ್ಟಪಟ್ಟು ದುಡಿದು ಸರಕಾರಕ್ಕೆ ಕೊಡುವ ಹಣವನ್ನು ನೀರಿನಂತೆ ಯಥೇಷ್ಟವಾಗಿ ಉಪಯೋಗಿಸಬೇಕಾಗಬಹುದೆಂಬದನ್ನು ದೇಶದ ಪ್ರತಿನಿಧಿಗಳಾದ ಕೌನ್ಸಿಲ್ ಮೆಂಬರುಗಳು ಮರೆಯದಿರಲಿ.

ಸಿ. ಪಿ. ಸಿ. ೧೪೪ನೇ ಸೆಕ್ಷನ್.

ಕಳೆದ ವಾರ ಈ ಸೆಕ್ಷನನ್ನು ಉಪಯೋಗಿಸಿ ಕೊಡಗಿಗೆ ಪರಪ್ರಾಂತ್ಯದಿಂದ ಬಂದಿದ್ದ ಒಬ್ಬ ಉಪನ್ಯಾಸಕರ ಬಾಯಿಕಟ್ಟಿದ ವಿಷಯವಾಗಿ ನಮ್ಮ ಅಭಿಪ್ರಾಯವನ್ನು ಸೂಚಿಸಿದ್ದೆವು. ಆದರೆ ಈ ಸಾರಿ ಈ ಸೆಕ್ಷನಿನ ಅಂಥಾ ದುರುಪಯೋಗದ ವಿಷಯ ಬೆಳೆಯುವದರ ಬದಲು ಸ್ಥಳೀಯ ಅಧಿಕಾರಿಗಳು ಹೊರಗಿನಿಂದ ಬಂದ ಮುಂದಾಳುಗಳನ್ನು ಭಾಷಣ ಮಾಡಲು ಬಿಟ್ಟು ಅವರು ತಮ್ಮ ನ್ಯಾಯಶೀಲತೆಯನ್ನು ತೋರಿಸಿದರ ವಿಷಯ ಬರೆಯಲು ಎಡೆಕೊಟ್ಟದ್ದಕ್ಕಾಗಿ ಸಂತೋಷಪಡುತ್ತೇವೆ. ಕಳೆದ ನವಂಬರು ತಾರೀಕು 25ರಲ್ಲಿ ಧಾರವಾಡದ ಶ್ರೀಯುತ ಮುದವೇಡ್‌ಕರ್ ಕೃಷ್ಣರಾಯರು ಮತ್ತು ಬೆಂಗಳೂರಿನ ಶ್ರೀಯುತ ಟಿ ಟಿ. ಶರ್ಮರವರು ಮಡಿಕೇರಿಗೆ ಬಂದರು. ಅವರಿಬ್ಬರು ಮರು ದಿನ ಮಡಿಕೇರಿಯಲ್ಲಿ ಭಾಷಣ ಮಾಡುವರಾಗಿ ಮೊದಲಿನಂತೆಯೇ ನೋಟೀಸು ಹಂಚಲಾಯಿತು. ಎಂದಿನಂತೆಯೇ ಪೋಲೀಸಿನವರು ಮೇಜಿಸ್ಟ್ರೇಟರವರಿಗೆ ರಿಪೋರ್ಟು ಮಾಡಿದರು. ಆದರೆ ಈ ಸಾರಿ ಮೇಜಿಸ್ಟ್ರೇಟರು ಮೊದಲಿನಂತೆ ದುಡುಕಲಿಲ್ಲ. ಸ್ವಲ್ಪ ಮಟ್ಟಿಗೆ ಆಲೋಚನೆ ಮಾಡಿದರು. ಹೀಗೆ ಯೋಚನೆ ಮಾಡಲು ಕಾರಣವೂ ಇತ್ತು. ಕಳೆದ ಸಾರಿ ಮುನ್ಸಿ ಅಬ್ದುಲ್ ರಹಮಾನ್‌ರವರನ್ನು ಬಾಯಿಕಟ್ಟಿದ ದಿನ ಮೀಟಿಂಗು ಏರ್ಪಾಡಾದಸ್ಥಳದಲ್ಲಿ ಸೇರಿದ ಜನರು ಮೇಜಿಸ್ಟ್ರೇಟರ ನ್ಯಾಯವಲ್ಲದ ಅಂಥಾ ಹುಕುಮುಗಳನ್ನು ನಿಷೇಧಿಸಿ ಪಾಸು ಮಾಡಿದ ಠರಾವನ್ನು ಕಮೀಷನರವರಿಗೆ ಮೀಟಿಂಗಿನ ಅಧ್ಯಕ್ಷರು ಕಳುಹಿಸಿದ್ದರು. ಇದು ಅಧಿಕಾರಿಗಳ ಕಣ್ಣನ್ನು ತೆರೆಸಿರಬಹುದೆಂದು ನಂಬುತ್ತೇವೆ. ಹ್ಯಾಗೂ ಮೇಜಿಸ್ಟ್ರೇಟರು 144ನೇ ಸೆಕ್ಷನಿನ ಸಹಾಯವನ್ನು ಕೋರಲಿಲ್ಲ. ಕರ್ನಾಟಕ ಬಾಂಧವರಿಬ್ಬರು ಅದೇ ದಿನ ಮಧ್ಯಾನ್ಹ ವೀರರಾಜಪೇಟೆಯಲ್ಲಿಯೂ, ಸಾಯಂಕಾಲ ಮಡಿಕೇರಿಯಲ್ಲಿಯೂ ಭಾಷಣ ಮಾಡಿದರು. ಅವರ ಸ್ವಾರಸ್ಯವಾದ ಉಪನ್ಯಾಸಗಳನ್ನು ಕೇಳಲು ನೆರೆದಿದ್ದ ಜನರ ದೊಡ್ಡ ಸಂಖ್ಯೆಯಿಂದಲೇ ಅಧಿಕಾರಿಗಳು ನಮ್ಮ ಅತಿಥಿಗಳ ಬಾಯಿಕಟ್ಟದಿರುವಿಕೆಯಿಂದ ದೇಶದವರಿಗೆ ಎಷ್ಟರಮಟ್ಟಿಗೆ ತೃಪ್ತಿ ಉಂಟಾಯಿತೆಂದು ವಿಶದವಾಗುತ್ತದೆ. ಈ ಭಾಷಣಗಳಿಂದ ಮೇಜಿಸ್ಟ್ರೇಟರು ಮೊದಲು ಯೋಚಿಸಿಕೊಂಡಿದ್ದ ಹಾಗೆ ದೇಶದಲ್ಲಿ ಜನರು ಪುಂಡೇನೂ ಎದ್ದಿರುವುದಿಲ್ಲ, ಮಾತ್ರವಲ್ಲ, ಪ್ರಜೆಗಳಿಗೆ ಸರಕಾರದ ಮೇಲಿರುವ ಪ್ರೀತಿಯೂ ಕಡಿಮೆಯಾಗಿರುವಂತೆ ಕಾಣುವುದಿಲ್ಲ. ಬದಲು ಭಾಷಣಕ್ಕೆ ಅಟಂಕ ಮಾಡಿದ್ದರೆ ಅನಾವಶ್ಯಕವಾಗಿ ಅಧಿಕಾರಿಗಳು ಜನರಲ್ಲಿ ಅತೃಪ್ತಿಯನ್ನೂ, ಚಳವಳವನ್ನೂ ಉಂಟುಮಾಡುತ್ತಿದ್ದರು. ಕಡೆಗಾದರೂ ಸ್ಥಳೀಯ ಅಧಿಕಾರಿಗಳು, ಬೇರೆಯವರ ಭಾಷಣ ಕೇಳುವ ನಮ್ಮ ದೇಶೀಯರ ಹಕ್ಕನ್ನು ಒಪ್ಪಿಕೊಂಡದ್ದು ಸಂತೋಷಕರವಾದ ಸಂಗತಿಯೇ ಸರಿ.

ಆದರೆ ಈ ಹಕ್ಕನ್ನು ಸರ್ಕಾರಿ ಉದ್ಯೋಗಸ್ಥರಿಗೆ ಕೊಡದೆ ಇರುವುದು ಶೋಚನೀಯವಾಗಿದೆ. ಈ ಭಾಷಣದ ದಿನ ಮಡಿಕೇರಿ ಆಫೀಸುಗಳಲ್ಲಿ ಉದ್ಯೋಗಸ್ಥರ್ಯಾರೂ ಉಪನ್ಯಾಸವನ್ನು ಕೇಳಕೂಡದೆಂದು ಎಚ್ಚರಿಕೆಕೊಡಲಾಯಿತೆಂದೂ, ಯಾಕೆ, ಒಂದೆರಡು ಇಲಾಖೆಯ ಆಫೀಸುಗಳಲ್ಲಿ ಭಾಷಣಕ್ಕೆ ಹೋಗಕೂಡದೆಂಬ ನೋಟೀಸಿಗೆ ಉದ್ಯೋಗಸ್ಥರ ರುಜು ಸಹ ತೆಗೆಯಲಾಯಿತೆಂದೂ ವರ್ತಮಾನ. ರಾಜಕೀಯ ಭಾಷಣವನ್ನೇ ಆಗಲಿ ಸರ್ಕಾರಿ ಉದ್ಯೋಗಸ್ಥರು ಕೇಳಬಾರದೆಂಬ ಕಾನೂನಿರುವುದು ನಮಗೆ ತಿಳಿಯಬಂದಿರುವುದಿಲ್ಲ. ಬದಲು ಈಗ ಸರಕಾರ ಸ್ವಬಲವಾದಾಗ ಸರ್ಕಾರಿ ಉದ್ಯೋಗಸ್ಥರು ರಾಜಕೀಯ ಮೀಟಿಂಗುಗಳಿಗೆ ಹೋಗಿ ಸರಕಾರದ ಪರ ಮಾತಾಡಬಹುದಾಗಿ ಸಹ ಹುಕುಮುಗಳು ಇದ್ದವೆಂದು ಪತ್ರಿಕೆಗಳ ಮೂಲಕ ತಿಳಿದಿರುವೆವು. ಉದ್ಯೋಗಸ್ಥರು ರಾಜಕೀಯ ಚಳವಳದಲ್ಲಿ ಭಾಗಿಗಳಾಗಬಾರದೆಂಬುವುದರಲ್ಲಿ ನ್ಯಾಯವಿರಬಹುದು. ಆದರೆ ಭಾಷಣವನ್ನೇ ಕೇಳಬಾರದೆನ್ನುವುದು ಯಾವ ನ್ಯಾಯವೋ ತಿಳಿಯದು. ಇಂದು ಸರಕಾರಿ ಉದ್ಯೋಗಸ್ಥರ ರಾಜಭಕ್ತಿಯು ಸ್ಥಿರವಾದುದಲ್ಲ, ಬೇರೆಯವರ ಭಾಷಣ ಕೇಳಿದೊಡನೆ ಬದಲಾಗುವಂತಾದ್ದೆಂಬುದೇ ಅಧಿಕಾರಿಗಳ ಭಾವನೆ ಎಂದು ತೋರುತ್ತದೆ. ಇನ್ನಾದರೂ ಅಧಿಕಾರಿಗಳು ಅಂಥಾ ನ್ಯಾಯವೇನೂ ಇಲ್ಲದ ಹುಕುಮಿಗೆ ಎಡೆಕೊಡಲಿಕ್ಕಿಲ್ಲವಾಗಿ ಆಶಿಸುತ್ತೇವೆ.

ಕೊಡಗು ಲೆಜಿಸ್ಲೇಟಿವ್ ಕೌನ್ಸಿಲಿನ ಪ್ರೊಸೀಡಿಂಗ್ಸ್.

(ಕಳೆದ ವಾರದಿಂದ ಮುಂದರಿಸಿದ್ದು)

21ನೇ ಠರಾವು

ಮಿ ಎ ಬಿ ಚೆಂಗಪ್ಪನವರು

"ಬತ್ತ ಅಳೆಯಲಿಕ್ಕೆ ಒಂದುತರದ ಅಳತೆಯನ್ನು ಸರಕಾರದವರು ಏರ್ಪಡಿಸಿ ಸೀಲ್ ಹಾಕಿ ಕೊಡಬೇಕೆಂತಲೂ, ವ್ಯಾಪಾರಿಗಳು ತಮ್ಮ ಪರೆಗಳನ್ನು ಅಜಮಾಯಿಸಿ ಸೀಲ್ ಹಾಕಿ ಕೊಡಬೇಕೆಂತ ಕೇಳಿದರೆ ಹಾಗೆಮಾಡಬೇಕೆಂತಲೂ ಚೀಫ್ ಕಮೀಷನರಿಗೆ ಈ ಕೌನ್ಸಿಲು ಶಿಫಾರಸುಮಾಡುತ್ತದೆ.

ಈ ವಿಷಯವು ಒಟ್ಟು ಇಂಡಿಯಾದಲ್ಲಿ ಚರ್ಚಿಸಲ್ಪಟ್ಟ ವಿಷಯವಾದರೂ ಏನೂ ತೀರ್ಮಾನವಾಗಿರುವದಿಲ್ಲ. ತತ್ಕಾಲ ಅಳತೆ ವಿಷಯ ತೀರ್ಮಾನಿಸಿಕೊಂಡು ತೂಕದ ವಿಷಯ ಹಿಂದಕ್ಕೆ ಇಡಬಹುದು. ಈಗ ಕೊಡಗಿನಲ್ಲಿ ಪ್ರತಿ ಒಬ್ಬ ವ್ಯಾಪಾರಿಯಲ್ಲಿ ಅವರವರ ಅಳತೆಯೇ ಇದೆ. ಅಳೆಯುವ ಕ್ರಮವೂ ವಿಧ ವಿಧವಾಗಿದೆ. ಒಬ್ಬೊಬ್ಬ ವ್ಯಾಪಾರಿಯಲ್ಲಿಯೇ ವಿಧವಿಧ ಪರೆಗಳಿವೆ. ಒಬ್ಬೊಬ್ಬ ವ್ಯಕ್ತಿಗೆ ಒಂದೊಂದುತರದ ಪರೆಯನ್ನು ತೆಗೆದುಕೊಂಡು ಹೋಗುತ್ತಾರೆ. ತಿಳುವಳಿಕೆ ಇರುವವರಿಗೆ ಅಷ್ಟೊಂದು ಮೋಸವಾಗುವುದಿಲ್ಲ. ಹೆಡ್ಡರಿಗೆ ತುಂಬಾ ಮೋಸವಾಗುತ್ತೆ. ತಿಳುವಳಿಕೆ ಇಲ್ಲದವರು, ಬಡವರು ಪರೆಗಳಲ್ಲಿ ಇರುವ ಮೋಸ ತಿಳಿಯದೆ ತಮಗೆ ಸಿಕ್ಕುವ ಹಣಕ್ಕೆ ಅವಶ್ಯವಾದದ್ದಕ್ಕಿಂತ ಹೆಚ್ಚಿಗೆ ಬತ್ತ ಕೊಡುತ್ತಾರೆ. ಪರೆಯ ವಿಷಯದಲ್ಲಿ ನಿರ್ಬಂಧನೆ ಇಲ್ಲದ್ದರಿಂದ ಈ ಠರಾವನ್ನು ತಂದದ್ದಾಗಿದೆ.

ಸರಕಾರದವರಲ್ಲಿ ಒಂದು ನಿರ್ಬಂಧನೆ ಅಳತೆ ಇರಬೇಕು. ಬೇಕಾದವರಿಗೆ ಅದಕ್ಕೆ ಸರಿಯಾದ ಅಳತೆಗಳಿಗೆ ಸೀಲ್‌ಹಾಕಿ ಕೊಡಬೇಕು. ಅಂಥಾ ಸೀಲ್‌ಹಾಕಿದ ಅಳತೆಗಳನ್ನು ಪ್ರತಿ ವರ್ಷವೂ ಬೇರೆಬೇರೆ ಸೆಂಟರ್‌ಗಳಲ್ಲಿ ಸರಿ ಇದೆಯೋ ಎಂತ ನೋಡಬೇಕು. ಇದರಿಂದ ಬಡವರಿಗೆ ತೊಂದರೆಯೂ ನಷ್ಟವೂ ಕಡಿಮೆಯಾಗುತ್ತದೆ. ಅಳತೆಯಿಂದ ಕೊಡುವದು ಮುಖ್ಯವಾಗಿ ಬತ್ತವಾಗಿದೆ. ಬತ್ತವೇ ಈ ದೇಶದಿಂದ ತುಂಬಾ ಹೊರಗೆ ಹೋಗುವದಾಗಿದೆ. ಆದ್ದರಿಂದ ನಿರ್ಬಂಧನೆಯಾದ ಅಳತೆ ಇರಬೇಕಾದದ್ದು ಅವಶ್ಯ. ಇಷ್ಟು ಹೇಳಿ ಠರಾವನ್ನು ಸಭೆಯ ಮುಂದೆ ಇಡುತ್ತೇನೆ.

ಮಿ. ಕೆ ಪಿ ಚೆಣ್ಣಪ್ಪನವರು.

ನಾನು ಅನುಮೋದಿಸುತ್ತೇನೆ

ಮಿ ಟಿ ಜೆ ಟಾಸ್ಕರ್‌ರವರು.

ಅಧ್ಯಕ್ಷರೇ, ಇದರ ಪೂರ್ವಚರಿತ್ರೆ ಹೇಳಿ ಈ ಸಭೆಯ ಕಾಲಕಳೆಯುವದಿಲ್ಲ. ರಿಕಾರ್ಡಿನಿಂದ ಏನು ತಿಳಿಯಬರುತ್ತದೆಂದರೆ—ಇಂಡಿಯಾ ಸರಕಾರದವರು ತೂಕ ಮತ್ತು ಅಳತೆಯ ವಿಷಯ ತನಿಖಿಮಾಡಲು ನೇಮಿಸಿದ ಕಮಿಟಿಯವರು ಖಂಡಿತ ಅಭಿಪ್ರಾಯ ಕೊಡಲಿಲ್ಲ. ಆಯಾ ಪ್ರಾಂತೀಕ ಸರಕಾರಗಳು ತಮಗೆ ಅನುಕೂಲವಿದ್ದಂತೆ ಅಳತೆಯನ್ನು ನಿರಖು ಮಾಡಿಕೊಳ್ಳಬಹುದೆಂತ ಇಂಡಿಯಾ ಸರಕಾರದವರು 1922ರಲ್ಲಿ ಹುಕುಂಮಾಡಿದರು. ಅದರಮೇಲೆ ಈ ಕೌನ್ಸಿಲಿಗೆ ಈ ವಿಷಯದ ತೀರ್ಮಾನವನ್ನು ಬಿಡುವದು ಒಳ್ಳೆಯದೆಂತ ಚೀಫ್ ಕಮೀಷನರು ಹೇಳಿದರು. ಆದ್ದರಿಂದ ಈ ಕೌನ್ಸಿಲ್ ತೀರ್ಮಾನಿಸಿಕೊಳ್ಳಬೇಕಾಗಿದೆ.

ನಮಗೆ ನಿರ್ಬಂಧನೆಯಾದ ಒಂದು ಅಳತೆ ಇರಬೇಕೆಂತ ನಾನು ಒಪ್ಪುತ್ತೇನೆ. ಮದ್ರಾಸಿನಲ್ಲಿ ಆಗಿಂದಾಗ್ಗೆ ಗ್ರಾಮಾಂತರಗಳಲ್ಲಿ ಸುತ್ತಿ ಅಳತೆಗಳಿಗೆ ಸೀಲ್‌ಹಾಕಿ ಕೊಡುತ್ತಾರೆ. ಇಲ್ಲಿಯೂ ಹಾಗೆ ಏನಾದರೂ ಮಾಡಬೇಕು. ಏನುಮಾಡಬೇಕೆಂಬುದಕ್ಕೆ ಈ ಕೌನ್ಸಿಲಿನ ಸಹಾಯಬೇಕಾಗಿದೆ. ಠರಾವು ತಂದವರು ಕೊಡಗಿಗೆ ಯಾವ ತರದ ಅಳತೆ ಆಗಬೇಕೆಂಬದನ್ನು ಮೊದಲೇ ನಿಶ್ಚೈಸಿ ಇಲ್ಲಿ ಹೇಳಬೇಕಿತ್ತು. ಕೆಲವುಕಾಲದ ಕೆಳಗೆ ಸರಕಾರದವರು ಬೋಧಿಸಿ ಸೇರು ಅಚ್ಚೆಯನ್ನು ಸಾಧಾರಣ ನಿರ್ಬಂಧನೆಗೆ ತಂದಿದ್ದಾರೆ. ಸೇರಿಗೆ ಒಳಗಿನ ಅಳತೆ 7 ಇಂಚು ಎತ್ತರ, ಮೂರುವರೆ ಇಂಚು ಅಗಲ.

ಯಾವ ಅಳತೆಯನ್ನು ನಿರ್ಬಂಧನೆಮಾಡಬೇಕು? ಚೀಫ್ ಕಮೀಷನರಿಗೆ ಈ ಸಭೆಯವರು ದಾರಿತೋರಿಸಿ ಕೊಡಬೇಕು. 7 ಮತ್ತು ಮೂರುವರೆ ಇಂಚಿನ ಸೇರನ್ನು ನಿರ್ಬಂಧನೆಮಾಡುವದೋ, ಅಥವ ಬೇರೆ ಸೇರನ್ನು ಅಂಗೀಕರಿಸಬೇಕೋ? ಹೇಗಾದರೂ ಮಾಡಿ ಅಳತೆಯಲ್ಲಿ ಇರುವ ಗಲಿಬಿಲಿಯನ್ನು ಹೋಗಲಾ

ದಿಸಬೇಕು. ಕನ್ನಡಜಿಲ್ಲೆ, ಮಲಬಾರು ಮತ್ತು ಮೈಸೂರು ಸೇರುಗಳನ್ನು ತರಿಸಿದ್ದೇನೆ. ಮಲಬಾರಿನಸೇರು ಕ್ಲುಪ್ತವಾಗಿಲ್ಲ. ಕನ್ನಡಜಿಲ್ಲೆ ಸೇರಿನಲ್ಲಿ 80 ತೊಲೆ ಅಕ್ಕಿ ಹಿಡಿಯುತ್ತದೆ. ಮೈಸೂರು ಸೇರಿಗೆ ತೊಂಬತ್ತುಮೂರುವರೆ ತೊಲೆಯೂ, ಮಲಬಾರ್ ಸೇರಿಗೆ 84 ತೊಲೆಯೂ ಹಿಡಿಯುತ್ತದೆ. ನಮ್ಮ ಸೇರಿನಲ್ಲಿ 84 ತೊಲೆ ತೂಕದಅಕ್ಕಿ ಹಿಡಿಯುತ್ತದೆ. ನಮ್ಮ ಸೇರು ಕನ್ನಡಜಿಲ್ಲೆ ಸೇರಿಗೆ ಸಮೀಪವಾಗಿದೆ. ಮಲಬಾರಿಗೇನೇ ಹೆಚ್ಚಾಗಿ ನಮ್ಮ ಬತ್ತ ಹೋಗುವದಾದ್ದರಿಂದ ಅಲ್ಲಿನಸೇರು ನಿಬಂಧನೆಯಾಗದೆ ಇರುವದು ವ್ಯಸನಕರ. ಅಲ್ಲಿನ ಸೇರಿನಲ್ಲಿ 420ರಿಂದ 165 ತೊಲೆ ಅಕ್ಕಿ ವರೆಗೆ ಹಿಡಿಯುತ್ತದೆ. ಆದ್ದರಿಂದ ಮಲಬಾರಿನ ಸೇರಿನಿಂದ ನಮಗೆ ಪ್ರಯೋಜನವಿಲ್ಲ. ಕನ್ನಡಜಿಲ್ಲೆಯ ಅಳತೆಯನ್ನು ನಾವು ಇಟ್ಟುಕೊಳ್ಳಬೇಕೊ ಎಂತ ಈ ಸಭೆಯು ತಿಳಿಸಬೇಕು. ಇದನ್ನು ತೆಕ್ಕೊಂಡರೆ ಸೇರಿನ ನಿಬಂಧನೆಯಾದರೂ ಆಗುತ್ತೆ.

ಎರಡನೆ ವಿಷಯ ಏನಂದರೆ—ಪರೆಯನ್ನು ಸರಕಾರದವರು ಸೀಲುಹಾಕಿ ಕೊಡಬೇಕೆಂಬದು. ಲೋಹದ ಅಳತೆಗಳಿಗೆ ಮಾತ್ರ ಸೀಲ್‌ಹಾಕುವದೇ ಪದ್ಧತಿಯಾಗಿದೆ. ಇತರ ವಸ್ತುಗಳ ಅಳತೆಗೆ ಸೀಲ್‌ಹಾಕಿದರೂ ಸವೆದುಹೋಗುವದರಿಂದ ಪ್ರಯೋಜನವಿಲ್ಲ. ಮದ್ರಾಸಿನಲ್ಲಿ ಅಳತೆಯು ಲೋಹದ್ದಾಗಿರಬೇಕು. ಪರೆಯು ಮರದಿಂದ ಮಾಡಿದ್ದಾರೆಂತ ತಿಳಿಯುತ್ತೇನೆ. ಆದ್ದರಿಂದ ಕಷ್ಟವಿದೆ. ಸೇರನ್ನು ನಿಬಂಧನೆಮಾಡಿಕೊಂಡರೆ ಪರೆಯನ್ನು ನಿಬಂಧನೆಮಾಡಬೇಕಾದದ್ದಿಲ್ಲವೆಂತ ನನಗೆ ತೋರುತ್ತೆ. ಇದರ ವಿಷಯದಲ್ಲು ಈ ಸಭೆಯ ಅಭಿಪ್ರಾಯ ಬೇಕಾಗಿದೆ.

ಈ ವಿಷಯಗಳನ್ನು ವಿಶದವಾಗಿ ತಿಳಿಸಿದರೆ ಬರುವ ಬಜೆಟ್ಟಿನಲ್ಲಿ ಇದಕ್ಕೆ ಬೇಕಾದ ಖರ್ಚಿಗೆ ಹಣ ಇಡಬಹುದು.

ಮೆ. ಎ. ಬಿ. ಜಂಗಪ್ಪನವರು.

ಕೊಡಗಿಗೆ ಪ್ರತ್ಯೇಕ ಅಳತೆಯೇ ಇರಬೇಕು. ಸೇರು 80 ತೊಲೆಯೆಂತ ನಿಬಂಧನೆ ಮಾಡಿಕೊಳ್ಳಬೇಕು. ಈಗ ತಂದ ಠರಾವಿನ ಉದ್ದೇಶವೇನಂದರೆ, ಪರೆಯನ್ನು ನಿಬಂಧನೆಮಾಡಿಕೊಳ್ಳಬೇಕೆಂಬದೇ. ಲೋಹದ ಅಳತೆಯನ್ನು ಮಾತ್ರ ನಿಬಂಧನೆ ಮಾಡಿಕೊಡಬಹುದೆಂತ ಫೈನಾನ್ಸ್ ಮೆಂಬರು ಹೇಳಿದರು. ನಮ್ಮ ಕಾಫಿಯನ್ನೆಲ್ಲಾ ಅಳೆಯುವ ಬುಶಲನ್ನು ಇಂಗ್ಲೆಂಡಿನಿಂದ ಕಳುಹಿಸುವ ಮರದತೊಗಲಿನ ಬುಶಲಿನಿಂದ ನಿಬಂಧನೆ ಮಾಡುತ್ತಾರೆಂತ ತೋರುತ್ತೆ. ಆದ್ದರಿಂದ ನಮ್ಮ ಪರೆಯನ್ನು ಸಹ ಸರಕಾರದವರು ನಿಬಂಧನೆಗೆ ಒಳಪಡಿಸಬಹುದೆಂತ ತೋರುತ್ತೆ. ಈಗ ತಂಟೆ ಇರುವದೇ ಪರೆಯಲ್ಲಿ, ಸೇರಿನಲ್ಲಿ ಅಲ್ಲ. ಪರೆಯನ್ನು ನಿಬಂಧನೆಮಾಡಬೇಕಾದದ್ದೇ ಅವಶ್ಯ. ಈಗ ವ್ಯಾಪಾರಿಯು ತರುವ ಪರೆಯು ಸರಿಯೋ ಎಂತ ನೋಡಲಿಕ್ಕಾಗುವದಿಲ್ಲ. ಸೀಲ್ ಹಾಕುವ ರೂಲ್ ಇದ್ದರೆ ನೋಡಿದ ಕೂಡಲೆ ನ್ಯಾಯವಾದ ಪರೆಯೋ ಎಂತ ಹೇಳಬಹುದು. ದಕ್ಷಿಣಕನ್ನಡ ಜಿಲ್ಲೆಯ ಅಥವ ಮೈಸೂರಿನ ಅಳತೆಯನ್ನು ನಾವು ಅಂಗೀಕರಿಸಬೇಕಾಗಿಲ್ಲ. ನಮ್ಮ ದೇಶದಿಂದ ಹೊರಗೆ ಹೋಗುವ ಮಾಲಿನ ಅಳತೆಯು ಸರಿಯಾಗಬೇಕಾದದ್ದೇ ಅವಶ್ಯ.

ಅಧ್ಯಕ್ಷರು.—ಪರೆಯಲ್ಲು ಎಷ್ಟುಸೇರು ಹಿಡಿಯುತ್ತೆ ?

ಮೆ. ಎ. ಬಿ. ಜಂಗಪ್ಪನವರು.—ಹತ್ತು.

ಮೆ. ಸಿ. ಜೆ. ಟಿಪ್ಪಿಂಗ್‌ರವರು.

ಅಧ್ಯಕ್ಷರೇ ನಮಗೆ ಒಂದೇ ತರದ ಅಳತೆ ಇರಬೇಕೆಂತ ನಾನು ಒಪ್ಪುತ್ತೇನೆ. ಸೇರು ನಿಬಂಧನೆಯಾದರೆ ಪರೆಯನ್ನು ಸರಿಯೋ ಎಂತ ಸುಲಭವಾಗಿ ನೋಡಿಕೊಳ್ಳಬಹುದು. ಮರದ ಪರೆಗಳನ್ನು ನಿಬಂಧನೆಮಾಡುವದೇ ಸಾಧ್ಯವಿಲ್ಲ.

ಠರಾವಿಗೆ ನನ್ನ ಒಪ್ಪಿಗೆ ಇದೆ.

ಮೆ. ಬಿ. ಶ್ರೀಪತಿರಾಯರು.

ಸೇರನ್ನು ನಿಬಂಧನೆಮಾಡಬೇಕೆಂಬ ವಿಷಯದಲ್ಲಿ ನಮ್ಮೆಲ್ಲರದೂ ಒಪ್ಪಿಗೆಇದೆ. ಅರ್ಧಸೇರು, ಪಾವನ್ನು ಸಹ ನಿಬಂಧನೆಮಾಡಿದಂತೆಯೇ ಪರೆಯನ್ನು ಸಹ ನಿಬಂಧನೆಮಾಡಿಕೊಡಬೇಕು. ಮರಪರೆಯ ಬಾಯಿಗೆ ಲೋಹದ ತಗಡನ್ನು ಹೊಡೆದರೆ ಪರೆಯನ್ನು ಸುಲಭದಲ್ಲಿ ವ್ಯತ್ಯಾಸಮಾಡಲಿಕ್ಕಾಗುವದಿಲ್ಲ. ಮೊದಲು ಇಂಥಾ ಪರೆಗಳಿರುತ್ತಿದ್ದವು, ಕೆಲವು ಕಡೆಗಳಲ್ಲಿ ಲೋಹದ ಪರೆಗಳೂ ಇರುತ್ತಿದ್ದವು. ಬತ್ತವನ್ನು ಅಳೆಯಲು ಪರೆಯನ್ನೇ ಉಪಯೋಗಿಸುವದಾದ್ದರಿಂದ ಅದನ್ನು ನಿಬಂಧನೆ ಮಾಡುವದು ಅವಶ್ಯ.

ಅಧ್ಯಕ್ಷರು.—ಶಿಫಾರಸು ಮಾಡಲ್ಪಟ್ಟಸೇರು ಸರಕಾರಿ 80 ತೊಲೆಯ ಸೇರೊ ?

ಮೆ. ಸಿ. ಎನ್. ವೆಂಕಪ್ಪೈಯ್ಯನವರು.

ಸೇರಿನ ವಿಷಯದಲ್ಲಿ ಏನೂ ತೊಂದರೆ ಬಂದಿರುವದಿಲ್ಲ. ಮರದ ಪರೆಗೆ ಸೀಲ್‌ಹಾಕಿ ಕೊಡಲಾಗುವದಿಲ್ಲವಾದರೆ ತಾಂಬ್ರದ ಪರೆಯನ್ನೇ ಇಡಬೇಕೆಂತ ರೂಲ್‌ಮಾಡಿ ಅದಕ್ಕೆ ಸೀಲ್ ಹಾಕಿ ಕೊಡಬಹುದು.

ಮೆ. ಪಿ. ಬಿ. ಮೇದಪ್ಪನವರು.

ಸೇರು ಪರೆಯನ್ನು ನಿಬಂಧನೆಮಾಡಿದರೂ ಸಾಲದು. ನಿಬಂಧನೆಯಾದ ಸೇರು ಪರೆಯನ್ನೇ ಉಪಯೋಗಿಸಬೇಕೆಂತ ರೂಲ್‌ಮಾಡಬೇಕು. ಒಂದೆರಡು ಕೇಸ್‌ಗಳಲ್ಲಿ ಯಾವ್ಯಕ್ತಿಯನ್ನು ಅಳೆಯುವಾಗ ಮಂಗಳೂರುಸೇರನ್ನು ಉಪಯೋಗಿಸಿ ಬಾಣೆಯನ್ನು ತಪ್ಪಿಸಿಕೊಂಡದ್ದು ನನಗೆ ಗೊತ್ತಿದೆ. ಆದರಲ್ಲಿ ಸೀಲ್ ಇರಲಿಲ್ಲ. ಮೋಸಗಾರ ವ್ಯಾಪಾರಿಯ ಹಾವಳಿಯನ್ನು ತಪ್ಪಿಸಬೇಕಾದರೆ ನಿಬಂಧನೆಯಾದ ಅಳತೆಯನ್ನೇ ಉಪಯೋಗಿಸಬೇಕೆಂತ ಖಾನೂನ್‌ಮಾಡಬೇಕು.

ಮೆ. ಟಿ. ಜಿ. ಟಾಸ್ಕರ್‌ರವರು.

ಪರೆಯನ್ನು ನಿಬಂಧನೆಮಾಡಲು ಅನುಕೂಲಗಳಿದೆಯೆಂತ ತಿಳಿಯಲು ಸಂತೋಷಪಡುತ್ತೇನೆ. ಸೇರಿನ ಅಳತೆ ಎಷ್ಟಿರಬೇಕೆಂತ ಇನ್ನೂ ತಿಳಿಯಲಿಲ್ಲ. ಠರಾವು ತಂದವರು ಕನ್ನಡ ಜಿಲ್ಲೆ ಸೇರು ಬೇಡವೆಂತ ಹೇಳಿದರು. ಆದರೆ 80ತೊಲೆ ಸೇರಿರಬೇಕೆಂತ ಹೇಳುತ್ತಾರೆ. 80ತೊಲೆ ಸೇರು ಬೇಕೊ, 84 ತೊಲೆ ಸೇರುಬೇಕೊ, ಎಂಬದು ತಿಳಿದರೂ ನಾನು ಮುಂದರಿಸಬಹುದು.

ಮೆ. ಪಿ. ಬಿ. ಮೇದಪ್ಪನವರು.

ಬಿಜಾಪುರದಲ್ಲಿ ಒಂದು ನಿಬಂಧನೆ ಸೇರು ಇದೆಯೆಂತ ತೋರುತ್ತೆ.

ಮೆ. ಟಿ. ಜಿ. ಟಾಸ್ಕರ್‌ರವರು.—ನನ್ನ ಆಫೀಸರು ಪೇಟೆಗೆ ಹೋಗಿ ಒಂದು ಸೇರು ತಂದರಷ್ಟೆ.

ಮೆ. ಎ. ಬಿ. ಜಂಗಪ್ಪನವರು.—ನಮಗೆ 80 ತೊಲೆಸೇರು ಬೇಕು.

ಮೆ. ಪಿ. ಬಿ. ಮೇದಪ್ಪನವರು.—80 ತೊಲೆಯ ಸೇರಾದರೆ ಹೆಚ್ಚಿನ ಜನರು ಹೊಸ ಸೇರು ಮಾಡಿಸಬೇಕಾಗುತ್ತೆ. ನಮಗೆ ಈಗ ಇರುವಸೇರನ್ನೇ ನಿಬಂಧನೆಮಾಡಿಕೊಡಬೇಕಷ್ಟೆ.

ಠರಾವು ಸರ್ವಸಮ್ಮತದಿಂದ ಪಾಸಾಯಿತು.

22ನೇ ಠರಾವು.

ಮೆ. ಸಿ. ಎನ್. ವೆಂಕಪ್ಪೈಯ್ಯನವರು.

"ಎಲ್ಲಾ ಆಕ್ಟುಗಳ ಮೇಲೆ ಸ್ಥಳೀಯ ಸರಕಾರವು ಮಾಡುವ ರೂಲ್‌ಗಳು ಮಂಜೂರಾಗುವ ಮುಂಚೆ ಈ ಕೌನ್ಸಿಲಿಗೆ ಅವುಗಳನ್ನು ಚರ್ಚಿಸುವ ಅನುಕೂಲಕೊಡುವಂತೆ ಚೀಫ್ ಕಮಿಷನರಿಗೆ ಸಭೆಯು ಶಿಫಾರಸುಮಾಡುತ್ತದೆ"

ಅನೇಕ ಆಕ್ಟುಗಳ ಮೇಲೆ ರೂಲ್ ಮಾಡಿಕೊಳ್ಳುವ ಪವರ್ ಸ್ಥಳೀಯ ಸರಕಾರಕ್ಕೆ ಕೊಟ್ಟರೆ ಹೀಗೆ ಮಾಡುವ ರೂಲ್‌ಗಳ ಮಸೂದೆಯನ್ನು ಸಮುದಾಯದ ಟಿಪ್ಪಣಿಗಾಗಿ ಪ್ರಕಟಿಸಬೇಕೆಂತ ಇದೆ. ಇಂಥಾ ಮಸೂದೆರೂಲ್‌ಗಳು ನಮ್ಮ ಗಜೆಟಿನಲ್ಲು ಆಗಿಂದಾಗ್ಯೆ ಪ್ರಕಟ ಆಗುತ್ತವೆ. ಗ್ರಾಮದ ರೈತರಿಗೆ ಸಂಬಂಧಪಡುವ ಇಂಥಾಮಸೂದೆಯ ರೂಲ್‌ಗಳು ಪ್ರಕಟವಾದದ್ದು ವಾಯಿದೆಯೊಳಗೆ ಗ್ರಾಮದವರಿಗೆ ತಿಳಿಯುವದಿಲ್ಲ. ರೂಲನ್ನು ಜಾರಿಮಾಡುವಾಗಮಾತ್ರ ಅವರಿಗೆ ರೂಲಾದದ್ದು ಗೊತ್ತಾಗುತ್ತದೆಯಷ್ಟೆ. ಆಗ ರೂಲಿಗೆ ಆಕ್ಷೇಪಿಸಲು ಕಾಲಮೀರುತ್ತದೆ. ದೇಶದಲ್ಲಿ ಸಮುದಾಯದ ಅಭಿಪ್ರಾಯ ಕೊಡಲು ಏರ್ಪಾಡಾಗಿರುವ ಒಂದೇ ಸಮಾಜವಾದ ಜಮೀನ್‌ದಾರರ ಸಂಘವು ಒಂದೆರಡಾವರ್ತಿ ಮಸೂದೆ ಖಾನೂನಿಗೆ ಆಕ್ಷೇಪಿಸಿದ್ದು ನನಗೆ ಗೊತ್ತಿದೆ. ಆದರೆ ರೂಲ್ ಮಂಜೂರಾಯಿತು. ಮಸೂದೆ ಠರಾವನ್ನು ಪ್ರಕಟಿಸುವದರ ಉದ್ದೇಶವನ್ನು ಸಫಲಗೊಳಿಸಬೇಕಾದದ್ದೇ ನನ್ನ ಠರಾವಿನ ಉದ್ದೇಶವಾಗಿದೆ. ರೂಲ್‌ಮಾಡುವ ಮುಂಚೆ ಸಮುದಾಯದವರ ಅಭಿಪ್ರಾಯ ತೆಗೆದುಕೊಳ್ಳಬೇಕೆಂತ ಸರಕಾರದ ಉದ್ದೇಶವಾದರೆ ಮಸೂದೆ ರೂಲ್‌ಗಳ ಮೇಲೆ ಈ ಕೌನ್ಸಿಲಿನಅಭಿಪ್ರಾಯ ಕೊಡಲು ಅನುಕೂಲಕೊಡಬೇಕು.

ನಮ್ಮ ಸ್ಥಳೀಯ ಸರಕಾರವು ಒಬ್ಬಮನುಷ್ಯನಿಂದ ಮಾತ್ರ ಕೂಡಿದಂಥಾದ್ದು. ಎಕ್ಸಿಕ್ಯೂಟಿವ್ ಕೌನ್ಸಿಲರುಗಳಾಗಲೀ ಮಂತ್ರಿಗಳಾಗಲೀ ಇಲ್ಲ. ಆದ್ದರಿಂದ ಸಮುದಾಯದ ಅಭಿಪ್ರಾಯವನ್ನು ಸ್ಥಳೀಯ ಸರಕಾರಕ್ಕೆ ತಿಳಿಸುವವರೇ ಇಲ್ಲ. ಆದ್ದರಿಂದ ಈ ಕೌನ್ಸಿಲಿಗೆ ದೇಶದ ಅಭಿಪ್ರಾಯ ತಿಳಿಸಲು ಅನುಕೂಲಕೊಡಬೇಕಾದದ್ದು ಅವಶ್ಯ. ಈ ಹಕ್ಕನ್ನು ಖಾನೂನುಮೇರೆ ಕೊಡಬೇಕೆಂತ ಕೇಳುವದಿಲ್ಲ. ಹೀಗೆ ಪದ್ಧತಿಮಾಡಿಕೊಂಡರೆ ಸಾಕಾಗಿದೆ.

ಮೆ. ಬಿ. ಶ್ರೀಪತಿರಾಯರು.—ನಾನು ಅನುಮೋದಿಸುತ್ತೇನೆ.

ಮೆ. ಟಿ. ಜೆ. ಟಾಸ್ಕರ್‌ರವರು.—ಈ ಠರಾವನ್ನು ತಂದವರ ಭಾಷಣದ ಸ್ಪಿರಿಟ್ ಮಾತಿನಿಂದ ಈ ಠರಾವನ್ನು ಅಂಗೀಕರಿಸಲು ಖಾನೂನಿನ ಅಡಚಣೆ ಇದೆಯೆಂಬದು ಇವರಿಗೆ ತಿಳಿದಿದೆಯೆಂತ ಗೊತ್ತಾಗುತ್ತೆ. ಗ್ರಾಮವಾಸಿಗಳಿಗೆ ಮಸೂದೆ ರೂಲ್‌ಗಳು ಸಮಯಕ್ಕೆ ಸರಿಯಾಗಿ ತಿಳಿಯಬೇಕೆಂತ ನಾನು ಒಪ್ಪುತ್ತೇನೆ. ಈಗ ಗ್ರಾಮ ಕೈತಠವಿಷಯ ನಾವು ಅಷ್ಟೊಂದು ಯೋಚಿಸಬೇಕಾದದ್ದಿಲ್ಲ. ಗ್ರಾಮವಾಸಿಗಳ ಕ್ಷೇಮವನ್ನು ಕಾಪಾಡಲು ಈ ಕೌನ್ಸಿಲು ಇದೆ.

ಖಾನೂನುಮೇರೆ ಚೀಫ್‌ಕಮಿಷನರಿಗಿರುವ ಹಕ್ಕನ್ನು ಅವರು ಬಿಟ್ಟುಬಿಡುವದು ಹೇಗೆ? ಕೌನ್ಸಿಲಿಗೆ ಇರುವ ಹಕ್ಕಿಗೆ ಚೀಫ್‌ಕಮಿಷನರು ಅಡ್ಡಿ ಬರುವದಿಲ್ಲ. ಚೀಫ್ ಕಮಿಷನರಿಗೆ ಇರುವ ಹಕ್ಕಿಗೆ ಈ ಕೌನ್ಸಿಲ್ ಅಡ್ಡಿಬರಬಾರದು. ಮಧ್ಯವರ್ತಿಯಾಯಿದೇ ಕೌನ್ಸಿಲು ಚೀಫ್‌ಕಮಿಷನರಿಗೆ ಕೊಟ್ಟಿರುವ ಹಕ್ಕನ್ನು ಅವರು ಬಿಟ್ಟುಕೊಡಬೇಕೆಂತ ಈ ಕೌನ್ಸಿಲ್ ಕೇಳಬಹುದೋ ? ಈ ಕೌನ್ಸಿಲಿಗಿಂತ ದೊಡ್ಡಸಂಸ್ಥೆಯು ಚೀಫ್‌ಕಮಿಷನರು ರೂಲ್‌ಮಾಡಿಕೊಳ್ಳಬಹುದೆಂತ ಹೇಳಿರುವಾಗ ಆ ಕೆಲಸವನ್ನು ಅವರು ಮಾಡಲೇಬೇಕು. ರೂಲ್ ನಡಿದನಂತರವಾದರೂ ಈ ಕೌನ್ಸಿಲಿನಲ್ಲಿ ಇಂಥಾ ರೂಲ್‌ಗಳ ಮೇಲೆ ಠರಾವುತಂದು ಪಾಸ್‌ಮಾಡಿದರೆ ಚೀಫ್ ಕಮಿಷನರು ಪುನಹ ಯೋಚಿಸಬಹುದು. ಪ್ರಜಾ ಪ್ರತಿನಿಧಿಗಳ ಸರಕಾರದಲ್ಲೂ ಖಾನೂನುಮೇರೆ ಕೊಟ್ಟಿರುವ ಹಕ್ಕುಗಳನ್ನು ಬಹಳ ಜಾಗರೂಕತೆಯಿಂದ ಕಾದುಕೊಳ್ಳಬೇಕು. ಆದ್ದರಿಂದ ಠರಾವನ್ನು ಈ ಕೌನ್ಸಿಲು ಪಾಸುಮಾಡಬಾರದು.

ಮೆ. ಸಿ. ಎನ್. ವೆಂಕಪ್ಪೈಯ್ಯನವರು.

ಈ ಠರಾವನ್ನು ಕಳುಹಿಸಿದನಂತರ ಖಾನೂನ್‌ಮೇರೆ ಇದು ಸಾಧ್ಯವೋ ಎಂತ ನನಗೆ ಸಂಶಯಬಂತು. ಠರಾವನ್ನು ವಾಪಾಸುಪಡಿಸಬಾರದೆಂತ ನನಗೆ ಈಗ ಇನ್ನಷ್ಟು ಕಂಗಿತವಾಯಿತು. ಮಸೂದೆ ರೂಲ್‌ಗಳನ್ನು ಮಂಜೂರ್ಮಾಡುವ ಮುಂಚೆ ಕೌನ್ಸಿಲ್ ಚರ್ಚೆಗೆ ಅನುಕೂಲಕೊಡಲು ಚೀಫ್‌ಕಮಿಷನರದು ಆಕ್ಷೇಪಣೆ ಇರಲಾರದೆಂತ ಯೋಚಿಸಿ ಠರಾವನ್ನು ಸಭೆಯಮುಂದೆ ತಂದದ್ದಾಗಿದೆ. ಮಂಜೂರಾದ ರೂಲನ್ನು ಠರಾವು ಮೂಲಕ ರದ್ದುಮಾಡುವದಕ್ಕಿಂತ, ಮಸೂದೆ ರೂಲಿನ ಮೇಲೆ ಕೌನ್ಸಿಲ್ ಚರ್ಚಿಸುವದು ಉತ್ತಮವೆಂತ ನನಗೆ ತೋರಿತು. ಠರಾವನ್ನು ವಾಪಾಸು ತೆಗೆದುಕೊಳ್ಳುತ್ತೇನೆ.

ಅನುಮತಿಯೊಡನೆ ಠರಾವು ವಾಪಾಸು ತೆಗೆದುಕೊಳ್ಳಲಾಯಿತು.

ದೇವರ ದಯವಿರಲಿ.

(ಮಹಾತ್ಮ ಗಾಂಧಿಯವರ ಲೇಖನದ ಅನುವಾದ.)

ತುಂಬಾ ಪ್ರಾರ್ಥನೆ ಮಾಡಿ, ತುಂಬಾ ಸ್ವ ಆತ್ಮ ಪರೀಕ್ಷೆ ಮಾಡಿ, ಭಯದಿಂದೊಡಗೂಡಿ ಮುಂದಿನ ಕಾಂಗ್ರೆಸ್ಸಿನ ಅಧ್ಯಕ್ಷತೆಯನ್ನು ಒಪ್ಪಿಕೊಳ್ಳಲು ನಿಶ್ಚೈಸಿರುತ್ತೇನೆ. ನನಗೂ ವಿದ್ಯಾವಂತ ಭರತಖಂಡಕ್ಕೂ ಮಧ್ಯೆ ದೊಡ್ಡ ಹಳ್ಳವೇ ಮಧ್ಯೆ ಬಾಯಿ ಬಿಟ್ಟಂತಿರುವಾಗ, ಕೆಲವು ಅನಾಮಧೇಯ ಯುವಕರು ವಿನಹ ಒಟ್ಟು ತಿಳುವಳಿಕೆ ಇರುವ ಹಿಂದುಸ್ಥಾನವೆಲ್ಲಾ ನನ್ನ ಆಲೋಚನೆಗಳಿಗೂ ಕೆಲಸಗಳಿಗೂ ವಿರೋಧವಾಗಿರುವಾಗ ನಾನು ಅಧ್ಯಕ್ಷನಾಗಬೇಕಾಗಿದೆ. ಆದರೆ ಒಟ್ಟು ಸಮುದಾಯದ ಪ್ರೀತಿಗೆ ನಾನು ಪಾತ್ರನಾಗಿರುವಂತೆ ತೋರುವದರಿಂದಲೂ, ಅನೇಕ ವಿದ್ಯಾವಂತರು ಅವರಂತೆಯೇ ನಾನೂ ಸಹ ದೇಶಭಕ್ತನೆಂತ ಯೋಚಿಸಿ ಈ ಬಿಕ್ಕಟ್ಟಿನ ಸಮಯದಲ್ಲಿ ನನ್ನನ್ನು ಅಧ್ಯಕ್ಷ ಪದವಿಯನ್ನು ವಹಿಸಲು ಕೇಳಿಕೊಂಡಿದ್ದಾರೆ. ಅವರ ಕೋರಿಕೆಗೆ ವಿರೋಧವಾಗಿ ನಡೆಯಬಾರದೆಂತ ನನಗೆ ತೋರಿದೆ. ದೇಶದ ಪ್ರಯೋಜನಕ್ಕಾಗಿ ನನ್ನನ್ನು ಉಪಯೋಗಿಸಿಕೊಳ್ಳಲು ಬಿಡಬೇಕೆಂತನಿಶ್ಚೈಸಿದ್ದೇನೆ. ಅಖಿಳ ಭಾರತೀಯ ಕಾಂಗ್ರೆಸ್ ಕಮಿಟಿಯ ಫೈಸಲ್ ಏನಾಗುತ್ತೆಂತ ನೋಡುತ್ತಾ ಕಾದಿದ್ದೆ. ಆ ಸಭೆಯಲ್ಲಿ ಸ್ವರಾಜ್ಯಪಕ್ಷದವರು ಮೌನ ತಾಳಿದರು. ಕಾಂಗ್ರೆಸ್ಸಿನ ಚಂದಾ ಬದಲಾವಣೆ ವಿಷಯದಲ್ಲಿ ಅವರಲ್ಲಿ ಕೆಲವರು ಕತೂಹಲಿಗಳಾಗಿಲ್ಲ. ಅವರೆ ಶಾಂತತೆ ಮತ್ತು ಒಗ್ಗಟ್ಟಿಗಾಗಿ ಮೌನದಿಂದ ತಮ್ಮ ಓಟನ್ನು ಬದಲಾವಣೆಯ ಪರವಾಗಿ ಕೊಟ್ಟರು; ಬದಲಾಗಬಾರದೆನ್ನುವವರು (ನೋಚೇಂಜರುಗಳು) ತಾವು ಶರಣಾಗತರಾಗಬೇಕಾದ್ದಕ್ಕಾಗಿ ವ್ಯಸನದಿಂದ ವಾದಿಸಿದರು. ಆದರೂ ವಿರೋಧವಾಗಿ ಓಟ್ ಮಾಡಲಿಲ್ಲ.

ಇದು ಎರಡು ಪಕ್ಷದವರಿಗೂ ಗೌರವವನ್ನು ಕೊಟ್ಟಿದೆ. ಆದರೆ ಕೆಲಸಮಾಡಲು ಧೈರ್ಯ ಕೊಡುವ ವಾತಾವರಣವಾಗಿಲ್ಲ. ಈಗಲೇ ನನ್ನ ಅಹಿಂಸಾ ತತ್ವವನ್ನು ಪರೀಕ್ಷೆ ಮಾಡಬೇಕಾದ ಸಮಯವಾಗಿದೆ. ಬದಲಾಗಬಾರದೆನ್ನುವವರ, ಸ್ವರಾಜ್ಯ ಪಕ್ಷದವರ, ಲಿಬರಲ್ ಪಕ್ಷದವರ, ಬೆಸೆಂಟಮ್ಮನವರ ಪಕ್ಷದವರ, ಸ್ವತಂತ್ರಿಗಳ, ಯಾಕೆ ಇಂಗ್ಲಿಷರ ಮೇಲೆ ಸಹ ನನ್ನ ಪ್ರೀತಿಯು ಏಕಪ್ರಕಾರಗವಾಗಿ ದ್ವರೆ ಧೈರ್ಯಗೆಡಬೇಕಾಗಿಲ್ಲ.

ನಾನು ದೇಶವನ್ನು ಮೋಸಗೊಳಿಸಬಾರದು. ನನಗೆ ಮತವಿಲ್ಲದ ರಾಜಕೀಯ ಕಾರ್ಯವಿಲ್ಲ. ನನ್ನ ಮತವು ಮೂಢಭಕ್ತರ ಮತವಲ್ಲ. ದ್ವೇಷಿಸುವ, ಬಡಿದಾಡುವ ಮತವಲ್ಲ, ಸಮಸ್ತ ಜನರೊಳಗೆ ಒಂದಾಗಿರುವ ಸಹನೆಯೊಡನೆ ಕೂಡಿದ ಮತವಾಗಿದೆ. ನೀತಿ ಧರ್ಮವಿಲ್ಲದ ರಾಜಕೀಯ ಕೆಲಸವನ್ನು ವರ್ಜಿಸಬೇಕು. "ಹಾಗಾದರೆ ನೀನು ರಾಜಕೀಯ ಚಳವಳಿವನ್ನು ಬಿಟ್ಟುಬಿಡು" ಎಂತ ಕೆಲವರು ಅನ್ನಬಹುದು. ಆದರೆ ಅದು ನನ್ನ ಅನುಭವವಲ್ಲ. ನನ್ನ ಸಮಾಜದಲ್ಲೇ ಇದ್ದು ಅದರ ಲೋಪಗಳಿಗೆ ತುತ್ತಾಗದಂತೆ ವರ್ತಿಸಬೇಕು. ಈಗ ಕಾಂಗ್ರೆಸ್ಸಿನಿಂದ ಓಡಿಬಿಡುವದೆಂದರೆ ಹೇಡಿತನ. ಅಧ್ಯಕ್ಷತೆಯನ್ನು ಒಪ್ಪಿಕೊಳ್ಳದಿದ್ದರೆ ಓಡಿದಂತೆಯೇ ಆಗುತ್ತೆಂತ ನಾನು ಭಾವಿಸುತ್ತೇನೆ. ಎಲ್ಲರೂ ನನ್ನ ದಾರಿಗೆ ಸಹಾಯಕರಾಗಿರುವಾಗ ತಪ್ಪಿಸಿಕೊಳ್ಳುವದು ನ್ಯಾಯವಲ್ಲ.

ನನ್ನ ಕಾರ್ಯ ಕ್ರಮದಲ್ಲೂ ಮನುಷ್ಯ ಬಾಬಿಯಲ್ಲೂ ನನಗೆ ತುಂಬಾ ನಂಬಿಕೆ ಇದೆ. ಹಿಂದುಸ್ಥಾನದ ಮನುಷ್ಯತ್ವವು ಬೇರೆಯವರಿಗಿಂತ ಕೆಟ್ಟದಲ್ಲ. ಇನ್ನೂ ಸ್ವಲ್ಪ ಉತ್ತಮವಿರಬಹುದು. ದಾರಿಯು ಕತ್ತಲಾಗಿ ಕಂಡರೂ ನನಗೆ ದೇವರಲ್ಲಿ ನಂಬಿಕೆ ಇದ್ದರೆ ಮತ್ತು ಆವನ ಸಹಾಯವಿಲ್ಲದೆ ನಾನು ಏನೂ ಮಾಡಲಾರೆ ಎಂಬದನ್ನು ಒಪ್ಪಿಕೊಳ್ಳಲು ನನ್ನಲ್ಲಿ ನಮ್ರತೆ ಇದ್ದರೆ ದೇವರು ಬೆಳಕು ಕೊಟ್ಟು ನನ್ನ ಗಮನಕ್ಕೆ ಸಹಾಯ ಮಾಡಿಯಾನು. ನಾನು ಎಂದಿನಂತೆಯೇ ಅಸಹಕಾರಿಯಾಗಿದ್ದರೂ ಒಟ್ಟಾಗಿ ದೇಶವೆಲ್ಲಾ ಅಸಹಕಾರವನ್ನು ವಹಿಸಲು ಇನ್ನೂ ದೇಶವು ತಯಾರಾಗಿಲ್ಲವೆಂತ ನಾನು ತಿಳಿ

ಕೊಂಡಿದ್ದೇನೆ. ಆದ್ದರಿಂದ ಎಲ್ಲಾ ಜನರನ್ನೂ ಜಾತಿ ಬಣ್ಣ ಭೇದವಿಲ್ಲದೆ ಒಗ್ಗಟ್ಟುಗೊಳಿಸಲು ಪ್ರಯತ್ನಿಸುತ್ತೇನೆ. ಇದರಿಂದ ಕಾಂಗ್ರೆಸ್ಸಿನ ಅಸಹಕಾರವು ದ್ವೇಷದಿಂದ ಹುಟ್ಟಿದ್ದಲ್ಲವೆಂಬುದನ್ನು ನಿದರ್ಶಿಸಬೇಕು. ಅಸಹಕಾರವನ್ನು ಅಸಾಧ್ಯವಾಗಿ ಮಾಡುವ ಭಾರವನ್ನೂ ಎಲ್ಲಾ ಪಾರ್ಟಿಗಳ ಮೇಲೆ ಹಾಕಿ, ಸ್ವರಾಜ್ಯವನ್ನು ಪಡೆಯಲು ಪ್ರಯತ್ನಿಸುತ್ತೇನೆ. ಆದ್ದರಿಂದ ನಾಷನಲಿಸ್ಟ್ ಅಲಿಯವರ ಆಮಂತ್ರಣದ ಮೇಲೆ ಸರ್ವಪಕ್ಷದವರೂ ಡೆಲಿಗೇಟರಾಗಿ ಅಲ್ಲದೆ ಇದ್ದರೂ ಪ್ರೇಕ್ಷಕರಾಗಿಯಾದರೂ ಬಂದು ತಮ್ಮ ಆಲೋಚನೆ ಕೊಟ್ಟು ಸಹಾಯ ಮಾಡಬೇಕೆಂತ ಕೋರುತ್ತೇನೆ.

ಒದಲಾಗಬಾರದವನ್ನುವವರೇ ಆಗಲಿ, ಸ್ವರಾಜ್ಯ ಪಕ್ಷದವರೇ ಆಗಲಿ, ಹಿಂದುಗಳಾಗಲಿ, ಮುಸಲ್ಮಾನರಾಗಲಿ, ಬ್ರಾಹ್ಮಣರಾಗಲಿ, ಬ್ರಾಹ್ಮಣೇತರರಾಗಲಿ, ಕಾಂಗ್ರೆಸ್ಸಿನವರ ಮೇಲೆ ದೊಡ್ಡ ಭಾರವಿದ್ದಿದೆ. ತಮ್ಮ ಕಾರ್ಯಕ್ರಮವನ್ನು ತಮ್ಮ ದೇಹದ ಮೇಲೂ ನಿತ್ಯ ಕೆಲಸದಿಂದಲೂ ತೋರಿಸಬೇಕಾಗಿದೆ. ಕಾಂಗ್ರೆಸ್ಸಿಗೆ ಸೇವಕರಾಗಿಯೇ ಬರುತ್ತಾರಯೇ ಹೊರತು ತಮಗೆ ಸೇವೆಯನ್ನು ನಿರೀಕ್ಷಿಸಿಕೊಂಡು ಬರುವದಿಲ್ಲ. ಈಗ ನಾಲ್ಕು ವರುಷದಿಂದ ಬೋಧಿಸುತ್ತಿದ್ದ ಖದ್ದರಿನಲ್ಲಿ ಇರುವ ತಮ್ಮ ಭಕ್ತಿಯನ್ನು ಖದ್ದರ್ ಧರಿಸಿ ತೋರಿಸುತ್ತಾರೆ. ಎಲ್ಲಾ ಜಾತಿ ಮತಗಳೊಳಗೆ ಒಗ್ಗಟ್ಟಿನಲ್ಲಿ ಇರುವ ತಮ್ಮ ನಂಬಿಕೆಯನ್ನು ಅನ್ಯೋನ್ಯ ಸಹನೆಯಿಂದ ಪ್ರತ್ಯಕ್ಷಗೊಳಿಸುತ್ತಾರೆ. ಹಿಂದೂಗಳು ಅಸ್ಪೃಶ್ಯತೆಯನ್ನು ಹೋಗಲಾಡಿಸುವದರಲ್ಲಿ ತಮಗೆ ಇರುವ ನಂಬಿಕೆಯನ್ನು ಕಾಂಗ್ರೆಸ್ಸಿಗೆ ಬರುವ ಅಸ್ಪೃಶ್ಯರ ಸೇವೆಮಾಡಿ ತೋರಿಸುತ್ತಾರೆ.

ನಮ್ಮಲ್ಲಿ ಇರುವ ಅನೇಕ ಕಷ್ಟಗಳಿಗೆ ಹಿಂದೂ ಮುಸಲ್ಮಾನ್ ಜಗಳ, ಬಂಗಾಳದ ದಬ್ಬಾಳಿಕೆ, ಅಕಾಲಿಗಳ ಹಿಂಸೆ, ಅಸ್ಪೃಶ್ಯರಿಗಾಗಿ ವೈಕಮಿನಲ್ಲಿ ನಡಿಯುವ ಚಳವಳಿ, ಸ್ವರಾಜ್ಯ ಸಾಧನ. ಇವುಗಳಿಗೆಲ್ಲಾ ಪರಿಹಾರವನ್ನು ನನ್ನಿಂದ ಡೆಲಿಗೇಟರುಗಳೂ, ಪ್ರೇಕ್ಷಕರೂ ನಿರೀಕ್ಷಿಸಿಯಾರು, ನನ್ನಲ್ಲಿ ತಯಾರಾದ ಉಪಾಯವೇನೂ ಇಲ್ಲ. ಡೆಲಿಗೇಟರುಗಳಲ್ಲೆ ಮತ್ತು ಪ್ರೇಕ್ಷಕರಲ್ಲೇ ಇವಕ್ಕೆಲ್ಲಾ ಪರಿಹಾರವಿದೆ. ನಾನು ಕೈಕಂಬದಂತೆ ಬೆಟ್ಟು ತೋರಿಸಬಹುದು. ಆ ದಾರಿ ಹಿಡಿಯುವದೂ ಬಿಡುವದೂ ಕಾಂಗ್ರೆಸ್ಸಿನವರಿಗೆ ಕೂಡಿದೆ. ದೇವರು ನಮಗೆಲ್ಲರಿಗೂ ಸಹಾಯ ಕೊಡಲಿ.

೩೯ನೆಯ ರಾಷ್ಟ್ರೀಯ ಸಭೆ, ೧೯೨೪, ಬೆಳಗಾಂವಿ.

ಪ್ರಕಟನಾಪತ್ರ ನಂ ೪

(ಪ್ರಕಟನಾ ಶಾಖೆಯಿಂದ)

೧ ಮಹಾತ್ಮಾ ಗಾಂಧಿಯವರು ಇದೇ ಡಿಸಂಬರ ತಿಂಗಳಲ್ಲಿ ಬೆಳಗಾಂವಿಯ 'ವಿಜಯನಗರ' ದಲ್ಲಿ, ಇಡೀ ಜಗತ್ತಿನಲ್ಲಿ ದೊಡ್ಡದೆಂದು ಪ್ರಸಿದ್ಧಗೊಂಡಿರುವ ವಿಶಾಲವಾದ ಖಾದೀ ಹೇರ (ನಂ ೧) ಯಲ್ಲಿ ಸೇರುವ ೩೯ನೆಯ ಅಖಿಲ ಭಾರತ ರಾಷ್ಟ್ರೀಯ ಸಭೆಗೆ (ಕಾಂಗ್ರೇಸಿಗೆ) ಅಧ್ಯಕ್ಷರಾಗಲು ತಮ್ಮ ಒಪ್ಪಿಗೆಯನ್ನು ಕೊಟ್ಟಿರುವರು.

೨ ರಾಷ್ಟ್ರೀಯ ಸಭೆಯ ವಿಷಯ ನಿಯಾಮಕ ಕಮಿಟಿಯು (ಆ ' ಇಂಡಿಯಾ ಕಾಂಗ್ರೆಸ ಕಮಿಟಿಯು) ಡಿಸಂಬರ ೨೩ನೆಯ ತಾರೀಕು (ಮಂಗಳವಾರ) ಬೆಳಗ್ಗೆ ಮತ್ತು ಸಾಯಂಕಾಲ ಮತ್ತೆ ೨೪ನೆಯ ಬುಧವಾರ ಅಪರಾಹ್ನದಲ್ಲಿ ತನ್ನ ಕಾರ್ಯಕ್ರಮವನ್ನು ನಡೆಯಿಸುವದು. ಡಿಸಂಬರ ೨೬ನೆಯ ತಾರೀಕು ಶುಕ್ರವಾರ ಅಪರಾಹ್ನ ಪುಷ್ಯ ಶುದ್ಧ ಪ್ರತಿಪದೆಯಲ್ಲಿ ರಾಷ್ಟ್ರೀಯ (ಕಾಂಗ್ರೆಸ್) ಮಹಾಸಭೆಯ ಅಧಿವೇಶನಕ್ಕೆ ಪ್ರಾರಂಭವಾಗುವದು.

೩ ಈ ಸಾರಿ ಸಭೆಯ ಮುಂದೆ ಬರತಕ್ಕ ಮುಖ್ಯ ವಿಷಯಗಳ ಚರ್ಚೆಗಾಗಿ ವಾತಾವರಣವು ಯೋಗ್ಯವಾಗಿರಬೇಕೆಂಬ ಉದ್ದೇಶದಿಂದ ಪ್ರೇಕ್ಷಕರ ಸಂಖ್ಯೆಗೆ ಸ್ವಾಗತ ಮಂಡಲವು ಮಿತಿಯ (Limit) ಸ್ಥಿಟ್ಟಿರುವದು. ಆದರೆ ಈ ವರುಷದ ಸಭೆಯ ಮಹತ್ವದ ದೆಸೆಯಿಂದ ಇಡೀ ದೇಶದ ಹಲವು ಭಾಗಗಳಿಂದ ಅಸಂಖ್ಯಾತ ಪ್ರೇಕ್ಷಕರು (ಕಾಂಗ್ರೆಸ) ವಿಜಯನಗರಕ್ಕೆ ಬರುವರೆಂದು ಸ್ವಾಗತಮಂಡಳಕ್ಕೆ ತಿಳಿದಿರುವದು. ಆದುದರಿಂದ ಅಂಥಹ ಪ್ರೇಕ್ಷಕರಿಗೆ, ಕಾಂಗ್ರೆಸ ಸಭಾಮಂಟಪದಲ್ಲಿ ನಡೆಗುವ ಎಲ್ಲಾ ಕಾರ್ಯಕ್ರಮ ಪರಿಚಯಮಾಡಿ ಕೊಡುವ ಉದ್ದೇಶದಿಂದ, ಕಾಂಗ್ರೆಸ ಮಂಟಪಕ್ಕೆ ಸಮೀಪವಾಗಿ 'ಬಾಹೀರ ಸಭೆಯ ಜಾಗ' ಎಂಬ ಬೇರೊಂದು ಸ್ಥಳವನ್ನು ಏರ್ಪಡಿಸಿರುವದು. ಅಲ್ಲಿ ಕಾಂಗ್ರೆಸಿನ ಪ್ರಮುಖ ಮುಂದಾಳುಗಳು ಕಾಂಗ್ರೆಸ ಮಂಟಪದಲ್ಲಿ ಚರ್ಚಿಸಲ್ಪಡುವ ಎಲ್ಲ ಠರಾವುಗಳ ಮೇಲೆ ಮಾತನಾಡುವರು. ಕಾಂಗ್ರೆಸಿನಲ್ಲಿ ಮಾತನಾಡುವ ಹೆಚ್ಚು ಮಂದಿ ಪ್ರಮುಖರು ಈ ಹೊರಗಿನ ಸಭೆಯಲ್ಲಿ ನಿಯಮಿತವಾಗಿ ಭಾಷಣ ಮಾಡುವರು. ಇದರಿಂದ ಹೊರಗಿನ ಪ್ರೇಕ್ಷಕರಿಗೆ ಚಿಕ್ಕದೊಂದು ಕಾಂಗ್ರೆಸಿನ ಸದರ್ಶನವೇ ಆಗಬಹುದೆಂದು ಹೇಳಬಹುದು.

೪ ಈ ಏರ್ಪಾಡಿನಿಂದ ಬೆಳಗಾಂವಿಗೆ ಬರತಕ್ಕ ಸಾಧಾರಣ ಪ್ರೇಕ್ಷಕರ ನಿರಾಶೆಯು ದೂರವಾಗುವದೆಂದು ಸ್ವಾಗತಮಂಡಳಕ್ಕೆ ವಿಶ್ವಾಸವಿರುವದು.

೫ ಅಖಿಲ ಭಾರತ ಸ್ವದೇಶೀ ಕೈಗಾರಿಕೆಯ, ಅದರಲ್ಲಿಯೂ ಮುಖ್ಯವಾಗಿ ಮೈಸೂರು ಮೊದಲಾದ ಕರ್ನಾಟಕ ಪ್ರಾಂತದ ಕೈಗಾರಿಕೆ, ಕಲಾ ಕೌಶಲ್ಯದ ಪ್ರದರ್ಶನವನ್ನು ಯಶಸ್ವಿಯಾಗಿ ಮಾಡಬೇಕೆಂದು ವಿಶೇಷ ಪ್ರಯತ್ನವು ನಡೆಯುತ್ತಿದೆ. ಇದರಲ್ಲಿ ಹಿಂದುಸ್ಥಾನದ ಹಲವು ಭಾಗಗಳಿಂದ ಕಣ್ಣಿಗೆ ಹಬ್ಬವನ್ನುಂಟು ಮಾಡುವ ಹಲವು ಸಾಮಾನುಗಳು ಬರುವವು. ಈ ಪ್ರದರ್ಶನ ಶಾಲೆಗೆ ಪ್ರವೇಶ ಫೀ ಕೇವಲ ನಾಲ್ಕೇ ಆಣೆಗಳಿರುವವು.

೬ ಸ್ವದೇಶೀ ಪ್ರದರ್ಶನಾಲಯಕ್ಕೆ ಕೊಡುವ ನಾಲ್ಕಾಣೆ ಟಿಕೀಟಿನಿಂದ ಒಂದು ಸಾರಿ ಮಾತ್ರ ನೋಡಲಾಗುವದು. ಆದರೆ ರೂ ೧ನ್ನು ಕೊಟ್ಟು 'ಸೀಜನ್ ಟಿಕೇಟ್' ತೆಗೆದುಕೊಂಡವರು ಇಡೀ ಪ್ರದರ್ಶನವಿರುವಷ್ಟು ಕಾಲವೂ ಬೇಕಾದಾಗಲೆಲ್ಲಾ ಪ್ರದರ್ಶನ ಶಾಲೆಯನ್ನು ಪ್ರವೇಶಿಸಬಹುದು.

೭ ಇದಲ್ಲದೆ ಹಿಂದುಸ್ಥಾನದ ಪ್ರಮುಖ ಗಾಯಕರ, ಅದರಲ್ಲಿಯೂ ಮುಖ್ಯವಾಗಿ ಕರ್ನಾಟಕದಲ್ಲಿ ಸಂಗೀತ ವಿಶಾರದರೆನಿಸುವ ವಿದ್ವಾಂಸರ ಗಾಯನ ಕಲಾ ಪ್ರದರ್ಶನ ಸಭೆಯೂ ಸೇರುವದು. ಇದರಲ್ಲಿ ಇಂಪಾದ ಸಂಗೀತದಿಂದ ಎಲ್ಲರ ಕಿವಿಗೂ ಹಬ್ಬವಾಗುವದು.

೮ ಭೋಜನಕ್ಕೆ ಆಯಾ ಪ್ರಾಂತದವರಿಗೆ ಅನುಕೂಲವಾಗುವಂತೆ ಪ್ರಾಂತಿಕ ಭೋಜನಾಲಯಗಳು ಏರ್ಪಡಾಗುತ್ತಿವೆ. ಲಿಂಗಾಯತ ಮತ್ತು ಜೈನ ಬಂಧುಗಳಿಗೂ ಪ್ರತ್ಯೇಕ ಭೋಜನಾಲಯದ ಏರ್ಪಾಡಿರುವದು. ಇದಲ್ಲದೆ ಕಾಂಗ್ರೆಸಿನ ಆವರಣದಲ್ಲಿಯೆ ಹಲವು ಕಾಫಿ, ತಿಂಡಿ, ಫಲಹಾರದ ಅಂಗಡಿಗಳ ಏರ್ಪಾಡಿರುವದು.

೯ ಈ ಸಾರಿ ಬರುವ ಜನರೆಲ್ಲರಿಗೂ ನಿವಾಸ ಸ್ಥಳವನ್ನು ಒದಗಿಸಲು ಅನುಕೂಲವಿಲ್ಲದ್ದರಿಂದ, ತಂತಮ್ಮ ಪ್ರೇಕ್ಷಕರೂ ಸ್ವಾಗತ ಮಂಡಳದ ಸದಸ್ಯ ಫೀ ಯೊಟ್ಟಿಗೆ ನಿವಾಸ ಸ್ಥಳದ ಫೀ (ತಲೆಯೊಂದಕ್ಕೆ) ೪ ರುಪಾಯಿಗಳನ್ನು ಸ್ವಾಗತ ಮಂಡಳದ ಕಚೇರಿಗೆ ಡಿಸಂಬರ ತಾರೀಕು ೧೦ರೊಳಗಾಗಿ ಮುಟ್ಟುವಂತೆ ಕಳುಹಿಸದಿದ್ದರೆ ನಿವಾಸ ಸ್ಥಳವನ್ನು ಕಾದಿಡಲಾಗುವದಿಲ್ಲ.

ಮತ್ತೆ ಈ ಸಾರಿ ಸಭೆಯ ಮಹತ್ವದ ದೆಸೆಯಿಂದ ಹೆಚ್ಚಾಗಿ ಜನರು ಬರುವದರಿಂದ ಸ್ವಾಗತ ಮಂಡಳದ ಸದಸ್ಯರು ಅಥವಾ ಪ್ರೇಕ್ಷಕರು ೧೦೦ ರುಪಾಯಿ ಅಥವಾ ಅದಕ್ಕೂ ಹೆಚ್ಚಿನ ಟಿಕೇಟಿನ ಸ್ಥಳವನ್ನು ಮೊದಲೆ ಹಣ ಕಳುಹಿಸಿ ಕಾದಿಡುವದು ಒಳ್ಳೆಯದು. ೧೦೦ ರುಪಾಯಿನ ಜಾಗವು ಧುರೀಣರು ಕುಳಿತುಕೊಳ್ಳುವ ಕಟ್ಟೆಯ ಹತ್ತಿರವಿರುವದು. ೫೦೦ ರುಪಾಯಿಂದ ೧೦೦೦ ರುಪಾಯಿ ವರೆಗೆ ಕೊಡುವವರಿಗೆ ಧುರೀಣರ ಕಟ್ಟೆಯ ಮೇಲೆ "ಸನ್ಮಾನದ ಸ್ಥಳವು" (Seats of Honour) ದೊರೆವದು. ಈ ಎಲ್ಲಾ ಸ್ಥಳಗಳೂ ಮಿತಿಯಾಗಿರುವದರಿಂದ ಬೇಕಾದವರು ತ್ವರೆ ಮಾಡಬೇಕು.

ಕುಟುಂಬ ಕುಟೀರ (Family Quarters) ತೆಗೆದುಕೊಂಡವರು ಅಡಿಗೆಗಾಗಿ ತಮ್ಮವರ ಅಡಿಗೆಯವರನ್ನು ಕರೆದುಕೊಂಡು ಬರಬೇಕು. ಅವರಿಗೆ ಬೇಕಾಗುವ ಅಕ್ಕಿ, ಬೇಳೆ ಮುಂತಾದ ಸಾಹಿತ್ಯವನ್ನು ಯೋಗ್ಯ ಬೆಲೆಗೆ ಕೊಡುವಂತೆ 'ಕಾಂಗ್ರೆಸ ಸ್ಟೋರ' ಆಫೀಸಿನಲ್ಲಿ ಏರ್ಪಾಡಿರುವದು.

ವಿಜಯನಗರದ ನಿವಾಸಿಗಳೆಲ್ಲರಿಗೆ ಸಾಧ್ಯವಿರುವ ಮಟ್ಟಿಗೆ ಎಲ್ಲ ಅನುಕೂಲತೆಗಳನ್ನು ಒದಗಿಸಿ ಕೊಡಲಾಗುವದು.

೧೦ ಈ ಬಾರಿ ಕಾಂಗ್ರೆಸಿನ ಸಮಯದಲ್ಲಿ ಕರ್ನಾಟಕ ಆಯುರ್ವೇದ ಸಮ್ಮೇಲನ, ಹಿಂದೂ ಧರ್ಮ ಸಭೆ, ಅಖಿಲ ಭಾರತ ವಿದ್ಯಾರ್ಥಿಗಳ ಸಭೆ, ಅಖಿಲ ಭಾರತ ಗೋ ರಕ್ಷಕ ಸಭೆ, ಅಖಿಲ ಭಾರತ ಸಾಮಾಜಿಕ ಸಭೆ ಇತ್ಯಾದಿ, ಇತ್ಯಾದಿ, ವಿವಿಧ ಸಭೆಗಳು ಸೇರುವದರಿಂದ ಪ್ರೇಕ್ಷಕರಿಗೆ ಅನಾಯಾಸವಾಗಿ ವಿವಿಧ ವಿಷಯಗಳ ಶ್ರವಣ ಲಾಭವು ದೊರೆವದು.

೧೧ ಬೆಳಗಾಂವಿಯು ಧಾರವಾಡ, ವಿಜಾಪುರ, ಬಳ್ಳಾರಿ, ಕಾರವಾರ ಜಿಲ್ಲೆಯವರಿಗೆ ವಿಶೇಷ ಸಮೀಪವಾಗಿರುವದರಿಂದ ಅವರಿಗೆ ಪ್ರಯಾಣ ವಿಚಾರದ ಪರಿಚಯವು ವಿಶೇಷ ಬೇಕಾಗಿಲ್ಲ. ಆದರೆ ಮೈಸೂರು, ಬೆಂಗಳೂರು, ಮಂಗಳೂರು ಪ್ರಾಂತದವರಿಗಾಗಿ ಈ ಕೆಳಗಿನ ಮಾಹೀತಿಯನ್ನು ಕೊಡಲಾಗಿದೆ.

ಬೆಂಗಳೂರು—ಪಾಸೆಂಜರು ಗಾಡಿ (ಬೆಳಗ್ಗೆ ಬೆಂಗಳೂರ. ಬಿಡುವದು.) ಚಾರ್ಜು ರುಪಾಯಿ ೬-೩-೦ (೨೫ ಗಂಟೆ ಪ್ರಮಾಣ).

ಮೆಯಿಲು (ರಾತ್ರಿ ೯ ಗಂಟೆಗೆ ಬೆಂಗಳೂರು ಬಿಡುವದು). ಚಾರ್ಜು ರುಪಾಯಿ ೭-೧೫-೦ (೨೦ ಗಂಟೆ ಪ್ರಮಾಣ)

ಮೈಸೂರಿನವರು—ಹಾಸನ, ಅರಸೀಕೆರೆ ಮಾರ್ಗವಾಗಿ ಬರಬಹುದು. ಬೆಂಗಳೂರು ಮುಖಾಂತರವಾಗಿಯೂ ಬರಬಹುದು. ಆದರೆ ಹಾಸನ-ಅರಸೀಕೆರೆ ಮಾರ್ಗವಾಗಿ ಬಂದರೆ ಚಾರ್ಜು ಕಡಿಮೆ ಬೀಳುವದು.

ಮದ್ರಾಸಿನವರು—ಗುಂತಕಲ್-ಹುಬ್ಬಳ್ಳಿ ಮಾರ್ಗವಾಗಿ ಬರಬಹುದು. ಅಥವಾ ಬೆಂಗಳೂರು ಮಾರ್ಗವಾಗಿ ಬರಬಹುದು.

ಮಂಗಳೂರಿನವರು—ಸ್ಟೀಮರಿನ ಮೇಲೆ ಗೋವಾಕ್ಕೆ ಬಂದು ಅಲ್ಲಿಂದ ಲೋಂಡಾದಲ್ಲಿ ಗಾಡಿ ಬದಲಾಯಿಸಿ ನೇರಾ ರುಪಾಯಿ ೧೦-೧೦ ಯಲ್ಲಿ ಬೆಳಗಾಂವಿಗೆ ಸೇರಬಹುದು. ಅಥವಾ ಶಿವಮೊಗ್ಗೆ ಯಾ ಹರಿಹರಕ್ಕೆ ಮೋಟಾರಿನಲ್ಲಿ ಬಂದು ಅಲ್ಲಿಂದ ರೈಲುಮಾರ್ಗವಾಗಿ ಬೆಳಗಾಂವಿಗೆ ಬರಬಹುದು. ಈ ಮಾರ್ಗವು ಸ್ಟೀಮರಿಗಿಂತ ಸ್ವಲ್ಪ ಹೆಚ್ಚು ಖರ್ಚಿನದಾಗಿರುವದು.

ಕಾಂಗ್ರೆಸ ಪ್ರಕಟನಾ ಕಚೇರಿ, ವಿಜಯನಗರ ಬೆಳಗಾಂವಿ, — ದ. ಕೃ. ಭಾರದ್ವಾಜ, ಕಾರ್ಯದರ್ಶಿ.

ಹುತ್ತರಿ ಹಬ್ಬದ ಮುಹೂರ್ತ ಪಟ್ಟಿ.

1 ಸನ್ 1924ನೇ ಇಸವಿ ಡಿಸಂಬರ್ ತಾರೀಕು 9ನೇ ಮಂಗಳವಾರ ದಿನ ಕೃತ್ತಿಕಾ ನಕ್ಷತ್ರದಲ್ಲು ಪಾಡಿ ಸುಬ್ರಾಯ ದೇವರ ಕಲಾಡ್ಚ ಹಬ್ಬವಾಗುತ್ತೆ.

2 ಸನ್ 1924ನೇ ಇಸವಿ ಡಿಸಂಬರ್ ತಾರೀಕು 10ನೇ ಬುಧವಾರ ದಿನ ರೋಹಿಣಿ ನಕ್ಷತ್ರದಲ್ಲು ದೇವ ಪೊಳುದು. ಸದರಿ ದಿನ ರಾತ್ರಿ 7ಘಂಟೆಗೆ ನೆರೆಕಟ್ಟುವದು, 8 ಘಂಟೆಗೆ ಕದಿರು ತೆಗೆಯುವದು, 9 ಘಂಟೆಗೆ ಊಟಮಾಡುವ ಶುಭ ಮುಹೂರ್ತ.

3 ಇದೇ ಡಿಸಂಬರ್ ತಾರೀಕು 11ನೇ ಗುರುವಾರ ದಿನ ಮೃಗಶಿರ ನಕ್ಷತ್ರದಲ್ಲು ನಾಡು ಪೊಳುದು. ಸದರಿ ದಿನರಾತ್ರಿ 8 ಘಂಟೆಗೆ ನೆರೆಕಟ್ಟುವದು, 9 ಘಂಟೆಗೆ ಕದಿರು ತೆಗೆಯುವದು, 10 ಘಂಟೆಗೆ ಊಟಮಾಡುವ ಶುಭಮುಹೂರ್ತ.

ಕೆ ಚೆಂಗಪ್ಪ
ಪ್ರೆಸಿಡೆಂಟ್, ಟೆಂಪಲ್ ಕಮಿಟಿ

ಪ್ರಕಟಣೆ.

ಇಲ್ಲಿ ನೋಡಿರಿ! ಇದೀಗ ಸುಸಮಯ!!

ಒಳ್ಳೇ ಸೊತ್ತು ಮಾರಾಟಕ್ಕಿದೆ

ಆರುವತ್ತೊಕ್ಕಲು ಗ್ರಾಮದಲ್ಲಿ ಅಂದರೆ ಬೆಟ್ಟಗೇರಿ ದೊಡ್ಡರಸ್ತೆಗೆ ಸಮೀಪ 200ಬಟ್ಟಿಭೂಮಿ. ಭೂಮಿಗೆ ವತ್ತು 15 ಎಕರುಜಾಗ. ಈಜಾಗದಲ್ಲು ಸದ್ಯ ಭೂಮಿ ಮಾಡತಕ್ಕ 3 ಎಕರು ಮಕ್ಕಿ ಇದೆ. ಮಚ್ಚು ಹಾಕಿದ ಅಂದಾಜು ಸಾವಿರ ರುಪಾಯಿ ಬಾಳತಕ್ಕ ಮನೆ ಇದೆ. ಪಸಲಿಗೆ ಬರಲಿಕ್ಕಾದ ಕಿತ್ತಳೆಗಿಡ. ಮನೆಮುಂದೆ ತೆಂಗು ಅಡಿಕೆಸಹ ಇದೆ. ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆದಾಗಲೀ ಖುದ್ದಾಗಿ ನೋಡಿಯಾಗಲೀ ತಿಳಿಯಬಹುದು. ಅಂದಾಜು ಕ್ರಯ 3,000 ರುಪಾಯಿ. ಇಲ್ಲವೆ ಅದಕ್ಕೆ ಸಮೀಪದ ಕ್ರಯ.

ನೆರವಂಡ ಅಪ್ಪಚ್ಚು,
4-1 ಬಟ್ಟೆವ್ಯಾಪಾರಿ, ಮಡಿಕೇರಿ

ವರ್ತಮಾನ ಸಂಗ್ರಹ.

ಒಳದೇಶ.

ಮದ್ರಾಸು ಪ್ರಾಂತದಲ್ಲಿ ಫಾರೆಸ್ಟು ಕನ್‌ಸರ್ವೇಟರಾದ ಮಿ ಟಿಯರ್‌ಮ್ಯಾನ್‌ರವರು ಈಗ ಕೊಡಗಿಗೆ ಬಂದಿರುವರು. ಅವರು ನಾಪ್ಪೊಕ್ಲು ಫಾರೆಸ್ಟುಗಳನ್ನು ನೋಡಿ ವಾಪಾಸು ಬಂದು ಮಡಿಕೇರಿಯಲ್ಲಿರುವರು.

ಕೆಲವು ಕಡೆಗಳಲ್ಲಿ ಹೊಸಬತ್ತವು ತಯಾರಾಗಿರುವದರಿಂದ ಈಗ ಬತ್ತದ ಕ್ರಯವು ಸ್ವಲ್ಪ ಇಳಿದಿದೆಯೆಂದೂ, ವೀರಾಜಪೇಟೆಯಲ್ಲಿ ಗಾಡಿ ಒಂದರ 95 ರುಪಾಯಿಗೆ ಇಳಿದಿರುವದಾಗಿಯೂ ತಿಳಿಯಬರುತ್ತದೆ.

ಬಿಪ್ಪುನಾಡು ನಾಲ್ಕೇರಿ ಗ್ರಾಮದ ಮಾಳೆರ ಸುಬ್ಬಪ್ಪನು ತಾ 25 11-24ರಲ್ಲು ರಾತ್ರಿ ತನ್ನ ತರಕಾರಿ ತೋಟ ಕಾಯಲಿಕ್ಕೆ ಹೋಗುವಾಗ್ಯೆ ತೋಟದಲ್ಲು ಏನೋ ಶಬ್ದ ಕೇಳಿದ್ದರಿಂದ ಅಲ್ಲಿಗೆ ಗುಂಡು ಹೊಡೆಯಲು ಕೊಂಕಣಸ್ಥರ ತಂಬ್ಯ್ಯನೆಂಬವನಿಗೆ ತಗಲಿ ಮರುದಿನ ವೀರಾಜಪೇಟೆ ಆಸ್ಪತ್ರೆಗೆ ತೆಗದುಕೊಂಡು ಹೋದಲ್ಲು ಅಲ್ಲಿ ಮೃತನಾದನೆಂದು ತಿಳಿಯುತ್ತೇವೆ.

ಈ ವಾರ ಮಡಿಕೇರಿಯಲ್ಲಿ ಕಾಫಿ ಖಂಡಿಗೆ 400 ರುಪಾಯಿ ವರೆಗೂ, ಯಾಲಕ್ಕಿ ಮಣಕ್ಕೆ ರೂ. 75ರಿಂದ 80ರ ವರೆಗೂ ಕ್ರಯವಿತ್ತು.

ಶನಿವಾರಸಂತೆ ಹೋಬಳಿ ಸಿರಂಗಾಲ ಗ್ರಾಮದಲ್ಲಿ ಪ್ಲೇಗು ರೋಗವು ತಲೆದೋರಿದೆ. ಈಗಾಗಲೇ ಕೆಲವರು ಇದಕ್ಕೆ ತುತ್ತಾಗಿರುವರಂತೆ.

ಸ್ಪೆನ್ಸರ್ ಕಂಪೆನಿಯವರ ಸಾಮಾನುಗಳ ಹೊಸ ಕ್ರಯಪಟ್ಟಿಯನ್ನು ಆದರದಿಂದ ಸ್ವೀಕರಿಸುತ್ತೇವೆ. ಅನೇಕಸಾಮಾನುಗಳ ಕ್ರಯವು ಕಡಿಮೆ ಮಾಡಲ್ಪಟ್ಟಿದೆ. ಕೊಂಡುಕೊಳ್ಳುವವರಿಗೆ ಇದೀಗ ಒಳ್ಳೇ ಸಮಯ.

ವಿದ್ಯಾರ್ಥಿಗಳಿಗೆ ಕೊಡುವ ಸರಕಾರಿ ಸ್ಕಾಲರ್‌ಶಿಪ್‌ಗಳು ಇನ್ನು ಮುಂದೆ ತಿಂಗಳುವಾರು ಮುಂಗಡವಾಗಿ ಕೊಡಲಾಗುವುವೆಂದು ಚೀಫ್ ಕಮಿಷನರವರು ರೂಲ್ಸನ್ನು ಬದಲಾಯಿಸಿರುವರು.

ಜುಡಿಶ್ಯಲ್ ಅಲ್ಲದ ಮತ್ತು ಕೋರ್ಟು ಫೀಜು ಸ್ಟ್ಯಾಂಪುಗಳನ್ನು ಮಾರುವವರಿಗೆ ಲೈಸೆನ್ಸ್ ಕೊಡುವ ಹಕ್ಕು ಅಸಿಸ್ಟೆಂಟ್ ಕಮಿಷನರಿಗೂ, ಅವರಿಗೆ ಮೂರು ತಿಂಗಳು ರಜೆಕೊಟ್ಟು ಆಪದ ಬದಲಿಗೆ ಹಂಗಾಮಿಯಾಗಿ ಜೇರಿಯವರನ್ನು ನೇಮಿಸುವ ಹಕ್ಕು ಸುಭೇದಾರರುಗಳಿಗೂ ಕೊಡಲ್ಪಟ್ಟಿದೆ.

ಹಿಂದೂ ದೇಶ.

ರಿಫಾರ್ಮ್ಸ್ ಇನ್‌ಕ್ವಯರಿ ಕಮಿಟಿಯೂ ಮಡ್ಡಿಮ್ಯಾನ್ ಕಮಿಟಿಯ ಮೀಟಿಂಗು ಈ ವಾರದಲ್ಲಿ ಅಂತ್ಯವಾಗುವುದು. ಅದರಲ್ಲಿ ಎರಡು ಪಂಗಡಗಳಾಗಿವೆ. ಬರ್ಧ್ವಾನ್ ಮಹಾರಾಜರ ಸೇರುವಿಕೆಯಿಂದ ಉದ್ಯೋಗಸ್ಥ ಮೆಂಬರುಗಳಿಗೆ ಬಹುಮತ ಸಿಕ್ಕಿದೆ. ಆದರೆ ಸರ್ ಟೇಜ್ ಬಹದೂರ್ ಸಪ್ರು, ಸರ್ ಶಿವಸ್ವಾಮಿಅಯ್ಯರ್, ಮಿ. ಜಿನ್ನ ಮತ್ತು ಡಾಕ್ಟರ್ ಯಂ. ಪರಾಂಜಪ್ಯೆ, ಇವರು ನಾಲ್ವರು ಪ್ರೈವೇಟು ಪಂಗಡವಾಗಿರುವರು. ಇವರು ನಾಲ್ವರಲ್ಲಿ ಹಿಂದೀಯರೆಂಬ ಭಾವನೆ ದೃಢವಾಗಿರುವುದರಿಂದ ಇವರಿಗೆ ಹಿಂದೀಯರ ಬೆಂಬಲವು ಚೆನ್ನಾಗಿದೆ.

ಕಳೆದ ತಿಂಗಳಲ್ಲಿ ಬೊಂಬಾಯಿ ಕಾನ್‌ಫರೆನ್ಸಿನಲ್ಲಿ ಏರ್ಪಾಡಾದ ಒಗ್ಗಟ್ಟು ಕಮಿಟಿಯ ತೀರ್ಮಾನದ ಮೇರೆ ಪಂಡಿತ ಮೋತಿಲಾಲ್ ನೇಹರುರವರು ಹಿಂದೂ ದೇಶದ ಎಲ್ಲಾ ರಾಜಕೀಯ ಸಂಘಗಳ ಸೆಕ್ರೆಟರಿಗಳಿಗೆ, ಕಾಂಗ್ರೆಸ್ಸಿನೊಳಗೆ ಎಲ್ಲಾ ಪಂಗಡಗಳನ್ನು ಒಂದು ಗೂಡಿಸಲು ಸುಲಭದ ದಾರಿಯ ವಿಶಯ ಆವರವರ ಸಂಘಗಳ ಸೂಚನೆಗಳನ್ನು ಈ ತಾರೀಕು 20ರ ವಳಗೆ ಪಂಡಿತ ನೇಹರುರವರಿಗೆ ಕಳುಹಿಸುವಂತೆ ಬರೆದಿರುವರು

ಹಿಂದೂ ದೇಶದಲ್ಲಿರುವ ಯೂರೋಪಿಯನ್ ಸಂಘದ ಬೇರೆ ಬೇರೆ ಶಾಖೆಗಳ ಡೆಲಿಗೇಟರುಗಳ ಕಾನ್‌ಫರೆನ್ಸು ಈ ತಾರೀಕು 12ರಲ್ಲು ಕಲ್ಕತ್ತಾದಲ್ಲಿ ನಡೆಯುವುದು. ಆ ಸಂಘದ ವಾರ್ಷಿಕ ಔತಣವು ತಾರೀಕು10ರಲ್ಲಿ ಸೇಟಡೇ ಕ್ಲಬ್ಬಿನಲ್ಲಿ ಆಗುವುದು. ಇದಕ್ಕೆ ವೈಸರಾಯರು ಹಾಜರಿರುವರು

ಅಖಿಲ ಭಾರತ ಮುಸ್ಲಿಮ್ ಲೀಗಿನ ಬರುವ ಕಾನ್‌ಫರೆನ್ಸಿನ ಸ್ಥಳವನ್ನು ಬದಲಾಯಿಸಲಾಗುವುದಿಲ್ಲವೆಂದು ಅದರ ಕೌನ್ಸಿಲಿನವರು ತಿಳಿಸಿರುವರು. ಅದು ಈ ತಾರೀಕು 30 ಮತ್ತು 31ರಲ್ಲು ಬೊಂಬಾಯಿಯಲ್ಲಿ ನಡೆಯುವುದು. ಈ ಸಾರಿಯ ಕಾನ್‌ಫರೆನ್ಸು ಬಹಳ ಮುಖ್ಯವಾದುದರಿಂದ ಮುಸಲ್ಮಾನ್ ಮುಂದಾಳುಗಳೆಲ್ಲರೂ ಒಂದು ಸೇರಬೇಕೆಂದು ಮಿ. ಜಿನ್ನಾರವರು ಅಪ್ಪೀಲು ಮಾಡಿರುತ್ತಾರೆ.

ಕಲ್ಕತ್ತಾದ "ಇಂಗ್ಲಿಷ್‌ಮ್ಯಾನ್" ಪತ್ರಿಕೆಯನ್ನು ಹೈದರಾಬಾದು ಪ್ರಾಂತ್ಯದೊಳಗೆ ತರಿಸಕೂಡದೆಂದು ನೈಜಾಮರು ಹುಕುಂ ಮಾಡಿರುವರು.

ರೈತರ ಧಾನ್ಯಗಳನ್ನು ನ್ಯಾಯವಾದ ಕ್ರಯಕ್ಕೆ ಮಾರುವ ಸಂಘಗಳನ್ನು ಸ್ಥಾಪಿಸುವ, ಹಿಂದೂ ದೇಶದಿಂದ ಪರದೇಶಗಳಿಗೆ ಹೋಗುತ್ತಿರುವ ಸಾಮಾನುಗಳನ್ನು ತಡೆಕಟ್ಟಿ ಕ್ಷಾಮನಿವಾರಣೆ ಮಾಡುವ ಮತ್ತು ಆದಷ್ಟು ಪರದೇಶದ ಸಾಮಾನುಗಳನ್ನು ಊರುವಾಸಿಗಳು ಉಪಯೋಗಿಸದಂತೆ ಮಾಡುವ ಮುಂತಾದ ಕೆಲಸಗಳನ್ನೊಳಕೊಂಡ ಗ್ರಾಮ ರಚನೆಯ ಕೆಲಸಕ್ಕೆ ಸ್ವರಾಜ್ಯಪಾರ್ಟಿಯ ಮುಖಂಡರಾದ ಮಿ. ಸಿ. ಆರ್. ದಾಸ್‌ರವರು ಪ್ರಾರಂಭಿಸಿರುವರು.

ಬೆಲ್ಗಾಮಿನಲ್ಲಿ ಇದೇ ತಾರೀಕು 26ರಲ್ಲು ಪ್ರಾರಂಭವಾಗುವ ಇಂಡಿಯನ್ ನೇಶನಲ್ ಕಾಂಗ್ರೆಸ್ಸಿನ ಅಧ್ಯಕ್ಷರಾಗಿರಲು ಮಹಾತ್ಮ ಗಾಂಧಿಯವರು ಒಪ್ಪಿಕೊಂಡಿರುವರು. ಅಲ್ಲದೆ ಅಲ್ಲಿ ನಡೆಯುವ ಗೋ ಪರಿಷತ್ತಿನ ಅಧ್ಯಕ್ಷಸ್ಥಾನವನ್ನೂ ಮ. ಗಾಂಧಿಯವರು ಸ್ವೀಕರಿಸಿರುವರು.

ವೈಸರಾಯರ ಸ್ವಾಗತಕ್ಕಾಗಿ ಬೊಂಬಾಯಿ ಮುನ್ಸಿಪಾಲ್ಟಿಗೆ ಕೊಟ್ಟ ಆಮಂತ್ರಣವನ್ನು ತಿರಸ್ಕರಿಸಲು ಮುನ್ಸಿಪಾಲಿಟಿ ಅಧ್ಯಕ್ಷರಾದ ಮಿ. ವಿ. ಜೆ. ಪಟೇಲರವರಿಗೆ ಹಕ್ಕಿಲ್ಲವೆಂದೂ, ಆಮಂತ್ರಣವನ್ನು ಸ್ವೀಕರಿಸುವಂತೆ ತೀರ್ಮಾನಿಸಲು ಮುನ್ಸಿಪಾಲಿಟಿಯ ಒಂದು ವಿಶೇಷ ಮೀಟಿಂಗು ಮಾಡಬೇಕೆಂದು ಸ್ಟೇಂಡಿಂಗ್ ಕಮಿಟಿಮೆಂಬರುಗಳು ಅಧ್ಯಕ್ಷರಿಗೆ ಬರಕೊಂಡಿರುವರು. ಈ ಠರಾವು ಪಾಸಾದರೆ ಮಿ. ಪಟೇಲರವರು ಅಧ್ಯಕ್ಷಪದವಿಗೆ ರಾಜೆನಾಮೆ ಕೊಡುವರೆಂದು ವರ್ತಮಾನ

ಬೊಂಬಾಯಿಯ ಚೌಪದಿ ತೀರದಲ್ಲಿ ಲೋಕಮಾನ್ಯ ತಿಲಕರವರ ಶ್ರವ ದಹನಮಾಡಿದಲ್ಲಿ 10 ಮತ್ತು 6 ಅಡಿಗಳ ವಿಸ್ತಾರ ತಂತಿಬೇಲಿ ಹಾಕಬೇಕೆಂದು, ಅಲ್ಲಿಯ ಮುನ್ಸಿಪಾಲಿಟಿಯವರು ಮಾಡಿದ ತೀರ್ಮಾನವನ್ನು ಸರಕಾರದವರು ಅಂಗೀಕರಿಸಿರುವರು.

ತಾ. 28-12-24ರಲ್ಲು ನಾಗಪುರದಲ್ಲಿ ನವೀನ ನಾಗಪುರ ಯುನಿವರ್ಸಿಟಿಯ ಪ್ರಥಮ ಕಾನ್ವಕೇಶನಿನಲ್ಲು ಆ ಯುನಿವರ್ಸಿಟಿಯ ಚೇನ್ಸಲರಾದ ಗವರ್ನರ್ ಸರ್ ಪ್ರೇಂಕ್‌ಸ್ಲೈಯವರು ಕಾನ್ವಕೇಶನ್ ಭಾಷಣ ಮಾಡಿದರು. ಈ ಯುನಿವರ್ಸಿಟಿಯವರು ಸ್ಲೈಯವರಿಗೆ ಎಲ್. ಎಲ್. ಡಿ. ಬಿರುದನ್ನು ಕೊಟ್ಟರು.

ಶ್ರೀ ಭಾರತ ಧರ್ಮ ಮಹಾಮಂಡಲದ ವಾರ್ಷಿಕ ಮಹಾಸಭೆಯು ಈ ತಾರೀಕು 13, 14ರಲ್ಲು ಕಲ್ಕತ್ತಾದಲ್ಲಿ ನಡೆಯುವುದು. ದರ್ಭಾಂಗದ ಮಹಾರಾಜಾಧಿರಾಜರವರು ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟಿರುವರು.

ಅಹ್ಮದಾಬಾದಿನ ಮುನ್ಸಿಪಾಲಿಟಿಯು ವ್ಯಾಜ್ಯದ ಸಮಯದಲ್ಲಿ ಪ್ರೈಮರಿಶಾಲೆಗಳಿಗಾಗಿ ಕರ್ಚುಮಾಡಿದ 1,68,600 ರೂಪಾಯಿ ಕೊಡಬೇಕೆಂದು ಸರ್ಕಾರದವರು ಮುನ್ಸಿಪಾಲಿಟಿ ಮೇಲೆ ಹಾಕಿದ ದಾವದಲ್ಲಿ ಅಹ್ಮದಾಬಾದಿನ ಡಿಸ್ಟ್ರಿಕ್ಟ್ ಜಡ್ಜಿಯವರು ಮುನ್ಸಿಪಾಲಿಟಿಗೆ ಸರವಾಗಿ ತೀರ್ಮಾನಿಸಿದ್ದರಮೇಲೆ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು ಬೊಂಬಾಯಿ ಹೈಕೋರ್ಟಿಗೆ ಅಪ್ಪೀಲುಮಾಡಿದರು. ಹೈಕೋರ್ಟು ಜಡ್ಜರೂ ಕೆಳಗಿನ ಕೋರ್ಟಿನ ತೀರ್ಪನ್ನು ಖಾಯಂಮಾಡಿದರು.

ಒಂದು ಮತದವರು ಇನ್ನೊಂದು ಮತದವರನ್ನು ಹೀಯೂಳಿಸದಂತೆಯೂ ದ್ವೇಷಿಸದಂತೆಯೂ, ಪರಸ್ಪರಅನ್ಯೋನ್ಯ ಭಾವಗಳಿಂದ ನಡೆದು ಕೊಳ್ಳುವಂತೆಯೂ ನೋಡಿಕೊಳ್ಳುವದಕ್ಕಾಗಿ, 'ಲೀಗ್‌ಆಫ್ ನೇಶನ್ಸಿನ' ಮಾದರಿಯಲ್ಲಿ 'ಲೀಗ್ ಆಫ್ ರಿಲಿಜನ್ಸ್' ಮಾಡುವುದು ಉತ್ತಮವೆಂದು ಲಾಹೋರಿನ ಆರ್ಯಸಮಾಜದವರ ವಾರ್ಷಿಕ ಕಾನ್‌ಫರೆನ್ಸಿನಲ್ಲಿ ಚರ್ಚಿಸಲಾಯಿತು.

ವಿದೇಶ.

ಇಟಲಿಯ ಫೇಸಿಸ್ಟ್ ಸೈನ್ಯದ ಮುಖ್ಯ ಸೇನಾಧಿಪನಾದ ಜನರಲ್‌ಬಾಲ್ಬೋರವರು ತನ್ನ ಪದವಿಗೆ ರಾಜೆನಾಮೆ ಕೊಟ್ಟಿರುವರು.

ಕಳೆದ ತಾ 27ರಲ್ಲು ಇಂಗ್ಲೆಂಡಿನಲ್ಲಿ ಬಿರುಗಾಳಿಯು ಬದ್ದು ಬಹಳ ನಷ್ಟವನ್ನುಂಟುಮಾಡಿದೆ ಮರಣಗಳೂ ಅನೇಕ ಸಂಭವಿಸಿವೆ. ಸಮುದ್ರದಲ್ಲಿ ಹಡಗುಗಳು ಮುಳುಗಿ ಹೋಗಿ ಹೆಚ್ಚು ನಷ್ಟ ಉಂಟಾಗಿದೆ.

ಈಜಿಪ್ಟಿನಲ್ಲಿ ಬ್ರಿಟಿಷ್ ಮಿಲಿಟರಿ ಅಧಿಕಾರಿಗಳು ತಾ 27ರ ಪ್ರಾತಃಕಾಲ ಮೂವರು ಜಾಗುಲಲ್‌ಪಂಗಡ ಮುಂದಾಳುಗಳನ್ನು ಮಗಿದಲ್ಲಿಯೇ ಸೆರೆ ಹಿಡಿದರು. ಇದು ಎಲ್ಲರನ್ನೂ ಆಶ್ಚರ್ಯಗೊಳಿಸಿತು. ಈ ಕೈದಿಗಳನ್ನು ಈಜಿಪ್ಟು ಸರಕಾರಕ್ಕೆ ಬಿಟ್ಟುಕೊಡದೆ ಹೋದರೆ ರಾಜೆನಾಮೆಕೊಡುತ್ತೇವೆಂದು ಈಗಿನ ಈಜಿಪ್ಟುಮಂತ್ರಿಗಳು ಹೇಳಿದ್ದರಿಂದ ಅವರನ್ನು ಈಜಿಪ್ಟ್ ಸರಕಾರದ ವಶಕ್ಕೆ ಬಿಟ್ಟಿರುವರು. ಈಜಿಪ್ಟ್ ಪೋಲೀಸಿನವರು ಎಚ್ಚರಿಕೆಗಾಗಿ 35 ವಾರಂಟುಗಳನ್ನು ಹೊರಡಿಸಿದರಲ್ಲಿ 12 ಜನರನ್ನು ಸೆರೆಹಿಡಿದಿರುವರು.

ಈಜಿಪ್ಟಿನ ಕೈರೋದಲ್ಲಿ ಮುಷ್ಕರ ಹಿಡಿದಿರುವ ವಿದ್ಯಾರ್ಥಿಗಳ ಮುಂದಾಳನ್ನು ಸೆರ ಹಿಡಿದಿರುವರು. ವಿದ್ಯಾರ್ಥಿ ಕಮಿಟಿಯು ಈಗಿನ ಈಜಿಪ್ಟ್ ಸರಕಾರವನ್ನು ವಿರೋಧಿಸಿ, ಆ ಸಹಕಾರವನ್ನು ಕೈಕೊಳ್ಳಬೇಕೆಂದು ದೇಶಕ್ಕೆ ಅಪ್ಪೀಲು ಮಾಡಿರುವದು.

ಜಾಗುಲಾಲ್ ಮಂತ್ರಿ ಮಂಡಳಿಯ ಅನೇಕ ಮೆಂಬರುಗಳು ಹಾಜರಿದ್ದ ವಾಫ್ಡ್ ನೇಶನಲಿಸ್ಟರವರ ಮೀಟಿಂಗಿನಲ್ಲು ಈಗಿನ ಈಜಿಪ್ಟು ಸರಕಾರವು ನೈಲ್ ನದಿಯ ನೀರಿನ ಸಂಬಂಧ ಬ್ರಿಟಿಷರೊಂದಿಗೆ ಒಪ್ಪಂದ ಮಾಡಿಕೊಳ್ಳುವದೆಂದು ಈಗಿನ ಪ್ರಧಾನ ಮಂತ್ರಿ ಜಿವಾರ್ ಪಾಷಾರವರು ಹೇಳಿದ್ದನ್ನು ನಿಷೇಧಿಸಿಯೂ ಈಜಿಪ್ಟಿಗೆ ಸುಡಾನಿನ ಹಕ್ಕು ಪೂರ್ತಿ ಇದೆ ಎಂದೂ ಠರಾವು ಪಾಸು ಮಾಡಲಾಗಿದೆ.

ಬಾದಶಹಾ ಔರಂಗಜೇಬನೂ ಅವನ ಶಿಕ್ಷಣೆಯೂ.

ಔರಂಗಜೇಬನು ರಾಜ್ಯಭಾರವನ್ನು ಕೈಕೊಂಡ ಸ್ವಲ್ಪ ಸಮಯದನಂತರ ಅವನ ವಿದ್ಯಾಗುರುವಾದ 'ಮುಲ್ಲಾಸಹ'ನು ತನ್ನ ಶಿಷ್ಯನು ಬಾದಶಹನಾಗಿರುವದನ್ನು ಕೇಳಿ ತನಗೆ ದರಬಾರಿನಲ್ಲಿ ಆವುದಾದರೊಂದು ಉಚ್ಚಾಧಿಕಾರವು ದೊರೆಯಬಹುದೆಂಬ ಆಶೆಯಿಂದ ಅವನ ಬಳಿಗೆ ಬಂದನು. ಆಗ ಬಾದಶಹ ಔರಂಗಜೇಬನು ಅವನಿಗೆ ಈ ಕೆಳಗೆ ಬರದ ಉತ್ತರಕೊಟ್ಟಿದ್ದನು.

"ಮುಲ್ಲಾಜೀ! ನೀವು ನನ್ನಲ್ಲಿ ಏನು ಅಪೇಕ್ಷೆ ಮಾಡುವಿರಿ? ನಿಮ್ಮ ಇಚ್ಛೆಯೇನು? ನಾನು ನಿಮ್ಮನ್ನು ಹಿಚ್ಚು ದೊಡ್ಡ ಅಮೀರನನ್ನಾಗಿ ಮಾಡಬೇಕೆಂದು ಅಪೇಕ್ಷಿಸುವಿರೋ? ಒಳ್ಳೇದು, ಹಾಗಿದ್ದರೆ ನೀವು ಅಂಥ ಅಧಿಕಾರಕ್ಕೆ ಯೋಗ್ಯರಾಗಿರುವಿರೋ ಇಲ್ಲವೋ ಎಂಬದನ್ನು ನಾನು ವಿಚಾರಮಾಡುತ್ತೇನೆ. ನೀವು ನನಗೆ ಆವುದಾದರೂ ಒಳ್ಳೆಯದಾಗೂ ಉಪಯೋಗೀ ಶಿಕ್ಷಣವನ್ನು ಕೊಡುತ್ತಿದ್ದರೆ, ನಿಜವಾಗಿಯೂ ನೀವು ಆವುದೊಂದು ಉಚ್ಚ ಅಧಿಕಾರವನ್ನು ಹೊಂದಲಿಕ್ಕೆ ಯೋಗ್ಯರಾಗಿರುತ್ತಿದ್ದಿರಿ ಎಂಬದನ್ನು ನಾನು ಒಪ್ಪುತ್ತೇನೆ; ಆದರೆ ನೀವೇ ಯೋಚಿಸಿರಿ. ನೀವು ನನಗೆ ಕಲಿಸಿದುದೇನು? ಸಮಗ್ರ 'ಯುರೋಪ' ಒಂದು ಸಣ್ಣದ್ವೀಪಕ್ಕೆ ಸಮಾನವಾಗಿರುವುದೊಂದೂ, ಅದರಲ್ಲಿ ಪೋರ್ತುಗಾಲಿನರಾಜನು ಎಲ್ಲರಿಗಿಂತಲೂ ಅಧಿಕ ಶಕ್ತಿಶಾಲಿಯೆಂದೂ ಇನ್ನು ಹೊಲ್ಲೆಂಡ್ ಆ ಮೇಲೆ ಇಂಗ್ಲಂಡಿನ, ಫ್ರಾನ್ಸ ಇತ್ಯಾದಿ ದೇಶಗಳ ರಾಜರ ವಿಷಯದಲ್ಲಿ ಅವರು ಹಿಂದೂಸ್ಥಾನದ ಸಣ್ಣ ಸಣ್ಣ ರಾಜರುಗಳಿಂದ ಹೆಚ್ಚಿನವರಲ್ಲವೆಂದು, ಇಲ್ಲಿಯ ಬಾದಶಹರ ಪ್ರಭುತ್ವದೆದುರಿಗೆ ಇತರ ದೇಶಗಳ ಬಾದಶಹರ ಪ್ರಭುತ್ವವು ತುಚ್ಛವೆಂದು ನೀವು ನನಗೆ ಹೇಳಿಕೊಟ್ಟಿರಲಿಲ್ಲವೇ? ಹುಮಾಯೂನ್, ಅಕ್ಬರ, ಜಹಾಂಗೀರ ಮತ್ತು ಶಾಹಜಹಾನ್ ಇವರೇ ಎಲ್ಲರಿಗಿಂತಲೂ ಹೆಚ್ಚಿನ ಸೌಖ್ಯಶಾಲಿಗಳಾಗಿಯೂ, ಶಕ್ತಿಶಾಲಿಗಳಾಗಿಯೂ ಇದ್ದರು. ಮತ್ತು ಫಾರಸ, ಉಜಬಕ, ಕಾಶಗರ, ಚೀನ, ತಾತಾರ, ಹೀಗೂ ಇತ್ಯಾದಿ ದೇಶಗಳ ನರೇಶರು ಬಾದಶಹರು ಹಿಂದೂಸ್ಥಾನದ ಹೆಸರನ್ನು ಕೇಳುತ್ತಲೇ ನಡುಗುತ್ತಿದ್ದರು ಮಹಾನ್ ಭೂಗೋಳವೇತ್ತಾ! ಅದ್ಭುತ ಇತಿಹಾಸಜ್ಞ! ಪೃಥ್ವಿಯ ಸಮಸ್ತ ದೇಶಗಳ ಯಥಾರ್ಥ ಸ್ಥಿತಿಯನ್ನು ಹೇಳಿ ಅವುಗಳ ಸೇನಾ, ಸಾಮಗ್ರಿ ಸಂಪತ್ತಿಯ ವರ್ಣನೆ, ಯುದ್ಧ ಪ್ರಣಾಳಿ, ಸಾಮಾಜಿಕ, ಅವಸ್ಥೆ ಧಾರ್ಮಿಕ ವಿಚಾರ ಮತ್ತು ರಾಜ್ಯಪದ್ಧತಿಯ ವಿವರಣೆ ಮೊದಲಾದವನ್ನು ತಿಳಿಯ ಹೇಳುವದು ನನ್ನ ಶಿಕ್ಷಕನಿಗೆ ಉಚಿತವಾಗಿರಲಿಲ್ಲವೇ? ಯಥಾ ಕ್ರಮವಾಗಿ ಇತಿಹಾಸವನ್ನು ಕಲಿಸಿಕೊಟ್ಟು ಪ್ರತಿಒಬ್ಬ ಬಾದಶಹನ ಉತ್ಪತ್ತಿ, ಉನ್ನತಿ ಮತ್ತು ಅವನತಿಯ ಕಾರಣವನ್ನು ನನಗೆ ತೋರಿಸಿಕೊಟ್ಟು, ಆಕಸ್ಮಿಕ ಘಟನೆಗಳ ಹಾಗೂ ರಾಜ್ಯಶಾಸನ ಸಂಬಂಧವಾದ ತಪ್ಪುಗಳನ್ನು ವರ್ಣನೆಮಾಡಿ ಅವುಗಳ ಕಾರಣ, ಯಾವುದರಿಂದ ಎಂತಹ ಪರಿವರ್ತನೆಗಳಾದವು, ಎಂತಹ ಹಾನಿಲಾಭಗಳುಂಟಾದವು, ದೇಶದಲ್ಲಿ ಅದರಿಂದುಂಟಾದ ಪರಿಣಾಮವೇನು ಎಂಬೀ ವಿಷಯಗಳನ್ನು ತಿಳಿಯ ಹೇಳುವುದು ಶಿಕ್ಷಕನ ಧರ್ಮವಾಗಿರಲಿಲ್ಲವೆ? ಮನುಷ್ಯಜಾತಿಯ ಇತಿಹಾಸದಿಂದ ನನ್ನನ್ನು ಚೆನ್ನಾಗಿ ಅಭಿಜ್ಞನನ್ನಾಗಿಮಾಡಿರುವ ಮಾತು ಹಾಗಿರಲಿ, ಈ ವಿಸ್ತಾರವಾದ ಸಾಮ್ರಾಜ್ಯಕ್ಕೆ ತಳಹದಿಯನ್ನು ಹಾಕಿದ ಆ ನನ್ನ ಪೂರ್ವೀಜರ ಹೆಸರನ್ನು ಕೂಡ ನೀವು ನನಗೆ ಚನ್ನಾಗಿ ಹೇಳಿಕೊಡಲಿಲ್ಲ. ಅವರ ಜೀವನ ಚರಿತ್ರೆಯ ವಿಷಯದಲ್ಲಿ, ಅವರು ಬಾದಶಹರಾಗುವುದಕ್ಕೆ ಕಾರಣಭೂತವಾದ ಘಟನೆಗಳ ವಿಷಯದಲ್ಲಿ, ಅವರು ವಿಜಯಿಗಳಾಗುವ ಮೂಲಸಾಧನಗಳ ವಿಷಯದಲ್ಲಿ ನೀವುನನ್ನನ್ನು ಪೂರ್ಣ ಅಂಧಕಾರದಲ್ಲಿಯೇ ಇಟ್ಟುಬಿಟ್ಟಿರಿ. ಬಾದಶಹನಾಗತಕ್ಕವನು ತನ್ನ ಸಮೀಪವರ್ತಿ ದೇಶಗಳ ಭಾಷೆಗಳನ್ನು ತಿಳಿಯಬೇಕಾದುದು ಅತ್ಯಾವಶ್ಯಕವಾಗಿರುವಾಗ, ನೀವುಮಾತ್ರ ನನಗೆ ಅರಬಿ ಭಾಷೆಯನ್ನೇ ಕಲಿಸಿದಿರಿ. ಹಾಗೆ ಮಾಡಿದುದರಿಂದ ನೀವು ನನಗೆ ದೊಡ್ಡ ಉಪಕಾರವನ್ನು ಮಾಡಿದ್ದೇನೆಂದು ತಿಳಿದಿದ್ದೀರಿ. ಅದಕ್ಕಾಗಿಯೇ ನೀವು ನನ್ನ ಹೆಚ್ಚಿನ ಸಮಯವನ್ನು ಅರಬೀ ಭಾಷೆಯನ್ನು ಕಲಿಯುವುದರಲ್ಲಿಯೇ ವ್ಯರ್ಥ ಕಳೆಯುವಂತೆ ಮಾಡಿದಿರಿ. ಹತ್ತು ಹನ್ನೆರಡು ವರ್ಷಗಳ ಪರಿಶ್ರಮವಿಲ್ಲದೆ ಯಾವ ಮನುಷ್ಯನೇ ಆಗಲಿ ಅಂಥಾ ಕ್ಲಿಷ್ಟಭಾಷೆಯಲ್ಲಿ ತಕ್ಕಷ್ಟು ಯೋಗ್ಯತೆಯನ್ನು ಪಡೆಯಲಾರನೆಂದು ನೀವು ತಿಳಿಯಲಿಲ್ಲ. ರಾಜಕುಮಾರನಿಗೆ ಯಾವ ಉಪಯೋಗಕರವಾದ ವಿಷಯದಲ್ಲಿ ಶಿಕ್ಷಣೆಯನ್ನು ಕೊಡಬೇಕೆಂಬುದನ್ನು ತಾವು ಅರಿಯಲೇ ಇಲ್ಲ. ಆದರೆ ಬಹುದೊಡ್ಡ ವೈಯ್ಯಾಕರಣನಿಗೆ ಬೇಕಾಗುವಷ್ಟು ನನಗೂ ವ್ಯಾಕರಣ ಅವಶ್ಯವೆಂದು ತಿಳಿದಿರಿ. ನನ್ನ ಬಾಲ್ಯ ಕಾಲದ ಅಮೂಲ್ಯಸಮಯವು ಈ ಪ್ರಕಾರ ನಿಮ್ಮ ಶುಷ್ಕ, ಅನುಪಯೋಗಿ ಹಾಗೂ ಕಠಿಣ ಶಬ್ದಗಳನ್ನು ಕಂಠಪಾಠ ಮಾಡುವುದರಲ್ಲೇ ವ್ಯರ್ಥಮಾಡಿಕೊಂಡೆನು.

ಬಾಲ್ಯಕಾಲದಲ್ಲಿ ಕೊಡಲ್ಪಟ್ಟ ಶಿಕ್ಷಣೆಯು ಎಂದಿಗೂ ಮರೆತು ಹೋಗುವದಿಲ್ಲವೆಂದು ತಮಗೆ ಗೊತ್ತಿರಲಿಲ್ಲವೆ? ಆ ಸಮಯದಲ್ಲಿ ಸ್ಮರಣಶಕ್ತಿಯು ಪ್ರಬಲವಾಗಿರುತ್ತದೆ ಆದುದರಿಂದ ಬಾಲ್ಯಕಾಲದಲ್ಲಿ ಕೊಡಲ್ಪಟ್ಟ ಶಿಕ್ಷಣವು ಚಿತ್ತದಲ್ಲಿ ನೆಲೆಗೊಳ್ಳುವುದು. ಈಗ ಒಳ್ಳೆಯ ಶಿಕ್ಷಣವನ್ನು ಕೊಟ್ಟರೆ ಮನುಷ್ಯನು ದೊಡ್ಡದೊಡ್ಡ ಕೆಲಸಗಳನ್ನು ಮಾಡುವುದಕ್ಕೆ ಸಮರ್ಥನಾಗುತ್ತಾನೆ; ಅವನ ವಿಚಾರಗಳು ಪರಿಮಾರ್ಜಿತವಾಗಿ ಉಚ್ಚಸ್ಥಿತಿಗೆ ಮುಟ್ಟುವವು. ವಿಜ್ಞಾನದ ಹಾಗೂ ಧರ್ಮ ಶಾಸ್ತ್ರದ ಶಿಕ್ಷಣವು ಕೇವಲ ಅರಬಿ ಭಾಷೆಯಲ್ಲಿಯೇ ಕೊಡಲ್ಪಡುವುದೇ? ಈಶ್ವರನ ಭಜನೆ, ಪೂಜನೆಯೂ ವಿದ್ಯಾಧ್ಯಯನವೂ ನಮ್ಮ ಮಾತೃಭಾಷೆಯಲ್ಲಿ ಆಗುವದಿಲ್ಲವೇ? ನನ್ನ ತಂದೆ 'ಶಾಹಜಹಾ' ನೊಡನೆ ನೀವು ನನಗೆ ತತ್ವ ವಿದ್ಯೆಯನ್ನೂ ದರ್ಶನ ಶಾಸ್ತ್ರವನ್ನೂ ಓದಿಸುವೆನೆಂದು ಹೇಳಿದಿರಿ. ಅದು ನಿಜ, ನನಗೆ ಈಗಲೂ ನೆನಪಿದೆ—ಬಹುವರ್ಷಗಳ ವರೆಗೆ ಮೂರ್ಖತ್ವಪೂರ್ಣವಾದ ನಿರರ್ಥಕ ವಿಷಯಗಳಮೇಲೆ ವ್ಯಾಖ್ಯಾನ ಕೊಟ್ಟು ನನ್ನ ಮೆದುಳನ್ನು ತುಂಬಿಬಿಟ್ಟಿರಿ. ನನಗೆ ಎಂದಿಗೂ ಉಪಯೋಗವಾಗದ, ಮನುಷ್ಯನಿಗೆ ಸ್ವಲ್ಪವೂ ಸಂತೋಷವಾಗದ ಎಷ್ಟೋ ಮಾತುಗಳನ್ನೂ, ನಿಸ್ಸಾರವೂ ಬಹಳ ಪರಿಶ್ರಮಪೂರ್ವಕ ನೆನಪುಮಾಡಲು ಕೂಡಲೇ ಮರೆತು ಹೋಗುವ ಮನುಷ್ಯನ ಬುದ್ಧಿಯು ಕುಂಠಿತವಾಗುವಂಥಾ ಕಲ್ಪನೆಗಳನ್ನು ನನ್ನ ಮೆದುಳಿನಲ್ಲಿತುಂಬಿಸುವ ಯತ್ನಮಾಡಿದ್ದೀರಿ. ಯಾವುದರಿಂದ ನನ್ನ ಜೀವನದ ಅಮೂಲ್ಯ ಸಮಯ ನಷ್ಟವಾಯಿತೋ, ಆ ನಿಮ್ಮ ಪ್ರೀತಿಯ ತರ್ಕವಿದ್ಯೆಯನ್ನು ನನಗೆ ಕಲಿಸಿರೆಂಬದು ನಿಜ. ಆದರೆ ಯಾವಾಗ ನಾನು ನಿಮ್ಮಿಂದ ಪ್ರತ್ಯೇಕವಾದೆನೋ ಆಗ ಅರ್ಥಹೀನವೂ, ಕ್ಲಿಷ್ಟವೂ, ವ್ಯರ್ಥವೂ ಆದ ಆ ಶಬ್ದಗಳಲ್ಲದೆ ನಿಮ್ಮ ಗೂಢವಿದ್ಯೆಯ ಗೂಢವಿಷಯವಾದರೂ ನನ್ನ ಸ್ಮರಣೆಯಲ್ಲಿಲ್ಲ. ದರ್ಶನ ಶಾಸ್ತ್ರವನ್ನು ತಿಳಿಯುವಂಥ ಪಾರಿಭಾಷಿಕ ಶಬ್ದಗಳನ್ನು ನಿಮ್ಮಿಂದ ಕಲಿತೆನು. ಆದರೆಯೂ ತಮ್ಮ ಪ್ರಚಂಡಜ್ಞಾನವನ್ನು ದೇರಿಯವರಿಗೆ ಕೊಟ್ಟು ಅವರನ್ನು ಜ್ಞಾನವಂತರನ್ನಾಗಿ ಮಾಡುವರೋ, ಯಾರು ಶಬ್ದಸಮೂಹದಿಂದ ವಿಲಕ್ಷಣ ಜ್ಞಾನವು ತುಂಬಿರುವುದೋ ಅಂಥ ದರ್ಶನ ಶಾಸ್ತ್ರಜ್ಞರು ಮಾತ್ರ ತಮ್ಮಂಥ ಶಿಷ್ಯನಾದರೊಡನೆ ಅದನ್ನು ಪ್ರಕಟಗೊಳಿಸಬೇಕಲ್ಲದೆ ನನಗೆ ಅದರಿಂದ ಪ್ರಯೋಜನವೇನು? ನೀವು ನನಗೆ ಕಾರ್ಯ—ಕಾರಣ—ಭಾವವೇ ಪ್ರಧಾನವೆಂದು ತಿಳಿಯುವ ಮತ್ತು ಚಿತ್ತವು ಆವುದೊಂದು ವಸ್ತುವಿನ ನಿಜವಾದ ಜ್ಞಾನ ಪ್ರಾಪ್ತವಾಗ ಮಾತ್ರ ಸಂತೋಷಪಡುವ ತರ್ಕ ಸ್ತ

ಶಾಳಿಯನ್ನು ಕಲಿಸಬೇಕಿತ್ತು. ಮನುಷ್ಯನು ತನ್ನ ಎಂತಹ ವಿಪತ್ತಿನಲ್ಲಿಯೂ ಸ್ಥಿರಚಿತ್ತನಾಗಿರುವಂಥಾ ಮತ್ತು ತನ್ನ ಆತ್ಮೋನ್ನತಿಯನ್ನು ಮಾಡಿಕೊಳ್ಳುವಂಥಾ ಶಿಕ್ಷಣೆಯನ್ನು ಕೊಡಬೇಕಾಗಿತ್ತು. ನೀವು ನನಗೆ ಮನುಷ್ಯನ ಸ್ವಭಾವಿಕ ಧರ್ಮ, ಸೃಷ್ಟಿಯರಚನೆ, ಉತ್ಪತ್ತಿಮತ್ತು ನಾಶ ಇವುಗಳ ವಿಷಯದಲ್ಲಿ ಶಿಕ್ಷಣವನ್ನು ಕೊಡುತ್ತಿದ್ದರೆ ಸಿಕಂದರನು 'ಅರಸ್ತೂತ' ನಿಗೆ ಎಷ್ಟು ಕೃತಜ್ಞನಾಗಿದ್ದನೋ ನಾನು ಕೂಡ ನಿಮಗೆ ಅಷ್ಟೇ ಕೃತಜ್ಞನಾಗಿದ್ದೆನು. ಹೇಳಿರಿ, ರಾಜರ ಮತ್ತು ಪ್ರಜೆಗಳ ಧರ್ಮವನ್ನು ಹೇಳಿಕೊಡುವುದುಕೂಡ ನಿಮ್ಮ ಧರ್ಮವಾಗಿರಲಿಲ್ಲವೇ ? ಈ ವಿಷಯವನ್ನು ಅರಸನಾಗತಕ್ಕವನು ಅವಶ್ಯವಾಗಿಯೂ ತಿಳಿಯಬೇಕಾಗಿತ್ತು. ಆ ಯುದ್ಧವಿದ್ಯೆ, ವ್ಯೂಹರಚನೆ ಮೊದಲಾದವುಗಳನ್ನು ನೀವು ಎಂದಾದರೂ ತಿಳಿಯ ಹೇಳಿದ್ದುಂಟೆ? ಸೌಭಾಗ್ಯವಶದಿಂದ ಈ ವಿಷಯಗಳಲ್ಲಿ ನಾನು ನಿಮ್ಮಿಂದಲೂ ವಿಜ್ಞಪುರುಷರ ಅಭಿಪ್ರಾಯವನ್ನು ಕೇಳಿದೆನು. ಹೊರಡಿರಿ, ನೆಟ್ಟಗೆ ನಿಮ್ಮ ಊರಿಗೆ ಹೊರಟು ಹೋಗಿರಿ! ಇನ್ನೆಂದಿಗೂ ನೀವು ಯಾರೊಡನೆಯೂ ತಾನು ಔರಂಗಜೇಬನ ಗುರು ಎಂದು ಹೇಳಿಕೊಳ್ಳಬೇಡಿರಿ!"

ಯಾವಾಗ ಮುಲ್ಲಾಜೆಯು ವೇಳೆ ವ್ಯಾಖ್ಯಾನಗಳ ಮಳೆಯ ಸುರಿಯಿತೋ ಆಗ ಅಲ್ಲಿ 'ಹಕೀಮುಲಮುಲೂಕದಾನಿಷ ಮಂದಖಾನ' ಉಪಸ್ಥಿತನಾಗಿದ್ದನು. ಅವನು ಈ ವ್ಯಾಖ್ಯಾನವನ್ನು ಯುರೋಪಿಯನ ಪ್ರಸಿದ್ಧಯಾತ್ರಿ ವರ್ನಿಯರನಿಗೆ ಹೇಳಿದನು. ವರ್ನಿಯರನು ಅದನ್ನು ತನ್ನ ಯಾತ್ರಾ ಪುಸ್ತಕದಲ್ಲಿ ಪ್ರಕಾಶಗೊಳಿಸಿದನು.

(ಮೇವಾರದ ಇತಿಹಾಸದಿಂದ)

"ಕರ್ಮವೀರ"

ನಾನು ವೈಸರಾಯಿ ಆಗಿದ್ದರೆ.

(ಮಹಾತ್ಮ ಗಾಂಧಿಯವರ ಲೇಖನದ ಅನುವಾದ)

ಇಬ್ಬರು ಇಂಗ್ಲಿಷ್ ಸ್ನೇಹಿತರು ಬಂಗಾಳದ ದಬ್ಬಾಳಿಕೆಯ ನ್ಯಾಯವಾದ್ದೇಕೆ ತೋರಿಸುವ ಸಂದರ್ಭದಲ್ಲಿ ನೀನು ಲಾರ್ಡ್ ರೀಡಿಂಗ್ ಅಥವಾ ಲಾರ್ಡ್ ಲಿಟ್ಟನ್ ಆಗಿದ್ದರೆ ಏನು ಮಾಡುತ್ತಿದ್ದೀ ಎಂತ ಕೇಳಿದರು, ತಕ್ಷಣ ಜವಾಬುಕೊಟ್ಟೆ ಆದರೆ ಅವರಿಗೆ ತೃಪ್ತಿಯಾಗಲಿಲ್ಲ. ನಾನು ಆ ಪದವಿಯಲ್ಲಿ ಇಲ್ಲದ್ದರಿಂದ ಜವಾಬು ಕೊಡುವದು ಸುಲಭ, ಆದರೆ ಕಾರ್ಯದಲ್ಲಿ ಅದು ಸಾಧ್ಯವಿಲ್ಲವೆಂತ ಅವರು ಭಾವಿಸಿದರು. ಪುನಹ ಯೋಚಿಸಿಯೂ ನನ್ನ ಜವಾಬೇ ಸರಿಯೆಂತ ನನಗೆ ತೋರಿದ್ದರಿಂದಲೂ ಮತ್ತು ಆ ಇಬ್ಬರು ಇಂಗ್ಲಿಷ್ ಮನುಷ್ಯರಂತೆಯೇ ಇನ್ನೂ ಅನೇಕ ಇಂಗ್ಲೀಷರು ದಬ್ಬಾಳಿಕೆಯು ಅವಶ್ಯವೆಂತ ತಿಳಿದಿರಬಹುದಾದ್ದರಿಂದ ನನ್ನ ಜವಾಬನ್ನು ಸ್ವಲ್ಪ ವಿವರಿಸಿ ಇಲ್ಲಿ ಬರೆದಿದ್ದೇನೆ.

ಮೊದಲಾಗಿ ನಂಬಿಕಸ್ಥರಾದ ಮತ್ತು ಜವಾಬ್ದಾರಿ ಇರುವ ಹಿಂದೀಯರನ್ನು ಕರೆಸಿ ರಿಕಾರ್ಡುಗಳನ್ನೆಲ್ಲ ಅವರಿಗೆ ತೋರಿಸಿ ಅವರು ಹೇಳಿದಂತೆ ನಡೆಕೊಳ್ಳುತ್ತಿದ್ದೆ. ಸುಭಾಸ್ ಚಂದ್ರ ಬೋಸರ ವಿಷಯದಲ್ಲಿ ನನಗೆ ಇರುವ ಸಂಶಯಗಳನ್ನು ಅವರಿಗೆ ತಿಳಿಸಿ ಅವರ ಜವಾಬನ್ನು ಪ್ರಕಟಿಸುತ್ತಿದ್ದೆ. ಅಂಥ ಹಿಂದೀಯರ ಆಲೋಚನೆ ತೆಗೆದುಕೊಂಡು ದೇಶಬಂಧುದಾಸರನ್ನು ಕರೆಸಿಕೊಂಡು ಅವರ ಪಾರ್ಟಿಯವರ ಮೇಲೆ ಇರುವ ಸಂಶಯವನ್ನು ಪರಿಹರಿಸುವ ಭಾರ ಪೂರ್ತಿ ಅವರ ಮೇಲೆ ಹಾಕುತ್ತಿದ್ದೆ. ಈ ಕ್ರಮದಿಂದ ನಾನು ಶಾಂತತೆಯನ್ನು ಸ್ಥಾಪಿಸುತ್ತಿದ್ದೆ. ಅಥವ ಸಂಶಯಗಳನ್ನು ಹೋಲಾಡಿಸಿಕೊಳ್ಳುತ್ತಿದ್ದೆ. ನನ್ನ ಲೆಜಿಸ್ಲೇಟಿವ್ ಕೌನ್ಸಿಲಿನಲ್ಲಿ ನನಗೆ ನಂಬಿಕೆ ಇಲ್ಲದಿದ್ದರೆ ಅಥವ ಅದನ್ನು ಕರೆಸಿ ಚರ್ಚಿಸಲು ಸಮಯವಿಲ್ಲದಿದ್ದರೆ ಇಷ್ಟಾದರೂ ಮಾಡುತ್ತಿದ್ದೆ. ಈ ಹೊರಗಿನ ಅತೃಪ್ತಿಯ ಸೂಚನೆಗೆ ನಿಜವಾದ ಕಾರಣವೇನೆಂತ ಕಂಡುಹಿಡಿಯುತ್ತಿದ್ದೆ. ಭಾರತೀಯ ಪ್ರಮುಖರನ್ನು ಕರೆಸಿಕೊಂಡು ಇದರ ವಿಷಯದಲ್ಲಿ ಶಾಂತಿ ಪ್ರಿಯರಾದವರು ನಿರಪರಾಧಿಗಳನ್ನು ಯಾಕೆ ಕೊಲ್ಲುತ್ತಾರೆ, ತಮ್ಮ ಜೀವಕ್ಕೆ ಅಪಾಯವನ್ನು ಯಾಕೆ ತಂದುಕೊಳ್ಳುತ್ತಾರೆ ಎಂತ ಕೇಳುತ್ತಿದ್ದೆ. ಅವರಿಗೆ ಸ್ವಾರ್ಥತೆಯೇನೂ ಇಲ್ಲ, ದೇಶದ ಸ್ವತಂತ್ರತೆಗಾಗಿಯೇ ಹೀಗೆಮಾಡುತ್ತಾರೆಂತ ತಿಳಿಯುತ್ತಿತ್ತು. ಪ್ರತಿನಿಧಿ ಪ್ರಮುಖರ ಅಭಿಪ್ರಾಯದಂತೆ ನಡಕೊಂಡು ಅತೃಪ್ತಿಯ ಮೂಲಕಾರಣವನ್ನೇ ತೆಗೆದುಹಾಕುತ್ತಿದ್ದೆ. ಪರದೇಶಿಯರ ಕ್ಷೇಮವನ್ನು ಕಾಯಲು ತಕ್ಕ ಬಂದೋಬಸ್ತು ಮಾಡುತ್ತಿದ್ದೆ. ದೇಶದಲ್ಲಿ ಅಶಾಂತಿ ಇಲ್ಲದೆ ಇರುವಂತೆ ನೋಡಿಕೊಳ್ಳಬೇಕಾದದ್ದು ಹೇಗೆ ನನ್ನ ಭಾರವೋ ಹಾಗೆಯೇ ನನ್ನ ಲೆಜಿಸ್ಲೇಟಿವ್ ಕೌನ್ಸಿಲಿನ ಭಾರವಾಗಿದೆಯೆಂಬ ಯೋಚನೆಯಿಂದ ಸಮಾಧಾನವಾಗಿ ಇರುತ್ತಿದ್ದೆ.

ಇದರಲ್ಲಿ ಹೊಸ ವಿಷಯವೇನು ಇಲ್ಲ ಹಳೆಯವಿಷಯವಾದದ್ದೇ ಅದರ ಮಹತ್ವ ಈಗ ಇರುವ ಆಡಳಿತ ಪದ್ಧತಿಯು ದಬ್ಬಾಳಿಕೆಯ ಮೇಲೆ ನಡಿಯುತ್ತಿದೆ. ಎಷ್ಟು ವೈಸ್‌ರಾಯರುಗಳು ಬಂದರೂ ಹಿಂದೀಯರ ಅಭಿಪ್ರಾಯ ತೆಗೆದುಕೊಳ್ಳಬೇಕೆಂತ ಅವರಿಗೆ ತೋರಲಿಲ್ಲ. ಈ ತರದ ಮಾನಹಾನಿಯು ಬುದ್ಧಿವಾದವು ಪ್ರಯೋಜನವಿಲ್ಲದ್ದು ಎಂಬಿದನ್ನು ತೋರಿಸುವದಿಲ್ಲ. ಆಡಳಿತ ಪದ್ಧತಿಯ ನಿರುಪಯೋಗತ್ವವನ್ನು ತೋರಿಸುತ್ತದೆ. ವೈಸರಾಯರಿಗೆ ದೇಶದ ಹಿಮ್ಮತ್ತು ಸಿಕ್ಕುವ ಬದಲಿಗೆ ಸಂಪೂರ್ಣ ಅಕ್ಷೇಪ ದೊರಕುವುದರಲ್ಲಿ ಆಶ್ಚರ್ಯವೇನೂ ಇಲ್ಲ.

ಪ್ರಕಟಣೆ.

ಮಡಿಕೇರಿ ಪೋಲೀಸ್ ಸಬ್ ಇನ್‌ಸ್ಪೆಕ್ಟರುಗಳ ಕ್ವಾರ್ಟರ್ಸ್‌ ಕೆಳಗೆ ಅಂದವಾಗಿಯೂ ಹೊಸಮರಗಳಿಂದ ಭದ್ರವಾಗಿಯೂ 3 ವರ್ಷಗಳ ಹಿಂದೆ ಕಟ್ಟಲ್ಪಟ್ಟ ಸಂಸಾರ ಸಮೇತ ವಾಸ ಇರಲಿಕ್ಕೆ ಯೋಗ್ಯವಾದ 9 ಕೊಠಡಿಗಳಿರುವ ಮನೆ 3 ಅಂಕಣಗಳ ಕೊಟ್ಟಿಗೆ ಯಾವಾಗಲೂ ನಿರ್ಮಲವಾದನೀರು ಇರುವ ಕಲ್ಲು ಕಟ್ಟಿದ ಭಾವಿ (ನೀರು ಗೋಟಿ ತೆಗಿಯುವಂಥಾದ್ದು) ಕಾಫಿ, ಬಾಳೆ, ಕಿತ್ತಳೆ, ನಿಂಬೆ ಮರಗಳೂ ಮತ್ತು ಹಲಸು ಮತ್ತು ಹೂವಿನ ಗಿಡಗಳೂ ಇರುವ ಹಿತ್ತಲೂಸಹ ಇರುವ ಆಸ್ತಿ ಒಂದು ಮಾರಾಟಕ್ಕೆ ಇದೆ. ಇದಕ್ಕೆ (11,000) ಹನ್ನೊಂದು ಸಾವಿರ ರೂಪಾಯಿ ಹೆಚ್ಚು ಕಡಿಮೆ ಕರ್ಚಾಗಿದೆ. ಈ ಸ್ಥಳವು ಗೋಪ್ಯವಾಗಿಯೂ ಸಂಸಾರ ಸಮೇತ ವಾಸ ಇರುವದಕ್ಕೆ ಯೋಗ್ಯವಾಗಿಯೂ ಇದೆ. ವಾಸಕ್ಕೆ ಇಂಥಾ ಯೋಗ್ಯವಾದ ಸ್ಥಳ ಮಡಿಕೇರಿಯಲ್ಲಿ ಸಿಕ್ಕುವದು ದುರ್ಲಭ, ಕೊಂಡುಕೊಳ್ಳುವದಕ್ಕೆ ಬಯಸಿ ಇರುವವರು ಸ್ವತ್ತು ನೋಡಿ ಕ್ರಯ ನಿಶ್ಚೈಸ ಬಹುದು. ಹೆಚ್ಚಿನ ವಿವರ ಈ ಕೆಳಗಿನ ವಿಳಾಸಕ್ಕೆ ಬರದು ತಿಳಿದುಕೊಳ್ಳಬೇಕಾಗಿದೆ.

VENDER,
C/o EDITOR "KODAGU."
Mercara.

4-1

ಪತ್ರವ್ಯವಹಾರಗಳು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾ ಕರ್ತರು ಉತ್ತರವಾದಿಗಳಲ್ಲ ಸಂ.

ದಸ್ತೆಕರೆ ದನ ಮೇಯಿಸುವಿಕೆ.

ಅಯ್ಯಾ ಮಿತ್ರರೇ,

ನಮ್ಮ ನೆರೆಹೊರೆಯವರಾದ ಕೆಲವು ಸಹೋದರರಿಗೆ ಕಳೆದ ತಾರೀಕು 18ರಲ್ಲು ಉಂಟಾದ ಕಷ್ಟವನ್ನು ನೋಡಿದರಿಂದಲೇ ನನಗೆ ಅತ್ಯಂತ ವ್ಯಸನವುಂಟಾಯಿತು. ಕಷ್ಟವನ್ನು ಅನುಭವಿಸಿದವರಿಗೆ ಎಷ್ಟು ದುಃಖವಿರಬಹುದೆಂದು ಹೇಳಲಸದಳವಾಗಿದೆ ಇಂಥಾ ಪ್ರಸಾದವು ನನಗೂ ಇಂದು ನಾಳೆ ಎಂಬದರೊಳಗಾಗಿ ಉಂಟಾಗುವದು ಖಂಡಿತ. ಇಂಥಾ ಕಷ್ಟಕಾಲದಲ್ಲು ಎಷ್ಟು ಕಷ್ಟಪಟ್ಟರೂ ದರಿದ್ರವು ದಿನೆ ದಿನೆ ಹೆಚ್ಚುತ್ತಾ ಬರುವದಲ್ಲದೆ ಸುಖವೆಂಬ ಸುಳಿವೇ ಕಾಣದಂತ ಕಾಲದಲ್ಲು ನೈಸಲಸದಳವಾದ ಕಾನೂನು ಜಾರಿಗೆ ಬಂದಿರುವದಾಗಿ ತಿಳಿದು ಅತ್ಯಂತ ವ್ಯಸನಕ್ಕೆ ಕಾರಣವಲ್ಲದೆ ಇಂಥಾ ಕಾನೂನು ಮಾಡಿರುವದು ಕೇಕಡ ಕೊಂಬತ್ತೈದರಷ್ಟು ಜನರಿಗೆ ಗೊತ್ತಿಲ್ಲವೆಂದೇ ನಂಬಬೇಕಾಗಿದೆ. ಇದಕ್ಕೆ ಉದಾಹರಣೆ ಏನಂದರೆ, ತಾ. 18-11-24ರಲ್ಲು ಬಿಟ್ಟಂಗಾಲದಿಂದ ವೀರಾಜಪೇಟೆ ದೊಡ್ಡಿಗಾಗಿ ಪೋಲೀಸಿನವರು ದೊಡ್ಡಿಗೆ ಹೊಡಕೊಂಡು ಹೋಗುತ್ತಿದ್ದ ರಾಸುಗಳು ಅಂದರೆ ಸುಮಾರು ನನಗೆ ಗೋಚರವಾದದ್ದು ಒಂದೇ ಗುಂಪಿನಲ್ಲು 25 ರಾಸುಗಳು, ಇನ್ನೊಂದು ಗುಂಪಿನಲ್ಲು 6 ರಾಸು ಕೋಣಗಳು, ಇನ್ನೊಂದು ಗುಂಪಿನಲ್ಲು ಕೆಲವು ಆಡುಗಳು ಅಂತು ಹೀಗೆ ಅಟ್ಟಿಕೊಂಡು ಹೋಗುತ್ತಿರುವ ದನಕರಗಳ ಕಷ್ಟವನ್ನೂ ಮಾಲೀಕರ ನಷ್ಟವನ್ನೂ ಸರಕಾರಿ ನೌಕರರ ಇಷ್ಟವನ್ನೂ ನೋಡಿ ಸೈಸಲಾರದೆ ಇದೇನಾಶ್ಚರ್ಯವೆಂದು ಪೋಲೀಸಿನವರನ್ನು ಕೇಳುವಾಗ್ಯೆ ರಸ್ತೆಬಳಿಯಲ್ಲಿ ಎಲ್ಲಿಯೂ ದನ ಮೇಯಿಸಕೂಡದಾಗಿಯೂ ಮೇಯಿಸಿದರೆ ದನಗಳನ್ನು ದೊಡ್ಡಿಗೆ ಕೂಡಿಸುವುದಲ್ಲದೆ ದನ ಮೇಯಿಸುವ ಆಳಿನ ಮೇಲೆಯಾಗಲಿ, ಮಾಲೀಕನ ಮೇಲೆಯಾಗಲಿ ಮೊಕದ್ದಮೆ ಸಹ ಮಾಡುವ ಕಾನೂನು ಇದೆಯೆಂದು ಹೇಳಿ ತನ್ನ ಮುಂದಣ ಕೆಲಸವನ್ನು ಕುರಿತು ತೆರಳಿದನು. ಆದಂತಿರಲಿ, ತಿಳಿದೂ ತಿಳಿಯದೆಯೂ ಕಾನೂನು ಇದೆ ಎಂಬುವದು ಕಂಡಿತವಾಯಿತು. ಇದರ ವಿಷಯವಾಗಿ ನಮ್ಮ ಕಷ್ಟವನ್ನೂ ವ್ಯಸನವನ್ನೂ ಸರಕಾರದವರೊಂದಿಗೆ ಎಷ್ಟು ವಿನಯದಿಂದ ಹೇಳಿಕೊಂಡರು ಸ್ವಲ್ಪವಾಗಿಯೇ ತೋರುತ್ತೆ. ಆದರೂ ದೊರೆ ಪರಿಯಂತ ದೂರು ಹೊಳೆ ಪರಿಯಂತ ಓಟ ಎಂಬ ನಾಣ್ಣುಡಿಗೆ ಅನುಸಾರವಾಗಿ ಸರಕಾರದವರೊಂದಿಗೆ ವಿನಯದಿಂದ ರೈತರ ಕಷ್ಟಗಳನ್ನು ಅರಿಕೆ ಮಾಡಿಕೊಳ್ಳುವದೇ ನಮ್ಮ ಮುಖ್ಯ ಕರ್ತವ್ಯವಾಗಿದೆ. ರೈತರ ಭೂಮಿ ಮತ್ತು ಬಾಣೆ ಸಹ ಎಲ್ಲಿ ನೋಡಿದರೂ ರಸ್ತೆಬಾಜಿನಲ್ಲಿರುವದೇ ಹೆಚ್ಚಾಗಿಯೂ ಅಲ್ಲದೆ ಅನೇಕ ಜನರು ವ್ಯವಸಾಯ ಕಾಲದಲ್ಲು ರಸ್ತೆದಾಟಿಯೇ ಹೋಗುವದರಿಂದಲೂ ಆರಂಭ ಸಮಯದಲ್ಲು ವ್ಯವಸಾಯಕ್ಕೆ ತೆಗೆದುಕೊಂಡು ಹೋಗಿದ್ದ ದನಗಳು ರಸ್ತೆಕರೆಯಲ್ಲು ಮೇಯುತ್ತಿದ್ದ ಅಭ್ಯಾಸದಿಂದ ಗಡಿಗಡಿ ಆ ಸ್ಥಳಕ್ಕೆ ಬರುವದುಂಟು. ಅಂಥಾ ಎತ್ತುಗಳನ್ನು ಒಂದೇ ಸಲ ತಡೆದುಹಾಕುವದು ಕಷ್ಟ, ಅಲ್ಲದೆ ರೈತನ ಬಾಣೆಯ ಒಂದು ಭಾಗ ಮನೆ ಹಿತ್ತಲು, ಇನ್ನೊಂದು ಭಾಗ ಮರಕಾಡು, ಮತ್ತೊಂದು ಭಾಗ ಲಂಟಾನ, ಉಳಿದ ಭಾಗ ರಸ್ತೆಕರೆ, ಹೀಗಾದರೆ ಯಾವ ಕಡೆಯು ದನ ಮೇಯಿಸಲಿಕ್ಕೆ ಅನುಕೂಲ ಇಲ್ಲದಂತಾಯಿತು, ಹೀಗಾದರೆ ಆರಂಭಗಾರನಿನ ದನಕರ ಬೇಡವೇ? ಅದಂತಿರಲಿ, ರೈತನ ಇನ್ನೊಂದು ತರದ ಸಂತೋಷವನ್ನು ಹೇಳಿ ಪೂರೈಸಲಾರೆನು, ಒಂದು ಎತ್ತು ತೆಗೆಯಬೇಕಾದರೆ 25 ಯಾ, 30 ರುಪಾಯಿ ಕೊಡಬೇಕು. ಅಂತು ನಾಟಿ ಕೆಲಸ ತೀರುವದಕ್ಕಿಂತ ಮೊದಲೇ ಎತ್ತು ಹೊಲೆಯರಿಗೆ ದಾನವಾಯಿತು. ಅಂತು ಒಕ್ಕಲು ಕಲಸಕ್ಕೆ ಬೇರೆ ಎತ್ತು ತೆಗೆಯಲೇ ಬೇಕು. ಅಂತು ಒಂದು ವರುಷದ ಆರಂಭಕ್ಕೆ ಎರಡಾವೃತ್ತಿ ಎತ್ತು ತೆಗದರೆ ಒಂದು ಎತ್ತಿಗ ಎಷ್ಟು ಕ್ರಯವಾಯಿತು? ವಾಚಕ ಮಹಾಶಯರೇ 50 ಯಾ, 60 ರುಪಾಯಿ ಕ್ರಯವಾಯಿತಲ್ಲ? ಅಷ್ಟು ಕ್ರಯದ ಎತ್ತುಗಳನ್ನು ಮೇಯಿಸಲಿಕ್ಕೆ ಒಂದು ಆಳಿಗೆ ಸಂಬಳ. ಇದರ ಮೇಲೆ ದನ ಮೇಯಿಸುವ ಆಳಿನ ಕಣ್ಣು ಸ್ವಲ್ಪ ಮರೆಯಾದ ಕೂಡಲೆ ಸರಕಾರಿ ನೌಕರರಾಗಲಿ ಬೇರೊಬ್ಬ ರೈತನೇ ಆಗಲಿ ದೊಡ್ಡಿಗೆ ಕೂಡಲಿಕ್ಕಾಯಿತು. ಹೀಗಾದರೆ ಒಂದು ಎತ್ತಿಗೆ ಎಷ್ಟು ಕ್ರಯವಾಗಬಹುದು? ಇಷ್ಟು ದೊಡ್ಡ ಕ್ರಯದ ಎತ್ತಿನಿಂದ ಜರಾಯಿತುದಾರನಿಗೆ ಲಾಭವೋ? ದನ ಮೇಯಿಸುವ ಆಳಿಗೆ ಲಾಭವೋ? ಸರಕಾರಕ್ಕೆ ಲಾಭವೋ? ಈಗ್ಯೆ ದನಕರುಗಳ ಕಷ್ಟ, ಎರಡು ವರ ಷದಿಂದ ಮಳೆಯಿಂದ ಉಂಟಾಗುವ ನಷ್ಟ, ಇಷ್ಟರವುಟ್ಟಿಗೆ ಸುಖಪಡುತ್ತಿರುವ ರೈತನ ಭಾಗ್ಯವೇ ಭಾಗ್ಯ! ಹೀಗಾದರೆ ರೈತನೆಂದು ಅನ್ನಿಸಿಕೊಳ್ಳುವ ಸುಖದ ನಾಮಕ್ಕೆ ಉತ್ತರಕ್ರಿಯೆ ಮಾಡಿದಂತಾಯಿತು. ಇಷ್ಟು ಕಷ್ಟದಲ್ಲು ನರಳುತ್ತಿರುವ ರೈತರನ್ನು ನಮ್ಮ ದಯಾಳುವಾದ ಸರಕಾರದವರು ನೋಡಿ ರೈತರ ಕಷ್ಟಸುಖವೆ, ರಾಜರ ಕಷ್ಟಸುಖವೆಂದು ಭಾವಿಸಿ ಕನಿಕರದಿಂದ ಇಂಥಾ ಕಷ್ಟತರವಾದ ಕಾನೂನಿನ ಬಾಧೆಯಿಂದ ನಮ್ಮನ್ನು ವಿಮುಖರಾಗಿ ಮಾಡಿಯಾರೆಂದು ಕೋರಿಕೆ, ಮತ್ತು ಇಂಥಾ ಸಂದರ್ಭದಲ್ಲು ನಮ್ಮ ಪ್ರಜಾ ಹಿತಚಿಂತಕರಾದ ಕೊಡಗು ಕಮಿಷನರ್ ಸಾಹೇಬರು ರೈತರ ಸಂತೋಷಕ್ಕೆ ಮೂಲ ಮೆಟ್ಲಾಗಿರುವರೆಂದು ಒತ್ತಿ ಹೇಳುತ್ತೇನೆ.

'ಮನನೊಂದವ'

'ಮದ್ಯದ ಉಚ್ಚಗತಿ'

ವಾಚಕಪ್ರಿಯರೆ!

ಕೆಲವು ವರುಷಗಳಿಂದೀಚೆಗ ಮದ್ಯದ ಮಟ್ಟನ್ನು ಅಡಗಿಸಬೇಕೆಂದು ಭೂಲೋಕದಲ್ಲೆಲ್ಲಾ ಚಳವಳ ಉಂಟಾಗಕೊಂಡು ಬರುವಾಗ ಅದನ್ನನುಸರಿಸಿಕೊಂಡು ಆರಂಭಶೂರತೆಯುಳ್ಳ ನಮ್ಮ ಕೊಡಗೂ ಆ ಮಹತ್ಕಾರ್ಯದಲ್ಲಿ ನಿರುದ್ಯೋಗಿಯಾಗಲಿಲ್ಲ. ಚಳವಳವಾದರೂ ಇತರ ಎಲ್ಲಾ ದೇಶಕ್ಕಿಂತಲೂ ಇದು ಒಂದನೆಯದಾಗಿ ನಾಡುನಾಡುಗಳಲ್ಲಿಯೂ, ಗ್ರಾಮಗ್ರಾಮಗಳಲ್ಲಿಯೂ, ಒಂದೇ ವಿಧವಾದ ಬೊಬ್ಬೆಗಳು ಮೀಟಿಂಗುಗಳು ಉಂಟಾದವು. ಆ ಸಮಯ ನೋಡುವಾಗ್ಯೆ ಮದ್ಯದ ಹುಟ್ಟಡಗೋಣವು ಈ ದೇಶದಲ್ಲಿ ಎಲ್ಲಾ ದೇಶಗಳಿಗಿಂತಲೂ ಮುಂದೆ ಒಂದೆರಡು ವರುಷಗಳೊಳಗೇನೇ ಆಗಬಹುದೆಂದು ಅಂದಾಜು ಆಗುತ್ತಿತ್ತು. ಆ ಸಮಯ ಅಲ್ಲಲ್ಲಿ ಮೀಟಿಂಗ್‌ಗಳೇನು, ಉಪನ್ಯಾಸಗಳೇನು, ಎಂಬವುಗಳಿಗೆ ಲೆಕ್ಕವಿರುತ್ತಿರಲಿಲ್ಲ. ಗ್ರಾಮಗ್ರಾಮಗಳಲ್ಲಿ ಎಷ್ಟೋ ಮದ್ಯ ನಿಷೇಧ ಸಂಘಗಳು ಸ್ಥಾಪನೆಯಾದವು ಹಾಗೆಯೆ ಬೈನೆ ಮರಗಳನ್ನು ಮೂರ್ತೆಗೆ ಕೊಡುವದು ಸಹ ಸ್ವಲ್ಪಮಟ್ಟಿಗೆ ಬಾಕಿಯಾಗಿದ್ದವು ಹಾಗೂ ಒಂದೆರಡು ವರುಷಗಳಲ್ಲಿ ಸೇಂದಿ ಕಂಟ್ರಾಕ್ಟು ಹರಾಜುಗಳಲ್ಲೂ ಮೆತ್ತಗೆ ಮೆತ್ತಗೆ ಪಿಕೆಟಿಂಗ್ ನಡೆಯುತ್ತಿತ್ತು. ದೇಶವು ನೂರಾರು ಸಂಘಗಳಿಂದ ತುಂಬಿಯೂ ಹೋಗಿತ್ತು, ಎಲ್ಲವರು ಎದುರಿಗೆ ಮದ್ಯ ನಿಷೇಧ ಸಂಘದ ಮೆಂಬರುಗಳೆ. ಆ ಸಂಘದ ಸೆಕ್ರೆಟರಿಗಳ ದೆಸೆಯಿಂದ ಕೊಡಗು ಪತ್ರಿಕೆಯಲ್ಲಂತೂ ವಿರಾಮವು ದೊರೆಯುವದು ಬಹು ಅಪೂರ್ವ. ಪ್ರತಿ ಪತ್ರಿಕೆಯಲ್ಲು ಇಂದು ಇಂಥಾ ಸ್ಥಳದಲ್ಲಿ ಮೀಟಿಂಗು ನಾಳೆ ಇಂಥಾ ಸ್ಥಳದಲ್ಲಿ ಸಭೆ ಆಚೆ ನಾಡದ್ದು ಇಂಥಾವರ ಅಧ್ಯಕ್ಷತೆಯಲ್ಲಿ ಭಾಷಣ, ಇಂದು ಇಂಥಲ್ಲಿ, ಇಂಥಲ್ಲಿ ಸಂಘ ಸ್ಥಾಪನೆಗಳಾದವು, ಈಗ ಇಷ್ಟು ಹಣವಾಯಿತು. ಇಷ್ಟು ಜನ ಮೆಂಬರಾದರು, ಈ ವರುಷ ಚುನಾವಣೆಯಲ್ಲಿ ಇಂಥಾವರು ಪ್ರೆಸಿಡೆಂಟರು, ಸೆಕ್ರೆಟರಿಗಳು, ಕಮಿಟಿಗಳು ಎಂಬ ಮುಂತಾದ ಲೇಖನಗಳನ್ನು ನೋಡಿ ನೋಡಿ ಬೇಸರಾಗುತ್ತಿತ್ತು. "ಬರುತ್ತಾ ಬರುತ್ತಾ ರಾಯರ ಕುದುರೆ ಕತ್ತೆಯಾಯಿತು" ಎಂಬಂತೆ ಕಾರ್ಯದಲ್ಲಿ ಫಲಕಾರಿಯಾಗಿಲ್ಲದಿದ್ದರೂ ಅದರ ಪರಿಣಾಮವು ಸಹ ಸುಮಾರು ಒಂದು ವರುಷಗಳಿಂದೀಚೆಗೆ ಕಂಡು ಬರುವದಿಲ್ಲ. ಅದಾದರು ಹಾಗಿರಲಿ! ಗ್ರಾಮಗ್ರಾಮಗಳನ್ನು ಸುತ್ತಿ ಸುಗ್ಗಿ ನೋಡಿದರೂ ಮದ್ಯನಿಷೇಧ ಸಂಘಗಳ ಸುಳಿವೇ ಇಲ್ಲ. ಸೆಕ್ರೆಟರಿಗಳ ಮತ್ತು ಆ ವಿಷಯವಾಗಿ ಮುಂದೆ ಒದ್ದಾಡಿಕೊಂಡು ಉಪನ್ಯಾಸ ಮಾಡುತ್ತಿದ್ದವರ ಬಾಯಿಗೆ ಈಗ ಬೀಗವೇ ಸೈ!! ಸಂಘಗಳೇನಾದವೂ? ಸೆಕ್ರೆಟರಿಗಳೇನಾದರೂ? ಮರಾಯಿಯೊ ಏನೂ? ಇನ್ನು ಕಾಣೆ ಅರ್ಜಿ ಹಾಕಬೇಕಾಗಿ ಬರುತ್ತದೆ. ಈಗ ಎಲ್ಲಿಯು ಮದ್ಯದ ಉಚ್ಚಗತಿಯ ಹಾ ಹಾಕಾರ. ಮದ್ಯದ ನಿಷೇಧ ಹೋಗಿ ಸೇವಕತ್ವವೆ. ಒಂದು ಸಮಯ ಮೆಂಬರುಗಳು ಸೇವಕರಾದರೂ ಚಿಂತೆಯಿಲ್ಲ, ಸಂಘದ ಪ್ರಮುಖರೇ ಅತ್ತಕಡೆಗೆ ತಮ್ಮ ನಾಚಿಕೆಯಿಲ್ಲದ ಪೊಂಕು ಮುಖವನ್ನು ತೋರಿಸಿಯುವವೆಂದರೆ ಇದು ಯಾವ ಯೋಗ್ಯತೆ, ಯಾವ ಧರ್ಮ, ಮದ್ಯಪಾನಿಗಳು ಅತ್ಯಂತ ಹೀನರೆಂದೂ, ಅತೀ ನೀಚ ವಸ್ತುವೆಂದೂ ಸಮಾಸರೆಂದೂ ಸಭೆಗಳಲ್ಲಿ ಹೇಳುವುದಲ್ಲದೆ ಪತ್ರಿಕೆಗಳಿಗೆ ಲೇಖನ ಸಹ ಲೇಖಿಸಿರುತ್ತಾ, ಅದೇ ಹೀನವೃತ್ತಿಗೆ ಕೈ ಹಾಕಿ

ದ ಮಹಾತ್ಮರು ಯಾರಿಗೆ ಸಮಾಸರೆಂದು ವಾಚಕರೊಪ್ಪಿ ಹೇಳುವಿರಾ? ಅಷ್ಟು ಕರ್ತೃತ್ವವಿಲ್ಲದಿದ್ದವರು ಅದಕ್ಕೆ ಏಕೆ ಮುಂದೆ ಕೈ ಇಕ್ಕಬೇಕಾಗಿತ್ತು? ಈ ಮುಂದೆ ಮೆ. ನಡಿಕೇರಿಯಂಡ ಸಂಜಪ್ಪನವರು ಕಂಟ್ರಾಕ್ಟು ವಹಿಸಿಕೊಂಡ ಮಾತ್ರಕ್ಕೆ ಪತ್ರಿಕೆಗಳಲ್ಲೂ ಇತರ ಭಾಷಣಗಳಲ್ಲೂ ನಾಲಿಗೆಗಳನ್ನು ಉದ್ದವಾಗಿ ನೀಡುತ್ತಿದ್ದ ಮಹನೀಯರೇ ಅದಕ್ಕಿಂತಲೂ ಕಮ್ಮಿಗತಿಯ ವರ್ತನೆಯನ್ನು ನಡಿಸುವಾಗ ಇಂಥಾವರುಗಳಿಗೆ ಏನೆಂದು ಹೇಳಬೇಕು? ಮಾತ್ರವಲ್ಲ, ಗ್ರಾಮಗಳಲ್ಲಿ ಕೆಲವು ಗೃಹಸ್ಥರು ಇವರ ಚಳವಳದ ಆರಂಭಕ್ಕೆ ಸೇರದೆ ಇದರ ವಿಜೃಂಭಣೆಯು ತುಸ ಮುಂದಕ್ಕೆ ಹೇಗಾಗುತ್ತೆಂದು ನೋಡಿ ಸೇರುವ ಎಂದು ಸ್ವಲ್ಪ ತಲಸ್ಥರಾದವರನ್ನು ಈ ಪ್ರಮುಖರು ಆಗಾಗ್ಯೆ ಅಲ್ಲಲ್ಲಿ ನಿಂದಿಸುತ್ತಾ ಅಪಹಾಸ್ಯ ಮಾಡಿಕೊಂಡು ಬಂದರು. ಇದಕ್ಕಾಗಿ ಕೆಲವರು ತಮಗೆ ವರುಷ ಒಂದರ ನೂರು ಇನ್ನೂರು ರುಪಾಯಿಗಳ ಆದಾಯವನ್ನೂ ಸಹ ಬಿಟ್ಟು ಸೇರಿ ಒಂದು ವರುಷವಾಗುವಷ್ಟರಲ್ಲಿಯೆ ಎಲ್ಲವೂ ಬರೀ ಗುಲ್ಲೆ. ಇಷ್ಟು ಮಾತ್ರವಲ್ಲ, ನಿಷೇಧ ಸಂಘಗಳು ಇರುವಾಗ್ಯೆ ಷೇರು ಮೆಂಬರುಗಳು ಕೊಟ್ಟ ಮತ್ತು ಸಹಾಯಕ್ಕಾಗಿ ಕೊಟ್ಟ ಹಣಗಳನ್ನು ಸೇರಿಸಿ ಎಂಟೆಂಟು ಹತ್ತತ್ತು ರುಪಾಯಿಗಳನ್ನಾಗಿ ತಿಂಗಳು ತಿಂಗಳ ಸಕ್ಕೆ ಮಾಡುವ ಒಪ್ಪಂದದಿಂದ ಬಡ್ಡಿಗಾಗಿ ಪರಾಜು ಮಾಡುತ್ತಿದ್ದರು. ಆ ಹತ್ತು ರುಪಾಯಿಗಳನ್ನು ಅತ್ಯಂತ ಗರೀಬ ಮೆಂಬರನು ಹೆಚ್ಚಿನ ದರದ ಬಡ್ಡಿಯಿಂದ ಅಂದರೆ ಸುಮಾರು ಹತ್ತು ರುಪಾಯಿಗಳಿಗೆ ತಿಂಗಳು ಒಂದರ ಒಂದು ರುಪಾಯಿನ ಬಡ್ಡಿಯಂತೆ ಪಡಕೊಳ್ಳುತ್ತಿದ್ದನು. ಈ ಅಸಲು ಬಡ್ಡಿಗಳನ್ನು ಬರುವ ತಿಂಗಳಲ್ಲಿ ಕಟ್ಟದಿದ್ದರೆ ಕಳದ ಬಡ್ಡಿಗೆ ದ್ವಿಗುಣ ಬಡ್ಡಿಯು ಹುಟ್ಟುತ್ತಿತ್ತು ಹೀಗಾಗಿ ಹಣವೇನೋ ಲೆಕ್ಕ ಪುಸ್ತಕದಲ್ಲಿ ಒಲವಾಗಿ ಜಮೆಯಾಗಿ ಹತ್ತು ರುಪಾಯಿ ಪಡಕೊಂಡವನಿಂದ ಮೂರು ನಾಲ್ಕು ತಿಂಗಳೊಳಗೆ ಹದಿನೈದು ಹದಿನಾರು ರುಪಾಯಿ ವಸೂಲಾಗುತಿತ್ತು ಹೀಗಾಗುತ್ತಾ ಈ ಮಧ್ಯ ನಿಷೇಧ ಸಂಘವೇ ದಿವಾಳಿ ಸಂಘವೆಂಬ ಹೆಸರು ಪಡೆಯಲರ್ಹತೆಯುಳ್ಳದ್ದಾಗಿತ್ತು. ಹಾಗೂ ಅದೂ ಕೂಡ ಈಗ ಎಲ್ಲೆಲ್ಲಿಯೂ ವಿಶ್ರಾಂತಿಯನ್ನು ತಳೆದಿರುತ್ತೆ. ಈಗ ಎಲ್ಲಿಯೂ ನಿರ್ಭಯ. ಅನ್ಯತಕ್ಕೆ ಸಮಾನವಾದ ಹಾಳಾದರೂ ಪ್ರತಿ ಗೃಹಸ್ಥನ ಮನೆಗೆ ಹೋಗಿ ಬೇಕೇ, ಬೇಕೆ ಎಂದು ಗೌಳಿಗನಿಂದ ಕೇಳಿಸಿಕೊಳ್ಳುತ್ತದೆ, ಈ ಆಸುರೆಯಾದರೂ ತನ್ನ ಕಾಲಬುಡಕ್ಕೆ ಎಲ್ಲವರನ್ನೂ ಕರೆಸಿಕೊಳ್ಳುತ್ತಾಳೆ. ಇದೇ ದೈವದ ದುರ್ವಿಲಾಸ, ನೀಚ ವಸ್ತುವಿಗೆ ಕಾಲವನ್ನು ಕಲ್ಪಿಸತಕ್ಕ ಲೋಕವೇ ನಿನಗೆ ನನ್ನದೊಂದು ಉದ್ದಂಡ ನಮಸ್ಕಾರ! ಇನ್ನಾದರು ಸ್ವ ಕರ್ತೃತ್ವಕ್ಕೆ ನೇಚಾಡ ಬಲ್ಲೆಯಾ!!

ಬಿ. ಆರ್. ಪಿ.

ಬಲಮುರಿ ದೇವಸ್ಥಾನದ ಹಬ್ಬ.

ಅಯ್ಯಾ,

ಕೆಲವು ವರುಷಗಳಿಂದ ಬಲಮುರಿ ದೇವಸ್ಥಾನದ ಹಬ್ಬದಲ್ಲು ಎತ್ತು ಪೋರಾಟ ಹೂಮಾಲೆಯು ವಿಷಯವಾಗಿ ಬೆಳ್ಳಚೆಟ್ಟಿರ ಮತ್ತು ತೊತ್ತಿಯಂಡ ಮನೆಯವರಿಗೆ ತನಗೆ ಮುಂದೆ ತನಗೆ ಮುಂದೆ ಎಂದಾಗ ಉಂಟಾದ ಕಲಹವು ಕ್ರಮೇಣ ಊರಿಗೆ ಅಂಟಿಕೊಂಡು ಗ್ರಾಮಸ್ಥರಲ್ಲಿ ಪಾರ್ಟಿ ಉಂಟಾಗಿ ಒಹಃ ಅನರ್ಥಕ್ಕೆ ಈಡಾಗಿರುವ ಈ ಮಹಮ್ಮಾರಿ ರೋಗವನ್ನು ನದ್ರಿ ಗ್ರಾಮದ ಯೂನಿಯನ್ನಿನ ಪೋಷಕರಾದ ಮಹಾರಾಜಶ್ರೀಗಳಾದ ಕೋರವಂಡ ಮುತ್ತಣ್ಣನವರು ತಾರೀಕು 29-11-24ರಲ್ಲು ಮೆ. ಅಪ್ಪಾರಂಡ ಅಪ್ಪಚ್ಚನವರ ಮತ್ತು ಪುಟ್ಟಮಾಡ ಕುಟ್ಟಪ್ಪನವರೊಡನೆ ದಯಮಾಡಿಸಿ ಮೆ. ಸಿ. ಯನ್. ಸುಬ್ಬಾಯರವರನ್ನು ಸೇರಿಸಿಕೊಂಡು ಅತ್ಯಂತ ಕನಿಕರದಿಂದ ಕ್ರಮಪೂರ್ವಕ ಗ್ರಾಮಸ್ಥರ ರಾಜಿ ಒಪ್ಪಿಕೆಯಿಂದ ಈ ಅಂಟುರೋಗವನ್ನು ದೂರಪಡಿಸಿ ಇನ್ನು ಮುಂದೆ ಈ ದೇವಸ್ಥಾನದಲ್ಲು ಎತ್ತು ಹೋರಾಟ ಮೊದಲು ತೊತ್ತಿಯಂಡ ಮನೆಯವರು ಬೆಳ್ಳಚೆಟ್ಟಿ ಮನೆಯವರಿಗಿಂತ ಮುಂದೆ ಒಪ್ಪಿಸಬೇಕೆಂಬದಾಗಿಯೂ ತೊತ್ತಿಯಂಡ ಮನೆಯವರಿಗಿಂತ ಮುಂದೆ ಹೂಮಾಲೆಯು ಬೆಳ್ಳಚೆಟ್ಟಿ ಮನೆಯವರಿಗೆ ಸಲ್ಲಬೇಕೆಂದೂ ಇದು ವಿನಹ ಇತರಕ್ಕೆ ಎಲ್ಲಾ ಕಾರ್ಯಗಳಲ್ಲೂ ಸರ್ವರಿಗೂ ಯಾವ ವ್ಯತ್ಯಾಸವಿಲ್ಲದೆ ನಡೆಯಬೇಕೆಂದೂ ತೀರ್ಮಾನಿಸಿ ಗ್ರಾಮಸ್ಥರ ಮನಸ್ಸನ್ನು ನಿರ್ಮಲಪಡಿಸಿದರು. ಆ ದಿನ ಅಲ್ಲಿ ನೆರೆದಿದ್ದವರ ಪೈಕಿ ಯೂನಿಯನ್ನಿನ ಉಪಯೋಗಾರ್ಥಕ್ಕಾಗಿ ಪಟ್ಟಮಾಡ ಪೊನ್ನಪ್ಪನವರು 2 ರುಪಾಯಿಯನ್ನೂ ಪೊನ್ನಪ್ಪಂಡ ಮಾದಪ್ಪನವರು ನಾಜೂಕಾದ 1½ ರುಪಾಯಿಗಳ ಕನ್ನತಿ ಒಂದನ್ನೂ, ಪಟ್ಟಡ ಕಾರ್ಯಪ್ಪನವರು 5 ರುಪಾಯಿಗಳನ್ನೂ ಬಹುಮಾನಪೂರ್ವಕ ಕೊಟ್ಟದ್ದಲ್ಲದೆ ಅಪ್ಪಾರಂಡ ಅಪ್ಪಚ್ಚನವರು 5 ರುಪಾಯಿಗಳನ್ನೂ ಪಾರಿಕುತ್ತಿರ ಚಂಗಪ್ಪನವರು 6 ರುಪಾಯಿಗಳನ್ನು ಕೊಡುವದಾಗಿ ವಾಗ್ದಾನ ಮಾಡಿದರು. ಮಹ ದೇವರ ನಿತ್ಯ ಪೂಜೆ ವಗೈರೆ ಖರ್ಚು ನಡಿಸುವದಕ್ಕಾಗಿ ಮೆ. ಸಿ. ಯನ್. ಮುತ್ತಣ್ಣನವರು ಬಲಮುರಿ ದೇವರ ಹೆಸರಿನಲ್ಲು ಭೂಮಿ ತೆಗೆದುಕೊಡುವ ವಾಗ್ದಾನದ ವಿಷಯವಾಗಿ ಮೆ. ಕೋಟೆರ ಚಿಣ್ಣಪ್ಪನವರು ಸ್ವಾರಸ್ಯವಾದ ಭಾಷಣ ಮಾಡಿ ಅಧ್ಯಕ್ಷರಾದ ಮೆ. ಮುತ್ತಣ್ಣನವರ ಭಾಷಣವನ್ನನುಸರಿಸಿ ಪ್ರಾಂತ್ಯಪೂರ್ವಕ ಅಧ್ಯಕ್ಷರು ರಾಜಿ ಮಾಡಿಸಿದಕ್ಕಾಗಿ ಅವರಿಗೆ ಸಭೆಯು ವಂದನೆಗಳನ್ನು ಹೇಗಿ ಸಭೆಯು ಮುಕ್ತಾಯವಾಯಿತು.

ಯೂನಿಯನ್ ಸೆಕ್ರೆಟರಿ

ವೀರಾಜಪೇಟೆಗೆ ಅಸಿಸ್ಟೆಂಟ್ ಸರ್ಜನರು

ಪತ್ರಿಕಾ ಮಹಾಶಯರೆ,

ತಮ್ಮ ತಾ. 14-11-24ರ ಪತ್ರಿಕೆಯಲ್ಲಿ ವೀರಾಜಪೇಟೆ ಆಸ್ಪತ್ರೆಗೆ ಒಬ್ಬ ಮೆಡಿಕಲ್ ಗ್ರಾಜ್ವೇಟನ್ನು ಯಾಕೆ ನೇಮಿಸಬಾರದು ಎಂಬ ವಾರ್ತೆಯನ್ನು ನೋಡಲು ನನಗೆ ಖೇದವೂ ಅತ್ಯಂತ ವ್ಯಸನವೂ ಉಂಟಾಯಿತು.

ಈ ವಿಷಯವನ್ನು ದೇಶದವರ ಅವಗಾಹನೆಗೆ ತಮ್ಮ ಅಮೂಲ್ಯ ಪತ್ರಿಕೆಯ ಮುಖಾಂತರ ವಿವರಿಸದಿದ್ದರೆ ನಾನು ಧರ್ಮಕ್ಕೆ ವಿರೋಧವಾಗಿ ನಡೆದಂತಾಗುವುದರಿಂದ ಪ್ರೀತಿ ಇಟ್ಟು ಈ ನನ್ನ ವಾರ್ತೆಗೆ ಸ್ವಲ್ಪ ಸ್ಥಳಕೊಡುವಿರಾಗಿ ನಂಬಿರುತ್ತೇನೆ.

ಕಳೆದ ವರ್ಷ ಕಾಲಿಗೆ ಬೆಂಕಿ ತಗಲಿದ ಒಂದು ನೆವನದಿಂದ ವೀರರಾಜಪೇಟೆ ಆಸ್ಪತ್ರೆಯಲ್ಲಿ ನಾಲ್ಕು ತಿಂಗಳು ಸತತ್ ಕಾಯಿಲೆ ದೆಸೆಯಿಂದ ಇನ್‌ಪೇಶಂಟಾಗಿದ್ದೆ (inpatient).

ನನ್ನ ಕಾಲಿನ ಘಾಯವು ಸೆಪ್ಟಿಕ್‌ಪಾಯಿಸನ್ (sceptic poison) ಆಗಿ ಆ ಘಾಯವನ್ನು ಬಹಳ ಮೆಹನತ್ತಿನಿಂದ ಡಾಕ್ಟರ್ ಫ್ರಾಂಜಿಯವರು ಆಪರೇಟ್ ಮಾಡಿದರು. ಅಲ್ಲದೆ ನಾನು ಆಸ್ಪತ್ರೆಯಲ್ಲಿದ್ದ ಕಾಲದಲ್ಲಿ ಶಸ್ತ್ರಚಿಕಿತ್ಸೆ ವಿನಹ ವಾಸಿಯಾಗದೆ ಇರತಕ್ಕಂತ ಅನೇಕ ಕಾಯಿಲಸ್ಥರ ಕಾಯಿಲೆಯನ್ನು ಶಸ್ತ್ರಚಿಕಿತ್ಸೆಯಿಂದಲೇ ಡಾಕ್ಟರ್ ಫ್ರಾಂಜಿಯವರು ವಾಸಿಮಾಡಿದ ಅನೇಕ ದೃಷ್ಟಾಂತರಗಳು ನನ್ನ ಕಣ್ಣಾರೆ ಕಂಡದ್ದಿದೆ. ಬಹಳ ಜನಗಳು ಇವರನ್ನು ಇವರ ಶಸ್ತ್ರ ಚಿಕಿತ್ಸೆ ವಿಷಯ ಸ್ತೋತ್ರಮಾಡಿರುವದನ್ನು ಸಹ ಕೇಳಿರುತ್ತೇನೆ.

ನಾನು ಕಾಯಿಲೆಯಾಗಿದ್ದ ಕಾಲದಲ್ಲಿ ಡಾಕ್ಟರುಗಳು ಮೆ. ಶ್ರೀ ಗಳಾದ, ಫ್ರಾಂಜಿಯವರು ಮತ್ತು ನಾಯಡುರವರು ಬಹಳ ಪ್ರಯತ್ನ ತೆಗದುಕೊಂಡು ಆವಶ್ಯಕವಾದ್ಧರೆ ಚಿಕಿತ್ಸೆಗಳನ್ನು ತಂಪೆ ತಾಯಿಗಳಿಗಿಂತ ಹೆಚ್ಚಾದ ಮುತುವರ್ಜಿ ವಹಿಸಿ ನನ್ನ ಕಾಯಿಲೆ ವಾಸಿಮಾಡಿದ ಆ ಉಪಕಾರವನ್ನು ನನ್ನ ಯಾವ ಜೀವವೂ ಮರೆಯತಕ್ಕವನಲ್ಲ. ಇವರುಗಳ ಚಿಕಿತ್ಸೆಯೂ ಉಪಚಾರವೂ ನನಗೆ ದೊರೆಯದಿದ್ದಲ್ಲಿ ನನ್ನ ಹೆಸರು ಇಷ್ಟರಲ್ಲಿಯೇ ಅಳಸಿಹೋಗುತ್ತಿತ್ತು

ಇಲ್ಲಿ ನನ್ನ ಕಾಯಿಲೆಯು ಮೇಲ್ಕಂಡ ಮಹನೀಯರುಗಳ ಚಿಕಿತ್ಸೆ ಮತ್ತು ಉಪಚಾರಾದ್ಯಗಳಿಂದ ವಾಸಿಯಾದನಂತರ ಹವಾ ಬದಲಾವಣೆಗೂ ನನ್ನ ಸಂಸಾರದಲ್ಲಿ ನನ್ನ ಮಗನ ಅಕಾಲ ಮರಣದಿಂದ ಉಂಟಾದ ಅಪಾರದುಃಖವನ್ನು ಸ್ವಲ್ಪ ಮಟ್ಟಿಗಾದರೂ ಸಮಾಧಾನಮಾಡಿಕೊಳ್ಳುವ ನಿಮಿತ್ಯವಾತ್ರ ನಾನು ಮಲೆಯಾಳಕ್ಕೆ ಹೋದದ್ದೇ ವಿನಹ ಇಲ್ಲಿ ಮೇಲ್ಕಂಡ ಡಾಕ್ಟರುಗಳಿಂದ ಕಾಯಿಲೆ ವಾಸಿಯಾಗದೇ ಮಲೆಯಾಳ ವೈದ್ಯರ ಚಿಕಿತ್ಸೆಗಲ್ಲ.

ನಡೆದ ವಿಷಯವನ್ನು ನಡೆದಂತೆ ಬರೆಯದಿದ್ದರೆ ನಾನು ಧರ್ಮಕ್ಕೆ ವಿರೋಧವಾಗಿ ನಡದಂತಾಗುವದಲ್ಲದೆ ಉಪಕಾರ ಮಾಡಿದವರಿಗೆ ಕೃತಜ್ಞತೆ ತೋರಿಸುವ ಬದಲು ಕೃತಘ್ನತೆ ತೋರಿಸುವುದು ಮನುಷ್ಯಮಾತ್ರ ಗುಣವಲ್ಲ

ಅಲ್ಲದೆ ಮೇಲ್ಕಂಡ ವಾರ್ತೆಯನ್ನು ಓದಿದಮಾತ್ರದಿಂದಲೆ 'ತಿಳಿದವ' ಎಂಬ ವಾರ್ತಾದಾರರು ಬರೆದ ಉದ್ದಿಶ್ಯವು ಯಾವದು ಎಂಬುದು ಸರ್ವಸಾಮಾನ್ಯರಿಗೆ ತಿಳಿಯುವದಿಲ್ಲವೆ?

ನಡಿಕೇರಿಯಂಡ ಅಪ್ಪೈಯ್ಯನವರನ್ನು ವೀರರಾಜಪೇಟೆ ಆಸ್ಪತ್ರೆಗೆ ನೇಮಿಸಬೇಕೆಂಬ ಇರಾದೆ ಇವರಿಗಿದ್ದರೆ ಅದಕ್ಕೆ ಪ್ರಯತ್ನ ಮಾಡಬೇಕೇ ಹೊರತು ಹಾಲಿ ಪ್ರಯತ್ನಪಟ್ಟು ಶ್ರದ್ಧೆಯಿಂದ ಕೆಲಸಮಾಡುವವರನ್ನು ಅನಾವಶ್ಯಕವಾಗಿ ಬರೆದು ಇಲ್ಲದಸಲ್ಲದ ದೋಷಗಳನ್ನು ಆರೋಪಿಸತಕ್ಕದ್ದು ನ್ಯಾಯವಲ್ಲ

ಇತರ ಪ್ರಾಂತ್ಯಗಳಲ್ಲಿ ಪ್ರತಿಯೊಂದು ಜನಾಂಗದವರಿಗೆ ಜಾತಿವಾರು, ಕೋಮುವಾರು ಡಾಕ್ಟರುಗನ್ನು ನೇಮಿಸಕ್ಕಾರೆಂಬ ಮಾತಾಗಲೀ ಇತರ ಜಾತಿಯ ಡಾಕ್ಟರುಗಳಿಂದ ಕೊಡಗ ಜನರು ಚಿಕಿತ್ಸೆಹೊಂದಲು ಒಡಂಬಡುವದಿಲ್ಲವಾಗಿ ವಡವ ವಾರ್ತಾದಾರರ ಅಭಿಪ್ರಾಯವು ಸಮಂಜಸವಲ್ಲ. ವಾರ್ತಾದಾರರಿಗೆ ಅವರ ಅಸ್ವಸ್ಥತೆಗಿಯರ ಚಿಕಿತ್ಸೆ ಕೊಡಗ ಡಾಕ್ಟರುಗಳಿಂದಲೇ ಆಗಬೇಕಾದ್ದಲ್ಲಿ ಹಾಗೆ ಮಾಡಿಕೊಳ್ಳಲು ಯಾರ ಅಭ್ಯಂತರವೂ ಇಲ್ಲವಲ್ಲ!

ಈ ವಾರ್ತಾದಾರರ ಒಬ್ಬರ ಇರಾದೆಯಂತೆ ಸರಕಾರದವರು ನಡಿಸುವ ಪಕ್ಷ ಕೊಡಗುದೇಶದಲ್ಲಿ ಎಷ್ಟು ಮತಗಳೂ ಜಾತಿಗಳೂ ಇವೆಯೋ ಅಷ್ಟೇ ಜನ ಡಾಕ್ಟರುಗಳು ಪ್ರತಿ ಆಸ್ಪತ್ರೆಯಲ್ಲಿಯೂ ಇರಬೇಕಲ್ಲವೆ? ಯಾಕಂದರೆ ಕೊಡಗರು ಸರಕಾರದವರ ಪ್ರಜೆಗಳು ಹ್ಯಾಗೋ ಹಾಗೆಯೇ ಇತರ ಜಾತಿಯವರು ಸಹ ಸರಕಾರದವರ ಪ್ರಜೆಗಳೇ ಅಲ್ಲವೆ? ಈ ವಿಚಾರ ಹು ನಡೆಯತಕ್ಕದ್ದೇ? ಬಲ್ಲವರು ಅರ್ಥಮಾಡಿಕೊಳ್ಳಿ.

ಕೊಡಗರು ಪ್ರತಿಯೊಂದು ಅಧಿಕಾರಗಳೂ ಅನುಕೂಲಗಳೂ ತಮಗೆ ಆಗಬೇಕೆಂಬ ಸ್ವಾರ್ಥಾಭಿಲಾಷಿಗಳಾದರೆ ಕೊಡಗುದೇಶದಲ್ಲಿ ಇತರ ಜನಗಳೂ ತಮ್ಮ ತಮ್ಮ ಪಂಗಡಕ್ಕಾಗಿ ಹಟ ಹಿಡಿದು ಹೊಡದಾಡಿ ಐಕ್ಯಮತ್ಯವು ಹೋಗಿ ಒಡಕು ಹುಟ್ಟಿ ದೇಶಕ್ಕೆ ಕೇಡುಂಟಾಗ ಬಹುದಾದ್ದರಿಂದ ಯಾವ ಮತದವನೇ ಆಗಲೀ ದೇಶಕ್ಕೆ ಹಿತವನ್ನು ಮಾಡತಕ್ಕವನೇ ನಮ್ಮವನೆಂದು ತಿಳಿದು ಜಾತಿಮತ ದ್ವೇಷವನ್ನು ಎತ್ತಬಾರದೆಂಬದು ಮಹನೀಯರಿಗೆ ತಿಳಿಯದಲ್ಲ.

ಇತರ ಪ್ರಾಂತ್ಯಗಳಲ್ಲಿ ಸಬ್ ಅಸಿಸ್ಟೆಂಟ್ ಸರ್ಜನರನ್ನು ಅಸಿಸ್ಟೆಂಟ್ ಸರ್ಜನರನ್ನಾಗಿ ಮಾಡುವದಿಲ್ಲವೆಂಬಮಾತು ಸಹ ನಿಜವಲ್ಲ. ಮನುಷ್ಯನ ಧಾರಾಳತನವನ್ನು ಶ್ರದ್ಧೆಯಿಂದ ಕೆಲಸ ಮಾಡತಕ್ಕದ್ದು ಹೀಗೆ ಕೆಲಸಮಾಡಿದ ಅನೇಕವರ್ಷಗಳ ಅನುಭವವೂ ಸಹ ಬರೀ ಪರೀಕ್ಷೆ ತೇರ್ಗಡೆಹೊಂದಿಬಂದ ಕಸುಗಾಯಿಯವನಿಗಿಂತ ಹೆಚ್ಚಿನಕೆಲಸಕ್ಕೆ ಅರ್ಹನಲ್ಲವೆ? ತಿಳಿದವರು ಹೇಳಿ.

ವೀರಾಜಪೇಟೆ ಆಸ್ಪತ್ರೆಯಲ್ಲಿ ಅಸಿಸ್ಟೆಂಟ್ ಸರ್ಜನರಾಗಿ ಯಾರನ್ನಾದರೂ ನೇಮಿಸುವಪಕ್ಷ ಇದುವರೆವಿಗೆ ಶ್ರದ್ಧೆಯಿಂದ ಕೆಲಸಮಾಡಿದ ಕೆಲವು ಸಮಯ ಹಂಗಾಮಿಯಾಗಿ ಅಸಿಸ್ಟೆಂಟ್ ಸರ್ಜನರಾಗಿ ಕೆಲಸನೋಡಿದ ಮತ್ತು ದೇವರಲ್ಲಿ ಭಕ್ತಿ, ಬಡವರಲ್ಲಿ ದಯೆ, ಆಪತ್ತಿನಲ್ಲಿ ಸಹಾಯಮಾಡುವ, ಮತ್ತು ಅನುಭವಶಾಲಿಗಳಾದ ಡಾಕ್ಟರ್ ಫ್ರಾಂಜಿಯವರನ್ನೆ, ಸರಕಾರದವರು ನೇಮಿಸುವದೇ ನ್ಯಾಯಸಮ್ಮತವೆಂದು ನನ್ನ ಅಭಿಪ್ರಾಯ.

ಈ ಮಾತ್ರಕ್ಕೆ ಮಾ. ಶ್ರಿ. ಅಪ್ಪೈಯ್ಯನವರನ್ನು ದೊಡ್ಡ ಕೆಲಸಕ್ಕೆ ನೇಮಿಸಬಾರದೆಂಬುದು ನನ್ನ ಅಭಿಪ್ರಾಯವಲ್ಲ. ಅವರನ್ನು ಬೇಕಾದರೆ ದೇಶದವರೆಲ್ಲಾ ಸೇರಿ ಸಿವಿಲ್ ಸರ್ಜನರಾಗಿಯೇ ಮಾಡಬೇಕಾಗಿ ಕೇಳಿಕೊಳ್ಳುವ.

ಮುತುವರ್ಜಿ ವಹಿಸಿ ಕೆಲಸಮಾಡಿದವರಿಗೆ ಉತ್ತೇಜನ ಕೊಡಬೇಕಾದ್ದು ಜನಸಾಮಾನ್ಯಕ್ಕೆ ಧರ್ಮವಾಗಿರುತ್ತೆ.

ವೀರಾಜಪೇಟೆ   ಬಿ ಸಂಜಪ್ಪ,

24-11-24.   ಪ್ಲೀಡರ್.

ಮಡಿಕೇರಿ ಕಾನ್‌ಫರೆನ್ಸ್.

ಅಯ್ಯಾ,

ತಾ. 8-11-24ರಲ್ಲು ಶ್ರೀಮಂಗಲನಾಡು ಸಹಕಾರಿ ಸಂಘಗಳ ಒಂದು ಕಾನ್‌ಫರೆನ್ಸು ಮಡಿಕೇರಿಯಲ್ಲಿ ಮೆ. ಪಟ್ಟಡ ಉತ್ತಯ್ಯ ಬಿ ಎ ಎಲ್. ಟಿ ಯವರ ಅಧ್ಯಕ್ಷತೆಯಲ್ಲಿ ನಡೆಯಿತು ಸುಮಾರು 110 ಜನರು ಸೇರಿದ್ದರು. ಕೊಡಗು ದೇಶದ ಸಹಕಾರಿ ಸಂಘಗಳ ರಿಜಾಸ್ಟ್ರಾರವರು, ಆರ್ಗನೈಜರು ಮತ್ತು ಕೌನ್ಸಿಲ್ ಮೆಂಬರುಗಳಾದ ಮೆ. ಪಿ ಟಿ ಕುಶಾಲಪ್ಪನವರು, ಮೆ. ಪಿ ಗಣಪಮ್ಮಯ್ಯನವರು ಸಹ ಹಾಜರಿದ್ದರು.

ಮೊದಲು ಆರ್ಗನೈಜರು ಸಹಕಾರಿ ಸಂಘಗಳು ಹ್ಯಾಗೆ ಮೊದಲು ಉಂಟಾಯಿತು ಮತ್ತು ಯಾವ ಯಾವ ದೇಶದಲ್ಲಿ ಮೊದಲು ಶುರುವಾಯಿತು, ಇದರ ಗುಣದೋಷಗಳನ್ನು ಕುರಿತು ಸ್ವಲ್ಪ ಹೊತ್ತು ಮಾತಾಡಿದರು.

ಆ ಮೇಲೆ ಪಿ. ಟಿ ಕುಶಾಲಪ್ಪನವರು ಸಹಕಾರಿ ಸಂಘಗಳ ರಚನಾ ವಿಷಯ ಹೇಳಿದ್ದಲ್ಲದೆ ಬೇರೆ ಬೇರೆ ದೇಶಗಳಲ್ಲಿ ಯಾವ್ಯಾವ ತರದ ಸಂಘಗಳಿವೆ ಮತ್ತು ಅವುಗಳಿಂದ ಆಗುವ ಗುಣಗಳನ್ನು ವಿವರಿಸಿದರು.

ಪಿ. ಗಣಪಮ್ಮಯ್ಯನವರು ಪೂರ್ವಕಾಲದಲ್ಲಿ ಇಂಥಾ ಸಂಘಗಳು ಇದ್ದವು ಮತ್ತು ಆ ಕಾಲದಲ್ಲಿ ಇದರಿಂದ ಆಗುತ್ತಿದ್ದ ಉಪಕಾರವನ್ನು ಮತ್ತು ಸಹಕಾರ ಸಂಘಗಳು ನಮ್ಮಲ್ಲಿ ಚೆನ್ನಾಗಿ ನಡೆಯಬೇಕಾದರೆ ಎಲ್ಲರೂ ಸತ್ಯಬಿಟ್ಟು ಹೋಗಕೂಡದೆಂದು ಹೇಳಿ ಅವರ ಭಾಷಣವನ್ನು ಮುಕ್ತಾಯ ಮಾಡಿದರು.

ಕಡೆಗೆ ಸಹಕಾರಿ ಸಂಘಗಳ ಬೇರೆ ಬೇರೆ ಮೆಂಬರುಗಳು ಸಹ ಸ್ವಲ್ಪ ಹೊತ್ತು ಮಾತಾಡಿದರು.

ಕಡೆಗೆ ರಿಜಿಸ್ಟ್ರಾರವರು ಸಹಕಾರಿ ಸಂಘಗಳು ಯಾವ ಯಾವ ಮೊದಲುಗಳಲ್ಲಿವೆ ಅವರ ಜವಾಬ್ದಾರಿಕೆ ಮತ್ತು ಎಲ್ಲಾ ಮೆಂಬರುಗಳು ಸರಿಯಾಗಿ ನ್ಯಾಯದಿಂದ ನಡೆಯದಿದ್ದರೆ ಅದರಿಂದ ಆಗುವ ಕೆಡಕು ಮತ್ತು ಇನ್ನು ಹಲವು ವಿಷಯಗಳನ್ನು ಚೆನ್ನಾಗಿ ಬೋಧಿಸಿ ಅವರ ಮಾತನ್ನು ಕೊನೆಗೊಳಿಸಿದರು.

ಆಖೈರಿನಲ್ಲಿ ಅಧ್ಯಕ್ಷರು ಸ್ವಲ್ಪ ಹೊತ್ತುಗಳ ವರೆಗೆ ಇದೇ ಸಹಕಾರದ ವಿಷಯ ಬೋಧಿಸಿ ಜನರಿಗೆ ಚೆನ್ನಾಗಿ ಸಹಕಾರದ ತತ್ವವನ್ನು ವಿವರಿಸಿ ಅವರ ಭಾಷಣವನ್ನು ಮುಕ್ತಾಯಮಾಡಿದರು. ಕಡೆಗೆ ಅಧ್ಯಕ್ಷರಿಗೆ ಸಭೆಯ ಪರವಾಗಿ ಮೆ. ಕ ಪಿ. ಚಿಣ್ಣಪ್ಪನವರು ವಂದನಾ ವಂದಿಸಿ ಕಾನ್‌ಫರೆನ್ಸನ್ನು ಬರಕಾಸ್ತು ಮಾಡಲಾಯಿತು.

ಈ ಕಾನ್‌ಫರೆನ್ಸು ಮುಕ್ತಾಯವಾದ ವಡನೆ ರಿಜಿಸ್ಟ್ರಾರವರ ಅಧ್ಯಕ್ಷತೆಯಲ್ಲಿ ಶ್ರೀಮಂಗಲ ನಾಡಿನ ಯೂನಿಯನ್ನಿನ ಮೀಟಿಂಗು ಮಾಡಲಾಯಿತು. ಪ್ರತಿ ಸಂಘಗಳಿಂದ ಎರಡೆರಡು ಡೆಲಿಗೇಟರನ್ನು ಚುನಾಯಿಸಿ ಒಂದು ಜನರಲ್ ಮೀಟಿಂಗು ಮಾಡಲಾಯಿತು. ಅಧ್ಯಕ್ಷರು ಯೂನಿಯನ್ನಿನ ಕೆಲಸಗಳನ್ನು ವಿವರಿಸಿ ಈ ಜನರಲ್ ಬಾಡಿಯಿಂದ ಹತ್ತು ಜನ ಕಮಿಟಿ ಮೆಂಬರನ್ನು ಚುನಾಯಿಸಿದರು. ಇವರಲ್ಲಿ ಮೆ. ಚೋನಿರ ಕಡುಂಬೈಯ್ಯನವರನ್ನು ಪ್ರೆಸಿಡೆಂಟರಾಗಿ ಚುನಾಯಿಸಲಾಯಿತು.

'ಹಾಜರಿದ್ದವ'

ಅಯ್ಯಾ,

ತಾರೀಕು 20-11-24ನೆ ಗುರುವಾರ ದಿನ ಶನಿವಾರಸಂತೆ ಹೋಬಳಿ ಜಮಾಬಂದಿ ಬೊಡ್ಡಿಪೇಟೆ ವೈದ್ಯಶಾಲೆಯಲ್ಲಿ ಅಲ್ಲದ ಮಾಗದ ನಿವಾಸಿನಲ್ಲು ಮಹತ್ ಕೊಡಗು ಕಮಿಷನರ ಸಾಹೇಬರವರಿಂದ ನಡಿಸಲಾಯಿತು. ಈ ವರ್ಷ ಶನಿವಾರಸಂತೆ ಹೋಬಳಿ ಎಲ್ಲಾ ಗ್ರಾಮಗಳಲ್ಲೂ ಶಾಗಾರ್ ಪೂಣಚ್ಚನವರು ತುಂಬಾ ನಿ ನತಿ ಭೂ ರಸ್ತೆಗಳನ್ನು ತಯಾರುಮಾಡಿರುವದನ್ನು ಜಮಾ

ಬಂದಿಗೆ ಮೂರು ದಿನ ಮುಂಚೆಯೇ ಕಮಿಶನರ್ ಸಾಹೇಬರು ಕೆಲವು ಗ್ರಾಮಗಳನ್ನು ನೋಡಿ ಒಂದು ಜಮೂಬಂದಿಗೆ ಮೊದಲೇ ಅರ್ಜಿಗಳನ್ನು ತೆಗೆದುಕೊಂಡು ಜಮೂಬಂದಿಗೆ ಸುರು ಮಾಡಿದರು.

ಜಮೂಬಂದಿ ಪೂರೈಸಿದನಂತರ ಸುಮಾರು 300 ಅರ್ಜಿಗಳನ್ನು ಒಂದೊಂದಾಗಿ ವಿಚಾರಮಾಡಿ ರೈತರ ತೊಂದರೆ ಕಷ್ಟಗಳಿಗೆ ಅನುಕೂಲವಾದಂತ ರಿಯಾಯಿತಿಗಳನ್ನು ಕೊಟ್ಟು ಜನನಮ್ಮರಿಗೆ ಮುಂದೆ ಅನುಕೂಲ ಇರುವಂಥ ಬುದ್ಧಿವಾದಗಳನ್ನು ಹೇಳಿದ್ದಕ್ಕೆ ಜನರು ತುಂಬಾ ಸಂತೋಷಭರಿತರಾದರು. ಶನಿವಾರಸಂತೆಗೆ ಒಂದು ಒಳ್ಳೆ ಆಸ್ಪತ್ರೆ ಇರಬೇಕಾಗಿ ಸನ್ 1917ನೇ ಇಸವಿಯಲ್ಲೇ ಕೊಡಗು ಸಬ್ ಜಡ್ಜಿಯರಾದ ಮೆ ಕಾರ್ಯಪ್ಪನವರು ಸೂಚನೆ ಮಾಡಿದ್ದನ್ನು ಈ ವರೆಗ ಮುಂದರಿಸದೆ ಮೂಲೆಗೆ ಹೈದದ್ದನ್ನು ಗಣನೆಗೆ ತಂದು ಶನಿವಾರಸಂತೆಯಲ್ಲಿ ಒಂದು ಆಸ್ಪತ್ರೆಯನ್ನು ಇಡಬೇಕಾಗಿ ಧರ್ಮದ ಪ್ರಭುಗಳು ದಯಾಳುವಾದ ಅಪ್ಪಣೆಕೊಟ್ಟದ್ದು ಇಲ್ಲಿನ ಜನರ ಪುಣ್ಯವೇ ಸರಿ ಎಂದು ಯಾವಾಗಲೂ ವಂದಿಸುತ್ತಾರೆ.

ಶನಿವಾರಸಂತೆ ಪೇಟೆ ಒಳಗೆ ಸಂತೆ ನಡಿಯುವುದರಿಂದಲೂ ಈ ಸಂತೆಗೆ ನಾಲ್ಕು ಕಡೆಗಳಿಂದ ಮಾರ್ಗಗಳು ಒಂದು ಸೇರುವುದರಿಂದಲೂ ಸ್ಕೂಲಿಗೆ ತಕ್ಕ ಕಾಂಪೌಂಡು ಇಲ್ಲದೆ ಇರುವದರಿಂದ ವಿದ್ಯಾರ್ಥಿಗಳಿಗೆ ಆರೋಗ್ಯವಿರವದಿಲ್ಲ ಸಂತೆಮೈದಾನ ಬಹಳ ಇಕ್ಕಟ್ಟಾಗಿರುವದರಿಂದ ಜನರಿಗೆ ಬಹಳ ಅನಾನುಕೂಲವುಂಟೆಂದು ಸದರಿ ಸಂತೆಯನ್ನು ಈಗ ಸಂತೆ ನೆರೆಯುವ ಗುಡುಗಳಲಿ ಮೈದಾನದಲ್ಲಿ ಸಂತೆಯನ್ನು ಖಾಯಂ ಮಾಡಿದರೆ ರಸ್ತೆಬಾಬಿಗಾಗಿಯೂ ಸೇರುವರೆಲ್ಲರಿಗೆ ಅನುಕೂಲವಾಗಿಯೂ ಇರುವದರಿಂದ ಶನಿವಾರಸಂತೆ ಯಾವಾಗಲೂ ಗುಡುಗಳಲೆ ಮೈದಾನದಲ್ಲಿ ಇರುವದಕ್ಕೆ ಡಿಸ್ಟ್ರಿಕ್ಟ್ ಬೋರ್ಡಿನವರ ಅಭಿಪ್ರಾಯಕ್ಕೆ ಇಟ್ಟಿದ್ದಾರೆ.

ಈ ವರುಷದ ಜಮೂಬಂದಿ ಬಹಳ ಅನುಕೂಲವಾಗಿ ನಡದದ್ದನ್ನು ಇಲ್ಲಿನ ಹಳಬರು ಈಗ ಅನೇಕವರುಷಗಳಿಂದಲೂ ಇಷ್ಟು ದಯಾಳಿಗಳಾಗಿ ಗ್ರಾಮಗಳನ್ನು ಸಂಚಾರಿಸಿ ಜಮೂಬಂದಿ ಮಾಡಿದ್ದರಲ್ಲಿ ಮೆ ಟಿ ಜಿ ಟಾಸ್ಕರ್ ಸಾಹೇಬರವರೇ ಒಂದನೇಯವರೆಂದು ಕೊಂಡಾಡುವದನ್ನು ನೋಡಿದರೆ ಭಗವಂತನು ಇನ್ನು ನಾಲ್ಕಾರು ವರುಷ ಮೆ. ಟಿ ಜೆ. ಟಾಸ್ಕರ್ ಸಾಹೇಬರನ್ನು ಇಲ್ಲಿ ಇರಿಸಿದರೆ ಬಹಳ ಹಿಂದೆ ಉಳಿದ ಇಲ್ಲಿನ ಜನರು ಕೊಂಚ ಅನುಕೂಲಕ್ಕೆ ಒಂದು ಮುಂದರಿದು ಜನಾಂಗವನ್ನು ಸೇರಿ ಬುದ್ಧಿವಂತರಾಗುವರೆಂದು ದೃಢವಾಗಿ ಹೇಳಬಹುದು.

ಪಿ. ಯಸ್. ಮುತ್ತಣ್ಣ

ಪ್ರಕಟಣೆ.

ಈ ಸಂದರ್ಭವನ್ನು ಕಳಕೊಳ್ಳಬೇಡಿರಿ.

ಮಡಿಕೇರಿ ದೇಚೂರು ಬ್ಲಾಕಿನಲ್ಲಿ ಹೈಸ್ಕೂಲ್‌ಬಳಿ ಒಂದು ಎಕರು ಕಾಪಿತೋಟದಿಂದ ಕೂಡಿದ ಒಂದು ಹಂಚುಹಾಕಿದ ಮನೆಮತ್ತು ಅಡಿಗೆಮನೆ ಇನ್ನು ಮನೆ ಕಟ್ಟಲಿಕ್ಕೆ ಎತ್ತರ ಜಾಗದಲ್ಲಿರುವ ಮನೆದಳವು ಸಹ ಮಾರಲಿಕ್ಕೆ ಇಟ್ಟಿದೆ. ಬೇಯಿಸ್‌ದಾರರು ಶೀಘ್ರದಲ್ಲಿಯೇ ಈ ಕೆಳಗಿನವರಿಗೆ ದಯವಿಟ್ಟು ಬರಕೊಳ್ಳುವದು

C. C/o EDITOR,
"*Kodagu*" MERCARA.

12—2

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು." ಪತ್ರಿಕೆಯ ಚಂದಾ ಹಣವನ್ನು ವಸೂಲಿಮಾಡಲು ಒಪ್ಪಿಕೊಂಡದ್ದರಿಂದ, ಇವರಿಗೆ ರಶೀತಿ ಪುಸ್ತಕಗಳನ್ನು ನಮ್ಮ ಏಜಂಟರು ಮೆ ಕೋಟೆರ ಚಿಣ್ಣಪ್ಪನವರ ಜವಾಬುದಾರೀಯಮೇಲೆ ಕೊಡಲಾಗಿದೆ ದಯವಿಟ್ಟು ಚಂದಾದಾರರೆಲ್ಲರೂ ಅವರವರಿಗೆ ಅನುಕೂಲವುಳ್ಳ ಜಾಗದಲ್ಲಿ ಪಾವತಿಮಾಡಬೇಕಾಗಿ ಕೋರಿಕೆ.

ಏಜಂಟರುಗಳು

ವೀರಾಜಪೇಟೆ—ಮೆ ಕೆ ಚಿಣ್ಣಪ್ಪನವರ ಆಫೀಸಿನಲ್ಲಿ
ಸೋಮವಾರಪೇಟೆ—ಕಮರ್ಶಿಯಲ್ ಸ್ಟೋರಿನಲ್ಲಿ ಮೆ. ಮುಡೆಯಂಡ ದೇವಯ್ಯನವರು.
ನಾಪೋಕ್ಲು—ಮೆ ಪೊನ್ನಚಂಡ ಮುದ್ದಪ್ಪನವರು.
ಗೋಣಿಕೊಪ್ಪಲು—ಮೆ. ಮುಕ್ಕಾಟೀರ ಪೂಣಚ್ಚನವರು
ಪೊನ್ನಂಪೇಟೆ—ಮೆ. ಚಿಕ್ಕಮನೆ ಮುದ್ದಮ್ಮಯ್ಯನವರು.
ಮಡಿಕೇರಿ—ಮೆ ಕೆ. ಮಾದಮ್ಮನವರು.
ಅಮ್ಮತ್ತಿ ಸಿದ್ದಾಪುರ—ಮೆ. ಪಟ್ಟಡ ಮಾದಪ್ಪನವರು
ಮೆ. ಕಂಗಂಡ ಕುಟ್ಟಪ್ಪನವರು.

ಕೋಡಂಡ ಉತ್ತಯ್ಯ,
ಮ್ಯಾನೇಜಿಂಗ್ ಡೈರೆಕ್ಟರು, "ಕೊಡಗು" ಲಿಮಿಟೆಡ್.

ನೋಟೀಸು.

ಇದೀಗ ತಕ್ಕ ಸಮಯ

ತಡಮಾಡಬೇಡಿರಿ! ಕಳಕೊಳ್ಳಬೇಡಿರಿ!!

ಮಗ್ಗುಲಗ್ರಾಮದ ಲೇಟ್ ಚೋವಂಡ ಸೋಮಯ್ಯನವರ ಹೆಸರಿನಿಂದ ನನ್ನ ಹೆಸರಿಗೆ ವರ್ಗಾಯಿಸಲ್ಪಟ್ಟಿರುವ ಐವತ್ತು ಎಕರು ಉತ್ತಮವಾದ ಭೂಮಿ, ಅದಕ್ಕೆ ಸೇರಿದ ಬಾಣೆಸಹ ಮಾರಾಟಕ್ಕೆ ಇಟ್ಟಿದೆ ಕ್ರಯ ರೂ. 3,500, ಯಾ, ಸಮೀಪದ ಮೊಬಲಗು. ಈ ಸೊತ್ತು ವೀರಾಜಪೇಟೆ ಅಮ್ಮತ್ತಿ ರಸ್ತೆಯ ಸುಂಕದ ಕಟ್ಟೆಯ ಸಮೀಪವಿದೆ. ಹೆಚ್ಚಿನ ವಿವರಕ್ಕೆ ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳುವುದು.

ಪುಲಿಯಂಡ ಮುದ್ದಯ್ಯ,
ಪ್ಲಾಂಟರ್, ಮೇಕೂರು ಎಸ್ಟೇಟ್,
ಪೊಳ್ಳಿಬೆಟ್ಟ

2 2

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೊ ಅಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

		ರೂ.
ಶೇರ್ ಬಂಡವಾಳ	....	50,000
ವಸೂಲಾದ ಶೇರ್ ಮೊಬಲಗು	....	7,720
ಜಮೂಬಂದ ಠೇವಣಾತಿ	....	61,200

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ 6-4-0ರ ದರದಲ್ಲಿ ಒಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 5ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊ ಅಪರೇಟಿವ್ ರಿಜಿಸ್ತ್ರಾರರು ಲೆಕ್ಕ ಆಜಮಾಯಿಷಿ ಮಾಡುತ್ತಾರೆ.

ಪ್ರೆಸಿಡೆಂಟರು, ಕೊಡಂದೇರ ಕುಟ್ಟಯ್ಯನವರು, ರಾಯ್ ಬಹದ್ದೂರ್.

ಟ್ರೆಜರರ್. ಯಂ. ಭುಜಂಗರಾಯರು. ಬಿ.ಎ, ಬಿ.ಎಲ್.

ಸೆಕ್ರೆಟರಿ. ಸಿ ಯಮ್. ವೆಂಕಪ್ಪಯ್ಯನವರು, ಬಿ.ಎ, ಬಿ.ಎಲ್

ತಾರೀಕು, 1—7—1924.

ಶ್ರೀ

ಶ್ರೀ ಧನ್ವಂತರಿ.

ಕರ್ನಾಟಕಾಯುರ್ವೇದ ಪಕ್ಷಪತ್ರಿಕೆ.

ಎಡಿಟರ್.—ವಿದ್ವಾನ್ ಕೆ. ಕೇಶವಶಾಸ್ತ್ರೀ ಆಯುರ್ವೇದರತ್ನಂ, ಇತ್ಯಾದಿ.

ದೇಶೀಯ ವೈದ್ಯವನ್ನು ಸರ್ವ ಸಂಪೂರ್ಣಾಭಿಪ್ರಾಯದಿಂದ ಕನ್ನಡ ನಾಡಿನಲ್ಲಿ ಪ್ರಕಟಿಸುವ ಮೊದಲನೇಯ ಪತ್ರಿಕೆ ಎಂದರೆ! ಇದೇ ಆರೋಗ್ಯವಂತನಾಗಿ ಬಹುಕಾಲ ಬದುಕಿರಬೇಕೆಂದು ಯೋಚಿಸುವ ಪ್ರತಿಯೊಬ್ಬನಿಗೂ ಈ ಪತ್ರಿಕೆಯು ಬೇಕೇಬೇಕು. ವ್ಯಾಧಿ ಬಂದಾಗ ತಕ್ಷಣ ತಿಳಿದುಕೊಳ್ಳುವಂತೆ ಆಯಾ ರೋಗಲಕ್ಷಣ ಚಿಕಿತ್ಸೆಗಳು ಬರೆಯಲ್ಪಡುವುದರಿಂದ ಮುಖ್ಯವಾಗಿ ಸ್ತ್ರೀಯರೂ ಹಳ್ಳಿಯವರೂ ಈ ಪತ್ರಿಕೆಯನ್ನು ಓದಲೇ ಬೇಕು. ವಿಶೇಷವೇನು ? ಮನೆಯಲ್ಲಿ ಈ ಪತ್ರಿಕೆ ಇದ್ದರೆ ಒಬ್ಬ ಗುರುವೂ ವೈದ್ಯನೂ ಇದ್ದಂತಾಗುವುದು

ವಾರ್ಷಿಕ ಚಂದಾ ಮೂರು ರುಪಾಯಿ.

ವಿಳಾಸ:—

ಮೇನೇಜರ್, ಶ್ರೀ ಧನ್ವಂತರಿ, ಶೃಂಗೇರಿ, ಮೈಸೂರುಸ್ಟೇಟ್.

ಪ್ರಕಟಣೆ.

ಒಂದು ಕಡೆ ಇಂಗ್ಲೀಷಿನಲ್ಲಿಯೂ, ಇನ್ನೊಂದು ಕಡೆ ಕನ್ನಡದಲ್ಲಿಯೂ ಪ್ರಿಂಟಾಗಿರುವ ಕಾಫಿ ತೋಟದ ಕೂಲಿಗಳ ಪ್ರಕಾರ ಕಂಟ್ರಾಕ್ಟು ಎಗ್ರಿಮೆಂಟ್ ಫಾರಮುಗಳೂ ಮತ್ತು ಅಪ್ಲಿಕೇಶನ್ (complaint) ಫಾರಂಗಳೂ ಸಹ ಮಾರಾಟಕ್ಕೆ ತಯಾರಿವೆ. ಬೇಕಾದವರು 'ಕೊಡಗು' ಆಫೀಸಿನಿಂದ ಪಡಕೊಳ್ಳಬಹುದು.

ಮಡಿಕೇರಿ
17.9.24, ಮೇನೇಜರ್.

ARMS & AMMUNITION MART.

Mahomedally-Noorbhoy.

337, Abdul Rehman, Street, near Crawford Market, BOMBAY.

Telegraphic Address :- "SHOOTER", Bombay.

[24 14] Please write for latest Catalogues.

ಸಂಪತ್ತಿಯ ಸಾಧನಗಳು.

ಅಯ್ಯಾ ಬಂಧುಗಳೇ ಸಂಪತ್ತಿಯು ಅನ್ಯರ ಚಾಕರಿಯಲ್ಲಿರದೆ ನಿಮ್ಮ ಭೂಮಿಯಲ್ಲಿಯೇ ಅಡಗಿರುವದು ಅದನ್ನು ಶೋಧಿಸಿ ತೆಗೆಯಲು ಕಿರ್ಲೋಸ್ಕರ ವ್ಯವಸಾಯ ಮುಟ್ಟುಗಳೇ ಯೋಗ್ಯವಾದ ಸಾಧನಗಳು.

ಲಕ್ಷಾವಧಿ ರೈತರು ಮಾಡಿ ಅನುಭವ ತೆಗೆದುಕೊಂಡಿರುವರು ಭೂಮಿಯುತಕ್ಕ ತರತರದ ನೇಗಿಲುಗಳೂ ಗಾಣಗಳೂ ದೊರೆಯುತ್ತವೆ. ಕಿಸಾನ ಗಾಣವು ಒಂದು ಗಂಟೆಗೆ ೪೦೦ ಪೌಂಡು ಕಬ್ಬನ್ನು ಹಿಂಡಿ ಹಾಕುತ್ತದೆ

"ಕೊ" ಎಂಬ ಕ್ಯಾಟಲಾಗನ್ನು ತರಿಸಿಕೊಳ್ಳಿರಿ,

ಕಿರ್ಲೋಸ್ಕರ ಬಂಧು ಲಿಮಿಟೆಡ್,
16-8 ಕಿರ್ಲೋಸ್ಕರವಾಡಿ, ಜಿಲ್ಲಾ, ಸಾತಾರಾ.

ನೋಟೀಸ್.

"ಕೊಡಗು" ಪತ್ರಿಕೆಯ ಹಳೆ ಚಂದಾಹಣ ಕೊಡಲಿಕ್ಕಿರುವವರೂ, ಹೊಸ ಚಂದಾದಾರರಾಗ ಬೇಕೆಂದಿರುವವರೂ, ಮತ್ತು ಠೇವುಹಣ ಸಲ್ಲಿಸಮಾಡಲಿಕ್ಕಿರುವವರೂ ದಯವಿಟ್ಟು ವೀರಾಜಪೇಟೆಯಲ್ಲಿರುವ ನಮ್ಮ ಕಂಪೆನಿಯ ಏಜಂಟರವರ ಆಫೀಸಿನಲ್ಲಿ ಪಾವತಿಮಾಡಬೇಕಾಗಿ ಕೋರಿಕೆ.

ಮಡಿಕೇರಿ, 13.9.24. ಮೇನೇಜರ್, 'ಕೊಡಗು' ಲಿಮಿಟೆಡ್.

ಹಳೆ ವಿದ್ಯಾರ್ಥಿಯರ ತ್ರೈಮಾಸಿಕ.

ಸಂಪುಟ 2] ವರ್ಷದಚಂದಾ ಬರೇ ರೂ. 1-4-0 [ಸಂಚಿಕೆ 1

ಸಂಪಾದಕ — ಸಿ. ಬಿ. ಮೇದಪ್ಪ, ಬಿ ಎ. ಬಿ ಎಲ್ ಎಂ ಎಲ್ ಸಿ

ಈ ಸಂಚಿಕೆಯಲ್ಲಿ ಮನೋಹರವಾದ ಕೊಡಗಿನ ಪವಿತ್ರ ಸ್ಥಳವಾದ ಶ್ರೀ ಮೂಲ ಕಾವೇರಿಯ ಚಿತ್ರಗಳಿವೆ.

1. ಶ್ರೀ ಕಾವೇರಿಯ ಜನ್ಮ, ಅವತಾರ.
2. ಸರಕಾರಕ್ಕೆ ಸಾಲವೆಂದರೇನು ?
3. ಪೋಲಿಟಿಕ್ಸ್ ಅಂದರೇನು ?
4. ವಿಚಾರಬಾಯಿ

ಇದೇ ಮುಂತಾದ ಬಹು ಸ್ವಾರಸ್ಯದ ವಿಷಯಗಳಿವೆ.

ಮೆನೇಜರ್,
ಓ. ಎಸ್. ಎಸೋಸಿಯೇಷನ್,
ಮಡಿಕೇರಿ

Printed & published by Kodanda Appayya, R.B., Chairman, Board of Directors, at "Kodagu" Press, Mercara for "Kodagu" Ltd.

Reg. No. M. 1550.
If not delivered please return to "KODAGU" OFFICE, MERCARA.

ಕೊಡಗು.

ಚಂದಾ ಕ್ರಮ ರೂ. ೪-೦-೦

ಕನ್ಯೇನ ಭೂಷಿತಯುಕ್ತ ವಿದ್ಯಾ ನೀತಿ ಪ್ರಯುಕ್ತತಾ || ಏಕವೃತ್ತೇನ ದೇಶಾನಾಂ ಸುಭಿಕ್ಷಾ ರಾಜ್ಯ ಸಂಪದಾ ||

ಎಡಿಟರ್ ಸಂಧ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೪] ಕೊಡಗು, ಸನ್ ೧೯೩೪ನೇ ಇಸವಿ ಡಿಸೆಂಬರ್ ತಾರೀಕು ೨೧ನೆಯ ಶುಕ್ರವಾರ [ಸಂಚಿಕೆ ೩೮

ಆರೋಗ್ಯ ಚಂದ್ರಿಕೆ.

ಮದ್ರಾಸ್

ಸಂಪಾದಕರು. ಡಾಕ್ಟರ್ ಯು ರಾಮರಾವ್,
ಯಮ್. ಎಲ್ ಸಿ. ಯವರು,

ಆರೋಗ್ಯ ಚಂದ್ರಿಕೆಯು ಆರೋಗ್ಯ ಮತ್ತು ಚಿಕಿತ್ಸೆಯ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ ಈ ಮಾಸಪತ್ರಿಕೆಯು 'ಹೆಲ್ತ್' ಎಂಬ ಇಂಗ್ಲಿಷ್ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಯೆ ಪ್ರಕಟವಾಗುವವು

ಆರೋಗ್ಯ ಚಂದ್ರಿಕೆಯಲ್ಲಿರುವ ಲೇಖನಗಳು ಹಳೆಯದಾಗದೆ ಪುನಃ ಪುನಃ ಓದಲು ಅರ್ಹವಾದವುಗಳಾಗಿರುವವು. ಆರೋಗ್ಯ ಚಂದ್ರಿಕೆಯನ್ನು ತರಿಸಿ ಬೈಂಡ್ ಮಾಡಿಸಿ ಇಟ್ಟುಕೊಂಡರೆ ಎಲ್ಲರಿಗೂ ಉಪಯುಕ್ತವಾಗುವ ಅಮೂಲ್ಯವಾದ ಗ್ರಂಥವಾಗುವದು ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮುಂಗಡ ವರ್ಷಕ್ಕೆ 1-8-0. ಬಿಡಿ ಪತ್ರಿಕೆ 1ಕ್ಕೆ 0-2-0. ಹಿಂದಿನ ಸಂಚಿಕೆಗಳು ಕೂಡಾ ದೊರೆಯುವವು.

ಪತ್ರವ್ಯವಹಾರಕ್ಕೆ 'ಆರೋಗ್ಯ ಚಂದ್ರಿಕೆ' 323,
ತಂಬುಚೆಟ್ಟಿ ಬೀದಿ, ಮದ್ರಾಸ್.

"ಕೊಡಗು"

ರಾಜಕೀಯ, ವಿದ್ಯಾ, ಕೃಷಿ, ವೃತ್ತಿ ವಿಜ್ಞಾನ, ಮತ್ತು ನೀತಿ ಮುಂತಾದ ವಿಷಯಗಳಿಂದೊಡಗೂಡಿದ ಕೊಡಗಿನ ವಾರ ಪತ್ರಿಕೆ.

1 ಪ್ರಕಟಣೆಗಳನ್ನು ಮೇನೇಜರ್ "ಕೊಡಗು" ಮಡಿಕೇರಿ, ಈ ವಿಳಾಸಕ್ಕೆ ಕಳುಹಿಸಬೇಕು 2 ಲೇಖನಗಳನ್ನು, ಸಂಪಾದಕರು "ಕೊಡಗು" ಮಡಿಕೇರಿ, ಈ ವಿಳಾಸಕ್ಕೆ ಕಳುಹಿಸಬೇಕು. 3 ವಾರ್ತಾದಾರರ ಅಭಿಪ್ರಾಯಕ್ಕೆ ಕೊಡಗು ಪತ್ರಿಕಾಕರ್ತರು ಜವಾಬ್ದಾರರಲ್ಲ 4 ನಮ್ಮಲ್ಲಿಗೆ ಕಳುಹಿಸುವ ವಾರ್ತೆಗಳು ಕಾಗದದ ಒಂದೇ ಕಡೆಯೂ, ಸ್ಪಷ್ಟವಾಗಿಯೂ, ಹೆಸರು ವಿಳಾಸಗಳಿಂದ ಕೂಡಿಯೂ, ಬರೆಯಲ್ಪಟ್ಟಿರಬೇಕು ಸ್ಥಳವು ದೊರೆತಂತೆಲ್ಲಾ ಈ ಪತ್ರಗಳು ಪ್ರಕಟಿಸಲ್ಪಡುವವು 5. ಪ್ರಕಟಿಸಲಾಗದ ವಾರ್ತೆಗಳನ್ನು ಮರಳಿ ಕಳುಹಿಸುವ ಜವಾಬ್ದಾರಿಕೆಯನ್ನು ಸಂಪಾದಕರು ವಹಿಸಿಕೊಳ್ಳುವದಿಲ್ಲ

ಪ್ರಕಟಣೆಗಳು.

ಅತ್ಯಂತ ಸುಲಭವಾಗಿ ಹಾಕಲ್ಪಡುತ್ತವೆ. ಹೆಚ್ಚು ಸಂಗತಿಗೆ ಮೇನೇಜರಿಗೆ ಬರೆದು ತಿಳಿದುಕೊಳ್ಳಬಹುದು.

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ.

ಕಲ್ಪತರು ತಾಯಿತ.

ಪರೀಕ್ಷೆ ಪಾಸಾಗೋಣ, ಶರೀರ ಸುಖವಾಗೋಣ, ನೌಕರಿ ಸಿಗೋಣ, ಸಂಬಳ ಹೆಚ್ಚೋಣ, ವಿವಾಹವಾಗೋಣ ಸಂತತಿಯಾಗೋಣ, ಕೈಕೊಂಡ ಉದ್ಯೋಗದಲ್ಲಿ ಯಶಸ್ಸು ಸಿಗೋಣ, ವ್ಯಾಪಾರದಲ್ಲಿ ಬಹಳ ಲಾಭ ಸಿಗೋಣ, ಸಾಲ ಮುಕ್ತ ಆಗೋಣ. ಭೂತ ಪಿಶಾಚ ಗ್ರಹಬಾಧೆ ಆಗದಿರೋಣ, ಪ್ರತಿಕೂಲ ಜನರು ಅನುಕೂಲವಾಗೋಣ, ಇವೇ ಮತ್ತು ಬೇರೆ ಎಷ್ಟೋ ಮನುಗಳು ಇಚ್ಛೆಯಂತೆಯೇ ಆಗುವ ಅಲೌಕಿಕ ಇಷ್ಟಾರ್ಥ ಫಲ ಕೊಡುವ ಲೋಕಮಾನ್ಯ ಕಲ್ಪತರು ತಾಯಿತ ಉಪಯೋಗಿಸಿ ಪ್ರತ್ಯಕ್ಷ ಇಟ್ಟರೆ, ಆಂದರೆ ಇಚ್ಛೆಪೂರ್ಣವಾಗುವದು ಅನುಭವದ ಮೂಲಕ ಖಾತ್ರಿ ಆಗಬಹುದು. ತಾ. ಸ. ೧೦, ರೂ ೧.೨ ಗುಣ ತೀವ್ರವಾಗಿ, ತಾ ಸ ೨೦. ರೂ ೬ ಗುಣ ೧೫ ದಿವಸಗಳಲ್ಲಿ, ತಾ ಸ ೩೦, ರೂ ೩ ಗುಣ ೧ ತಿಂಗಳಲ್ಲಿ ವ್ಹಿ ಪಿ ಖರ್ಚು ಬೇರೆ ಗುಣವಾಗದಲ್ಲಿ ತಾಯಿತದ ಖರ್ಚು ಪಟಾಯಿಸಿಕೊಡಲಾಗುವದು

ವಿಳಾಸ.—ಮ್ಯಾನೇಜರ್, ಕಲ್ಪತರು ತಾಯಿತ, ಕೆ. ಎಸ್. [೪-೫೦] ಪೋ ಸಂಕೇಶ್ವರ ಜಿ. ಬೆಳಗಾಂವ

Health is Wealth.

WANTED all to improve health strength and vitality and thus save our nation from physical degeneracy Send half anna stamp and get 23 specimen photographs with full particulars from

Director, Physical Culture,
P. O. BASAVANAGUDI
Bangalore City

THE SHOPPING CENTRE OF COORG,

Spencer & Co. Ltd.,

MERCARA & POLLIBETTA.

An Announcement.

Our prices of wines, spirits, stores, etc., are down.

Send for our Xmas list and be convinced

Trial order Solicited.

8

ಕೃಷಿತೋ ನಾಸ್ತಿ ದುರ್ಭಿಕ್ಷಃ

NITRATE OF SODA (15—16 per cent.) Nitrogen,

'The best and cheapest form of Nitrogen highly concentrated and immediately available Nothing like it to make plants grow"

ವ್ಯವಸಾಯದಲ್ಲಿ ಗೊಬ್ಬರವಿಡುವದರ ಹೆಚ್ಚಿನ ಉದ್ದೇಶವು ಬೆಳೆಗಳಿಗೆ ಸಾರಜನಕ (Nitrogen) ಒದಗಿಸಿಕೊಡುವದಾಗಿರುತ್ತದೆ "ನೈಟ್ರೇಟ್ ಆಫ್ ಸೋಡಾ" ಎಂಬ ರಾಸಾಯನಿಕ ಗೊಬ್ಬರವು (15—16%) ಅಂದರೆ ದನಗೊಬ್ಬರದಲ್ಲಿಯಕ್ಕಿಂತ ಮೂರುಪಾಲು ಜಾಸ್ತಿ ಸಾರಜನಕ ಧಾತುವಾಗಿದ್ದು ಬೆಳೆಗಳಿಗೆ ಫಕ್ಕನೆ ವದಗುವರೀತಿಯಲ್ಲಿರುತ್ತದೆ ಇದರ ಉಪಯೋಗದಿಂದ ಫಸಲು ಬಹಳ ಸಮೃದ್ಧಿಯಾಗುವದು ಹಿಡಿತುಂಬ ರಸಾಯನಿಕ ಗೊಬ್ಬರವು ಮೂರಿ (ಬುಕ್ಕೆ) ತುಂಬ ಹಟ್ಟಿಗೊಬ್ಬರಕ್ಕೆ ಸಮವಾಗಿರುತ್ತದೆ ಈ ರಸಾಯನಿಕ ಗೊಬ್ಬರವು ಅಮೇರಿಕ ದೇಶದ "ಚಿಲ್ಲಿ" ಎಂಬಲ್ಲಿ ತಯಾರಾಗಿ ಬಹಳ ದೂರದೇಶದಿಂದ ಬರತಕ್ಕದಾದರೂ ಸಹ ಅದು ಪಶ್ಚಿಮ ಮೊಲೆಗಳ ತೋಟಗದ್ದೆ ವಗೈರೆ ಕೃಷಿಗಳಿಗೆ ಉಪಯೋಗಿಸಲು ಬಹಳ ಸುಲಭವಾಗಿಯೂ ಹಟ್ಟಿ ಗೊಬ್ಬರಕ್ಕಿಂತಲೂ ಬಹಳ ಹೆಚ್ಚಿನ ಆದಾಯವನ್ನು ಕೊಡುವದಾಗಿಯೂ ಇರುತ್ತದೆ. ಒಂದು ಎಕ್ರೆ ಭೂಮಿಗೆ 120—180 ರಾತಲು ಬೇಕಾಗುವದು, ಇದರ ವಿಷಯ ಹೆಚ್ಚಿನ ಮಾಹಿತಿಯನ್ನು ಮತ್ತು ತಿಳುವಳಿಕೆಯನ್ನು ಧರ್ಮಾರ್ಥ ಪ್ರತಿಗಿ ನಮ್ಮಿಂದ ಪಡೆಯಬಹುದು.

ದಿ ಚಿಲಿಯನ್ ನೈಟ್ರೇಟ್

24—14 ಕಮಿಟಿಯವರ ಕಡೆ

ಕೊಡಗಿನಲ್ಲಿ—
B P. Ayapa, Hon. Representative
Pollibetta, Coorg.

The Chilean Nitrate Committee, 5 Mission Row, Post Box 469,
CALCUTTA

ಮಲೆಯೂಳ ವೈದ್ಯಶಾಲಾ.

ಮಲಬಾರಿನ ಸಂಬೀಶನ್ ಮತ್ತು ಕಂಪೆನಿ ಎಂಬ ಆಯುರ್ವೇದ ವೈದ್ಯ ಶಾಲೆಯ ಒಂದು ಶಾಖೆಯು ವೀರರಾಜೇಂದ್ರಪೇಟೆಯಲ್ಲಿ ತೆರೆದಿರುತ್ತದೆ. ಇಲ್ಲಿ ಯಾವ ವಿಧದ ಕಾಯಿಲೆಯಾಗಿದ್ದರೂ ಪಂಡಿತರಿಂದ ಪರೀಕ್ಷಿಸಿ ಔಷಧಿಕೊಟ್ಟು ಗುಣಪಡಿಸಲ್ಪಡುತ್ತೆ ಔಷಧದ ಚಾರ್ಜು ಬಹಳ ಕಡಮೆ. ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ವಿವರವನ್ನು ತಿಳಿದುಕೊಳ್ಳಬಹುದು.

ನಾರಾಯಣ ಸಂಬೀಶನ್,
ಆಯುರ್ವೇದ ವೈದ್ಯರು,
52—47 ವೀರರಾಜೇಂದ್ರಪೇಟೆ.

LOOK SHARP! PLEASE LOOK SHARP!

For Superior rugs, shawls, silk and cotton banians of different varieties, sarees socks, silk coating and shirting, tweed etc., etc, place your orders with the undersigned. Samples may be examined before placing orders at Messrs. H C. Raja & Bros., Brahmin Valley, Mercara.

B. S. VENKAT RAO,
Silk Cloth Agent, Mercara.

ದಯವಿಟ್ಟು ಗಮನಕೊಡಿ! ಸುಲಭ ಕ್ರಯ!

ಉತ್ತಮ ತರದ ಶಾಲುಗಳು, ರೇಶ್ಮೆ ಮತ್ತು ನೂಲಿನ ಬನಿಯನ್ನುಗಳು, ರೇಶ್ಮೆ ಕೋಟಿನ ಮತ್ತು ಶರಟಿನ ಬಟ್ಟೆಗಳು, ತರತರದ ಸೀರೆಗಳು, ಸಾಕ್ಸ್ ಮತ್ತು, ಟ್ವೀಡುಗಳು, ಕಾಲು ಚೀಲಗಳು ಮತ್ತು ಇತರ ಬಟ್ಟೆಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ಬೇಗನೆ ಕೊಡತಕ್ಕ ಹಣವನ್ನು ಕಳುಹಿಸಿಕೊಳ್ಳಿ ಬಟ್ಟೆಗಳ ಸ್ಯಾಂಪಲುಗಳನ್ನು ಹೆಚ್ ಸಿ ರಾಜ ಅಂಡ್ ಬ್ರದರ್ಸ್, ಬ್ರಾಹ್ಮಣರ ಬೀದಿ, ಮಡಿಕೇರಿ, ಇವರ ಅಂಗಡಿಯಲ್ಲಿ ನೋಡಬಹುದು.

ಬಿ ಯಸ್. ವೆಂಕಟರಾವ್,
ರೇಶ್ಮೆಬಟ್ಟೆಗಳ ಏಜೆಂಟ್, ದ ಕನ್ನಡ ಬಜಾರ್,
4-2 ಕೊಡಗು, ಮಡಿಕೇರಿ.

MOTOR CYCLE FOR SALE.

A J. S. Motor cycle 3-500 C.C. A high class English Machine imported direct from makers. Very little used, and open for any trial or expert examination. Original cost about Rs. 1,606.

Apply stating offers, to 'Motor cycle
C/o The Editor 'Kodagu,
4-2 Mercara.

"ಕೊಡಗು"

ಸನ್ ೧೯೨೪ನೇ ಇಸವಿ ಡಿಸೆಂಬರ್ ತಾ.
೨೩ನೇ ಮಂಗಳವಾರ.

೩೯ನೇ ಇಂಡಿಯನ್ ನೇಶನಲ್ ಕಾಂಗ್ರೆಸ್.

(ರಾಷ್ಟ್ರೀಯ ಮಹಾ ಸಭೆ).

ಹಿಂದುಸ್ಥಾನದ ಸ್ವಾತಂತ್ರ್ಯದ ಹೋರಾಟದ ಚರಿತ್ರೆಯು ಇಂಡಿಯನ್ ನ್ಯಾಶನಲ್ ಕಾಂಗ್ರೆಸ್ಸಿನ ಚರಿತ್ರೆಯೇ ಆಗಿದೆ. ಹಿಂದುಸ್ಥಾನವು ತನ್ನ ಸ್ವಾತಂತ್ರ್ಯವನ್ನು ಕಳೆದುಕೊಂಡದ್ದರಿಂದ ಉಂಟಾದ ನೋವು ಕೆಲವು ಮುಂದಾಳುಗಳಿಗೆ ತಟ್ಟಿದ ಕೂಡಲೇ ಸ್ವಾತಂತ್ರ್ಯದ ಹೋರಾಟವನ್ನು ಪ್ರಾರಂಭಿಸಿದರು. ದೇಶದ ಎಲ್ಲಾ ಭಾಗದಿಂದಲೂ ಸೇರಿ ವರುಷಕ್ಕೊಂದಾವರ್ತಿ ಡಿಸೆಂಬರ್ ತಿಂಗಳ ಆಖೈರ್ ಭಾಗದಲ್ಲಿ ವರುಷಕ್ಕೆ ಒಂದೊಂದು ಕಡೆ ಸಭೆ ಸೇರಿ ಠರಾವುಗಳನ್ನು ಪಾಸ್ ಮಾಡಿ ಜನರ ಕೋರಿಕೆಗಳನ್ನು ಸರಕಾರಕ್ಕೆ ತಿಳಿಸುತ್ತಿದ್ದರು. ಈ ರೀತಿ ವರುಷ ವರುಷವೂ ಸೇರುವ ಸಭೆಗೆ ಇಂಡಿಯನ್ ನ್ಯಾಶನಲ್ ಕಾಂಗ್ರೆಸ್ ಅಂದರೆ ಅಖಿಲ ಭಾರತ ರಾಷ್ಟ್ರೀಯ ಸಭೆಯೆಂತ ಹೆಸರಿಟ್ಟುಕೊಂಡರು. ಈಚೆಗೆ ಮೂರು ನಾಲ್ಕು ವರುಷಗಳಿಂದ ವರುಷಕ್ಕೊಂದಾವರ್ತಿ ಸಭೆ ಸೇರಿ ಠರಾವು ಪಾಸ್ ಮಾಡುವದಲ್ಲದೆ ವರುಷವೆಲ್ಲಾ ದೇಶವನ್ನು ಎಚ್ಚರಗೊಳಿಸುವ ಮತ್ತು ದೇಶಕ್ಕೆ ಸ್ವಾತಂತ್ರ್ಯವು ಸಮೀಪವಾಗುವಂಥ ಕೆಲಸಗಳನ್ನು ಈ ಕಾಂಗ್ರೆಸ್ ಸಭೆಯವರು ನಡಿಸುತ್ತಲೇ ಇರಬೇಕೆಂತ ತೀರ್ಮಾನವಾಗಿ ಕೆಲವು ಮಟ್ಟಿಗೆ ಈ ಕೆಲಸವು ಜಾರಿಯಾಗಿದೆ. ಸರಕಾರದವರಿಗೆ ಠರಾವುಗಳ ಮೂಲಕ ಅರ್ಜಿಕೊಡುವದರ ಬದಲು ದೇಶದಲ್ಲಿ ಇರುವ ಕೊರತೆಗಳನ್ನು ಹೋಗಲಾಡಿಸಿಕೊಂಡು ಜನರ ನಡತೆಯಿಂದ ಕೂಡಿದ ಆತ್ಮಶಕ್ತಿಯಿಂದಲೇ ಸ್ವರಾಜ್ಯವು ಪ್ರಾಪ್ತವಾಗುವಂತೆ ಮಾಡಬೇಕೆಂತ ತೀರ್ಮಾನಿಸಿಕೊಂಡರು. ಈ ಮೂರು ನಾಲ್ಕು ವರುಷಗಳ ಕಾಂಗ್ರೆಸ್ಸಿನ ಪ್ರತಿ ಕಾರ್ಯವೂ ಮಹಾತ್ಮ ಗಾಂಧಿಯವರ ಅಭಿಪ್ರಾಯದಂತೆಯೇ ನಡಿಯುತ್ತಾ ಬಂತು. ಕಳೆದ ವರುಷದಿಂದ ಕಾಂಗ್ರೆಸ್ಸಿನಲ್ಲಿ ಮಹಾತ್ಮ ಗಾಂಧಿಯವರ ಹಿಂಬಾಲಕರೇ ಆಗಿದ್ದ ಕೆಲವರು ಸರಕಾರಿ ಲೆಜಿಸ್ಲೇಟಿವ್ ಕೌನ್ಸಿಲ್‌ಗಳಿಗೆ ಪ್ರತಿನಿಧಿಗಳಾಗಿ ಹೋಗಿ ಅಲ್ಲಿಯೂ ಸರಕಾರಕ್ಕೆ ಎದುರುನಿಂತು ಪ್ರಜೆಗಳ ಕೋರಿಕೆಯನ್ನು ಸರಕಾರದವರು ಕೊಡುವಂತೆ ಮಾಡಬೇಕೆಂತ ಹೇಳುವ ಒಂದು ಬಲವಾದ ಪಂಗಡವು ಪ್ರತ್ಯೇಕವಾಯಿತು. ಈಗ ಒಂದೂವರೆ ವರುಷದಿಂದಲೂ ಈ ಎರಡು ಪಂಗಡಗಳು ಕಾಂಗ್ರೆಸ್ಸಿನ ಸಂಸ್ಥೆಗಳನ್ನು ಸ್ವಾಧೀನ ಪಡಿಸುವದರಲ್ಲಿ ಹೋರಾಡುವದರಲ್ಲೇ ತಮ್ಮ ಹೆಚ್ಚಿನ ಕಾಲವನ್ನು ಕಳೆಯುತ್ತಿದ್ದಾರೆ. ಮಹಾತ್ಮ ಗಾಂಧಿಯವರು ಜೈಲಿನಿಂದ ಬಿಡುಗಡೆಯಾಗಿ ಬಂದನಂತರ ದೇಶದ ಸ್ಥಿತಿಯನ್ನು ತಿಳಿದುಕೊಳ್ಳಲು ಸ್ವಲ್ಪ ಸಮಯ ತೆಗೆದುಕೊಂಡು ಅನಂತರ ದೇಶದಲ್ಲಿ ಇರುವ ಒಡಕುಗಳನ್ನು ಹೋಗಲಾಡಿಸುವ ವಿನಹ ಬೇರೆ ಯಾವ ಕೆಲಸವೂ ಪ್ರಯೋಜನಕರವಾಗಿ ಮಾಡಿಕೊಳ್ಳಲು ಸಾಧ್ಯವಿಲ್ಲವೆಂತ ತಿಳಿದುಕೊಂಡು ಒಗ್ಗಟ್ಟಿಗಾಗಿ ಈಗ ಮೂರು ತಿಂಗಳಿನಿಂದ ನಿತ್ಯಪ್ರಯತ್ನ ಮಾಡುತ್ತಿದ್ದಾರೆ. ಈ ಉದ್ದೇಶಕ್ಕೇನೇ ಒಳಪಟ್ಟ ಹಿಂದೂ ಮುಸಲ್ಮಾನರೊಳಗಿನ ಸ್ನೇಹವನ್ನು ಬೆಳಸಲಿಕ್ಕಾಗಿಯೇ ತನ್ನ ಜೀವಕ್ಕೆ ಅಪಾಯ ಬರುವಂಥ ಇಪ್ಪತ್ತೊಂದು ದಿನ ಉಪವಾಸವಿದ್ದು ದೇವರ ಪ್ರಾರ್ಥನೆ ಮಾಡಿದ್ದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ದೇಶದ ಎಲ್ಲಾ ಕಾಂಗ್ರೆಸ್ ಕಮಿಟಿಗಳೂ, ಸ್ವಾಗತ ಸಮಿತಿಯೂ ಸಹ ಮಹಾತ್ಮ ಗಾಂಧಿಯವರನ್ನೇ ಈ ವರುಷದ ಕಾಂಗ್ರೆಸ್ಸಿನ ಅಧ್ಯಕ್ಷ ಪದವಿಗೆ ಆರಿಸಿದರೂ ಸಹ ಕಾಂಗ್ರೆಸ್ಸಿನಲ್ಲಿ ಒಗ್ಗಟ್ಟಾದ ವಿನಹ ತಾನು ಅಧ್ಯಕ್ಷನಾಗುವದಿಲ್ಲವೆಂತ ಹೇಳಿದ್ದರು. ಒಗ್ಗಟ್ಟನ್ನು ಸ್ಥಾಪಿಸಲಿಕ್ಕಾಗಿ ಡಿಲ್ಲಿ, ಕಲ್ಕತ್ತಾ ಮತ್ತು ಬೊಂಬಾಯಿ ಪಟ್ಟಣಗಳಲ್ಲಿ ಪ್ರಮುಖರ ಸಭೆಗಳು ಸೇರಿ ಒಗ್ಗಟ್ಟಾಗಿ ವಿಚಾರಗಳನ್ನು ನಿರ್ಧರಿಸಿಕೊಂಡಿರುವದರಿಂದ ಅಧ್ಯಕ್ಷ ಪದವಿಗೆ ಮಹಾತ್ಮ ಗಾಂಧಿಯವರು ಒಪ್ಪಿಕೊಂಡಿದ್ದಾರೆ.

ಈ ಲೇಖನವು ಪ್ರಕಟವಾಗುವ ದಿನವೇ ಮಹಾತ್ಮ ಗಾಂಧಿಯವರ ಅಧ್ಯಕ್ಷಸ್ಥಾನದ ಭಾಷಣವು ಆಗುತ್ತದೆ. ಈ ಸುದಿನದ ಸೌಭಾಗ್ಯವು ಕರ್ನಾಟಕಕ್ಕೆ ದೊರೆತಿರುವದರ ಮಹತ್ವವನ್ನು ದೇಶದ ಜನರೆಲ್ಲರೂ ತಿಳಿದುಕೊಂಡಿರುವುದಿಲ್ಲ. ಬೆಳ್ಗಾಂ ಪಟ್ಟಣವು ಕರ್ನಾಟಕ ದೇಶದ ಒಳಗೇ ಇರುವಂಥಾದೊಂದು ನಮ್ಮ ದೇಶದಲ್ಲಿ ಅನೇಕರಿಗೆ ಇನ್ನೂ ತಿಳಿದಿದೆಯೋ ಇಲ್ಲವೋ ಎಂತ ನಮಗೆ ಸಂಶಯವಿದೆ. ಶ್ರೀಯುತ ಮುದುವೇಡಾಕರ್ ಕೃಷ್ಣರಾಯರು ಮಡಿಕೇರಿಯಲ್ಲಿಯೂ ವೀರರಾಜಪೇಟೆಯಲ್ಲಿಯೂ ಒಂದೇ ದಿವಸ ಕೊಟ್ಟ ಚಿಕ್ಕ ಉಪನ್ಯಾಸಗಳಿಂದ ಕಾಂಗ್ರೆಸ್ ಸಭೆಗೆ ಅತಿಥ್ಯಕೊಡುವ ಭಾರವನ್ನು ಕನ್ನಡಿಗರು ವಹಿಸಿಕೊಂಡಿದ್ದಾರೆಂಬುದು ಅನೇಕರಿಗೆ ತಿಳಿಯಿತು. ಕಾಂಗ್ರೆಸ್ಸನ್ನು ಕರ್ನಾಟಕ ದೇಶದವರಾಗಿ ಉಪಚರಿಸುವ ಭಾರವನ್ನು ವಹಿಸಿರುವದರ ದೊಡ್ಡ ಜವಾಬ್ದಾರಿಯನ್ನು ತಿಳಿಯಬೇಕಾದರೆ ವರ್ಷ ವರ್ಷ ನಮ್ಮ ದೇಶದ ಪ್ರತಿನಿಧಿಗಳು ಸೇರಿ ನಡಿಸುವ ಜಮೀನ್‌ದಾರರಸಂಘದ ವಾರ್ಷಿಕ ಜನರಲ್ ಮೀಟಿಂಗಿಗೆ ಸತ್ಕಾರಕೊಡಲು ಒಪ್ಪಿದ ತಾಲೋಕಿನವರ ಜವಾಬ್ದಾರಿಯನ್ನು ಯೋಚಿಸಿಕೊಂಡರೆ ಕೆಲವು ಮಟ್ಟಿಗೆ ಗೊತ್ತಾಗುತ್ತದೆ. ನಮ್ಮ ದೇಶವನ್ನು ಉಪಚರಿಸುವ ತಾಲೋಕಿನ ಜವಾಬ್ದಾರಿಯು ಕಾಂಗ್ರೆಸ್ಸಿಗೆ ಉಪಚರಿಸುವ ಜವಾಬ್ದಾರಿಯ ತೃಣಭಾಗವೂ ಇಲ್ಲ. ಆದರೂ ಈ ಚಿಕ್ಕ ಸಭೆಯನ್ನು ಉಪಚರಿಸಿಕೊಳ್ಳುವದೇ ಕಷ್ಟವಾಗುವಾಗ ದೊಡ್ಡ ಭೂಖಂಡದಂತಿರುವ ಒಟ್ಟು ಹಿಂದುಸ್ಥಾನದ ಪ್ರತಿನಿಧಿಗಳನ್ನು ಅಂದರೆ ಸಾಧಾರಣ ಹತ್ತುಸಾವಿರ ಜನರನ್ನಾದರೂ ಉಪಚರಿಸುವ ಭಾರವು ಕರ್ನಾಟಕ ದೇಶಕ್ಕೆ ಈ ವರ್ಷ ಬಿದ್ದಿದೆ. ಆದರೂ ಕರ್ನಾಟಕಪ್ರಾಂತ್ಯಕ್ಕೆ ಸೇರಿದ ನಮ್ಮ ದೇಶವು ರಾಜಕೀಯ ಚಳವಳದಲ್ಲಿ ಹಿಂದೆ ಬಿದ್ದಿರುವದರಿಂದ ಕಾಂಗ್ರೆಸ್ಸಿನ ಭಾರದ ತಕ್ಕ ಹಿಸೆಯನ್ನು ವಹಿಸಲಿಲ್ಲ. ಈ ಮಹತ್ವದ ಸತ್ಕಾರದಲ್ಲಿ ನಮ್ಮ ದೇಶವು ತನ್ನ ಹಿಸೆಗೆ ಸರಿಯಾಗಿ ಭಾಗಿಯಾಗುವ ಪುಣ್ಯವು ಎಂದು ದೊರೆಯುವದೋ ನಮಗೆ ತೋಚದು.

ಕಾಂಗ್ರೆಸ್ ಮದ್ರಾಸಿನಲ್ಲಿ ನಡೆದಿತ್ತು. ಮದ್ರಾಸ್ ಪಟ್ಟಣವೂ ಸಹ ನಮ್ಮ ದೇಶಕ್ಕೆ ಸಮೀಪವಾಗಿಯೇ ಇತ್ತು. ಆದರೂ ದೇಶದ ಜನರಲ್ಲಿ ಕಾಂಗ್ರೆಸ್ಸು ಮದ್ರಾಸಿನಲ್ಲಿ ನಡಿಯುತ್ತಿದೆ ಎಂತ ತಿಳಿದವರು ಬಹಳ ಕಡಿಮೆ ಇದ್ದರು. ಈ ವರ್ಷ ಕಾಂಗ್ರೆಸ್ ಸಭೆಯು ಕರ್ನಾಟಕ ದೇಶದಲ್ಲಿ ನೆರೆಯುವದಾದ್ದರಿಂದ ದೇಶದ ಹೆಚ್ಚು ಜನರಿಗೆ ಕಾಂಗ್ರೆಸಿನಲ್ಲಿ ಅಭಿರುಚಿ ಹುಟ್ಟಿದೆ. ಈ ಅಭಿರುಚಿಯನ್ನು ಬೆಳಸಿಕೊಳ್ಳುವದು ಮುಂದಾಳುಗಳ ಕೆಲಸವಾಗಿದೆ.

ಹಿಂದೆ ಕರ್ನಾಟಕ ರಾಜ್ಯದ ಮಹಿಮೆಯು ಕಡಮೆಯಾದಾಗ ಸನ್ಯಾಸಿಯಾಗಿದ್ದ ವಿದ್ಯಾರಣ್ಯರು ಕರ್ನಾಟಕ ರಾಜ್ಯವನ್ನು ಪುನಃ ಸ್ಥಾಪಿಸಿ ಕರ್ನಾಟಕ ಸ್ಥಾಪನಾಚಾರ್ಯ ಎಂಬ ಬಿರುದನ್ನು ಪಡೆದಿದ್ದಾರೆ. ಈಗ ಕರ್ನಾಟಕದೇಶವು ಬೇರೆ ಬೇರೆ ಆಡಳಿತಗಳೊಳಗೆ ಹಂಚಿಹೋಗಿರುವಾಗ ಒಟ್ಟು ಹಿಂದುಸ್ಥಾನದಲ್ಲೆಲ್ಲಾ ಒಗ್ಗಟ್ಟನ್ನು ಉಂಟುಮಾಡುವ ಕಾಂಗ್ರೆಸ್ ಸಭೆಯು ಕರ್ನಾಟಕದಲ್ಲಿ ನೆರೆದು ಕರ್ನಾಟಕ ರಾಜ್ಯದ ಒಗ್ಗಟ್ಟಿಗೂ ಸಹಾಯಮಾಡುತ್ತದೆ ಎಂಬದರಲ್ಲಿ ಏನೂ ಸಂಶಯವಿಲ್ಲ. ಇಂಥಾ ಕರ್ನಾಟಕದ ಏಳಿಗೆಗೆ ಸಹಾಯಮಾಡುವ ಕಾಂಗ್ರೆಸಿಗೆ ಇನ್ನೊಬ್ಬ ಸನ್ಯಾಸಿಯಂತೆಯೇ ಇರುವ ಕರ್ಮಯೋಗಿಯು ಅಧ್ಯಕ್ಷರಾಗಿ ದೊರೆತದ್ದು ಕರ್ನಾಟಕ ರಾಜ್ಯದ ಏಳಿಗೆಯನ್ನು ಸೂಚಿಸುತ್ತದೆಯೆಂತ ನಮಗೆ ತೋಚುತ್ತದೆ.

ಜಾತಿ ಮಾತ್ಸರ್ಯಗಳು ಸ್ವರಾಜ್ಯದ ಕಾರುಬಾರುಗಳಲ್ಲಿ ಕಂಡುಬರುವದಾದರೆ ಅಂಥಾ ಸ್ವರಾಜ್ಯವೇ ನಮಗೆ ಬೇಡವೆಂತ ಅನೇಕರು ಅಂದುಕೊಳ್ಳುವದನ್ನು ನಾವು ಕೇಳುತ್ತೇವೆ. ಅಂಥಾ ಜಾತಿ ಮಾತ್ಸರ್ಯಗಳನ್ನು ನಿರ್ಮೂಲ ಮಾಡಬೇಕೆಂಬದನ್ನು ನಿದರ್ಶಿಸುವದಕ್ಕಾಗಿಯೇ ಮಹಾತ್ಮರು ಅಸ್ಪೃಶ್ಯತೆಯನ್ನು ಹೋಗಲಾಡಿಸುವ ವಿಷಯಕ್ಕೂ ಹಿಂದೂ ಮುಸಲ್ಮಾನರ ಒಗ್ಗಟ್ಟಿಗಾಗಿಯೂ ಅಹೋರಾತ್ರಿ ಪ್ರಯತ್ನಿಸುತ್ತಿದ್ದಾರೆ. ದೇಶದಲ್ಲಿ ಬಡತನವು ಬಹಳವಾಗಿ ಹೆಚ್ಚಿ ಹೋಗಿರುವದರಿಂದ ಜನರ ಕಷ್ಟ ನಿವಾರಣೆಗೆ ಸ್ವರಾಜ್ಯವನ್ನು ಪಡೆಯುವವರೆಗೆ ಕಾಯಕೂಡದೆಂಬುದು ಮಹಾತ್ಮರಿಗೆ ದೃಢವಾಗಿರುವದರಿಂದ ಕೂಡಲೇ ಜನರು ತಮ್ಮ ಬಟ್ಟೆಯನ್ನು ತಾವೇ ನೂತು ನೇಯ್ದುಕೊಳ್ಳಬೇಕೆಂಬ ವಿಷಯಕ್ಕೂ ಬಹಳ ಪ್ರಾಮುಖ್ಯತೆ ಕೊಟ್ಟಿದ್ದಾರೆ. ಕಾಂಗ್ರೆಸ್ಸಿನ ಮೆಂಬರಾಗಲೂ ವರುಷಕ್ಕೆ ನಾಲ್ಕು ಆಣೆ ಚಂದಾ ಕೊಡಬೇಕೆಂತ ಇರುವ ನಿಯಮವನ್ನು ತಪ್ಪಿಸಿ 2,000 ಗಜ ಕೈನೂಲನ್ನು ಕೊಟ್ಟು ಮೆಂಬರಾಗಬೇಕೆಂತ ತೀರ್ಮಾನಿಸಬೇಕಾಗಿ ಮಹಾತ್ಮರು ಆಲೋಚನೆ ಕೊಟ್ಟಿದ್ದಾರೆ. ಈ ವಿಷಯದಲ್ಲಿ ಅಭಿಪ್ರಾಯಭೇದವಿದೆ. ಆದರೆ ಕೈನೂಲಿನ ಬಟ್ಟೆ ಧರಿಸಬೇಕಾದದ್ದು ದೇಶದ ಏಳಿಗೆಗೆ ಅವಶ್ಯವಿದೆಯೆಂತ ಎಲ್ಲಾ ಪಕ್ಷದವರೂ ಒಪ್ಪುವವರಾಗಿದ್ದಾರೆ. ಆದ್ದರಿಂದ ಈ ವರುಷದ ಕಾಂಗ್ರೆಸ್ಸಿನಲ್ಲಿ ಖಾದೀ ಪ್ರಚಾರಕ್ಕೆ ತುಂಬಾ ಉತ್ತೇಜನ ದೊರೆಯುವದರಲ್ಲಿ ಏನೂ ಸಂಶಯವಿಲ್ಲ. ಈ ಬೋಧನೆಯನ್ನು ಜನರಿಗೆಲ್ಲಾ ತಲುಪಿಸಿ ಕಾರ್ಯತಃ ಸಾಧಿಸಲು ಪ್ರಯತ್ನ ಮಾಡಬೇಕಾಗಿದೆ. ನಮ್ಮ ದೇಶದಿಂದ ಹೋಗುವ ಹಲಕೆಲವು ಜನರು ನಮ್ಮ ದೇಶದಲ್ಲಿ ಖಾದಿ ಪ್ರಚಾರಕ್ಕೆ ಬದ್ಧಕಂಕಣರಾಗಿ ಬಂದರೆ ಇವರು ಕಾಂಗ್ರೆಸಿಗೆ ಹೋದದ್ದು ಸಫಲವಾಗುತ್ತದೆ.

ನಮ್ಮ ಕರ್ನಾಟಕ ದೇಶದಲ್ಲಿ ಕೂಡುವ ಈ ವರುಷದ ಕಾಂಗ್ರೆಸ್ ಸಭೆಯು ಜಯಪ್ರದವಾಗಿ ಆಗಲೆಂದೂ ಅಲ್ಲಿ ತೀರ್ಮಾನವಾಗುವ ವಿಷಯಗಳನ್ನು ಹಿಂದುಸ್ಥಾನದ ಪ್ರತಿಯೊಬ್ಬ ಮನುಷ್ಯನೂ ಕಾರ್ಯತಃ ಸಾಧಿಸಲಿ ಎಂದೂ, ಆ ಮೂಲಕ ದೇಶದ ಪಾರತಂತ್ರ್ಯವು ಹೋಗಿ ಸ್ವಾತಂತ್ರ್ಯವು ಇನ್ನೊಂದು ವರುಷ ಸಭೆ ಕೂಡುವದರ ಒಳಗೆ ದೊರಕಲಿ ಎಂದೂ ದೇವರನ್ನು ಪ್ರಾರ್ಥಿಸುತ್ತ, ಕಾಂಗ್ರೆಸ್ಸಿನ ತೀರ್ಮಾನಗಳನ್ನು ಕುತೂಹಲದಿಂದ ಎದುರು ನೋಡುತ್ತಾ ಇದ್ದೇವೆ.

ಕೊಡಗು ಲೆಜಿಸ್ಲೇಟಿವ್ ಕೌನ್ಸಿಲಿನ ಪ್ರೊಸೀಡಿಂಗ್ಸ್.

(ಕಳೆದ ವಾರದಿಂದ ಮುಂದರಿಸಿದ್ದು.)

೭ನೇ ಠರಾವು.

"ಕೊಡಗಿನಲ್ಲಿ ಗ್ರಾಮ ಪಂಚಾಯಿತಿ ಪದ್ಧತಿಯನ್ನು ಸ್ಥಾಪಿಸಲು ಏರ್ಪಡಿಸಬೇಕೆಂತ ಚೀಫ್ ಕಮೀಷನರಿಗೆ ಈ ಸಭೆಯು ಶಿಫಾರಸ್ಸು ಮಾಡುತ್ತದೆ."

ಮೆ. ಪಿ. ಗಣಪಯ್ಯನವರು.

ಘನವೆತ್ತ ಅಧ್ಯಕ್ಷರೇ?

ಗ್ರಾಮ ಪಂಚಾಯಿತಿಯ ಸಂಸ್ಥೆಯ ಕುರಿತು ಠರಾವನ್ನು ಈ ಕೆಳಗಿನ ಸಲಹೆಗಳಿಂದ ಮುಂದಿಡುತ್ತೇನೆ—

ಈ ಸಂಸ್ಥೆಯು ನಮ್ಮ ನೆರೆ ಪ್ರಾಂತ್ಯವಾದ ಮದ್ರಾಸ್ ಪ್ರೆಸಿಡೆನ್ಸಿಯಲ್ಲಿ ಕೆಲವು ವರುಷಗಳಿಂದ ಜಾರಿಯಲ್ಲಿರುತ್ತಾ ಇದು ಒಳ್ಳೆ ಕೆಲಸವನ್ನು ನಡಿಸುತ್ತದೆಂದು ನಾನು ಕೇಳುತ್ತೇನೆ. ಭಾರತೀಯರಿಗೆ ಈ ಸಂಸ್ಥೆಯು ಹೊಸದಲ್ಲ. ಈ ಸಂಸ್ಥೆಯು ಸಣ್ಣದಾದರೂ, ಹಿಂದಿನ ಕಾಲದಲ್ಲಿ ಪ್ರಜಾ ಪ್ರಭುತ್ವದ ಒಂದಂಗವೇ ಆಗಿತ್ತು. ಹಿಂದಕ್ಕೆ ಇವುಗಳ ಸಂಖ್ಯೆಯು ಬಹಳವಾಗಿತ್ತು. ಅನೇಕ ಇಂಗ್ಲೀಷ್ ಮಹನೀಯರು ಈ ಸಂಸ್ಥೆಗಳನ್ನು ಕುರಿತು ಬಹಳವಾಗಿ ಹೊಗಳಿ ಬರೆದಿರುತ್ತಾರೆ.

ಹಿಂದಕ್ಕೆ ಈ ಪಂಚಾಯಿತಿಯವರು ಮಾಡತಕ್ಕ ಕೆಲಸಗಳು ಗ್ರಾಮದ ಮೇಲ್ಮೆಗೆ ತಕ್ಕಂತೆ ಹಿತಕರವಾಗಿದ್ದವು. ಮಾರ್ಗಗಳನ್ನು ದುರಸ್ತು ಮಾಡುವುದು, ಕಲಹಗಳನ್ನು ತೀರಿಸುವುದು, ಗ್ರಾಮ ರಕ್ಷಣೆಗಾಗಿ ಚೌಕಿದಾರರನ್ನು ನೇಮಿಸುವುದು, ಗ್ರಾಮದ ಆರೋಗ್ಯ ಸ್ವಾಸ್ಥ್ಯಕ್ಕೆ ಸಿಬ್ಬಂದಿಯನ್ನು ಇಟ್ಟುಕೊಳ್ಳುವುದು ಇವೇ ಮುಖ್ಯ ಕೆಲಸಗಳು. ಗ್ರಾಮದಲ್ಲಿ ರೈತನು ಕಾರಣಾಂತರಗಳಿಂದ ಕಷ್ಟದಲ್ಲಿದ್ದಾಗ ಪಂಚಾಯಿತರು ಮತ್ತು ಇತರ ಉದಾರ ಪುರುಷರು ಸಹಾಯ ಕೊಡುತ್ತಿದ್ದರು. ವರ್ಣಾಶ್ರಮ ಧರ್ಮವನ್ನು ಈ ಸಂಸ್ಥೆಗಳು ಹೆಚ್ಚಾಗಿ ಕಾಪಾಡುತ್ತಿದ್ದುವಾದುದರಿಂದ, ಗ್ರಾಮದ ಕೈಗಾರಿಕೆಗಳ ವೃದ್ಧಿಸ್ಥಿತಿಯಲ್ಲಿರುತ್ತಿದ್ದುವು. ಗ್ರಾಮದ ವಿದ್ಯೆಯು ಸಹ ಇವುಗಳ ಕೈಯ್ಯಲ್ಲಿತ್ತು. ಪಶುಪಾಲನ ವಿಷಯದಲ್ಲಿ ಇವು ಬಹು ಉತ್ಸಾಹದಿಂದ ಕೆಲಸವನ್ನು ಮಾಡುತ್ತಿದ್ದುವು. ಒಟ್ಟಿನಲ್ಲಿ ಇಂಥಾ ಪ್ರತಿಯೊಂದು ಸಂಸ್ಥೆಯು 'ರಿಪಬ್ಲಿಕ್' ಎಂಬ ಮಂದಿ ಸರಕಾರವೇ ಆಗಿತ್ತು.

ಆಂಗ್ಲ ಸರಕಾರವು ಸ್ಥಾಪಿತವಾದ ಎಷ್ಟೋ ಕಾಲದವರೆಗೂ ಈ ಸಂಸ್ಥೆಗಳು ಕೆಲಸ ನಡೆಸುತ್ತಿದ್ದುವು. ಈ ಸರಕಾರದ ಆಡಳಿತ ಕ್ರಮ ಬೇರೆಯಾದ ಕಾರಣ, ಇವುಗಳು ಜೀರ್ಣವಾಗಿ ಹೋದುವು. ಆದರೆ ಅಲ್ಲಲ್ಲಿ ಇವುಗಳ ಗುರುತುಗಳು ಇನ್ನೂ ಇವೆ. ಆಂಗ್ಲ ಸರಕಾರವು ಅಧಿಕಾರವನ್ನು ಮೇಲಿಂದ ಕೆಳಕ್ಕೆ ಹಂಚುವ ಸಂದರ್ಭದಿಂದ ಅನೇಕ ಅಧಿಕಾರಿಗಳು ನೇಮಕವಾಗಲಾಗಿ, ಈ ಸಂಸ್ಥೆಗಳ ಪ್ರಯೋಜನವು ಮಾಯವಾಗಬೇಕಾಯಿತು.

ಕೊಡಗಿನಲ್ಲಿಯೂ ಪಂಚಾಯಿತಿಗಳಿದ್ದುವು. ಆದರೆ ಅಷ್ಟೊಂದು ಉತ್ತಮ ತರದವುಗಳೆಂದು ಹೇಳಲಾಗುವುದಿಲ್ಲ. ಪ್ರಕೃತ ಕಾಲದಲ್ಲಿ ಇಂಥಾ ಸಂಸ್ಥೆಗಳು ಇಲ್ಲದಿರುವ ದೆಸೆಯಿಂದ, ರೈತರು ಬಹಳ ಗರೀಬರಾಗಿ, ಅನೇಕ ಕಷ್ಟ ನಷ್ಟಗಳಿಗೆ ಗುರಿಯಾಗಿರುತ್ತಾರೆ. ಆದುದರಿಂದ ಒತ್ತಾಗಿರುವ ಮೂರು ನಾಲ್ಕು ಗ್ರಾಮಗಳಿಗೆ ವಿದ್ಯಾ ಬುದ್ಧಿ ಮತ್ತು ಅನುಭವದಿಂದ ಕೂಡಿರುವವರನ್ನು ಪಂಚಾಯಿತರನ್ನಾಗಿ ನೇಮಿಸುವುದರಿಂದ ಬಹಳ ಲಾಭ ದೊರೆತೀತು. ಈ ಪಂಚಾಯಿತರಿಗೆ ಕೆಲವು ಮಟ್ಟಿಗೆ ಸಿವಿಲ್, ಕ್ರಿಮಿನಲ್, ರೆವಿನ್ಯು ಸಂಬಂಧ ಅಧಿಕಾರಗಳನ್ನು ಕೊಡಬೇಕಾಗುತ್ತೆ. ಅಬ್ಕಾರಿ, ವಿದ್ಯಾ, ಆರೋಗ್ಯ ಸ್ವಾಸ್ಥ್ಯ ಒಟ್ಟಾರೆ ಗ್ರಾಮಾಂತರ ಏಳಿಗೆಗೆ ಬೇಕಾಗುವ ಜವಾಬ್ದಾರಿಯನ್ನು ಪಂಚಾಯಿತರಿಗೆ ಕೊಟ್ಟರೆ, ದೇಶವು ಬೇಗನೆ ಅಭಿವೃದ್ಧಿಯನ್ನು ಹೊಂದುತ್ತದೆಂದು ನಾನು ನಂಬುತ್ತೇನೆ. ಆದ ಪ್ರಯುಕ್ತ ಘನವೆತ್ತ ಅಧ್ಯಕ್ಷರೆ, ಇಂಥಾ ಸಂಸ್ಥೆಯನ್ನು ಸ್ಥಾಪಿಸಿಕೊಡಬೇಕೆಂಬುದೇ ನನ್ನ ಪ್ರಾರ್ಥನೆ.

ಮೆ. ಪಿ. ಐ. ಚಿಟ್ಯಪ್ಪನವರು.

ಈ ಠರಾವಿಗೆ ಅನುಮೋದಿಸುವ ಸಂದರ್ಭ ಕೆಲವು ಮಾತುಗಳನ್ನು ಆಡಬೇಕಾಗಿದೆ. ಪುರಾತನ ಕಾಲದಿಂದಲೂ ನಡೆದುಬಂದ ಗ್ರಾಮದ ಆಡಳಿತವನ್ನು ಏರ್ಪಡಿಸಿದ ವಿನಹ ಗ್ರಾಮದ ಜೀವನವನ್ನು ಅನುಕೂಲಪಡಿಸುವದು ಸಾಧ್ಯವಿಲ್ಲವೆಂತ ಅನೇಕರು ಒಪ್ಪುತ್ತಾರೆ. ಗ್ರಾಮದಿಂದಲೇ ಜನ್ಮಾಗಿ ಏರ್ಪಡು ಆಗದೆ ಇದ್ದರೆ ಸರಕಾರವೇ ಭದ್ರವಾಗಿದೆಯೆಂತ ಹೇಳಲು ಸಾಧ್ಯವಿಲ್ಲ. ಗ್ರಾಮಾಭಿವೃದ್ಧಿ ಮಾಡದೆ ಯಾವ ಜನಾಂಗವೂ ಬಲವಾಗಲಿಲ್ಲ. ಜನಾಂಗದ ಕ್ಷೇಮವೆಂದರೆ ಗ್ರಾಮದಕ್ಷೇಮ. ಹಾಗಿರುವಾಗ ಗ್ರಾಮದ ಜೀವನದ ಅನುಕೂಲತೆಗೆ ಕೊಡುವ ಗಮನವು ಎಷ್ಟೇ ಆದರೂ ನಿರರ್ಥಕವಾಗುವದಿಲ್ಲ.

ಪಂಚಾಯಿತಿ ಪದ್ಧತಿಯ ಪ್ರಯೋಜನಗಳು ತುಂಬಾ ಇರುವದರಿಂದ ಇಲ್ಲಿ ಹೇಳಿ ಪೂರೈಸದು. ಬಹಳ ಮುಂದುವರಿದ ಜನಾಂಗಗಳ ಪಾರ್ಲಿಮೆಂಟಿಗೂ ಸಹ ಗ್ರಾಮದ ಸಭೆಗಳೇ ಮೂಲವಾಗಿದೆ. ಪ್ರಜಾಪ್ರತಿನಿಧಿ ಸಭೆಗಳ ಆದಿಯೇ ಗ್ರಾಮಸಭೆಗಳಾಗಿವೆ. ಪ್ರಜೆಗಳಿಂದ ಪ್ರಜೆಗಳಿಗಾಗಿ ಪ್ರಜೆಗಳು ನಡಿಸುವ ಸರಕಾರದ ಆದಿಯೇ ಗ್ರಾಮದಲ್ಲಿ ಇದೆ.

ಗ್ರಾಮಗಳಲ್ಲಿ ಇರುವ ಸಾಧಾರಣ ಕೊರತೆಗಳೆಲ್ಲಕ್ಕೆ ಗ್ರಾಮಪಂಚಾಯಿತಿಯಿಂದ ಪರಿಹಾರ ದೊರೆಯುತ್ತೆ. ಗ್ರಾಮದ ಮುಖ್ಯ ಕೊರತೆಯೇ ಬಡತನ. ಇದಕ್ಕೆ ವ್ಯಾಜ್ಯ ಮತ್ತು ಕುಡುಕತನವೇ ಮುಖ್ಯಕಾರಣಗಳು. ಈ ಎರಡು ಭೂತಗಳಿಗೆ ತಿಳುವಳಿಕೆ ಇಲ್ಲದ ಗ್ರಾಮವಾಸಿಗಳು ತಮ್ಮ ಸರ್ವಸ್ವವನ್ನೂ ಒಪ್ಪಿಸುತ್ತಾರೆ. ಗ್ರಾಮದ ರೈತನು ಅದರಿಂದ ಆಗುವ ಪರಿಣಾಮ ತಿಳಿಯದೆ ಚಿಕ್ಕ ವಿಷಯಗಳಿಗೂ ಕೋರ್ಟಿಗೆ ಹೋಗಿ ಲಾಯರುಗಳ ಬೋಧನೆಗೆ ಒಳಪಟ್ಟು ತುಂಬಾ ಹಣವನ್ನು ಖರ್ಚು ಮಾಡಿ [illegible]

ಸಾಲಗಾರರಾಗುತ್ತಾರೆ ಕೆಳಕೋರ್ಟಿನಲ್ಲಿ ಮಿಥ್ಯಾಸ್ವಪ್ನದಿಂದ ಅವಗುಣವಾದರೆ ಅಪೀಲ್ ಕೋರ್ಟುಗಳಿಗೆ ಹೋಗುವ ಹುಚ್ಚು ಹಿಡಿದು ನೂರಾರು ಸಾವಿರಾರು ರೂಪಾಯಿಗಳನ್ನು ಅಲ್ಪಸ್ವಲ್ಪ ರುಪಾಯಿಯ ವ್ಯಾಜ್ಯಕ್ಕಾಗಿ ಕರ್ಚುಮಾಡುತ್ತಾರೆ. ಇಷ್ಟೆಲ್ಲಾ ಕರ್ಚುಮಾಡಿದರೂ ಸಾಕ್ಷಿಗಾರರ ನಿಯತ್ತು ಸರಿಯಾಗಿ ಇಲ್ಲದೆ ಇರುವದರಿಂದ ನ್ಯಾಯ ಸಿಕ್ಕುವ ಸಂಭವ ಕಡಿಮೆ. ಸುಳ್ಳು ಹೇಳುವ ಸಾಕ್ಷಿಯರಿಂದ ಜಡ್ಜಿಯರು ನ್ಯಾಯರೀತಿ ತೈಸಲು ಮಾಡುವದು ಸಾಧ್ಯವಾಗುವದಿಲ್ಲ. ಗ್ರಾಮಪಂಚಾಯತಿ ಕೋರ್ಟುಗಳಾದರೆ ಹೀಗಲ್ಲ. ಒಬ್ಬ ಜಡ್ಜಿಯ ಬದಲು ಗ್ರಾಮದ ಸಡಸಳಿಕ ತಿಳಿದ ಐದು ಅಥವಾ ಹೆಚ್ಚು ಜನರು ಕೂತು ತೈಸಲುಮಾಡುವದರಿಂದ ಸತ್ಯದಂತೆಯೇ ತೀರ್ಮಾನವಾಗುವ ಸಂಭವವು ಹೆಚ್ಚು ಇವೆ. ಇದಕ್ಕಾಗಿ ಆಗುವ ಕರ್ಚು ಸಹ ಬಹಳ ಕಡಿಮೆ. ಅನೇಕ ಕುಟುಂಬಗಳು ಕೆಡಲು ಕಾರಣವಾದ ದುರ್ವ್ಯಾಜ್ಯದ ಕರ್ಚು ಇಲ್ಲದಾಗುತ್ತೆ.

ಬರೇ ನ್ಯಾಯತೀರ್ಪಿನ ಪದವನ್ನು ಗ್ರಾಮಪಂಚಾಯತರಿಗೆ ಕೊಟ್ಟರೆ ಸಾಲದು. ಗ್ರಾಮದ ಆಡಳಿತದ ಎಲ್ಲಾ ಭಾಗಗಳಲ್ಲೂ ಇವರು ಅಭಿರುಚಿ ತೆಗೆದುಕೊಳ್ಳುವಂತೆ ಮಾಡಬೇಕು. ಗ್ರಾಮಪಂಚಾಯ್ತರು ಗ್ರಾಮದಲ್ಲೇ ಇರುವದರಿಂದ ಪಟ್ಟಣದಲ್ಲಿರುವ ಸರಕಾರಿ ಆಡಳಿತದ ಸಿಬ್ಬಂದಿಗಿಂತ ಚೆನ್ನಾಗಿ ಗ್ರಾಮದ ಕಷ್ಟಸುಖಗಳನ್ನು ತಿಳಿದುಕೊಂಡು ಪರಿಹಾರ ಮಾಡಲು ಪಂಚಾಯ್ತರಿಗೆ ಅನುಕೂಲವಿದೆ. ವಿದ್ಯೆ, ಆರೋಗ್ಯ, ಸಾಧನೆ ಮತ್ತು ಗ್ರಾಮರಸ್ತೆಗಳಿಗೆ ಸಹ ಹೆಚ್ಚಿಗೆ ಗಮನಕೊಡಲು ಸಾಧ್ಯವಿದೆ. ಕುಡುಕತನವನ್ನು ಹೋಗಲಾಡಿಸಲು ತಕ್ಕ ಏರ್ಪಾಡುಮಾಡಲು ಗ್ರಾಮಪಂಚಾಯತರಿಗೆ ಅನುಕೂಲವಿದೆ. ಗ್ರಾಮದ ಆಡಳಿತದಲ್ಲಿ ಗ್ರಾಮವಾಸಿಗಳು ಭಾಗಿಗಳಾಗಲು ಅನುಕೂಲ ಕೊಡುವದು ಸರಕಾರದ ಕರ್ತವ್ಯವಾಗಿದೆ.

ಗ್ರಾಮವು ಸ್ವರಾಜ್ಯ ಆಡಳಿತ ಪದ್ಧತಿಯನ್ನು ಕಲಿಸುವ ಶಾಲೆಯಂತಿರಬೇಕು. ಗ್ರಾಮ ಪಂಚಾಯತಿಗಳ ಮೂಲಕ ಸ್ಥಳೀಯ ಸ್ವರಾಜ್ಯವು ಹೆಚ್ಚು ಪ್ರಯೋಜನವಾಗುವಂತೆ ಮಾಡಲು ಸಾಧ್ಯವಿದೆ. ಗ್ರಾಮಪಂಚಾಯತಿಯ ಪ್ರಾಮುಖ್ಯತೆಯನ್ನು ತಿಳಿದೇ ಇಂಡಿಯಾ ಸರಕಾರದವರು 1915ನೇ ಇಸವಿಯಲ್ಲಿ ಒಂದು ಪ್ರಕಟಣೆಮಾಡಿ ಸ್ಥಳೀಯ ಸರಕಾರಗಳಿಗೆ ಗ್ರಾಮ ಪಂಚಾಯತಿಗಳನ್ನು ಜಾರಿಗೆ ತರುವ ಪದ್ಧತಿ ಕೊಟ್ಟಿದ್ದಾರೆ. 1918ನೇ ಇಸವಿಯಲ್ಲಿ ಇಂಡಿಯಾ ಸರಕಾರದವರ ಈ ರೀತಿ ಬರೆದಿದ್ದಾರೆ: "ಈಗ ಮಾಡುವ ಮಾರ್ಪಾಡುಗಳಿಂದ ದೇಶದ ಹೆಚ್ಚಿನ ಭಾಗದವರಿಗೆ ಪ್ರಯೋಜನವಾಗುವದು. ಸ್ಥಳೀಯ ಸ್ವರಾಜ್ಯ ಸಂಸ್ಥೆಗಳಿಂದ ಅನೇಕ ಪ್ರಾಂತ್ಯಗಳಲ್ಲಿ ಗ್ರಾಮ ಪಂಚಾಯತಿಗೆ ಹೆಚ್ಚಿಗೆ ಸಿಗಾ ಕೊಡಲ್ಪಟ್ಟು ಬಹು ಅಭಿವೃದ್ಧಿಯಾಗಿದೆ. ಆಸಾಮ್ ಮಧ್ಯಪ್ರಾಂತ್ಯ ಮತ್ತು ಮದ್ರಾಸಿನಲ್ಲಿ ಅಭಿವೃದ್ಧಿಯು ಬಹಳ ಮುಂದರಿದಿದೆ."

ನಮ್ಮ ದೇಶದಲ್ಲಿಮಾತ್ರ ಗ್ರಾಮದಬಗ್ಗೆ ಹೆಚ್ಚಿನ ಚಿಂತನೆ ಏರ್ಪಾಡು ಮಾಡಲ್ಪಡಲಿಲ್ಲವೆಂಬುದು ವ್ಯಸನಕರ. ಯಾವ ದೇಶವಾದರೂ ಗ್ರಾಮಪಂಚಾಯತಿಗೆ ಸಿದ್ಧವಾಗಿದೆ ಎಂತಾದರೆ ಅದು ಕೊಡಗುಎಂತ ನಾನು ಧೈರ್ಯವಾಗಿ ಹೇಳುತ್ತೇನೆ. ನಮ್ಮ ಪೂರ್ವಿಕರ ಕಾಲದಲ್ಲಿ ಗ್ರಾಮದಆಡಳಿತ ಮತ್ತು ನ್ಯಾಯ ವಿಚಾರಸಹ ಹೆಚ್ಚಾಗಿ ಪಂಚಾಯ್ತರಿಂದಲೇ ನಡಿಸಲ್ಪಡುತ್ತಿತ್ತು. ಈಗಲೂ ಅದರ ಕುರುಹುಗಳು ಗ್ರಾಮದಲ್ಲಿ ಇವೆ. ಪಂಚಾಯತಿ ಏರ್ಪಾಡಿಗೆ ನಮ್ಮ ದೇಶವು ಬಹಳ ಅನುಕೂಲವಾಗಿದೆಯೆಂತ ನನ್ನ ಅಭಿಪ್ರಾಯವಾಗಿದೆ.

ಈಗ ಜಾರಿಯಲ್ಲಿರುವ ಸಿವಿಲ್ ಕ್ರಿಮಿನಲ್ ಕೋರ್ಟುಗಳಿಗಿಂತ ಪಂಚಾಯತಿ ಕೋರ್ಟುಗಳಿಂದ ಹೆಚ್ಚಿಗೆ ಪ್ರಯೋಜನವಾಗಲಾರದೆಂತ ಅನೇಕರು ತಿಳಿದಿರುವಂತೆ ಕಾಣುತ್ತೆ. ಮದ್ರಾಸ್‌ಮತ್ತು ಇತರ ಕಡೆಗಳಲ್ಲಿ ಗ್ರಾಮ ಪಂಚಾಯ್ತರು ಲಂಚ ತೆಗೆದುಕೊಳ್ಳುತ್ತಾರೆಂತಲೂ, ಮತ್ತು ಗ್ರಾಮದ ಆಡಳಿತ ನಡಿಸುವಷ್ಟು ವಿದ್ಯಾವಂತರಾಗಿಲ್ಲವೆಂತಲೂ ಪೂರ್ವ ಪದ್ಧತಿಮೇರೆ ಜುಲುಂ ನಡಿಸಿ ನ್ಯಾಯತೀರ್ಮಾನ ಮಾಡಬಹುದಾಗಲೂ ಆದ್ದರಿಂದ ಪಂಚಾಯತಿಗಳನ್ನು ವಿಸ್ತರಿಸಬಾರದೆಂತಲೂ ಹೇಳುತ್ತಾರೆ. ಈಗ ಇರುವ ಕೋರ್ಟು ಕಚೇರಿಗಳಲ್ಲಿ ಅಪ್ರಮಾಣಿಕತೆ ಇಲ್ಲವೆಂತ ಹೇಳಲು ಸಾಧ್ಯವಿದೆಯೋ? ಅಲ್ಲಿ ಜಡ್ಜಿಗಳು ಲಂಚ ತಿಂದದ್ದಕ್ಕಾಗಿ ಶಿಕ್ಷೆಯಾದದ್ದನ್ನು ನಾವು ಕೇಳುತ್ತೇವೆ. ಗ್ರಾಮವಾಸಿಗಳು ವ್ಯವಸ್ಥೆಯಲ್ಲಿ ಕಾಲೇಜುಗಳಲ್ಲಿ ಓದದೆ ಇದ್ದರೂ ಒಳ್ಳೇ ತಿಳುವಳಿಕೆಯುಳ್ಳವರಾಗಿಯೂ ನಡತೆಯಲ್ಲಿ ವಿದ್ಯಾವಂತರಿಗಿಂತ ಕಡಮೆ ಇಲ್ಲದವರಾಗಿಯೂ ಇದ್ದಾರೆ. ಆದ್ದರಿಂದ ಏನು ಅಥವ ಹೆಚ್ಚಿನ ಗ್ರಾಮದ ಅನುಭವ ಇರುವವರಿಂದ ಕೊಡಲ್ಪಡುವ ತೀರ್ಮಾನವು ಗ್ರಾಮದ ಜೀವನ ಏನೂ ತಿಳಿಯದ ಜಡ್ಜಿಯ ತೈಸಲಿಗಿಂತ ನಿಷ್ಪಕ್ಷಪಾತದ್ದೂ ಮತ್ತು ನ್ಯಾಯವಾದದ್ದೂ ಆಗಿರುತ್ತದೆ ಎಂತ ನಾನು ನಂಬುತ್ತೇನೆ.

ತೊಡಕಾಗಿ ವಿಸ್ತರಿಸುವ ಪಂಚಾಯತಿಗಳಿಗೆ ಎಲ್ಲಾ ಸಿವಿಲ್ ಕ್ರಿಮಿನಲ್ ಪವರ್‌ಗಳನ್ನು ಕೂಡಲೇ ಕೊಟ್ಟುಬಿಡಬೇಕೆಂತ ಯಾರು ಕೇಳುವದಿಲ್ಲ. ಈ ಪವರ್‌ಗಳನ್ನು ಉಪಯೋಗಿಸಲು ಅರ್ಹತೆ ತೋರಿಸಿಕೊಂಡಂತೆ ಕ್ರಮೇಣ ಪವರ್‌ಗಳನ್ನು ಹೆಚ್ಚು ಮಾಡುತ್ತಾ ಹೋಗಬಹುದು. ಪ್ರಾರಂಭದಲ್ಲಿ ಬಹಳ ಎಚ್ಚರದಿಂದಿರಬೇಕು. ಗ್ರಾಮದ ಎಲ್ಲಾ ಭಾಗಗಳ ಪಂಚಾಯತಿಗಳಿಗೂ ಒಂದೇತರದ ರೂಲ್‌ಗಳು ಜಾರಿಗೆ ತರಬೇಕೆಂತ ಇಲ್ಲ. ಅವುಗಳು ಸ್ಥಳಕ್ಕೆ ಸರಿಯಾಗಿ ರೂಲ್‌ಗಳನ್ನು ಮಾಡಿಕೊಳ್ಳಬಹುದು.

ಇಂಥಾ ಪ್ರಾಮುಖ್ಯವಾದ ವಿಷಯಕ್ಕೆ ಈ ಸಭೆಯವರೆಲ್ಲರೂ ಒಗ್ಗಟ್ಟಿನಿಂದ ಒತ್ತಾಸೆ ಕೊಡಬೇಕೆಂತ ಕೋರುತ್ತೇನೆ.

ಮಿ ಎಂ ಎಂ ಚಿಣ್ಣಪ್ಪನವರು

ದೇಶದ ಜನಸಂಖ್ಯೆಯ ಶೇಕಡ 99ರಷ್ಟು ಗ್ರಾಮಗಳಲ್ಲಿ ಇರುವದರಿಂದ ಸ್ವರಾಜ್ಯಪದ್ಧತಿ ಪಟ್ಟಣಗಳಲ್ಲಿಮಾತ್ರ ಇದ್ದರೆ ಸಾಲದು ಗ್ರಾಮಾಂತರಗಳಿಗೂ ಸಹ ತಲಪಬೇಕೆಂತ ಹೇಳುತ್ತೇನೆ. ಗ್ರಾಮಾಭಿವೃದ್ಧಿಗೆ ಉತ್ತೇಜನಕೊಡಬೇಕು. ಎಷ್ಟು ಕಷ್ಟವಾದರೂ ಗ್ರಾಮಾಭಿವೃದ್ಧಿಗೆ ಗಮನಕೊಡಬೇಕು. ಸ್ವರಾಜ್ಯದ ಬೆಳವಣಿಗೆಯು ಸ್ಥಳೀಯ ಸ್ವರಾಜ್ಯದ ಪಾಯದ ಮೇಲೆ ಕಟ್ಟಲ್ಪಡಬೇಕು. ಮಾರ್ಪಾಡುಗಳು ಅಡಿಯಿಂದ ಕೊನೆವರೆಗೂ ಆಗಬೇಕು. ಬಂಗಾಳ ಮತ್ತು ಮದ್ರಾಸ್ ಮಂತ್ರಿಗಳು ಗ್ರಾಮದ ವಿದ್ಯಾಭಿವೃದ್ಧಿ ಬೆಳವಣಿಗೆಗೆ ಗ್ರಾಮ ಪಂಚಾಯತಿಗಳನ್ನು ಉಪಯೋಗಿಸುತ್ತಾರೆ. ಮದ್ರಾಸ್ ಅಧಿಪತ್ಯದಲ್ಲಿ ಕೆಲವುತರದ ಪಾರೆಸ್ಟ್‌ಗಳ ಆಡಳಿತದಲ್ಲಿ ಫಾರೆಸ್ಟ್ ಪಂಚಾಯತಿಗಳು ಬಹಳ ಉಪಯೋಗವಾಗಿದೆ ಎಂತ ತಿಳಿದು ಬಂದಿದೆ. ಠರಾವಿಗೆ ನನ್ನ ಮನಃಪೂರ್ತಿ ಒಪ್ಪಿಗೆಇದೆ.

ಮಿ ಎ. ಪಿ. ಚಂಗಪ್ಪನವರು.

ಆ ಠರಾವಿಗೆ ನನ್ನ ಸಹಾನುಭೂತಿಇದ್ದರೂ ಈ ದೇಶದಲ್ಲಿ ಪಂಚಾಯತಿಗಳು ಸರಿಯಾಗಿ ನಡೆದಾವೋ ಎಂಬ ಸಂಶಯ ವ್ಯಸನ ಇದೆ. 1931ರಿಂದ ಈ ವರೆಗೆ ನಮ್ಮ ಯುವಕರ ತರಬೇತು ಎಚ್ಚರವಾಯ್ತೆಂತ ತಿಳಿದಿದೆಯೆಂದರೆ ಪ್ರತಿಯೊಬ್ಬನೂ ತಾನು ಸ್ವತಂತ್ರನೆಂತ ಭಾವಿಸುತ್ತಾನೆ. ಈ ದೇಶದಲ್ಲಿ ಕೆಲವು ವರ್ಷಗಳ ಹಿಂದೆ ಇದ್ದ ಪಂಚಾಯತಿಗಳು ಸರಿಯಾಗಿ ನಡೆಯುತ್ತಿದ್ದವು. ಯಾಕೆಂದರೆ ಆಗ ಮನೆಯ ಹಿರಿಯನ ಒಂದು ಮಾತಿನಂತೆ ಎಲ್ಲಾ ಹತೋಟಿಯಲ್ಲಿ ಇದ್ದು ನಡೆಯುತ್ತಿದ್ದವು. ಆದರೀಗ ಮಾತ್ರ ಹಾಗಲ್ಲ. ಈಗ ಪ್ರತಿಯೊಬ್ಬನೂ ತನಗೆ ತಾನು ಸ್ವತಂತ್ರನು. ತಾನು ಇತರರಿಗಿಂತ ಹಿರಿಯನೆಂತ ಭಾವಿಸಿ ತಾನು ಯಜಮಾನನ ಹೇಳಿಕೆ ಕೇಳಬೇಕಾದದ್ದಿಲ್ಲವೆಂದು ಭಾವಿಸುತ್ತಾನೆ. ಪಂಚಾಯತಿಗಳ ಏರ್ಪಾಡಾದರೆ ಗ್ರಾಮದಲ್ಲಿ ಜಗಳಗಳಾಗಿ ಬಹಳ ಕಷ್ಟವಾದೀತು. ಗ್ರಾಮಗಳಲ್ಲಿ ಪಂಚಾಯತಿಯನ್ನು ಏರ್ಪಡಿಸುವ ಬದಲು ಪ್ರಾರ್ಥಮಿಕವಲ್ಲಿ ಸಾಕ್ಷಿಗಾರರ ಕೋರ್ಟುಗಳಲ್ಲಿ ಇದ್ದ ಚಿಕ್ಕ ಚಿಕ್ಕ ಕೋರ್ಟುಗಳನ್ನು ಏರ್ಪಡಿಸಬೇಕೆಂತ ನಾನು ಕೋರುತ್ತೇನೆ. ಆಗ ನ್ಯಾಯ ಸಿಕ್ಕಲು ತುಂಬಾ ಅನುಕೂಲವಾದೀತು. ದೊಡ್ಡ ಕೋರ್ಟುಗಳಿಗೆ ಅಷ್ಟು ಕೆಲಸ ಇರುವದಿಲ್ಲವಾಗಿ ಖರ್ಚು ಸಹ ಕಡಿಮೆಯಾದೀತು. ನಮ್ಮ ಯುವಕರ ಸ್ಥಿತಿಯನ್ನು ನೋಡಿದರೆ ಪಂಚಾಯತಿಗಳಿಂದ ಜಗಳಗಳಾಗಿ ತುಂಬಾ ಕೆಡಬಹುದೇನೋ ಎಂತ ನನಗೆ ತೋರುತ್ತೆ. ಆದ್ದರಿಂದ ನಾವು ಇನ್ನೂ ಪಂಚಾಯತಿ ಪದ್ಧತಿಗೆ ತಯಾರಾಗಿಲ್ಲ.

ಮಿ ಕೆ ಪಿ ಚಿಣ್ಣಪ್ಪನವರು.

ಠರಾವಿಗೆ ಮನಃಪೂರ್ತಿ ಒಪ್ಪಿಗೆಕೊಡುವದಿಲ್ಲ. ನನ್ನ ಅಭಿಪ್ರಾಯವನ್ನು ಕೆಲವು ವಿವರಿಸಬೇಕಾಗಿದೆ. ಜನರು ಗ್ರಾಮದಲ್ಲೇ ವಾಸಮಾಡುವವರಾದರೂ ನಿಜವಾದ ಗ್ರಾಮಜೀವನವನ್ನು ತಿಳಿದಿಲ್ಲವೆಂತ ತಿಳಿಯಲು ವ್ಯಸನವಾಗುತ್ತದೆ. ಈಗ ಹಚ್ಚಿನ ಗ್ರಾಮಗಳಲ್ಲೆಲ್ಲಾ ಸಹಕಾರಿ ಸಂಘಗಳಿವೆ. ಅವನ್ನು ಗ್ರಾಮದವರು ಚೆನ್ನಾಗಿ ನಡಿಸುತ್ತಿದ್ದಾರೆ ಎಂಬುದರಲ್ಲಿ ಸಂಶಯವಿಲ್ಲ. ಅದರಿಂದ ಸ್ವರಾಜ್ಯ ಪದ್ಧತಿಯಲ್ಲಿ ಗ್ರಾಮವಾಸಿಗಳಿಗೆ ತರಬೇತು ಸಿಕ್ಕುತ್ತೆ. ಅವು ಚೆನ್ನಾಗಿ ನಡಿಯುವಾಗ ಈ ಮೊದಲುಮಾಡಿದ ಹಿಂದಿನ ಗ್ರಾಮ ಪಂಚಾಯತಿ ಸರಿಯಾಗಿ ನಡಿಯದಿರಲಿಲ್ಲವೆಂತ ಹೀಗೆ ಹೇಳಿದ ಕಾರಣ ನನಗೆ ತಿಳಿಯುವದಿಲ್ಲ. ನಮಗೆ ಈ ಕೌನ್ಸಿಲ್ ದೊರಕಿರುವದರಿಂದ ನಾವು ಈ ವರೆಗೆ ಬೇಕೆಂತ ಹೋರಾಡುತ್ತಿದ್ದ ಸ್ಥಳೀಯ ಸ್ವರಾಜ್ಯವನ್ನು ವಿಸ್ತರಿಸಲು ಗ್ರಾಮದಿಂದಲೇ ಪ್ರಾರಂಭಿಸಬೇಕಾಗಿದೆ. ಅನೇಕ ಗ್ರಾಮಗಳು ತಯಾರಾಗಿವೆ ಎಂತ ನನಗೆ ನಂಬಿಕೆಇದೆ.

ಮಿ ಟಿ ಜಿ ಅಪ್ಪಯ್ಯರವರು.

ಈ ಠರಾವಿನ ಮೇಲೆ ಸರಕಾರದವರು ಈ ಸಭೆಯ ಆಲೋಚನೆ ಮತ್ತು ಅಭಿಪ್ರಾಯವನ್ನು ತೆಗೆದುಕೊಳ್ಳಬೇಕಾಗಿರುವದರಿಂದ ನಾನು ಈ ಠರಾವಿನಮೇಲೆ ಓಟು ಮಾಡುವದಿಲ್ಲ.

ನನಗೆ ಸ್ವಲ್ಪ ಕಷ್ಟವಾಗಿದೆ. ಈಗ ಓಟು ಮಾಡುವ ಠರಾವಿನಲ್ಲಿ ಮದ್ರಾಸ್ ಗ್ರಾಮ ಪಂಚಾಯತಿ ಆಕ್ಟು ಅಥವ ಗ್ರಾಮ ಕೋರ್ಟು ಆಕ್ಟನ್ನು ಇಲ್ಲಿ ಜಾರಿಗೆ ತರಬೇಕೆಂತ ಇತ್ತು. ಆದರೆ ಈಗ ಸಭೆಯ ಮುಂದೆ ಬಂದಿರುವ ಠರಾವು ವಿಷದವಾಗಿಲ್ಲ. ಆದ್ದರಿಂದ ಮೂಲಠರಾವಿಗಿಂತ ಹೆಚ್ಚಾಗಿ ಠರಾವಿನ ಮೇಲೆ ಆಗುವ ಬಿಸಾಣಗಳನ್ನು ಕೇಳಬೇಕಾಗಿದೆ.

ಈ ವಿಷಯವನ್ನು ಚೆನ್ನಾಗಿ ತಿಳಿದುಕೊಳ್ಳಲು ಮದ್ರಾಸಿನಲ್ಲಿ ಏನು ಇದೆಯೆಂತ ನೋಡೋಣ. ಮದ್ರಾಸ್ ಗ್ರಾಮ ಕೋರ್ಟುಗಳ ಆಕ್ಟು ಮೇರೆ ಎರಡು ತರದ ಕೋರ್ಟುಗಳನ್ನು ಏರ್ಪಡಿಸಬಹುದು. ಒಂದು ಗ್ರಾಮ ಮುನ್ಸೀಫನ ಕೋರ್ಟು, ಇನ್ನೊಂದು, ಗ್ರಾಮ ಪಂಚಾಯತಿ ಕೋರ್ಟು, ಪಂಚಾಯತಿ ಕೋರ್ಟು ಇರುವಲ್ಲಿ ಗ್ರಾಮ ಮುನಸೀಫ್ ಕೋರ್ಟು ನಡೆಯುವದಿಲ್ಲ. ಮದ್ರಾಸ್ ಆಕ್ಟು ಮೇರೆ ಗ್ರಾಮ ಪಂಚಾಯತಿಗೆ ಸಿವಿಲ್ ಕ್ರಿಮಿನಲ್ ಪವರ್‌ಗಳಿವೆ. ಪಂಚಾಯತಿ ಇಲ್ಲದಲ್ಲಿ ಗ್ರಾಮ ಮುನಸೀಫನಿಗೆ ಕ್ರಿಮಿನಲ್ ಪವರ್ ಇರುತ್ತದೆ. ಗ್ರಾಮ ಪಂಚಾಯತಿ ಕೋರ್ಟಿಗಾಗಲೀ ಗ್ರಾಮ ಮುನಸೀಫನಿಗಾಗಲೀ ಸಿವಿಲ್‌ನಲ್ಲಿ 50 ರುಪಾಯಿ ವರೆಗೂ ಒಪ್ಪಿಗೆಯಿಂದ 200 ರುಪಾಯಿ ವರೆಗೂ ಜೂರಿಸ್‌ಡಿಕ್ಷನ್ (ಹಕ್ಕು) ಇದೆ. ಇದರ ಮೇಲೆ ಅಪ್ಪೀಲ್ ಇಲ್ಲ. ಆದರೆ ಮೇಲಿನ ಕೋರ್ಟು ಅನ್ಯಾಯವೆಂತ ತೋರಿದಾಗ ರಿವಿಜನ್ ಮಾಡಬಹುದು. ಕ್ರಿಮಿನಲ್‌ನಲ್ಲಿ ಕೆಲವು ಚಿಕ್ಕ ಚಿಕ್ಕ ತಕ್ಸೀರುಗಳನ್ನು ಅಂದರೆ ಹೊಡೆದಾಟ, 10 ರುಪಾಯಿ ವರೆಗಿನ ಕಳವು ಮುಂತಾದ ತಕ್ಸೀರುಗಳನ್ನು ಮಾತ್ರ ವಿಚಾರಮಾಡುವ ಪವರ್ ಇದೆ. 15 ರುಪಾಯಿ ವರೆಗೂ ಮತ್ತು ಕೆಲವು ಸಂದರ್ಭಗಳಲ್ಲಿ ಮಾತ್ರ ಹೆಚ್ಚಿಗೆ ಜುಲ್ಮಾನೆ ಮಾಡುವ ಪವರ್ ಇದೆ. ಇದರಲ್ಲೂ ಅಪ್ಪೀಲ್ ಇಲ್ಲ, ರಿವಿಜನ್ ಮಾತ್ರ ಇದೆ.

ಇಲ್ಲಿ ಯಾವ ಪಾಯದ ಮೇಲೆ ಕಟ್ಟುವದು. ಪೂರ್ವದ ಗ್ರಾಮ ಪಂಚಾಯತಿಗಳು ನ್ಯಾಯ ತೈಸಲ್ ಮಾಡುತ್ತಿದ್ದದ್ದು ಮಾತ್ರವಲ್ಲದೆ ಗ್ರಾಮದ ಆಡಳಿತ ಸಹ ನಡಿಸುತ್ತಿದ್ದವೆಂತ ಹೇಳಿದರು, ಇದಕ್ಕೆ ಆಧಾರ ಕೊಡಲಿಲ್ಲ. ಪೂರ್ವದಲ್ಲಿ ಗ್ರಾಮ ಪಂಚಾಯತಿ ಕೋರ್ಟುಗಳು ಏನೇನು ಕೆಲಸ ಮಾಡುತ್ತಿದ್ದವೆಂಬದನ್ನು ಕಂಡು ಹಿಡಿಯಲು ಸ್ವಲ್ಪ ಪ್ರಯತ್ನಿಸಿದೆ. ಈ ಸಭಿಕರಿಂದಲೂ ಸಲಹೆ ಸಿಕ್ಕಬಹುದೆಂತ ನಿರೀಕ್ಷಿಸಿದೆ. ಪಂಚಾಯತಿ ಕೋರ್ಟುಗಳು ನ್ಯಾಯ ವಿಚಾರಣೆ ಮಾಡುತ್ತಿದ್ದದ್ದು ಕಂಡು ಬರುವದಿಲ್ಲ. ಹುಕುಂನಾಮೆ ಮತ್ತು ಕರ್ನಲ್ ಫ್ರೇಜರ್ ನಿಬಂಧನೆಗಳ ಮೇರೆ ಪಟೇಲನಿಗೆ ತಕ್ಸೀರು ನಡೆದದ್ದು ತಿಳಿದು ಬಂದರೆ ಮೇಲಿನ ಕೋರ್ಟಿಗೆ ತಿಳಿಸಬೇಕು. ಆ ಕೋರ್ಟು ನಾಲ್ಕು ಜನ ತಿಳುವಳಿಕೆಯುಳ್ಳ ಹಳಬರಿಗೆ ಹೇಳಿ ಕಳುಹಿಸಿ ಇಬ್ಬರನ್ನು ಒಂದು ಪಕ್ಷಕ್ಕೂ ಇನ್ನಿಬ್ಬರನ್ನು ಇನ್ನೊಂದು ಪಕ್ಷಕ್ಕೂ ಕೊಡುತ್ತಿತ್ತು. ಇವರು ಸಾಕ್ಷಿಗಾರರ ಹೇಳಿಕೆಯನ್ನು ಕೇಳಿ ಚರ್ಚಿಸಿ ಏನಾದರೂ ತೈಸಲ್ ಕೊಡಲು ಯೋಚಿಸಿಕೊಂಡು ಆ ಕೋರ್ಟಿನ ಜಡ್ಜಿಗೆ ತಿಳಿಸುತ್ತಿದ್ದರು. ಸಾಕ್ಷಿಗಾರರು ಒಪ್ಪಿದರೆ ಆ ತೀರ್ಮಾನವನ್ನು ಕೋರ್ಟು ಮಂಜೂರುಮಾಡುತಿತ್ತು. ಅಂದರೆ ಖಾಸ ತೀರ್ಮಾನದ ಕೋರ್ಟು ಎಂತ ಹೇಳಬಹುದು. ಮದ್ರಾಸಿನಲ್ಲಿರುವ ಕೋರ್ಟು ಬೇರೆ ವಿಧದ್ದು. ಹಕ್ಕುಗಳನ್ನು ಆಯಾ ಸ್ಥಳದವರಿಗೇನೇ ಕೊಡಬೇಕೆಂಬ ತತ್ವಕ್ಕನುಸರಿಸಿ ಗ್ರಾಮವಾಸಿಗಳಿಗೆ ತುಂಬಾ ಪವರು ಕೊಡುವದಾದರೆ ಇರುವ ಕಷ್ಟಗಳನ್ನು ತೋರಿಸಿಕೊಡುತ್ತೇನೆ. ಗ್ರಾಮದಲ್ಲಿರುವ ಜನರಿಗೆ ಪವರು ಕೊಡುವದು ದೊಡ್ಡದಲ್ಲ. ಗ್ರಾಮದವರನ್ನು ಇಂಥಾ ಕೋರ್ಟಿಗೆ ಒಳಪಡಿಸುವದು ನ್ಯಾಯವೋ ಎಂತ ಯೋಚಿಸಬೇಕಾಗಿದೆ. ಗ್ರಾಮವಾಸಿಗೆ ಅಂಥಾ ಕೋರ್ಟು ಬೇಕೋ? ವ್ಯಕ್ತನು ತನ್ನ ಮೊಕದ್ದಮೆಯನ್ನು ತನ್ನ ನೆರೆಯವನು ತೈಸಲು ಮಾಡಲು ಒಪ್ಪುತ್ತಾನೋ, ಅಥವಾ ಕೂತಿರುವ ಜಡ್ಜಿ ಮುಂದೆ ತೆಗೆದುಕೊಂಡು ಹೋಗಲು ಅಪೇಕ್ಷಿಸುತ್ತಾನೋ, ಎಂತ ಯೋಚಿಸಬೇಕು. ಹಣದ ವಿಷಯ ಮಾತ್ರ ನೋಡಿದರೆ ಸಾಲದು. ನ್ಯಾಯ ಸಿಕ್ಕುತ್ತೋ ಎಂತ ಮುಂಚೆ ನೋಡಬೇಕು. ಅನುಮೋದನೆ ಕೊಟ್ಟವರ ಮಾತಿಗೆ ನಾನು ಒಪ್ಪುತ್ತೇನೆ. ಎಚ್ಚರದಿಂದ ಮುಂದರಿಸಬೇಕು, ಅದಕ್ಕಾಗಿಯೇ ಸ್ವಲ್ಪ ವಿಸ್ತಾರವಾಗಿ ಹೇಳಿದೆ.

ಮದ್ರಾಸ್ ಅಧಿಪತ್ಯದಲ್ಲಿ ನಾನು ಕೆಲಸಮಾಡಿ ಕೆಲವು ಕಾಲವಾಯಿತು. ಅಲ್ಲಿನ ಫಾರೆಸ್ಟು ಪಂಚಾಯತಿ ಅಥವಾ ಆಡಳಿತದ ಪಂಚಾಯತಿ ವಿಷಯ ಸಹ ನನಗೆ ಹೆಚ್ಚಿಗೆ ಗೊತ್ತಿಲ್ಲ. ಆಡಳಿತದಲ್ಲಿ ಅಭಿರುಚಿ ತೆಗೆದುಕೊಳ್ಳುವಂತೆ ಆಫೀಸರು ಬಹಳ ಪ್ರಯತ್ನ ಮಾಡುತ್ತಾರೆ. ಗ್ರಾಮದವರು ತಮ್ಮ ಗ್ರಾಮದ ಆಡಳಿತದ ವಿಷಯದಲ್ಲಿ ಹೆಚ್ಚಿಗೆ ಅಭಿರುಚಿ ತೆಗೆದುಕೊಳ್ಳುತ್ತಾರಾದರೆ ಸರಕಾರಕ್ಕೆ ತುಂಬಾ ಸಂತೋಷವೇ. ಪಾರ್ಲಿಮೆಂಟುಗಳು ಗ್ರಾಮ ಪಂಚಾಯತಿಗಳಿಂದ ಹುಟ್ಟಿದ್ದೇನೋ ಹೌದು, ಆದರೆ ಪಾರ್ಲಿಮೆಂಟುಗಳು ಇರುವಲ್ಲಿ ಗ್ರಾಮ ಪಂಚಾಯತಿಗಳು ಇವೆಯೋ ಎಂತ ನೋಡಬೇಕು. ಬೇರೆ ಕಾಲದಲ್ಲಿ ಬೇರೆ ವಿದ್ಯಮಾನಗಳಲ್ಲಿ ಇದ್ದಂಥ ಸಂಸ್ಥೆಗಳನ್ನು, ರಸ್ತೆಗಳೂ, ಹೆಚ್ಚಿನ ವಿದ್ಯೆಯೂ ಇರುವ ಈ ಕಾಲದಲ್ಲಿ ಪುನಃ ಸ್ಥಾಪಿಸುವದು ಯುಕ್ತವೇ ಎಂತ ಯೋಚಿಸಬೇಕಾಗಿದೆ. ನಾನು ಯಾವ ಪಕ್ಷವನ್ನೂ ವಹಿಸುವದಿಲ್ಲ, ಈ ಸಭೆಯ ಅಭಿಪ್ರಾಯ ತಿಳಿಯಲು ಕಾದಿದ್ದೇನೆ.

ಮಿ ಬಿ ಶ್ರೀಪತಿರಾಯರು

ಈ ವಿಷಯದಲ್ಲಿ ತುಂಬಾ ಚರ್ಚೆ ಆಗಬೇಕಾಗಿತ್ತು. ಈಗಿನ ಮಧ್ಯವರ್ತಿ ಸರಕಾರ ಪದ್ಧತಿಯು ಏರ್ಪಾಡಾಗುವ ಮುಂಚೆಯೇ ಕೊಡಗಿನಲ್ಲೂ ಇಂಡಿಯಾದ ಇತರ ಭಾಗಗಳಲ್ಲಿಯೂ ಗ್ರಾಮ ಪಂಚಾಯತಿಗಳಿದ್ದವು. ಈಗ ಎಲ್ಲಾ ಆಡಳಿತವನ್ನೂ ಮೇಲಿನಿಂದ ಮಧ್ಯವರ್ತಿ ಸಂಸ್ಥೆಯೇ ನಡಿಸುವ ಕ್ರಮವು ಈಗ ಜಾರಿಯಲ್ಲಿದೆ. ಆದ್ದರಿಂದಲೇ ಗ್ರಾಮವಾಸಿಗಳಿಗೆ ಆಡಳಿತದ ಕ್ರಮವಾಗಲೀ ಆಡಳಿತದ ಪ್ರಯೋಜನವಾಗಲೀ ತಿಳಿಯದೆ ಇರುವದು.

ಗ್ರಾಮ ಪಂಚಾಯತಿಗಳಿಗೆ ಕ್ಲುಪ್ತ ಹಕ್ಕುಗಳನ್ನು ಕೊಟ್ಟು ಅವುಗಳ ಹಕ್ಕಿನ ಹದ್ದನ್ನು ನಿರ್ಣಯಿಸಿ ಇತಬೇಕು. ಈ ಸಂಸ್ಥೆಯು ಕೊಡಗಿನಲ್ಲಿ ಇರಲಿಲ್ಲವೆಂಬುದು ಸರಿಯಲ್ಲ. ಊರು ತಕ್ಕ, ನಾಡು ತಕ್ಕ, ದೇಶ ತಕ್ಕ ಎಂಬ ಹೆಸರುಗಳಿಂದಲೇ ಪೂರ್ವದಲ್ಲಿ ಗ್ರಾಮದ ಆಡಳಿತವನ್ನು ನಡಿಸಲಿಕ್ಕೆ ಒಂದು ವಿಧದ ಸಂಸ್ಥೆಗಳು ಇದ್ದವೆಂತ ಗೊತ್ತಾಗುತ್ತೆ. ಬಂಗಾಳದ ವಿದ್ವಾನ್ ರಾವ್ ಕುಮುದ ಮುಕರ್ಜಿಯವರು ಇಲ್ಲಿಗೆ ಬಂದಿದ್ದಾಗ, ಪಂಚಾಯತಿ ಪದ್ಧತಿಯ ಕುರುಹು ಈಗ ಇಲ್ಲೇ ಉಳಿದಿರುವದು ಎಂತ ನನ್ನಲ್ಲಿ ಹೇಳಿದರು. ಗ್ರಾಮ ಪಂಚಾಯತಿಗಳಿಗೆ ಎಷ್ಟು ಹಕ್ಕು ಕೊಡಬೇಕು ಸಿವಿಲ್, ಕ್ರಿಮಿ

ನಲ್ ಪವರ್ ಕೊಡಬೇಕೋ, ಅಂದರೆ ವಿದ್ಯಾ, ರಸ್ತೆಗಳು ಆರೋಗ್ಯ ಸಾಧನೆಗಳ ಆಡಳಿತದ ಹಕ್ಕು ಸಹ ಕೊಡಬೇಕೋ, ಕೆಲವು ಕಡೆ ಫಾರೆಸ್ಟ್ ಆಡಳಿತ ಸಹ ಕೊಡಬೇಕೋ ಎಂಬದೇ ನಿಶ್ಚಯಿಸಬೇಕಾದ ವಿಷಯವಾಗಿದೆ. ಮದ್ರಾಸಿನಲ್ಲಿ ಫಾರೆಸ್ಟ್ ಪಂಚಾಯತಿಗಳು ಪ್ರತ್ಯೇಕ ಇವೆ, ಗ್ರಾಮ ಪಂಚಾಯತಿಗಳಿಗೆ ಫಾರೆಸ್ಟ್ ಆಡಳಿತದ ಹಕ್ಕು ಇರುವದಿಲ್ಲ. ಜನರ ಮುಖ್ಯ ಕಸಬು ವ್ಯವಸಾಯವಾಗಿರುವ ಕಡೆಗಳಲ್ಲಿ ಈ ಸಂಸ್ಥೆಯು ಚನ್ನಾಗಿ ಬೆಳೆಯುತ್ತದೆ ಎಂಬದನ್ನು ನೆನಪಿನಲ್ಲಿಡಬೇಕು. ಕೈಗಾರಿಕೆಗಳ ಕಾರ್ಖಾನೆಗಳಲ್ಲಿ ಗುಂಪು ಗುಂಪಾಗಿರುವ ಜನರಿಗೆ ಈ ಸಂಸ್ಥೆಯಿಂದ ಹೆಚ್ಚು ಪ್ರಯೋಜನವಿಲ್ಲ. ಇಂಡಿಯಾ ದೇಶವೇ ಅದರಲ್ಲೂ ಕೊಡಗು ಪ್ರಾಮುಖ್ಯವಾಗಿ ಕೃಷಿ ಕಸಬಿನ ದೇಶವಾಗಿದೆ. ಕಾಫಿ ಮುಂತಾದ ಕೈಗಾರಿಕೆಗಳು ಕೆಲವರಿಗೆ ಮಾತ್ರ ಸಂಬಂಧ ಪಡುತ್ತದೆ, ಸಾಧಾರಣ ರೈತನಿಗೆ ಅದು ವ್ಯಾಪಿಸುವದಿಲ್ಲ. ನಾನು ದೇಶದ ಒಂದು ಮೂಲೆಯಲ್ಲಿ ಗ್ರಾಮವಾಸಿಗಳ ಮಧ್ಯೆ ಇರುವದರಿಂದ ಗ್ರಾಮವಾಸಿಗಳಿಗೆ ತಮ್ಮ ಚಿಕ್ಕ ತಕರಾರುಗಳನ್ನು ತೀರಿಸಲು ಮಧ್ಯವರ್ತಿ ಸರಕಾರಿ ಸಂಸ್ಥೆಗೆ ಬರುವದೆಂದರೆ ಎಷ್ಟು ಕಷ್ಟವಿದೆ ಎಂಬದು ನನಗೆ ಗೊತ್ತಿದೆ. ಸರಿಯಾಗಿ ಏರ್ಪಾಡಾದ ಪಂಚಾಯತಿಗಳಿಗೆ ಉಂಟಾದ ನಿರ್ಣಯಿಸಬಹುದಾದ ಅನೇಕ ಹಕ್ಕುಗಳನ್ನು ಕೊಟ್ಟರೆ ರೈತರಿಗೆ ಬಹಳ ಪ್ರಯೋಜನವಾಗುತ್ತದೆ. ಕೃಷಿಕರ ದೇಶವಾದ ಇಲ್ಲಿ ರೈತನ ಅಭಿವೃದ್ಧಿಗೆ ಮೊದಲು ಗಮನ ಕೊಡಬೇಕು. ವಿದ್ಯಾವಂತರಿಗೆ ಹೋಲಿಸಿದರೆ ಗ್ರಾಮವಾಸಿ ರೈತನು ಒಂದು ಶತಮಾನಕ್ಕೆ ಹಿಂದೆ ಇದ್ದಾನೆಂತ ಗೊತ್ತಾಗುತ್ತೆ. ಗ್ರಾಮಗಳಲ್ಲಿ ನಿಷ್ಪಕ್ಷಪಾತ ಫೈಸಲು ಸಿಕ್ಕಲಾರದೆಂತಲೂ ತಿಳುವಳಿಕೆ ಇರುವವರು ಇಲ್ಲವೆಂತಲೂ ಹೇಳಿದ್ದು ಅನುಭವವಿಲ್ಲದೆ ಹೇಳಿದ್ದಾಗಿದೆ. ತಿಳುವಳಿಕೆ ಇರುವ ಗ್ರಾಮದವರು ಕೈದಾಖಿ ಶೇಕಡ 99ರಷ್ಟು ಕಲಹಗಳನ್ನು ಗ್ರಾಮಗಳಲ್ಲೇ ಕೋರ್ಟಿಗೆ ಹೋಗಲು ಬಿಡದೆ ಫೈಸಲ್ ಮಾಡಿಬಿಡುತ್ತಾರೆ. ನೀರಾವರಿ ನಾಲೆಗಳ ಮತ್ತು ರಸ್ತೆಗಳ ಸಂಬಂಧವಾಗಿಯೂ ಸರಕಾರದವರು ಬೇಕಾದಷ್ಟು ದ್ರವ್ಯ ಸಹಾಯ ಕೊಡದೆ ಇರುವಾಗ ಗ್ರಾಮವಾಸಿಗಳು ಒಗ್ಗಟ್ಟಾಗಿ ಅನ್ಯೋನ್ಯ ಸಹಾಯ ಮಾಡಿ ಕೆಲಸ ಮಾಡಿಕೊಳ್ಳುತ್ತಾರೆ. ಈಗಲೂ ಅನ್ಯೋನ್ಯ ಸಹಾಯ ಮಾಡಿ ಕೃಷಿ ಕೆಲಸ ನಡಿಸಿಕೊಳ್ಳುತ್ತಿರುವದನ್ನು ನೋಡಿದರೇನೇ ಗ್ರಾಮದಲ್ಲಿ ಈಗಲೂ ಒಗ್ಗಟ್ಟಿದೆ ಎಂಬದು ಸ್ಪಷ್ಟವಾಗುತ್ತದೆ. ಒಟ್ಟು ಯಜಮಾನನ ಹೇಳಿಕೆಯಲ್ಲಿ ಇರುವದು ತಪ್ಪಿ ಎಲ್ಲರೂ ಸ್ವತಂತ್ರಗಳು ಆಗಿರುವದು ನಿಜವೇ. ಇದರಿಂದಲೇ ದೇಶದಲ್ಲಿ ಅಭಿವೃದ್ಧಿಯಾಗದೆ ಇರುವದೆಂತ ನನಗೆ ತೋರುತ್ತೆ. ಮನೆಯೊಳಗೆ ಕಲಹವಿದ್ದರೂ ಒಟ್ಟು ಗ್ರಾಮಕ್ಕೆ ಸಂಬಂಧಪಡುವ ವಿಷಯಗಳಲ್ಲಿ ಎಲ್ಲರೂ ಒಗ್ಗಟ್ಟಾಗುವದು ನನಗೆ ಗೊತ್ತಿದೆ. ಪೂರ್ವದ ಒಗ್ಗಟ್ಟಿನ ಬುದ್ಧಿಯು ಈಗಲೂ ಇದೆ ಎಂಬದು ಇವರಿಂದ ತಿಳಿಯುತ್ತದೆ. ಆ ಒಗ್ಗಟ್ಟಿನ ಬುದ್ಧಿಯನ್ನು ಹೆಚ್ಚಿಸಲಿಕ್ಕಾಗಿಯೇ ಗ್ರಾಮ ಪಂಚಾಯತಿಗಳು ಬೇಕೆಂತ ಕೇಳುವದಾಗಿದೆ. ಇದರಿಂದ ಸರಕಾರಕ್ಕೂ ಸಹ ಸಹಾಯವಿದೆ.

ಮತ್ತೊಂದು ಸಂಗತಿ ಏನೆಂದರೆ—ನಾವು ಈಗ ಸ್ವರಾಜ್ಯದ ಮೆಟ್ಲನ್ನು ಕ್ರಮ ಕ್ರಮವಾಗಿ ಹತ್ತಲು ಪ್ರಾರಂಭಿಸಿದ್ದೇವೆ. ಸರಕಾರದವರೂ ಸಹ ಒಂದೊಂದಾಗಿ ಹಕ್ಕುಗಳನ್ನು ಪ್ರಜಾಪ್ರತಿನಿಧಿ ಸಂಸ್ಥೆಗಳಿಗೆ ಕೊಡಲು ಪ್ರಾರಂಭಿಸಿದ್ದಾರೆ. ಹೀಗಿರುವಾಗ ಜವಾಬ್ದಾರಿ ಕೆಲಸಗಳನ್ನು ತಿಳಿದ ಜನರು ತಯಾರಾಗಬೇಡವೇ? ಜೋಸೆಫ್ ಚೇಂಬರ್ಲೇನರು ಬರ್ಮಿಂಗ್ಹಾಮದ ಮುನಿಸಿಪಲ್ ಆಡಳಿತದಲ್ಲಿ ಅನುಭವಪಡದೆ ಹೋದರೆ ಪ್ರಖ್ಯಾತರಾದ ರಾಜಕಾರ್ಯ ಧುರೀಣರಾಗುತ್ತಿರಲಿಲ್ಲ. ಜನರು ಸ್ವರಾಜ್ಯ ಪದ್ಧತಿಯಲ್ಲಿ ತಯಾರು ಹೊಂದಲು ಅನುಕೂಲ ಕೊಡಬೇಕೆಂಬುದಕ್ಕೆ ತುಂಬಾ ಉದಾಹರಣೆಗಳನ್ನು ಕೊಟ್ಟೇನು. ಸ್ವರಾಜ್ಯವೆಂದರೆ ಆತ್ಮಾವಲಂಬನೆ, ಅನ್ಯೋನ್ಯತೆ, ಸಮಾಧಾನ ಮುಂತಾದ ಗುಣಗಳನ್ನು ಒಳಕೊಂಡವರಿಂದ ನಡಿಸಲ್ಪಡುವ ಆಡಳಿತ. ನಮ್ಮ ದೇಶದಲ್ಲಿ ಗ್ರಾಮ ಪಂಚಾಯತಿಗಳನ್ನು ಏರ್ಪಡಿಸಿ ಜನರಿಗೆ ಈ ಗುಣಗಳನ್ನು ಅಭಿವೃದ್ಧಿಪಡಿಸುವ ಅನುಕೂಲ ಕೊಡಬೇಕು.

ಸೈಮಾನ್ಸ್ ಎಂಬವರು ಈ ಸಭೆಯವರ ಸಲಹೆಯನ್ನು ಕೇಳಿದ್ದಾರೆ. ಇದು ಕಷ್ಟವೇ. ಗ್ರಾಮ ಪಂಚಾಯತಿಗಳಿಗೆ ತುಂಬಾ ಹಕ್ಕುಗಳನ್ನು ಕೂಡಲೇ ಕೊಡಬಾರದು. ಪರೀಕ್ಷಾರ್ಥವಾಗಿ ಕೆಲವು ಹಕ್ಕುಗಳನ್ನು ಮಾತ್ರ ಕೊಡಬೇಕು. ಜನರಲ್ಲಿ ತಿಳುವಳಿಕೆಯೂ ಜವಾಬ್ದಾರಿಯೂ ಚನ್ನಾಗಿ ಇರುವ ಗ್ರಾಮಗಳಲ್ಲಿ ಪ್ರಾರಂಭಿಸಬಹುದು. ಕ್ರಮ ಕ್ರಮವಾಗಿ ಹಕ್ಕುಗಳನ್ನು ಹೆಚ್ಚಿಸಬಹುದು. ಅಷ್ಟರಲ್ಲಿ ಜನರಿಗೂ ಅನುಭವ ಬಂದಿರುತ್ತದೆ.

ಅನೇಕ ಗ್ರಂಥಕಾರರು ಈ ವಿಷಯವಾಗಿ ಬರೆದಿದ್ದಾರೆ. ರಾಧಾ ಕುಮುದ ಮುಖರ್ಜಿ ಮತ್ತು ರಾಧಾ ಕಮಲ ಮುಖರ್ಜಿ ಎಂಬವರಿಬ್ಬರು ಪುರಾತನ ಕಾಲದಲ್ಲಿ ಹಿಂದುಸ್ಥಾನದ ಗ್ರಾಮಗಳ ಆಡಳಿತ ವಿಷಯ ತುಂಬಾ ಬರೆದವರಾಗಿದ್ದಾರೆ. ಇವರು ಮಧ್ಯವರ್ತಿ ಸರಕಾರದ ಹಕ್ಕುಗಳನ್ನು ಗ್ರಾಮದವರಿಗೆ ಬಿಟ್ಟುಕೊಟ್ಟು ಪೂರ್ವದ ಸಂಸ್ಥೆಗಳನ್ನು ದೇಶಕಾಲಕ್ಕೆ ಬೇಕಾದ ವ್ಯತ್ಯಾಸಗಳೊಡನೆ ಪುನಃ ಸ್ಥಾಪಿಸಬೇಕೆಂತ ಬರೆದಿದ್ದಾರೆ.

ಗ್ರಾಮ ಪಂಚಾಯತಿಗಳನ್ನು ಸ್ಥಾಪಿಸುವದು ಬಹಳ ಅವಶ್ಯವೆಂತ ನಾನು ಒತ್ತಿ ಹೇಳುತ್ತೇನೆ. ಈಗ ಸ್ವಲ್ಪ ಹಕ್ಕುಗಳನ್ನು ಕೊಟ್ಟು ಕ್ರಮೇಣ ಮದ್ರಾಸ್ ಪಂಚಾಯತಿಗಳಿಗೆ ಇರುವ ಹಕ್ಕನ್ನೆಲ್ಲಾ ಕೊಡಬಹುದು. ಮದ್ರಾಸಿನಲ್ಲಿ ಎರಡು ತರದ ಕೋರ್ಟುಗಳಿವೆ. ಅವುಗಳಲ್ಲಿ ಪಂಚಾಯತಿ ಕೋರ್ಟುಗಳೇ ಉತ್ತಮ. ಗ್ರಾಮ ಮುನಿಸೀಫರುಗಳು ನಮಗೆ ತತ್ಕಾಲ ಬೇಡ, ಗ್ರಾಮದ ಆಡಳಿತಕ್ಕೆ ಬೇಕಾದ ಕೆಲಸವನ್ನೆಲ್ಲಾ ಪಂಚಾಯತರಿಗೆ ಕೊಡಬಹುದು.

ಈ ಮಾತುಗಳಿಂದ ಠರಾವಿಗೆ ಮನಃಪೂರ್ತಿ ಒತ್ತಾಸೆ ಕೊಡುತ್ತೇನೆ.

ವಿವಾಹವಾಗತಕ್ಕ ವಯಸ್ಸು.

ಪ್ರಾಯದ ವಿವಾಹವೇ ಬಹು ಉತ್ತಮವಾದುದೆಂಬದು ನಮ್ಮ ಅಭಿಪ್ರಾಯ. ಪ್ರಾಯವು ಪ್ರಾಪ್ತವಾದಕೂಡಲೆ ವಿವಾಹವಾಗುವದಕ್ಕೆ ಶ್ರೇಷ್ಠವಾದ ಸಮಯ. ಯುವಕನು ತಾರುಣ್ಯದಲ್ಲುಂಟಾಗುವ ವ್ಯಾಮೋಹವನ್ನು ತಡೆಯುವದರ ಸಲುವಾಗಿ ಪ್ರಾರಂಭದಲ್ಲೇ ಪತ್ನಿಯನ್ನು ವರಿಸಬೇಕು, ಇಲ್ಲದಿದ್ದರೆ ಅನರ್ಥಗಳಾಗುವವು. ಯೌವನದ ಪ್ರಾರಂಭದಲ್ಲೇ ಮದುವೆಯಾಗುವುದರಿಂದ ಯುವಕನಿಗೆ ಅನೇಕ ಲಾಭವುಂಟು. ಯೌವನದಲ್ಲಿ ಪುರುಷನು ಕೆಟ್ಟದ್ದಾಗಲಿ, ಒಳ್ಳೆಯದಾಗಲಿ ನಡತೆಯನ್ನು ಅಭ್ಯಾಸಮಾಡುವನು. ಉತ್ತಮಳಾದ ಭಾರ್ಯೆಯು ದೊರೆತಲ್ಲಿ ಪುರುಷನಿಗೆ ಶ್ರೇಯಸ್ಸಾಗುವದು. ಮಾನವನ ಅವಸ್ಥಾ ವಿಶೇಷದಲ್ಲಿ ಯೌವನವು ಬಹು ಅಪಾಯಕರವಾದದ್ದು. ಸುಗುಣವಂತನಾಗಿ ಧಾರ್ಮಿಕಮಾರ್ಗದಲ್ಲಿದ್ದರೆ ಸ್ವರ್ಗಕ್ಕೇರುವನು. ನೀಚತನದಿಂದ ದುಷ್ಕರ್ಮವನ್ನಾಚರಿಸಿದರೆ ನರಕಕ್ಕಿಳಿಯುವನು. ಅಲ್ಲದೆ ಯೌವನವು ಪ್ರಾಪ್ತವಾದ ಕೂಡಲೆ ಪುರುಷನಿಗೆ ಮನೆ, ಹೆಂಡತಿ, ಮಕ್ಕಳು ಸಂಸಾರವೆಂಬ ಆಸಕ್ತಿಯುಂಟಾಗುವದು. ಮನಃಪೂರ್ವಕವಾಗಿ ಪ್ರೀತಿಸುವ ಸ್ತ್ರೀಯಳಮೇಲೆ ತನ್ನ ಪ್ರಣಯ ಪರಂಪರೆಯನ್ನೆರೆಯಲು ಹಾರೈಸುತ್ತಿರುವನು. ಮುದ್ದುಮಾತನಾಡುವ ಮಗುವಿನ ಧ್ವನಿಯಿಂದ ಆತನ ಹೃದಯವು ಆನಂದದಿಂದುಕ್ಕುವುದು. ಈ ಇಚ್ಛೆಗಳು ಪೂರ್ಣವಾಗಬೇಕಾದರೆ ಪುರುಷನಿಗೆ ಪ್ರಾಯವೆ ಹೊರತು ಬೇರೆಯ ಜೀವಿತ ಭಾಗವು ಶೋಭಿಸುವುದಿಲ್ಲ. ಪ್ರಾಯಕ್ಕೆ ಬಂದೊಡನೆಯೇ ವಿವಾಹಿತನಾಗಬೇಕೆಂಬ ಅಭಿಪ್ರಾಯವು ಎಲ್ಲರಿಗೂ ಉತ್ತಮವೆಂದು ತಿಳಿಯತಕ್ಕದ್ದಲ್ಲ. ಯಾರು ವಿವಾಹಿತರಾಗದೆ ಯಾವ ದುರ್ಗುಣಗಳಿಗೂ ಬೀಳದೆ ಶುದ್ಧರಾಗಿರುವರೊ ಅವರು ಪೂರ್ಣಯೌವನವು ಪ್ರಾಪ್ತವಾಗುವ ವರೆಗೂ ಇರಬಹುದು. ಯುವಕರಲ್ಲಿ ಸಾಧಾರಣವಾಗಿ ನೆಲೆಸಿರುವ ವಿಷಯಲಾಂಪಟ್ಯವೂ, ದುರುಳತನವೂ ನಿವಾರಿಸಿಕೊಳ್ಳುವುದಕ್ಕೆ ಶಕ್ತಸ್ವರೂಪರಾದರೆ ವಿವಾಹವನ್ನು ಸಾವಕಾಶವಾಗಿ ಮಾಡಿಕೊಳ್ಳಬಹುದು. ಇಪ್ಪತ್ತೈದು ಅಥವ ಮೂವತ್ತು ವರ್ಷಗಳ ವರೆಗೆ ಪುರುಷನು ಬ್ರಹ್ಮಚರ್ಯವ್ರತಸ್ಥನಾಗಿದ್ದರೆ ವಿವಾಹಮಾಡಿಕೊಳ್ಳುವುದಕ್ಕೆ ಸಕಾಲವೆನ್ನಬಹುದು. ಕೆಲವರ ವಿಚಾರದಲ್ಲಿ ಇದು ಸಮರ್ಪಕವಾಗಿರುವದಿಲ್ಲವಾದುದರಿಂದ 20 ವರ್ಷಗಳ ಮೇಲೆ ವಿವಾಹಕ್ಕೆ ಪ್ರಯತ್ನಪಡುವುದನ್ನು ಜರಿಯಬಾರದು. ಈ ಕಾಲಕ್ಕೆ ಮದುವೆಯಾಗುವುದರಿಂದ ಎರಡು ಕೆಡಕುಗಳಲ್ಲಿ ಕಡಮೆಯಾದುದನ್ನು ಆರಿಸಿಕೊಂಡಂತಾಗುತ್ತದೆ,

ನಾವು ಇಲ್ಲಿ ಬಾಲ್ಯವಿವಾಹಕ್ಕೂ ಪ್ರಾಯದ ವಿವಾಹಕ್ಕೂ ಇರುವ ಭೇದವನ್ನು ಸ್ಪಷ್ಟಮಾಡುತ್ತೇವೆ. ಹದಿನೆಂಟು ವರ್ಷಕ್ಕೆ ಮುಂಚೆಯೇ ಆಗುವ ಲಗ್ನವು ಬಾಲ್ಯವಿವಾಹವು. ಕೆಲವರಿಗೆ ಪ್ರಾಯವು ನಿಧಾನವಾಗಿ ಪ್ರಾಪ್ತವಾಗುತ್ತದೆ. ಅಂಥವರಿಗೆ 20 ವರ್ಷಗಳಿಗೆ ಆಗುವದು ಕೂಡ ಬಾಲ್ಯವಿವಾಹವೆಂದೇ ತಿಳಿಯಬೇಕು. ಸಾಧಾರಣವಾಗಿ 20ರಿಂದ 24 ವರುಷಗಳೊಳಗೆ ನಡೆಯುವ ಮದುವೆಯು ಪ್ರಾಯದ ವಿವಾಹವು.

ಜನಾಂಗದಾರ್ಢ್ಯವು ಉಳಿಯಬೇಕಾದರೆ ಪ್ರೌಢ ಪ್ರಾಯದ ವರೆಗೂ ಇಂದ್ರಿಯವನ್ನು ಬೆಳೆಯುವುದಕ್ಕೆ ಬಿಡುವುದು ಸರ್ವೋತ್ತಮವಾದದ್ದು. ಪ್ರೌಢವಿವಾಹಿತರ ಮಕ್ಕಳು ಬುದ್ಧಿಶಕ್ತಿಯುಳ್ಳೂ, ಶಾರೀರಕ ಶಕ್ತಿಯುಳ್ಳೂ ಶ್ರೇಷ್ಠರಾಗಿರುತ್ತಾರೆ. ವೃಕ್ಷಗಳೂ ಕೂಡ ಸರಿಯಾದ ಬೆಳವಣಿಗೆಗೆ ಬರುವ ವರೆಗೂ ಪುಷ್ಪವನ್ನೂ ಫಲವನ್ನೂ ಬಿಡುವದಿಲ್ಲ. ಮನುಷ್ಯವರ್ಗಕ್ಕೂ ಕೂಡ ಅದೇ ಉದಾಹರಣೆಯು ಸಾಧ್ಯವಾಗಿದೆ. ಪ್ರಾಯವಯಸ್ಸಿಗೆಮುಂಚೆ ಉತ್ಪನ್ನರಾದಮಕ್ಕಳು ಕನಿಷ್ಠ[illegible]ಯುಳ್ಳವರಾಗಿರುತ್ತಾರೆಂದು ಶಾಸ್ತ್ರಜ್ಞರ ಗುಂಪಿನಲ್ಲಿ ತರ್ಕಗಳಾಗುತ್ತಿವೆ. ಚಿಕಾಗೊ ಪಟ್ಟಣವಾಸಿಗಳಾದ ಕ್ಯಾಸ್‌ಪರ್ ಎಲ್. ರೆಡ್‌ಫೀಲ್ಡ್ ಎನರು ಪ್ರೌಢವಿವಾಹಿತರ ಮಕ್ಕಳೇ ಬಲಾಢ್ಯರಾಗಿಯೂ ಪ್ರತಿಭಾಶಾಲಿಗಳಾಗಿಯೂ ಇರುತ್ತಾರೆಂದು ದೃಢಪಡಿಸಿದ್ದಾರೆ. ಅವರು ಅಮೇರಿಕಾದೇಶದ ಸಂತತಿ ಶೋಧಕರ ಸಂಘಕ್ಕೆ (The American Genetic Association) 300 ರೂಪಾಯಿಗಳನ್ನು ಬಹುಮಾನವಾಗಿ ಕೊಡುವುದಾಗಿಯೂ ಒಂದು ಶತಮಾನದೊಳಗೆ ನಾಲ್ಕು ಸಂತತಿಯು ಉತ್ಪನ್ನವಾಗಿ ಸುಪ್ರಸಿದ್ಧರಿರುವದನ್ನು ಕಂಡು ಹಿಡಿಯಬೇಕೆಂದೂ ತಿಳಿಸಿದರು. ಒಂದುನೂರು ವರುಷದೊಳಗೆ ಹದಿನಾರು ತಲೆಕಳೆದು ಹುಟ್ಟಿದವನಲ್ಲಿ ಅದ್ಭುತ ಮೇಧಾಶಕ್ತಿಯುಳ್ಳವನನ್ನು ಬಿಡದು ಶತಮಾನದೊಳಗೆ ಮೂರು ಸಂತತಿಯಾಗಿರುವರಲ್ಲಿ ಅರಿಸ್ಟೋಟಲಿನಂತಾಗಲಿ, ನ್ಯೂಟನನಂತಾಗಲಿ ಅಥವ ಡಾರ್ವಿನನಂತಾಗಲಿ ಇರುವವರನ್ನು ಪ್ರಸಿದ್ಧಪಡಿಸಿದ್ದೇ ಆದರೆ ಬೇರೆ 500 ರೂ. ಗಳ ಪಾರಿತೋಷಕವನ್ನು ಕೊಡುವೆನೆಂದು ವಿಜ್ಞಾಪಿಸಿಕೊಂಡರು, ಆ ಸಂವತ್ಸರದ ಅರ್ಧವು ಮುಗಿಯುವದರೊಳಗೆ ಎಷ್ಟು ಸಂಶೋಧನೆ ಮಾಡಿದಾಗ್ಯೂ ಕಂಡುಹಿಡಿಯಲು ಸಾಧ್ಯವಾಗಲಿಲ್ಲ.

ಈ ಶೋಧನೆಯಿಂದ ತಂದೆಗೆ 25 ವರುಷಕ್ಕೆ ಮೇಲ್ಪಟ್ಟು ಹುಟ್ಟಿದಂಥ ಶಿಶುವು ಶ್ರೇಷ್ಠವಾಗಿರುತ್ತೆಂದು ನಿರ್ಣಯಿಸಿದಂತಾಯಿತು. ನಾವು ಚರಿತ್ರೆಯಲ್ಲಿ ಆರಿಸಿದರೂ ಕೂಡ ಸುಪ್ರಸಿದ್ಧರಾದವರ ತಾಯಿತಂದೆಗಳು ಬಾಲ್ಯವಿವಾಹಿತರಲ್ಲವೆಂದು ವ್ಯಕ್ತವಾಗುವುದು. ಹೇಗೆಂದರೆ, 20ರಿಂದ 24 ವರುಷಗಳೊಳಗೆ ಉತ್ಪನ್ನರಾದವರು ಉತ್ಕೃಷ್ಟರಲ್ಲವೆಂದು ತಿಳಿಯತಕ್ಕದ್ದು. ಇದರಿಂದ ಶ್ರೇಷ್ಠರಾದವರು ಜೀವನ ಸರ್ವಸ್ವವನ್ನೆಲ್ಲಾ ಬ್ರಹ್ಮಚರ್ಯದಲ್ಲಿ ಕಳೆಯದಿದ್ದಾಗ್ಯೂ ನಿಧಾನವಾಗಿ ಮದುವೆ ಮಾಡಿಕೊಂಡಿರುತ್ತಾರೆಂದು ರೆಡ್‌ಫೀಲ್ಡರವರಮತವು. ಲೋಕವಿಖ್ಯಾತರು ತಮ್ಮ ಬುದ್ಧಿಶಕ್ತಿಯನ್ನು ಸಂಪಾದನೆಗಾಗಿ ವಿನಿಯೋಗಿಸದೆ ಸ್ವಶಿಕ್ಷಣದಲ್ಲುಪಯೋಗಿಸುವದರಿಂದ ಪ್ರಾಯ ಮಾಗಿದಮೇಲೆ ವಿವಾಹಿತರಾಗಿರುತ್ತಾರೆ. ಸಾವಧಾನವಾಗಿ ವಿವಾಹಮಾಡಿಕೊಳ್ಳುವದರಿಂದ ಸಂತಾನವೂ ಕೂಡ ಸಾವಕಾಶವಾಗುತ್ತದೆ.

ಪ್ರೊಫೆಸರ್ ಕಾರಲ್ ಪಿಯರ್‌ಸನ್ ಎಂಬ ಬ್ರಿಟಿಷ್ ಶೋಧಕನು ಮೊದಲು ಹುಟ್ಟಿದಮಗುವು ದೃಢಾಂಗವಾಗಿರುವುದಿಲ್ಲವೆಂಬದಾಗಿಯೂ, ಬಹುಕಾಲ ಬದುಕುವುದಿಲ್ಲವೆಂಬದಾಗಿಯೂ ನಿರ್ಣಯಿಸಿರುತ್ತಾನೆ. ಇನ್ನು ಕೆಲವರು ಈ ನಿರ್ಣಯಕ್ಕೆ ಸರಿಯಾದ ಆಧಾರಗಳಿಲ್ಲವೆಂದು ವಾದಿಸುತ್ತಾರೆ. ಮೊದಲುಹುಟ್ಟಿದ ಮಗುವಾದಮಾತ್ರಕ್ಕೇನೆ ಅದು ಕೃಶವಾಗಿರುವುದೊ ಅಥವಾ ತಾಯಿತಂದೆಗಳ ಯೌವನವು ಪೂರ್ಣವಾಗದಿರುವದರಿಂದ ಹಾಗಾಗುತ್ತದೋ ಎಂಬದನ್ನು ಕಾರಲ್ ಸಾಹೇಬರು ಸ್ಪಷ್ಟಪಡಿಸಿಲ್ಲ. ಅದು ಹೇಗಾದರೂ ಇರಲಿ, ಅಪೂರ್ಣ ಯೌವನದಿಂದಿರುವ ತಾಯಿತಂದೆಗಳಿಗೆ ಹುಟ್ಟಿದ ಮಗುವು ಶ್ರೇಷ್ಠವಾಗಿರುವದಿಲ್ಲ. ಬಾಲ್ಯ ವಿವಾಹಿತರ ಮಕ್ಕಳು ಕೃಶಾಂಗರಾಗಿಯೂ ಅಲ್ಪಾಯುಗಳಾಗಿಯೂ ಇರುವ ದೃಷ್ಟಾಂತವೇ ಇದಕ್ಕೆ ಸಾಕ್ಷಿಯಾಗಿದೆ. ಪೂರ್ಣಬೆಳೆದ ಯುವಕ ಯುವತಿಯರ ಸಂತತಿಯು ಉತ್ತಮವಾಗಿರುತ್ತೆಂದು ಹೇಳಲು ಯಾವ ಸಂಶಯವೂ ಇಲ್ಲ.

ತಾಯಿಗೆ ಸಣ್ಣವಯಸ್ಸಿನಲ್ಲಿ ಮಗುವನ್ನು ಹಡೆಯುವದರಿಂದ ಉಂಟಾಗತಕ್ಕ ಶಾರೀರ ಶ್ರಮೆಗೂ ಕೂಡ ಹೆಚ್ಚು ಲಕ್ಷ್ಯಕೊಡಬೇಕು. ಮಗುವು ಆರೋಗ್ಯವಾಗಿರುವದಕ್ಕೆ ಪಿತನು ಹೇಗೆ ಬಲಿಷ್ಠನಾಗಬೇಕೊ ಹಾಗೆಯೆ ತಾಯಿಯೂ ಕೂಡ ಗರ್ಭಧಾರಣಮಾಡುವ ಸಾಮರ್ಥ್ಯವನ್ನು ಹೊಂದಿರಬೇಕು. ಮೊದಲು ಮಗುವಿನ ಎಳೆ ಪ್ರಾಯದಲ್ಲಿ ಪ್ರಸವಿಸುವದು ಬಹು ಸರಾಗವಾಗಿರುವದು. ವಯಸ್ಸಾಗುತ್ತಾ ಹೋಗಿ ಹಾಗೆಲ್ಲಾ ಹೆರುವುದಕ್ಕೆ ಕಠಿಣವಾಗುವದು. ಸ್ತ್ರೀಗೆ ಸಾಧಾರಣವಾಗಿ 30 ವರುಷಗಳಾದಮೇಲೆ ಮೊದಲನೆ ಶಿಶುವು ಜನಿಸಿತೆಂದರೆ ಬಹುತೊಂದರೆಯಾಗುವುಗು. ಹದಿನೆಂಟು ವರ್ಷಗಳ ಮುಂಚೆ ಹೆರಿಗೆಯಾದರೂ ಈ ಕಷ್ಟವು ತಪ್ಪುವದಿಲ್ಲ.

ಪುರುಷನು ಬಹಳ ವರುಷಗಳವರೆಗೂ ಅವಿವಾಹಿತನಾಗಿದ್ದು ಪೂರ್ಣ ಬ್ರಹ್ಮಚರ್ಯವ್ರತಸ್ಥನಾಗಿದ್ದರೆ ನಪುಂಸಕತ್ವವುಂಟಾಗುವುದೆಂದು ಕೆಲವು ಶಾಸ್ತ್ರಕಾರರು ಅಭಿಪ್ರಾಯವುಳ್ಳವರಾಗಿರುವರು. ಆದರೆ ಈ ರೀತಿಯಾಗಿ ಎಲ್ಲರೂ ಭಯಪಡಲು ಕಾರಣವಿಲ್ಲ. ಹೀಗೆ ಸಂಭವಿಸುವದು ಅತಿ ವಿರಳ. ವಯಸ್ಸುಮೀರಿ ಮದುವೆಯಾದವರಿಗೆ ಷಂಡತನವು ಪ್ರಾಪ್ತವಾಗಲು ಅವರ ದುಷ್ಟಚಟಗಳೇ ಕಾರಣ. ಬಹುಕಾಲದ ವರೆಗೂ ಜಿತೇಂದ್ರಿಯರಾಗಿದ್ದಲ್ಲಿ ಇಂದ್ರಿಯವು ದುರ್ಬಲವಾಗುವದೆಂದು ಹಲವರು ಅಭಿಪ್ರಾಯಪಡುತ್ತಾರೆ. ಸರಿಯಾದ ದೃಷ್ಟಾಂತಗಳು ಸಿಗುವವರೆಗೂ ಈ ವಿಷಯವನ್ನು ಚರ್ಚಿಸಲಾಗುವದಿಲ್ಲ.

ಎಷ್ಟೋ ಜನರು ಪ್ರಾಪ್ತಕಾಲಕ್ಕೆ ವಿವಾಹಿತರಾಗಬೇಕೆಂಬ ಇಚ್ಛೆಯುಳ್ಳವರಾಗಿರುತ್ತಾರೆ. ಕನ್ಯೆಯು ಬಂದಕಾಲಕ್ಕೆ ಲಗ್ನವಾಗಬೇಕೆಂದೂ, ಬಂದುದನ್ನು ಬಿಟ್ಟು ಬಿಟ್ಟರೆ ಯಾರೂ ಹೆಣ್ಣನ್ನು ಕೊಡುವದಿಲ್ಲವೆಂದೂ ಹುಡುಗನಿಗೆ ಹೆದರಿಸಿ, ತಾಯಿತಂದೆಗಳು ಬಲತ್ಕಾರದಿಂದ ಮದುವೆಮಾಡುವ ಪದ್ಧತಿಯನ್ನಿಟ್ಟುಕೊಂಡಿರುತ್ತಾರೆ. ಅವಸರವಾದ ವಿವಾಹವು ಅನಿಷ್ಟಕ್ಕೆ ಕಾರಣವಾಗುವುದು.

ಸಂಪಾದನೆಯ ಅಭಾವದಿಂದ ಕೆಲವರು ಪ್ರಾಪ್ತಕಾಲದಲ್ಲಿ ವಿವಾಹಮಾಡಿಕೊಳ್ಳುವದಕ್ಕೆ ಹಿಂದೆಗೆಯುತ್ತಾರೆ. ನಿಜವಾಗಿಯೂ ಈ ಕಾರಣವು ಸಮರ್ಪಕವಾಗಿದೆ. ಏಕೆಂದರೆ, ಸಂಸಾರಿಗಳಿಗೆ ದ್ರವ್ಯದ ಅನುಕೂಲತೆಯು ಅತ್ಯಾವಶ್ಯಕ. ದಿನದಿನಕ್ಕೆ ಸಂಸಾರವು ದೊಡ್ಡದಾಗುತ್ತಾ ಹೋಗುತ್ತದೆ. ಆದ್ದರಿಂದ ದ್ರವ್ಯಾರ್ಜನೆಗೆ ಸರಿಯಾದ ಮಾರ್ಗವನ್ನು ಕಲ್ಪಿಸಿಕೊಂಡು ವಿವಾಹಮಾಡಿಕೊಳ್ಳುವದು ಹಿತವೆಂದು ತೋರುತ್ತದೆ.

ಯೌವನವು ಪ್ರಾಪ್ತವಾಗುವುದರೊಳಗಾಗಿ ಧನಸಂಪಾದನೆ ಮಾಡಿಕೊಳ್ಳುವದಕ್ಕೆ ಪುರುಷರು ಪ್ರಯತ್ನಿಸಬೇಕು. ಪ್ರಾಯದಲ್ಲಿ ತರುಣರು ವೈರಾಗ್ಯ ಚಕ್ರವರ್ತಿಗಳಾಗಿರುವದು ಅಸಂಭವ. ಹಣವು ಸಾಕಾಗುವದಿಲ್ಲವೆಂದೂ, ವಿವಾಹವನ್ನು ಮಾಡಿಕೊಳ್ಳೋಣವೆಂದೂ ತಪ್ಪುತ್ತಾ ದುಷ್ಪಥೆಗೆ ಕಾರಣವಾಗುವರು. ಸ್ವಲ್ಪ ಸಂಪಾದನೆ ಇದ್ದರೂ ಅದನ್ನೇ ಮಿತವಾಗಿ ಉಪಯೋಗಿಸಿಕೊಳ್ಳಬೇಕು. ಅವಿವಾಹಿತರು ಹಣವನ್ನು ವೃಥಾ ವೆಚ್ಚಮಾಡುವರು. ಅವರು ಒಂದು ತಿಂಗಳಲ್ಲಿ ಮಾಡುವ ದುಂದುಕರ್ಚು ಸಂಸಾರಿಗೆ ಮೂರು ನಾಲ್ಕು ತಿಂಗ

ಳಿಗೆ ಕೂಡಾ ಸಾಕಾಗುವಂತಿರುತ್ತದೆ.

ಪ್ರಾಯದಲ್ಲೇ ವಿವಾಹಿತರಾಗಿ ಮಕ್ಕಳನ್ನು ಪಡೆಯುತ್ತ ದರಿಂದ ವೃದ್ಧಾಪ್ಯ ಬರುವುದರೊಳಗಾಗಿ ಅವರು ಪ್ರಬುದ್ಧರಾಗಿ ಸ್ವ ಸಾಮರ್ಥ್ಯದಿಂದ ಜೀವಿಸಲು ಶಕ್ತರಾಗುವ್ರದಲ್ಲದೆ ಮುದುಕರಾದ ಮಾತಾಪಿತೃಗಳನ್ನು ಸಂರಕ್ಷಿಸಲು ಅನುಕೂಲವಾಗುತ್ತದೆ.

"ಶರೀರ ವ್ಯಾಯಾಮದಿಂದ".

ವರ್ತಮಾನ ಸಂಗ್ರಹ.

ಒಳದೇಶ.

ತಾರೀಕು 21ರಲ್ಲು ಓಂಕಾರೇಶ್ವರ ದೇವಸ್ಥಾನದ ಹಾಲಿನಲ್ಲಿ ಮಡಿಕೇರಿಯಲ್ಲಿರುವ ಕೊಡವರ ಮೀಟಿಂಗು ಒಂದು ನಡೆಯಿತು. ರಾ. ಬಾ. ಕೊಡಂದೇರ ಕುಟ್ಟೈಯ್ಯನವರು ಅಧ್ಯಕ್ಷರಾಗಿದ್ದರು. ಸುಮಾರು 30 ಜನರು ಸೇರಿದ್ದರು. ಮಡಿಕೇರಿಯಲ್ಲಿಯೂ ಹುತ್ತರಿಯ ಊರೊರ್ಮೆ ಮಾಡಬೇಕೆಂದೂ, ಇದಕ್ಕಾಗಿ ಜನವರಿ 4ರಲ್ಲಿ ಗಾಲ್ಫ್ ಗ್ರೌಂಡಿನ ಬಳಿ ಒಂದು ಔತಣ ಏರ್ಪಡಿಸಬೇಕೆಂದೂ ತೀರ್ಮಾನ ಮಾಡಿರುವರು. ಅಮಲು ಪದಾರ್ಥವನ್ನೂ ಸೇರಿಸುವರೆಂದು ವರ್ತಮಾನ.

ಈಗಿರುವ ಒಬ್ಬ ಕೋಆಪರೇಟಿವ್ ಇನ್‌ಸ್ಪೆಕ್ಟರವರ ಜೊತೆಗೆ ಇನ್ನೊಬ್ಬ ಇನ್‌ಸ್ಪೆಕ್ಟರವರ ಉದ್ಯೋಗವನ್ನು ಆರು ತಿಂಗಳಿಗೆ ಹಂಗಾಮಿಯಾಗಿ ಮಂಜೂರು ಮಾಡಿರುವರು.

ಈಗ ಮೈಸೂರಿಂದ ಪಿರಿಯಾಪಟ್ಟದ ವರೆಗೆ ಬಸ್ಸ್ ಸರ್ವಿಸು ನಡಿಸುತ್ತಿರುವ ಪಾಪಾರಾಮ್ ಸರ್ವಿಸಿನವರಿಗೆ ಮಡಿಕೇರಿಯಿಂದ ಮೈಸೂರಿಗೆ ಬಸ್ಸ್ ನಡಿಸಲು ಲೈಸೆನ್ಸು ಕೊಡುವರೆಂತಲೂ, ಈ ಸರ್ವಿಸು ಜನವರಿ 15ರಿಂದ ಪ್ರಾರಂಭವಾಗುವುದೆಂತಲೂ ಮೈಲಿಗೆ ಒಂದಾಣೆ ಮಾತ್ರ ಚಾರ್ಜು ಇಡುವರೆಂತಲೂ ವರ್ತಮಾನ.

ಪ್ರೊಫೆಸರ್ ಮಾರ್ಕಸ್ ಎಂಬವರು ಕಳೆದವಾರ ಮೂರು ರಾತ್ರಿ ತಮ್ಮ ಇಂದ್ರಜಾಲ ವಿದ್ಯೆಯ ಚಮತ್ಕಾರಗಳನ್ನು ಮಡಿಕೇರಿಯಲ್ಲಿ ತೋರಿಸಿದರು.

ಪೊನ್ನಂಪೇಟೆಯ ಸಮೀಪವಿರುವ ನಲ್ಲೂರು ಗ್ರಾಮದಲ್ಲಿ ಸಿಡುಬು ಜಾಡ್ಯವು ತಲೆದೋರಿದೆ ಎಂತಲೂ, ಅಲ್ಲಿಯ ವೇಕ್ಸಿನೇಟರು ಇದರ ವಿಷಯ ಶ್ರದ್ಧೆ ತೆಗೆದುಕೊಳ್ಳುತ್ತಿರುವರೆಂತಲೂ ತಿಳಿಯಬರುತ್ತದೆ.

ವೀರಾಜಪೇಟೆ, ಗೋಣಿಕೊಪ್ಪಲು ಕಡೆ ಭತ್ತದ ದಾರಣೆಯು ಗಾಡಿ ಒಂದಕ್ಕೆ 100ರಿಂದ 110ರ ವರೆಗೆ ಇದೆ ಎಂತಲೂ ಬೆಳೆ ಕಟಾವಿಗೆ ಒಂದವರೆಲ್ಲರೂ ತ್ವರೆ ಮಾಡಿ ಭತ್ತ ತಯಾರಿಸಿ ಮಾರಲು ಪ್ರಯತ್ನಿಸುವುದು ಒಳ್ಳೇಯದೆಂತಲೂ ಒಂದು ಬಾತ್ಮಿ.

ಹುತ್ತರಿ ಹಬ್ಬವು ಕಳೆದಂದಿನಿಂದ ಮಳೆಯ ಚಿನ್ಹೆಯೇ ಕಾಣದೆ ದೇಶದಲ್ಲಿ ಚಳಿಯೂ ಗಾಳಿಯೂ ಜೋರಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಮತ್ತು ಕೊಡಗಿನ ಬ್ರಾಹ್ಮಣರ ಪರಿಷತ್ತು ಪಾಣೆ ಮಂಗಳೂರು ಬಳಿ ನಂದಾವರದಲ್ಲಿ ತಾ 27ರಲ್ಲಿ ನಡೆಯುವುದು. ಇದಕ್ಕೆ ಕೊಡಗಿನ ವ್ಯವಸಾಯ ಇಲಾಖೆಯ ಡಿಪ್ಯುಟಿ ಡೈರೆಕ್ಟರಾಗಿರುವ ಮಿ. ಕೆ ಯನ್ ಸುಬ್ರಾಯರು ಅಧ್ಯಕ್ಷರಾಗಿರುವರು.

ಸುಮಾರು ಎಂಟು ವರುಷಗಳ ಹಿಂದೆ ಫಾರೆಸ್ಟ್ ಹೆಡ್ ಆಫೀಸಿನಲ್ಲಿ ಮಿ. ಅಬ್ದುಲ್ ರೈಹಿಮಾನ್‌ರವರು ಆಕ್ಟಿಂಗ್ ಮೇನೇಜರಾಗಿದ್ದಾಗ ಒಬ್ಬ ಬೆತ್ತದ ಕಂಟ್ರಾಕ್ಟುದಾರನು ತರ್ಕ ಡುಕೊಟ್ಟ ರುಪಾಯಿಯ ಲೆಕ್ಕದಲ್ಲಿ 1101 ಎಂಬದು 101 ಎಂದು ತಿದ್ದುಪಡಿ ಮಾಡಲ್ಪಟ್ಟದ್ದು ಈಗ ಕಂಡುಬಂದಿರುವುದರಿಂದ ಈ ವಿಷಯ ತನಿಖೆ ಆಗುವ ವರೆಗೆ ರಜೆಯಲ್ಲಿದ್ದ ಅಬ್ದುಲ್ ರೈಹಿಮಾನರವರನ್ನೂ ಕ್ಲಾರ್ಕಾಗಿರುವ ಎ. ಕೆ. ಸುಬ್ರಾಯರನ್ನೂ ಸಸ್‌ಪೆಂಡ್ ಮಾಡಿರುವರು.

ವೀರಾಜಪೇಟೆ ಮುನಿಸೀಫರಾದ ಮಿ. ಕೊಡಪಂಡ ಪಮ್ಮಣ್ಣನವರು ಕೊಡಗಿನ ದೇವಸ್ಥಾನಗಳ ರಿಪೇರಿಗಾಗಿ 7,000 ರುಪಾಯಿ ಕೊಡುತ್ತೇನೆಂತ ಹೇಳಿರುವುದರಿಂದ ಈ ತಾರೀಕು 9ರಲ್ಲು ನಡೆದ ಟೆಂಪಲ್ ಕಮಿಟಿಯ ಮೀಟಿಂಗಿನಲ್ಲು ಅವರಿಗೆ ವಂದನೆಗಳನ್ನು ಅರ್ಪಿಸಿರುವರು.

ಇದೇ ತಾರೀಕು 12ರಲ್ಲು ಶನಿವಾರಸಂತೆ ಸೋಬಳಿ ಹಾರೋಹಳ್ಳಿ ಗ್ರಾಮದಲ್ಲಿ ಒಬ್ಬ ಗಂಡಸು ಮತ್ತು ಹೆಂಗಸು ಜಗಳವಾಡುತ್ತಿದ್ದದ್ದನ್ನು ಬಿಡಿಸಲು ಹೋದ ಜವರ ಶೆಟ್ಟಿ ಎಂಬವನನ್ನು ರಂಗೇಗೌಡ, ಮಾಳಿಗೌಡ ಮತ್ತು ಮಲ್ಲೆಗೌಡ ಎಂಬವರು ಹೊಡೆದು ಪೀಳಿಸಿದರೆಂದೂ ಅವನನ್ನು ಆಸ್ಪತ್ರೆಗೆ ಒಯ್ಯುವಾಗ ದಾರಿಯಲ್ಲಿ ಅವನು ಮೃತನಾದನೆಂದೂ, ಕೇಸು ವಿಚಾರದಲ್ಲಿದೆ ಎಂದೂ ವರ್ತಮಾನ.

ಶನಿವಾರಸಂತೆ ಹೋಬಳಿಗೆ ಸೇರಿದ ಗೋಣಿಮರೂರು ಗ್ರಾಮಕ್ಕೆ ಕಳೆದವಾರ ಆನೆಯ ಹಿಂಡೊಂದು ಬಂದಿದೆಯೆಂದೂ, ಅದು ಒಬ್ಬ ಪ್ರಯಾಣಸ್ಥನನ್ನು ಕೊಂದಿದೆಯೆಂದೂ ವರ್ತಮಾನ.

ತಾರೀಕು 22-12-24ರಲ್ಲು ಏರ್ಪಾಡಾದ "ಕೊಡಗು" ಕಂಪೆನಿಯ ಡೈರೆಕ್ಟರುಗಳ ಮೀಟಿಂಗ್ ಕೋರಮ್ ಇಲ್ಲದ್ದರಿಂದ ಬಾಕಿಯಾಗಿರುತ್ತೆ.

ಇದೇ ತಾರೀಕು 23ನೆ ಮಂಗಳವಾರ ಮತ್ತು ಬರುವ ಜನವರಿ ತಾರೀಕು 2ನೇ ಶುಕ್ರವಾರ ಇವೆರಡು ದಿನಗಳಲ್ಲಿ ಕೋರ್ಟು ಕಚೇರಿಗಳಿಗೆ ಪಬ್ಲಿಕ್ ರಜವಿರುವದರಿಂದ ಮುಚ್ಚಬಹುದಾಗಿ ಕೊಡಗು ಹಜರತ್ ಚೀಫ್ ಕಮೀಷನರ್ ಸಾಹೇಬರವರ ನೋಟಿಫಿಕೇಶನ್ ಬಂದಿರುತ್ತೆ.

ಹಿಂದೂ ದೇಶ.

ಕಾಂಗ್ರೆಸ್ ವಾರದಲ್ಲಿ ಡೆಲಿಗೇಟರುಗಳ ಉಪಯೋಗಕ್ಕಾಗಿ ಜಿಲ್ಲಾ ವಿನಲ್ಲಿ 1200 ಚರಕಗಳಿಂದ ಒಂದು ನೂಲುವ ಹಾಲು ತಯಾರುಮಾಡಲ್ಪಟ್ಟಿವೆ. ಅವರಲ್ಲಿ 150 ಚರಕಗಳು ಇಡಲ್ಪಟ್ಟಿವೆ. ಇಲ್ಲಿ ತಯಾರಾದ ನೂಲನ್ನು ಮಹಾತ್ಮ ಗಾಂಧಿಯವರಿಗೆ ಕೊಡುವರು.

ಕಲ್ಕತ್ತಾದಲ್ಲಿ ಒಂದು ಬೀದಿಯನ್ನು ಹೆಚ್ಚಿಸಲು 44ಲಕ್ಷ ರುಪಾಯಿ ಖರ್ಚು ಹಿಡಿಯುವ ಒಂದು ಕೆಲಸಕ್ಕೆ ಅಲ್ಲಿಯ ಸರಕಾರದವರು ಒಪ್ಪಿಗೆ ಕೊಟ್ಟಿರುವರು

ಅಡ್ಡ ಚುನಾವಣೆಯಲ್ಲಿ ಬಂಗಾಳದ ಇಂಡಿಪೆಂಡೆಂಟ್ ಪಾರ್ಟಿಯ ಮುಂದಾಳಾದ ಮಿ. ಬಿ. ಚಕ್ರವರ್ತಿಯವರು ಬಂಗಾಳ ಲೆಜಿಸ್ಲೇಟಿವ್ ಕೌನ್ಸಿಲಿಗೆ ಮೆಂಬರಾಗಿ ಚುನಾಯಿಸಲ್ಪಟ್ಟಿರುವರು. ಆ ಸ್ಥಳಕ್ಕೆ ನಿಂತ ಬೇರೆ ಮೂರು ಉಮೇದ್ವಾರರು ಹಿಂದಕ್ಕೆ ನಿಂತುಬಿಟ್ಟರು.

ತಾರೀಕು 11ರಲ್ಲು ಕಲ್ಕತ್ತಾ ಟವುನ್ ಹಾಲಿನಲ್ಲಿ ಒಂದು ಮೀಟಿಂಗು ನಡೆಸಲ್ಪಟ್ಟಿತ್ತು ಅಧ್ಯಕ್ಷರಾಗಿದ್ದ ಮಿ. ಸಿ ಆರ್. ದಾಸ್‌ರವರು, ಬಂಗಾಳ ಆರ್ಡಿನೆನ್ಸ್ ವಿಷಯ ಲಾರ್ಡ್ ಲಿಟ್ಟನ್‌ರವರು ಮಾಡಿದ್ದ ಮೂರು ನಾಲ್ಕು ಭಾಷಣಗಳನ್ನು ಓದಿ ತೋರಿಸಿದರು. ಲಾರ್ಡ್ ಲಿಟ್ಟನ್‌ರವರು ಗವರ್ನರಾಗಲು ಯೋಗ್ಯರಲ್ಲ. ಬಂಗಾಳದ ಸ್ವಭಾವ ಗೊತ್ತಿಲ್ಲದವರೆಂದೂ ಅವರು ಹಿಂದೂ ದೇಶದ ವಿಷಯ ತಿಳಿದವರಲ್ಲ. ಇನ್ನೂ ಅನೇಕ ಸಂಗತಿಗಳಿವೆ ಎಂದೂ ಮುಂತಾಗಿ ಹೇಳಿದರು.

ಡಿಸಂಬರು 10ರಲ್ಲು ಕಲ್ಕತ್ತಾದಲ್ಲಿನಡೆದ ಯುರೋಪಿಯನ್ ಅಸೋಸಿಯೇಶನಿನ ಔತಣದಲ್ಲಿ ವೈಸರಾಯರು ಬಂಗಾಳ ಆರ್ಡಿನೆನ್ಸನ್ನು ಜಾರಿಗೆ ತಂದದ್ದು ನ್ಯಾಯವೆಂದು ವಿವರಿಸಿ ಭಾಷಣ ಮಾಡಿದರು.

ಹಿಂದೂ ಮಹಾ ಸಭೆಯ ವಿಶೇಷ ಕಾನ್‌ಫರೆನ್ಸು ಒಂದು ಬೆಳಗಾವಿನಲ್ಲಿ ತಾರೀಕು 27ರಲ್ಲಿ ಪಂಡಿತ ಮದನಮೋಹನ ಮಾಳವೀಯರವರ ಅಧ್ಯಕ್ಷತೆಯಲ್ಲಿ ನಡೆಯುವುದು.

ತಾರೀಕು 27 ಮತ್ತು 28ರಲ್ಲು ಬೆಳಗಾಮಿನಲ್ಲಿ ನಡೆಯುವ ಆಲ್ ಇಂಡಿಯಾ ಬ್ರಾಹ್ಮಣೇತರರ ಕಾನ್‌ಫರೆನ್ಸಿಗೆ ಮಿ ಎ ರಾಮಸ್ವಾಮಿ ಮೊದ್ಲಿಯಾರ್ ಯಂ. ಯಲ್. ಸಿ. ಯವರು ಅಧ್ಯಕ್ಷರಾಗಿರುವರು.

ಕಲ್ಕತ್ತಾ ಮುನಿಸಿಪಾಲಿಟಿಯವರು ನೆರೆಹಿಡಿಯಲ್ಪಟ್ಟಿರುವ ಅವರ ಚೀಫ್ ಎಗ್ಸಿಕ್ಯುಟಿವ್ ಆಫೀಸರಾದ ಮಿ. ಸುಭಾಸ್ ಚಂದ್ರ ಘೋಸ್‌ರವರಿಗೆ 3 ತಿಂಗಳು ಸಂಬಳವಿಲ್ಲದ ರಜೆ ಕೊಟ್ಟಿರುವರು.

ಕೆನ್ಯಾ ಜಿಸ ಮಹಮ್ಮದೀಯರು ತಮ್ಮ ಜಮ್ಮೊಳಗೆ ಯುದ್ಧ ಮಾಡದೆ ರಾಜೀಯಿಂದಲೂ ಶಾಂತಿಯಿಂದಲೂ ರಾಜ್ಯಭಾರ ಮಾಡಿಕೊಳ್ಳುವಂತೆ ಅವರಲ್ಲಿ ಅರಿವೆಮಾಡಿಕೊಳ್ಳಲು ಹಿಂದೂ ದೇಶದಿಂದ ಮಹಮ್ಮದೀಯರ ಒಂದು ಡಿಪ್ಯುಟೇಶನು ಹೆಜ್ಜಾಜಿಗ ತಾರೀಕು 18ರಲ್ಲು ಬೊಂಬಾಯಿಂದ ಹೊರಟು ಹೋಯಿತು.

ಕಲ್ಕತ್ತಾದ ಚೌಧ್ಯವಸ್ಥೆಯುಳ್ಳ ಫೋರ್ಟ್ ಗಾಲ್‌ಸ್ಟರ್ ಜೂಟ್ ಗಿರಣಿಯ ಕೆಲಸಗಾರರಲ್ಲಿ ಕೆಲವರನ್ನು ಡಿಸ್‌ಮಿಸ್ ಮಾಡಿದಕಾರಣ ಸುಮಾರು ಒಂದು ಸಾವಿರ ಕೆಲಸಗಾರರು ಕೆಲಸಕ್ಕೆ ಹೋಗದೆ ಮುಷ್ಕರ ಹಿಡಿದಿರುವರು.

ಪಂಜಾಬು ಯೂನಿವರ್ಸಿಟಿಯ ಕಾನ್ವಕೇಶನ್ ಅಡ್ರೆಸನ್ನೂ ಬೇರೆ ಕೆಲವು ಉಪನ್ಯಾಸಗಳನ್ನೂ ಲಾಹೋರಿನಲ್ಲಿ ಕೊಡುವಂತೆ ಸರ್ ಪಿ. ಸಿ. ಬೋಸ್‌ರವರನ್ನು ಕೇಳಿಕೊಂಡಿರುವುದರಿಂದ ಅವರು ಲಾಹೋರಿಗೆ ಹೋಗಿರುವರು.

ಗುಜರಾತಿನ ನೇಶನಲ್ ಯೂನಿವರ್ಸಿಟಿಯ ಕಾನ್ವಕೇಶನನ್ನು ಮಹಾತ್ಮ ಗಾಂಧಿಯವರು ಜನವರಿ 14ರಲ್ಲು ನಡೆಸುವರು. ಈ ಯೂನಿವರ್ಸಿಟಿಯಿಂದ ಡಿಗ್ರಿಯಾದವರನ್ನು ಸರಕಾರ ಉದ್ಯೋಗಕ್ಕೆ ತೆಗೆದುಕೊಳ್ಳಬೇಕೆಂದು ಅಲ್ಲಿಯ ಮುನಿಸಿಪಾಲಿಟಿಯವರು ಮಾಡಿದ ಗೊತ್ತುವಳಿಯನ್ನು ಸರಕಾರದವರು ಅಂಗೀಕರಿಸಿರುವರಂತೆ.

ವೈಸರಾಯರ ಎಗ್ಸಿಕ್ಯುಟಿವ್ ಕೌನ್ಸಿಲಿನಲ್ಲಿ ಸರ್ ಮಹಮ್ಮದ್ ಶಫಿ ಮತ್ತು ಮಿ. ಚಟರ್ಜಿಯವರ ಬದಲಿಗೆ ಇಂಡಸ್ಟ್ರೀಸ್ ಮತ್ತು ಎಜ್ಯುಕೇಶನ್ ಮೆಂಬರುಗಳಾಗಿ ಸರ್ ಮಹಮ್ಮದ್ ಹಬಿಬುಲ್ಲ ಮತ್ತು ಸರ್ ಬಿ ಯನ್. ಮಿತ್ರರವರು ನೇಮಿಸಲ್ಪಟ್ಟಿರುವರು.

ತಾರೀಕು 9ರಲ್ಲು ಕಲ್ಕತ್ತಾದಲ್ಲು ಇಸ್ಲಾಮಿಯ ಕಾಲೇಜಿನ ಅಡಿಗಲ್ಲನ್ನು ತಾರೀಕು 9ರಲ್ಲು ಹಾಕಿದಾಗ ಲಾರ್ಡ್ ಲಿಟ್ಟನ್‌ರವರು ಬಂಗಾಳದಲ್ಲಿ ಮಂತ್ರಿಯಾಗಿದ್ದ ಮಿ. ಫಜುಲ್ ಹಕ್‌ರವರನ್ನು ಶ್ಲಾಘನೆ ಮಾಡಿದರು.

ಲಾಲಾ ಲಜಪತರಾಯರವರು ಆರೋಗ್ಯವೃದ್ಧಿಗಾಗಿ ಲಾಹೋರಿನಿಂದ ಕರಾಚಿಗೆ ಹೋಗಿರುವರು.

'ಮಹಾರಾಷ್ಟ್ರ' ಪತ್ರಿಕೆಯ ಸಂಪಾದಕರಾದ ಮಿ. ಜಿ. ಎ. ಒಗೇಲ್‌ರವರ ಮೇಲೆ ರಾ. ಸಾ. ಬಾಪೆರಾವ್ ನಿಂಬಾಳ್ಕರ್‌ರವರು 15,000 ರುಪಾಯಿಗೆ ಮಾನ ನಷ್ಟಕ್ಕೆ ದಾವೆ ಮಾಡಿರುವರು.

ಗಯಾದ ದೇವಸ್ಥಾನಗಳಲ್ಲಿ ಗುರುಗಳ ಮತ್ತು ಪೂಜಾರಿಗಳ ಕೆಲಸವು ಬಹಳ ಅತೃಪ್ತಿಕರವಾದುದರಿಂದ ತಾರಕೇಶ್ವರದಂತೆ ಅಲ್ಲಿಯವರೂ ಸತ್ಯಾಗ್ರಹವನ್ನು ಕೈಕೊಳ್ಳಲು ಯೋಚಿಸುತ್ತಿರುವರು.

ಡಿಸಂಬರು ತಾರೀಕು 6ರಲ್ಲು ಲಾಹೋರಿನಲ್ಲಿ ಹಿಂದೂ ಮುಸಲ್ಮಾನರ ಒಗ್ಗಟ್ಟಿನ ವಿಷಯ ಚರ್ಚಿಸಲು ಮುಂದಾಳುಗಳ ಒಂದು ಮೀಟಿಂಗು ನಡೆಯಿತು. ಮಹಾತ್ಮ ಗಾಂಧಿಯವರೂ, ಅಲ್ಲಿಯ ಮುಂದಾಳುಗಳನೇಕರೂ ಹಾಜರಿದ್ದರು. ಮೀಟಿಂಗಿನ ಪ್ರೊಸೀಡಿಂಗ್ಸ್ ಗುಟ್ಟಾಗಿ ಇಡಲ್ಪಟ್ಟಿತು. ನಂತರ ಮಹಾತ್ಮರು ಪಂಜಾಬು ನೇಶನಲ್ ಯೂನಿವರ್ಸಿಟಿಯ ಗ್ರಾಜ್ಯುವೇಟ್‌ಗಳಿಗೆ ಉಪನ್ಯಾಸ ಮಾಡಿದರು.

ವಿದೇಶ.

ಫ್ರಾನ್ಸಿನ ಪ್ರಧಾನ ಮಂತ್ರಿಯಾದ ಯಂ. ಹೇರ್‍ಯಟ್‌ರವರು ಇನ್‌ಫ್ಲುವೆನ್ಸ ಕಾಯಿಲದಿಂದ ಪೀಡಿತರಾಗಿರುವರು. ದೀರ್ಘ ವಿಶ್ರಾಂತಿ ತೆಗೆದುಕೊಳ್ಳತಕ್ಕದ್ದೆಂದು ಡಾಕ್ಟರುಗಳು ಹೇಳಿರುವರು.

ಜರ್ಮನ್ ಪಾರ್ಲಿಮೆಂಟಿನ ಕಳೆದ ಚುನಾವಣೆಯ ಫಲಿತಾಂಶವಾಗಿ ಅಲ್ಲಿ ಮಂತ್ರಿ ಮಂಡಳಿಯು ರಾಜಿನಾಮೆ ಕೊಟ್ಟಿದೆ.

ಆಸ್ಟ್ರೀಯ ರಿಪಬ್ಲಿಕ್ ಸರಕಾರದ ಅಧ್ಯಕ್ಷರಾಗಿ ಪುನಃ ಹೇನಸ್ಕರವರೇ ಚುನಾಯಿಸಲ್ಪಟ್ಟಿರುವರು.

ಮೆಸಪೊಟೋಮಿಯದ ಅಸರ್ ಬಾಸ್ರ ಎಂಬಲ್ಲಿ ದೊಡ್ಡ ಬೆಂಕಿಬಿದ್ದು ಸುಮಾರು ಸಾವಿರ ಜನರಿಗೆ ಮನೆ ಮಠಗಳಿಲ್ಲದೆ ಅಲೆದಾಡುತ್ತಿರುವರು.

ಸೆಯೂಕ್ಯ ಪಾರ್ಟಿಯ ಒಂದು ಔತಣದಲ್ಲಿ ಸಿಂಗಾಪೂರದ ನೇವಲ್ ಬೇಸಿನ ವಿಷಯ ತನಗೆ ಏನೊಂದೂ ತೃಪ್ತಿ ಇಲ್ಲವೆಂದು ಜಪಾನಿನ ಪ್ರಧಾನ ಮಂತ್ರಿ ಕೇಟೋರವರು ಸೂಚಿಸಿದರು.

ಮೆಕ್ಕಾ ಪಟ್ಟಣಕ್ಕೆ ಆಹಾರ ಸಾಮಗ್ರಿಗಳನ್ನು ತೆಗೆದುಕೊಂಡು ಹೋಗಲು ಬಿಡದೆ ಅಲ್ಲಿರುವ ವಾಹಾಬಿಗಳನ್ನು ಉಪವಾಸ ಹಾಕಿ ಅವರನ್ನು ಸೋಲಿಸಬೇಕೆಂದು ಅಲಿ ಅರಸರು ಪ್ರಯತ್ನಿಸುತ್ತಿರುವರು.

ಬ್ರಿಟನ್ನಿನ ಹೊಸ ಪಾರ್ಲಿಮೆಂಟು ತಾರೀಕು 9ರಲ್ಲು ರಾಜರಿಂದ ತೆರೆಯಲ್ಪಟ್ಟಿತು. ಅವರು ಸಮಾರಂಭದ ತಮ್ಮ ಭಾಷಣವನ್ನು ಮಾಡಿದರು.

ಜರ್ಮನಿಯ ರೀಚ್‌ಸ್ಟಾಗಿನ ಹೊಸ ಚುನಾವಣೆಯಲ್ಲಿ ಸೋಶ್ಯಲಿಸ್ಟ್ ಪಂಗಡದವರು ಬಹುಮತ ಪಡೆದಿರುವರು. ಅವರ ಸಂಖ್ಯೆ 119. ನಂತರ ನೇಶನಲಿಸ್ಟ್‌ಗಳು 85.

ಡಿಶಂಬರು 7ರಲ್ಲಿ ಐರ್ಲೆಂಡಿನವರು ಫ್ರೀಸ್ಟೇಟ್ ಸರಕಾರದ ಮೂರನೇ ವರ್ಷಂತಿಯನ್ನು ವಿಜೃಂಭಣೆಯಿಂದ ಆಚರಿಸಿದರು. ಐರಿಷ್ ರಿಪಬ್ಲಿಕಿನ ಪ್ರೆಸಿಡೆಂಟೆನ್ನಿಸಿಕೊಳ್ಳುವ ಡಿವೇಲರವರು ಡಬ್ಲಿನಿನಲ್ಲಿ ಪಬ್ಲಿಕ್ ಮೀಟಿಂಗಿನಲ್ಲಿ ಭಾಷಣ ಮಾಡಿದ್ದಲ್ಲದೆ ಐರ್ಲೆಂಡಿನ ನೇಶನಲ್ ಯೂನಿವರ್ಸಿಟಿಯ ಚೇನ್ಸಲರಾಗಿ ಆ ಸೆನೇಟ್ ಮೀಟಿಂಗಿನ ಚೇರ್‌ಮ್ಯಾನರಾಗಿದ್ದರು.

ಕರ್ನಾಟಕದ ಏಕೀಕರಣವು.

ಕರ್ನಾಟಕದೇಶದಲ್ಲಿ ಅನೇಕ ತುಂಡುಗಳಾಗಿ ಅವು ಬೇರೆ ಬೇರೆ ಆಧಿಪತ್ಯಕ್ಕೆ ಆಧೀನವಾದ್ದರಿಂದ ಕರ್ನಾಟಕದವರಿಗೆ ಬಹಳೇ ಆತಂಕವಾಗಿರುತ್ತದೆಂಬದನ್ನು ಬಹುಶಃ ಎಲ್ಲರೂ ಬಲ್ಲರು. ಈ ಆತಂಕವು ದೂರಾಗಬೇಕಾದರೆ ಕರ್ನಾಟಕದ ಬೇರೆ ಬೇರೆ ಭಾಗಗಳನ್ನು ಒಂದೇ ಆಧಿಪತ್ಯಕ್ಕೆ ಒಳಗಾಗುವಂತೆ ಮಾಡುವದು ಅವಶ್ಯವಿದೆ.

ಬಿಹಾರೀ ಜನರು ಎರಡನೇ ಪ್ರಾಂತಕ್ಕೆ ಜೋಡಿಸಿದ ತಮ್ಮ ಪ್ರಾಂತವನ್ನು ಬೇರೆಯಾಗಿ ಮಾಡಿಕೊಂಡು ಅನೇಕ ದಿವಸಗಳಾದವು. ಉತ್ಕಳದ ಜನರು ಇನ್ನು ಸ್ವಲ್ಪೇ ದಿವಸಗಳಲ್ಲಿ ಸ್ವತಂತ್ರ ಪ್ರಾಂತವನ್ನು ದೊರಕಿಸುವರು. ಅವರ ಪ್ರಾಂತವನ್ನು ಸ್ವತಂತ್ರವಾಗಿ ಮಾಡುವದಕ್ಕಾಗಿ ಒಂದು ಕಮಿಶನ್ ನೇಮಿಸಲ್ಪಟ್ಟಿದೆಯಷ್ಟೆ. ನಮ್ಮ ನೆರೆಹೊರೆಯವರಾದ ಆಂಧ್ರರು ಕೂ 1911ನೇ ಇಸವಿಯಿಂದ ತಮಗೆ ಸ್ವತಂತ್ರ ಪ್ರಾಂತವನ್ನು ದೊರಕಿಸುವದಕ್ಕಾಗಿ ಪ್ರಯತ್ನಮಾಡುತ್ತ, ತಮ್ಮ ಪ್ರಾಂತವನ್ನು ಮದ್ರಾಸಿನಿಂದ ಬೇರ್ಪಡಿಸಿ ಈಗ್ಗೆ ಹಿಂದುಸ್ಥಾನದಲ್ಲಿ ಹೆಸರಾಗಿರುತ್ತಾರೆ. ಕರ್ನಾಟಕವು ಈಗ್ಗೆ ಹಿಂದುಸ್ಥಾನದಲ್ಲಿ ಹೆಸರುವಾಸಿಯಾಗಿದ್ದರೂ, ಇಲ್ಲಿಯ ಜನರಲ್ಲಿ ಸಾಕಷ್ಟು ಜಾಗ್ರತೆಯಿಲ್ಲವೆಂಬದು ನಿರ್ವಿವಾದವಾಗಿದೆ. ಇದಕ್ಕೆ ಕಾರಣವೇನಂದರೆ ಕರ್ನಾಟಕವು ಒಂದೇ ನಾಡು; ಕನ್ನಡವನ್ನಾಡುವ ಜನರು ಯಾವ ಭಾಗದಲ್ಲಿದ್ದರೂ ಅವರು ಒಂದೇ ನಾಡಿನವರು; ಎಂಬ ಕಲ್ಪನೆಯೇ ಇಷ್ಟು ಕನ್ನಡಿಗರಲ್ಲಿ

ಬಾರದೇ ಇರುವದು. ಈ ಸದಭಿಮಾನದ ನವಜ್ಯೋತಿಯು ಪ್ರತಿಯೊಬ್ಬ ಕನ್ನಡಿಗನ ಹೃತ್ಪಟಲದಲ್ಲಿ ಸೇರಿಕೊಳ್ಳುವಂತೆಮಾಡಿ ಅತ್ತಿತ್ತ ಒಡೆದು ಹಂಚಿಹೋದ ಕರ್ನಾಟಕದ ಭಾಗಗಳೆಲ್ಲ ಒಂದೇ ಕಡೆಗೆ ಸೇರಿಕೊಳ್ಳುವಂತೆ ನಾವೀಗ ಪ್ರಯತ್ನಮಾಡತಕ್ಕದ್ದು.

ಈ ಭಾಷಾನ್ವಯ ಪ್ರಾಂತರಚನೆಯ ಬಗ್ಗೆ ಸರಕಾರದ ಧೋರಣವು ವಿರುದ್ಧವಾಗಿಲ್ಲ. ಅವರು ಈ ಭಾಷಾನ್ವಯ ಪ್ರಾಂತ ರಚನೆಯ ಭಾರವನ್ನು ಆಯಾ ಪ್ರಾಂತದವರ ಮೇಲೆಯೇ ಹೊರಿಸಿರುವರು. ನಾಮದಾರ ಶರ್ಮಾ ಇವರು ಮೊಂಟೆಗೂ ಚೆಮ್ಸಫರ್ಡರವರ ಸುಧಾರಣ ಕಾಯದೆಯ ಪೂರ್ವದಲ್ಲಿ, ಹಳೇ ಇಂಪೀರಿಯಲ್ ಕೌನ್ಸಿಲದೊಳಗೆ ಭಾಷಾನ್ವಯ ಪ್ರಾಂತರಚನೆಯ ಬಗ್ಗೆ ಒಂದು ಠರಾವನ್ನು ತಂದಿದ್ದರು. ಆಗ್ಗೆ ಮೊಂಟೆಗೂ ಸಾಹೇಬರು ಸಹ ಆ ಕೌನ್ಸಿಲದ ಸಭೆಗೆ ದಯಮಾಡಿಸಿದ್ದರು. ಮೊಂಟೆಗೂ ಸಾಹೇಬರು ಹಿಂದುಸ್ಥಾನಕ್ಕೆ ಬಂದಾಗ್ಗೆ ಭಾಷಾನ್ವಯ ಪ್ರಾಂತರಚನೆಯ ಬಗ್ಗೆ ಮತ್ತೆ ಚಳವಳಿಯು ಆರಂಭವಾಗಿ ಅನೇಕ ಪ್ರಾಂತಗಳು ಮೊಂಟೆಗೂ ಸಾಹೇಬರ ಮುಂದೆ ತಮ್ಮ ತಮ್ಮ ಬೇಡಿಕೆಗಳನ್ನು ಮಂಡಿಸಿದರು. ಅದರಂತೆ ಕರ್ನಾಟಕವು ಸಹ ತನ್ನ ಬೇಡಿಕೆಯನ್ನು ಮಂಡಿಸಿತ್ತು. ಇದನ್ನೆಲ್ಲಾ ನಿರೀಕ್ಷಿಸಿ ಮೊಂಟೆಗೂ ಸಾಹೇಬರು ತಮ್ಮ ಸುಧಾರಣಾ ಕಾಯದೆಯ ರಿಪೋರ್ಟಿನಲ್ಲಿ ಭಾಷಾನ್ವಯ ಪ್ರಾಂತ ರಚನೆಯ ಬಗ್ಗೆ ತಮ್ಮ ಅನುಕೂಲಮತವನ್ನು ಪ್ರಕಟಿಸಿದರು.

ಮುಂದೆ ಕರ್ನಾಟಕದ ಶ್ರೀ ಲಕ್ಷ್ಮಿಯವರೂ, ಆಂಧ್ರದ ಶ್ರೀ. ವೆಂಕಟಪತಿ ರಾಜಲು ಅವರೂ ಲೆಜಿಸ್ಲೇಟಿವ್ಹ ಅಸೆಂಬ್ಲಿಯಲ್ಲಿ ಭಾಷಾನ್ವಯ ಪ್ರಾಂತರಚನೆಯ ಬಗ್ಗೆ ಠರಾವನ್ನು ತಂದಾಗ್ಗೆ, ಸರಕಾರದವರು ಪ್ರಾಂತಿಕ ಕೌನ್ಸಿಲುಗಳಿಂದ ಇದು ಸೂಚಿಸಲ್ಪಟ್ಟರೆ, ತಾವು ಆ ಬಗ್ಗೆ ಯೋಗ್ಯವಿಚಾರ ಮಾಡುವೆವೆಂಬದಾಗಿ ಸಹಾನುಭೂತಿಯಿಂದ ಹೇಳಿದ್ದಾರೆ. ಆದುದರಿಂದ ಈಗ್ಗೆ ಕರ್ನಾಟಕ ಪ್ರಾಂತದವರು ತಮಗೆ ಸ್ವತಂತ್ರವಾದ ಪ್ರಾಂತವು ಬೇಕಾಗಿದ್ದರೆ, ತಾವೇ ಮೊದಲು ಸಾರ್ವಜನಿಕ ರೀತಿಯಿಂದ ಚಳವಳಿಮಾಡಿ ಕರ್ನಾಟಕದ ಕೌನ್ಸಿಲರ ಮುಖಾಂತರವಾಗಿ ಮುಂಬಯಿ, ಮದ್ರಾಸ, ಕೊಡಗು ಮೊದಲಾದವುಗಳ ಕೌನ್ಸಿಲುಗಳಲ್ಲಿ ಈ ಬಗ್ಗೆ ಠರಾವುಗಳನ್ನು ಪಾಸು ಮಾಡಿಕೊಳ್ಳತಕ್ಕದ್ದು. ಈ ಬಗ್ಗೆ ವಿಚಾರಮಾಡಿ ಕರ್ನಾಟಕ ಪ್ರಾಂತಕ್ಕೆ ಸ್ವತಂತ್ರವಾದ ಆಧಿಪತ್ಯವನ್ನು ದೊರಕಿಸಲು ಒಂದೇಸವನೆ ಪ್ರಯತ್ನಮಾಡಲು ಕರ್ನಾಟಕ ಏಕೀಕರಣ ಸಭಾ ವೆಂಬದೊಂದು ಸಭೆಯನ್ನು ಸ್ಥಾಪಿಸುವದಕ್ಕಾಗಿ ಎಲ್ಲ ಕನ್ನಡಿಗರೂ ಒಂದೇಕಡೆಗೆ ಕಲೆಯುವುದು ಅಗತ್ಯವಾಗಿದೆ.

ಕರ್ನಾಟಕಕ್ಕೆ ಸ್ವತಂತ್ರವಾದ ಕಾಂಗ್ರೆಸ್ ಸರ್ಕಲ್ ದೊರೆಯುವ ಮೊದಲು ಹಿಂದುಸ್ಥಾನದಲ್ಲಿ ಕರ್ನಾಟಕಕ್ಕೆ ಯಾವ ಬಗೆಯ ಮಾನವೂ ಇದ್ದಿಲ್ಲ. ಅಷ್ಟೇಕೆ? ಕರ್ನಾಟಕದ ಹೆಸರು ಸಹ ಎಷ್ಟೋ ಜನರಿಗೆ ಗೊತ್ತಿದ್ದಿಲ್ಲ. ಆದರೆ ಈಗ್ಗೆ ಸ್ವತಂತ್ರವಾದ ಕಾಂಗ್ರೆಸ ಸರ್ಕಲ್ಲ ದೊರೆತದ್ದರಿಂದ ಕರ್ನಾಟಕದಲ್ಲಿ ಯಾವ ಬಗೆಯ ಜಾಗ್ರತೆಯಾಗಿದೆ, ಕರ್ನಾಟಕದ ಜನರಿಗೆ ಸ್ವತಂತ್ರರೀತಿಯಿಂದ ಹಿಂದುಸ್ಥಾನದ ಸೇವೆಯನ್ನು ಮಾಡಲು ಯಾವ ಬಗೆಯ ಅಸ್ಪದ ದೊರತಿದೆ, ಇವೇ ಮೊದಲಾದ ಸಂಗತಿಗಳನ್ನು ಲಕ್ಷ್ಯಕ್ಕೆ ತರಬೇಕು. ಮೊದಲು ಕರ್ನಾಟಕದ ಜನರು ಮುಂಬಯಿ, ಇಲ್ಲವೆ ಮದ್ರಾಸ ಪ್ರಾಂತಗಳ ಕಾಂಗ್ರೇಸ ಕಮಿಟಿಗಳಲ್ಲಿ ಸೇರಿಕೊಂಡದ್ದರಿಂದ ಇಲ್ಲಿಯ ಜನರಿಗೆ ಜವಾಬ್ದಾರಿಯ ಕೆಲಸಗಳನ್ನು ಮಾಡಲು ಆಸ್ಪದ ದೊರೆಯುತ್ತಿರಲಿಲ್ಲ. ಆದರೆ ಕಾಂಗ್ರೇಸ ಸರ್ಕಲ್ಲ ದೊರೆತು ನಾಲ್ಕು ವರ್ಷಗಳಾಗುತ್ತಲೇ ಎಂದೂ ಕರ್ನಾಟಕಕ್ಕೆ ಬಾರದ ಆ ಕಾಂಗ್ರೆಸ್ಸೇ ಈ ಕರ್ನಾಟಕಕ್ಕೆ ಒಂದು ಬಿಟ್ಟಿದೆ. ಇದೊಂದೇ ಸಂಗತಿಯಿಂದ ಸ್ವತಂತ್ರವಾಗಿ ಪ್ರಾಂತವು ದೊರೆತರೆ ಎಂತೆಂಥ ಲಾಭಗಳಾಗುವವೆಂಬದನ್ನು ತಿಳಿದುಕೊಳ್ಳಬಹುದಾಗಿದೆ. ಕರ್ನಾಟಕಕ್ಕೆ ಕಾಂಗ್ರೆಸನ್ನು ಕರೆಯಬೇಕೆಂದವರ ಮೊದಲು "ನಿಮ್ಮಲ್ಲಿ ಏನು ಅಲಹಾಬಾದ, ಲಖನೌ, ಮದ್ರಾಸ, ಕಲಕತ್ತಾ, ಮುಂಬಯಿ ಮೊದಲಾದಂಥ ಪಟ್ಟಣಗಳಿವೆಯೆ? ನಿಮ್ಮಲ್ಲಿ ಏನು ನೆಹರು, ದಾಸ, ಗಾಂಧಿ ಇವರಂಥ ಮುಂದಾಳುಗಳಿರುವರೇ? ಕಾಂಗ್ರೇಸನ್ನು ನಿಮ್ಮಲ್ಲಿ ಕರೆದರೆ ಅದು ಯಶಸ್ವಿಯಾಗುವಂತೆ ಕೆಲಸಮಾಡುವಂಥ ವೀರಪುರುಷರು ನಿಮ್ಮಲ್ಲಿರುವರೇ? ಸುಮ್ಮನೆ ಕರ್ನಾಟಕಕ್ಕೆ ಕಾಂಗ್ರೇಸು ಬೇಕೆಂದು ಕೂಗಿಕೊಂಡರೇನಾಗುವದೆಂದು" ನಮ್ಮನ್ನು ಅನ್ಯ ಪ್ರಾಂತದವರು ಹೀಯಾಳಿಸುತ್ತಿದ್ದರು. ಆದರೆ ಈಗ್ಗೆ ಅದೇ ಕಾಂಗ್ರೇಸ, ಇದೇ ಕರ್ನಾಟಕದಲ್ಲಿ, ಇದೇ ನಮ್ಮ ಬೆಳಗಾವಿಯಲ್ಲಿ, ನಾಳೆ ಪ್ರತ್ಯಕ್ಷವಾಗಿ ಜರುಗುವದನ್ನು ಕಣ್ಣಾರೆಕಾಣುವ ಸುದೈವವು ಬಂದೊದಗಿದ್ದು ಯಾತರಿಂದ? ಕರ್ನಾಟಕಕ್ಕೆ ಸ್ವತಂತ್ರವಾಗಿ ಕಾಂಗ್ರೇಸ ಸರ್ಕಲ್ಲು ದೊರೆತದ್ದರಿಂದಲ್ಲವೆ?

ಇದೇ ಬಗೆಯಾಗಿ ಕರ್ನಾಟಕದಲ್ಲಿ ಸ್ವತಂತ್ರವಾದ ಪ್ರಾಂತಿಕ ಸರಕಾರವು ದೊರೆತರೆ ಕರ್ನಾಟಕಕ್ಕೆ ಸ್ವತಂತ್ರವಾದ ವಿಶ್ವವಿದ್ಯಾಲಯವಾಗುವದು, ಸ್ವತಂತ್ರವಾದ ಹೈಕೋರ್ಟ ದೊರೆಯುವದು, ಸ್ವತಂತ್ರವಾದ ಕೌನ್ಸಿಲು ದೊರೆಯುವದು, ಸ್ವತಂತ್ರವಾದ ಬಂದರವೂ ಸಹ ದೊರೆಯುವದು. ಬರಗಾಲದಿಂದ ಬಳಲುವ ಜಿಲ್ಹೆಗಳಲ್ಲಿ ಸಕ್ಕರದ ಆಣೆಕಟ್ಟಿನಂತೆ (ಬ್ಯಾರೇಜ) ಇಲ್ಲಿಯೂ ದೊಡ್ಡ ದೊಡ್ಡ ಆಣೆಕಟ್ಟುಗಳನ್ನು ಕಟ್ಟಿಸಿ ಕಾಲುವೆಗಳನ್ನು ನಿರ್ಮಿಸಲು ಅನುಕೂಲವಾಗುವದು. ಮುಂಬಯಿ ಮದ್ರಾಸ ಆಧಿಪತ್ಯಗಳ ಕರ್ನಾಟಕದ ಕೆಲಕೆಲವು ಪ್ರದೇಶಗಳಲ್ಲಿ ಮೇಲಿಂದಮೇಲೆ ಬರವು ಬೀಳುತ್ತಿದ್ದರೂ ಕೂಡ—ಕಾಲುವೆಗಳನ್ನು ಕಡಿಸಲು ಈ ಪ್ರದೇಶಗಳಲ್ಲಿ ನೈಸರ್ಗಿಕ ಸೌಕರ್ಯಗಳು ಹೇರಳವಾಗಿದ್ದರೂ ಕೂಡ—ಮುಂಬಯಿ ಮದ್ರಾಸಗಳಲ್ಲಿಯ ಸರಕಾರಗಳು ಕರ್ನಾಟಕದ ಭಾಗಗಳಲ್ಲಿ ನೀರಿನ ಕಾಲುವೆಗಳನ್ನು ನಿರ್ಮಿಸಿ ದುಷ್ಕಾಳದ ಕಷ್ಟಮಯ ಪ್ರಸಂಗಗಳನ್ನು ದೂರಮಾಡಲು ಪ್ರಯತ್ನಿಸಿಲ್ಲ. ಇದಕ್ಕೆ ಕಾರಣವೇನಂದರೆ ಎರಡೂ ಆಧಿಪತ್ಯಗಳಲ್ಲಿ ಕರ್ನಾಟಕಸ್ಥರು ಅಲ್ಪಸಂಖ್ಯಾಕರಾಗಿದ್ದು, ಅವರ ಜಿಲ್ಹೆಗಳು ಮುಂಬಯಿ ಮದ್ರಾಸ ಪ್ರಾಂತಗಳ ಒಂದೊಂದು ಮೂಲೆಗಳಲ್ಲಿದ್ದದ್ದರಿಂದ, ಆ ಸರಕಾರಗಳ ಲಕ್ಷ್ಯವು ಇತ್ತಕಡೆಗೆ ಹೋಗುವದೇ ಇಲ್ಲ. ಇದೇ ಪ್ರಕಾರವಾಗಿ ಕೊಯಿಮುತ್ತೂರ, ಶೇಲಮ್ಮ, ಅನಂತಪೂರ, ನೀಲಗಿರಿ ಸತಾರಾ ಸೋಲ್ಲಾಪೂರ ಜಿಲ್ಹೆಗಳಲ್ಲಿ ಕನ್ನಡ ಮಾತನಾಡುವ ಜನರನೇಕರು ವಾಸಮಾಡಿಕೊಂಡಿದ್ದರೂ, ಅಲ್ಲಿ ಕನ್ನಡ ಶಾಲೆಗಳಿಲ್ಲ, ಕನ್ನಡ ದಪ್ತರಗಳಿಲ್ಲ. ಅಲ್ಲಿಯ ಕೋರ್ಟ ಭಾಷೆಗಳಲ್ಲಿ ಸಹ ಕನ್ನಡಕ್ಕೆ ಆದರವಿಲ್ಲ. ಇವಕ್ಕೆಲ್ಲ ಕಾರಣವೇನಂದರೆ—ಪುನಃ ಅದೇ, ಅಂದರೆ ಅಖಂಡ ಕರ್ನಾಟಕಕ್ಕೆ ಸ್ವತಂತ್ರವಾದ ಒಂದೇ ಆಧಿಪತ್ಯವು ಇಲ್ಲದಿರುವದು. ಆದ್ದರಿಂದ ಎಲ್ಲ ಕನ್ನಡಿಗರು ಅಗತ್ಯವಾಗಿ ಈ ಕಾರ್ಯದಲ್ಲಿ ಭಾಗ ತೆಗದುಕೊಳ್ಳತಕ್ಕದ್ದು. ಅವರು ಗಾಂಧೀ ಪಕ್ಷದವರಿರಲಿ; ಸ್ವರಾಜ್ಯ ಪಕ್ಷದವರಿರಲಿ; ಸ್ವತಂತ್ರ ಮತದವರಿರಲಿ, ಬ್ರಾಹ್ಮಣರಿರಲಿ; ಬ್ರಾಹ್ಮಣೇತರರಿರಲಿ; ಮುಸಲ್ಮಾನರಿರಲಿ, ಕ್ರಿಶ್ಚನ್ನರಿರಲಿ, ಅಥವಾ ಸರಕಾರಿ ನೌಕರರೇ ಇರಲಿ, ಎಲ್ಲರಿಗೂ ಇಲ್ಲಿ ಕೆಲಸ ಮಾಡಲು ತುಂಬಾ ಅವಕಾಶವಿದೆ. ಆದ್ದರಿಂದ ಪ್ರತಿಯೊಬ್ಬ ಕನ್ನಡಿಗನು ಯಾವದೇ ಮತದವನಿದ್ದರೂ, ಈ ಕಾರ್ಯದಲ್ಲಿ ಭಾಗ ತೆಗದುಕೊಂಡು, ಈ ಕಾರ್ಯವನ್ನು ಯಶಸ್ವಿಯಾಗಿ ಮಾಡತಕ್ಕದೆಂದು ಪ್ರಾರ್ಥನೆಯದೆ. ಈಗ್ಗೆ ಈ ಕಾರ್ಯವು ಅನುಕೂಲವಾಗುವಂತಹ ಕಾಲವೂ ಒಂದೊದಗಿದೆ. ಯಾಕಂದರೆ ಕಾಂಗ್ರೆಸ ಭಾಷಾನ್ವಯ ಪ್ರಾಂತರಚನೆಯನ್ನು ಸ್ವತಃ ಅವಲಿಸಲ್ಲ ತಂದು ಈ ತತ್ವಕ್ಕೆ ತನ್ನ ಸಂಪೂರ್ಣ ಒಪ್ಪಿಗೆಯನ್ನಿತ್ತಿದೆ. ಸರಕಾರವೂ ತನ್ನ ಸಹಾನುಭೂತಿಯನ್ನು ತೋರಿಸಿದೆ. ಹಿಂದುಸ್ಥಾನದಲ್ಲಿಯ ಇತರ ಪ್ರಾಂತದವರು ಇದಕ್ಕೆ ಅನುಕೂಲ ಮತದವರಾಗಿದ್ದಾರೆ. ಕರ್ನಾಟಕದವರಂತೂ—ಮುಂಬಯಿ ಮದ್ರಾಸ, ಕೊಡಗು ಮೊದಲಾದ ಭಾಗಗಳು ಸಹ—ಸ್ವತಂತ್ರವಾದ ಒಂದೇ ಆಧಿಪತ್ಯದಲ್ಲಿ ಸೇರಿ, ಕರ್ನಾಟಕಕ್ಕೆ ಸ್ವತಂತ್ರ ಪ್ರಾಂತವನ್ನು ನಿರ್ಮಿಸುವದಕ್ಕಾಗಿ ಅತಿಶಯ ಆತುರಪಡುತ್ತಲಿದ್ದಾರೆ. ಆದ್ದರಿಂದಲೇ ಬೇರಬೇರೆ ಭಾಗದ ಎಲ್ಲ ಕರ್ನಾಟಕಸ್ಥರು ಒಂದೇಕಡೆಗೆ ಸೇರಿ, ಸುಸಂಘಟಿತರೀತಿಯಿಂದ ಈ ಕಾರ್ಯವನ್ನು ಹೇಗೆ ನೆರವೇರಿಸಬೇಕೆಂಬದನ್ನು ವಿಚಾರಿಸುವದು ಅತಿ ಅಗತ್ಯವಾಗಿದೆ.

ಆದುದರಿಂದಲೇ ಕಳೆದ ನವಂಬರ 10ನೇ ತಾರೀಕಿನಲ್ಲಿಯೂ, ಪುನಃ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ 29ನೇ ತಾರೀಕಿನಲ್ಲಿಯೂ ಈ ವಿಷಯವನ್ನು ಕುರಿತು ವಿಚಾರಮಾಡುವದಕ್ಕಾಗಿ, ಧಾರವಾಡದ ಕರ್ನಾಟಕ ಸಭೆಯ ಜನರ ಸಭೆ ಕೂಡಿ, ಡಿಸೆಂಬರ 25ನೇ ತಾರೀಕಿನ ದಿವಸ ಬೆಳಗಾವಿಯಲ್ಲಿ ಕರ್ನಾಟಕ ಏಕೀಕರಣ ಸಭೆಯನ್ನು ಸ್ಥಾಪಿಸುವದಕ್ಕಾಗಿ ಎಲ್ಲ ಕರ್ನಾಟಕಸ್ಥರ ಸಭೆ ಕರೆಯಬೇಕೆಂದೂ, ಆ ಬಗ್ಗೆ ವ್ಯವಸ್ಥೆ ಮಾಡಲು ಬಾಗಲಕೋಟೆಯ ಶ್ರೀಯುತ ಶ್ರೀನಿವಾಸ ರಾಜೇರಾವ ಮಂಗಳವೇಢೆ ಮತ್ತು ಧಾರವಾಡದ ಶ್ರೀ ಶಂಕರ ಬಾಳಕೃಷ್ಣ ಜೋಶಿ, ಇವರೀರ್ವರೂ ತಾತ್ಪೂರ್ತಿಕ ಸೆಕ್ರೆಟರಿಗಳಾಗಿರಬೇಕೆಂದೂ ನಿರ್ಣಯವಾಯಿತು. ಪ್ರತಿಯೊಬ್ಬ ಕನ್ನಡಿಗನು 25ನೇ ತಾರೀಕಿನ ದಿವಸ ಈ ಸಭೆಗೆ ಬರಬೇಕಾಗಿ ವಿನಯ ಪ್ರಾರ್ಥನೆ ಅದೆ. ಬೆಳಗಾಂವಿಯ ಸಭೆಯ ಕಾಲವೂ ಸ್ಥಳವೂ ಹಿಂದನಿಂದ ಪ್ರಸಿದ್ಧಿಸಲ್ಪಡುವವು. ಇತಿ

ಕನ್ನಡಿಗರ ಸೇವಕರಾದ,

1. ರಾಘವೇಂದ್ರರಾವ, ಕಡಪಾ, ಬಿ. ಎ., ವಕೀಲ, ಧಾರವಾಡ.
2. ಗುರುರಾವ ನಿಡೇನೂರ ಬಿ ಎ, ಎಲ್.ಎಲ್.ಬಿ ,, ,,
3. ವೆಂಕಟರಾವ ಆಲೂರ ಸಂಪಾದಕ ಜಯಕರ್ನಾಟಕ ,,
4. ಕೃಷ್ಣರಾವ ಮುದುವೇಡಕರ ಸಂ ಕರ್ನಾಟಕವೃತ್ತ ,,
5. ರಾಮರಾವ ನರಗುಂದಕರ ಬಿ.ಎ., ಎಲ್.ಎಲ್.ಬಿ, ವಕೀಲ, ಧಾರವಾಡ.
6. ನಾರಾಯಣರಾವ ದೇಶಪಾಂಡೆ, ಬಿ.ಎ., ಎಲ್. ಎಲ್. ಬಿ. ವಕೀಲ, ಧಾರವಾಡ.
7. ನಾರಾಯಣ ಶ್ರೀನಿವಾಸ ರಾಜಪುರೋಹಿತ ,,
8. ಟಿ ಟಿ ಶರ್ಮಾ ಬೆಂಗಳೂರ.
9. ಪಿ. ಆರ್. ರಾಮಯ್ಯಾ ,,
10. ಶಂಕರ ಬಾಳಕೃಷ್ಣ ಜೋಶಿ, ಸಾಧನಕೇರಿ, ಧಾರವಾಡ } ಕಾರ್ಯದರ್ಶಿಗಳು.
11. ಶ್ರೀನಿವಾಸ ರಾಜೇರಾವ ಮಂಗಳವೇಢೆ, ಬಾಗಲಕೋಟೆ. } ಕಾರ್ಯದರ್ಶಿಗಳು.

ಕರ್ನಾಟಕಾಯುರ್ವೇದ ಸಮ್ಮೇಳನ ಬೆಳಗಾಂವಿ.

ಕರ್ನಾಟಕಾಯುರ್ವೇದ ಸಮ್ಮೇಳನದ ಮೊದಲನೇ ಅಧಿವೇಶನವು ಬೆಳಗಾಂವಿಯಲ್ಲಿ ಈ ಡಿಸೆಂಬರ್ ತಾರೀಕು 24, 25, 26ರಲ್ಲು ನೆರವೇರುವದಾಗಿ ಗೊತ್ತಾಗಿದೆ. ಈ ಮೊದಲನೇ ಸಮಾವೇಶಕ್ಕೆ ಮದ್ರಾಸ್ ಗವರ್ನಮೆಂಟ್ ಆಯುರ್ವೇದ ಕಾಲೇಜಿನ ಪ್ರಿನ್ಸಿಪಲರಾದ ಶ್ರೀಯುತ ಕ್ಯಾಪ್ಟನ್ ಜಿ ಶ್ರೀನಿವಾಸಮೂರ್ತಿ ಬಿ ಎ, ಬಿ ಎಲ್, ಯಂ. ಬಿ ಸಿ ಯಂ. ರವರು ಅಧ್ಯಕ್ಷರಾಗಿ ಬರಲು ಅಂಗೀಕರಿಸಿರುವದಂತೂ ವಿಶೇಷ ಶ್ಲಾಘನೀಯವಾಗಿದೆ. ಸರಿಯಾದ ನಾಯಕನ ನೇತೃತ್ವದಲ್ಲಿ ಹಡಗು ಸುರಕ್ಷಿತವಾಗಿ ಉದ್ದಿಷ್ಟವಾದ ಸ್ಥಳಕ್ಕೆ ಮುಟ್ಟುವಂತೆ ಇಂಥಾ ಕಾರ್ಯವೂ ಇಂಥಾ ಮಹಾತ್ಮರ ನೇತೃತ್ವದಲ್ಲಿ ಸಫಲಿತವಾಗಿ ನಡೆಯಲು ಸಂಶಯವಿಲ್ಲ. ಕರ್ನಾಟಕ ವೈದ್ಯರು ಮುಂದೆ ನಡೆಯಬೇಕಾದ ವಿಚಾರಗಳನ್ನೆಲ್ಲಾ ಈ ಸಮಯದಲ್ಲಿ ಗೊತ್ತುಮಾಡಿಕೊಳ್ಳುವದು ಯುಕ್ತವಾಗಿದೆ. ನಮ್ಮ ಕರ್ನಾಟಕ ದೇಶದ ವೈದ್ಯರು ಖಂಡಿತವಾಗಿಯೂ ಈ ಸಮಯವನ್ನು ಕಳೆದುಕೊಳ್ಳಬಾರದು. ಎಷ್ಟು ತೊಂದರೆಗಳಿದ್ದರೂ ಲಕ್ಷಿಸದೆ ತಮ್ಮ ತಮ್ಮ ಶಾಸ್ತ್ರಾಭಿವೃದ್ಧಿಯ ದೃಷ್ಟಿಯಿಂದ ಬೆಳಗಾಂವಿಗೆ ಬರಬೇಕು. ಕಾಂಗ್ರೆಸ್ಸಿನ ಕಾರ್ಯಕ್ಕೂ ಆಯುರ್ವೇದ ಸಮ್ಮೇಳನದ ಕಾರ್ಯಕ್ಕೂ ಯಾವ ಸಂಬಂಧವೂ ಇಲ್ಲವೆಂದು ಹಿಂದೆಯೇ ಪ್ರಕಟಿಸಿದ್ದೇವೆ. ಈಗಲೂ ಕೆಲವರು ಇಲ್ಲದ ಶಂಕೆಯನ್ನು ವಹಿಸಿರುವಂತೆ ಕೇಳುತ್ತೇವೆ. ಈ ಸಮ್ಮೇಳನವು ಕೇವಲ ವೈದ್ಯಾಭಿವೃದ್ಧಿ ದೃಷ್ಟಿಯಿಂದ ನಡೆಯುವದರಿಂದ ಇಲ್ಲದ ಈ ತರದ ಊಹಗ ಕಾರಣವಿಲ್ಲವು. ಈ ಸಮ್ಮೇಳನದ ರಿಸೆಪ್ಶನ್ ಕಮಿಟಿ ಪ್ರೆಸಿಡೆಂಟರಾದ ಡಾ. ಹಚ್. ವಿ. ಸವಣೂರ ಎಲ್ ಯಂ ಯಸ್ ರವರಂತೂ ಈ ಸಮ್ಮೇಳನವನ್ನು ನಡಿಸಲು ಮಾಡಿರುವ ಪ್ರಯತ್ನವು ಅನನ್ಯ ಸಾಧಾರಣವಾದುದು. ನಮ್ಮ ವೈದ್ಯಮಂಡಲದಲ್ಲಿ ಡಾ. ಸವಣೂರರಂತಹ ಕಾರ್ಯದಕ್ಷರೂ, ಉತ್ಸಾಹಶಾಲಿಗಳೂ, ಸ್ವಾರ್ಥತ್ಯಾಗಿಗಳೂ ಕೇವಲ ಅಪೂರ್ವ. ಇಂಥವರು ಮಾಡುತ್ತಿರುವ ದೇಶೀಯ ವೈದ್ಯ ಸೇವೆಯನ್ನು ಲಕ್ಷೀಕರಿಸಿ, ನಮ್ಮ ಕರ್ನಾಟಕ ದೇಶದಲ್ಲಿರುವ, ಆಯುರ್ವೇದ ಯುನಾನಿ ವೈದ್ಯರೂ, ವೈದ್ಯಾಭಿಮಾನಿಗಳೂ, ಸಮ್ಮೇಳನದಲ್ಲಿ ಭಾಗಿಗಳಾಗಿ ಅವರ ಶ್ರಮವನ್ನು ಸಫಲಗೊಳಿಸಬೇಕು. ಈಗಾಗಲೆ ಆಹ್ವಾನ ಪತ್ರಿಕೆಯು ಎಲ್ಲರಿಗೂ ಕಳುಹಿಸಲ್ಪಟ್ಟಿರುವದು. ನಾವು ಎಲ್ಲಾ ಪತ್ರಿಕೆಗಳಲ್ಲಿಯೂ ವೈದ್ಯ ಸಮ್ಮೇಳನದ ವಿಷಯಗಳನ್ನು ನಾಲ್ಕು ತಿಂಗಳಿಂದಲೂ ಪ್ರಕಟಿಸುತ್ತಾ ಬಂದಿದ್ದರೂ ಗ್ರಾಮಗಳ ವೈದ್ಯರಿಗೆ ತಿಳಿದಂತಿಲ್ಲ. ಇದಕ್ಕೆ ಬಹು ಸಂತಾಪವಾಗಿದೆ. ನಮ್ಮ ವೈದ್ಯ ಸೋದರರು ತಮ್ಮ ಸುತ್ತಿನ ಗ್ರಾಮಗಳಲ್ಲಾಗಲಿ, ಪಟ್ಟಣಗಳಲ್ಲಿರುವ ಎಲ್ಲಾ ವೈದ್ಯರಿಗೂ ಈ ವಿಷಯವನ್ನು ತಿಳಿಸಿ ಸಮ್ಮೇಳನಕ್ಕೆ ಬರುವಂತೆ ತಿಳಿಸಬೇಕು. ಈ ಸಮ್ಮೇಳನಾವಸರದಲ್ಲಿ ಸಕಲ ಭಾರತ ವರ್ಷೀಯ ದೇಶೀಯ ವೈದ್ಯ ಪ್ರದರ್ಶನವು ನಡೆಯುವದರಿಂದ ಇದರ ಪ್ರಯೋಜನವು ವೈದ್ಯರಿಗೆ ಸಿಗುವದು. ಇಂಥಾ ಪ್ರದರ್ಶನವನ್ನು ನಡಿಸುವದು ಸುಲಭಸಾಧ್ಯವಲ್ಲ. ಇಂದಿಯೂ ದೇಶದ ನಾನಾ ಭಾಗಗಳಲ್ಲಿ ಬೆಳೆಯುವ ಮೂಲಿಕಗಳನ್ನು, ಇತರ ಔಷಧ ನಿರ್ಮಾಣ ಕಲಾ ಕೌಶಲವನ್ನು ನಮ್ಮ ವೈದ್ಯರು ಅನಾಯಾಸವಾಗಿ ತಿಳಿಯಬಹುದು. ಇಂಥಾ ಅಮೂಲ್ಯ ಸಂಧಿಯು ನಮಗೆ ಇನ್ನು ಸಿಗಲಾರದು. ವೈದ್ಯ ಸೋದರರೆಲ್ಲರೂ ಆಹ್ವಾನ ಪತ್ರವು ತಲುಪಲಿ, ತಲುಪದಿರಲಿ, ದೇಶೀಯ ವೈದ್ಯಾಭಿವೃದ್ಧಿ ದೃಷ್ಟಿಯಿಂದ ಈ ಡಿಸೆಂಬರ್ ತಾರೀಕು 23ಕ್ಕೆ ತಲಪುವಂತೆ ಬೆಳಗಾವಿಗೆ ಸೇರಬೇಕು. ರಿಸೆಪ್ಶನ್ ಕಮಿಟಿಯವರು ಸಾಧ್ಯವಾದ ಮಟ್ಟಿಗೂ ಬರುವ ವೈದ್ಯರಿಗೆ ಅನುಕೂಲಪಡಿಸಿಕೊಡುವರು. ರಿಸೆಪ್ಶನ್ ಕಮಿಟಿಯ ಸಭ್ಯರು ಐದು ರುಪಾಯಿಗಳನ್ನು, ಪ್ರತಿನಿಧಿ ಸಭ್ಯರು ಮೂರು ರುಪಾಯಿಗಳನ್ನು ಕಳುಹಿಸಬೇಕು. ಬೆಳಗಾಂವಿಯಲ್ಲಿ ಚಳಿ ವಿಶೇಷವಿರಬಹುದಾಗಿ ಬೇಕಾದ ಬಟ್ಟೆಗಳನ್ನು ತಂದಿರಬೇಕಾಗುವದು. ಒಬ್ಬರಿಗೆ ದಿನಕ್ಕೆ ಊಟದ ಖರ್ಚು 1-8-0 ಆಗುವದು. ಪ್ರದರ್ಶನಕ್ಕೆ ವಸ್ತುಗಳನ್ನು 15ಕ್ಕೆ ತಲಪುವಂತೆ ಕಳುಹಿಸಬೇಕು. ನಮ್ಮ ಕರ್ನಾಟಕ ದೇಶದಲ್ಲಿರುವ ಪ್ರತಿಯೊಬ್ಬ ವೈದ್ಯರೂ ತಮಗೆ ಪೂಜ್ಯವೆನಿಸುತಿರುವ ಆಯುರ್ವೇದಾಭ್ಯುದಯವನ್ನಾಗಿಸಿ ಸಮ್ಮೇಳನಕ್ಕೆ ಒಂದು ಸಮ್ಮೇಳನವನ್ನು ಜಯಪ್ರದವಾಗಿ ನಡೆಸಬೇಕೆಂದು ಕೋರುತ್ತೇನೆ.

ವಿದ್ವಾನ್ ಕೆ ಶೇಷಶಾಸ್ತ್ರಿ,
ಆಯುರ್ವೇದರತ್ನಂ,
ಪ್ರಧಾನ ಮಂತ್ರಿ.

ಪತ್ರವ್ಯವಹಾರಗಳು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ. ಸಂ.

ಬೊಂಬಾಯಿಯಲ್ಲಿರುವ ಕೊಡಗರ ಹುತ್ರಿ ಹಬ್ಬ.

ಇದೇ ಡಿಸೆಂಬರ್ ತಾರೀಕು 14ನೇ ಆದಿತ್ಯವಾರ ದಿವಸ ಬೊಂಬಾಯಿಯಲ್ಲಿರುವ ಎಲ್ಲಾ ಕೊಡಗರೂ ಸೇರಿ ನಮ್ಮ ಹುತ್ರಿ ಹಬ್ಬವನ್ನು ಬಹು ವಿಜೃಂಭಣೆಯಿಂದ ನಡೆಸಿದೆವು. ಈ ಹಬ್ಬವನ್ನು ನಿಷ್ಕರ್ಷೆಯಾದ ಸಮಯದಲ್ಲಿ ನಡಿಸಲು ಅಸಾನುಕೂಲವಾದುದರಿಂದ, ಇದನ್ನು ನಮ್ಮೆಲ್ಲರ ಅನುಕೂಲದ ಮೇರೆ 14ನೇ ತಾರೀಕಿನಲ್ಲಿ ನಡೆಸಲಾಯಿತು. ಹೆಣ್ಣುಗಂಡು ಬೊಂಬಾಯಿಯಲ್ಲಿರುವ ಎಲ್ಲಾ ಕೊಡಗರು ಒಮ್ಮನಸ್ಸಿನಿಂದ ಸೇರಿ ಬಹು ಸಂತೋಷದಿಂದ ನಡೆಸಿದೆವು

ಈ ವಿಶೇಷ ದಿವಸಕ್ಕೆ ಸರಿಯಾಗಿ ಮಾ. ಶ್ರೀ ಜೋಂಜಿರ ಬಿದ್ಯಪ್ಪನವರು ಅವರ ಕುಟುಂಬ ಸಮೇತರಾಗಿ ಅಫ್ರೀಕ ದಿಂದ ಬಂದು ತಲಪಿದ್ದರು. ಇವರೂ ಸಹ ನಮ್ಮ ಸಂಗಡ ಆ ದಿವಸ ಸೇರಿದ್ದರಿಂದ ನಮಗೆಲ್ಲರಿಗೂ ಬಹಳ ಸಂತೋಷ ವಾಯಿತು. ಅಲ್ಲದೆ ನಮ್ಮ ಕೊಡಗಿನಲ್ಲಿ ಕೆಲವು ಕಾಲ ಸಬ್ ಅಸಿಸ್ಟಾಂಟ್ ಸರ್ಜನರಾಗಿದ್ದ ಮಾ. ಶ್ರೀ ವೆಂಕಟರಮಣಯ್ಯ ನವರೂ ಸಹ ಅತಿಥಿಯಾಗಿ ಬಂದಿದ್ದರು.

ಆ ದಿವಸ ಸಾಯಂಕಾಲ 10 ಗಂಟೆಗೆ ಸರಿಯಾಗಿ ಬೊಂಬಾಯಿಯ ಯುನಿವರ್ಸಿಟಿ ಗಾರ್ಡನ್‌ನಲ್ಲಿ ಸೇರಿ ನಮ್ಮ ಅನ್ಯೋನ್ಯತೆಯನ್ನು ತೋರಿಸುವುದಕ್ಕೋಸ್ಕರ ಒಂದು ಫೋಟೋವನ್ನು ತೆಗೆಯಲಾಯಿತು. ಅನಂತರ ಎಲ್ಲರೂ ಗಿರ್‌ಗಾಮಿನಲ್ಲಿರುವ ಮಾ. ಶ್ರೀ ಯಂ. ಯಸ್. ಮುತ್ತಣ್ಣ, ಬಿ. ಎ. ಯಲ್. ಯಲ್. ಬಿ. ಯವರ ಕ್ವಾರ್ಟರ್ಸ್‌ನಲ್ಲಿ 12 ಗಂಟೆಗೆ ಸರಿಯಾಗಿ ತಮ್ಮ ಭೋಜನವನ್ನು ತೀರಿಸಿ ಅಲ್ಲಿಂದ ಸ್ವಲ್ಪ ಸಮಯವನ್ನು ಬಹು ಸಂತೋಷದಿಂದ ಕಳೆದು ಸಾಯಂಕಾಲ 6 ಗಂಟೆಗೆ ಅವರವರ ಸ್ಥಳಗಳಿಗೆ ತೆರಳಿದರು.

ಈ ಹಬ್ಬವನ್ನು ಬೊಂಬಾಯಿಯಲ್ಲಿ ಇಷ್ಟು ಸಂಭ್ರಮದಿಂದ ನಡೆಸಿದ್ದು ಇದು ಎರಡನೇ ಸಲವಾಗಿದೆ. ಇನ್ನು ಮುಂದಕ್ಕೂ ಇದೇ ರೀತಿ ನಮ್ಮ ಇಂಥಾ ಹಬ್ಬಗಳನ್ನು ಒಗ್ಗಟ್ಟಿನಿಂದ ನಡೆಸಲು ನಮಗೆಲ್ಲರಿಗೂ ಅನುಕೂಲ ಮಾಡುವಂತೆ ನಮ್ಮ ಶ್ರೀಕಾವೇರಿ ಮಾತೆಯನ್ನು ಸದಾ ಬೇಡುವ.

ಪ್ರತ್ಯಕ್ಷದರ್ಶಿ.

ಲೋಕಲ್‌ಫಂಡ್ ಉಪಾಧ್ಯಾಯರ ಗೋಳಾಟ.

ಅಯ್ಯಾ ಪೇಶಿಭಾಂಡವರೇ,

ಕೊಡಗಿನ ಎಲ್ಲಾ ಇಲಾಖೆಯವರಿಗೂ ಕಾಲಕ್ಕೆ ಸರಿಯಾಗಿ ಮಾಹೆಯಾನ 30 ರೂಪಾಯಿಯ ಮೇಲೆ ಕೆಲಸಗಾರರಿಗೆ ಸಂಬಳವಿರುವಾಗ, ಲೋಕಲ್ ಫಂಡ್ ಶಾಲೆಗಳಲ್ಲಿ ಕೆಲಸ ಮಾಡುವ ಉಪಾಧ್ಯಾಯರುಗಳಿಗೆ ಮಾಹೆಯಾನ 20 ರೂಪಾಯಿ ಕೊಟ್ಟು ವರುಷ ವರುಷವೂ ಯಾವ ರಿಯಾಯಿತಿಯನ್ನು ಕೊಡದೆ ಇರುವುದು ಯಾವ ನ್ಯಾಯ.

ಉಪಾಧ್ಯಾಯರು ಏನೂ ತಿಳಿಯದೆ ಪಾಠಶಾಲೆಯಲ್ಲಿರುವ ಮಕ್ಕಳಿಗೆ ಅವರು ತನು, ಮನ, ಧನಗಳನ್ನು ಉಪಯೋಗಿಸಿ ಜ್ಞಾನೋದಯವನ್ನು ಉಂಟುಮಾಡುತ್ತಾರೆಂಬುವುದು ನಮ್ಮೆಲ್ಲರಿಗೂ ತಿಳಿದ ಸಂಗತಿಯಾಗಿದೆ. ಇಂಥವರನ್ನು ನಾವು ಮರೆತು ಬಿಡುವುದು ಯಾವ ಧರ್ಮ. ಇವರಿಂದಲೇ ನಮ್ಮ ಮುಂದಿನ ಜನಾಂಗವು ಸಹ ಉದ್ಧಾರವಾಗಬೇಕಾದುದರಿಂದ ಎಲ್ಲರ ಪ್ರೀತಿಗೂ ಪಾತ್ರರಾದ ನಮ್ಮ ಕೊಡಗು ಕಮಿಷನರವರೂ, ಶಾಲಾಧಿಕಾರಿಗಳೂ ಮತ್ತು ಕೌನ್ಸಿಲ್ ಮೆಂಬರುಗಳೂ ಆಲೋಚಿಸಿ, ಅವರ ಕಷ್ಟಕ್ಕೆ ತಕ್ಕ ಸಂಬಳವನ್ನೂ ಎಲ್ಲಾ ಇಲಾಖೆಯವರಂತೆ ಕೊಡಿಸಿಯಾರೆಂದು ನಂಬುತ್ತೇನೆ.

ಯಂ. ಗಣಪತಿ,
ಉಪಾಧ್ಯಾಯರ ಹಿತಚಿಂತಕ.

ಪಟ್ಟೋಲೆಪಳಮೆ ಗ್ರಂಥಕರ್ತರಾದ ನಡಿಕೇರಿಯಂಡ ಚಿಣ್ಣಪ್ಪನವರೇ.

ನಿಮ್ಮ ಪಟ್ಟೋಲೆ ಪಳಮೆಯನ್ನು ನಾನು ಓದಿ ನೋಡಿದೆನು. ಅದರಲ್ಲಿ 76ನೇ ಪುಟದಲ್ಲಿ ಕಾಟಕಾಯಿ ದಂಗೆಯಲ್ಲಿ ವಿಶೇಷವಾದ ಧೀರತ್ವವನ್ನು ತೋರಿಸಿದ ಮಹನೀಯರತೆಸರಿನ ಪಟ್ಟಿಯನ್ನು ಓದಿದಲ್ಲಿ ಕೆಲವು ಮಹನೀಯರ ಹೆಸರು ಬಿಟ್ಟು ಹೋದಂತೆ ಕಾಣುತ್ತಿರುವುದರಿಂದ ಅಂಥವರ ಹೆಸರನ್ನು ತೋರಿಸದೆ ಇರಲು ಕಾರಣವೇನೆಂದು ದಯಮಾಡಿ ಪತ್ರಿಕೆಯ ಮೂಲಕ ತಿಳಿಸಬೇಕಾಗಿ ಕೋರುತ್ತೇನೆ. ಬೆಪ್ಪುನಾಡು ಮೂಲಕ ಆದರೂರು ಗ್ರಾಮದ ಕೋಣೇರಿರ ಅಚ್ಚಯ್ಯನೆಂಬವರು ಆ ದಂಗೆಯಲ್ಲಿ ಧೀರತ್ವವನ್ನು ಹೊಂದಿದುದರಿಂದ ಆಗ ಕಮಿಷನರಾಗಿದ್ದ ಕರ್ನಲ್ ಮಾರ್ಕ ಕಬ್ಬನ್ ಸಾಹೇಬರವರು ಅಚ್ಚಯ್ಯನವರಿಗೆ ಸನ್ನದ್ ನಿರೂಪ ಕೊಟ್ಟು ಉಂಬಳಿ ಸಹ ಕೊಟ್ಟಿದ್ದಾರೆ. ಆದರೆ ಅವರ ಹೆಸರು ಪಟ್ಟಿಯಲ್ಲಿ ತೋರಿಸದೆ ಇರುವುದು ಆಶ್ಚರ್ಯವಾಗಿ ತೋರುತ್ತೆ. ಆದಕಾರಣ ನನ್ನ ಸಂಶಯವನ್ನು ಹೋಗಲಾಡಿಸಬೇಕಾಗಿ ಕೋರುತ್ತೇನೆ.

ಕೆ. ಯಂ. ಎ.

ಪುತ್ತರಿ ಹಬ್ಬ.

ಅಯ್ಯಾ,

ಈ ತಾರೀಕು 9ನೇ ಮಂಗಳವಾರ ದಿನ ನಾಡಿ ಹಬ್ಬನು ಹ್ಯ (ಇಗ್ಗುತಪ್ಪ) ದೇವರ ಕಲಾಡಿಚೆ ಹಬ್ಬವು ನಡೆಯಿತು. ಈ ಹಬ್ಬಕ್ಕೆ ಅನೇಕ ಜನರು ನೆರೆದಿದ್ದರು. ಮುಖ್ಯ ಇಲಾಖೆ ಪ್ರೆಸಿಡೆಂಟರು ಸಹ ದಯಮಾಡಿಸಿದ್ದರು. ತಾ. 7, 8 ರಲ್ಲಿ ಪ್ರವಿಸಿದಂತೆ ಮಳೆ ಇಲ್ಲದಿದ್ದರೆ ಇನ್ನೂ ಹೆಚ್ಚಿನ ಜನರು ಬರುತ್ತಿದ್ದರು. ದೇವರಬಲಿಯಿಂದ ಮಲೆಬಿಡದಕ್ಕೆ ಹೋಗಿ ಸೇರಿಯುತ್ತಿದ್ದರು. ದೇವರ ಕಟ್ಟು ಎಂದದನ್ನು ನೇರಾಗಿ ಈ ಮೊದಲು ದೇವರ ಕಟ್ಟು ಬಿದ್ದುದನ್ನು ಮುಟ್ಟು ಮುಟುದು ಬರುವವರೆಗೂ ಮಳೆಬೋಡ ಕಟ್ಟಿಕೊಂಡಿ ತ್ತೇ ಶಿವಾಯ ಮಳೆಬೀಳಲಿಲ್ಲ. ಆದಿನಿಂದ ಮಳೆಯ ಗಲಾಟೆ ಇಲ್ಲದೆ ಪುತ್ತರಿಹಬ್ಬವು 10ನೇ ತಾರೀಕಿನಲ್ಲು ದೇವಪೊಳುದೂ 11ನೇ ತಾರೀಕಿನಲ್ಲು ನಾಡು ಪೊಳುದೂ ಸಹ ಮುಹೂರ್ತಕ್ಕೆ ಸರಿಯಾಗಿ ನಡೆಯಿತು. ಈ ಪೊಳುದಿಗೆ 7, 5, 3 ದಿನಗಳಿಗಿಂತ ಮುಂಚೆ ರಾತ್ರಿಯಲ್ಲು ಈದು ಎಂಬ ಕೋಲಾಟವು ಜರಗಿತು. ಪುತ್ತರಿ ಕಳೆದನಂತರ 3, 4, 5, ದಿನಗಳವರೆಗೆ ಊರುಕೋಲು, ನಾಡುಕೋಲು, ದೇವಕೋಲು, ಕೋಲುಮಂದ, ಕಡವು ಎಂಬ ಪದ್ಧತಿ ಕೋಲಾಟಗಳು ನಡೆದವು. ಈ ಹಬ್ಬದಲ್ಲು ಪಾಡಿನಾಲ್ಕುನಾಡಿನಲ್ಲಿ ಏನೊಂದೂ ಪುಂಡು ಪುಕಾರಗಳು ನಡೆಯಲಿಲ್ಲ. ಆನಾಡುಮಂದಿನಲ್ಲು ಮೂತ್ತ, ಹೆಗ್ಗಡೆ, ಅಯ್ರಿ, ಬಂಬೋಳ, ಎಂಬ ಕೊಡಗೇತರರು ಕೋಲಾಟಕ್ಕೆ ಇಳಿಯಕೂಡದು, ಅವರೇ ಪ್ರತ್ಯೇಕ ಕುಣಿಯಬೇಕೆಂದೂ ಅದು ಕೂಡದು ಒಂದಾಗಿ ಕುಣಿಯುವುದೆಂದೂ ವರ್ಜಿಗಳು ಕೊಡಗರಲ್ಲೇ ನಡೆಯಿತು. ಅಪ್ಪರಲ್ಲಿ ದೇಶತಕ್ಕ ಪರದಂಡ ಗಣಪತಿಯವರು ರಾವುಸಾಹೇಬ್ ಕೇಟೋಳಿರ ಚಂಗಪ್ಪನವರು, ಉದಿಯಂಡ ಮಾಚ್ಚಯ್ಯ ವಗೈರೆರು ಒಂದು ಕೊಡಗರೂ ಕೊಡಗೇತರರೂ ಸಹ ಒಂದಾಗಿ ಕುಣಿಯಬಹುದು. ಆದರೆ ಕೊಡಗೇತರರು ಕೊಡಗರ ಸಣ್ಣ ಹುಡುಗರಮುಂದೆ ಕುಣಿಯಲಾಗದು, ಕೊಡಗರಾದ ಬಳಿಕ ಕುಣಿಯಬಹುದೆಂದು ಮಾಡಿದ ತೀರ್ಮಾನದಮೇಲೆ, ಒಂದಾಗಿ ಕುಣಿತವು ನಡೆಯಿತು. ಇದೇಜಾಡಿನ ಜಗಳವು ಬೆಪ್ಪುನಾಡು ಮೂದಪಟ್ಟು ಪರಂಬು ನಾಡುಮುಂದಿನಲ್ಲು ಸಹ ಅನೇಕ ವರ್ಜಿಗಳು ನಡೆದು ಕೊಡಗೇತರರು ದೊಡ್ಡವರು ಸಣ್ಣವರು ಸಹ ಒಂದು ವಸ್ತ್ರವನ್ನು ಹೆಗಲಿಗೆ ಹಾಕಿಕೊಂಡು ಕುಣಿಯಬಹುದೆಂದು ತೀರ್ಮಾನವಾದಮೇಲೆ ಕುಣಿತವು ನೆರವೇರಿತು. ಈ 2ನೇ ನ್ಯಾಯವೇ ಪೂರ್ವ ಪದ್ಧತಿಯೆಂದು ಸರ್ವರೂ ಒಪ್ಪುವದರಿಂದ ಉಭಯಸಂಗಡದವರುಸಹ ಇನ್ನುಮುಂದೆ ಈ ಬಗ್ಗೆ ನ್ಯಾಯವಾದದೆ ಒಗ್ಗಟ್ಟಿನಿಂದ ದೇಶದ ಕೆಲಸವನ್ನು ನಡೆಸಿಕೊಂಡೆಂದು ಕೋರಿಕೆ. ಈ ಪ್ರಬಲ ಸಮ್ಮಂಡ ನಿಶಾನೆಯವನ್ನು ಹೋರಿಸಿಕೊಂಡು ಹಳೇ ಮಚ್ಚರವೆನ್ನಿಟ್ಟುಕೊಂಡ. ಪುತ್ತರಿ ಸಮ್ಮಂಧ ಉಂಟಾಗುವ ಜಗಳವನ್ನು ಸರಕಾರದವರು ಗಮನಿಸುವಲ್ಲಿವೆಂಬ ಒಂದು ತಪ್ಪು ಭಾವನೆಯನ್ನು ಮಾಡಿಕೊಂಡು, ಚೆಂಬೆ ಬೆಳಿಯೂರ್‌ಗ್ರಾಮದ ಪಣ್ಣಕೋಲುವಂಡ ಮನೆಯಲ್ಲೂ, ಪೈಶಾಡಿಗ್ರಾಮದ ಬಿಟ್ಟಿರಮನೆಯಲ್ಲೂ, ಅರಮೇರಿಗ್ರಾಮದ ಕಚ್ಚೆರಮನೆಯಲ್ಲೂ, ಕುಂಜಲಿಗ್ರಾಮದ ಚೊಟ್ಟೆಡಮನೆಯಲ್ಲೂ ನಾಂಗಾಲದಲ್ಲಿರುವ ಪೆಟ್ಟಿವಾಣೆ ನಾಡುಮಂದಿನಲ್ಲೂ ಸಹ ಕೆಲವುಮಟ್ಟಿಗೆ ಜಗಳವಾಗಿದೆಯಾಗಿ ತಿಳಿಯುತ್ತೆ. ಈ ವೀರರಾಜಪೇಟೆತಾಲೂಕಿನಲ್ಲೇ ಇಷ್ಟು ಜಗಳವಾಗಲೂ, ಕೊಡಗಿನಲ್ಲೆಲ್ಲಾ ಪಾಡಿನಾಲ್ಕುನಾಡು ಕೊಡಗರೇ ಬಹಳ ಪಟ್ಟುಗಾರರೆಂದು ಅನ್ನಿಸಿಕೊಂಡ ಸ್ಥಳದಲ್ಲು ಸಹ ಜಗಳವಾಗದಿರಲೂ ಕಾರಣವೇನಿದ್ದಲ್ಲಿ ಕಂಡು ಬಂದದ್ದು ಪ್ಯಾಗಂಡಪ್ಪ ನಾಲ್ಕುನಾಡಿನವರಿಗೆಲ್ಲರಿಗಾಗಿ ನಾವೊಕ್ಕನಲ್ಲು ಮೂರ್ತಿ ಒಂದು ಸಿಶಾದೇವಿ ಮನೆ ಇರುತ್ತೆ. ಗ್ಯಾಲನ್ ಗ್ಯಾಲನ್ ಬೇಕಾದರೆ ಮಡಿಕೇರಿ ಮತ್ತು ವೀರರಾಜಪೇಟೆಯಿಂದ 18 ಮೈಲು ದೂರದಲ್ಲಿ ಹೋಗಿ ತಂಬೇಕಾಗಿದೆ. ಆ ದೇವಿಯ ಮನೆಯನ್ನು ಸರಕಾರದವರು ಮೋಚಿತಿಂದಿದರಿಂದ ಸಿಶಾದೇವಿಯ ಮಳೆ ನಾಲ್ಕುನಾಡಿನಲ್ಲು ಕಡಿಮೆಯಾದ ಕಾರಣ ಪುಂಡು ಪುಕಾರಗಳೇನೂ ನಡೆಯಲಿಲ್ಲವೆಂತಲೂ, ವೀರರಾಜಪೇಟೆ ನಾಡಿನವರಿಗೆ ವೀರರಾಜಪೇಟೆ ಗೋಣಿಕೊಪ್ಪಲಲ್ಲು ಸಹ ಸಿಶಾದೇವಿಯ ಖಾನ್‌ಮನೆ ಅಂದರೆ ಗಡಂಗ ಇರುವದರಿಂದ ಪ್ರತಿಮನೆಯಲ್ಲು ಸಿಶಾದೇವಿಯು ಹೊಕ್ಕಲು ಅನುಕೂಲವಾದುದರಿಂದಲೇ ಈ ಕಲಹಗಳು ಆಗಲು ಕಾರಣವಾಯಿತೆಂಬುದು ಸ್ಪಷ್ಟವಾಗುತ್ತೆ. ಆದುದರಿಂದ ನಮ್ಮ ಘನ ಸರ್ಕಾರದವರು ಬುದ್ಧಿವಂತಿಕೆಯಿಂದ ಮಾಡಿರುವಂತೆಯೇ ಅಮೇರಿಕ ದೇಶದವರ ಉದಾಹರಣೆಯನ್ನು ಹಿಂಬಾಲಿಸಿ ನಮ್ಮ ಈ ದೇಶದಲ್ಲಿ ಸಿಶಾದೇವಿಯನ್ನು ನಿಲ್ಲಿಸಬೇಕಾಗಿ (ಸಾರಾಯಿ ಅಂಗಡಿಯೇ ಇಲ್ಲದಂತೆ ಮಾಡಬೇಕಾಗಿ) ವಿನಂತಿ. ಹಾಗೆ ಮಾಡಿದ ಹೊರ್ತು ಕುಡಿಯುವದನ್ನು ನಿಲ್ಲಿಸುವದಕ್ಕೆ ಎಂದೆಂದಿಗೂ ಸಾಧ್ಯವಾಗಲಾರದು.

'ಒಬ್ಬಕೊಡಗ'.

ದಪ್ಪಬಳಿ ದನಮೇಯುವದು.

ಅಯ್ಯಾ ಎಡಿಟರವರೇ,

ಈ ಪತ್ರಿಕೆಯನ್ನು ನಿಮ್ಮ ಪತ್ರಿಕೆಯಲ್ಲಿ ಪ್ರಕಟಿಸಿ ನಮ್ಮ ಕಷ್ಟವನ್ನು ನಿವಾರಣೆಮಾಡಿಕೊಡಬೇಕಾಗಿ ಪ್ರಾರ್ಥಿಸುತ್ತೇನೆ.

ಸರ್ಕಾರದಿಂದ ಹೊಸದಾಗಿ ಏರ್ಪಡಿಸಲ್ಪಟ್ಟ ಕಾನೂನು ಪ್ರಕಾರ ರಸ್ತೆಯ ಸುತ್ತಮುತ್ತಲು ಕೈತರ ಜಮ್ಮಾದ ಜಾಗ ಇರುವದಾದರೂ ಕೂಡ ದನಗಳನ್ನು ಮೇಯಿಸಕೂಡದಾಗಿ ಮತ್ತು ರಸ್ತೆಯ ಅಂಚಿನಲ್ಲಿ ಮೇಯುತ್ತಿರುವ ದನಗಳನ್ನು ಪೊಲೀಸಿನವರು ಹಿಡಿದು ದೊಡ್ಡಿಗೆ ಸೇರಿಸುವದಲ್ಲದೆ ಜುಲ್ಮಾನೆ ವಗೈರೆ ಅನೇಕತರದ ಕಷ್ಟಗಳಿಗೆ ಗುರಿಪಡಿಸುತ್ತಿದ್ದಾರೆ.

ಇದು ನೋಡಿದರೆ ರೈತರ ದನಕರುಗಳನ್ನು ಮೇಯಿಸುವ ದಕ್ಕೂ ಸ್ಥಳ ತಪ್ಪುವದಾಗಿದೆ. ಘನ ಸರ್ಕಾರದವರು ಈ ಬಗ್ಗೆ ಈ ತಪ್ಪನಿವಾರಣೆ ಮಾಡಿದರೆ ನಮ್ಮ ಕೌನ್ಸಿಲ್‌ಮೆಂಬರುಗಳು ಈ ಕಾನೂನಿನಮೇಲೆ ಕೌನ್ಸಿಲ್ ಮೀಟಿಂಗಿನಲ್ಲಿ ಚರ್ಚೆ ಮಾಡಿ ಈ ಕಾನೂನನ್ನು ರದ್ದುಪಡಿಸಿ ರೈತರಿಗೆ ಯಾವ ಆತಂಕವೂ ಇಲ್ಲದೆ ಮಾಡಿಕೊಡಬೇಕಾಗಿ ಘನ ಕೌನ್ಸಿಲ್‌ಮೆಂಬರುಗಳಿಗೆ ನಾವು ಪ್ರಾರ್ಥಿಸುತ್ತೇವೆ.

ಸಿ. ಕರುಂಬಯ್ಯ.

ಮರೆನಾಡು ರಸ್ತೆ.

ಅಯ್ಯಾ,

ತಾ 11.11.24ರಲ್ಲು ಕೌನ್ಸಿಲ್‌ಮೆಂಬರು ಎಂ. ಎಂ. ಚಿಣ್ಣಪ್ಪನವರು ಮತ್ತು ಮರೆನಾಡಿನ ಕೆಲವು ರೈತರು ಸಹ ಸೇರಿ ಮರೆನಾಡಿಗೆ ರಸ್ತೆಮತ್ತು ಸೇತುವೆಯನ್ನು ತರಲಿಕ್ಕೆ ಅರ್ಜುಪಡಿಮೇಲೆಯಾದ ದಾರಿನೋಡಲಾಯ್ತು.

ಪೊನ್ನಂಪೇಟೆಯಿಂದ ಹುದಿಕೇರಿಗೆ ಬರುವ 4ನೇ ಮೈಲು ಮತ್ತು 7ನೇ ಫರ್ಲಾಂಗಿನಿಂದ ಬಲಗಡೆ ತಿರುಗುವ ಲೋಕಲ್‌ಫಂಡ್ ರಸ್ತೆಯು ಸರಾಸರಿ ಕುಟ್ಟಾಲ್‌ವರೆಗೆ ರಸ್ತೆಮಾಡಲು ತುಂಬಾ ಅನುಕೂಲವಿರುವ ದಾರಿಯಾಗಿದೆ. ಮೇಲ್ಕಂಡ ರಸ್ತೆಯು ಮೊದಲು ಏಳುಂದಿನಲ್ಲು ಒಬ್ಬಸೇಟು ಕಾಪಿತೋಟ ಮಾಡಿರುವಾಗ್ಯೆ ಗಾಡಿ ಸಾರೋಟುವಗ್ಯೆರೆ ಸರಾಸರಿ ಹೋಗು ತ್ತಿದ್ದ ರಸ್ತೆಯಾಗಿತ್ತು.

ಕುಟ್ಟಾಲಹೊಳೆಯ ಎರಡು ಭಾಗದಲ್ಲು ದೊಡ್ಡ ಬಂಡೆಗಳಿಂದಕೂಡಿ ಸೇತುವೆ ಕಟ್ಟಲು ತುಂಬ ಅನುಕೂಲವಾದ ಸ್ಥಳವಾಗಿಯೂ ಮತ್ತು ಅಲ್ಲಿಂದ ಮರೆನಾಡು ಕರೆಯಲ್ಲು ಪೂರ್ವದಲ್ಲು ಕುಟ್ಟಾಲ್ ಕಾಪಿತೋಟವನ್ನು ಒಬ್ಬ ಪಾಶ್ಚಿಮಾತ್ಯರು ಮಾಡಿರುವಾಗ್ಯೆ ಈ ಮೇಲ್ಕಂಡ ರಸ್ತೆಗಾಗಿ ಕುಟ್ಟಾಲ್ ಕಡವಿಗೆ ಬಂದು ಕುತ್ತುನಾಡು ಹೊಳೆಮತ್ತು ಮರೆನಾಡು ಹೊಳೆ ಎರಡುಸೇರಿದರ ಅರ್ಧಫರ್ಲಾಂಗ್ ಕೆಳಗೆ ಅವರ ಸ್ವಂತ ದೋಣಿಯನ್ನು ಏರ್ಪಡಿಸಿಕೊಂಡು ಸಾರೋಟು ಗಾಡಿವಗ್ಯೆರೆಯನ್ನು ಮರೆನಾಡುಕರೆಗೆ ದಾಟಿಸುತ್ತಿದ್ದರಂತೆ. ಅಲ್ಲಿಂದ ಕುಟ್ಟಾಲ್ ತೋಟದ ವರೆಗೆ ಮೊದಲುಮಾಡಿದ ರಸ್ತೆಯು ಈಗ ಲೋಕಲ್‌ಫಂಡ್ ರಸ್ತೆಯಾಗಿದೆ. ಅದನ್ನು ಕೆಲವುಮಟ್ಟಿಗೆ ರಿಪೇರಿಮಾಡಿದರೆ ಗಾಡಿಯು ಸರಾಸರಿ ಹೋಗುವದರಲ್ಲು ಯಾವ ಅಡಚಣೆಯೂ ಇರುವದಿಲ್ಲ. ಕುಟ್ಟಾಲ್ ತೋಟದ ಆ ಜಾಗೆ ಕಾಯಿಪಂಡ ದೊಡ್ಡಮನೆ ವರೆಗೆ ಪಾಡಿ ಕಡವಿಗಾಗಿ ಬರುವ ಲೋಕಲ್‌ಫಂಡ್‌ರಸ್ತೆಗೆ ಈ ಮೇಲ್ಕಂಡ ರಸ್ತೆಯನ್ನು ಸರಾಸರಿ ತೆಗೆದುಕೊಂಡುಹೋಗುವಲ್ಲು ಹೆಚ್ಚಿನ ಖರ್ಚು ಏನೂ ಇರುವದಿಲ್ಲ. ಅಲ್ಲಿಂದ ಕಡೆಪ್ಪಾಲ್‌ವರೆಗೆ ಸದಾ ಲೋಕಲ್ ಫಂಡ್ ರಸ್ತೆ ಗಾಡಿರಸ್ತೆಯಾಗಿ ಮಾಡಬಹುದು. ಈ ಮೇಲ್ಕಂಡ ರಸ್ತೆಯನ್ನು ತರುವದರಿಂದ ಮರೆನಾಡು ಐದು ಗ್ರಾಮಕ್ಕೂ ಮಧ್ಯ ಸಿಕ್ಕುತ್ತೆ.

ಕೊಡಗು ಕಮಿಷನರ್ ಸಾಹೇಬರವರು ಶ್ರೀಮಂಗಲ ಕುಟ್ಟಗೇರಿಯಿಂದ ಹೋಗುವ ರಸ್ತೆಯನ್ನೇ ಮಾಡಬೇಕೆಂದಾಗಿ ಇರಾದೆಪಡುವರೆಂದು ನಾವು ತಿಳಿದು ತುಂಬಾ ವ್ಯಸನಪಡುತ್ತೇವೆ. ಈ ರಸ್ತೆಯನ್ನು ಮಾಡಿದ ಪಕ್ಷದಲ್ಲು ಕೆರಾಲು ಗ್ರಾಮಕ್ಕೆ ಅನುಕೂಲವಾಗುವದಲ್ಲದೆ ಬಾಕಿ ನಾಲ್ಕುಗ್ರಾಮಗಳಿಗೆ ಯಾವದೊಂದು ಪ್ರಯೋಜನವಿಲ್ಲದ ರಸ್ತೆಯಾಗುತ್ತೆ.

ಮೇಲ್ಕಂಡ ಕುಟ್ಟಾಲು ರಸ್ತೆಯನ್ನು ನಮಗೆಮಾಡಿಕೊಟ್ಟ ಪಕ್ಷಕ್ಕೆ ಬಿಟ್ಟಂಗಾಲದಿಂದ ಬಿ. ಸೆಟ್ಟಿಗೇರಿಗಾಗಿ ಬರುವ ಲೋಕಲ್‌ಫಂಡ್ ರಸ್ತೆಗಾಗಿಯೂ ಗಾಡಿ ಅತ್ತ ಇತ್ತ ತಿರುಗಾಡಲೂ ನಮ್ಮ ದಿನಸು ಧಾನ್ಯಗಳನ್ನು ಕುಟ್ಟಾಲುಗಾಗಿ ಬಿಟ್ಟಂಗಾಲಕ್ಕೂ ಮತ್ತು ಹುದಿಕೇರಿಗೂ ಸಾಗಿಸಲು ಅನುಕೂಲವಿದೆ. ಶ್ರೀಮಂಗಲದಿಂದ ಕೆರಾಲುಗಾಗಿ ಹೋಗುವ ರಸ್ತೆಮಾಡಿಸುವದಕ್ಕಿಂತ ರಸ್ತೆ ಇಲ್ಲದೆ ಇರುವದೇ ಉತ್ತಮವಾಗಿದೆ.

ಕೊಡಗು ಕಮಿಷನರ್ ಸಾಹೇಬರವರು ಖುದ್ದು ಪರಾಂಬರಿಸಿ ನೋಡಿದರೆ ಮೇಲ್ಕಂಡ ರಸ್ತೆಯ ಅನುಕೂಲವು ಅವರ ಚಿತ್ತಕ್ಕೆ ವೇದ್ಯವಾಗುತ್ತೆ.

ಕುದ್ದು ಅಚಿಮಯ್ಯನಿದವ.

ಪ್ರಕಟಣೆ.

ಮಡಿಕೇರಿ ಪೋಲೀಸ್ ಸಬ್ ಇನ್ಸ್‌ಪೆಕ್ಟರುಗಳ ಕ್ವಾರ್ಟರ್ಸ್ ಕೆಳಗೆ ಅಂದವಾಗಿಯೂ ಹೊಸಮರಗಳಿಂದ ಭದ್ರವಾಗಿಯೂ 3 ವರ್ಷಗಳ ಹಿಂದೆ ಕಟ್ಟಲ್ಪಟ್ಟ ಸಂಸಾರ ಸಮೇತ ವಾಸ ಇರಲಿಕ್ಕೆ ಯೋಗ್ಯವಾದ 9 ಕೊಠಡಿಗಳಿರುವ ಮನೆ 3 ಅಂಕಣಗಳ ಕೊಟ್ಟಿಗೆ ಯಾವಾಗಲೂ ನಿರ್ಮಲವಾದನೀರು ಇರುವ ಕಲ್ಲು ಕಟ್ಟಿದ ಭಾವಿ (ನೀರು ಗೋಚಿ ತೆಗಿಯುವಂಥಾದ್ದು) ಕಾಫಿ, ಬಾಳೆ, ಕಿತ್ತಳೆ, ನಿಂಬೆ ಮರಗಳೂ ಮತ್ತು ಹಲಸು ಮತ್ತು ಮಾವಿನ ಗಿಡಗಳೂ ಇರುವ ಹಿತ್ತಲೂಸಹ ಇರುವ ಆಸ್ತಿ ಒಂದು ಮಾರಾಟಕ್ಕೆ ಇದೆ. ಇದಕ್ಕೆ (11,000) ಹನ್ನೊಂದು ಸಾವಿರ ರೂಪಾಯಿ ಹೆಚ್ಚುಕಡಿಮೆ ಖರ್ಚಾಗಿದೆ. ಈ ಸ್ಥಳವು ಗೋಪ್ಯವಾಗಿಯೂ ಸಂಸಾರ ಸಮೇತ ವಾಸ ಇರುವದಕ್ಕೆ ಯೋಗ್ಯವಾಗಿಯೂ ಇದೆ. ವಾಸಕ್ಕೆ ಇಂಥಾ ಯೋಗ್ಯವಾದ ಸ್ಥಳ ಮಡಿಕೇರಿಯಲ್ಲಿ ಸಿಕ್ಕುವದು ದುರ್ಲಭ. ಕೊಂಡುಕೊಳ್ಳುವದಕ್ಕೆ ಖಾಯಿಷ ಇರುವವರು ಹೊತ್ತು ನೋಡಿ ಕ್ರಯ ನಿಶ್ಚಯಿಸ ಬಹುದು. ಹೆಚ್ಚಿನ ವಿವರ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬೇಕಾಗಿದೆ.

VENDER,
C/o EDITOR, "KODAGU."
Mercara.

4-3

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರಿಗೆ ರಶೀತಿ ಪುಸ್ತಕಗಳನ್ನು ನಮ್ಮ ಏಜಂಟರು ಮೆ. ಕೋಟೆರ ಚಿಣ್ಣಪ್ಪನವರ ಜವಾಬುದಾರಿಕೆಯಮೇಲೆ ಕೊಡಲಾಗಿದೆ. ದಯವಿಟ್ಟು ಚಂದಾದಾರರೆಲ್ಲರೂ ಅವರವರಿಗೆ ಅನುಕೂಲವಿರುವ ಭಾಗದಲ್ಲಿ ಪಾವತಿಮಾಡಬೇಕಾಗಿ ಕೋರಿಕೆ.

ಏಜಂಟರುಗಳು.

ವೀರಾಜಪೇಟೆ—ಮೆ. ಕೆ. ಚಿಣ್ಣಪ್ಪನವರ ಆಫೀಸಿನಲ್ಲಿ.
ಮೂರ್ನಾಡು—ಕಮರ್ಶಿಯಲ್ ಸ್ಟೋರಿನಲ್ಲಿ ಮೆ. ಮನೆಯಂಡ ದೇವಯ್ಯನವರು.
ನಾಪೋಕ್ಲು—ಮೆ. ಪೊನ್ನಚಂಡ ಮುದ್ದಪ್ಪನವರು.
ಗೋಣಿಕೊಪ್ಪಲು—ಮೆ. ಮುಕ್ಕಾಟೀರಪೂಣಚ್ಚನವರು.
ಪೊನ್ನಂಪೇಟೆ—ಮೆ. ಪುತ್ತಮನೆ ಮುದ್ದಮ್ಮಯ್ಯನವರು.
ಹುದಿಕೇರಿ—ಮೆ. ಜಿ. ಪೊಡಮ್ಮನವರು.
ಅಮ್ಮತ್ತಿ ಸಿದ್ದಾಪುರ—ಮೆ. ಬಿಸಂಡ ನಾಡಪ್ಪನವರು
ಮೆ. ಚಂಗಂಡ ಕುಟ್ಟಪ್ಪನವರು.

ಕೋದಂಡ ಉತ್ತಯ್ಯ.
ಆರ್ಗನೈಜಿಂಗ್ ಡೈರೆಕ್ಟರು, "ಕೊಡಗು" ಲಿಮಿಟೆಡ್.

ಪ್ರಕಟಣೆ.

ಈ ಸಂದರ್ಭವನ್ನು ಕಳಕೊಳ್ಳಬೇಡಿರಿ.

ಮಡಿಕೇರಿ ದೇಚೂರು ಬ್ಲಾಕಿನಲ್ಲಿ ಹೈಸ್ಕೂಲ್‌ಬಳಿ ಒಂದು ಎಕರು ಕಾಪಿತೋಟದಿಂದ ಕೂಡಿದ ಒಂದು ಹಂಚುಹಾಕಿದ ಮನೆಮತ್ತು ಅಡಿಗೆಮನೆ, ಇನ್ನು ಮನೆ ಕಟ್ಟಲಿಕ್ಕೆ ಎತ್ತರ ಭಾಗದಲ್ಲಿರುವ ಮನೆದಳವು ಸಹ ಮಾರಲಿಕ್ಕೆ ಇಟ್ಟಿದೆ. ಖಾಯಿಷ್‌ದಾರರು ಶೀಘ್ರವಲ್ಲಿಯೇ ಈ ಕೆಳಗಿನವರಿಗೆ ದಯವಿಟ್ಟು ಬರಕೊಳ್ಳುವದು

C. Clo EDITOR,
"*Kodagu*" MERCARA.

12—4

ಗೃಹಕೃತ್ಯದ ನೋಟೀಸ್.

ಕೊಡಗು ಗೋಣಿಕೊಪ್ಪಲು ಸಾಪಿನ ಅಂಗಡಿ ಆರ್. ಸುಂದರ್‌ಸಿಂಗ್ ಈ ಮೂಲಕ ಪ್ರಕಟಪಡಿಸುವದೇನಂದರೆ:—

ನನ್ನ ಹೆಂಡತಿಯಾಗಿದ್ದ ಬಾಲಾಬಾಯಿ ಎಂಬಾಕೆಯು ಸಹಿಸಲಶಕ್ಯತರದ ಅವಿಧೇಯತ್ವ ವಗೈರೆಗಳಿಗೋಸ್ಕರ ಕಳದ 9 ತಿಂಗಳುಗಳಿಂದ ನನ್ನ ಆಶ್ರಮದಲ್ಲಿ, ಮನಸ್ಸಿನಲ್ಲಿ, ಮತ್ತು ಸಂಸಾರದಲ್ಲಿ ಸಹ ಸಮಧಾನವಿಲ್ಲದೆ, ಈಕೆಯಿಂದ ನಿವೃತ್ತಿ ಹೊಂದಬೇಕೆಂಬ ಇರಾದೆಯಲ್ಲು ಇದ್ದ ಸಂದರ್ಭದಲ್ಲಿ ಈಕೆಯ ತಾಯಿ ಮತ್ತು ತಂಗಿ ಸಹ ಆಗಿನ್ನು ತಿಂಗಳು ೧೦ನೇ ತಾರೀಕಿನಲ್ಲಿ ಇವಳನ್ನು ಕರದುಕೊಂಡುಹೋದರು

ಈಕೆಯು ಹೊಲಗೆಡೊಡನೆ ಇವಳ ಕಾಸಾತಮ್ಮ ಬೆಂಗಳೂರು ಕಲಾಸು ಪಾಳ್ಯದಲ್ಲಿರುವ ತಾಲೋಕು ಪೋಲೀಸ್ ಕಾನ್‌ಸ್ಟೆಬಲ್ ನಂ 332ರ ಬಾಲಾಜಿಸಿಂಗ್ ಎಂಬವನ ಮೂಲಕ ಇವಳನ್ನು ಪುನಹ ನನ್ನಲ್ಲಿಗೆ ಬರಬಾರದಾಗಿ 3 ಕಾಗದಗಳು ಬರದು ತಿಳುವಳಿಕೆ ಕೊಟ್ಟಾಗ್ಯೂ, ಈಕೆಯು ತನ್ನ ತಾಯಿಯೊಡನೆ ಗೋಣಿಕೊಪ್ಪಲು ನನ್ನ ಮನೆಗೆ ತಾ. 16-11-24ರಲ್ಲು ಅನುಮತಿ ಇಲ್ಲದೆ ಪ್ರವೇಶಿಸಿಕೊಂಡು ಮರಳಿ ಹೆಚ್ಚಿನ ವ್ಯಾಕುಲಗಳಿಗೆ ಕಾರಣಳಾಗಿ ಇದ್ದದ್ದರ ಮೇಲೆ ತಾ. 23-11-24ರಲ್ಲು ಕೆಲವು ದೊಡ್ಡಮನುಷ್ಯರಮೂಲಕ ಪಂಚಾಯಿತಿಯಿಂದ ತೀರ್ಮಾನವಾದ ಇವಳು ಧರಿಸಿದ ಸುಮಾರು 300 ರುಪಾಯಿಗಳ ನಗಗಳು, ಉಡುಗೊರೆಗಳು, ಮತ್ತು ನಗದು 325 ರುಪಾಯಿ ಈಕೆಗೆಕೊಟ್ಟು ಈಕೆಯ ಸಕಲ ಹಕ್ಕನ್ನು ತಪ್ಪಿಸಿ ವಿವಾಹಿ (Divorce) ಮಾಡಿ ಈ ಸಂಗತಿ ತಾ. 24-11-24ರಲ್ಲು ಪೊನ್ನಂಪೇಟೆ ಪೋಲೀಸಿನಲ್ಲು ತಿಳಿಸಿ ಬಿನರಕಾನ್ಸೈಯಿಲ್ಲು ನೋಟುಮಾಡಿಸಿರುತ್ತೆ.

ಅದ್ದರಿಂದ ನನ್ನ ವ ನನ್ನ ಚರಸ್ಥಿರ ಸೊತ್ತುಗಳ ಮೇಲೆ ಈಕೆಗೆಯೂ ಈಕೆಯ ಸಮ್ಮಂಧಪಟ್ಟವರಿಗಾಗಲಿ ಯಾವ ತರಹದ ಹಕ್ಕು ಬಾಧ್ಯತೆಯು ಮುಂದಕ್ಕೆ ಒದಗುವದಿಲ್ಲವಾಗಿ ಈ ಮೂಲಕ ಅರಿಕೆಮಾಡಿಕೊಂಡಿರುತ್ತೇನೆ.

ಗೋಣಿಕೊಪ್ಪಲು, ಆರ್. ಸುಂದರ್‌ಸಿಂಗ್.
ತಾ. 24-11-24. ಜನರಲ್‌ಮರ್ಚೆಂಟ್.

ಪ್ರಕಟಣೆ.

ಇಲ್ಲಿ ನೋಡಿರಿ! ಇದೀಗ ಸುಸಮಯ!!

ಒಳ್ಳೇ ಸೊತ್ತು ಮಾರಾಟಕ್ಕಿದೆ.

ಆರವತ್ತೊಕ್ಕಲು ಗ್ರಾಮದಲ್ಲಿ ಅಂದರೆ ಬೆಟ್ಟಗೇರಿ ದೊಡ್ಡರಸ್ತೆಗೆ ಸಮೀಪ 200ಬಟ್ಟಿಭೂಮಿ. ಭೂಮಿಗೆ ವಕ್ಕು 15 ಎಕರುಜಾಗ. ಈಜಾಗದಲ್ಲು ಸದ್ಯ ಭೂಮಿ ಮಾಡತಕ್ಕ 3 ಎಕರು ಮಕ್ಕಿ ಇದೆ. ಮಚ್ಚು ಹಾಕಿದ ಅಂದಾಜು ಸಾವಿರ ರುಪಾಯಿ ಬಾಳತಕ್ಕ ಮನೆ ಇದೆ. ಪಸಲಿಗೆ ಬರಲಿಕ್ಕಾದ ಕಿತ್ತಳೆಗಿಡ, ಮನೆಮುಂದೆ ತೆಂಗು ಅಡಿಕೆಸಹ ಇದೆ. ಬೇಕಾದವರು ಕೆಳಗಿನ ವಿಳಾಸಕ್ಕೆಬರೆದಾಗಲೀ ಖುದ್ದಾಗಿ ನೋಡಿಯಾಗಲೀ ತಿಳಿಯಬಹುದು. ಅಂದಾಜು ಕ್ರಯ 3,000 ರುಪಾಯಿ ಇಲ್ಲವೆ ಆದರ ಸಮೀಪದ ಕ್ರಯ.

ನೆರವಂಡ ಅಪ್ಪಚ್ಚು,
4-3 ಬಟ್ಟೆವ್ಯಾಪಾರಿ, ಮಡಿಕೇರಿ

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೊ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

		ರೂ.
ಶೇರ್ ಬಂಡವಾಳ	....	50,000
ವಸೂಲಾದ ಶೇರ್ ಮೊಬಲಗು	....	7,720
ಆನಾಮತಿ ಠೇವಣಾತಿ	....	61,200

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 6-4-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 5ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಜಮಾಯಿಷಿ ಮಾಡುತ್ತಾರೆ.

ಪ್ರೆಸಿಡೆಂಟರು, ಟ್ರಿಜರರ್.
ಕೊಡಂದೇರ ಕುಟ್ಟಯ್ಯನವರು, ಯಂ. ಭುಜಂಗರಾಯರು
ರಾಯ್ ಬಹದ್ದೂರ್. ಬಿ.ಎ., ಬಿ.ಎಲ್.

ಸೆಕ್ರೆಟರಿ.
ಸಿ. ಯಸ್. ವೆಂಕಪ್ಪಯ್ಯನವರು, ಬಿ.ಎ. ಬಿ.ಎಲ್
ತಾ|| 1—7—1924.

ಶ್ರೀ
ಶ್ರೀ ಧನ್ವಂತರಿ.

ಕರ್ನಾಟಕಾಯುರ್ವೇದ ಪಕ್ಷಪತ್ರಿಕೆ.

ಎಡಿಟರ್.—ವಿದ್ವಾನ್ ಕೆ. ಕೇಶವಶಾಸ್ತ್ರೀ ಆಯುರ್ವೇದರತ್ನಂ, ಇತ್ಯಾದಿ.

ದೇಶೀಯ ವೈದ್ಯವನ್ನು ಸರ್ವ ಸಂಪೂರ್ಣಾಭಿವೃದ್ಧಿಯಿಂದ ಕನ್ನಡ ನಾಡಿನಲ್ಲಿ ಪ್ರಕಟಿಸುವ ಮೊದಲನೇಯ ಪತ್ರಿಕೆ ಎಂದರೆ! ಇದೇ. ಆರೋಗ್ಯವಂತನಾಗಿ ಬಹುಕಾಲ ಬದುಕಿರಬೇಕೆಂದು ಯೋಚಿಸುವ ಪ್ರತಿಯೊಬ್ಬನಿಗೂ ಈ ಪತ್ರಿಕೆಯು ಬೇಕೇಬೇಕು. ವ್ಯಾಧಿ ಬಂದಾಗ ತಕ್ಷಣ ತಿಳಿದುಕೊಳ್ಳುವಂತೆ ಆಯಾ ರೋಗಲಕ್ಷಣ ಚಿಕಿತ್ಸೆಗಳು ಬರೆಯಲ್ಪಡುವುದರಿಂದ ಮುಖ್ಯವಾಗಿ ಸ್ತ್ರೀಯರೂ ಹಳ್ಳಿಯವರೂ ಈ ಪತ್ರಿಕೆಯನ್ನು ಓದಲೇ ಬೇಕು. ವಿಶೇಷವೇನು? ಮನೆಯಲ್ಲಿ ಈ ಪತ್ರಿಕೆ ಇದ್ದರೆ ಒಬ್ಬ ಗುರುವೂ ವೈದ್ಯನೂ ಇದ್ದಂತಾಗುವುದು.

ವಾರ್ಷಿಕ ಚಂದಾ ಮೂರು ರುಪಾಯಿ.

ವಿಳಾಸ:—

ಮೇನೇಜರ್, ಶ್ರೀ ಧನ್ವಂತರಿ,
ಶೃಂಗೇರಿ, ಮೈಸೂರುಸ್ಟೇಟ್.

ಪ್ರಕಟಣೆ.

ಒಂದು ಕಡೆ ಇಂಗ್ಲೀಷಿನಲ್ಲಿಯೂ, ಇನ್ನೊಂದು ಕಡೆ ಕನ್ನಡದಲ್ಲಿಯೂ ಪ್ರಿಂಟಾಗಿರುವ ಕಾಫಿ ತೋಟದ ಆಳುಗಳ ಪ್ರಿಂಟಾದ ಕಂಟ್ರ್ಯಾಕ್ಟು ಎಗ್ರಿಮೆಂಟ್ ಫಾರಮುಗಳೂ ಮತ್ತು ಅಪ್ಲಿಕೇಶನ್ (complaint) ಫಾರಂಗಳೂ ಸಹ ಮಾರಾಟಕ್ಕೆ ತಯಾರಿದೆ. ಬೇಕಾದವರು 'ಕೊಡಗು' ಆಫೀಸಿನಿಂದ ಪಡಕೊಳ್ಳಬಹುದು.

ಮಡಿಕೇರಿ
17-9-24. ಮೇನೇಜರ್.

ARMS & AMMUNITION MART.

Mahomedally-Noorbhoy.

337, Abdul Rehman, Street, near Crawford Market, BOMBAY.

Telegraphic Address:-"**SHOOTER**"
Bombay.

[24 16] Please write for latest Catalogues.

ಸಂಪತ್ತಿಯ ಸಾಧನಗಳು.

ಅಯ್ಯಾ ಬಂಧುಗಳೇ ಸಂಪತ್ತಿಯು ಅನ್ಯರ ಚಾಕರಿಯಲ್ಲಿರದೆ ನಿಮ್ಮ ಭೂಮಿಯಲ್ಲಿಯೇ ಅಡಗಿರುವದು ಅದನ್ನು ಶೋಧಿಸಿ ತೆಗೆಯಲು ಕಿರ್ಲೋಸ್ಕರ ವ್ಯವಸಾಯ ಮುಟ್ಟುಗಳೇ ಯೋಗ್ಯವಾದ ಸಾಧನಗಳು.

ಲಕ್ಷಾವಧಿ ರೈತರು ಹೂಡಿ ಅನುಭವ ಪಡೆದುಕೊಂಡಿರುವರು. ಪ್ರತಿನಿಯಮಿತಕ್ಕ ತರತರದ ನೇಗಿಲುಗಳೂ ಗಾಣಗಳೂ ದೊರೆಯುತ್ತವೆ. ಕಿಸಾನ ಗಾಣವು ಒಂದು ಗಂಟೆಗೆ ೮೦೦ ಪೌಂಡು ಕಬ್ಬನ್ನು ಹಿಂಡಿ ಇಬ್ಬುತ್ತದೆ.

* ಕೊ * ಎಂಬ ಕ್ಯಾಟಲಾಗನ್ನು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್,
16 10 **ಕಿರ್ಲೋಸ್ಕರವಾಡಿ, ಜಿಲ್ಹಾ, ಸಾತಾರಾ.**

ನೋಟೀಸ್.

"ಕೊಡಗು" ಪತ್ರಿಕೆಯ ಹಳೆ ಚಂದಾಹಣ ಕೊಡಲಿಕ್ಕಿರುವವರೂ, ಹೊಸ ಚಂದಾದಾರರಾಗ ಬೇಕೆಂದಿರುವವರೂ, ಮತ್ತು ಕಿರುಹಣ ಸಲ್ಲಿಸಮಾಡಲಿಕ್ಕಿರುವವರೂ ದಯವಿಟ್ಟು ವೀರಾಜಪೇಟೆಯಲ್ಲಿರುವ ನಮ್ಮ ಕಂಪೆನಿಯ ಏಜಂಟರವರ ಆಫೀಸಿನಲ್ಲಿ ಪಾವತಿಮಾಡಬೇಕಾಗಿ ಕೋರಿಕೆ.

ಮಡಿಕೇರಿ, ಮೇನೇಜರ್,
10-9-24. 'ಕೊಡಗು' ಲಿಮಿಟೆಡ್.

ಹಳೆ ವಿದ್ಯಾರ್ಥಿಯರ ತ್ರೈಮಾಸಿಕ.

ಸಂಪುಟ 2] ವರ್ಷದಚಂದಾ ಜರೇ ರೂ. 1-4-0 [ಸಂಚಿಕೆ 1
ಸಂಪಾದಕ =ಸಿ. ಬಿ. ಮೇದಪ್ಪ, ಬಿ. ಎ., ಬಿ. ಎಲ್., ಎಂ. ಎಲ್. ಸಿ.

ಈ ಸಂಚಿಕೆಯಲ್ಲಿ ಮನೋಹರವಾದ ಕೊಡಗಿನ ಪವಿತ್ರ ಸ್ಥಳವಾದ ಶ್ರೀ ಮೂಲ ಕಾವೇರಿಯ ಚಿತ್ರಗಳಿವೆ.

1. ಶ್ರೀ ಕಾವೇರಿಯ ಜನ್ಮ, ಅವತಾರ.
2. ಸರಕಾರಕ್ಕೆ ಸಾಲವೆಂದರೇನು?
3. ಪೋಲಿಟಿಕ್ಸ್ ಅಂದರೇನು?
4. ವಿವಿಧಾಚಾರ್ಯ.

ಇನೇ ಮುಂತಾದ ಬಹು ಸ್ವಾರಸ್ಯದ ವಿಷಯಗಳಿವೆ.

ಮೇನೇಜರ್,
ಓ. ಎಸ್. ಎಸೋಸಿಯೇಷನ್,
ಮಡಿಕೇರಿ.

Printed & published by Kodanda Appayya, R.B., Chairman, Board of Directors, at "Kodagu" Press, Mercara for "Kodagu" Ltd.